1933

1933

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

**ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.**

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುವಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೭. ಶ್ರೀ ಮಂಗಳೂರು ತಾ ೬ನೇ ಶುಕ್ರವಾರ ಜನವರಿ ೧೯೩೩ (6 – 1 – '33.) ಸಂಚಿಕೆ ೧



## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Subscribed & Called up Rs. 2,25,000.

ನಿಯಮಿತ ಮೂಲಧನ ರೂ. 3,50,000. ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 30TH NOVEMBER, 1932.

| | Capital and Liabilities. | | | Property and Assets | |
|---|---|---|---|---|---|
| 1 | Paid up Capital | Rs. 2,25,000-0-0 | 1 | Premises, Building, Furniture etc. | Rs. 65,965-11-6 |
| 2 | Reserve and other funds | " 2,22,705-0-0 | 2 | Government securities | " 2,93,088-4-0 |
| 3 | Deposits | " 20,95,382-10-4 | 3 | Authorised Investments | " 20,43,696-15-0 |
| 4 | Due to Bankers | " 28,486-9-11 | 4 | Bills for collection | 3,329-12-0 |
| 5 | Sundries | " 82,617-10-2 | 5 | Sundries | " 58,140-9-2 |
| 6 | Bills for collection per contra | 3,329-12-0 | 9 | Cash in hand & with bankers. | " 1,93,300-6-9 |
| | Total | 26,57,521-10-5 | | Total | 26,57,521-10-5 |

UDIPI. 15-12-'32.

**N. ANANDA RAO,**
*Secretary & Manager.*

( Regd. )

## ಅಮೃತಾಂಜನ.

ಇದು ತಲೆ ಶಿರೋವೇದನೆ, ಕಟ್ಟುಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನು ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

**ರಿಂಗ್‌ವರ್ಮ್ ಮುಲಾಮು** — ಇದು ರಿಂಗ್‌ವರ್ಮನ್ನು ಕಜ್ಜಿಯನ್ನು ಇನ್ನಿತರ ಚರ್ಮರೋಗಗಳನ್ನು, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3-8-0. ಅಂಚೆವೆಚ್ಚ ಪ್ರತ್ಯೇಕ.

**ಅಮೃತಾಂಜನ ಡಿಪೋ.**

**ಮದರಾಸು** **ಮತ್ತು** **ಬೊಂಬಾಯಿ.**



ಸಣ್ಣ ಹುಡುಗರ ಸಲುವಾಗಿ,

# ಡೋಂಗರೆ

ಇವರ

## ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

**ಕೇ. ಟಿ. ಡೋಂಗರೇ ಕಂಪೆನಿ.**



INSURE WITH

**The Popular Insurance Co. Ltd.**

Head Office:-MANGALORE, S. India.

**First of its kind in the West Coast.**

CHAIRMAN:

*Dewan Bahadur N. Subba Rao.*

***STRIKING FEATURES***

**Policy Conditions Liberal!**
**Claims Settlement Prompt!**

MANAGEMENT PURELY INDIAN.

**Ensure the Absolute Safety, Comfort and Happiness of Your Dear Ones.**

WANTED INFLUENTIAL AGENTS.
LIBERAL TERMS TO COMPETENT MEN

*For further particulars apply to the Head Office.*

## ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!




ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿಯದೆ. ಮಹದುಪಾಯಕರವಾದ ಈ ರೋಗನಿವಾರಕಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ ಕೂಮಿನ್' ಇದು ದಿವ್ಯೌಷಧವಾಗಿದೆ

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು



ವೈದ್ಯ ಮೋಹನಲಾಲರ ಅತ್ಯಂತ ಧಾತು ಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೩೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

### ಮದನಮಸ್ತ ಪಾಕ. ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೇಚೆಯಾದ ಕೂಡಲೇ ವೀರ್ಯಪತನವಾಗೋಣ ಗರ್ಮಿಯ ಪರಿಣಾಮ ಎಂಥವಾದರೂ ಪರಮ ಮೈನೂಸೋಣ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಹ ಕ ವ ಹ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತು ರೂ ೫ ಟ ೩ ರೂ ೧ ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಖಾನ್ ಎಲ್ ಎಮ್ ಎಂಡ್ ಎಸ್ ಜೆ ಪಿ ಮುಂಬಯಿ — ಈ ಪಾಕವು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C



### ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ [ಹಣವಾಪಸು

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಹುಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲು ಪೂರಾ ವಿಚಾರ ಮಾಡಿ ಔಷಧಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಳವಾಮಾಹಿಮ ರಾಣೀ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ ಖರ್ಚು ೦|೦

**ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)**

ಈ ಚೂರ್ಣವು ಕೆಂಪು ಬಿಳಿ ಸರಿಗೆ ಶತ್ರುವಾಗಿರುವುದು ಆನಿಯಮಿತತನದಿಂದ ಮುಟ್ಟಾಗುವಿಕೆ ಕ್ಲೇಶ ಮೈಯಲ್ಲಿ ನೋವು ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ ಗರ್ಭಧಾರಣವಾಗದಿರೋಣ ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ ಮುಖ್ಯ ಸರ್ಟಿಫಿಕೇಟ ಮಿ ರಾ ಎ ಎಮ್. ಇನ್ನಸೆಲ್ಲರ ಬೆಳಗಾಂವ—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಸರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ ಖ ಅಣೆ ೮

ವಿಳಾಸ — ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S M. C


## ಚೆನ್ನಾರು ಪಾಮು!

ಶ್ರೀಯುತ ಶಪ್ರುಗಳೇ, ಸ್ವಾಮಿ ಜಯಕರರೇ, ಅಯ್ಯಾಂಗಾರರೇ, ಮುದಾಲಿಯರ್ ಇತ್ಯಾದಿಗಳೇ ಹೇಗೆ ಲಂಡನಿನ ಚಳಿ?

\+ \+ \+ \+

"ನಮಗೆ ಸಿಗುತ್ತದೆ! ನಾವು ತರುತ್ತೇವೆ" ಎಂದು ಲಂಡನಿಗೆ ಓಡಿದಿರಲ್ಲಾ? ಈಗ ಏನಾಯಿತು? ಹೇಳ ಬಲ್ಲಿರಾ?

\+ \+ × ×

ಸರ್ ಹೋರರು ತನ್ನ ಗಾರುಡಿ ಮಂತ್ರದಿಂದ ನಿಮ್ಮನ್ನು ತಿರುಗಿಸಿ ಬಿಟ್ಟರು "ನಿಮಗೆ ಕೊಡುತ್ತೇವೆ" ಎಂದು ವಾಕ್ಯ ಹೇಳಿದ್ದಾರೆ! ಕೊಡಲಿಲ್ಲ! ಅಲ್ಲವೇ?

× × × ×

ಈ ರೀತಿಯ ರೌಂಡ್ ಟೇಬಲ್ ಕಾರ್ಯಕಲಾಪಗಳನ್ನು ನಡೆಸುವುದಾದರೆ ನೀವು ಲಂಡನಿಗೆ ಏಕೆ ಹೋಗಬೇಕಿತ್ತು? ಅನಾವಶ್ಯಕವಾಗಿ ನಮ್ಮ ಹಣವು ಏಕೆ ನೀರಿನಂತೆ ವೆಚ್ಚವಾಗಬೇಕಿತ್ತು?

× × × ×

ನಿಮ್ಮ ಅಭಿಪ್ರಾಯವನ್ನು ನೀವು ಹೋರರ ಅಭಿಪ್ರಾಯವನ್ನು ಅವರು ಎಕ್ಸರ್‌ಸೈಜ್ ಪುಸ್ತಕದಲ್ಲಿ ಬರೆದು ವಿನಿಮಯ ಮಾಡಿಕೊಳ್ಳಬಹುದಿತ್ತಲ್ಲಾ!

\+ × \+ ×

ಕೇಳ್ಕರರಿಗೆ ಟೇಬಲಿನಲ್ಲಿ ಬಹಳ ಆಶೆಯಿತ್ತು "ಹೋರರು ಒಳ್ಳೆಯವರು, ಈ ಸಲ ಏನಾದರೊಂದು ಆಗದೆ ಹೋಗುವುದಿಲ್ಲ" ಎಂದರು ಈಗ ಮಾತ್ರ ಮೌನವು ಬಾಧಿಸಿದೆ

\+ × × ×

ಸರ್ ಮಿರ್ಜಾನ್ ಇಸ್ಮಾಯಿಲರು ಡೈಲಿ ಹೆಂಲ್ಡಿನ ... ವಾದವನ್ನು ಖಂಡಿಸಿ ಹೋರರ ಸರಕಾರದ ಮೇಲೆ ಆಶಾವಾದವನ್ನು ತೋರ್ಪಡಿಸಿದರು ಪಾಪ ಅವರೂ ಈಗ ವ್ಯಸನದಲ್ಲಿರುತ್ತಿರಬಹುದು

× × × ×

ಈ ಲಿಬರಲರಿಗೆ ಇನ್ನು ಲಂಡನ್ ಯಾತ್ರೆಯು ಮುಗಿಯಿತು ಮರು ಸಲ ಆಗಿ ಹೋದರೆ ಮತ್ತೆ ಮುಖ್ಯಜ್ಞ ಸಿಗೂ ಕೋಪ!

× × × ×

ಈ ಸಲ ನೋಡಿ ನಮ್ಮ ಮಂತ್ರಿಯವರು ಚಪ್ಪೆ! ಅವರ ದಂಡಿಲ್ಲ ತೃತೀಯ ಪರಿಷತ್ತು ಬಂದು ಹುಡುಗಾಟಿಕೆ ಎಂದು ಅವರಿಗೆ ಮೊದಲೇ ತಿಳಿದಿತ್ತು!

× × × ×

ಲಂಡನಿನಿಂದ ಹೊರಡುವಾಗ ಮಾತ್ರ ಸಪ್ರೂರವರು ಗಾಂಧಿ ದೊಡ್ಡ ಮನುಷ್ಯ—ಜೋರಿದ್ದಾನೆ ಜಾಗ್ರತೆ" ಎಂದು ಬ್ರಿಟಿಷರಿಗೆ ಹೇಳಿದರು ಊರಿಗೆ ಬಂದಾಗ ಜನರು ನಕಲಿ ಮಾಡಬಹುದೆಂಬ ಭಯಕ್ಕೆ ಇದು ಅವರದೊಂದು ಕುಟಿಲ ಮದ್ದು!

× × × ×

ರೌಂಡ್ ಟೇಬಲ್ ಅದಂತೆಯೇ — ಕಲ್ಕತ್ತದಲ್ಲಿ ದಂಡ ತೆರಿಗೆಯ ವಸೂಲಾತಿ — ಕೈದು — ಜಪ್ತಿ—ಮುಂಬಾಯಿಯಲ್ಲಿ ಸಂಶಯದ ಮೇಲೆ ಯಾರನ್ನಾದರೂ ಹಿಡಿಯಬಹುದೆಂದು ಪೋಲೀಸರಿಗೆ ಅಧಿಕಾರ ದಾನ! ಲಾಠಿ ಚಾರ್ಜು ಮಾತ್ರ ಸ್ವಲ್ಪ ಕಡಿಮೆ!

× × × ×

ಈ ಮಂದಗಾಮಿಗಳು ಲಂಡನಿಗೆ ಹೋದ ಫಲವೆಂದರೆ ಇದು. ಮತ್ತೇನೂ ಆಗಲಿಲ್ಲ ಮಾತ್ರ ಇವರಿಗೆ ಟಿ ಎ. ದೊರೆತಿರಬಹುದು.

× × × ×

ಇವರು ಹೋರರ ಬಹು ಮಿತ್ರರಂತೆ! ಗಾಂಧಿಯನ್ನು ಬಿಡು ಎಂದು ಇವರು ಸೆರಗೊಡ್ಡಿ ಬೇಡಿದರೂ ಇವರ ಪರಮ ಮಿತ್ರರ ಎದೆಯು ಕರಗಲಿಲ್ಲ ಆದರೂ ಪರಮ ಮಿತ್ರರು!

× × × ×

ಹಿಂದೂ ದೇಶದ ಹಣೆಬರಹವು ಅನೇಕ ವರ್ಷಗಳ ಮೊದಲೇ ತಿಳಿಯುತ್ತಿತ್ತು! ಆದರೆ ಇಂತಹ ಲಿಬರಲರ ಲಿಬರೇಟಿಯಿಂದಾಗಿ ಅದರ ಹಣೆಬರಹವು ನಿರ್ಧಾರವಾಗಲು ವಿಘ್ನವುಂಟಾಯಿತು

× × × ×

ರೌಂಡ ಟೇಬಲ್ ಪ್ರತಿನಿಧಿಗಳೇ ಒಳ್ಳೇ ಒಳ್ಳೇ ಕಂಬಳಿಗಳ ತಂದಿರುವಿರಾ? ಒಂದನ್ನು ನನಗೆ ಬಿಸಾಡಿಬಿಡಿ

\+ \+ \+ \+

ಹೋದ ಹಾಗೆ ಬಂದ ಮುಹರಾಯ ಎಂಬ ಗಾದೆಗೆ ಬೆಂಬಲರಾಗಿ ನಿಂತ ನಿಮಗಾಗಿ ನನ್ನ ಸಹಾನುಭೂತಿ! ನಿಮಗೆ ಹೋರರ್ ಹಾಕಿದ ಮೂರು ನಾಮಗಳನ್ನು ಕಂಡು ನನಗೆ ವ್ಯಸನ!

\+ \+ \+ ×

ಆದದ್ದಾಯಿತು! ಹೋದದ್ದು ಹೋಯಿತು! ಸಿಕ್ಕಿದ ಎಲ್ಲೊ ವೆನ್ಸ್ ಸಿಕ್ಕಿತು! ಇನ್ನಾದರೂ ಬುದ್ಧಿ ಬರಲಿ!

× × × ×

ಇನ್ನೂ ಒಂದು ಆರ್ ಟಿ ಸಿ ನಡೆಯಲಿದೆಯಂತೆ ಯಾವಾಗ ಎಂದು ತಿಳಿದಿಲ್ಲ ಪೆಟ್ಟಿಗೆ ಸರಿಮಾಡಿರಬೇಡಿ! ಗಂಟು ಮಾತ್ರ ಕಟ್ಟಿರಿ! ಸಮಯ ಬಂದರೆ ಹೋಗಬಹುದು!! ಹಾಗೂ ಹಾಸ್ಯಗೋಷ್ಠಿಗಳಾಗದಿರವು.

'ಸ್ವಾಟಿ.'

\+ ++ +

### 28—12—1932ರ ಮಧ್ಯಾಹ್ನದ ಅಧಿವೇಶನ.

ಕಾರ್ಯಕ್ರಮದಂತೆ ೨॥ ಘಂಟೆಗೆ ಇರಿಸಲ್ಪಟ್ಟ ಅಧಿವೇಶನವು ೩॥ ಘಂಟೆಗೆ ಮುಂದರಿಸಲ್ಪಟ್ಟು, ೪ ಘಂಟೆಯಾಗುವಾಗ ಪ್ರಾರಂಭಿಸಿತು. ಶ್ರೀಯುತ ಆತ್ಮಾರಾಮ ಶಾಸ್ತ್ರಿಗಳು, ಪರಿಷತ್ತಿನ ಸಮಾರಂಭದ ಸ್ಮಾರಕವಾಗಿ "ಕೊಡಗಿನ ಕಾಣಿಕೆ"ಯೆಂಬ ಗ್ರಂಥವನ್ನು ಸಭೆಗೆ ಒಪ್ಪಿಸಿದರು. ಇದಾದ ಬಳಿಕ ವಿಷಯ ನಿಯಾಮಕ ಕಮಿಟಿಯ ಚುನಾವಣೆಯಾಯಿತು. ಆ ಬಳಿಕ ಸಭೆಗಾಗಿ ಸಿದ್ಧವಾದ ಪ್ರಬಂಧಗಳನ್ನು ಓದುವ ಕೆಲಸವಾಯಿತು. ಶ್ರೀಮಾನ್ ನಾ ಭಾ ಶಾಸ್ತ್ರಿಗಳ ಕೊಪ್ಪಣದ ಇತಿಹಾಸ ಮತ್ತು ಶಿಲಾಶಾಸನಗಳ ಕುರಿತಾದ ಉಪನ್ಯಾಸವು ತೊಡಗಿತು. ನೃಪತುಂಗನೆಂದ "ಕೊಪಣವೇ ಕೊಪಣವೆಂದಾ, ಅದೇ ಈಗಿನ ಕೊಪ್ಪಳವೆಂದೂ ಅವರು ಸ್ಥಾಪಿಸಿದರು. ಆ ಬಳಿಕ ಶ್ರೀಮಾನ್ ಶೇಡಿಯಾಪು ಕೃಷ್ಣ ಭಟ್ಟರವರು "ಕನ್ನಡ ಛಂದಶ್ಶಾಸ್ತ್ರ"ವನ್ನು ಕುರಿತು, ತಮ್ಮ ಪ್ರಬಂಧದ ಸಾರವನ್ನು ಓದಿಹೇಳಿದರು—ಗದ್ಯವೆಂಬುದು ಬಂಜೆ ಹೆಂಗಸಿನ ಸ್ವಾತಂತ್ರ್ಯಕ್ಕಿಂತ ಛಂದಸ್ಸು ಸ್ವಾರಸ್ಯಯುಕ್ತವಾಗಿರಬೇಕು. ಅದರ ಗತಿ, ನ್ಯಾಸ ಮೊದಲಾದುವುಗಳು ಅದರ ಸೊಗಸಿಗೆ ಕಾರಣ. ಛಂದಸ್ಸಿಗೂ ಸಂಗೀತಕ್ಕೂ ಒಂದು ರೀತಿಯ ಸಂಬಂಧವಿದೆ. ಅದೀಗ ಈಗಿನ ಹಾಡುಗಾರರ ದೆಸೆಯಿಂದ ಕಡಿದುಹೋಗಿದೆ. ಛಂದಸ್ಸು ಪದದ ಅರ್ಥವೂ ಒಲಿಸು, ಹಾಡು—ಎಂದು ಅರ್ಥವಾಗಿದೆ. ಕನ್ನಡ ಛಂದಸ್ಸು ಬಹುವಾಗಿ ಸಂಸ್ಕೃತದಿಂದ ಆಯ್ದುದು. ಸ್ವತಂತ್ರ ಛಂದಸ್ಸೆಂಬುದಿದೆಯೆ ಇಲ್ಲವೊ ಎಂಬ ಸಂಶಯವಿದೆಯೆ? ವಿಷಯ ಜಾತಿಗಳೆಂಬ—ಕರ್ನಾಟಕ ಸ್ವತಂತ್ರ ವಿಷಯ ಜಾತಿಗಳೆಂಬ ಉಲ್ಲೇಖವೂ ತಿಳಿದುಬರುವುದು—ಸಂಸ್ಕೃತವು ತಾಲಪ್ರಧಾನವಲ್ಲ. ಆದರೆ ಪ್ರಾಕೃತವು ತಾಲಬದ್ಧವಾಗಿರುವುದು ಹೆಚ್ಚು" ಎಂಬುದನ್ನು ಹೇಳಿ ಕನ್ನಡದಲ್ಲಿರುವ ಅಕ್ಕರ, ಪಿರಿಯಕ್ಕರ ಮೊದಲಾದ ಕನ್ನಡದ ತಾಲಬದ್ಧ ಗೀತೆಗಳನ್ನು ಉದಹರಿಸಿ, ಅವುಗಳನ್ನು ಹೇಗೆ ಹಾಡಬಹುದೆಂದು ತೋರಿಸಿದರು. ಬಳಿಕ "ಗೀತಿಕೆ"ಗಳೆಂಬುವು ತಾಲಕ್ಕೆ ಸರಿಯಾಗಿಯೂ ಹಾಡುವ ಪದ್ಯಗಳೆಂದು ಸೂಚಿಸಿ, ಅದನ್ನು ಹಾಡಿ ತೋರಿಸಲು ಬರುವುದೆಂದು ದೃಷ್ಟಾಂತಪೂರ್ವಕ ತೋರಿಸಿದರು. ಹಿಂದಿನ ಗೀತಿಕೆಗಳಿಗೆ ಯತಿ ಇತ್ತು. ಸಾಂಗತ್ಯಗಳಲ್ಲಿ ಹಿಂದಿನ ಕಾಲದಲ್ಲಿ ಗಣ ಲೆಕ್ಕಗಳನ್ನು ಇರಿಸಿಕೊಂಡಿದ್ದರೂ, ಈ ಚೀಟಿನ ಸಾಂಗತ್ಯಗಳು ಅದರ ನೇಮವನ್ನು ಮರೆತಂತೆ ಕಾಣುವುದು. ಭರತೇಶ ವೈಭವದಲ್ಲಿನ ನೇಮವು ಶಿಥಿಲವಾಗಿ ಮುಂದೆ ಅದು ಬಂದಿರಬೇಕು. ಕನ್ನಡಕ್ಕೆ ಸ್ವತಂತ್ರ ಛಂದಸ್ಸುಂಟು, ಅದಕ್ಕೆ ತಾಲ, ಯತಿಗಳು ತೀರ ಅವಶ್ಯವೆನಿಸುತ್ತವೆ ಎಂದು ತಮ್ಮ ಪ್ರಬಂಧದ ಸ್ವಾರಸ್ಯವನ್ನಿಷ್ಟೇ ಸಮಯ ಸಂಕೋಚದ ನಿಮಿತ್ತ ಅರುಹಬೇಕಾಯಿತು. ಲೇಖವು ವಿಚಾರವೂ ರ್ಣವಾಗಿತ್ತು. ಶ್ರೀಮಾನ್ ಶಂಭುಶರ್ಮರು ಬಳಿಕ "ಆಧುನಿಕ ಕವಿತೆಗಳ ವಿಮರ್ಶೆ" ಯೆಂಬ ಉಪನ್ಯಾಸ ತೊಡಗಿದರು. ಕನ್ನಡವು ವ್ಯಾಸನ ಭಾರತದ ಕಾಲದಿಂದಲೇ ನಿಸ್ತೇಜವಾಯಿತು. ಯಾವ ಕಾರಣವೇನೋ ತಿಳಿಯದು. ಈಗ ಅದು ಒಣಗಿದ ಮರದಂತೆ ಚಿಗುರಿದೆ. ಇನ್ನು ಮುಂದಿನ ಭವಿಷ್ಯವೇನಾದೀತೆಂದು ನನ್ನಾ ಭವಿಷ್ಯವಾಣಿ ಹೇಳಲು ಬರದಿರುವೆ. ಸಂಸ್ಕೃತವು ವಿಶಾಲ್ಯವಾದ ಭಾಷೆ. ಆದರೆ ಬೆಟ್ಟದಂತೆ ನಿಂತಿದೆ. ಅದನ್ನು ನವಿಕ್ಕಿಂದ ತಳ್ಳಬಾರದು. ಈಗಿನ ಸಾಹಿತ್ಯವು ಸಂಸ್ಕೃತವನ್ನು ತಿರಸ್ಕರಿಸಿ ಕೆಡುತ್ತದೆ. ನವೀಕಾವ್ಯವು ಮುಂದೆಯೂ ಉಳಿಯುವಂತೆ ಇರಬೇಕು. ಈಗಿನವರು ಪ್ರಾಚೀನ ಕಾವ್ಯಗಳನ್ನು ದೂರುತ್ತಿದ್ದಾರೆ. ಕನ್ನಡದ ಸ್ವರೂಪಕ್ಕೆ ಮೊದಲನೆಯ ಕೊಡಲಿಯು 'ನಾರಾಯಣ'ದ ಬದಲು 'ನರಯಣ' ಎಂದ ವ್ಯಾಸನಿಗೆ ಸಲ್ಲುವುದು. ಈಗಿನ ಕವಿಗಳಂತು ಕವಿಗಳಿಗವಶ್ಯವಾದ ಅಲಂಕಾರ ಔಚಿತ್ಯವನ್ನೂ ಮರೆತಿದ್ದಾರೆ. ಹಿಂದಿನ ನೇಮಗಳನ್ನು ಮರೆಯುವುದರಿಂದ ನಾವು ಬಲುವಾಗಿ ತಪ್ಪುತ್ತಿದ್ದೇವೆ. ಇದಕ್ಕಾಗಿ ಹಲವು ಉದಾಹರಣೆಗಳನ್ನು ಕೊಟ್ಟರು. ಇನ್ನು ಮುಂದೆ ನಮ್ಮ ಕವಿತೆಗಳನ್ನೂ ಬಲುವಾಗಿ ತಿದ್ದಿ ಹೊರಡಿಸುವುದು ಅವಶ್ಯವು. ತೀರ ಸ್ವಾತಂತ್ರ್ಯವನ್ನು ವಹಿಸುವುದು ತಪ್ಪು—ಎಂದೀ ತೆರನಾಗಿ ಸೂಚಿಸಿದರು. ಅವರ ಸಾಂಪ್ರದಾಯವಾದವನ್ನು ವಿರೋಧಿಸಿ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರರು ಮಾತನಾಡಿದರು. ಪಂಡಿತರೂ ಪಾಮರರು, ಕಾವ್ಯವನ್ನು ಬರೆದವರು. ಒರಟೊರಟಾಗಿ ತಾಯಿಯ ಸೇವೆಗಾಗಿ ಹಾಡಿದವರು ಎಲ್ಲರೂ ಸಾಹಿತ್ಯಸೇವಕರಲ್ಲವೇ. ಎಲ್ಲವು ಸದುದ್ದೇಶವಾದುದು. ಅವನ್ನು ಹೀನೈಸಲೇಕೆ? ಬೇಂದ್ರೆಯವರ "ಹಕ್ಕಿ ಹಾರುತಿದೆ"ಯಲ್ಲಿ ಸೊಗಸಿಲ್ಲವೇ? ಪುಟ್ಟಪ್ಪನವರ "ಸುಗಿ ಬರುತಿದೆ"ಯಲ್ಲಿ ಸೊಗಸಿಲ್ಲವೆ. ಕಾವ್ಯದಲ್ಲಿರುವುದು ಜೀವ ದೇಹಗಳೆರಡು. ಜೀವ ಮರೆತು ದೇಹ ಕಾಯ್ದರೇನು ಫಲ. ಕವಚವು ಆಗಾಗ ಕಳಚುವಂಥದ್ದು. ಅದರ ಬದಲಾವಣೆಯಲ್ಲಿ ಬೆಚ್ಚಿ ಬೀಳಬಾರದು. ಜೀವಕ್ಕೆ ಒಪ್ಪುವ ಕಾಯ ಬಾಯಿತು—ಎಂದು ಮೊದಲಾಗಿ ಹೇಳಿ, ಆಧುನಿಕ ಕವಿಗಳ ಮೇಲೆ ಹಿರಿಯರ ಕೃಪೆಯು ವಿಶಾಲದೃಷ್ಟಿಯೂ ಇರಬೇಕೆಂದರು.

ಶ್ರೀಮಾನ್ ಸಿ ಕೆ ವೆಂಕಟರಾಮಯ್ಯನವರು ಇದೇ ವಿಷಯದಲ್ಲಿ, ನವೀನ ಬಗೆಯ ವಿಷಯ ಹೇಳಿ, ನಾವು ಬರೆದದ್ದೆಲ್ಲಾ ಕಾವ್ಯವಾಗದಿದ್ದರೂ ಎಷ್ಟೋ ಮಹತ್ವದ ಕವಿತೆಗಳು ಈಗ ಬಂದಿಲ್ಲವೆ ಎಂದು ಹೇಳಿದರು. ಈ ಬಳಿಕ ಟಿ ಸ ವೆ ಕಣ್ಣಯ್ಯನವರು ಈ ವಿಷಯವಾಗಿ ಮಾತನಾಡಿದರು. ಶ್ರೀಯುತ ಟಿ ಎನ್ ಶ್ರೀಕಂಠಯ್ಯನವರು ಇದೇ ವಿಷಯವಾಗಿ ಮಾತನಾಡಿದರು.

ಸಂಜೆಯ ಅಧಿವೇಶನವು ಘಂಟೆ ೭ಕ್ಕೆ ಮುಗಿಯಿತು. ತರುವಾಯ ಕೊಡಗಿನ ಬಾಲಕರ ನಾನಾ ತರದ ವಿನೋದಾವಳಿಗಳನ್ನು ತೋರಿಸಿದರು.

### 29—12—1932ರ ಬೆಳಿಗ್ಗೆ ಪರಿಷನ್ಮಂದಿರದಲ್ಲಿ ಶ್ರೀಮಾನ್ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಾದ ಕವಿಕೂಟದ ವರದಿ

ಈ ಸಭೆಯ ಕಾರ್ಯಕ್ರಮವು ಘಂಟೆ ೧೦ಕ್ಕೆ ಪ್ರಾರಂಭಿಸಿ ಶ್ರೀಮಾನ್ ಅನಂತ ಪದ್ಮನಾಭರು ಸ್ವಾಗತ ಭಾಷಣವನ್ನು [illegible] ದರು. ಅಧ್ಯಕ್ಷರಾದ ಶಂಕರ ಭಟ್ಟರ ಭಾಷಣದ ಸಾ[illegible] "ನಿಮ್ಮ ನಾಡು ತನ್ನ ವೈಭವದಿಂದ ನನ್ನನ್ನು ಮುಗ್ಧನ[illegible] ಯೆನ್ನಬಹುದೇ? ಆ ಮುಗ್ಧತೆಯೇ ನನ್ನನ್ನು ಮಾರೆವ[illegible] ಅದರ ಜತೆಯಲ್ಲಿ ನನ್ನ ಬಡ ತಿಳಿವು ಬೇರೆ, ನನ್ನಿಂದ[illegible] ದೊರೆಯದು. ಅಧ್ಯಕ್ಷರ ಭಾಷಣವೆಂಬ ಈ [illegible] ತ್ತನ್ನು ನಿಮ್ಮಾ ಕ್ಷಮಾಶೀಲತೆಯು ಸಹಿಸಲಿ [illegible] ನಲ್ಲಿ ಕವಿಕೂಟಕ್ಕಿರುವ ಅವಕಾಶ ಅ[illegible] ಸಾಹಿತ್ಯದ ಸೊಗಸುಗಾರರು ಕವಿಷ್ಠ[illegible]

ಸಾಹಿತ್ಯಭಕ್ತರು ವಿಮರ್ಶಿಸಲಿ. ಈ ವಿಮರ್ಶೆ ವಿಚಾರಗಳಿಗಾಗಿ ನಾವು ಒಂದಾಗುವ. ನಮ್ಮ ನಾಡಿನ ಸಾಹಿತ್ಯವು ಸಕಲ ಸದುಬಗೆಗಳಲ್ಲಿ ಮೆರೆದು ನಲಿಯಲಿ ಎಂದು ನಾವು ಆಶಿಸುವ.

ಕವಿ ಯಾರು? ಕವಿಯು ಋಷಿಯು. ಸರ್ವಜ್ಞಾನ, ಸದ್ವಿಚಾರಿ,' ಸ್ವಾಭಿಪ್ರಾಯ ಪ್ರಕಟನಾಶಾಲಿಯು. ಕವಿಯು ಏಕೆ ಹೀಗಾಗಿರುವನು. ಯಾರು ಅವನಿಗೆ ಶಕ್ತಿ ಕೊಡುವರು? ಈ ಪ್ರಶ್ನೆಯಿದೆ. ಆದರೆ ಉತ್ತರವಿಲ್ಲ. ಉತ್ತರಬೇಕಾದರೆ 'ಪ್ರತಿಭೆ' ಎಂದೆನ್ನಬಹುದು. ತಿರುಗಿ ಅದರ ಅರ್ಥದ ವಿವರಣೆ. ಪ್ರತಿಭೆಯು ವಾಸನಾಲಬ್ಧ ಚೇತನಾತ್ಮಕ ಶಕ್ತಿ. ಕವಿಗಳು ವನತಪಸ್ಸಿನಿಂದ, ದೇವೀಲೀಲೆಯ ಕೃಪೆಯನ್ನು ಪಡೆದು, ಈ ಲೋಕವನ್ನು ಆಳುತ್ತಾರೆ, ಬಾಳುತ್ತಾರೆ. ಅವರು ಪ್ರಕೃತಿಯ ಒಳಗೆ ಹೊಕ್ಕು ಅಡಗಿರುವ ಸತ್ಯಸೊಗಸುಗಳನ್ನು ಹೊರಗೆಡಹುವ ಮಹನುಭಾವರು. ಕವಿಯು ಭಾಷೆಯ ಬೆಂಬಲದಿಂದ ತನ್ನ ಕೆಲಸವನ್ನು ಮಾಡುತ್ತಾನೆ. ಸಂಗೀತಕಾರನ ಹೃದಯಾವಸ್ಥೆಯ ಚಿತ್ರಲೇಖನಕ್ಕೆ ಅವನ ಬಣ್ಣವು(?) ಸಹಾಯ. ಕವಿಗೆ ಭಾಷೆ.

ಕವಿಯ ಹೃದಯಾಪೇಕ್ಷೆಗಳು, ಕಾಲ, ವಾತಾವರಣ ಅನುಭವದೊಂದಿಗೆ ವಿಶಾಲವಾಗುತ್ತ ಬೆಳೆಯುವುದು. ಅದು ಬೆಳೆದಂತೆ ಪ್ರಕೃತಿಯ ಕೆರೆಯಲ್ಲೆ ಇಣಿಕಿನೋಡಲು ಬಯಸುವುದು. ಈ ಜೀವಾತ್ಮ ಪರಮಾತ್ಮಗಳ ಪರಿಚಯ, ಬಾಂಧವ್ಯಗಳೇ ಆನಂದವನ್ನು ಕೊಡುತ್ತವೆ. ಆ ತುಂಬಿತುಳುಕಾಡುವ ಆನಂದವೇ, ತನ್ನ ಭಾಷೆಯಿಂದ ಹೊರಗೆ ಅಡಿಯಿಟ್ಟು ನವಸೃಷ್ಟಿಗೆ ತೊಡಗುವುದು. ಇಂಥ ಕೆಲಸದಲ್ಲಿ ಕಾವ್ಯಕ್ಕಿರುವ ವಿಶಾಲ ವರ್ಚಸ್ಸು ಹಿಡಿತಗಳು ಉಳಿದ ಕಲೆಗಳಿಗಿಲ್ಲ. ಇಂಥ ಕವಿಯ ಕಾವ್ಯಗಳು ಎಂತಹವು? ಈ ಕಾವ್ಯದ ರೀತಿ ನೀತಿಗಳನ್ನು ಹಲವು ಪಂಡಿತರು ಹಲವು ರೀತಿಯಿಂದ ಬಣ್ಣಿಸಿದ್ದರು ಅವರ ವರ್ಣನೆಯ ಭೇದಗಳು ನಮಗೇಕೆ?

ಕವಿತೆಯಲ್ಲಿ ರಸಭಾವಗಳು ತುಂಬಿತುಳುಕಬೇಕು. ಇಂದು ಜೀವನ ಸಂಗ್ರಾಮಗಳ ವ್ಯಕ್ತ ಪ್ರಪಂಚದಲ್ಲಿ ಅವನು ಅನುಭವಿಸುವ ಭಾವರಸಗಳು ನಾನಾತರದ ಸ್ವಾತಂತ್ರ್ಯ ಬಗೆಗಳನ್ನು ವಹಿಸಿ ಹೊರಹೊಮ್ಮದಿರುವುದೇ? ಗದ್ಯಪದ್ಯಗಳು ಇಂತಹ ಆವೇಶಗಳ ಉತ್ಪತ್ತಿಗಳು. ಪದ್ಯವು ಗದ್ಯಕ್ಕಿಂತ ವಿಶೇಷ. ಅದರಲ್ಲಿ ನಾದದ ಸೊಗಸೊಂದು ಬೇರೆಯೇ ಇದೆ ಕಾವ್ಯವಿಲ್ಲದೆ ಜೀವನನಿರ್ವಾಹವುಂಟೇ? ಪಾರಮಾರ್ಥಿಗಳಿಗೂ ಕಾವ್ಯವು ಅನಿವಾರ್ಯವು. ಕಾವ್ಯ ವಿರಹಿತವಾದ ಜೀವನಕ್ಕೇನು ಸೊಗಸು? ತಿರುಪೆ, ಮದುವೆ, ಸಮರ-ಪ್ರತಿಯೊಂದರಲ್ಲಿ ಕಾವ್ಯವು ಸುಧಾರಿಸಲು ಬೇಕು ಕಾವ್ಯವು ಹೃದಯದಿಂದ, ಹೃದಯಕ್ಕೆ ಹಾರಿಹಿಡಿದು, ಕುಣಿದು ನಲಿಸಿ, ಆಕರ್ಷಿಸಬಲ್ಲ ವಿಚಿತ್ರಶಕ್ತಿ.

ಕಾವ್ಯತತ್ವಗಳಲ್ಲಿ ಉತ್ತಮರಸಿಷ್ಟವೆಂಬ ನಿರ್ಣಯಮಾಡಲು ಬಂದೀತೆ? ಇಲ್ಲೂ ಮತಬೇಧಗಳು ತುಂಬಾ. ಇದನ್ನು ತಪ್ಪಿಸಲು ಬಂದೀತೆ? ಜೀವನ ವೈಶಿಷ್ಟ್ಯದಲ್ಲಿ ಮತ ಭೇದವು ಬೇರೆಯಾಗುವುದುಂಟೇ? ಇವು ಭಿನ್ನರುಚಿಯನ್ನು ಅನುಸರಿಸಿರುವುವು. ಕಾವ್ಯ ವಿಮರ್ಶೆಯಲ್ಲಿ ನಮಗೆ ಬೇಕಾದುದು ಮೂರು,-ಸಹಜಾವೇಶವಿದೆಯೇ? ಸಂಸ್ಕೃತಿಯಿದೆಯೇ ಅಂದರೆ, ತನ್ನ ಕಾವ್ಯಚಿತ್ರಗಳನ್ನು ಸರಿಯಾಗಿ ಚಿತ್ರಿಸಬಲ್ಲ ಶಕ್ತಿಯಿದೆಯೆ? ಕಾವ್ಯದ ಶಿಕ್ಷಣಯೋಗ್ಯತೆಯಿದೆಯೆ? ಕೀಳಾದವನನ್ನು ಅದು ಮೇಲೆತ್ತಬೇಕು. ಮೃದುಮೋಹಕದ ಅದು ಈ ಕೆಲಸವನ್ನು ಸಾಧಿಸಬೇಕು. ಇಲ್ಲದೆ ಕವಿಮಹತ್ವವು ಉತ್ತಮ ಕಾವ್ಯವು ನಮಗೆ ಸತ್ಯನೀತಿ, ಧರ್ಮಗಳ ಅರಿವನ್ನು ತಂದುಕೊಡಬೇಕು.

ಕಾವ್ಯ ಪದ್ಧತಿಯಲ್ಲಿ ಪರಿವರ್ತನೆಯು ಬಂದೀತು. ಅದಕ್ಕಾಗಿ ಅಳಬೇಕೆ? ಪರಿವರ್ತನೆಯಲ್ಲಿ ಬದಲಾವಣೆಯಾಗಿದೆ ನಿಜ; ಆದರೆ ಕಾಲಚಕ್ರದ ಚಲನೆಯಿಂದ ಸ್ಥಿತಿಗತಿಗಳಲ್ಲಿ ಬದಲಾಗಿಲ್ಲವೇ? ಇವು ಜೀವನ ಸಂಸ್ಕಾರದ ಮೇಲೆ ತಮ್ಮ ಮುದ್ರೆಯೊತ್ತದೆ ಇದ್ದಾವೆಯೇ? ಈಗಿನ ಕರ್ಮಸಂಸ್ಕಾರಗಳ ಸಂಕರವಾಗಿದ್ದರೆ ಅವರ ಬೀಜ ಈಗಿನ ಕ್ರಮದಲ್ಲಿ ಬಂದಿರುವ ಕ್ರಾಂತಿಯ ಬೀಜ. ಇದುವರೆಗೆ ಬಂದಿರುವ ಗತಿ ಮೆಲ್ಲನೆಯಿಂದ ಬಂದಿತ್ತು. ಈಗ ಅದು ತೀವ್ರ, ಪ್ರಚಂಡ ಗತಿಯಿಂದ ಬಂದಿದೆ. ಬಸವನ ಕಾಲಕ್ಕೇ ಇದರ ಗತಿ ಭೇದವಾಯಿತೆನ್ನಬೇಕು. ಆಗಿನ ಪದ್ಧತಿಪ್ರಿಯರು ಅದನ್ನು-ತಿರಸ್ಕರಿಸಿರಬಹುದು. ಆದರೆ ಈಗ ಅದನ್ನು ಕಾಲವು ಕಾಯ್ದುಬರಲಿಲ್ಲವೇ? ಅದರಂತೆ ಇದನ್ನು ಉಡಿಯಲ್ಲಿ ಹಾಕಿ ಇದಕ್ಕೆ ಸಹಾನುಭೂತಿಯನ್ನು ಈಗಿನ ಪದ್ಧತಿಪ್ರಿಯರು ತೋರಿಸಲಿ.

ಹಿಂದಿನ ಕಾಲದಲ್ಲಿ ಮಹಾಕಾವ್ಯಗಳೇ ತುಂಬ. ಉದಾತ್ತ ನಾಯಕರನ್ನು ಕೋರಿ, ಜನಜೀವನದ ವಿಸ್ಮಯ, ಗೌರವಗಳಿಗೆ ಪಾತ್ರರಾದರೇ ವಿನಹ, ಆತ್ಮೀಯರಾಗಲಿಲ್ಲ. ಈಗ ಅದರ ಆಸೆ ಹುಟ್ಟಿದೆ. ಹಿಂದಿನ ಕೆಲವು ಮಹಾಕಾವ್ಯ ವರ್ಣನಾಭಾಗದಿಂದ, "ಆಶ್ವಾಯದ ವರ್ಣನೆಗಳು. ಕಾವ್ಯದ ಸೊಗಸಿಗೆ ವ್ಯತ್ಯಯವಾದುದೂ ಉಂಟು. ಈಗಿನ ಜನರ ಒಲವು ಅಖಂಡ ಕಾವ್ಯಗಳ ಬದಲು, ಖಂಡ ಕಾವ್ಯಗಳ ಮೇಲೆ ಅಧಿಕ. ಆ ದಿನದ ಬ್ರಹ್ಮಚರ್ಯ, ದೀರ್ಘ ಅಧ್ಯಯನ ಈಗಿನ ಅಲ್ಪಾಯು, ಹಸಿವುಗಳಿಂದ ಪೀಡಿತರಾದ ಜನರಿಗೆಲ್ಲಿ? ಅವರ ವಿಶಾಲ ಪ್ರಪಂಚದ ಆಸೆಗಳಿಗೆ ಖಂಡಕಾವ್ಯಗಳು ತೃಪ್ತಿಕೊಡಬಾರದೆ? ಪ್ರಾಚೀನ ಅಖಂಡ ಕಾವ್ಯಗಳು ಎಷ್ಟೋ ಬಗೆಯಿಂದ, ವಾಸ್ತವಿಕತೆಗೂ, ಪ್ರಯೋಗಾನುಕೂಲತೆಗಳಿಗೂ ಸರಿಯಾಗಿ ಬದಲಾವಣೆಯನ್ನು ಹೊಂದುವುದು ಅವಶ್ಯವಾಯಿತು. ಪ್ರಾಚೀನ ಕವಿ ಸಮಯಗಳು ಇಂದು ಸರಿಯಾದ ಅರ್ಥ ಒಪ್ಪುಗಳನ್ನು ಕೊಡುವುದರಲ್ಲಿ ಎಡವರಿಸುವುದುಂಟು ಅದಕ್ಕಾಗಿ ನವ ಕವಿ ಸಮಯ ಸೃಷ್ಟಿಯು ಅವಶ್ಯವಿಲ್ಲವೇ?

ಹಿಂದಿನ ಛಂದಸ್ಸು, ಸ್ವಾತಂತ್ರ್ಯವನ್ನು ಕಡೆಯಲು ಜನ್ಮವೆತ್ತಿಲ್ಲ ಅವುಗಳಲ್ಲಿ ನವಸೃಷ್ಟಿಗೆ ಬೇಕಾದ ಪ್ರೋತ್ಸಾಹವುಂಟು

ಇಂದಿನ ಕಾವ್ಯಪ್ರಪಂಚದ ಮೇಲೆ ವಿಜ್ಞಾನವು ನವೀನ ಬೆಳಕನ್ನು ಕೊಡಲಿದೆ. ಅದರಿಂದ ಪರಿವರ್ತನೆಯು ಕವಿಜೀವನದಲ್ಲಿ ಬಾರದಿದ್ದೀತೆ? ಕವಿವಿಧಾನಗಳಲ್ಲಿ ತೋರದಿದ್ದೀತೆ? . . . . . ಜಗತ್ತಿನ ಸಂಸ್ಕೃತಿಯು ಅಚ್ಚಳಿಯದೆ ಉಳಿದೀತೆ? ಈ ಕ್ರಾಂತಿಯು ಇಂದು ಸಂಗೀತ, ಚಿತ್ರಕಲೆ ಮೊದಲಾದುವುಗಳಲ್ಲಿಯೂ ಬಂದಿದೆ. ಕ್ರಾಂತಿ ಬದಲಾವಣೆಗಳು ಚೇತನದ ಚಿಹ್ನೆ. ಅದು ಜಡವಾಗಿ ಇದ್ದಂತೆ ಇದ್ದರೆ ಅದು ಜೀವನದ ಮೃತ್ಯುಶಯ್ಯೆ

ನಮ್ಮ ಹೃದಯವು ಇಂದು ನವೀನ-ಪುರಾತನ ಪದ್ಧತಿಗಳೆರಡಕ್ಕೂ ಇಂಬನ್ನು ಕೊಡಲಿ. ಕಾವ್ಯದ ಗುರಿಯು ಒಂದಾಗಿರುವಲ್ಲಿ ಅವುಗಳಲ್ಲಿ ಏಕತೆಯೂ ಒಂದು ಕಾಲಕ್ಕೆ ಬಂದೀತು. ಮುಖ್ಯವಾಗಿ ನಮ್ಮ ಕಾವ್ಯಕ್ಕೆ ಬೇಕಾದುದು ಆತ್ಮಸಮರ್ಪಣ ಬುದ್ಧಿ.

# Canara Bank Limited.

Head Office:—Dongerkery Street, Mangalore. Local Office —Bunder, Mangalore.

BRANCHES:-Karkal, Kasargod, Cochin, Udipi, Gangolli, Coondapur, Bombay, Puttur, Calicut, Alleppey, Ernakulam, & Chikmagalur

| | |
|---|---|
| Authorised Capital | 10,00,000 – 0 – 0 |
| Paid up Capital. | 3,00,000 – 0 – 0 |
| Reserve and other Funds | 5,26,000 – 0 – 0 |

A recent issue of further 3 lacs of capital has been over subscribed within a short period. The allotment will be made in January 1933

In view of the existing monetary conditions the phenomenal downfall in the value of land and of commodities in general, and in view of the combined action of Banks, both exchange and Indigenous in lowering rates all round, we have been reluctantly compelled as and from 1st January 1933 to reduce the rates of interest on deposits. The rules of business have also been amended and copies of the same can be had on application.

CURRENT ACCOUNTS.—Interest will be paid at 2 per cent p a from 1st January to 30th June and at 1 per cent. from 1st July to 31st December

SAVINGS BANK: - 4 per cent per annum

FIXED DEPOSITS - 5 per cent. per annnm for 1 year or more

For rates on other deposits please apply to our Agents at Branches or to the undersigned at Head Office.

Depositors are requested to take notice that the interest accrued on deposits till 31 – 12 – 32 will be paid to them on 3rd January 1933 and interest accrued there after will be paid half yearly on 2nd July and 2nd January or at maturity

Mangalore, 28 – 12 1932.

**P. Sarvothum Nayak,**
*Ag Secretary & Treasurer*



ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

# ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು.

**ಸ್ನಾನಕ್ಕೆ – ಶೌಚಕ್ಕೆ:**

ಸೇಂಡಲ್‌ವೂಡ್, ನೀಮ, ಮಾರ್ಗೋಜಾ, ವೇಪ ಸೋಪುಗಳೂ

**ಉಡಿಗೆತೊಡಿಗೆಗಳಿಗೆ:**

ಮಲಬಾರ ಟಿಬಲೆಟ್ಸ್, ಸೇಟಸೋಪ ಟಿಬಲೆಟ್ಸ್‌ಗಳೂ

ಎಲ್ಲಕ್ಕೂ ನಿರಾಕ್ಷೇಪಕರವಾಗಿ ವ್ಯವಹೃತವಾಗಿವೆ

ಕ್ರಯವೊ ಸುಲಭ – ಗಿರಾಕಿಗಳು ಧಾರಾಳ – ಉಪಯೋಗಗಳು ಬಹಳ.

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು

ಈ ಜಿಲ್ಲೆಗೆ ಪ್ರವರ್ತಕರು:—

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913)

**East & West Buildings, Fort Bombay**

VALUATION REPORT for the Triennium ending 31st December 1931

**Reveals Certain Striking Features**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation.

Interim Bonus Rs 15/- per 1,000/- per year

both on whole life and endowment with Profit Policies becoming claims before 1st January 1934. FORECAST-STILL GREATER PROSPERITY.

**WANTED LADIES & GENTS in Unrepresented Areas**

Earn Rs. 100/ to 500/- independently per month.

*For particulars apply or please call at—*

**Chief Organising Office,**

Harbour View, MANGALORE


# ಪ್ರಭುಗಳು, ಅವರ ಗವರ್ನ್‌ಮೆಂಟ್ ಮತ್ತು ಅವರ ನ್ಯಾಯವಿಮರ್ಶೆಯ ಶಾಖೆಯು.

(ಎಂ ವೆಂಕಟಕೃಷ್ಣಯ್ಯ ಮೈಸೂರು ಇವರಿಂದ)

ಜಿಂನೇ ಸಂಚಿಕೆಯಿಂದ ಮುಂದುವರಿಸಿದ್ದು

ಮುಖ್ಯವಾಗಿ ರಾಜ್ಯದಲ್ಲಿ ಸತ್ಯವೂ, ಧರ್ಮವೂ, ರೂಢಮೂಲವಾಗಿರುವಂತೆ ಮಾಡಿಕೊಳ್ಳುವುದಕ್ಕೂ "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದನ್ನು ಸಂಪಾದಿಸಿಕೊಳ್ಳಬೇಕಾದರೂ ಸತ್ಯದಲ್ಲಿಯೂ ಧರ್ಮದಲ್ಲಿಯೂ, ಚೆನ್ನಾಗಿ ದೃಷ್ಟಿಯನ್ನಿಟ್ಟು ಕೆಲಸ ಮಾಡುತ್ತಾ ಇರುವುದು ಮಾತ್ರವೇ ಅಲ್ಲದೆ ಧರ್ಮ ಸೂಕ್ಷ್ಮಗಳನ್ನೆಲ್ಲಾ ಚೆನ್ನಾಗಿ ತಿಳಿದವರಾಗಿದ್ದಾಗ್ಯೂ ಸ್ವಾರ್ಥಪರತೆಯಿಂದ ಅವರವರ ಮನಸಾಕ್ಷಿಗೆ ವಿರೋಧವಾಗಿಯೂ ಮಂತ್ರಿಗಳು ಅಂತಹ ಸತ್ಯವನ್ನೂ, ಧರ್ಮವನ್ನೂ ರಾಜ್ಯದಲ್ಲಿ ಆಚರಣೆಗೆ ತರುವರಲ್ಲವೆಂಬ ದೊರೆಗಳ ಮನಸ್ಸಿಗೆ ತೋರಿದ ಕೂಡಲೆ ಅಂತವರು ಯಾರೇ ಆಗಲಿ ಅವರಿಂದ ಎಷ್ಟು ನಿಷ್ಠುರವಾಗಲಿ ಅಥವಾ ದೊರೆಗಳ ಮನಸ್ಸಿಗೂ ಸಹ ಎಷ್ಟು ವ್ಯಥೆ ಬರುವಂತಾದಾದರೂ ಅವುಗಳನ್ನೆಲ್ಲಾ ತೃಣಪ್ರಾಯಕವಾಗಿ ತಿಳಿದುಕೊಂಡು ಧೈರ್ಯವನ್ನು ಅವಲಂಬಿಸಿ ಸರಿಯಾದ ಮಂತ್ರಿವರ್ಯರನ್ನು ನೇಮಿಸಿ ಸತ್ಯವನ್ನೂ, ಧರ್ಮವನ್ನೂ ಕಾಪಾಡಬೇಕೆಂಬ ಮನೋಭಾವವುಳ್ಳ ದೊರೆಗಳು ದೇವೇಂದ್ರನಿಗೆ ಸಮಾನರಾಗುವರು ಆದ್ದರಿಂದ ಧರ್ಮಸೂಕ್ಷ್ಮಗಳನ್ನು ತಿಳಿದಿರುವವರೇ ಮಂತ್ರಿ ಪದವಿಗೆ ಉತ್ತಮಕ್ಕೆ ಹೊರತಾಗಿ ಇತರರು ಅರ್ಹರಲ್ಲವೆಂತ ತೋರುತ್ತದೆ ಪ್ರಜೆಗಳ ಯೋಗಕ್ಷೇಮವನ್ನು ಅವರ ಆಸ್ತಿಪಾಸ್ತಿಗಳನ್ನು ಯೋಗ್ಯರೀತಿಯಿಂದ ಕಾಪಾಡಬೇಕಾದರೆ ನ್ಯಾಯ ಪರಿಶೀಲನೆಯಲ್ಲಿ ಚೆನ್ನಾಗಿ ಪರಿಶ್ರಮವುಳ್ಳ ಮಂತ್ರಿ ಶ್ರೇಷ್ಠರಾದವರಿಗೆ ನ್ಯಾಯ ವಿಮರ್ಶೆಯ ಶಾಖೆಯಲ್ಲಿ ಪರಿಚಯವಿಲ್ಲದಿದ್ದರೂ ಅವರ ಕೌನ್ಸಿಲ್ ಮೆಂಬರುಗಳಲ್ಲಾದರೂ ನ್ಯಾಯವಿಮರ್ಶೆಯಲ್ಲಿ ನಿಸ್ಪೃಹರಾಗಿ ಕೆಲಸ ಮಾಡಿ ಬಹಳ ಅನುಭವವಿರುವ ಕೌನ್ಸಿಲ್ ಮೆಂಬರುಗಳ ಸೈಕಂಪದೂ ಒಬ್ಬ ನ್ಯಾಯತಂತ್ರ ಜ್ಞರಿಂದ ಒಬ್ಬ ಮೆಂಬರಾದರೂ ಇರಬೇಕು ಮತ್ತು ನಮ್ಮ ಮೈಸೂರು ಸೀಮೆಯಲ್ಲಿ ನ್ಯಾಯವಿಧಾಯಕ ಮಾಡುವ ಶಾಖೆಯಲ್ಲಿ ಇತರ ಬ್ರಿಟಿಷ್ ಇಂಡಿಯಾ ಕೋರ್ಟುಗಳಲ್ಲಿರುವಂತೆ Letters patent ಎಂಬ ಕಾನೂನು ಸಹ ಇದ್ದಲ್ಲಿಯೇ ಇರುವುದರಿಂದಲೂ ನಮ್ಮ ಮೈಸೂರು ಹೈಕೋರ್ಟಿನ ಜಡ್ಜಿಗಳ ಪೈಕಿ ಒಬ್ಬ ಜಡ್ಜರೇ ತೈಸಲು ಮಾಡಬೇಕಾಗಿರುವ ಕೆಲಸಗಳು ಸಹ ಅನೇಕವಾಗಿ ಇರುವುವು ಅವರಲ್ಲಿ ಏನೂ ಅನ್ಯಾಯಗಳಿಲ್ಲದಿದ್ದರೂ ಅವರು ಮಾಡುವ ತೈಸಲೇ ಅಖೈರಾದ ತೈಸಲಾಗಿಯೂ ಅದರ ಮೇಲೆ ಅಪೀಲು ಸಹ ಇಲ್ಲದೆಯೂ ಇರುತ್ತದೆ ಆದ್ದರಿಂದ ಬ್ರಿಟಿಷ್ ರಾಜ್ಯದಲ್ಲಿ ಪ್ರಿವಿ ಕೌನ್ಸಿಲಿನಂತೆ ಮೈಸೂರು ದೇಶದಲ್ಲಿಯೂ ನ್ಯಾಯ ವಿಮರ್ಶೆ ಮಾಡುವುದರಲ್ಲಿ ಪಾಂಡಿತ್ಯವನ್ನು ಪಡೆದು ತುಂಬಾ ಅನುಭವಶಾಲಿಗಳಾಗಿ ರಿಟೈರ್ಡ್ ಆಗಿರತಕ್ಕ ನಿಸ್ಪೃಹರಾದರೆ ಕೆಲವು ಜಡ್ಜಿಗಳನ್ನು ನೇಮಿಸಿ ಒಂದು ಜ್ಯುಡಿಸಿಯಲ್ ಕಮಿಟಿಯನ್ನು ಏರ್ಪಡಿಸಿ ಆ ಕಮಿಟಿಯಲ್ಲಿ ಸಕಾರಣವನ್ನು ತೋರಿಸಿ ಅವರು ಕೊಡುವ ಸಲಹೆಗನುಸಾರ ಕಕ್ಷಿಗಾರರು ಸದರಿ ಕಮಿಟಿಯಲ್ಲಿ ಮಾಡಿಕೊಳ್ಳತಕ್ಕ ಅಪೀಲುಗಳನ್ನು ತೈಸಲು ಮಾಡುವುದಕ್ಕೂ ಮೈಸೂರು ಹೈಕೋರ್ಟಿನಲ್ಲಿ ಬ್ರಿಟಿಷ್ ಜಡ್ಜರನ್ನೂ ಇತರ ಜಡ್ಜರುಗಳನ್ನು ನೇಮಕ ಮಾಡುವ ಜ್ಯುಡಿಷಿಯಲ್ ಇಲಾಖೆಯಲ್ಲಿ ಯಾರು ನಿಸ್ಪೃಹತೆಯಿಂದಲೂ ನಿಷ್ಪಕ್ಷಪಾತವಾಗಿಯೂ ನಿಷ್ಕೃತೆಯಿಂದ ನ್ಯಾಯವಾದ ತೈಸಲುಗಳನ್ನು ಮಾಡಿ ಯೋಗ್ಯತೆಯನ್ನು ಪಡೆದಿರುವವರನ್ನೇ ಸೀನಿಯಾರಿಟಿ ಮೊದಲಾದುವುಗಳನ್ನು ಸಹ ಗಮನಿಸದೆ ದಕ್ಷರಾದವರನ್ನೇ ನೇಮಿಸಿಕೊಳ್ಳುವುದಕ್ಕೂ ಸಹ ಶ್ರೀಮಾನ್ ಮಹಾರಾಜರವರಿಗೆ ಸಲಹೆಗಳನ್ನು ಕೊಡತಕ್ಕ ಸದರಿ ಜ್ಯುಡಿಷಿಯಲ್ ಕಮಿಟಿಯವರು ಚೆನ್ನಾಗಿ ಪರ್ಯಾಲೋಚಿಸಿ ಅವರು ಯಾರನ್ನು ಚುನಾಯಿಸಿದರೆ ನ್ಯಾಯಕ್ಕೆ ಲೋಪಬಾರದೆಂತ ಸಲಹೆಗಳನ್ನು ಕೊಡುವರೋ ಅಂತವರನ್ನೇ ಮೈಸೂರು ಹೈಕೋರ್ಟು ಜಡ್ಜಿಗಳನ್ನಾಗಿ ನೇಮಕ ಮಾಡುವಂತೆ ಆಗಬೇಕು ಇಲ್ಲದಿದ್ದರೆ ಕೆಲವು ವೃತ್ತಪತ್ರಿಕೆಗಳಲ್ಲಿ ಸರಿಯಾದ ಯೋಗ್ಯತೆ ಇಲ್ಲದವರನ್ನು ಸಹ ಅನೇಕ ವೇಳೆಗಳಲ್ಲಿ ಸ್ವಾರ್ಥಪರತೆಯಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಅವರನ್ನು ಇಂದ್ರ ಚಂದ್ರ ದೇವೇಂದ್ರರೆಂತಲೂ ಬಹಳ ಬುದ್ಧಿವಂತರೆಂತಲೂ ನಿಸ್ಪೃಹರಾಗಿರುವರೆಂತಲೂ ಹೊಗಳುವುದೂ ಉಂಟು ಕೆಲವು ಸಂದರ್ಭಗಳಲ್ಲಿ ನಿಜವಾಗಿಯೂ ನಿಸ್ಪೃಹತೆಯಿಂದಲೂ ನಿರ್ಭಯವಾಗಿಯೂ ನಿದಾಕ್ಷಿಣ್ಯವಾಗಿಯೂ ನ್ಯಾಯ ವಿಮರ್ಶೆಯನ್ನು ಯಾರೂ ಆಕ್ಷೇಪಣೆಗೆ ಮಾಡುವುದಕ್ಕೆ ಅವಕಾಶವಿಲ್ಲದೇ ನ್ಯಾಯವಾಗಿ ತೈಸಲು ಕೊಡತಕ್ಕ ಜನಗಳನ್ನು ತಮಗೆ ಅವರ ಮೇಲಿರತಕ್ಕ ದ್ವೇಷದಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಅವರಲ್ಲಿಲ್ಲದ ದೋಷಗಳನ್ನು ಕಲ್ಪಿಸಿಕೊಂಡು ಕಾನ್‌ಶೀಟಾಗಿ ಸರಿಯಾದ ಯಾವ ಕಾರಣವನ್ನೂ ತೋರಿಸದೆ ಅಂತವರನ್ನು ಸಹ ದೂಷಿಸುವುದೂ ಉಂಟು ಅಂತಹ ಬೋಗಳುಗಳೆಲ್ಲಾ ಶ್ರೀಮಾನ್ ಮಹಾರಾಜರವರು ಗಮನಕೊಡದೇ ಸದರಿ ಜ್ಯುಡಿಷಿಯಲ್ ಕಮಿಟಿಯವರು ಕೊಡತಕ್ಕ ಸಲಹೆಗಳನ್ನು ಪ್ರಭುಗಳವರು ಚೆನ್ನಾಗಿ ಪರ್ಯಾಲೋಚಿಸಿ ನ್ಯಾಯಕ್ಕೆ ಲೋಪ ಇಲ್ಲದಂತೆ ನ್ಯಾಯವಿಮರ್ಶೆಯ ಶಾಖೆಯಲ್ಲಿ ನ್ಯಾಯದಿಂದಾದ ತೈಸಲನ್ನು ಮಾಡಬೇಕಾದದ್ದು ಬಹಳ ಅವಶ್ಯಕವೆಂತ ನನಗೆ ತೋರುತ್ತದೆ. ಈಗಿನ ಮೈಸೂರು ಹೈಕೋರ್ಟು ಜಡ್ಜಿಗಳಲ್ಲಿ ಕೆಲವರು ಅಂತಹ ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕವರಿಲ್ಲದೆ ಅಂತವರು ಮಾಡತಕ್ಕ ತೈಸಲುಗಳಲ್ಲಿ ಕೀರ್ತಿ ಬರುವುದಿಲ್ಲವೆಂತಲೂ ಅನೇಕ ಉದಾಹರಣೆಗಳಿಂದ ತೋರಿಸಬೇಕೆಂತ ಶ್ರೀಮಂದರವರು ಆಗಲಿ ಅಥವಾ ಅಧಿಕಾರವಿರತಕ್ಕ ಗವರ್ನಮೆಂಟಿನವರು ಯಾರೇ ಆಗಲಿ ನನ್ನನ್ನು ಕೇಳುವುದಾದರೆ ನಾನು ಪಕ್ಕಾ ಕಾರಣಗಳನ್ನು ನಿರ್ಭಯವಾಗಿಯೂ ತೃಪ್ತಿಕರವಾಗಿಯೂ ತೋರಿಸಿ ವಿಶ್ವಾಸಿಸಿಕೊಳ್ಳುವುದಕ್ಕೂ ಸಹ ಸಿದ್ಧನಾಗಿರುತ್ತೇನೆ.

## ನನ್ನ ಕಲಮು

"ಗಾಂಧಿಯವರ ಬಿಡುಗಡೆಯ ಕುರಿತು ಬ್ರಿಟಿಷ ಮತ್ತು ಇಂಡಿಯಾ ಸರಕಾರಗಳು ತರ್ಕಿಸುತ್ತಿವೆ" ಎಂದು ಸುದ್ದಿಯಿತ್ತು. ಒಡನೆ ಸರಕಾರದ ಕಡೆಯಿಂದ 'ರೂಟರ್' ವಾರ್ತಾವಾಹಕ ಎಂದ—"ಸುಳ್ಳು! ಬರೇ ಸುಳ್ಳು! ಎಂದು ಮೂಗು ಮೇಲಿಯೇ ಆಗಬೇಕು!

\+ + + + + +

ಗಾಂಧಿಜೀಯವರು ಇನ್ನುಮುಂದಕ್ಕೆ ಕಾಯಿದೆಭಂಗ ಚಳವಳಿಕ್ಕೆ ಕೈಹಾಕುವುದಿಲ್ಲವೆಂದು ವಾಗ್ದಾನಮಾಡಿದರೆ ಮಾತ್ರ ಅವರ ಬಿಡುಗಡೆಯಾಗುವುದಂತೆ! ಓರ್ಡಿನೆನ್ಸ್ ಇಲ್ಲವೇ?

\+ + + + + +

ಸರ್ ಸಾಮುವೇಲ್ ಹೋರರು ಗಾಂಧಿಯನ್ನು ಬಿಡುವುದುತ್ತಮವೆಂದು ಅಭಿಪ್ರಾಯಪಟ್ಟರೆಂದೂ, ವೈಸರಾಯ ವಿಲ್ಲಿಂಗ್ಡನ್ನರು "ಅವನನ್ನು ಬಿಟ್ಟರೆ ಇಲ್ಲಿ ಸಾಧ್ಯವಾಗಲಿಕ್ಕಿಲ್ಲವೆಂದು ಹೇಳಿದರೆಂದೂ, ಈ ಭಿನ್ನಾಭಿಮತದಿಂದ ಸರಕಾರದ ಈ ಇಬ್ಬರು ಮೇಲಧಿಕಾರಿಗಳೊಳಗೆ ಮನಃಕ್ಲೇಶವುಂಟಾಗಿದೆಯೆಂದೂ ಲಂಡನಿನ ವಾರ್ತೆ! ಮುದುಕರಿಗ ಭಯ ಹೆಚ್ಚು!

\+ + + + + +

"ಗಾಂಧಿಯನ್ನು ಬಿಟ್ಟು ಯಾವ ಕೆಲಸವೂ ಸಾಗಲಿಕ್ಕಿಲ್ಲವೆಂದು ಮಿ| ಚರ್ಚಿಲ್ಲರು ಮೊನ್ನೆ ಹೇಳಿರುವರು. ಕ್ರಿಸ್ಮಸ್ ಸಮಯವಾದುದರಿಂದ ಈ ನುಡಿಯ ಸಮಯದಲ್ಲಿ ಅವರು ವೈನ್ ಕುಡಿದಿರಬಹುದು!

\+ + + + + +

"ಗಾಂಧಿ ಸತ್ತರೆ ಸಾಯಲಿ ನೀವು ಮೊಣಕಾಲೂರಬೇಡಿ" ಎಂದು ಒಬ್ಬ ಜಗದ್ಗುರುಗಳು ಗುರುವಯ್ಯೂರ ಜಮೊರಿನರಿಗೆ ತಂತಿಕೊಟ್ಟಿದ್ದಾರೆ ಜಗದ ಗುರುಗಳೆಂದರೆ ಮತ್ತಾರು?

\+ + + + + +

ಇದು ಸತ್ಯಯುಗ, ಕ್ರಾಂತಿಕಾಲ ಸನಾತನಿಗಳನ್ನು ದೇವರ ಭಯದಿಂದ ಮಂಗಗೊಳಿಸ ಹೊಟ್ಟೆ ಹೊರುತ್ತಿದ್ದ ಜಗದ ಗುರುಗಳ ಸುಳ್ಳು ಯುಗವು ಮಾಯವಾಗುತ್ತಿದೆ!

\+ + + + + +

ಪೊನ್ನಾನಿಯಲ್ಲಿ ಗುರುವಯ್ಯೂರು ದೇವಸ್ಥಾನ ಪ್ರವೇಶದ ಕುರಿತು ಜನಾಭಿಪ್ರಾಯವನ್ನು ಓಟು ಪ್ರಕಾರ ತೆಗೆದಾದ ೭೭ ಮಂದಿಗಳು ಗಾಂಧಿಯ ಕಡೆ! ಶಾಸ್ತ್ರಿಗಳ ತಲೆಗ ಸಿಡಿಲು ಬಡೆದಂತೆ!

\+ + + + + +

ಜಮೊರಿನರ ಕುಟುಂಬದ ಸ್ತ್ರೀಯೊಬ್ಬ ಗುರುವಯ್ಯೂರು ದೇವರಿಗೆ ಸುವರ್ಣಪ್ರತಿ ಕೊಡುವ ಮುಡಿಪನ್ನು ಈ ಸಲ ಹರಿಜನೋದ್ಧಾರ ಕಾರ್ಯಕ್ಕಾಗಿ ದಾನಮಾಡಿರುವಂತೆ—ಸನಾತನ ಬಂಧುಗಳೇ ತಲೆ ತಗ್ಗಿಸಬೇಡಿ! ಜೋಕೆ

\+ + + + + +

ನಮ್ಮ ಜಿಲ್ಲೆಯಲ್ಲಿ ಸುಮಾರು ದೇವಸ್ಥಾನಗಳಿವೆ ಡಾ| ಸುಬ್ಬರಾಯನರ ಬಿಲ್ಲೊಂದು ಹೊರಬೀಳಲಿ! ಆಗ ಬರುತ್ತೆ—ನೀರ ಚಾಪೆಯಡಿಗೆ ಆಡಳಿತಗಾರರೇ, ಆಗಲೂ ಎದ್ದೇಳದಿರಿ! ಜೈಲಿಗೆ ನಡೆಯಿರಿ

\+ + + + + +

ಸನಾತನಿಗಳನ್ನು ಸಮರ್ಥಿಸುವ ಒಂದೆರಡು ಪತ್ರಿಕೆಗಳಿವೆ ಪಾಪ! ಅವುಗಳು ಕೂಡಾ ಸರಿಯಾಗಿ ಬಾಯ್ಬಿಟ್ಟು ಮಾತನಾಡುತ್ತಿಲ್ಲ! ಇದಲ್ಲವೇ ಸನಾತನಿಗಳ ದುರದೃಷ್ಟ!

ದಿವ್ಯದೃಷ್ಟಿ

## ನವ ವರ್ಷಾರಂಭದ ನವ ಸಂತೋಷಾರ್ಥವಾಗಿ ನವ ಒಗಟು.

### ಐದು ರೂಪಾಯಿಯ ಐದು ಬಹುಮಾನಗಳು.

**ಎಡದಿಂದ ಬಲಕ್ಕೆ—**

೨ ಈಗ ೪ ತಾವರೆ ೬ ಬೇಡ. ೯ ಮುಪ್ಪು ೧೧. ಗುಣಗಳಲ್ಲೊಂದು ೧೨ ಸರೋವರ ೧೩ ಬ್ರಹ್ಮ ೧೫ ಸತ್ಯ ೧೬ ರುಚಿಗಳಲ್ಲೊಂದು. ೧೮ ನಿನಾದ ೧೯ ಹೊಸ. ೨೦ ಕಂದ. ೨೧ ನಿನ್ನ ೨೩ ಲೋಕಭೇದ ೨೫ ಮಾರುತ ೨೬ ಲಕ್ಷ್ಮಿ ೨೮ ಸಂವತ್ಸರಗಳಲ್ಲೊಂದು ೨೯ ದಿನ ೩೧ ಕೆರೆ. ೩೨ ಕತ್ತಲೆ.



**ಮೇಲಿಂದ ಕೆಳಕ್ಕೆ—**

೧. ಜೇನು ೨. ಆಡು. ೩. ಪ್ರಪಂಚದ ಗತಿಗಳಲ್ಲೊಂದು ೪ ಗೂಡು ೫ ಅಂಗಳಗಳಲ್ಲೊಂದು ೭ ಬರಗಾಲ ೮ ರಾತ್ರಿ ೧೦ ಮುಸುಕು. ೧೨. ಕೂಡಾ ೧೩ ಪಂಚಭೂತಗಳಲ್ಲೊಂದು. ೧೪ ತಂದೆ. ೧೬ ವಸ್ತ್ರ ೨೨ ವಾರ್ತೆ ೨೪ ಪಂಚ ವಿಷಯಗಳಲ್ಲೊಂದು ೨೫. ಸಂಗೀತಗಾರ. ೨೬ ಶ್ವಶುರ. ೨೮ ಕಥ ೩೦. ಪತಿವ್ರತೆ ೩೧ ವಿಧಾನ ೩೩ ಸ್ನೇಹಿತ

ಒಗಟುಗಾರ – ಎಮ್. ಜಿ ಅನಂತಶೈ

ವಿ ಸೂಚನೆಗಳು — (೧) ಉತ್ತರವನ್ನು ಒಂದಾಣೆಯ ಚೀಟಿನೊಂದಿಗೆ ಕಳುಹಿಸತಕ್ಕದ್ದು (೨) ಒಂದೇ ಬಾರಿ ಒಂದೇ ಕವರಿನಲ್ಲಿ ಕಳುಹಿಸುವ ಐದು ಉತ್ತರಗಳಿಗೆ ನಾಲ್ಕಾಣೆಯಂತೆಯೂ ಹತ್ತಕ್ಕೆ ಎಂಟಾಣೆಯಂತೆಯೂ ಇಪ್ಪತ್ತೈದಕ್ಕೆ ಒಂದು ರೂಪಾಯಿ ಯಂತೆಯೂ ಅಂಚೆ ಚೀಟು ಕಳುಹಿಸಬೇಕು (೩) ನಿಯಮ ವಿರುದ್ಧವಾದ ಉತ್ತರಗಳನ್ನು ಸ್ವೀಕರಿಸಲಾರೆವು (೪) ಉತ್ತರಗಳನ್ನು ಜನವರಿ ತಾ ೧೯ರೊಳಗೆ ಸ್ವದೇಶಾಭಿಮಾನಿಯ ಮೆನೇಜರರಿಗೆ ರವಾನಿಸಬೇಕು (೫) ಉತ್ತರವನ್ನು ಜನವರಿ ತಾ. ೨೦ಕ್ಕೆ ಪ್ರಕಟಿಸಲಾಗುವುದು (೬) ಸಾಕಷ್ಟು ಉತ್ತರಗಳು ಬಾರದಿದ್ದಲ್ಲಿ ಬಹುಮಾನಗಳು ಕಡಿಮೆ ಮಾಡಲ್ಪಡುವುವು ಯಾ ಒಗಟು ಮುಂದುವರಿಸಲ್ಪಡುವುದು

"ಅನ್ಯದೇಶಗಳಲ್ಲಿ ಒಬ್ಬನ ಜೀವನದ ಅಂತಸ್ತಿನ ಮೇರೆಗೆ ಅವನ ತುಲನೆಯಾಗುತ್ತದೆ ಮಾಜಿ ಮಂತ್ರಿಯ ವರಾದ ಲ್ಲೊಯ್ಡ್ ಜೋರ್ಜರು ಮೂರು ವರ್ಷದ ಶಿಶು ವಾಗಿದ್ದಾಗ ಅವರ ತಂದೆಯವರು ತೀರಿಕೊಂಡರು. ಅವರನ್ನು ಸಲಹಿದವರು ಅವಿವಾಹಿತರೂ ಸಮಗಾರ ವೃತ್ತಿಯವರೂ ಆಗಿದ್ದ ಅವರ ಚಿಕ್ಕಪ್ಪನವರು

"ಸೋವಿಯಟ್ ಪ್ರಜಾಸತ್ತೆಯ ಪ್ರಮುಖರಾದ ಸ್ಟೇಲಿನರ ತಂದೆಯವರು ಸಮಗಾರರೂ ಅಲ್ಲ—ಜೀವನ ಹದವಾದ ತ್ತಿದ್ದವರು. ವೆಟ್ಟಿ ಹೊಲಿದು ಸ್ಟೇಲಿನರು ದಿನಹುಣಿ ಮಾಡಿದ್ದರು

"ಯುರೋಪಿನ ಸಕೊಪ್ಲವಾಕಿಯಾದ 'ಶೂ ಕಿಂಗ್' ಆಗಿದ್ದು ಮೊನ್ನೆ ಕಾನೇ ಮರಣ ಹೊಂದಿದ ಥೋಮತ್ ಬಾಟಾರವರು ಸಮಗಾರನಲ್ಲಿ ಹುಟ್ಟಿದವರು ಈಗ ಅವರ ಮಗನಿಗೆ ೧೦ ವಿಮಾನಗಳು ಸ್ವಸಂಚಾರಾರ್ಥವಾಗಿ ಇವೆ

"ಲೂಯಿಸ್ ಪಾಶ್ಚರ್ ಎಂಬ ಮಹಾ ಕೆಮಿಸ್ಟರೊಬ್ಬರು ಸಮಗಾರರ ಪುತ್ರರಾಗಿದ್ದರು. ಡ್ಯೂಕ್ ಒಪ್ ನೊರ್ಮಂಡಿ ಇವರು ಸಮಗಾರ ಯುವತಿಯನ್ನು ವಿವಾಹವಾಗಿ ಅವರಿಂದ 'ವಿಲ್ಲಿಯಂ ದಿ ಕೊಂಕರರ್' ಇವರು ಜನಿಸಿದರ

"ಹಿಂದೂಸ್ಥಾನಕ್ಕೆ ಬಂದು ೧೮ನೇ ಶತಮಾನದಲ್ಲಿ ಇಲ್ಲಿಯ ಅನೇಕ ಭಾಷಾ ಪರಿಜ್ಞಾನವನ್ನು ಮಾಡಿ ಬಂಗಾಳೀ ಭಾಷೆಯನ್ನು ಬಲಗೊಳಿಸಿದ ವಿಲ್ಲಿಯಂ ಕರೆಯವರು ಬಾಲ್ಯದಲ್ಲೇ ಸಮಗಾರರ

**ಸ್ಪೃಶ್ಯಾಸ್ಪೃಶ್ಯತೆಯ ಭೇದ ಕಲ್ಪಿಗಳಿಗೇ ನರಕ**

## ನರಕವಾರಿಗೆ?

"ಒಂದು ಜಾತಿಯವನು ಇನ್ನೊಂದು ಜಾತಿಯವನ ವೃತ್ತಿಯನ್ನವಲಂಬಿಸಿದರೆ ಕುಂಭೀಪಾಕ ನರಕ ಸಾಧನ ವೆಂದು ಶಾಸ್ತ್ರದಲ್ಲೊಂದ ವಾಕ್ಯ

ಇದು ಅಂದಿನ ಶಾಸ್ತ್ರಿಗಳು ತಮ್ಮುದರ ಪೋಷಣೆಗಾಗಿ ಕಟ್ಟಿಕೊಂಡ ಬೇಲಿಯೆಂದ ದೃಢವಾಗಿ ಹೇಳಬಹುದು

ಶೂದ್ರನು ಬ್ರಾಹ್ಮಣ್ಯವನ್ನು ತಿಳಿಯಬಾರದೆಂಬ ಮಹತ್ತರ ಸ್ವಾರ್ಥ ದಿಂದಾಗಿಯೇ ಈ ಶಾಸ್ತ್ರ ಶ್ಲೋಕವು ಜನಿತವಾಯಿತು. ಆದರ ಈ ಸಿದ್ಧಾಂತದ ಅಡಿಗಲ್ಲು ಈಗ ಅಲುಗಾಡಲಾರಂಭಿಸಿದೆ ಬ್ರಾಹ್ಮಣರು ಶೂದ್ರವೃತ್ತಿಯನ್ನೂ ಶೂದ್ರರು ಬ್ರಾಹ್ಮಣ ವೃತ್ತಿಯನ್ನೂ ಈಗ ಹಿಡಿದಿದ್ದಾರೆ ಬ್ರಾಹ್ಮಣ್ಯವೇ ಅವರ [ಶ]ಸ್ತ್ರವೃತ್ತಿಯಾದರೂ, ಬ್ರಾಹ್ಮಣರು ಈಗ ವೈಶ್ಯವೃತ್ತಿಗೆ ತೊಡಗಿದ್ದಾರೆ ಸಂಕ್ಷಿಪ್ತದಲ್ಲಿ—ಜಾತಿಭೇದವನ್ನೆಣಿಸದೆ ಜನಾಂಗವು ತನ್ನ ಅನುಕೂಲಾನುಸಾರವಾಗಿಯೂ, ತನ್ನ ರುಚಿಗನುಸಾರವಾಗಿಯೂ ಉದ್ಯೋಗವನ್ನು ಕೈಗೆ ತೆಗೆದುಕೊಳ್ಳುತ್ತಿದೆ

ಕಾಲಸ್ಥಿತಿಗನುಸಾರವಾಗಿ ಸುಧಾರಣೆಯಾಗಬೇಕೆಂ ವಿಜ್ಞಾನವಿಶಾರದರಾದ ಆಚಾರ್ಯ ಪಿ ಸಿ ರೇಯವರು ಮದ್ರಾಸಿನಲ್ಲಿ ಸಿ ರಾಜಗೋಪಾಲಾಚಾರ್ಯರೊಡನೆ ಸಂಭಾಷಿಸುತ್ತಾ ಹೀಗೆಂದರು—"ಹಿಂದೂದೇಶದೊಳಗೊಂದಲ್ಲದೆ ಪ್ರಪಂಚದ ಯಾವ ಭಾಗದಲ್ಲೂ ವೃತ್ತಿ ನಿರ್ಬಂಧದ ಈ ಪದ್ಧತಿಯು ಪ್ರಚಾರದಲ್ಲಿರುವುದು ವ್ಯಕ್ತವಾಗುವುದಿಲ್ಲ '

"ಜ್ಯನಾವೆ ೬೫ ಕೋಟಿ ಜನರು ಅಸ್ಪೃಶ್ಯತೆಯನ್ನು ಯು. ಇಂಗ್ಲಿಷರೂ ಅಮೆರಿಕನರೂ ಕೂಡಾ ೩೦೦೦ ವರ್ಷಗಳ ಇತ್ತೀಚಗೆ ತಮ್ಮ ದೇಶಗಳಲ್ಲಿ ಅಂತಹ ಜಾತಿಭೇದದ ಸುದ್ದಿಯಿರುವುದಿಲ್ಲವೆಂದು ಹೇಳುತ್ತಿರುವರು ಯಾವ ಸಮಾಜದವನೇ ಆಗಲಿ, ಅವನವನ ಯೋಗ್ಯತೆ, ಅನುಕೂಲತೆಗಳಾನುಸಾರವಾಗಿ ಆಯಾಯ ವೃತ್ತಿಯನ್ನು ಕೈಗ ತೆಗೆದುಕೊಳ್ಳಬಹುದು '

"ಅಲ್ಲಿ ಆಜನ್ಮ ಸಮಗಾರರಿಲ್ಲ, ಕಲಾಸಿಗಳಿಲ್ಲ—ಹೊಲೆಯರಿಲ್ಲ ತಮ್ಮ ಹೊಲಗದ್ದೆಗಳ ಉಪಯೋಗಾರ್ಥವಾಗಿ ಬೇಸಾಯಗಾರರು ಪೇಟೆ ಪಟ್ಟಣಗಳಿಂದ ಹೊಲಸುಗಳನ್ನು ಹೊತ್ತುಕೊಂಡು ಹೋಗುವರು ಆದರೆ ಭರತವರ್ಷದಲ್ಲಿ ಒಬ್ಬನು ಸಮಗಾರರಲ್ಲಿ ಜನಿಸಿದರೆ ಅವನು ಕೊನೆಯ ತನಕವೂ ಅದೇ ಜಾತಿಯವನೆಂದೆಣಿಸಲ್ಪಡುವನು ಒಬ್ಬ ಹೊಲೆಯನ ಗತಿಯೂ ಹಾಗೆಯೇ—ಅಸ್ಪೃಶ್ಯತೆಯ ಬೆಳವಣಿಗೆಯೂ ಇದೇ ರೀತಿಯಿಂದ."


# ನಮ್ಮ ಖಾದಿ!—ಎಂದರೆ ನಿಮ್ಮದೇ.

ಖಾದಿ ಉತ್ಪತ್ತಿ ಕೇಂದ್ರಗಳಲ್ಲಿ ನಿಮಗೆ ದೊರೆವ ಕ್ರಯದಲ್ಲೇ ನಾವೂ ವ್ಯಾಪಾರಸ್ತರಿಗೆ
ಬೇಕಾದಂತಹ, ಬೇಕಾದಷ್ಟು ಖಾದಿಯನ್ನು ಒದಗಿಸುತ್ತೇವೆ

ಎಲ್ಲ ಬಗಯ ಸ್ವದೇಶೀ ಸರಕುಗಳೂ, ಶುದ್ಧ ಖಾದಿಯೂ ನಮ್ಮಲ್ಲಿ
ರಖಂ ಆಗಿ ಯಾ ಚಿಲ್ಲರೆಯಾಗಿ ಸದಾ ಸಿದ್ಧವಿದೆ

**ಮದರಾಸಿನ ಅಖಿಲಭಾರತ ಸ್ವದೇಶಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ**

ಪ್ರಸಿದ್ಧ 'ಜವಾಹರಲಾಲ್ ಗುಂಡಿಗಳು ಸರೇವಾರಾಗಿ, ನಮ್ಮಲ್ಲಿ ಮಾರಾಟಕ್ಕಿವೆ!
ಯಾವ ಬಗೆಯ ಶುದ್ಧ ಖಾದಿ ಮತ್ತು ಸ್ವದೇಶೀ ಅರಿವೆಗಳಿಗೆ, ಅತ್ಯಾಧುನಿಕ ಖಿಳ್ಳಿಗಳನ್ನು ಉಪಯೋಗಿಸಿ, ಯಾ ನೀವು ಅಪೇಕ್ಷಿಸುವ ಬಣ್ಣಗಳಲ್ಲಿ, ಶಾಶ್ವತ ಬಾಳಿಕೆಯ ರಂಗನ್ನು ಹಾಕಿ ಕೊಡುತ್ತೇವೆ

**'ಸ್ವದೇಶೀ' ಎಂಬ ಮಾತು ಬಂದಾಗ ನಮ್ಮ ಸ್ಟೋರಿನ ನೆನಪಿರಲಿ**

## ಮಂಗಳೂರು ಸ್ವದೇಶೀ ಸ್ಟೋರ್ಸ್,

ರಥಬೀದಿ, ಮಂಗಳೂರು

# DUO-TREAD TIRES.

## Seiberling's Novel Features.

1. Air Cooled.
2. Duo Tread.
3. Twice the Mileage.
FOR
4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ಫುಟ ವಿಚಾರಗಳು

### ಮುಂದೇನು?

ಬ್ರಿಟಿಷ ಸರಕಾರವು ಕಾಂಗ್ರೆಸಿನೊಡನೆ ಮೈತ್ರಿಗಾಗಿ ಸಾಧಿಸುವುದೋ ಎಂದು ಬೆದರಿ, ತೀಕ್ಷ್ಣ ವಿರೋಧಿಗಳೂ ಮಂದ ವಿರೋಧಿಗಳೂ, ಜೋರರ ಎರಡೂ ಕಿವಿಗಳಲ್ಲಿ ಊದುತ್ತಿರುವರು. ಸಪ್ರೂ ಜಯಕರರೇ ಮುಂದಾಗಿ ಕಾಂಗ್ರೆಸಿನೊಡನೆ ಸಂಧಿಯಾಗದೆ ನಿರ್ವಾಹವಿಲ್ಲೆಂದು ಸೂಚಿಸಿದ್ದ ತರುವಾಯದಲ್ಲಿ ಮುಖ್ಯಮಂತ್ರಿಗಳೂ ಮಂತ್ರಿಮಂಡಲದಲ್ಲಿ ಹೆಚ್ಚಿನವರೂ ಕಾಂಗ್ರೆಸಿನ ಕಡೆಗೆ ಒಲಿಯುವ ಬಗೆಗೆ ಕಾಯುತ್ತಿದ್ದರೆಂದೇ ವಾರ್ತೆ ಹಬ್ಬಿತು. ಹೇಗೂ ಇರಲಿ ಒಲಿಯುವ ಲಕ್ಷಣಗಳಲ್ಲಿ ಮೊದಲನೆಯದೆಂದರೆ ಗಾಂಧಿಜೀಯವರ ಬಿಡುಗಡೆಯಲ್ಲವೆ? ಇಂಡಿಯಾ ಸರಕಾರವಾಗಲಿ, ಸ್ವತಃ ಗಾಂಧಿಜೀಯವರಾಗಲಿ ಈ ಪ್ರಸ್ತಾಪವೇ ತಮ್ಮ ಗೋಚಿಗೆ ಬಂದಿಲ್ಲವೆಂದಿರುವರು ಲೋರ್ಡ ವಿಲ್ಲಿಂಗಡನರು ಅವರ ಪರ್ಯಾಯದ ಅವಧಿಗೆ ಮೊದಲೇ ಮರಳುವರೆಂದೂ ಇನ್ನೊಂದು ವಾರ್ತೆಗೇಕೋ ಅವಕಾಶ ದೊರೆಯಿತು ಇವೆರಡೂ ವಾರ್ತೆಗಳನ್ನು ಹಿಂದೀಯರು ಕೇಳಿ ವಿಸ್ಮಯಗೊಂಡುದಾಗಲಿ, ವಿಶೇಷ ತೃಪ್ತರಾದಂತೆ ತೋರಿಸಿಕೊಂಡುದಾಗಲಿ ಇಲ್ಲ ಒರ್ಡಿನೆನ್ಸು ಕಾನೂನುಗಳಾಗಿರುವ ಕಾರಣ, ಯಾವಾಗ ಬೇಕೋ ಆಗ ಕೈದುಮಾಡಬಹುದಾಗಿರುವವರ ಕಡೆಗೆ ಔದಾರ್ಯವನ್ನೆಷ್ಟು ತೋರಿಸಿದರೂ ಸರಕಾರಕ್ಕೇನು ಹಾನಿ? ಕಾಂಗ್ರೆಸೇನೂ ಮಡಿದಿಲ್ಲ ಮಾಯವಾಗುವುದಂತಿರಲಿ, ಅದು ಕಾರಣ, ಹೊಸ ರಿಫೋರ್ಮುಗಳು ಕಾಂಗ್ರೆಸಿನ ಸಹಕಾರವಿಲ್ಲದೆ ಜೀವಿಸಬಹುದೆಂತೊ!

### ಆದರೂ ಅದೇ ಅತ್ಯವಶ್ಯಕ ಕರ್ಮ

ತಾವಾಗಿ ಕೊಡಬೇಕೆಂದಿರುವುದನ್ನು ಕೈ ತಡೆದೇ ಆದರೂ ಧಾರಾಳ ಕೊಡುವ ಹೊಸ ಕ್ರಮಕ್ಕೆ ಬ್ರಿಟಿಷರು ಕೈ ಹಚ್ಚುವಾಗ, ಈ ವಿಶೇಷ ಚಿಂತೆಯು ಅವರನ್ನು ಬಾಧಿಸುತ್ತಿರುವುದು ಕಾಂಗ್ರೆಸ್ಸಿನೊಡನೆ ಸಂಧಾನವೆಂದರೆ, ಇಡೀ ಭಾರತ ವರ್ಷಕ್ಕೆ ಪ್ರತಿನಿಧಿಯಾಗಿರುವ ಸರ್ವೋತ್ತಮನೊಬ್ಬನೊಡನೆ ಸೌಹಾರ್ದ ಬೆಳೆಸುವುದಷ್ಟು ಆಗಿದೆ ಎಂದೂ ಅವರು ಒಲ್ಲರು ಈ ಸಾಧನೆಯು ಅತ್ಯಾವಶ್ಯಕವಾದುದೆಂಬುದನ್ನು ಅವರು ಮರೆತಿಲ್ಲ ಬ್ರಿಟಿಷ ಸರಕಾರದ ಹೇಳಿಕೆಯುಳ್ಳ ಪತ್ರಿಕೆಯು ಈಗ ಸಿದ್ಧವಾಗುತ್ತಿದೆ ಫೆಬ್ರುವರಿ ಅಂತ್ಯಕ್ಕೆ ಪಾರ್ಲಿಮೆಂಟಿನ ಮುಂದೆ ಅದನ್ನು ಇಡುವರು ಹಲವು ವಾರಗಳ ಚರ್ಚೆ ನಡೆದು ಪಾರ್ಲಿಮೆಂಟು ಇದನ್ನು ವಿಮರ್ಶಿಸಲು ಒಂದು ಕಮಿಟಿಯನ್ನು ನೇಮಿಸುವುದು ಅದು ಮೂರು ತಿಂಗಳಲ್ಲಿ ತನ್ನ ರಿಪೋರ್ಟನ್ನು ಬರೆದುಕೊಂಡ ಬಳಿಕ, ಒಕ್ಟೋಬರದಲ್ಲಿ ಇಂಡಿಯಾ ಸುಧಾರಣೆಗಳ ಆಕ್ಟ ಮಸೂದೆಯು ಮುಂದೆ ಬರಲಿರುವುದು ಇವೆಂಟು ಒಂಭತ್ತು ತಿಂಗಳ ವರೆಗೆ ಬ್ರಿಟಿಷ ಸರಕಾರವು ಹಿಂದೀ ಅಧಿಕಾರಗಳು ಹಿಂದೀಯರ ವರ್ತನೆಯನ್ನು ತಿಪ್ಪೆ ಹೇಗೆ ವರದಿ ಒರೆವರೋ ನೋಡುತ್ತ ಸುಮ್ಮನಿರುವುದೂ, ಅಥವಾ ಹಿಂದೀಯರೂ ೧೯೩೪ರಲ್ಲಾಗ ಬೇಕಾಗಿದ್ದ ಸುಧಾರಣಾ ಪ್ರಯತ್ನಗಳು ಇನ್ನೂ ಆಗುತ್ತ ಇರುವುದನ್ನು ನೋಡಿ ಸುಮ್ಮನಿರುವುದೂ ಸಾಧ್ಯವೆ? ಆದಕ್ಕಾಗಿಯೆ, ಅಖಿಲ ಕಾಂಗ್ರೆಸ್ಸಿನೊಡನೆ ಸ್ನೇಹಾಚಾರ ಬೆಳೆಸುವುದೇ ಸದ್ಧರ್ಮವಾಗದೆ? ಆಪದ್ಧರ್ಮವಲ್ಲವೆ?

### ಸನಾತನಿಗಳ ವಜ್ರ ಕೋಟೆ

ಯಾದ ಪೊನ್ನಾನಿ ತಾಲೂಕಿನಲ್ಲಿ, ದೇವಳ ಪ್ರವೇಶದ ವಿಷಯವಾಗಿ ಅಭಿಪ್ರಾಯಗಳನ್ನು ಸಂಗ್ರಹಿಸಲು, ಮುಕ್ಕಾಲು ಪಾಲು ದೇವದರ್ಶನಾಭ್ಯಾಸವುಳ್ಳ ಸವರ್ಣರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದ ಸಲಕರಣೆಗಳನ್ನು ಸಮಾನವಾಗಿ ಕೊಡ ಲೊಪ್ಪಿರುವ ವಿಷಯವು ಇಡೀ ದೇಶದಲ್ಲೆಲ್ಲ ವಿಶೇಷ ಉದ್ವೇಗವನ್ನುಂಟುಮಾಡಿದೆ ಮಹಾತ್ಮಾಜೀಯವರು ಉಪವಾಸ ಹೋಗುವರೋ ಎಂದು ಕಳವಳಿಸಿದ್ದ ಮಹಾಜನರಿಗೆ, ಅವರು ಈ ಕಾರಣದಿಂದ ಸಮಾಧಾನ ಹೊಂದಿ, ಜನರ ಚಿತ್ತಚಾಂಚಲ್ಯವನ್ನು ಸರಿಪಡಿಸುವುದಕ್ಕೆ ಅಗತ್ಯವಾದಾಗ ಉಪವಾಸವನ್ನು ಕೈಗೊಳ್ಳುವೆನು ಎಂದು ಅವರೆನ್ನುತ್ತಾರೆ. ಹಿಂದಣ ಉಪವಾಸದ ಫಲವಾಗಿ ಪೂನೆಯ ಕರಾರು ಆದಂತೆಯೆ, ಈ ಉಪವಾಸದ ನೆನಪು ಹುಟ್ಟಿದ ಮಾತ್ರದಿಂದ ಏನಲ್ಲ ಆಗಲಾರದು? ಸನಾತನಿಗಳಲ್ಲಿ ಎಷ್ಟೋ ಜನರಿಗೆ 'ಚಿತ್ತ'ವಿದ್ದರಲ್ಲವೆ ಗೊತ್ತಾದೀತು ಎಂದು ಪ್ರಶ್ನೆ ಕೇಳಲೂ ಹಲವರು ತೊಡಗಿದ್ದಾರೆ. ಉಪವಾಸ ವ್ರತವು ಬರಲಿ, ಬಾರದಿರಲಿ, ಚಳವಳವಂತೂ ತೀರ ಚೆನ್ನಾಗಿ ಸಾಗುವಂತಾಗಿದೆ

### ಸ್ವದೇಶೀ ಔಷಧಗಳು

ಅಖಿಲ ಭಾರತದ ವೈದ್ಯಕೀಯ ಸಮ್ಮೇಲನದಲ್ಲಿ ಹಿಂದೀ ವೈದ್ಯರು ತಮಗೆ ಸಾಧ್ಯವಿರುವಷ್ಟು ಹೆಚ್ಚಾಗಿ ಹಿಂದೀ ಔಷಧಿಗಳನ್ನೂ ಶಸ್ತ್ರಾದಿಗಳನ್ನೂ ಪ್ರಯೋಗಿಸ್ಬೇಕೆಂದು ಬಂದು ಒಂದು ನಿರ್ಣಯವು ಸಂತೃಪ್ತಿಕರವಾಗಿಯೇ ಇದೆ. ಹಿಂದೀ ವೈದ್ಯರೂ ಈ ಭಾಗದಲ್ಲಿ ಸ್ವೇಚ್ಛೆಯಿಂದ ಭಾರತ ವರ್ಷದೊಳಗಣ ಗಿಡಮೂಲಿಕೆಗಳಿಗೇ, ಇಲ್ಲಿ ತಯಾರಾದ ಔಷಧೀಯ ಕಾರಖಾನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತ ಬಂದರೆ, ಈ ನಿರ್ಣಯವು ಸುಲಭವಾಗಿ ವ್ಯವಹಾರಕ್ಕೆ ಬರುವಂತಾಗುವುದು ಸಾವಿರಾರು ಅತ್ಯುತ್ತಮ ಔಷಧ ತಯಾರ್ಮಾಡುವ ಶಾಸ್ತ್ರೋಕ್ತ ರೀತಿಯನ್ನು ಅನುಸರಿಸುವ ಕಾರ್ಖಾನೆಗಳು ನಮ್ಮಲ್ಲಿ ಬಹುವರ್ಷಗಳಿಂದಲೂ ಇರುವಾಗ, ಇವನ್ನು ಆಕ್ಕೆಸದೆ, ಪ್ರೋತ್ಸಾಹಿಸದೆ, ಹೊಸ ತರದ ಔಷಧೋಪಕರಣಗಳು ಹೇಗೆ ಸಿದ್ಧವಾಗಬಹುದು? ಅತ್ಯುತ್ತಮ ವಿದೇಶೀಯ ದ್ರವ್ಯಗಳಿಗೆ ಸಮತುಲ್ಯವಾದ ದ್ರವ್ಯಗಳು ನಮ್ಮಲ್ಲಿ ಆಗಲೆ ಸಿದ್ಧವಾಗಿ ಸುಲಭವಾಗಿ ತಾತ್ಕಾಲಿಕವಾಗಿ ದೊರೆಯಲಾರದೆ ಇರುವುವೆ? ವೈದ್ಯರೇನಂತೀ?

### ಉತ್ತಮ ಲಕ್ಷಣಗಳು

ನಾಡರರ ಮತ್ತು ಹಿಂದೀ ಕ್ರೈಸ್ತರ ಎರಡು ಸಮ್ಮೇಲನಗಳು ಕಳೆದ ವಾರ ಜರುಗಿದುವು ಇವುಗಳ ವೈಶಿಷ್ಟ್ಯವೆಂದರೆ, ಸರ್ವಸಾಮಾನ್ಯ ರೀತಿಯಲ್ಲೇ ಒಂದಾಗಿ ಪ್ರತಿನಿಧಿಗಳನ್ನು ಆರಿಸುವ ಕ್ರಮವೇ ಉತ್ತಮವೆಂದು ನಿರ್ಣಯಿಸಿದುದು ತಮ್ಮ ಸಮಾಜಕ್ಕೆ ಈ ಹಕ್ಕನ್ನು ಕೊಟ್ಟು, ತಮ್ಮ ಸಮಾಜದವರೇ ಚುನಾವಣೆ ಹೊಂದುವಂತಾಗಬೇಕೆನ್ನುವವರು ಕೌನ್ಸಿಲು ಹಾಗೂ ಹುದ್ದೆಗಳಲ್ಲಿ ಕೆಲವು ಸ್ಥಾನಗಳನ್ನು ತಮ್ಮವರಿಗೆ ಅಕ್ಕಿಸುತ್ತಾರೇ ವಿನಾ ಜನತೆಗೆ ಯಾವ ಪ್ರಯೋಜನಕ್ಕೆ ಕಾರಣರಾಗುತ್ತಾರೆ? ಅದೂ ಅಲ್ಲದೆ, ಹೀಗೇ ಮುಂದುವರಿಸಿದರೆ, ಜನಾಂಗದೊಳಗೆ ಐಕ್ಯತೆಯು ಕೂಡಿ ಬಂದೀತೇ? ಇಡೀ ಜನಾಂಗದೊಳಗಣ ದೀನ ನಿರ್ಗತಿಕರ ಉದ್ಧಾರಕ್ಕಾಗಿ ಸರ್ವ ಪ್ರತಿನಿಧಿಗಳೂ ಒಂದೇ ಬಗೆಯಾಗಿ ನಿರ್ಧರಿಸಿರುವ ಕಾರ್ಯಕ್ರಮವನ್ನು ರೂಢಿಗೆ ತಂದರೆ ಮಾತ್ರ ಸರ್ವ ಸಾಮಾನ್ಯರ ಉದ್ಧಾರವು ಸಾಧ್ಯವಾಗುವುದಲ್ಲವೆ? ಒಂದು ಲಕ್ಷ ಜನರು ಅ-ಆ ಓದಲು ಬಾರದವರಾಗಿರುವಾಗ ಅವರಿಗೆ ಮೂಲ ಶಿಕ್ಷಣವಾದರೂ ಸಿಕ್ಕಿ ವೋಟಿನ ಹಕ್ಕು ಲಭಿಸಲು ಅಸಾಧ್ಯವಾದಾಗ, ಯಾವನೊಬ್ಬನು ಅತ್ಯುತ್ತಮ ರೀತಿಯಲ್ಲಿ ಡಿಗ್ರಿಗಳನ್ನು ಪಡೆದು ಒಬ್ಬ ಕಲೆಕ್ಟರನೇ ಆದ ಪಕ್ಷದಲ್ಲೂ, ಆ ಸಮಾಜ ಸಾಮಾನ್ಯ ಸ್ಥಿತಿಯು ಸರಾಸರಿಯಾಗಿ ಎಷ್ಟಕ್ಕೆ ಏರಿದಂತಾದೀತು? ಅದರಂತೆ ಪ್ರಾತಿನಿಧ್ಯ ವಿಚಾರ ಎಂದೀ ವಿಚಾರಗಳನ್ನು ಇವೆರಡೂ ಸಭೆಗಳಲ್ಲಿ ಚರ್ಚಿಸಿ ಒಂದೇ ಬಗೆಯಾಗಿ ನಿಷ್ಕರ್ಷಿಸಿದ್ದಾರೆ

### ದಿವಂಗತ ಶ್ರೀಮಾನ್ ಆರ್ ನಾಕಾರವರು.

ಇವರು ಇಲ್ಲಿ ಕೆಲವರ್ಷಗಳ ಹಿಂದೆ ಜಿಲ್ಲಾ ಎಡ್ಯುಕೇಶನಲ್ ಆಫೀಸರರಾಗಿದ್ದು, ಒಂದೇ ವರ್ಷದ ಹಿಂದೆ ಉದ್ಯೋಗದಿಂದ ನಿವೃತ್ತರಾಗಿ ಮದ್ರಾಸಿನ ತಮ್ಮ ಮನೆಯಲ್ಲೇ ಇರುತ್ತಿದ್ದರು ಡಿಸೆಂಬರು ೩೦ ಇರಲ್ಲಿ, ಶ್ವಾಸಕೋಶಗಳ ರೋಗದಿಂದಾಗಿ ವೈಕುಂಠವಾಸಿಯರಾದರು ಹಳಗನ್ನಡದಲ್ಲಿ ಅದ್ವಿತೀಯವಾದ ಪಾಂಡಿತ್ಯವನ್ನುಳ್ಳವರಾಗಿ, ಜೈನ ಸಾಹಿತ್ಯದ ವಿಚಾರಗಳಲ್ಲಿ ಅಧಿಕಾರವಾಣಿಯಿಂದ ಮಾತಾಡಬಲ್ಲವರಾಗಿದ್ದರು ಇವರ ಕನ್ನಡ ಭಾಷಾಶಾಸ್ತ್ರ, ಮರುನ್ನಂದನ ಶತಕ, ಜೈನಸಾಹಿತ್ಯ ಮೊದಲಾದ ಉದ್ಗ್ರಂಥಗಳು ಇವರ ಹೆಸರನ್ನು ಚಿರಕಾಲಕ್ಕೂ ಉಳಿಸುವವೇ ಆದರೂ ಈಗ ೫೮ನೇ ವಯಸ್ಸಿನಲ್ಲೇ ಕನ್ನಡ ಭಾಷಾಕ್ಷೇತ್ರವನ್ನು ತೊರೆದ ಕಾರಣ, ಸದ್ಯದಲ್ಲಿ ದೊರೆತ ವಿರಾಮದಲ್ಲಿ ಇವರು ಉತ್ತಮೋತ್ತಮವಾದ ಜೈನಸಾಹಿತ್ಯ ವಿಷಯಕವಾದ ಗ್ರಂಥಾದಿಗಳಲ್ಲಿ ತಮ್ಮ ಅನುಭವವನ್ನು ಪ್ರಕಟಿಸಬಹುದೆಂದು ಕನ್ನಡಿಗರು ಕೋರಿದ್ದುದು ನಿರರ್ಥಕವಾಗುವಂತಾಯಿತು ಇದು ಕನ್ನಡದ ದುರ್ಭಾಗ್ಯ ಇವರ ಪ್ರಚಂಡ ವಿದ್ವತ್ತೆಯಿಂದ ಹಲವು ವಿದ್ವಾಂಸರು ಇವರನ್ನು ಗೌರವಿಸಿ, ಸಾಹಿತ್ಯ ಪರಿಷತ್ತಿಗೂ ಇವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು ಇವರ ಆತ್ಮಕ್ಕೆ ಚಿರಶಾಂತಿಯು ಇರಲಿ

---

ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಅಧ್ಯಕ್ಷರ ಚುನಾವಣೆಯನ್ನು ಸಮರ್ಥಿಸಲು ನಮ್ಮ ಯಾವ ಪ್ರತಿನಿಧಿಯೂ ಅವಕಾಶ ಪಡೆಯಲಿಲ್ಲವೆಂದು . ಅದೇ ಇದು

* * * *

ಹೊಸ ವರ್ಷದ ಬಿರುದುಗಳು ತುಂಬಾ ಹಂಚಲಾಗಿವೆ ನಮ್ಮ ಜಿಲ್ಲೆಗೆ ಬರಗಾಲ ಪ್ರಾಪ್ತಿ ಅಕ್ಕಿಯ ಕ್ರಯ ಇಳಿದಿದೆಯಷ್ಟೆ. ಈ ಜಿಲ್ಲೆಯ ಕೆಲವರಿಗೆ ಯಾವ ಬಿರುದಾವಳಿಯೂ ಬಾರದೆ ಇದ್ದ ಕಾರಣ, ನಮಗೇ ವಿಷಾದವಾಗಿರುವಾಗ ಅವರಿಗೆ ಹೇಗಾಗಬೇಕು?

+++

## NOTE: :S
## ನೋಟಗಳು

ಛತ್ರಿ ಪತ್ರಿಕೆಯಲ್ಲಿ ಶೆಟ್ರಿ ವಕಾಲತ್ತು — ಇದೀಗ ಈಗಿನ ವ್ಯಾವಹಾರಿಕ ಚಳವಳದ ವೈಚಿತ್ರ್ಯ!

* * * *

ಛತ್ರಿ ಕುಂಬಳಕಾಯಿಯು ಕೌಲಡಿಯಲ್ಲಿ ಯೆಕೆಹೋಳೆಯುತ್ತಿದೆ, ಅದು ನಾರುವುದೆಂಬ ಸೂಚನೆ ಕೂಡ ಛತ್ರಿಂದ ಬರುವುದಿಲ್ಲ. ಆದರೂ ಶೆಟ್ರಿ ವಿವಾದದಲ್ಲಿ ಛತ್ರಿಗೆ ಅಷ್ಟೊಂದು ಉತ್ಸಾಹ—ಪರೋಪಕಾರದ ಮಹಿಮೆಯಾಗಿರಬಹುದು!

* * * *

೧೯೩೨ ಮುಗಿದು ೧೯೩೩ ಎಂದು ಬರೆಯಬೇಕಾಗಿದೆ ೩೩ ಎಂದರೆ ೩೨ಕ್ಕಿಂತ ಒಂದು ಹೆಚ್ಚೆ ಮುಂದೆ ಯಾವ ಕಡೆಗೆ ಎಂದು ಮಾತ್ರ ಇನ್ನೂ ಸಿದ್ಧಾಂತವಾಗಿಲ್ಲ ಭವಿಷ್ಯವಾದಿಗಳ ಮಾತೇ ಇಲ್ಲವಲ್ಲ

* * * *

೩೩ ಎಂಬುದು ಭಾರತವರ್ಷದ ಸಂಖ್ಯೆ ಇದರ ಪರಿಣಾಮ ಇನ್ನು ತಿಳಿಯಬೇಕಾದದ್ದೆ ಮೂರನೆ ರೌಂಡ ಟೇಬಲ್ ಮುಗಿದಿದೆ ನಿಜ ೩೩ ಕೋಟಿಯೂ ಕಾದಿದೆ ಎಂಬುದೂ ನಿಜ ಸುಧಾರಣೆ ಸಿಗಬೇಕಾಗಿದ್ದ ೧೯೩೦ರಿಂದ ೩+೩ ಎಂದರೆ ೧೯೩೬ರಲ್ಲಾದರೂ ಹೊಸ ಬಗೆಯಲ್ಲಿ ಸ್ವರಾಜ್ಯ ಸಿಕ್ಕಬಹುದೆಂದು ಈ ಸಂವತ್ಸರದಲ್ಲಿ ತೃಪ್ತಿಕರವಾಗಿ ಪ್ರಕಟವಾದೀತೇ?

* * * *

ಫಾಸಿ ಶಿಕ್ಷೆ ಬೇಡವೆಂದು ಬಹಳವಾಗಿ ಸಾರಿದವರಿದ್ದರೂ ಹೋಲ್ಲೆಂಡಿನಲ್ಲಿ ೧೮೬೦ರಿಂದ ಯಾರಿಗೂ ಈ ಶಿಕ್ಷೆ ವಿಧಿಸಿಲ್ಲವಾದರೂ, ಇಂಗ್ಲಿಷರು ಇನ್ನೂ ಈ ಶಿಕ್ಷೆಗೆ ಪಕ್ಷಪಾತಿಗಳಾಗಿಯೆ ಇದ್ದಾರೆ ೫ ವರ್ಷಗಳ ಅವಧಿಗಾದರೂ ಇದನ್ನು ಬಾಕಿಮಾಡುವ ಎಂದರೂ ಒಪ್ಪಿಲ್ಲ ಕೊಂದ ಪಾಪವು ಸತ್ತೇ ಪರಿಹಾರವಾಗಬೇಕು ಎಂದು

* * * *

ಆಗ್ಗೆ, ಮರಣವು ಯಾವಾಗಲು ಒಂದೇ ಕಾರಣದಿಂದ ಒಂದೇ ಚಲದಿಂದ ಉಂಟಾಗುವುದಿಲ್ಲ ಎಂದು ವಿಚಾರದಿಂದ ತಿಳಿದವರು, ಎಷ್ಟೊ ಸಲ ಕೊಲೆಪಾತಕಿಯು ಅವನು ಮಾಡಿದ ಕೊಲೆಗೆ ಕಾರಣನಲ್ಲ ಎಂದುದುಂಟು ಇಂಥವರ ಮನೋರೋಗವನ್ನು ಗುಣಪಡಿಸುವ ಬದಲಾಗಿ ಅವರನ್ನು "ಹೆಣವಾಗಿಸುವ ಫಾಸೀ ಶಿಕ್ಷೆಯಿಂದಲೂ ಪ್ರಯೋಜನವುಂಟೆ?

* * * *

ಪೋಸ್ಟಾಫೀಸ ಕೇಶ್ ಸರ್ಟಿಫಿಕೇಟುಗಳು ಎಂದರೆ ೫ ವರ್ಷದ ವಾಯಿದೆಗೆ ಪಡೆವ ಪತ್ರಗಳು ಈಗ ೨೯ರಿಂದ ೭-೧೨-೦ರಂತೆ ದೊರೆಯುತ್ತಿದ್ದುವನ್ನು ಈ ವಾರದಿಂದ ೮ ರೂಪಾಯಿಗೆ ದೊರೆವ ಹಾಗೆ ಸರಕಾರವು ನಿಶ್ಚಯಿಸಿರುವುದು ಎಂದರೆ — ಈಗ ೮ ರೂಪಾಯಿ ಕೊಟ್ಟು ಪಡೆದ ಪತ್ರಕ್ಕೆ ೫ ವರ್ಷಗಳಲ್ಲಿ ೨ ರೂಪಾಯಿ ಬಡ್ಡಿ ಕೂಡಿಸಿ, ೧೦ ರೂಪಾಯಿ ಸಿಗುವುದು

* * * *

ಇದ್ದ ಒಂಟಿ, ಮೂಗುತಿ ಮಾರುವವರು ಚಿನ್ನದ ಧಾರಣೆ ಏರಿ ದೊರೆತ ೧½ ಪಾಲು ಮೌಲ್ಯದ ಹಣವನ್ನು, ಇದರಲ್ಲಿ ವಿನಿಯೋಗಿಸಿದರೆ ಆಗದೆ? ಎಂದು ಸರಾಫರ ಪ್ರಶ್ನೆ

* * * *

ನಮ್ಮ ಸ್ವಭಾಷೆಯಲ್ಲೇ ಸಭಾರಿಗಳಲ್ಲಿ ಭಾಷಣ ಮಾಡಲೊಲ್ಲದೆ ಇಂಗ್ಲಿಷಿಗೆ ಶರಣೆನ್ನುವುದೇಕೆ? ಎಂದು ಶ್ರೀ ದೇವದಾಸ ಗಾಂಧಿಯವರು ಕೇಳುತ್ತಾರೆ

* * * *

ಅಫಗಾನ ಅಮೀರರು ವಿಲಾಯತಿಯಲ್ಲೆಲ್ಲ ಸಂಚರಿಸಿ ಅತಿ ಗೌರವವನ್ನು ಪಡೆದಾಗಲೂ, ಜನರಲ್ ಬೋಥರು ಇಂಗ್ಲೆಂಡಿಗೆ ತೆರಳಿದಾಗಲೂ, ಭಾಷಣ ಮಾಡಿದುದೆಲ್ಲ ಅವರವರ ಮಾತೃಭಾಷೆಯಲ್ಲಿ

* * * *

ಹಿಂದೀಯರೆಲ್ಲೆಷ್ಟೋ ಜನರಿಗೆ ಮಾತೃಭಾಷೆಯೆಂದರೇ ಅರ್ಥವಾದರಲ್ಲವೆ ಆ ಭಾಷೆಯಿಂದಾಡುವುದು,—ಈ ಫಜೀತಿಯನ್ನು ಗಾಂಧಿಜೀಯವರೆಲ್ಲಿ ಬಲ್ಲರು? ನಮ್ಮ ಶಿಕ್ಷಣ ಸಂಸ್ಕೃತಿ ಎಲ್ಲಾ ಹೀಗೆ ಅದೆನ್ನು ಸರಿಮಾಡಿರಿ

* * * *

ದಕ್ಷಿಣ ಕನ್ನಡದಿಂದ ಮದ್ರಾಸಿಗೆ ಕ್ರಿಕೆಟ್ ಆಡಲು ಹೋದ ತಂಗಡವು ಬಹಳ ಕೊಂಡಾಟಕ್ಕೆ ಪಾತ್ರವಾದ್ದೆಂದು ಸಂತೋಷ, ಆದರೆ ಮದ್ರಾಸಿನಿಂದ ಸಿಲೋನಿಗೆ ಇದೇ ಆಟ ಆಡಲು ಹೋಗುವ ಪ್ರತಿನಿಧಿ ಆಟಗಾರರೊಳಗೆ ನಮ್ಮವರೊಬ್ಬರೂ ಇಲ್ಲವೆಂದು . ...

* * * *

ತಾರೀಕು ೬ನೇ ಶುಕ್ರವಾರ ಜನವರಿ ೧೯೩೩ ಸ್ವದೇಶಾಭಿಮಾನಿ

# ಉಪವಾಸದ ಗುಡುಗು ಶಾಂತವಾಯಿತು!

**ದೇವಸ್ಥಾನಗಳ ಮೇಲೆ ಡಾ॥ ಸುಬ್ಬರಾಯನರ ಬಾಣ!**

**ಗಾಂಧಿಜೀಯವರ ಮತ!** **ಕೇಳಪ್ಪನವರ ಸಮ್ಮತ!**

## ಶೇಕಡಾ 77 ಜನರು ಗಾಂಧಿಯ ಕಡೆ!

**ಗಾಂಧೀ—ಕೇಳಪ್ಪನವರು ಜನವರಿ ತಾ. ೨ಕ್ಕೆ ಎಂದಿದ್ದ ಆಮರಣೋಪವಾಸ ದೀಕ್ಷೆಯನ್ನು ಹಿಂದಕ್ಕಿರಿಸಿದರು.**

1932ನೇ ಸಪ್ಟೆಂಬರದ ಗಾಂಧಿಜೀಯವರ ಆಮರಣಾಂತಿಕ ನಿರಶನವ್ರತದಿಂದ ಸಮಸ್ತ ಧರಣೀತಲವೇ ಬೆಚ್ಚಿ ಬೆರಗಾಗಿ ಹೋಯಿತು! ದೇಶದ ಪ್ರೇಮವನ್ನು ಘೋಷಿಸಿದ ಒಬ್ಬ ವ್ಯಕ್ತಿಯ ಪ್ರಾಣದ ಪ್ರತಿಭೆಯು ಎಷ್ಟು ಅಪ್ರತಿಹತ, ಅಮೋಘವೆಂಬ ವಿಚಾರವನ್ನು ದೇಶ ದೇಶಗಳಿಗೆ ಸಾರಿತು! ಭರತಭೂಮಿಯು ಸತ್ಯ, ಅಹಿಂಸೆಗಳಲ್ಲಿ ಅಗ್ರಗಣ್ಯವೆಂಬ ನಿಜ ಸಂಗತಿಯನ್ನು ದಿಗ್ದಿಗಂತಗಳ ರಾಷ್ಟ್ರಗಳು ತಿಳಿಯುವಂತೆ ಮಾಡಿತು! ಮಹಾತ್ಮಾ ಗಾಂಧಿಯವರು ಇಷ್ಟರ ತನಕ ಮಾಡಿದ ಕಾರ್ಯಕಲಾಪಗಳ ಪರಿಣಾಮವು ಅದರಲ್ಲಿ ಪ್ರತಿಫಲಿಸಿತು. ಗಾಂಧಿಜೀಯವರನ್ನು ಭಾರತೀಯರು ಎಷ್ಟೊಂದು ಸದ್ಭಕ್ತಿಗಳಿಂದ ಕಾಣುತ್ತಿರುವರೆಂದು ಆ ಮಹತ್ವಪೂರ್ಣವಾದ ೫॥ ದಿನಗಳ ಉಪವಾಸವು ಪ್ರಚುರಗೊಳಿಸಿತು. ಅಸ್ಪೃಶ್ಯರನ್ನು ಪ್ರತ್ಯೇಕಗೊಳಿಸಿ ಲಂಡನಿನಲ್ಲಿ ನಿಶ್ಚಿಂತರಾಗಿದ್ದ ಮಂತ್ರಿಯವರು ಗಾಂಧಿಯ ಉಪವಾಸ ವಾರ್ತೆಯನ್ನು ಕೇಳಿ ಹಾಸಿಗೆಯಿಂದ ಬೆಚ್ಚಿ ಬಿದ್ದೆದ್ದು ಗಾಂಧಿಯನ್ನು ಬದುಕಿಸಲಿಚ್ಛಿಸದಿದ್ದರೆ ಸರ್ವನಾಶವಾದೀತೆಂದು ಅಸ್ಪೃಶ್ಯರಿಗೆ ಕೊಟ್ಟ ಮತದಾನವನ್ನು ಹಿಂತೆಗೆದಿದ್ದೇನೆಂದು ಕಗ್ಗತ್ತಲೆನ್ನದೆ ರಾತ್ರಿಯಲ್ಲೇ ತಂತಿ ಬಿಟ್ಟರು! ಅಂತಹ ಗಾಂಧಿಜೀಯವರು, ಮಲಬಾರಿನ ಗುರುವಯ್ಯೂರು ದೇವಸ್ಥಾನದ ಬಾಗಿಲನ್ನು ಅಸ್ಪೃಶ್ಯರಿಗಾಗಿ ತೆರೆದಿಡದಿದ್ದರೆ ತಾನು ಜನವರಿ ತಾ ೨ಕ್ಕೆ ಶ್ರೀ. ಕೇಳಪ್ಪನವರೊಡನೆ ಉಪವಾಸವನ್ನಾರಂಭಿಸುವೆನೆಂದರು

ಸಂಪ್ರದಾಯಶರಣರಾದ ಭಾರತೀಯರಿಗೆ ಗಾಂಧೀ ಮಹಾತ್ಮೆಯು ಎಂತು ತಿಳಿದೀತು? ಅವರ ತತ್ತ್ವದ ಅರಿವು ಅವರ ಅಜ್ಞಾನ ತಿಮಿರವನ್ನೆಂತು ಓಡಿಸೀತು? ಗುರುವಯ್ಯೂರಿನ ಜಮೊರಿನರು ಗಾಂಧಿಜೀಯವರ ಕೇಳಿಕೆಗಳಿಗೆ ಕೊನೆಯ ತನಕ ತಲೆ ತಗ್ಗಿಸಲಾರದಾದರು!

ಅಂದು ಏಸುಕ್ರಿಸ್ತನ ಮರಣಕ್ಕೆ ಪೇತ್ರನೂ ಅವನ ಹನ್ನೆರಡು ಮಂದಿ ಶಿಷ್ಯರೂ ಕಾರಣರಾದಂತೆ ಇಂದು ಗಾಂಧಿಜೀಯವರ ಮರಣಕ್ಕೆ ಕಲ್ಲಿಕೋಟೆಯ ಜಮೊರಿನರೂ ಅವರ ಹಿಂಬಾಲಕರಾಗಿ ಒಂದ ಹತ್ತು ಹನ್ನೆರಡು ಮಂದಿ ಜಗದ್ಗುರುಗಳೇ ಮೊದಲಾದ ಸನಾತನವಾದಿಗಳೂ ಕಾರಣರಾಗುತ್ತಿದ್ದರು ಆದರೆ ಪುಣ್ಯವಶಾತ್ ಮದ್ರಾಸಿನ ನ್ಯಾಯ ವಿಧಾಯಕ ಸಭೆಗೆ ಡಾ॥ ಸುಬ್ಬರಾಯನರು ಒಂದು ಬಿಲ್ಲನ್ನು ತಂದು, "ಸಾರ್ವಜನಿಕ ದೇವಸ್ಥಾನ ಪ್ರವೇಶ ನಿರ್ಬಂಧವನ್ನು ಕಲ್ಪಿಸಿ ಇಗಿರುವ ಮೊದಲಿನ ಮಸೂದೆಯು ತಿದ್ದುಪಡಿಯಾಗತಕ್ಕದ್ದು— ಅಂತಹ ದೇವಸ್ಥಾನಗಳಿಗೆ ಹಿಂದೂಗಳೆಂಬ ಎಲ್ಲರನ್ನೂ ಪ್ರವೇಶಿಸ ಬಿಡಬೇಕು ಈ ವಿಚಾರವಾಗಿ ಒಂದು ನವೀನ ಮಸೂದೆಯನ್ನೇ ವೈಸರಾಯರು ಮಂಜೂರು ಮಾಡಬೇಕು ಎಂದು ಅರಿಕೆ ಮಾಡಿಕೊಂಡರು ಡಾ॥ ಸುಬ್ಬರಾಯನರ ಈ ಮತವು ಸರ್ವಗ್ರಾಹ್ಯವಾಗಿ ಅಂತಹ ಮಸೂದೆಯೊಂದು ಜಾರಿಗೆ ಬರುವುದು ಆವಶ್ಯಕವೆಂದು ಎಲ್ಲರೂ ಕಂಡುಗೊಂಡರು ವೈಸರಾಯರು ಕೂಡಾ ಅವರ ಅರಿಕೆಯನ್ನು ತಳ್ಳಿಹಾಕದೆ ~~ಸ್ಥಳೀಕ~~ ಸರಕಾರಗಳ ಶಿಫಾರಸುಗಳ ನಂತರ ಈ ಮಸೂದೆಯನ್ನು ಸ್ವೀಕರಿಸಲಾದೀತೆಂದು ಭರವಸೆ ಕೊಟ್ಟರು ಈ ಮಸೂದೆಯು ಇನ್ನೆರಡು ವಾರಗಳೊಳಗೆ ಎಲ್ಲಾ ಸ್ಥಳೀಕ ಸರಕಾರಗಳಿಂದ ತರ್ಕಿಸಲ್ಪಡಲಿದೆ ಮಾರ್ಚಿ ತಿಂಗಳಲ್ಲಿ ಈ ಮಸೂದೆಯು ಸರಕಾರದಿಂದ ಸ್ವೀಕೃತವಾಗಿ ಒಂದು ಕಾನೂನಾಗಿ ಪರಿಣಮಿಸಲಿದೆ.

ಡಾ॥ ಸುಬ್ಬರಾಯನರ ಈ ಬಿಲಿನ ಪರಿಣಾಮವು ಇನ್ನು ಹದಿನೈದು ದಿನಗಳೊಳಗೆ ತಿಳಿಯಲಿರುವುದರಿಂದ ಜನವರಿ ತಾ ೨ನೇ ದಿನ ಗಾಂಧಿಜೀಯವರು ಉಪವಾಸವನ್ನಾರಂಭಿಸಬಾರದೆಂದು ಶ್ರೀ. ಸಿ. ರಾಜಗೋಪಾಲಾಚಾರ್ಯರೇ ಮೊದಲಾದವರು ಕೇಳಿಕೊಂಡರು ಈ ವಿಷಯವನ್ನು ಕುರಿತು ಆಲೋಚಿಸಿಕೊಳ್ಳುವುದಕ್ಕಾಗಿ ಗಾಂಧಿಜೀಯವರು ಶ್ರೀ ಕೇಳಪ್ಪನವರನ್ನು ಎರವಾಡಾ ಮಂದಿರಕ್ಕೆ ಬರಮಾಡಿಕೊಂಡರು ಕೇಳಪ್ಪನವರೇನೋ ತಾನು ೨ನೇ ತಾರೀಕಿನ ದಿನ ಉಪವಾಸವನ್ನಾರಂಭಿಸುವುದೆಂದೇ ಸಿದ್ಧಾಂತಗೊಳಿಸಿದರು. ಆದರೂ ಗಾಂಧಿಜೀಯವರೇ ಮುಂದಾದವರು ಶ್ರೀ ಕೇಳಪ್ಪನವರನ್ನು ಹೇಗಾದರೂ ಸಮಾಧಾನ ಪಡಿಸಿ ಅವರು ತನ್ನ ಮನೋನಿರ್ಧಾರವನ್ನು ಪರಿವರ್ತಿಸುವಂತೆ ಮಾಡಿಬಿಟ್ಟರು ತಾ ೩ನೇ ದಿನ ಗಾಂಧೀ ಕೇಳಪ್ಪನವರು ತಮ್ಮ ನಿರಶನ ವ್ರತ ದೀಕ್ಷೆಯನ್ನು ಹಿಂದಕ್ಕಿರಿಸಿದರೆಂಬ ಶುಭವಾರ್ತೆಯು ಮಿಂಚಿನಂತೆ ಹರಡಿತು

ತನ್ಮಧ್ಯೆ ಗುರುವಯ್ಯೂರು ದೇವಸ್ಥಾನವಿರುವ ಪೊನ್ನಾನಿ ತಾಲೂಕಿನ ಜನರು ಅಸ್ಪೃಶ್ಯರ ದೇವಸ್ಥಾನ ಪ್ರವೇಶಕ್ಕೆ ಸಮ್ಮತಿಸುವರೋ ಅಸಮ್ಮತಿಸುವರೋ ಎಂದು ತಿಳಿಯುವುದಕ್ಕಾಗಿ ಜನ ಮತವನ್ನು ಪಡೆಯುವ ಏರ್ಪಾಡಾಗಿದ್ದಿತು ರಾಷ್ಟ್ರೀಯರಲ್ಲಿ ಅನೇಕ ಮಹನೀಯರು ರಾತ್ರಿಂದಿವವೆನ್ನದೆ ಗುರುವಯ್ಯೂರು ದೇವಸ್ಥಾನ ಪ್ರವೇಶಕ್ಕೆ ಯೋಗ್ಯರಾದ ಎಲ್ಲಾ ಪ್ರೌಢ ಸ್ತ್ರೀಪುರುಷರ ವೋಟನ್ನು ತೆಗೆದರು ಈ ವೋಟಿನ ಪರಿಣಾಮವು ಈ ರೀತಿಯಾಯಿತು —

<u>ಗುರುವಯ್ಯೂರು ದೇವಸ್ಥಾನ ಪ್ರವೇಶದ ಕುರಿತು ಅಲ್ಲಿಯ ಜನ ಅಭಿಪ್ರಾಯ</u> ಕೊಟ್ಟ ಓಟುಗಳ ಒಟ್ಟು ಸಂಖ್ಯೆ ೨೦ಗ೬೨ ಹರಿಜನರ ದೇವಸ್ಥಾನ ಪ್ರವೇಶಕ್ಕೆ ಸಮ್ಮತಿಸಿದವರು ೧೫೫೬೮ ದ್ವಿಪಕ್ಷವನ್ನು ಸೇರದವರು ೨೦೧೬ ಹರಿಜನರ ವಿರೋಧಿಗಳು ೨೭೭೯ ಸಂಪ್ರದಾಯವಾದಿಗಳು ಮಿತಿಮೀರಿ ಒಲಗೊಂಡಿರುವ ಮಲಬಾರಿನ ಒಹು ಪಕ್ಷವು ಹರಿಜನರ ದೇವಾಲಯ ಪ್ರವೇಶಕ್ಕೆ ಸಮ್ಮತಿಸಿದ ಮಹದದ್ಭುತದ ಸಂಗತಿಯು ಮೇಲಿನ ಸಂಖ್ಯೆಯಿಂದ ತಿಳಿದುಬರುತ್ತದೆ ಹರಿಜನ ವಿರೋಧಿಗಳಾದ ಸನಾತನ ಧರ್ಮಾಂಧರು ಈ ವೋಟಿನಲ್ಲಿ ಅಪಜಯ ಹೊಂದಿ ತಲೆ ತಗ್ಗಿಸುವ ಪ್ರಸಂಗವು ಒದಗೀತೆಂದು ಹೆಚ್ಚಿನವರು ಭಾವಿಸಲಿಲ್ಲ ಗುರುವಯ್ಯೂರಿನ ಸಾವಿರಾರು ಸ್ತ್ರೀಯರೂ ಕೂಡಾ ಹರಿಜನರ ದೇವಾಲಯ ಪ್ರವೇಶಕ್ಕೊಪ್ಪಿದರು ಜಮೋರಿನರ ಕುಟುಂಬಿಕರಾದ ಶ್ರೀಮತಿಯವರೊಬ್ಬರು ವರ್ಷಂಪ್ರತಿ ಗುರುವಯ್ಯೂರು ದೇವಸ್ಥಾನಕ್ಕೆ ಕೂಡಲು ಶೇಖರಿಸಿಕೊಂಡು ಒಂದಿರುವ ಮುಡಿಪನ್ನು ಈ ವರ್ಷ ಹರಿಜನೋದ್ಧಾರ ಕಾರ್ಯದ ಬಗ್ಗೆ ದಾನ ಮಾಡಿರುವರೆಂಬ ಆನಂದಜನಕ ವಾರ್ತೆಯು ಈಗೀಗ ಬಂದಿರುತ್ತದೆ ಗೃಹ ಮೂರ್ತಿಗಳಾಗಿದ್ದು ಹೊರಗಿನ ಸ್ಥಿತಿ ಗತಿಗಳನ್ನು ಅರಿಯದ ಮಹಿಳಾವರ್ಗವೂ ಕೂಡಾ ಆತ್ಮಸಾಕ್ಷಿಯ ಎದುರು ಶಾಸ್ತ್ರ ಪುಸ್ತಕಗಳನ್ನು ತೃಣ ಸಮಾನವೆಂದೆಣಿಸಿ ಹರಿಜನೋದ್ಧಾರ ಕಾರ್ಯದಲ್ಲಿ ಮನವಿತ್ತುದನ್ನು ಕಂಡರೆ ಸನಾತನ ಧರ್ಮಾನುಯಾಯಿಗಳೆಂದೂ, ತಾವು ಮಹದ್ಭಕ್ತರೆಂದೂ ಜಂಭಿಸುತ್ತಿರುವ ಸುಧಾರಣಾ ವಿರೋಧಿಗಳು ಎಂತಹ ಕೂಪ ಮಂಡೂಕಗಳೋ ಎಂದು ಆಶ್ಚರ್ಯಗೊಳ್ಳುವ ಸಂಗತಿಯಾಗಿರುತ್ತದೆ

ಅಸ್ಪೃಶ್ಯತೆಯು ಶಾಸ್ತ್ರದಿಂದ ಪುಷ್ಟೀಕರಿಸಲ್ಪಟ್ಟದ್ದು-ತಮ್ಮ ವರ್ತನೆಯೂ ಆಧಾರ ಸಹಿತವಾದುದು ಎಂದು ಆನೇಕ ಸನಾತನಿಗಳು ಗಾಂಧಿಜೀಯವರಿಗೆ ಹೇಳಿದರು ಗಾಂಧಿಜೀಯವರ "ಶಾಸ್ತ್ರವೆಂದರೇನು? ಅಸ್ಪೃಶ್ಯತೆಯ ನಿಜವಾದ ಅರ್ಥವೇನು? ಅಸ್ಪೃಶ್ಯರು ಯಾರು? ಎಂಬಿವೇ ಮೊದಲಾದ ಪ್ರಶ್ನೆಗಳನ್ನಿಟ್ಟರು ಒಬ್ಬನು ಜನ್ಮ ಮಾತ್ರದಿಂದ ಅಸ್ಪೃಶ್ಯನಾಗುವುದಿಲ್ಲವೆಂದು ಗಾಂಧಿಜೀಯವರ ಪ್ರತಿಪಾದನೆ ಇದು ಸರಿಯಲ್ಲ ಸ್ಪೃಶ್ಯಾಸ್ಪೃಶ್ಯತೆಯ ಭೇದಾಭೇದಗಳನ್ನು ದೇವರೇ, ಶಾಸ್ತ್ರಗಳೇ ಕಲ್ಪಿಸಿರುವುದರಿಂದ ಅಂತಹ ಆಚಾರವು ಗ್ರಾಹ್ಯಂದೆ ಎಂದೇ ಸನಾತನಿಗಳ ಉತ್ತರ ಹಾಗೂ ಹೀಗೂ ಈ ಸನಾತನಿಗಳು ಗಾಂಧೀಜೀಯವರ ಪ್ರಶ್ನೆಯ ಬಾಣಗಳ ಎದೆಯೊಡ್ಡಲಾರದೆ, ಅಪಜಯಿಗಳಾದರು

ಗಾಂಧಿಜೀಯವರ ಉಪವಾಸವು ಇನ್ನು ಯಾವಾಗ ಪ್ರಾರಂಭವೆಂಬ ಸುದ್ದಿಯು ಪ್ರಕಟವಾಗಿರುವುದಿಲ್ಲ ವೈಸರಾಯರು ಡಾ॥ ಸುಬ್ಬರಾಯನರ ಬಿಲ್ಲನ್ನು ಸ್ವೀಕರಿಸುವುದರ ಅಥವಾ ತಿರಸ್ಕರಿಸುವುದರ ಮೇಲೆ ಮುಂದಿನ ಕಾರ್ಯಕ್ರಮವು ಹೊಂದಿಕೊಂಡಿರುತ್ತದೆ

### ಗಾಂಧಿಜೀಯವರ ಅಭಿಪ್ರಾಯ

ತಾ ೨ಕ್ಕೆಂದು ಬಗೆದಿದ್ದ ಉಪವಾಸ ವ್ರತವನ್ನು ತಾನು ಏಕೆ ಹಿಂದೆ ಹಾಕಿರುವೆನೆಂದು ಗಾಂಧಿಜೀಯವರು ತನ್ನ ಅಭಿಪ್ರಾಯವನ್ನು ಪ್ರಕಟಿಸಿರುತ್ತಾರೆ. ಅವರ ಹೇಳಿಕೆ 'ಮೇರೆಗೆ ತಿಳಿದು ಬರುವಂತೆ—ಗುರುವಯ್ಯೂರು ದೇವಸ್ಥಾನ ಪ್ರವೇಶಕ್ಕಾಗಿ ಅಲ್ಲಿಯ ಜನರು ಬೆಂಬಲರಾಗಿರುವರೆಂದು ವೋಟಿನಿಂದ ತಿಳಿದು ಬಂದಿದೆಯಾದರೂ, ಡಾ॥ ಸುಬ್ಬರಾಯನರ ಬಿಲು ಮದ್ರಾಸ್ ಕೌನ್ಸಿಲಿನಿಂದ ವೈಸರಾಯರಿಗೆ ತಲಪಿ, ವೈಸರಾಯರು ತನ್ನ ಅಭಿಮತವನ್ನು ಸೂಚಿಸುವ ವರೆಗೆ ಶ್ರೀ ಕೇಳಪ್ಪನವರೂ ತಾನೂ ಉಪವಾಸವನ್ನು ಕೈಕೊಳ್ಳುವುದು ಪ್ರಸ್ತುತ ಅಸಂಗತ, ವೈಸರಾಯರು ತನ್ನ ಮತ ಪ್ರಕಟಣೆಯನ್ನು ಮಾಡಿದೊಡನೆ ಎಲ್ಲವೂ ನಿರ್ಧರಿಸಲ್ಪಡಬೇಕು ಎಂದು ಆಲೋಚನೆಯಾಗಿದೆ ಗಾಂಧಿಜೀಯವರು ಸನಾತನಿಗಳ ಹಟವನ್ನೂ ಅವರು ಹೃದಯ ಬೋಧೆಯನ್ನು ಅಲ್ಲಗಳೆದು ಶಾಸ್ತ್ರಬೋಧೆಯನ್ನೇ ಅನುಸರಿಸಿ ಮಾಡುವ ಆಜಿ ವಿಜಯನ್ನು ಕಂಡು ಒಹಳ ಬೇಸರಗೊಂಡಿದ್ದಾರೆ "My conviction is that Hinduism has fallen from the purity and the vitality it once had" ಅಂದರೆ "ಹಿಂದೂತ್ವವು ಪೂರ್ವಕಾಲದ, ಪಾವಿತ್ರ್ಯ ವ ತ್ತು ಚೈತನ್ಯದಿಂದ ಅಧೋಮುಖವಾಗಿ ಬಿದ್ದಿದೆ ಎಂದು ಅವರು ಹೇಳುತ್ತಾ ನವರ ಭಾವನೆಗಳನ್ನು ಕಾಲಸ್ಥಿತಿಗನುಗುಣವಾಗಿ ಮಾಡಿಕೊಳ್ಳದ ವೇದ ಪುರಾಣೇತಿಹಾಸಗಳನ್ನೇ ಸರ್ವ ಧಾರ್ಮವನ್ನಾಗಿಟ್ಟುಕೊಂಡು ಅಂಧರಂತೆ ನಡೆಯುವುದು ಅಯುಕ್ತ ಶಾಸ್ತ್ರ ಶ್ಲೋಕಗಳು ಲಿಖಿತವಾದೊಡನೆ ಸೃಷ್ಟಿಕರ್ತನ ಒಯಕಗಳು ಇಲ್ಲೀ ನಿರ್ಬಂಧಿತವಾಗಿ ಬೇರೆಬ್ಬಿ ನಿಲ್ಲಲಿಲ್ಲ ದಿನಗಳುರುಳ್ಳ ಸಧರ್ಮಗಳೂ ಪ್ರಾಚೀನ ನಡೆಯುತ್ತಾ ಹೋಗಬೇಕಾಗಿದ ಇಂದಿನ ದಿನದಲ್ಲಿ ಉಪವಾಸ ವ್ರತವನ್ನು ಒಂದು ವ್ರತವಾಗಿ ಎಣಿಸದೆ, ಅಂತರ್ಯದ ಆಗ್ರಹದ ಸೂಚನೆಯಾಗಿ ಅದನ್ನೆಣಿಸದೆ ಅದು ಒರೇ ದಾಢಿಯ ನಿರಶನ ಕ್ರಮವಾಗಿಟ್ಟಿದೆ ಸರ್ವಜಗತ್ತೂ ಒಂದು, ಸರ್ವಸೃಷ್ಟಿಕರ್ತನೂ ಒಂದು, ವಿಶ್ವಸಮಸ್ತವೂ ಒಂದೆ, ಎಂದು ನಾನು ಉಚಿತ ಪೂರ್ವಕವಾಗಿ ತಿಳಿದುಕೊಂಡಿದ್ದು, ನನಗೆ ತಿಳಿದಮಟ್ಟಿಗೆ ನಾನು ನನ್ನ ಅಜ್ಞಾನದದೀವಟಿಗೆಯನ್ನು ಹಿಡಿದು ಮಾರ್ಗಾನುಸರಣೆಯನ್ನು ಮಾಡುವೆನು ನನ್ನಂತರ್ಯವು ವ್ರತವನ್ನು ತೊಡಗೆಂದು ಬೋಧಿಸಿದೊಡನೆ ಹಾಗೆ ಮಾಡುವೆನು ಎಂದಿರುವರು



## *Seventy Five Years!*

Two Generations of approved service enables us to pick and choose what is cheap lasting and good to suit the pockets and the tastes of our longstanding wide circle of

**CUSTOMERS**

who know our

**Premier House for Swadeshi**

Mill Yarns — Handloom Cloths, Dhoties—Saries—Chintzes etc.

**Shrinivas Rang Pai,**

***Sawkar Mahal,***

**Car Street, MANGALORE.**

ವಿಷಯ ಸೂಚಿ.


ಅಗ್ರಲೇಖ:
ಹೊಸ ವರ್ಷ . . . . ೧
ಸ್ವದೇಶಾಭಿಮಾನಿ . . . . ೧
ವಿದೇಶ ವರ್ತಮಾನ . . . . ೧
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ . . . . ೯
ಪತ್ರಿಕಾ ಕಕ್ಷಕ — ಮಂಗಳೂರು, ಕಾರ್ಕಳ, ಕಾಸರಗೋಡು, ಉಡುಪಿ, ಪುತ್ತೂರು, ಚಿಕ್ಕಮಗಳೂರು, ಸಾಗರ, ಬಳ್ಳಾರಿ, ಶಿವಮೊಗ್ಗ . . . . ೯
ವಿವಿಧ ಸಮಾಚಾರಗಳು . . . . ೧೧
ಮೂರು ನಾಡು! . . . . ೨
ಪತ್ರವ್ಯವಹಾರ . . . . ೧೪
ನನ್ನ ಕೆಲಸ . . . . ೮
ನರಕವಾಂಗೆ? . . . . ,,
ಗಾಂಧಿ, ರಾಜಕೀಯ ಕೈದಿಗಳ ಬಿಡುಗಡೆಯಾಗಲಿ! . . . ೧೦
ಉಪವಾಸದ ಗುಡುಗು ಹಾಂತವಾಯಿತು! . . . ೬
ಸಂಯುಕ್ತ ಹಿಂದೂಸ್ಥಾನಕ್ಕೆ ಯುಕ್ತವಾದ ವಿದ್ಯಾಭ್ಯಾಸ . . ೧೫
ಪ್ರಭುಗಳ್ಳೂ ಅವರ ಗವರ್ನಮೆಂಟ್ ಮತ್ತು ಅವರ ನ್ಯಾಯ
ವಿಮರ್ಶೆಯ ಶಾಪೆಯು . . . . ೩


# ಸ್ವದೇಶಾಭಿಮಾನಿ.

ತಾ. ೬ನೇ ಶುಕ್ರವಾರ ಜನವರಿ ೧೯೩೩.

## ಹೊಸ ವರ್ಷ.

ಸ್ವದೇಶಾಭಿಮಾನಿಯು ಇಂದಿಗೆ ತನ್ನ ೨೭ನೆಯ ವಯಸ್ಸನ್ನು ಸೇರುತ್ತಿದೆ. ತನ್ನ ರಜತೋತ್ಸವವನ್ನು ಸ್ವದೇಶಾಭಿಮಾನಿಯು ಕೆಲವೇ ಸಮಯದ ಹಿಂದೆ ಆಚರಿಸಿರಲು, ಇಂದಿನ ಈ ನೂತನ ವರ್ಷಕ್ಕಾಗಿ ಸ್ವದೇಶಾಭಿಮಾನಿಗೆ ಹೆಚ್ಚಿಗೆ ಹೇಳಲಿರುವುದಿಲ್ಲ. ಆದರೆ ಕಳೆದ ಒಂದು ವರ್ಷದಲ್ಲಿ ಈ ನಮ್ಮ ಪತ್ರಿಕೆಯ ಜೀವಮಾನದಲ್ಲಿ ಹಲಕೆಲವು ಘಟನೆಗಳು ಸಂದು ಹೋದುವು. ಅವನ್ನು ಇಂದಿಗೆ ಪುನಃ ಸ್ಮೃತಿಪಥನದಲ್ಲಿ ತರಲೆಂದು ಅನ್ನಿಸುತ್ತಿದೆ.

ರಜತೋತ್ಸವದ ಆಚರಣೆಯೂ, ರಜತೋತ್ಸವ ಸಂಚಿಕೆಯ ಪ್ರಕಟನವೂ ಪತ್ರಿಕೆಗೆ ನೂತನ ಜೀವಕಳೆಯನ್ನು ತುಂಬುವಂತಹುದಿದ್ದುವು. ಆ ಬಗ್ಗೆ ಎಲ್ಲರ ಸಹಕಾರವೂ, ಆದರವೂ ಪ್ರೋತ್ಸಾಹವೂ ಇದ್ದಿತು. ಆ ಕಾರಣದಿಂದಲೇ ಕಳೆದ ವರ್ಷದಲ್ಲಿ ಪತ್ರಿಕೆಯನ್ನು ಸಾಧ್ಯವಿದ್ದಷ್ಟರ ಮಟ್ಟಿಗೆ ಸುಧಾರಿಸಿದ್ದೆವು. ಮುದ್ರಣ, ವಿಷಯಸಂಗ್ರಹ, ರಚನೆ ಇತ್ಯಾದಿಗಳ ಕಡೆಗೆ ಗಮನಕೊಟ್ಟಿದ್ದಲ್ಲದೆ, ಕಳೆದ ವರ್ಷದಲ್ಲಿಯೇ ಸಾಹಿತ್ಯ ಸಂಚಿಕೆಯೊಂದನ್ನು ಏರ್ಪಡಿಸಿ, ಸಾಮಾನ್ಯ ಓದುಗರಿಗೆ ಉಪಯೋಗಕರವಾಗುವ ರೀತಿಯಲ್ಲಿ ಅದನ್ನು ನಡಿಸುತ್ತಾ ಬರುತ್ತಿದ್ದೇವೆ.

ನಮ್ಮ ಈ ಪ್ರಯತ್ನಗಳಾದರೂ ವ್ಯರ್ಥವಾಗಿಲ್ಲವೆಂದೂ, ಅವುಗಳಿಂದ ಉತ್ತಮ ಫಲವೂ ದೊರಕಿಯದೆಂದೂ ಸೂಚಿಸಲು ನಮಗೆ ಸಂತೋಷವಾಗುವುದು. ನಮ್ಮ ವಾಚಕವರ್ಗವು ಬೆಳೆದಿದೆ; ಸ್ವದೇಶಾಭಿಮಾನಿಯನ್ನು ಪುರಸ್ಕರಿಸುವವರ ಸಂಖ್ಯೆಯು ಬೆಳೆದಿದೆ; ಅದರ ಉತ್ಕರ್ಷತೆಯನ್ನು ಮನವರಿಕೆ ಮಾಡಿಕೊಂಡವರೂ ಹೆಚ್ಚಿದ್ದಾರೆ; ಎಂಬ ವಿಷಯಗಳು ಸಂತೋಷದಾಯಕವಾಗಿವೆ.

ಆದರೆ ಸುಧಾರಿತವಾಗತಕ್ಕ ವಿಷಯಗಳು ಇನ್ನೂ ಇವೆ ಎಂಬುದು ನಮಗಾದರೂ ಗೊತ್ತೇ ಇದೆ. ಈ ಬಗ್ಗೆ ಓದುಗರ ಸಹಕಾರವೇ ನಮ್ಮಿಂದ್ಧ ಹೆಚ್ಚಿನ ಸೇವೆಯನ್ನು ಸಾಧ್ಯವಾಡಬೇಕಲ್ಲದೆ ಬೇರಿಲ್ಲ. ಸ್ವದೇಶಾಭಿಮಾನಿಯ ಸುಧಾರಣೆಗಳ ಬಗ್ಗೆ ಓದುಗರು ನಮಗೆ ಕಳುಹಿಸತಕ್ಕ ಸೂಚನೆಗಳನ್ನು ನಾವು ಕೃತಜ್ಞತೆಯಿಂದ ಮಾನಿಸುವೆವು. ಉತ್ತಮ ಸೂಚನೆಗಳು ನಮ್ಮಲ್ಲಿ ಬಂದರೆ ಸಾಧ್ಯವಿದ್ದ ಮಟ್ಟಿಗೆ ಅವುಗಳನ್ನು ಅಂಗೀಕರಿಸಿ ಕಾರ್ಯಕಾರಿಯಾಗಿ ಮಾಡುವೆವೆಂಬುದರ ಬಗ್ಗೆ ನಾವು ಎಲ್ಲರಿಗೂ ಭರವಸೆವನ್ನೀಯುವೆವು.

ಕಳೆದ ವರ್ಷ ಈ ರೀತಿಯಲ್ಲಿ ನಮ್ಮ ಪತ್ರಿಕೆಯಲ್ಲಿ ಇಷ್ಟು ಸಂತೋಷಕರವಾದ ಸುಧಾರಣೆಗಳು ನಡೆದರೂ ಕಳೆದ ವರ್ಷದ ಅಂತ್ಯದ ಸಮಯದಲ್ಲಿ ಒಂದು ಘಟನೆಯಿಂದ ನಮ್ಮ ಮನಸ್ಸು ದುಃಖದಿಂದ ತುಂಬಿ ಸಂತಪ್ತವಾಯಿತು. ಸ್ವದೇಶಾಭಿಮಾನಿಯ ಜನಯಿತರೂ, ಅದರ ಬೆಳವಣಿಗೆ ಪೋಷಣೆಯ ಬಗ್ಗೆ ಶ್ರಮಿಸಿದವರೂ, ಅದನ್ನು ಮನೆಯ ಮಗುವಿನಂತೆಯೇ ನೋಡಿಕೊಂಡು, ಮನೆ ಮಗುವಿಗಾಗಿ ಹೇಣಾಡುವಂತೆಯೇ ಹೇಣಾಡಿದವರೂ, ಅದರ ಪ್ರಕಾಶಕತ್ವ ಮತ್ತು ಸಂಪಾದಕತ್ವದ ಜವಾಬ್ದಾರಿಯನ್ನು ಹೊತ್ತವರೂ ಆದ ಶ್ರೀ. ಶ್ರೀನಿವಾಸ ಕಾಮತರು ಕಳೆದ ಅಕ್ಟೋಬರ ಹದಿನೈದನೆ ತಾರೀಕಿನಲ್ಲಿ ದೈವಾಧೀನರಾಗಿ ಸ್ವದೇಶಾಭಿಮಾನಿಯನ್ನು ಅನಾಥೆಯಾಗಿ ಮಾಡಿರುದೇ ಈ ದುಃಖ ಸಂತಾಪಗಳ ಕಾರಣವಾಗಿರುತ್ತಗೆ!

ಗತಸಿದವರ ವಿಷಯದ ಶೋಕವನ್ನು ತೋರಿಸುತ್ತಲೇ ನಾವು ಇದ್ದರೆ ನಮ್ಮ ಕೆಲಸವು ಸಾಗದು; ಇಲ್ಲವೆ ನಮ್ಮ ಕರ್ತವ್ಯವು ಮುಗಿದಂತಾಗದು. ಅವರ ಆಶಯಗಳು, ಅವರ ಆದರ್ಶಗಳು, ಅವರ ಸತ್ವ ಇತ್ಯಾದಿಯನ್ನು ತಿಳಿದು ನಮ್ಮ ಕರ್ತವ್ಯನಿಷ್ಠೆಯಿಂದಲೂ, ನಮ್ಮ ಕಾರ್ಯರಚನೆಯಿಂದಲೂ ಅವರ ಆತ್ಮವನ್ನು ಸಂತೋಷಪಡಿಸಿದರೇನೇ ಅವರ ಕಡೆಗೆ ನಮಗಿರುವ ಪೂಜ್ಯತೆಯೂ, ಭಕ್ತಿಯೂ ಸಾರ್ಥಕವಾಗುವುದು. ಸ್ವದೇಶಾಭಿಮಾನಿಯ ಮುಂದಿನ ಧೋರಣದಲ್ಲಿಯೂ ಕಾರ್ಯಕ್ಷೇತ್ರದಲ್ಲಿಯೂ ಅವರ ಅನುಸರಣದಿಂದಲೇ ಅವರ ಸ್ಮಾರಕವನ್ನು ರಚಿಸಬೇಕಾಗಿ ನಾವು ನಿರ್ಧರಿಸಿದ್ದೇವೆ.

ಸ್ವದೇಶಾಭಿಮಾನಿಯು ರಜತ ಸಂಚಿಕೆಯ ನಂತರ ಈ ವರೆಗೆ ವಿಶೇಷ ಸಂಚಿಕೆಯನ್ನು ಹೊರಡಿಸಲು ಸಾಧ್ಯವಾಗದಿದ್ದುದಕ್ಕೆ ನಮಗೆ ತುಂಬಾ ವಿಷಾದವಾಗುತ್ತಿದೆ. ಕರ್ನಾಟಕ ಲೇಖಕರ ಸಹಕಾರದೊಡನೆ ಈ ವರ್ಷವಾದರೂ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಬೇಕೆಂಬ ಆಶಯವಿದೆ. ಈ ವಿಷಯವಾಗಿ ಕೆಲವು ಸಮಯದ ನಂತರ ಒಂದು ಪ್ರಕಟನೆಯನ್ನು ಹೊರಡಿಸುವೆವು.

ನಮ್ಮ ದಿವಂಗತ ಸಂಪಾದಕರಾಗಿದ್ದ ಶ್ರೀ. ವಿ. ಶ್ರೀನಿವಾಸ ಕಾಮತರು ತಮ್ಮ ಸ್ನೇಹಿತರೊಬ್ಬರ ಪ್ರೇರಣೆಯಿಂದ ಒಂದು ಕರ್ನಾಟಕ ದೈನಿಕ ಪತ್ರಿಕೆಯನ್ನು ಹೊರಡಿಸುವ ಆತುರದಲ್ಲಿದ್ದರು. ಪ್ರಥಮತಃ ಇತರ ಕೆಲಸಗಳ ಅವಸರದಿಂದಲೂ, ಆ ಮೇಲೆ ಅಸೌಖ್ಯದ ಕಾರಣದಿಂದಲೂ ಈ ಉದ್ದೇಶವನ್ನು ಮುಂದೊತ್ತಲಾಗಲಿಲ್ಲ. ಅವರ ಆ ಆಶಯವನ್ನು ನಾವಾದರೂ ಪೂರಯಿಸಬೇಕೆಂದೂ, ಸ್ವದೇಶಾಭಿಮಾನಿಗೆ ಇದೊಂದು ಸಹಚರಿಯನ್ನು ರಚಿಸದೇಕೆಂದೂ ನಾವು ನಿಶ್ಚಯಿಸಿದ್ದೇವೆ. ಅನುಕೂಲ ಸಂದರ್ಭಗಳು ಕೂಡಿ ಬಂದೊಡನೆ ಈ ಪತ್ರಿಕೆಯನ್ನು ಹೊರಡಿಸುವೆವು. ಈ ಬಗ್ಗೆ ನಮ್ಮ ಈಗಿನ ಓದುಗರೂ, ಕರ್ನಾಟಕೀಯರೆಲ್ಲರೂ ನಮ್ಮೊಡನೆ ಸಹಕರಿಸಿ ನಮಗೆ ಸಹಾಯವನ್ನೀಯಬೇಕಾಗಿ ಅಪೇಕ್ಷಿಸುತ್ತೇವೆ.

ನಿಮ್ಮೆಲ್ಲರ ಮಂಗಳವನ್ನು ಪ್ರಾರ್ಥಿಸುತ್ತ ನಮ್ಮ ಹೊಸ ವರ್ಷದ ಕೆಲಸಗಳಿಗೆ ನಾವು ಕೈಯಿಕ್ಕುತ್ತೇವೆ.

## ವಿದೇಶ ವರ್ತಮಾನ.

—ಶಂಘೈಯಲ್ಲಿ ಜಪಾನರಿಗೂ ಚೀನಿಯರಿಗೂ ಯುದ್ಧವು ನಡೆಯುತ್ತಿದೆ. ರಾತ್ರಿಯಲ್ಲೂ ಬೊಂಬೆಸೆತಗಳಾಗುತ್ತಿವೆ.

—ಐರ್ಲೆಂಡಿನ ದಕ್ಷಿಣ ಪ್ರಾಂತ್ಯದಲ್ಲಿ ಬಿರುಗಾಳಿಯು ಬೀಸಿ ಹೆಚ್ಚಿನ ನಷ್ಟಕಷ್ಟಗಳೊದಗಿದುವು.

ಲಂಡನಿನ ಮೇಯೊರರಿಗೆ ಚಮ್ಮ ಸಾರ್ವಭೌಮರು ಒಂದು ನವ ವರ್ಷ ಸಂದೇಶವನ್ನು ಕಳುಹಿಸಿ "೧೯೩೨ ಮಹಾ ಕಷ್ಟ ದಿನಗಳು. ಅಂತಹ ದಿನ ಇನ್ನು ಬರಲಾರದು" ಎಂದರು.

—ಲಂಡನಿನಲ್ಲಿ ಒಂದು ಮಂಜಿಯು ಬಂಡೆಗಲ್ಲಿಗೆ ಬಡಿದು ತುಮುರು ತುಮುರಾಗಿ ೯ ಮಂದಿಗಳನ್ನು ಮುಳುಗಿಸಿತು.

—ಲಂಡನಿನಲ್ಲಿ ತೆರಿಗೆಯು ಹೆಚ್ಚುತ್ತಿರುವುದರಿಂದ ದೊಡ್ಡ ದೊಡ್ಡ ಬಾಡಿಗೆ ಕಟ್ಟಡಗಳು ಬಾಡಿಗೆಗಾರರಿಲ್ಲದೆ ಖಾಲಿ ಬಿದ್ದಿವೆ.

## ಒಳದೇಶ ವರ್ತಮಾನ

—ಕಲ್ಕತ್ತದಲ್ಲಿ ಇಬ್ಬರು ಮಾರ್ವಾಡಿಗಳು ವ್ಯಾಪಾರ ಮುಗಿಸಿ ರಾತ್ರಿ ಮನೆಗೆ ತೆರಳುತ್ತಿರುವಾಗ ಒಬ್ಬ ದರೋಡೆಯವನು ಅವರ ಮೇಲೆ ಬಿದ್ದು ಒಬ್ಬನನ್ನು ಕೊಂದು, ಇನ್ನೊಬ್ಬನನ್ನು ಕಡಿದು ಪೈಲಿಯ ಸಮೇತ ಓಡಿ ಸಿಕ್ಕಿ ಬಿದ್ದನು!

—ಅಲ್ವಾರ ಸಂಸ್ಥಾನದಲ್ಲಿ ಹಿಂದೂ ಮುಸಲ್ಮಾನ ಗಲಾಟೆಯಾಗಿ ಮುಗಿಯಿತು.

—ಕಲ್ಕತ್ತದಲ್ಲಿ ಮೂವತ್ತು ಮಂದಿ ಜೂಜುಗಾರರು ಒಂದು ಮನೆಯನ್ನು ಹೊಕ್ಕು ಆ ಮನೆಗೆ ಬೆಂಕಿ ಹಚ್ಚಿ ಎಲ್ಲವನ್ನು ಎತ್ತಿಕೊಂಡು ಹೋದರು!

—ಲಾಹೋರಿನಲ್ಲಿ ಚಳಿಯು ಅತ್ಯಂತ ಬಲವಾಗಿ ಬೀಳುತ್ತಿರುವುದರಿಂದ ಇಪ್ಪತ್ತು ಮೂವತ್ತು ಮರಣಗಳು ಸಂಭವಿಸುತ್ತಿವೆ.

—ಗಾಂಧೀ ಜಮೋರಿನರೊಳಗೆ ನಡೆದ ಒಂದು ಪತ್ರವ್ಯವಹಾರವು ಪ್ರಕಟವಾಗಿದೆ. ವರ್ಷದಲ್ಲೊಂದು ದಿನ ಹರಿಜನರಿಗೆ ಗುರುವಾಯೂರು ದೇವಸ್ಥಾನದೊಳಗೆ ಹೋಗುವ ರೂಢಿಯಿದೆಯೆಂದು ಸ್ಪಷ್ಟವಾಗಿದೆ.

—ಗುರುವಾಯೂರು ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಡದಿದ್ದರೆ ತನ್ನ ಜೀವಿತ ಸಾರ್ಥಕ್ಯವಿಲ್ಲವೆಂಬರ್ಥದ ಭಾಷಣವನ್ನು ಶ್ರೀ. ಕೇಳಪ್ಪನವರು ಮುಂಬಾಯಿಯಲ್ಲಿ ಮಾಡಿದರು.

—ಗಾಂಧೀಜಿಯವರು ಸೆರೆಯನ್ನು ಹೊಕ್ಕು ತಾ. ೪ಕ್ಕೆ ಒಂದು ವರ್ಷವಾಯಿತು! ಅಂದೇ ಮದ್ರಾಸಿನಲ್ಲಿ ೧೪ನೇ ಕೆಪ್ಟನ್ ಜಾರಿಯಾಯಿತು.

—ಕರಾಚಿಯಲ್ಲಿ ತಮಗೆ ಕ್ರಾಪ್ ಕತ್ತರಿಸುದುದಕ್ಕೆ ೬ ಆಣೆ, ಗಡ್ಡ ತೆಗೆದುದಕ್ಕೆ ೨ ಆಣೆ ದೊರೆಯುದೇಕೆಂದು ಕ್ಷೌರಿಕರು ೨ ದಿನಗಳ ತನಕ ಬಾಗಿಲು ಮುಚ್ಚಿ ಹರ್ತಾಳವನ್ನಾಚರಿಸಿದರು. ಬೀದಿಯ ಕ್ಷೌರಿಕರೂ ತಮ್ಮ ಕತ್ತಿಗಳಿಗೆ ಅಂದು ರಜೆ ಕೊಟ್ಟರು.

—ಜಬ್ಬಲ್‌ಪುರದಲ್ಲಿ ಬೀದಿಗುಡಿಸುವವರು ತಮ್ಮ ಕೆಲಸದ ಸಮಯವನ್ನು ಕಡಿಮೆಮಾಡಬೇಕು. ರಜೆ, ಎಲೌನ್ಸ್, ಪೆನ್ಶನ್‌ಗಳನ್ನು ಕೊಡಬೇಕೆಂದು ಮುನಿಸಿಪಾಲಿಟಿಗೆ ಮೊರೆಯಿಟ್ಟು ಮುಷ್ಕರದ ಬೆದರಿಕೆಯನ್ನು ಹುಟ್ಟಿಸಿದರು.

—ಮದ್ರಾಸು ನ್ಯಾಯ ವಿಧಾಯಕ ಸಭೆಯ ಸಂಯುಕ್ತ ಪ್ರಾಂತ್ಯದ ಪ್ರತಿನಿಧಿಗಳು ಒಂದಾಗಿ "ಸಂಡೆ ಕ್ರಾನಿಕಲ್" ಎಂಬ ವಾರಪತ್ರಿಕೆಯನ್ನು ಹೊರಡಿಸಲಿರುವರು.

—ಹೊಸ ವರ್ಷದ ಆಶಕಕುಲನವೆಂಬಂತೆ ಕೊಲೊಂಬದಲ್ಲಿ ಹಡ್ಸನ್ ಹ್ಯಾಸ್ಕೂಲಿನ ಮೆನೆಜರರಾದ ಹೊಕಿನ್ಸ್ ಮತ್ತು ಅವರ ಪತ್ನಿಯವರು ಹೊಳೆಯಲ್ಲಿ ಮುಳುಗಿ ಮಡಿದರು.

—ಗ್ವಾಲಿಯರ್ ಸಂಸ್ಥಾನದ ವೈದ್ಯರಾದ ಪಂಡಿತ ರಾಮಗೋಪಾಲ ಶಾಸ್ತ್ರಿಯವರು ಮೆರವಣಿಗೆಯಲ್ಲಿ ಭಾಗವಹಿಸಿದುದಕ್ಕಾಗಿ ಸೆರೆಹಿಡಿಯಲ್ಪಟ್ಟಿರುವರು.

—ಗುಂಟಕಲ್ ಬೆಜವಾಡಾದ ಬಳಿ ಎಂ. ಎಸ್. ಎಂ. ರೈಲ್ವೆಯು ಕವಚಿ ಬಿತ್ತು. ೨೪ ಗಾಡಿಗಳು ತಲೆಕೆಳಗಾದುವು. ಯಾರಿಗೂ ಜಖಂ ಆಗದಿರುವುದು ಪುಣ್ಯ!

—ಕಲ್ಕತ್ತದಲ್ಲಿ ಕಳಿಪೂದಾದ್ ಭಟ್ಟಾಚಾರ್ಯ ಮತ್ತು ಅಚ್ಯುತ ಸುಕಿಲ ಎಂಬಿಬ್ಬರನ್ನು ಪೋಲೀಸರು ಕೈದುಮಾಡಿ ಅವರಲ್ಲಿದ್ದ ಪಿಸ್ತೂಲುಗಳನ್ನು ಎಳೆದುಕೊಂಡರು.

—ಮುಂಬಾಯಿಲ್ಲಿ ಮನೆಗೆಲಸವನ್ನು ಮಾಡುತ್ತಿದ್ದಾಗ ಮಾಡಿನ ಕಬ್ಬಿಣದ ಬೀಮು ಕೆಳಗೆ ಬಿದ್ದು ಪರಶುರಾಮ ಖಂಡು ಎಂಬವನು ಜಖಂ ಹೊಂದಿ ತೀರಿದನು.

—ಲಾಹೋರ್ ಪಿತೂರಿ ತಕ್ಷೀರನ್ನು ಸಮರ್ಥಿಸಿದ ಒಬ್ಬನನ್ನು ಕಲ್ಕತ್ತದಲ್ಲಿ ವಧೆಗೈದರು. ಕೈದುಗಳಾಗಿವೆ.

—ಸತ್ಯ ಮತ್ತು ನ್ಯಾಯ ಬಾಹಿರವಾದ ಯಾವ ಧರ್ಮವೂ ಧರ್ಮವೆಂದೆಣಿಸಲ್ಪಡಲು ಅರ್ಹವಲ್ಲವೆಂದು ಶ್ರೀಮತಿ ಊರ್ಮಿಳಾ ದೇವಿಯವರ ಮದ್ರಾಸಿನಲ್ಲಿ ಹೇಳಿದರು.

—ಗಾಂಧಿಜೀಯವರ ಬಂಧನದ ಸ್ಮರಣಾರ್ಥವಾಗಿ ಮಧುರೆಯಲ್ಲಿ ಕೊಂಗ್ರೆಸ್‌ವಾಲರ ಉಪಟಳ. ಲಾಠಿ ಚಾರ್ಜು ನಡೆದಿದೆ.

—ಡಾ। ಸುಬ್ಬರಾಯನವರ ದೇವಸ್ಥಾನ ಪ್ರವೇಶ ಬಿಲನ್ನು ಅದಷ್ಟು ತ್ವರಿತದಲ್ಲಿ ಹೊರತರುವ ಏರ್ಪಾಡಾಗುತ್ತಿದೆ.

—ಮುಂಬಾಯಿ, ಕಲ್ಕತ್ತ ಮೊದಲಾದ ಕಡೆಗಳಲ್ಲಿ ಗಾಂಧಿ ಬಂಧನ ಸ್ಮರಣೆಯಾಯಿತು.

—"ನಾನು ಮಿಂದು ಗಣಪತಿಯನ್ನು ಭಜಿಸುವೆ. ನಾನು ಮದ್ಯ ಮಾಂಸಗಳನ್ನು ವರ್ಜಿಸುವೆ"ನೆಂಬ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಹರಿಜನರು ಕರಾಚಿಯಲ್ಲಿ ತೊಡುತ್ತಿರುವರು.

—ಪಾಟ್ನಾದಲ್ಲಿ ೩೪ ಮಂದಿ ಸ್ವಯಂಸೇವಕರು ಗಾಂಧಿ ದಿನಾಚರಣೆಗಾಗಿ ಕೈದು ಮಾಡಲ್ಪಟ್ಟಿರುವರು.

—ಮುಂಬಾಯಿಯ ಬೆರಿಸ್ಟರ್ ಫಿರೋಜ ರಸ್ತುಮ್ಜಿ ಬರೂಚಾರವರ ಮನೆ ಜಪ್ತಿಯಾಗಿ ನಿಷಿದ್ಧ ಸಾಹಿತ್ಯಗಳನ್ನು ಕೊಂಡೊಯ್ಯಲಿತ್ತವಾಯಿತು.

—ಅಲ್ವಾರ ಸಂಸ್ಥಾನದಲ್ಲಿ ಜನಕ್ಷೋಭೆಯದ್ದಿದೆ. ಮಿಲಿಟರಿಯನ್ನು ಇಡೀ ನಗರದಲ್ಲಿ ಸ್ಥಾಪಿಸಲಾಗಿದೆ.

—ಹೊಸ ವರ್ಷದಲ್ಲಿ ಹಿಂದೂ ದೇಶಕ್ಕೆ ಶಾಂತಿ, ಐಕ್ಯ, ಸ್ವಾತಂತ್ರ್ಯವು ದೊರೆಯಲೆಂದು ಮೊದಲಿನ ಭಾರತ ಸಚಿವರಾದ ಬೆನ್ನರ ಆಶೀರ್ವಾದ.

### ಹಾಸನದ ವಾರ್ತೆ.

ಜಾನುವಾರುಗಳ ಪ್ರದರ್ಶನವು ಬಹಳ ಯೋಗ್ಯ ರೀತಿಯಲ್ಲಿ ನಡೆದಿದ್ದು ಅನೇಕ ಊರುಗಳಿಂದ ಜಾನುವಾರುಗಳನ್ನು ಕೊಂಡುಕೊಳ್ಳುವರು ಬರುತ್ತಾ ಹೋಗುತ್ತಿರುವರು.

ಹಾಸನದಲ್ಲಿ ಅನೇಕ ಫುಟ್‌ಬೋಲ್ ಟೀಮಿನವರಿಗೆ ಪಂದ್ಯಾಟವಾಗುತ್ತಿದೆ. ಪಂದ್ಯಾಟವಾಡಿ ಬೆಳ್ಳಿಕಪ್ಪುಗಳನ್ನು ಪಡೆದು ತಾ. ೩ರಲ್ಲಿ ಜಯಘೋಷದೊಡನೆ ಸಕಲೇಶಪುರಕ್ಕೆ ಬೆಳ್ಳಿ ಕಪ್ಪನ್ನು ತಂದಿರುತ್ತರಾಗಿ ತಿಳಿದುಬರುತ್ತದೆ. ಸಂತೋಷ ಸಂಗ್ರ.

## ದಿವಂಗತ ಪ್ರೊಫೆಸರ್ ಆರ್. ತಾತಾಚಾರ್ಯ.

ಪ್ರೊಫೆಸರ್ ಆರ್. ತಾತಾಚಾರ್ಯ ಎಂ. ಎ. ಎಲ್. ಟಿ. ಇವರು ಕಳೆದ ತಾ. ೨೦–೧೨–೩೨ರಲ್ಲಿ ನಿಮೋನಿಯಾ ಜ್ವರದಿಂದ ಮದ್ರಾಸಿನ ಸ್ವಗೃಹದಲ್ಲಿ ಅಕಸ್ಮಾತ್ತಾಗಿ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ಈ ಮಹನೀಯರು ತಮ್ಮ ಸಾಹಿತ್ಯ ಸೇವೆ ಮತ್ತು ಪಾಂಡಿತ್ಯದಿಂದ ಸಮಗ್ರ ಕರ್ನಾಟಕದಲ್ಲಿಯೂ ಸುಪ್ರಸಿದ್ಧರಾದವರು. ಜೈನವಾಙ್ಮಯದ ದೊಡ್ಡ ವಿದ್ವಾಂಸರು, ಹಳೆಗನ್ನಡ ಕವಿತೆಯ "ತಿಲಕ ಪ್ರಾಯ"ರು ಇವರು ಇತರ ಕಡೆಗಳಲ್ಲಿಯೂ ಇಲ್ಲಿಯೂ ಬಿ. ಎ. ಅಧಿಕಾರಿಗಳಾಗಿದ್ದು ಕಳೆದ ೧೯೩೨ರಲ್ಲಿ ನಿವೃತ್ತರಾದರು. ಇವರಿಗೆ ನಮ್ಮ ಜಿಲ್ಲೆಯ ಮೇಲಿನ ಪ್ರೇಮವು ಅತಿಶಯವಾಗಿದ್ದಿತು. ಮೂಡಬಿದಿರೆಯ, ಹಸ್ತಪ್ರತಿ ಭಂಡಾರಗಳ ಗ್ರಂಥಗಳನ್ನು ಅಚ್ಚು ಹಾಕಿಸುವಂತೆ ಅಲ್ಲಿಯೇ ಒಂದು ಮುದ್ರಾಲಯವನ್ನು ಸ್ಥಾಪಿಸುವಂತೆ ಕೆಲವು ವರ್ಷಗಳ ಹಿಂದೆ, ಪ್ರಯತ್ನಿಸಿದವರು ಈ ಮಹನೀಯರೇ. ಇವರು ಮಂಗಳೂರಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರೆಂಬುದನ್ನು ಯಾರೂ ಅಷ್ಟರೊಳಗೆ ಮರೆತಿರಲಾರರು. ಇವರ ನಿಧನದಿಂದ ನಮ್ಮ ಕನ್ನಡ ತಾಯಿ ತನ್ನ ವೀರಪುತ್ರನೊಬ್ಬನನ್ನು ಕಳೆದುಕೊಂಡಂತಾಯಿತು. ಇವರ ಪವಿತ್ರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಇವರ ಕುಟುಂಬದ ಅಪಾರ ಶೋಕದಲ್ಲಿ ನಾವೂ ಭಾಗಿಗಳಾಗಿರುವುದಲ್ಲದೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಈ ಸಮಯದಲ್ಲಿ ತನ್ನ ಹೆಸರಿಗೆ ತಕ್ಕುದಾದ ಕಾರ್ಯಕ್ರಮವನ್ನು ಕೈಗೊಂಡು ದಿವಂಗತರ ಹೆಸರು ಇಲ್ಲಿಯೂ ಸಮಗ್ರ ಕರ್ನಾಟಕದಲ್ಲಿಯೂ ಚಿರಶಾಶ್ವತವಾಗಿ ಉಳಿಯುವಂತೆ ಪ್ರಯತ್ನಿಸಲೆಂದು ಅರಿಕೆ.

## ದಕ್ಷಿಣ ಕನ್ನಡ.

**ಮಂಗಳೂರು.** ಇದೇ ಬರುವ ತಾ. ೮ನೇ ಆದಿತ್ಯವಾರ ಸಾಯಂಕಾಲ ೪॥ ಘಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಮಿತ್ರಮಂಡಳಿಯ ಪರವಾಗಿ ಒಂದು ಸಾರ್ವಜನಿಕ ಸಭೆಯು ಜರಗುವುದೆಂದೂ, ಕೊಡಗು ಸಾಹಿತ್ಯ ಪರಿಷತ್ತಿನಿಂದ ಬಂದ ಶ್ರೀ. ಮುಳಿಯ ತಿಮ್ಮಪ್ಪಯ್ಯನವರೂ, ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರು, ಶ್ರೀ. ಕಡಂಗೋಡ್ಲು ಶಂಕರಭಟ್ಟರು ಮತ್ತು ಬೆಳಗಾಂವಿಯ "ಮುಂಟರ ತಂಡ"ದ ಪ್ರತಿನಿಧಿಗಳೂ, ಇತರ ಮಹನೀಯರೂ ಭಾಷಣ ಹಾಗೂ ಕವಿತಾ ವಾಚನಗಳನ್ನು ಮಾಡಲಿಕ್ಕಿರುವರೆಂದೂ, ಸಾಹಿತ್ಯ ಪ್ರೇಮಿಗಳೆಲ್ಲರಿಗೂ ಸ್ವಾಗತವಿರುವುದೆಂದೂ ತಿಳಿಯುತ್ತೇವೆ. ಮಹಾಜನಗಳು ಪ್ರೋತ್ಸಾಹಿಸಲಿ!

ಕೀರ್ತಿಶೇಷ ದಿವಾನ್ ಬಹದ್ದೂರ್ ಅಮ್ಮೆಂಬಳ ಅನಂತ ಕೃಷ್ಣ ಪೈಗಳು ಸುಮಾರು ೩೦ ವರ್ಷಗಳ ಮುಂಚೆ ಈ ಜಿಲ್ಲೆಗೆ ಬಂದು ಈ ಜಿಲ್ಲೆಯ ನಿವಾಸಿಗಳಾದ ಗೌಡ ಸಾರಸ್ವತ ಬ್ರಾಹ್ಮಣ ಯಾತ್ರಿಕರ ಅನುಕೂಲತೆಗಾಗಿ ಪಂಢರಪುರ ಕ್ಷೇತ್ರದಲ್ಲಿ ಒಂದು ಧರ್ಮಶಾಲೆಯನ್ನು ಕಟ್ಟಿಸುವ ಉದ್ದಿಶ್ಯ ರೂ. ೨೧೨೫–೦–೦ನ್ನು ಸದ್ರಿ ಜಾತಿಯ ಗೃಹಸ್ಥರ ವಂತಿಗೆ ಮೂಲಕ ವಸೂಲುಪಡಿಸಿ ಕೆನರಾ ಬೇಂಕಿನಲ್ಲಿ ಕಾಯಂ ಠೇವಣಾತಿಯಾಗಿಟ್ಟು ನಂತರ ಸದರಿ ಧರ್ಮಶಾಲೆಯನ್ನು ಕಟ್ಟಿಸುವರೇ ಅಗತ್ಯ ಇರುವ ಜಾಗೆಗೆ ಏರ್ಪಾಡನ್ನು ಜವಾಯಿಸುವರೇ ಅನುಕೂಲವಾಗಲಿಲ್ಲ. ೧೯೨೦ನೇ ಇಸವಿಯಲ್ಲಿ ದೈವಾಧೀನರಾದರು. ಬಡ್ಡಿ ಮೂಲಕ ವೃದ್ಧಿಯಾದ ಸದರಿ ಫಂಡು ಈಗ ರೂ. ೬,೪೯೬–೯–೬ಪೈ ಅಂದಾಜು ಆಗುತ್ತದೆ. ಸದರಿ ಏರ್ಪಾಡಿನ ಸದ್ವಿನಿಯೋಗದ ಕುರಿತು ಇದೇ ತಾ ೪ರಲ್ಲು ಮಂಗಳೂರು ನಿವಾಸಿಕರ ಪೈಕಿ ವಂತಿಗೆಕೊಟ್ಟವರ ಸಭೆಯು ರಾ। ಸಾಹುಕಾರ ಪಾಂಡುರಂಗ ಲಕ್ಷ್ಮಣ ಪೈಗಳ ಅಧ್ಯಕ್ಷತೆಯಲ್ಲಿ ಕೂಡಿದ್ದಲ್ಲಿ ಮೇಲ್ಕಂಡ ಏರ್ಪಾಡಿನಿಂದ ಪಂಢರಪುರದಲ್ಲಿ ಧರ್ಮಶಾಲೆಯನ್ನು ಕಟ್ಟಿಸುವರೇ ಸಾಧ್ಯವಾಗದೆಂಬದಾಗಿ ಪಂಢರಪುರದಲ್ಲಿ ಬೊಂಬಾಯಿಯ ದಾನಶೂರರೊಬ್ಬರು ಸಾಧಾರಣ ಒಂದು ಲಕ್ಷ ರೂಪಾಯಿ ಖರ್ಚುಮಾಡಿ ಯೋಗ್ಯವಾದ ಧರ್ಮಶಾಲೆಯನ್ನು ಕಟ್ಟಿಸಿರುವುದರಿಂದಲೂ ಸಭಿಕರು ಅಭಿಪ್ರಾಯಪಟ್ಟು ಇತರ ಯಾವ ಉಪಯೋಗಕ್ಕೆ ಸದರಿ ಫಂಡನ್ನು ವಿನಿಯೋಗಿಸಬಹುದು ವ ಆ ಕುರಿತು ಯಾವ ವಿಲೇವಾರಿ ಅಗತ್ಯವಾದೀತು ಎಂಬ ಸಂಗತಿಗಳನ್ನು ಆಲೋಚಿಸಿ ನಿರ್ಣಯಿಸುವರೇ ಈ ಜಿಲ್ಲೆಯಿಂದ ವಂತಿಗೆ ಕೊಟ್ಟ ಎಲ್ಲ ಗೃಹಸ್ಥರ ಒಂದು ಸಭೆಯು ತಾ. ೨೯–೧–೩೩ನೇ ಆದಿತ್ಯವಾರ ಸಾಯಂಕಾಲ ೩॥ ಘಂಟೆಗೆ ಮಂಗಳೂರ ಬಂದರದಲ್ಲಿರುವ ಕೆನರಾ ಬೇಂಕಿನ ಆಫೀಸಿನಲ್ಲಿ ಕೂಡಬೇಕೆಂಬದಾಗಿ ನಿಶ್ಚಯಿಸಿಯದೆ. ವಂತಿಗೆ ಕೊಟ್ಟ ಸರ್ವರೂ ಸದರಿ ಸಭೆಗೆ ದಯಮಾಡಬೇಕಾಗಿ ಈ ಮೂಲಕ ವಿನಂತಿಸೋಣಾಗುತ್ತದೆ. ತಾ. ೪–೧–೩೩ರಲ್ಲಿ ಕೂಡಿದ ಸಭೆಯು ಮುಂದೆ ಸದರಿ ಫಂಡಿನ ವಿನಿಯೋಗದ ಕುರಿತು ೩ ಸೂಚನೆಗಳು ಬಂದುವು. (೧) ರಾಮೇಶ್ವರ ದೇವಸ್ಥಾನದ ಸುತ್ತುಪರಿಯಲ್ಲಿರುವ ಮತ್ತು ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯಕ್ಕೆ ಒಪ್ಪಿದ ಶ್ರೀ ಕೋದಂಡ ರಾಮಸ್ವಾಮಿಯ ಚಿಕ್ಕದೊಂದು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವುದು (೨) ಈ ಪೈಕಿ ಕೆಲವು ಏರ್ಪಾಡನ್ನು ಕೀರ್ತಿಶೇಷ ಅನಂತ ಕೃಷ್ಣಪೈಗಳ ಸ್ಮರಣಾರ್ಥವಾಗಿ ಪಂಢರಪುರದಲ್ಲಿ ಶ್ರೀ ವಿಠೋಬದೇವರ ಸನ್ನಿಧಿಯಲ್ಲಿ ಕೆಲವು ಸೇವೆಗಳು ಶಾಶ್ವತವಾಗಿ ನಡಿಸುವುದು ಎಂಬದಾಗಿ ಕೆಲವು ಸೂಚನೆಗಳು ಬಂದು ಸಭೆಯು ಮುಕ್ತಾಯವಾಯಿತು.

ಸ್ಥಳೀಕ ಕೋಪರೇಟಿವ್ ಟೌನ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾರೀಕು ೮ನೇ ಆದಿತ್ಯವಾರ ಶ್ಯಾಮ ಘಂಟೆ ೩ಕ್ಕೆ ಸದರಿ ಬೇಂಕಿನ ರಥ ಬೀದಿ ಆಫೀಸಿನಲ್ಲಿ ಜರಗುವುದು.

ತಾ. ೨ನೇ ಸೋಮವಾರ ರಾತ್ರಿ ಘಂಟೆ ೮॥ ಯಿಂದ ೧೦ರ ತನಕ ಮಂಗಳೂರ ಸೂಟರ್ ಪೇಟೆಯಲ್ಲಿ ಹರಿಜನರ ನಿವಾಸಸ್ಥಾನದಲ್ಲಿ ಜರಗಿದ ಹರಿಜನರ ಸಭೆಯಲ್ಲಿ ಮದ್ಯಪಾನ ನಿಷೇಧ, ಪ್ರಾಣಿಬಲಿ ನಿಷೇಧ ಸ್ವಚ್ಛತೆಗಳ ಕುರಿತು ಮಂಗಳೂರಿನ ಆರ್ಯಸಮಾಜ ಪ್ರಚಾರಕರಾದ ಶ್ರೀ. ಲಕ್ಷ್ಮಣದೇವ ವಿದ್ಯಾರ್ಥಿಯವರು ಒಂದು ಭಾಷಣವನ್ನಿತ್ತರು. ಹೆಚ್ಚು ಕಡಿಮೆ ೩೦೦ ಮಂದಿ ಹರಿಜನರು ಸೇರಿದ್ದರು. ಇದೇ ಸ್ಥಳದಲ್ಲಿ ಇದೇ ತಾ. ೨೦ಕ್ಕೆ ಇವರು ಇನ್ನೊಂದು ಭಾಷಣವನ್ನು ಕೊಡಲಿರುವರು.

ಬೆಳಗಾಂವಿಯ ಮುಂಟರ ತಂಡದ ಚಾಲಕರೂ, ಒಂದಾಣೆ ಮಾಲೆಯ ಸಂಚಾಲಕರೂ, ಆದ ಶ್ರೀ ಪ್ಯಾಟಿ ಶಾಮರಾಯರೂ, ಕುಲಕರ್ಣಿ ಕೃಷ್ಣರಾಯರೂ, ಮಡಿಕೇರಿ ಸಾಹಿತ್ಯ ಸಮ್ಮೇಲನ ಮುಗಿಸಿಕೊಂಡು ತಮ್ಮ ಒಂದಾಣೆ ಮಾಲೆಯ ಪ್ರಚಾರಕ್ಕಾಗಿ ಇಲ್ಲಿಗೆ ಬಂದಿರುವರು. ಆದುದರಿಂದ ಕನ್ನಡಿಗರೆಲ್ಲರೂ ಅವರಿಗೆ ತನು ಮನ ಧನಗಳಿಂದ ನೆರವಾಗಬೇಕು.

ಇದೇ ತಿಂಗಳ ತಾ. ೮ನೇ ಆದಿತ್ಯವಾರ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀ ಗಂಗೊಳ್ಳಿ ಕೃಷ್ಣರಾವ್ ಇವರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡೆಸುವರು. ವ್ಯಾಖ್ಯಾನದ ವಿಷಯ–ಬ್ರಹ್ಮಾನಂದ ಕೇಶವಚಂದ್ರ ಸೇನ'ರವರ ಮರಣ ವಿನಾಚರಣೆ ಮತ್ತು ಅವರ ಜೀವನ. ಸರ್ವರಿಗೂ ಸುಸ್ವಾಗತವಿದೆಯೆಂದು ಸೆಕ್ರೆಟರಿಯವರು ತಿಳುಹಿಸುತ್ತಾರೆ.

ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ೧೨ನೇ ವಾರ್ಷಿಕ ಮಹಾ ಸಭೆಯು ಅಡ್ಯಾರು ಶಾಲೆ ಬಳಿ ಹಾಕಿದ್ದ ಭವ್ಯವಾದ ಚಪ್ಪರದಲ್ಲಿ ಶ್ರೀಮಾನ್ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜ ಮತ್ತು ಸಂಘಾಭಿವೃದ್ಧಿಯ ಕುರಿತು ಭಾಷಣಗಳಿದ್ದುವು.

**ಕಾರ್ಕಳ**—ಇದೇ ತಿಂಗಳ ತಾರೀಕು ೨ಲನೇ ದಿನ ಸಾಯಂಕಾಲ ಇಲ್ಲಿಯ ಬೋರ್ಡ ಸ್ಕೂಲ ಎಲಿಮೆಂಟರಿ ಶಾಲೆಯಲ್ಲಿ ನಮ್ಮ ಜಿಲ್ಲಾ ಅಸ್ಪೃಶ್ಯತಾ ನಿವಾರಣೆ ಕಮಿಟಿಯ ಪರವಾಗಿ ಮಂಗಳೂರು ಎಲೋಸಿಯಸ್ ಕೊಲೇಜಿನ ಪ್ರೊಫೆಸರ ಶ್ರೀಮಾನ ಎಸ್ ರಾಮಚಂದ್ರ ಅಯ್ಯರವು, ಡಾಕ್ಟರ ನಿಟ್ಟೆ ಮಹಾಬಲ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಸಭೆಮಾಡಿ, ತಾಲೂಕುಬೋರ್ಡ ಅಧ್ಯಕ್ಷರಾದ ಶ್ರೀ ವಕೀಲ ನಂಜಪ್ಪ ಶೆಟ್ಟರು ಅಧ್ಯಕ್ಷರಾಗಿದ್ದು ಹರಿಜನರಿಂದೊಡಗೂಡಿದ ಇತರರ ಒಂದು ತಾಲೂಕು ಸಮಿತಿಯನ್ನು ಸ್ಥಾಪಿಸಿದರಲ್ಲದೆ, ಅಸ್ಪೃಶ್ಯತಾ ನಿವಾರಣೆಯ ಕುರಿತು, ಶಾಸ್ತ್ರಾಧಾರಗಳನ್ನು ಕೊಟ್ಟು ದೀರ್ಘ ಭಾಷಣವನ್ನು ಕೊಟ್ಟರು.

ಇಲ್ಲಿಯ ಶ್ರೀ ವೆಂಕಟರಮಣ ದೇವಾಲಯದಲ್ಲಿ ತಾರೀಕು ೩೧–೧೨–೧೯೩೨ರ ದಿನ ರಾತ್ರಿ, ಕನ್ನಡ ಜ್ಞಾನೇಶ್ವರಿ ಕರ್ತರಾದ ಶ್ರೀ. ಮೂಡಕಟ್ಟೆ ರಾಘವೇಂದ್ರರಾಯರು ತಮ್ಮ ಗ್ರಂಥ ಪ್ರಸಾರಕ್ಕಾಗಿ ಬಂದವರು ಒಂದು ಗೀತಾ ವ್ಯಾಖ್ಯಾನಮಾಡಿ ಜ್ಞಾನೇಶ್ವರಿಯ ರಸಾಸ್ವಾದನೆ ಮಾಡಿಸಿದರು.

ತಾ ೧–೧–'೩೩ನೇ ದಿನ ಪ್ರತಿ ಆದಿತ್ಯವಾರವೂ ನಡೆಯುವ ಪ್ರಕಾರ ಹರಿಜನ ಬಾಲಕರ ನಾಮ ಸಂಕೀರ್ತನೆಯು ನಡೆಯಿತು. ಶ್ರೀಯುತರುಗಳಾದ ಕೆ. ಪಿ ಕೆ ವಾಮನ್, ಬಳ್ಕುಂಜೆ ಮೂಡ್ಡಗಿರಿ ಶೆಟ್ಟಿ, ಟಿ ಕೇಶವ ಶೆಟ್ಟಿ, ರಂಜಾಳ ಮಂಜುನಾಥ ಶೆಟ್ಟಿ, ಕಾರ್ಕಳ ವೆಂಕಟೇಶಪ್ರಭು, ಕೆ. ಪಿ ಕೇಶವ ಪ್ರಭು ಮೊದಲಾದವರು ಭಾಗವಹಿಸಿದ್ದರು.

**ಅಜೆಕಾರು:**—ದ. ಕ ಜಿಲ್ಲೆಯ ಡಿಸ್ಟ್ರಿಕ್ಟ್ ಮೆಂಬರ ಚುನಾವಣೆ ಬಗ್ಗೆ ತಾ ೨೪–೧೨–'೩೨ರಲ್ಲು ಮ। ರಾ। ಕೋಟ ರಾಮಕೃಷ್ಣ ಕಾರಂತರು ಇಲ್ಲಿಗೆ ಚಿತ್ತೈಸಿ, ಜನರ ಅಭಿಪ್ರಾಯ ಪಡೆದು ಹಿಂತೆರಳಿರುವರು.

ಅಜೆಕಾರು ಸರ್ಕಲಿನ ಪರವಾಗಿ ಜಿಲ್ಲಾಬೋರ್ಡಿಗೆ ಪ್ರತಿಕಕ್ಷಿ ಇಲ್ಲದೆ ಚುನಾಯಿಸಲ್ಪಟ್ಟ ಮ। ರಾ। ಕಾರ್ಕಳ ವಕೀಲ ಎಸ್. ನಂಜಪ್ಪ ಶೆಟ್ರು ತನ್ನ ಸದಸ್ಯತನಕ್ಕೆ ರಾಜಿನಾಮೆಯನ್ನಿತ್ತಿರುವರು!

**ಸುರತ್ಕಲ್**—ಇಲ್ಲಿಯ 'ರೂರಲ' ಡಿಸ್ಪೆನ್ಸರಿಯೊಂದರ ಆವಶ್ಯಕತೆಯ ಕುರಿತು ಈ ಪ್ರಾಂತ್ಯದ ನೆರೆ ಗ್ರಾಮವಾಸಿಗಳೊಂದಾಗಿ ತಾಲೂಕು ಬೋರ್ಡು ಪ್ರೆಸಿಡೆಂಟರ ಸನ್ನಿಧಿಗೆ ಮನವಿಯೊಂದನ್ನು ಇತ್ತೀಚೆಗೆ ಬರೆದುಕೊಂಡಿರುವರಾಗಿ ವದಂತಿ!

ಇಲ್ಲಿಯ ಜೋ(ಗಿ)ಕಟ್ಟೆ 'ಯಕ್ಷಗಾನೋಜ್ಜೀವಿನೀ ಸಂಘ'ದ ಎಂಟನೆಯ ವರ್ಷದ ವರ್ಧಂತಿ ಉತ್ಸವವು ಕಳೆದ ತಾ. ೩೦ನೆಯ ಶುಕ್ರವಾರ ರಾತ್ರಿ, ಕಾಸರಗೋಡು ಬೋರ್ಡ ಹೈಸ್ಕೂಲ ಕರ್ನಾಟಕ ಪಂಡಿತರಾದ ರಾ। ಶ್ರೀ ವಿದ್ವಾನ್ ಸುರತ್ಕಲ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

**ಮಂಗಲ್ಪಾಡಿ**—ತಾ ೨೯ ೧೨–೧೯೩೨ನೇ ಗುರುವಾರ ಮಂಗಲ್ಪಾಡಿ ಬಳಿ, ಪೈಲ ಶ್ರೀ ಶಾರದಾ ಬೋವಿ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು, ಕಾಸರಗೋಡು ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಮ। ರಾ। ವೆಂಕಟ್ರಾಯ ಮಲ್ಯರವರ ಅಧ್ಯಕ್ಷತೆಯಲ್ಲಿ ಅತೀ ವಿಜೃಂಭಣೆಯಿಂದ ಜರಗಿತು.

**ಕಿನ್ನಿಗೋಳಿ**—ತಾ ೨೩–೧೨–೩೨ರಲ್ಲಿ ಡಿಸ್ಟ್ರಿಕ್ಟ್ ಮೆಂಬರ್ ರಾ। ಮುಲ್ಕಿ ರಾಮಕೃಷ್ಣ ಪೂಂಜರು, ತಾಲೂಕು ಬೋರ್ಡ ಮೆಂಬರ ರಾ। ಕುಡೆತ್ತೂರು ಗುತ್ತು ಕೋಟಿಸೆಟ್ರು, ರಾ ಮುಲ್ಕಿ ರಾಜ ಹೆಗ್ಗಡೆಯವರು, ಜಮೀನ್ದಾರ ಬಳಕುಂಜೆ ಬಸ್ರುಸಾಂತಿಸ್ ದಾಮರ್ಸ ಶೆಟ್ಟಿ ಬೆಂಜಮಿನ್ ಸೋಜರು, ಮುಂಡ್ಕೂರು ನಡಿಗುತ್ತು ಕೃಷ್ಣಶೆಟ್ರು ಮೊದಲಾದ ಮಹನೀಯರೂ ಸುಮಾರು ನೂರಕ್ಕೆ ಮಿಕ್ಕಿ ಇತರ ಸದ್ಗೃಹಸ್ಥರೂ ನೆರೆದು ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ್ ರಾ. ಎ. ಸಿ. ಗೋನ್ಸಾಲ್ವಿಸ್ ಅವರ್ಗಳ್, ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಕಿನ್ನಿಗೋಳಿಯಲ್ಲಿ ಹೊಸತಾಗಿ ತೆರೆದ "ದಿ ನೇಶನಲ್ ಕ್ಲಬ್ಬಿ"ನ ಪ್ರವೇಶೋತ್ಸವವು ಜರಗಿಸಲ್ಪಟ್ಟಿತು.

**ಬೆಳ್ತಂಗಡಿ**—ತಾ. ೨೮–೧೨–೧೯೩೩ನೇ ಸಾಯಂಕಾಲ ಘಂಟೆ ೪ಕ್ಕೆ ಬೆಳ್ತಂಗಡಿ ಪಂಚಾಯತ ಬೋರ್ಡ ಆಫೀಸಿನಲ್ಲಿ ಕೂಡಿದ "ದೇವಿ ಜಾತ್ರೆಯಲ್ಲಿ ಪ್ರಾಣಿಬಲಿ ನಿಷೇಧ ಸಭೆ"ಯು ಜರಗಿ, ಬೆಳ್ತಂಗಡಿ ಕಸಬೆಯಲ್ಲಿರುವ ಮಾರಿಗುಡಿಯಲ್ಲಿ ಭಕ್ತ ಜನರು ಪ್ರಾಣಿಬಲಿ ಕೊಡುವುದನ್ನು ನಿಲ್ಲಿಸಿ ಅದರ ಬದಲಾಗಿ ಹೂ, ಹಣ್ಣು, ಕಾಯಿ, ಪಂಚ ಖಾದ್ಯಾಯಗಳಿಂದಲೇ ದೇವಿಯನ್ನು ಆರಾಧಿಸಬೇಕೆಂದೂ ಪ್ರಾಣಿಬಲಿಯನ್ನು ನಿಷೇಧಿಸಿ ಸಾತ್ವಿಕ ಪೂಜೆಯನ್ನು ಮಾಡಬೇಕೆಂದು ಮೊದಲಾಗಿ ಠರಾವುಗಳಾದುವು.

**ವಿಟ್ಲ**—ತಾ. ೧–೧–೧೯೩೩ರಲ್ಲು ಹೊಸ ವರ್ಷದ ಶುಭ ಮುಹೂರ್ತದಲ್ಲಿ ಒಂದು ಹೊಸ ವಾಚನಾಲಯವನ್ನು ತೆರೆಯೋಣಾಯಿತು. ಮ। ರಾ। ರಾ। ರಾಜಲಕ್ಷ್ಮೀನಾಥ ಸ್ವಾಮಿಜಿ, ಮ। ರಾ। ಕೃಷ್ಣವರ್ಮರಾಜ, ರಾ। ಕೂಳೂರು ಅಣ್ಣಪ್ಪ ನಾಯಕ, ರಾ। ಕೆ. ಸುಬ್ಬಗಟ್ಟಿ, ಕೆ ಶಂಕರರಾವ್, ಡಾಕ್ಟರ ಪದ್ಮನಾಭರಾವ್, ರಾ। ಶಿವಣ್ಣಭಟ್ಟ ಇವರನ್ನು ಸರ್ವಸಮ್ಮತದಿಂದ ವರ್ಕಿಂಗ್ ಕಮಿಟಿ ಮೆಂಬರರಾಗಿ ಆರಿಸಲಾಯಿತು.

ತಾ. ೩–೧–೩೩ರಲ್ಲು ಇಲ್ಲಿಯ ನವಯುವಕ "ಎಮ್ಮೆಚರ್ ಡ್ರೆಮೆಟಿಕ್ ಸೊಸೈಟಿಯವರು 'ಲೀಲಾ ವಿನೋದ' ಎಂಬ ನಾಟಕವನ್ನು ಆಡಿ ತೋರಿಸಿದರು.

**ಉಪ್ಪಿನಂಗಡಿ**—ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ತಾ ೨೮ರಲ್ಲಿ ಕೆನರಾ ಹೈಸ್ಕೂಲ್ ಉಪಾಧ್ಯಾಯರಾಗಿರುವ ಶ್ರೀ। ಎಮ್ ಎನ್ ಕಾಮತ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಪರ್ಧೆಯ ಆಟಗಳು, ಹಳೆಯ ಮತ್ತು ಈಗಣ ವಿದ್ಯಾರ್ಥಿಗಳಲ್ಲಿ ಈ ಶಾಲೆಯಲ್ಲಿ ಜರುಗಿದ್ದು, ಪಾಟಗಳೆಲ್ಲ ಆಟಗಳಲ್ಲೂ ಪ್ರವೀಣರಾದವರಿಗೆ ಬಹುಮಾನಗಳನ್ನು ಹಂಚಲಾಯಿತು. ಮೂರು ವರ್ಷಗಳಿಂದ ವರ್ಧಂತಿ ಇರಲಿಲ್ಲ, ಈ ವರ್ಷ ಆಯಿತು. ಈಗಿನ ಮುಖ್ಯೋಪಾಧ್ಯಾಯರೂ ಅವರೊಡನೆ ಒಂದಾಗಿ ಕೂಡಿ ಕೆಲಸ ಮಾಡುವ ಸಹಾಯಕರೂ ಈ ಶಾಲೆಯನ್ನು ಉತ್ತಮ ಸ್ಥಿತಿಗೆ ತಂದಿಟ್ಟಿರುವುದು ವರದಿಯಿಂದ ವ್ಯಕ್ತವಾಯಿತು. ರಾತ್ರಿಯಲ್ಲಿ ಐವಾರು ಹಿಂಕ್ಕೆ ಮಿಕ್ಕಿದ ಸ್ತ್ರೀ ಪುರುಷರ ಸಮೂಹದ ಇದಿರಲ್ಲಿ, ಅತ್ಯುತ್ತಮ ನಟನೆಯಿಂದ ಮೂಕ ಮತ್ತು ಸಂಗೀತ ನಾಟಕಗಳನ್ನು ಆಡಿದುದಲ್ಲದೆ, ಹೆಮ್ಮಕ್ಕಳ ಗಾಯನ ನರ್ತನಾದಿಗಳೂ ಇದ್ದುವು. ಅಧ್ಯಕ್ಷರು ಈ ಸಭೆಯಲ್ಲಿ ಭಾಷಣಮಾಡುತ್ತಾ, ಊರವರಿಂದ ಉಪಾಧ್ಯಾಯರಿಗೂ ಶಿಕ್ಷಣ ಪ್ರಚಾರಕ್ಕೂ ಆಗಬೇಕಾದ ಆವಶ್ಯಕ ಸಹಾಯವನ್ನು ವಿವರಿಸಿ, ಶಾಲಾ ಮಕ್ಕಳ ಸಂಖ್ಯೆಯು ಬರುವ ವರ್ಷದೊಳಗೆ ದ್ವಿಗುಣಿತವಾಗಬೇಕೆಂದು ಆಶಿಸಿದರು.

ಇಲ್ಲಿನ ಮುಸ್ಲಿಮ ಮಕ್ಕಳು ತೀರಾ ಕಡಿಮೆಯಾಗಿ ಶಾಲೆಗೆ ಬರುವುದೂ, ಹರಿಜನರು ಕ್ರಮಸ್ಥರಾಗುತ್ತ ಬರುವುದೂ ವಿಶೇಷವಾಗಿದೆ.

ಇದೇ ಬರುವ ಫೆಬ್ರವರಿಯಿಂದ ಪ್ರಾರಂಭಿಸುವ ಮಾಘ ಮುಹೂರ್ತದ ಹಬ್ಬದ ದಿನಗಳಲ್ಲಿ, ಇಲ್ಲಿನ ಶಾಲೆಯ ಮತ್ತು ದೇವಳದ ಸಹಾಯಕ್ಕಾಗಿ ಮೂರು ಬೇರೆ ನಾಟಕಗಳನ್ನು ಊರವರೇ ಆಡುವುದಾಗಿ ನಿಶ್ಚಯಮಾಡಿರುವುದೂ ಸಂತೃಪ್ತಿಕರವಾಗಿದೆ.

**ಪುತ್ತೂರು**—ಮರಾಟಿ ಸಮಾಜದವರ ಸಮ್ಮೇಲನವೊಂದು ಇಲ್ಲಿ ತಾ ೨೯ರಲ್ಲಿ ಜರುಗಿತು. ಕಳೆದ ವರ್ಷ ಬರೇ ಒಂದು ಕೋಣೆಯಲ್ಲಿ ೩೦–೪೦ರೊಳಗೆ ಜನರು ಸೇರಿದ್ದ ಈ ಸಮ್ಮೇಲನವು ಈಗ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ೩೦೦ ಜನರಿಂದ ಕೂಡಿದ್ದು, ಮದ್ಯಪಾನ ನಿರ್ಮೂಲನಕ್ಕೆ ಸರ್ವರೂ ಪ್ರತಿಜ್ಞೆಯನ್ನು ಹಾಕಿಕೊಂಡು ವಿದ್ಯಾಭ್ಯಾಸ ಪ್ರಚಾರಕ್ಕಾಗಿ ತುಂಬಾ ಪ್ರಯತ್ನಿಸುವುದಾಗಿ ಸಭಿಕರು ಹಳ್ಳಿ ಹಳ್ಳಿಗಳಲ್ಲಿನ ಈ ಸಮಾಜದವರಲ್ಲಿ ಪ್ರಚಾರ ಕಾರ್ಯ ಪ್ರಾರಂಭಿಸಲು ನಿಶ್ಚಿತವಾಗಿದೆ. ತೀರ ದೀನರಾಗಿರುವ ಇವರು ಉದ್ಧಾರ ಹೊಂದುವ ಹಾಗೆ ಶ್ರೀ ಮೊಳಹಳ್ಳಿ ಶಿವರಾಯರು ಪ್ರಬಲ ಸಾಹಸದ ಮೂಲಕ ಸಹಾಯಮಾಡುತ್ತಿರುವುದು ಸಂತೋಷಕರವಾಗಿದೆ. ಒಂದೇ ವರ್ಷದಲ್ಲಿ ಹತ್ತು ಮಡಿ ಸಭಿಕರ ಸಂಖ್ಯೆಯಿಂದ ಮುಂದೆ ಬಹಳ ಅಭಿವೃದ್ಧಿಯನ್ನು ಹಾರಯಿಸಬೇಕಾಗಿದೆ.

---

## ಏಲಂ!

ಕಾರ್ಕಳ ಪರ್ಪಲೆ ಬಾಸೆಲ್ ಮಿಶನ್ ಬಂಗ್ಲೆಯಲ್ಲಿ ಕೆಲವು ಬೇಂಡಿನ ಸೊತ್ತುಗಳು, ಅಂದರೆ ತರತರದ ಸಣ್ಣ ದೊಡ್ಡ ಬಿಗಿಲುಗಳು ೪, ಕ್ಲಾರಿನೆಟ್ ೧, ಸಣ್ಣ ಡ್ರಮ್ ೧, ದೊಡ್ಡ ಡ್ರಮ್ ೧, ಇವೆ. ಇವುಗಳನ್ನು ಇದೇ ಜನವರಿ ೧೭ ಮಂಗಳವಾರ ಪೂರ್ವಾಹ್ನ ೧೧–೩೦ ಘಂಟೆ ಸಮಯಕ್ಕೆ ಸದ್ರಿ ಬಂಗ್ಲೆಯಲ್ಲಿ ಏಲಂ ಮಾಡುತ್ತೇವೆ. ಸದರಿ ಸೊತ್ತುಗಳ ಅಗತ್ಯವಿದ್ದವರು ಏಲಮಿಗೆ ನಿಂತು ನಗದಿ ಹಣ ಕೊಟ್ಟು ಪಡಕೊಳ್ಳಬಹುದು ಎಂಬದಾಗಿ ಈ ಮೂಲಕ ಸರ್ವ ಜನರಿಗೆ ಪ್ರಕಟ ಪಡಿಸುತ್ತೇವೆ.

ಪರ್ಪಲೆ ಕಾರ್ಕಳ,
೩ನೇ ಜನವರಿ ೩೩

**Th. Ritter.**

# 'ಗಾಂಧಿ, ರಾಜಕೀಯ ಕೈದಿಗಳ ಬಿಡುಗಡೆಯಾಗಲಿ!

## ಬಾಣ ರಾಜ್ಯವು ಮುಕ್ತಾಯವಾಗಲಿ!

## ಕ್ರಾಂತಿಯು ಸಾಯಲಿ! ಶಾಂತಿಯು ಬಾಳಲಿ!

ಮಹಾತ್ಮಾ ಗಾಂಧಿಯವರ ಬಿಡುಗಡೆಯ ಕುರಿತು ಕಳೆದ ಸಂಚಿಕೆಯಲ್ಲಿ ಆಶಾವಾದವನ್ನು ತೋರಿಸಲಾಗಿತ್ತಷ್ಟೆ! ರೌಂಡ್ ಟೇಬಲ್ ಪರಿಷದವು ಕೊನೆಗೊಂಡ ಕೆಲವು ದಿನಗಳಲ್ಲಿ ಅವರ ಮತ್ತು ಇನ್ನಿತರ ರಾಜಕೀಯ ಕೈದಿಗಳ ಬಿಡುಗಡೆಯಾಗದಿರದೆಂದು ಎಲ್ಲರೂ ನಂಬಿದ್ದರು. ಅಲ್ಲದೆ ಸಪ್ರೂ ಜಯಕರರೇ ಮೊದಲಾದವರು ಬ್ರಿಟಿಷ ಸರ್ಕಾರಕ್ಕಿಟ್ಟ ಮೊರೆಯಿಂದಾಗಿ ಅಂತಹ ಸಾರ್ವತ್ರಿಕ ಬಿಡುಗಡೆಯು ಸಂಭವನೀಯವೆಂದು ಎಲ್ಲರ ಊಹೆಯಾಗಿತ್ತು. ಆದರೆ ಈಗಿನ ವಾತಾವರಣದ ಪರಿಶೀಲನೆಯಿಂದ ಅಂತಹ ಬಿಡುಗಡೆಯು ಥಕ್ಕನೆ ಸುಲಭವಾಗುವಂತಿಲ್ಲವೆಂದೂ ಬ್ರಿಟಿಷ ಸರಕಾರವು ತನ್ನ ಮನೋಹರಿ ವರ್ತನೆಯನ್ನು ಮಾಡುವರೆ ಮನಸ್ಸಿಟ್ಟಿಲ್ಲವೆಂದೂ ತಿಳಿದು ಬಂದಿದೆ. ಒಂದು ವಾರ್ತೆಯ ಮೇರೆಗೆ-ಹೋರರು ವಿಲ್ಲಿಂಗ್ಡನ್ನರೊಡನೆ ವಿಚಾರಿಸಿ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟರಾದೀತೆಂದು ಅಭಿಪ್ರಾಯಗೊಂಡರೆಂದೂ ಅದಕ್ಕುತ್ತರವಾಗಿ ವಿಲ್ಲಿಂಗ್ಡನ್ನರು ಅಂತಹ ಬಿಡುಗಡೆಯು ಪ್ರಕೃತ ಸ್ಥಿತಿಯಲ್ಲಿ ಹಿಂದೂದೇಶದಲ್ಲಿ ಸಾಧ್ಯವಿಲ್ಲವೆಂದು ಹೇಳಿದರಾಗಿಯೂ ಈ ಭಿನ್ನಾಭಿಪ್ರಾಯಗಳಿಂದ ಈ ಮುತ್ಸದಿಗಳಿಬ್ಬರೊಳಗೆ ಅನ್ಯೋನ್ಯಕ್ಕೆ ಆಘಾತವುಂಟಾಗಿದೆಯೆಂದೂ ಅರಿಯಲಾಗಿದೆ. ಇನ್ನೊಂದು ಸುದ್ದಿಯ ಮೇರೆಗೆ ಗಾಂಧೀಜಿಯವರ ಬಂಧ ವಿಮುಕ್ತತೆಗಾಗಿ ಸರಕಾರಗಳು ಬಹಳವಾಗಿ ಆಲೋಚಿಸುತ್ತಿವೆಯಾಗಿಯೂ ಅಂತಹ ಸುಸಂಧಿಯು ದೊರೆತರೆ ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯು ಸಂಭವನೀಯವೆಂದೂ ಗೊತ್ತಾಗಿದೆ. ರೌಂಡ್ ಟೇಬಲ್ ಅಂತ್ಯವಾದ ಮರುದಿನ ಮಾತ್ರ ಹೋರ್ ಸಾಹೇಬರು ಮಾಡಿದ ಒಂದು ಬ್ರಾಡ್‌ಕಾಸ್ಟನ್ನು ಕೇಳುವಾಗ ಅವರು ರೌಂಡ್‌ಟೇಬಲಿನಲ್ಲಿ ಕುಳಿತುಕೊಂಡಿದ್ದಾಗ ಅವರ ಮನವು ಒಂದು ರೀತಿಯಾಗಿತ್ತೆಂದೂ, ಅಲ್ಲಿಂದೆದ್ದೊಡನೆ ಅದು ಪುನಃ ಪರಿವರ್ತಿತವಾಯಿತೆಂದೂ ಊಹಿಸಲಾಗುತ್ತಿದೆ. ಸಪ್ರೂಗಳ ಕೇಳಿಕೆಗೆ ಅವರು "ತೀವ್ರ ಆಲೋಚಿಸುತ್ತೇನೆ"ಂದು ಹೇಳಿದ್ದು ಈಗ 'ಗಾಂಧಿಯವರು ಕಾಯಿದೆಭಂಗಕ್ಕೆ ಕೈಹಚ್ಚುವುದಿಲ್ಲವಾದರೆ ಅವರನ್ನು ಬಿಡಲೇನಡ್ಡಿ?' ಎಂಬರ್ಥದ ಪ್ರಕಟನೆಯನ್ನು ಮಾಡಿರುವರು. ಶಾಸ್ತ್ರಿಯವರೇ ಮೊದಲಾದವರು ವೈಸರಾಯರನ್ನು ಬೇಡಿದಾಗ ವೈಸರಾಯರು ಗಾಂಧೀಜಿಯವರನ್ನು ಬಿಡಲಾಗುವುದಿಲ್ಲವೆಂದ ಕಂಠೋಕ್ತವಾಗಿ ಹೇಳಿದ ಜವಾಬೇ ಈಗ ಸಹ ಅನ್ವಯಿಸುತ್ತದೆಂದು ಇಂಡಿಯಾ ಸರಕಾರವು ರೂಟರ್ ವಾರ್ತಾವಾಹಕನ ಮೂಲಕ ಪ್ರಕಟಿಸಿದಂತಿದೆ. ಲಂಡನಿನ ಅನೇಕ ಪತ್ರಿಕೆಗಳೂ, ಯೂರೋಪದ ನೂರಾರು ದಿನಚರಿಗಳೂ ಗಾಂಧೀಜಿಯವರ ಬಿಡುಗಡೆಯನ್ನು ಯಾಚಿಸುತ್ತಿವೆ. ಟೈಮ್ಸ್ ಒಫ್ ಇಂಡಿಯಾ ಪತ್ರಿಕೆಗಳಂತಹ ಶುದ್ಧ ಆಂಗ್ಲೋ ಇಂಡಿಯನ ಪತ್ರಿಕೆಗಳು ಮಾತ್ರ ಸರಕಾರವನ್ನು ಬೆನ್ನು ತಟ್ಟಿ ನಗುವಂತಿವೆ. ಗಾಂಧಿಯವರ ಬಿಡುಗಡೆಯಾದರೆ ಮತ್ತೆ ಬ್ರಿಟಿಷರು ಮುಖವೆತ್ತಿ ನಡೆಯಲಾಗದು ಎಂದೇ ಈ ಪತ್ರಿಕೆಗಳ ಧೋರಣೆ.

ಭರತ ವರ್ಷದ ಶ್ರೇಯಸ್ಸನ್ನು ಕಾಂಕ್ಷಿಸಿ ಮಜೂರ ಪಕ್ಷದ ಪ್ರಮುಖರಾದ ಜೋರ್ಜ್ ಲೇನ್ಸ್‌ಬರಿ ದೊರೆಯವರು ಲಂಡನಿನಿಂದ ಒಂದು ಸಂದೇಶವನ್ನು ಕಳುಹಿಸಿರುವರು. ಅವರು ಬ್ರಿಟಿಷ್ ಲೇಬರ್ ಚಳವಳಿಗಾರರ ಪರವಾಗಿ ಹೊಸ ವರ್ಷದ ಆಶೀರ್ವಾದವನ್ನು ಸಮಸ್ತ ರೈತರು, ಕೂಲಿಗಾರರು ಮತ್ತಿತರ ಜನತೆಗಳಿಗೆ ಕಳುಹಿಸಿದ ಪ್ರಕಟಣೆಯಲ್ಲಿ **"ಹೊಸ ವರ್ಷವು ಶಾಂತಿ, ಸಹಕಾರ ಸ್ವಾತಂತ್ರ್ಯಗಳನ್ನು ತರಲಿ! ಬಾಣ ರಾಜ್ಯವು ಇನ್ನು ಮುಂದಕ್ಕೆ ಹೊರಬಾರದಂತೆ ಹಿಂತೆಗೆಯಲ್ಪಡಲಿ. ಸಾಮಾನ್ಯ ಅಥವಾ ವಿಶೇಷ ಕಾನೂನಾಗಿ ಯಾವುದೂ ಹೊರ ಬರದಿರಲಿ**

**ಅರಾಜಕತೆಯು ಹಿಂತು ಹೋಗುವುದೆಂದು ನಾವು ಮನಃಪೂರ್ವಕ ಆಶಿಸುವೆವು. ದುಷ್ಟತನವನ್ನು ಧೂರ್ತತನವು ಬಗ್ಗಿಸಲಾರದು. ಬಲಾತ್ಕಾರದಿಂದ ಬಲಾತ್ಕಾರವೇ ಜನಿತವಾಗುತ್ತದೆ. ಅದುದರಿಂದ ನಾವು ಸರಕಾರದ ಬಲಾತ್ಕಾರಕ್ಕೂ ಹೆದರೆವು. ಜನರು ಅತ್ಯಾಚಾರ, ಕೊಲೆಗಳನ್ನು ಸರಕಾರದ ವಿರುದ್ಧವಾಗಿ ಎಸಗುವುದಕ್ಕೂ ನಾವು ಬದ್ಧ ವಿರೋಧಿಗಳಿರುವೆವು.**

ಹಿಂದೀಯರ ಸರ್ವ ಪಕ್ಷಗಳ ಪರವಾಗಿ ಮೊನ್ನಿನ ರೌಂಡ್ ಟೇಬಲ್ ಪರಿಷತ್ತಿನ ಪ್ರತಿನಿಧಿಗಳು ಮಾತನಾಡಲೂ ಕೆಲಸವನ್ನು ನಡೆಸಲೂ ಅಸಮರ್ಥರಿರುವರೆಂದು ನಾವು ಅಭಿಪ್ರಾಯಗೊಂಡುದರಿಂದ ಆ ಪರಿಷದದಲ್ಲಿ ನಾವು ಭಾಗವಹಿಸಲಿಲ್ಲ

> ## ಸ್ವರ್ಗಸ್ಥರಾದರು!
>
> ### ಶ್ರೀಮಾನ್ ಆರ್. ತಾತಾಚಾರ್ಯ,
>
> ಎಮ್ ಎ ಎಲ್ ಟಿ.ಯವರು
>
> ನಿಮೋನಿಯಾ ಜ್ವರದ ಕಠೋರಗ್ರಾಸಕ್ಕೆ ತುತ್ತಾಗಿ ಶ್ರೀಮಾನ್ ತಾತಾಚಾರ್ಯರವರು ಇದೇ ಕಳೆದ ತಾ ೨೬-೧೨-೧೯೩೦ನೇ ಶುಕ್ರವಾರ ಬೆಳಿಗ್ಗೆ ೯ ಘಂಟೆಗೆ ಮದ್ರಾಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಲು ಅತ್ಯಂತ ವಿಷಾದವಾಗುತ್ತಿದೆ
>
> ದಿವಂಗತರು ಬಹುಭಾಷಾವಿಶಾರದರಾಗಿದ್ದು ದೇಶದೇಶಗಳ ಜನಾದರಕ್ಕೆ ಪಾತ್ರರಾಗುವಂತೆ ವಿದ್ಯಾ ಸಾಮ್ರಾಜ್ಯದಲ್ಲಿಯೂ, ಸಾಹಿತ್ಯ ಕ್ಷೇತ್ರದಲ್ಲಿಯೂ ಹೆಚ್ಚಿನ ಪರಿಶ್ರಮದಿಂದ ಕೆಲಸಮಾಡಿರುವುದು ಸರ್ವರಿಗೂ ತಿಳಿದ ವಿಷಯವಾಗಿದೆ ವಿದ್ಯಾಧಿಕಾರಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಂಗಳೂರಿನಲ್ಲಿಯೂ ಈ ಕರ್ಣಾಟಕ ಬಂಧುವರ್ಯರು ಯಶಸ್ವಿಗಳಾಗಿದ್ದುದೇ ಇದಕ್ಕೆ ತಕ್ಕ ನಿದರ್ಶನವಾಗಿದೆ.
>
> ಶ್ರೀಯುತರು ಸಮರ್ಥ ವಿಮರ್ಶಕರು, ಶ್ರೇಷ್ಠ ಕವಿಗಳು, ಬಹಳ ರಸಿಕರು, ಹೆಚ್ಚೇಕೆ? ನಮ್ಮೆಲ್ಲರ ಪ್ರೀತಿಗೆ ಪಾತ್ರರಾದ ಚಿರಸ್ಮರಣೀಯ ಭಾಷಾ ಬಂಧುಗಳಲ್ಲೊಬ್ಬರು! ಇಂತಹ ಸನ್ಮಾನ್ಯ ಪುತ್ರವರ್ಯರನ್ನು ಅಕಾಲದಲ್ಲಿ ಕಳೆದುಕೊಂಡ ಕರ್ಣಾಟಕ ಮಾತೆಯ ದುಃಖವು ಅಪಾರವಾದುದು' ಕಾಲಗತಿಯಂತಾಯಿತು!! ಮತ್ತೇನು ಹೇಳಲಿ?
>
> ದಿವಂಗತರ ಆತ್ಮಕ್ಕೆ ಶಾಂತಿಯಿರಲಿ! ಇವರ ನಿಧನಕ್ಕಾಗಿ ಶೋಕಿಸುವ ಸುಹೃದಯ ಕರ್ಣಾಟಕ ಬಂಧುಗಳೊಡನೆ ನಮ್ಮ ಸಹಾನುಭೂತಿಯಿರಲಿ! ಭಗವಂತನ ಇಚ್ಛೆಯಂತಾಗಲಿ!
>
> **ಶಾಂತಿಃ ಶಾಂತಿಃ ಶಾಂತಿಃ**
>
> ಮಂಗಳೂರು ೪-೧-೩೧
>
> **ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ**

**ಬಹು ಬಲಯುತವಾದ ರಾಷ್ಟ್ರ ಸಭೆಯ ಮುಂದಾಳುಗಳಾದ ನೂರಲ್ಲ, ಸಾವಿರಗಟ್ಟಳೆ ಜನರು ಸೆರೆಯ ಕತ್ತಲೆಯನ್ನು ಸೇರಿಕೊಂಡುದರಿಂದ ಆ ಪರಿಷತ್ತಿನಲ್ಲಿ ಅದು ಭಾಗವಹಿಸಲು ಅಸಾಧ್ಯವಾಯಿತು ಈ ಪ್ರಾತಿನಿಧಿಕ ಮಹಾಸಭೆಯ ಸಮ್ಮತಿ ವಿನಹಾ ಯಾವ ಕಾಲಕ್ಕೂ ಎಂತಹ ಇತ್ಯರ್ಥವನ್ನೂ ಮಾಡಲು ಸಾಧ್ಯವಿಲ್ಲವೆಂದು ನಮ್ಮ ನಿಸ್ಸಂಶಯ ಭರವಸೆಯಾಗಿದೆ**

ಆದುದರಿಂದ ಸರಕಾರವು ತನ್ನ ಕೊನೆಯ ರಾಜ್ಯ ರಚನಾ ಧೋರಣೆಗಳನ್ನು ಮುದ್ರಿಸುವ ಮೊದಲು ಸೆರೆಯ ಬಾಗಿಲುಗಳನ್ನು ತೆರೆದಿಟ್ಟು, ರಾಜ್ಯ ಸಂಘಟನಾ ಕಾರ್ಯದಲ್ಲಿ ಮಹಾತ್ಮಾ ಗಾಂಧಿಯವರ ಸಹಕಾರವನ್ನು ಸ್ವೀಕರಿಸುವಂತಾಗಲಿ.

ನಮ್ಮ ಅಭಿಪ್ರಾಯವು ನಿಶ್ಚಲವಾಗಿದೆ ಭಾರತವು ಸ್ವಾಭಿಮಾನ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿರುವ ಈ ವೇಳೆಯಲ್ಲಿ ಅದಕ್ಕೆ ನಮ್ಮ ಸಂಪೂರ್ಣ ಸಹಾಯವನ್ನು ಕೊಡಬೇಕೆಂದು ನಾವು ಪ್ರತಿಜ್ಞೆ ಮಾಡಿದ್ದೇವೆ ಇದು ನಮ್ಮ ಸೂತ್ರ. ಹೊಸ ರಾಜ್ಯ ಕ್ರಮವನ್ನು ಸ್ಥಾಪಿಸುವಾಗ ಪರಸ್ಪರ ಅನ್ಯೋನ್ಯತೆಯು ಇಲ್ಲದಿರುವುದಾದರೆ ಹಿಂದೂದೇಶಕ್ಕಾಗಲೀ, ಬ್ರಿಟನಿಗಾಗಲೀ ಇರುವ ಯಾವ ವಿಧದ ಸಂರಕ್ಷಣೆ ಭದ್ರತೆಗಳು ನಿಷ್ಪ್ರಯೋಜಕವೆಂದು ನಾವು ಅಭಿಪ್ರಾಯಗೊಳ್ಳುವೆವು. ಸಮಾನಸ್ಕಂಧರೊಳಗೆ ಮಾತ್ರ ಸೌಹಾರ್ದವೂ ಗೌರವವೂ ಸಾಧ್ಯವಿದೆ. ಆದುದರಿಂದ ೧೯೩೧ರಲ್ಲಿ ಮಹಾತ್ಮಾಗಾಂಧಿಯವರೂ, ಶ್ರೀ ಜೋಶಿಯವರೂ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಕುಳಿತು ವೈಸರಾಯರು ನವೀನ ರಾಜ್ಯರಚನೆಯ ಸೂತ್ರಗಳನ್ನೇರ್ಪಡಿಸುವಾಗ ಸಹಕಾರವನ್ನೀಯುವಂತಾಗಲಿ. ಆದರಿಂದಾಗಿ ಹಿಂದೀಯರು ತಮ್ಮ ಸ್ವಂತ ವ್ಯವಹಾರಗಳ ಅಧಿಕಾರವನ್ನು ಹೊಂದುವಂತಾಗಲಿ, 'ಸ್ಟೇಟ್ಯೂಟ್ ಒಫ್ ವೆಸ್ಟ್ ಮಿನಿಸ್ಟರ್'ನಲ್ಲಿ ನಮೂದಿಸಲ್ಪಟ್ಟಿರುವ, ಹಕ್ಕುಬಾಧ್ಯತೆ, ಕರ್ತವ್ಯ ದೊರೆಯಲಿ ಹಿಂದೂದೇಶವು ಬ್ರಿಟಿಷ ಕೋಮನ್‌ವೆಲ್ತಿನೊಡನೆ ಸಮ ಹಕ್ಕು ಬದ್ಧವಾಗಿದ್ದು ಅದರೊಳಗಿರುವ ಮಿಕ್ಕ ಎಲ್ಲಾ ಜನಾಂಗಗಳಂತೆ ಹಕ್ಕುಳ್ಳಂತಾಗಲಿ ಬ್ರಿಟಿಷ್ ರಾಷ್ಟ್ರದ ಪರವಾಗಿ ಹಿಂದೀಯರಿಗೆ ಪದೇ ಪದೇ ಕೊಟ್ಟ ವಾಗ್ದಾನದ ಸತ್ಯತೆಯು ಒಡಮೂಡಿ ಬರಲಿ" ಎಂದು ಲೇಖಿಸಿರುವರು

ಲಂಡನಿನ ಲೇಬರ್ ಪಾರ್ಟಿಯವರು ಭಾರತದ ಹಿತೈಷಿಗಳು ರೌಂಡ್ ಟೇಬಲ್ ಪರಿಷತ್ತಿಗೆ ಮಹಾತ್ಮಾಜೀಯವರನ್ನು ಆಮಂತ್ರಿಸದಿದ್ದುದರಿಂದಲೂ, ದಬ್ಬಾಳಿಕೆಯ ಸೂತ್ರವನ್ನು ಹೊರಗೆಡಹದುದರಿಂದಲೂ ಈ ಪಕ್ಷವು ಒಹಳ ಜಿಗುಪ್ಸೆಗೊಂಡಿತು ಪರಿಷತ್ತಿನಲ್ಲಿ ತನ್ನ ಸಹಕಾರವಿಲ್ಲವೆಂದೇ ನಿರ್ಧರಿಸಲಾಯಿತು ಲೆನ್ಸ್‌ಬರಿಯವರಂತಹ ಈ ಅರಿಕಗಳು ಇಷ್ಟು ಕಾಲದಿಂದಲೂ ಬ್ರಿಟಿಷ ಮಂತ್ರಿಮಂಡಲದವರಿಗೆ ಅನೇಕರಿಂದ ಸಲ್ಲುತ್ತಲೇ ಇದೆ ಆದರೂ ಯಾವ ಒಗೆಯ ಸೌಹಾರ್ದವೂ ಆ ಕಡೆಯಿಂದ ಒಂದಂತೆ ಕಾಣುತ್ತಿಲ್ಲ

ಸಪ್ರೂಗಳವರ ಹೇಳಿಕೆಯ ಆಧಾರದ ಮೇಲೆ ೧೯೩೧ರಲ್ಲಿ ನವೀನ ರಾಜ್ಯಭಾರ ಕ್ರಮವು ಬ್ರಿಟಿಷ ಸರಕಾರದ ಕೈಯಲ್ಲಿ ಬರುವುದು ಆ ಮೇಲೆ ಅದನ್ನು ಪಾರ್ಲಿಮೆಂಟು ಶಿಫಾರಸು ಮಾಡಿ India Reform Bill ಎಂಬ ಹೊಸ ಶಾಸನ ಕ್ರಮವು ಜಾರಿಗೆ ಬರುವುದು ಈ ಬಿಲ್ ಪ್ರಕಾರ ವೈಸರಾಯರಿಗೆ ಸರ್ವ ಹಕ್ಕುಗಳು ಕೊಡಲ್ಪಡುವುವು. ಅರ್ಥ, ಶಸ್ತ್ರ, ಸೈನ್ಯ ಬಾಹ್ಯವ್ಯವಹಾರ, ಮೊದಲಾದ ಎಲ್ಲಾ ವ್ಯವಹಾರ ಅಧಿಕಾರವೂ ಅವರ ಮೇಲೆ ಹೊಂದಿಕೊಳ್ಳುವಂತೆ ಮಾಡಲಾಗುವುದು ವೈಸರಾಯರನ್ನು ಮಾರ್ಗದರ್ಶಿತ್ವದ ಸಲುವಾಗಿ ನ್ಯಾಯ ವಿಧಾಯಕ ಸಭೆಯು ಸಹ ಕಾನೂನುಗಳನ್ನೊಳಗೊಂಡಿರುವುದು ನ್ಯಾಯ ವಿಧಾಯಕ ಸಭೆಯ ಮಿನಿಸ್ಟರರೂ ವೈಸರಾಯರೂ ಭಾರತದ ರಾಜ್ಯಾಡಳಿತವನ್ನು ಮಾಡಬೇಕಾಗುವುದು ಬ್ರಿಟಿಷ ಸರಕಾರಕ್ಕೆ ಈ ರಾಜ್ಯಾಡಳಿತದಲ್ಲಿ ಮೇಲ್ಮೈ ಇಲ್ಲದಿದ್ದರೂ, ಅದು ತನ್ನ ಸ್ವಂತ ಭದ್ರತೆಗಳ ಮಟ್ಟಿಗೆ ಅಧಿಕಾರವನ್ನು ತೋರ್ಪಡಿಸುವುದು. ಸೈನ್ಯದಲ್ಲಿ ಹಿಂದೀಯರನ್ನು ಹೆಚ್ಚಿಸುವಂತಾಗುವುದು ಸೈನ್ಯ ವೆಚ್ಚವನ್ನು ಕಡಿಮೆ ಮಾಡಲಾಗುವುದು

ಈ ರೀತಿಯ ರಾಜ್ಯಾಂಗರಚನೆಯು ಕಾರ್ಯತಃ ಶುದ್ಧ ರೀತಿಯಿಂದ ಹೊರಬಂದರೆ ಹಿಂದೂದೇಶಕ್ಕೆ ಸ್ವರಾಜ್ಯವು ಲಭ್ಯವಾಯಿತೆಂದೇ ಹೇಳಬಹುದು ಆದರೆ ಬ್ರಿಟಿಷರು ಹಿಂದೂದೇಶದಲ್ಲಿನ ವ್ಯವಹಾರಗಳಲ್ಲಿ ರೇವಣಾತಿಯಾಗಿಟ್ಟ ಹೇರಳ ದ್ರವ್ಯದ ಬಗ್ಗೆ ಹೆಣಗಾಡುವ ಸಲುವಾಗಿ ಭದ್ರತೆಯೆಂಬುದನ್ನು ಕೇಳಿಕೊಂಡಿರುವುದರಿಂದ ಅವರ ಈ ಭದ್ರತೆಯ ರಕ್ಷಣೆಯಿಂದ ಏನೆಲ್ಲ ಆಂದೋಲನವು ನಡೆಯಲಿದೆಯೋ ತಿಳಿಯಲಾಗದು. ಬ್ರಿಟಿಷ ಸರಕಾರದ ಕೈಯು ಇಂಡಿಯಾ ಸರಕಾರದಿಂದ ದೂರವಾದೊಡನೆ ಕೊಂಗ್ರೆಸ್ ಪಕ್ಷವು ಪ್ರಬಲವಾಗಿ, ಕೌನ್ಸಿಲು ಮಂತ್ರಿ ಮಂಡಲಗಳಲ್ಲಿ ಕೊಂಗ್ರೆಸ್‌ವಾಲರು ತುಂಬಿಕೊಳ್ಳುವರೆಂದು ಎಲ್ಲಾ ಮುತ್ಸದಿಗಳ ಮತವಿರುತ್ತದೆ. ಈ ರೀತಿಯ ಸಂಶಯವಿದ್ದುದರಿಂದಲೇ ಕೊಂಗ್ರೆಸ್ಸಿನ ಆದೊಂದು ಅನಿವಾರ್ಯ ಭಯವು ಬ್ರಿಟಿಷರಿಗಿದ್ದುದರಿಂದಲೇ ಹಿಂದೂದೇಶಕ್ಕೆ ಯಾವ ಸುಧಾರಣೆಯೂ ಲಭಿಸುತ್ತಿಲ್ಲ

---

ನಾನು ನನ್ನ ಪ್ರಕೃತಿಯನ್ನು ಕಳೆದುಕೊಂಡೆ. ನಾನು ನನ್ನ ಮಾರ್ಗವನ್ನು ಮರೆತೆ. ಪ್ರಾಪಂಚಿಕ ಮೃಷಹಾರದಿಂದಾಗಿ ನಾನು ದೇವರನ್ನು ಮರೆತೆ. ಅನಿಶ್ಚಯ ಪಾಪ ತರಿಯು ನನ್ನನ್ನು ಕೊಚ್ಚಿಕೊಂಡಿತು. ಅದರೆ ನನಗೆ ವಿಶ್ವಾಸದ ದೋಣಿಯು ದೊರೆಕೊಡದೆ ನಾನು ಬದುಕಿದೆ—

ತುಕಾರಾಮ.

# ಆರ್ಥಿಕ ಸಂಕಷ್ಟ! ಮಕ್ಕಳ ಮಾರಾಟ

ಇವಳು ಬಂಜೆಯೇ? ಸರಕಾರಕ್ಕೆ ಶ್ರೀಮಂತಿಕೆಯಿದ್ದರೆ? ಬೆರಳಿಲ್ಲದ ತರುಣಿ. ಆಕಾಶ ಬಾಣದೊಡನೆ ಅಂತರಿಕ್ಷವನ್ನು ಮುಟ್ಟುವ ಯೋಜನೆ. ನಾಲ್ಕು ರೆಕ್ಕೆಗಳ ಪಕ್ಷಿ. ನಮ್ಮ ಬಾಂಧವರು (?) ನಮ್ಮ ಭಂಗಾರದ ಪರಲೋಕ ಯಾತ್ರೆ. ಭಂಗಾರ ನುಂಗುವ ಕಳ್ಳ. ವಿಚಿತ್ರ ಸೃಷ್ಟಿ. ರಾಷ್ಟ್ರಾಭಿಮಾನದ ಚಿಹ್ನೆ. ಪೆರಿಸ್ ಗೂಬೆ. ಹತ್ತು ತಿಂಗಳ ಘೋರ ನಿದ್ರೆ. ಬ್ರಿಟನಿನ ದುರದೃಷ್ಟ!

ಯಾತನ ನಾಲಿಗೆಯು ಸವುರೀತಿಯಿಂದುಪಯೋಗಿಸಲ್ಪಡುವುದಿಲ್ಲವೋ ಅವನ ಹೃದಯದಲ್ಲಿ ಸತ್ಯದ ವಾಸನೆಯಿಲ್ಲ. ಅವನಿಂದ ದೂರಿರು! ಜೀವನ ಪಥದಲ್ಲಿ ಅವನು ನಿನ್ನನ್ನು ವಧಿಸುವನು.

ಕಬೀರದಾಸ್.

## ಆರ್ಥಿಕ ಸಂಕಷ್ಟ! ಮಕ್ಕಳ ಮಾರಾಟ

ರಜಪುತಾನದಲ್ಲಿ ಜನರು ಆರ್ಥಿಕ ಸಂಕಷ್ಟದಿಂದ ಕಂಗೆಟ್ಟಿರುವರು ಎಲ್ಲರಿಗಿಂತಲೂ, ಬೇಸಾಯಗಾರರು ಬಹಳವಾಗಿ ಕಂಗಾಲಾಗಿರುವರೆಂದೂ ರೂಪಾಯಿ ೧೫ ಅಥವಾ ೨೦ಕ್ಕೆ ತಮ್ಮ ಮಕ್ಕಳುಮರಿಗಳನ್ನೂ ಕೂಡ ಕೆಲವರು ಮಾರಿರುವರೆಂದೂ ತಿಳಿದುಬರುತ್ತದೆ. ಅಲ್ಲಿಯ 'ಸ್ವರಾಜ್ಯ'ವೆಂಬ ಪತ್ರಿಕೆಯು ಮಕ್ಕಳನ್ನು ಮಾರಿದರವರ ಹೆಸರು ವಿಳಾಸಗಳನ್ನೂ ಪ್ರಕಟಿಸಿರುತ್ತದೆ

## ಇವಳು ಬಂಜೆಯೇ?

ಲಕ್ನೋವಿನಲ್ಲಿ ಒಬ್ಬಳು ಸ್ತ್ರೀಯು ನಾಲ್ಕು ವರ್ಷದ ಒಂದು ಮಗುವನ್ನು ಎಬ್ಬಿಸಿಕೊಂಡು ಒಂದು ವನವನ್ನು ಸೇರಿ ಅದರ ಕೈಗಳಲ್ಲಿದ್ದ ಕೆಲವು ರೂಪಾಯಿಗಳ ಬೆಳ್ಳಿಯ ನಗಗಳಿಗಾಗಿ ಅದರ ಎರಡು ಕೈಗಳನ್ನೂ ಕತ್ತಿಯಿಂದ ಕಡಿದಿರುವಳು "ಮಕ್ಕಳಿಗೆ ಭಂಗಾರವನ್ನಿಡಿಸುವುದರಿಂದಾಗಿ ವರ್ಷಂಪ್ರತಿ ನೂರಾರು ಮಕ್ಕಳು ಸಾಯುತ್ತಿವೆ" ಎಂದು ಹೇಳುತ್ತಾ ಸೆಶನ್ಸ್ ಜಡ್ಜರು ಅವಳಿಗೆ ಏಳು ವರ್ಷಗಳ ಕಠಿಣ ಶಿಕ್ಷೆಯನ್ನಿತ್ತರು

## ಸರಕಾರಕ್ಕೆ ಶ್ರೀಮಂತಿಕೆಯಿದ್ದರೆ—?

ಭವಾನಿಪುರದಲ್ಲಿ ಕೆಲವು ಸಿ. ಐ. ಡಿ ಗಳ ವಾಸಕ್ಕಾಗಿ ಸರಕಾರವು ಅವರಿಗೆ ತಿಂಗಳಿಗೆ ೪೫೦ ರೂಪಾಯಿ ಬಾಡಿಗೆಯ ಮೂರು ಮಾಳಿಗೆಯ ಮನೆಯನ್ನೊದಗಿಸಿ ಕೊಡಬೇಕಾಗಿ ಆಲೋಚನೆಯಾಗಿದೆಯೆಂದು 'ಎಡ್ವಾನ್ಸ್' ಪತ್ರಿಕೆಯು ಹೇಳುತ್ತದೆ ಬಾಡಿಯಲ್ಲಿ ಮಾತ್ರ ಕಾಸಿಲ್ಲ ಕಾರ್ಯದಲ್ಲಿ ಕಂಡಾಬಟ್ಟೆ?

## ಬೆರಳಿಲ್ಲದ ತರುಣಿ

ಲಂಡನಿನ ಬರ್ಮೊಂಡ್ಸಿ ಎಂಬಲ್ಲಿ ಹದಿನೇಳು ವರ್ಷ ಪ್ರಾಯದ ಒಬ್ಬಳು ತರುಣಿ, ಹುಟ್ಟುವಾಗಲೇ ಇವಳಿಗೆ ಎರಡು ಕೈಗಳಲ್ಲೂ ಬೆರಳುಗಳಿಲ್ಲ. ಹೆಬ್ಬೆಟ್ಟು ಕೂಡ ಇಲ್ಲ ಬರೇ ಅಂಗೈ ಮಾತ್ರ! ಹಾಗೆಂದು ಶಾಲೆಯಲ್ಲಿ ಇವಳು ಅತ್ಯಂತ ನಿಪುಣೆ; ಹೆಣೆಯುತ್ತಾಳೆ, ಹೊಲಿಯುತ್ತಾಳೆ, ಬಾರಿಸುತ್ತಾಳೆ, ವೇಗವಾಗಿ ಬರೆಯುತ್ತಾಳೆ ಸಲಕರಣೆಗಳನ್ನು ಎರಡು ಅಂಗೈಗಳ ಮಧ್ಯೆ ಹಿಡಿದೇ ಇವಳ ಕೆಲಸ ಇವಳ ಹೆಸರು ಮಿಸ್ ಕೇಂರವೆಟ್ ಎಂದು. ಇವಳ ಸಾಧನೆ ಮತ್ತು ಕಲಾನೈಪುಣ್ಯಕ್ಕಾಗಿ ಕೌಂಟಿ ಕೌನ್ಸಿಲಿನವರು ಒಂದು ವಿದ್ಯಾವೇತನವನ್ನಿತ್ತಿರುವರು.

## ಆಕಾಶ ಬಾಣವೊಡನೆ ಅಂತರಿಕ್ಷವನ್ನು ಮುಟ್ಟುವ ಯೋಜನೆ!

ಬರ್ಲಿನ್‌ನಲ್ಲಿ ಹರ್‌ನೆಟಿಲ್ ಎಂಬೊಬ್ಬ ವಿದ್ಯಾರ್ಥಿಯು ಒಂದು ದೊಡ್ಡ ಆಕಾಶ ಬಾಣವನ್ನು ರಚಿಸಿ, ಅದನ್ನು ಹೊಂದಿಕೊಂಡು ಕುಳಿತು ಬೆಂಕಿಕೊಟ್ಟು ಅದನ್ನು ಅಂತರಿಕ್ಷಕ್ಕೆ ಸರ‍್ರನೆ ಹಾರಿಸಿ ಕೆಲವು ನಿಮಿಷಗಳೊಳಗೇನೆ ೩೦೦೦ ಅಡಿಗಳಷ್ಟು ಎತ್ತರಕ್ಕೆ ಮುಟ್ಟಿ, ಅಲ್ಲಿ ಆಕಾಶ ಬಾಣದಲ್ಲಿನ ಮದ್ದುಗಳು ಮುಗಿದೊಡನೆ ಗಾಳಿ ಚೀಲದ ಮೂಲಕ ಹಾರ್ದ್ಯಾಥಿ, ಒಂದು ತೋಟೆಯನ್ನು ಮಾಡಲೆಳಸಿರುವನು ಸರಕಾರದಿಂದ ೫೦೦ ಪೌಂಡುಗಳನ್ನೂ ಅದರ ಸಹಾಯವನ್ನೂ ಪಡೆದಿರುವನು

## ನಾಲ್ಕು ರೆಕ್ಕೆಗಳ ಪಕ್ಷಿ.

ನ್ಯೂಯೋರ್ಕಿನ ನ್ಯೂಹೆಚ್ಚಿ ಎಂಬಲ್ಲಿ ಒಬ್ಬ ಕೃಷೀವಲನಲ್ಲಿ ನಾಲ್ಕು ರೆಕ್ಕೆಗಳ ಒಂದು ವಿಚಿತ್ರ ಪಕ್ಷಿ ಇರುತ್ತದೆ ಅದು ಹಾರಾಡುವಾಗ ಒಂದು ವಿಮಾನವು ಹಾರಿದಂತೆಯೇ ಕಾಣುತ್ತದೆ, ಅದರ ರೂಪವೆಲ್ಲಾ ಟರ್ಕಿಯಂತೆಯೇ ಇದೆ.

## ನಮ್ಮ ಬಾಂಧವರು (?)

ಮಹಾತ್ಮಾಜೀಯವರನ್ನು ಸನಾತನ ಧರ್ಮೀಯರ ಕೆಲವು ಪ್ರತಿನಿಧಿಗಳು ಸೆರೆಯೊಳಗೆ ಸಂದರ್ಶಿಸಿದರು. ಮಹಾತ್ಮರ ಆರೋಗ್ಯವು ಮೊದಲೇ ಕೆಟ್ಟಿರುತ್ತದೆ. ಅದರೂ ಅದನ್ನು ಗಣಿಸದೆ ಈ ಸನಾತನಿಗಳು ಗಾಂಧೀಜೀಯವರನ್ನು ಬಹಳವಾಗಿ ತರ್ಕಿಸಿದರು ಅವರು ದಣಿಯುವಂತೆ ಮಾಡಿದರು, ಗಾಂಧೀಜೀಯವರು ಎಷ್ಟೆಷ್ಟು ನ್ಯಾಯಪರವಾದವನ್ನು ಮುಂದಿಟ್ಟರೂ ಈ ಸನಾತನ ಬಾಂಧವರು ಬಗ್ಗಲಿಲ್ಲವೆಂದೂ ತಿಳಿದುಬರುತ್ತದೆ ಗಾಂಧೀಜೀಯವರ ತತ್ವಬೋಧೆಗೂ ತಲೆಬಗ್ಗಿಸಲಾರದ ಸ— ನಾತ — ನಿಗಳು ನಮ್ಮ ಬಾಂಧವರು.

## ಜನ್ಮನಿಗ್ರಹದ ಬಗ್ಗೆ ಸ್ತ್ರೀಯರ ಠರಾವು.

ಲಕ್ನೋವಿನಲ್ಲಿ ಅಖಿಲ ಭಾರತೀಯ ಮಹಿಳೆಯರ ಪರಿಷದವು ೩೧ನೇ ದಿನ ಜರಗಿತು ಡಾ: ಮುತ್ತು ಲಕ್ಷ್ಮೀ ರೆಡ್ಡಿಯವರೇ ಮೊದಲಾದವರು ದೇಶದ ಬಡತನದ ದೃಷ್ಟಿಯಿಂದ ಸ್ತ್ರೀಯರು ಜನ್ಮನಿಗ್ರಹ (Birth control) ಕ್ರಮವನ್ನನುಸರಿಸುವುದು ವಿಹಿತವೆಂದು ಅಭಿಪ್ರಾಯಪಟ್ಟರು

## ನಮ್ಮ ಭಂಗಾರದ ಪರಲೋಕ ಯಾತ್ರೆ!

ಬ್ರಿಟನು ಗೋಲ್ಡ್ ಸ್ಟೆಂಡಾರ್ಡನ್ನು ಬಿಟ್ಟ ನಂತರ ನಮ್ಮ ದೇಶದಿಂದ ಅಲ್ಲಿಗೆ ರೂ ೧,೦೫,೨೭,೫೦,೧೯೦ರಷ್ಟು ಚಿನ್ನವು ಹೋಯಿತು ೩೧ನೇ ದಶಂಬರದ ಒಂದು ವಾರದಲ್ಲಿ ೧೯,೩೪೫,೧೩೨ ರೂಪಾಯಿಯ ಭಂಗಾರವು ಅತ್ತ ತೆರಳಿತು. ನಮ್ಮವರು ಭಂಗಾರವನ್ನು ಮಾರುವ ಹುಚ್ಚನ್ನು ಇನ್ನೂ ಬಿಟ್ಟುಕೊಂಡಿರುವರು

## ಭಂಗಾರ ನುಂಗುವ ಕಳ್ಳ

ಹೊಟ್ಟೆಯೆಂಬುದು ಏನನ್ನೆಲ್ಲ ಮಾಡಿಸುವುದಿಲ್ಲ? ಕಲ್ಕತ್ತದ ಬಾರಾ ಬಜಾರಿನಲ್ಲಿ ವ್ಯಾಪಾರ ಮಾಡುವ ಒಬ್ಬ ಅಕ್ಕಸಾಲಿಗನಲ್ಲಿಗೆ ಒಬ್ಬ ಮುಸಲ್ಮಾನ ತರುಣನು ಹೋಗಿ ಪವನಿಗೆ ಬೆಲೆ ಮಾಡಿದ ಒಂದೆರಡು ಪವನುಗಳನ್ನು ಕೈಯಲ್ಲಿ ಹಿಡಿದಂತೆ ಮಾಡಿ ಅಂಗಡಿಗಾರನು ಕೆಳಗೆ ನೋಡಿದೊಡನೆ —ನುಂಗಿ ಬಿಟ್ಟ— ಕೆಳಗೆ ಬಿತ್ತು ಎಂದು ಹುಡುಕಾಡಿದ ಅಂಗಡಿಯವನಿಗೆ ಗುಟ್ಟು ತಿಳಿಯಿತು. ಪೋಲೀಸರು ಮುಸಲ್ಮಾನನ್ನು ಹಿಡಿದು ಗುದ್ದು ಕೊಟ್ಟರು, ಒಪ್ಪಿದ ಮೂರು ತಿಂಗಳ ಕಠಿಣ ಸಜೆ

## ವಿಚಿತ್ರ ಸೃಷ್ಟಿ

ಕಳೆದ ವಾರ ಲಂಡನಿನಲ್ಲಿ ಮಧ್ಯಾಹ್ನ ವೇಳೆ ಆಕಾಶದಲ್ಲಿ ಮೂರು ಸೂರ್ಯ ಬಿಂಬಗಳು ಕಂಡುಬಂದುವು ಜಿನೇವಾದಲ್ಲಿ ಅಂತರಿಕ್ಷದಿಂದ ಮಣ್ಣು ಸುರಿಯಿತು. ಸಿಲ್ವೆಸ್ಟರ್‌ನಲ್ಲಿ ಬೂದಿ ಬಣ್ಣ ಮಿಶ್ರಿತವಾದ ಮಳೆಯು ಧಾರಾಕಾರವಾಗಿ ಸುರಿಯಿತು ಸಮ್ಮರ್ ಸೆಟ್‌ನಲ್ಲಿ ಏಳು ಕಾಮನ ಬಿಲ್ಲುಗಳು ಒಂದರ ಮೇಲೊಂದು ನಿಂತು ಗಗನ ಮಂಡಲವನ್ನು ಶೋಭಿಸಿದುವು. ಅದರೊಡನೆ ಬಿರುಗಾಳಿಯೂ ಸೂರ್ಯ ಪ್ರಕಾಶವೂ ಎದ್ದುವು. ಖಾರ್ ಟೂಂ ಎಂಬಲ್ಲಿ ೪೦೦೦ ಅಡಿಗಳ ಮೇಲೆ ಹಾರಾಡುತ್ತಿದ್ದ ಒಂದು ವಿಮಾನದೆದುರು ಒಂದು ಮಹಾ ಗೋಡೆಯು ಹಾರಿ ಬಂದಂತೆ ಕಂಡು ಬಂತು ವೈಮಾನಿಕನು ದಿಗಿಲು ಬಿದ್ದು ನೋಡಲು, ಅದು ಪಟ್ಟ ಧೂಳಿನ ಪದರಾಗಿದ್ದಿತು

## ರಾಷ್ಟ್ರಾಭಿಮಾನದ ಚಿಹ್ನೆ!

ಮಂಚೂರಿಯಾದಲ್ಲಿ ಚೀನಾ-ಜಪಾನೀಯರಿಗೆ ಯುದ್ಧವಾಗುತ್ತಿದೆಯಷ್ಟೆ ಜಪಾನೀ ಸೈನಿಕರ ಸಹಾಯಾರ್ಥವಾಗಿ ಜಪಾನಿನಲ್ಲಿ ಒಂದು ಪಂಗಡ ಸಮಿತಿಯು ಹೊರಟಿದೆ ಅನೇಕರು ಅದಕ್ಕೆ ಹಣ ದಾನಮಾಡಿರುವರು. ಇವರೊಡನೆ ಒಸಕಾದಲ್ಲಿನ ಮನೆಗೆಲಸದ ತರುಣಿಯೊಬ್ಬಳು ಒಂದು 'ಕ್ರೌನ್' ನಾಣ್ಯವನ್ನು ಆ ಪಂಗಡ ಸಮಿತಿಗೆ ದಾನಮಾಡಿ ಅದರೊಡನೆ ಒಂದು ಪತ್ರವನ್ನು ತನ್ನ ರಕ್ತದಿಂದ ಬರೆದು, ತಾನು ಇಷ್ಟು ಸಣ್ಣ ಮೌಲ್ಯವನ್ನು ಕಳುಹಿಸಿದುದಕ್ಕಾಗಿ ಕ್ಷಮೆಕೊಡಬೇಕೆಂದು ಯಾಚಿಸಿರುವಳು

## ಪೆರಿಸ್ ಗೂಬೆ.

ಪೆರಿಸ್ ನಗರದಲ್ಲಿ ವಿವಾಹವಿಚ್ಛೇದ ವಿವಾಹಬಂಧಗಳಿಗೇನೂ ಕಡಿಮೆಯಿಲ್ಲವಷ್ಟೆ. ಅಲ್ಲಿಯ ಅರ್ಮಂಡ್ ಬೌದ್ರು ಎಂಬ ೩೦ ವರ್ಷ ಪ್ರಾಯದ ಮುದಿಯೊಬ್ಬನು ಮೂರು ವಿವಾಹಗಳನ್ನಾಗಿ ಮೂವರೂ ಹೆಂಡಂದಿಯರನ್ನು ತ್ಯಜಿಸಿರುವನು. ಈಗ ಪೋಲೀಸರು ಅವನನ್ನು ಕೋರ್ಟಿಗೆ ತಂದಿರುವರು. ಮೂವರು ಹೆಂಡಂದಿರೂ ಕೋರ್ಟಿನಲ್ಲಿ ಕೈಗಿಟ್ಟು ನಿಂತು "ನನ್ನ ಗಂಡ" ಎಂದೆನ್ನುತ್ತಿರುವರು.

## ಹತ್ತು ತಿಂಗಳ ಘೋರ ನಿದ್ರೆ.

ಚಿಕಾಗೋ ನಗರದಲ್ಲಿ ಒಬ್ಬ ಯುವತಿಯು ಅಸ್ವಸ್ಥದಿಂದ ನಿದ್ರಿತಳಾಗಿ ಮೊನ್ನೆಗೆ ಹತ್ತು ತಿಂಗಳಾದುವೆಂದು ತಿಳಿದುಬರುತ್ತದೆ. ಇಷ್ಟು ದಿನಗಳಲ್ಲಿ ಅವಳಿಗೆ ದ್ರಾವಕ ರೂಪದ ಆಹಾರವನ್ನು ಕೊಟ್ಟು ಪರಿಪಾಲಿಸಿದರು, ಈಗಲೂ ಹುಡುಗಿಯು ಎಚ್ಚರಂತೆ ಇಲ್ಲ ಅದೊಂದು ಬಗೆಯ ವಿಚಿತ್ರ ನಿದ್ರಾರೋಗ ಎಂದು ಘನ ವೈದ್ಯರ ಮತ ಕೆಲವು ದಿನಗಳಿಂದೀಚೆ ಎಚ್ಚರಗೊಳ್ಳುವ ಹಲಕೆಲವು ಚಿಹ್ನೆಗಳು ಕಾಣುತ್ತಿವೆಯಂತೆ ಆದರೂ ಅವಳು ಸಂಪೂರ್ಣವಾಗಿ ಎಂದು ಎದ್ದೇಳುವಳೆಂದು ಹೇಳಲು ವೈದ್ಯರು ಧೈರ್ಯಗೊಳ್ಳುವುದಿಲ್ಲ

## ಬ್ರಿಟನಿನ ದುರದೃಷ್ಟ

ಹಿಂದೂ ದೇಶದಲ್ಲಂತೂ ಬ್ರಿಟಿಷ್ ಸರಕುಗಳ ಮೇಲೆ ಗದೆಯೇ ಬಿದೆ ಅಯರ್ಲೆಂಡಿನಲ್ಲಿನ ರಿಪಬ್ಲಿಕನ್ ಆರ್ಮಿಯವರು ಬ್ರಿಟಿಷ್ ಬಹಿಷ್ಕಾರವನ್ನು ಸಾರ್ವತ್ರಿಕವಾಗಿ ಮಾಡುತ್ತಿರುವರು ಬ್ರಿಟಿಷ್ ಸ್ಪಿರಿಟ್, ಇಂಗ್ಲಿಷ್ ಪಾನೀಯ, ಕಟ್ಲರಿ ಸಾಮಾನುಗಳನ್ನು ಯಾವ ವರ್ತಕನೂ ಮಾರಕೂಡದೆಂದು ಅವರು ಸಾರುತ್ತಿರುವರು. ಒಂದು ಬ್ರಿಟಿಷ್ ಕಂಪೆನಿಯೊಳಗೆ ಕೆಲವರು ಹೊಕ್ಕು ಗಲಾಟೆ ಮಾಡಿ ಕೋರ್ಟಿಗೆಳೆತರಲ್ಪಟ್ಟು 'ಈಗ ನಮ್ಮೊಳಗೆ ಆರ್ಥಿಕ ಸಮರವಾಗುತ್ತಿದೆ. ನಮ್ಮ ರಾಷ್ಟ್ರವನ್ನು ರಕ್ಷಿಸುವುದು ನಮ್ಮ ಕರ್ತವ್ಯವೆಂದರು. ಕೆಲವು ಸ್ವಯಂಸೇವಕರು ಸತ್ಯಾಗ್ರಹದ ಅಭ್ಯಾಸಕ್ಕೂ ಕೈಹಾಕಿರುವರು!

## ೭.೪ + ೭.೨೧/೪.

ಹೇಂಬರ್ಗಿನಲ್ಲಿ ಒಂದು ವಿವಾಹ ವರ ೭ ಅಡಿ ೪ ಇಂಚು ಎತ್ತರ ವಧು ೭ ಅಡಿ ೨½ ಇಂಚು ಎತ್ತರ ವರನು ನಾಚಿಕೆಗೊಂಡಿದ್ದ ವಧುವು ಕಂಪಿಸುತ್ತಿದ್ದಳು ಅವರನ್ನು ನಡೆಸಿಕೊಂಡು ಮೂರು ಕುಳ್ಳ ದಂಪತಿಗಳು ಇಗರ್ಜಿಗೆ ಕರೆದೊಯ್ಯುತ್ತಿದ್ದರು. ಪ್ರೇಕ್ಷಕರ ಸಭೆಯನ್ನು ನಿರ್ಬಂಧಿಸುವುದಕ್ಕೆ ಪೋಲೀಸರು ಬಹಳವಾಗಿ ಹೆಣಗಾಡಬೇಕಾಯಿತು

---

## ಒಂದಾಣೆ ಮಾಲೆ'ಯ ಚಂದಾದಾರರಲ್ಲಿ

ಮಹಾಶಯರೇ,

ಈ ಸಾರೆ ಕೊಡಗಿನ ಮಡಿಕೇರಿಯಲ್ಲಿ ಜರಗಲಿರುವ ೧೮ನೇ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ಚಾಲಕರು ಹೋಗಿರುವುದರಿಂದ ನಮ್ಮ ಮಾಲೆಯ ೭ನೇ ಸಂಚಿಕೆಯನ್ನೂ ೮ನೇ ಸಂಚಿಕೆಯನ್ನೂ ಕೂಡಿಯೇ ಜನವರಿಯಲ್ಲಿ ವಿ. ಪಿ ಮಾಡುವೆವು ಕನ್ನಡಾಭಿಮಾನಿಗಳಾದ ತಾವು ದಯವಿಟ್ಟು ಸ್ವೀಕರಿಸಬೇಕಾಗಿ ಬಿನಹ

ಕಾರ್ಯದರ್ಶಿ,
ಕರ್ನಾಟಕ ಸಾಹಿತ್ಯ ಸೇವಾಮಂಡಲ,
(ಕುಂಟೆರ ಕಂಡ) ಬೆಳಗಾವಿ.

---


# "ಭಾರತಿ"

ಧಾರ್ಮಿಕ ಮತ್ತು ಲೋಕರಂಜಕವಾದ
ವಿಷಯಗಳನ್ನೊಳಗೊಂಡ

— ಕನ್ನಡ ಮಾಸಪತ್ರಿಕೆ

ವಾರ್ಷಿಕ ಚಂದಾ ಹಣ, ಅಂಚೆವೆಚ್ಚ ಸೇರಿ

ರೂ. 2-4-0 ಮಾತ್ರ.

ಚಂದಾದಾರರಾಗಲು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಮೆನೇಜರ್,
"ಭಾರತಿ" ಕಾರ್ಯಾಲಯ,
ಮುಲ್ಕಿ, ದ. ಕ.

ಪಿ. ಸ್ಕೂ. ಹಲವು ಕಡೆಗಳಲ್ಲಿ ಏಜಂಟರು ಬೇಕು. ಅಪೇಕ್ಷೆ ಇದ್ದವರು ಮೇಲಿನ ವಿಳಾಸಕ್ಕೆ ಬರೆಯುವುದು

ಗಾಂಧಾಶಕ ೧೮೬೧ನೇ ಇಸವಿಯ ಅಂಗೀರಸ ಸಂವತ್ಸರದ ಪುಷ್ಯ ಶು ೧೧ ಶನಿವಾರದಿಂದ ಅಂಗೀರಸ ಸಂವತ್ಸರದ ಪುಷ್ಯ ಶು ೧೭ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಸ್ಥಿತಿಯು ಧನು – ಪೆರಾರ್ದ).

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ದಿನಮಾನ | ಸೂರ್ಯ ಉ. | ಅಸ್ತ |
|---|---|---|---|---|---|---|---|---|
| 7 | ಶನಿ | ೧೧ | ೨೮।। | ಕೃತ್ತಿಕಾ | ೪೯ | ೨೪ | 6 57 | 6 17 |
| 8 | ರವಿ | ೧೨ | ೩೪। | ರೋಹಿಣೀ | ೫೩। | ೨೪ | 6.57 | 6.18 |
| 9 | ಸೋಮ | ೧೩ | ೪೦ | ಮೃಗಶಿರಾ | ೬೦ | ೨೫ | 6.57 | 6 18 |
| 10 | ಕುಜ | ೧೪ | ೪೪। | ಮೃಗಶಿರಾ | ೨। | ೨೩ | 6.58 | 6.19 |
| 11 | ಬುಧ | ○ | ೪೮ | ಆದ್ರಾ | ೬।। | ೨೬ | 6.58 | 6 19 |
| 12 | ಗುರು | ೧ | ೫೦। | ಪುನರ್ವಸು | ೯ ೩ | ೨೮ | 6. 8 | 6 20 |
| 13 | ಶುಕ್ರ | ೨ | ೨೨। | ಪುಷ್ಯ | ೫ । | ೨೯ | 6 58 | 6.20 |

## ಮುಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) Maximum ಅಧಿಕ ಕಾವು | | Minimum ಕಡಿಮೆ ಕಾವು | | Rainfall ಮಳೆ ದಿನದ ಮಳೆ | ಜುಮ್ಲಾ ಮಳೆ |
|---|---|---|---|---|---|---|
| 29 | 86— | 6 | 71— | 9 | — | — |
| 30 | 86— | 7 | 71— | 3 | 0— 4 | — |
| 31 | 85— | 6 | 72— | 1 | 0—11 | — |
| 1 | 87— | 3 | 70— | 2 | — | — |
| 2 | 90— | 3 | 72— | 2 | 0—33 | — |
| 3 | 88— | 6 | 66 | 4 | 0—30 | — |
| 4 | 89 — | 8 | 65 — | 4 | 0— 6 | 119-95 |

## ಮುಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ. ಅ. | ವರೆಗೆ ರೂ. ಅ. |
|---|---|---|
| ಹೊಸ ಮುಸ್ತಿ | 4— | 4—12 |
| ಹೊಸ ರಾಶಿ ಅಕ್ಕಿ | 3— 8 | 3 4 |
| ಮುಸ್ತ್ರಿ | 4—1. | — 4 |
| ಗುಡ್ಡ | 4 0 | 4— 4 |
| ಸುಗ್ಗಿ | 3— 0 | 4— 4 |
| ಊರೆ ಅದ್ದಲ್ ಬೆಲ್ಲಗೆ | 4—10 | 5— 4 |
| ರಂಗೂನು ಬೆಳ್ತಿಗೆ ಗೋಣಿ ಗೆಕ್ಕೆ | — 0 | 7— 4 |
| ಎಡಪ್ಪರು ಬೆಳ್ತಿಗೆ ಮುಡಿ ಗೆಕ್ಕೆ | 4— 8 | 4—10 |
| ಗೋಧಿ ಗೋಣಿ ಗೆಕ್ಕೆ | 10— 8 | 14— 8 |
| ತೊಗರಿ ಗೋಣಿ ಗೆಕ್ಕೆ | 9— 8 | 14— 0 |
| ಹುರುಳಿ ಗೋಣಿ ಗೆಕ್ಕೆ | 6— | 6 4 |
| ಕಡಲೆ ಗೋಣಿ ಗೆಕ್ಕೆ | 8— 8 | 11— 0 |
| ತೊಗರಿಬೇಳೆ ಗೋಣಿ ಗೆಕ್ಕೆ | 13— 8 | 21— 0 |
| ಉದ್ದು ಗೋಣಿಗೆಕ್ಕೆ | 10— 8 | 10 12 |
| ಹೆಸರು ಗೋಣಿ ಗೆಕ್ಕೆ | 10— 4 | 11— |
| ಊರುಬೆಲ್ಲ ಖಂಡಿ ಗೆಕ್ಕೆ | 31— 4 | 32 8 |
| ಉಪ್ಪು ಗೋಣಿ ಗೆಕ್ಕೆ | 5— 0 | 0— 4 |
| ಕೊಬ್ರಿ ಖಂಡಿ ಗೆಕ್ಕೆ | 66— | 72 |
| ಕೊತ್ತಂಬರಿ ಖಂಡಿ ಗೆಕ್ಕೆ | 33 — 8 | 34— |
| ಎಳ್ಳಿಂಡಿ ಖಂಡಿ ಗೆಕ್ಕೆ | 26— 4 | 2 — 8 |
| ತೆಂಗಿನ ಎಣ್ಣೆ ಮಣ ಗೆಕ್ಕೆ | 6— 2 | 6— 2 |
| ಎಳ್ಳೆಣ್ಣೆ ಮಣ ಗೆಕ್ಕೆ | 6—12 | 7— 0 |
| ಬಟುಕೆಣ್ಣೆ ಪೆಟ್ಟಿಗೆ ಗೆಕ್ಕೆ | 4— 7 | 8—14 |
| ಸೋರೆ ಸಕ್ಕರೆ ಮಣ ಗೆಕ್ಕೆ | 3—15 | 4— 0 |
| ಹೊಸ ಮೆಣಸು | 5— 0 | 5— 8 |
| ಸಾಸವೆ ಮುಡಿ ಗೆಕ್ಕೆ | 4—12 | 5— 0 |
| ಕೆಟಿಲ್ ಕಾಫಿ ಖಂಡಿ ಗೆಕ್ಕೆ | 275— 0 | 300— |
| ಜಾಯಿಕಾಯಿ ಖಂಡಿ ಗೆಕ್ಕೆ | 170— 0 | 180— |
| ಮೆಣಸು ಮಣ ಗೆಕ್ಕೆ | 27— 0 | 28— |
| ಗೇರುಬೀಜ ಮುಡಿ ಗೆಕ್ಕೆ | 4— 4 | 2 6 |
| ಶುಂಠಿ ಖಂಡಿ ಗೆಕ್ಕೆ | 20— 0 | 25— 8 |
| ಹೊಗೆಸೊಪ್ಪು ಕರಡು ಮಣ ಗೆಕ್ಕೆ | 10 0 | 10— 4 |
| ಹೊಗೆಸೊಪ್ಪು ಉತ್ತಮ ಮಣ ಗೆಕ್ಕೆ | 15— 0 | 16—0 |
| [illegible] ಗೆಕ್ಕೆ | 13— 8 | 13—12 |
| [illegible] ಮಣ ಗೆಕ್ಕೆ | 11— 0 | 11— 8 |
| ಜೀರಿಗೆ ಗೆಕ್ಕೆ | 19— | 19— 4 |
| ಮೆಂತೆ ಖಂಡಿ ಗೆಕ್ಕೆ | 40— | 45— |
| ಪ್ಲಾಂಟೇಶನ್ ಕಾಫಿ ಖಂಡಿ ಗೆಕ್ಕೆ | 320— | 325— |
| ಹಳೆ ಅಡಿಕೆ | 180— | 205— |
| ಹೊಸ ಅಡಿಕೆ | 140 | 145— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಬಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧।। ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವದು

**Secretary**,

*The Canara Public Conveyance Company Ltd Mangalore*

# Chikmagalur Public Conveyance Motor Service.

## CHIKMAGALUR

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಿಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಮಿತಾಯೂಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

# ಪತ್ರವ್ಯವಹಾರ.

(ಪತ್ರವ್ಯವಹಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು. ಸಂ. ಸ್ವ)

## ಉತ್ತರಕ್ಕೊಂದು ಪ್ರತ್ಯುತ್ತರ

ನನ್ನ 'ಅಧ್ಯಾಪಕರುಗಳ ಕಾರಖಾನೆ'ಯೆಂಬ, ಪ್ರಕೃತಿ ವಿರೋಧವಾದ ಕೋಟಾ ಆದಿ ಹಾಕಿದ ವಿಷಯಗಳೇನೂ ಇಲ್ಲದ ಲೇಖನವನ್ನು ಓದಿ ಲೋವರ್ ಗ್ರೇಡ್ ಸ್ಯಾಟ್ ಸ್ಕೂಲಿನ ಹಾಯರ್ ಗ್ರೇಡ್ ಉಪಾಧ್ಯಾಯರು ವೃಥಾ ಆಶ್ಚರ್ಯಪಟ್ಟುದನ್ನು ಕಂಡು ನನಗೆ ಬಹಳ ಆಶ್ಚರ್ಯವಾಗುತ್ತದೆ. ಈ ಉತ್ತರ ಬರೆದ ಉಪಾಧ್ಯಾಯರು 'ನವೀನ ವಿದ್ಯಾಭ್ಯಾಸವು ಯಾವ ದಾರಿಯನ್ನು ಹಿಡಿಯಲಿ' ಎಂದು ಭಾವಕೋಟಕವಾಗಿ ಬರೆದುದನ್ನು ವಿವೇಚಿಸಿದರೆ, ವಿದ್ಯಾಭಿವೃದ್ಧಿಯ ವಿಷಯ ಏನೂ ದೃಷ್ಟಿ ಇಡದೆ, ವಿಶೇಷ ಧನಪಿಶಾಚಿಯನ್ನೇ ಇವರು ಉಪಾಸಿಸುತ್ತಿರುವರೆಂದು ಅನ್ನಬೇಕಾಗುತ್ತದೆ. "ಈಗ ಟ್ರೈನಿಂಗ್ ಶಾಲೆಯಲ್ಲಿ ಕಲಿವ ಪಾಠಗಳು ಹಾಯರ್ ಎಲಿಮೆಂಟರಿ ಶಾಲೆಯ ೬, ೭, ೮ನೇ ಕ್ಲಾಸುಗಳಲ್ಲಿ ಕಲಿಸುವ ಪಾಠಗಳೇ ಅಲ್ಲದೆ ಬೇರೇನಲ್ಲ. ಇದನ್ನು ನೋಡುವಾಗ ಹಾಯರ್ ಎಲಿಮೆಂಟರಿ ಶಾಲಾ ಪರೀಕ್ಷೆಗೂ ಟ್ರೈನಿಂಗ್ ಪರೀಕ್ಷೆಗೂ ವ್ಯತ್ಯಾಸವಿಲ್ಲ" ಎಂಬುದು ಇವರ ಇನ್ನೊಂದು ಉದ್ಗಾರ. ಹಾಗಾದರೆ ಈ ಅಭಿಪ್ರಾಯದ ಮೇರೆಗೆ ಈ ಶಕ್ತಿ ಪ್ರಯೋಗದ ಸಮಯದಲ್ಲಿ ಟ್ರೈನಿಂಗ್ ಶಾಲೆಯನ್ನೇ ತೆಗೆಯಬಹುದೆಂದಾಗುತ್ತದೆ. ಸ್ವಾಮಿ ರಾಯರೇ! ದಯಮಾಡಿ ಈ ದಿನವೇ ಈ ಕುರಿತು ಡೈರೆಕ್ಟರಿಗೆ ಒಂದು ರಿಪೋರ್ಟ್ ಬರೆಕೊಳ್ಳಿ. ನಿಮ್ಮ ಜಿಲ್ಲಾ ಉಪಾಧ್ಯಾಯರ ಸಭೆಯೊಂದನ್ನು ಕರೆದು ಠರಾವು ಮಾಡಿಬಿಡಿ.

ಮಹಾನುಭಾವರೇ! ತಾವು ತಮ್ಮ ಲೇಖನದಲ್ಲಿ ಬರೆದ ಪಾಠಪಟ್ಟಿಯಲ್ಲಿ ಕಾಣುವ – ಎರಡು ಮೂರು ವರ್ಷಗಳು ಬೇಕಾಗಬಹುದಾದ ಆ ಎಲ್ಲಾ ಪಾಠಗಳನ್ನು ಇನ್ನೊಂದು ಸ್ವಲ್ಪ ಕಾಲದಲ್ಲಿ ಕಲಿತು, ಲೋವರ್ ಗ್ರೇಡಿನವರು ಹಾಯರ್ ಗ್ರೇಡಿನವರ ಸಂಪೂರ್ಣ ಅನುಭವವನ್ನು ಪಡೆಯುವುದಾದರೂ ಸಂಗತವೇ? ಈ ರಾತ್ರಿಶಾಲೆಗಳಲ್ಲಿ ಕೆಲಸ ನಡೆಯುವುದು ಎರಡು ಮೂರು ಘಂಟೆಗಳ ಕಾಲ. ಅದು ಕೂಡಾ ಮುಂಚಿನ ವಗಳ ಮಾಡದಂತೇನೂ ಅಲ್ಲ. ಕಾಲನಿಯಮ ಪ್ರಕಾರ ಪಾಠ ಪ್ರವಚನವಾಗಬೇಕು.

ಒಳ್ಳೇ ಅನುಭವಸ್ಥರಾದ ಲೋವರ್ ಗ್ರೇಡಿನ ಉಪಾಧ್ಯಾಯರೇ ಸ್ಯಾಟ್ ಸ್ಕೂಲಿನಲ್ಲಿ ಕಲಿಯುವವರೆಂಬುದಕ್ಕೆ ಏನಾದರೂ ಆಧಾರವಿದೆಯೇ? ಅವರಿಗೆ ಸಾರ್ವಜನಿಕ ಪರೀಕ್ಷೆಗಳೇನೂ ನಡೆಯಲಿಲ್ಲ. ಇನ್ನು ತಾಮ್ರ ಅಥವಾ ಶಿಲಾ ಶಾಸನಗಳಲ್ಲೇನಾದರೂ ಈ ವಿಷಯವಿರುವುದೇ? ಅಥವಾ ಅಂದಾಜಿಗೊಂದು ಗುಂಡು ಹೊಡೆದುದೇ? ಹಾಗಾದರೆ ಗುರಿ ನೆಟ್ಟಗಾಗಬಹುದೇ? ರಾಯರು ಸ್ವಲ್ಪ ವಿಚಾರ ವಿಚಾರ ಮಾಡಿ.

ಇನ್ನೊಂದು ಆಕ್ಷೇಪವೆಂದರೆ ನಾನು 'ಸ್ಯಾಟ್ ಶಾಲೆಯಲ್ಲಿ ಕಲಿತ ಉಪಾಧ್ಯಾಯನಲ್ಲ. ಆ ವಿಷಯದಲ್ಲಿ ಅರಿವಿಲ್ಲದವನೆಂಬುದು. ಹೆಂಗಸರು ಮಾಡಿದ ಮೇಲೋಗರಕ್ಕೆ ಉಪ್ಪು ಖಾರಗಳ ಹೆಚ್ಚು ಕಮ್ಮಿಯನ್ನು ಹೇಳಲು ಪುರುಷರಿಗೆ ಸಾಧ್ಯವುಂಟು. ಆದರೆ ಈ ನಮ್ಮ ಉಪಾಧ್ಯಾಯರು ಹೆಂಡತಿ ನಿಮಗೆ ಅಡಿಗೆ ಮಾಡಿ ಅಭ್ಯಾಸವಿಲ್ಲ. ಅದರ ವಿಷಯ ನಿಮಗೆ ಅರಿವಿಲ್ಲ ಯೆಂದು ಗದರಿಸುವಳೋ ಎಂಬ ಹೆದರಿಕೆಯಿಂದ ಮೇಲೋಗರ ಹೇಗೂ ಆಗಲಿ, ಚಾ ಚೂ ಎನ್ನದೆ ನಾಲಗೆ ಚಪ್ಪರಿಸಿ ಊಟ ಮಾಡುವವರ ಸಾಲಿಗೆ ಸೇರಿದವರೆನ್ನುವುದಕ್ಕೆ ಸಂಶಯವಿಲ್ಲ. ನಿಜವಿಷ್ಟೆ?

ಇನ್ನು ನನಗಿದ್ದ ವೃತ್ತಿ ಕಸಬುಗಳು ನಮ್ಮ ಬಂಧು ಉಪಾಧ್ಯಾಯರಿಗೆ ಲೇಖನ ಬರೆಯುವ ಅಮಲಿನ ದೃಷ್ಟಿಗೆ ಕಾಣಲಿಲ್ಲವೆಂದು ತೋರುತ್ತದೆ. ಡಿಪ್ಯುಟಿ ಇನ್ಸಪೆಕ್ಟರರು ಕೆಂಡಾಬಟ್ಟೆ ಸರ್ಟಿಫಿಕೇಟು ಕೊಡುತ್ತಾರೆಂದು ಬರೆದಿರುವನಂತೆ. ಇವರು ಹೀಗೆಲ್ಲಾ ಬರೆಯುವುದನ್ನು ಆಲೋಚಿಸಿದರೆ ಇವರಿಗೆ ವಯೋವೃದ್ಧತ್ವದ ಭ್ರಾಂತಿಯೆಂಬಹುದೆನ್ನಬೇಕಾಗುತ್ತದೆ. ಡಿಪ್ಯುಟಿ ಇನ್ಸಪೆಕ್ಟರರು ಪರೀಕ್ಷಾ ಕಾಲದಲ್ಲಿ ಹಿಟ್ಲೊ ಬಡಿಯೂ ಬಂದಾಗದಂತೆ ಸೂಕ್ಷ್ಮ ಪ್ರಯತ್ನ ನಡೆಸಬೇಕಾಗಿ ನನ್ನ ಸವಿನಯ ವಿನಂತಿಯೆಂದಷ್ಟೇ ನಾನು ಬರೆದುದು. ಅದು ನಿಮ್ಮ ಕಣ್ಣಿಗೆ ಸರಿಯಾಗಿ ಕಾಣದಿದ್ದರೆ ನಾನೇನು ಮಾಡಲಿ? ಆ ಮೇಲೆ ಲೇಖನವನ್ನೋದಿದರೆ ಈ ತೆರನ ಹಸಿಹಸಿ ಭಾವನೆಗಳ ಹವ್ಯಾಸಕ್ಕೆ ಅವಕಾಶವಿಲ್ಲ. ಮೇಲಿನ ನಮ್ರ ವಿನಂತಿಯಿಂದ ನಾನು ಡಿಪ್ಯುಟಿ ಇನ್ಸಪೆಕ್ಟರರಿಗಿಂತ ಹೆಚ್ಚು ಕಲಿತವನೆಂದಾಗಲೀ, ಅವರ ಮೇಲಧಿಕಾರಿಯೆಂದಾಗಲೀ ಆಗಲಿಲ್ಲ.

ಮುಂಬಾಯಿ ಸಂಸ್ಥಾನದಲ್ಲಿರುವಂತೆ ಲೋವರ್ ಗ್ರೇಡವರಿಗೆ ಬಿ. ಎ. ಎಂ. ಎ. ಎಲ್. ಎಲ್. ಬಿ. ಎಂ. ಬಿ. ಸಿ. ಎಂ. ಅನಿಯರಿಂಗ್ ಕಲಿಸುವ ರಾತ್ರಿಶಾಲೆಗಳನ್ನು (?) ಮದ್ರಾಸು ಸಂಸ್ಥಾನದಲ್ಲಿ ಇಟ್ಟರೆ ನನಗೇನೂ ಹೊಟ್ಟೆಯೊಳಗೆ ಬೆಂಕಿ (?) ಬರಲಿಕ್ಕಿಲ್ಲ. ನಿಮ್ಮ ಸಾಧನೆಯಿಂದ ಅವುಗಳಿಲ್ಲ. ಅದುವೆಂದರೆ ನಿಮ್ಮ ಉಪಕಾರವನ್ನು ಇದೇ ಸಂಸ್ಥಾನವು ಹೊಗಳಬಹುದು. ನಾನೇನೂ ನನ್ನ ಲೇಖನವನ್ನು ಹೊಟ್ಟೆಯುರಿಯಿಂದ ಬರೆದುದಲ್ಲ. ನೀವು ಹಾಗೆ ಎಣಿಸಿದ್ದೇ ಆದರೆ ಅದು ನಿಮ್ಮ ಭ್ರಾಂತಿ.

ನಾನೇನೋ ಒಂದು ಕಸುಬಿನಲ್ಲಿದ್ದೇನೆ. ನನಗೆ ಮುಂಬಾಯಿಗೆ ಹೋಗಿ ಸೆಕೆಂಡರಿ ಗ್ರೇಡ್ ಪರೀಕ್ಷೆಗೆ ನಿಲ್ಲಲು ಸಾಧ್ಯವಿಲ್ಲ. ಬೇರೆ ಯಾರಾದರೂ ಹೋಗುವವರಿದ್ದರೆ ತಮ್ಮ ಕೊಡುಗೈಯ ದ್ರವ್ಯ ಸಹಾಯವೇನಾದರೂ ಇದ್ದರೆ ತಿಳಿಸಿರಿ. ತಾವು ಇಡೀ ಹಿಂದೂಸ್ಥಾನದ ವಿದ್ಯಾ ವಿಷಯಕವಾದ ಸಮಸ್ತ ಅನುಭವಗಳನ್ನು ಪಡೆದ ಪ್ರಾಜ್ಞರಿರಬಹುದು. ಆದುದರಿಂದ ಸ್ಯಾಟ್ ಸ್ಕೂಲಿನ ಇತಿಹಾಸ, ಚರಿತ್ರೆ, ವೈಭವ' ಎಂದು ಯಾವುದಾದರೊಂದು ಹೆಸರಿನಿಂದ ಒಂದು ಗ್ರಂಥವನ್ನು ಬರೆದು ಯಾವುದಾದರೊಂದು ಪ್ರೆಸ್ಸಿಗೆ ಪ್ರಕಟಣೆಗೆ ಕೊಡಿರಿ. ಆ ಮೂಲಕವಾದರೂ ನಾವು ಸ್ಯಾಟ್ ಸ್ಕೂಲ್ ವಿದ್ಯಾ ನಿಬಂಧನೆಗಳ ಅನುಭವ ಪಡೆಯುತ್ತೇವೆ. ನಿಮಗೂ ಸ್ವಲ್ಪ ರೊಕ್ಕ ಸಿಕ್ಕಬಹುದು. ಸ್ವಾಮಿ ರಾಯರೇ! ಈ ಸಂದರ್ಭವನ್ನು ಬಿಟ್ಟುಬಿಡದಿರಿ. ನಾಳೆಗೆ ಎಂದರೆ ಗಣಪತಿ ಮದುವೆಯಾದೀತು. ನಿಮ್ಮ ಹೊಟ್ಟೆ ತಣ್ಣಗಿರಲಿ. ಅನೇಕಾನೇಕ ನಮಸ್ಕಾರಗಳು

'ಹಾಯರ್ ಗ್ರೇಡಿನವರಲ್ಲೊಬ್ಬ'

## ಮಲೇರಿಯಾ ಪ್ರಾಂತ್ಯದವರಲ್ಲಿ ಅತ್ಯಗತ್ಯ ವಿನಂತಿ.

ಸರ್ವ ಭಕ್ಷಕ ಮಲೇರಿಯಾ ಜ್ವರವು ಸಮೀಪಿಸುತ್ತಾ ಬಂತೆಂದು ಅದ ಅನುಭವವುಳ್ಳ ತಮಗೆಲ್ಲರಿಗೂ ಗೊತ್ತಿರುವ ವಿಚಾರವಷ್ಟೆ. ಈ ರೋಗದಿಂದ ಏನೆಲ್ಲಾ ಕಷ್ಟನಷ್ಟಗಳು ಸಂಭವಿಸಿ ಜನರು ಭ್ರಷ್ಟರಾಗುವರೆಂಬದನ್ನು ನಿಮಗೆ ತಿಳಿಸಬೇಕಾಗಿಲ್ಲ. ಆದುದರಿಂದಲೇ ಸರ್ವ ಭಕ್ಷಕನೆಂದು ಉಲ್ಲೇಖಿಸಿರುವೆನು.

ಈ ಭಯಂಕರ ಜ್ವರದ ಮಲೇರಿಯಾ ಜ್ವರದ ಮುಖ್ಯ ಕಾರಣವೆಂದರೆ ಅತಿ ಸೂಕ್ಷ್ಮವಾಗಿರುವಂತಹ ಮಲೇರಿಯಾ ಕ್ರಿಮಿಗಳು. ಮುಖ್ಯವಾಗಿ ಇವುಗಳ ವಾಸಸ್ಥಾನವು ಕೊಳಕು ನೀರು, ಗಲೀಜು ಸ್ಥಳಗಳಂತಹ ನೀರು, ಅಶುದ್ಧವಾದ ವಾತಾವರಣ – ಇತ್ಯಾದಿ ಇತ್ಯಾದಿ.

ಈ ಕ್ರಿಮಿಗಳು—ಮಲೇರಿಯಾ ನೊಣಗಳೆಂದು ಗೊತ್ತಾದ ತರುವಾಯ ಈ ನೊಣಗಳನ್ನು ನಿರ್ಮೂಲಿಸಬೇಕಾದರೆ ಅವುಗಳ ವಾಸಸ್ಥಾನಗಳನ್ನು ಕೆಡಿಸುವುದೇ ಮುಖ್ಯ ಮದ್ದು. ಆದುದರಿಂದ ಇದಕ್ಕಾಗಿ ಕೆಳಗಿನ ನಿಯಮವನ್ನು ಅನುಸರಿಸುವುದು ಅಗತ್ಯ.

ಈ ಕೆಲಸವನ್ನು ಪಂಚಾಯತರು ವಹಿಸುವುದೊಳಿತು. ಈ ಕೆಲಸಕ್ಕೆ ಬೇಕಾದುದು ಮಲೇರಿಯಕ್ಕಾಗಿ ಉಪಯೋಗಿಸುವ ಒಂದು ಪಿಚಾರಿ, ಮಲೇರಿಯದ ಎಣ್ಣೆ ಮತ್ತು ಕಾರ್ಯಕರ್ತರುಗಳು. ಒಂದು ಊರನ್ನು ಅನೇಕ ಯೋಗ್ಯ ವಿಭಾಗಗಳನ್ನಾಗಿ ವಿಂಗಡಿಸಬೇಕು. ಒಂದೊಂದು ವಿಭಾಗದಲ್ಲಿ ಒಬ್ಬಿಬ್ಬರು ಜನರು ಒಬ್ಬಿಬ್ಬರು ಆಳನ್ನು ಹಾರೆ, ಬುಟ್ಟಿ, ಕತ್ತಿಗಳೊಡನೆ ಕರಕೊಂಡು ಹೋಗಿ ಮೇಲೆ ವಿವರಿಸಿದ ಸ್ಥಳಗಳನ್ನು ಪರಿಶೀಲಿಸಬೇಕು. ನಿಂತ ನೀರಿದ್ದರೆ ಅದು ಸರಿಯಾಗಿ ಪ್ರವಹಿಸುವಂತೆ ಮಾಡುವುದು, ಕೆಸರು ನೀರನ್ನು ಮೇಲ್ಪದಿಯ ಮಣ್ಣಿನಿಂದ ಮುಚ್ಚುವುದು, ಅಶುದ್ಧವಾದ ವಾತಾವರಣವನ್ನು ಶುದ್ಧ ಪಡಿಸುವುದು. ಅದೂ ಆಗದಿದ್ದರೆ ಅಥವಾ ಅದರೂ ಪಿಚಾರಿಯ ಮೂಲಕ ಎಣ್ಣೆಯನ್ನು ಬಿಡುವುದು. ಹೀಗೆ ಮಾಡಿದರೆ ತಕ್ಕಷ್ಟಿನ ಕಾರ್ಯವನ್ನು ಮಾಡಿದಂತಾದೀತು.

ಅಶುದ್ಧ ವಾತಾವರಣದ ಕುರಿತು ಸ್ವಲ್ಪದರಲ್ಲಿ ಹೇಳುವೆನು. ಮನೆ ಸಮೀಪ ಅಂಗಳದಲ್ಲಿ ಸಿಕ್ಕಲ್ಲಿ ಉಗುಳುವುದು ಮೊದಲನೆಯ ದುರಭ್ಯಾಸವು. ಮನೆಯವರು ಅಂಗಳದಲ್ಲಿ ಒಂದು ಬುಟ್ಟಿ ಅಥವಾ ಒಂದು ಪಾತ್ರೆಯನ್ನಿಟ್ಟು ಅದರಲ್ಲಿ ಎಲ್ಲರೂ ಉಗುಳುವಂತೆ ಮಾಡಬಹುದು. ಒಂದು ವಾರದ ತರುವಾಯ ಅದನ್ನು ದೂರ ಮಣ್ಣಿನಡಿ ಹೂಳಬಹುದು. ಮನೆಯ ಆಸುಪಾಸು ಯಾವ ತರದ ಗಲೀಜನ್ನು ಇಡುತ್ತ ಬಿಡಬಾರದು. ಈ ರೀತಿ ಮನೆಯನ್ನು ಶುಚಿಯಾಗಿಟ್ಟರೆ ಅಶುದ್ಧ ವಾತಾವರಣಕ್ಕೆ ಆಸ್ಪದವಿಲ್ಲ.

ಕೊಳೆಯ ದಡ, ತೋಟದ ಕೊಳೆ ಇಲ್ಲಿ ಮುಖ್ಯವಾಗಿ ಗಮನವನ್ನಿಡಬೇಕು. ಈ ಪ್ರಕಾರ ಕೆಲಸವು ಸರಿಯಾಗಿ ವಾರಕ್ಕೊಂದು ಸಲವಾದರೂ ನಡೆದರೆ ಮಲೇರಿಯದ ಕಾಟವು ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಉದಾ—ಧರ್ಮಸ್ಥಳ,

ಇದಿಷ್ಟು ಬರೆದುದು ಪುಸ್ತಕದ ಪಾಂಡಿತ್ಯದಿಂದಲ್ಲ, ಅನುಭವಬಲದಲೇ. ನಮ್ಮೂರಲ್ಲಿ ಎರಡು ಮೂರು ವರ್ಷಗಳಿಂದೀಚೆ ಈ ಕಾರ್ಯವು ಸಮಾಧಾನಕರವಾಗಿದೆಯೆಂದು ಹೇಳಲಸಾಧ್ಯವಾದರೂ, –ನಡೆಯುತ್ತಾ ಬರುತ್ತದೆ. ಈ ವರುಷ ನಮ್ಮೂರ ಯುವಕ ಸಂಘದವರು ಈ ಕಾರ್ಯವನ್ನು ಪಂಚಾಯತರ ನೇತೃತ್ವದಲ್ಲಿ ನಡೆಯಿಸುತ್ತಿದ್ದಾರೆ. ಈ ರೀತಿ ಪರ ಊರ ಯುವಕರೂ ಪಂಚಾಯತದವರೂ ಒಗ್ಗಿ ಕಾಲನಂತಿರುವ ಮಲೇರಿಯಾ ಪ್ರಾಣಿಗಳ ಸಂಹಾರ ಕಾರ್ಯವನ್ನು ಕೈಕೊಂಡರೆ, ತದನಂತರ ಆಸ್ಪತ್ರೆಯ ಕಹಿಮದ್ದುಗಳನ್ನು ಗೆದ್ದುಕೊಂಡು ಯಾ ಉಷ್ಣ ಕ್ವಿನೀನನ್ನು ಸೇವಿಸಿ, ಬಡವರು ಉಷ್ಣದಲೂ ಬಧಿರತ್ವದಿಂದಲೂ ಕೆಲದಿನಗಳ ತನಕ ಕಷ್ಟಪಟ್ಟು ನಷ್ಟವ ಅಗತ್ಯವಿಲ್ಲ. ಆದುದರಿಂದ ಊರ ಜನರೇ! ಹಾಗ್ಯಕರಾಗಿಯೂ ದೇಶಸೇವೆಯೇ! ಇದಿಷ್ಟೇ ನನ್ನ ವಿನಂತಿ.

ಅಧ್ಯಕ್ಷ, ಮುಂಡಾಜೆ ಪಂಚಾಯತ ಬೋರ್ಡು

## ಒಂದು ಅಗತ್ಯ'

ಕಾವಳಕಟ್ಟೆ ಸರ್ಕಲಿನ ತಾಲೂಕು ಬೋರ್ಡು ಮೆಂಬರರಾದ ಶ್ರೀಯುತ ಬಳ್ಳಂಜೆ ರಾಮಭಟ್ಟರವರು ಬಂಟ್ವಾಳ ಬೋರ್ಡು ಹುಡುಗಿಯರ ಶಾಲೆಯ ಉದ್ಧಾರ ಕಾರ್ಯಕ್ಕೆ ಕೈಹಚ್ಚಿರುತ್ತಾರೆಂದು ಕೇಳುತ್ತೇವೆ. ಅದು ಸ್ತುತ್ಯವೇ. ಆದರೆ ನಮ್ಮ ಊರಿನ ಬೋರ್ಡು ಶಾಲೆಯನ್ನು ಹಾಯರ್ ಎಲಿಮೆಂಟರಿ ಮಾಡಲಿಕ್ಕೆ ಯಾಕೆ ಮರೆತಿರುವರೆಂದು ತಿಳಿಯುವುದಿಲ್ಲ. ಅದನ್ನಾದರೂ ಹಾಯರ್ ಎಲಿಮೆಂಟರಿ ಮಾಡಿದರೆ ಸುತ್ತಮುತ್ತಲಿನ ಜನರಿಗೆ ತುಂಬಾ ವಿದ್ಯೆಗೆ ಸಹಾಯವಾಗುತ್ತಿತ್ತು. ಮತ್ತು ಕಾರಂಜೆ ಕೆರೆ ಬಳಿಯಲ್ಲಿ ಬಾವಿ ಮಾಡಬೇಕೆಂಬ ಪ್ರಯತ್ನದಲ್ಲಿದ್ದಾರೆಂದು ವರ್ತಮಾನ ಕೇಳುತ್ತೇವೆ. ಅಷ್ಟು ದೊಡ್ಡ ಕೆರೆ ಇದ್ದು, ಮೂರು ದಿವಸ ಜಾತ್ರೆಗಾಗಿ ಅಗತ್ಯವುಳ್ಳ ಒಂದು ಕಾರ್ಯವಿದೆ—ಏನಂದರೆ ಅಲ್ಲಿಯ ಕೆರೆಯ ಪಶ್ಚಿಮ ದಿಕ್ಕಿಗೆ ಒಂದು ಸಣ್ಣ ಕೊಠಡಿ ಕಟ್ಟಿಸುವುದು ಅಗತ್ಯ. ಯಾಕೆಂದರೆ ಆ ಪರ್ವಕ್ಕೆ ಸುತ್ತಮುತ್ತಲು ಯಾತ್ರಾರ್ಥಿಗಳು ಹೋದರೆ, ಗಂಜಿ ಬೇಯಿಸಲಿಕ್ಕೆ ಒಂದು ಆಶ್ರಯವಿರುವುದಿಲ್ಲ. ಆದುದರಿಂದ ತಾಲೂಕು ಬೋರ್ಡಿನವರಾಗಲಿ ಹಲವು ಮಹನೀಯರ ವಂತಿಗೆ ವರಾಡದಿಂದಾಗಲಿ ಒಂದು ಸಣ್ಣ ಅಗಲಿ ಇದ್ದ ಒಂದು ಕೋಣೆಯ ಕಟ್ಟಡ ಕಟ್ಟಿಸಿದರೆ ಸದರಿ ಭಟ್ಟರ ಕೀರ್ತಿ ಆಚಂದ್ರಾರ್ಕವಾಗಿ ಉಳಿಯುತ್ತಿತ್ತು. ಮತ್ತು ಅದೇ ಕಾರಂಜೆಯ ತೇರು ಬೀದಿಯ ವರೆಗೆ ಇರುವ ಮಾರ್ಗವನ್ನು ಪೂರ್ವ ಕಡೆ ಸಾದಿ ತರುವರೆ ಹಿಂದಕ್ಕೆ ಯಾರೋ ಕಡಿದ ದಾರಿಯನ್ನೇ ಸ್ಥಿರಯಾಗಿ ಕಡಿಸುವ ಪ್ರಯತ್ನ ಮಾಡಿ ಆ ಮಾರ್ಗ ಪುನಃ ಬಳಕೆಗೆ ಕೊಡುವ ಹಾಗೆ ಮಾಡಿದರೆ ಇವರ ಪ್ರಯತ್ನವನ್ನು ಜನರು ತುಂಬಾ ಕೊಂಡಾಡುವರು. ಇನ್ನೊಂದು ಅತ್ಯಗತ್ಯ ಕಾರ್ಯವಿದೆ. ಇದು ಯಾರು ಮಾಡಿಸುವರೆಂದು ನನಗೆ ತಿಳಿಯದು. ಯಾವುದೆಂದರೆ ಆ ದೊಡ್ಡ ಕೆರೆಗೆ ದಕ್ಷಿಣ ದಿಕ್ಕಿನಿಂದ ಗುಡ್ಡೆಯಿಂದ ಇಳಿದು ಬರುವ ಮಳೆಯ ಮಳೆನೀರು ಬಂದು ಕೂಡುವುದರಿಂದ ಈಗೀಗ ಈ ಕೆರೆ ತುಂಬುತ್ತ ಬರುತ್ತಿದೆ. ಇದನ್ನು ರಾಜಶ್ರೀ ಪುಣ್ಯವುಳ್ಳ ಭಟ್ಟರವರು ಸ್ವತಃ ನೋಡಿ ಇದನ್ನು ಬಂದ ಮಾಡಿಸಿ ಇದೇ ಕೆರೆಗೆ ಅಡ್ಡಲಾಗಿ ಹಾಕಿದ ಗೋಡೆಯು ಜರಿದು ಹೋದುದನ್ನು ತಿರುಗಿ ಇಡಿಸುವ ವಿಲೆವಾರಿ ಮಾಡಿದರೆ ತುಂಬಾ ಉಪಕಾರವಿತ್ತು. ಇಲ್ಲದಿದ್ದರೆ ಇನ್ನು ಸ್ವಲ್ಪ ಸಮಯದಲ್ಲಿಯೇ ತೇರು ಎಳೆಯುವ ಬೀದಿಯಲ್ಲಿ ಅಡ್ಡ ಹಣ ಬಿದ್ದು, ಬೆಟ್ಟನ ತೆಗೆಂದರೆ ಆಗಲಿಕ್ಕೆ ಉಂಟು. ಇದು ಲಕ್ಷ್ಯವು ಸದರಿ ಮೆಂಬರರಾದ ಶ್ರೀಯುತ ರಾಮ ಭಟ್ಟರವರು ಮಾತ್ರವಲ್ಲ ಛತ್ರಪ್ರೇಕ್ಷಕರಿಗೂ ಸಂಬಂಧವಾದುದೇ.

ಜನಹಿತೈಷಿ

## ಸುರತ್ಕಲ್ಲಿನಲ್ಲಿ 'ರೂರಲ್ ಡಿಸ್ಪೆನ್ಸರಿ'

ಮಂಗಳೂರಿಗೂ ಮುಲ್ಕಿಗೂ ಮಧ್ಯ ಪ್ರದೇಶವೂ ಈ ಪ್ರಾಂತ್ಯದ ಹಲವು ಗ್ರಾಮಗಳ ಕೇಂದ್ರವೂ ಆಗಿರುವ ಸುರತಕಲ್ಲಿನಲ್ಲಿ ಗ್ರಾಮ ವೈದ್ಯಾಲಯವೂ ಡಿಸ್ಪೆನ್ಸರಿ ಅತ್ಯಗತ್ಯವೆಂದು ಸುಮಾರು ಹತ್ತುಹನ್ನೆರಡು ವರ್ಷಗಳ ಹಿಂದೆಯೇ ಸ್ವದೇಶಾಭಿಮಾನಿಯು ತನ್ನ ಅಗ್ರಲೇಖನವಾಗಿ ಬರೆದಿದ್ದರೂ, ಸುರತಕಲ ಸೇಕ್ರೆಡ್ ಹಾರ್ಟ್ ಚರ್ಚ್ ಗುರುಗಳೂ, ತಾ. ಬೋ. ಮೆಂಬರರೂ ಆಗಿದ್ದ ದಿವಂಗತ ರೆವೆರೆಂಡ್ ಫಾದರ್ ಡೆನ್ನಿಸ್ ಕುವೆಲ್ಲರು ಎಷ್ಟೋ ಬಗೆಯಿಂದ ಪ್ರಯತ್ನಿಸಿದ್ದರೂ ಕಳೆದ ಗಣತಿಯ ಇಸವಿಯಲ್ಲಿ ಈ ಪ್ರಾಂತ್ಯದ ಹಳ್ಳಿಗರೊಂದಾಗಿ ಮನವಿಯನ್ನು ಬರೆದುಕೊಂಡಿದ್ದರೂ ಇದುವರೆಗೂ ತಾಲೂಕು ಬೋರ್ಡಿನಿಂದ ಇಲ್ಲೊಂದು ಗ್ರಾಮಾಸ್ಪತ್ರೆಯನ್ನು ತೆರೆಯದಿರುವುದು ಈ ಪ್ರಾಂತ್ಯದ ಹಳ್ಳಿಗರ ದೌರ್ಭಾಗ್ಯವೇ ಸರಿ!

ಈಗಣ ದಯಾಘನ ಅಧ್ಯಕ್ಷ ಮಹಾಶಯರು ಈ ಸಲದ ಬೇಡಿಕೆಯನ್ನಾದರೂ ಸಫಲಗೊಳಿಸಿ ಶೀಘ್ರದಲ್ಲೇ ಸುರತಕಲ್ಲಿನಲ್ಲೊಂದು ರೂರಲ್ ಡಿಸ್ಪೆನ್ಸರಿಯನ್ನು ತೆರೆದು ಬಡಹಳ್ಳಿಗರ ಸಂಕಷ್ಟ ನಿವಾರಣೆಯನ್ನೆಸಗಬೇಕೆಂಬುದೇ ನಮ್ಮೆಲ್ಲರ ಹಾರೈಕೆ.

ಸುರತ್ಕಲ, ೧–೧–೩೩ ಊರಿನವ

## ನೋಟೀಸು

### ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 379/31 R I A No 836/32

ನಾರಾಯಣ ಉಪಾಧ್ಯ— ಅರ್ಜಿದಾರ (ವಾದಿ)

ಮತ್ತು

ನರಸಿಂಹ ಭಟ್ಟರ, ಶ್ರೀನಿವಾಸ ಭಟ್ಟರ ಮಗ—೧ನೇ ಎದ್ರಿ ರಾಮಚಂದ್ರ ಭಟ್ಟರ, ಲಕ್ಷ್ಮೀನಾರಾಯಣ ಭಟ್ಟರ ಮಗ—೭ನೇ ಎದ್ರಿ ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಬುಡ್ನಾರು—

ಮೇಲ್ಕಂಡ ವ್ಯಾಜ್ಯದಲ್ಲಿ ಎದ್ರಿರು ವಗೈರೆ ಮೇಲೆ ತರ್ಫಾ ಪಡಕೊಂಡ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 9-1-1933ಕ್ಕೆ ತನಿಕೆಗೆಯಿಟ್ಟಿರುತ್ತದೆ. ಅದಕ್ಕೆ ಆಕ್ಷೇಪವಿದ್ದರೆ ಎದ್ರಿರು ಸದರಿ ತಾರೀಕಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

Udipi, 28-12-32. **B. Srinivasa Rau,** *Advocate for Petitioner.*

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಪುಷ್ಯ ಶು|| ೧೧ ಶನಿವಾರದಿಂದ ಅಂಗೀರಸ ಸಂವತ್ಸರದ ಪುಷ್ಯ ಬ|| ೩ ಶುಕ್ರವಾರದ ವರೆಗಿನ ಪಂಚಾಂಗ

(೧೯೩೩ನೆಯ ಧನು – ಪೆರಾರ್ದೆ).

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಪೆರಾರ್ದೆ | ಸೂರ್ಯ ಉ. | ಅಸ್ತ |
|---|---|---|---|---|---|---|---|---|
| 7 | ಶನಿ | ೧೧ | ೨೮।। | ಕೃತ್ತಿಕಾ | ೪೯।। | ೨೩ | 6.57 | 6.17 |
| 8 | ರವಿ | ೧೨ | ೩೪।। | ರೋಹಿಣೀ | ೫೩। | ೨೪ | 6.57 | 6.18 |
| 9 | ಸೋಮ | ೧೩ | ೪೦ | ಮೃಗಶಿರಾ | ೬೦ | ೨೫ | 6.57 | 6.18 |
| 10 | ಕುಜ | ೧೪ | ೪೪।। | ಮೃಗಶಿರಾ | ೩೯ | ೨೬ | 6.58 | 6.19 |
| 11 | ಬುಧ | ○ | ೪೮ | ಆದ್ರ್ರಾ | ೭।। | ೨೭ | 6.58 | 6.19 |
| 12 | ಗುರು | ೧ | ೫೦। | ಪುನರ್ವಸು | ೨ | ೨೮ | 6.[illegible]8 | 6.20 |
| 13 | ಶುಕ್ರ | ೨ | ೨೨। | ಪುಷ್ಯಾ | ೫।। | ೨೯ | 6.58 | 6.20 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) Maximum ಹೆಚ್ಚು | | Minimum ಕಡಿಮೆ | | Rainfall. ಮಳೆ ದಿನದ ಮಳೆ | ಜುಮಲಾ ಮಳೆ. |
|---|---|---|---|---|---|---|
| 29 | 86— | 6 | 71— | 9 | — | — |
| 30 | 86— | 7 | 71— | 3 | 0— 4 | — |
| 31 | 85— | 6 | 72— | 1 | 0—11 | — |
| 1 | 87— | 3 | 70— | 2 | — | — |
| 2 | 90— | 3 | 72— | 2 | 0—33 | — |
| 3 | 88— | 6 | 66 | 4 | 0—30 | — |
| 4 | 89— | 8 | 65— | 4 | 0— 6 | 119—95 |

## ಮಂಗಳೂರಿನ ಪೇಟೆ ಧಾರಣೆ.

| ದೇನಸು | ಇಂದ ರೂ. ಆ. | ವರೆಗೆ ರೂ. ಆ. |
|---|---|---|
| ಹೊಸ ಮಸ್ತಕಿ | 4— | 4—12 |
| ಹೊಸ ರಾಶಿ ಅಕ್ಕಿ .. | 3— 8 | 3 4 |
| ಮಸ್ತಕಿ .. | 4—12 | — 4 |
| ಗುಡ್ಡ | 4 0 | 4— 4 |
| ಸುಗ್ಗಿ . | 3—10 | 4— 4 |
| ಊರ ಅವ್ವಲ್ ಬೆಳ್ತಿಗೆ | 4—10 | 5— 4 |
| ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ | 7 0 | 7— 4 |
| ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ | 4— 8 | 4—10 |
| ಗೋದಿ ಗೋಣಿ ೧ಕ್ಕೆ . | 10— 8 | 14— 8 |
| ತೊಗರಿ ಗೋಣಿ ೧ಕ್ಕೆ .. | 9— 8 | 12— 0 |
| ಹುರುಳಿ ಗೋಣಿ ೧ಕ್ಕೆ | 6— | 6 4 |
| ಕಡಲೆ ಗೋಣಿ ೧ಕ್ಕೆ | 8— 8 | 11— 0 |
| ತೊಗರಿಬೇಳೆ ಗೋಣಿ ೧ಕ್ಕೆ | 13— 8 | 21— 0 |
| ಉದ್ದು ಗೋಣಿ ೧ಕ್ಕೆ | 10— 8 | 10 12 |
| ಹೆಸರು ಗೋಣಿ ೧ಕ್ಕೆ | 10— 4 | 11— |
| ಊರುಬೆಲ್ಲ ಖಂಡಿ ೧ಕ್ಕೆ | 31— 4 | 32 8 |
| ಉಪ್ಪು ಗೋಣಿ ೧ಕ್ಕೆ | 5— 0 | 5— 4 |
| ಕೊಬ್ರಿ ಖಂಡಿ ೧ಕ್ಕೆ | 65— | 72 |
| ಕೊಬ್ರಿ ಹಿಂಡಿ ಖಂಡಿ ೧ಕ್ಕೆ . | 33— 8 | 34— |
| ಎಳ್ಳಿಂಡಿ ಖಂಡಿ ೧ಕ್ಕೆ | 26— 4 | 27— 8 |
| ಕೊಬ್ರಿ ಎಣ್ಣೆ ಮಣ ೧ಕ್ಕೆ | 5— 2 | 6— 2 |
| ಎಳ್ಳೆಣ್ಣೆ ಮಣ ೧ಕ್ಕೆ | 6—12 | 7— 0 |
| ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ | 4— 7 | 8 12 |
| ಪೋರಸ ಸಕ್ಕರೆ ಮಣ ೧ಕ್ಕೆ . | 3—15 | 4— 0 |
| ಹೊಸ ಮೆಣಸು . | 5— 0 | 5— 8 |
| ಸಾಸಿವೆ ಮುಡಿ ೧ಕ್ಕೆ .. | 4—12 | 5— 0 |
| ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ .. | 275— 0 | 300— |
| ಕಾಳುಮೆಣಸು ಖಂಡಿ ೧ಕ್ಕೆ . | 170— 0 | 180— |
| ಮೇಲಕ್ಕಿ ಮಣ ೧ಕ್ಕೆ . | 27— 0 | 28— |
| ಗೇರುಬೀಜ ಮುಡಿ ೧ಕ್ಕೆ . | 2— 4 | 2 6 |
| ಕಲ್ಲಿಂಗ ಖಂಡಿ ೧ಕ್ಕೆ .. | 25— 0 | 25— 8 |
| ಹೊಂಬ್ಳ ಹಗೆದು ಮಣ ೧ಕ್ಕೆ .. | 10— 0 | 10— 2 |
| ಹೊಂಬ್ಳ ಪಾತ್ರಗೆಳು ಮಣ ೧ಕ್ಕೆ .. | 16— 0 | 16—0 |
| ಚೀನಿಕಲ್ಲು ಸೇರು ೧ಕ್ಕೆ ... | 16— 8 | 13—12 |
| ಹಿತ್ತಾಳೆ ಹಗೆದು ಮಣ ೧ಕ್ಕೆ ... | 11— 0 | 11— 8 |
| ಪವನು ೧ಕ್ಕೆ .. | 19— | 19— 4 |
| ಹೂಲಿಸ ಹುಳಿ ಖಂಡಿ ೧ಕ್ಕೆ ... | 40— | 45— |
| ಘಟೇರಿ ಕಾಫಿ ಖಂಡಿ ೧ಕ್ಕೆ ... | 320— | 325— |
| ಹಳೆ ಅಡಿಕೆ ... | 180— | 205— |
| ಹೊಸ ಅಡಿಕೆ ... | 140 | 145— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

## ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನ ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವದು.

**Secretary.**

*The Canara Public Conveyance Company Ltd Mangalore*



# Chikmagalur Public Conveyance Motor Service.

## CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

# ಪತ್ರವ್ಯವಹಾರ.

(ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕಳುಹಿಸತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು. ಸಂ. ಸ್ವ.)

## ಉತ್ತರಕ್ಕೊಂದು ಪ್ರತ್ಯುತ್ತರ.

ನನ್ನ 'ಅಧ್ಯಾಪಕರುಗಳ ಕಾರಖಾನೆ'ಯೆಂಬ, ಪ್ರಕೃತಿ ವಿರೋಧವಾದ ಕೋಟಿ ಆಟ ಹಾಕಿದ ವಿಷಯಗಳೇನೂ ಇಲ್ಲದ ಲೇಖನವನ್ನು ಓದಿ ಲೋವರ್ ಗ್ರೇಡ್ ನ್ಯಾಟ್ ಸ್ಕೂಲಿನ ಹಾಯರ್ ಗ್ರೇಡ್ ಉಪಾಧ್ಯಾಯರು ವೃಥಾ ಆಶ್ಚರ್ಯಪಟ್ಟುದನ್ನು ಕಂಡು ನನಗೆ ಬಹಳ ಆಶ್ಚರ್ಯವಾಗುತ್ತದೆ. ಈ ಉತ್ತರ ಬರೆದ ಉಪಾಧ್ಯಾಯರು "ನವೀನ ವಿದ್ಯಾಭ್ಯಾಸವು ಯಾವ ದಾರಿಯನ್ನು ಹಿಡಿಯಲಿ" ಎಂದು ಖಾದರ್‌ಹಿತವಾಗಿ ಬರೆದುದನ್ನು ವಿವೇಚಿಸಿದರೆ ವಿದ್ಯಾಭಿವೃದ್ಧಿಯ ವಿಷಯ ಏನೂ ದೃಷ್ಟಿ ಇಡದೆ, ವಿಶೇಷ ಧನಪಿಶಾಚಿಯನ್ನೇ ಇವರು ಉಪಾಸಿಸುತ್ತಿರುವರೆಂದು ಅನ್ನಬೇಕಾಗುತ್ತದೆ. 'ಈಗ ಟ್ರೈನಿಂಗ್ ಶಾಲೆಯಲ್ಲಿ ಕಲಿವ ಪಾಠಗಳು ಹಾಯರ್ ಎಲಿಮೆಂಟರಿ ಶಾಲೆಯ ೬, ೭, ಜನೇ ಕ್ಲಾಸುಗಳಲ್ಲಿ ಕಲಿಸುವ ಪಾಠಗಳೇ ಅಲ್ಲದೆ ಬೇರೇನಿಲ್ಲ. ಇದನ್ನು ನೋಡುವಾಗ ಹಾಯರ್ ಎಲಿಮೆಂಟರಿ ಶಾಲಾ ಪರೀಕ್ಷೆಗೂ ಟ್ರೈನಿಂಗ್ ಪರೀಕ್ಷೆಗೂ ವ್ಯತ್ಯಾಸವಿಲ್ಲ' ಎಂಬುದು ಇವರ ಇನ್ನೊಂದು ಉದ್ಗಾರ. ಹಾಗಾದರೆ ಈ ಅಭಿಪ್ರಾಯದ ಮೇರೆಗೆ ಈ ಕತ್ತರಿ ಪ್ರಯೋಗದ ಸಮಯದಲ್ಲಿ ಟ್ರೈನಿಂಗ್ ಶಾಲೆಯನ್ನೇ ತೆಗೆಯಬಹುದೆಂದಾಗುತ್ತದೆ. ಸ್ವಾಮಿ ರಾಯರೇ! ದಯಮಾಡಿ ಈ ದಿನವೇ ಈ ಕುರಿತು ಡ್ಯಾರೆಕ್ಟರರಿಗೆ ಒಂದು ರಿಪೋರ್ಟು ಬರಕೊಳ್ಳಿ. ನಿಮ್ಮ ಜಿಲ್ಲಾ ಉಪಾಧ್ಯಾಯರ ಸಭೆಯೊಂದನ್ನು ಕರೆದು ಠರಾವು ಮಾಡಿಬಿಡಿ.

ಮಹಾನುಭಾವರೇ! ತಾವು ತಮ್ಮ ಲೇಖನದಲ್ಲಿ ಬರೆದ ಪಾಠಪಟ್ಟಿಯಲ್ಲಿ ಕಾಣುವ - ಎರಡು ಮೂರು ವರ್ಷಗಳು ಬೇಕಾಗಬಹುದಾದ ಆ ಎಲ್ಲಾ ಪಾಠಗಳನ್ನು ಇಷ್ಟೊಂದು ಸ್ವಲ್ಪ ಕಾಲದಲ್ಲಿ ಕಲಿತು, ಲೋವರ್ ಗ್ರೇಡಿನವರು ಹಾಯರ್ ಗ್ರೇಡಿನವರ ಸಂಪೂರ್ಣ ಅನುಭವವನ್ನು ಪಡೆಯುವುದೆಂದರೂ ಸಂಗತವೇ? ಈ ರಾತ್ರಿಶಾಲೆಗಳಲ್ಲಿ ಕೆಲಸ ನಡೆಯುವುದು ಎರಡು ಮೂರು ಘಂಟೆಗಳ ಕಾಲ. ಅದು ಕೂಡಾ ಮುಂಚಿನ ಹಗಲ ಪುರದಂತೇನೂ ಅಲ್ಲ. ಕಾಲ ನಿಯಮ ಪ್ರಕಾರ ಪಾಠ ಪ್ರವಚನವಾಗಬೇಕು.

ಒಳ್ಳೇ ಅನುಭವಸ್ಥರಾದ ಲೋವರ್ ಗ್ರೇಡಿನ ಉಪಾಧ್ಯಾಯರೇ ನ್ಯಾಟ್ ಸ್ಕೂಲಿನಲ್ಲಿ ಕಲಿಯುವವರೆಂಬುದಕ್ಕೆ ಏನಾದರೂ ಆಧಾರವಿದೆಯೋ? ಅವರಿಗೆ ಸಾರ್ವಜನಿಕ ಪರೀಕ್ಷೆಗಳೇನೂ ನಡೆಯಲಿಲ್ಲ. ಇನ್ನು ತಾವು ಅಥವಾ ಶಿಲಾ ಶಾಸನಗಳಲ್ಲೇನಾದರೂ ಈ ವಿಷಯವಿರುವುದೇ? ಅಥವಾ ಅಂದಾಜಿಗೊಂದು ಗುಂಡು ಹೊಡೆದುದ್ದೇ? ಹಾಗಾದರೆ ಗುರಿ ನೆಟ್ಟಗಾಗಬಹುದೇ? ರಾಯರು ಸ್ವಲ್ಪ ವಿಶಾಲ ವಿಚಾರ ಮಾಡಿ.

ಇನ್ನೊಂದು ಆಕ್ಷೇಪವೆಂದರೆ ನಾನು 'ನ್ಯಾಟ್ ಶಾಲೆಯಲ್ಲಿ ಕಲಿತ ಉಪಾಧ್ಯಾಯನಲ್ಲ. ಆ ವಿಷಯದಲ್ಲಿ ಅರಿವಿಲ್ಲದವನೆಂಬುದು. ಹೆಂಗಸರು ಮಾಡಿದ ಮೇಲೋಗರಕ್ಕೆ ಉಪ್ಪು ಖಾರಗಳ ಹೆಚ್ಚು ಕಮ್ಮಿಯನ್ನು ಹೇಳಲು ಪುರುಷರಿಗೆ ಸಾಧ್ಯವುಂಟು. ಆದರೆ ಈ ನಮ್ಮ ಉಪಾಧ್ಯಾಯರು ಹೆಂಡತಿ 'ನಿಮಗೆ ಅಡಿಗೆ ಮಾಡಿ ಅಭ್ಯಾಸವಿಲ್ಲ. ಆದರ ವಿಷಯ ನಿಮಗೆ ಅರಿವಿಲ್ಲ'ಯೆಂದು ಗದರಿಸುವಳೋ ಎಂಬ ಹೆದರಿಕೆಯಿಂದ ಮೇಲೋಗರ ಹೇಗೂ ಆಗಲಿ ಚಾ ಚೂ ಮಾತಾಡದೆ ನಾಲಗೆ ಚಪ್ಪರಿಸಿ ಊಟ ಮಾಡುವವರ ಸಾಲಿಗೆ ಸೇರಿದವರೆನ್ನುವುದಕ್ಕೆ ನಡ್ಡಿ?

ಇನ್ನು ನನಗಿದ್ದ ವ್ಯಕ್ತಿ ಕಸಬುಗಳು ನಮ್ಮ ಬಂಧು ಉಪಾಧ್ಯಾಯರಿಗೆ ಲೇಖನ ಬರೆಯುವ ಅಮಲಿನ ದೃಷ್ಟಿಗೆ ಕಾಣಲಿಲ್ಲವೆಂದು ತೋರುತ್ತದೆ, ಡಿಪ್ಯುಟಿ ಇನ್ಸಪೆಕ್ಟರರು ಕಂಡಾಬಟ್ಟೆ ಸರ್ಟಿಫಿಕೇಟು ಕೊಡುತ್ತಾರೆಂದು ಬರೆದಿರುವೆನಂತೆ. ಇವರು ಹೀಗೆಲ್ಲಾ ಬರೆಯುವುದನ್ನು ಆಲೋಚಿಸಿದರೆ ಇವರಿಗೆ ವಯೋವೃದ್ಧತ್ವದ ಭ್ರಾಂತಿಯಿರಬಹುದೆನ್ನಬೇಕಾಗುತ್ತದೆ. ಡಿಪ್ಯುಟಿ ಇನ್ಸಪೆಕ್ಟರರು ಪರೀಕ್ಷಾ ಕಾಲದಲ್ಲಿ ಹಿಟ್ಟೂ ಬೂದಿಯೂ ಒಂದಾಗದಂತೆ ಸೂಕ್ಷ್ಮ ಪ್ರಯತ್ನ ನಡೆಸಬೇಕಾಗಿ ನನ್ನ ಸವಿನಯ ವಿನಂತಿಯೆಂದಷ್ಟೇ ನಾನು ಬರೆದುದು. ಅದು ನಿಮ್ಮ ಕಣ್ಣಿಗೆ ಸರಿಯಾಗಿ ಕಾಣದಿದ್ದರೆ ನಾನೇನು ಮಾಡಲಿ? ಆ ಮೇಲೆ ಲೇಖನವನ್ನೋದಿದರೆ ಈ ತೆರನ ಹುಸಿಹುಸಿ ಕಲ್ಪನೆಗಳ ಹವ್ಯಾಸಕ್ಕೆ ಅವಕಾಶವಿಲ್ಲ. ಮೇಲಿನ ನನ್ನ ವಿನಂತಿಯಿಂದ ನಾನು ಡಿಪ್ಯುಟಿ ಇನ್ಸಪೆಕ್ಟರರಿಗಿಂತ ಹೆಚ್ಚು ಕಲಿತವನೆಂದಾಗಲೀ, ಅವರ ಮೇಲಧಿಕಾರಿಯೆಂದಾಗಲೀ ಆಗಲಿಲ್ಲ.

ಕುಂಬಾಯು ಸಂಸ್ಥಾನದಲ್ಲಿರುವಂತೆ ಲೋವರ್ ಗ್ರೇಡಿನವರಿಗೆ ಬಿ. ಎ. ಎಂ. ಎ. ಎಲ್. ಎಲ್. ಬಿ. ಎಂ. ಬಿ. ಸಿ. ಎಂ. ಇಂಜಿನಿಯರಿಂಗ್ ಕಲಿಸುವ ರಾತ್ರಿಶಾಲೆಗಳನ್ನು (?) ಮದ್ರಾಸು ಸಂಸ್ಥಾನದಲ್ಲಿ ಇಟ್ಟರೆ ನನಗೇನೂ ಹೊಟ್ಟೆಯೊಳಗೆ ಬೆಂಕಿ (?) ಬರಲಿಕ್ಕಿಲ್ಲ. ನಿಮ್ಮ ಸಾಧನೆಯಿಂದ ಅವುಗಳೆಲ್ಲಾ ಆದುವೆಂದರೆ ನಿಮ್ಮ ಉಪಕಾರವನ್ನು ಇಡೀ ಸಂಸ್ಥಾನವು ಹೊಗಳಬಹುದು. ನಾನೇನೂ ನನ್ನ ಲೇಖನವನ್ನು ಹೊಟ್ಟೆಯುರಿಯಿಂದ ಬರೆದುದಲ್ಲ. ನೀವು ಹಾಗೆ ಎಣಿಸಿದ್ದೇ ಆದರೆ ಅದು ನಿಮ್ಮ ಭ್ರಾಂತಿ.

ನಾನೇನೋ ಒಂದು ಕಸುಬಿನಲ್ಲಿದ್ದೇನೆ. ನನಗೆ ಮುಂಬಾಯಿಗೆ ಹೋಗಿ ಸೆಕೆಂಡರಿ ಗ್ರೇಡ್ ಪರೀಕ್ಷೆಗೆ ನಿಲ್ಲಲು ಸಾಧ್ಯವಿಲ್ಲ. ಬೇರೆ ಯಾರಾದರೂ ಹೋಗುವವರಿದ್ದರೆ ತಮ್ಮ ಕೊಡುಗೈಯ ದ್ರವ್ಯ ಸಹಾಯವೇನಾದರೂ ಇದ್ದರೆ ತಿಳಿಸಿಬಿಡಿ. ತಾವು ಇಡೀ ಹಿಂದೂಸ್ಥಾನದ ವಿದ್ಯಾ ವಿಷಯಕವಾದ ಸಮಸ್ತ ಅನುಭವಗಳನ್ನು ಪಡೆದ ಪ್ರಾಜ್ಞರಿರಬಹುದು. ಆದುದರಿಂದ 'ನ್ಯಾಟ್ ಸ್ಕೂಲಿನ ಇತಿಹಾಸ ಚರಿತ್ರ ವೈಭವ' ಎಂದು ಯಾವುದಾದರೊಂದು ಹೆಸರಿನಿಂದ ಒಂದು ಗ್ರಂಥವನ್ನು ಬರೆದು ಯಾವುದಾದರೊಂದು ಪ್ರೆಸ್ಸಿಗೆ ಪ್ರಕಟನೆಗೆ ಕೊಡಿರಿ. ಆ ಮೂಲಕವಾದರೂ ನಾವು ನ್ಯಾಟ್ ಸ್ಕೂಲ್ ವಿದ್ಯಾ ನಿಬಂಧನೆಗಳ ಅನುಭವ ಪಡೆಯುತ್ತೇವೆ. ನಿಮಗೂ ಸ್ವಲ್ಪ ರೊಕ್ಕ ಸಿಕ್ಕಬಹುದು. ಸ್ವಾಮಿ, ರಾಯರೇ! ಈ ಸಂದರ್ಭವನ್ನು ಬಿಟ್ಟುಬಿಡದಿರಿ. ನಾಳೆಗೆ ಎಂದರೆ ಗಣಪತಿ ಮದುವೆಯಾದೀತು. ನಿಮ್ಮ ಹೊಟ್ಟೆ ತಣ್ಣಗಿರಲಿ. ಅನೇಕಾನೇಕ ನಮಸ್ಕಾರಗಳು.

'ಹಾಯರ್ ಗ್ರೇಡಿನವರಲ್ಲೊಬ್ಬ'

## ಮಲೇರಿಯಾ ಪ್ರಾಂತ್ಯದವರಲ್ಲಿ ಅತ್ಯಗತ್ಯ ವಿನಂತಿ

ಸರ್ವ ಭಕ್ಷಕ ಮಲೇರಿಯಾ ಜ್ವರವು ನಮ್ಮಾಪಿಸುತ್ತಾ ಒಂದೆಂದು ಅದರ ಅನುಭವವುಳ್ಳ ತಮಗೆಲ್ಲರಿಗೂ ಗೊತ್ತಿರುವ ವಿಚಾರವಷ್ಟೆ. ಈ ರೋಗದಿಂದ ಏನೆಲ್ಲಾ ಕಷ್ಟನಷ್ಟಗಳು ಸಂಭವಿಸಿ ಜನರು ಭ್ರಷ್ಟರಾಗುವರೆಂಬುದನ್ನು ನಿಮಗೆ ತಿಳಿಸಬೇಕಾಗಿಲ್ಲ. ಆದುದರಿಂದಲೇ ಸರ್ವಭಕ್ಷಕನೆಂದು ಉಲ್ಲೇಖಿಸಿರುವೆನು.

ಈ ಭಯಂಕರ ಜ್ವರದ ಮಲೇರಿಯಾ ಜ್ವರದ ಮುಖ್ಯ ಕಾರಣವೆಂದರೆ ಅತಿ ಸೂಕ್ಷ್ಮವಾಗಿ ಪರಿಣಾಹ ಮಲೇರಿಯಾ ಕ್ರಿಮಿಗಳು. ಮುಖ್ಯವಾಗಿ ಇವುಗಳ ವಾಸಸ್ಥಾನವು ಕೊಳಕು ನೀರು, ಗಲೀಜು ಸ್ಥಳಗಳು, ನಿಂತನೀರು, ಅಶುದ್ಧವಾದ ವಾತಾವರಣ — ಇತ್ಯಾದಿ ಇತ್ಯಾದಿ.

ಈ ಕ್ರಿಮಿಗಳು ಮಲೇರಿಯಾ ನೊಣಗಳಿಂದ ಗೊತ್ತಾದ ತದನಂತರ ಈ ನೊಣಗಳನ್ನು ನಿರ್ಮೂಲಿಸಬೇಕಾದರೆ ಅವುಗಳ ವಾಸಸ್ಥಾನಗಳಿಗೆ ಕೊಡಲಿಯನ್ನಿಡುವುದೇ ಮುಖ್ಯ ಮದ್ದು. ಆದುದರಿಂದ ಇದಕ್ಕಾಗಿ ಈ ಕೆಳಗಿನ ನಿಯಮವನ್ನು ಅನುಸರಿಸುವುದು ಅಗತ್ಯ.

ಈ ಕೆಲಸವನ್ನು ಪಂಚಾಯತರು ವಹಿಸುವುದೊಳಿತು. ಈ ಕೆಲಸಕ್ಕೆ ಬೇಕಾದುದು ಮಲೇರಿಯಕ್ಕಾಗಿ ಉಪಯೋಗಿಸುವ ಒಂದು ಪಿಚಕಾರಿ, ಮಲೇರಿಯದ ಎಂಣೆ ಮತ್ತು ಕಾರ್ಯಕರ್ತರುಗಳು. ಒಂದು ಊರನ್ನು ಅನೇಕ ಯೋಗ್ಯ ವಿಭಾಗಗಳನ್ನಾಗಿ ವಿಂಗಡಿಸಬೇಕು. ಒಂದೊಂದು ವಿಭಾಗದಲ್ಲಿ ಒಬ್ಬೊಬ್ಬರು ಜನರು ಒಬ್ಬೊಬ್ಬರು ಆಳುಗಳನ್ನು ಹಾರೆ, ಬುಟ್ಟಿ, ಕತ್ತಿಗಳೊಡನೆ ಕರಕೊಂಡು ಹೋಗಿ ಮೇಲೆ ವಿವರಿಸಿದ ಸ್ಥಳಗಳನ್ನು ಪರಿಶೀಲಿಸಬೇಕು. ನಿಂತ ನೀರಿದ್ದರೆ ಅದನ್ನು ಸರಿಯಾಗಿ ಪ್ರವಹಿಸುವಂತೆ ಮಾಡುವುದು. ಕೆಸರು ನೀರನ್ನು ಮಣ್ಣಿಲೆ ಒಳ್ಳೆಯ ಪ ಗ್ಗರಚ ಮುಚ್ಚುವುದು, ಅಶುದ್ಧವಾದ ವಾತಾವರಣವನ್ನು ಶುದ್ಧ ಪಡಿಸುವುದು. ಅದೂ ಆಗದಿದ್ದರೆ ಅಥವಾ ಅದರೂ ಪಿಚಕಾರಿಯ ಮೂಲಕ ಎಣ್ಣೆಯನ್ನು ಬಿಡುವುದು. ಹೀಗೆ ಮಾಡಿದರೆ ತಕ್ಕಮಟ್ಟಿನ ಕಾರ್ಯವನ್ನು ಮಾಡಿದಂತಾದೀತು.

ಅಶುದ್ಧ ವಾತಾವರಣದ ಕುರಿತು ಸ್ವಲ್ಪದರಲ್ಲಿ ಹೇಳುವೆನು. ಮನೆಯ ಸಮೀಪ ಅಂಗಳದಲ್ಲಿ ಸಿಕ್ಕಲ್ಲಿ ಉಗುಳುವುದು ಮೊದಲನೆಯ ದುರಭ್ಯಾಸವು. ಮನೆಯವರು ಅಂಗಳದಲ್ಲಿ ಒಂದು ಬುಟ್ಟಿ ಅಥವಾ ಒಂದು ಪಾತ್ರೆಯನ್ನಿಟ್ಟು ಅದರಲ್ಲಿ ಎಲ್ಲರೂ ಉಗುಳುವಂತೆ ಮಾಡಬಹುದು. ಒಂದು ವಾರದ ತದನಂತರ ಅದನ್ನು ದೂರ ಮಣ್ಣನಡಿ ಹೂತಿಡಬಹುದು. ಮನೆಯ ಆಸುಪಾಸು ಯಾವ ತರದ ಗಲೀಜನ್ನು ಇಡುವಂತೆ ಬಿಡಬಾರದು. ಈ ರೀತಿ ಮನೆಯನ್ನು ಶುಚಿಯಾಗಿಟ್ಟರೆ ಅಶುದ್ಧ ವಾತಾವರಣಕ್ಕೆ ಆಸ್ಪದವಿಲ್ಲ.

ಹೊಳೆಯ ದಡ, ತೋಟದ ಕೋಲೆ ಇಲ್ಲಿ ಮುಖ್ಯವಾಗಿ ಗಮನವನ್ನೀಯಬೇಕು. ಈ ಪ್ರಕಾರ ಕೆಲಸವು ಸರಿಯಾಗಿ ವಾರಕ್ಕೊಂದು ಸಲವಾದರೂ ನಡೆದರೆ ಮಲೇರಿಯದ ಕಾಟವು ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಉದಾ — ಧರ್ಮಸ್ಥಳ.

ಇದಿಷ್ಟು ಬರೆದುದು ಪುಸ್ತಕದ ಪಾಂಡಿತ್ಯದಿಂದಲ್ಲ. ಅನುಭವ ಬಲದಿಂದಲೇ. ನಮ್ಮೂರಲ್ಲಿ ಎರಡು ಮೂರು ವರ್ಷಗಳಿಂದೀಚೆ ಈ ಕಾರ್ಯವು ಸಮಾಧಾನಕರವಾಗಿದೆಯೆಂದು ಹೇಳಲಸಾಧ್ಯವಾದರೂ, -ನಡೆಕೊಂಡುಬರುತ್ತದೆ. ಈ ವರುಷ ನಮ್ಮೂರ ಯುವಕ ಸಂಘದವರೇ ಈ ಕಾರ್ಯವನ್ನು ಪಂಚಾಯತರ ನೇತೃತ್ವದಲ್ಲಿ ನಡೆಯಿಸುತ್ತಿದ್ದಾರೆ. ಈ ರೀತಿ ಪರ ಊರ ಯುವಕರೂ ಪಂಚಾಯತದವರೂ ಒಗ್ಗಟ್ಟಾಗಿ ಕಾಲನಂತಿರುವ ಮಲೇರಿಯಾ ಪ್ರಾಣಿಗಳ ಸಂಹಾರ ಕಾರ್ಯವನ್ನು ಕೈಕೊಂಡರೆ, ತದನಂತರ ಆಸ್ಪತ್ರೆಯ ಕಹಿಮದ್ದುಗಳನ್ನು ತೆಗೆದುಕೊಂಡು ಯಾ ಉಷ್ಣ ಕ್ವಿನೀನನ್ನು ಸೇವಿಸಿ, ಬಡವರು ಉಷ್ಣದಿಂದಲೂ ಬಧಿರತ್ವದಿಂದಲೂ ಕೆಲದಿನಗಳ ತನಕ ಕಷ್ಟಪಟ್ಟು ನಷ್ಟಪಡುವ ಅಗತ್ಯವಿಲ್ಲ. ಆದುದರಿಂದ ಊರ ಜನರೇ! ಜಾಗ್ರತರಾಗಿರಿ. ಇದೂ ದೇಶಸೇವೆಯೇ! ಇದಿಷ್ಟೇ ನನ್ನ ವಿನಂತಿ.

ಅಧ್ಯಕ್ಷ, ಮುಂಡಾಜೆ ಪಂಚಾಯತ ಬೋರ್ಡು

## ಒಂದು ಅಗತ್ಯ

ಕಾವಳಕಟ್ಟೆ ಸರ್ಕಲಿನ ತಾಲೂಕು ಬೋರ್ಡು ಮೆಂಬರರಾದ ಶ್ರೀಯುತ ಬಳ್ಕುಂಜೆ ರಾಮಭಟ್ಟರವರು ಬಂಟ್ವಾಳ ಬೋರ್ಡು ಹುಡುಗಿಯರ ಶಾಲೆಯ ಉದ್ಧಾರ ಕಾರ್ಯಕ್ಕೆ ಕೈಹಚ್ಚಿರುತ್ತಾರೆಂದು ಕೇಳುತ್ತೇವೆ. ಅದು ಸ್ತುತ್ಯವೇ. ಆದರೆ ನಮ್ಮ ಊರಿನ ಬೋರ್ಡು ಶಾಲೆಯನ್ನು ಹಾಯರ್ ಎಲಿಮೆಂಟರಿ ಮಾಡಲಿಕ್ಕೆ ಯಾಕೆ ಮರೆತಿರುವರೆಂದು ತಿಳಿಯುವುದಿಲ್ಲ. ಅದನ್ನಾದರೂ ಹಾಯರ್ ಎಲಿಮೆಂಟರಿ ಮಾಡಿದರೆ ಸುತ್ತಮುತ್ತಲಿನ ಜನರಿಗೆ ತುಂಬಾ ವಿದ್ಯೆಗೆ ಸಹಾಯವಾಗುತ್ತಿತ್ತು. ಮತ್ತು ಕಾರಂಜೆ ಕೆರೆ ಬಳಿಯಲ್ಲಿ ಬಾವಿ ಮಾಡಬೇಕೆಂಬ ಪ್ರಯತ್ನದಲ್ಲಿದ್ದಾರೆಂದು ವರ್ತಮಾನ ಕೇಳುತ್ತೇವೆ. ಅಷ್ಟು ದೊಡ್ಡ ಕೆರೆ ಇದ್ದು, ಮೂರು ದಿವಸ ಜಾತ್ರೆಗಾಗಿ ಅಗತ್ಯವುಳ್ಳ ಒಂದು ಕಾರ್ಯವಿದೆ—ಏನಂದರೆ ಅಲ್ಲಿಯ ಕೆರೆಯ ಪಶ್ಚಿಮ ದಿಕ್ಕಿಗೆ ಒಂದು ಸಣ್ಣ ಕೊರಡಿ ಕಟ್ಟಿಸುವುದು ಅಗತ್ಯ. ಯಾಕೆಂದರೆ ಆ ಜಾತ್ರೆಗೆ ಸುತ್ತಮುತ್ತಲು ಯಾತ್ರಾರ್ಥಿಗಳು ಹೋದರೆ, ಗಂಜಿ ಬೇಯಿಸಲಿಕ್ಕೆ ಒಂದು ಆಶ್ರಯವಿರುವುದಿಲ್ಲ. ಆದುದರಿಂದ ತಾಲೂಕು ಬೋರ್ಡಿನವರಾಗಲಿ ಹಲವು ಮಹನೀಯರ ಸಹಾಯದಿಂದಾಗಲಿ ಒಂದು ಸಣ್ಣ ಜಗಲಿ ಇದ್ದು ಒಂದು ಕೋಣೆಯ ಕಟ್ಟಡ ಕಟ್ಟಿಸಿದರೆ ಸದರಿ ಭಟ್ಟರ ಕೀರ್ತಿ ಆಚಂದ್ರಾರ್ಕವಾಗಿ ಉಳಿಯುತ್ತಿತ್ತು. ಮತ್ತು ಅದೇ ಕಾರಂಜೆಯ ತೇರು ಬೀದಿಯ ವರೆಗೆ ಇರುವ ಮಾರ್ಗವನ್ನು ಪೂರ್ವ ಕಡೆ ಸಾದಿ ತರುವರೆ ಹಿಂದಕ್ಕೆ ಯಾರೋ ಕಡಿದ ದಾರಿಯನ್ನೇ ದಸ್ತೆಯಾಗಿ ಕಡಿಸುವ ಪ್ರಯತ್ನ ಮಾಡಿ ಆ ಮಾರ್ಗ ಮಟ್ಟಸವಾಗಿ ಕೂಡುವ ಹಾಗೆ ಮಾಡಿದರೆ ಇವರ ಪ್ರಯತ್ನವನ್ನು ಜನರು ತುಂಬಾ ಕೊಂಡಾಡುವರು. ಇನ್ನೊಂದು ಅತ್ಯಗತ್ಯ ಕಾರ್ಯವಿದೆ. ಇದು ಯಾರು ಮಾಡಿಸುವರೆಂದು ನನಗೆ ತಿಳಿಯದು. ಯಾವುದೆಂದರೆ ಆ ದೊಡ್ಡ ಕೆರೆಗೆ ದಕ್ಷಿಣ ದಿಕ್ಕಿನಿಂದ ಗುಡ್ಡೆಯಿಂದ ಇಳಿದು ಬರುವ ಮಳೆಯ ಮಳೆನೀರು ಬಂದು ಕೂಡುವುದರಿಂದ ಈಗೀಗ ಆ ಕೆರೆ ತುಂಬುತ್ತ ಬರುತ್ತಿದೆ. ಇದನ್ನು ರಾಜಶ್ರೀ ಪುಣ್ಯವುಳ್ಳ ಭಟ್ಟರವರು ಸ್ವತಃ ನೋಡಿ ಇದನ್ನು ಬಂದು ಮಾಡಿಸಿ ಇದೇ ಕೆರೆಗೆ ಅಡ್ಡಲಾಗಿ ಹಾಕಿದ ಗೋಡೆಯು ಜರಿದು ಹೋದುದನ್ನು ತಿರುಗಿ ಇಡಿಸುವ ಏರ್ಪಾಡು ಮಾಡಿದರೆ ತುಂಬಾ ಉಪಕಾರವಿತ್ತು. ಇಲ್ಲದಿದ್ದರೆ ಇನ್ನು ಸ್ವಲ್ಪ ಸಮಯದಲ್ಲಿಯೇ ತೇರು ಎಳೆಯುವ ಬೀದಿಯಲ್ಲಿ ಅರ್ಧ ಎದೆ ಜಪ್ಪು, ಹೆಟ್ಟಿನ ತೆಂದರೆ ಆಗಲಿಕ್ಕೆ ಉಂಟು. ಇದ ಲಕ್ಷ್ಯವು ಸದರಿ ಮೆಂಬರರಾದ ಶ್ರೀಯುತ ರಾಮ ಭಟ್ಟರವರು ಮಾತ್ರವಲ್ಲ, ಭಕ್ತಪ್ರೇಕ್ಷಕರೆಲ್ಲರಿಗೂ ಸಂಬಂಧವಾದುದೇ.

ಜನಹಿತೈಷಿ

## ಸುರತ್ಕಲ್ಲಲ್ಲಿ 'ರೂರಲ್ ಡಿಸ್ಪೆನ್ಸರಿ'

ಮಂಗಳೂರಿಗೂ ಮುಲ್ಕಿಗೂ ಮಧ್ಯ ಪ್ರದೇಶವೂ ಈ ಪ್ರಾಂತ್ಯದ ಹಲವು ಗ್ರಾಮಗಳಿಗೆ ಕೇಂದ್ರವೂ ಆಗಿರುವ ಸುರತ್ಕಲ್ಲಲ್ಲಿ ಗ್ರಾಮ ವೈದ್ಯಾಲಯವೂ ಹೈಸ್ಕೂಲೂ ಅತ್ಯಗತ್ಯವೆಂದು ಸುಮಾರು ಹತ್ತಿಪ್ಪತ್ತು ವರ್ಷಗಳ ಹಿಂದೆಯೇ ಸ್ವದೇಶಾಭಿಮಾನಿಯು ತನ್ನ ಅಗ್ರಲೇಖನವಾಗಿ ಬರೆದಿದ್ದರೂ, ಸುರತ್ಕಲ ಸೇಕ್ರೆಡ್ ಹಾರ್ಟ್ ಚರ್ಚ್ ಗುರುಗಳೂ, ತಾ. ಬೋ. ಮೆಂಬರರೂ ಆಗಿದ್ದ ದಿವಂಗತ ರೆವರೆಂಡ್ ಫಾದರ್ ಡೆನ್ನಿಸ್ ಕುವೆಲ್ಲೋ ಎಷ್ಟೋ ಒಗೆಯಿಂದ ಪ್ರಯತ್ನಿಸಿದ್ದು ಕಳೆದ ಗ್ರಾಮ ಸೇವಾ ಸಭೆಯಲ್ಲಿ ಈ ಪ್ರಾಂತ್ಯದ ಹಳ್ಳಿಗರೊಂದಾಗಿ ಮನವಿಯನ್ನು ಬರೆದುಕೊಂಡಿದ್ದರೂ, ಇದ ವರೆಗೂ ತಾಲೂಕು ಬೋರ್ಡಿನಿಂದ ಇಲ್ಲೊಂದು ಗ್ರಾಮಾಸ್ಪತ್ರೆಯನ್ನು ತೆರೆಯದಿರುವುದು ಈ ಪ್ರಾಂತ್ಯದ ಹಳ್ಳಿಗರ ದೌರ್ಭಾಗ್ಯವೇ ಸರಿ!

ಈಗಣ ದಯಾಘನ ಅಧ್ಯಕ್ಷ ಮಹಾಶಯರು ಈ ಸಲದ ಬೇಡಿಕೆಯನ್ನಾದರೂ ಸಫಲಗೊಳಿಸಿ ಶೀಘ್ರದಲ್ಲೇ ಸುರತ್ಕಲ್ಲಲ್ಲೊಂದು ರೂರಲ್ ಡಿಸ್ಪೆನ್ಸರಿಯನ್ನು ತೆರೆದು ಬಡಹಳ್ಳಿಗರ ಸಂಕಷ್ಟ ನಿವಾರಣೆಯನ್ನೆಸಗಬೇಕೆಂಬುದೇ ನಮ್ಮೆಲ್ಲರ ಹಾರ್ದಿಕ.

ಸುರತ್ಕಲ ೧-೧-೩೩

ಊರಿನವ

# ನೋಟೀಸು

## ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 3/9/31 R. I. A. No. 836/32

ನಾರಾಯಣ ಉಪಾಧ್ಯ—ಅರ್ಜಿದಾರ (ವಾದಿ)

ಮತ್ತು

ನರಸಿಂಹ ವ್ಯಾತಾಳ, ಶ್ರೀನಿವಾಸ ವ್ಯಾತಾಳರ ಮಗ—೧ನೇ ಎದ್ರಿ, ರಾಮಚಂದ್ರ ವ್ಯಾತಾಳ, ಲಕ್ಷ್ಮೀನಾರಾಯಣ ವಿತಾಳರ ಮಗ—೨ನೇ ಎದ್ರಿ, ಉಡ್ಪಿ ತಾಲೂಕು ಶಿವಳ್ಳಿ ಕಸಬ ಗ್ರಾಮದವರು—

ಮೇಲ್ಕಂಡ ವ್ಯಾಜ್ಯದಲ್ಲಿ ಎದ್ರಿರು ವಗೈರರ ಮೇಲೆ ತೀರ್ಮಾನ ಪಡಕೊಂಡ ಪ್ರಿಲಿಮಿನರಿ ಈಡಿನ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 9-1-1933ಕ್ಕೆ ತನಿಕೆಗೆಯಿಟ್ಟಿರುತ್ತದೆ. ಅದಕ್ಕೆ ಆಕ್ಷೇಪವಿದ್ದರೆ ಎದ್ರಿರು ಸದರಿ ತಾರೀಕಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

Udipi, 28—12—32.

**B. Srinivasa Rau,**
*Advocate for Petitioner.*

ನಾಳೆ— ಈ ದಿನ—
ನಿಮಗೆ ಬೇಕಾದುದು!

## ರಬ್ಬರ್ ಮೊಹರುಗಳು

ಬ ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ಕಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು, ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳಿ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ

ಪ್ರೆ ಸೂ —ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು

ಹೆಡ್ ಆಫೀಸು—

ದಿ ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,
No 2 ಬಲ್ಮಠ ರಸ್ತೆ, ಮಂಗಳೂರು,
ದ ಕನ್ನಡ



# 1933.

1933ನೇ ಇಸವಿಯ

## ಸುಂದರವಾದ ಬ್ಲ್ಯಾಂಡಿನ

ಮತ್ತು

## ಕಾಗದದ

ಸಣ್ಣ ಸ್ಸಾಜು ಮತ್ತು ದೊಡ್ಡ ಸ್ಸಾಜು

## ಡೈರಿಗಳು.

ಶಾರದಾ ಛಾಪಖಾನೆ
ಮಂಗಳೂರು

ಇಲ್ಲಿಗೆ ಬರೆದುಕೊಳ್ಳಿರಿ



## S U N & CO

*Choukhamba Benares City*

**ಮೂರು ಇನಾಮುಗಳು**

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಉಷ್ಣಾಂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ ೨ ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3-8-0, 4—8-0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8-0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಕ್ವಾಮಿಗೆ ಮಿಶ್ಶನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ 1 ಅಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)



## ಕೇಸರಿಯವರ

# ಲೋಧ್ರ

## ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು. ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟ್ಲ್ ೧೨ ಔನ್ಸ್ ರೂ ೩—೦—೦
ಸಣ್ಣ ಬಾಟ್ಲ್ ೬ ಔನ್ಸ್ ರೂ ೧—೧೦—೦

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರಂ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ— ಪೋಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು
ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು



The Zandu Pharmaceutical Works, Ltd., Bombay, 14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

## 'ಝಾಂಡು ಚ್ಯವನಪ್ರಾಶ ಲೇಹವು.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!**

ಹಸಿ ಆಮಲಕ ಇನ್ನು ಇತರ ವನೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/— ಕ್ರಯ 1 ಪಾನು ಸೀಸೆ ರೂ. 2/8, ½ ಪಾ. ರೂ. 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಶಾ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್. ಎಚ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು:— ಟಿ ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ ಪೂಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



ಪಂಡಿತ ಡಿ ಗೋಪಾಲಚಾರ್ಯರ

## ಜೀವಾಮೃತ.

ದೇಹಪುಷ್ಟಿ ಜ್ಞಾಪಕ ಶಕ್ತಿ

೧೮೬೮ನೇ ವರ್ಷದಿಂದಲೂ ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧಿಹೊಂದಿದ ಆರೋಗ್ಯಪ್ರದಾಯಿನಿ

ಇದರ ಉಪಯೋಗದಿಂದ—

ಬಲಹೀನರಿಗೆ—ಬಲವನ್ನೂ, ದುರ್ಬಲರಿಗೆ—ಪಟುತ್ವವನ್ನೂ,
ನಿದ್ರಾಹೀನರಿಗೆ—ಸುಖನಿದ್ರೆಯನ್ನೂ ನರಗಳ ಸೆಳೆತಕ್ಕೆ—ಖಂಡಪುಷ್ಟಿಯನ್ನೂ,
ಜೀರ್ಣಶಕ್ತಿಯಿಲ್ಲದವರಿಗೆ—ಜೀರ್ಣಶಕ್ತಿಯನ್ನೂ, ರಕ್ತಹೀನರಿಗೆ—ರಕ್ತಪುಷ್ಟಿಯನ್ನೂ,
ತೇಜೋಹೀನರಿಗೆ—ತೇಜಸ್ಸನ್ನೂ, ಮಂದಬುದ್ಧಿಗಳಿಗೆ—ಉಲ್ಲಾಸವನ್ನೂ,
ಜ್ಞಾಪಕಶಕ್ತಿಯಿಲ್ಲದವರಿಗೆ—ಜ್ಞಾಪಕಶಕ್ತಿಯನ್ನೂ,

ಇನ್ನು ಅನೇಕ ಅಸಂಖ್ಯಾತವಾದ ಎಷ್ಟೋ ಸುಗುಣಗಳನ್ನೂ ಉಂಟುಮಾಡುತ್ತದೆ ಸ್ತ್ರೀಪುರುಷರು ಎಲ್ಲಾ ವಯಸ್ಸುಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಸೇವಿಸಬಹುದಾದ ದಿವ್ಯವಾದ ಟಾನಿಕ್ಕು ಎರಡು ಸೈಜುಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

ದೊಡ್ಡ ಸ್ಸಾಜು ರೂ ೩—೮—೦ ಸಣ್ಣ ಸ್ಸಾಜು ರೂ. ೧—೧೨—೦.

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ ೩೦೭, ಮದ್ರಾಸು.

ಸೋಲ್ ಏಜಂಟರು – ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು.
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

P No 140

### ಸಂಯುಕ್ತ ಹಿಂದೂಸ್ಥಾನಕ್ಕೆ

## ಯುಕ್ತವಾದ ವಿದ್ಯಾಭ್ಯಾಸ.

ಡಾಕ್ಟರ್ ಕೆ. ಎಸ್. ಕಿಣಿ, ಎಮ್. ಎ. ಪಿ. ಎಚ್. ಡಿ.
ಹೆಡ್‌ಮಾಸ್ತರ್, ಗ೦ ಹೈಸ್ಕೂಲ್, ಮುಲ್ಕೀಶ್ವರಂ

ಲೇಖನ ೨

### ಶಿಕ್ಷಣ ಶಾಖಾ ಅಡಳಿತ.

೧. ಇನ್ನುಮುಂದೆ ನಮ್ಮ ಹಿಂದೂಸ್ಥಾನದಲ್ಲಿ ಶಿಕ್ಷಣ ಸುಧಾರಣೆಗಳು ಸಾಮಾನ್ಯವಾಗಿಯೂ, ಸುಲಭವಾಗಿಯೂ ಇರಲಾರವು ಸಾಮಾಜಿಕ, ಆರ್ಥಿಕ ಮತ್ತು ಬೌದ್ಧಿಕ ವ್ಯತ್ಯಾಸಗಳುಳ್ಳ ಈ ದೇಶದಲ್ಲಿನ ಅನೇಕ ಜನಸಮುದಾಯಗಳಿಗೆ ಬೇರೆ ಬೇರೆ ಪಾಠಶಾಲೆಗಳು ಏರ್ಪಡಿಸಲ್ಪಡಬೇಕು, ಕ್ರಮೇಣ ಈ ಪಾಠಶಾಲೆಗಳ ಸಂಖ್ಯೆಯು ಬಹುವಾಗಿ ಹೆಚ್ಚುವವು, ಶಿಕ್ಷಣ ಶಾಸ್ತ್ರದಲ್ಲಿಯೂ ಕೂಡ ಶೋಧನಾ ಕಾರ್ಯಗಳು ನಡೆಯಬೇಕು ಈಗ ಈ ವಿಧವಾದ ಶೋಧನೆಯು ನಮ್ಮ ದೇಶದಲ್ಲಿ ನಡೆಯುತ್ತಿರುವುದು ಅತಿ ವಿರಳ / ಇದೂ ಅಲ್ಲದೆ ವಿದ್ಯಾಭ್ಯಾಸವು ದೇಶದಲ್ಲಿ ಎಷ್ಟುಮಟ್ಟಿಗೆ ಹರಡಿದೆ ಎಂಬುದನ್ನೂ, ಮತ್ತು ಯಾವ ಮಾರ್ಪಾಟುಗಳ ಅವಶ್ಯಕವೆಂಬುದನ್ನೂ ವಿಚಾರಮಾಡುವುದಕ್ಕಾಗಿ "ವಿದ್ಯಾಭ್ಯಾಸದ ಕಮಿಟಿಗಳು ಆಗಿಂದಾಗ್ಗೆ ಏರ್ಪಡಿಸಲ್ಪಡಬೇಕು

೨ ಈಗ ನಮ್ಮ ದೇಶದಲ್ಲಿ ಔದ್ಯೋಗಿಕ-ಶಿಕ್ಷಣ-ಸುಧಾರಣೆಗಳು ಇನ್ನೂ ಕ್ರಮವಾಗಿ ನಡೆಯುತ್ತಿಲ್ಲವೆಂಬ ವಿಚಾರವು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಈ ವಿಧವಾದ ಸುಧಾರಣೆಗಳನ್ನು ಕೈಕೊಳ್ಳಬೇಕಾದರೆ ಆ ಶಾಸ್ತ್ರದಲ್ಲಿ ಸರಿಯಾದ ಶಿಕ್ಷಣವನ್ನು ಪಡೆದಿರುವ ಪ್ರೌಢ ಶಾಸ್ತ್ರಜ್ಞರು ಬೇಕು ಔದ್ಯೋಗಿಕ ಶಿಕ್ಷಣ ಶಾಲೆಗಳಲ್ಲಿ ಬೇರೆ ಬೇರೆ ವರ್ಗಗಳಿಗೆ ಉಚಿತವರಿತು ಶಿಕ್ಷಣ ಕೊಡಲು ಉತ್ತಮವಾದ ಬೋಧನಾ ಕ್ರಮಗಳನ್ನು ಕಂಡು ಹಿಡಿಯಬೇಕು ಇಂತಹ ಶಾಸ್ತ್ರಜ್ಞರು ತಮ್ಮ ಪ್ರತಿಭೆಯನ್ನುಪಯೋಗಿಸಿ ಹೊಸದಾಗಿ ಮುಂದುವರಿದ ಸುಧಾರಣೆಗಳನ್ನು ಮಾಡಬೇಕಾಗುವುದು. ಈ ವಿಸ್ತಾರವಾದ ಭರತಖಂಡದಲ್ಲಿರುವ ಅನೇಕ ಪಾಠಶಾಲೆಗಳಲ್ಲಿ ಬೋಧನಾ ಕ್ರಮ, ಪಾಠವಿಷಯಗಳು ಮುಂತಾದುವುಗಳಲ್ಲಿ ವ್ಯತ್ಯಾಸಗಳು ಕಂಡುಬರುವುದು ಸಹಜವಷ್ಟೆ ಆದರೆ ಈ ವ್ಯತ್ಯಾಸಗಳನ್ನು ಕಡಿಮೆ ಮಾಡಿ ಸಮತೆಯನ್ನು ಸ್ಥಾಪಿಸಲು ಪ್ರಯತ್ನಪಡಬೇಕು ಇದಕ್ಕಾಗಿ ಒಂದು ಕೇಂದ್ರ ಪ್ರೌಢ ಪಾಠಶಾಲೆಯು ಸ್ಥಾಪಿಸಲ್ಪಡಬೇಕು ಸಾಮಾನ್ಯ ಶಾಸ್ತ್ರ ಶಾಲೆಗಳಿಗೆ ಮತ್ತು ಔದ್ಯೋಗಿಕ ಶಾಸ್ತ್ರ ಶಾಲೆಗಳಿಗೂ ದಕ್ಷರಾದ ಶಿಕ್ಷಕರನ್ನು ತಯಾರುಮಾಡುವುದೇ ಈ ಪ್ರೌಢ ಶಾಲೆಯನ್ನು ಸ್ಥಾಪಿಸುವುದರ ಉದ್ದೇಶ ಇದಕ್ಕಾಗುವ ಖರ್ಚು ಸ್ಥಳೀಯ ಮತ್ತು ಪ್ರಾಂತಿಕ ಸರಕಾರಗಳಿಂದಲೂ ಕೇಂದ್ರ ಸರಕಾರಗಳಿಂದಲೂ ಒದಗಿಸಲ್ಪಡತಕ್ಕದ್ದು

### ಸ್ತ್ರೀ ವಿದ್ಯಾಭ್ಯಾಸ.

೩ ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸಬೇಕಾದುದು ನಮ್ಮ ದೇಶದ ಜನರು ಉತ್ಸಾಹಿಗಳಾಗಿರುವುದು ಬಹು ಮುಖ್ಯವಾದ ವಿಷಯವಾಗಿರುತ್ತದೆ. ಈಚೆಗೆ ನಮ್ಮ ಜನರಲ್ಲಿ ಅವಿಭಕ್ತ ಕುಟುಂಬಗಳಾಗಿರುವುದು ಕಡಿಮೆಯಾಗಲು ಪ್ರಾರಂಭವಾಗಿದೆ ಪ್ರಯಾಣ ಸೌಕರ್ಯಗಳು, ಕೈಗಾರಿಕೆಗಳು ಮತ್ತು ವಾಣಿಜ್ಯ ಇವುಗಳು ಹೆಚ್ಚಿದ ಹಾಗೆಲ್ಲಾ ಜನರು ದೇಶದಲ್ಲೆಲ್ಲಾ ಹರಡುವುದು ಹೆಚ್ಚುವುದು. ಇದರಿಂದ ಜನರು ಒಂಟಿಗರಾಗಿರುವುದು ಹೆಚ್ಚುವುದು ಈಗಾಗಲೇ ಹೆಚ್ಚುತ್ತಿರುವ ಜೀವನ ಕ್ರಮದ ಅಂತಸ್ತಿನಿಂದ ಜನರು ತಮ್ಮ ಮಕ್ಕಳೊಡನೆ ತಮ್ಮ ಜೀವನವನ್ನೇ ನಡೆಸುವುದು ಕಷ್ಟವಾಗಿ ಪರಿಣಮಿಸಿ, ತಮ್ಮ ಸಹೋದರಿಯರು ಅವರ ಮಕ್ಕಳು ಮುಂತಾದ ಬಂಧುವರ್ಗದವರ ವಿದ್ಯಾಭ್ಯಾಸ ಮೊದಲಾದುವುಗಳಿಗೆ ಖರ್ಚು ಮಾಡಲು ಸಾಧ್ಯವಾಗುವುದಿಲ್ಲ ಈ ಕಾರಣಗಳಿಂದ ಸ್ತ್ರೀಯರು ತಾವೇ ಸ್ವಂತವಾಗಿ ಸಂಪಾದನೆ ಮಾಡಿ ಸ್ವತಂತ್ರವಾಗಿರಬೇಕಾಗುವ ಸಂದರ್ಭಗಳು ಒದಗುವುವು ಈಗಾಗಲೇ ನಮ್ಮ ದೇಶದಲ್ಲಿಯೂ ಕೂಡ ಇಂತಹ ಅವಶ್ಯಕತೆಯು ಒದಗುತ್ತಿದೆ ಇದೂ ಅಲ್ಲದೆ ಬಾಲಕಿಯರಿಗೆ ವಿವಾಹವಾಗಬೇಕಾಗುವ ವಯಸ್ಸು ಹೆಚ್ಚುತ್ತಾ ಇದೆ ಮತ್ತು ಕೆಲ ಸ್ತ್ರೀಯರು ಅವಿವಾಹಿತರಾಗಿಯೇ ಉಳಿಯುತ್ತಾರೆ ಕಾಲಕ್ರಮೇಣ ಇಂತಹ ಬದಲಾವಣೆಗಳು ಹೆಚ್ಚುತ್ತಾ ಬರುವುವು ಈ ಕಾರಣಗಳಿಂದ ಸ್ತ್ರೀಯರೂ ಕೂಡ ತಮ್ಮ ಸ್ವಭಾವಕ್ಕೆ ತಕ್ಕ ಔದ್ಯೋಗಿಕ ಶಿಕ್ಷಣವನ್ನು ಪಡೆಯುವುದು ಅತ್ಯವಶ್ಯಕ ಇದರಿಂದ ಸ್ತ್ರೀಯರೂ ಕೂಡ ತಮ್ಮ ಜೀವಿತವನ್ನು ತಾವೇ ಸಂಪಾದಿಸಿಕೊಳ್ಳಲು ಅವಕಾಶವಾಗುವುದು ಈ ವಿಧವಾದ ಔದ್ಯೋಗಿಕ ಶಿಕ್ಷಣದ ಸೌಧವು ಕ್ರಮವಾದ ಪ್ರಾಥಮಿಕ ವಿದ್ಯಾಭ್ಯಾಸದ ಅಸ್ತಿಭಾರದ ಮೇಲೆಯೇ ಕಟ್ಟಲ್ಪಡಬೇಕು. ಆದುದರಿಂದ ಸ್ತ್ರೀಯರಿಗೂ ಕೂಡ ಸಾಮಾನ್ಯ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಏರ್ಪಡಿಸಲು ಉದಾರಬುದ್ಧಿಯಿಂದ ವರ್ತಿಸಬೇಕು ಪ್ರಾಚೀನ ಪದ್ಧತಿಗಳನ್ನು ಮಾರ್ಪಡಿಸಲೇ ಕೂಡದೆಂದು ಪ್ರತಿಪಾದಿಸುವ ಕೆಲವರು, ಈ ವಿಧವಾದ ಮಾರ್ಪಾಟುಗಳನ್ನು ನೋಡಿ, ಖಂಡಿಸಿ ಅನೇಕ ಅಡಚಣೆಗಳನ್ನು ತರಬಹುದು, ಆದರೆ ಸಾಮಾಜಿಕ ಸುಧಾರಣೆಗಳು ಕ್ರಮೇಣ ಆಗಲೇ ಬೇಕು. ಅವುಗಳಲ್ಲಿ ಸ್ತ್ರೀವಿದ್ಯಾಭ್ಯಾಸವು ಮುಖ್ಯವಾದದ್ದಷ್ಟೆ

### ಹಿಂದುಳಿದ ಪಂಗಡದವರ ವಿದ್ಯಾಭ್ಯಾಸ.

೪ ಜನಾಂಗದ ಸುಧಾರಣೆಗಳಲ್ಲಿ ಹಿಂದುಳಿದ ಪಂಗಡದವರ ಶಿಕ್ಷಣವು ಅತ್ಯವಶ್ಯಕವಾದದ್ದು. ಈ ಪಂಗಡದ ಜನರನ್ನು, ಇನ್ನು ಮುಂದೆ ಈ ನಾಡಿನ ಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದಿಂದ ಪ್ರತ್ಯೇಕಗೊಳಿಸಲಾಗದು ಉತ್ತಮ ಸ್ಥಿತಿಯಲ್ಲಿರುವ ಜನರು, ಈ ಮಹತ್ತರವಾದ ಸಂಖ್ಯೆಯುಳ್ಳ ಜನರನ್ನು ಪ್ರತಿಕಕ್ಷಿಗಳನ್ನಾಗಿ ಬಹುಕಾಲ ಇಟ್ಟುಕೊಳ್ಳಲಾಗದು ವಿಚಾರಮಾಡಿ ನೋಡಿದ್ದಲ್ಲಿ, ನಮ್ಮ ಜನಾಂಗದ ಏಳಿಗೆಗೆ, ಈ ಜನರ ಆರ್ಥಿಕ, ಧಾರ್ಮಿಕ ಮತ್ತು ಬೌದ್ಧಿಕ ಅಭಿವೃದ್ಧಿಯು ಬಹುವಾಗಿ ಕಾರಣವಾಗುವುದರಲ್ಲೇನೂ ಸಂಶಯವಿಲ್ಲವೆಂದು ತಿಳಿಯುವುದು. ಆದುದರಿಂದ ಈ ಪಂಗಡದ ಜನರು ಮುಂದುವರಿಯಲು ಏರ್ಪಾಟುಗಳನ್ನು ಮಾಡುವುದಕ್ಕಾಗಿ ದ್ರವ್ಯವನ್ನು ಏರ್ಪಡಿಸಬೇಕು ಇದಕ್ಕಾಗಿ ಆಗುವ ಖರ್ಚಿನ ಕೆಲಭಾಗವನ್ನೂ ಪ್ರಾಂತಿಕ ಸರಕಾರಗಳೊಂದಲೂ ಮತ್ತೆ ಕೆಲಭಾಗವನ್ನು ಕೇಂದ್ರ ಸರಕಾರದಿಂದಲೂ ಒದಗಿಸತಕ್ಕದ್ದು ಕೇಂದ್ರ ಸರಕಾರದ ದ್ರವ್ಯ ಸಂಪತ್ತಿಯು ಸ್ಥಾಪಿತವಾದದ್ದಲ್ಲ. ಆದುದರಿಂದ ಈ ಮೇಲ್ಕಂಡ ಸುಧಾರಣೆಗಾಗಿ ಆಗುವ ಖರ್ಚನ್ನು ಒದಗಿಸುವುದು ದುರ್ಲಭವಲ್ಲ. ಆದುದರಿಂದ ಕೇಂದ್ರ ಪ್ರಜಾಪ್ರತಿನಿಧಿ ಸಭೆಯವರು ಧಾರಾಳವಾಗಿ ವರ್ತಿಸಿ ಈ ಮೇಲ್ಕಂಡ ಮುಖ್ಯವಾದ ಮತ್ತು ಅವಶ್ಯಕವಾದ ಸಾಮಾಜಿಕ ಅಭಿವೃದ್ಧಿಯ ಕಾರ್ಯಕ್ಕೆ ಆಗುವ ದ್ರವ್ಯವನ್ನು ಒದಗಿಸಬೇಕು

### ವಯಸ್ಕರ ವಿದ್ಯಾಭ್ಯಾಸ

೫ ಇನ್ನೂ ಒಂದು ಅತ್ಯವಶ್ಯಕವಾದ ಸುಧಾರಣೆಯು ವಯಸ್ಕರ ವಿದ್ಯಾಭ್ಯಾಸ ಜನರಲ್ಲಿನ ವಿದ್ಯಾ ಹೀನತೆಯನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ನಿರ್ಮೂಲ ಮಾಡಬೇಕು ಇದಕ್ಕೆ ಒಂದು 'ವಯಸ್ಕರ ಶಿಕ್ಷಣದ ಕಾನೂನನ್ನು' ಜಾರಿಗೆ ತರುವುದು ಮುಖ್ಯೋಪಾಯ ಇದಕ್ಕೆ ಪ್ರಾಂತಿಕ ಮತ್ತು ಸ್ಥಳೀಯ ಸರಕಾರಗಳು ಪೂರ್ವಭಾವಿಗಳಾಗಿ ವರ್ತಿಸಬೇಕು. ವಿದ್ಯೆಯು ಸದಾ ಆರ್ಜನೆ ಮಾಡಲ್ಪಡತಕ್ಕದಾಗಿದೆ ನಾಡಿನ ಎಲ್ಲಾ ಜನರೂ ತಮ್ಮ ತಮ್ಮ ಉದ್ಯೋಗಗಳ ದಕ್ಷತೆಯಿಂದ ಅನುಸರಿಸುವುದಕ್ಕೂ, ಸಾಮಾನ್ಯವಾಗಿ ಪ್ರಪಂಚ ಜ್ಞಾನವನ್ನು ಸಂಪಾದಿಸುವುದಕ್ಕೂ ಶಿಕ್ಷಣವನ್ನು ಪಡೆಯಲು ಅವಕಾಶವಿರಬೇಕು. ಆದುದರಿಂದ ಕೇವಲ ಅಕ್ಷರಸ್ಥರು ಮಾತ್ರವೇ ಅಲ್ಲ ವಯಸ್ಸರಿಗೂ ಕೂಡ ಭಾಷೆ ಮತ್ತು ಸಾಹಿತ್ಯ ಇವುಗಳ ಅಭ್ಯಾಸಮಾಡಿ ತಮ್ಮ ವಿದ್ಯೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುವುದಕ್ಕೂ ತಾವು ಅನುಸರಿಸುತ್ತಿರುವ ಉದ್ಯೋಗಗಳಲ್ಲಿ ದಕ್ಷತೆಯನ್ನು ಪಡೆಯುವುದಕ್ಕೂ ಮತ್ತು ದೇಶ ಮತ್ತು ಸಾಮಾಜಿಕ ಧರ್ಮಗಳನ್ನು ತಿಳಿದುಕೊಳ್ಳುವುದಕ್ಕೂ ಅವಕಾಶವಾಗುವಂತಹ ವಯಸ್ಕರ ಪಾಠಶಾಲೆಗಳನ್ನು ಸ್ಥಾಪಿಸಬೇಕು. ವಯಸ್ಕರ ಪ್ರಪಂಚ ಜ್ಞಾನವನ್ನೂ, ದಕ್ಷತೆಯನ್ನೂ ಹೆಚ್ಚಿಸುವುದಕ್ಕಾಗಿ ಸ್ಥಾಪನೆ ಮಾಡಲ್ಪಡುವ ಪಾಠಶಾಲೆಗಳು, ಡೆನ್ಮಾರ್ಕಿನಲ್ಲಿ ಇದಕ್ಕಾಗಿಯೇ ಏರ್ಪಟ್ಟಿರುವ ಫೋಕ್ ಹೈಸ್ಕೂಲ್‌ಗಳ ಮಾರ್ಗವನ್ನು ಅನುಸರಿಸುವುದು ಉತ್ತಮ, ಮತ್ತು ಔದ್ಯೋಗಿಕ ಶಿಕ್ಷಣದಲ್ಲಿ ಪ್ರೌಢಿಮೆ ಸಂಪಾದಿಸಿಕೊಳ್ಳಲು ಮಾಡುವುದಕ್ಕೆ ಅವರಿಗಾಗಿ ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿರುವ ವಯಸ್ಕರ ಔದ್ಯೋಗಿಕ ಶಿಕ್ಷಣ ಶಾಲೆಗಳ ಮೇಲ್ಪಂಕ್ತಿಗಳಾಗಬೇಕು ಅಲ್ಲದೆ ಗ್ರಾಮಗಳಲ್ಲಿ ವಾಸವಾಗಿರುವ ಜನರು ಔದ್ಯೋಗಿಕ ಶಿಕ್ಷಣವು ವ್ಯವಸಾಯ, ವಾಣಿಜ್ಯ, ಕೈಗಾರಿಕೆ, ವ್ಯಾಪಾರ ಮತ್ತು ಗೃಹನಿರ್ವಾಹಕ ಶಾಸ್ತ್ರ ಇವುಗಳನ್ನೊಳಗೊಂಡಿರಬೇಕು.

'ಸ್ವದೇಶಾಭಿಮಾನಿ' ಪತ್ರಿಕೆಗೆ ಇಂದೇ

ಚಂದಾದಾರರಾಗಿರಿ.

## The Canara Industrial & Banking Syndicate Limited.

Established in 1925.

Head Office — Udipi

Branches: Mangalore, Payyanur, Brahmavar, Kumta, Karwar & Hubli

Authorised Capital Rs. 1,00,000 Subscribed Capital Rs 1,00,000 Paid up Capital Rs 20,000

STATEMENT OF AFFAIRS AS ON 30TH NOVEMBER 1932.

| CAPITAL AND LIABILITIES | | ASSETS | |
|---|---|---|---|
| Paid up Capital | Rs. 20,000—0—0 | Loans on Land mortgage | Rs 1,47,041-10-7 |
| Reserve and other Funds | ,, 10,032—3—5 | ,, Valuable Securities | ,, 2,24,615—1—5 |
| Deposits | ,, 8,00,271—4—4 | Bill of Exchange hundis and Promissory Notes | ,, 3,22,925-3-1 |
| Due to Bankers | ,, 11,178—15—11 | Investment on Shares of other Companies | ,, 45,575—0—0 |
| Sundries | ,, 73,839—13—5 | On Deposits with other Banks | ,, 84,000-0-0 |
| | | Sundries | ,, 64,089-4-8 |
| | | Cash in hand and with Bankers | ,, 29,073-1—2 |
| Total Rs. | 9,15,322—5—1 | Total Rs | 9,15,322—5—1 |

Interest allowed on current account at 3 per cent; Savings Bank at 4 per cent, Short term Deposits for 4 months at 5 per cent Seven months at 5½ per cent; 10 months at 6 per cent, 13 months at 6¼ per cent, Long term for 19 months and over 6½ per cent

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 9—12—1932.

P. A. Pai Bros, *Managing Agents*

# ೬೪ ವರುಷಗಳ ಅನುಭವಸಿದ್ಧ ಔಷಧಗಳು

**ಧಾತು ಪುಷ್ಟಿ ಲೇಹ**—ಬಾಲ್ಯಕಸದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೋಹ, ಹಸ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರುಪುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಹ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

**ಚಂದನಾಸವ ಮತ್ತು ಮಾತ್ರೆ**—ಸ್ವಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ [illegible] ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧ[illegible], ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ. ಬಾಟ್ಲಿ 1ಕ್ಕೆ ರೂ. 1-2-0. 1 ಡಬ್ಬಿ ಮಾತ್ರೆಗೆ ರೂ. 1-6-0. 2 ಬಾಟ್ಲಿ ಔಷಧಕ್ಕೆ ರೂ. 4-12-0.

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ. ಬಾಟ್ಲಿ 1ಕ್ಕೆ 0—10—0. 3ಕ್ಕೆ 1—12—0.

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶವನ್ನು ಆಕುಂಚಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ರೂ 3. 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ರ ರೂ. 1-8-0. 2 ಬಾಟ್ಲಿಗಳಿಗೆ ರೂ. 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ। [illegible] ಪೈಯವರ ಕೋಟಿನಲ್ಲಿ ಸಿಗುತ್ತವೆ.

**ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.**

# WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co. Ltd.
64, 3rd. Cross Road, Srirampur Extn.
Malleswaram Post, BANGALORE.

OR

*The Managing Agents,*
The S. I. G. A. Co. Ltd.
55. Poonamallee High Road, Kilpauk, MADRAS.

# The India Flour Mills Ltd. Karachi.

have pleasure to announce that they have appointed Messrs. R. B. Jessaram Thakurdas, Post Box No. 164, Karachi, as their Sole Agents for the sale of their world renowned Rose Brand and India Brand wheat products, Sooji Rawa, Superfine, Household, Atta, Bran, Pollard etc.

It is needless to say that our asset has been the quality of our products. Our products are manufactured from the choicest wheat grown in the Plains of the Panjab, the Land of the Five Rivers. **The Flour is not Chemically or Electrically bleached as some of the Mills are doing as this kills the vitamin, the source of Nourishment** and therefore all the Medical Authorities in Europe & America are agitating strongly against the bleached flour, as they find it injurious to health.

*For prices and other particulars write to Agents:—*

**Messrs. Kerwar & Co,**

**Mangalore. Madras. Tuticorin. Calicut. & Cochin.**

## ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ
ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು,
ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು.

ಡಾಕ್ಟರ ವಾಮನ ಗೋಪಾಳರವರ



[illegible] ಸಾರ್ಸಪರಿಲ್ಲಾ
ಕೆಟ್ಟ ರಕ್ತಕ್ಕೆ ಪರಮೌಷಧ. [illegible] ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್
ಕೇಶವರವರ
ಫ್ರೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨. ಸ್ಟೊಕಿಸ್ಟ [illegible] ಕಂಪೆನಿ,
[ಪತ್ತುಮ್ಮದಾರ ಇಂಗ್ಲಿಷ್ ಔಷಧಾಲಯದಲ್ಲಿ] ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ
(ದಶಮೂಲಾರಿಷ್ಟ.
ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

THE SOUTH INDIA
CO-OPERATIVE INSURANCE SOCIETY,
LIMITED, MADRAS.

**LOCAL BOARD:—**

THE SOUTH CANARA CENTRAL CO-OPERATIVE BANK. LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

*FOR TERMS APPLY TO:—*

*The Secretary,*
South Canara Central Co-operative
Bank, Ltd., KODIALBAIL P. O. (Mangalore)
*SOUTH CANARA.*

ಮಾರಾಟಕ್ಕಿವೆ! ಮಾರಾಟಕ್ಕಿವೆ!!

[illegible] ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್ ರೋಲ್‌ಗಳು
ಮೂರು ಸ್ಟಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 495. ಅಂಚೆ ಹಾಸಲು ಸೇರಿ ರೂಪಾಯಿ 2—13—0.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ ಗರವ ಮಥಿಸಲು ಸುರಂಗದರಿಂ । ಹರುಷವಾಯಿತೆ' ಮತ್ತೆ ವಿಷ್ವನ ಸುಡುತ ಬರುತಿರುವ ॥

ಗರಲಕನರಂಜಿದರೆ' ಸುಧೆಯನ. । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ' ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೭. ಮಂಗಳೂರು ತಾ ೧೩ನೇ ಶುಕ್ರವಾರ ಜನವರಿ ೧೯೩೩ (13—1—'33) ಸಂಚಿಕೆ ೨


## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras**

ಹೆಡ್ ಆಫೀಸು:—ಉಡುಪಿ ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000-

STATEMENT OF ASSETS & LIABILITIES AS ON 30TH NOVEMBER, 1932

| | Capital and Liabilities | | | Property and Assets | |
|---|---|---|---|---|---|
| 1 | Paid up Capital | Rs. 2,25,000-0 0 | 1 | Premises, Building, Furniture etc | Rs 65 905 11 6 |
| 2 | Reserve and other funds | ,, 2,22,705 0-0 | 2 | Government securities | ,, 2,93 088 4 0 |
| 3 | Deposits | ,, 20,95,382 10 4 | 3 | Authorised Investments | ,, 20 43 696 15 0 |
| 4 | Due to Bankers | ,, 28,486 9-11 | 4 | Bills for collection | 3 329 12 0 |
| 5 | Sundries | ,, 82,617 10 2 | 5 | Sundries | ,, 56 140 9 2 |
| 6 | Bills for collection per contra | 3 329 12 0 | 9 | Cash in hand & with bankers | ,, 1 95 500 6 9 |
| | Total | 26 57,521 10 5 | | Total | 26 57 521 10 5 |

UDIPI 15—12—'32

**N. ANANDA RAO,**
*Secretary & Manager*

(Regd)

## ಅಮೃತಾಂಜನ.

ಇದು ಕಟ್ಟ ಶಿರೋವೇದನೆ, ಕಣ್ಣುಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸಧಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

**ರಿಂಗ್‌ವರ್ಮ್ ಮುಲಾಮು**— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲವುಜ್ಜುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ

**ಅಮೃತಾಂಜನ ಡಿಪೋ,**

ಮದರಾಸು ಮತ್ತು ಬೊಂಬಾಯಿ.



ಸಣ್ಣ ಹುಡುಗರ ಸಲುವಾಗಿ,

## ಡೋಂಗರೆ

ಇವರ

## ಬಾಲಾಮೃತ

ಇದನ್ನು ಕೊಡುವುದರಿಂದ ಮಕ್ಕಳು ಸಶಕ್ತರೂ, ಪುಷ್ಟರೂ ಮತ್ತು, ಸಂತೋಷ ಚಿತ್ತರೂ ಆಗುವರು.

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ.

ವಿಜಯರು— ... ಕಂಪೆನಿ, ಮಂಗಳೂರು.



INSURE WITH

**The Popular Insurance Co. Ltd.**

Head Office—MANGALORE S India

**First of its kind in the West Coast**

CHAIRMAN

*Dewan Bahadur N Subba Rao*

*STRIKING FEATURES*

**Policy Conditions Liberal!**
**Claims Settlement Prompt**

MANAGEMENT PURELY INDIAN

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS
LIBERAL TERMS TO COMPETENT MEN

*For further particulars apply to the Head Office*

## ೫೮ ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುವೃದ್ಧಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಜೀರ್ಣಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಹ ದುಂದಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಅಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನದೋಷ ಇವುಗಳ ಮೇಲಿನ ಸಿದ್ಧೌಷಧ. ಬಾಟ್ಲಿ 1ರ ರೂ. 1—2—0. 1 ಡಬ್ಬಿ ಮಾತ್ರೆಗೆ ರೂ. 1-6-0. 2 ಬಾಟ್ಲಿ ಔಷಧಕ್ಕೆ ರೂ. 4-12-0.

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ. ಬಾಟ್ಲಿ 1ಕ್ಕೆ 0—10—0. 3ಕ್ಕೆ 1—12—0.

(ಕಸ್ತೂರಿ ಮಿಶ್ರಿತ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಆನೆ 3 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ರ ರೂ. 1—8—0. 2 ಬಾಟ್ಲಿಗಳಿಗೆ ರೂ 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ॥ ಶ್ರೀನಿವಾಸ ಪೈಯವರ ಶಾಪಿನಲ್ಲಿ ಸಿಗುತ್ತವೆ.

**ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.**



# WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co. Ltd
64, 3rd. Cross Road, Srirampur Extn
Malleswaram Post, BANGALORE

OR

*The Managing Agents,*
The S. I. G. A. Co. Ltd.
55 Poonamallee High Road, Kilpauk, MADRAS



**Panchmal Narasimha Kamath & Brothers,**
CAR STREET, MANGALORE.

*31st Oct 1932*

To
The Manager,
**Zenith Life Assurance Company, Limited.**
MANGALORE.

DEAR SIR,

I have great pleasure to acknowledge receipt of your cheque No B 942296 on the National Bank of India Ltd. Bombay for Rs. 1954—12—0 in full settlement of the claim on Policy No 3765 of my deceased brother Ganapathi Kamath.

The Policy was deliverd to you duly discharged on 21st October 1932 add your Head Office have issued the cheque on the 25th October i. e. **on the very day they received the Policy in their hands.**

I am really greatful for the prompt settlement of the claim for which your Company is so well known.

YOURS FAITHFULLY,
*Sd.* Panchmal Narasimha Kamath.


## ಜಗದ್ಗುರುಗಳಿಗೆ ಏನು! (?)

ಹೊಂಗ್ರೆಸ್ಸಿನವರು ಬೊಬ್ಬೆ ಹಾಕುತ್ತಾರೆ: ಗುತ್ತಿಗಳನ್ನು ಬಿಡಿರಿ ಎಂದು. ಆದರೆ, ಅನಾದಿಕಾಲದಿಂದಲೂ ಗುತ್ತಿಯಿಂದಲೇ ಸೌಖ್ಯದಿಂದ ಜೀವನವನ್ನು ಸಾಗಿಸಿದ ಜನರು ಅದನ್ನೆಂತು ಬಿಡುವರು?

\+ \+ \+ \+

ಯಾರೂ ಸರಿ! ಹೊಟ್ಟೆಗೆ ಪೆಟ್ಟಾಗುವ ಯಾವ ವ್ಯಕ್ತಿಗೂ ಕೈ ಹಾಕಲು ಹಿಂಜರಿಯುವುದು ಪ್ರಕೃತಿಸಿದ್ಧ ಲಕ್ಷಣ. ಹಾಗೆಂದಾಗ ಜಗದ್ಗುರುಗಳು ತಮ್ಮ ಉದರಕ್ಕೆ ಬಾಣ ಪ್ರಯೋಗಿಸುತ್ತಿರುವ ಆಚಾರಕ್ಕೆ ಕೈಯಿಕ್ಕುವರೇ? ನೀವೇ ಹೇಳಿ!

\+ \+ × ×

ಹೆಚ್ಚಿನವರಿಗೆ ಸಿರಿಯಾಸೆ. ಕೆಲವರಿಗೆ ಅಧಿಕಾರದಾಸೆ. ಎಲ್ಲರಿಗೂ ಸುಖದಾಸೆ. ಹೀಗಿರುವಾಗ "ಜಗದ್ಗುರು"ಗಳೆಂದು ಹೆಸರುಗೊಂಡು, ಶಾಸ್ತ್ರಪುರಾಣಗಳನ್ನು ಪಠನಮಾಡುತ್ತಾ, ಎಲ್ಲರ ನಮಸ್ಕಾರಗಳನ್ನು ಪಡೆಯುತ್ತ, ಸುಖದಲ್ಲೇ ಮುಳುಗೇಳುತ್ತ ಜೀವಿಸುವ ಸಂದರ್ಭವನ್ನು ಯಾರಾದರೂ ಬಿಟ್ಟಾರೇ?

× × × ×

ನಮ್ಮಲ್ಲಿ ಅನೇಕ ಜಗದ್ಗುರುಗಳಿಗೆ ಅಸ್ಪೃಶ್ಯತೆಯು ಹಾನಿಯೆಂದು ತಿಳಿದಿದೆ. ಅವರ ಅಂತರಾತ್ಮನಲ್ಲಿ ಖಚಿತವಾಗಿಯೂ ಹರಿಜನೋದ್ಧಾರದ ಮನಸ್ಸಿದೆ. ಆದರೆ ಸುಖಶಾಂತಿ ಕಾಂಕ್ಷಿಗಳಾದ ಅವರು ತಮ್ಮ ಮನಸ್ಸನ್ನು ವ್ಯಕ್ತಗೊಳಿಸುವುದಕ್ಕೆ ಹಿಂಜರಿಯುತ್ತಿರುವರು.

× × × ×

ಜಗದ್ಗುರುಗಳು ನಿಜವಾದ ಜಗದ್ಗುರುಗಳಾಗಿ, ಸ್ವಾರ್ಥತ್ಯಾಗಿಗಳಾಗಿ, ಭೋಗಾಪೇಕ್ಷೆರಹಿತರಾಗಿ ಸ್ವಲ್ಪ ಕಣ್ಣುಬಿಟ್ಟು ಆಲೋಚಿಸಿದುದಕ್ಕೆ ಅವರೆ ಅವ ಲ್ಲಿ ಎಲ್ಲರೂ ಗಾಂಧಿಯವರಂತಾಗುವುದರಲ್ಲಿ ಸಂದೇಹವಿಲ್ಲ.

\+ × \+ ×

ಈಗ ನೋಡಿ, ಶೃಂಗೇರಿ ಜಗದ್ಗುರುಗಳು ಅಸ್ಪೃಶ್ಯತೆಯನ್ನು ಖಂಡಿಸಿ ವೀರ ಕೇಸರಿಯಲ್ಲೊಂದು ಲೇಖನ ಬರೆದಿರುವರು. ಅವರ ಮತದಂತೆ ಅಸ್ಪೃಶ್ಯತೆಯು ನಿರಾಧಾರವಾದುದು. ಇನ್ನಿತರ ಜಗದ್ಗುರುಗಳು ಸ್ವಲ್ಪ ಆಲೋಚಿಸಿದರೆ—?

\+ × × ×

ಹಿಂದೂ ಮತವು ಅಧೋಗತಿಗಿಳಿಯಬಾರದೆಂಬ ಕಾಂಕ್ಷೆಯು ಜಗದ್ಗುರುಗಳಲ್ಲಿದ್ದರೆ ಅವರು ತಮ್ಮ ಸಣ್ಣ ಮನಸ್ಸನ್ನು ಹರಿದು ಮುರಿದು ದೊಡ್ಡ ಮನಸ್ಸನ್ನು ತೋರದಿರರು. ಸಂಕುಚಿತೆಯು ಮಾಯವಾದರೆ ಹಿಂದೂ ಧರ್ಮವೇ ಉದ್ಧಾರವಾಗುವುದು.

× × × ×

ಎಲ್ಲಾ ಜಗದ್ಗುರುಗಳಿಗಿಂತಲೂ ಗಾಂಧಿಯವರೇ ದೊಡ್ಡವರೆಂದು ನನ್ನ ಅಭಿಪ್ರಾಯ. ಮನುವಿನ ಕಾಲದಲ್ಲಿ ಅವನ ಧರ್ಮವನ್ನು ಹೇಗೆ ಅಧಾರವಾಗಿ ತೆಗೆದುಕೊಂಡಿರುವರೋ, ಹಾಗೆಯೇ ಗಾಂಧೀ ಯುಗದಲ್ಲಿ ಗಾಂಧೀ ಧರ್ಮವನ್ನೇ ಶಿರಸಾವಹಿಸಬೇಕೆಂದು ನನ್ನ ಅಪೇಕ್ಷೆ.

× × × ×

ಮನಃಸಾಕ್ಷಿ ಪ್ರಕಾರ ಜಗದ್ಗುರುಗಳು ವರ್ತಿಸಬೇಕು. 'ಕಾಣೆಯ ಬಾರದವ ಅಂಗಳ ವಾರೆ' ಎಂದು ತೋರಿಸಿದಂತೆ ಅವರು ಅನಾವಶ್ಯ ಶಾಸ್ತ್ರ ಶ್ಲೋಕಗಳನ್ನು ತೋರಿಸಿದರೆ ಅರ್ಥವಿಲ್ಲ.

× × × ×

ಆತ್ಮನೇ ಶಾಸ್ತ್ರ. ಬುದ್ಧಿಯೇ ಪುರಾಣ, ವಿಶಾಲಮನಸ್ಸೇ ಧರ್ಮ! ಹಾಗಿರುವಾಗ ಅಂತಃಶಾಸ್ತ್ರವನ್ನು ಮರೆತು ಬಾಹ್ಯ ಶಾಸ್ತ್ರವನ್ನು ಜಗದ್ಗುರುಗಳು ಈ ಕಾಲದಲ್ಲೂ ಏಕೆ ತೋರಿಸುತ್ತಿರುವರೋ ನಾ ಕಾಣೆ!

× × × ×

ಒಂದು ಕಾಲದಲ್ಲಿ ನಮ್ಮ ಜಗದ್ಗುರುಗಳಿಗೆ ಸಲ್ಲುತ್ತಿದ್ದ ಗೌರವವು ಹಿಂದೂ ವರ್ಗದಿಂದ ಈ ಕಾಲದಲ್ಲೂ ಸಲ್ಲಬೇಕೆಂದಿರುವುದಾದರೆ ಎಲ್ಲಾ ಜಗದ್ಗುರುಗಳೂ ಶೃಂಗೇರಿಯವರಂತಹ ವಿಶಾಲ ಹೃದಯಿಗಳಾಗಬೇಕು. "ಧರ್ಮ" ಧ್ವಜದಡಿಯಲ್ಲೇ ಸಾಯುವವೆಂದರೆ ಸಾಯುವುದೇ!

× × × ×

ಅಸ್ಪೃಶ್ಯತೆಯ ದುರಾಚರಣೆಗೆ ಶಾಸ್ತ್ರಾಧಾರವಿದೆಯಂತೆ! ದೇವರ ಮಕ್ಕಳನ್ನು ತಿರಸ್ಕರಿಸುವ ಮಾಡುವ ಅಂತಹ ಶಾಸ್ತ್ರವು ಶಸ್ತ್ರವೆಂದು ನನ್ನ ಮತ!

× × × ×

ಈಗ ಸನಾತನಿಗಳೆಂಬವರ ಸಂಗಡವು ಅಂತಹ ಶಾಸ್ತ್ರವನ್ನು ಶಸ್ತ್ರವಾಗಿಯೇ ಉಪಯೋಗಿಸುತ್ತಿದ್ದಾರೆ! ಏನಯ್ಯಾ ಸನಾತನಿಗಳೇ! ಕಣ್ಣು ತೆರೆಯಲಾರಿರಾ?

× × × ×

ಇದು ಗಾಂಧೀ ಯುಗ—ಮುಂದಕ್ಕೂ ಗಾಂಧೀ ಯುಗ. ನಿಮ್ಮ ಶಾಸ್ತ್ರಗಳಿಗೆಲ್ಲ ಗೆದ್ದಲ ಹುಳ ತಾಗದಂತೆ ಜಾಗ್ರತರಾಗಿರಿ!

× × × ×

ದೇಶ ಹೋದರೂ ಚಿಂತಿಲ್ಲ. ನಿಮ್ಮ ಶಾಸ್ತ್ರ ಹೋಗಬಾರದು. ನಿಮ್ಮ ಪ್ರಾಣವೇ ಅದರಲ್ಲಿ ಗರ್ಭೀಕರಿಸಿಕೊಂಡಿದೆ. ಅಸ್ಪೃಶ್ಯರು ಸತ್ತರೆ ಸಾಯಲಿ!

ಅಯ್ಯಾ ಶಾಸ್ತ್ರಿಗಳೇ ತಿಳಿಯಿತಲ್ಲ?

'ಸ್ವಾಬ'.

# Canara Bank Limited.

Head Office—Dongerkery Street, Mangalore — Local Office—Bunder, Mangalore.

BRANCHES—Karkal, Kasargod, Cochin, Udipi, Gangolli Coondapur, Bombay, Puttur, Calicut, Alleppey, Ernakulam, & Chikmagalur

| | |
|---|---|
| Authorised Capital | 10,00,000—0—0 |
| Paid up Capital. | 3,00,000—0—0 |
| Reserve and other Funds | 5,26,000—0—0 |

A recent issue of further 3 lacs of capital has been over subscribed within a short period. The allotment will be made in January 1933.

In view of the existing monetary conditions the phenomenal downfall in the value of land and of commodities in general and in view of the combined action of Banks, both exchange and Indigenous in lowering rates all round, we have been reluctantly compelled as and from 1st January 1933 to reduce the rates of interest on deposits. The rules of business have also been amended and copies of the same can be had on application.

| | |
|---|---|
| CURRENT ACCOUNTS | —Interest will be paid at 2 per cent p a from 1st January to 30th June and at 1 per cent from 1st July to 31st December |
| SAVINGS BANK | 4 per cent per annum |
| FIXED DEPOSITS — | 5 per cent per annum for 1 year or more |

For rates on other deposits please apply to our Agents at Branches or to the undersigned at Head Office.

Depositors are requested to take notice that the interest accrued on deposits till 31—12—32 will be paid to them on 3rd January 1933 and interest accrued there after will be paid half yearly on 2nd July and 2nd January or at maturity.

Mangalore,
28—12—1932.

**P. Sarvothum Nayak,**
*Ag Secretary & Treasurer*



ದೇಹದ ಮತ್ತು ಉಡಿಗೆತೊಡಿಗೆಗಳ ಸ್ವಚ್ಛತೆಗಾಗಿ

## ದಿ ವಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಿಂದ, ಸರಕಾರದ ವಿಚಕ್ಷಣ ತರಬೇತಿ ಹೊಂದಿರುವವರ ಆಡಳಿತಕ್ಕೊಳಪಟ್ಟು ಸ್ಥಾಪಿತವಾದ

ಈ ಕಂಪೆನಿಯು ನಾಡುವ

## ಅಚ್ಚ ಸ್ವದೇಶೀ ಸಾಬೂನುಗಳು.

ಸ್ನಾನಕ್ಕೆ — ಶೌಚಕ್ಕೆ:

ಸೇಂಡಲ್‌ವುಡ್, ನೀಮು, ಮಾರ್ಗೋಜಾ, ವೇಪ ಸೋಪುಗಳೂ

ಉಡಿಗೆತೊಡಿಗೆಗಳಿಗೆ.

ಮಲಬಾರ ಟಿಬಲೆಟ್ಸ್, ಸೇಟಸೋಪ ಟಿಬಲೆಟ್ಸ್‌ಗಳೂ

ಎಲ್ಲವೂ ನಿರಾಕ್ಷೇಪಕರವಾಗಿ ವ್ಯವಹೃತವಾಗಿವೆ

ಕ್ರಯವೂ ಸುಲಭ — ಗಿರಾಕಿಗಳು ಧಾರಾಳ — ಉಪಯೋಗಗಳು ಬಹಳ.

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು

ಈ ಜಿಲ್ಲೆಗೆ ಪ್ರವರ್ತಕರು —

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913)

**East & West Buildings, Fort Bombay**

VALUATION REPORT for the Triennium ending 31st December 1931

**Reveals Certain Striking Features**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation.

Interim Bonus Rs 15/- per 1,000/- per year both on whole life and endowment with Profit Policies becoming claims before 1st January 1934. FORECAST STILL GREATER PROSPERITY.

**WANTED LADIES & GENTS in Unrepresented Areas.**

Earn Rs. 100/- to 500/- independently per month.

*For particulars apply or please call at.—*

**Chief Organising Office,**
Harbour View, MANGALORE


## ನೋಟೀಸು.

### ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 607/32.

ವೇಲ್ಜಿ ಕಲ್ಯಾಣಜಿ ಸೇಟ್—ವಾದಿ,
ಮತ್ತು
ಯು ವಾಸುದೇವ ಕೃಷ್ಣಭಟ್ಟ—ಪ್ರತಿವಾದಿ
ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿಯಾದ ಉಡುಪಿ ಕಸಬಾ ... ಯಲ್ಲಿರುವ ಕೃಷ್ಣ ಉಪೇಂದ್ರ ಭಟ್ಟರ ಮಗ ಯು ವಾಸುದೇವ ಕೃಷ್ಣ ಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮರ್ಹೂಮ್ ... ಮುಖ್ಯಪ್ರಾಣ ಭಟ್ಟರು ಅಧ್ಯಕ್ಷರಾಗಿಯೂ ಪ್ರತಿವಾದಿ ... ರು ... ರಾಗಿಯೂ ... ರೂ 1000/ ಒಂದು ಸಾವಿರದ ... 6ನೇ ... ಇನ್ನು ಪ್ರತಿವಾದಿಯು ತಾ 26-2-29ರಲ್ಲಿ ರೂ 785ಕ್ಕೆ ... ದರಖಾಸ್ತಿಗೆ ... ಬಾಬಿನಲ್ಲಿ ವಾದಿ ಪ್ರತಿವಾದಿ ... ಸದ್ರಿ ಮುಖ್ಯಪ್ರಾಣ ಭಟ್ಟರಿಗೆ ತಾ 21-5-29ರಲ್ಲಿ ರೂ 680/ಕ್ಕೆ ಬರಕೊಟ್ಟ ... ದಸ್ತಾವೇಜು ... ಪ್ರತಿವಾದಿಯ ಬಗ್ಗೆ ... ವಾದಿಯು ... ಪ್ರತಿವಾದಿಯಿಂದ ... ಪ್ರತಿವಾದಿಗೆ ಮಾಫಿ ಬಿಟ್ಟಿ ... ರೂ 500ನ್ನು ... ವಾದಿಯ ... ಸದ್ರಿ ದಾವೆಯು ... ತಾ 27-1-33 ಕ್ಕೆ ... ದದಿಂದ ಸದ್ರಿ ಪ್ರತಿವಾದಿಯು ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟಿನಲ್ಲಿ ಸ್ವತಹ ಅಥವಾ ಪ್ಲೀಡರ್ ಮೂಲಕ ... ಉತ್ತರಪತ್ರವನ್ನು ... ತಪ್ಪಿದರೆ ಸದ್ರಿ ... ಪ್ರತಿವಾದಿಯು ... ಫೈಸಲ್ ... ದೀತೆಂಬ ... ಸದ್ರಿ ಪ್ರತಿವಾದಿಗೆ ಈ ... ನೋಟೀಸು ... ಕೊಡಲಾಗುತ್ತದೆ

Udipi,
6—1—33

**H. Keshava Pai**
*Pleader for Plaintiff*

---

### ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 9 1933

... ಯನ್ ಪ್ರೋತಿ ... —ಅರ್ಜಿದಾರ

ತಾ 10-11-31ರಲ್ಲಿ ... ಕಡೇಕಾರು ಗ್ರಾಮದ ... ಮಗ ... ಮುಖ್ಯಪ್ರಾಣಯ್ಯಗೆ ಹಿಂದುಸ್ಥಾನ ಕೋಆಪರೇಟಿವ್ ಇನ್ಶೂರನ್ಸ್ ಸೊಸೈಟಿ ... ಪಾಲಿಸಿ ನಂಬ್ರ 9954/16-2-12ರ ಪ್ರಕಾರ ... ಐವೇಜುಗಳನ್ನು ಪಡೆಯಲು 1ನೇ ಅರ್ಜಿದಾರ ... ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ... ಅರ್ಜಿ ದಾಖಲು ಮಾಡಿರುತ್ತಾರೆ ಸದ್ರಿ ... 26-1-'33ಕ್ಕೆ ತನಿಖೆಗೆ ಇಟ್ಟಿರುವುದರಿಂದ ಸದ್ರಿ ಅರ್ಜಿಯ ಕುರಿತು ಆಕ್ಷೇಪ ಇದ್ದವರು ಆಕ್ಷೇಪವನ್ನು ... 26-1-33ನೇ ದಿವಸ ಪೂರ್ವಾಹ್ನ 11 ಘಂಟೆಗೆ ತಪ್ಪದೆ ಈ ಕೋರ್ಟಿನ ಮುಂದೆ ಹಾಜರಾಗಿ ಹಾಜರು ಮಾಡತಕ್ಕದ್ದೆಂತ ಸರ್ವರೂ ತಿಳಿದಿರತಕ್ಕದೆಂತ ಇದರಿಂದ ನೋಟೀಸು ಕೊಡಲಾಗಿಯದೆ

ಉಡುಪಿ,
5—1—1933

**P N Madhava Rao,**
Vakil for Petitioners

---

|| ಭದ್ರನರಸಿಂಹಾಯ ನಮಃ ||

**ಗೌಡ-ಸಾರಸ್ವತ ಬ್ರಾಹ್ಮಣ ವರ್ಗದ ಸಮಸ್ತರಿಗೆ— ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರದ ಮೆನೇಜರ್ ಕಾರ್ಕಳ ಲಕ್ಷ್ಮಣ ಪೈಯವರು ಬರಕೊಂಡ ಜಾಹೀರಾತಿ**

ಇದೇ ಅಂಗೀರಸ ಸಂವತ್ಸರದ ಪುಷ್ಯ ಶು|| ೫ ದಿವಸ ಶ್ರೀ ದೇವರ ದರ್ಶನದ ಆವೇಶವು ಕಾಣಿಸಿಕೊಂಡ ಇದೇ ಅಂಗೀರಸ ಸಂವತ್ಸರದ ಮಕರ ಮಾಸ ದಿನ ೨೭ನೇ ಸಲುವ ಮಾಘ ಶು|| ೯ ಯು (ತಾ ೯-೨-೩೩) ಸ್ಥಿರವಾರ ಶ್ರೀಮಧ್ವನವಮಿ ದಿವಸ ಮಧ್ಯಾಹ್ನ ವೃಷಭ ಲಗ್ನದಲ್ಲಿ ತಾನು ಕಾಣಿಸಿಕೊಂಡು ಸ್ಥಿರವಾದ ಮೇರೆಗೆ ಸಾನಿಧ್ಯಹೋಮ ಪುರಸ್ಸರ ಮುದ್ರೆಯನ್ನು ಸ್ವೀಕರಿಸಿ ವರ್ಗದವರ ಸಕಲ ಮನಸಾಭಿಷ್ಟವನ್ನು ನೆರವೇರಿಸಿ ಕೊಡುವದಾಗಿ ಅಪ್ಪಣೆಯಾಗಿರುವುದರಿಂದ, ವರ್ಗದ ಸಮಸ್ತರು ಸದ್ರಿ ಉತ್ಸವಕ್ಕೆ ಬಂದು ಶ್ರೀ ದೇವರ ಅಭಯವನ್ನೂ, ಶ್ರೀಮುಡಿ ಗಂಧಪ್ರಸಾದವನ್ನೂ ಪಡೆದು ಕೃತಾರ್ಥರಾಗಬೇಕಾಗಿ ವಿನಂತಿ.

ಮಂಜೇಶ್ವರ,
5—1—33

**K Lakshumana Pai,**
ಮೆನೇಜರ್.

# ಹರಿಜನ ಸಮಸ್ಯೆ! ಶ್ರೀಂಗೇರಿ ಜಗದ್ಗುರುಗಳ ಮತ!

## ಸನಾತನ ವಾದಿಗಳ ವಾದವು ನಿರಾಧಾರವಾದುದು!

ಕಾದಿಯುತ್ತಿರುವ ಹರಿಜನ ಸಮಸ್ಯೆಯ ಕುರಿತು ಈಗೀಗ ಮಠಾಧಿಪತಿಗಳು ತಮ್ಮ ಅಭಿಪ್ರಾಯವನ್ನು ಹೊರಗೆಡಹುತ್ತಿರುವರು. ಶೃಂಗೇರಿ ಶ್ರೀ ಜಗದ್ಗುರುಗಳವರು ಹರಿಜನ ದೇವಾಲಯ ಪ್ರವೇಶ ಚಳವಳಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಮುಂದೆ ಒಂದದ್ದು ಬಹಳ ಸಂತೋಷಕರವಾದ ಸಮಾಚಾರ. "ವೀರಕೇಸರಿ ಪತ್ರಿಕೆ" ಯಲ್ಲಿ ಪ್ರಕಟವಾಗುವ ಒಂದೆರಡು ಭಾಗಗಳನ್ನು ಇಲ್ಲಿ ಎತ್ತಿ ಕೊಡಲಾಗಿದೆ.

ವೇದವೇ ಮೊದಲಾದ ಪ್ರಮಾಣಗಳಿಂದ ಭಗವಂತನು ಈ ಪ್ರಪಂಚವನ್ನು ಸೃಷ್ಟಿಮಾಡಿದ ಕಾಲದಿಂದಲೂ ಈ ಭರತ ಖಂಡದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣದವರು ಏರ್ಪಟ್ಟು ಇರುವರೆಂದೂ ಈ ನಾಲ್ಕು ವರ್ಣದವರಿಗೂ ಸಮಾನವಾದ ಧರ್ಮಗಳು ಕೆಲವು, ಆಯಾಯ ವರ್ಣದವರಿಗೆ ಮಾತ್ರ ಸಂಬಂಧಿಸಿದ ವಿಶೇಷ ಧರ್ಮಗಳು ಕೆಲವು ವೇದಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದು ಕಂಡುಬಂದಿದೆ. ಈ ನಾಲ್ಕು ವರ್ಣದವರೂ ಒಬ್ಬರೊಂದಿಗೆ ಮತ್ತೊಬ್ಬರು ಸೇರಿ ಇರುವರೆ ವಿನಹಾ ಇವರುಗಳಲ್ಲಿ ಅಸ್ಪೃಶ್ಯರು ಎಂಬ ಭೇದಗಳು ಇರುವುದಿಲ್ಲ.

ಅಸ್ಪೃಶ್ಯರು, ಬಾಹ್ಯರು ಎಂಬ ಶಬ್ದಗಳಿಗೆ ವಿಷಯರಾದವರು ನಮ್ಮ ಶಾಸ್ತ್ರಗಳಲ್ಲಿ ಹೇಳಿರುವ ಚಾಂಡಾಲರೇ ವಿನಹ ಬೇರೊಬ್ಬರಿಲ್ಲ. ಕೆಲವು ಸಂದರ್ಭಗಳಲ್ಲಿ ಸೂತಿಕಾ, ರಜಸ್ವಲಾ ದೋಷ ದೂಷಿತರಾದ ಸ್ತ್ರೀಯರುಗಳನ್ನೂ, ಬ್ರಾಹ್ಮಣ ಹನನಾದಿ ಪಂಚ ಮಹಾ ದೋಷಿತರಾದ ಪಾಪಿಗಳನ್ನೂ ಅಂತಹ ದೋಷಗಳಿಂದ ವಿಮುಕ್ತರಾಗುವ ಪರಿಯಂತ ಅಸ್ಪೃಶ್ಯರೆಂದು ಶಾಸ್ತ್ರಗಳಲ್ಲಿ ಹೇಳಿರುವರು. ಅಸ್ಪೃಶ್ಯರೆಂಬ ಶಬ್ದವೇ ಶಾಸ್ತ್ರಗಳಲ್ಲಿ ಉಕ್ತವಾಗಿರುವುದಿಲ್ಲ. ಜನ್ಮದಿಂದ ಚಾಂಡಾಲರೆಂದು ಹೇಳತಕ್ಕ ಜನಗಳೇ ಈ ಭಾರತ ಭೂಮಿಯಲ್ಲಿ ಇರುವುದಿಲ್ಲ. ಈಗಿನ ಅವರ ಹೇಯವಾದ ಕರ್ಮಗಳಿಂದ ಚಾಂಡಾಲರೆಂದು ದೂರಮಾಡಿರುವರು. ಹಾಗೆ ಹೇಯವಾದ ಆಚರಣೆಗಳನ್ನು ಮಾಡತಕ್ಕ ಜನರು ಎಲ್ಲಾ ವರ್ಣಗಳಲ್ಲಿಯೂ ಇರುತ್ತಾರೆ. ಇದರಿಂದ ಅಸ್ಪೃಶ್ಯರೆಂದು ಹೇಳತಕ್ಕದ್ದು ನ್ಯಾಯವಿರೋಧವೆಂದ ಹೇಳತಕ್ಕ ಕಲಿಯುಗದ ಮಹನೀಯರುಗಳ ವಾದವು ನಿರಾಧಾರವಾದದ್ದು.

ಮನಸ್ಮೃತಿ ಈಗ ಮಾಡುವ ಸತ್ಕರ್ಮ ದುಷ್ಕರ್ಮಗಳಿಂದ ಧರ್ಮಾಚರಣೆಗೆ ಯೋಗ್ಯವಾದ ಶರೀರ ಪ್ರಾಪ್ತಿ ಧರ್ಮಾಚರಣೆಗೆ ಅನರ್ಹವಾದ ಚಾಂಡಾಲಾದಿ ಶರೀರ ಪ್ರಾಪ್ತಿ ಎಂದು ಹೇಳಲು ಅವಕಾಶವಿಲ್ಲ. ಪುಣ್ಯ ಪಾಪ ಶರೀರಗಳು ಹಿಂದಿನ ಪುಣ್ಯಕರ್ಮಗಳಿಂದ ಉತ್ತಮ ಶರೀರ ಪ್ರಾಪ್ತಿಯು ಅತ್ಯಂತ ಹೇಯವಾದ ಹಿಂದಿನ ಕರ್ಮಫಲ ಅನುಭವಕ್ಕಾಗಿ ನೀಚವಾದ ಚಾಂಡಾಲಾದಿ ಶರೀರ ಪ್ರಾಪ್ತಿಯೂ ಆಗುವುದೆಂದು ಸ್ಪಷ್ಟವಾಗಿ ತಿಳಿದುಬಂದಿರುವುದರಿಂದ ಚಾಂಡಾಲರೆಂಬ ಶಬ್ದವು ವಿಷಯರಾದ ಪ್ರಾಣಿಗಳ ಸೃಷ್ಟಿ ಕಾಲದಿಂದ ಇರಲಿಲ್ಲವೆಂದೂ ಇವರನ್ನು ಈಗಿನ ನಮ್ಮ ಪ್ರಯತ್ನದಿಂದ ಧರ್ಮಾಚರಣೆಗೆ ಅರ್ಹರಾಗುವಂತೆ ಮಾಡಬಹುದೆಂದೂ ಇವರು ಜನ್ಮದಿಂದ ಅಸ್ಪೃಶ್ಯರೆಂದೂ ಹೇಳುವುದು ಕೇವಲ ದುರಭಿಪ್ರಾಯವೇ ವಿನಹ ಪ್ರಮಾಣ ಸಿದ್ಧವಲ್ಲ.

ಮನು ಧರ್ಮಶಾಸ್ತ್ರವು ವೇದಾನುಸಾರಿಗಳಾದ ಸ್ಮೃತಿಗಳ ಮಧ್ಯದಲ್ಲಿ ಮುಖ್ಯವಾದ ಪ್ರಮಾಣವೆಂದು ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿದೆ. ಅಂತಹ ಮನುಸ್ಮೃತಿಯಲ್ಲಿ ಈ ಕೆಳಗೆ ನಮೂದಿಸಿರುವ ಪ್ರಮಾಣ ವಚನಗಳಿಂದ ಚಾಂಡಾಲರು, ಬ್ರಾಹ್ಮಣರೇ ಮೊದಲಾದ ಉತ್ತಮ ವರ್ಣದವರು ವಾಸವಾದ ತಮ್ಮ ಗ್ರಾಮದಿಂದ ಹೊರಗೆ ವಾಸಮಾಡಬೇಕು. ಉತ್ತಮ ವರ್ಣದವರು ಉಪಯೋಗಿಸುವ ಪಾತ್ರೆಗಳನ್ನು ಸ್ಪರ್ಶಮಾಡಕೂಡದು. ಇವರ ಜೀವಕ್ಕಾಗಿ ಏರ್ಪಟ್ಟಿರುವ ಧನವು, ಶ್ವಾನ, ಗಾರ್ಧಭಾದಿಗಳು. ಇವರು ಧಾರಣೆ ಮಾಡುವುದಕ್ಕೆ ವಸ್ತ್ರಗಳು ಸತ್ತ ಶವದ ಮೇಲೆ ಹಾಕಿದ್ದ ಬಟ್ಟೆಗಳು. ಇವರ ಭೋಜನ ಪಾತ್ರೆಗಳು ಒಡೆದುಹಾಕಿದ ಮಣ್ಣಿನ ಪಾತ್ರೆಯ ಚೂರುಗಳು. ಇವರಿಗೆ ಆಭರಣಗಳು ಕಬ್ಬಿಣದಿಂದ ಮಾಡಲ್ಪಟ್ಟಿದ್ದು. ಯಾವ ಕಾಲದಲ್ಲಿಯೂ ಒಂದು ಸ್ಥಳದಲ್ಲಿ ನಿಲ್ಲದೆ ತಿರುಗಬೇಕಾದುದು. ಇವರ ಕರ್ಮ. ಧರ್ಮಾಚರಣೆ ಮಾಡಬೇಕಾದ ಸಮಯಗಳಲ್ಲಿ ಚಂಡಾಲ ದರ್ಶನಾದಿ ವ್ಯವಹಾರಗಳನ್ನು ಉತ್ತಮ ವರ್ಣದವರು ಮಾಡಕೂಡದು. ಚಾಂಡಾಲರೇ ಚಾಂಡಾಲರೊಡನೆ ಲೇಹದೇಹ, ವಿವಾಹ ಭೋಜನಾದಿ ಸಂದರ್ಭಗಳನ್ನು ನಡೆಸಬೇಕು. ಉತ್ತಮ ವರ್ಣದವರು ಚಾಂಡಾಲರಿಗೆ ಒಡೆದ ಚೂರಾದ ಪಾತ್ರೆಯಲ್ಲಿ ಹಾಕಿ ತಮ್ಮ ಪರಿಜನರ ಮೂಲಕ ಅನ್ನಾದಿಗಳನ್ನು ಕೊಡಬೇಕೇ ವಿನಹ ಸ್ವತಃ ಕೊಡಕೂಡದು. ರಾತ್ರಿಯ ಕಾಲಗಳಲ್ಲಿ ಚಾಂಡಾಲರು ಗ್ರಾಮ ಪ್ರವೇಶ ಮಾಡಬಾರದು. ಇದಕ್ಕೆ ಕಾರಣ (ಹಗಲು ಉತ್ತಮ ವರ್ಣದವರಿಗೆ ಚಾಂಡಾಲರ ಸ್ಪರ್ಶವಾಗಬಾರದೆಂದೇ) ಇದರಿಂದ ಈಗಿನ ಕಲಿಕಾಲದ ಮಹನೀಯರ ವಾದವು ನಿರಾಧಾರವಾದದ್ದೆಂದು ತಿಳಿಯುವುದರಲ್ಲಿ ಅಡ್ಡಿ ಇಲ್ಲ.

### ಶಾಸ್ತ್ರಿಗಳೇನು ಹೇಳುವರು?

ಶ್ರೀಯುತರುಗಳಾದ ಸ್ವಾಮಿ ಕೇವಲಾನಂದ ಶಾಸ್ತ್ರಿ, ಮಂಗಳೂರೆ, ಲಕ್ಷ್ಮಣ ಶಾಸ್ತ್ರಿ ಜೋಶಿ, ಭಗವಾನ್‌ದಾಸ್, ಆನಂದ ಶಂಕರಧ್ರುವ, ಇಂದಿರಾ ರಮಣ ಶಾಸ್ತ್ರಿ, ಕೇಶವ ಲಕ್ಷ್ಮಣ ಧಪ್ತರಿ, ಪುರಂದರ ಶಾಸ್ತ್ರಿ, ಪ್ರಮಥನಾಥ ತರ್ಕಭೂಷಣ, ಶ್ರೀಧರ ಶಾಸ್ತ್ರಿ, ಧನಸುಖಮಿತ್ರ, ಸಿ ವಿ ವೈದ್ಯ ಮುಂತಾದ ಶಾಸ್ತ್ರಿಗಣವು ಅಸ್ಪೃಶ್ಯತೆಯ ಸಂಬಂಧವಾಗಿ ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಅದರ ಸಾರಾಂಶವು ಈ ರೀತಿಯಾಗಿದೆ.

(೧) ಧರ್ಮಶಾಸ್ತ್ರಗಳಲ್ಲಿ ಅಸ್ಪೃಶ್ಯತೆಯನ್ನು ಜನ್ಮತಃ ಅಸ್ಪೃಶ್ಯರು, ಪಂಚ ಮಹಾಪಾತಕಗಳಿಂದ ಅಸ್ಪೃಶ್ಯರು, ಅಶೌಚ ಅಸ್ಪೃಶ್ಯರು ಎಂದು ಮೂರು ಬಗೆಯಾಗಿ ವಿಭಾಗಿಸಲಾಗಿದೆ. ಇಂದಿನ ಅಸ್ಪೃಶ್ಯರನ್ನು ಅಥವಾ ಹರಿಜನರನ್ನು ಮೊದಲನೆಯ ಗುಂಪಿಗೆ ಸೇರಿಸಲಾಗದು. ಅವರು ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರನಿಂದ ಹುಟ್ಟಿದವರಲ್ಲ. ಅವರೂ ಹಿಂದೂಗಳೆ. ಚತುರ್ವರ್ಣದವರಂತೆ ಅವರೂ ಸಹ ಎಲ್ಲಾ ಹಕ್ಕುಗಳಿಗೂ ಬಾಧ್ಯರು.

(೨) ಇಂದಿನ ಹರಿಜನರು ಎರಡನೆಯ ಗುಂಪಿಗೂ ಸೇರುವವರಲ್ಲ. ಏಕೆಂದರೆ, ಪಂಚ ಮಹಾ ಪಾತಕಗಳನ್ನು ಎಲ್ಲ ವರ್ಣದವರೂ ಮಾಡಬಹುದು. ಅವರಿಗಿರುವಂತೆ ಪ್ರಾಯಶ್ಚಿತ್ತಾದಿಗಳು ಇವರಿಗೂ ಇದ್ದೇ ಇರಬೇಕು. ಈ ಹರಿಜನರನ್ನು ಹಿಂದೂ ಧರ್ಮಕ್ಕೆ ವಿರುದ್ಧವಾದ ಆಚರಣೆಗಳುಳ್ಳವರೆಂದೂ ಹೇಳಲಿಕ್ಕಾಗದು. ಒಂದು ವೇಳೆ ಅವರ ಅಜ್ಞಾನದಿಂದ ಅವರು ಹಾಗೆ ನಡೆಯುತ್ತಿದ್ದರೂ ತಿಳಿದವರು ಅವರನ್ನು ತಿದ್ದಬಹುದು.

ಇನ್ನು ಉಳಿದದ್ದು ಅಶೌಚ ಅಸ್ಪೃಶ್ಯ ವರ್ಗ. ಇದೂ ಸಹ ಎಲ್ಲಾ ವರ್ಣದವರಲ್ಲೂ ಉಂಟು. ಈ ಅಸ್ಪೃಶ್ಯತೆಯು ಸ್ನಾನ, ಮಡಿ ಮುಂತಾದ ಸಂಸ್ಕಾರಗಳಿಂದ ಹಾರಿಹೋಗುವುದು.

ಈ ಕಾರಣಗಳಿಂದ ಇಂದಿನ ಹರಿಜನರು ಅಸ್ಪೃಶ್ಯರೆಂದೂ ಅವರಿಗೆ ಕೆರೆ, ಕೊಳ, ದೇವಾಲಯ, ರಾಜವೀಧಿ ಮುಂತಾದ ಸಾರ್ವಜನಿಕ ಕ್ಷೇತ್ರಗಳಿಗೆ ಪ್ರವೇಶಾಧಿಕಾರವಿಲ್ಲವೆಂದೂ ಹೇಳುವುದು ಶುದ್ಧ ತಪ್ಪು. ಈ ಬಗೆಯ ನೀತಿಗೆ ಯಾವ ಆಧಾರವೂ ಇಲ್ಲ ಎಂದು "ಕರ್ನಾಟಕ"ದಲ್ಲಿ ಒಂದು ಲೇಖನವಿದೆ.

### ಶಾಕುಂತಲ ನಾಟಕ ಪ್ರಕಾಶಕ ಮಂಡಲ

ಬೆಳಗಾವಿ

ಹೊಸಗನ್ನಡ ನಾಟಕಕಾರರಲ್ಲಿ ಮೊದಲಿಗರೆಂದರೆ ಚುರಮುರಿ ಶೇಷಗಿರಿರಾಯರು. ಅವರ ಶಾಕುಂತಲ ನಾಟಕವು ಉತ್ತರಕರ್ನಾಟಕದವರಿಗೆ ಪರಿಚಿತವೇ ಇದೆ. ಅದರಷ್ಟು ಜನಪ್ರಿಯವಾದ ನಾಟಕವು ಇದುವರೆಗೆ ಮತ್ತಾವುದೂ ಆಗಿಲ್ಲವೆಂದರೆ ಅತಿಶಯೋಕ್ತಿಯಾಗದು. ನಾಟಕವು ರಚಿತವಾದ ೧೦–೧೨ ವರ್ಷಗಳಲ್ಲಿಯೆ ಮೂರನೆಯ ಆವೃತ್ತಿಯನ್ನು ಕಂಡಿದ್ದಿತು. ಅದರಲ್ಲಿಯ ಪದಪದ್ಯಗಳನ್ನು ಕನ್ನಡಿಗರು ಈಗಲೂ ಪ್ರೀತಿಯಿಂದ ಎನ್ನುತ್ತಿರುವರು. ಇಂಥ ಜನಪ್ರಿಯ ನಾಟಕವು ಈ ನಾಲ್ವತ್ತು ವರ್ಷಗಳಲ್ಲಿ ಪುನರ್ಮುದ್ರಣವಾಗದುದರಿಂದ ಅದರ ಪ್ರತಿಗಳು ದುರ್ಮಿಳ ವಾಗಿ ಹೋಗಿವೆ. ಈ ಸೊಗಸಾದ ನಾಟಕವನ್ನು ಪರಿಶೋಧಿಸಿ ವಿಸ್ತಾರವಾದ ಮುನ್ನುಡಿಯೊಡನೆ ಪ್ರಕಟಿಸಬೇಕೆಂದು ನಾವೀ ಮಂಡಲವನ್ನು ಏರ್ಪಡಿಸಿರುವೆವು. ಗ್ರಂಥವು ಪರಿಷ್ಕೃತವಾಗಿ ಅಚ್ಚಾಗಲಿಕ್ಕೆ ಸುಮಾರು ೧೦೦೦ ರೂಪಾಯಿಗಳು ಬೇಕಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ಐದೈದು ರೂಪಾಯಿಗಳ ೨೦೦ ಪಾಲುಗಳಿಂದ ಈ ಹಣವನ್ನು ಕೂಡಿಸಬೇಕೆಂದೂ ಹೀಗೆ ಹಣಕೊಟ್ಟವರಿಗೆ ಗ್ರಂಥವು ಅಚ್ಚಾದೊಡನೆ ಒಂದೊಂದು ಪ್ರತಿಯನ್ನು ಉಚಿತವಾಗಿ ಕೊಡಬೇಕೆಂದೂ ಗೊತ್ತುಪಡಿಸಿದೆ. ಹಾಗು ಪುಸ್ತಕಗಳ ಮಾರಾಟವಾದ ಮೇಲೆ ಅಥವಾ ಮೂರು ವರ್ಷಗಳ ಒಳಗಾಗಿ ಪಾಲು ತೆಗೆದುಕೊಂಡವರ ಹಣವನ್ನು ತಿರುಗಿಕೊಡುವೆವು. ಅದರೊಳಗಾಗಿಯೇ ಹಣ ತಿರುಗಿ ಬೇಡುವವರಿಗೆ ಗ್ರಂಥದ ೫ ಪ್ರತಿಗಳನ್ನು ಕೊಡುವೆವು. ಸುಮಾರು ೬೦೦ ಪುಟದ ಸೊಗಸಾದ ಅಚ್ಚಿನ ಈ ಗ್ರಂಥದ ಬೆಲೆ ೧–೮–೦ ಇಡಲಾಗುವುದು. ಈಗಲೆ ೧ ರೂಪಾಯಿಕೊಟ್ಟು ಹೆಸರು ರಿಜಿಸ್ಟರ ಮಾಡಿಸಿದವರಿಗೆ ಗ್ರಂಥವು ಅಚ್ಚಾದೊಡನೆ ಅಂಚೆಯ ವೆಚ್ಚವನ್ನು ಮಾತ್ರ ತೆಗೆದುಕೊಂಡು ಕಳಿಸುವೆವು. ೧೦೦ ಪಾಲುಗಳು ವೆಚ್ಚವಾದೊಡನೆ ಮುದ್ರಣದ ಕಾರ್ಯವು ಪ್ರಾರಂಭಿಸಲ್ಪಡುವುದು. ಕನ್ನಡಿಗರು ಇಂಥ ಸುಸಂಧಿಯನ್ನು ಕಳೆದುಕೊಳ್ಳಲಾರರೆಂದು ನಮ್ಮ ಪೂರ್ಣ ನಂಬಿಗೆಯಿದೆ.

ವಿಳಾಸ—

ಕಾರ್ಯದರ್ಶಿ—ಶಾಕುಂತಲ ಪ್ರಕಾಶಕ ಮಂಡಳಿ

c/o ೧೯೩೨ ಅನಂತಶಯನ ಗಲ್ಲಿ

ಬೆಳಗಾವಿ.


ರಥೋತ್ಸವ ಬಂತೆನ್ನುವಾಗಲೇ ಈ ಉತ್ಸವ!

ದರಗಳಲ್ಲಿ — ತರಗತಿಯಲ್ಲಿ — ರಚನೆಯಲ್ಲಿ

ಎಲ್ಲವೂ ಎಲ್ಲರಿಗೂ ಮಹೋತ್ಸವವೆನಿಸುವಂತೆ,

ನೂತನ ಸೃಷ್ಟಿಯಾಗಿಯೇ — ನೂತನ ರೂಪದಲ್ಲೇ!!

ಹೊಸವರ್ಷದಲ್ಲಿ ಶುಭವುಂಟಾಗ ಬಯಸುವವರು ಶುಭೋದಯದ ಚಿಹ್ನೆಯಾಗಿ ಹೊಸ ಖಾದಿಯನ್ನುಡಲೇ ಬೇಕು

— ಹಾಗೆಂದೇ —

ಎಲ್ಲರ ಎಲ್ಲ ಬಗೆಯ ಅಭಿರುಚಿಗಳಿಗೊಪ್ಪುವಂತೆ, ತೀರ ಕಡಿಮೆ ದರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಈಗಾಗಲೇ ತರಿಸಲಾಗಿದೆ

ಶೀಟೀ ಖಾದಿಯ ಕೆಲವು ದರಗಳು —

45"—6¼ ಆಣೆ, 50"—7¼ ಆಣೆ, 54"—8¼ ಆಣೆ

27" ಮತ್ತು 36" ಅಗಲದ ಖಾದಿಗೆ ಮತ್ತೂ ಕಡಿಮೆ ಬೆಲೆ !!

ವಿಶೇಷ ಸೂಚನೆಗಳು — ಹೊಸ ಖಾದಿಯನ್ನು ಮಾತ್ರ ನಾವು ವಿಕ್ರಯಿಸುತ್ತಿರುವೆವೆಂದು ನಾವು ಹೊಸದಾಗಿ ತಿಳಿಸಬೇಕಾಗಿಲ್ಲದ ಕಾರಣ ಹಳೇ ಖಾದಿಯನ್ನು ಇತರ ಕಡೆಗಳಲ್ಲಿ ಕೊಂಡುಕೊಂಡು ಮೋಸಹೋಗದಿರೆಂದು ಸೂಚನೆ.

ಮಂಗಳೂರು ಸ್ವದೇಶೀ ಸ್ಟೋರ್ಸ್, ರಥಬೀದಿ, ಮಂಗಳೂರು

# DUO-TREAD TIRES.

## Seiberling's Novel Features.

1. Air Cooled.
2. Duo Tread.
3. Twice the Mileage.
FOR
4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ವಂತ ವಿಚಾರಗಳು

### ನಮ್ಮ ಸಾಂಪತ್ತಿಕ ಸ್ಥಿತಿಯ ವಿಚಾರ

'ಆರ್ಥಿಕ ಪರಿಷತ್ತಿನಲ್ಲಿ ನಮ್ಮ ಸರಕಾರದ ಖಜಾನಾ ಮಂತ್ರಿಗಳಾಗಿರುವ ಶೂಸ್ತರರು ವಿವರಿಸಿದ ರೀತಿಯಲ್ಲಿ, ನಮ್ಮ ದೇಶವು ತುಂಬ ಸಂಪದ್ಯುಕ್ತವಾಗಿಯೇ ಇದೆ ಮಾತ್ರವಲ್ಲದೆ ಪ್ರಪಂಚದ ಇತರ ಎಲ್ಲ ದೇಶಗಳಿಗಿಂತ ಕಡಿಮೆ ಹೊಡೆತಕ್ಕೆ ಸಿಲ್ಕಿದೆ ಎಂದೇ ಅರ್ಥವಾಗುತ್ತದೆ. ಸಾಲವು ಕಡಿಮೆಯಾಗುತ್ತ ಬಂದಿದೆ; ಆಮದುಗಳ ಮೌಲ್ಯವು ಹೆಚ್ಚಾಗುತ್ತಲಿದೆ; ಕೃಷಿ ಕೈಗಾರಿಕೆಗಳು ಧಾರಾಳವಾಗಿ ಬೆಳೆದು ಬರುತ್ತಲಿವೆ; ಒಪ್ಪಿ ಸಕ್ಕರೆ-ಕೈಗಾರಿಕೆಗಳಂತೂ ತುಂಬ ತಲೆಯೆತ್ತಿವೆ. ಪೋಸ್ಟಾಫೀಸು ನಗದು ಧನ್ಯಶಿಯ ಪತ್ರಗಳು ಕಳೆದ ವರ್ಷದಲ್ಲಿ ೧೭೦ ಲಕ್ಷದಷ್ಟು ಲಾಭ ತಂದಿರುತ್ತಾ ಈ ವರ್ಷ ೮೭೭ ಲಕ್ಷ ಲಾಭ ತಂದಿವೆ, ಚಿನ್ನವು ಹೊರಕ್ಕೆ ಬಂದು ಹಳ್ಳಿನ ಬೆಲೆ ಕಡೆದು ಬೇರೆ ಹೊಸ ಬಗೆಯ ರೇವಣಾತಿಗಳಲ್ಲಿ ಮಾಡಲಾಗಿದೆ, ಇತ್ಯಾದಿ, ನಮ್ಮ ಖಜಾನೆ, ನಮ್ಮ ಖಜಾನ್ಚಿಯರು, ಅವರ ವಿಚಕ್ಷಣತೆ, ನಮ್ಮ ಕಡಿಮೆ ಬುದ್ಧಿ—ಇವೆಲ್ಲವೂ ಒಂದೇ ತೂಕವಾಗಿವೆ ನಮ್ಮ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿರುತ್ತಿದ್ದರೆ,—ಸೇಕಡಾ ೧೦ರ ಸಲೆ ಇಳಿಸಿದ ಸಂಬಳಗಳನ್ನು ಮಾತುಬಾರಿ ಅಧಿಕಾರಿಗಳು ಪುನಃ ಕೂಡಿಸಿಕೊಡಬೇಕಾಗಿ ಹೇಳುತ್ತಿರುವುದೂ, ಅದನ್ನು ಕೂಡಿಸಿ ಕೊಡಬಹುದೆಂದು ಮೇಲಾಧಿಕಾರಿಗಳು ಹೇಳುತ್ತಿರುವುದೂ, ಅಸಂಗತವೆನಿಸದೆ?

### ಚೀನಾ ಜಪಾನುಗಳೊಳಗೆ

ದ್ವೇಷವು ಸಿಡಿಯುತ್ತಲೇ ಇದೆ ಇದಕ್ಕೆ ಯುದ್ಧವೆಂಬ ಹೆಸರು ಇಲ್ಲ, ಆದರೆ ಜಪಾನು ರಷ್ಯದೊಡನೆಯಲ್ಲದೆ ಇತರ ಯಾರೊಡನೆ ಮುಖ್ಯವಾಗಿ ಚೀನದೊಡನೆ ಎಂದಾದರೂ ಯುದ್ಧ ಮಾಡಿದುಂಟೆ? ಮೋಡಕಟ್ಟಿ ಗುಡುಗಿ, ನೀರು ಹನಿಗಳು ಬಿದ್ದ ಮಾತ್ರಕ್ಕೆ ಮಳೆಯೆನ್ನುವರೆ? ಆದರೆ, 'ಪಕ್ಕಾ ಯುದ್ಧವೊಂದಾಗದೆ ಇವೆರಡು ರಾಜ್ಯಗಳಲ್ಲಿ ಶಾಂತಿಯುಂಟಾಗುವ ಸಂಭವಗಳೇನೂ ತೋರುವುದಿಲ್ಲ ಲಿಟ್ಟನ್ ರಿಪೋರ್ಟಿನಲ್ಲಿ ಜಪಾನು ಹಿಡಿದಿರುವ ಧೋರಣೆಯು ಆಕ್ಷೇಪಕರವಾದುದೆಂದೇ ಸಾರಲಾಗಿದೆ, ಆ ರಿಪೋರ್ಟನ್ನು ಲೀಗ್ ಒಫ್ ನೇಶನ್ಸಿನವರು ಚರ್ಚಿಸುವಾಗಲೂ ಜಪಾನು ಆಕ್ಷೇಪಗಳನ್ನೆತ್ತಿದೆ, ಲಿಟ್ಟನ್ ರಿಪೋರ್ಟಿನಲ್ಲಿ ಜಪಾನಿಗೆ ಹೇಳಿದ ಸೂಕ್ತಿಗಳನ್ನು ಅಂಗೀಕರಿಸುವ ಬದಲಾಗಿ, ಲೀಗಿನ ಮೆಂಬರಿಕೆಯು ತನಗೆ ಬೇಡವೆಂದು ಜಪಾನು ಬೆದರಿಕೆ ಹಾಕಿಯದೆ ಮಂಚೂರಿಯದಿಂದ ಅದು ಹೊರಡದು ಲೀಗ್ ತರ್ಫಿನಿಂದ ಉಂಟಾದ ಈ ಕಮಿಟಿಯ ವರದಿಯನ್ನು ಜಪಾನು ಅಂಗೀಕರಿಸದೆ ಹೋದಿದ್ದರೆ, ಏನಾಗುವುದು? ಇದನ್ನು ಉತ್ತರಿಸುವುದು ತೀರ ಭಯಂಕರ ಚಿತ್ರವೊಂದನ್ನು ಬಿಂಬಿಸಿದಷ್ಟೆ ಅಂಜಿಸುವುದರಿಂದ, ಈ ಖೇದಕರ ಪ್ರಸಂಗವನ್ನು ಇಲ್ಲಿಗೆ ಸದ್ಯಕ್ಕೆ ನಿಲ್ಲಿಸಬೇಕಾಗಿದೆ.

### ರಾಜಕೀಯ ವಿಷಯಗಳಲ್ಲಿ ಆಯವ್ಯಯದ ಅಂದಾಜು

ಆಯದ ಕಡೆಗೆ,—ಮುಖ್ಯ ಮಂತ್ರಿಗಳು ಸಾಮಾಜಿಕ ಪ್ರಾತಿನಿಧ್ಯವನ್ನು ಕುರಿತಾಗಿ ಕರುಣಿಸಿದ ಅವೋರ್ಡು, ಲಂಡನಿನಲ್ಲಿ ಜರುಗಿದ ಮೂರನೆ ಪರಿಷತ್ತು, ಒಟ್ಟಾವಾ ಕರಾರು ಇವು ಮೂರೇ ಮುಖ್ಯ ಜಮೆಗಳಿವೆ. ಇವು ಮೂರು ವರಗಳೋ ಶಾಪಗಳೋ ತಿಳಿದಿಲ್ಲ ಒರ್ಡಿನೆನ್ಸುಗಳಿಗೆ ತುತ್ತಾದವರ ಸಂಖ್ಯೆಗಳು, ಇವು ನೈತಿಕ ಅಥವಾ ಧಾರ್ಮಿಕ ಮೌಲ್ಯ ಪಡೆದರೆ, ಆಯದ ಕಡೆಗಳ ಮೊತ್ತವನ್ನು ಎಷ್ಟಕ್ಕೆ ಇಳಿಸುವವೊ, ಅಥವಾ ಆಯವನ್ನೆಲ್ಲ ನುಂಗುವವೊ ಎಂದು ಹೇಳುವುದು ಸಹ ಅಸಾಧ್ಯವಾದೀತೆ? ದೃಢ ಮುಷ್ಟಿಯಿಂದ ಶಾಸನೋಲ್ಲಂಘನಾ ಚಳವಳವೆಂಬ ರಾಕ್ಷಸನನ್ನು ಕೆಡಹಿದೆವೆಂದು ಅಧಿಕಾರಿಗಳು ಹೇಳುತ್ತಾರೆ, ಮುಂದೆ ಅವೇ ಒರ್ಡಿನೆನ್ಸುಗಳನ್ನು ಖಾತ್ರಿ ಕಾನೂನು ಮಾಡಿಸಿಕೊಳ್ಳಬೇಕಾದ ಅಡಚಣೆಯು ಸರಕಾರಕ್ಕೆ ಉಂಟಾಯಿತೆಂದ ಬಳಿಕ, ಆ ಚಳವಳವು ಮಹಿರಾವಣನ ಆಕಾರ ತಳೆದಿರುವುದೆಂದೇ ಭಾಸವಾಗುತ್ತಿಲ್ಲವೆ? ಇನ್ನೂ ಮೂರು ವರ್ಷಗಳ ತನಕ ಅದೇ ಚಳವಳದಿಂದಾಗಬಹುದಾದ ಅಡಚಣೆ ಇರುವುದಾದರೆ ತಾತ್ಪರ್ಯವೇನು? ಒರ್ಡಿನೆನ್ಸುಗಳೆಂದರೆ ತನಗೂ ಕಹಿ; ಎಲ್ಲರ ಸಹಕಾರವು ನಮಗೆ ಬೇಕು ಎನ್ನುವ ಹೋರರು ಇಂಗಿತದಲ್ಲಿ ದಿಪೋಜಿಟ್ಟಾಗಿಟ್ಟಿರುವುದೇನು? ಹೀಗಾದರೆ, ಈ ಆಯವ್ಯಯದಿಂದಾಗುವ ಸಿಲ್ಕು ಯಾವುದು? ಎಷ್ಟು?

### ಇದೊಂದು [illegible]

ಗುರುವಾಯೂರಲ್ಲಿ, ಪ್ರತಿ ದಿನವೂ ಕೆಲ ತಾಸುಗಳ ಮಟ್ಟಿಗಾದರೂ, ಅಸ್ಪೃಶ್ಯರೂ ಅವರೊಡನೆ ದೇವದರ್ಶನವನ್ನು ನಿರಾಕ್ಷೇಪಕರವಾಗಿ ಪಡೆಯಬಯಸುವವರೂ ಪ್ರವೇಶಹೊಂದುವಂತಾಗಬೇಕೆಂದೂ, ಆಗತಕ್ಕವರೆ ಕಡೆಗೆ ಸಂಪ್ರೋಕ್ಷಣೆ ಮಾಡಿ ಕೇವಲ ಸವರ್ಣರೇ ಉಳಿದ ತಾಸುಗಳಲ್ಲಿ ದೇವದರ್ಶನ ಪಡೆಯಬಹುದೆಂದೂ ಒಂದು ಸೂಚನೆಯನ್ನು ಗಾಂಧಿಜೀಯವರು ಹೊರಗೆಡಹಿರುವರು ಇದರಿಂದ ಅಸ್ಪೃಶ್ಯರಿಗೆ ಪ್ರವೇಶದೊರೆವುದಲ್ಲದೆ, ಆಕ್ಷೇಪಕರಿಗೂ ಆತಂಕಬಾರದಷ್ಟೆ. ಹಾಗೆ ಮಾಡಿದರೆ, ಅಸ್ಪೃಶ್ಯರಿಗೆ ಲಾಭದೊಡನೆ ನಷ್ಟವೂ ಇಲ್ಲವೆ? ನಮ್ಮಲ್ಲಿ ಊಟಮಾಡಬಹುದು, ಜಗುಲಿಯ ಮೇಲೆ, ಎಂಜಲೆಲೆ ನೀವೇ ಎತ್ತಿಕೊಂಡು ನಡೆಯಿರಿ ಎನ್ನುವಷ್ಟು ಜೋರಾಗಿಯೇ ಇದು ಪರಿಣಾಮವನ್ನುಂಟುಮಾಡಬಹುದು ಅಸ್ಪೃಶ್ಯರು ಒಳಬಂದೊಡನೆ ಸಂಪ್ರೋಕ್ಷಣೆ, ಇದೂ ಒಂದು ಲಾಂಛನೆಯೇ ಸರಿ, ಆದರೆ, ಗಾಂಧಿಜಿಯವರ ಅಭಿಪ್ರಾಯವು ಹೀಗಿಲ್ಲ ಅಸ್ಪೃಶ್ಯರೊಡನೆ ಅವರ ಪ್ರವೇಶಕೊಪ್ಪುವ ಸವರ್ಣರೂ ಪ್ರವೇಶಿಸುವ ಕಾರಣ ಇತರ ಕಾಲಗಳಲ್ಲಿ ದೇವದರ್ಶನಕ್ಕಾಗಿ ಅತಿ ಕಡಿಮೆ ಜನರೇ ದೇವಾಲಯದಲ್ಲಿ ಕಾದು ಕುಳಿಯುವವರು ಎಂದು ಅವರ ವೋಟುಗಳೇ ತೋರಿಸಿವೆ ಹೀಗಾಗಿ, ಕ್ರಮೇಣ ಯಾವತ್ತು ಸವರ್ಣರೂ ಅಸ್ಪೃಶ್ಯರೊಡನೆ ಸಹಾನುಭೂತಿ ತೋರಿಸಲು ಅನುಕೂಲವೆ? ಮತ್ತೆ ಆಕ್ಷೇಪವೆಲ್ಲಿದೆ?

### ಅಖಿಲ ಭಾರತದ ಮಹಿಳೆಯರ ಸಭೆ

ಲಕ್ನೋದಲ್ಲಿ ಕೂಡಿ ಮಂಜೂರಾಗಿರುವ ನಿರ್ಣಯಗಳಲ್ಲಿ ಎರಡು ಮುಖ್ಯವಾಗಿವೆ 'ಗಂಡಸರಿಗೂ ಹೆಂಗಸರಿಗೂ ಮಿತಸಂತತಿಯ ತತ್ವಗಳನ್ನು ಬೋಧಿಸಬೇಕು.' ಈ ವಿಷಯವಾಗಿ ವಿಶೇಷವಾಗಿ ಚರ್ಚೆ ನಡೆದಿದೆ, ಮಿತಸಂತತಿಯ ತತ್ವಗಳನ್ನು ಬೋಧಿಸಿದರೆ, ಉಪಾಯಗಳನ್ನು ಕಲಿಸಿಕೊಟ್ಟರೆ, ಸ್ತ್ರೀಪುರುಷರಲ್ಲಿ ಮಿತಿಮೀರಿ ವಿಷಯಾಸಕ್ತರಾದಾರೆಂಬ ಭಯವಿದೆ ಎಂದೇ ಈ ಚರ್ಚೆಗೆ ವಿರೋಧವಿದ್ದಿತು ಇದೊಂದು ನಿರ್ಣಯವಾಯಿತು ಎರಡನೆಯದೆಂದರೆ,—ದಾಂಪತ್ಯವನ್ನು ವಿಚ್ಛೇದಗೊಳಿಸುವ ತತ್ವವನ್ನು ಅಂಗೀಕರಿಸಿ, ಇದೇ ದೇಶಕ್ಕೆ ಲಾಗೂವಾಗುವ ಒಂದು ಕಾನೂನು ಉಂಟಾಗಬೇಕೆಂಬುದು ಹಿಂದೂ ವಿವಾಹವು ಪವಿತ್ರ ಸಂಸ್ಕಾರ ಎಂದೇ ಈ ನಿರ್ಣಯಕ್ಕೆ ವಿರೋಧವಿದ್ದಿತು, ನೈತಿಕ ವಂಚನೆ ಅಥವಾ ಶಾರೀರಿಕ ವಿಪತ್ತುಗಳನ್ನು ಕಾರಣವಾಗಿಟ್ಟುಕೊಂಡು ವಿಚ್ಛೇದವಾಗಬಾರದೆಂದರೆ ಹೇಗಾಗುವುದು? ಸ್ಮೃತಿಗಳೂ ಸಹ ಹಿಂದೂ ಸ್ತ್ರೀಯರಿಗೆ ದ್ವಿತೀಯ ವಿವಾಹ ನಡೆಸಲು ಸಮ್ಮತಿಸಿವೆ, ಗಂಡನಿಗೆ ಸೋಂಕು ರೋಗವು ಉಂಟಾಗಿ ಅದು ಭಯಂಕರವಾಗಿದ್ದಲ್ಲಿಯೂ, ಅವನು ಸಂಸಾರವನ್ನು ತ್ಯಜಿಸಿದಾಗಲೂ, ಹೆಂಡತಿಗೆ ಎರಡನೆ ವಿವಾಹವಾಗಬಹುದಾಗಿದೆ ಎಂದು ವಿವರಿಸಿ ಈ ನಿರ್ಣಯವೂ ಮಂಜೂರಾಗಿದೆ

### ಮದ್ರಾಸು ಲೋಕಲ್ ಬೋರ್ಡುಗಳು

ಏಳಲ್ಲದೆ ಉಳಿದುವು ಕಳೆದ ವರ್ಷ ಎದ್ದಿವೆ, ಹೆಚ್ಚಿನವುಗಳ ಸಂಪತ್ತು ಕುಂದುದಿಲ್ಲ ಕೆಲವೋ ಚಾಪೆಗಿಂತ ದೂರಕ್ಕೆ ಕಾಲು ನೀಡಿದುವು, ಕೆಲವೋ ಲಗ್ನದ ಖರ್ಚನ್ನು ಸಮಾಧಿಗೆ ಪೂರಯಿಸಿದುವು ಅಂತೂ ಒಟ್ಟಿನ ಮೇಲೆ ಆಡಳಿತವು ಚೆನ್ನಾಗುತ್ತ ಬಂದಿದೆ ಎಷ್ಟೋ ಬೋರ್ಡುಗಳು ಟೆಂಡರು ಸ್ವೀಕರಿಸದೆ, ಕಡಿಮೆ ಟೆಂಡರುಗಳನ್ನು ನಿರಾಕರಿಸಿ, ಕೆಲಸ ಮಾಡಿಸದೆ ಹಣ ತೆತ್ತು, ಹೆಚ್ಚಿನ ಧಾರಣೆಯಲ್ಲಿ ಹಣಕೊಟ್ಟು, ಇತ್ಯಾದಿ ರೀತಿಗಳಲ್ಲಿ ದುರ್ವ್ಯಯವಾಗಿದೆ ಖರ್ಚಿನ ಮೇಲೆ ಅಧಿಕವಾಗಿ ನಿಗಾ ಇಡತಕ್ಕದ್ದೆಂದೇ ಟೀಕೆ ಬೋರ್ಡುಗಳಿಂದ ಪ್ರಜಾಹಿತವಾಗಬೇಕಾಗಿರುವ ವಿಷಯಗಳಲ್ಲಿ, ಮೊದಲನೆದಾದ ವಿದ್ಯಾಪ್ರಚಾರವನ್ನು ಕುರಿತು ಹೇಳುವುದಾದರೆ, ಬೋರ್ಡು ವಿಸ್ತೀರ್ಣದಲ್ಲಿ ಹುಡುಗರಲ್ಲಿ ಸೇಕಡಾ ೫೫, ಹುಡುಗಿಯರಲ್ಲಿ ೮೦ರಂತೆ ಯಾವ ಪಾಠಶಾಲೆಯಲ್ಲೂ ಓದುತ್ತಿರಲಿಲ್ಲ ಕೆಲವು ಬೋರ್ಡು ವಿಸ್ತೀರ್ಣದಲ್ಲಂತೂ ಸೇಕಡಾ ೭೦ ಹುಡುಗರಿಗೆ ವಿದ್ಯಾಭ್ಯಾಸದ ಗಂಧವೂ ಇಲ್ಲ, ಅಂತೆಯೆ ಸೇಕಡಾ ೯೫ ಹೆಣ್ಮಕ್ಕಳಿಗೂ ಇಲ್ಲ ಹಿಂದಣ ವರ್ಷದಲ್ಲಿದ್ದುದಕ್ಕಿಂತ ಸೇಕಡಾ ೧ರಂತೆ ಮಾತ್ರ ವಿದ್ಯಾರ್ಥಿಗಳ ಸಂಖ್ಯೆ ಬೋರ್ಡು ಶಾಲೆಗಳಲ್ಲಿ ಹೆಚ್ಚಿದೆ ಪ್ರಾಥಮಿಕ ತರಗತಿಗಳಲ್ಲೆಲ್ಲ ಓದುವ ಮಕ್ಕಳ ಸೇಕಡಾ ೭೦ರಿಂದ ೮೦ರ ವರೆಗೆ ಕೆಳಗಣ ಎರಡು ತರಗತಿಗಳಲ್ಲಿರುವ ಕಾರಣ, ಮೇಲೆ ಹೋಗುತ್ತಾ ಮಕ್ಕಳು ಶಾಲೆ ಬಿಟ್ಟೇ ಹೋಗುವುದೂ ದುರ್ಭಾಗ್ಯ ಸೂಚಕವಾಗಿದೆ.

## NOTE...S
## ನೋಟಗಳು

ಬ್ರಿಟಿಷ ದ್ವೀಪಗಳಿಂದ ಮದ್ಯವನ್ನು ಸಹ ಐರ್ಲೆಂಡಿನಲ್ಲಿ ಕುಡಿಯಬಾರದಾಗಿ ಬಹಿಷ್ಕಾರ ಹಾಕಿದ್ದಾರೆ. ರಿವಾಲ್ವರುಗಳನ್ನು ಸಹ ಪ್ರಯೋಗಿಸಿ ಒಂದು ಗಡಂಗಿನಿಂದ ೧೫೦ ಪವನು ಬೆಲೆಯ ಮದ್ಯವನ್ನು ಚೆಲ್ಲಿಬಿಟ್ಟಿದ್ದಾರೆ ಐರ್ಲೆಂಡಿನವರು!

* * * *

ನಾಲ್ಕು ಲಾರಿಗಳಿದ್ದರೆ, ನೋಡಬಹುದಿತ್ತು ಇವರ ಪರಾಕ್ರಮವನ್ನು, ರೌಂಡ್ ಟೇಬಲ್ ಕೊನ್ಫರೆನ್ಸಿಗೆ ತೆರಳಿದ್ದ ನಮ್ಮ ಪ್ರತಿನಿಧಿಗಳು ಇದನ್ನು ಅಲ್ಲೇಕೆ ಸೂಚಿಸಿಲ್ಲವೊ?

* * * *

'ಕ್ರೈಸ್ತರೆಂಬ ಪಾಶ್ಚಾತ್ಯ ಮುಖಂಡರು ಬಲಪ್ರಯೋಗದಿಂದ ತಮ್ಮೊಳಗಣ ಭೇದಗಳನ್ನು ತಿದ್ದಿಕೊಳ್ಳಲೆತ್ನಿಸುವಾಗ ದೂರವಾಗಿ ನಿಂತು ಸೇನೆಗಳು ಒಂದನ್ನೊಂದು ಕೊಂದಿಕ್ಕಲೆಂದು ಅಪ್ಪಣೆಕೊಡುವಾಗ ಈ ಗಿಡ್ಡ ಹಿಂದೀ ನಾಯಕನು ಇವರನ್ನೆಲ್ಲ ಹೀಗೆ ಸೂಚಿಸುವನು! —ಎಂದು ಅಮೇರಿಕದ ಪತ್ರಿಕೆಯೊಂದು ಮಹಾತ್ಮರನ್ನು ಅವರ ಉಪವಾಸದ ಕುರಿತಾಗಿ ಬರೆದಿದೆ

* * * *

ಇವರು ಬಂದೀಖಾನೆಯಲ್ಲಿದ್ದಾರೆಂದು ಈ ಪತ್ರಿಕೆಗೆ ತಿಳಿದಿದೆಯೆ? ಅಮೇರಿಕದ ನಿಗ್ರೋಗಳನ್ನು ಹೀಗೆಯೆ ಅಮೇರಿಕಾನರೊಡನೆ ಸಮಾನತೆಯನ್ನು ದೊರಕಿಸಿಕೊಡಲು ಮೇಯೋ ಮಾಯೆಯ ರಾಜ್ಯದಲ್ಲಿ ಒಬ್ಬರಾದರೂ ಇಲ್ಲವೆಂದರೆ?

* * * *

ಸನಾತನಿಗಳೆಂಬವರು ತೀರ ಮಹತ್ವದ್ದೊಂದು ಜನಾಂಗ ಹಿಂದೂ ಮಹಾಸಭೆ, ಆರ್ಯಸಮಾಜ, ಬ್ರಹ್ಮಸಮಾಜ, ಇತರ ಹಿಂದೂ ಸಮಾಜಗಳೆಲ್ಲಕ್ಕೂ ಮೇಲಣವರು, ಶಾಸ್ತ್ರ, ಆಗಮ, ರೂಢಿಗಳೆಂಬುವು ಇವರ ಉಪಾಸನೆಯ ತ್ರಿಮೂರ್ತಿಗಳು

* * * *

ಇವರು ಲೋಕಾಭಿಮತಕ್ಕೆ ಕಿವುಡರಲ, ಕಿವಿಗಳು ಶುಭ್ರವಾಗಿದ್ದು ಕೇಳಿಸದವರ ಸೋಂಗಿನವರು.

* * * *

ಕಳೆದ ಎರಡು ವರ್ಷಗಳಲ್ಲಿ 'ಅಖಿಲ ಭಾರತ ಮುಸ್ಲಿಮ ಸಭೆಗಳು ಎಷ್ಟಾದವು? ಇವುಗಳ ಲೆಕ್ಕಹಾಕಿದವರಿಲ್ಲ ಇವುಗಳಲ್ಲಿ ಯಾವುದೊಂದು ಮಾಡಿದ ನಿರ್ಣಯಗಳನ್ನು ಉಳಿದೆಲ್ಲವು ನಿಷೇಧಿಸಿವೆ ಎಂಬುದೇ ಇವುಗಳ ಮಹತ್ವ

* * * *

ಇಂತಹ 'ಅಖಿಲ ಭಾರತ' ಮುಸ್ಲಿಮ ಸಭೆಗಳಂತೆ ಇನ್ನಾವ ಸಮಾಜಗಳ 'ಅಖಿಲ ಭಾರತ' ಸಭೆಗಳೇ ಆಗುವುದಿಲ್ಲ, ಆಗಿಲ್ಲ, ಏಕೆ?

* * * *

ಇಟಲಿ ದೇಶದ ವ್ಯಾಪಾರಕ್ಕೆ ಮಿತ ನಷ್ಟವನ್ನು ಒಟ್ಟಾವಾ ಕರಾರು ಉಂಟುಮಾಡಿರುವುದಾಗಿ, ಇನ್ನು ಬಲಾತ್ಕಾರಕ್ಕೆ ಬಲಾತ್ಕಾರವೇ ಉತ್ತರವೆಂದು ಇಟಲಿಯ ಸರ್ವಾಧಿಕಾರಿಗಳು ಬೆದರಿಸಿದ್ದಾರಲ್ಲ' ಹಂಗೆರಿ ರಾಜ್ಯದವರೂ ಹೀಗೆಯೆ ಆಡುತಿದ್ದಾರೆ

* * * *

ಇಷ್ಟು ತಕರಾರು ಇವರು ಆಡುತಿದ್ದರೆಂದು ಯಾರಿಗೆ ತಾನೆ ಗೊತ್ತಿತ್ತು? ಅದರಲ್ಲೂ ಹಿಂದೀಯರೂ ಹೀಗೆಯೆ ಆಡುವುದೆ, ಇತರ ಪರಕೀಯರ ಹಾಗೆ!

* * * *

ಎರಡನೆ, ಮೂರನೆ ಇತ್ಯಾದಿ ಹೆಂಡಿರಾಗಿರುವವರಿಗೆ ಚೀನದಲ್ಲಿ ಇನ್ನು ಹಕ್ಕುಗಳಿಲ್ಲವಂತೆ' ನಲ್ವತ್ತು ಲಕ್ಷ ಸ್ತ್ರೀಯರು ಹೀಗೆ ಮನೆತನದ ಹಕ್ಕು ಕಳೆದುಕೊಂಡರು ಆದರೆ, ಸ್ತ್ರೀಯರಿಗೂ ಪುರುಷರಿಗೂ ಸಮಾನ ಹಕ್ಕುಗಳಂತೆ,—

* * * *

ಎಂದರೆ, ಎರಡನೆ, ಮೂರನೆ ಇತ್ಯಾದಿ ಗಂಡಂದಿರ ಗತಿ ಏನು?

* * * *

ರೆವರೆಂಡ್ ಪ್ರೆನ್‌ಟಾಕ್ ಎಂಬ ವೈದಿಕರು ಲಂಡನಿನ ಡೈಲಿ ಹೆರಲ್ಡ್ ಪತ್ರಿಕೆಯಲ್ಲಿ ತುಸು ಖಾರದ ಮಾತು ಬರೆದಿದ್ದಾರೆ:— "ಮಹಾ ಅಪರಾಧಿಗಳೆಂದರೆ, 'ಯುದ್ಧವಾಗ ಬಾರದಾಗಿ ನಿಷ್ಟ ಪ್ರಿಸಿ, ರಣವು ಬರೆದು, ಅದರ ಮಸಿ ಆರುವ ಮೊದಲೇ ಯುದ್ಧವುಂಟಾಗುವ ಪರಿಸ್ಥಿತಿಯನ್ನು ಹೂಡಿಸಿ ತರುವ ರಾಜತಂತ್ರಜ್ಞರು!

* * * *

ತೆರಿಗೆ ಕೊಡುವುದಿಲ್ಲೆಂದು ಊರು ಬಿಟ್ಟವರಲ್ಲಿ (ನಂದಿಗ್ರಾಮ) ೭೫ ಮಂದಿ ಸತ್ತರೆಂದು ವಾರ್ತೆ. ತೆರಿಗೆ ತೆತ್ತು ಬದುಕುವ ಬದಲಾಗಿ, ಇವರು ಬದುಕನ್ನೆ ತೆತ್ತರು.

# ಸ್ವರಾಜ್ಯಶಿಖರವು ಇನ್ನು ಹೆಚ್ಚು ಎತ್ತರದಲ್ಲಿಲ್ಲ!

## ಪ್ರತಿನಿಧಿಗಳ ಅಂಭೋಣ. ಸರಕಾರದ ಮೇಲ್ ನಂಬಿಕೆ.

# ಗಾಂಧಿ ವಿಮುಕ್ತತೆಗೆ ಸ್ವಲ್ಪ ವಿಳಂಬವಿದೆ!

ನವಂಬರ ಮಾಸದಲ್ಲಿ ಪ್ರಾರಂಭವಾದ ರೌಂಡ್‌ಟೇಬಲ್ ಪರಿಷತ್ತು ಕೊನೆಗೊಂಡು, ಅದರ ಭಾರತ ಪ್ರತಿನಿಧಿಗಳಾದ ಸರ್ ತೇಜಬಹದ್ದೂರ್ ಸಪ್ರೂ, ಶ್ರೀ. ಜಯಕರ್, ಸರ್ ಅಲ್ಲದಿ ಕೃಷ್ಣಸ್ವಾಮಿ(?) ಶಾಸ್ತ್ರಿ, ಸರ್. ಪಿ. ಟಿ. ಕೃಷ್ಣಮ್ಮಾಚಾರಿ, ಸರ್ ಮಿರ್ಜಾ ಇಸ್ಮಾಯಿಲ್, ವಿ. ಎಲ್. ಗಜನಾವಿ, ಕೆ ಸಿ ನಿಯೋಗಿ, ಫ್ಲೋಲ್ಸ್ ಇವರು ಜನರು ವಿಕ್ಟೋರಿಯ ಜಹಜಿನ ಮೂಲಕ ಮುಂಬಾಯಿ ರೇವನ್ನು ತಾ. ೯ನೇ ದಿನ ಬಂದು ತಲಪಿದರು ಸ್ವರಾಜ್ಯ ಸಂಪಾದನೆಗಾಗಿ ಹೊರಟಿದ್ದ ಇವರ ಅನುಭವಗಳೇ ನೆಂದು ತಿಳಿಯಲು ಇವರನ್ನು ಪತ್ರಿಕಾ ಪ್ರತಿನಿಧಿಗಳು ಮುತ್ತಿದರು. ರೌಂಡ್‌ಟೇಬಲಿನಲ್ಲಿ ನಡೆದ ಕಾರ್ಯಕಲಾಪಗಳ ಕ್ರಮ ಬ್ರಿಟಿಷ ಮುತ್ಸದ್ದಿಗಳ, ಸೌಹಾರ್ದ ಫೊಡಲಾದುವುಗಳ ವರ್ಣನೆಯು ನಡೆಯಿತು ಎಲ್ಲರ ಅಭಿಮತದ ಮೇರೆಗೆ—, ಆಗುವುದೆಲ್ಲಾ ಆಯಿತು, ಇನ್ನು ಬಾಕಿ ಉಳಿದಿರುವುದು ಬ್ರಿಟಿಷ ಸರಕಾರವು ಹಿಂದೂಸ್ಥಾನಕ್ಕೆ ಕೇಂದ್ರ ಸರಕಾರ ದಾನವನ್ನು ಮಾಡಲು ವ್ಯವಸ್ಥೆ ಮಾಡುವುದು ಮಾತ್ರ ಕೃಷ್ಣಮ್ಮಾಚಾರ್ಯರು ಭಾರತಕ್ಕೆ ಫೆಡರೇಶನು ದೊರೆಯುವುದು ವ್ಯವಹಾರ್ಯವಿದೆ. ಆಶ್ರಿತ ರಾಜರು ಮಾತ್ರ ಫೆಡರೇಶನನ್ನು ಸೇರುವರೆ ಮನಸ್ಸುಮಾಡುವುದು ಮಾತ್ರ ಬಾಕಿಯಿದೆ ಎಂದರು ಬ್ರಿಟಿಷ ಸರಕಾರದ ಗೌರವ ಚಿಹ್ನೆಗಳಂತಿರುವ ಸರ್ ತೇಜಬಹದ್ದೂರ್ ಸಪ್ರೂ ಮತ್ತು ಜಯಕರರು ತಮ್ಮ ಅನುಭವಗಳನ್ನು ಒಂದು ಪ್ರತ್ಯೇಕ ಪ್ರಕಟಣೆಯ ರೂಪದಿಂದ ಹೊರಗೆಡವಿ,—"ನಾವು ರೌಂಡ್‌ಟೇಬಲಿಗೆ ಹೋದುದು ನಿಜ ಆದರೇನನ್ನಲಿ? ಹಿಡಿದ ಕೆಲಸ ಅಲ್ಲಲ್ಲೇ ಉಳಿದಿದೆ ಸಂಪೂರ್ಣಗೊಂಡಿಲ್ಲ ಆದರೂ ಬ್ರಿಟಿಷ ಸರಕಾರವು ತನ್ನ ಕೊನೆಯ ಅಭಿಪ್ರಾಯವನ್ನು White Paper ಮೂಲಕ ಪ್ರಕಟಿಸುವ ಸುದಿನದ ತನಕ ನಿರೀಕ್ಷಣೆಯಲ್ಲಿರಬೇಕಾಗಿದೆ ಬ್ರಿಟಿಷ ಸರಕಾರವು ಮೊದಲು ನಮ್ಮ ಪ್ರಾಂತ್ಯಗಳಿಗೆ ಸ್ವರಾಜ್ಯದಧಿಕಾರವನ್ನು ಕೊಡುವುದೆಂದು ಆಲೋಚಿಸಿತು ಆದರೆ ಈಗ ಅದು ಕೈಗೂಡುವಂತಿಲ್ಲ ಅಲ್ಲದೆ ನಮಗೆ ಬೇಡವಾದ ಪ್ರಾಂತಿಕ ಸ್ವಾತಂತ್ರ್ಯದ ಹಕ್ಕನ್ನು ಕೊಟ್ಟು ಫೆಡರೇಶನಿನ ಸ್ವಜ ರಾಜ್ಯ ರಚನೆಯನ್ನು ತಾನು ಹಿನ್ನೆಲದಲ್ಲಿರಿಸುವಂತೆ ಮಾಡೆನು ಎಂದು ಸರ್ ಹೋರರು ವಾಗ್ದಾನಮಾಡಿರುವರು ಆದುದರಿಂದ ಭಾರತಕ್ಕೆ ನಿಜವಾದ ಸ್ವರಾಜ್ಯವು ದೊರೆಯಬೇಕೆಂದಾದರೆ ನಾವು ಅದಕ್ಕೆ ವಿಘ್ನರೂಪವಾಗಿರುವ ಕೆಲವು ಸನ್ನಿವೇಶಗಳನ್ನು ಹರಿದೊಗೆಯಬೇಕೆಂದಿದ್ದೇವೆ ಎಂದರು ಸರ್ ಹೋರರು ಭಾರತ ವರ್ಷಕ್ಕೆ ಬೇಗನೇ ಸಂಯುಕ್ತ ರಾಜ್ಯಭಾರದ ದಾನವನ್ನು ಕೊಡುವೆನೆಂದು ಹೇಳಿದುದರಲ್ಲಿ ಸಪ್ರೂ ಜಯಕರರಿಗೆ ಬಹಳ ನಂಬಿಕೆಯುಂಟಾಗಿದೆ ಸರ್ ಹೋರರು ಖಂಡಿತವಾದಿ, ಅವರು ಹೇಳಿದ್ದುದಕ್ಕೆ ತಪ್ಪುವವರಲ್ಲ ಎಂಬ ಮನೋಭಾವವು ಈ ಪ್ರತಿನಿಧಿಗಳದ್ದಾಗಿರುತ್ತದೆ ಆದರೆ ಹೋರರು ಖಂಡಿತ ವಾದಿಗಳಾದರೂ ಅವರ ಸುತ್ತು ಮುತ್ತು ಕುಳಿತು ಅವರನ್ನು ಕುಣಿದಾಡಿಸುತ್ತಿರುವವರು ಖಂಡಿತವಾದಿಗಳಲ್ಲವೆಂಬ ವಿಚಾರವು ಸಪ್ರೂಗಳೇ ಮೊದಲಾದವರಿಗೆ ಈ ಮೊದಲೇ ತಿಳಿದಿದೆ ೧೯೧೭ರಲ್ಲಿ ಹಿಂದೂಸ್ಥಾನಕ್ಕೆ ಏನಾದರೊಂದು ಬಗೆಯ ಸ್ವಾತಂತ್ರ್ಯವನ್ನು ಕೊಡಬೇಕೆಂದು ನಿರ್ಧರಿಸಲಾಗಿತ್ತು. ಆದರೆ ಅಂತಹ ವಾಗ್ದಾನಗಳು ಕಾಲನ ಬಾಯೊಳಗೆ ಗುಳುಮ್ಮನೆ ಬಿದ್ದು ಮರೆಯಾದುವು. ಕಳೆದ ಪ್ರಥಮ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಮಂತ್ರಿವರ್ಯರಾದ ಮೆಕ್‌ಡೊನಾಲ್ಡರು ಹಿಂದೂದೇಶವನ್ನು ಸಂತೃಪ್ತಿಗೊಳಿಸಲಾಗುವುದೆಂದು ಎದೆ ತಟ್ಟಿ ಹೇಳಿದರು. ಅಂತಹ ಪಟ್ಟುವಿಕೆಯೂ ಕನ್ಸರ್‌ವೇಟಿವ್ ಪಕ್ಷದವರ ಕುಟ್ಟುವಿಕೆಯಿಂದ ಶಾಂತವಾಯಿತು.

ಇಷ್ಟಾದರೂ ಸಪ್ರೂ ಜಯಕರರು ತಮ್ಮ ಆಶಾವಾದವನ್ನು ಮರೆಯದಾದರು. ಇವರು ತಮ್ಮ ಪ್ರಕಟಣೆಯನ್ನು ಮುಂದುವರಿಸುತ್ತಾ "ಬ್ರಿಟಿಷ ಸರಕಾರವು ಹಿಂದೂದೇಶಕ್ಕೆ ಸಂಯುಕ್ತ ರಾಜ್ಯಭಾರವನ್ನು ಕೊಡುವುದೆಂದು ಆಶ್ರಿತ ರಾಜರಿಗೂ ಭಾರತ ಪ್ರತಿನಿಧಿಗಳಿಗೂ ಒತ್ತಿ ವಾಗ್ದಾನವನ್ನೇ ಮಾತ್ರ ಮಾಡಿದುದಲ್ಲ, ಬೇಗನೆ ಅಂತಹ ವಾಗ್ದಾನವು ಕಾರ್ಯತಃ ರೂಪುಗೊಳ್ಳುವಂತೆ ಮಾಡುತ್ತೇನೆಂದೂ ಸರ್ ಹೋರರ ಮೂಲಕ ಹೇಳಿದೆ ಇದನ್ನು ಹೋರರು ಎಲ್ಲರಿಗೂ ಬಿಡಿಸಿ ಹೇಳಿರುತ್ತಾರೆ ಸಂಯುಕ್ತ ರಾಜ್ಯರಚನೆಯ ಮಧ್ಯೆ ಒಂದು ರಿಸರ್ವ್ ಬೇಂಕನ್ನು ಸ್ಥಾಪಿಸಬೇಕೆಂಬ ನಮ್ಮ ಆಕಾಂಕ್ಷೆಗನುಗುಣವಾಗಿ ಸರ್ ಹೋರರ ವಾಗ್ದಾನವೂ ಆಗಿರುತ್ತದೆ ಇಂತಹ ರಿಸರ್ವ್ ಬೇಂಕ್ ಒಂದು ನಮಗೆ ಲಭಿಸುವ ಸಂಭವವಿದೆ **ಹೀಗಿದ್ದರೂ, ಆಶ್ರಿತರಾಜರು ಫೆಡರೇಶನಿಗೆ ಸೇರಲು ಹಿಂಜರಿದರೂ, ಅಥವಾ ಬೇಂಕಿನ ಸ್ಥಾಪನೆಯಲ್ಲಿ ದಿನಗಳೆದರೂ, ೧೯೩೫ನೇ ಇಸವಿಯ ಒಳಗೆ ನಮಗೆ ಕೇಂದ್ರ ಸರಕಾರ (ಸ್ವರಾಜ್ಯ) ವನ್ನು ಕೊಡಬೇಕೆಂದೇ ನಮ್ಮ ಮತ** ಈ ಕುರಿತು ತನ್ನಿಂದಾದಷ್ಟು ಸಾಹಸವನ್ನು ಮಾಡಿ ಹಿಂದೀಯ ಅಭಿಪ್ರಾಯವನ್ನು ತಾನು ತ್ವರಿತದಲ್ಲೇ ಪಡೆದು (ಒಂದು ವೇಳೆ ಬೇಂಕಿನ ಸ್ಥಾಪನೆಯಲ್ಲಿ ತಡವಾದರೂ) ಹಿಂದೂಸ್ಥಾನಕ್ಕೆ ಕೇಂದ್ರ ಸರಕಾರ ದಾನವನ್ನು ಮಾಡದಿರೆನೆಂದು ಸರ್ ಹೋರರು ಭಾಷೆ ಕೊಟ್ಟಿರುವರು" ಎಂದಿರುವರು

ಸಪ್ರೂ ಜಯಕರರ ಈ ಬಗೆಯ ಹೇಳಿಕೆಯನ್ನು ವಿವೇಚಿಸುವಾಗ ೧೯೩೫ರೊಳಗೆ ಭಾರತ ವರ್ಷಕ್ಕೆ ಕೇಂದ್ರ ಸರಕಾರವನ್ನು ಕೊಡಲು ಸಾಧನೆಯು ಖಂಡಿತವಾಗಿಯೂ ಆಗುತ್ತದೆಂದು ತಿಳಿದುಬರುತ್ತದೆ ಹಿಂದೂ ದೇಶದ ದ್ರವ್ಯಭಂಡಾರದ ಆಡಳಿತದ ಅಧಿಕಾರವನ್ನು ವೈಸರಾಯರ ಕೈಯಲ್ಲಿ ಕೊಡಬೇಕೆಂದು ಬ್ರಿಟಿಷ ಸರಕಾರವು ಹೂಡಿರುವ ಯೋಜನೆಯನ್ನೂ ಸಪ್ರೂ ಜಯಕರರು ಅಭಿನಂದಿಸುವಂತಿಲ್ಲ ಹಿಂದೂದೇಶದ ಅರ್ಥ ವ್ಯವಹಾರದ ಮೇಲೆ ಬಾಹ್ಯಶಕ್ತಿಯ ಕೈಯಿರಬಾರದೆಂದೇ ಇವರ ಹಟವಾಗಿರುತ್ತದೆ ಈ ಪ್ರವೃತ್ತಿಗಳು ಆಶಿಸಿದಂತೆ ಅಥವಾ ಹೇಳುವಂತೆ ಕಾರ್ಯತಃ ನಡೆಯುವುದಾದರೆ ಭರತ ವರ್ಷಕ್ಕೆ ಶುಭದಿನವೇ ಸನ್ನಿಹಿತವಾಗಿದೆಯೆಂದು ಹೇಳಲು ಯಾವ ಸಂದೇಹವೂ ಇರುವುದಿಲ್ಲ ೧೯೩೫ರೊಳಗ ಕೇಂದ್ರ ಸರಕಾರ ದಾನವನ್ನು ಬ್ರಿಟಿಷರು ಕೊಡಲು ದೊಡ್ಡ ಮನಸ್ಸು ಮಾಡುವರೆಂದು ಯಾರೂ ಕನಸಿನಲ್ಲೂ ನೆನಸದಿರುವ ವಿಷಯವಿರುತ್ತದೆ ಆದರೂ ಪ್ರತಿನಿಧಿಗಳ ಅಂಭೋಣವು ಆಶೆಯ ಕಿರಣವನ್ನು ತೋರಿಸುತ್ತದೆ ಭಾರತದ ರಾಜ್ಯಾಡಳಿತದಲ್ಲಿ ಬ್ರಿಟಿಷರ ಕೈಯು ಹಿಂದೆ ನಿಲ್ಲುವುದೆಂದರೆ, ಅದರಷ್ಟು ದೊಡ್ಡ ಲಾಭವು ಬೇರೊಂದಿಲ್ಲ ಹಾಗೆಂದಾದರೆ, ಗಾಂಧಿಜೀಯವರ ಚಳವಳವೂ, ಕ್ರಾಂತಿಕಾರರ ಕ್ರಾಂತಿಯೂ ನಿಷ್ಪ್ರಯೋಜಕವಾಗುವುದಲ್ಲದೆ ಮತ್ತೇನು?

ಸಪ್ರೂ ಜಯಕರರು ೧೯೩೫ರೊಳಗೆ ಸ್ವರಾಜ್ಯವನ್ನು ತರುತ್ತೇವೆಂದು ಆಶೆಯ ನೆರಳನ್ನು ತೋರಿಸಿದರೂ, ಸಂಸ್ಥಾನಾಧಿಪರು ಸಂಯುಕ್ತ ರಾಜ್ಯರಚನೆಗೊಳಪಟ್ಟಿದ್ದು ಕೊಳ್ಳಲು ಒಪ್ಪದಿದ್ದರೆ, (ಅವರು ಈಗಲೇ ಬೆಚ್ಚಿ ಬಿದ್ದು ಹಿಂಜರಿದಿರುವರು) ಮತ್ತೆ ಎಲ್ಲಾ ಒಣ್ಣವೂ ಮುಸಿ ನುಂಗಿದಂತೆಯೇ ಸರಿ! ಹಿಂದೂ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷರಿಗೆ ಇಷ್ಟು ಕಾಲ ದುಡಲೂ ಇಲ್ಲಿಯ ಮತವಾದ ಸಮಸ್ಯೆಯು ವಿಘ್ನಕಾರಕವಾಗಿತ್ತು ಈಗ ಈ ಆಶ್ರಿತ ರಾಜರ ವಿಘ್ನದ ಸಂಕೋಲೆಯು ಕೇಂದ್ರ ಸರಕಾರವನ್ನು ಕಟ್ಟಿಹಾಕಬಹುದೋ ಎಂದು ಸಂದೇಹವೆದ್ದಿದೆ ಇದನ್ನು ತುಂಡರಿಸಲು ಇನ್ನೆಷ್ಟು ಯುಗವು ಆಗತ್ಯವಿದೆಯೋ ಯಾರಿಗೆ ಗೊತ್ತು?

++ ++

---

**ನಾಗಪುರದಲ್ಲಿ** ಶ್ರೀ. ಟಿ. ಎಲ್. ಟಿಕೇಕರ್ ಎಂಬವರ ಅರಾಜಕ ಭಾಷಣಪತ್ರರೆಂದು ದಸ್ತಗಿರಿ ಮಾಡಲ್ಪಟ್ಟು ೧೧೦೦೦ ರೂಪಾಯಿ ಬೋಂಡ್ ಮತ್ತು ೧೧೦೦೦ ರೂಪಾಯಿಯ ಭದ್ರತೆ ಕೊಡದಿದ್ದುದಕ್ಕೆ ರಾಜಕೀಯ ವಾತಾವರಣವು ಸದ್ಯಾರಿಗೆ ಬರುವ ವರೆಗೆ ಸೆರೆಯಲ್ಲಿರಬೇಕೆಂದಾಯಿತು

**ಪಾಟ್ನಾದಲ್ಲಿ** ಪ್ರೊಫೆಸರ್ ಜೆ. ಬಿ ಕೃಪಾಲಿನಿಯವರನ್ನು ಕೈದುಮಾಡಿ ಅವರ ಕೈಯಲ್ಲಿದ್ದ ಬಾಬು ರಾಜೇಂದ್ರ ಪ್ರಸಾದರ ಪತ್ರವನ್ನು ಸೆಳೆದುಕೊಂಡರು.

**ಬಿಹಾರದಲ್ಲಿನ** ಕಾಂಗ್ರೆಸ್ ಸರ್ವಾಧಿಕಾರಿಯಾದ ಶ್ರೀ ಮಥುರಾ ಪ್ರಸಾದಾರವರು ಒಂದು ಸಭೆ ಜರಗಿಸಿ ಭಾಷಣ ಮಾಡುತ್ತಿದ್ದಾಗ ದಸ್ತಗಿರಿಮಾಡಲ್ಪಟ್ಟರು.

**ಕಲ್ಕತ್ತದಲ್ಲಿ** ತಾ ೪ನೇ ದಿನ ಜರಗಿದ ಕಾಯಿದೆಶೀರ ಮೆರವಣಿಗೆಗಾಗಿ ಇಪ್ಪತ್ತು ಸ್ತ್ರೀಯರೊಡಗೂಡಿ ೧೩ ಜನರನ್ನು ಹಿಡಿದು ಆರಾರು ತಿಂಗಳ ಸಾದಾ ಸಜೆ ಕೊಟ್ಟರು ನಾಲ್ಕು ಮಂದಿ ಬಾಲಕರನ್ನು ಕೋರ್ಟ ಮುಕ್ತಾಯವಾಗುವ ವರೆಗೆ ಬಂಧನದಲ್ಲಿ ಇಟ್ಟರು ಅಲ್ಲಿಯ ಚಂದ್ರನಾಥ ಮುದ್ರಣಾಲಯದಲ್ಲಿ ೬೦೦೦ ನಿಷಿದ್ಧ ಕರಪತ್ರಗಳು ದೊರೆತುವು ಮುದ್ರಣಾಲಯದ ಮಾಲಿಕರಿಗೆ ಶಿಕ್ಷೆಯಾಗಿದೆ

**ಮುಂಬಾಯಿಯಲ್ಲಿ** ಗಾಂಧಿಜೀಯವರ ಬಿಡುಗಡೆಯ ಅತ್ಯಾವಶ್ಯಕತೆಯನ್ನು ಸೂಚಿಸಿ Seeds Traders' Association ಇದರ ಅಧ್ಯಕ್ಷರು ವೈಸರಾಯರಿಗೆ ತಂತಿ ಬಿಟ್ಟಿರುವರು!!!

++ ++


## ಇಪ್ಪತ್ತೈದು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು
ಅನುಕೂಲತೆಗಳನ್ನು ಇದೇ ಮುಕ್ಕಾಲು ಶತ
ಮಾನದಿಂದ ತಿಳಿದು, ಅವರಿಗೆ ಸುಲಭ ದರದ
ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ
ತರದ ಉಡುಪುತೊಡುಪುಗಳನ್ನು ಒದಗಿ
ಸುವ ನಮ್ಮ ಎರಡು ತಲಾಂತರಗಳ
ಅನುಭವವು ಮುಂದಕ್ಕೂ ಸಂತೃಪ್ತಿ
ಯನ್ನೇ ಕೊಡುವುಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು
ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್,
ಬಾತ್ ಟುವಾಲುಗಳೂ, ಧೋತಿ, ಸೀರೆ—
ಬೈರಾಸು—ಚೆಕ್ಕು—ಚೀಟು ಇತ್ಯಾದಿ
ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು

## ಅನುಕ್ರಮಣಿಕೆ.


ಅಗ್ರಲೇಖ:
ಮದ್ರಾಸ ಸರಕಾರದ ಬಜ್ಜೇಟು ಉಳಿತಾಯ . . . ೪
ಸ್ಫುಟಾಚಾರಗಳು . . . ೩
ಟೀಕೆಗಳು . . . [illegible]
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ . . . ೯
ದಕ್ಷಿಣ ಕನ್ನಡ — ಮಂಗಳೂರು, ಕಾರ್ಕಳ, ಬಂಟ್ವಾಳ, ಕಾಸರಗೋಡು, ಉಡುಪಿ, ಬದ್ರಗಿರಿ . . . ೯
ವಿವಿಧ ಸಮಾಚಾರಗಳು . . . ೧೧
ಜಗದ್ಗುರುಗಳಿಗೆ ಏನು? . . . ೩
ಪತ್ರವ್ಯವಹಾರ . . . ೧೩
ಹರಿಜನ ಸಮಸ್ಯೆ! ಶೃಂಗೇರಿ ಜಗದ್ಗುರುಗಳಮತ! . . . ೮
ಗಾಂಧಿ, ಬಂಧನದ ವಾರ್ಷಿಕೋತ್ಸವ! . . . ೧೦
ಸ್ವರಾಜ್ಯ ಶಿಖರವು ಇನ್ನು ಹೆಚ್ಚು ಎತ್ತರದಲ್ಲಿಲ್ಲ! . . . ೬
ಸಂಯುಕ್ತ ಹಿಂದೂಸ್ಥಾನಕ್ಕೆ ಯುಕ್ತವಾದ ವಿದ್ಯಾಭ್ಯಾಸ . . . ೧೫


# ಸ್ವದೇಶಾಭಿಮಾನಿ.

**ತಾ. ೧೩ನೇ ಶುಕ್ರವಾರ ಜನವರಿ ೧೯೩೩.**

## ಮದ್ರಾಸು ಸರಕಾರದ ಬಜ್ಜೇಟು ಉಳಿತಾಯ.

ಮದ್ರಾಸ ಸರಕಾರದ ಆಯವ್ಯಯದ ಅಂದಾಜಿನಲ್ಲಿ ಈ ಬಾರಿ ೧೫೫ ಲಕ್ಷದಷ್ಟು ಉಳಿತಾಯವಾಗುವ ಸಂಭವವಿದೆಯೆಂದು ತಿಳಿದುಬರುತ್ತದೆ. ಈ ಉಳಿತಾಯವನ್ನು ಹೇಗೆ ವಿನಿಯೋಗಿಸಬೇಕೆಂಬ ಯೋಚನೆಯು ಸರಕಾರದ ತಲೆಗೆ ಹತ್ತಿದೆ. ಮುಂದಾಗಿ ಮನಸ್ಸಿಗೆ ಬರುವುದೆಂದರೆ ಸರಕಾರಿ ನೌಕರರ ಸಂಬಳ. ರಿಟ್ರೆಂಚ್‌ಮೆಂಟ್ ಹೆಸರಿನಿಂದ ಸರಕಾರಿ ನೌಕರರಿಗೆ ಶೇಕಡಾ ೧೦ರಂತೆ ಸಂಬಳ ಕಡಿಮೆ ಮಾಡೋಣಾಗಿತ್ತು. ಇದನ್ನು ತೆಗೆದು ಹಾಕಿ ಪುನಹ ಸಂಬಳವನ್ನು ಒದಾಯಿಸಬೇಕೆಂಬುದೇ ಸರಕಾರಿ ನೌಕರರ ಸೂಚನೆಯಾಗಿದೆ.

ಆದರೆ ಈಗಿನ ಕಷ್ಟದ ದಿನಗಳಲ್ಲಿ ಸರಕಾರಿ ನೌಕರರು ಇದನ್ನು ಮುಂದೊತ್ತುವುದು ನ್ಯಾಯವೆಂದು ನಮಗನ್ನಿಸುವುದಿಲ್ಲ. ಪ್ರಾಯಶಃ ಎಲ್ಲಾ ವೃತ್ತಿಯವರಲ್ಲಿಯೂ ಉತ್ಪತ್ತಿಯು ಕಡಿಮೆಯಾಗಿದೆ; ಸರಕಾರಿ ನೌಕರರಂತೆ ಶೇಕಡಾ ೧೦ರಂತೆ ಅಲ್ಲ, ಶೇಕಡಾ ೫೦ರಿಂದ ಹೆಚ್ಚು. ಎಲ್ಲವರೂ ಈ ರೀತಿಯಲ್ಲಿ ಸಂಕಷ್ಟದಲ್ಲಿರುವಾಗ ಸರಕಾರಿ ನೌಕರರು ತಮ್ಮ ಉತ್ಪತ್ತಿಯನ್ನು ಒದಗಿಯಿಸಲು ಪ್ರಯತ್ನಿಸುವುದು ನ್ಯಾಯವಾಗದು. ಸರಕಾರಿ ನೌಕರರಿಗೆ ಶೇಕಡಾ ೧೦ ರಿಟ್ರೆಂಚ್‌ಮೆಂಟ್ ಇದ್ದರೂ ಅವರ ವರ್ಷಾವಧಿ ಒದಾಯಿಸುವಿಕೆಯು ನಿಲ್ಲಿಸಲ್ಪಡಲಿಲ್ಲ; ಆದುದರಿಂದ, ನಿಜವಾಗಿ ನೋಡಿದರೆ ಅವರ ಉತ್ಪತ್ತಿಯು ಬಹಳ ಮಟ್ಟಿಗೆ ಕಡಿಮೆಮಾಡಲ್ಪಟ್ಟಿಲ್ಲ. ಪರಿಸ್ಥಿತಿಯು ಹೀಗಿದ್ದರೂ ಸರಕಾರೀ ನೌಕರರ ಶೇಕಡಾ ೧೦ ರಿಟ್ರೆಂಚ್‌ಮೆಂಟನ್ನು ತೆಗೆದು ಹಾಕಿದರೆ ಕಷ್ಟದಲ್ಲಿರುವ ಇತರ ಎಲ್ಲವರಿಗೆ ಅತ್ಯಂತ ಅನ್ಯಾಯವಿಟ್ಟಂತಾಗಿದೆ.

ಈ ಉಳಿತಾಯವನ್ನು ಹೇಗೆ ವಿನಿಯೋಗಿಸಬೇಕೆಂದು ಆಲೋಚಿಸುವಾಗ, ಅದು ಯಾವ ಮೂಲಕ ಉಂಟಾಯಿತೆಂಬುದನ್ನೂ ನಾವು ಮೊದಲು ನೋಡಿಕೊಳ್ಳಬೇಕು. ಲೋಕದಲ್ಲೆಲ್ಲಿಯೂ ಪಸರಿಸಿದ ಆರ್ಥಿಕ ದುಃಸ್ಥಿತಿಯು ನಮ್ಮ ಪ್ರಾಂತ್ಯವನ್ನೂ ಬಿಟ್ಟಿರುವುದಿಲ್ಲ. ಈ ಆರ್ಥಿಕ ದುಃಸ್ಥಿತಿಯ ಮೂಲವನ್ನು ಶೋಧಿಸಿ ಸರಕಾರವು ಈ ಉಳಿತಾಯದ ವಿನಿಯೋಗವನ್ನು ನಿಶ್ಚಯಿಸಬೇಕು. ಉಳಿತಾಯವು ಸರಕಾರೀ ನೌಕರರ ಸಂಬಳದ ಮೇಲಿನ ರಿಟ್ರೆಂಚ್‌ಮೆಂಟಿನಿಂದ ಉಂಟಾದುದೆಂದು ಹೇಳಬರುವಂತಿಲ್ಲ. ಪ್ರಜಾಹಿತದ ಹಲವು ಸಲಕರಣೆಗಳಲ್ಲಿ ರಿಟ್ರೆಂಚ್‌ಮೆಂಟಿನ ಆಚರಿಸಿದುದರಿಂದಲೂ, ಜನರಿಗೆ ಅಲ್ಲಲ್ಲಿ ನ್ಯಾಯವಾಗಿ ಸಿಕ್ಕಬೇಕಾದ ಸಹಾಯಗಳನ್ನು ನಿರಾಕರಿಸಿದುದರಿಂದಲೂ, ದೇಶದೊಳಗಿನ ಕೊರತೆಗಳನ್ನು ಹೋಗಲಾಡಿಸಲು ಒಪ್ಪದೆಯಿದ್ದುದರಿಂದಲೂ, ಈ ಉಳಿತಾಯವು ಉಂಟಾಗಿರುತ್ತದೆ. ಈ ಉಳಿತಾಯದ ವಿನಿಯೋಗವಾದರೂ ಈ ಉದ್ದೇಶಗಳಿಗಾಗಿಯೇ ನಡೆಯಬೇಕೆಂಬುದು ಎಲ್ಲರೂ ಒಪ್ಪತಕ್ಕ ಮಾತಾಗಿದೆ.

ಜನರ ಭಾಗ್ಯಗಳು ಬೆಳೆಯು [illegible] ಬಹು ಕಡಿಮೆಯಾಗಿದೆ; ಕೂಲಿಗಳ ಸಂಖ್ಯೆಯೂ ಕಡಿಮೆಯಾಗಿದೆ. ಆದುದರಿಂದ ಸಂಬಳದ ನೌಕರರಿಗೆ ಶೇಕಡಾ ೧೦ರ ರಿಟ್ರೆಂಚ್‌ಮೆಂಟಿನಿಂದ ನಿಜವಾದ ಬಾಧಕವಾಗಲಿ ನಷ್ಟವಾಗಲಿ ಇರುವುದಿಲ್ಲ. ಆದುದರಿಂದ ಉಳಿತಾಯವು ಜನೋಪಯೋಗದ ಉದ್ದೇಶಗಳಿಗಾಗಿಯೇ ವ್ಯಯಿಸಲ್ಪಡಬೇಕಲ್ಲದೆ ಅನ್ಯ ಕಾರಣಗಳಿಗೆ ಅದನ್ನು ಉಪಯೋಗಿಸಬಾರದೆಂಬುವುದು ಸ್ವತಃ ಸಿದ್ಧವಾಗಿದೆ.

ಉದಾಹರಣೆಗಾಗಿ, ಮದ್ಯಪಾನ ನಿಷೇಧದ ಪ್ರಚಾರ ಕಾರ್ಯಕ್ಕೆ ಸರಕಾರವು ಹಣಸಹಾಯವನ್ನು ಮಾಡುತ್ತಿದ್ದಷ್ಟು ಸಮಯ ಈ ಪ್ರಚಾರಕಾರ್ಯವು ಚೆನ್ನಾಗಿ ನಡೆಯುತ್ತಿತ್ತು; ಆ ಸಹಾಯವನ್ನು ಧನಾಭಾವದ ಕಾರಣದಿಂದ ಸರಕಾರವು ನಿಲ್ಲಿಸಿದ ಮೇಲೆ ಈ ಪ್ರಚಾರಕಾರ್ಯವೂ ನಿಂತುಹೋಯಿತು. ಹಾಗೆಯೇ ಹಲವು ವಿದ್ಯಾಸಂಸ್ಥೆಗಳಿಗೆ ಅಗತ್ಯವಿದ್ದ ಸಹಾಯವನ್ನು ಸರಕಾರವು ನಿರಾಕರಿಸಿ ವಿದ್ಯಾಪ್ರಚಾರದಲ್ಲಿ ಕೊರತೆಗಳನ್ನುಂಟುಮಾಡಿದೆ. ದೇಶದ ಮಾರ್ಗ, ವ್ಯವಹಾರಗಳನ್ನು ಊರ್ಜಿತಕ್ಕೆ ತರುವ ಬಗ್ಗೆ ಧನಸಹಾಯವು ತುಂಬಾ ಬೇಕಾಗಿರುತ್ತದೆ. ಅಂತೆಯೇ ಹಲವು ಕಡೆಗಳಲ್ಲಿ ಧೂಮ್ರಸಾಯವು ಬಹಳವಾಗಿ ಕೆಟ್ಟುಹೋಗಿ ರೈತರಿಗೂ, ಜಮೀನುದಾರರಿಗೂ ಕಂದಾಯ ಕಟ್ಟುವುದು ಅಸಾಧ್ಯವಾಗಿದೆ. ಮೊದಲೇ ಉತ್ಪತ್ತಿಗೆ ಬೆಲೆ ಕಡಿಮೆ; ಅದರಲ್ಲೂ ಬೇಸಾಯವೇ ದುಃಸ್ಥಿತಿಯಲ್ಲಿದ್ದು ಉತ್ಪತ್ತಿಯು ಕಡಿಮೆಯಾಗುವಾಗ ರೈತರ ಅವಸ್ಥೆಯೇನೆಂದು ಬೇರೆ ಹೇಳಬೇಕಾಗಿಲ್ಲ. ಇಂತಹ ಕಡೆಗಳಲ್ಲಿ ಕಂದಾಯದ ಕೆಲವಂಶವನ್ನಾದರೂ ಮಾಫಿ ಕೊಡಬಹುದು.

ಪ್ರಜಾಹಿತವನ್ನುದ್ದೇಶಿಸುವ ಸರಕಾರವು ಈಗಿನ ಒಂದೂ ಕಾಲು ಕೋಟಿಯ ಉಳಿತಾಯದ ವೆಚ್ಚವು ಹೇಗಾಗಬೇಕೆಂದು ನಿರ್ಣಯಿಸಲು ಹೆಚ್ಚು ಅನುಮಾನ ಪಡಲಾರದು. ಈ ಉಳಿತಾಯವು ಪ್ರಜೆಗಳದ್ದು; ಪ್ರಜೆಗಳಿಗೇನೇ ಸೇರತಕ್ಕದ್ದು.

+ ++ +

## ವಿದೇಶ ವರ್ತಮಾನ.

—ರಷ್ಯದಲ್ಲಿ ದ್ವಿತೀಯ ಪಂಚ ವಾರ್ಷಿಕ ಯೋಜನೆಯಾರಂಭವಾಗಲಿದೆ.

—ಐರ್ಲೇಂಡಿನಲ್ಲಿ ಜನರಲ್ ಇಲೆಕ್ಷನ್ ಪ್ರಾರಂಭ! ಡಿವಲೆರ ಪಕ್ಷ, ಕೊಸ್‌ಗ್ರೇವರ ಪಕ್ಷ, ಸ್ವಾತಂತ್ರ್ಯವಾದಿಗಳು, ಕೇಂದ್ರ ಪಕ್ಷ, ಲೇಬರ್ ಪಕ್ಷ, ಇಂಡಿಪೆಂಡೆಂಟ್ ಲೇಬರ್ ಸಂಗಡ, ಈ ಆರು ಪಕ್ಷಗಳು ಸ್ಪರ್ಧೆಗೆ ನಿಂತಿವೆ.

—ಪರ್ಷ್ಯಾದ ಎಣ್ಣೆಯ ಗಣಿಯ ಹಕ್ಕಿನ ಕುರಿತು ಬ್ರಿಟಿಷರಿಗೂ ಪರ್ಶಿಯಾನರಿಗೂ ಚರ್ಚೆ ಪ್ರಾರಂಭವಾಗಿದೆಯಷ್ಟೆ! ಪರ್ಶಿಯನ್ ಮಂತ್ರಿಯವರನ್ನು ಲಂಡನಿಗೆ ಕರೆತರಲಾಗಿದೆ.

—ರೌಂಡ್‌ಟೇಬಲ್ ಪ್ರತಿನಿಧಿಗಳು ಹಿಂದೂದೇಶಕ್ಕೆ ಮರಳಿದ ನಂತರ ಮಂತ್ರಿವರ್ಯರಾದ ಮೆಕ್ಡೊನಾಲ್ಡರು ಲೊಸಿಮೌತಿನಿಂದ ಲಂಡನಿಗೆ ಬಂದರು। ಈಗ ಸುಖಗೊಂಡಿದ್ದಾರೆ.

—ಲೊಯ್ಡ್ ಜೋರ್ಜರು ಜ್ವರಪೀಡಿತರಾಗಿ ಹಾಸಿಗೆ ಹಿಡಿದಿರುವರು, ಈಗ ಸುಖಗೊಳ್ಳುತ್ತಿದ್ದಾರೆ.

—"ರೌಂಡ್‌ಟೇಬಲ್ ಪರಿಷದವು ಹಿಂದಿತವಾದ ಜಯ"ವೆಂದು ಕೊಂಗ್ರೆಸ್ ವಿರೋಧಿಗಳಾದ ಗುಜನಾವಿಯವರು ಹೇಳಿದರು.

—"ಆದದ್ದು ಆಯಿತು, ಅಷ್ಟು ಒಳ್ಳೆಯದಾಗಲಿಲ್ಲ. ಆದರೂ ಚಿಂತಿಲ್ಲ. ಮುಂದಿನ ಮಾರ್ಗದಲ್ಲಿ ನಾವು ಪುನಹ ಹೋರಾಡುವೆವು" ಎಂದು ಶ್ರೀ. ಜೋಶಿಯವರು ರೌಂಡ್‌ಟೇಬಲಿನಿಂದ ಹಿಂತಿರುಗುವಾಗ ಹೇಳಿಬಿಟ್ಟರು!

—ಪ್ರೇಗ್‌ನಲ್ಲಿ ೫೬ ವರ್ಷ ಪ್ರಾಯದ ಒಬ್ಬ ಸ್ತ್ರೀಯು ನಿರುದ್ಯೋಗಿಗಳ ಹೀನಾವಸ್ಥೆಯನ್ನು ಕಂಡು ಮರುಗಿ, ತನಗಿದ್ದ ೫೫ ಪೌಂಡುಗಳ ಮೌಲ್ಯವನ್ನು ಅಂತಹ ಜನರಿಗಾಗಿ ಉಪಯೋಗಿಸಬೇಕೆಂದು ಬರೆದಿಟ್ಟು ಪ್ರಾಣಹತ್ಯೆ ಮಾಡಿಕೊಂಡಳೆಂಬ ವಾರ್ತೆಯಿದೆ.

—ಮ್ಯುನಿಚ್‌ನಲ್ಲಿ ಒಬ್ಬ ಸ್ತ್ರೀಯು ೧೦೦೦೦ ಪೌಂಡನ್ನೂ, ಇನ್ನಿತರ ಕಡೆಗಳಲ್ಲಿ ಹೇರಳ ಧನವನ್ನೂ ಕದ್ದು ಈಗ ಮಹಾ ಶ್ರೀಮಂತನಾದ ಒಬ್ಬ ಕಳ್ಳನು ಈಗ ತಾನು ಕದ್ದಿದ್ದ ಎಲ್ಲಾ ಮನೆಯವರಿಗೂ, ಆ ಸ್ತ್ರೀಗೂ ಅವರವರ ಹಣವನ್ನು ಕೊಡಬೇಕೆಂದು ನಿರ್ಧರಿಸಿ, ಒಂದು ಪತ್ರ ಬರೆದಿರುವ [illegible] ವಾರ್ತೆ.

+ + +

## ಒಳದೇಶ ವರ್ತಮಾನ

—"[illegible] ಒಳಗಿದ್ದವರನ್ನು ಕಂಡು ನಾವು ಮಾತನಾಡಿದ್ದು" ಎಂದು ಸತ್ಯಮೂರ್ತಿ ಅಯ್ಯರರು [illegible] ಮುಂಬಾಯಿಗೆ [illegible] ಸರಕಾರವು ರಾಷ್ಟ್ರೀಯವಾದಿಗಳನ್ನು ಬಿಡದಿರುವುದಕ್ಕಾಗಿ ಅತೃಪ್ತಿಯನ್ನು ಸೂಚಿಸಿದರು.

—ನಾಗಪುರದ ಮೋಡಲ್ ಮಿಲ್‌ನಲ್ಲಿ ಕೂಲಿಗಾರರಿಗೆ ಸಿಗುವ ಸಂಕಷ್ಟಗಳಿಗಾಗಿ ತಾ. ೧೫ರೊಳಗೆ ವ್ಯವಸ್ಥೆಯನ್ನು ಮಾಡದಿದ್ದರೆ ತಾವು ಉಪವಾಸ ವ್ರತವನ್ನು ತೊಡುವೆನೆಂದು ಲೇಬರ್ ಧುರೀಣರಾದ ರುಯಿಕರರು ನಿರ್ಧರಿಸಿರುವರು.

—ಚಂದ್‌ಪುರದಲ್ಲಿ ೧೫ ಮಂದಿ ಡಕಾಯಿತರು ಪೋಲೀಸರ ಉಡುಪನ್ನುಟ್ಟು ಬಂದೂಕುಗಳ ಸಮೇತ ಒಬ್ಬ ಶ್ರೀಮಂತನ ಮನೆ ಹೊಕ್ಕು ೬,೦೦೦ ರೂಪಾಯಿಯ ನಗನಾಣ್ಯಗಳನ್ನು ಲೂಟಿಮಾಡಿ ಪಲಾಯನಗೈದರು.

—ಪಾಟ್ನಾದ ಸರ್ಚ್‌ಲೈಟ್ ಎಂಬ ವಾರ್ತಾ ಪತ್ರಿಕೆಯು ೧೫೦೦೦ ರೂಪಾಯಿಯ ಭದ್ರತೆಯನ್ನು ಕೊಡಬೇಕೆಂದು ಪುನಃ ಆಜ್ಞಾಪಿಸಲಾಗಿದೆ.

—ಮುಂಬಾಯಿಯಲ್ಲಿ ಬಂದಿಳಿದ 'ಚಿತ್ರಾಲ್' ಎಂಬ ಸ್ಟೀಮರಿನಲ್ಲಿನ ಮುಸ್ಲಿಮ ಕೆಲಸಗಾರರೊಳಗೆ ಮಾರಾಮಾರಿಯಾಗಿ ಕೆಲವರು ಗಾಯಗೊಂಡರು. ಸಂಬಂಧಿಸಿದವರನ್ನು ಡಿಸ್‌ಮಿಸ್ ಮಾಡಿದರು.

—ಅಲ್ಲಹಾಬಾದಿನ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಮಿ. ಪಿ. ಬಿ. ಮುಂದಾರ್ ಎಂಬವರು ಸೈಕಲ್ ಮೇಲೆ ಕುಳಿತು ಮನೆಗೆ ತೆರಳುತ್ತಿರುವಾಗ ಮೋಟರ್ ಒಂದು ಅವರ ಸೈಕಲಿಗೆ ತಾಗಿ ವಿಶೇಷ ಗಾಯಗೊಂಡರು!

—ಸೆರೆಮನೆಯೊಳಗೆ ಅಮೃತಲಾಲನೆಂಬ ರಾಜಕೀಯ ಕೈದಿಗೆ ಹೊಡೆದು ಬಡಿದುದಕ್ಕಾಗಿ ರೋಚ್ ಮತ್ತು ಜೇಕ್ಸನ್ ಎಂಬ ಜೈಲಧಿಕಾರಿಗಳು ತಕ್ಷೀರಗೊಳಗಾಗಿ ವಿವಿಧಾವಧಿಯ ಕಾರಾಗೃಹ ಶಿಕ್ಷೆಯಾಯಿತು.

—ಅಹ್ಮದಾಬಾದಿನಲ್ಲಿ ಕೈರಾ ಪೋಲೀಸರ ಸಹಾಯದಿಂದ ಒಂದು ಜಡ್ತಿ ನಡೆದು ಕೆಲವು ಅಕ್ಕಸಾಲಿಗರು ಒಂದಾಗಿ ರಹಸ್ಯದಿಂದ ಸ್ಥಾಪಿಸಿದ ಕಳ್ಳಾಟಿಕೆಯ ನಾಣ್ಯ ತಯಾರಿಯ ಒಂದು ಕಾರ್ಖಾನೆಯನ್ನೇ ಕಂಡು ಹಿಡಿದಿರುವರು. ೪೫೦ ರೂಪಾಯಿಯ ಕಳ್ಳ ನಾಣ್ಯಗಳು ದೊರೆತಿವೆ.

—ಬಂಗಾಳದ ಪ್ರಸಿದ್ಧ ರಾಷ್ಟ್ರೀಯವಾದಿಗಳಾದ ಶ್ರೀ ಲಲಿತಮೋಹನದಾಸರು ಸ್ವರ್ಗಸ್ಥರಾದರು.

—"ನಾಸಿಕಕ್ಕೆ ಬರಬಾರದೆ"ಂದು ಅಲ್ಲಿಯ ಸೆರೆಯಿಂದ ಹೊರಬಂದ ಡಾ. ಭಾಸ್ಕರ ಪಟೇಲರೆಂಬವರಿಗೆ ಆಜ್ಞೆಯಾಯಿತು. ಈಗ ಎಲ್ಲೋ ತಲೆತಪ್ಪಿಸಿಕೊಂಡಿರುವರು.

—ಕಲ್ಕತ್ತದ ಪೋಲೀಸ 'ಪೆರೆಡ್' ನಡೆದು ವೈಸರಾಯರು ಶ್ಲಾಘ್ಯ ಕೆಲಸಮಾಡಿದ ಪೋಲೀಸರಿಗೆ ಸಂತೋಷದಿಂದ ಪದಕಗಳನ್ನು ಹಂಚಿದರು.

—ಕಲ್ಕತ್ತದಲ್ಲಿ ಕೆ. ಪಿ. ಸೇನರ ಕೊಲೆ ಸಂಬಂಧವಾಗಿ ತಾ. ೧೨ನೇ ದಿನ ಕಾಳಿಪದ ಮುಖರ್ಜಿ ಎಂಬವನನ್ನು ಫಾಶಿಗೇರಿಸಿದರು.

—ದೇಶಬಂಧು ಸಿ. ಆರ್. ದಾಸರ ಚಿರಸ್ಮರಣಾರ್ಥವಾಗಿ ಸ್ಥಾಪಿತವಾಗಲಿರುವ ದೇಶಬಂಧು ಮೆಮೊರಿಯಲ್ ಫಂಡಿಗೆ ರೂ. ೫೦೦೦ವು ಶೇಖರಿತವಾಗಿ ರೂ. ೮,೦೦೦ವು ವಾಗ್ದತ್ತವಾಗಿದ್ದರೂ, ಅದನ್ನು ೫೦,೦೦೦ಕ್ಕೆ ಮುಟ್ಟಿಸಬೇಕೆಂದು ಸಂಬಂಧಪಟ್ಟವರ ಆಶಯವಾದುದರಿಂದ ದೇಶೀಯರು ಅದಕ್ಕೆ ಉದಾರಾಶ್ರಯವನ್ನು ಕೊಡಬೇಕಾಗಿ ಪ್ರಕಟಿಸಿದ್ದಾರೆ.

—ಮುಂಬಾಯಿಯ ಮೊಗವೀರ ಸ್ಪೋರ್ಟ್ಸ್ ಕ್ಲಬ್ಬಿನ ಐದನೇ ವಾರ್ಷಿಕೋತ್ಸವವು ಇದೇ ತಿಂಗಳ ತಾರೀಕು ೨೯ನೇ ಆದಿತ್ಯವಾರ ದಿವಸ ಅಪರಾಹ್ನ ಘಂಟೆ ೧-೩೦ಕ್ಕೆ (S. T.) ಕೋಟೆಯೊಳಗಣ ಮೋದಿಖಾನೆ ರಸ್ತೆಯಲ್ಲಿರುವ ಮೊಗವೀರ ರಾತ್ರಿಶಾಲಾ ಮಂದಿರದಲ್ಲಿ ಶ್ರೀಯುತ [illegible] ಬಜಾರ ಸೋಮಯ ಮೆಂಡನ್‌ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಎಲ್ಲರಿಗೂ ಸುಸ್ವಾಗತವಿದೆಯೆಂದು ಕಾರ್ಯದರ್ಶಿಗಳು ತಿಳುಹಿಸುತ್ತಾರೆ.

—ತಾ. ೫ನೇ ಬೃಹಸ್ಪತಿವಾರ ದಿನ ಮುಂಬಾಯಿ ಕೋಟೆಯೊಳಗಣ ಕವಾಸ್ಜಿ ಪಟೇಲ ರಸ್ತೆಯಲ್ಲಿರುವ ನಂಬ್ರ ೫೯ನೇ ಬಿಲ್ಡಿಂಗಿನ್ನ ಎರಡನೇ ಮಾಳಿಗೆಯಲ್ಲಿ ಮ್ಯುನಿಸಿಪಾಲಿಟಿಯ ಶಾಲಾ ಕಮಿಟಿಯ ಸೆಕ್ರಟರಿ ಮಿ। ಪಿ. ಆರ್. ಪರುಳೇಕರ್‌ರವರ ಉತ್ಸಾಹದಿಂದ ಕನ್ನಡಿಗರ ಬಗ್ಗೆ ಧರ್ಮಾರ್ಥವಾಗಿ ವಿದ್ಯಾಲಾಭವನ್ನು ಪಡೆಯುವರೆ ಜಾತಿ, ಮತಭೇದವಾಗಲೀ ಮೇಲ್ಜಾತಿ, ಕೀಳ್ಜಾತಿ, ಬಡವರು, ಐಶ್ವರ್ಯವಂತರು ಎಂಬ ಭೇದವಾಗಲೀ ಇಲ್ಲದೆ ಮುಖ್ಯವಾಗಿ ಕೋಟೆಯೊಳಗೆ ವಾಸಿಸುವವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವರೇ ಒಂದು ಪ್ರಾಥಮಿಕ ಶಾಲೆಯು ತೆರೆಯಲ್ಪಟ್ಟಿತು.

**ಈಗ ಬಂದ ವಾರ್ತೆ—ಅಲ್ವಾರಿನ ಕ್ಷೋಭೆಯು ಇನ್ನೂ ಶಾಂತವಾಗಲಿಲ್ಲ.**

—ಶಿಮೊಂಚಿ ಎಂಬಲ್ಲಿ ಚೀನಿಯರ ಸೈನ್ಯದ ಮೇಲೆ ಜಪಾನರು ಬಾಂಬು ಹಾಕಿದರು.

—ಕ್ರಾಂತಿಯುತ್ಪಾದಕ ಚಿತ್ರಗಳನ್ನು ಮಾರಿದುದಕ್ಕೆ ಲಾಹೋರಿನಲ್ಲಿ ಒಬ್ಬ ಸ್ವಯಂಸೇವಕನಿಗೆ ೮ ತಿಂಗಳ ಸಜೆ.

—ಸ್ಪೈನ್ ದೇಶದಲ್ಲಿ ರೈತರು ಒಂದಾಗಿ [illegible] ಎದ್ದುಕೊಂಡು ಸರಕಾರವನ್ನು ನಡುಗಿಸಿದ್ದಾರೆ.

## ಮೈಸೂರು ವರ್ತಮಾನ.

(ನಮ್ಮ ಸ್ವಂತ ಸುದ್ದಿಗಾರರಿಂದ.)

— ರಿಚರ್ಡ್ ಪೋಲೀಸ್ ಟೌನಿನ ನಿವಾಸಿಯಾದ ಮಿ. ವೆಂಕಟರಾಯರ ಮನೆಗೆ ಯಾರೋ ಕಳ್ಳರು ಹೊಕ್ಕು ಕೆಲವು ಬೆಲೆ ಬಾಳುವ ಸಾಮಾನುಗಳನ್ನು ಅಪಹರಿಸಿದರೆಂಬ ಫಿರ್ಯಾದಿನ ಪ್ರಕಾರ ಬೆಂಗಳೂರು ಸಿಟಿ ಸೆಂಟ್ರಲ್ ಪೋಲೀಸಿನವರು ಅಣ್ಣಾಜಿ ರಾವ್ ಎಂಬವನನ್ನು ದಸ್ತಗಿರಿ ಮಾಡಿ ತನಿಖೆ ಕ್ರಮಗಳನ್ನು ನಡೆಸುತ್ತಿರುವರು.

— ಮಿ| ರಾ| ಸುಬ್ಬರಾಯರವರು ಮೈಸೂರು ಸರ್ಕಲ್ಲಿಗೆ ವರ್ಗ ಮಾಡಲ್ಪಟ್ಟಿರುವರು. ಫ್ರೆಂಚ್‌ರೋಕ್ಸ್ ಮುನ್ಸಿಪಲ್ ಕೌನ್ಸಿಲಿಗೆ ಮಿ| ಚೊಕ್ಕಲಿಂಗ ಶೆಟ್ಟರವರು ಚುನಾಯಿಸಲ್ಪಟ್ಟಿರುವರು.

— ಮೈಸೂರು ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾದ ಮಿ| ರಾ| ವಿ. ರಂಗ ಸ್ವಾಮಿಯ್ಯಂಗಾರರವರಿಗೆ ನವಂಬರ್ ೧೪ರ ಲಾಗಾಯ್ತು ಈ ತಿಂಗಳು ೧೫ನೇ ತಾರೀಕಿನ ವರೆಗೆ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವುದು.

— ಕಳವುಗಳು ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ, ಹೆಚ್ಚುತ್ತಿವೆ, ಮೈಲುಗಳಲ್ಲಿ ಹೊಟ್ಟೆ ತುಂಬ ಹಿಟ್ಟು ಸಿಕ್ಕುತ್ತದೆಂಬುದು ಈ ಕಳವುಗಳಿಗೆ ಕಾರಣವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಫಾರೆಸ್ಟ್ ಕನ್ಸರ್ವೇಟರಾದ ಮಿ| ರಾ| ಮಾಚಯ್ಯನವರಿಗೆ ಡಿಸಂಬರ ೨೩ರ ಲಾಗಾಯ್ತು ಈ ತಿಂಗಳ ಆಖೈರ ವರೆಗೂ ರಜಾ ಕೊಡಲ್ಪಟ್ಟಿರುವುದು.

— ಬೆಂಗಳೂರು ಕೆಂಟೋನ್ಮೆಂಟಿನಲ್ಲಿ ಎಲ್ಲಾ ಕೋರ್ಟುಗಳೂ, ಆಫೀಸುಗಳೂ ಈ ತಿಂಗಳು ೩ನೇ ತಾರೀಕಿನಲ್ಲಿ ತೆರೆಯಲ್ಪಟ್ಟಿವೆ.

— ಬೆಂಗಳೂರು ಅಕ್ಕಿಪೇಟೆ ರ್‍ಲಾಜಮ್ಮಾಳವರ ಮನೆಯಲ್ಲಿ ಕಳವು ಮಾಡಿದ್ದ ಹನುಮಂತನೆಂಬವನಲ್ಲಿ ೧೫೦ ರೂಪಾಯಿ ಸಾಮಾನುಗಳು ದೊರೆತುವು. ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿ ಮಾಲುಗಳನ್ನು ಪಕ್ತೆ ಮಾಡಿರುವರು.

— ಶಿವಮೊಗ್ಗಾ ಆಕ್ಟಿಂಗ್ ಸಬಾರ್ಡಿನೇಟ್ ಜಡ್ಜಿಗಳಾಗಿ ಅಲ್ಲಿನ ಮುನ್ಸಿಫರಾದ ಮಿ| ಕೃಷ್ಣಮೂರ್ತಿಗಳವರು ನಿಯಮಿಸಲ್ಪಟ್ಟಿರುವರು, ಅವರ ಕೆಲಸಕ್ಕೆ ಮಿ| ಕೆ. ಎನ್. ಪದ್ಮನಾಭಯ್ಯನವರು ನಿಯಮಿಸಲ್ಪಟ್ಟಿರುವರು.

---

# ದಕ್ಷಿಣ ಕನ್ನಡ.

## ಸಾಹಿತ್ಯ ಪರಿಷತ್ತಿನ ಅನುಭವಗಳು.

ತಾ. ೮—೧—೩೩ ಆದಿತ್ಯವಾರ ಮಂಗಳೂರು ಮಿತ್ರಮಂಡಳಿಯ ಆಶ್ರಯದಲ್ಲಿ ಶ್ರೀ. ಎಂ. ಎನ್. ಕಾಮತರ ಅಧ್ಯಕ್ಷತೆಯಿಂದ ಒಂದು ವಿಶೇಷ ಸಭೆ ಜರಗಿತು. ಮೊದಲಾಗಿ, ದಿವಂಗತ ಆರ್. ತಾತಾಚಾರ್ಯ ಎಂ. ಎ. ಎಲ್. ಟಿಯವರು ತಾ. ೩೦—೧೨—೩೨ ರಲ್ಲಿ ಅಕಾಲ ನಿಧನವನ್ನೈದಿದ ಕುರಿತು ಸಂತಾಪ ಸೂಚನೆಯನ್ನು ಸಭಾಧ್ಯಕ್ಷರು ಸೂಚಿಸಿದ ಬಳಿಕ ಶ್ರೀ. ಪಿ. ಎಲ್. ಪುಣಿಂಚತ್ತಾಯರು ಕೊಡಗು ಸಾಹಿತ್ಯ ಸಮ್ಮೇಳನದ ಕುರಿತಾದ ತಮ್ಮ ಅನುಭವಗಳನ್ನೂ ಕೆಲವು ಮಾತುಗಳಿಂದ ಅಲ್ಲಿ ಉಂಟಾಗಿರುವ ಕೆಲಕೆಲವು ಕೊರತೆಗಳನ್ನೂ ಒತ್ತಿ ಹೇಳಿ ಇನ್ನು ಮುಂದೆ ನಮ್ಮ ನಾಡಿನವರು ಕೂಡ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಮುಖ ಭಾಗವನ್ನು ವಹಿಸುವಂತಾಗಬೇಕೆಂದು ಅಪೇಕ್ಷಿಸಿದರು. ಬಳಿಕ ಶ್ರೀ ಕೇದಿಯಾಪು ಕೃಷ್ಣಭಟ್ಟರು, ಸಾಹಿತ್ಯ ಸಮ್ಮೇಳನದಲ್ಲಿ ನಡೆದಿರುವ ಸಾಹಿತ್ಯಗಳನ್ನು ಟೀಕಿಸಿ ಬರೆದಿರುವ ಒಂದು ಲೇಖನವನ್ನು ಓದಿದರು ಮತ್ತು ಶ್ರೀ. ಭೀಮರಾಯರು ಸಮ್ಮೇಳನದ ವಿಚಾರವಾಗಿ ನಮ್ಮ ನಾಡಿನವರು ಉತ್ಸಾಹಿಗಳಾಗಿ ಭಾಗವಹಿಸತಕ್ಕದ್ದು ಮಾತ್ರವಲ್ಲದೆ ಅಲ್ಲಿ ಪ್ರಾಂತೀಕತನವಾಗಲಿ ಅನಾವಶ್ಯಕ ಕಾರ್ಯಕ್ರಮಗಳಾಗಲಿ ನಡೆಯುವುದು ಉಚಿತವಲ್ಲವೆಂದು ತಮ್ಮ ಅಭಿಪ್ರಾಯವನ್ನು ಹೇಳಿದರು. ತದನಂತರ ಶ್ರೀ. ತಿಮ್ಮಪ್ಪಯ್ಯನವರು ಸಮ್ಮೇಳನದಲ್ಲಿ ನಡೆದಿರಬಹುದಾದ ಕುಂದುಕೊರತೆಗಳನ್ನು ನಾವು ಉದಾರ ಮನಸ್ಸಿನಿಂದ ನೋಡಿ, ಸಾಹಿತ್ಯ ಸಮ್ಮೇಳನದೊಡನೆ ನಮ್ಮ ಬಂಧವನ್ನು ಕಡಿದುಕೊಳ್ಳದೆ ಇನ್ನಷ್ಟು ಬಲಪಡಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ತೋರಿಸಬೇಕೆಂದು ಕೋರಿದರು. ಮತ್ತು ಶ್ರೀ. ಟಿ. ನಾರಾಯಣ ಭಟ್ಟರು (ಮಿತ್ರಮಂಡಳಿಯ ಅಧ್ಯಕ್ಷರು) ಸಮ್ಮೇಳನದ ಅನುಭವಗಳನ್ನು ಹೇಳುತ್ತಾ, ನಮ್ಮ ನಾಡಿನವರಿಗೆ ಪ್ರಬಂಧ ವಾಚನದಲ್ಲಾಗಲೀ ಭಾಷಣದಲ್ಲಾಗಲೀ ಕವಿತಾ ವಾಚನದಲ್ಲಾಗಲೀ ಸಾಕಷ್ಟು ಎಡೆ ದೊರೆತಿದ್ದುದಾದರೂ ಸಮಯಾಭಾವದಿಂದ ಕೆಲವು ಪಟ್ಟಿಗೆ ಸಂಕುಚಿತಗೊಳಿಸಬೇಕಾಗಿ ಬಂದಿರಬಹುದೆಂದೂ, ಮಿತ್ರಮಂಡಳಿಯ ಪರವಾಗಿ ಪ್ರತ್ಯೇಕ ಕವಿತಾ ವಾಚನ ಇತ್ಯಾದಿ ಕಾರ್ಯವನ್ನು ಕೈಕೊಳ್ಳುವ ಉದ್ದೇಶದಿಂದಲೇ ನಮ್ಮವರು ಹೋಗಿಲ್ಲವಾದುದರಿಂದ ಸಾಹಿತ್ಯ ಸೇವಕರ ಪರಸ್ಪರ ಪರಿಚಯ ಮಾತ್ರವಲ್ಲದೆ ವಿಶೇಷವೇನೂ ಮಾಡಲಾಗಲಿಲ್ಲವೆಂದೂ ಹೇಳಿದರು. ಆ ಬಳಿಕ ಬೆಳಗಾವಿಯ ಕುಂಟೆರ ತಂದದವರ ಪರಿಚಯ, ಬೆಳಗಾವಿಯ ಆನಂದ ಕವಿಯೇ ಮೊದಲಾದವರ ಕವಿತಾ ವಾಚನಗಳಾದ ಬಳಿಕ ಶ್ರೀ. ಎಂ. ಎನ್. ಕಾಮತರು ಸಮ್ಮೇಳನದ ಅನುಭವಗಳಿಂದ ಕಲಿಯತಕ್ಕ ಪಾಠಗಳನ್ನು ಹೇಳಿ, ಸಾಹಿತ್ಯ ಸೇವೆಯು ಇನ್ನಷ್ಟು ಭರದಿಂದ ಸಾಗತಕ್ಕದೆಂದೂ ಅದಕ್ಕಾಗಿ ಈಗ ಇರುವ ಮಿತ್ರಮಂಡಳಿಯನ್ನು ಬಲಪಡಿಸಿ ಅಥವಾ ಹೊಸ ಸಂಸ್ಥೆಗಳನ್ನು ಉಂಟುಮಾಡಿ ಇತರ ಪ್ರಾಂತದವರಂತೆ ನಾವು ಸಾಹಿತ್ಯ ಸೇವೆಯಲ್ಲಿ ಹಿಂದಾಗಿಲ್ಲವೆಂಬುದನ್ನು ಕಾರ್ಯರೂಪದಲ್ಲಿ ತೋರಿಸಿ ಕೊಡುವುದು ನಮ್ಮೆಲ್ಲರ ಕರ್ತವ್ಯವೆಂದು ಹೇಳಿ ಧನ್ಯವಾದಗಳೊಡನೆ ಸಭೆಯು ಕೊನೆಗೊಂಡಿತು.

**ಮಂಗಳೂರು.** ಕಳೆದ ಡಿಸಂಬರ ತಿಂಗಳ ತಾ. ೩೧ನೇ ಶನಿವಾರ ಹಗಲು ಘಂಟೆ ೧೧ಕ್ಕೆ ಮಂಗಳೂರು ಮಂಗಳಾದೇವಿ ದೇವಸ್ಥಾನದ ಗೋಪುರದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮೂಲ್ಯರ ಜಾನಕುಲಾಲರ ಅಭ್ಯುದಯ ಸಂಘದ ವರ್ಷಾವಧಿ ಮಹಾಸಭೆಯು ಜರಗಿತು. ಸೆಕ್ರೆಟರಿ ರಿಪೋರ್ಟು ಓದಿದ ನಂತರ ಗವರ್ನಮೆಂಟಿಗೆ ಬರಕೊಂಡ ಮನವಿಗೆ ಬಂದ ಉತ್ತರವನ್ನು ಓದಿ ಹೇಳಿದ ನಂತರ ಹೊಸ ವರ್ಷದ ಬಗ್ಗೆ ಅತ್ತಾವರ ೧ನೇ ಗುರಿಕಾರ ಶ್ರೀ. ಮೋನು ಮೂಲ್ಯರನ್ನು ಪ್ರೆಸಿಡೆಂಟರನ್ನಾಗಿಯೂ, ಬಂಟ್ವಾಳ ಟೆಂಪ್ಲ ಶಾಲೆಯ ಶ್ರೀ ಕೆ. ಪಕೀರ ಮಾಸ್ತರನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ, ಮಂಜೇಶ್ವರ ಶ್ರೀ. ಎಂ. ಸಂಕಪ್ಪನವರನ್ನು ಕಜಾಂಚಿಯವರನ್ನಾಗಿಯೂ, ಮಂಗಳೂರು ತಾಲೂಕು ಬೋರ್ಡು ಆಫೀಸಿನ ಕ್ಲಾರ್ಕ್ ಶ್ರೀ. ಬಿ. ಬಾಬುರವರನ್ನು ಸೆಕ್ರೆಟರಿಯನ್ನಾಗಿಯೂ ಸಭೆಗೆ ಸರ್ವಸಮ್ಮತದಿಂದ ಚುನಾಯಿಸಲಾಯಿತು.

ಮದ್ರಾಸಿನ ಇಂಗ್ಲಿಷ ಸಾಪ್ತಿಕ 'ಮೈ ಮೆಗೇಜಿನ್' ಎಂಬ ಅತ್ಯುತ್ತಮ ಹಾಸ್ಯರಸ ಭರಿತ ಪತ್ರಿಕೆಯ ಏಜನ್ಸಿಯನ್ನು ಶ್ರೀ. ಕೆ. ಭಾಸ್ಕರ ಪೈಯವರು ಪಡಕೊಂಡಿರುತ್ತಾರಾಗಿಯೂ, ಸದ್ರಿ 'ಮೈ ಮೆಗೇಜಿನ್' ಬಿಡಿ ಸಂಚಿಕೆಗಳು ಈ ತಿಂಗಳ ತಾ. ೧ ಮತ್ತು ೧೫ಕ್ಕೆ ಇಲ್ಲಿಯ ಹೂ ಮಾರ್ಕೆಟು ಬಳಿ ಇರುವ ವೆಸ್ಟ್ ಇಂಡಿಯಾ ಸೋಪ್ ಎಂಡ್ ಇಂಡಸ್ಟ್ರಿಯಲ್ ಕಂಪೆನಿಯಲ್ಲಿ ದೊರಕುತ್ತದೆಂದೂ ಸದ್ರಿ ಏಜಂಟರು ತಿಳಿಸುತ್ತಾರೆ.

ದಕ್ಷಿಣ ಕನ್ನಡಾ ಜಿಲ್ಲಾ ಹರಿಜನ ಸೇವಾಸಂಘದ ಕಡೆಯಿಂದ ಪ್ರಚಾರಕರಾಗಿ ಕೆಲಸ ಮಾಡಲು ಇಚ್ಛೆಯುಳ್ಳ ಉಮೇದ್ವಾರರು ಇದೇ ಜನವರಿ ತಾರೀಕು ೨೫ರೊಳಗಾಗಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಬೇಕು. ಉಮೇದ್ವಾರರು ಕನ್ನಡ ಮತ್ತು ತುಳು ಭಾಷೆಗಳನ್ನು ಚೆನ್ನಾಗಿ ತಿಳಿದವರಾಗಿದ್ದು ಇಂಗ್ಲಿಷಿನ ವ್ಯವಹಾರ ಜ್ಞಾನವುಳ್ಳವರಾಗಿರತಕ್ಕದ್ದು. ಸಂಬಳ ಮತ್ತು ಭತ್ತೆ ಕೂಡಿ ರೂ. ೩೦ರಿಂದ ೪೦ರ ವರೆಗೆ. ಸವರ್ಣ ಹಿಂದುಗಳಿಂದಲೂ ಹರಿಜನರಿಂದಲೂ ಅರ್ಜಿಗಳನ್ನು ಅಂಗೀಕರಿಸಲಾಗುವುದು. ಉಮೇದ್ವಾರರು ಅರ್ಜಿಯಲ್ಲಿ ತಮ್ಮ ಯೋಗ್ಯತೆ ಇತ್ಯಾದಿಗಳನ್ನು ಸೂಚಿಸಿ ಬರೆಯಬೇಕು ಎಂದು ಶ್ರೀ. ಎಸ್. ರಾಮಚಂದ್ರ ಅಯ್ಯರ್, ಕಾರ್ಯದರ್ಶಿ, ದ. ಕ. ಹರಿಜನ ಸೇವಾಸಂಘ ಡಿಪ್ರೆಸ್ಡ್ ಕ್ಲಾಸ್ ಮಿಶನ್ ಮಂಗಳೂರು ಇವರು ಪ್ರಕಟಿಸಿರುತ್ತಾರೆ.

**ಸ್ಥಳೀಕ ಶ್ರೀಕೃಷ್ಣ ಸಿನೆಮಾ ಟೋಕಿ ಮಂದಿರ**ದಲ್ಲಿ ತಾ. ೧೪ರಿಂದ ಜಗದ್ವಿಖ್ಯಾತನಾದ ಮತ್ತು ಭುವನೈಕ ಅಭಿನಯಗಾರನಾದ ಡೊಗ್ಲಸ್ ಫೇರ್‌ಬೇಂಕ್ಸನಿಂದಲೂ, ಮೇರಿ ಪಿಕ್‌ಫೋರ್ಡಳಿಂದಲೂ ಅಭಿನಯಿಸಲ್ಪಟ್ಟ ಹಾಸ್ಯ ವಿನೋದಗಳಿಂದ ಕಂಗೊಳಿಸುತ್ತಿರುವ "ದಿ ಟೇಮಿಂಗ್ ಒಫ್ ದಿ ಶ್ರು" ಎಂಬ ಮಾತಾಡುವ ಚಿತ್ರವು ಪ್ರದರ್ಶಿಸಲ್ಪಡುವುದು. ತಾ. ೧೬ರಿಂದ ಜಾಲ್ ಮರ್ಚೆಂಟ್ ಮತ್ತು ಜುಬೇದ ಮೊದಲಾದ ಸಿನೆಮ ಮಣಿಗಳಿಂದ ಮೆರೆಯುತ್ತಿರುವ, ಅಂದವಾದ ದೃಶ್ಯಾವಳಿಗಳಿಂದ ಝಗಝಗಿಸುತ್ತಿರುವ, ಇಂಪಾದ ಹಾಡುಗಳಿಂದಲೂ, ಮನರಂಜಕವಾದ ಅಭಿನಯದಿಂದಲೂ, ಹಾಸ್ಯರಸದಿಂದಲೂ ವೀರರಸದಿಂದಲೂ, ಶ್ರೀ. ಕೃಷ್ಣನ ಮಾಯೆಯಿಂದಲೂ, ನಾರದನ ಯುಕ್ತಿ ಚಮತ್ಕಾರದಿಂದಲೂ, ತುಂಬಿ ತುಳುಕಾಡುತ್ತಿರುವ "ಸುಭದ್ರಾ ಹರಣ" ಎಂಬ ಸಾಗರ ಮುವಿಟೋನ್ ಕಂಪೆನಿಯವರ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು. ಅತಿ ಬೇಗನೆ ಶ್ರೀ ರಾಮ ಪಾದುಕ ಪಟ್ಟಾಭಿಷೇಕ ಎಂಬ ಸಂಪೂರ್ಣ ತೆಲುಗಿನಲ್ಲಿ ಮಾತನಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯ ಆಶ್ರಯದಲ್ಲಿ ತಾ. ೧೦ರಲ್ಲು ಮಂಗಳವಾರ ಸಂಜೆ ೬ ಗಂಟೆಗೆ "ನವಜೀವನ ಸ್ವದೇಶಿ ಭಂಡಾರ" ಎಂಬ ಹೆಸರಿನ ಶುದ್ಧ ಖಾದಿ ಮತ್ತು ಎಲ್ಲಾ ತರದ ಸ್ವದೇಶಿ ವಸ್ತುಗಳು ವಿಕ್ರಯಿಸಲ್ಪಡುವ ಭಂಡಾರವು ಕೊಡಿಯಾಲ್‌ಬೈಲ್ ಪೋಸ್ಟ್ ಆಫೀಸಿನ ಬಳಿ ತೆರೆಯಲ್ಪಟ್ಟಿರುವುದು. ಪ್ರಚಾರ ಸಭೆಯ 'ಮೋಟರ್ ವಾನ್', ಕೂಡಾ ತಯಾರಾಗಿರುವುದರಿಂದ ಜಿಲ್ಲೆಯ ಇತರ ಕಡೆಗಳಿಗೆ ಖದ್ದರ್ ಮತ್ತು ಸ್ವದೇಶಿ ವಸ್ತುಗಳನ್ನು ಕೊಂಡು ಹೋಗಿ ಪ್ರಚಾರ ಕಾರ್ಯವನ್ನು ಮಾಡಲು ಅನುಕೂಲವಾಗಿರುವುದು. ಸ್ವದೇಶಿ ಪ್ರೇಮಿಗಳಾದ ಸ್ಥಳೀಕ ಮಹನೀಯರು ತಮ್ಮ ತಮ್ಮ ಊರುಗಳಲ್ಲಿ ನಡೆಯಲಿಕ್ಕಿರುವ ದೊಡ್ಡ ದೊಡ್ಡ ಸಂತೆ ಜಾತ್ರೆ ಮತ್ತು ಜನ ಸಮುದಾಯವು ಕೂಡುವ ಸಂದರ್ಭಗಳ ಸರಿಯಾದ ದಿನ ಮತ್ತು ಸ್ಥಳವನ್ನು ಪ್ರಚಾರ ಸಭಾ ಆಫೀಸಿಗೆ ತಿಳಿಸಿದ್ದಲ್ಲಿ ಎಲ್ಲಾ ನಮೂನೆಯ ಖದ್ದರ್ ಮತ್ತು ಸ್ವದೇಶಿ ವಸ್ತುಗಳನ್ನು ತೆಗೆದುಕೊಂಡು ಪ್ರಚಾರಕರು ತಪ್ಪದೆ ಬರುವರೆಂದು ಸದರಿ ಸಭೆಯ ಜತೆ ಕಾರ್ಯದರ್ಶಿ ಶ್ರೀ. ಬಿ. ಕೋಚಣ್ಣ ಭಂಡಾರಿಗಳು ತಿಳಿಸುತ್ತಾರೆ.

ದೇವಸ್ಥಾನ ಪ್ರವೇಶ ಮಸೂದೆಗಳ ಸಮರ್ಥಕ ಸಭೆಯು ಕಳೆದ ಆದಿತ್ಯವಾರ ನೆಹ್ರೂ ಮೈದಾನಿನಲ್ಲಿ ಮ್ಯುನಿಸಿಪಲ್ ಚೆಯರ್‌ಮೆನರಾದ ಡಾಕ್ಟರ್ ವಿಠಲ ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಲಕ್ಷ್ಮಣ ದೇವ ವಿದ್ಯಾರ್ಥಿಯವರ ಪ್ರಾರ್ಥನೆಯಾದ ಬಳಿಕ ಹರಿಜನರಿಗೆ ಇತರ ಹಿಂದೂಗಳಂತೆಯೇ ಸರಿಸಮಾನ ಹಕ್ಕುಗಳನ್ನೀಯುವುದು ಹಿಂದೂ ಧರ್ಮಕ್ಕೆ ವಿರೋಧವಲ್ಲವೆಂಬ ಸೂಚನೆಯನ್ನು ಶ್ರೀ. ಎಚ್. ರಾಮರಾಯ ಮಲ್ಯರು ತಂದು ಶ್ರೀ. ಲಕ್ಷ್ಮಣ ವಿದ್ಯಾರ್ಥಿಗಳು ಅನುಮೋದಿಸಿ ಸರ್ವ ಸಮ್ಮತಿಯಿಂದ ಮಂಜೂರಾಯಿತು.

ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇದೇ ಬರುವ ಫೆಬ್ರವರಿ ೫ನೇ ತಾರೀಕಿನಿಂದ ಒಂದು ಟೆನ್ನಿಸ್ ಪಂದ್ಯಾಟವು ಪ್ರಾರಂಭವಾಗುವುದು. ಸೇರಲಿಚ್ಛಿಸುವ ಕೆನರಾ ಹೈಸ್ಕೂಲಿನ ಹಳೇ ವ ಈಗಿನ ವಿದ್ಯಾರ್ಥಿಗಳು ಇದೇ ತಿಂಗಳ ತಾ. ೨೫ರ ಒಳಗೆ ಸದ್ರಿ ಸಂಘದ ಕಾರ್ಯದರ್ಶಿಗಳಿಗೆ ವ ಶ್ರೀ. ಯು. ವಾಸುದೇವ ಭಟ್ಟರಿಗೆ ಬರಕೊಳ್ಳುವುದು.

**ಕಾರ್ಕಳ** — ಹರಿಜನೋದ್ಧಾರದ ಬಗ್ಗೆ ಜನ ಸಾಮಾನ್ಯರಲ್ಲಿ ವಿಶೇಷ ಉತ್ಸಾಹವಿದ್ದಂತೆ ಕಾಣುತ್ತದೆ. ಅಸ್ಪೃಶ್ಯತಾ ನಿವಾರಕ ಸಂಘದ ಕಾರ್ಯಕ್ರಮದಂತೆಯೂ, ಅಖಿಲ ಭಾರತ ಹರಿಜನರ ಪರವಾಗಿ ದೇಶಭಕ್ತ ರಾಜಗೋಪಾಲಾಚಾರ್ಯರು ಮಾಡಿದ ವಿನಂತಿಯ ಮೇರೆಗೂ ಇಲ್ಲಿ ತಾ. ೮ನೇ ದಿನ ಪ್ರಾತಃಕಾಲ ಹರಿಜನರ ನಗರ ಸಂಕೀರ್ತನೆ ಇತ್ತು. ಹಿಂದಿಗಿಂತಲೂ ಇಂದಿನ ನಗರ ಭಜನೆಯಲ್ಲಿ ಹೆಚ್ಚಾಗಿ, ಮುಖ್ಯವಾಗಿ ವಕೀಲರೇ ಮೊದಲುಕೊಂಡು ಇತರ ಸವರ್ಣೀಯರು ಭಾಗವಹಿಸುತ್ತಿರುವುದು ಶುಭ ಚಿಹ್ನೆ ಎನ್ನ ಬಹುದು. ಸಾಯಂಕಾಲ ಬೋರ್ಡ್ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಮುನ್ಸಿ ವಕೀಲ ನಂಜಪ್ಪ ಶೆಟ್ಟಿರ ಅಧ್ಯಕ್ಷತೆಯಲ್ಲಿ ಹರಿಜನರಿಂದೊಡಗೂಡಿದ ಸವರ್ಣೀಯರ ಸಾರ್ವಜನಿಕ ಸಭೆಯು ನಡೆದು, ಡಾ. ಸುಬ್ಬರಾಯರ ಮತ್ತು ರಂಗಾಚಾರಿಯರ ಬಿಲುಗಳಿಗೆ ವೈಸರಾಯರು ಸಮ್ಮತಿಕೊಡಬೇಕೆಂಬ ನಿರ್ಣಯವು ಸರ್ವಸಮ್ಮತಿಯಿಂದ ಮಂಜೂರಾಯಿತು. ಈ ಸಂದರ್ಭದಲ್ಲಿ ಶ್ರೀ. ಟಿ. ಕೇಶವ ಕಾಮತ್ ಮತ್ತು ಕೆ. ಪಿ. ಪುಂಡಲೀಕ ಪ್ರಭುಗಳು ಹಾಡಿದ ದೂಮಪ್ಪನವರ ಮೊರೆಯೂ ಅಸ್ಪೃಶ್ಯತಾ ನಿವಾರಣ ಸಂಬಂಧವಾದ ಇತರ ಹಾಡುಗಳೂ ಜನಮನರಂಜಕವಾದುವು. ವಕೀಲರುಗಳಾದ ಯಂ. ಯೆಸ್. ಅಧಿಕಾರಿ, ಪಿ. ವಾಸುದೇವ ಉಪಾಧ್ಯಾಯ, ಪಿ. ರಾಮಚಂದ್ರ ರಾವ್ ಮತ್ತು ಶ್ರೀಯುತರುಗಳಾದ ಸಿ. ಮೂಡಲಗಿರಿ ಶೆಟ್ಟಿ, ರಂ. ಮಂಜುನಾಥ ಶೆಟ್ಟಿ ನೀಲಕಂಠ ಶೆಟ್ಟಿ, ಸಿ. ಮಂಜುನಾಥ ಕಾಮತ್ ಮೊದಲಾದವರ ಭಾಷಣಗಳೂ ಇದ್ದುವು.

**ಬಂಟ್ವಾಳ** — ಇಲ್ಲಿ ಜನವರಿ ತಿಂಗಳ ಮೊದಲನೆ ವಾರದಿಂದ ಮಾರ್ಗದಲ್ಲಿ ತಿರುಗಾಡುವ ಬೀದಿ ನಾಯಿಗಳನ್ನು ಕುತ್ತಿಗೆಗೆ ಹಗ್ಗ ಹಾಕಿ ಯಾರೂ ಇಲ್ಲದ ಮರೆಯಾದ ಸ್ಥಳಕ್ಕೆ ಕೊಂಡುಹೋಗಿ ತಲೆ ಹೊಡೆದು ಕೊಲ್ಲಬೇಕೆಂದು ಪ್ರೆಸಿಡೆಂಟರ ಹುಕುಂ ಬಂದಿದೆ. ಹೀಗೆ ಕೊಂದ ಹೆಣ್ಣು ನಾಯಿಗೆ ಎರಡಾಣೆ, ಗಂಡುನಾಯಿಗೆ ಒಂದೂವರೆ ಆಣೆ ಸಿಕ್ಕುವುದು. ಇಲ್ಲಿಯ ಆಸ್ಪತ್ರೆಯಲ್ಲಿ ದೀಪ ಉರಿಸಲಿಕ್ಕೆ ಎಣ್ಣೆಗೆ ಸಹ ತತ್ವಾರವಾಯಿತಂತೆ. ಯಾರನ್ನು ಹೊಗಳಿದರೇನು? ಯಾರನ್ನು ದೂರಿದರೇನು? ರೋಗಿಗಳ ದುರಾದೃಷ್ಟವೆಂದು ಹೇಳಬೇಕು.

**ಕಾಸರಗೋಡು** — ಎಡನೀರು ಮಠದ ಬಾಗಿಲಲ್ಲಿ ಕೂಡು ಮೇಳದವರ ಎರಡು ಬಯಲಾಟಗಳೂ, ಕೂಡ್ಲು ಮೇಳದವರ ಎರಡು ಬಯಲಾಟಗಳೂ ಅತ್ಯಂತ ವಿಜೃಂಭಣೆಯಿಂದ ಜರಗಿದುವೆಂದು ತಿಳಿಸಲು ಪರಮಾನಂದ!

**ಉಡುಪಿ:** — ಸತ್ಯಾಗ್ರಹಕ್ಕಾಗಿ ತಮ್ಮ ಶಿಕ್ಷೆಯನ್ನು ಪರಿಪೂರ್ಣ ಅನುಭವಿಸಿ ಶ್ರೀಗಳಾದ ಟಿ. ಕೇಶವ ಮತ್ತು ಯಂ. ಆರ್. ಮಂಜೇಶ್ವರ್‌ಕಾರ್ ಮರಳಿ ಬಂದಿರುತ್ತಾರೆ.

ಸನಾತನಿಗಳೆಂಬವರು ಅಸ್ಪೃಶ್ಯರ ದೇವಸ್ಥಾನ ಪ್ರವೇಶದ ವಿರೋಧ ಪಕ್ಷವಾಗಿ ಕಾಗದಸಿಗೆ ಮತಗಳನ್ನು ಸಂಗ್ರಹಿಸ ತೊಡಗಿರುತ್ತಾ, ಸ್ವಲ್ಪ ಚಟುವಟಿಕೆಯುಂಟಾಗಿದೆ.

ಇದೇ ಕ್ರಿಸ್‌ಮಸ್ ರಜಾ ಕಾಲದಲ್ಲಿ 'ವ್ಯಾಯಾಮ ತರಬೇತಿ'ಗೆ ಇಡೀ ಜಿಲ್ಲೆಯಿಂದ ಬಂದಿದ್ದ ೫೨ ಉಮೇದ್ವಾರರ ಪೈಕಿ ಸ್ಥಳೀಯ ಕ್ರಿಶ್ಚನ್ ಹೈಸ್ಕೂಲಿನ ಜಿಮ್ನಾಸ್ಟಿಕ್ ಇನ್ಸ್‌ಪೆಕ್ಟರ್ ರಾಗಿರುವ ಮು. ಎಚ್. ಅಹಮ್ಮದ್ ಸಾಹೇಬರು ಮಾತ್ರ 'ಗುಡ್' ಎಂಬ ಅಭಿದಾನದ ಶಿಫಾರಸು ಪತ್ರವನ್ನು ಪಡೆದಿರುವರಲ್ಲದೆ, ಆಗಲೇ ಮಾದರಿಗಾಗಿ ರಾವ್ ಬಹದ್ದೂರ್ ಎನ್. ವೆಂಕಟ್ರಾಯರು ಸ್ವತಃ ತೋರಿಸಿದ ಕಸರತ್ತನ್ನು ಈ ೫೨ ಮಂದಿಯೊಳಗೆ ಯಾರಾದರೂ ಮಾಡಿ ತೋರಿಸುವುದಾಗಿದ್ದರೆ ರೂ. ೧೦ರ ಇನಾಮನ್ನು ಕೊಡುವುದಾಗಿ ಪ್ರಕಟಿಸಿದ ಮೇರೆಗೆ ಸದ್ರಿಯವರೇ ಮಾತ್ರ ಕಸರತ್ತನ್ನು ಯಶಸ್ವಿಯಾಗಿ ಪ್ರದರ್ಶಿಸಿ ಬಹುಮಾನಿತರಾದುದು ಸ್ತುತ್ಯ!

**ಭದ್ರಗಿರಿ.** — ಇಲ್ಲಿಯ ಸುಪ್ರಸಿದ್ಧ ಜಮೀನುದಾರರೂ, ಪ್ರಮುಖ ಸಾಹುಕಾರರೂ ಆಗಿರುವ ರಾ. ವೆಂಕಟೇಶ ಪಡಿಯಾರರವರು ತಾ. ೩ನೇ ಸೋಮವಾರ ರಾತ್ರಿ ಸ್ವರ್ಗಸ್ಥರಾದರೆಂಬ ಸಂಗತಿಯನ್ನು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಮೃತರು ಸಾಧು ಸ್ವಭಾವಿಯೂ ಸರಳ ಜೀವಿಯೂ ಆಗಿದ್ದರು. ಮೃತರ ಆತ್ಮಕ್ಕೆ ಭಗವಂತನು ಚಿರ ಶಾಂತಿಯನ್ನೀಯಲಿ.

---

## ನೋಟೀಸು.

ಕೀರ್ತಿಶೇಷ ದಿವಾನ ಬಹದ್ದೂರ ಅಮ್ಮೆಂಬಳ ಅನಂತಕೃಷ್ಣಯ್ಯಗಳು ಸುಮಾರು ೩೦ ವರ್ಷಗಳ ಹಿಂದೆ ಈ ಜಿಲ್ಲಾ ನಿವಾಸಿಗಳಾದ ಗೌಡ ಸಾರಸ್ವತ ಬ್ರಾಹ್ಮಣ ಯಾತ್ರಿಕರ ಅನುಕೂಲತೆಗಾಗಿ ಪಂಢರಪುರದಲ್ಲಿ ಒಂದು ಧರ್ಮ ಶಾಲೆಯನ್ನು ಕಟ್ಟಿಸುವ ಉದ್ದಿಶ್ಯ ರೂಪಾಯಿ ೨೧೨೫/ನ್ನು ವಸೂಲು ಮಾಡಿ ಈಗ ಸದ್ರಿ ಐವೇಜು ಬಡ್ಡಿ ಕೂಡಿ ರೂ. ೩೪೯೩—೯—೯ ಆಗಿರುವ ಕಾರಣ ಸದ್ರಿ ಐವೇಜನ್ನು ಯೋಗ್ಯವಾದ ರೀತಿಯಲ್ಲಿ ವಿನಿಯೋಗಿಸುವ ಸಲುವಾಗಿ ಮಂತ್ರಾಲೋಚಿಸುವರೆ ಗೌಡ ಸಾರಸ್ವತ ಸಮಾಜದ ಒಂದು ಸಭೆಯು ಇದೇ ಬರುವ ತಾರೀಕು ೨೯—೧—೩೩ನೇ ಆದಿತ್ಯವಾರ ಸಾಯಂಕಾಲ ೫॥ ಘಂಟೆಗೆ ಬಂದರದಲ್ಲಿರುವ ಕೆನರಾ ಬ್ಯಾಂಕ್ ಕಟ್ಟೋಣದಲ್ಲಿ ಸೇರುವುದಾಗಿಯೂ, ಆ ಬಗ್ಗೆ ಏನಾದರೂ ಸಲಹೆಗಳನ್ನು ಕಳುಹಿಸುವವರು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿಯೂ ಅಪೇಕ್ಷಿಸೋಣಾಗಿದೆ.

**ಕಸ್ತೂರಿ ಸರ್ವೋತ್ತಮ ಪೈ,** ಈ ಸಭೆಯ ಕಾರ್ಯದರ್ಶಿ.

# ಗಾಂಧೀ ಬಂಧನದ ವಾರ್ಷಿಕೋತ್ಸವ!!

## ಎಲ್ಲೆಲ್ಲೂ ಕೈದುಗಳು!!

### ಹರ್ತಾಳ! ಸಭೆ, ಮೆರವಣಿಗೆ, ಕೈದು, ಲಾಠಿ, ಜಖಂ!

## ಬಾಬು ರಾಜೇಂದ್ರ ಪ್ರಸಾದರನ್ನು ಹಿಡಿದರು!

**ಅಹಮ್ಮದಾಬಾದಿನಲ್ಲಿ** ಕಳೆದ ತಾ. ೪ನೇ ದಿನ ಗಾಂಧೀ ಬಂಧನದ ದಿನಾಚರಣೆ. ಮುಖ್ಯ ಮಾರ್ಕೆಟುಗಳು ಮುಚ್ಚಲ್ಪಟ್ಟಿದ್ದುವು. ಸಣ್ಣ ಸಣ್ಣ ಅಂಗಡಿಗಳೂ ಕೂಡಾ ತೆರೆಯಲ್ಪಡಲಿಲ್ಲ, ಮಿಲ್ಲುಗಳಲ್ಲಿ ಬೆಳಿಗ್ಗೆ ಪಿಗಿಲು ನಡೆಯಿತು. ಆದರೆ ಕೆಲಸಕ್ಕೆ ಹೆಚ್ಚಿನವರು ಹಾಜರಾಗಲಿಲ್ಲ, ಕಾರಣವಾಗಿ, ಮಿಲ್ಲುಗಳಿಗೆ ಬೀಗ ಹಾಕಿದರು. ಪ್ರಾತಃಕಾಲದಲ್ಲಿ ಪ್ರಭಾತಫೇರಿಗಳು ಹೊರಟುವು. ೩೦ ಮಂದಿಗಳನ್ನು ಪೋಲೀಸರು ಸೆರೆಹಿಡಿದರು. ಸಂಜೆಯಲ್ಲಿ ಮಾಣೆಕ್ ಚೌಕದಲ್ಲೊಂದು ಸಭೆ ಜರಗಿಸಲಿಕ್ಕೆ ಸಾಹಸವಾಯಿತು. ೪೩ ಮಂದಿಗಳ ಬಂಧನವಾಯಿತು. ಅವರಲ್ಲಿ ೪ ಮಂದಿ ಸ್ತ್ರೀಯರು. ಒಬ್ಬಳ ಕಂಕುಳಲ್ಲಿ ೯ ತಿಂಗಳ ಶಿಶುವೊಂದಿದ್ದಿತು.

**ಮುಂಬಾಯಿಯಲ್ಲಿ** ತಾ. ೪ನೇ ದಿನ ಕೊಂಗ್ರೆಸ್ ವಾಲರು ಚೌಪಾಟಿಯಲ್ಲಿ ಸಭೆ ಜರಗಿಸಲು ಯತ್ನಿಸಿದರು. ಪೋಲೀಸರು ಓಡಿ ಬಂದು ಬೆರಿಸ್ಟರ್ ಮುನ್ಶಿಯವರನ್ನೂ ಇನ್ನಿತರ ೧೭ ಮಂದಿಗಳನ್ನೂ ಹಿಡಿದರು. ಪೋಲೀಸರಿಗೆ ಪರಿಹಾಸ್ಯ ಮಾಡಲಾಯಿತು. ಒಡನೆ ಲಾಠಿಛಾರ್ಜು ಪ್ರಾರಂಭ. ಜನ ತಂಡದ ಹಿಂಗಡೆ ಲಾಠಿಗಳು ಓಡಿಬಂದುವು ಏಳು ಮಂದಿಗಳು ಜಖಂಗೊಂಡರು. ಒಬ್ಬನನ್ನು ಆಸ್ಪತ್ರೆಗೆ ಒಯ್ಯಲಾಯಿತು.

**ಅಲ್ಲಹಾಬಾದಿನಲ್ಲಿ** ಆ ದಿನ ಹರ್ತಾಳವನ್ನು ಆಚರಿಸಲಾಯಿತು ಸಭೆಯಾಯಿತು—ಮೆರವಣಿಗೆ ಹೊರಟಿತು. ಆದರೆ ನಿರೀಕ್ಷಣೆಯಲ್ಲಿದ್ದ ಪೋಲೀಸರು ಓಡಿಹೋಗಿ ಮೆರವಣಿಗೆಗಾರರನ್ನು ಎದುರಾಯಿಸಿದರು. ಲಾಠಿ ಪ್ರದರ್ಶನವಾಯಿತು. ಮುಂದಾಳುತನದಲ್ಲಿದ್ದ ೬ ಮಂದಿ ಮಹಿಳೆಯರನ್ನು ಕೈದುಮಾಡಲಾಯಿತು ಅವರೊಡನೆ ಹನ್ನೊಂದು ಮಂದಿ ಸ್ವಯಂಸೇವಕರನ್ನೂ ಬಂಧಿಸಿದರು. ಇಬ್ಬರು ತರುಣರು ಸಭೆಯಲ್ಲಿ ಠರಾವುಗಳನ್ನು ಓದಿದರು. ಅವರನ್ನು ಹಿಡಿದು ಸ್ಟೇಷನಿಗೊಯ್ದರು.

ನ್ಯೂಡಿಲ್ಲಿಯ ವಸ್ತ್ರ ಮತ್ತು ಕಬ್ಬಿಣದ ಮಾರ್ಕೆಟುಗಳಲ್ಲಿ ಹರತಾಳ. ಸಂಜೆಯಲ್ಲಿ ನಾಲ್ಕು ಮಂದಿ ಮಹಿಳೆಯರು ಸೆರೆ ಹಿಡಿಯಲ್ಪಟ್ಟರು. ಅವರ ಕೈಯಲ್ಲಿದ್ದ ರಾಷ್ಟ್ರ ಧ್ವಜಗಳು ಪೋಲೀಸರ ವಶವಾದುವು. ಕ್ಲೋಕ್ ಟವರಿನ ಬಳಿ ನೆರೆದಿದ್ದ ಜನಸಮೂಹವನ್ನು ಲಾಠಿ ಪ್ರದರ್ಶನದಿಂದ ಓಡಿಸಲಾಯಿತು.

ಜಬ್ಬಲ್‌ಪುರದಲ್ಲಿ ಗಾಂಧೀ ದಿನಾಚರಣೆಗಾಗಿ ಸಂಪೂರ್ಣ ಹರ್ತಾಳ; ಚಂಗೇಲಾಲ್ ಸ್ವರೂಕರರ ಮುಖಂಡತನದಿಂ ಒಂದು ಮೆರವಣಿಗೆಯು ಬೀದಿ ಮೇಲೆ ಹೊರಟಿತು. ಸಭೆಯೂ ಆಯಿತು. ಠರಾವುಗಳಾದುವು ಪೋಲೀಸರ ಪತ್ತೆ ಇಲ್ಲ. ಸಭಾಂತ್ಯವಾಗುವಾಗ ಪೋಲೀಸರ ಆಗಮನವಾಯಿತು. ಸರ್ವಾಧಿಕಾರಿಗಳ ದಸ್ತಗಿರಿ ನಡೆಯಿತು. ಮಿಕ್ಕುಳಿದ ಸಭಿಕರನ್ನು ಚದರಿಸಲಾಯಿತು.

ಕಲ್ಕತ್ತೆಯಲ್ಲಿ ಶ್ರದ್ಧಾನಂದ ಪಾರ್ಕಿನ ಬಳಿಯಿಂದ ಒಂದು ಮೆರವಣಿಗೆ ಹೊರಟಿತು ಕೂಡಲೇ ಪೋಲೀಸರ ಆಗಮನವಾಯಿತು. ನಾಲ್ಕು ಮಂದಿಗಳನ್ನು ಸ್ಟೇಷನಿಗೊಯ್ದರು. ಮತ್ತೂ ನಾಲ್ವರನ್ನು ಇನ್ನೊಂದು ಕಡೆಯಿಂದ ಕೊಂಡೊಯ್ದರು.

**ಪಾಟ್ನಾದಲ್ಲಿ** ಸರ್ದಾರ ಹರಿಹರ ಸಿಂಘರೆಂಬವರ ಮುಂದಾಳುತನದಲ್ಲಿ ಒಂದು ಮೆರವಣಿಗೆ ಹೊರಟಿತು. ಪೋಲೀಸರು ಅವರನ್ನು ಹಿಡಿದರು. ಹತ್ತು ಹಿಂದೂ ಹೊಟೇಲುಗಳಲ್ಲಿ ಜಪ್ತಿ ನಡೆದು ಅಲ್ಲಿ ವಾಸಿಸುತ್ತಿದ್ದ ೮ ಮಂದಿ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು. ಕಟ್ಟು ಕಟ್ಟು ಕರಪತ್ರಗಳು ಹೊರಬಂದುವು.

[೭ನೇ ಪುಟವನ್ನು ನೋಡಿರಿ.]

## ದೇವಸ್ಥಾನ ಪ್ರವೇಶ.

ಸನಾತನ ಹಿಂದೂ ಸಮಾಜದಲ್ಲಿ ಪ್ರಚಲಿತವಿರುವ ಜಾತೀಯ ಅಸ್ಪೃಶ್ಯತಾ ರೂಢಿಯು ಸನಾತನ ಹಿಂದೂ ಧರ್ಮತತ್ವಗಳಿಗೂ ಆ ಧರ್ಮದ ಶಾಸ್ತ್ರಗಳಿಗೂ ವಿರುದ್ಧವಿರುತ್ತದೆಂದೂ, ಅಸ್ಪೃಶ್ಯತೆಯೆಂಬುದು ಸವರ್ಣ ಹಿಂದೂಗಳು ಧರ್ಮದ ಹೆಸರಲ್ಲಿ ಮಾಡುತ್ತಿರುವ ಕ್ರೂರ ಅತ್ಯಾಚಾರವೆಂದೂ, ಧರ್ಮದ ಮೇಲಿನ ಈ ಕಲಂಕವನ್ನು ಸಮೂಲವಾಗಿ ನಾಶ ಮಾಡುವುದಕ್ಕಾಗಿ ಅಗತ್ಯ ಬಂದಾಗ ಉಪವಾಸ ವ್ರತವನ್ನು ಕೈಕೊಂಡು ಸಾಯಲು ನಿರ್ಧಾರ ಮಾಡಿರುವೆನೆಂದೂ ಮಹಾತ್ಮಾಜೀಯವರು ಗೇಶಕ್ಕೆಲ್ಲ ಸಾರಿ ಹೇಳುತ್ತಿದ್ದಾರೆ. ಹಿಂದೂ ದೇವಸ್ಥಾನಗಳಲ್ಲಿ ಈ ಅಸ್ಪೃಶ್ಯರಿಗೆ ಇತರ ಹಿಂದುಗಳಂತೆ ಪ್ರವೇಶವನ್ನು ಕೊಟ್ಟರೆ ಈ ಕೆಟ್ಟ ರೂಢಿಯು ಅಂತ್ಯವಾಗುತ್ತದೆಂಬುದು ಖಂಡಿತವಾಯಿತೆಂದೂ, ಈ ರೀತಿ ಈ ಹರಿಜನರಿಗೆ ಪ್ರವೇಶ ಕೊಟ್ಟ ಬಂದ ದೇವಸ್ಥಾನಗಳ ಪಾವಿತ್ರ್ಯವು ಹೆಚ್ಚಾಗುತ್ತದೆಂದೂ ಅವರು ಉಪದೇಶಿಸುತ್ತಾರೆ.

ಮಹಾತ್ಮಾ ಗಾಂಧಿಯವರು ಸನಾತನ ಹಿಂದೂ ಧರ್ಮದ ಅನುಯಾಯಿಗಳಾಗಿ ಆ ಧರ್ಮದ ಶಾಸ್ತ್ರಗಳಲ್ಲಿಯೂ ಧಾರ್ಮಿಕ ಸಂಸ್ಥೆಗಳಲ್ಲಿಯೂ ಪೂಜ್ಯ ಬುದ್ಧಿಯುಳ್ಳವರಿದ್ದು ಆ ಧರ್ಮದಲ್ಲಿ ಕಾಲಕ್ರಮದಿಂದ ಸೇರಿಕೊಂಡಿರುವ ಕಡುಕುಗಳನ್ನು ಮಾತ್ರ ಕಿತ್ತು ಹಾಕಬೇಕೆಂದು ಹವಣಿಸುವ ಸುಧಾರಕರಿರುತ್ತಾರೆ ಇವರಂತೆಯೇ ಸನಾತನ ಹಿಂದೂ ಧರ್ಮದಲ್ಲಿ ಅತ್ಯಂತ ಶ್ರದ್ಧೆ ಇರುವ ಹಾಗೂ ಮಹಾತ್ಮಾಜಿಯವರಿಗಿಂತಲೂ ಹೆಚ್ಚಿನ ಸಂಪ್ರದಾಯ ಪ್ರಿಯರಾದ ಪಂಡಿತ ಮದನಮೋಹನ ಮಾಲವೀಯರು ಈ ಚಳವಳಿಕ್ಕೆ ಆಶೀರ್ವಾದ ಕೊಟ್ಟಿದ್ದಾರೆ. ಪ್ರೊಫೆಸರ್ ಧ್ರುವರಂಥ, ಹಲವು ಮಂದಿ ಸನಾತನ ಧರ್ಮದ ಶಾಸ್ತ್ರೀಯ ವಿದ್ವಾಂಸರು ಮಹಾತ್ಮಾಜೀಯವರ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ.

ವಸ್ತುತಃ ಈ ವಿಷಯವನ್ನು ವಿಚಾರಮಾಡಿ ನೋಡಿದರೆ ಮಹಾತ್ಮ ಗಾಂಧಿಯವರು ಮಾಡುತ್ತಿರುವ ಉಪದೇಶವು ನಿಜವಾದ ಸನಾತನ ಧರ್ಮದ ಉಪದೇಶವೆಂದು ನಾವು ಬಹಳ ಕಷ್ಟವಿಲ್ಲದೆ ತಿಳಿದುಕೊಳ್ಳಬಲ್ಲೆವು. ಯಾಕೆಂದರೆ ನಮ್ಮ ಸಮಾಜದಲ್ಲಿ ಪ್ರಚಲಿತವಿರುವ ಅಸ್ಪೃಶ್ಯತಾ ರೂಢಿಯು ಸ್ಪಷ್ಟವಾದ ಸ್ವಯಂವೇದ್ಯ ಪಾಪವಿರುತ್ತದೆ

ಮಹಾತ್ಮಾ ಗಾಂಧಿಯವರಿಗೆ ಈ ಧಾರ್ಮಿಕ ವಿಷಯದಲ್ಲಿ ಕೈಹಾಕಿ ಮಾತನಾಡಲಿಕ್ಕೆ ಅಧಿಕಾರವಿದೆಯೆ? ಎಂಬುದು ಮೊದಲನೆಯ ಪ್ರಶ್ನೆ. ಅಂದರೆ ರಾಜಕೀಯ ಮುಖಂಡರಾದ ಇವರಿಗೆ ಈ ಧಾರ್ಮಿಕ ವಿಚಾರವೇಕೆ ಎಂದು ಹಲವರು ಕೇಳುತ್ತಾರೆ. ಮಹಾತ್ಮಾಜೀಯವರು ತಾನು ಧಾರ್ಮಿಕ ಪುರುಷನೆಂದೂ ತನ್ನ ಧರ್ಮಕ್ಕಾಗಿಯೇ ರಾಜಕೀಯ ವಿಚಾರದಲ್ಲಿ ಕೈಹಾಕಿದೆನೆಂದೂ, ತನ್ನ ದೃಷ್ಟಿಯಲ್ಲಿ ಅವು ಬೇರೆ ಬೇರೆ ವಿಷಯಗಳಿರದೆ ಜೀವನದ ಎಲ್ಲ ವಿಷಯಗಳೂ ಪರಸ್ಪರ ಸಂಬಂಧವುಳ್ಳವುಗಳೆಂದೂ ಉತ್ತರ ಕೊಡುತ್ತಾರೆ. ಆದರೆ ಅವರಿಗೆ ಸಂಸ್ಕೃತ ಭಾಷೆಯಲ್ಲಿ ವಿಶೇಷ ಪಾಂಡಿತ್ಯವಿಲ್ಲ. ಅವರು ಎಷ್ಟು ಶಾಸ್ತ್ರಗಳನ್ನು ಓದಿದ್ದಾರೆ? ಅವರಿಗೆ ಈ ವಿಚಾರಗಳೆಲ್ಲ ಏನು ಗೊತ್ತು? ಎಂದು ಇನ್ನು ಕೆಲವರು ಹೇಳುವವರಿದ್ದಾರೆ. ಧರ್ಮಾಧರ್ಮಗಳನ್ನು ಸರಿಯಾಗಿ ತಿಳಿಯಬೇಕಾದರೆ ಶುಷ್ಕ ಭಾಷಾ ಪಾಂಡಿತ್ಯಕ್ಕಿಂತ ಸತ್ಯ, ಅಹಿಂಸೆ ಮೊದಲಾದ ಹಿಂದೂಧರ್ಮದ ಸನಾತನ ತತ್ವಗಳ ಅನುಷ್ಠಾನವು ಹೆಚ್ಚಿನ ಅಗತ್ಯವುಳ್ಳದ್ದೆಂದು ಸನಾತನವಾದಿಗಳು ಮರೆತುಬಿಡುತ್ತಾರೆ. ಈ ದೃಷ್ಟಿಯಿಂದ ಪರೀಕ್ಷಿಸಿದರೆ ಸತ್ಯ, ಅಹಿಂಸೆಯೇ ಮೊದಲಾದ ಧಾರ್ಮಿಕತತ್ವಗಳನ್ನು ಆಚರಣೆಯಲ್ಲಿ ತರಲು ಸತತವಾಗಿ ಪ್ರಯತ್ನ ಪಡುವ ಮಹಾತ್ಮಾಜೀಯವರಿಗೆ ಧರ್ಮಾಧರ್ಮಗಳನ್ನು ಉಪದೇಶಿಸಲು ಅಧಿಕಾರವಿದೆಯೆಂಬುದನ್ನು ಒಪ್ಪಲೇ ಬೇಕು.

ಮಾತ್ರವಲ್ಲ, ಮಹಾತ್ಮಾಜೀಯವರು ಸನಾತನ ಹಿಂದೂ ಧರ್ಮದ ಅತ್ಯಂತ ಶ್ರೇಷ್ಠ ಗ್ರಂಥಗಳಲ್ಲಿ ಒಂದಾಗಿರುವ ಗೀತೆಯ ಭಕ್ತರು. ಅದನ್ನವರು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಅದರ ಉಪದೇಶದಂತೆ ತನ್ನ ಜೀವನವನ್ನು ನಡೆಸುವುದಕ್ಕೆ ನಿರಂತರ ಯತ್ನ ಪಡುತ್ತಾರೆ. ಅಂದ ಬಳಿಕ ಅವರಿಗೆ ಶಾಸ್ತ್ರ ಗ್ರಂಥಗಳ ಪರಿಚಯವಿಲ್ಲವೆಂಬುದಕ್ಕೆ ಹೆಚ್ಚಿನ ಆಧಾರವಿಲ್ಲ.

ಮನ್ವಾದಿ ಸ್ಮೃತಿ ಗ್ರಂಥಗಳಲ್ಲಿ ಹಾಗೂ, ಆಗಮ ಶಾಸ್ತ್ರಗಳಲ್ಲಿ ನಮಗೆ ಕಾಣ ಸಿಕ್ಕುವ ಸಂಸ್ಕೃತ ಶ್ಲೋಕಗಳ ದೆಸೆಯಿಂದ ಹಲವರಿಗೆ ಭ್ರಮೆಯಾಗಲು ಕಾರಣವುಂಟು. ಧಾರ್ಮಿಕ ತತ್ವಗಳು ತ್ರಿಕಾಲ ಬಾಧಿತಗಳೆಂದೂ ಆ ತತ್ವಗಳನ್ನು ಆಚರಿಸಲಿಕ್ಕೆ ಹಾಕಿ ಕೊಟ್ಟ ಆಚಾರಂಗಳು ಆಯಾ ದೇಶಕಾಲದ ಪರಿಸ್ಥಿತಿಯಂತೆ ಬದಲಾಗತಕ್ಕವುಗಳೆಂಬುದನ್ನೂ ನಾವು ವಿಚಾರಿಸಿದರೆ ತಿಳಿದುಕೊಳ್ಳಬಲ್ಲೆವು. ಧಾರ್ಮಿಕ ತತ್ವಗಳನ್ನು ಆಚರಣೆಯಲ್ಲಿ ತರಲಿಕ್ಕೆ ಎಳ್ಳಷ್ಟಾದರೂ ಪ್ರಯತ್ನ ಪಡುವವರಿಗೆ ಈ ವಿಷಯವು ಅತ್ಯಂತ ಸ್ಪಷ್ಟವಾಗುವುದು. ಶಾಸ್ತ್ರ ಗ್ರಂಥಗಳ ಸ್ವಲ್ಪ ಮಾತ್ರ ಪರಿಚಯವಿದ್ದವರು ಕೂಡ ಹಿಂದೆ ಇಂಥ ಬದಲಾವಣೆಗಳನ್ನು ಮಾಡುತ್ತಿದ್ದರೆಂದು ರುಜು ಮಾಡಿಕೊಡಬಹುದು. ಧರ್ಮದ ಅನುಷ್ಠಾನದ ಬಲವು ನಮ್ಮಲ್ಲಿ ಸ್ವಲ್ಪವಾದರೂ ಇಲ್ಲದಿರುವುದರಿಂದ ಆಚಾರ ಹಾಗೂ ರೂಢಿಗಳನ್ನು ಪರಿಸ್ಥಿತಿಗಳಿಗೆ ಅನುಕೂಲವಾಗುವಂತೆ ಬದಲಾಯಿಸಿಕೊಳ್ಳಲು ಅಸಮರ್ಥರಾಗಿದ್ದೇವೆ.

ಕೊನೆಗೆ ಮಹಾತ್ಮಾಜೀಯವರು ಹೇಳುವುದೇನೆಂಬುದನ್ನು ಸರಿಯಾಗಿ ತಿಳಿದುಕೊಳ್ಳದೆ ಹಲವರು ಗಲಿಬಿಲಿಯಲ್ಲಿ ಬೀಳುತ್ತಾರೆ ಮಹಾತ್ಮಾಜೀಯವರು ವರ್ಣಾಶ್ರಮ ಧರ್ಮಗಳನ್ನೆಲ್ಲ ಕಿತ್ತು ಬಿಸುಡಬೇಕೆಂದು ಹೇಳಿಲ್ಲ. ಅವರು ವರ್ಣ ಧರ್ಮದಲ್ಲಿ ಅಚಲವಾದ ವಿಶ್ವಾಸವುಳ್ಳವರು. ಸಹಭೋಜನ ಹಾಗೂ, ಅಂತರ್ವರ್ಣ ವಿವಾಹಗಳನ್ನು ಮಾಡಿರೆಂದು ಅವರು ನಮಗೆ ಹೇಳುತ್ತ ಇಲ್ಲ. ಯಾರನ್ನು ನಾವು ಅಸ್ಪೃಶ್ಯರೆಂದು ಕರೆಯುತ್ತೇವೋ, ಮನುಷ್ಯರಾದ ಹಾಗೂ, ಹಿಂದುಗಳಾದ ಅವರನ್ನು ಮುಟ್ಟಿದರೆ ಪಾಪ ಬರುತ್ತದೆಂಬ ನಮ್ಮ ಪ್ರಚಲಿತ ಜಾತೀಯ ಅಸ್ಪೃಶ್ಯತೆಯನ್ನು ಕಿತ್ತೊಗೆಯಿರೆಂದು ಮಾತ್ರ ಅವರ ಅಂಬೋಣ.

ಕ್ರೈಸ್ತ ಮಹಮ್ಮದೀಯ ಮೊದಲಾದ ಅನ್ಯ ಮತಾವಲಂಬಿಗಳೊಡನೆ ನಡೆಸುವಷ್ಟರ ಸಾಮಾಜಿಕ ವ್ಯವಹಾರದ ರೀತಿಗಿಂತಲೂ ಕೆಟ್ಟ ರೀತಿಯಿಂದ ಹಿಂದೂಗಳೇ ಆದ ಈ ಹರಿಜನರೊಡನೆ ನಾವು ನಡೆಯುವುದು ಯಾವ ಯುಕ್ತಿಯಿಂದ, ಯಾವ ಧರ್ಮದ ಆಧಾರದಿಂದ ಸಮರ್ಥಿಸಲಿಕ್ಕೆ ಬರುತ್ತದೆ?

ಮಹಾತ್ಮಾಜೀಯವರು ಹೇಳುವುದು ನಿಜವೆಂದಾದರೆ ನಾವು ಸುಮ್ಮನಿರುವುದು ಇದು ಸಮಯವಲ್ಲ. ಅಸ್ಪೃಶ್ಯತೆಯನ್ನು ಕೂಡಲೇ ಸಮೂಲ ನಾಶಮಾಡಬೇಕು. ನಮ್ಮ ದೇವಸ್ಥಾನಗಳಲ್ಲಿ ಇತರ ಹಿಂದೂಗಳಂತೆ ಅವರಿಗೂ ಪ್ರವೇಶ ಕೊಡಬೇಕು. ಮಾತ್ರವಲ್ಲ, ಅವರ ಸ್ಥಿತಿಯನ್ನು ಸುಧಾರಿಸಲಿಕ್ಕೆ ನಾವು ಸರ್ವ ಪ್ರಯತ್ನಗಳನ್ನು ಮಾಡಬೇಕು ಯಾಕೆಂದರೆ ಅವರು ಆ ಸ್ಥಿತಿಯಲ್ಲಿರಲಿಕ್ಕೆ ನಮ್ಮ ಅಸ್ಪೃಶ್ಯತೆಯ ಅತ್ಯಾಚಾರವೇ ಕಾರಣವಿರುತ್ತದೆ ಅವರನ್ನು ಮೊದಲು ಸುಧಾರಿಸೋಣ ಮತ್ತೆ ಅಸ್ಪೃಶ್ಯತೆಯು ತಾನಾಗಿ ಹೋಗುತ್ತದೆನ್ನಬೇಡಿರಿ. ಕೆಲವು ಮಂದಿ ಸುಧಾರಕರು ಕೆಲವು ಮಂದಿ ಹರಿಜನರನ್ನು ಸುಧಾರಿಸುವುದರಿಂದ ಈ ಪ್ರಶ್ನೆಯು ಇತ್ಯರ್ಥವಾಗುವುದಿಲ್ಲ. ಅವರ ಪ್ರಯತ್ನವು ಅತ್ಯಂತ ಸ್ತುತ್ಯ ಮಾತ್ರವಲ್ಲ ಅಗತ್ಯವೂ ಇರುತ್ತದೆ. ಆದರೆ ಕೋಟ್ಯಾಂತರ ಜನಸಂಖ್ಯೆ ಇರುವ ಹರಿಜನ ಸಮಾಜವು ಸುಧಾರಿಸಬೇಕಾದರೆ ಸವರ್ಣ ಹಿಂದೂಗಳು ಅಸ್ಪೃಶ್ಯತೆಯ ಮೂಢಬುದ್ಧಿಯನ್ನು ಬಿಡಬೇಕು ಮತ್ತು ತಮ್ಮ ಪಾಪಕ್ಕೆ ಪಶ್ಚಾತ್ತಾಪ ಪಟ್ಟು ಹರಿಜನರ ಸೇವೆಗೆ ಕೈಹಚ್ಚಿ ತಮ್ಮ ಧರ್ಮವನ್ನು ಶುದ್ಧಗೊಳಿಸಲು ನಿರ್ಧಾರ ಮಾಡಬೇಕು.

ಮಹಾತ್ಮಾಜೀಯವರ ಉಪವಾಸದ ದೀಕ್ಷೆಯು ಇನ್ನೂ ಉಳಿದಿದೆ ಎಂಬುದನ್ನು ಮರೆಯದೆ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ಕೆ ಸವರ್ಣ ಹಿಂದೂಗಳು ಮನಃಪೂರ್ವಕ ಕೈಹಾಕಿದರೆ ಈ ಕಲಂಕವು ಬೇಗನೆ ಮಾಯವಾಗುವುದು. ಏಕೆಂದರೆ, ವಿಚಾರವಿಲ್ಲದೆ ಹಿಂದೂಗಳು ಈ ಕ್ರೂರತನವನ್ನು ಆಚರಿಸುತ್ತಾರಲ್ಲದೆ ವಿಚಾರಿಸಿ ತಿಳಿದುಕೊಂಡರೆ ಕೂಡಲೇ ಇದನ್ನು ಬಿಡುವವರೆಂದು ನಾವು ಆಶಿಸಬಹುದು. ನಮಗೆ ಮುಖ್ಯವಾಗಿ ಬೇಕಾದುದು ವಿಚಾರಗಳ ಬದಲಾವಣೆ—ಅಂದರೆ ಧರ್ಮಜಾಗೃತಿ.

**ಹಿ. ರಾ. ಮಲ್ಯ, ಹರಿಜನ ಸೇವಕ.**

(ಸೂಚನೆ – ವಿರುದ್ಧ ಪಕ್ಷದವರಾಗಲಿ ಅನುಕೂಲ ಪಕ್ಷದವರಾಗಲಿ ಅಥವಾ ಕೆಲಸಗಾರರಾಗಲಿ ಈ ಚಳವಳಿಕ್ಕೆ ಸಂಬಂಧಪಟ್ಟ ಯಾವ ಬಗೆಯ ಪ್ರಶ್ನೆ ಹಾಗೂ ಸೂಚನೆಗಳನ್ನು ನನಗೆ ಪತ್ರಬರೆದು ಕಳುಹಿಸಬಹುದು ವಿಳಾಸ— ಡಿಪ್ರೆಸ್ಡ್ ಕ್ಲಾಸಸ್ ಮಿಶ್ಯನ್, ಮಂಗಳೂರು. ಸಾರ್ವಜನೋಪಯುಕ್ತ ವಿಷಯಗಳೆಂದು ತೋರಿದ್ದಲ್ಲಿ ಅವನ್ನು "ಸ್ವದೇಶಾಭಿಮಾನಿ" ಪತ್ರದಲ್ಲಿ ಚರ್ಚಿಸುವೆನು. ಹಿ. ರಾ.)

++ ++

# ಮುಂಬಾಯಿಯಲ್ಲಿ ಪುನಃ ಮಾರಾಮಾರಿ!

# ಮೂವರ ಮರಣ!! 27 ಜನರಿಗೆ ಜಖಂ!!

## ಪಠಾಣನ ಕೋಪ! ——— ಪುಂಡರ ಪ್ರತಾಪ!!

### ಪುದುಕೋಟೆಯ ದಂಗೆಗಾರರ ಬಿಡುಗಡೆಯಾಯಿತು!

ತಾ. ೮ನೇ ದಿನ ಮುಂಬಾಯಿಯ ನಲ್ ಬಜಾರಿನಲ್ಲಿ ಮಾರಾಮಾರಿಯು ಪ್ರಾರಂಭವಾಯಿತು. ಕೆಲವು ಹಿಂದೂ ಹುಡುಗರು ಕ್ರಿಕೆಟ್ ಆಡುತ್ತಿದ್ದಾಗ, ಆಟಗಾರರಲ್ಲೊಬ್ಬನು ಸಿಕ್ಸರ್ ಹೊಡೆದು ಬಿಟ್ಟನು! ಆ ಚೆಂಡು ಮೈದಾನವನ್ನು ದಾಟಿ ಮಾರ್ಗಕ್ಕೆ ಹಾರಿ, ಅಲ್ಲಿ ನಡೆದು ಹೋಗುತ್ತಿದ್ದ ಒಬ್ಬ ಪಠಾಣನಿಗೆ ತಾಗಿತು. ಒಡನೆ ಪಠಾಣನು ಕೋಪದಿಂದ ಕಿಡಿಕಿಡಿಯಾಗಿ ಹುಡುಗರು ಆಡುತ್ತಿದ್ದಲ್ಲಿಗೆ ಬಂದು ಚೆಂಡು ಹೊಡೆದ ಹುಡುಗನಿಗೆ ಸರಿಯಾಗಿ ಮುಷ್ಟಿ ಪ್ರಹಾರವನ್ನು ಮಾಡಿ ಬಿಟ್ಟನು. ಇದನ್ನು ಕಂಡ ಅವನ ಸಂಗಾತಿಗಳು ಸಿಟ್ಟುಗೊಂಡರು. ಕಲ್ಲೆಸೆಯಲಾಯಿತು. ಸೋಡಾ ಬಾಟ್ಲಿಗಳು ಒಂದರ ಮೇಲೊಂದೆಂಬಂತೆ ಬಿದ್ದುವು. ಇಷ್ಟರ ಫಲಹಾರವನ್ನು ಪಡೆದ ಪಠಾಣನು ಎತ್ತಲೋ ನಡೆದು ಬಿಟ್ಟನು. ಅದೇ ಘಳಿಗೆ ಕಳೆಯುತ್ತಲೇ, ಅವನು ಕೆಲವು ಪುಂಡ ಮುಸಲ್ಮಾನರನ್ನು ಬೆಂಬಲಾರ್ಥವಾಗಿ ಕರೆದುಕೊಂಡು ಬಂದು, ಚಿಕ್ಕ ಚಿಕ್ಕ ಹುಡುಗರಿಗೆ ಹೊಡೆಯಲಾರಂಭಿಸಿದನು. ಇಷ್ಟರಲ್ಲಿ ಸುದ್ದಿಯು ನಾಲ್ಕು ಕಡೆಗಳಿಗೂ ಹರಡಿ, ಹುಡುಗರ ಹತ್ತಿರದ ಇನ್ನಿತರ ಹಿಂದೂಗಳು ಒಟ್ಟುಗೂಡಿದರು. ದೊಣ್ಣೆ ಕತ್ತಿಗಳು ತಾಂಡವವಾಡಿದುವು. ೩ ಮಂದಿಗಳು ಸತ್ತುಬಿದ್ದರು. ೨೭ ಮಂದಿಗಳು ಜಖಂಗೊಂಡರು. ಇಬ್ಬರು ಮುಸಲ್ಮಾನರು ಹಿಂದೂಗಳ ವೇಷವನ್ನು ಧರಿಸಿ ಹಿಂದೂಗಳ ಕೊಲೆಮಾಡಲು ಹೊಂಚು ಹಾಕುತ್ತಿದ್ದರು. ಹಿಂದೂಗಳ ಕೊಲೆಗೈಯಲು ಹವಣಿಸುತ್ತಿದ್ದ ಕೆಲವು ಮುಸಲ್ಮಾನರು ಈ ವೇಷ ಪಲ್ಲಟ ಮುಸಲ್ಮಾನ ಬಂಧುಗಳನ್ನು ಹಿಂದೂಗಳೆಂದು ತಿವಿದು ಕೊಂದೇ ಬಿಟ್ಟರು. ಪೋಲೀಸ ಪಹರೆಯು ಸ್ಥಾಪಿತವಾಗಿದೆ. ಗಲಾಟೆಯು ಬೆಂಕಿಯಂತೆ ಹರಡಬಾರದೆಂದು ಅಧಿಕಾರಿಗಳು ಬಹಳ ಜಾಗ್ರತೆಯಲ್ಲಿರುವರು. ಇಷ್ಟು ನಡೆದುದು ಒಂದೇ ಒಂದು ತಾಸಿನೊಳಗೆ!

### "ಗಾಂಧಿಯು ಮಹಾ ಬುದ್ಧಿಶಾಲಿ - ಅದ್ಭುತ ವ್ಯಕ್ತಿ"

ಜೋರ್ಜ್ ಬರ್ನಾರ್ಡ್ ಶೋರವರು ಇಂಗ್ಲೆಂಡಿನ ಮಹಾ ಗ್ರಂಥಕರ್ತರೂ ನಾಟಕಕಾರರೂ ತಾತ್ವಿಕ ಪುರುಷರೂ ಎಂದು ಪ್ರಖ್ಯಾತಿ ಪಡೆದವರಷ್ಟೆ! ಅವರು ಪ್ರಪಂಚ ಸಂಚಾರಕ್ಕೆ ಹೊರಟಿದ್ದು ತಾ. ೮ನೇ ದಿನ ಮುಂಬಾಯಿಗೆ ತಲಪಿದರು. 'ಹಿಂದೂ' ಪತ್ರಿಕೆಯ ಪ್ರತಿನಿಧಿಗಳೊಬ್ಬರು ಅವರನ್ನು ಸ್ಟೀಮರಿನಲ್ಲಿ ಭೇಟಿಯಾದಾಗ ಅವರು, "ಹಿಂದೀಯರು ತಮ್ಮ ಸರಕಾರದೊಡನೆ ಸೆಣಸಿಗೆಳೆದಿರುವರಾದರೂ ಅವರು ಬಾಹ್ಯದೇಶಗಳವರ ಸಹಾನುಭೂತಿಯನ್ನು ಆಕಾಂಕ್ಷಿಸುವುದು ನಿಷ್ಪ್ರಯೋಜಕ. ಹಿಂದೀಯ ಸಮಸ್ಯೆಯನ್ನು ಹಿಂದೀಯರೇ ಪರಿಹರಿಸಿಕೊಳ್ಳಬೇಕು. ಆತ್ಮಾವಲಂಬನೆಯೇ ಮುಖ್ಯವಾದುದು. ನೀವು ಯಾರ ಸಹಾಯವನ್ನು ಕೋರಿ ಫಲವಿಲ್ಲ. ಗಾಂಧಿಯವರು ಮಹಾ ಬುದ್ಧಿಶಾಲಿ— ಅದ್ಭುತಕರ ವ್ಯಕ್ತಿ. ಅವರನ್ನು ನಾನು ಲಂಡನಿನಲ್ಲಿ ಕಂಡಿದ್ದೆ. ಒಂದು ಯುಗದಲ್ಲಿ ಅವರಂತಹ ಒಬ್ಬರು ಹುಟ್ಟುವುದೂ ದುರ್ಲಭ. ಅಂತಹ ಒಬ್ಬ ವ್ಯಕ್ತಿಯು ನಿಮ್ಮ ನಡುವೆ ಇರುವುದು ನಿಮ್ಮ ಭಾಗ್ಯ! ಇಂಗ್ಲೆಂಡಿನಲ್ಲಿ ಅಸ್ಪೃಶ್ಯತೆಯುಂಟು. ಆದರೆ ಇಲ್ಲಿಯವರ ನಿಯಮದಂತೆ— ಅಸ್ಪೃಶ್ಯನ ನೆರಳು ತಮ್ಮ ಮೇಲೆ ಬೀಳಬಾರದೆಂಬ ಪದ್ಧತಿಯಲ್ಲ. ಅಸ್ಪೃಶ್ಯರೆಂಬ ಪ್ರತ್ಯೇಕ ಜಾತಿಯಿಲ್ಲವಾದರೂ ಒಬ್ಬ ಕೂಲಿಯವನು ಒಬ್ಬ ಸಿರಿವಂತನ ಮಗಳನ್ನು ವಿವಾಹವಾಗುವುದಾದರೆ ಆಗ ಆ ಕೂಲಿಯವನ ಮೇಲೆ ವ್ಯಕ್ತ ದೃಷ್ಟಿಯು ಮಾತ್ರ ಬೀಳುತ್ತದೆ. ನಮ್ಮಲ್ಲಿರುವುದು ಶ್ರೀಮಂತಿಕೆಯ ಕುಲನಾರೀತಿಯ ಅಸ್ಪೃಶ್ಯತೆ. ಹಿಂದೂ ದೇಶಕ್ಕೆ ಅರ್ಧ ಡಜನು ಮುಸ್ಸೋಲಿನಿಯವರಂತಹ ಪ್ರತಿಭಾಶಾಲಿಗಳಿದ್ದರೆ ಉತ್ತಮ. ಯುದ್ಧವು ತಲೆ ದೋರಿದರೆ ಮಿಲಿಯಾಧಿ ಜನದ ಮರಣವಾಗುತ್ತದೆ. ನಾನಾಗಲೀ ಗಾಂಧಿಯವರಾಗಲೀ ಕೆಲವು ಮಿಲಿಯ ಜನರನ್ನು ಕೊಲ್ಲುತ್ತಿದ್ದರೆ, ನಾವು ದೊಡ್ಡ ವೀರರಾಗುತ್ತಿದ್ದೆವು! ಹಾಗಾಗಿ ನನ್ನ ಮಾತನ್ನು ಯಾರು ಕೇಳುತ್ತಾರೆ?" ಎಂದರು.

### ಅದ್ಭುತಕರ!

ಮುಂಬಾಯಿಯ ಬ್ಯಾರಿಸ್ಟರರಾದ ಶ್ರೀ. ಪಿ. ಆರ್ ಬರೂಚರೆಂಬವರ ಮನೆಗೆ ಶ್ರೀ. ಶ್ರೀನಿವಾಸ ರಾವ್ ಎಂಬವರು ಪ್ರವೇಶಿಸುತ್ತಿದ್ದಾಗ ಪೋಲೀಸರು ಅವರನ್ನು ಹಿಡಿದರು. ಬರೂಚಾರವರನ್ನೂ ಹಿಡಿದರು. ಶ್ರೀನಿವಾಸರ ಕೈಯಲ್ಲಿದ್ದ ಒಂದು ಪತ್ರವು ನಾಥ ಎಂಬವರಿಂದ ಸಹಿ ಮಾಡಲ್ಪಟ್ಟಿದ್ದು ಈ ರೀತಿಯ ಲೇಖನವನ್ನೊಳಗೊಂಡಿತ್ತು. "ತಾರೀಖು ೩೦ನೇ ದಿನ ನಾನು ಸಯ್ಯದ್ ಅಬ್ದುಲ್ಲನ ಕೈಯಲ್ಲಿ ಕೊಂಗ್ರೆಸ್ ಸೆಕ್ರೆಟರಿ ಮತ್ತು ಅವನ ಸ್ವಂತ ಖರ್ಚಿಗಾಗಿ ೨೫ ರೂಪಾಯಿಗಳನ್ನು ಕೊಟ್ಟಿದ್ದೆ. ಇವನು ಆ ಹಣವನ್ನು ಪಡಕೊಂಡು ಹೊರಟುಹೋಗಿ, ಚೆನ್ನಾಗಿ ಮದ್ಯ ಸೇವಿಸಿ ಹಿಂತಿರುಗಿದನು. ಸ್ವಯಂ ಸೇವಕರೂ ಸೆಕ್ರೆಟರಿಯವರೂ ಹಣವನ್ನು ಕೇಳಿದಾಗ ಅವನು ರೋಷಗೊಂಡು ಬೈದು ಹೊರಟು ಹೋದನು." ಇಂತಹ ಪತ್ರವು ರಾಷ್ಟ್ರ ಸೇವಕರ ಕೈಯಲ್ಲಿ ದೊರಕುದರಿಂದ ರಾಷ್ಟ್ರ ಸೇವೆಯ ನೆವನದಿಂದ ಹಣವು ಸಿಕ್ಕಾಬಟ್ಟೆ ವೆಚ್ಚವಾಗುತ್ತಿದೆಯೆಂದು ತಿಳಿಯಲಾಗುತ್ತದೆಯೆಂದು ಪ್ರಕಟವಾಗಿದೆ. ಈ ಪತ್ರವು ದೊರಕಿದುದು ನಿಜವೋ ಸುಳ್ಳೋ ಎಂದು ತಿಳಿಯಬೇಕಾಗಿದೆ. ಬರೂಚರವರ ಮೇಲೆ ತಕ್ಸೀರು ನಡೆಯುತ್ತಿದೆ.

### ವಕೀಲರುಗಳ ಗತಿ!!

ವಕೀಲರುಗಳ ಸಂಖ್ಯೆಯು ಹಿಂದೂಸ್ಥಾನದಲ್ಲಿ ಹೆಚ್ಚುತ್ತಿರುವ ಕಳವಳಕ್ಕೆ ತುದಿಮೊದಲಿಲ್ಲ. ಇಟಲಿಯಂತೆ ಜರ್ಮನಿಯು ಕೂಡಾ ಈ ವಕೀಲರೋಗದಿಂದ ಪೀಡಿತವಾಗಿದೆ. ಅಲ್ಲಿ ಕೇವಲ ೫೦ ಸಾವಿರದಷ್ಟು ವಕೀಲರು ಹೆಚ್ಚಿರುವರು. ನಗರಗಳಲ್ಲಿ ಅಲ್ಲಿ ಪ್ರತಿ ೫೩೦೩ ಜನರಿಗೊಬ್ಬ ವಕೀಲರಂತಿದ್ದರು. ಈಗ ಪ್ರತಿ ೪೪೫೦ ಜನರಿಗೊಬ್ಬರಂತೆ ಇರುವರು. ಇವರಲ್ಲಿ ಶೇಕಡಾ ೯೦ ಮಂದಿಗಳು ತಮ್ಮ ಉದರಭರಣಕ್ಕಾಗುವಷ್ಟು ಅಲ್ಪ ಸಂಪಾದನೆಯನ್ನೂ ಮಾಡಲು ಕೂಡಾ ಅಸಮರ್ಥರಾಗುತ್ತಿರುವರು. ಉಳಿದವರ ಅವಸ್ಥೆ ವರ್ಣನಾತೀತ! ಈ ಉದ್ಯೋಗಕ್ಕೆ ಇಂತಹ ಸಾಂಕ್ರಾಮಿಕರೋಗವು ತಗಲಿದುದರಿಂದ ಇನ್ನು ಐದು ವರ್ಷಗಳ ತನಕ ವಕೀಲಿ ವೃತ್ತಿಗೆ ಜನರನ್ನು ಸೇರಿಸಿಕೊಳ್ಳಬಾರದಾಗಿ ಜರ್ಮನ್ ಅಸೋಸಿಯೇಶನ್ ಅಥವಾ ಲಾ ಯೂನಿಯನ್‌ನವರು ಠರಾವು ಮಾಡಿಕೊಂಡಿರುವರು.

### ಪುದುಕೋಟೆಯಲ್ಲಿ ದಂಗೆ.

ಒಂದೂವರೆ ವರ್ಷದ ಹಿಂದೆ ಪುದುಕೋಟೆಯಲ್ಲಿ ಪ್ರಜಾಗಣದ ದಂಗೆಯೊಂದು ತೆರಿಗೆ ಸಂಬಂಧವಾಗಿ ಎದ್ದಿತ್ತಷ್ಟೆ! ಅದರಲ್ಲಿ ಅಪರಾಧಿಗಳಾಗಿ ದೊರೆತ ೯೩ ಮಂದಿಗಳ ಮೇಲೆ ಸರಕಾರವು ದಾವೆ ಹೂಡಿದ್ದಿತು. ನ್ಯಾಯವಿಚಾರಣೆಯು ಪ್ರತಿದಿನವೆಂಬಂತೆ ನಡೆಯುತ್ತಿತ್ತು. ಇದೇ ೨೨ ಕ್ಕೆ ಎಲ್ಲರಿಗೂ ವಿಸ್ಮಯವನ್ನುಂಟು ಮಾಡುವಂತೆ ಅಲ್ಲಿಯ ಸರಕಾರವು ಎಲ್ಲಾ ಆಪಾದನೆಗಳನ್ನು ಹಿಂತೆಗೆದು ಅಪಾದಿತರೆಲ್ಲರನ್ನೂ ಬಿಡುಗಡೆ ಮಾಡಿತು. ಸರಕಾರವು ಮನೋಪೂರ್ವಕವಾಗಿ ಈ ರೀತಿ ವರ್ತನೆಯನ್ನು ಮಾಡಿದರೆ ಪ್ರಜಾಪ್ರಭುತ್ವದಲ್ಲುಂಟಾಗುವ ಸುಖಶಾಂತಿಯು ಅಷ್ಟಿಷ್ಟಲ್ಲವೆಂದು ಈಗ ದಸರಾ ಮೆರವಣಿಗೆ ಗಲಾಟೆಯಲ್ಲಿ ಕೆಲವರನ್ನು ಹಿಡಿದ ಮೈಸೂರು ಸರಕಾರವೂ ಕೊಂಗ್ರೆಸ್ಸನ್ನು ಹಿಡಿದ ಬ್ರಿಟಿಷ್ ಮತ್ತು ಹಿಂದೀಯ ಸರಕಾರಗಳೂ ತಿಳಿದರೆ ಶ್ರೇಯಸ್ಸುಂಟು

### ಮಹಾರಾಜ ಕುಮಾರರಿಗೆ ಜುಲುಮಾನೆ

ಧರಣ್‌ಪುರದ ಮಹಾರಾಜ ಕುಮಾರರು ಲಂಡನಿನ ಕೇಂಬ್ರಿಜ್‌ನಲ್ಲಿ ತನ್ನ ಕಾರನ್ನು ಕಂಡಾಬಟ್ಟೆ ಓಡಿಸಿ ಪೋಲೀಸರನ್ನುಲ್ಲಂಘಿಸಿ ಒಬ್ಬರಿಗೆ ಜಖಂಗಳನ್ನು ಬೀರೆಯುವರೆಗೆ ಮಾಡಿದರು. ಒಂದು ಕಾರಿಗೆ ತನ್ನ ಕಾರು ಢಿಕ್ಕೆ ಹೊಡೆಯುವಂತೆ ಮಾಡಿದರು. ಕೇಂಬ್ರಿಜ್ ಕೋರ್ಟಿನಲ್ಲಿ ನ್ಯಾಯ ವಿಚಾರಣೆಯಾಯಿತು. ಅಪರಾಧಿಯು ಮಾತ್ರ ಹಾಜರಾಗಲಿಲ್ಲ. ತನ್ನ ಉಚ್ಚಸ್ಥಾನದ ಗೌರವಾರ್ಥಕ್ಕಾಗಿ ಮಹಾರಾಜ ಕುಮಾರರು ಚಿಕಿತ್ಸಲಾರದಾದರು ಎಂದು ಸೊಲಿಸಿಟರ್ ಹೇಳಿದರು. ಹಾಗೂ ಹೀಗೂ, ಕುಮಾರನಿಗೆ ೮ ಪೌಂಡುಗಳ ಜುಲುಮಾನೆ ವಿಧಿಸಲ್ಪಟ್ಟಿತು.

### ಫ್ರೆಂಚ್ ಸ್ಟೀಮರ್ ಸುಟ್ಟಿತು.
### ೧೭ ಜನರ ಮರಣ.

ಪೆರಿಸ್‌ನಲ್ಲಿಯ ಸಮುದ್ರದಲ್ಲಿ ಪಯಣ ಬೆಳೆಸುತ್ತಿದ್ದ 'ಅಟ್ಲಾಂಟಿಕ್' ಎಂಬ ಸ್ಟೀಮರ್‌ನಲ್ಲಿ ಬೆಂಕಿಯೆದ್ದಿತು. ಅದರಲ್ಲಿದ್ದ ೨೩೦ ಜನ ನಾವಿಕರು ಬೆಂಕಿಯನ್ನಾರಿಸಲೆತ್ನಗೈಯ್ದರೂ ಅಸಾಧ್ಯವಾಯಿತು. ಅಪಾಯ ಸೂಚಕ ಮೊರೆಯನ್ನು ಪ್ರಚುರಿಸಲಾಯಿತು. ಇದನ್ನು ಕೇಳಿ ಅನೇಕ ಮೈಲುಗಳ ದೂರದಲ್ಲಿ ಜರ್ಮನಿಯ ಮಾರ್ಗವಾಗಿ ಹೋಗುತ್ತಿದ್ದ 'ರುಹಾರ್' ಎಂಬ ಜರ್ಮನ್ ಸ್ಟೀಮರ್ ಒಂದು ಓಡಿ ಬಂದು ಹೆಚ್ಚಿನವರನ್ನು ರಕ್ಷಿಸಿತು. ಈ ಸ್ಟೀಮರ್ ೭೦೩ ಅಡಿ ಉದ್ದ ೪೦೦೦೦ ಟನ್ ಭಾರ. ೫೦ ಮಿಲಿಯ ಫ್ರೇಂಕ್ಸ್ ಅದರ ಕ್ರಯ. ಆಕಾಶದಿಂದ ನೋಡಿದಾಗ ಇಡೀ ಸ್ಟೀಮರು ಉರಿಯುವ ಬೆಂಕಿ ಕೆಂಡದಂತೆ ಇದ್ದುದನ್ನು ಕಂಡು ಅದರ ಆಕೃತಿಯನ್ನು ಬಿಟ್ಟರು. ಬೆಂಕಿಯ ತೀಕ್ಷ್ಣತೆಯಿಂದಾಗಿ ಆ ಸ್ಟೀಮರನ್ನು ಸಮಾಪಿಸಲೂ ಆಗದೆ ಹೋಯಿತು. ೧೭ ಮಂದಿಗಳು ಕಾಣೆಯಾಗಿರುತ್ತಾರೆ. ರಕ್ಷಣೆ ಹೊಂದಿದ ೨೨೦ ಜನರು ಚೆರ್‌ಬರ್ಗ್ ಪಟ್ಟಣವನ್ನು ಸೇರಿದರು

### ಬೆರಕೆ ಸಾಮಾನುಗಳಿಗಾಗಿ ಶಿಕ್ಷೆ

ಬೆಂಗಳೂರಲ್ಲಿ ಬೆರಕೆ ಸಾಮಾನುಗಳನ್ನು ಮಾರುವವರ ಬಗ್ಗೆ ತಕ್ಕ ಕ್ರಮಗಳನ್ನು ಮ್ಯುನಿಸಿಪಾಲಿಟಿಯವರು ನಡೆಸುತ್ತಿರುವರು. ಬೆಂಗಳೂರು ಸಿಟಿ ಮಾರ್ಕೆಟ್ ೧ನೇ ನಂಬ್ರದ ಅಂಗಡಿಯ ಮಾಲೀಕರಾದ ಮಿ. ಬಿ. ರಾಮರಾವ್ ಎಂಬವರು ಮಿಶ್ರಿತವಾದ ತುಪ್ಪವನ್ನು ಮಾರಿದರೆಂಬ ಅಪಾದನೆಯ ಮೇಲೆ ಜೋಂಟ್ ಮೆಜಿಸ್ಟ್ರೇಟರವರು [illegible] ಜುಲುಮಾನೆ ಕೊಡಲು ತಪ್ಪಿದರೆ ಒಂದು ತಿಂಗಳ ಸಾದಾ ಸಜೆ ವಿಧಿಸಿದರು. ತುಪ್ಪವನ್ನು ನಾಶಮಾಡಬೇಕೆಂದು ಅಪ್ಪಣೆ ಮಾಡಲಾಯಿತು.

### ಜಗಮಲ್ಲ ಗಾಮನ ಸವಾಲು.

ಕುಸ್ತಿಯಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಗಾಮನು ಈಗ ಕಲಕತ್ತೆಗೆ ಹೋಗಿರುವನು. ಆತನ ಸಹೋದರನಾದ ಇಮಾಮ್ ಬಕ್ಷನನ್ನು ಸೋಲಿಸಿದವರಿಗೆ ೧೦ ಸಾವಿರ ರೂಪಾಯಿಗಳನ್ನೂ, ಮಗನಾದ ಚೋಟಾ ಗಾಮನನ್ನು ಸೋಲಿಸಿದವರಿಗೆ ೭ ಸಾವಿರ ರೂಪಾಯಿಗಳನ್ನೂ ಪಾರಿತೋಷಕವಾಗಿ ಕೊಡುವುದಾಗಿ ಪ್ರಕಟಿಸಿರುತ್ತಾನೆ.

---

### ನೋಟೀಸು.

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

S C 8/1/1932

ವಾದಿ— ಕುಂದಾಪುರ ತಾಲೂಕು ಬೋರ್ಡು

ಪ್ರತಿವಾದಿ ಮಾರ್ಪಳ್ಳಿ ಶ್ರೀನಿವಾಸ ನಾಯ್ಕ, ಮಾರ್ಪಳ್ಳಿ ಮಾಧವ ನಾಯ್ಕನ ಮಗ [illegible] ಉಡುಪಿ ತಾಲೂಕು [illegible] ಗ್ರಾಮದ ಬಾಬ್ತು

ವಾದಿಯು ಪ್ರತಿವಾದಿಯ ಮೇಲೆ [illegible] 26-1-33ಕ್ಕೆ ತನ್ನಿಗೆ [illegible] ಪ್ರತಿವಾದಿಯು ಆಕ್ಷೇಪವಿದ್ದಲ್ಲಿ ಸದ್ರಿ ವಾಯಿದೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ಗೈರುಹಾಜರಿಯಿಂದ ತೀರ್ಮಾನಿಸಲಾಗುವದೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತದೆ

Coondapoor, 9—1—1933

K S. Shetty, Advocate for Plaintiff.

---


## "ಭಾರತಿ"

ಧಾರ್ಮಿಕ ಮತ್ತು ಲೋಕರಂಜಕವಾದ ವಿಷಯಗಳನ್ನೊಳಗೊಂಡ

– ಕನ್ನಡ ಮಾಸಪತ್ರಿಕೆ –

ವಾರ್ಷಿಕ ಚಂದಾ ಹಣ, ಅಂಚೆವೆಚ್ಚ ಸೇರಿ

**ರೂ 2-4-0 ಮಾತ್ರ.**

ಚಂದಾದಾರರಾಗಲು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

ಮೆನೇಜರ್,
"ಭಾರತಿ" ಕಾರ್ಯಾಲಯ,
ಮುಲ್ಕಿ, ದ. ಕ.

ಪಿ. ಸೂ. ಹಲವು ಕಡೆಗಳಲ್ಲಿ ಏಜಂಟರು ಬೇಕು. ಅಪೇಕ್ಷೆ ಇದ್ದವರು ಮೇಲಿನ ವಿಳಾಸಕ್ಕೆ ಬರೆಯುವುದು

[illegible]
[illegible] ಶುಕ್ರವಾರದ ವರೆಗಿನ ಪಂಚಾಂಗ
(ಅಂಗೀರಸ ಧನು — ಪೌಷ್ಯ).

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ: ಉದಯ | ಅಸ್ತ |
|---|---|---|---|---|---|---|---|---|
| 14 | ಶನಿ | [illegible] | [illegible] | ಆಶ್ಲೇಷಾ | [illegible] | [illegible] | 6.59 | 6 21 |
| 15 | ರವಿ | [illegible] | [illegible] | ಮಘಾ | [illegible] | [illegible] | 6.59 | 6.21 |
| 16 | ಸೋಮ | [illegible] | [illegible] | ಪುಬ್ಬಾ | [illegible] | [illegible] | 6.59 | 6 22 |
| 17 | ಕುಜ | [illegible] | [illegible] | ಉತ್ತರಾ | [illegible] | [illegible] | 7 | 6.22 |
| 18 | ಬುಧ | [illegible] | [illegible] | ಹಸ್ತಾ | [illegible] | [illegible] | 7. | 6.23 |
| 19 | ಗುರು | [illegible] | [illegible] | ಚಿತ್ತಾ | [illegible] | [illegible] | 7 | 6 23 |
| 20 | ಶುಕ್ರ | [illegible] | [illegible] | ಸ್ವಾತಿ | [illegible] | [illegible] | 7 | 6.24 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) | | | | Rainfall. ಮಳೆ | |
|---|---|---|---|---|---|---|
| | Maximum ಹೆಚ್ಚಿನದು | | Minimum ಕಡಿಮೆದು | | ದಿನದ ಮಳೆ | ಜಮಲೀ ಮಳೆ |
| 5 | 91— | 7 | 68— | 9 | — | — |
| 6 | 92— | 3 | 68 – | 8 | — | — |
| 7 | 91— | 0 | 68 – | 7 | — | — |
| 8 | 91— | 9 | 69— | 7 | — | — |
| 9 | 89— | 3 | 70— | 9 | — | — |
| 10 | 89— | 8 | 69 | 9 | — | — |
| 11 | 91— | 6 | 69— | 2 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ | ಆ | ವರೆಗೆ ರೂ | ಆ |
|---|---|---|---|---|
| ಹೊಸ ಮುಸ್ತಿ | 4— | 0 | 4— | 12 |
| ಹೊಸ ದಾಳಿ ಅಕ್ಕಿ | 3— | 11 | 1 | 0 |
| ಮುಸ್ತಿ | 4— | 12 | — | 4 |
| ಗುಡ್ಡ | 4— | 2 | 4— | 4 |
| ಸುಗ | 3— | 10 | 4— | 4 |
| ಊರ ಅಪ್ಪಲ್ ಬೆಲ್ಲ | 4— | 10 | 6— | 4 |
| ರಂಗೂನು ಬೆಲ್ಲಗೆ ಗೋಣಿ ಗಳ್ಳೆ | 6— | 8 | 7— | |
| ಎಲ್ಲೂರು ಬೆಲ್ಲಗೆ ಮೂಡಿ ಗಳ್ಳೆ | 4— | 8 | 4— | 10 |
| ಗೋದಿ ಗೋಣಿ ಗಳ್ಳೆ | 10— | 8 | 14— | 8 |
| ತೊಗರಿ ಗೋಣಿ ಗಳ್ಳೆ | 9— | 8 | 14— | 0 |
| ಹುರುಳಿ ಗೋಣಿ ಗಳ್ಳೆ | 6— | | 6— | 4 |
| ಕಡಲೆ ಗೋಣಿ ಗಳ್ಳೆ | 8— | 8 | 11— | 0 |
| ತೊಗರಿಬೇಳೆ ಗೋಣಿ ಗಳ್ಳೆ | 13— | 8 | 21— | 0 |
| ಉದ್ದು ಗೋಣಿ ಗಳ್ಳೆ | 0— | 8 | 10 | 12 |
| ಹೆಸರು ಗೋಣಿ ಗಳ್ಳೆ | 9— | 4 | 1 — | |
| ಊರುಬೆಲ್ಲ ಖಂಡಿ ಗಳ್ಳೆ | 31— | 4 | 32 | 8 |
| ಉಪ್ಪು ಗೋಣಿ ಗಳ್ಳೆ | 5— | 0 | 5— | 4 |
| ಕೊಬ್ಬರಿ ಖಂಡಿ ಗಳ್ಳೆ | 66— | | 72 | |
| ಕೊಪ್ಪ ಹಿಂಡಿ ಖಂಡಿ ಗಳ್ಳೆ | 4— | 8 | — | |
| ಎಳ್ಳಿಂಡಿ ಖಂಡಿ ಗಳ್ಳೆ | 26— | 4 | 2– | 8 |
| ಕೊಬ್ಬ ಎಣ್ಣೆ ಮುಡಿ ಗಳ್ಳೆ | 5— | 2 | 6— | 2 |
| ಎಳ್ಳೆಣ್ಣೆ ಮುಡಿ ಗಳ್ಳೆ | 6— | 12 | 7— | 0 |
| ಹರಳೆಣ್ಣೆ ಬೆಲ್ಲಗೆ ಗಳ್ಳೆ | 4— | 7 | 8— | 12 |
| ಕೊಬ್ಬರಿ ಕೆತ್ತೆ [illegible] ಗಳ್ಳೆ | 3— | 15 | 4— | 0 |
| [illegible] | 5— | 0 | 6— | 6 |
| [illegible] ಮುಡಿ ಗಳ್ಳೆ | 4— | 12 | 6— | 0 |
| ಪೇಟಿಟ್ ಕಾಫಿ ಖಂಡಿ ಗಳ್ಳೆ | 275— | 0 | 300— | |
| ಕಾಯಿಪೋಡಿ ಖಂಡಿ ಗಳ್ಳೆ | 170— | 0 | 180— | |
| ಮೆಣಸು ಮುಡಿ ಗಳ್ಳೆ | 27— | 0 | 28— | |
| ಗೇರುಬೀಜ ಮುಡಿ ಗಳ್ಳೆ | 2— | 4 | 2 | 6 |
| ಅಕ್ಕಿಯ ಖಂಡಿ ಗಳ್ಳೆ | 20— | 0 | 25— | 8 |
| [illegible] ಮುಡಿ ಗಳ್ಳೆ | 10 | 0 | 10— | 2 |
| [illegible] ಮುಡಿ ಗಳ್ಳೆ | 15— | 0 | 16— | 0 |
| [illegible] ಗಳ್ಳೆ | 13— | 8 | 13— | 12 |
| [illegible] ಮುಡಿ ಗಳ್ಳೆ | 11— | 0 | 11— | 8 |
| [illegible] ಗಳ್ಳೆ | 19— | | 19— | 4 |
| [illegible] ಖಂಡಿ ಗಳ್ಳೆ | 40— | | 45— | |
| [illegible] ಕಾಫಿ ಖಂಡಿ ಗಳ್ಳೆ | 320— | | 325— | |
| ಹಳೆ ಅಡಿಕೆ | 180— | | 205— | |
| ಹೊಸ ಅಡಿಕೆ | 140 | | 145— | |


# THE CANARA PUBLIC CONVEYANCE CO., LTD, MANGALORE.
(ESTABLISHED 1914)

## ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಂತಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕ್ರಮೇಣ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ, ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ಒಂದು ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary**
*The Canara Public Conveyance Company Ltd Mangalore*



# Chikmagalur Public Conveyance Motor Service.
## CHIKMAGALUR.
## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

**ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.**

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

# ಪತ್ರವ್ಯವಹಾರ

(ಪತ್ರಿಕೆದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು. ಸಂ. ಸ್ವ.)

ಹಂಚನುರು ದೇವಸ್ಥಾನಕ್ಕೆ ದೇವರ ದರ್ಶನಕ್ಕೂ ಪ್ರಸಾದವನ್ನು ಹೊಂದುವುದಕ್ಕೂ ಹೋಗುವ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ನಿರಶನ ವ್ರತವನ್ನು ಕೈಕೊಳ್ಳುವುದೂ ಬಿಡುವುದೂ ಇವುಗಳ ವಿಷಯದಲ್ಲಿ ಹೇಗೆ ನಡೆಯುತ್ತಲಿರುವರೋ ಅದು ಸಮಂಜಸವೇ ಎಂದು ಕೆಲವು ಆಂಗ್ಲೇಯ ಪತ್ರಿಕಾಕರ್ತರು ಕೇಳುತ್ತಾರೆ. ಬ್ರಿಟಿಷ್ ಸಾಂಘಿಕ ಪ್ರವರ್ತನ ಧರ್ಮಗಳಂತೆ ಆಚರಿಸುತ್ತೇವೆಂದು ಬಿಚ್ಚಿಡುತ್ತಾ ಬ್ರಿಟಿಷ್ ಗವರ್ನಮೆಂಟಿನವರು, ಮೂರು R T C ಗಳಲ್ಲಿಯೂ, ಸಾಂಕಿ ಕಮಿಟಿ, ಲೋಥಿಯನ್ ಕಮಿಟಿ ಮೊದಲಾದವುಗಳಲ್ಲಿ ಮಾಡಿರುವ ವಿಚಾರಣೆಗಳು ಸಮಂಜಸವೇ ಯೆಂಬುದಾಗಿಯೂ ಸಾಂಘಿಕವಾದ ವಿಚಾರಣೆಗಳನ್ನು ಮಾಡುತ್ತೇವೆಂದು ಹೇಳುತ್ತಾ ಸತ್ಯಕ್ಕೂ, ಧರ್ಮಕ್ಕೂ ಹೋರಾಡುವ ಮಹಾತ್ಮಾ ಗಾಂಧಿ ಮೊದಲಾದವರನ್ನು ಭಯಂಕರ ಶಿಕ್ಷೆಗೆ ಗುರಿ ಮಾಡುವುದು ಸಮಂಜಸವೆ ಎಂದು ಬ್ರಿಟಿಷ್ ಜನಗಳಲ್ಲಿಯೇ ಅನೇಕರು ಕೇಳುವರು. ಇದಕ್ಕೆ ಜವಾಬನ್ನು ಕೊಡುವುದು ಕಷ್ಟವಲ್ಲ. ಮಹಾತ್ಮಾ ಗಾಂಧಿಯವರೇ ಮೊದಲಾದ ದೇಶಭಕ್ತರು ಕೇವಲ ಧರ್ಮಿಷ್ಟರು. ಚಕ್ರಾಧಿಪತ್ಯದಿಂದಲೂ, ಇಂಡಿಯಾ ದೇಶಕ್ಕೆ ಗುಲಾಮಗಿರಿಯನ್ನು ತಪ್ಪಿಸಿ ಬ್ರಿಟಿಷ್ ಜನಗಳು ಧರ್ಮಿಷ್ಟರೆಂದು ತೋರಿಸುವುದೇ ಅವರ ಮುಖ್ಯವಾದ ಧ್ಯೇಯ. ಬ್ರಿಟಿಷ್ ಸಾಂಘಿಕ ಪ್ರವರ್ತನ ಧರ್ಮಕ್ಕೆ ಗ್ಲಾನಿಯನ್ನು ತಂದು ಈ ಚಕ್ರಾಧಿಪತ್ಯವೇ ನಾಮಾವಶೇಷವಾಗುವಂತೆ ಮಾಡುವುದೇ ಸ್ವಾರ್ಥಪರರಾದ ಬ್ರಿಟಿಷ್ ಡೈಹಾರ್ಡುಗಳ ಮುಖ್ಯ ಧ್ಯೇಯ. ಆ ಸಂಬಂಧ ಪ್ರಲಾಪವು ಈ ಡೈಹಾರ್ಡುಗಳಲ್ಲಿ ಇರುವುದೇ ಹೊರತು ಮಹಾತ್ಮಾ ಗಾಂಧಿಯವರಲ್ಲಿ ಇರುವುದಿಲ್ಲ. ಸರ್ವ ಪ್ರಯತ್ನದಿಂದಲೂ ಭಾರತೀಯರಲ್ಲಿ ಐಕಮತ್ಯವನ್ನು ಹುಟ್ಟಿಸಬೇಕೆಂದು ಮಹಾತ್ಮಾ ಗಾಂಧಿಯವರು ಮಾಡುತ್ತಲಿರುವ ಚಳವಳಿಗಳು ಅನೇಕ ವಿಧವಾಗಿ ಡೈಹಾರ್ಡುಗಳಿಗೆ ತೋರಬಹುದು. ಚೆನ್ನಾಗಿ ಪರಿಶೀಲಿಸಿದರೆ ಬ್ರಿಟಿಷ್ ಚಕ್ರಾಧಿಪತ್ಯವು ರೋಮನ್ ಚಕ್ರಾಧಿಪತ್ಯವೇ ಮೊದಲಾದುವುಗಳಂತೆ ನಾಮಾವಶೇಷವಾಗದೇ ಇರಬೇಕೆಂದು ಮಹಾತ್ಮಾ ಗಾಂಧಿಯವರೇ ಮೊದಲಾದ ಭಾರತೀಯ ದೇಶಭಕ್ತರು ಮಾಡತಕ್ಕ ಕೆಲಸಗಳು ಅಸಂಬಂಧಗಳೆಂದು ತೋರಬಹುದು. ಹುಚ್ಚರು ತಾವು ಮಾಡತಕ್ಕ ಅಪರಾಧಗಳನ್ನೂ ಕೂಡ ಧರ್ಮವೆಂದು ಹೇಗೆ ತಿಳಿದುಕೊಳ್ಳುವರೋ ಹಾಗೆ ಡೈಹಾರ್ಡುಗಳು ತಮ್ಮ ಹುಚ್ಚುತನವನ್ನು ಮಹಾತ್ಮಾ ಗಾಂಧಿಯವರೇ ಮೊದಲಾದವರಿಗೆ ಆರೋಪಿಸಿದರೆ ಅದು ಎಂದಿಗಾದರೂ ಸಾಧುವಾಗುವುದೇ?

ಸಿ ವಿ ವೈದ್ಯೇಶ್ವರಯ್ಯರ್

## ಬಾಲವಿಧವಾ ವಿವಾಹ.

ಅಯ್ಯಾ,

ಬಾಲವಿಧವಾ ವಿವಾಹ ಪ್ರಚಾರಕರ ದ ಶಿರ್ಸಿಯ ಶ್ರೀಯುತ ಅಕ್ಷದಾಸ ಗಣಪತಿ ನಾರಾಯಣ ಭಟ್ಟರಿಗೂ ಸಾಗರ ತಾಲೂಕು ನಂದೀತಳೆ ೧.೧ ಅಂಚೆ ತಿಮ್ಮಪ್ಪಯ್ಯನವರ ಪುತ್ರಿ ಬಾಲವಿಧವಾ ಮಹಂಕಾಳಿ ಬಾಯಿ ಎಂಬವರಿಗೂ ಶಿರ್ಸಿ ತಾಲೂಕು ಮಂಜುಗುಣಿ ಕ್ಷೇತ್ರದಲ್ಲಿ ಇದೇ ಕಳೆದ ತಾ. ೨೪ – ೧೨ – ೩೨ರಲ್ಲು ಪರಸ್ಪರ ಪಾಣಿಗ್ರಹಣ ವಿಧಿಯಿಂದ ವಿದ್ವಜ್ಜನರ ಸಮ್ಮತಿಯಿಂದ ವಿವಾಹವು ನಿಶ್ಚಯಿಸಲ್ಪಟ್ಟು ಸದರಿ ವಿವಾಹ ಸಮಾರಂಭಕ್ಕೆ ಬರಬೇಕಾಗಿ ಶ್ರೀಯುತ ಅಕದಾಸ ಗಣಪತಿ ನಾರಾಯಣ ಭಟ್ಟರಿಂದ ಬಂದಿರುವ ಲಗ್ನ ಪತ್ರಿಕೆಯನ್ನು ಓದಿ ನೋಡಲು ಅತ್ಯಾನಂದವಾಗುತ್ತದೆ ಮಾತ್ರವಲ್ಲ. ಈ ಸಮಾಜ ಸುಧಾರಣಾ ಸುವಾರ್ತೆಯನ್ನು ತಮ್ಮ ಅಮೂಲ್ಯ ಪತ್ರಿಕೆಯ ಮೂಲಕ ತಮ್ಮ ವಾಚಕ ವೃಂದಕ್ಕೆ ತಿಳಿಸಲು ತುಂಬಾ ಕುತೂಹಲವುಳ್ಳವನಾಗಿರುತ್ತೇನೆ.

೬ – ೧ – ೩೩ ಓರ್ವ ಸುಧಾರಕ

## ಪಂಡರಾಪುರ ಕ್ಷೇತ್ರ

ಅಯ್ಯಾ,

ನಿಮ್ಮ ತಾ. ೬ – ೧ – ೩೩ರ ಸಂಚಿಕೆಯಲ್ಲಿ ಪ್ರಕಟಿಸೋಣಾದ ಶ್ರೀ ಪಂಡರಪುರ ಕ್ಷೇತ್ರದಲ್ಲಿ ಒಂದು ಧರ್ಮಸಾಲೆಯನ್ನು ಕಟ್ಟಿಸುವುದಕೋಸ್ಕರ ಎತ್ತಿದ ಫಂಡಿನ ಕುರಿತು ಬರೆಯೋಣಾದ ವಿಷಯವನ್ನು ಓದಿ ತುಂಬಾ ಸಂತೋಷಪಟ್ಟೆ. ಇಪ್ಪತ್ತು ವರ್ಷಗಳ ಹಿಂದೆ ಎತ್ತಿದ ಈ ಫಂಡಿನ ಸುವಿನಿಯೋಗವು ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ಗೌಡ ಸಾರಸ್ವತ ವೃಂದಕ್ಕೆ ಸಂಬಂಧಪಟ್ಟ ಶ್ರೀ ಕೋದಂಡರಾಮ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವರೆ ಕೆಲಸಕ್ಕೆ ತಗಲಿಸುವುದು ಅತಿ ಶ್ಲಾಘನೀಯವು ಎಂಬುದು ನನ್ನ ಅಭಿಪ್ರಾಯವಾಗಿರುತ್ತದೆ.

ಬಂಟ್ವಾಳ ನಿವಾಸಿ

+ + + +

ಅಯ್ಯಾ ಸ್ವದೇಶಾಭಿಮಾನಿಯೇ,

ಮಾನ್ಯ ಡಿ ಬೋರ್ಡ್ ಪ್ರೆಸಿಡೆಂಟರು ಗದ್ದುಗೆಯನ್ನು ಹತ್ತಿ ಹೆಚ್ಚು ಸಮಯವಾಗಲಿಲ್ಲವಾದರೂ ಈಗಲೇ ಅವರು ತಮ್ಮ ಕಾರ್ಯಸಾಮರ್ಥ್ಯವನ್ನು ತೋರಿಸಿ ವಿಜಯ ಪತಾಕೆಯನ್ನು ಹಾರಿಸಿಕೊಳ್ಳಲೋಸುಗ ನಮ್ಮ ಬಡ ಮೂಡಬಿದ್ರೆಯ ಮೇಲೆ ತಮ್ಮ ಗದಾಪ್ರಹಾರವನ್ನು ಮಾಡಲೆಳಸಿರುವರು. ಮೂಲ್ಕಿಯ ಪುರೀಣರು ಅವರಲ್ಲಿಯೂ ರಾಜಪುಂಜರು ಅಲ್ಲಿಗೆ ಒಂದು ಹೈಸ್ಕೂಲನ್ನು ತರಿಸಲು ಈ ವರೆಗೆ ಮಾಡಿದ ಭಗೀರಥ ಪ್ರಯತ್ನಗಳು ಫಲಿಸದೆ ಇದ್ದರೂ ಧೈರ್ಯಗೆಡದೆ ತಮ್ಮವರೇ ಪ್ರೆಸಿಡೆಂಟರಾಗಿರುವ ಈ ಸುಸಂಧಿಯನ್ನು ಕಳಕೊಳ್ಳಬಾರದೆಂದು ಟೊಂಕ ಕಟ್ಟಿಕೊಂಡು ನಮ್ಮ ಶಾಲೆಯನ್ನು ತೆಗಿಸುವವರಾಗಿ ವರ್ತಮಾನವಿದೆ. ನೀನಾದರೂ ಈ ಕೆಲಸವನ್ನು ತಡಿಸಲು ಪ್ರಯತ್ನಿಸುವೆಯಾ?

ಮೂಲ್ಕಿಯಲ್ಲಿ ೬೦೦ ಯಾ ೮೦೦ ಹುಡುಗರಿರುವರಂತೆ ಅವರಿಗೆ ಹೈಸ್ಕೂಲ್ ಬೇಕಂತೆ. ಮಿಡ್ಲ್ ಸ್ಕೂಲು ಬೇಕೋ ಎಂದು ಗೊತ್ತಾಗುವುದಿಲ್ಲ. ಅಲ್ಲಿ ಮೊದಲಿದ್ದ ಮಿಶ್ಯನ್ ಮಿಡ್ಲ್ ಸ್ಕೂಲಿಗೆ ಹುಡುಗರಿಲ್ಲದೆ ಅವ ಎ ಮುಚ್ಚಬೇಕಾಯಿತು. ಹಾಯರ್ ಎಲಿಮೆಂಟರಿ ಶಾಲೆಯಿಂದ ಫೋರ್ಥ್ ಫಾರ್ಮಿಗೆ ಹೋಗಬೇಕಾಗಿ ಅಭಿಲಾಷೆ. ಹಾಗೆ ಮಾಡಿಕೊಳ್ಳಲಿಕ್ಕೆ ಅವರಿಗೆ ಸಾಧ್ಯವಿದ್ದರೆ ನಮ್ಮ ಮಿಡ್ಲ್ ಶಾಲೆಯನ್ನಾದರೂ ಏತಕ್ಕೆ ತೆಗೆಯಬೇಕು? ನಮ್ಮಲ್ಲಿ ಊರಿನಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆ ಇರುವುದು ಮಾತ್ರವಲ್ಲ. ಹತ್ತಿರದ ಮತ್ತೊಂದೆಡೆ ಇನ್ನೊಂದು ಹಾಯರ್ ಎಲಿಮೆಂಟರಿ ಶಾಲೆಯೂ ಇದೆ. ಆದರೂ ನಮ್ಮ ಮಕ್ಕಳಿಗೆ ಹಾಯರ್ ಎಲಿಮೆಂಟರಿ ವಿದ್ಯಾಭ್ಯಾಸದಿಂದ ತೃಪ್ತಿ ಪಡುವ ಮನಸಿಲ್ಲ. ಸೆಕೆಂಡರಿ ವಿದ್ಯಾಭ್ಯಾಸ ಬೇಕಾಗಿದೆ. ಆದ್ದರಿಂದ ಮಿಡ್ಲ್ ಸ್ಕೂಲಿನ ಹುಡುಗರ ಸಂಖ್ಯೆ ಈ ವರೆಗೂ ಒಂದು ವರ್ಷವಾದರೂ ಕಡಿಮೆಯಾಗಿಲ್ಲ. ಬಹಳ ಕಮ್ಮಿಯಾಗಿಲ್ಲವೆಂಬುದೇನೋ ನಿಜ. ಹಾಯರ್ ಎಲಿಮೆಂಟರಿ ವಿದ್ಯಾಭ್ಯಾಸದ ಉದ್ದೇಶವೇ ಬೇರೆಯಲ್ಲವೇ? ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ೬೦೦ ಯಾ ೮೦೦ ಹುಡುಗರಿದ್ದಾರೆಂದು ಮಿಡ್ಲ್ ಸ್ಕೂಲು ಮಾಡಿದರೆ ಮೂಲ್ಕಿಯಲ್ಲಿ ಎಷ್ಟು ಜನರ ಸೇರುವರೆಂದು ಮೊದಲು ಆಲೋಚಿಸಬೇಕಾಗಿದೆ. ಮಿಡ್ಲ್ ಸ್ಕೂಲಿನ ಸಂಬಳಕ್ಕೂ ಅದರ ಸಂಬಳಕ್ಕೂ ರಾತ್ರಿಹಗಲಿನಂತಿಲ್ಲವೇ?

ಆದುದರಿಂದ ನಮಗಿರುವ ಮಿಡ್ಲ್ ಸ್ಕೂಲನ್ನು ತೆಗೆಯುವ ಆಲೋಚನೆಯನ್ನು ಮಾನ್ಯ ಪ್ರೆಸಿಡೆಂಟರು ಮಾಡದೆ ಇದ್ದರೆ ಮೂಡಬಿದ್ರೆಯವರೆಲ್ಲರೂ ಚಿರಕಾಲವೂ ಅವರಿಗೆ ಋಣಿಗಳಾಗುತ್ತೇವೆ.

ಮೂಡಬಿದ್ರೆಯ ನಿವಾಸಿ

## “ವಿದಾಯ ವಿಚಾರ”

ದಿವಂಗತ ಶ್ರೀಮಾನ್ ಆರ್ ತಾತಾಚಾರ್ಯರ ಅನಿರೀಕ್ಷಿತ ನಿಧನವು ಕನ್ನಡ ವಾಙ್ಮಯ ತಪೋಧನರ ಮುಖಾಂತ್ರಗಳ ವಾಹಿನಿಯೊಂದನ್ನು ಉಗಮಿಸಿ ಭಾಷಾಕ್ಷೇತ್ರವಾಸಿಗಳ ಹೃದಯದ ವಿಷಾದವನ್ನು ಪ್ರವಹಿಸಿತು. ಸಾಹಿತ್ಯಸಿಕಂದರಿಯ ಮುಖದಿಂದ ಏಳಿಗೆಯು ಮೊದಲಾಗುವಾಗಲೇ ಅಳಿಯ ಅದೊಂದು ಅಭರಣ ರತ್ನವು ಕಳೆದು ಹೋಯಿತು. ಯದ್ಯಪಿ ವಿಧಿವಿಲಾಸದಲ್ಲಿ ಇದೇನು ಹೊಸ ವಿಷಯವಲ್ಲ. ಸುಕೃತಿಯು ಗತಾಯುವಾಗುವದು ನಮ್ಮ ನಾಡಿಗೆ ರೂಢವಾದ ಅನುಭವ. ಆದರೆ ಗತಗೋಷ್ಠಿಯ ಪ್ರಲಾಪದಿಂದ ಶೋಕ ಸಮುದ್ರವನ್ನು ದಿಕ್ಕೆಳಿಸಿ ಕಾರ್ಯವಿಲ್ಲ. ಉಳಿದಳಿವವರಿಗಿಂತ ಅಂದುಳಿವಗರು ಕೃತಾರ್ಥರು. ಕೀರ್ತಿಶೇಷರು ನಮ್ಮ ಜಿಲ್ಲೆಯ ವಿದ್ಯಾಖಾತೆಯ ಮೇಲಾಧಿಕಾರಿಯಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಉದ್ದಾಮ ಪಾಂಡಿತ್ಯದ ಆದರ್ಶರಾಗಿ, ಪ್ರಬಲವಾದ ಭಾಷಾವಿಶಾರದರಾಗಿ ಇನ್ನು ಸುಚಿತ್ರವು ಸ್ಮರಣಾರ್ಹರಾಗಿ ಮಾತ್ರ ಪರಿಚಿತರಲ್ಲ. ಪ್ರಾಥಮಿಕ ವಿದ್ಯಾವ್ಯವಸಾಯದ ಸುಪಥವನ್ನು ಅನ್ವೇಷಿಸುವ ಮಹದಾಕಾಂಕ್ಷೆಯುಳ್ಳ ಧ್ಯೇಯಮಯವಾದ ತತ್ಪ್ರಬೋಧಿನಿಯೂ ಎಂಬಂತೆ ಹಿಂದೊಮ್ಮೆ “ಬೋಧಿನಿ” ಎಂಬ ನಾಮಾಂಕಿತದಿಂದ ಯಾವ ಉಚ್ಚ ಮಾಸ ಪತ್ರಿಕೆಯೊಂದು ಸಂಕೇತಿಸಿತ್ತು, ಯಾವ ಘನ ಸಮಸ್ಯೆಯ ಜೀವಾಳವನ್ನು ಬಗೆದು ಜನ್ಮವೆತ್ತಿ ಆ ಹಿಂದಿನ ಉದ್ಯಮವನ್ನು ಸಾಗಿಸಿ ಕೆಲಕಾಲವಿದ್ದು ಬಿದ್ದು ಹೋದರೂ ಸಮರ್ಥ ಸಂಗ್ರಹಾರ್ಹವಾದ ಜ್ಞಾನಾಕಾಶದ ಪ್ರಭೆಯನ್ನು ಯಾವ ಪತ್ರಿಕೆಯು ಅಂದು ಝಳಪಿಸಿತ್ತೋ ಆ ಅಸೀಮ ಯಶೋವೈಶಾಲ್ಯವೆಲ್ಲಾ ಚಿರಸ್ಥಾಯಿಯಾಗಲು ಅನುಕೂಲರಾದವರಲ್ಲಿ ತಾನೋರ್ವನಾಗಿ ಅನುಪಮೋತ್ತಮ ಲೇಖನಗಳನ್ನು ಬರೆದು ತನ್ನ ಭಾವನಾಕಾಶವನ್ನು ಅವಾಗಲೇ ರೂಪಿಸಿ ವಿಪನ್ನರನೇಗಳಿಂದ ಸದೆಬ್ಬಿಳಿಯ ಹಾಗೂ ಅಲ್ಪಜ್ಞರಿಂದ ಬಡ ಅಧ್ಯಾಪಕರುಗಳ ಯಾಕೆ? ಜಗದ ಜಾಗ್ರತಿಯನ್ನು ಜಪಿಸುವ ಬುಧಸಂದೋಹದ ಜನೋ ಮೂರ್ತಿಯಾಗಿ ಹೋದರು. ಅಂತೆಯೆ ‘ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್। ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ’ ಎನ್ನುವ ಭಗವದ್ಗೀತಾ ವಾಕ್ಯವು ಇವರ ಜೀವಾನುಭವಸಾರಾಂಶವೆಂದರೆ ಹೆಚ್ಚಾಗದು. ಪ್ರಾಪಂಚಿಕ ವ್ಯವಹಾರದ ಮಾನವ ಧರ್ಮ ಸಂಬಂಧವಾದ ಕರ್ತವ್ಯ ನಿರ್ವಾಹದಲ್ಲಿ ತಾನೇ ಬೋಧಾವಿಯಾಗುವ ಉದ್ವೇಗವಂತೂ ಅವರನ್ನು ಅಚಿತ್ರ ಅಸ್ಪೃಶ್ಯರನ್ನಾಗಿಯೇ ಇರುತ್ತಿತ್ತು. ಆ ಭಾಗದಲ್ಲಿ ಅವರು ಅಪಬಾದದ ಹಬ್ಬಾಸಕ್ಕೆ ಗಂಟು ಬಿದ್ದುದು ಪಲ ಇಲ್ಲ. ಆಚಾರನಿಷ್ಠರಿಗೆ ತಾತಾರರು ಆಚಾರ್ಯರೇ ಆಗಿದ್ದರು. ವಿದ್ವತ್ತೆಯಲ್ಲಿ

ಅಯ್ಯಾ ಸ್ವದೇಶಾಭಿಮಾನಿಯೇ,

ಕಳೆದ ತಿಂಗಳ ೨೯ನೇ ತಾರೀಕಿನ ಸಮಯಗದ “ಅಲ್ಲಲ್ಲಿಯ ಸೊಲ್ಲು”ನಲ್ಲಿ ಬರೆದ ಹೊಸ ಡಿ. ಬೋ ಪ್ರೆಸಿಡೆಂಟರ ಸ್ತುತ್ಯ ಉಪಕ್ರಮವನ್ನು ಓದಿದಂದಿನಿಂದ ಈ ಕೆಲವು ಮಾತುಗಳನ್ನು ಬರೆಯುವ ಆತುರತೆಯು ನನ್ನಲ್ಲಿ ಹುಟ್ಟಿದೆ. ಶಿಕ್ಷಣ ಪಕ್ಷಪಾತಿಯಾದ ಹೊಸ ಡಿ ಬೋ ಪ್ರೆಸಿಡೆಂಟರು ಅಧ್ಯಾಪಕರುಗಳ ಪರಿಷತ್ತನ್ನು ನಡೆಸಿದುದು ಪ್ರಶಂಸನೀಯವೇ ಸರಿ. ಆದರೆ ಅವರು ಪರಿಷತ್ತಿನ ಆರಂಭದಲ್ಲಿಯೂ ಕೊನೆಯಲ್ಲಿಯೂ ಒತ್ತಿ ಹೇಳಿದ ಕೆಲವು ವಿಷಯವು ಚರ್ಚಾಸ್ಪದವಾಗಿದೆ ಮಾತ್ರವಲ್ಲ ಕೆಲವು ತಪ್ಪು ಗ್ರಹಿಕೆಯಿಂದ ಮಾಡಲ್ಪಟ್ಟವಾಗಿವೆ.

ಹಲವು ಶಾಲೆಗಳಲ್ಲಿ ಸ್ಟಾಫು ಮಾಸ್ತರರಿದ್ದರೂ ಸ್ಟಾಫುದ್ದಕ್ಕೆ ಇಲ್ಲ. ನಿಜ, ಆದರೆ ಇದರ ಕಾರಣಗಳೇನೆಂಬುದನ್ನು ಪರಿಶೀಲಿಸಿ ಅವನ್ನು ಹೋಗಲಾಡಿಸಲು ಏಕೆ ಪ್ರಯತ್ನಿಸುವುದಿಲ್ಲ. ಇದೇ ನಮ್ಮ ಜಿಲ್ಲೆಯಲ್ಲಿ ಎಲ್ಲರಿಂದಲೂ ಸನ್ಮಾನಿಸಲ್ಪಟ್ಟು ಯೋಗ್ಯ ಕೆಲಸವನ್ನು ಮಾಡುತ್ತಿದ್ದ ಕುಂದಾಪುರದಲ್ಲಿನ ದಳವು ಥಕ್ಕನೆ ನಿರ್ನಾಮವಾಗಲು ಕಾರಣವೇನೆಂದು ಹುಡುಕಿ ತೆಗೆಯಲಿಲ್ಲವೇಕೆ?

ವಿದ್ಯಾರ್ಥಿಗಳ ಮೆಗೆಜಿನ್ ಇಲ್ಲವೆಂಬುದು ಖರೆ ಆದರೆ ಪುತ್ತೂರು ತಾಲೂಕಿನಲ್ಲಿನ ಶಾಲೆಗಳಲ್ಲಿ ತಯಾರಾಗುವ ಮೆಗೆಜಿನಗಳನ್ನು ಮಾದರಿಯಾಗಿ ತೋರಿಸಿ ಮಾತನಾಡುವುದು ಯೋಗ್ಯವೆ? ಪ್ರೆಸಿಡೆಂಟರ ಹೆದರಿಕೆಯಿಂದಲೂ ಅಥವಾ ವೆಲ್ಫೇಸರರ ಪ್ರೀತಿಯನ್ನು ಹೊಂದುವುದಕ್ಕಾಗಿಯೂ ತಾವು ಟ್ರೈನಿಂಗ್ ಶಾಲೆಯಲ್ಲಿ ಕಲಿತ ಕೆಲವು ವಿಷಯಗಳನ್ನು ಬಹಿರಂಗ ಪಡಿಸುವುದಕ್ಕಾಗಿ ಮಾಡುವ ಮೆಗೆಜಿನುಗಳಿಗೆ ವಿದ್ಯಾರ್ಥಿಗಳ ಮೆಗೆಜಿನೆಂದು ನಾಮಕರಣ ಮಾಡಿದ ಕೂಡಲೇ ಅವು ಶ್ಲಾಘನೀಯವೆ? ನಿಜವಾಗಿಯೂ ವಿದ್ಯಾರ್ಥಿಗಳ ಸ್ವತಃ ಶಕ್ತಿಯನ್ನು ತೋರಿಸಿದರೆ ಆದೀತು. ಆದರೆ ಹಾಗೆ ಆಗುವುದು ಸಾಧ್ಯವೇ ಎಂದು ಆಲೋಚಿಸಬೇಕು.

ಬರುವ ಎಪ್ರಿಲಿನೊಳಗೆ ಅಭಿಮಾನದಿಂದ ಎತ್ತಿ ಹೇಳುವ ಕಾರ್ಯವೇನನ್ನಾದರೂ ಅಧ್ಯಾಪಕರು ಮಾಡದಿರಲಾರರೆಂದು ತೋರುವುದು ತೀರ ಅಸಂಭವನೀಯ. ಅಧ್ಯಾಪಕರುಗಳ ನಿಜವಾದ ಕೆಲಸವು ಕೆಲವು ತಿಂಗಳುಗಳಲ್ಲಿ ತೋರಿ ಬರುವಂತಾದ್ದಲ್ಲ ಮಾತ್ರವಲ್ಲ ಅದನ್ನು ಯೋಗ್ಯಾಯೋಗ್ಯವೆಂದು ತಕ್ಕಡಿಯಲ್ಲಿಟ್ಟು ಹೋಲಿಸುವಂತಾದ್ದೂ ಅಲ್ಲ.

ಪಾಠಪಟ್ಟಿಯಲ್ಲಿ ಅಧ್ಯಾಪಕರು ತೋರಿಸುವ ಆಸಕ್ತಿಯು ಪರರಿಗೆ ತಿಳಿಯುವಂತಾದ್ದಲ್ಲ. ಇತರರ ಮನಸ್ಸನ್ನು ಆಕರ್ಷಿಸಿಕೊಳ್ಳುವುದಕ್ಕಾಗಿ ಪಾಠಪಟ್ಟಿಗಳ ಹೊರಗಣ ಚಟುವಟಿಕೆಯಲ್ಲಿ ಆಸಕ್ತಿಯನ್ನು ತೋರಿಸಲು ಮೊದಲು ಮಾಡಿದರೆ ಪಾಠಪಟ್ಟಿಯಲ್ಲಿನ ಆಸಕ್ತಿಯು ಕಡಿಮೆಯಾಗುತ್ತಾ ಕ್ರಮೇಣ ಪಾಠಪಟ್ಟಿಯಲ್ಲಿ ಅನಾಸಕ್ತಿಯುಂಟಾಗುವ ಸಂದರ್ಭವಿದೆ. ಆದರೆ ಇದು ಯಾರಿಗೂ ಥಕ್ಕನೆ ತಿಳಿಯಲಿಕ್ಕೆ ಆಸ್ಪದವಿಲ್ಲ.

ಮಾನ್ಯ ಪ್ರೆಸಿಡೆಂಟರಿಗೆ ಅಧ್ಯಾಪಕರಿಗೆ ಹೆಚ್ಚು ಸಂಬಳವಿದೆ ಆದರೆ ಅವರು ಅದನ್ನು ಶಾಲೆಯ ಉಪಯೋಗಕ್ಕಾಗಿ ವಿನಿಯೋಗಿಸುವುದಿಲ್ಲ ಎಂಬ ಅಭಿಪ್ರಾಯವಿರುವುದಾಗಿ ಅವರ ಮಾತುಗಳಿಂದ ಕಂಡು ಬರುತ್ತಿದೆ. ಆದರೆ ಅವರಿಗೆ ಸಿಕ್ಕುವ ಅಲ್ಪ ಸಂಬಳವನ್ನು ಶಾಲೆಯ ವಿನಿಯೋಗಕ್ಕಾಗಿಯೂ District ಅಥವಾ Provincial Tour ಗಳಿಗಾಗಿಯೂ ಉಪಯೋಗಿಸಿದರೆ ಉದರಪೋಷಣೆಗೆ ಅವರು ಗತಿಯೇನು? ಹಿರಿಯರು ಆತಿಥ್ಯವನ್ನು ಮಾಡಿದರೆ ಬಡ ಅಧ್ಯಾಪಕರು ಏನು ಮಾಡಬಹುದು?

ಎಲ್ಲಾ ಡಿ. ಬೋ ಶಾಲೆಗಳ ಪೈಕಿ ಮಾನ್ಯ ಪ್ರೆಸಿಡೆಂಟರಿಗೆ ಒಂದು ಶಾಲೆಯ ವಿಷಯ ಯೋಗ್ಯ ಅಭಿಪ್ರಾಯವಿದೆಯಲ್ಲವೇ? ಹಾಗಾದರೆ ಆ ಶಾಲೆಯನ್ನು ಊರ್ಜಿತ ಸ್ಥಿತಿಗೆ ತಂದ ಅದರ ಮುಖ್ಯ ಅಧ್ಯಾಪಕರನ್ನು ಜಿಲ್ಲೆಯ ಪ್ರತಿಯೊಂದು ಶಾಲೆಯಲ್ಲಿಯೂ ಒಂದೊಂದು ವರ್ಷವಾದರೂ ವರ್ಗಾಯಿಸಿದರೆ ಎಲ್ಲಾ ಶಾಲೆಗಳಿಗೂ ಪ್ರಯೋಜನ ಸಿಕ್ಕೀತಲ್ಲವೇ?

ಅಧ್ಯಾಪಕರನ್ನು ಐದೈದು ವರ್ಷಕ್ಕೆ ಒಂದು ಸಲವಾದರೂ ವರ್ಗಾಯಿಸದೆ ಒಂದೇ ಶಾಲೆಯಲ್ಲಿ ಹತ್ತು ಹದಿನೈದು ವರ್ಷಗಳವರೆಗೆ ಇಟ್ಟರೆ ಅದರಿಂದ ಪ್ರಯೋಜನವೋ ಅಪ್ರಯೋಜನವೋ ಎಂಬುದನ್ನು ಪ್ರತ್ಯೇಕ ಹೇಳುವುದು ಅವಶ್ಯವಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿಗೆ ಎಷ್ಟು ಶಾಲೆಗಳಿವೆ. ಒಬ್ಬ ಅಧ್ಯಾಪಕನು ತನ್ನ ಸರ್ವಿಸಿನಲ್ಲಿ ಎಲ್ಲಾ ಶಾಲೆಗಳಲ್ಲಿಯೂ ಕೆಲಸ ಮಾಡುವಂತಾದರೆ ಉತ್ತಮವಲ್ಲವೇ?

ಮಾನ್ಯ ಡಿ ಬೋ ಪ್ರೆಸಿಡೆಂಟರ ಆಳುವಿಕೆಯಲ್ಲಿ ಎಲ್ಲಾ ಶಾಲೆಗಳೂ ಅಧ್ಯಾಪಕರೂ ಊರ್ಜಿತ ಸ್ಥಿತಿಯನ್ನು ಹೊಂದಲೆಂದು ಪ್ರಾರ್ಥಿಸುವ.

ಕೆ ಯಸ್ ಶೆಟ್ಟಿ

---

ಮುಂದಿನ ಮುಂದಿನ, ಕರ್ನಾಟಕದ ಸಮರ್ಥ ರೋವರ್‌ರು ಕ ಲ ಬಾದರು ವೃದ್ಧಿಪ್ಪದಲ್ಲಿ

“ಗರೀಯಸೀ ಕೇವಲ ಧೂಸ್ಪರೇಚ್ಛಾ” ಆರ್ಯವರ್ಯರ ಆಕೃತಿ ಶಾಂತಿನಿಕೇತನನು ಸಾಯುಜ್ಯವೀಯಲಿ

ಯಂ ದೇವರಾವ್,
ಟೀಚರ್ ಪಡುಬಿದ್ರಿ

+ + + +

ನಾಳೆ— ಈ ದಿನ—
ನಿಮಗೆ ಬೇಕಾದುದು!
# ರಬ್ಬರ್ ಮೊಹರುಗಳು
ಬ ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ; ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳೆ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ

ವಿ ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು.

ಹೆಡ್ ಆಫೀಸು:—
ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No 2 ಬಲ್ಮಠ ರಸ್ತೆ, ಮಂಗಳೂರು,
ದ ಕನ್ನಡ.



# 1933.

1933ನೇ ಇಸವಿಯ
# ಸುಂದರವಾದ
# ಬ್ಯಾಂಡಿನ
ಮತ್ತು
# ಕಾಗದದ
ಸಣ್ಣ ಸ್ಯಾಜು ಮತ್ತು ದೊಡ್ಡ ಸ್ಯಾಜು
# ಡೈರಿಗಳು.

ಶಾರದಾ ಛಾಪಖಾನೆ.
ಮಂಗಳೂರು

ಇಲ್ಲಿಗೆ ಬರೆದುಕೊಳ್ಳಿರಿ



## S U N & CO.
*Choukhamba Benares City*

**ಮೂರು ಇನಾಮುಗಳು.**

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಶ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀಪಟ್ಟಿ, 1 ಕೆಟಲಾಗಿನೂ ಡನೆ 3 ಇನಾಮುಗಳು.

ವಿಳಾಸ:—
**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಿಸ್ (ಕಾಶೀ)**



ಕೇಸರಿಯವರ
# ಲೋಧ್ರ
## ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ,ಬಹಿಷ್ಠೆಯಾಗದಿರುವುದು, ಅಕಾಲ ಬಹಿಷ್ಠೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ ೩—೦—೦
ಸಣ್ಣ ಬಾಟಲ್ ೬ ಔನ್ಸ್ ರೂ ೧—೧೦—೦.

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರಂ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಮತ್ತೂ ವಿಶೇಷವೇನೆಂದರೆ, ಹೈದರಾಬಾದಿನಲ್ಲಿ ಅರಸರು ಮುಸಲ್ಮಾನರಾಗಿದ್ದು, ಪ್ರಜೆಗಳಲ್ಲಿ ಬಹುಸಂಖ್ಯಾಕರು ಹಿಂದೂಗಳಾಗಿದ್ದು, ಹಿಂದೂಗಳ ಮೇಲಿನ ಅಲ್ಲಿನ ಆಡಳಿತವು ಸಮಾಧಾನಕರವಲ್ಲದಿದ್ದರೂ, ಅಲ್ಲಿ ಹಿಂದೂಗಳ ಯಾವ ತೊಂದರೆಯೂ [illegible] ಎಷ್ಟು ಮಾತ್ರ ಅನುಭವಿಸುತ್ತಿಲ್ಲ [illegible]. ಆದರೆ ಈ ರೀತಿಯಲ್ಲಿ ಹಿಂದೂಗಳು ಪರಾಜಯವನ್ನಪ್ಪಿದರೆ, ಮುಂದೇನಿಯು ವದಾದರೆ ಹಿಂದೂಗಳ ಭವಿತವ್ಯವೇನು?

ಅಲ್ವಾರಿನ ದಂಗೆಯು ಬಹಳ ಮಟ್ಟಿಗೆ ಘೋರವಾಯಿತು. ಅದನ್ನು ಅಲ್ವಾರಿನ ಮಹಾರಾಜರಿಂದ ಅಡಗಿಸಲಾಗಲಿಲ್ಲ. ಅದಕ್ಕಾಗಿ ಬ್ರಿಟಿಷ ಸಹಾಯವನ್ನು ಪಡೆಯಬೇಕಾಯಿತು. ಇನ್ನು ವಾಗ ಮಹಾರಾಜರ ಸೈನ್ಯ ಶಕ್ತಿಯೂ, ಪೋಲೀಸಪಡೆಯ ಶಕ್ತಿಯೂ ಎಷ್ಟು ನಿರ್ಬಲವಿರಬೇಕು! ಈ ರೀತಿ ದಂಗೆಯೇಳುವ ಮೊದಲು ಸನ್ನಾಹವಾಗಲೀ, ತಳಮಳವಾಗಲೀ ನಡೆಯುತ್ತಿರಲಿಲ್ಲವೇ? ಅದನ್ನು ರಾಜರ ಸರಕಾರವು ಲಕ್ಷಿಸಿಲ್ಲವೇ? ಕಾಶ್ಮೀರ ದೇಶದ ಪಾಠವು ಮುಂದಿರುವಾಗ, ಅಲ್ವಾರವು ಸಾಮಾನ್ಯ ಜನತೆಗೆ ದಂಗೆಯೇಳಲು ಕಾರಣ ಕೊಟ್ಟದ್ದೂ, ಅವರು ದಂಗೆಯೇಳುವ ಮೊದಲೇ ಪೂರ್ವ ಚಿಹ್ನೆಯನ್ನು ತಿಳಿಯದೆ ಇದ್ದದ್ದೂ ಆಶ್ಚರ್ಯವಾಗಿದೆ.

ಇದರಿಂದ ಹಲವು ಮುಖ್ಯ ವಿಷಯಗಳು ಹೊರಗೆಡಹುವವು. ಮೊದಲನೆಯದಾಗಿ ಹಿಂದೂಗಳು ಎಚ್ಚರರಾಗಬೇಕು, ಅವರ ನಿಷ್ಕರ್ಮ ಸಹಿಷ್ಣುತೆಯು ಹೇಡಿತನಕ್ಕೆ ಮುಟ್ಟುತ್ತದೆ. ಅವರು ಸ್ವಂತ ಶಕ್ತಿಯಿಂದ ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಎರಡನೆಯದಾಗಿ, ಆಶ್ರಿತ ರಾಜರು ತಮ್ಮ ರಾಜ್ಯಾಡಳಿತದಲ್ಲಿ ಜನತೆಗೆ ಹಿತಕರವಾಗುವ ರೀತಿಯಲ್ಲಿ ಸಂಪೂರ್ಣ ಭಾಗವನ್ನು ವಹಿಸಿ ತಮ್ಮ ವಿಲಾಸ ಭೋಗಗಳನ್ನು ಬಿಟ್ಟು ಕೊಡಬೇಕು. ಇವೆರಡೂ ಈ ದಂಗೆಯಿಂದ ಹೊರಡತಕ್ಕ ವಿಷಯಗಳು.

ಈ ದಂಗೆಗಳಲ್ಲಿ ಬ್ರಿಟಿಷ ಹಿಂದೂಸ್ಥಾನದ ಮುಸಲ್ಮಾನರು ಸಹಾನುಭೂತಿಯನ್ನು ತೋರಿಸುತ್ತಾರೆ. ಈ ಅಲ್ವಾರಿನ ದಂಗೆಯಲ್ಲಿ ಹೊರಗಿನವರ ಕೈ ಎಷ್ಟರ ಮಟ್ಟಿನಿಂಬಹುದೆಂದು ತಿಳಿಯುವುದೂ ಅವಶ್ಯಕ. ಬ್ರಿಟಿಷ ಸರಕಾರವೂ ಒಂದು ಸ್ಪಷ್ಟ ಧೋರಣವನ್ನು ಇಟ್ಟುಕೊಳ್ಳದೆ ಒಂದು ಜಾತಿಯ ಎದುರಾಗಿ ಇನ್ನೊಂದು ಜಾತಿಯನ್ನು ತಪ್ಪಿಡುವ ವರೆಗೆ ಹಿಂದೂಸ್ಥಾನದ ಜಾತೀಯ ಗೊಂದಲಗಳು ನಿವಾರಣೆಯಾಗುವುದು ಅಸಂಭವನೀಯವಾಗಿದೆ.

## ವಿದೇಶ ವರ್ತಮಾನ.

—ಐರ್ಲೆಂಡಿನಲ್ಲಿ ಡಿ'ವೆಲರಾರವರಿಗೆ ವಿರುದ್ಧವಾಗಿ ಕೊಸ್‌ಗ್ರೇವರು ೪೦,೦೦೦ ಜನಮಧ್ಯೆ ಒಂದು ಭಾಷಣ ಮಾಡುತ್ತಾ ಐರ್ಲೆಂಡು ಬ್ರಿಟಿಷರ ಆಶ್ರಯದಲ್ಲಿರುವುದುತ್ತಮವೆಂದು ಕಣ್ಣುಮುಚ್ಚಿ ಹೇಳಿದರು. ಕೂಡಲೇ ಗಲಾಟೆಯಾಗಿ ಕೆಲವರು ಜಖಂಗೊಂಡರು.

—"ನಾವು ಮುಂದುವರಿಯೋಣ! ನಮಗೆ ನಮ್ಮ ಮಿತ್ರ ರಾಷ್ಟ್ರಗಳು ಸಹಾಯ ಮಾಡದಿರವು" ಎಂದು ಜಪಾನೀ ಸರಕಾರವು ಚೀನಿಯರ ಮೇಲೆ ಬೀಳಬೇಕೆಂದು ಧೈರ್ಯದಿಂದ ಹೇಳಿದೆ. ಚೀನವೂ ಹೀಗೆಯೇ ಎದೆಯೊಡ್ಡಿದೆ.

—ಪ್ರಪಂಚದಲ್ಲಿ ಕಾಲೂರಿನಿಂತಿರುವ ಆರ್ಥಿಕ ಸಂಕಷ್ಟ ಪರಿಹಾರಾರ್ಥವಾಗಿ ಏನಾದರೊಂದು ಯೋಜನೆಯನ್ನು ಮಾಡದಿದ್ದರೆ ಗತ್ಯಂತರವಿಲ್ಲವೆಂದು ಅಮೇರಿಕದಲ್ಲಿ ಕೊಲೊಂಬಿಯಾ ಯುನಿವರ್ಸಿಟಿಯ ಅಧ್ಯಕ್ಷರಾದ ಡಾ ನಿಕೋಲಾಸ್ ಮುರ್ರೇ ಬಟ್ಲರ್ ಎಂಬವರು ೧೭ ಜನ ಅರ್ಥಶಾಸ್ತ್ರಜ್ಞರ ಒಂದು ಸಮಿತಿಯನ್ನೇರ್ಪಡಿಸಿ ವಿಚಾರಣೆ ನಡೆಸುವಂತೆ ವ್ಯವಸ್ಥೆ ಮಾಡಲಿರುವರು.

—ಸ್ವಿಜರ್‌ಲೆಂಡಿನಲ್ಲಿ ೬೦೦೦ ಅಡಿಗಳ ಎತ್ತರದಲ್ಲಿ ಹಾರುತ್ತಿದ್ದ ಹೆರ್ಕ್ಲರ್ ಎಂಬ ವೈಮಾನಿಕನು ತನ್ನ ವಿಮಾನ ಸಮೇತ ಕಾಣೆಯಾಗಿರುವನು. ಹುಡುಕುತ್ತಿದ್ದಾರೆ.

—ಫೈನ್‌ಲೆಂಡ್ ಎಂಬಲ್ಲಿ ಯುವಕ ಸಂಘದಲ್ಲಿ ಸೇರಿ ರಾಜಕೀಯ ಕೆಲಸದಲ್ಲಿ ಕೈಹಚ್ಚಿದ ೭೮ ಮಂದಿ ಕಮ್ಯೂನಿಸ್ಟರ ವಿಚಾರಣೆಯಾಗುತ್ತದೆ. ಇವರಲ್ಲಿ ಹೆಚ್ಚಿನವರು ತರುಣಿಯರು.

—ಲ್ಲೊಯಿಡ್ ಜೋರ್ಜರು ಲಿಬರಲ್ ಪಕ್ಷದವರಿಂದ ಮೊನ್ನೆ ಸಂಪೂರ್ಣವಾಗಿ ಹೊರಗೆ ನಿಂತು, "ಯಾವ ಸರಕಾರವೂ ಸರಿ, ಕಾಲಕ್ಕೆ ತಕ್ಕ ಸುಧಾರಣೆಗಳನ್ನು ಮಾಡುವುದಾದರೆ ತಾನು ಸಹಾಯವನ್ನೀಯುವನು" ಎಂದರು.

—ಜರ್ಮನ್ ಸರಕಾರದವರು ಬಡ್ಡಿ ತಯಾರಿಗೋಸ್ಕರ ೩,೦೦,೦೦೦ ಬೀಳು ಬಿಟ್ಟ ಹುಲುಗಳು ಬೇಕಾಗಿವೆಯೆಂದು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

### ಬೇಲೂರು.

ಮೈಸೂರು ರೆಸಿಡೆಂಟರು ತಾ. ೫ರಲ್ಲು ಬೇಲೂರಿಗೆ ಬರುವುದನ್ನು ತಿಳಿದು ಮುನಿಸಿಪಾಲಿಟಿಯವರು ಟೌನನ್ನು ಬಹಳ ನಾಜೂಕಾಗಿ ಇಟ್ಟಿದ್ದರು. ಆದರೆ ರೆಸಿಡೆಂಟರು ಬರಲಿಲ್ಲವಾದುದರಿಂದ ನಿರಾಶರಾದರು. ಪಟ್ಟಣವನ್ನು ಸ್ವಚ್ಛವಾದರೂ ಆಯಿಂಗೆ ಕ್ರೇಮ ಎಂದು ತಿಳಿಯುತ್ತೇವೆ.

## ಒಳದೇಶ ವರ್ತಮಾನ.

—ದೇವಸ್ಥಾನ ಪ್ರವೇಶ ಬೀಲನ್ನು ಮಂಡೂರು ಮಾಡಬಹುದೆಂದು ಲಂಡನಿನ ಇಂಡಿಯಾ ಆಫೀಸು ವೈಸರಾಯರಿಗೆ ತಿಳುಹಿಸಿದೆಯಾಗಿ ತಿಳಿಯುಬರುತ್ತದೆ.

—ಮಿರ್ಜಾಪುರದಲ್ಲಿ ಕೊಲೆಮಾಡಲ್ಪಟ್ಟ ಕೇವ್ ಪತ್ರಿಯೆಂಬ ಮಜಿಸ್ಟ್ರೇಟರ ಪ್ರತಿಮೆಯು ತಾ. ೧೩ನೇ ದಿನ ಬಂಗಾಳದ ಗವರ್ನರರಿಂದ ಅನಾವರಣ ಮಾಡಲ್ಪಟ್ಟಿತು. ಗವರ್ನರರ ಆಗಮನದ ಗೌರವಾರ್ಥವಾಗಿ [illegible] ಯವರು ೧೦೦೦೦ ರೂಪಾಯಿಯ ದಾನ ಮಾಡಿದರು. ೨೦೦೦ ಬಡವರಿಗೆ ವರ್ತಕರು ಭೋಜನವಿತ್ತರು.

—ಲಾಹೋರಿನಲ್ಲಿ ತನ್ನ ಸಮಕ್ಷಮ ತನ್ನ ಮಗಳನ್ನು ವಿವಾಹವಾಗದಿದ್ದುದಕ್ಕೆ ಮೊಹದ್‌ವರಿಸ್ ಎಂಬ ಮಾವನು ತನ್ನ ಅಳಿಯನಿಗೆ ಹೊಡೆದು ವಿವಾಹ ವಿಚ್ಛೇದಮಾಡಬೇಕೆಂದು ಹೇಳಿದನು. ಅವನಿಗೆ ಒಂದೂವರೆ ವರ್ಷದ ಸಜೆಯಾಯಿತು.

—ದೇವಸ್ಥಾನ ಪ್ರವೇಶ ಬೀಲಿಗೆ ಅಪ್ಪಣೆಕೊಡಬಾರದೆಂದು ಅಹ್ಮದಾಬಾದಿನ ಮಿಲ್ ಮ್ಹಾಲಿಕ ಸಂಘದ ಸೇಟ ಚಿಮನ್‌ಲಾಲ್ ಗಿರಿಧರದಾಸ್ ಇವರು ವೈಸರಾಯರಿಗೆ ತಂತಿಬಿಟ್ಟು, ಅಪ್ಪಣೆಕೊಟ್ಟರೆ 'ಸಿವಿಲ್‌ಯುದ್ಧ'ವು ನಡೆದೀತೆಂದು ಎಚ್ಚರಿಕೆಯಿತ್ತರು. ಇದು ಗಾಂಧೀಜಿಯವರಿಗೆ ತಿಳಿದುಬಂದೊಡನೆ "ಯುದ್ಧ ಮಾಡಲಿಕ್ಕೆ ಎರಡು ಪಕ್ಷಗಳು ಬೇಕಷ್ಟೆ! ಸನಾತನಿಗಳೊಡನೆ ಹೋರಾಡುವವರೇ ಇಲ್ಲವಾದರೆ ಇವರೇನು ಕಾದಿಯಾರು?" ಎಂದರು.

—ಸನಾತನ ಧರ್ಮಕ್ಕೊದಗಿರುವ ಆಪತ್ತುಗಳನ್ನು ಹೋಗಲಾಡಿಸುವ ಯೋಜನೆಯನ್ನು ಮಾಡುವುದಕ್ಕಾಗಿ ಸನಾತನ ಧರ್ಮ ಮಹಾಸಭಾ ಅಧ್ಯಕ್ಷರಾದ ಮಾಲವೀಯರು ಎಲ್ಲಾ ಶಾಸ್ತ್ರಿಗಳ, ಸನಾತನಿಗಳ, ಪುರೋಹಿತರ, ಆಚಾರ್ಯರ ಒಂದು ಮಹಾಸಭೆಯನ್ನು ತಾ. ೨೫, ೨೬ ಮತ್ತು ೨೭ನೇ ದಿನ ಜರಗಿಸಬೇಕೆಂದು ಆಹ್ವಾನವಿತ್ತಿರುವರು.

—ಕೊಂಗ್ರೆಸ್ ಕೆಲಸವನ್ನು ನಡೆಸುತ್ತಿದ್ದುದಕ್ಕಾಗಿ ಕಾಶೀ ವಿದ್ಯಾಪೀಠದ ರಿಜಿಸ್ಟ್ರಾರರಾದ ಶ್ರೀ ಬೀರ್ಬಲ ಸಿಂಘರೆಂಬವರಿಗೆ ಒಂದು ವರ್ಷ ಕಠಿಣ ಸಜೆ, ಮತ್ತು ೧೦೦ ರೂಪಾಯಿ ದಂಡ ವಿಧಿಸಲಾಯಿತು.

—ತನ್ನ ೮ನೇ ವರ್ಷ ಪ್ರಾಯದಲ್ಲಿ ಕಿಸೆಕಳ್ಳತನಕ್ಕೆ ತೊಡಗಿ ೪೦ ವರ್ಷದ ತನಕ ಈ ವಿದ್ಯೆಯ ಪರಿಣಾಮವಾಗಿ ೧೬ ಸಲ ಜೈಲನ್ನನುಭವಿಸಿ ಅಹ್ಮದಾಬಾದಿನ ಬನ್ನಿ ಎಂಬ ಪೋಲಿಗೆಗಾರನೊಬ್ಬನು ೧೭ನೇ ಸಲವಾಗಿ ಮೊನ್ನೆ ೩ ವರ್ಷ ಕಠಿಣ ಸಜೆಗೊಳಗಾದನು.

—ಊರು ಬಿಡಬೇಕೆಂಬ ಆಜ್ಞೆಯನ್ನು ತನ್ನ ಆರ್ಥಿಕ ಕಷ್ಟದಿಂದಾಗಿ ಉಲ್ಲಂಘಿಸಿದ ಮುಂಬಾಯಿಯ ಶ್ರೀ ಆರ್ ಕೆ ಹರ್ಡಿಕರ್ ಎಂಬವರಿಗೆ ೧ ವರ್ಷ ಕಠಿಣ ಸಜೆ. ಇವರು 'ತಂಟೆ ಹೆಲ್ತ್ ಹೋಮ್'ನ ಸದಸ್ಯರು.

—ನಾಗಪುರದಲ್ಲಿ ೨೫ ಜನರು ಒಂದು ಲೋರಿಯಲ್ಲಿ ಸಂತೋಷದಿಂದ ಓಡುತ್ತಿರುವಾಗ ಎರಡು ಚಕ್ರಗಳ ಟಾಯರು ಒಡೆದು ಲೋರಿಯು ಕಾಲು ಮೇಲೆ ತಲೆಕೆಳಗಾಗಿ, ಒಬ್ಬನು ಮಡಿದನು, ೧೬ ಜನರಿಗೆ ಜಖಂ ಆದುದು ವಿಶೇಷವಲ್ಲ.

—ವಿಷಮ ಕಾಯಿಲೆಯಲ್ಲಿರುವ ಶ್ರೀ ಸುಭಾಷಬೋಸರನ್ನು ಯೂರೋಪಕ್ಕೆ ಕಳುಹಿಸಬಹುದೆಂದು ಸರಕಾರವು ಸಮ್ಮತಿಸಿಯದೆ. ಆದರೆ ತನ್ನ ಮಾತಾಪಿತೃಗಳು ಕಟ್ಟಕ್ಕೆನಲ್ಲಿ ಸಂಕಷ್ಟದಲ್ಲಿರುವುದರಿಂದ ಅವರನ್ನು ಕಾಣದೆ ತಾನು ಅತ್ತ ತೆರಳುವುದು ಅಪ್ರಕೃತವೆಂದು ಬೋಸರೆಣ್ಣಲಿರುವರು.

—ನಾಗಪುರದಲ್ಲಿ ಮೋಡೆಲ್‌ಮಿಲ್ ಕೆಲಸಗಾರರ ಪರವಾಗಿ ಶ್ರೀ ರೂಯಿಕರರು ಜೈಲಿನೊಳಗೆ ಉಪವಾಸಕ್ಕಾರಂಭಿಸಿರುವರು!

—ಮುಂಬಾಯಿಯಲ್ಲಿ ತನ್ನ ಹಸ್ತಲಿಪಿಯನ್ನು ಕೇಳಿಕೊಂಡು ಬಂದ ಒಬ್ಬರ ಕೈಯಿಂದ ಕಾಗದ ಲೇಖನಿಯನ್ನು ತೆಗೆದುಕೊಂಡು ಬರ್ನಾರ್ಡ್ ಶೋರವರು ಎತ್ತಲೋ ಎಸೆದುಬಿಟ್ಟರು!

—ಕಲ್ಕತ್ತದಲ್ಲಿ ಶ್ರೀ. ಜೆ. ಕೆ. ಸರ್ಕಾರರೆಂಬವರು ರೈಲುಪ್ರಯಾಣ ಮಾಡುತ್ತಿದ್ದಾಗ ಇಬ್ಬರು ತರುಣರು ಅವರ ಮುಖದ ಮೇಲೆ ಏನೋ ಒಂದು ಬಗೆಯ ಹುಡಿಯನ್ನೆಸೆದು, ಕಣ್ಣುಕಟ್ಟಿ, ಜೇಬು ಬರಿದು ಮಾಡಿದರು. ತನಿಖೆ ನಡೆಯುತ್ತಿದೆ.

ಮಹಾಲಪುರದ ಡಿ. ಎ. ವಿ. ಕೊಲೆಜಿನ ಥಾಕೂರ ರಾಮಸಿಂಘರೆಂಬವರಿಗೂ ಮೆನೆಜಿಂಗ್ ಬೋರ್ಡಿಗೂ ಭೇದಾಭಿಪ್ರಾಯಗಳು ಹುಟ್ಟಿ, ಸರಿಯಾದ ಇತ್ಯರ್ಥವಾಗದೆ ತಾನು ಊಟವೇ ಮಾಡುವುದಿಲ್ಲವೆಂದು ಮೊದಲಿನವರು ನಿರ್ಧರಿಸಿರುವರು. ಪ್ರಥಮ ಉಪಾಧ್ಯಾಯ ಸತ್ಯಾಗ್ರಹವಿದು.

—ವೈಸರಾಯರು ಒಂದು ಎಮರ್ಜೆನ್ಸಿ ಸಭೆಯನ್ನು ಕರೆದು, ರಾಜಕೀಯ ವಿಚಾರಗಳನ್ನು ಬಹಳ ರಹಸ್ಯವಾಗಿ ಆಲೋಚಿಸಿಕೊಂಡರು.

—ಡಾ। ಆಲಮರು ಆಫ್ರಿಕದ ಕೆನ್ಯಾಕ್ಕೆ ತೆರಳಿ ಅಲ್ಲೊಂದು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದಿರುವಾಗ ಕೆನ್ಯಾದವರು ಅವರ ಪ್ರವೇಶವನ್ನೇ ತಿರಸ್ಕರಿಸಿ ಇಂಡಿಯಾ ಸರಕಾರಕ್ಕೆ ಬರೆದಿದ್ದಾರೆಂದು ತಿಳಿದು ಬರುತ್ತದೆ.

—ಅಲ್ವಾರಿನ ದಂಗೆಯು ಭಯಸೂಚಕವಾಗಿಯೇ ಇದೆ. ಮೊನ್ನೆ ಮಧ್ಯಾಹ್ನ ಮಹಾರಾಜರು ಊಟ ಮಾಡಿ ಎದ್ದೊಡನೆ ಅಸ್ವಸ್ಥರಾದರು. ಏನೋ ವಿಷಪ್ರಯೋಗ ನಡೆದಿದೆ. ಕೆಲವು ಅಡಿಗೆ ಭಟ್ಟರನ್ನು ಡಿಸ್‌ಮಿಸ್ ಮಾಡಿದ್ದಾರೆ. ಅಲ್ವಾರು ಸಂಸ್ಥಾನಕ್ಕೊಂದು ವಿಮಾನವನ್ನು ಹಾರಿಯಲು ಸಿದ್ಧಗೊಳಿಸಿದೆ.

### ಚಿಕ್ಕಮಗಳೂರು.

ಅಖಿಲ ಭಾರತ ವಸ್ತುಪ್ರದರ್ಶನವು ತಾ. ೨೭ನೇ ಭಾನುವಾರ ಶ್ರೀ. ಹೊಸಕೋಟೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಲ್ಲಿ ನೆರವೇರುವುದು. ಇದರ ಸಮಾರಂಭವನ್ನು ಪೂಜ್ಯ ಪಂಡಿತ ಮದನ ಮೋಹನ ಮಾಳವೀಯರು ತೆರೆಯುವರು. ವಸ್ತುಪ್ರದರ್ಶನಕ್ಕೆ ಬೇಕಾದ ಕಾರ್ಯಾಲೋಚನೆಗಳು ನಡೆಯುತ್ತಾ ಇವೆ.

### ಹಾಸನ.

ಈ ಸಲದ ದನಗಳ ಪ್ರದರ್ಶನವು ಬಹಳ ಯೋಗ್ಯರೀತಿಯಲ್ಲಿ ನಡೆದಿರುವುದಲ್ಲದೆ ಸಾವಿರಾರು ಜಾನುವಾರುಗಳು ವಿಕ್ರಯವಾಗಿರುವುವು. ಮೂರು ನಾಟಕ ಕಂಪೆನಿಗಳೂ ಬಂದಿದ್ದವು. ಸ್ವದೇಶಿ ವಸ್ತು ಪ್ರದರ್ಶನ, ಖಾದಿ ವಿಷಯ ಭಾಷಣ ಇವು ಬಹಳ ಯೋಗ್ಯರೀತಿಯಲ್ಲಿ ನಡೆದವು. ಅಸಂಖ್ಯಾತ ಸಭೆಗಳಿದ್ದರೂ ಏನೊಂದು ಗಲಾಟೆ ಪತ್ತೆಯಿರಲಿಲ್ಲ.

### ಸಕಲೇಶಪುರ.

ಹಾಸನ ಜಾತ್ರೆಗೆ ಬಂದಿದ್ದ ಕೆಲವು ಪಂಜಾಬು ಫೈಲ್ವಾನರು ಸಕಲೇಶಪುರದಲ್ಲಿ ಹಿದ್ದಿನಿಂದ ತಮ್ಮ ಶಕ್ತಿಯನ್ನು ತೋರಿಸಿ ಜನರ ಭಕ್ತಿ ಎಚ್ಚರ ಹುಟ್ಟಿಗಿರುವುದನ್ನು ತೋರಿಸುತ್ತಿರುವರು. ಹೆಚ್ಚಿನ ಜನರು ನೂರಾರು ರೂಪಾಯಿಗಳಿಗೆ ಪಣ ಹಾಕಿ ಸದರಿ ಫೈಲ್ವಾನರಿಗೆ ಕೊಡುತ್ತಿರುವರು.

ಅನಾಮಧೇಯರು ಒಬ್ಬರ ಸಕಲೇಶ್ವರ ಮೋಟರ್ ಕಂಪೆನಿ ಬಸ್ಸಿನಲ್ಲಿ ತನಗೆ ಸಿಕ್ಕಿದ ಒಂದು ಚಿನ್ನದ ಚೈನನ್ನು ಸಂಬಂಧಪಟ್ಟವರಿಗೆ ಮುಟ್ಟಿಸಬೇಕಾಗಿ ಡಾಕ್ಟರ್ ಕೆ. ವಿ. ಹೆಗ್ಗಡೆ ಇವರ ಹೆಸರಿಗೆ ಇನ್ಶೂರ್ ಮಾಡಿ ಕಳುಹಿಸಿರುವರು. ಇದು ಸದರಿ ಡಾಕ್ಟರರ ಭಾವ ಮೈದುನರ ಮಗುವಿನ ಚೈನೆಂದು ತಿಳಿದು ಬರುತ್ತದೆ. ಇಂತಹ ಮಹನೀಯರಿಗೆ ಧನ್ಯವಾದಗಳು

## ದಕ್ಷಿಣ ಕನ್ನಡ.

**ಮಂಗಳೂರು.** ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಇದರ ಅಧ್ಯಕ್ಷರಾದ ಶ್ರೀಮಾನ್ ಜಿ. ಕೆ. ದೇವಧರರು ಇದೇ ತಿಂಗಳು ೧೦ನೇ ಮಂಗಳವಾರ ಸಾಯಂಕಾಲ ಇಲ್ಲಿಗೆ ಬಂದು, ಡಿಪ್ರೆಸ್ಡ್ ಕ್ಲಾಸಸ್ ಮಿಶ್ಯನಿನ ಬೇರೆ ಬೇರೆ ಸಂಸ್ಥೆಗಳನ್ನೂ, ಈಶ್ವರಾನಂದ ಮಹಿಳಾ ಸೇವಾಶ್ರಮವನ್ನೂ ಸಂದರ್ಶಿಸಿ, ತಾ. ೧೨ನೇ ಗುರುವಾರ ಇಲ್ಲಿಂದ ಕಲ್ಲಿಕೋಟೆಗೆ ಹೊರಟುಹೋದರು.

### ಚಿಮಿಣಿ ಎಣ್ಣೆಯ ದರದ ಸ್ಪರ್ಧೆ.

೧೬೦೦ ಗಾಂಧಿ ಮಾರ್ಕಿನ ಚಿಮಿಣಿ ಎಣ್ಣೆಯ ಪೆಟ್ಟಿಯು ಇಲ್ಲಿಗೆ ಬಂದು ಈಗಾಗಲೇ ತಂಗಿದೆ. ಇಲ್ಲಿಯ ಬರ್ಮಾಶೆಲ್ ಕಂಪೆನಿಯವರು ಪೆಟ್ಟಿ ಒಂದರಲ್ಲಿ ೧೦ ಆಣೆ ದರ ಕಮ್ಮಿ ಮಾಡಿರುವರು. ಬಡವರಿಗೆ ತುಂಬಾ ಪ್ರಯೋಜನಕರವಲ್ಲವೇ?

ನಿನ್ನೆ ದಿನ ಮಧ್ಯಾಹ್ನ ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯ ಹಿಂದುಗಡೆ ಒಂದು ಬಾವಿಯಲ್ಲಿ ಒಂದು ಶವವು ದೊರೆತಿದೆ. ನಾಲ್ಕಾರು ದಿನಗಳ ತನಕ ನೀರಲ್ಲಿದ್ದುದರಿಂದ ಶವವು ವಿರೂಪ ಹೊಂದಿದೆ. ತನಿಖೆ ನಡೆಯುತ್ತಿದೆ.

ಇದೇ ತಾ. ೨೨ನೇ ರವಿವಾರ ಸಾಯಂಕಾಲ ೫-೩೦ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಒಂದು ಸಾರ್ವಜನಿಕ ಸಭೆಯು ಜರಗುವುದಿದ್ದು,— ಸಭೆಯಲ್ಲಿ ಹರಿಜನರು ದೇವಾಲಯಗಳನ್ನು ಪ್ರವೇಶಿಸುವ ಕುರಿತಾಗಿ ಬಲ್ಲವರ ಭಾಷಣಗಳಾಗಲಿವೆ. ಸರ್ವರೂ ದಯಮಾಡಿಸಬೇಕಾಗಿ ವಿನಂತಿಯಿದೆ.

ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ಕಳೆದ ಶನಿವಾರ ಎಂದಿನಂತೆ ವಿಜೃಂಭಣೆಯಿಂದ ಜರಗಿತು. ಶಾಲಾ ವರದಿ ವಾಚನ, ಇನಾಮು ಹಂಚೋಣ ಇತ್ಯಾದಿ ಕಾರ್ಯಕ್ರಮಗಳು ಯಥಾ ಸಾಂಗವಾಗಿ ನಡೆದು ಕೊನೆಗಂಡುವು. ಈ ಸಂದರ್ಭದಲ್ಲಿ, ಶ್ರೀ. ಎಂ. ಎನ್. ಕಾಮತರಿಂದ ರಚಿತವಾದ 'ಉದ್ಯಾನಾನಂದ' ಮತ್ತು 'ಶ್ರೀಕೃಷ್ಣ ಸಂಧಾನ' ಎಂಬ ಒಂದಂಕದ ಎರಡು ಉತ್ತಮ ನಾಟಕಗಳೂ ಯಶಸ್ವಿಯಾಗಿ ಅಭಿನಯಿಸಲ್ಪಟ್ಟುವು.

ಮಿತ್ರಮಂಡಳಿಯ ಆಶ್ರಯದಲ್ಲಿ ತಾ. ೫—೨—೩೩ರಂದು ಒಂದು ಕನ್ನಡ ಭಾಷಣ ಸ್ಪರ್ಧೆ ನಡೆಯಲಿರುವುದು. ಇದರಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲರೂ ಭಾಗವಹಿಸಲು ಅರ್ಹರಾಗಿರುವರೆಂದು ತಿಳಿಯುತ್ತೇವೆ.

ಮಿತ್ರಮಂಡಳಿಯ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಬಗ್ಗೆ ಅದರ ಕಾರ್ಯನಿರ್ವಾಹಕ ಮಂಡಲದವರು ಸಭೆ ಸೇರಿ, ಮುಂದ ಮುಂದಕ್ಕೆ ವಿದ್ಯಾರ್ಥಿಗಳನ್ನಲ್ಲದೆ ಇತರ ಸಾಹಿತ್ಯಭಕ್ತರನ್ನೂ ಕೂಡಿಸಿಕೊಳ್ಳುವ ನಿರ್ಧಾರವಾಗಿದೆ. ಪುಸ್ತಕಪ್ರಕಟಣೆಗಾಗಿ ಶ್ರೀಗಳಾದ ಟಿ. ನಾರಾಯಣ ಭಟ್ಟ, ವಿದ್ವಾನ್. ಪಿ. ರಮಾನಂದ ಎಂ. ಎ, ಯು. ಶ್ರೀನಿವಾಸ ರಾವ್ ಬಿ. ಎ. ಎಲ್. ಟಿ., ಕಡೆಂಗೋಡ್ಲು ಶಂಕರ ಭಟ್ಟ ವಿದ್ವಾನ್. ಎಂ. ಎನ್. ಕಾಮತ್, ಎನ್. ಪಿ. ಸುಬ್ಬಣ್ಣ ಭಟ್ಟ, ಮತ್ತು ಪಿ. ದಯಾನಂದ ನಾಯ್ಕ ಇವರಿಷ್ಟು ಮಂದಿಯಿರುವ ಸಮಿತಿಯೊಂದು ಏರ್ಪಟ್ಟಿದೆ. ಸದಸ್ಯ ವರ್ಗಣೆಯು ಪೋಷಕರಿಗೆ ರೂ. ೫, ಪ್ರೋತ್ಸಾಹಕರಿಗೆ ರೂ. ೨ ಮತ್ತು ಸದಸ್ಯರಿಗೆ ರೂ. ೧ರಂತೆ ನಿಶ್ಚೈಸಲಾಗಿದೆ. ಕನ್ನಡಿಗರ ಭಾಷಾಭಿಮಾನಿಗಳೆಲ್ಲ ಸರ್ವ ವಿಧದಿಂದಲೂ ಸಹಕರಿಸುವರೆಂದು ನಂಬಿದ್ದೇವೆ.

ಇದೇ ಬರುವ ತಾ. ೨೦ನೇ ಶನಿವಾರ ಅಪರಾಹ್ನ ಗಂಟೆ ೩-೩೦ಕ್ಕೆ ಸೈಂಟ್ ಅಲೋಶಿಯಸ್ ಕಾಲೇಜಿನ ಹಾಲಿನಲ್ಲಿ, ದಿವಂಗತ ದೇಶಭಕ್ತ ಶ್ರೀನಿವಾಸಯ್ಯಂಗಾರರ ಧರ್ಮಪತ್ನಿಯವರ ಶ್ರದ್ಧಾಂಜಲಿ ಅನಾವರಣ ಮಾಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ವೈದ್ಯಕೀಯ ಸಂಘದ ಒಂದು ಸಭೆಯು ತಾ. ೨೧ನೇ ದಿನ ೬-೩೦ಕ್ಕೆ ವೆನ್‌ಲೋಕ್ ಆಸ್ಪತ್ರೆಯಲ್ಲಿ ಜರಗುವುದು. ಶ್ರೀ. ಸಿ. ಪಿ. ಕಾಮತ್ ಯಂ. ಬಿ. ಎಂಡ್ ಬಿ. ಯಸ್. ಇವರು ಭಾಷಣ ಮಾಡಲಿರುವರು.

ನಗರ ಸಭೆಯ ಒಂದು ಸಭೆಯು ತಾ. ೨೩ನೇ ದಿನ ೫-೩೦ಕ್ಕೆ ಆಫೀಸಿನಲ್ಲಿ ಜರಗುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಒಂದು ಶಾಖೆಯನ್ನು ಹೊನ್ನಾವರದಲ್ಲಿ ತಾ. ೨೭ನೇ ಶುಕ್ರವಾರ ದಿವಾ ಗಂಟೆ ೪ಕ್ಕೆ ಹೊನ್ನಾವರ ಬಂದರ 'ಶ್ಯಾನುಭಾಗ ಬಿಲ್ಡಿಂಗ್ಸ್' ಇದರ ಉಪ್ಪರಿಗೆಯಲ್ಲಿ ತೆರೆಯಬೇಕೆಂದು ನಿಶ್ಚಯಿಸಿರುತ್ತಾರೆಂದು ಅದರ ಚೆಯರ್‌ಮೆನರು ತಿಳಿಸುತ್ತಾರೆ.

**ಶ್ರೀಕೃಷ್ಣಾ ಸಿನೆಮ ಟೋಕಿ ಮಂದಿರದಲ್ಲಿ** ತಾ. ೨೨ರಿಂದ "ದಿ ಕ್ವೆನ್‌ಭೋ ಟ್ರೈಲ್" ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು. ಅತಿ ಬೇಗನೆ "ಶ್ರೀಕೃಷ್ಣಾವತಾರ" ಮತ್ತು "ಬ್ರೋಡ್ ವೆ ಮೆಲೊಡಿ" ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು.

**ಸುರತ್ಕಲ್**—ಇಲ್ಲಿಯ ಶ್ರೀ ಶಿರಶಿಲೇಶ್ವರ (ಸದಾಶಿವ) ದೇವಾಲಯ'ದಲ್ಲಿ ವರುಷಂಪ್ರತಿ ನಡೆಯತಕ್ಕ ಜಾತ್ರೆಯು, ಇದೇ ತಾ. ೧೧ನೆಯ ದಿನ ಧ್ವಜಾರೋಹಣೋತ್ಸವ'ದಿಂದ ಪ್ರಾರಂಭಿಸಿ ತಾ. ೧೪, ೧೫ನೆಯ ದಿನಗಳಲ್ಲಿ 'ರಥಾರೋಹಣ' ಮತ್ತು ಅವಭೃತೋತ್ಸವ'ಗಳಿಂದ ೫ ದಿನಗಳ ಉತ್ಸವಗಳು ಮೊಕ್ತೇಸರ ಬ್ರಹ್ಮಶ್ರೀ ಸದಸಿಂಹ ಪೈಯವರಿಂದ ಜರಗಿಸಲ್ಪಟ್ಟಿತು. ಮೂರುನಾಡು ಮಾಗಣೆಗೆ ಸಂಬಂಧಿಸಿದ ಗ್ರಾಮಸ್ಥರುಗಳು ಈ ದೇವಾಲಯದ ಭಜಕ ವರ್ಗದವರಿರುತ್ತಾ, ಬಲು ಜೀರ್ಣಾವಸ್ಥೆಯಲ್ಲಿರುವೀ ದೇಗುಲೋದ್ಧಾರ, ಜಾತ್ರೆಗಳ ಕಾಲ ಸಹಕಾರಾದಿಗಳಿಗೆ ಭಜಕವೃಂದದ ಮನವನ್ನು ಆಕರ್ಷಿಸಿಕೊಳ್ಳಲು ಮೊಕ್ತೇಸರರು ಪ್ರಯತ್ನಿಸದಿರುವುದು ತುಂಬಾ ಶೋಚನೀಯವಾಗಿದೆ. ಪುರಾತನ ಪ್ರತಿಷ್ಠೆಯ ಪುರಾತನ ದೇವಾಲಯವಾದೀ ಕಟ್ಟಡದ ಜೀರ್ಣೋದ್ಧಾರ ಕಾರ್ಯಗಳ ಹಾಗೂ ದೇವಸ್ಥಾನದ ನಿತ್ಯ ನೈಮಿತ್ತಿಕಾದಿಗಳ ಈಗಣ ಲೋಪಗಳೇ ಮೊದಲಾದವುಗಳನ್ನು ಸರಿಗೊಳಿಸುವ "ಆಲೋಚನೆ ಕೂಟ"ವೊಂದನ್ನು ಮೂರುನಾಡು ಮಾಗಣೆಯ ಗ್ರಾಮ ಪ್ರಮುಖರು ನೆರವೇರಿಸುವಂತೆ ಸದ್ಬುದ್ಧಿಯನ್ನು ಸದಾಶಿವ ನೀಯಲಿ!

ಇದೇ ತಾ. ೨೫ನೆಯ ರಾತ್ರಿ ಇಲ್ಲಿಯ ಸಂತೆಕಟ್ಟೆ ಮೈದಾನಿನಲ್ಲಿ ಮೂಲ್ಕಿ ಮೇಳದ 'ಬಯಲಾಟ'ವೊಂದನ್ನು ಕೆಲ ಸ್ಥಳೀಕರೊಂದಾಗಿ ಜರುಗಿಸಲಿರುವರೆಂದು ತಿಳಿದುಬರುತ್ತದೆ.

ಹೊಸಬೆಟ್ಟು ಗ್ರಾಮದಲ್ಲಿ ಹತ್ವಾರ ಮನೆಯವರಿಂದ ವರುಷಂಪ್ರತಿ ನಡೆಯತಕ್ಕ 'ಓಟದ ಕೋಣಗಳ ಸ್ಪರ್ಧೆ' (ಕಂಬಳ)ಯು ಇದೇ ತಾ. ೨೬ನೆಯ ದಿನ ನೆರವೇರಲಿರುವುದೆಂದೂ, ಸರ್ವರಿಗೂ ಸುಸ್ವಾಗತವಿದೆಯೆಂದೂ ರಾ। ಶ್ರೀ। ಪಟೇಲ ಹತ್ವಾರ್ ಸುಬ್ಬಣಯ್ಯನವರು ತಿಳಿಸುತ್ತಾರೆ.

**ಉಡುಪಿ:**—ಇಲ್ಲಿ ವಾಡಿಕೆಯಂತೆ ತಾ. ೮ರಿಂದ ೧೪ರ ವರೆಗೆ ಶ್ರೀ ಸನ್ನಿಧಿಯಲ್ಲಿ ಮಕರ ಸಂಕ್ರಾಂತಿ ಜಾತ್ರೆಯು ಬಹು ವಿಜೃಂಭಣೆಯಿಂದ ನೆರವೇರಿತು. ಹಾಜರಿದ್ದ ಐವರು ಶ್ರೀ. ಪಾದಂಗಳವರ ಪೈಕಿ ಶ್ರೀ. ಫಲಿಮಾರು ಮಠದ ಶ್ರೀ. ರಘುಮಾನ್ಯ ಶ್ರೀ. ಪಾದಂಗಳವರು ಮಾತ್ರ ಶುದ್ಧ ಖಾದಿಯಲ್ಲೇ ವಿರಾಜಿಸುತಿದ್ದುದು ಖಾದಿ ಭಕ್ತರಿಗೆ ತುಂಬಾ ಆನಂದದಾಯಕವೂ ದೇಶ ಬಾಂಧವರಿಗೆ ಅನುಸರಣೀಯವೂ ಆಗಿತ್ತು.

ಜಾತ್ರೆ ಕಾಲದಲ್ಲಿ ಅಸ್ಪೃಶ್ಯತಾ ನಿವಾರಿಣಿ ಸಭೆಯ ನೇತೃತ್ವದಲ್ಲಿ ಮಹಾಸಭೆ ಸೇರಿ ಶ್ರೀ. ರಂಗ ಅಯ್ಯರ್ ಮತ್ತು ಡಾ. ಸುಬ್ಬರಾಯನ್ ಇವರು ತರಲಿರುವ ಮಸೂದೆಗಳಿಗೆ ಮಾನ್ಯ ವೈಸರಾಯರು ಅನುಮತಿ ನೀಯಬೇಕೆಂದು ಠರಾವುಗಳು ಮಂಜೂರಾದವು.

ಹಿಂದೂ ಧರ್ಮ ಪ್ರಚಾರಿಣಿ ಸಭೆಯ ಪರವಾಗಿ ಶ್ರೀ. ಅಂಕರಾಜು ಸುಬ್ರಾಯ ಶರ್ಮರು ತಾ. ೧೪ನೇ ಸಾಯಂಕಾಲ ಸನಾತನ ಧರ್ಮ, ಸಂಧ್ಯಾವಂದನೆ ಕುರಿತು ಭಾಷಣವಿತ್ತರು.

ಡಿಶಂಬರ ತಾ. ೩೧ನೇ ಮಧ್ಯ ರಾತ್ರಿ ಕಾಂಗ್ರೆಸು ಚಟುವಟಿಕೆಗಳನ್ನು ಮಾಡಿದುದಕ್ಕಾಗಿ ಅಪಾದಿತರಾದ ಶ್ರೀ. ನಾಗೇಶ ಶೆಣೈ, ಅಂತಯ್ಯ ಶೆಟ್ಟಿ ಮತ್ತು ವಿಠ್ಠಲ ಹೆಗ್ಡೇರವರನ್ನು ಸ್ಟೇಶನರಿ ಸಬ್ ಮೇಜಿಸ್ಟ್ರೇಟರು ತಾ. ೧೬ರಲ್ಲು ತನಿಖೆ ನಡಿಸಿ, ಸದರಿಯವರನ್ನು ೩, ೪ ಮತ್ತು ೩ ತಿಂಗಳಂತೆ ಅನುಕ್ರಮವಾಗಿ ಕಠಿಣ ಶಿಕ್ಷೆಗೆ ಗುರಿಮಾಡಿದರು.

ಮಂಗಳೂರಿನಿಂದ ಸ್ವದೇಶಿ ಪ್ರಚಾರಕ ಸಂಘದ ಕಡೆಯಿಂದ ಶ್ರೀ ಬಿ. ಕೋಚಣ್ಣ ಭಂಡಾರಿಯವರ ನೇತೃತ್ವದಲ್ಲಿ ಪ್ರಚಾರದ 'ಮೋಟಾರುವಾನ್'ನಲ್ಲಿ ಖಾದಿ ಮತ್ತು ಇತರ ಸ್ವದೇಶಿ ಸಾಮಾನುಗಳನ್ನು ಜಾತ್ರೆಕಾಲದಲ್ಲಿ ಪ್ರಚಾರಕ್ಕಾಗಿ ತಂದಿರುತ್ತಾರೆ.

ತಾಲೂಕು ಬೋರ್ಡಿನ ಪರವಾಗಿ ಉಡುಪಿ ಪಟಣಿಗೆ ನಿಯೋಗಿಸಲ್ಪಟ್ಟಿದ್ದ ಮಿಡ್‌ವೈಫ್ ರಜೆ ಮೇಲೆ ಹೋಗಿರುತ್ತಾ, ಬದಲಿಗೆ ಮಿಸ್. ಸುಸನ್ನಾ ಸುಮಿತ್ರಾ ಎಂಬವರು ಕೆಲಸವಹಿಸಿರುವರು.

ಇಲ್ಲಿ ಹಲವು ಯುವಕರು ಕೂಡಿ 'ಮಿತ್ರ ಮಂಡಳಿ'ಯೆಂಬ ಹೆಸರಿನದೊಂದು ಸಂಘಟನೆಯನ್ನು, ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರವು ರೋಮನ್ ಕೆಥೋಲಿಕ್ ಇಗರ್ಜಿಯೆದುರು ತೆರೆಯಲಾಗಿದೆ.

**ಕಾಸರಗೋಡು**—ಪತ್ರೆ ಪಟೇಲ ವಿಷ್ಣು ಕಡಂಬಳಿತ್ತಾಯರು ಜಂಗ್ಲಿ ಕಾನೂನನ್ನು ಭಂಗಗೊಳಿಸಿದ್ದರೆಂದು ಕಾಸರಗೋಡು ಸ್ಟೇಷನರಿ ಸಬ್ ಮೇಜಿಸ್ಟ್ರೇಟರು ೬ ತಿಂಗಳ ಶಿಕ್ಷೆ ವಿಧಿಸಿದುದಕ್ಕೆ ಸದರಿ ಪಟೇಲರು ಮಾಡಿದ ಅಪೀಲಿನಲ್ಲಿ ಶಿಕ್ಷೆ ಕಾಯಮ್ ಆಯಿತು.

ಇದೇ ಕಳೆದ ಶನಿವಾರ ತಾ. ೬ರಲ್ಲು ಕಾಸರಗೋಡು ಟೌನ್ ಎಲಿಮೆಂಟರಿ ಶಾಲೆಯಲ್ಲಿ ಸೆಂಟ್ರಲ್ ಸ್ಕೂಲ್ ಉಪಾಧ್ಯಾಯರ ಒಂದು ಸಭೆಯು ಡಿಪ್ಯುಟಿ ಇನ್ಸೆಪ್ಟರ್ ರಾ. ಬಿ. ವೆಂಕಟ್ರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ಶಂಕರನಾರಾಯಣ ಪ್ರಸಾದಿಕ ಯಕ್ಷಗಾನ ನಾಟಕ ಸಭೆಯವರು ಇದೇ ಕಳೆದ ಶನಿವಾರ ರಾತ್ರಿ "ಸುಭದ್ರಾಪರಿಣಯ" ಕಥೆಯನ್ನು ಶ್ರೀ. ಬಲಿಪ ನಾರಾಯಣ ಭಾಗವತರ ನೇತೃತ್ವದಲ್ಲಿ ಅಭಿನಯಿಸಿದರು. ಇದೇ ಬರುವ ಬುಧವಾರ "ದಾನಶೂರ ಕರ್ಣ" ಎಂಬ ಕಥೆಯನ್ನು ಅಭಿನಯಿಸಲಿಕ್ಕಿರುವರು.

ಇದೇ ತಿಂಗಳ ತಾ. ೧೨ರಲ್ಲು ಮದ್ರಾಸಿನಲ್ಲಿ ಪಾಸಾಗಿರುವ ಮರುಮಕ್ಕತ್ತಾಯ ಮಸೂದೆಯನ್ನು ಪರ್ಯಾಲೋಚಿಸುವುದಕ್ಕಾಗಿ ಮೊದಲೇ ಪ್ರಕಟಿಸಿದಂತೆ ಈ ತಾಲೂಕಿನ ಕಾಸರಗೋಡು ಕಸಬಾ ಅಡ್ಕತ್ತಬೈಲು, ಕೂಡ್ಲು, ಶಿರಿಬಾಗಿಲು, ಪಟ್ಲ ಮತ್ತು ನೆರೆ ಗ್ರಾಮಗಳ ಅಳಿಯ ಕಟ್ಟನ್ನು ಆಚರಿಸುವವರ ಸಭೆಯು ರಾವ್ ಸಾಹೇಬ್ ಶಿರಿಬಾಗಿಲು ರಾಮಯ್ಯ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ, (೧) (Reformed Conference) ಮಸೂದೆಗೆ ತಿದ್ದುಪಡಿಗಳಿಗೆ ವಿಳಂಬ್ಯ ಮರುಮಕ್ಕತ್ತಾಯ ಬಿಲ್ಲು ಪಾಸಾಗುವುದು ಸರ್ವರಿಗೂ ಸಮ್ಮತವಾಗಿರುತ್ತದೆ ಎಂತಲೂ (೨) ಅಳಿಯಸಂತಾನ ಲೀಗ್ ಎಂಬ ಸಂಸ್ಥೆಯ ಸ್ಥಾಪನೆಯವರು ಬಿಲ್ಲು ಪಾಸಾಗದಂತೆ ಮಾಡುವ ಕೆಲಸಗಳು ಸ್ವಾರ್ಥತೆಯಿಂದ ಮಾಡುವಂಥಾದ್ದು ಮತ್ತು ಒಮ್ಮತದ ಅಭಿಪ್ರಾಯಕ್ಕೆ ವಿರೋಧವಾದದ್ದು ಎಂತಲೂ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುದಲ್ಲದೆ, ಇದನ್ನು ಗವರ್ನರರಿಗೂ ಲೋ ಮೆಂಬರರಿಗೂ, ತಂತಿಮೂಲಕ ತಿಳಿಸಬೇಕಾಗಿ ಪ್ರೆಸಿಡೆಂಟರಿಗೆ ಅಧಿಕಾರ ಕೊಡಲಾಯಿತು.

**ಮೂಲ್ಕಿ:**—ನಮ್ಮ ಊರಿನವರಾದ ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕ ರಾ। ಯು. ಕೇಶವರಾವ್, ಬಿ. ಎ. ಎಲ್. ಟಿ. ರವರ ಪರಿಶ್ರಮೋತ್ಸಾಹಗಳಿಂದ ಇಲ್ಲಿ ಒಂದು "ಹಿಂದೀ" ಕ್ಲಾಸು ತೆರೆಯಲ್ಪಟ್ಟಿದೆ. ಈಗಾಗಲೇ ಸುಮಾರು ೪೦ ವಿದ್ಯಾರ್ಥಿಗಳು ಸೇರಿರುವರು. ಶ್ರೀ ರಾಯರ ಕಾರ್ಯವು ಸ್ತೋತ್ರಾರ್ಹವಾಗಿದೆ.

ಸ್ಥಳೀಕ ಯೂನಿಯನ್ ಕ್ಲಬ್ಬಿನ ನೇತೃತ್ವದಿಂದ ಜರಗಲಿರುವ ಸಾರ್ವಜನಿಕ ಭಾಷಣವು ಎಂದಿನಂತೆ ಈ ವರ್ಷ ಶ್ರೀ. ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ರವರಿಂದ ಪ್ರಥಮತಃ ತೆರೆಯಲ್ಪಡುವುದು.

**ಅಜೆಕಾರು:**—ಇದೇ ಬರುವ ಫೆಬ್ರುವರಿ ತಾ. ೧೫ಕ್ಕೆ ಎಣ್ಣೆ ಹೊಳೆಯಲ್ಲಿ ನವೀನವಾಗಿ ಏರ್ಪಡಿಸಿದ ಗದ್ದೆಯಲ್ಲಿ "ಓಟದ ಕೋಣಗಳ ಪಂದ್ಯಾಟ"ವು ಜರಗುವುದೆಂದೂ, ಜಗ್ಗದಲ್ಲಿ ಪ್ರಥಮ ಬಂದವುಗಳಿಗೆ ರಜತ ಪದಕವನ್ನೂ, ಹಲಗೆಯಲ್ಲಿ ೩॥ ಕೋಲಿನ ನಿಶಾನಿಗೆ ನೀರು ಹಾಕಿದವುಗಳಿಗೆ ಚಿನ್ನದ ಪದಕವನ್ನೂ ಕೊಡಲಾಗುವುದೆಂದೂ, ಎಲ್ಲರೂ ತಮ್ಮ ಓಟದ ಕೋಣಗಳ ಸಮೇತ ದಯಮಾಡಿ ಬಂದು ಈ ಪಂದ್ಯಾಟವನ್ನು ಸಾಂಗವಾಗಿ ಕೊನೆಗೂಡಿಸುವಂತೆ ಪ್ರೋತ್ಸಾಹಿಸಬೇಕಾಗಿ ಇಲ್ಲಿಯ ಶ್ರೀ. ದೇವರಾಜ ಹೆಗ್ಡೆಯವರ ಸವಿನಯ ವಿನಂತಿ ಇದೆ.

**ಫರಂಗಿಪೇಟೆ**—ಇಲ್ಲಿಯ ಶ್ರೀ ರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ ತರ್ಕ ಸಭೆಯು ಶ್ರೀಯುತ ಅರ್ಕುಳ ವೆಂಕಟರಾಮರವರ ಅಧ್ಯಕ್ಷತೆಯಲ್ಲಿ ಜರಗಿತು. ಚರ್ಚೆಯ ವಿಷಯವು ಪೂರ್ವಕಾಲದ ಕಟ್ಟಡಗಳ ಮತ್ತು ಈಗಿನ ಕಟ್ಟಡಗಳ ವಿಷಯವಾಗಿತ್ತು. ವಿದ್ಯಾರ್ಥಿಗಳೂ, ಅಧ್ಯಾಪಕರೂ ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರ ಚಿಕ್ಕ ಭಾಷಣವಾದ ತರುವಾಯ ಸಭೆಯು ಮುಕ್ತಾಯವಾಯಿತು.

**ಮೂಡಬಿದ್ರೆ**—ಇಲ್ಲಿಯ ದಿಗಂಬರ ಜೈನ್ ಆಂಗ್ಲ ಸಂಸ್ಕೃತ ಪಾಠಶಾಲೆಯ ರಜತ ಮಹೋತ್ಸವ ಸಮಾರಂಭವು ಇದೇ ತಿಂಗಳ ತಾ. ೯ನೇ ಸೋಮವಾರ ಸಾಂಗವಾಗಿ ನೆರವೇರಿತು.

ಕಾರ್ಯಕ್ರಮದಂತೆ ಪ್ರಾತಃಕಾಲ ೭ರಿಂದ ೮ ಘಂಟೆಯ ವರೆಗೆ ಶಾಲೆಯಲ್ಲಿ ದೇವರ ಪೂಜೆಯು ಸಂಗೀತದೊಡನೆ ನಡೆಯಿತು. ೭ರಿಂದ ೧೧ರ ವರೆಗೆ ನಡೆದ ಶಾಲಾ ಮಕ್ಕಳ ಪಂದ್ಯಾಟವು ಪ್ರೇಕ್ಷಕರನ್ನು ಸಂತೋಷಪಡಿಸಿದುವು. ನಂತರ ಸರ್ವರಿಗೂ ಔತಣವು ನಡೆಯಿತು. ಜನಸಂದಣಿಯು ಪ್ರತಿ ಕ್ಷಣದಲ್ಲಿಯೂ ಹೆಚ್ಚುತ್ತಿತ್ತು. ಮಧ್ಯಾಹ್ನ ೩ರಿಂದ ೩-೩೦ರ ವರೆಗೆ ಸಭೆ ಜರಗಿ ಧಾರ್ಮಿಕ ಉಪನ್ಯಾಸಗಳು ಜರಗಿದುವು. ಈ ಸಮಯದಲ್ಲಿ ಶ್ರವಣ ಬೆಳ್ಗೊಳದ ಶ್ರೀ. ಸ್ವಾಮಿಯವರು ಧರ್ಮೋಪದೇಶವೆಂಬ ಅಮೃತ ವೃಷ್ಟಿಯನ್ನು ಕರೆದುದಲ್ಲದೆ ಈ ಸ್ಕೂಲಿನ ಪಾಠಶಾಲೆಯ ಸ್ಥಾಪನೆ ಅದರ ಬೆಳವಣಿಗೆಯ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿ ಅದಕ್ಕೆ ಭವಿಷತ್ಭಾಗ್ಯವನ್ನು ಬಯಸಿ, ಸ್ಥಾಪಕರನ್ನೂ ಸಂಚಾಲಕರನ್ನೂ, ಧನಸಹಾಯವಿತ್ತ ಮಹನೀಯರನ್ನೂ ಹರಸಿದರು. ಶ್ರೀಯುತ ಶೀತಳ ಪ್ರಸಾದಜೀಯವರು ಜೈನ ಧರ್ಮದ ವಿಷಯ ಭಾಷಣವಿತ್ತರು.

## ಅನುಕ್ರಮಣಿಕೆ.


ಅಗ್ರಲೇಖ.
ಅಲ್ವಾರ ದಂಗೆ . . . ೯
ಪ್ರತಿವಾದಗಳು . . . ೨
ಸೂಚನೆಗಳು . . . ೧೧
ವರ್ತಮಾನ ಸಂಗ್ರಹಗಳು.
ಒಳದೇಶ ವರ್ತಮಾನ . . . ೯
ದಕ್ಷಿಣ ಕನ್ನಡ—ಮಂಗಳೂರು, ಪುತ್ತೂರ್,
ಕಾಸರಗೋಡು, ಮುಲ್ಕಿ, ಅಳಿಕೆ, ಭಟಿಂಗಿಲ್
ಮುನಿಶಕ್ತಿ . . . ೯
ವಿವಿಧ ಸಮಾಚಾರಗಳು . . . ೧೧
ಇವರು ಗಟ್ಟಿಗರೇ! . . . ೨
ಪತ್ರವ್ಯವಹಾರ . . . ೧೪
ಬಂಗಾಳದ ಜಾರ್ಜ್ ಚಾರ್ಲ್ಸ ಕೋಲ್ಕಾತೋದ! . . . ೪
ಮಹಾತ್ಮಾ ಗಾಂಧಿಯವರ ಪ್ರತಿಭೆಯ ಬೆಲೆಯಲ್ಲಿ?! . . . ೧೦
ಭಾರತೀಯ ಮಹಿಳೆಯರ ಶೃಂಗಾರ . . . ೧೫


# ಸ್ವದೇಶಾಭಿಮಾನಿ.

ತಾ. ೨೦ನೇ ಶುಕ್ರವಾರ ಜನವರಿ ೧೯೩೩.

## ಅಲ್ವಾರ ದಂಗೆ.

ಕಾಶ್ಮೀರ ದೇಶದೊಳಗಿನ ಮುಸಲ್ಮಾನ ದಂಗೆಯ ಘಟನೆಗಳು ಮರೆಯಲ್ಪಡುವ ಮೊದಲೇ ಅಲ್ವಾರ ದೇಶದಲ್ಲಿಯೂ ಅದೇ ರೀತಿಯ ದಂಗೆಯುಂಟಾಯಿತೆಂಬ ವಿಷಯವನ್ನು ಪ್ರತಿ ಹಿಂದೂವು ಚೆನ್ನಾಗಿ ಆಲೋಚಿಸಬೇಕಾದ ವಿಷಯ. ಕಾಶ್ಮೀರವೆಂದರೆ ಹಿಂದೂ ರಾಜರ ಅಡಿಯಲ್ಲಿರುವಂತಹುದು; ಆದರೆ ಮುಸಲ್ಮಾನ ಜನಸಂಖ್ಯೆಯು ಅಲ್ಲಿ ಬಹಳವಿದೆ. ಹಿಂದೂ ಅಧಿಕಾರವನ್ನು ತೆಗೆದೆಸೆಯಬೇಕೆಂಬ ಉದ್ದೇಶದಿಂದೆಂಬಂತೆ ಆ ದಂಗೆಯುಂಟಾಯಿತು; ಇದಕ್ಕೆ ಹಿಂದೂಸ್ಥಾನದೊಳಗಿನ ಮುಸಲ್ಮಾನರ ಪ್ರೋತ್ಸಾಹವೂ ಸಹಾಯವೂ ತುಂಬಾ ಇದ್ದಿತು. ಕಾಶ್ಮೀರದೊಳಗಿನ ಆ ದಂಗೆಯನ್ನು ಅಲ್ಲಿನ ಮಹಾರಾಜರು ತಡಿಸಲಾರದೆ ಬ್ರಿಟಿಷ ಸೈನ್ಯದ ಸಹಾಯವನ್ನು ಅವರು ಪಡೆಯಬೇಕಾಯಿತು. ದಂಗೆಯನ್ನು ನಿಲ್ಲಿಸಿದ ಮೇಲೆ ಪ್ರಧಾನ ಮಂತ್ರಿ ಪದವಿಯನ್ನು ಬ್ರಿಟಿಷರೊಬ್ಬರಿಗೆ ಕೊಡಬೇಕಾಯಿತು; ಮುಸಲ್ಮಾನರ ಹಕ್ಕು ಅಧಿಕಾರಗಳನ್ನು ಹೆಚ್ಚು ಮಾಡಬೇಕಾಯಿತು. ಅಂತೆಯೇ ಹಿಂದೂ ರಾಜ್ಯದಲ್ಲಿ ಹಿಂದೂಗಳ ಅಧಿಕಾರವೇ ಕಡಿಮೆಯಾಯಿತು. ಅಫಘಾನಿಸ್ಥಾನದ ಹಿಂದಿನ ಅರಸರಾದ ಅಮಾನುಲ್ಲಾ ಸಾಹೇಬರನ್ನು ಗದ್ದಿಗೆಯಿಂದ ಇಳಿಸಬೇಕಾದರೆ ಅದೊಂದು ಅಡಗಿದ ಕೈಯು ಕೆಲಸ ಮಾಡಿತ್ತೆಂದು ಕೇಳಬರುತ್ತಿತ್ತು. ಆ ಕಾಶ್ಮೀರ ದಂಗೆಯಲ್ಲಾದರೂ ಅಂತಹ ಅಡಗಿದ ಕೈಗಳು ಇತ್ತೆಂಬುದಕ್ಕೆ ಧಾರಾಳವಾದ ಚಿಹ್ನೆಗಳು ಕಂಡುಬರುತ್ತಿವೆ.

ಆದರೆ ಈ ಅಲ್ವಾರಿನ ದಂಗೆಯು ಎಲ್ಲರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡಿಯದೆ. ಇಲ್ಲಿಯೂ ರಾಜರು ಹಿಂದೂಗಳು; ದಂಗೆಯೆದ್ದವರು "ಮಿಯೊ" ಎಂಬ ಮುಸಲ್ಮಾನರು. ಹಿಂದೂ ಸಂಸ್ಥಾನಿಕರಲ್ಲಿ ಈ ತರದಲ್ಲಿ ಜಾತೀಯ ದಂಗೆ, ಒಂದರ ಹಿಂದೆ ಒಂದಾಗಿ ಏಳುವುದನ್ನು ಕಂಡರೆ ಇದರ ಮರ್ಮವನ್ನು ಕಂಡುಹಿಡಿಯುವ ಆವಶ್ಯಕತೆಯು ಕಂಡುಬರುವುದು. ಮುಖ್ಯವೇನೆಂದರೆ, ಸಂಸ್ಥಾನಿಕರ ಮಾತು ಹಾಗಿರಲಿ, ಬ್ರಿಟಿಷ ಹಿಂದೂಸ್ಥಾನದಲ್ಲೂ ಉಂಟಾದ ಹಲವು ದಂಗೆ ಉತ್ಪಾತಗಳನ್ನು ಕಂಡರೆ, ಒಳಿತಕ್ಕಾದವು ಮುಸಲ್ಮಾನರ ಕಡೆಯಿಂದಲೇ ಹೆಚ್ಚಾಗಿ ಬಂದುದು ಕಾಣಬರುತ್ತದೆ. ಈ ದಂಗೆಗಳು ಈ ಮೊದಲು ಬರೇ ಬ್ರಿಟಿಷ ಹಿಂದೂಸ್ಥಾನದಲ್ಲೇ ಆಗಿದ್ದು ಆಶ್ರಿತ ರಾಜ್ಯಗಳಲ್ಲಿ ಇರಲಿಲ್ಲ. ಕಾಶ್ಮೀರ ದಂಗೆ, ಬೆಂಗಳೂರು ಗಲಭೆ, ಅಲ್ವಾರು ದಂಗೆ ಇತ್ಯಾದಿಗಳು ಈಗಿನ ಜಾತೀಯ ಸಮಸ್ಯೆಯ ನೂತನ ಪರಿವರ್ತನವಾಗಿರುತ್ತವೆ.

ಮತ್ತೂ ವಿಶೇಷವೇನೆಂದರೆ, ಹೈದರಾಬಾದಿನಲ್ಲಿ ಅರಸರು ಮುಸಲ್ಮಾನರಾಗಿದ್ದು, ಪ್ರಜೆಗಳಲ್ಲಿ ಬಹುಸಂಖ್ಯಾಕರು ಹಿಂದೂಗಳಾಗಿದ್ದು, ಹಿಂದೂಗಳ ಮೇಲಿನ ಅಲ್ಲಿನ ಆಡಳಿತವು ಸಮಾಧಾನಕರವಲ್ಲದಿದ್ದರೂ; ಅಲ್ಲಿ ಹಿಂದೂಗಳ ಯಾವ ಕೊಂದರೆಯೂ ಇಲ್ಲ. ಮುಸಲ್ಮಾನರಿಂದ ಹಿಂದೂಗಳ ಮುಸಲ್ಮಾನರು ಎಲ್ಲವನ್ನೂ ಅನುಭವಿಸಿಯೇ ತೀರಬೇಕು. ಆದರೆ ಇದೇ ರೀತಿಯಲ್ಲಿ ಹಿಂದೂಗಳ ಪರಾಜಯವನ್ನಪ್ಪಿಯೇ ಮುಂದರಿಯುವುದಾದರೆ ಹಿಂದೂಗಳ ಭವಿತವ್ಯವೇನು?

ಅಲ್ವಾರಿನ ದಂಗೆಯು ಬಹಳ ಮಟ್ಟಿಗೆ ಜೋರಾಯಿತು. ಅದನ್ನು ಅಲ್ವಾರಿನ ಮಹಾರಾಜರಿಂದ ಅಣಗಿಸಲಾಗಲಿಲ್ಲ. ಅದಕ್ಕಾಗಿ ಬ್ರಿಟಿಷ ಸಹಾಯವನ್ನು ಪಡೆಯಬೇಕಾಯಿತು. ಅನ್ನುವಾಗ ಮಹಾರಾಜರ ಸೈನ್ಯ ಶಕ್ತಿಯೂ, ಪೋಲೀಸಪಡೆಯ ಶಕ್ತಿಯೂ ಎಷ್ಟು ನಿರ್ಬಲವಿರಬೇಕು! ಈ ರೀತಿ ದಂಗೆಯೇಳುವ ಮೊದಲು ಸನ್ನಾಹವಾಗಲೀ, ಚಳವಳವಾಗಲೀ ನಡೆಯುತ್ತಿರಲಿಲ್ಲವೇ? ಅದನ್ನು ರಾಜರ ಸರಕಾರವು ಲಕ್ಷಿಸಿಲ್ಲವೇ? ಕಾಶ್ಮೀರ ದೇಶದ ಪಾಠವು ಮುಂದಿರುವಾಗ, ಅಲ್ವಾರವು ಸಾಮಾನ್ಯ ಜನತೆಗೆ ದಂಗೆಯೇಳಲು ಕಾರಣ ಕೊಟ್ಟುದೂ, ಅವರು ದಂಗೆಯೇಳುವ ಮೊದಲೇ ಪೂರ್ವ ಚಿಹ್ನೆಯನ್ನು ತಿಳಿಯದೆ ಇದ್ದುದೂ ಆಶ್ಚರ್ಯವಾಗಿದೆ.

ಇದರಿಂದ ಹಲವು ಮುಖ್ಯ ವಿಷಯಗಳು ಹೊರಗೆಡಹುವವು. ಮೊದಲನೆಯದಾಗಿ ಹಿಂದೂಗಳು ಎಚ್ಚರರಾಗಬೇಕು; ಅವರ ನಿಷ್ಕಾರ್ಯ ಸಹಿಷ್ಣುತೆಯು ಹೇಡಿತನಕ್ಕೆ ಮುಟ್ಟುತ್ತದೆ. ಅವರು ಸ್ವಂತ ಶಕ್ತಿಯಿಂದ ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಎರಡನೆಯದಾಗಿ, ಆಶ್ರಿತ ರಾಜರು ತಮ್ಮ ರಾಜ್ಯಾಡಳಿತದಲ್ಲಿ ಜನತೆಗೆ ಹಿತಕರವಾಗುವ ರೀತಿಯಲ್ಲಿ ಸಂಪೂರ್ಣ ಭಾಗವನ್ನು ವಹಿಸಿ ತಮ್ಮ ವಿಲಾಸ ಭೋಗಗಳನ್ನು ಬಿಟ್ಟು ಕೊಡಬೇಕು. ಇವೆರಡೂ ಈ ದಂಗೆಯಿಂದ ಹೊರಡತಕ್ಕ ವಿಷಯಗಳು.

ಈ ದಂಗೆಗಳಲ್ಲಿ ಬ್ರಿಟಿಷ ಹಿಂದೂಸ್ಥಾನದ ಮುಸಲ್ಮಾನರು ಸಹಾನುಭೂತಿಯನ್ನು ತೋರಿಸುತ್ತಾರೆ. ಈ ಅಲ್ವಾರಿನ ದಂಗೆಯಲ್ಲಿ ಹೊರಗಿನವರ ಕೈ ಎಷ್ಟರ ಮಟ್ಟಿಗಿರಬಹುದೆಂದು ತಿಳಿಯುವುದೂ ಆವಶ್ಯಕ. ಬ್ರಿಟಿಷ ಸರಕಾರವೂ ಒಂದು ಸ್ಪಷ್ಟ ಧೋರಣವನ್ನು ಇಟ್ಟುಕೊಳ್ಳದೆ ಒಂದು ಜಾತಿಯ ಎದುರಾಗಿ ಇನ್ನೊಂದು ಜಾತಿಯನ್ನು ತಪ್ಪಿಡುವ ವರೆಗೆ ಹಿಂದೂಸ್ಥಾನದ ಜಾತೀಯ ಗೊಂದಲಗಳು ನಿವಾರಣೆಯಾಗುವುದು ಅಸಂಭವನೀಯವಾಗಿದೆ.

## ವಿದೇಶ ವರ್ತಮಾನ.

—ಆಯರ್ಲೆಂಡಿನಲ್ಲಿ ಡಿವಲರಾರವರಿಗೆ ವಿರುದ್ಧವಾಗಿ ಕೊಸ್‌ಗ್ರೇವರು ೪೦,೦೦೦ ಜನಮಧ್ಯೆ ಒಂದು ಭಾಷಣ ಮಾಡುತ್ತಾ ಆಯರ್ಲೆಂಡು ಬ್ರಿಟಿಷರ ಆಶ್ರಯದಲ್ಲಿರುವುದುತ್ತಮವೆಂದು ಕಣ್ಣುಮುಚ್ಚಿ ಹೇಳಿದರು. ಕೂಡಲೇ ಗಲಾಟೆಯಾಗಿ ಕೆಲವರು ಜಖಂಗೊಂಡರು.

—"ನಾವು ಮುಂದುವರಿಯೋಣ! ನಮಗೆ ನಮ್ಮ ಮಿತ್ರ ರಾಷ್ಟ್ರಗಳು ಸಹಾಯ ಮಾಡದಿರವು" ಎಂದು ಜಪಾನೀ ಸರಕಾರವು ಚೀನಿಯರ ಮೇಲೆ ಬೀಳಬೇಕೆಂದು ಧೈರ್ಯದಿಂದ ಹೇಳಿದೆ. ಚೀನವೂ ಹೀಗೆಯೇ ಎದೆಯೊಡ್ಡಿದೆ.

—ಪ್ರಪಂಚದಲ್ಲಿ ಕಾಲೂರಿನಿಂತಿರುವ ಆರ್ಥಿಕ ಸಂಕಷ್ಟ ಪರಿಹಾರಾರ್ಥವಾಗಿ ಏನಾದರೊಂದು ಯೋಜನೆಯನ್ನು ಮಾಡದಿದ್ದರೆ ಗತ್ಯಂತರವಿಲ್ಲವೆಂದು ಅಮೇರಿಕದಲ್ಲಿ ಕೊಲೊಂಬಿಯಾ ಯುನಿವರ್ಸಿಟಿಯ ಅಧ್ಯಕ್ಷರಾದ ಡಾ ನಿಕೊಲಾಸ್ ಮುರ್ರೇ ಬಟ್ಲರ್ ಎಂಬವರು ೧೩ ಜನ ಅರ್ಥಶಾಸ್ತ್ರಜ್ಞರ ಒಂದು ಸಮಿತಿಯನ್ನೇರ್ಪಡಿಸಿ ವಿಚಾರಣೆ ನಡೆಸುವಂತೆ ವ್ಯವಸ್ಥೆ ಮಾಡಲಿರುವರು.

—ಸ್ವಿಜರ್‌ಲೆಂಡಿನಲ್ಲಿ ೬೦೦೦ ಅಡಿಗಳ ಎತ್ತರದಲ್ಲಿ ಹಾರುತ್ತಿದ್ದ ಹಿಂಕ್ಲರ್ ಎಂಬ ವೈಮಾನಿಕನು ತನ್ನ ವಿಮಾನ ಸಮೇತ ಕಾಣೆಯಾಗಿರುವನು. ಹುಡುಕುತ್ತಿದ್ದಾರೆ.

—ಫೈನ್‌ಲೆಂಡ್ ಎಂಬಲ್ಲಿ ಯುವಕ ಸಂಘದಲ್ಲಿ ಸೇರಿ ರಾಜಕೀಯ ಕೆಲಸದಲ್ಲಿ ಕೈಹಚ್ಚಿದ ೬೪ ಮಂದಿ ಕಮ್ಯೂನಿಷ್ಟರ ವಿಚಾರಣೆಯಾಗುತ್ತದೆ. ಇವರಲ್ಲಿ ಹೆಚ್ಚಿನವರು ತರುಣಿಯರು.

ಲ್ಯೊಡ್ ಜೋರ್ಜರು ಲಿಬರಲ್ ಪಕ್ಷದವರಿಂದ ಮೊನ್ನೆ ಸಂಪೂರ್ಣವಾಗಿ ಹೊರಗೆ ನಿಂತು, "ಯಾವ ಸರಕಾರವೂ ಸರಿ, ಕಾಲಕ್ಕೆ ತಕ್ಕ ಸುಧಾರಣೆಗಳನ್ನು ಮಾಡುವುದಾದರೆ ತಾನು ಸಹಾಯವನ್ನೀಯುವನು" ಎಂದರು.

—ಜರ್ಮನ್ ಸರಕಾರದವರು ಬಣ್ಣ ತಯಾರಿಗೋಸ್ಕರ ೨,೦೦,೦೦೦ ಜೀವ ಚಿಟ್ಟೆ ಹುಳುಗಳು ಬೇಕಾಗಿವೆಯೆಂದು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

### ಬೇಜಾರು.

ಮೈಸೂರು ರೆಸಿಡೆಂಟರು ಶಾಶ್ವತರಲ್ಲ ಬೇಲೂರಿಗೆ ಬರುವುದನ್ನು ತಿಳಿದು ಮುನಿಸಿಪಾಲಿಟಿಯವರು ಊರನ್ನು ಬಹಳ ಸಾಫಾಗಿ ಇಟ್ಟಿದ್ದರು. ಆದರೆ ರೆಸಿಡೆಂಟರು ಬರಲಿಲ್ಲವಾದುದರಿಂದ ನಿರಾಶರಾದರು ಕಷ್ಟಪಟ್ಟದ್ದು ವ್ಯರ್ಥವಾಯಿತೆಂದು ಊರಿಗೆ ಬೇಜಾರು ಎಂದು ತಿಳಿಯುತ್ತದೆ.

## ಒಳದೇಶ ವರ್ತಮಾನ

**—ದೇವಸ್ಥಾನ ಪ್ರವೇಶ ಬಿಲ್ಲನ್ನು ಮಂಡಿಸಲು ಸಮ್ಮತಿಯಿತ್ತುದೆಂದು ಅಂಜಿಕೆಯ ಇಂಡಿಯಾ ಆಫೀಸು ವೈಸರಾಯರಿಗೆ ತಿಳುಹಿಸಿದೆಯಾಗಿ ತಿಳಿದುಬರುತ್ತದೆ.**

—ಮದ್ರಾಸ್ಪುರದಲ್ಲಿ ಕೊಡಿಸಲ್ಪಟ್ಟ ಹೇಸ್ಟಿಂಗ್ಸಿಯೆಂಬ ಕುಷ್ಠರೋಗಿ ಪ್ರತಿಮೆಯು ತಾ. ೧೬ನೇ ದಿನ ಬಂಗಾಳದ ಗವರ್ನರರಿಂದ ಅನಾವರಣ ಮಾಡಲ್ಪಟ್ಟಿತು. ಗವರ್ನರರ ಆಗಮನ ಗೌರವಾರ್ಥವಾಗಿ ಸ್ವಾಗತ ಸಮಿತಿಯವರು ೧೦೦೦ ರೂಪಾಯಿಯ ದಾನ ಮಾಡಿದರು. ೨೦೦೦ ಬಡವರಿಗೆ ವರ್ತಕರು ಭೋಜನವಿತ್ತರು.

—ಲಾಹೋರಿನಲ್ಲಿ ತನ್ನ ಸಮ್ಮತಿಯ ಹೊರತು ತನ್ನ ಮಗಳನ್ನು ವಿವಾಹವಾಗಿದ್ದುದಕ್ಕೆ ಮೊಹಮ್ಮದ್‌ಷರೀಫ್ ಎಂಬ ಮಾನವನು ತನ್ನ ಅಳಿಯನಿಗೆ ಹೊಡೆದು ವಿವಾಹ ವಿಚ್ಛೇದ ಮಾಡಬೇಕೆಂದು ಹೇಳಿದನು. ಅವನಿಗೆ ಒಂದೂವರೆ ವರ್ಷದ ಸಜೆಯಾಯಿತು.

—ದೇವಸ್ಥಾನ ಪ್ರವೇಶ ಬಿಲ್ಲಿಗೆ ಅಪ್ಪಣೆಕೊಡಬಾರದೆಂದು ಅಹ್ಮದಾಬಾದಿನ ಮಿಲ್ ಮ್ಹಾಲಿಕ ಸಂಘದ ಸೇಟು ಜಮನಾಲಾಲ್ ಗಿರಿಧರದಾಸ್ ಇವರು ವೈಸರಾಯರಿಗೆ ತಂತಿಯಿತ್ತು, ಅಪ್ಪಣೆಕೊಟ್ಟರೆ 'ಸಿವಿಲ್‌ಯುದ್ಧ'ವು ನಡೆದೀತೆಂದು ಎಚ್ಚರಿಕೆಯಿತ್ತರು. ಇದು ಗಾಂಧೀಜಿಯವರಿಗೆ ತಿಳಿದು ಬಂದೊಡನೆ "ಯುದ್ಧ ಮಾಡಲಿಕ್ಕೆ ಎರಡು ಪಕ್ಷಗಳು ಬೇಕಷ್ಟೆ! ಸನಾತನಿಗಳೊಡನೆ ಹೋರಾಡುವವರೇ ಇಲ್ಲವಾದರೆ ಇವರೇನು ಮಾಡಿಯಾರು?" ಎಂದರು.

—ಸನಾತನ ಧರ್ಮಕ್ಕೊದಗಿರುವ ಆಪತ್ತುಗಳನ್ನು ಹೋಗಲಾಡಿಸುವ ಯೋಜನೆಯನ್ನು ಮಾಡುವುದಕ್ಕಾಗಿ ಸನಾತನ ಧರ್ಮ ಮಹಾಸಭಾ ಅಧ್ಯಕ್ಷರಾದ ಮಾಲವೀಯರು ಎಲ್ಲಾ ಶಾಸ್ತ್ರಿಗಳ ಸನಾತನಿಗಳ, ಪುರೋಹಿತರ, ಆಚಾರ್ಯರ ಒಂದು ಮಹಾಸಭೆಯನ್ನು ತಾ. ೨೫, ೨೬ ಮತ್ತು ೨೭ನೇ ದಿನ ಜರಗಿಸಬೇಕೆಂದು ಆಹ್ವಾನವಿತ್ತಿರುವರು.

—ಕೊಂಗ್ರೆಸ್ ಕೆಲಸವನ್ನು ನಡೆಸುತ್ತಿದ್ದುದಕ್ಕಾಗಿ ಕಾಶೀ ವಿದ್ಯಾಪೀಠದ ರಿಜಿಸ್ಟ್ರಾರರಾದ ಶ್ರೀ ಬೀರ್ಬಲ ಸಿಂಘರೆಂಬವರಿಗೆ ಒಂದು ವರ್ಷ ಕಠಿಣ ಸಜೆ, ಮತ್ತು ೧೦೦ ರೂಪಾಯಿ ದಂಡ ವಿಧಿಸಲಾಯಿತು.

—ತನ್ನ ೮ನೇ ವರ್ಷ ಪ್ರಾಯದಲ್ಲಿ ಕಿಸೆಗಳ್ಳತನಕ್ಕೆ ತೊಡಗಿ ೪೦ ವರ್ಷದ ತನಕ ಈ ವಿದ್ಯೆಯ ಪರಿಣಾಮವಾಗಿ ೧೬ ಸಲ ಜೈಲನ್ನನುಭವಿಸಿ ಅಹ್ಮದಾಬಾದಿನ ಬಬ್ಬ ಎಂಬ ಕೊಲೆಗಾರನೊಬ್ಬನು ೧೭ನೇ ಸಲವಾಗಿ ಮೊನ್ನೆ ೩ ವರ್ಷ ಕಠಿಣ ಸಜೆಗೊಳಗಾದನು.

—ಊರು ಬಿಡಬೇಕೆಂಬ ಆಜ್ಞೆಯನ್ನು ತನ್ನ ಆರ್ಥಿಕ ಕಷ್ಟದಿಂದಾಗಿ ಉಲ್ಲಂಘಿಸಿದ ಮುಂಬಾಯಿಯ ಶ್ರೀ ಆರ್. ಕೆ. ಹರ್ಡೀಕರ್ ಎಂಬವರಿಗೆ ೧ ವರ್ಷ ಕಠಿಣ ಸಜೆ. ಇವರು 'ತಂಬೆ ಹಲ್ತ್ ಹೋಮಿ'ನ ಸರಾಫರು.

—ನಾಗಪುರದಲ್ಲಿ—೨೫ ಜನರು ಒಂದು ಲೋರಿಯಲ್ಲಿ ಸಂತೋಷದಿಂದ ಓಡುತ್ತಿರುವಾಗ ಎರಡು ಚಕ್ರಗಳ ಟಾಯರು ಒಡೆದು ಲೋರಿಯು ಕಾಲು ಮೇಲೆ ತಲೆಕೆಳಗಾಗಿ, ಒಬ್ಬನು ಮಡಿದನು, ೧೩ ಜನರಿಗೆ ಜಖಂ ಆದುದು ವಿಶೇಷವಲ್ಲ.

—ವಿಷಮ ಕಾಯಿಲೆಯಲ್ಲಿರುವ ಶ್ರೀ ಸುಭಾಸಬೋಸರನ್ನು ಯೂರೋಪಕ್ಕೆ ಕಳುಹಿಸಬಹುದೆಂದು ಸರಕಾರವು ಸಮ್ಮತಿಸಿಯದೆ. ಆದರೆ ತನ್ನ ಮಾತಾಪಿತೃಗಳು ಕಟ್ಟಕಡೆಯಲ್ಲಿ ಸಂಕಷ್ಟದಲ್ಲಿರುವುದರಿಂದ ಅವರನ್ನು ಕಾಣದೆ ತಾನು ಅತ್ತ ತೆರಳುವುದು ಅಪ್ರಕೃತವೆಂದು ಘೋಷಿಸಿರುವರು.

—ನಾಗಪುರದಲ್ಲಿ ಮೋಡೆಲ್‌ಮಿಲ್ ಕೆಲಸಗಾರರ ಪರವಾಗಿ ಶ್ರೀ. ರೂಯಿಕರರು ಜೈಲಿನೊಳಗೆ ಉಪವಾಸಕ್ಕಾರಂಭಿಸಿರುವರು!

—ಮುಂಬಾಯಿಯಲ್ಲಿ ತನ್ನ ಹಸ್ತಲಿಪಿಯನ್ನು ಕೇಳಿಕೊಂಡು ಬಂದ ಒಬ್ಬರ ಕೈಯಿಂದ ಕಾಗದ ಲೇಖನಿಯನ್ನು ತೆಗೆದುಕೊಂಡು ಬರ್ನಾರ್ಡ್‌ಶೋರವರು ಎತ್ತಲೋ ಎಸೆದುಬಿಟ್ಟರು!

—ಕಲ್ಕತ್ತದಲ್ಲಿ ಶ್ರೀ. ಜೆ. ಕೆ. ಸರ್ಕಾರರೆಂಬವರು ರೈಲುಪ್ರಯಾಣ ಮಾಡುತ್ತಿದ್ದಾಗ ಇಬ್ಬರು ತರುಣರು ಅವರ ಮುಖದ ಮೇಲೆ ಏನೋ ಒಂದು ಬಗೆಯ ಹುಡಿಯನ್ನೆಸೆದು, ಕಣ್ಣುಕಟ್ಟಿ, ಜೇಬು ಬರಿದು ಮಾಡಿದರು. ತನಿಖೆ ನಡೆಯುತ್ತಿದೆ.

ಮಹಾಲಪುರದ ಡಿ. ಎ. ವಿ. ಕೊಲೇಜಿನ ಛಾತ್ರರ ರಾಮಸಿಂಘರೆಂಬವರಿಗೂ ಮನೆಜಿಂಗ್ ಬೋರ್ಡಿಗೂ ಭೇದಾಭಿಪ್ರಾಯಗಳು ಹುಟ್ಟಿ; ಸರಿಯಾದ ಇತ್ಯರ್ಥವಾಗದೆ ತಾನು ಊಟವೇ ಮಾಡುವುದಿಲ್ಲವೆಂದು ನೊದಲಿನವರು ನಿರ್ಧರಿಸಿರುವರು. ಪ್ರಥಮ ಉಪಾಧ್ಯಾಯ ಸತ್ಯಾಗ್ರಹವಿದು.

—ವೈಸರಾಯರು ಒಂದು ಎಮರ್ಜೆನ್ಸಿ ಸಭೆಯನ್ನು ಕರೆದು, ರಾಜಕೀಯ ವಿಚಾರಗಳನ್ನು ಬಹಳ ರಹಸ್ಯವಾಗಿ ಆಲೋಚಿಸಿಕೊಂಡರು.

—ಡಾ। ಆಲಮರು ಆಫ್ರಿಕದ ಕೆನ್ಯಾಕ್ಕೆ ತೆರಳಿ ಅಲ್ಲೊಂದು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದಿರುವಾಗ ಕೆನ್ಯಾದವರು ಅವರ ಪ್ರವೇಶವನ್ನೇ ತಿರಸ್ಕರಿಸಿ ಇಂಡಿಯಾ ಸರಕಾರಕ್ಕೆ ಬರೆದಿದ್ದಾರೆಂದು ತಿಳಿದು ಬರುತ್ತದೆ.

—ಅಲ್ವಾರಿನ ದಂಗೆಯು ಭಯಸೂಚಕವಾಗಿಯೇ ಇದೆ. ಮೊನ್ನೆ ಮಧ್ಯಾಹ್ನ ಮಹಾರಾಜರು ಊಟ ಮಾಡಿ ಎದ್ದೊಡನೆ ಅಸ್ವಸ್ಥರಾದರು. ಏನೋ ವಿಷಪ್ರಯೋಗ ನಡೆದಿದೆ. ಕೆಲವು ಆಗಲೇ ಭಟ್ಟರನ್ನು ಡಿಸ್‌ಮಿಸ್ ಮಾಡಿದ್ದಾರೆ. ಅಲ್ವಾರು ಸಂಸ್ಥಾನದಲ್ಲೆಂದು ವಿಷಯವನ್ನು ತಿಳಿಯಲು ಸಿದ್ಧತೆಯಾಗಿದೆ.

### ಚಿಕ್ಕಮಗಳೂರು.

ಅಖಿಲ ಭಾರತ ವಸ್ತುಪ್ರದರ್ಶನವು ತಾ. ೩೧ನೇ ಭಾನುವಾರ ಶ್ರೀ ಮೂಕಯ್ಯ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಲ್ಲಿ ಸೇರಲಿರುವುದು. ಇದರ ಸಮಾರಂಭವನ್ನು ಶ್ರೀ ಮಂಡಿತ ಮದನ ಮೋಹನ ಮಾಳವೀಯರು ತೆರೆಯುವರು. ವಸ್ತುಪ್ರದರ್ಶನಕ್ಕೆ ಬೇಕಾದ ಏರ್ಪಾಡುಗಳು ನಡೆಯುತ್ತಾ ಇವೆ.

### ಹಾಸನ.

ಈ ಸಲದ ಜನವರಿ ಪ್ರದರ್ಶನವು ಬಹಳ ಯೋಗ್ಯರೀತಿಯಲ್ಲಿ ನಡೆದಿರುವುದಲ್ಲದೆ ಸಾವಿರಾರು ಜಾನುವಾರುಗಳು ವಿಕ್ರಯವಾಗಿರುವವು. ಮೂರು ನಾಟಕ ಕಂಪೆನಿಗಳೂ ಬಂದಿದ್ದವು ಸ್ವದೇಶಿ ವಸ್ತು ಪ್ರದರ್ಶನ, ಖಾದಿ ವಿಷಯ ಭಾಷಣ ಇವು ಬಹಳ ಯೋಗ್ಯರೀತಿಯಲ್ಲಿ ನಡೆದವು. ಜನಸಂಖ್ಯೆ ಸಾವಿರಗಳಿದ್ದರೂ ಏನೊಂದು ಗಲಾಟೆ ಜಗ್ಗೆ ಇರಲಿಲ್ಲ.

### ಸಕಲೇಶಪುರ.

ಹಾಸನ ಜಾತ್ರೆಗೆ ಬಂದಿದ್ದ ಕೆಲವು ಸಂಚಾರಿ ಫೈಲ್ವಾನರು ಸಕಲೇಶಪುರದಲ್ಲಿ ಬಿದ್ದಿಂದ ತಮ್ಮ ಶಕ್ತಿಯನ್ನು ತೋರಿಸಿ ಜನರ ಭಕ್ತಿ ಎಷ್ಟರ ಮಟ್ಟಿಗಿರುವುದನ್ನು ತೋರಿಸುತ್ತಿರುವರು. ಹೆಚ್ಚಿನ ಜನರು ನೂರಾರು ರೂಪಾಯಿಗಳಿಗೆ ಪಣ ಹಾಕಿ ಸದರಿ ಫೈಲ್ವಾನರಿಗೆ ಕೊಡುತ್ತಿರುವರು.

ಅನಾಮಧೇಯರು ಒಬ್ಬರ ಸಕಲೇಶ್ವರ ಮೋಟರ್ ಕಂಪೆನಿ ಬಸ್ಸಿನಲ್ಲಿ ತನಗೆ ಸಿಕ್ಕಿದ ಒಂದು ಚಿನ್ನದ ಚೈನನ್ನು ಸಂಬಂಧಪಟ್ಟವರಿಗೆ ಮುಟ್ಟಿಸಬೇಕಾಗಿ ಡಾಕ್ಟರ್ ಕೆ. ವಿ. ಹೆಗ್ಗಡೆ ಇವರ ಹೆಸರಿಗೆ ಇನ್ಶೂರ್ ಮಾಡಿ ಕಳುಹಿಸಿರುವರು. ಇದು ಸದರಿ ಡಾಕ್ಟರರ ಭಾವ ಮೈದುನರ ಮಗುವಿನ ಚೈನೆಂದು ತಿಳಿದು ಬರುತ್ತದೆ. ಇಂತಹ ಮಹನೀಯರಿಗೆ ಧನ್ಯವಾದಗಳು

## ದಕ್ಷಿಣ ಕನ್ನಡ.

**ಮಂಗಳೂರು**, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಇದರ ಅಧ್ಯಕ್ಷರಾದ ಶ್ರೀಮಾನ್ ಜಿ. ಕೆ. ದೇವಧರರು ಇದೇ ತಾರೀಖು ೧೦ನೇ ಮಂಗಳವಾರ ಸಾಯಂಕಾಲ ಇಲ್ಲಿಗೆ ಬಕ್ಕೃಷ್ಣ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಬೇರೆ ಬೇರೆ ಸಂಸ್ಥೆಗಳನ್ನೂ, ಕೃಷ್ಣಾನಂದ ಮಹಿಳಾ ಸೇವಾಶ್ರಮವನ್ನೂ ಸಂದರ್ಶಿಸಿ, ತಾ. ೧೨ನೇ ಗುರುವಾರ ಇಲ್ಲಿಂದ ಕಲ್ಲಿಕೋಟೆಗೆ ಹೊರಟುಹೋದರು.

### ಚಿಮಿಣಿ ಎಣ್ಣೆಯ ದರದ ಸ್ಪರ್ಧೆ.

೧೯೦೦ ಗಾಂಧಿ ಮಾರ್ಕಿನ ಚಿಮಿಣಿ ಎಣ್ಣೆಯ ಮಚ್ವೆಯು ಇಲ್ಲಿಗೆ ಬಂದು ಈಗಾಗಲೇ ತಂಗಿದೆ. ಇಲ್ಲಿಯ ಬರ್ಮಾಶೆಲ್ ಕಂಪೆನಿಯವರು ಡಬ್ಬಿ ಒಂದರಲ್ಲಿ ೧೦ ಆಣೆ ದರ ಕಮ್ಮಿ ಮಾಡಿರುವರು. ಬಡವರಿಗೆ ತುಂಬಾ ಪ್ರಯೋಜನಕರವಲ್ಲವೇ?

ನಿನ್ನೆ ದಿನ ಮಧ್ಯಾಹ್ನ ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯ ಹಿಂಭಾಗದ ಒಂದು ಬಾವಿಯಲ್ಲಿ ಒಂದು ಶವವು ದೊರೆತಿದೆ. ನಾಲ್ಕಾರು ದಿನಗಳ ತನಕ ನೀರಲ್ಲಿದ್ದುದರಿಂದ ಶವವು ವಿರೂಪ ಹೊಂದಿದೆ. ತನಿಖೆ ನಡೆಯುತ್ತಿದೆ.

ಇದೇ ತಾ. ೨೨ನೇ ರವಿವಾರ ಸಾಯಂಕಾಲ ೫-೩೦ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಒಂದು ಸಾರ್ವಜನಿಕ ಸಭೆಯು ಜರಗುವುದಿದ್ದು,—ಸಭೆಯಲ್ಲಿ ಹರಿಜನರು ದೇವಾಲಯಗಳನ್ನು ಪ್ರವೇಶಿಸುವ ಕುರಿತಾಗಿ ಬಲ್ಲವರ ಭಾಷಣಗಳಾಗಲಿವೆ. ಸರ್ವರೂ ದಯಮಾಡಿಸಬೇಕಾಗಿ ವಿನಂತಿಯಿದೆ.

ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ಕಳೆದ ಶನಿವಾರ ಎಂದಿನಂತೆ ವಿಜೃಂಭಣೆಯಿಂದ ಜರಗಿತು. ಶಾಲಾವರದಿ ವಾಚನ, ಇನಾಮು ಹಂಚೋಣ ಇತ್ಯಾದಿ ಕಾರ್ಯಕ್ರಮಗಳು ಯಥಾ ಸಾಂಗವಾಗಿ ನಡೆದು ಕೊನೆಗೊಂಡುವು. ಈ ಸಂದರ್ಭದಲ್ಲಿ ಶ್ರೀ, ಎಂ. ಎನ್. ಕಾಮತರಿಂದ ರಚಿತವಾದ 'ಉದ್ಧಾರಾನಂದ' ಮತ್ತು 'ಶ್ರೀಕೃಷ್ಣ ಸಂಧಾನ' ಎಂಬ ಒಂದಂಕದ ಎರಡು ಉತ್ತಮ ನಾಟಕಗಳೂ ಯಶಸ್ವಿಯಾಗಿ ಅಭಿನಯಿಸಲ್ಪಟ್ಟುವು.

ಮಿತ್ರಮಂಡಳಿಯ ಆಶ್ರಯದಲ್ಲಿ ತಾ. ೫-೨-೩೩ರಂದು ಒಂದು ಕನ್ನಡ ಭಾಷಣ ಸ್ಪರ್ಧೆ ನಡೆಯಲಿರುವುದು. ಇದರಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲರೂ ಭಾಗವಹಿಸಲು ಅರ್ಹರಾಗಿರುವರೆಂದು ತಿಳಿಯುತ್ತೇವೆ.

ಮಿತ್ರಮಂಡಳಿಯ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಬಗ್ಗೆ ಅದರ ಕಾರ್ಯನಿರ್ವಾಹಕ ಮಂಡಲದವರು ಸಭೆ ಸೇರಿ, ಮುಂದೆ ಮಂಡಳಿಗೆ ವಿದ್ಯಾರ್ಥಿಗಳನ್ನಲ್ಲದೆ ಇತರ ಸಾಹಿತ್ಯಭಕ್ತರನ್ನೂ ಕೂಡಿಸಿಕೊಳ್ಳುವ ನಿರ್ಧಾರವಾಗಿದೆ. ಪುಸ್ತಕ ಪ್ರಕಟಣೆಗಾಗಿ ಶ್ರೀಗಳಾದ ಟಿ. ನಾರಾಯಣ ಭಟ್ಟ, ವಿದ್ವಾನ್. ಬಿ. ರಘುನಂದ ಎಂ. ಎ. ಯು. ಕೇಶವ ರಾವ್ ಬಿ. ಎ. ಎಲ್. ಟಿ., ಕಡೆಂಗೋಡ್ಲು ಶಂಕರ ಭಟ್ಟ ವಿದ್ವಾನ್. ಎಂ. ಎನ್. ಕಾಮತ್, ಎನ್. ಪಿ. ಸುಬ್ಬಣ್ಣ ಭಟ್ಟ, ಮತ್ತು ಬಿ. ಜಯಾನಂದ ನಾಯ್ಕ ಇವರಿಷ್ಟು ಮಂದಿಯಿರುವ ಸಮಿತಿಯೊಂದು ಏರ್ಪಟ್ಟಿದೆ. ಸದಸ್ಯ ವರ್ಗದಲ್ಲಿ ಪೋಷಕರಿಗೆ ರೂ. ೫, ಪ್ರೋತ್ಸಾಹಕರಿಗೆ ರೂ. ೨ ಮತ್ತು ಸದಸ್ಯರಿಗೆ ರೂ. ೧ರಂತೆ ನಿಶ್ಚಯಿಸಲಾಗಿದೆ. ಕನ್ನಡ ಭಾಷಾಭಿಮಾನಿಗಳೆಲ್ಲ ಸರ್ವ ವಿಧದಿಂದಲೂ ಸಹಕರಿಸುವರೆಂದು ನಂಬಿದ್ದೇವೆ.

ಇದೇ ಬರುವ ತಾ. ೨೯ನೇ ಶನಿವಾರ ಅಪರಾಹ್ನ ಗಂಟೆ ೩-೩೦ಕ್ಕೆ ಸ್ಥಳೀಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ, ದಿವಂಗತ ದೇಶಭಕ್ತ ಮಂಜೇಶ್ವರ ಧರ್ಮಶಕ್ತಿಯವರ ಶ್ರೈಮಾಸಿಕ ಆರಾಧನೆ ನಡೆಯಲಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ವೈದ್ಯಕೀಯ ಸಂಘದ ಒಂದು ಸಭೆಯು ತಾ. ೨೧ನೇ ದಿನ ೬-೩೦ಕ್ಕೆ ವೆನ್‌ಲಾಕ್ ಆಸ್ಪತ್ರೆಯಲ್ಲಿ ಜರಗುವುದು. ಶ್ರೀ ಪಿ. ಪಿ. ಕಾಮತ್ ಯಂ. ಬಿ. ಎಂಡ್ ಬಿ. ಯಸ್. ಇವರು ಭಾಷಣ ಮಾಡಲಿರುವರು.

ನಗರ ಸಭೆಯ ಒಂದು ಸಭೆಯು ತಾ. ೨೩ನೇ ದಿನ ೫-೩೦ಕ್ಕೆ ಆಫೀಸಿನಲ್ಲಿ ಜರಗುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಒಂದು ಶಾಖೆಯನ್ನು ಹೊನ್ನಾವರದಲ್ಲಿ ತಾ. ೨೭ನೇ ಶುಕ್ರವಾರ ದಿವಾ ಗಂಟೆ ೧೧ಕ್ಕೆ ಹೊನ್ನಾವರ ಬಂದರ 'ಶ್ಯಾನುಭಾಗ ಬಿಲ್ಡಿಂಗ್ಸ್' ಇದರ ಉಪ್ಪರಿಗೆಯಲ್ಲಿ ತೆರೆಯಬೇಕೆಂದು ನಿಶ್ಚಯಿಸಿರುತ್ತಾರೆಂದು ಅದರ ಚೆಯರ್‌ಮೆನರು ತಿಳಿಸುತ್ತಾರೆ.

**ಶ್ರೀಕೃಷ್ಣಾ ಸಿನೆಮಾ ಟಾಕಿ ಮಂದಿರದಲ್ಲಿ** ತಾ. ೨೨ರಿಂದ "ದಿ ರೈಸ್ ಫೋ ಟ್ರೈಲ್" ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು. ಅತಿ ಬೇಗನೆ "ಶ್ರೀಕೃಷ್ಣಾವತಾರ" ಮತ್ತು "ಬ್ರೋಡ್ ವೆ ಮೆಲೊಡಿ" ಎಂಬ ಚಿತ್ರಗಳನ್ನು ಪ್ರದರ್ಶಿಸಲಾಗುವುದು.

**ಸುರತ್ಕಲ್** — ಇಲ್ಲಿಯ ಶ್ರೀ ಶಿರಶಿಲೇಶ್ವರ (ಸದಾಶಿವ) ದೇವಾಲಯದಲ್ಲಿ ವರ್ಷಂಪ್ರತಿ ನಡೆಯತಕ್ಕ ಜಾತ್ರೆಯು, ಇದೇ ತಾ. ೧೧ನೆಯ ದಿನ ಧ್ವಜಾರೋಹಣೋತ್ಸವದಿಂದ ಪ್ರಾರಂಭಿಸಿ ತಾ. ೧೪, ೧೫ನೆಯ ದಿನಗಳಲ್ಲಿ 'ರಥಾರೋಹಣ' ಮತ್ತು ಅವಭೃತೋತ್ಸವ'ಗಳಿಂದ ೫ ದಿನಗಳ ಉತ್ಸವಗಳು ಮೊಕ್ತೇಸರ ಬ್ರಹ್ಮಶ್ರೀ ನರಸಿಂಹ ವೈದ್ಯರಿಂದ ಜರಗಿಸಲ್ಪಟ್ಟಿತು. ಮೂರುನಾಡು ಮಾಗಣೆಗೆ ಸಂಬಂಧಿಸಿದ ಗ್ರಾಮಸ್ಥರುಗಳು ಈ ದೇವಾಲಯದ ಭಕ್ತ ವರ್ಗದವರಿರುತ್ತಾ, ಬಲು ಜೀರ್ಣಾವಸ್ಥೆಯಲ್ಲಿರುವೀ ದೇಗುಲೋದ್ಧಾರ, ಜಾತ್ರೆಗಳ ಕಾಲ ಸಮಾರಾಧನೆಗಳಿಗೆ ಭಜಕವೃಂದದ ಮನವನ್ನು ಆಕರ್ಷಿಸಿಕೊಳ್ಳಲು ಮೊಕ್ತೇಸರರು ಪ್ರಯತ್ನಿಸದಿರುವುದು ತುಂಬಾ ಶೋಚನೀಯವಾಗಿದೆ. ಪುರಾತನ ಪ್ರತಿಷ್ಠೆಯ ಪುರಾತನ ದೇವಾಲಯವಾದೀ ಕಟ್ಟಡದ ಜೀರ್ಣೋದ್ಧಾರ ಕಾರ್ಯಗಳ ಹಾಗೂ ದೇವಸ್ಥಾನದ ನಿತ್ಯ ನೈಮಿತ್ತಿಕಾದಿಗಳ ಈಗಣ ಲೋಪಗಳೇ ಮೊದಲಾದವುಗಳನ್ನು ಸರಿಗೊಳಿಸುವ "ಆಲೋಚನ ಕೂಟ"ವೊಂದನ್ನು ಮೂರುನಾಡು ಮಾಗಣೆಯ ಗ್ರಾಮ ಪ್ರಮುಖರು ನೆರವೇರಿಸುವಂತೆ ಸದ್ಬುದ್ಧಿಯನ್ನು ಸದಾಶಿವನೀಯಲಿ!

ಇದೇ ತಾ. ೨೫ನೆಯ ರಾತ್ರಿ ಇಲ್ಲಿಯ ಸಂತೆಕಟ್ಟೆ ಮೈದಾನಿನಲ್ಲಿ ಮೂಲ್ಕಿ ಮೇಳದ 'ಬಯಲಾಟ'ವೊಂದನ್ನು ಕೆಲ ಸ್ಥಳೀಕರೊಂದಾಗಿ ಜರುಗಿಸಲಿರುವರೆಂದು ತಿಳಿದುಬರುತ್ತದೆ.

ಹೊಸಬೆಟ್ಟು ಗ್ರಾಮದಲ್ಲಿ ಹತ್ವಾರ ಮನೆಯವರಿಂದ ವರ್ಷಂಪ್ರತಿ ನಡೆಯತಕ್ಕ 'ಓಟದ ಕೋಣಗಳ ಸ್ಪರ್ಧೆ' (ಕಂಬಳ)ಯು ಇದೇ ತಾ. ೨೬ನೆಯ ದಿನ ನೆರವೇರಲಿರುವುದೆಂದೂ, ಸರ್ವರಿಗೂ ಸುಸ್ವಾಗತವಿದೆಯೆಂದೂ ರಾ। ಶ್ರೀ। ಪಟೇಲ ಹತ್ವಾರ್ ಸುಬ್ಬಣಯ್ಯನವರು ತಿಳಿಸುತ್ತಾರೆ.

**ಉಡುಪಿ:** — ಇಲ್ಲಿ ವಾಡಿಕೆಯಂತೆ ತಾ. ೮ರಿಂದ ೧೪ರ ವರೆಗೆ ಶ್ರೀ ಸನ್ನಿಧಿಯಲ್ಲಿ ಮಕರ ಸಂಕ್ರಾಂತಿ ಜಾತ್ರೆಯು ಬಹು ವಿಜೃಂಭಣೆಯಿಂದ ನೆರವೇರಿತು. ಹಾಜರಿದ್ದ ಐವರು ಶ್ರೀ ಪಾದಂಗಳವರ ಪೈಕಿ ಶ್ರೀ. ಫಲಿಮಾರು ಮಠದ ಶ್ರೀ. ರಘುವರ್ಯ ಶ್ರೀ. ಪಾದಂಗಳವರು ಮಾತ್ರ ಶುದ್ಧ ಖಾದಿಯಲ್ಲೇ ವಿರಾಜಿಸುತ್ತಿದ್ದುದು ಖಾದಿ ಭಕ್ತರಿಗೆ ತುಂಬಾ ಆನಂದದಾಯಕವೂ ದೇಶ ಬಾಂಧವರಿಗೆ ಅನುಸರಣೀಯವೂ ಆಗಿತ್ತು.

ಜಾತ್ರೆ ಕಾಲದಲ್ಲಿ ಅಸ್ಪೃಶ್ಯತಾ ನಿವಾರಣಾ ಸಭೆಯ ನೇತೃತ್ವದಲ್ಲಿ ಮಹಾಸಭೆ ಸೇರಿ ಶ್ರೀ. ರಂಗ ಅಯ್ಯಂಗ್ ಮತ್ತು ಡಾ. ಸುಬ್ಬರಾಯನ್ ಇವರು ತರಲಿರುವ ಮಸೂದೆಗಳಿಗೆ ವೈಸರಾಯರು ಅನುಮತಿ ನೀಡಬೇಕೆಂದು ಠರಾವುಗಳು ಮಂಜೂರಾದವು.

ಹಿಂದೂ ಧರ್ಮ ಪ್ರಚಾರಿಣಿ ಸಭೆಯ ಪರವಾಗಿ ಶ್ರೀ. ಅಂಕುರಾಜು ಸುಬ್ರಾಯ ಶರ್ಮರು ತಾ. ೧೪ನೇ ಸಾಯಂಕಾಲ ಸನಾತನ ಧರ್ಮ, ಸಂಧ್ಯಾವಂದನೆ ಕುರಿತು ಭಾಷಣವಿತ್ತರು.

ಡಿಸೆಂಬರ ತಾ. ೩೧ನೇ ಮಧ್ಯ ರಾತ್ರಿ ಕಾಂಗ್ರೆಸು ಚಟುವಟಿಕೆಗಳನ್ನು ಮಾಡಿದುದಕ್ಕಾಗಿ ಆಪಾದಿತರಾದ ಶ್ರೀ. ನಾಗೇಶ ಶೆಣೈ, ಅಂತಯ್ಯ ಶೆಟ್ಟಿ ಮತ್ತು ವಿಠ್ಠಲ ಹೆಗ್ಡೇರವರನ್ನು ಸ್ಪೇಶಲ್ ಸಬ್ ಮೇಜಿಸ್ಟ್ರೇಟರು ತಾ. ೧೬ರಲ್ಲು ತನಿಖೆ ನಡಿಸಿ, ಸದರಿಯವರನ್ನು ೩, ೪ ಮತ್ತು ೩ ತಿಂಗಳಂತೆ ಅನುಕ್ರಮವಾಗಿ ಕಠಿಣ ಶಿಕ್ಷೆಗೆ ಗುರಿಮಾಡಿದರು.

ಮಂಗಳೂರಿನಿಂದ ಸ್ವದೇಶಿ ಪ್ರಚಾರಕ ಸಂಘದ ಕಡೆಯಿಂದ ಶ್ರೀ ಬಿ. ಕೋಚಣ್ಣ ಭಂಡಾರಿಯವರ ನೇತೃತ್ವದಲ್ಲಿ ಪ್ರಚಾರದ 'ಮೋಟಾರುವಾನ್'ನಲ್ಲಿ ಖಾದಿ ಮತ್ತು ಇತರ ಸ್ವದೇಶಿ ಸಾಮಾನುಗಳನ್ನು ಜಾತ್ರೆಕಾಲದಲ್ಲಿ ಪ್ರಚಾರಕ್ಕಾಗಿ ತಂದಿರುತ್ತಾರೆ.

ತಾಲೂಕು ಬೋರ್ಡಿನ ಪರವಾಗಿ ಉಡುಪಿ ಶಹರಿಗೆ ನಿಯೋಗಿಸಲ್ಪಟ್ಟಿದ್ದ ಮಿಡ್‌ವೈಫ್ ರಜೆ ಮೇಲೆ ಹೋಗಿರುತ್ತಾ, ಬದಲಿಗೆ ಮಿಸ್. ಸುಶನ್ನಾ ಸುಮಿತ್ರಾ ಎಂಬವರು ಕೆಲಸವಹಿಸಿರುವರು.

ಇಲ್ಲಿ ಕೆಲವು ಯುವಕರು ಕೂಡಿ 'ಮಿತ್ರ ಮಂಡಳಿ'ಯೆಂಬ ಹೆಸರಿನಿಂದೊಂದು ಸಂಘಟನೆ ಸ್ಥಾಪಿಸಿ—ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ರೋಮನ್ ಕೆಥೋಲಿಕ್ ಇಗರ್ಜಿಯೆದುರು ತೆರೆಯಲಾಗಿದೆ.

**ಕಾಸರಗೋಡು** — ಪಡ್ರೆ ಪಟೇಲ ವಿಷ್ಣು ಕದಂಬಳಿತ್ತಾಯರು ಜಂಗ್ಲಿ ಕಾನೂನನ್ನು ಭಂಗಗೊಳಿಸಿದ್ದರೆಂದು ಕಾಸರಗೋಡು ಸ್ಪೇಶಲ್ ಸಬ್ ಮೇಜಿಸ್ಟ್ರೇಟರು ೬ ತಿಂಗಳ ಶಿಕ್ಷೆ ವಿಧಿಸಿದದುಕ್ಕೆ ಸದರಿ ಪಟೇಲರು ಮಾಡಿದ ಅಪೀಲಿನಲ್ಲಿ ಶಿಕ್ಷೆ ಕಾಯಮ್ ಆಯಿತು.

ಇದೇ ಕಳೆದ ಶನಿವಾರ ತಾ. ೭ರಲ್ಲು ಕಾಸರಗೋಡು ಟೌನ್ ಎಲಿಮೆಂಟರಿ ಶಾಲೆಯಲ್ಲಿ ಸೆಂಟ್ರಲ್ ಸ್ಕೂಲ್ ಉಪಾಧ್ಯಾಯರ ಒಂದು ಸಭೆಯು ಡಿಪ್ಯುಟಿ ಇನ್ಸ್‌ಪೆಕ್ಟರ್ ರಾ. ಬಿ. ವೆಂಕಟ್ರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ಶಂಕರನಾರಾಯಣ ಪ್ರಸಾದಿಕ ಯಕ್ಷಗಾನ ನಾಟಕ ಸಭೆಯವರು ಇದೇ ಕಳೆದ ಶನಿವಾರ ರಾತ್ರಿ "ಸುಭದ್ರಾಪರಿಣಯ" ಕಥೆಯನ್ನು ಶ್ರೀ. ಬಲಿಪ ನಾರಾಯಣ ಭಾಗವತರ ನೇತೃತ್ವದಲ್ಲಿ ಅಭಿನಯಿಸಿದರು. ಇದೇ ಬರುವ ಬುಧವಾರ "ದಾನಶೂರ ಕರ್ಣ" ಎಂಬ ಕಥೆಯನ್ನು ಅಭಿನಯಿಸಲಿಕ್ಕಿರುವರು.

ಇದೇ ತಿಂಗಳ ತಾ. ೧೨ರಲ್ಲು ಮದ್ರಾಸಿನಲ್ಲಿ ಪಾಸಾಗಿರುವ ಮರುಮಕ್ಕತ್ತಾಯ ಮಸೂದೆಯನ್ನು ಪರ್ಯಾಲೋಚಿಸುವುದಕ್ಕಾಗಿ ಮೊದಲೇ ಪ್ರಕಟಿಸಿದಂತೆ ಈ ತಾಲೂಕಿನ ಕಾಸರಗೋಡು ಕಸಬಾ ಅಡ್ಕತ್ತಬೈಲು, ಕೂಡ್ಲು, ಶಿರಿಬಾಗಿಲು, ಪಟ್ಲ ಮತ್ತು ನೆರೆ ಗ್ರಾಮಗಳ ಅಳಿಯ ಕಟ್ಟನ್ನು ಆಚರಿಸುವವರ ಸಭೆಯು ರಾವ್ ಸಾಹೇಬ್ ಶಿರಿಬಾಗಿಲು ರಾಮಯ್ಯ ಅಳ್ವರ ಅಧ್ಯಕ್ಷತೆಯಲ್ಲಿ ಜರಗಿ. (೧) (Reformed Conference)ನಲ್ಲಿ ಸೂಚಿಸಿದ್ದ ತಿದ್ದುಪಡಿಗಳಿಗೆ ಒಳಪಟ್ಟು ಮರುಮಕ್ಕತ್ತಾಯ ಬಿಲ್ಲು ಪಾಸಾಗುವುದು ಸರ್ವರಿಗೂ ಸಮ್ಮತವಾಗಿರುತ್ತದೆ ಎಂತಲೂ (೨) ಅಳಿಯಸಂತಾನ ಲೀಗ್ ಎಂಬ ಸ್ಥಾಪಿಸಿ—ಆ ಸ್ಥಾಪನೆಯವರು ಬಿಲ್ಲು ಪಾಸಾಗದಂತೆ ಮಾಡುವ ಕೆಲಸಗಳು ಸ್ವಾರ್ಥತೆಯಿಂದ ಮಾಡುವಂಥಾದ್ದು ಮತ್ತು ಬಹುಮತದ ಅಭಿಪ್ರಾಯಕ್ಕೆ ವಿರೋಧವಾದದ್ದು ಎಂತಲೂ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುದಲ್ಲದೆ, ಇದನ್ನು ಗವರ್ನರರಿಗೂ ಲಾ ಮೆಂಬರರಿಗೂ, ತಂತಿಮೂಲಕ ತಿಳಿಸಬೇಕಾಗಿ ಪ್ರಸಿಡೆಂಟರಿಗೆ ಅಧಿಕಾರ ಕೊಡಲಾಯಿತು.

**ಮೂಲ್ಕಿ:** — ನಮ್ಮ ಊರಿನವರಾದ ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕ ರಾ। ಯು. ಕೇಶವರಾವ್, ಬಿ. ಎ. ಎಲ್. ಟಿ. ರವರ ಪರಿಶ್ರಮೋತ್ಸಾಹಗಳಿಂದ ಇಲ್ಲಿ ಒಂದು "ಹಿಂದೀ" ಕ್ಲಾಸು ತೆರೆಯಲ್ಪಟ್ಟಿದೆ. ಈಗಾಗಲೇ ಸುಮಾರು ೪೦ ವಿದ್ಯಾರ್ಥಿಗಳು ಸೇರಿರುವರು. ಶ್ರೀ ರಾಯರ ಕಾರ್ಯವು ಸ್ತೋತ್ರಾರ್ಹವಾಗಿದೆ.

ಸ್ಥಳೀಕ ಯೂನಿಯನ್ ಕ್ಲಬ್ಬಿನ ನೇತೃತ್ವದಿಂದ ಜರಗಲಿರುವ ಸಾರ್ವಜನಿಕ ಭಾಷಣವು ಎಂದಿನಂತೆ ಈ ವರ್ಷ ಶ್ರೀ. ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ರವರಿಂದ ಪ್ರಥಮತಃ ತೆರೆಯಲ್ಪಡುವುದು.

**ಅಜೆಕಾರು:** — ಇದೇ ಬರುವ ಫೆಬ್ರುವರಿ ತಾ. ೧೫ಕ್ಕೆ ಎಣ್ಣೆ ಹೊಳೆಯಲ್ಲಿ ನವೀನವಾಗಿ ಏರ್ಪಡಿಸಿದ ಗದ್ದೆಯಲ್ಲಿ "ಓಟದ ಕೋಣಗಳ ಪಂದ್ಯಾಟ"ವು ಜರಗುವುದೆಂದೂ, ಅದರಲ್ಲಿ ಪ್ರಥಮ ಬಂದವುಗಳಿಗೆ ರಜತ ಪದಕವನ್ನೂ, ಹಲಗೆಯಲ್ಲಿ ೬॥ ಕೋಲಿನ ನಿಶಾನಿಗೆ ನೀರು ಹಾರಿದವುಗಳಿಗೆ ಚಿನ್ನದ ಪದಕವನ್ನೂ ಕೊಡಲಾಗುವುದೆಂದೂ, ಎಲ್ಲರೂ ತಮ್ಮ ಓಟದ ಕೋಣಗಳ ಸಮೇತ ದಯಮಾಡಿ ಬಂದು ಈ ಪಂದ್ಯಾಟವನ್ನು ಸಾಂಗವಾಗಿ ಕೊನೆಗೊಳಿಸುವಂತೆ ಪ್ರೋತ್ಸಾಹಿಸಬೇಕಾಗಿ ಇಲ್ಲಿಯ ಶ್ರೀ. ದೇವರಾಜ ಹೆಗ್ಡೆಯವರ ಸವಿನಯ ವಿನಂತಿ ಇದೆ.

**ಪುರಂಗಿಪೇಟೆ** — ಇಲ್ಲಿಯ ಶ್ರೀ ರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ ತರ್ಕ ಸಭೆಯು ಶ್ರೀಯುತ ಆಕರ್ಷಕ ವೆಂಕಟರಾಯರವರ ಅಧ್ಯಕ್ಷತೆಯಲ್ಲಿ ಜರಗಿತು. ಚರ್ಚೆಯ ವಿಷಯವು ಪೂರ್ವಕಾಲದ ಕಟ್ಟಡಗಳ ಮತ್ತು ಈಗಿನ ಕಟ್ಟಡಗಳ ವಿಷಯವಾಗಿತ್ತು. ವಿದ್ಯಾರ್ಥಿಗಳೂ, ಅಧ್ಯಾಪಕರೂ ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರ ಉಪಸಂಹಾರ ಭಾಷಣವಾದ ಬಳಿಕ ವಂದನಾರ್ಪಣೆಯಾಗಿ ಸಭೆಯು ಮುಕ್ತಾಯವಾಯಿತು.

**ಮೂಡಬಿದ್ರೆ** — ಇಲ್ಲಿಯ ದಿಗಂಬರ್ ಜೈನ್ ಆಂಗ್ಲೋ ಸಂಸ್ಕೃತ ಪಾಠಶಾಲೆಯ ರಜತ ಮಹೋತ್ಸವ ಸಮಾರಂಭವು ಇದೇ ತಿಂಗಳ ತಾ. ೯ನೇ ಸೋಮವಾರ ಸಾಂಗವಾಗಿ ನೆರವೇರಿತು.

ಕಾರ್ಯಕ್ರಮದಂತೆ ಪ್ರಾತಃಕಾಲ ೭ರಿಂದ ೮ ಘಂಟೆಯ ವರೆಗೆ ಶಾಲೆಯಲ್ಲಿ ದೇವರ ಪೂಜೆಯು ಸಂಗೀತದೊಡನೆ ನಡೆಯಿತು. ೭-೦೦ದ ೧೧ರ ವರೆಗೆ ನಡೆದ ಶಾಲಾ ಮಕ್ಕಳ ಪಂದ್ಯಾಟವು ಪ್ರೇಕ್ಷಕರನ್ನು ಸಂತೋಷಪಡಿಸಿದುವು. ನಂತರ ಸರ್ವರಿಗೂ ಔತಣವು ನಡೆಯಿತು. ಜನಸಂದಣಿಯು ಪ್ರತಿ ಕ್ಷಣದಲ್ಲಿಯೂ ಹೆಚ್ಚುತ್ತಿತ್ತು. ಮಧ್ಯಾಹ್ನ ೩ರಿಂದ ೬-೩೦ರ ವರೆಗೆ ಸಭೆ ಜರಗಿ ಧಾರ್ಮಿಕ ಉಪನ್ಯಾಸಗಳು ಜರಗಿದುವು. ಈ ಸಮಯದಲ್ಲಿ ಶ್ರವಣ ಬೆಳ್ಗೊಳದ ಶ್ರೀ ಸ್ವಾಮಿಯವರು ಧರ್ಮೋಪದೇಶವೆಂಬ ಅಮೃತ ವೃಷ್ಟಿಯನ್ನು ಕರೆದುದಲ್ಲದೆ ಈ ಮೇಲಿನ ಪಾಠಶಾಲೆಯ ಸ್ಥಾಪನೆ ಅದರ ಬೆಳವಣಿಗೆಯ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿ ಅದಕ್ಕೆ ಭವಿಷತ್ಭಾಗ್ಯವನ್ನು ಬಯಸಿ, ಸ್ಥಾಪಕರನ್ನೂ ಸಂಚಾಲಕರನ್ನೂ, ಧನಸಹಾಯವಿತ್ತ ಮಹನೀಯರನ್ನೂ ಹರಸಿದರು. ಶ್ರೀಯುತ ಶೀತಳ ಪ್ರಸಾದಜೀಯವರು ಜೈನ ಧರ್ಮದ ವಿಷಯ ಭಾಷಣವನ್ನಿತ್ತರು.

# ಮಹಾತ್ಮಾ ಗಾಂಧಿಯವರ ಪ್ರತಿಭೆಯ ನೆಲೆಯೆಲ್ಲಿ?

**"The Mahatma combines simplicity with vigour. The simple, short, well-balanced sentences go straight to the heart like unerring shafts."**

ಮಹಾತ್ಮಾ ಗಾಂಧಿಯವರು ಪ್ರಪಂಚದ ಅಗ್ರಗಣ್ಯ ಪುರುಷರಲ್ಲಿ ಪ್ರಥಮ ಶ್ರೇಣಿಯವರೆಂದು ಯಾರಾದರೂ ಒಪ್ಪಲಿ ಅಥವಾ ಒಪ್ಪದಿರಲಿ,—ಅವರು ಅದ್ವಿತೀಯ ಪುರುಷರೆಂಬುದಕ್ಕೆ ಸಂದೇಹವಿಲ್ಲ. 'ಮಹಾತ್ಮಾ'ನೆಂಬ ಉಪನಾಮಕ್ಕರ್ಹನಾದ ಒಬ್ಬ ವ್ಯಕ್ತಿಯನ್ನು ಪ್ರಪಂಚದಲ್ಲೆಲ್ಲ ಅರಸುತ್ತ ಹೋದರೆ, ಕೊನೆಗೆ, ಗಾಂಧಿಜೀಯವರಲ್ಲದೆ ಬೇರೆಯವರು ದೊರೆಯಲಸದಳ. ಅವರು ಅಷ್ಟು ಧೀಮಂತರು ಅನುಪಮರು—ಪ್ರತಿಭಾಸಂಪನ್ನರು. ಅಂದು ಕ್ರೈಸ್ತನು ತನ್ನವರಿಗಾಗಿ ಸಾಯಲು ಸಿದ್ಧನಾದ ಸಂತನೆಂದಾದರೆ, ಇಂದು ಗಾಂಧಿಜೀಯವರು ತನ್ನವರಿಗಾಗಿ ಸಾಯ ಹೊರಟ ಬಂಟರು. ಅಂದಿನ ಮಹಮ್ಮದರು ಕೊರಾನಿನ ಕರ್ತೃವಾದರೆ ಇಂದಿನ ಬಾಪೂಜೀಯವರು ಗೀತೆಯ ಭಕ್ತರು. ಅಂದಿನ ಶ್ರೀ ಕೃಷ್ಣನು ಭಕ್ತರ ಬಂಧುವೆಂದಾದರೆ ಇಂದಿನ ಮಹಾತ್ಮರು ಬಡವರ ಸೇವಕ. ಅಂದಿನ ಜೊರಾಷ್ಟರರು ಜಂದವೆಸ್ತದ ತಾತನೆಂದಾದರೆ ಇಂದಿನ ಮೋಹನರು ಹರಿಜನರ ಆತ್ಮಪ್ರೀತ.

ಮಹಾತ್ಮಾ ಗಾಂಧಿಯವರನ್ನು ಸಂದರ್ಶಿಸಿದ ಎಂತಹ ವೈರಿಯೂ ತಟ್ಟನೆ ಕರಗಿ ನೀರಾಗಿ ಬತ್ತಿದ ಹೊಳೆಯಂತೆ ಹರಿಯುತ್ತಾನೆ. ಅವರನ್ನು ಕಂಡವನು ಅನಿರೀಕ್ಷಿತ ಮನೋಪಲ್ಲಟನೆಯನ್ನು ಹೊಂದುತ್ತಾನೆ! ಅವರ ಲೇಖನಗಳನ್ನು ಓದಿದವನು ಅವರನ್ನು ತನ್ನಾತ್ಮದಲ್ಲಿ ಜೋಪಾನವಾಗಿರಿಸಿಬಿಡುತ್ತಾನೆ. ಅವರನ್ನು ಇಂದು ಹಿಂದಿನಿಂದ ನಿಂದಿಸಿದ ವ್ಯಕ್ತಿಯು ನಾಳೆ, ಮುಂದೆ ನಿಂತರೆ, ನಿಶ್ಶಕ್ತನಾಗಿ, ನಿರುಪಾಯನಾಗಿ ಅವರ ಪದತಲಕ್ಕೆ ಬಿದ್ದುಬಿಡುತ್ತಾನೆ. ಗಾಂಧೀ-ಅರ್ವಿನ ಸಂಧಿಯ ಸಮಯದಲ್ಲಿ ಅರ್ವಿನರು ಏನಾದರು? ಹೇಗಾದರು? ಮಹಾತ್ಮರ ಈ ಪ್ರತಿಭೆಯ ನೆಲೆಯೆಲ್ಲಿ? ಗಾಂಧಿಯವರು ಮಾನವಕೋಟಿಯಲ್ಲಿ ಮುಂದಾಳುವಾಗಿ ನಿಲ್ಲಲೇನು ಕಾರಣ? ಅವರ ಅಂತಹ ಮಹಾತ್ಮೆಯಾದರು ಏನ? ಸಾಧಾರಣ ಮನುಷ್ಯನಿಗಿಂತ ಅವರು ಯಾವ ವಿಧದಲ್ಲಿ ಹೆಚ್ಚಿನವರು? ಇವನ್ನು ವಿವೇಚಿಸುವುದಕ್ಕಾಗಿ ಈ ಲೇಖನವನ್ನು ಬರೆಯಲಾಯಿತು.

ಬಾಪೂಜೀಯವರು ಶುದ್ಧ ಸರಳತೆಯ, ನಿಶ್ಚಲಭಕ್ತಿಯ, ಅಗಾಧ ಪ್ರೇಮದ, ನಿಧಿ—ಭಂಡಾರ. ಅವರು ಅಗರ್ಭಮಹಾತ್ಮರು—ಆಜನ್ಮ ಸತ್ಯಾಗ್ರಹಿಗಳು. ಜೀವನ್ಮುಕ್ತರು. ಇವುಗಳೇ ಅವರ ಪ್ರತಿಭಾ ಕಿರಣಗಳು. ಈ ಭಾಸ್ಕರನ ತೇಜೋಮಯ ಕಿರಣದ ಕಿಡಿಕಿಡಿ ಶಕ್ತಿಗೆ ಆಧಾರಭೂತ ಗುಣಧರ್ಮಗಳೇ ಪುಗಳು.

ನುಡಿಯಲ್ಲಿ ಅವರು ಶುದ್ಧ ವಿಶ್ವಸನೀಯ ಪುರುಷರು. ವಿಷಯ ವರ್ಣನೆಯಲ್ಲಿ ಅವರು ನಿರ್ದಾಕ್ಷಿಣ್ಯರು. ನಿರ್ವಂಚಕರು. ನಿರಾತ್ಮಪ್ರೇಮಿಗಳು. ಮಾತಿನಲ್ಲಿ ಒಂದನ್ನು ಏರಿಸಿ ಇನ್ನೊಂದನ್ನು ತಗ್ಗಿಸಿ ಹೇಳುವ ಕ್ರಮ ಅವರಲ್ಲಿಲ್ಲ. ಎಷ್ಟು ಅಗತ್ಯವೋ ಅಷ್ಟೇ ನುಡಿಗಳು. ಒಂದು ಹೆಚ್ಚು ಅಥವಾ ಒಂದು ಕಡಿಮೆ ಇಲ್ಲ. 'ನಾನು' ಎಂಬ ಅಹಂಭಾವವನ್ನು ಮರೆತುಬಿಟ್ಟವರಲ್ಲಿ ಅವರು ಉಜ್ವಲವ್ಯಕ್ತಿ. ಸ್ವಯಂ ಶಕ್ತಿಯುಕ್ತಿಗಳ ಬಲಗಳನ್ನು ಕಂಡುಕೊಂಡ ಆತ್ಮಜ್ಞಾನಿಗಳಲ್ಲಿ ಅವರು ಅದ್ವಿತೀಯರು. ಆತ್ಮಸಮರ್ಪಣೆಯಲ್ಲಿ ಅವರು ಹಸುಗೂಸಿಗಿಂತ ಕಡೆ—ಭಕ್ತಿಯಲ್ಲಿ ಮೌನೀಂದ್ರರಿಗಿಂತ ಭಾರ. ಆದುದರಿಂದಲೇ ಅವರು ಇಂದು ಮಹಾ ಮುನಿಗಳು.

ಒಬ್ಬನ ನಾಲಿಗೆಯು ಸಚ್ಚಾಗಿದ್ದರೆ ಸಾರ್ವಜನಿಕ ವ್ಯಕ್ತಿಯಾಗಬಹುದು, ಪ್ರತಿಭಾಶಾಲಿಯಾಗಬಹುದು ಎಂದು ಯಾರಾದರೂ ತರ್ಕಿಸಬಹುದು. ಗಾಂಧಿಜೀಯವರು ಮಹಾವಾಗ್ಮಿಗಳೆನ್ನಲೇ? ಅದು ಅಸಹನೀಯ ಅಪವಾದ! ತಾನು ಹೆಸರುಗೊಂಡ ವಾಗ್ಮಿಯಲ್ಲವೆಂದು ಅವರೇ ಹೇಳಿ, ಎಷ್ಟೋ ವೇಳೆ ಲಂಡನಿನ ಸಭೆಗಳಲ್ಲೊ, ಆಫ್ರಿಕದ ಮೀಟಿಂಗುಗಳಲ್ಲೋ ದೇಶೀಯರ ಮಧ್ಯೆಯೋ ಸಭಾಕಂಪನದಿಂದ ನಡನಡುಗಿ ಬಿದ್ದು ಎದ್ದುಕೊಂಡ ನಿದರ್ಶನಗಳನ್ನೆತ್ತಿ ಕೊಡುವಾಗ, ಅವರು ವಾಗ್ಮಿಗಳೆಂದೆಂತೆನ್ನಲಿ? "ಲಂಡನಿನ ವೆಜಿಟೆರಿಯನ್ ಸೊಸೈಟಿ"ಯಲ್ಲಿ ಮಾತನಾಡಬೇಕೆಂದು ನಾನು ಬಗೆದೆ. ಧೈರ್ಯ ಸಾಕಾಗಲಿಲ್ಲ. ಉಪನ್ಯಾಸವನ್ನು ಕಾಗದದಲ್ಲಿ ಬರೆದೆ. ಅದನ್ನು ಸಭೆಗೆ ತಂದೆ. ಆದರೇನು! ಅದನ್ನು ಓದಲಿಕ್ಕೂ ಕೂಡ ನನಗಾಗದೆ, ಅಧ್ಯಕ್ಷರು ಅದನ್ನು ಇನ್ನೊಬ್ಬರಿಂದ ಓದಿಸಬೇಕಾಯಿತು" ಎಂದು ಅವರೇ ನಿವೇದಿಸುವಾಗ ಅವರು ಆಜನ್ಮವಾಗ್ಮಿಗಳಲ್ಲವೆಂದಾಯಿತು.

ಗಾಂಧಿಜೀಯವರು ವಾಗ್ಮಿಗಳಲ್ಲ ಖರೆ! ಧೈರ್ಯದ ಬಂಟನಲ್ಲ ನಿಜ! ಆದರೆ ಅವರು ಚೇತನಮಯ ವ್ಯಕ್ತಿ. ತನ್ನಂತರ್ಯವನ್ನು ಯೋಗ್ಯ ನುಡಿಯಿಂದ, ಯೋಗ್ಯ ರೀತಿಯಿಂದ, ಉಪಯುಕ್ತ ಹಾವಭಾವಗಳಿಂದ ವ್ಯಕ್ತಪಡಿಸುವುದರಲ್ಲಿ ಅವರು ಅನುಪಮರು. ನುಡಿಯು ಹೃದಯಕ್ಕೆ ತಾಗುವ ಶರ! ಅವರ ಭಾವವು ಮನಮುಗ್ಧಕರ! ಅವರ ಭಾವ ಪ್ರತಿಭೆಯೂ ವಿಪುಲ ಪ್ರಭಾವಯುಕ್ತವಾದುದು. ಅವರು ಹೆಚ್ಚಿನ ತಜ್ಞರಲ್ಲ. ಸಾಹಿತ್ಯ ರಾಶಿಗಳನ್ನು ಮಗುಚಿ ಇಟ್ಟವರಲ್ಲ. ಅಥವಾ ಭಾಷಾ ಪರಿಜ್ಞಾನಿಯೂ ಅಲ್ಲ. ಹಿಂದೀಯಲ್ಲಾಗಲೀ ಇಂಗ್ಲಿಷಿನಲ್ಲಾಗಲೀ ಭಾಷಣಮಾಡುವಾಗ ತಪ್ಪಿಬೀಳುತ್ತಿದ್ದುವರೆಂದರೆ ಅವರು ಮಹಾಜ್ಞಾನಿಯೆಂದು ಹೇಳಿಸಿಕೊಳ್ಳಲಸಮರ್ಥರೆಂಬುದು ಸ್ವಯಂವಿದಿತ. ಹೀಗಿದ್ದರೂ, ಅವರ ಸರಳತೆ, ವಿನೀತತೆ, ಆತ್ಮನಿವೇದನೆಯು ಅಂತಃಕರಣಪೂರಿತವಾದುವುಗಳು ಮನೋಪರಿವರ್ತನೆಯನ್ನು ಮಾಡುವಂತಹುಗಳು. ಇವೇ ಅವರ ಪ್ರತಿಭಕ್ಕೆ ಉಗಮಸ್ಥಾನವು.

ವಿನಯಸಂಪನ್ನತೆಯು ಬಾಪೂಜೀಯವರ ಶಕ್ತಿಯ ಲಿಂಗಸ್ಥಳ. ಅವರ ಭಾಷಣ ಲೇಖನಗಳಲ್ಲಿ ತುಂಬಿ ತುಳುಕಾಡುವ ಅಭೂತಪೂರ್ವ ಮಹದ್ಗುಣವೆಂದರೆ ವಿನಯಶೀಲತೆ. ಭಾವಸ್ಫುರಣವು ಅವರ ನಾಲಿಗೆಯಲ್ಲಾಗುವಾಗ ಒಳ್ಳಷ್ಟು ಕ್ಲೇಶವಿಲ್ಲ. ಅವರಾತ್ಮನನ್ನು ನಮ್ಮಾತ್ಮನಲ್ಲಿ ಏಕೀಕರಿಸಿದಂತೆ ನಡೆದುಬಿಡುವರು. ತನ್ನ ಅಂತರಾತ್ಮನಲ್ಲಿ ವಂಚನೆಯ ಯಾವ ನೀತಿಯೂ ಇಲ್ಲವೆಂಬುದನ್ನು ಅವರು ತನ್ನ ಪ್ರಥಮ ಶಬ್ದೋಚ್ಚಾರಣೆಯಲ್ಲೇ ವ್ಯಕ್ತಗೊಳಿಸುವರು. ಬೇಡವಾದ ನುಡಿಯನ್ನು ಬೇಡವೆಂದೇ ಹಿಂದಿಡುವುದರಲ್ಲಿ ಅವರ ಮಹಾ ನಿಪುಣರು. ನುಡಿಯನ್ನು ತೂಕಮಾಡುವವರವರು. ಮೌನದಿಂದ ಅಂಜುಬುರುಕುತನವನ್ನು ಪ್ರದರ್ಶಿಸುವರೋ ಎಂದು ಭಾಸವಾಗುವುದು. ಆದರೆ ಅದು ಅಂಜಿಕೆಯಲ್ಲ—ತುಲನಶಕ್ತಿ.

"ನುಡಿಯಲ್ಲಿ ನಾನು ಹಿಂಜರಿಯುವ ನನ್ನ ಆದೊಂದು ಅಭ್ಯಾಸವು ಒಂದು ಕಾಲದಲ್ಲಿ ನನಗೆ ಕಷ್ಟದಾಯಕವೆಂದು ಕಂಡು ಬಂದಿದ್ದರೂ, ಈಗ ಅದು ನನಗೆ ಶ್ರೇಯಸ್ಸನ್ನೇ ಉಂಟುಮಾಡಿದೆಯೆನ್ನಬಹುದು. ಅದರ ಪ್ರಮುಖ ಗುಣವೆಂದರೆ— ಅದು ನನಗೆ ವಾಗ್ಮಿತ್ವ (Economy of words)ವನ್ನು ಕಲಿಸಿಕೊಟ್ಟಿತು. ಹೀಗಿರುವುದರಿಂದ ನನ್ನ ನಾಲಿಗೆಯಿಂದಾಗಲೀ, ಲೇಖನಿಯಿಂದಾಗಲೀ ನಿರಾಲೋಚನಾಪರವಾದ ಒಂದೇ ಒಂದು ಶಬ್ದವಾದರೂ ಹೊರಬೀಳುವುದಿಲ್ಲವೆಂದು ನನಗೆ ನಾನು ಸರ್ಟಿಫಿಕೇಟು ಕೊಟ್ಟುಕೊಳ್ಳಬಹುದು" ಎಂಬ ಅವರ ನುಡಿಯ ನೀತಿಯಲ್ಲಿ ಎಷ್ಟು ಅಮೋಘೈಶ್ವರ್ಯವು ಅಡಗಿಕೊಂಡಿದೆಯೆಂದು ತಿಳಿಯಬಹುದು.

ತಾನು ಹೃದಯದಲ್ಲಿ ಭಾವಿಸಿದ್ದನ್ನು ಅವರು ನಾಲಿಗೆಯಲ್ಲಿ ಹೇಳುವರು. ತಾನು ನಾಲಿಗೆಯಲ್ಲಿ ಹೇಳಿದ್ದನ್ನು ಅವರು ಹೃದಯದಲ್ಲಿ ಭಾವಿಸುವರು. ಅಂದರೆ ಆಡಿನೋಡುವವರವರು—ನೋಡಿ ಆಡುವವರವರು.

ಬರವಣಿಗೆಯಲ್ಲೂ ಗಾಂಧಿಜೀಯವರು ಅದ್ವಿತೀಯರು. ಅವರ ಭಾಷಾ ಶೈಲಿ, ಭಾವಾರ್ಥಗಳು ಮೂಢರನ್ನೂ ಜ್ಞಾನಿಗಳನ್ನಾಗಿ ಮಾಡುವಂತಹವುಗಳು. ಸಣ್ಣ ಶಬ್ದ, ಚಿಕ್ಕ ವಾಕ್ಯ, ಸಂಯೋಜಿತ ಭಾವ ಇವುಗಳಿಂದ ಅವರು ವಾಚಕರನ್ನು ಲೇಖನದ ಸೆರೆಮನೆಯನ್ನೇ ಬಂಧಿಸಿಬಿಡುವರು. ಅಂದರೆ ಅವರ ಮಾತು ಮಾನುಷಿಕ, ಅವರ ಬರೆಹ ಭಾವಸಿದ್ಧ, ಅವರ ಅಂತಃಕರಣವು ಅತ್ಯಂತ ಶುದ್ಧ.

ತನ್ನ ವಿರೋಧಿಗಳ ಮನವೊಲಿಸಿಕೊಳ್ಳುವ ಆದೊಂದು ಅವರ್ಣನೀಯ ಶಕ್ತಿಯು ಗಾಂಧಿಜೀಯವರಲ್ಲಿ ಮೂರ್ತಿಮತ್ತಾಗಿದೆ. ಸರಕಾರದ ಆಡಳಿತವನ್ನು 'ಸೈತಾನೀ' ಎಂದು ಅವರು ವರ್ಣಿಸಿದ ಉದಾಹರಣೆಯಿದೆ. ಆದರೆ ವೈಯಕ್ತಿಕ ವಿಚಾರವು ಬಂದೊಡನೆ, ಅವರು ಅಂತಹ ಕಠೋರ ಉಪಮೆಗಳನ್ನು ಕೊಡದೆ, ತನ್ನ ವಿರೋಧಿಯಾದಂತಹವನನ್ನು ಉತ್ತಮ ವಸ್ತುವಿನೊಡನೆ ಸರಿಹೋಲಿಸುವರು. ಸಮಷ್ಟಿ ದೃಷ್ಟಿಯಿಂದ ಅವರು ಸರಕಾರಸೂತ್ರವನ್ನು 'ಸೈತಾನೀ' ಎಂದು ಕರೆದರೂ, ಲೋರ್ಡ್ ರೀಡಿಂಗರನ್ನು ಎತ್ತಿ, ವೈಯಕ್ತಿಕವಾಗಿ ಮಾತನಾಡುವಾಗ ಅವರು ಕೊಟ್ಟ ಆದೊಂದು ಅಲಂಕಾರವನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. "ಸಿಮ್ಲಾದ ದೊಡ್ಡ ವ್ಯಾಪಾರೀ ಗೃಹ ಮತ್ತು ಬಡತನದಿಂದ ಬೇಯುತ್ತಿರುವ ಮಿಲಿಯಾವಧಿ ಜನತೆಯ ಮಧ್ಯೆ ದೊಡ್ಡ ಬಂಡೆಯ ಗೋಡೆಯುದೆ. ಗೋಡೆಯ ಹಿಂಗಡೆ ವಾಸಿಸುವ ರಾಜಕುಮಾರ ಸಿದ್ಧಾರ್ಥನಿಗೆ ಜನರ ಆರ್ತನಾದವು ಅದೆಂತು ಕೇಳಿಸೀತು? ಅವನಿಗೆ ಕಷ್ಟ, ದಾರಿದ್ರ್ಯ, ಮರಣಗಳ ಅರಿವಿಲ್ಲ. ಆದರೂ ಅವನು ಆ ಜನರಿಗಿಂತ ವಿಶೇಷದವನಲ್ಲ. ಅಂದಿನ ಆ ಸಿದ್ಧಾರ್ಥನಂತು ತಂದೆಯ ಮನೆಯಲ್ಲಿ ಸುಖದಿಂದಿದ್ದಂತೆ ಈಗ ವೈಸರಾಯರಿದ್ದಾರೆ. ಅವರಿಗೆ ಜನರ ಕಷ್ಟ ದುಃಖಗಳು ತಿಳಿಯದಿದ್ದರೆ ಅದು ಅವರ ತಪ್ಪಲ್ಲ. ಎಲ್ಲಿಯ ತನಕ ವೈಸರಾಯರು ದೈಹಿಕವಾಗಿ, ಮಾನಸಿಕವಾಗಿ ಸಿಮ್ಲಾದಲ್ಲೇ ಉಳಿಕೊಳ್ಳುತ್ತಾರೋ ಅಲ್ಲಿಯ ತನಕ ಸಿದ್ಧಾರ್ಥನಂತೆ ಅವರು ಅಜ್ಞಾನಾಂಧಕಾರದಲ್ಲುಳಿಯುವರು."

ಸರಕಾರ ಸೂತ್ರವೇ ವೈಸರಾಯರು. ಆ ಸೂತ್ರ ಸಂಚಾಲಕರೇ ವಿರೋಧಿಗಳೆಂದು ತಿಳಿದಿರುವ ಇನ್ನಿತರ ವ್ಯಕ್ತಿಯಾದರೆ, ವೈಸರಾಯರನ್ನು ಸಿದ್ಧಾರ್ಥನಿಗೆ ಹೋಲಿಸದೆ, ಅವರನ್ನು ಇನ್ನಿತರ ಭಯಂಕರ ವಿಷಯಗಳೊಡನೆ ಹೋಲಿಸಲು ಹಿಂಜರಿಯುತ್ತಿದ್ದಿಲ್ಲ. ಆದರೆ ಗಾಂಧಿಜೀಯವರ ಕ್ರಮವೇನು? ಅವರಿಗೆ ವ್ಯಕ್ತಿಯ ಮೇಲೆ ದ್ವೇಷವಿಲ್ಲ. ಅವನ ಸೂತ್ರದ ಮೇಲೆ ಜಿಗುಪ್ಸೆ. ಮಾನವ ವಂಶೀಯನಾದ ಪ್ರತಿಯೊಬ್ಬನೂ ಪ್ರೇಮಾರ್ಹನು. ಅನ್ಯಾಯವನ್ನು ಮುರಿಯಬೇಕಲ್ಲದೆ ಅದರ ಕರ್ತೃವನ್ನಲ್ಲವೆಂಬುದೇ ಅವರ ತತ್ವ.

'No country has ever risen without being purified through the fire of suffering. Mother suffers so that her child may live. The condition of wheat-growing is that the seed grain should perish. Life comes out of death. Will India rise out of her slavery whithout fulfilling this eternal law of purification through suffering' ಎಂಬ ಗಾಂಧಿಜೀಯವರ ಭಾವಭರಿತ ಮಾತಿನಲ್ಲಿ ಎಷ್ಟೊಂದು ಕವಿತ್ವವಿಯಿಲ್ಲ! ಆತ್ಮಬಲದ ಎಷ್ಟು ಪ್ರಕಾಶನವಿಲ್ಲ! ಒಂದನೆ ಇಯತ್ತೆಯ ಬಾಲಕನಿಗೂ ಅರ್ಥವಾಗುವ ಮಹತ್ವಪೂರ್ಣ ವಿಷಯ ವರ್ಣನೆ!

ತನ್ನ ವಿಮರ್ಶಕಕಾರರನ್ನು ತನ್ನ ವಶಪಡಿಸಿಕೊಳ್ಳುವ ಗಾಂಧಿಜೀಯವರ ಆದೊಂದು ಅತುಲಗುಣವು ಅಪ್ರತಿಹತವಾದುದು. ಒಬ್ಬನು ತನ್ನನ್ನು ಅವನ ದೃಷ್ಟಿಪ್ರಕಾರ ಟೀಕಿಸಿದರೆ, ಗಾಂಧಿಜೀಯವರು ಅವನ ಟೀಕೆಯಲ್ಲಿನ ಅಭಾವವನ್ನು ಎತ್ತಿತೋರಿಸಿ, "ಹತ್ತಕ್ಕೆ ಒಂದನ್ನು ಕೂಡಿಸಿದರೆ ಹನ್ನೊಂದಾಗುತ್ತದೆ" ಎಂದು ಹೇಳುವ ಬದಲಿಗೆ, "ಹತ್ತು ಒಂದು ಹನ್ನೊಂದು" ಎಂದು ಸ್ವಾರಸ್ಯವಾಗಿಯೂ ಚುಟುಕಾಗಿಯೂ ಹೇಳುವರು. ಒಡನೆ ಟೀಕಾಕಾರನು ತನ್ನ ಅಜ್ಞಾನವನ್ನು ಒಪ್ಪಿ ಅವರೆದುರು ಶಿರಬಾಗುವನು. ಅವರ ಅರ್ಥ ಸಾರಳ್ಯತೆಯಿಂದ ಉಜ್ವಲ ಅರ್ಥದಾರನು ಬೆರಗಾಗುವನು.

ಅವರ ಎಲ್ಲಾ ತರ್ಕ ವಿತರ್ಕಗಳು ಅವುಗಳ ಪರಮಾವಧಿಯನ್ನು ಕಾಣುವುದು ಸತ್ಯದಲ್ಲಿ. ಧರ್ಮಕ್ಕೆ ಬಾಗದ ನರನಿಲ್ಲ, ಸತ್ಯಕ್ಕೆ ಸೋಲದ ವ್ಯಕ್ತಿಯಿಲ್ಲ, ಇದೇ ಮಹಾತ್ಮರ ಶಕ್ತಿ—ಪ್ರಾಬಲ್ಯ.

ಅವರು ತನ್ನ ಏನನ್ನಾದರೂ ಬಚ್ಚಿಡದೆ, ತಾನು ಸರ್ವರ ಸೇವಕ, ಸರ್ವರೇ ತಾನು, ತಾನೇ ಸರ್ವರೆಂದು ಭಾವಿಸಿ, ತನ್ನ ಹೃದಯವನ್ನೇ ಅವರು ಬೇರೆಯವರಲ್ಲಿ ಮೂರ್ತ ಭಾವಿಸುವರು. ಇದರಿಂದಾಗಿ ಅವರ ಭಾಷಣ ಲೇಖನಗಳು ಜನತೆಯ ಹೃದಯಕ್ಕೆ ಆಳವಾಗಿ, ಬಲವಾಗಿ ನಾಟುತ್ತವೆ. ಇದೇ ಅವರ ಅಮೋಘ ಶಕ್ತಿ. ಇದೇ ಅವರ ಇಷ್ಟು ಘನಮಹಾತ್ಮೆಯ ನೆಲೆ.

ಮ. ಶಾ.

# ಮುಂಬಾಯಿಯ ಗಲಾಟೆಯು ಶಮನವಾಯಿತು!
# ಇಬ್ಬರು ಮುದಿಯರ ಬಂಧನವೇಕೆ?

## ಜಗದ್ಗುರುಗಳ ಕುಟಿಲ ನೀತಿ! ತೊಡೆ ತಟ್ಟುತ್ತಿದ್ದಾರೆ!

**ಆಂಗ್ಲೊ ಇಂಡಿಯನ್ ಒಯಿಲ್ ಡಿಸ್ಪ್ಯೂಟ್ — ಪಾಂಡು ರೋಗ. — ಗಾಮನೋ ಇಮಾಮ್ ಬಕ್ಸನೋ? — ಎಲ್ಲಿ ಹೋದರೂ ಬಾಧೆ.**

ಮುಂಬಾಯಿಯಲ್ಲಿನ ಗಲಾಟೆಯು ಶಾಂತವಾಗಿದೆ. ನಲ್ವತ್ತೆಂಟು ದಿನಗಳ ತನಕ ಪೋಲೀಸ ಪಹರೆಯಿದ್ದಿತು. ಹೆಚ್ಚಿನ ಗಲಾಟೆಯೇನೂ ಮತ್ತೆ ನಡೆಯಲಿಲ್ಲ.

### "ಆಂಗ್ಲೊ ಇಂಡಿಯನ್ ಒಯಿಲ್ ಡಿಸ್ಪ್ಯೂಟ್"

ಈ ಮೇಲಿನ ಶಿರೋನಾಮೆಯಿಂದ ಈಗೀಗ ಎಲ್ಲಾ ಪತ್ರಿಕೆಗಳಲ್ಲಿಯೂ ವಿವಿಧ ಲೇಖನಗಳು ಪ್ರಕಟವಾಗುತ್ತಿವೆಯಷ್ಟೆ! ಇದರ ಅರ್ಥವೇನು? ಹದಿನೆಂಟನೇ ಶತಮಾನದಲ್ಲಿ ಔಸ್ಟ್ರೇಲಿಯದ ವಿಲ್ಲಿಯಮ್ ನೋಕ್ಸ್ ಡಿ. ಆರ್ಸಿ ಎಂಬ ಕೊಳಚೆಯಲ್ಲೊಬ್ಬನು ಹಣ ಗಳಿಸುವ ಆಶೆಯಿಂದಿದ್ದನು. ಒಂದು ದಿನ ಇವನಿದ್ದಲ್ಲಿಗೆ ಕ್ವೀನ್ಸ್ ಲೇಂಡ ಎಂಬಲ್ಲಿದ್ದ ಒಬ್ಬ ಕುರುಬನು ಮಿಂಚುತ್ತಿರುವ ಒಂದು ಕಲ್ಲನ್ನು ತಂದು ಇದೇನೆಂದು ಕೇಳಿದನು. ಅದು ಒಂದು ರತ್ನವಾಗಿದ್ದುದನ್ನು ಕಂಡು ಆರ್ಸಿಯು ಆನಂದಭರಿತನಾಗಿ ತಂದ ಕುರುಬನಿಗೆ ಹಸ್ತವನ್ನು ಕುಲುಕಿ, ಕೆಲವು ನಾಣ್ಯಗಳಿಗೆ ಅದನ್ನು ಪಡೆದುಕೊಂಡು ಮರುಕ್ಷಣದಲ್ಲಿಯೇ ಅದನ್ನು ಮಿಲಿಯ ಪೌಂಡುಗಳಿಗಿಂತಲೂ ಹೆಚ್ಚಿನ ಮೌಲ್ಯಕ್ಕೆ ವಿಕ್ರಯಿಸಿದನು. ಈ ಹಣದಿಂದ ಆರ್ಸಿಯು ದೇಶಸಂಚಾರಕ್ಕೆ ಹೊರಟನು. ಪರ್ಶಿಯದ ಎಣ್ಣೆ ಬಾವಿಯ ಸುದ್ದಿಯನ್ನು ಕೇಳಿ ಅಲ್ಲಿಗೆ ತೆರಳಿ ೫೦೦ ಮೈಲು ವಿಸ್ತೀರ್ಣದ ಭೂಮಿಯನ್ನು ತನಗೆ ಸರಕಾರದಿಂದ ಕೊಡಬೇಕೆಂದು ಅರ್ಜಿ ಮಾಡಿದನು. ಸ್ವೇಚ್ಛಾಪ್ರಿಯನಾದ ಆಗಿನ ಷಹಾನು ಆಂಗ್ಲ ಮೋಡಿಗೆ ಮೆಚ್ಚಿ ಆರ್ಸಿಗೆ ಕೇಳಿದಷ್ಟು ಭೂಮಿಯನ್ನು ಕೊಟ್ಟನು. ಆರ್ಸಿಯು ಈ ಭೂಮಿಯಲ್ಲಿ ಬಾವಿಗಳನ್ನು ತೋಡಿ ದಿನಕ್ಕೆ ೪,೦೦೦,೦೦೦ ಗೆಲನು ಎಣ್ಣೆ ತೆಗೆದು ಮೂರು ಕೋಟಿ ನವ ಕೋಟ್ಯಾಧೀಶನಾದನು. ಬ್ರಿಟಿಷ ಸರಕಾರವು ೭ ಐ೦೦,೦೦೦ ಪೌಂಡು ಗಳಷ್ಟರ ಪಾಲುಗಳನ್ನು ಪಡೆಯಿತು. ಈಗಿನ ಷಹಾನಿಗೆ ಈಗ ಬುದ್ಧಿ ಜ್ಞಾನವುಂಟಾಗಿದೆ. ಆಂಗ್ಲೊ ಜನರಿಗೆ ಯಾವ ರಿಯಾಯಿತಿಯೂ ತನ್ನ ಅಧಿಪತ್ಯದಲ್ಲಿ ದೊರೆಯಲಿಕ್ಕಿಲ್ಲವೆಂದೇ ಅವರ ಈಗಿನ ಹಟ! ಈಗ ಬ್ರಿಟಿಷರಿಗೆ ಚಳಿ ಹಿಡಿದಿದೆ. ಲಾಭದ ಬಾಯಿಗೆ ಮಣ್ಣು ಬೀಳುವ ಕಾಲವು ಸಮೀಪಿಸಿದೆ. ಅನ್ಯಾಯದಿಂದ ಗಳಿಸಿದ್ದು ಅಸದ್ವ್ಯಯವಾಗಿ ಹೋಯಿತು!

### ಜಗದ್ಗುರುಗಳ ಕುಟಿಲ ನೀತಿ!

ಜಲಂಧರದ ಜಗದ್ಗುರು ಶ್ರೀ ಶಂಕರಾಚಾರ್ಯರೆಂಬವರು ಒಂದು ಕಾಲದಲ್ಲಿ ಮಹಾ ಸುಧಾರಕರು! ೧೯೩೮ರಲ್ಲಿ ರಾವಲ್‌ಪಿಂಡಿಯಲ್ಲಿ ಅಲ್ಲದೆ ಲಾಹೋರು, ಹೊಶಿಯಾರ್‌ಪುರ ಮುಲ್ತಾನ ಪೇಶಾವರದಲ್ಲಿ ಜರಗಿದ ಸಭೆಗಳಲ್ಲಿಯೂ ಹರಿಜನ ದೇವಸ್ಥಾನ ಪ್ರವೇಶಕ್ಕೆ ಒಪ್ಪಿದ್ದರು. ಧರ್ಮ ಸಭೆಗಳಲ್ಲಿ ಇವರು ಅಂತ್ಯಜರನ್ನು ದೇವಾಲಯ ಪ್ರವೇಶ ಮಾಡಲು ಬಿಡುವುದರಲ್ಲಿ ಅಡ್ಡಿಯಿಲ್ಲವೆಂದಿದ್ದರು. ಕೆರೆ ಕುಂಟೆ, ಬಾವಿಗಳನ್ನು ಅಸ್ಪೃಶ್ಯರ ಪ್ರಯೋಜನಕ್ಕೆ ಕೊಡಬಹುದೆಂದಿದ್ದರು. ಆದರೆ, ಈಗ ಅವರು ತನ್ನ ಅಂದಿನ ಸ್ವಭಾವಕ್ಕೆ ತೀರಾ ವಿರೋಧ. ಗುರುವಯ್ಯನವರು ಕೆಳಗಿಳಿದೆವನ್ನು ಅವರು ಮನ್ನಿಸುವುದಿಲ್ಲ. ಹರಿಜನರ ಪ್ರವೇಶದಲ್ಲಿ ಅವರ ಅಭಿಪ್ರಾಯವು ಮುಂಚಿನಂತಿಲ್ಲವೇ ಇಲ್ಲ! ಜಗದ್ಗುರುಗಳಲ್ಲಿಯೂ ಅಸ್ಥಿರತೆಯೇ? ಆಡಿದಂತೆ ಮಾಡದ ಮಾಡಿದಂತೆ ಆಡದವರೆಂದರೆ ಬೇರಾರು?

### ಸೊಂಟ ಕಟ್ಟುತ್ತಿದ್ದಾರೆ! ತೊಡೆ ತಟ್ಟುತ್ತಿದ್ದಾರೆ!

೧೯೩೬ರಲ್ಲಿ ಮಹಾಯುದ್ಧವು ಪ್ರಾರಂಭವಾಗಲಿದೆಯೆಂದು ಜ್ಯೋತಿಷ್ಯರ ವಾದ. ಈಗಿನ ಅಂತರ್ರಾಷ್ಟ್ರೀಯ ವಾತಾವರಣದ ವರ್ಚಸ್ಸನ್ನು ಪರಿಶೀಲಿಸುವಾಗ ಅಂತಹ ಯುದ್ಧವು ಅಸಂಭವನೀಯವೆಂದು ಹೇಳಲು ಪಕ್ಕನೆ ಧೈರ್ಯ ಸಾಲುವುದಿಲ್ಲ. ಚೀನಾ ಜಪಾನರು ತಮ್ಮ ಯುದ್ಧವನ್ನು ಪುನಃ ಪ್ರಾರಂಭಿಸಿದ್ದಾರೆ. ಜಪಾನ ರಾಷ್ಟ್ರವು ಚೀನೀಯರನ್ನು ಸದೆ ಬಡೆಯಬೇಕೆಂದೂ ಚೀನಾದ ಸ್ತ್ರೀಪುರುಷರು ಜಪಾನರನ್ನು ನಿರ್ನಾಮ ಮಾಡಬೇಕೆಂದೂ ಸೊಂಟ ಕಟ್ಟುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಶಸ್ತ್ರಸನ್ಯಾಸದ ಬದಲು ಶಸ್ತ್ರಸಿದ್ಧತೆಗೆ ಮನಸ್ಸು ಮಾಡಲಾಗಿದೆ. ಹೊಸ ಹೊಸ ಯುದ್ಧನಾವೆಗಳು ಸಿದ್ಧವಾಗುತ್ತಿವೆ. ಹಳೆಯವುಗಳು ದುರುಸ್ತಿಯಾಗುತ್ತಿವೆ. ಅಮೇರಿಕಕ್ಕೆ ಫ್ರಾನ್ಸ್, ಜರ್ಮನಿ, ಪೋಲೆಂಡುಗಳು ಕೊಡದ ಯುದ್ಧ ಸಾಲದಿಂದಾಗಿ ಅಮೇರಿಕವು 'ಹಾಕ ಕಲಿಸಲು' ತಯಾರಾಗದೆ ಇಲ್ಲ. ಇಟೇಲಿಯಲ್ಲಿ ಸರಕಾರವು ಜನಾಂಗಕ್ಕೆ ಗೇಸ್ ಪರದೆಯನ್ನು ಹಂಚಿ, ವಿಮಾನದ ಮೂಲಕ ವಿಷಗಾಳಿಯು ಬಂದರೆ ಜನರನ್ನು ರಕ್ಷಿಸಬೇಕೆಂದು ನಿರ್ಧರಿಸಿದೆ. ತೊಡೆ ತಟ್ಟುವುದಲ್ಲವೇ ಇದು? ಇನ್ನು ರಕ್ತ ಹರಿಯುವುದು ಉಳಿದಿದೆ!

### ಪಾಂಡುರೋಗ?

ಅಮೇರಿಕದ ಮಿಸ್ ಮೇಯೋಳು ಇಂಡಿಯನ್ ಪಾಂಡುರೋಗದಿಂದ ಬಾಧಿತಳಾಗಿ ಬ್ರಿಟಿಷ್ ಪ್ರೋತ್ಸಾಹಕರ ಬೆಂಬಲದಿಂದ Mother India ಪುಸ್ತಕವೆಂಬ ಸುಳ್ಳಿನ ಕಂತೆಯನ್ನು ಪ್ರಕಟಿಸಿ ಹಿಂದೀಯರು ಕುರಿಗಳಿಗಿಂತಲೂ ಮೂಢರೆಂದು ಬಾಹ್ಯ ಪ್ರಪಂಚಕ್ಕೆ ತೋರಿಸಿಕೊಟ್ಟು ವಿರುದ್ಧ ಜನರ ಕೈ ಚಪ್ಪಾಳೆಗೆ ಗುರಿಯಾಗಿ ಹೇರಳ ದ್ರವ್ಯಾರ್ಜನೆಯನ್ನು ಮಾಡಿದಳು! ಈಗ ಅವಳ ತಮ್ಮನೋ ಎಂಬಂತೆ ಕಲ್ಕತ್ತದ ರಾಷ್ಟ್ರ ಅಹಿತವಾದಿ ದೈನಿಕ ಪತ್ರಿಕೆಯಾದ ಸ್ಟಾರ್ ಓಫ್ ಇಂಡಿಯಾ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡಿರುವ ಎಚ್ ಜಿ ಫೇಂಕರೆಂಬವರು Queer India ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಇದನ್ನು ವಿಮರ್ಶಿಸಿದ ಟೈಮ್ಸ್ ಪತ್ರಿಕೆಯು ವಿಮರ್ಶಕಾರರೇ ಈ ಲೇಖಕರ ಮೋರೆ ಕರ್‍ರಗಾಗುವಂತೆ ಬರೆದಿದ್ದಾರೆ. ಹಿಂದೂದೇಶವು ಬಾಲ್ಯವಿವಾಹ ಕೊಲೆ ದರೋಡೆ, ಬ್ರಹ್ಮಹತ್ಯ ಮೊದಲಾದ ಅನಾಗರಿಕ ಸ್ಥಿತಿಯಲ್ಲೇ ಹೊರಳಾಡುವ ಕಳಂಕಿತ ಕೆಸರು. ಅಲ್ಲಿ ಪ್ರೇಮ ಮತ್ತು ವಿವಾಹಗಳಿಗೆ ಸಂಬಂಧವೇ ಇಲ್ಲ. ವಿವಾಹ ಪದ್ಧತಿಯೆಂಬುದು ಅನುಕೂಲಶಾಸ್ತ್ರದ ವ್ಯಾಪಾರ. ದಂಪತಿಗಳು ಪರಸ್ಪರ ಪ್ರೀತಿಸುವುದಿಲ್ಲ. ಪೌರ್ವಾತ್ಯರಂತೆ ಸ್ತ್ರೀಪುರುಷರೊಳಗೆ ನಿಕಟ ಸಂಬಂಧವಿಲ್ಲ ಎಂದು ಈ ಲೇಖಕರ ಅಭಿಪ್ರಾಯ. ಇಂಗ್ಲೆಂಡಿನಲ್ಲಿ ಇಂದು ವಿವಾಹವಾಗಿ ಅಥವಾ ವಿವಾಹವಾಗುವ ಮೊದಲು ಒಂದೆರಡು ಮಕ್ಕಳ ತಾಯಿ ತಂದೆಗಳೆಂದೆನಿಸಿಕೊಳ್ಳುವಂತಹ ಧರ್ಮಗಳು ಇಂಡಿಯಾದಲ್ಲಿ ದೊರೆಯಲಾರವು. ನಿಜ. ಹಿಂದೂದೇಶವನ್ನು ಕಂಡು ಪಾಂಡುರೋಗಕ್ಕೆ ಒಳಗಾಗುವ ಇಂತಹ ಬ್ರಿಟಿಷ ಹಿತೈಷಿಗಳ ಧ್ಯೇಯವು ಸ್ವಯಂವ್ಯಕ್ತವಿದೆ.

### ಇಬ್ಬರು ಮುದಿಯರ ಬಂಧನವೇಕೆ?

ನಮ್ಮ ಚಕ್ರಾಧಿಪತ್ಯದ ಮಂತ್ರಿವರ್ಯರಾದ ರಾಮ್ಸೆ ಮೆಕ್‌ಡೊನಾಲ್ಡರಿಗೆ ಕ್ರಿಸ್‌ಮಸ್ ಹಿತೋಕ್ತಿಗಳು ಬಹಳ ಬಂದಿದ್ದವು. ಒಂದು ಲಕೋಟೆಯನ್ನು ಅವರು ಹರಿದು ಅದರೊಳಗಿನ ಪತ್ರವನ್ನು ಓದಿದರು. ಅದು ಲಂಡನಿನ ಓವೆನ್ ರಟ್ಲೆಂಟನ್ ಎಂಬವರಿಂದ ಬರೆಯಲ್ಪಟ್ಟು ಅದರಲ್ಲಿ ಹೀಗಿದ್ದಿತು: ಇಬ್ಬರು ಹೀನ ಮುದಿಯರನ್ನು ನೀವು ಬಂಧನದಲ್ಲಿಟ್ಟು ಅವರು ತಮ್ಮ ಕ್ರಿಸ್‌ಮಸ್ ದಿನಗಳನ್ನು ಸೆರೆಯ ಕತ್ತಲೆಯಲ್ಲಿ ಕಳೆಯುವಂತೆ ಮಾಡಿರುವಿರಿ. ಅವರು ಮಾಡಿದ ಅನ್ಯಾಯಕ್ಕಾಗಿ ಅವರನ್ನು ಬಂಧಿಸಿದುದಲ್ಲ. ಅವರು ಮಾಡಬಹುದೆಂಬ ಕೆಲಸಗಳನ್ನು ಚಿಂತಿಸಿ, ಶಂಕಿಸಿ ಅವರನ್ನು ಬಂಧನದಲ್ಲಿಟ್ಟಿದ್ದೀರಿ. ಅಂತಹ ಮುದಿ ಗಾಂಧಿಯನ್ನೂ ಟೋಮಾಸ್ ಮೇನನ್ನೂ ನೀವು ಬಂಧಿಸಿಟ್ಟು ಫಲವೇನು? ಟೋಮ್ ಮೇನರಿಗೆ ೭೬ ವರ್ಷ ಪ್ರಾಯವಾಗಿದೆ! ಅವರನ್ನು ಬಂಧಿಸಿಟ್ಟಿದ್ದೀರಿ.

### ಗಾಮನೋ ಇಮಾಮ್ ಬಕ್ಸನೋ?

ಜಟ್ಟಿಕಾಳಗ (wrestling)ದಲ್ಲಿ ಗಾಮನ ಹೆಸರು ಮೊದಲಿನಷ್ಟು ಇವನ ಹೆಸರು ಲೋಕವಿಖ್ಯಾತವಾಗಿದೆ. ಜಟ್ಟಿಕಾಳಗದಲ್ಲಿ ಗಾಮನನ್ನು ಮಿಕ್ಕಿದವರು ಧರೆಯಲ್ಲಿಲ್ಲವೆಂದು ಹೆಚ್ಚಿನವರ ಅಭಿಮತ. ಆದರೆ ಅವನಿಗಿಂತ ಶಕ್ತಿಶಾಲಿಯಾದ ಅವನ ಎಳೆಯ ಸಹೋದರನಾದ ಇಮಾಂಬಕ್ಸನಿರುವುದನ್ನು ಮರೆಯಲಾಗುವುದಿಲ್ಲ. ಇಮಾಂಬಕ್ಸನು ಗಾಮನಿಂದಲೇ ತಯಾರಿಸಲ್ಪಟ್ಟ ಜಟ್ಟಿಯಾಳು. ಈಗ ಇಮಾಮ್ ಬಕ್ಸನಷ್ಟು ಬಲಶಾಲಿಗಳು ಜೀವಿತ ಮನುಷ್ಯರಲ್ಲಿ ಯಾರೂ ಇಲ್ಲವೆಂದು ತಿಳಿಯಲಾಗಿದೆ. ಪ್ರಸ್ತುತ ಪಲ್ಲಿ ಜಿಮಾಲೊಂಡೊಸ್ ಎಂಬ ಜಟ್ಟಿಯು ಗಾಮನಷ್ಟು ಶಕ್ತಿಯುತನೆಂಬ ಪ್ರತೀತಿ. ಆದರೆ ಗಾಮನು ಲಂಡನ ಜೋನ್ ಲೆಮ್ ಜಿಬಿಸ್ಕೊ ಡಾ ರೋಲ್ಲರ್ ಮೊದಲಾದ ಇವರುಗಳಲ್ಲ ಜಯಿಸಲಾರದ ಜಟ್ಟಿಗಳನ್ನು ಇಮಾಮನು ಬಹಳ ಸೌಲಭ್ಯವಾಗಿ ಸೋಲಿಸಿದ್ದಾನೆ. ಇಮಾಮನ ಬಲವನ್ನು ಪರೀಕ್ಷಿಸುವುದಕ್ಕಾಗಿ ಅವನ ಅಣ್ಣನು ಈಗ ಒಂದು ಸ್ಪರ್ಧೆಯನ್ನೇರ್ಪಡಿಸಿರುವನು. ಇಮಾಮನನ್ನು ಸೋಲಿಸುವರೋ ಅವರಿಗೆ ೧೧೦೦೦ ರೂಪಾಯಿಗಳನ್ನು ಕೊಡುತ್ತೇನೆ ಎಂದಿದ್ದಾನೆ. ಅಲ್ಲದೆ ಚೋಟಾಗಾಮನನ್ನು ಗೆದ್ದವರಿಗೆ ೭೦೦೦ ರೂಪಾಯಿಗಳನ್ನು ಕೊಡುತ್ತೇನೆಂದಿರುವನು.

### ಎಲ್ಲಿ ಹೋದರೂ ಬಾಧೆ

ಪ್ಯಾರಿಸಿನಿಂದ ತನ್ನ ಪಿ ಎಚ್ ಡಿ ಪದವಿಯನ್ನು ಹೊಂದಿ ಸ್ವದೇಶಕ್ಕೆ ಹಿಂತೆರಳಿದ ಮಿಸ್ ಮಥುರಾ ಕೇಶ್ಕರ ಎಂಬವಳು ತನ್ನ ಅಲ್ಲಿಯ ಅನುಭವಗಳನ್ನು ತಿಳಿಸಿ, ಫ್ರಾನ್ಸಿನಲ್ಲಿ ಹಿಂದೀಯರನ್ನು ಬ್ರಿಟಿಷರಷ್ಟು ವಕ್ರದೃಷ್ಟಿಯಿಂದ ನೋಡುವುದಿಲ್ಲ. ಫ್ರಾನ್ಸಿನಲ್ಲಿ ಸಂಸ್ಕೃತವನ್ನು ೧೭೯೫ರಿಂದಲೂ ಕಲಿಸುತ್ತಿರುವರು. ಹಿಂದೀಯ ವರ್ತಮಾನ ಪತ್ರಿಕೆಗಳು ಅಲ್ಲಿಯ ಎಲ್ಲಾ ಲೈಬ್ರೆರಿಗಳಲ್ಲಿಯೂ ಕಾಣಸಿಗುತ್ತವೆ. ಸಂಕ್ಷೇಪವಾಗಿ, ಅಲ್ಲಿಯ ಜನರಿಗೆ ಹಿಂದೂದೇಶದ ಮೇಲೆ ಅತೀವ ಮಮತೆಯಿದೆ ಎಂದರು. ಗಾಂಧೀತತ್ವವನ್ನು ಫ್ರಾನ್ಸಿನ ಜನರು ಯಾವ ದೃಷ್ಟಿಕೋಣದಿಂದ ಸ್ವೀಕರಿಸುವರೆಂದು ಕೇಳಿದುದಕ್ಕೆ ಶ್ರೀಮತಿಯವರು ಉತ್ತರವಾಗಿ ಅಂದು ಗಾಂಧಿಯವರು ಪೆರಿಸ್‌ಗೆ ಬಂದಾಗ ಅವರನ್ನು ಸಾಧಾರಣ ಮನುಷ್ಯನು ಕೂಡ ಪ್ರಶಂಸಿಸುತ್ತಿದ್ದನು. ಗಾಂಧೀಜೀಯವರು ಅದ್ವಿತೀಯ ರಾಷ್ಟ್ರಾಭಿಮಾನಿಗಳು. ಅವರ ಎದೆಯಲ್ಲಿ ರಾಷ್ಟ್ರಭಕ್ತಿಯು ಕುದಿಯುತ್ತಲಿದೆ ಎಂದು ಪತಿಯೊಬ್ಬರೂ ಅರಿತರು. ಹಿಂದೀಯರ ಮೇಲೆ ಫ್ರಾನ್ಸ್ ದೇಶದವರಿಗೆ ಇರುವ ಸಹಾನುಭೂತಿಯನ್ನು ಬ್ರಿಟಿಷ ನೀತಿಜ್ಞರು ತಮ್ಮ ಗೂಢ ಪ್ರಚಾರಕಾರ್ಯದ ಮೂಲಕ ಮುರಿದೊಗೆಯುತ್ತಿರುವರು ಎಂದರು.

← →← →


## ರಥೋತ್ಸವ ಬಂತನ್ನುವಾಗಲೇ ಈ ಉತ್ಸವ!

ದರಗಳಲ್ಲಿ ——— ತರಗತಿಯಲ್ಲಿ ——— ರಚನೆಯಲ್ಲಿ

ಎಲ್ಲವೂ ಎಲ್ಲರಿಗೂ ಮಹೋತ್ಸವವೆನಿಸುವಂತ,

ನೂತನ ಸೃಷ್ಟಿಯಾಗಿಯೇ ——— ನೂತನ ರೂಪದಲ್ಲೇ!!

ಹೊಸವರ್ಷದಲ್ಲಿ ಶುಭವುಂಟಾಗಬಯಸುವವರು ಶುಭೋದಯದ ಚಿಹ್ನೆಯಾಗಿ ಹೊಸ ಖಾದಿಯನ್ನುಡಲೇ ಬೇಕು

— ಹಾಗೆಂದೇ —

ಎಲ್ಲರ ಎಲ್ಲ ಬಗೆಯ ಫ್ಯಾಶನುಗಳಿಗೊಪ್ಪುವಂತೆ, ತೀರ ಕಡಿಮೆ ದರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಈಗಾಗಲೇ ತರಿಸಲಾಗಿದೆ

ಬೀಳೀ ಖಾದಿಯ ಕೆಲವು ದರಗಳು —

45" —6¼ ಆಣೆ, 50" —7¼ ಆಣೆ, 54" —8¼ ಆಣೆ

**27" ಮತ್ತು 36" ಅಗಲದ ಖಾದಿಗೆ ಮತ್ತೂ ಕಡಿಮೆ ಬೆಲೆ!!**

ವಿಶೇಷ ಸೂಚನೆಗಳು —ಹೊಸ ಖಾದಿಯನ್ನು ಮಾತ್ರ ನಾವು ವಿಕ್ರಯಿಸುತ್ತಿರುವೆವೆಂದು ನಾವು ಹೊಸದಾಗಿ ತಿಳಿಸಬೇಕಾಗಿಲ್ಲದ ಕಾರಣ ಹಳೇ ಖಾದಿಯನ್ನು ಇತರ ಕಡೆಗಳಲ್ಲಿ ಕೊಂಡುಕೊಂಡು ಮೋಸಹೋಗದಿರೆಂದು ಸೂಚನೆ.

**ಮಂಗಳೂರು ಸ್ವದೇಶೀ ಸ್ಟೋರ್ಸ್, ರಥಬೀದಿ, ಮಂಗಳೂರು**

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಪುಷ್ಯ ಬ ೧೦ ಶನಿವಾರದಿಂದ ಅಂಗೀರಸ ಸಂವತ್ಸರದ ಮಾಘ ಶು । ೨ ಶುಕ್ರವಾರದ ವರೆಗಿನ ಪಂಚಾಂಗ

(೧೯೩೩ನೆಯ ಮಕರ—ಕುಂಭ (?)).

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | ಮಕರ | ಸೂರ್ಯ F. ಉ | ಅಸ್ತ |
|---|---|---|---|---|---|---|---|---|
| 21 | ಶನಿ | ೧೦ | ೨೭॥ | ವಿಶಾಖಾ | ೮ | ೮ | 7. | 6.25 |
| 22 | ರವಿ | ೧೧ | ೨೧ | ಅನುರಾಧಾ | ೩। | ೯ | 7. | 6.25 |
| 23 | ಸೋಮ | ೧೨ | ೧೪ | ಮೂಲಾ | ೫೨॥ | ೧೦ | 7. | 6 2 |
| 24 | ಕುಜ | ೧೩ | ೪೧ | ಪೂ. ಷಾ. | ೪೭॥ | ೧೧ | 7 | 6.26 |
| 2 | ಬುಧ | ೧೪ | ॥ | ಉ. ಷಾ | ೪೩॥ | ೧೨ | 7. | 6.26 |
| 26 | ಗುರು | ೧ | ೩೦ | ಶ್ರವಣಾ | ೪೦। | ೧೩ | 7 | 6 27 |
| | ಶುಕ್ರ | ೨ | ೪೩॥ | ಧನಿಷ್ಠಾ | ೩೮॥ | ೧೪ | 6 25 | 6.27 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) Maximum ಹೆಚ್ಚಾದದ್ದು | Minimum ಕಡಿಮೆ | Rainfall. ಮಳೆ ದಿನದ ಮಳೆ | ಒಟ್ಟು ಮಳೆ. |
|---|---|---|---|---|
| 12 | 89— 0 | 68— 1 | — | — |
| 13 | 91— 1 | 69— 0 | — | — |
| 14 | 91— 2 | 67— 3 | — | — |
| 15 | 87— 1 | 70— 7 | — | — |
| 16 | 92— 7 | 69— 9 | — | — |
| 17 | 92— 0 | 68— 3 | — | — |
| 18 | 92— 9 | 68— 3 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ. ಆ. | ವರೆಗೆ ರೂ. ಆ. |
|---|---|---|
| ಹೊಸ ಮುಡಿ ಅಕ್ಕಿ | 4— 0 | 4— 10 |
| ಹೊಸ ರಾಶಿ ಅಕ್ಕಿ .. | 3— 8 | 1— 0 |
| ಮುಡಿ ... | 4— 0 | — 4 |
| ಗುಡ್ಡ ... | 4— 2 | 4— 4 |
| ಸುಗ್ಗಿ .. | 3— 0 | 4— 4 |
| ಊರ ಅಪ್ಪರ್ ಬೆಳಗೆ .. | 4—10 | 5— 4 |
| ರಂಗೂನು ಬೆಳ್ತಿಗೆ ಗೋಣಿ ಕಳ್ಸಿ . | 6— 8 | 7— 0 |
| ಎಡಪ್ಪರು ಬೆಳ್ತಿಗೆ ಮುಡಿ ಕಳ್ಸಿ . | 4— 8 | 4—10 |
| ಗೋಧಿ ಗೋಣಿ ಕಳ್ಸಿ .. | 10— 8 | 12— 8 |
| ತೊಗರಿ ಗೋಣಿ ಕಳ್ಸಿ .. | 9— 8 | 12— 0 |
| ಹುರುಳಿ ಗೋಣಿ ಕಳ್ಸಿ . | 6— | 6— 4 |
| ಕಡಲೆ ಗೋಣಿ ಕಳ್ಸಿ | 8— 8 | 11— 0 |
| ತೊಗರಿಬೇಳೆ ಗೋಣಿ ಕಳ್ಸಿ | 13— 8 | 21— 0 |
| ಉದ್ದು ಗೋಣಿ ಕಳ್ಸಿ .. | 0— 8 | 10 2 |
| ಹೆಸರು ಗೋಣಿ ಕಳ್ಸಿ | 9— 4 | 1 — |
| ಊರುಬೆಲ್ಲ ಖಂಡಿ ಕಳ್ಸಿ .. | 31— 4 | 32 8 |
| ಉಪ್ಪು ಗೋಣಿ ಕಳ್ಸಿ ... | 4—14 | 5— 4 |
| ಕೊಬ್ಬರಿ ಖಂಡಿ ಕಳ್ಸಿ . | 65— | 72- |
| ಕೊಬ್ಬರಿ ಹಿಂಡಿ ಖಂಡಿ ಕಳ್ಸಿ .. | 24— 8 | 36— |
| ಎಳ್ಳಿಂಡಿ ಖಂಡಿ ಕಳ್ಸಿ .. | 26— 4 | 2— 8 |
| ಕೊಬ್ಬರಿ ಎಣ್ಣೆ ಮುಡಿ ಕಳ್ಸಿ ... | 4—14 | 6—14 |
| ಎಳ್ಳೆಣ್ಣೆ ಮುಡಿ ಕಳ್ಸಿ .. | 6—12 | 7— 0 |
| ಹರಳೆಣ್ಣೆ ಕಳ್ಳಿಗೆ ಕಳ್ಸಿ | 4— 7 | 8—12 |
| ಮಾರಿಷ ಸಕ್ಕರೆ ಮುಡಿ ಕಳ್ಸಿ ... | 3—16 | 4— 0 |
| ಹೊಸ ಮೆಣಸು ... | 5— 0 | 5— 6 |
| ಸಾಸಿವೆ ಮುಡಿ ಕಳ್ಸಿ .. | 4—12 | 5— 0 |
| ನೇಟಿವ್ ಕಾಫಿ ಖಂಡಿ ಕಳ್ಸಿ .. | 275— 0 | 300— |
| ಕಾಳುಮೆಣಸು ಖಂಡಿ ಕಳ್ಸಿ . | 170— 0 | 180— |
| ಮೆಂತ್ಯೆ ಮುಡಿ ಕಳ್ಸಿ . | 27— 0 | 28— |
| ಜೀರಿಗೆ ಮುಡಿ ಕಳ್ಸಿ . | 2— 4 | 2 - 6 |
| ಅರಸಿನ ಖಂಡಿ ಕಳ್ಸಿ . | 20— 0 | 25— 8 |
| ಕಾಂಪ್ರು ಹಸಿರು ಮುಡಿ ಕಳ್ಸಿ ... | 10 0 | 10— 2 |
| ಕಾಂಪ್ರು ಪಾತ್ರೆಗಳು ಮುಡಿ ಕಳ್ಸಿ | 15— 0 | 16—0 |
| ಕೀರ್ತಿ ಬೀಡು ಕಳ್ಸಿ .. | 13 4 | 13—8 |
| ಹುತ್ತಾಳ ಹಸಿರು ಮುಡಿ ಕಳ್ಸಿ ... | 11— 0 | 11— 8 |
| ವನು ಕಳ್ಸಿ . | 19— | 19— 4 |
| ಬೇಳೆ ಹುಳಿ ಖಂಡಿ ಕಳ್ಸಿ ... | 40— | 45— |
| ಫ್ಲಾಂಟೇಶನ್ ಕಾಫಿ ಖಂಡಿ ಕಳ್ಸಿ ... | 320— | 325— |
| ಹಳೆ ಅಡಿಕೆ ... | 180— | 205— |
| ಹೊಸ ಅಡಿಕೆ ... | 140— | 146— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್.

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕು ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಪೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯಾ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನ ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ವಾರ್ತೆಯ ಬಾಣಗಳನ್ನು ಎಷ್ಟು ಬೇಕಾದರೂ ಬಿಡಬಹುದು. ಈ ಸಲಕ್ಕೆ ಇಷ್ಟಿರಲಿ. ಅನುಕೂಲವಾದರೆ ಬರುವ ಸಲ ಕೋರ್ಟು ಕಚೇರಿಗಳೆಡೆಗೆ ಅವನ್ನು ಪ್ರಯೋಗಿಸುವೆ.

ದಿವ್ಯದೃಷ್ಟಿ.

## NOTICE.

### CANARA BANK LIMITED.

Pursuant to section 37 of the Indian Companies Act VII of 1913, the Share Register, and the Register of Members of the Bank will be closed from Monday the 6th February 1933 to Saturday the 25th February 1933 (both days inclusive).

BY ORDER

Office of the Bank, Mangalore 23 1 33

P Sarvothum Nayak, *Ag Secretary & Treasurer*


## Panchmal Narasimha Kamath & Brothers,

CAR STREET, MANGALORE.

*31st Oct, 1932.*

To

The Manager,

## Zenith Life Assurance Company, Limited.

MANGALORE

DEAR SIR,

I have great pleasure to acknowledge receipt of your cheque No B 942296 on the National Bank of India Ltd Bombay for Rs. 1954—12—0 in full settlement of the claim on Policy No 3765 of my deceased brother Ganapathi Kamath.

The Policy was deliverd to you duly discharged on 21st October 1932 add your Head Office have issued the cheque on the 25th October i. e. **on the very day they received the Policy in their hands.**

I am really greatful for the prompt settlement of the claim for which your Company is so well known

YOURS FAITHFULLY,

*Sd*. **Panchmal Narasimha Kamath**

# DUO-TREAD TIRES.

## Seiberling's Novel Features.

1. Air Cooled.
2. Duo Tread.
3. Twice the Mileage FOR
4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ವಪ ವಿಚಾರಗಳು.

### ಹೋರರೂ ಹಿಂದೀ ಲಿಬರಲರೂ

ಪ್ರತ್ಯಕ್ಷವಾಗಿ ಹೇಗೆ ಆದಿದರೂ, ಈಗ ದುಂಡುಮೇಜಿನ ಸಭೆಯಲ್ಲಿ ವಿರುದ್ಧವಾಗಿ ಆಕ್ಷೇಪಗಳನ್ನೇ ಎತ್ತಿ ಹಿಡಿದಿರುವರು. ಹೋರರು ಸೂಚಿಸಿರುವ ಹೊಸ ತಿದ್ದುಪಡಿಗಳು ತೃಪ್ತಿಕರವಾಗ ಲಾರವೆಂದೇ ಇವರ ಅಭಿಪ್ರಾಯವು. ದೇಶದಲ್ಲಿರುವ ಸಂತಾಪವು ಶಮನ ಹೊಂದಬೇಕಾದರೆ, ಕೆಳಗೆ ಕೊಟ್ಟಿರುವಷ್ಟು ಅತಿ ಕಡಿಮೆಯೆಂದೇ ಭಾವಿಸಿ ಹೊಸ ರಾಜ್ಯಭಾರ ಕ್ರಮವನ್ನು ಪಾಲಿಸಬೇಕಾಗಿ ಇವರ ಕೋರಿಕೆ. ೧. ಪ್ರಾಂತ್ಯಗಳಲ್ಲಿ ಸಂಪೂರ್ಣವಾದ ಸ್ವಾತಂತ್ರ್ಯ. ೨. ಆರ್ಥಿಕ ನೀತಿಯನ್ನು ನಿರ್ಧರಿಸುವ ಹಕ್ಕು ಸಮೇತವಾಗಿ ದೇಶರಕ್ಷಣೆಗೆ ಮತ್ತು ಸೇನಾ ಆಡಳಿತದಲ್ಲಿ ಹಿಂದೀಯರೆ ಹೆಚ್ಚು ಹೆಚ್ಚಾಗಿ ಸೇರುವ ಹಾಗಾಗಬೇಕೆಂದು ನಿರ್ಧಾರ. ೩. ಪ್ರಾಂತೀಯ ಸ್ವರಾಜ್ಯ ದೊರೆಯುವಂತೆ ಕೇಂದ್ರದಲ್ಲಿ ಜವಾಬ್ದಾರಿಯನ್ನು ಕೊಡತಕ್ಕುದು. ೪. ಭಾರತವರ್ಷದ ಹಿತಕ್ಕಾಗಿಯೇ ರಕ್ಷಣೋಪಾಯಗಳನ್ನು ಕೆಲವೇ ವರ್ಷಗಳ ಸಲುವಾಗಿ ಇರುವ ಹಾಗೆ ಆ ಅವಧಿಯನ್ನು ನಿರ್ಧರಿಸತಕ್ಕುದು. ಇವೆಲ್ಲವೂ ಅಂದಿನಿಂದಲೂ ಇದುವರೆಗೂ ಲಿಬರಲರು ಆಡಿ ಬರುತಿದ್ದ ವಿಚಾರಗಳೇ. ಇವರ ಪ್ರತಿನಿಧಿಗಳೂ ಚರ್ಚಿಸಿ ವಿವರಿಸಿದವುಗಳೇ. ಆದರೆ, ಹಿಂದೆ ಹೇಗೆ ಇವು ಅಸ್ಪಷ್ಟವಾಗಿ ಅಥವಾ ಅಸಂಗತವೆಂದು ತಿರಸ್ಕೃತವಾಗಿದ್ದುವೊ, ಅಷ್ಟು ಮಟ್ಟಿಗೂ ಈಗಲೂ ಫಲಕ್ಕೆ ಬಾರವೆಂದೇ ಲಿಬರಲರು ದೂರಿಟ್ಟಿರುವರು.

### ರಾಷ್ಟ್ರೀಯರಿಗೂ ಲಿಬರಲರಿಗೂ ಮತಭೇದ ವಿದೆಯೆ?

ಒಂದು ವಿಚಾರದಲ್ಲಿ ಇಲ್ಲ. ಶಾಂತಿ ಸಮಾಧಾನಗಳು ಉಂಟಾಗಿ ಸರ್ವರೂ ಹೊಸ ರಾಜ್ಯಭಾರಕ್ರಮವನ್ನು ಅಂಗೀಕರಿಸುವರೆ ಆಲೋಚಿಸಬೇಕಾದರೆ, ರಾಜಕೀಯ ಕೈದಿಗಳನ್ನು ಬೇಗನೆ ಬಿಡುಗಡೆ ಮಾಡಿ ಅವರೊಡಗೂಡಿ ಎಲ್ಲ ವಿಷಯಗಳನ್ನು ಪರ್ಯಾಲೋಚಿಸದೆ ಆಗಲಾರದು ಎಂದು ಇವೆರಡೂ ಪಂಗಡಗಳು ಎನ್ನುತ್ತಿವೆ. ರಾಷ್ಟ್ರೀಯರು ಇತರ ಪಕ್ಷಗಳೊಡನೆ ಸೇರಿ ಈಗ ಸೂಚಿತವಾದ ತಿದ್ದುಪಡಿಗಳನ್ನು ವಿಮರ್ಶಿಸುವಂತಾದರೆ, ಜನತೆಗೆ ಇದರಿಂದ ವಿಶೇಷವಾದ ಪ್ರಯೋಜನವು ಇದ್ದೇ ಇದೆ ಎಂಬುದನ್ನು ಬಾರಿ ಬಾರಿಗೂ ಇಲ್ಲಿಯೂ ಇಂಗ್ಲೆಂಡಿನಲ್ಲೂ ವಿಚಾರವಂತರು ಒತ್ತಿ ಹೇಳಿಯೇ ಇರುವರು. ಲಿಬರಲರೂ ಈಗ ಇದನ್ನು ಪುನಃ ತಿಳಿಸಿದ್ದಾರೆ. ಆದರೆ, ಸರಕಾರವು ಇದನ್ನು ಪಾಲಿಸದಿದ್ದರೆ, ಲಿಬರಲರು ಏನು ಮಾಡಲಿರುವರಂತೆ? ಆ ವಿಷಯವಾಗಿ ಹಳಬರೂ ಕಿರಿಯರೂ ಚಕಾರ ಶಬ್ದವನ್ನೆತ್ತುವುದಿಲ್ಲ. ಸರಕಾರವು ಅವರ ಸೂಚನೆಯನ್ನೊಪ್ಪುವುದೆಂದು ಅಷ್ಟು ಖಂಡಿತವೆ? ಎಂದರೆ, ಹಾಗೇನೂ ತೋರುವುದಿಲ್ಲ. ಆದರೂ, ಲಿಬರಲರು ಈ ಭಾಗದಲ್ಲಿ ಮೌನವೇತಕ್ಕೆ? ಅತ್ತ ಲಂಡನ್‌ವಾಸಿಗಳಾದ ಲೋರ್ಡ ಸ್ನೈಡನ್ ಹ್ಯಾಮ್ ಪ್ರಭೃತಿಗಳು "ನಾವು ಭಾರತೀಯರಿಗೆ ವಿರುದ್ಧರಾಗಿಲ್ಲ; ನ್ಯಾಯಪ್ರಕಾರ ನಿಧಾನವಾಗಿ ಮುಂದರಿಸುವುದುತ್ತಮವೆನ್ನುತ್ತೇವೆ. ಈಗ ಪ್ರಾಂತ್ಯಗಳಲ್ಲಿ ಸ್ವರಾಜ್ಯವಾಗಿ, ಅಲ್ಲಿ ತರ್ಬೇತು ಹೊಂದುವವರ ಕೈಯಿಂದ ಅದು ಮುಂದೆ ಇಡೀ ದೇಶಕ್ಕೆ ಹರಡುವಂತಾಗಲಿ ಎನ್ನುತ್ತೇವೆ." ಭಾರತ ವರ್ಷದ ಸಂರಕ್ಷಕರಾಗಿರುವ ಇವರ ಹೇಳಿಕೆಯನ್ನು ಹೋರರು ಕೇಳಿದರೆ, ಲಿಬರಲರು ದೂರವಾಗುವರು; ಕೇಳದಿದ್ದರೆ ಹೋರರನ್ನೆ ಕೇಳುವವರ್ಯಾರು ಪಾರ್ಲಿಮೆಂಟಿನಲ್ಲಿ?

### ಸನಾತನಿಗಳ ಗೊಂದಲ

'ಹರಿಜನರು' ಹಣ್ಣುಕಾಯಿ ಕಾಣಿಕೆ ಮೊದಲಾದುವನ್ನು ದೇವಾಲಯಗಳಿಗೆ ತಂದೊಪ್ಪಿಸಿದರೆ, ಆಹ್ಲಾದದಿಂದ ಸ್ವೀಕರಿಸಿ ಪ್ರಸಾದ ಕೊಡುವರು. ಅದೇ ದೇವಾಲಯಗಳೊಳಗೆ ಮಾತ್ರ ಅವರಿಗೆ ಪ್ರವೇಶವಿಲ್ಲ. ಗುರುವಯೂರು ದೇವಳದ ಲೆಕ್ಕ ಪತ್ರಗಳನ್ನು ನೋಡಿದರೆ ಇದು ಸ್ಪಷ್ಟವಾಗುವುದು. ಶ್ರೀರಂಗಪಟ್ಟಣದ ದೇವಸ್ಥಾನದ ಹೊರಗಿರುವ ಬದಿ, ಪೀಠದ ಬಳಿ, ದೊಡ್ಡ ಡಬ್ಬಿ ಇದ್ದೆ. ಹರಿಜನರನ್ನು ದೇವಳಗಳೊಳಗೆ ಪ್ರವೇಶಿಸ ಬಿಡಬಾರದೆಂದು ಯಾವ ದೇವಳ ಕಟ್ಟಿದವರೂ ಶಾಸನ ಬರೆದುದಿಲ್ಲ. ಹರಿಜನರು ಇದು ವರೆಗೆ ಒಳಗೆ ಪ್ರವೇಶಿಸಲು ಕೇಳಿಕೊಂಡಿಲ್ಲವೆಂಬ ಒಂದೇ ಕಾರಣದಿಂದ ಅವರು ಇನ್ನು ಕೇಳುವ ಹಕ್ಕುಳ್ಳವರಲ್ಲವೆನ್ನುವುದೂ ಒಂದು ನ್ಯಾಯವೆ? ದೇವಳ ಕಟ್ಟಿಸಿದವರು ಹರಿಜನರಿಗೆ! ಆ ಕಾಲದ ಸಮಾಜ ಸ್ಥಿತಿಗೊಪ್ಪುವಂತೆ ಎಲ್ಲಾ ಸ್ವಾತಂತ್ರ್ಯ [illegible] ಆ ಕಾಲದ [illegible] ರಾಗಿರುವ [illegible] ಇವರನ್ನು ದೇವಳದೊಳಗೆ [illegible] ಕೆಲವು ದಿನಗಳ ವರೆಗೆ ಬೇಗೆ ದಿಯುವಂತೆ ಶ್ರೀರಾಮಾನುಜಾಚಾರ್ಯರಂಗಳವರು ಪದ್ಧತಿಯನ್ನು ವಿಟ್ಟಿದ್ದಿಲ್ಲವೆ? ಬ್ರಾಹ್ಮಣೇತರ ಹಿಂದುಗಳಿಗೆ ಅವರು ಹೀಗೆಷ್ಟು ಬೇರೆ ಬೇರೆ ಗೋಪುರಗಳ ತನಕ ಪ್ರವೇಶವಾಗಬಹುದೆಂದು ಬಿಟ್ಟರು! ಆ ಕಾಲದಲ್ಲಿ ಇಂಗ್ಲಿಷ ಕಲಿತ ವಕೀಲರಿಲ್ಲದಿದ್ದುದರಿಂದ ಬ್ರಾಹ್ಮಣೇತರರು ಬದುಕಿದರು. ಈಗ ವೈಸ್ರಾಯರ ಕೌನ್ಸಿಲಲ್ಲಿರುವ ವಕೀಲರಾದರೂ ಹರಿಜನರಿಗೆ ವಿರುದ್ಧವಾಗಿ ನಡೆವಂತೆ ವೈಸ್ರಾಯರಿಗೆ ಸೂಚಿಸದಿರಲಿ—ಎಂದು ಶ್ರೀ ರಾಜಗೋಪಾಲಾಚಾರ್ಯರು ಬರೆಯುವರು.

### ಇವೆರಡು ವೈಚಿತ್ರ್ಯಗಳಿಗೇನೆನ್ನುವುದು?

ಸಿರಿಯಾ ಪ್ರಾಂತ್ಯವನ್ನು ಮಹಾಯುದ್ಧದ ತರುವಾಯದಲ್ಲಿ ಫ್ರಾನ್ಸಿನ ಕೆಳಗಿಟ್ಟಿದ್ದರು. ಅದೀಗ ಸ್ವತಂತ್ರರಾಜ್ಯವಾಗುವ ಹಾಗೆ ಫ್ರಾನ್ಸು ಮಾಡಿಕೊಟ್ಟಿದೆ. ಇರಾಕ್ ಪ್ರಾಂತ್ಯವೋ ಇಂಗ್ಲಿಷರ ಕೈಗೊಪ್ಪಿಸಲಾಗಿದ್ದಿತಷ್ಟೆ; ಅದಿಷ್ಟರಲ್ಲೇ ಸ್ವತಂತ್ರ್ಯ ರಾಜ್ಯವಾಗುವ ಹಾಗೆ ಇಂಗ್ಲಿಷರೂ ಮಾಡಿಕೊಟ್ಟರು. ಎಷ್ಟು ಬೇಗನೆ! ಹದಿನೈದೇ ವರ್ಷಗಳಲ್ಲಿ! ಮರುಳುಕಾಡಿನಲ್ಲಿರುವ ಅರ್ಧ ನಾಗರಿಕರು ಇಷ್ಟರಲ್ಲಿ ಸಂಪೂರ್ಣ ಸ್ವತಂತ್ರರಾಗಿ ಬಾಳುವ ಹಾಗೆ ಪಾಶ್ಚಾತ್ಯ ಪ್ರಮುಖ ಜನಾಂಗಗಳು ಹವಣಿಸಿಕೊಟ್ಟಿರುವುದು ಎಷ್ಟು ಶ್ರೇಯಸ್ಕರವು! ಉಸುಬಿನಲ್ಲೇ ಹುಟ್ಟಿ ಬೆಳೆದು ಬಾಳಿದವರೂ ಎಷ್ಟು ಗಟ್ಟಿಗ ಸಭ್ಯರು, ರಾಜತಂತ್ರ ಪ್ರವೀಣರು. ಗಂಗಾ ನದಿಯಂತಹ ಪವಿತ್ರ ಸುಧಾರಣಾ ಆಶ್ರಯದಲ್ಲಿ ಹುಟ್ಟಿ ಬೆಳೆದ ಭಾರತೀಯರು ನೂರೈವತ್ತು ವರ್ಷ ಇಂಗ್ಲಿಷರ ಕೈಯಲ್ಲೇ ತಿದ್ದಿ ಬರುತ್ತಾರಾದರೂ, ಇನ್ನೂ ಸ್ವತಂತ್ರರಾಗಿ ಆಳಲು ಭಾರತೀಯರಿಗೆ ಬಾರದು! ಚೀನವೂ ಹಾಗೆಯೆ; ಫಲವತ್ತಾದ ರಾಜ್ಯಗಳಲ್ಲಿರುವವರೆಲ್ಲರು ಯುರೋಪಿಯರ ದೃಷ್ಟಿಯಲ್ಲಿ ಸ್ವತಂತ್ರರಾಗಲು ಅರ್ಹತೆಯುಳ್ಳವರಲ್ಲೆಂದೇ ತೋರುವುದಲ್ಲ. ಹಾಗೆಂದು ಜಾಪಾನೀಯರು ಪಾಶ್ಚಾತ್ಯರ ರೀತಿನೀತಿಗಳನ್ನು ಹಿಡಿದೇ ಸುಧಾರಣೆ ಹೊಂದಿದವರಾಗಿ, ತಾವೂ ಅಗ್ರಗಣ್ಯರಾದುದೇ ಮಾತ್ರವಲ್ಲದೆ ಪಾಶ್ಚಾತ್ಯರೆನ್ನುವ ಹಾಗೆ ಚೀನಾ ಇಂಡಿಯಗಳು ಇನ್ನೂ ಸ್ವತಂತ್ರವಾಗಿರಲು ಅರ್ಹವಲ್ಲವೆಂದೆನ್ನುವರು. ಇದೂ ಸುಭಿಕ್ಷದ ಸುಧಾರಿತ ಸಮಾಜಗಳ ದುರ್ದಶೆಯಲ್ಲವೆ?

### ನಾಸಿಕದಲ್ಲಾದುದೇನು?

ನಾಸಿಕ ಜೈಲಿನಲ್ಲಿ ಜೈಲರರೂ ಇತರ ಜೈಲುಸಿಬ್ಬಂದಿಯವರೂ ಕೈದಿಗಳ ಮೇಲೆ ಕೈಮಾಡಿದರೆಂದು ವಿಚಾರಣೆ ನಡೆದು, ಅಪಾದಿತರಿಗೆ ಶಿಕ್ಷೆಯಾಯಿತು. ಜೈಲರ್ ರೋಚ್ ಸಾಹೇಬರಿಗೆ ಒಂದು ವರ್ಷದ ಸಜೆ; ಡಿಪ್ಯೂಟಿ ಜೈಲರ್ ಜಿಕ್ಸನ್ ಸಾಹೇಬರಿಗೆ ಒಂಭತ್ತು ತಿಂಗಳ ಸಜೆ; ಹುಸೇನನೆಂಬ ಕೈದಿಗೆ ಒಂದು ತಿಂಗಳ ಸಜೆ,—ಉಳಿದಿಬ್ಬರು ತಪ್ಪಿತಸ್ಥರಲ್ಲವೆಂದು ತೀರ್ಪು. ಅಪಾದಿತರ ಸಹಾಯಕ್ಕಾಗಿ ಅಥವಾ ಗುಣವಾಗಿ ಒಬ್ಬ ಸಾಕ್ಷಿಗಾರನೂ ನುಡಿದುದಿಲ್ಲ. ಜಿಲ್ಲಾ ಮೆಜಿಸ್ಟ್ರೇಟರ ಮುಂದೆ ಹೇಳಿಕೆ ವಾಜ್ಯಾಲಗಳು ನಡೆದುವು. ಅಪಾದಿತರು ಮಾಡಿದ ಅತ್ಯಾಚಾರಗಳ ತೀಕ್ಷ್ಣತೆಯನ್ನು ಕಡಿಮೆಮಾಡುವುದಕ್ಕೆ ಯಾವ ರುಜುವಾತೂ ಇರಲಿಲ್ಲ. ಹೀಗಿದ್ದರೂ ಕೈದಿಗೊಳಪಟ್ಟವರ ಅತ್ಯಾಚಾರ ನಡೆಸಿದವರಿಗೆ ಮೇಲೆ ಹೇಳಿದಂತೆ ದಂಡನೆಯೇನೋ ಆಗಿದೆ. ಸರಕಾರವು ಇಷ್ಟು ಸಾಕೆಂದೇ ತಿಳಿದಿದೆಯೆ? ಪತ್ರಿಕೆಗಳೊಂದೂ ಇದನ್ನು ಅನುಮೋದಿಸುವುದಿಲ್ಲವಲ್ಲ. ನ್ಯಾಯ ತೀರಿಸುವಾಗ ಕರುಣೆಯೂ ಅದರೊಡನೆ ಬೆರೆತಿರಬೇಕೆಂಬುದೇನೋ ನಿಜವೇ. ಆದರೆ, ನ್ಯಾಯಕ್ಕಿಂತ ಕರುಣೆಯೇ ಹೆಚ್ಚಾಗಿದೆ ಎಂದು ಸರಕಾರವು ಇದನ್ನು ವಿಮರ್ಶಿಸಬೇಕೆಂದು ಮರಾಠೀ ಪತ್ರಿಕೆಯು ಸೂಚಿಸಿಯದೆ.

ಮೂವತ್ತು ಗಜದೂರ ಹೋಗುವುದರೊಳಗೆ ಎಷ್ಟು ವೇಗವಾಗಿ ಓಡುವ ಮೈಲು ಟ್ರೈನನ್ನಾದರೂ ನಿಲ್ಲಿಸುವ ಹೊಸ ವಿಧಾನವನ್ನು ರಷ್ಯದ ಒಬ್ಬ ಇಂಜಿನಿಯರು ಕಂಡುಕೊಂಡಿರುವುದಾಗಿ ಜಗತ್ತಿನಲ್ಲೆಲ್ಲ ಅವನನ್ನು ಕೊಂಡಾಡುವರು.

* * * *

ಬೇಗ ಬೇಗನೆ ಸ್ವರಾಜ್ಯವನ್ನು ಇನ್ನು ೨೫—೩೦ ವರ್ಷಗಳೊಳಗೆ ಕೊಡಲಿರುವ ಇಂಗ್ಲಿಷ ಸರಕಾರದ ಕಾರ್ಯಕಲಾಪಗಳ ವೇಗವನ್ನು ಈ ಒಕ್ಕಣೆ ಕಾಗದಗಳು ಬೇಗನೆ ನಿಲ್ಲಿಸುವವಾಗಿ ತಿಳಿದೂ ಇಂಡಿಯನ್ ಎಂಪಾಯರ್ ಸೊಸೈಟಿಯುವರನ್ನು ನಾವಾದರೂ ಕೊಂಡಾಡಬೇಡವೆ?

+ + + +

## NOTE...S
## ನೋಟಗಳು.

ಸೇಕಡಾ ೧೫ರಿಂದ ೩೦ರ ವರೆಗೆ ಇನ್ನು ಸರಕಾರಿ ಹುದ್ದೆದಾರರಿಗೆ ಸಂಬಳವನ್ನು ಕಡಿದೇ ಕೊಡಲು ನಿಶ್ಚಿತವಾಗಿದೆ. ಬೇಕಾದುದಕ್ಕಿಂತಲೂ ಹೆಚ್ಚಾಗಿ ಸರಕ್ಕು ದೊರೆವಾಗ, ಅದರ ಕ್ರಯವು ಇಳಿಯದೆ ಇದ್ದೀತೆ?

* * * *

ಎಂದೋ ಅಕ್ಕಿಗೆ ೧೫ ರೂಪಾಯಿ ಕ್ರಯವಿದ್ದಾಗ, ಮಹಾಯುದ್ಧದ ಬರಗಾಲದಲ್ಲಿ ಹಾಕಿರುವ ಸಂಬಳವನ್ನು ಈಗ ಕ್ರಯ ವಿಳಿದಾಗಲೂ ತೆರಬೇಕೆಂದರೆ ಹೇಗಾದೀತು!

* * * *

ಹಾಗೆಂದು, ಕೆಳ ತರಗತಿಯ ಗುಮಾಸ್ತರ ಬೆಲೆಯನ್ನಿಳಿಸಿ ಬಿಡುವುದೆ? ತಿಂಗಳಿಗೆ ೩೫ರಿಂದ ೩೦ಕ್ಕೆ ಜಿಲ್ಲೆಗಳಲ್ಲಿ, ೪೦ರಿಂದ ೩೦ಕ್ಕೆ ಮದ್ರಾಸಿನಲ್ಲಿ! ಜಿಲ್ಲೆಗಳಲ್ಲಿರುವವರ ಬಡ ಕುಟುಂಬಗಳ ಒಂದೂವರೆ ಮುಡಿ ಅಕ್ಕಿಯೇ ಹೋಯಿತು. ಪ್ರತಿ ತಿಂಗಳಲ್ಲಿ! ಆದರೆ, ಮದ್ರಾಸಿನಲ್ಲಿರುವವರಿಗೆ ಎರಡು ಮುಡಿ ಅಕ್ಕಿಯ ಮೌಲ್ಯದ ಎಲ್ಲವನ್ನು ಇದೆ.

* * * *

ಹೀಗೆ ಕತ್ತರಿ ಪ್ರಯೋಗದಿಂದ ಒಟ್ಟು ಅಧಿಪತ್ಯದಲ್ಲಿ ಸೇಕಡಾ ೯ರಂತೆ ಸಂಬಳ ಬಟವಾಡೆಯಲ್ಲಿ ಇಳಿತಾಯವಾಗಿ ೫೧॥ ಲಕ್ಷ ರೂಪಾಯಿ ಉಳಿತಾಯವಾಗುತ್ತಿದೆ, ಎಂದು ಅಂದಾಜು.

* * * *

ಜಿಡ್ಡಿಯ ಕ್ರಮವೋ,—ಪ್ರತಿವರ್ಷವಲ್ಲ; ಎರಡು ವರ್ಷಗಳಿಗೊಮ್ಮೆ. ಉಡ್ಡಿ ಪರ್ಯಾಯದಂತೆ.

* * * *

ದಫೆದಾರರು, ಪೇದೆಗಳು, ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಸಂಬಳದಲ್ಲಿ (ಮೂರನ್ನು ಒಂದೇ ಉಸಿರಲಿ ಬರೆದಿರುವರು.) ಸೇಕಡಾ ೫ರಂತೆ ಸಂಬಳ ಇಳಿಸುವರೆಂದರೆ ಸರಕಾರವು ೨೫ ರೂಪಾಯಿಗಳನ್ನು ಈಗ ಸಂಬಳ ಕೊಡಬೊಪ್ಪದಂತಿದೆಯಲ್ಲ. ಹಾಲಿಗಿಲ್ಲದವರಿಗೆ ನೀರಿಗೂ ತತ್ವಾರ ಮಾಡುವುದೇ?

* * * *

ಮೇಲಣ ಮುಂಡಾಸುಗಳ ಅಳತೆಯೂ ಟೊಪ್ಪಿಗಳ ಸುತ್ತಳತೆಯೂ ಕಡಿಮೆಯಾಗಿದೆ; ಸೇಕಡಾ ೪೦ರಂತೆ; ಆದರೂ ಅದು ೨೫೦ ರೂಪಾಯಿ ಮುಂಡಾಸು ಮತ್ತು ಟೊಪ್ಪಿ.

* * * *

ಅತ್ಯಧಿಕ ಕಡಿತ ವಿದ್ಯಾಭ್ಯಾಸದ ಇಲಾಖೆಯಲ್ಲಿ. ನಂತರ ಕ್ರಮವಾಗಿ ಪೋಲೀಸು, ರೆವಿನ್ಯು, ದಫೆದಾರರಿತ್ಯಾದಿ, ಇಂಜೀನೀರಿಂಗ್, ರಿಜಿಸ್ಟ್ರೇಶನ್ ಇಲಾಖೆಗಳಲ್ಲಿ. ಪ್ರಜೆ ಹಿತದ ಇಲಾಖೆಯೊಂದೇ ಎಲ್ಲಕ್ಕೂ ಮೊದಲು ಬಲಿಗೆ ಸಿದ್ಧವಾಯಿತೆ? ಅಥವಾ......?

* * * *

ಸರಕಾರವು ತೀರ್ವೆ ಕಡಿಮೆಮಾಡಬೇಕಾಗಿ ಗವರ್ನರರಿಗೆ ನಿವೇದಿಸಲು ೮೩ ವರ್ಷ ವಯಸ್ಸಿನ ಜಮೀನಿಯ ಗ್ರಹಸ್ಥರೊಬ್ಬರು ಪ್ರತಿನಿಧಿಗಳೊಡನೆ ಸಂಧಾನಿಸುತ್ತಿರುವಾಗಲೆ ಮಡಿದರು. ಬರ್ಮದಲ್ಲಿ ತೀರ್ವೆ ಇಳಿಸುವಂತಿಲ್ಲ; ಮೇಲು ಕೋರ್ಟಿಗೆ ದೂರು ಕೊಡಬೇಕಾದೀತೆಂದು ಈ ಸೂಚನೆಯಲ್ಲವಷ್ಟೆ.

* * * *

ಇಂಗ್ಲೆಂಡಿನಲ್ಲಿ ಇವೇ ನಾಲ್ಕು ವರ್ಷಗಳಿಂದೀಚೆಗೆ ಇಷ್ಟು ಚಳಿಯಾದುದಿಲ್ಲವಂತೆ. ರಾಜ ತಂತ್ರಜ್ಞರು ಹಳಿಗಟ್ಟಿ ಭಾರತದ ಪ್ರಶ್ನೆಯನ್ನು ಚಿಂತಿಸುತ್ತಲಿರುವಾಗ, ಚರ್ಚಿಲ್ಲರ ಕೈಯನ್ನು ಬಲಪಡಿಸಿರೆಂದು ಸ್ವರಾಜ್ಯ ವಿರೋಧಿಗಳು ನಮೂನೆ ಒಕ್ಕಣೆಗಳ ಪತ್ರಗಳನ್ನು ಪಾರ್ಲಿಮೆಂಟಿನ ಮೆಂಬರರಿಗೆ ವೋಟರರಿಂದ ಬರೆಯಿಸುತ್ತಿದ್ದಾರೆ.

* * * *

ಸತ್ತರೆ ಜ್ವರ ಬಿಡಿದು ಸಾಯಲಿ ಎಂದು ಕ್ಲೈವನೋ ಹೇಸ್ಟಿಂಗ್ಸನೋ ಇಲ್ಲಿಗೆ ಬಂದು ಹೇಗೂ ಮಾಡಿ ಸ್ಥಾಪಿಸಿದ ಈ ಇಂಡಿಯಾವನ್ನು ಸೇವಾಗಾರ್ಯಗಳ ಕವಚ ತೊಡಿಸಿ ಭದ್ರತೆಯಿಟ್ಟುಕೊಂಡರೂ ಹಿಂದೀಯರಿಗೆ ಒಪ್ಪಿಸಿ ನಿರ್ವಾಹಗೊಳಿಸಬಾರದೆಂದು ಈ ನೆಳಲು ಒಕ್ಕಣೆಗಳು ಸೂಚಿಸಿ ಗೋಳಾಡುತ್ತಿವೆ.

* * * *

## ಅಮೇರಿಕದಲ್ಲಿ

# ಶೌಕತಾಲಿಯವರ ಯುಕ್ತಿಯುಕ್ತ ಭಾಷಣ!

## 'ಗಾಂಧಿ ಧೈರ್ಯಶಾಲಿಯಲ್ಲ! ಅವರ ಧುರೀಣತೆ ದೋಷಯುಕ್ತ!'

# ಉಗುರಿನ ಕೆಲಸ - ಕೊಡಲಿ ಉಪಯೋಗ!

ನವೆಂಬರ ತಿಂಗಳಲ್ಲಿ ಅಮೇರಿಕಕ್ಕೆ ಹೊರಟ ಮೌಲಾನಾ ಶೌಕತಾಲಿಯವರು ತನ್ನ ಪತ್ನೀ ಪರಿವಾರ ಸಮೇತ ದಶಂಬರದಲ್ಲಿ ಅಲ್ಲಿಗೆ ತಲಪಿದರು. ಅನೇಕ ಮುಸ್ಲಿಮ ಬಾಂಧವರು ಮೌಲಾನಾರವರನ್ನು ಸ್ವಾಗತೀಕರಿಸಿಕೊಂಡರು. ಹಲವೆಡೆಗಳಲ್ಲಿ ಅವರ ಭಾಷಣಗಳಾದುವು. ನೂರಾರು ಜನರು ಅವರ ನುಡಿಗಳಿಂದ ಆನಂದಗೊಂಡರು. ಚಿಕಾಗೊವಿನ ಎಕ್ಸಿಕ್ಯೂಟಿವ್ ಕ್ಲಬ್ಬಿನಲ್ಲಿ ಅವರು ಕಳೆದ ತಿಂಗಳಾಂತ್ಯದಲ್ಲಿ ಭಾಷಣ ಮಾಡಿದರು. ತಾನು ಯಾರು, ತನ್ನ ಧ್ಯೇಯವೇನು, ತನಗೂ ತನ್ನ ಮತದವರಿಗೂ ಹಿಂದೂಸ್ಥಾನದಲ್ಲಿ ಆಶೆಯು ಬದುಕಾವುದು, ಗಾಂಧಿಗೂ ತನಗೂ ಏಕೆ ಮನಃಕ್ಲೇಶ ಹುಟ್ಟಿತು, ಎಂದಿವೇ ವಿಚಾರಗಳನ್ನು ಕುರಿತು ಮೌಲಾನರು ಹೇಳುತ್ತಾ ಸಭೆಯವರನ್ನು ಆನಂದಸಾಗರದಲ್ಲಿ ಮುಳುಗಿಸಿದರು. ಅವರ ಭಾಷಣವಾಗುತ್ತಿದ್ದಾಗ ಅವರ ಬಳಿ ಅವರ ಬೇಗಮರೂ ತಲೆ ಬಾಗಿಸಿ ಕುಳಿತ್ತಿದ್ದರು. ಮೌಲಾನರ ಭಾಷಣವು ದಶದಿಕ್ಕುಗಳಿಗೂ ಬ್ರೊಡ್‌ಕಾಸ್ಟ ಮೂಲಕ ಹರಡಿತು

೩೦೦ ಪೌಂಡ್ ಭಾರದ ಶೌಕತಾಲಿಯವರು ಕೊರಳಿಗೆ ಕತ್ರಿಗಿನ ಉಕ್ಕೆಯನ್ನು ಸುತ್ತಿಕೊಂಡು, ನಿಲುವಂಗಿಯನ್ನು ಧರಿಸಿ ಗಂಭೀರ ವಾಣಿಯಿಂದ ಹೀಗೆಂದರು—"ಹಿಂದೂಸ್ಥಾನದಲ್ಲಿ ಮಹಾತ್ಮಾ ಗಾಂಧಿಯವರು ಅಸಮಾನರು ಅದ್ಭುತ ವ್ಯಕ್ತಿ. ಅವರಿಗೆ 'ಅತೀವ ಸಹಾಯವನ್ನು ಮಾಡಿದವರಾರೆಂದು' ನೀವು ಈಗ ಹೋಗಿ ಜೈಲಿನ ಗೋಡೆಯನ್ನು ಕೊರೆದು ವಿಚಾರಿಸಿದ್ದಲ್ಲಿ, ತನಗೆ ಸಹಾಯ ಮಾಡಿದವರು ಆಲಿ ಸಹೋದರರು,—ಮೌಲಾನಾ ಶಾಕತಾಲಿ, ಮೌಲಾನಾ ಮಹಮ್ಮದಾಲಿ ಎಂಬುದಾಗಿ ಅವರು ತಟ್ಟನೆ ಹೇಳಿಬಿಡುವರು. ಗಾಂಧಿಯವರು ಅಂದು ಕಾಯಿದೆಭಂಗ ಚಳವಳವನ್ನು ಪ್ರಾರಂಭಿಸಿದರಷ್ಟೆ! ಅದಕ್ಕೆ ಕೈಹಚ್ಚುವ ಮೊದಲು ಅವರು ನನ್ನೊಡನೆ ಕೇಳಿದರು "ನೀನೂ ಬರುತ್ತೀಯಾ?" ಎಂದು. ನಾನು ಉತ್ತರವಿತ್ತೆ "ನಾನು ಬರುವುದಿಲ್ಲ" ಎಂದು. ಗಾಂಧಿಯವರು ಮಹದ್ವ್ಯಕ್ತಿ, ಒಳ್ಳೇ ಜ್ಞಾನಿ. ಅವರನ್ನು ವ್ಯಾಪಾರದಲ್ಲಿ ಸೋಲಿಸಬೇಕೆಂದಾದರೆ ನೀವು ಅಮೇರಿಕನರು ಮೊದಲು ಅದನ್ನು ಮುಂಜಾನೆ ಎದ್ದುಕೊಳ್ಳಲು ಅಭ್ಯಾಸಮಾಡಬೇಕು. ಅಷ್ಟು ಕುಶಾಗ್ರ ಬುದ್ಧಿಯ ಚತುರರವರು" ಎಂದರು. ಮಹಾತ್ಮಾ ಗಾಂಧಿಯವರ ಧುರೀಣತೆಯನ್ನು ಮೌಲಾನರು ದೂರಿದರು. ಅದರಲ್ಲಿ ವಿಶೇಷ ಕುಂದುಕೊರತೆಗಳಿವೆ ಎಂದರು. ಮಹಾತ್ಮಾ ಗಾಂಧಿಯವರ ಸೂತ್ರಗಳನ್ನು ವಿಮರ್ಶಿಸುತ್ತಾ—, ಗಾಂಧಿಯವರು ಉಗುರಿನ ಕೆಲಸಕ್ಕೆ ಕೊಡಲಿಯನ್ನುಪಯೋಗಿಸಿ ಕಾರ್ಯವನ್ನು ಬಿಗುಮಾಡುತ್ತಿರುವರು. ಸಂದಿಗ್ಧ ಕಾಲದಲ್ಲಿ ಗಾಂಧಿಯವರು ಅಧೈರ್ಯಗೊಂಡು ಕಂಗಾಲಾಗುತ್ತಾರೆ. ಆದರಿಂದಾಗ್ಗೆ ಸೋತು ಮೂಲೆಗೆ ಬೀಳುತ್ತಾರೆ. ನಿಷ್ಪ್ರಯೋಜಕ ಉದ್ಯಮಿಗಳಾಗಿ ಬಿಡುತ್ತಾರೆ. ಹಿಂದೂ ಮುಸಲ್ಮಾನರೊಳಗೆ ಮದ್ರಾಸಿನಲ್ಲಿ ನಡೆದ ಕರಾರನ್ನು ಗಾಂಧಿಯವರು ದೃಢವಾಗಿ ಹಿಡಿದುಕೊಳ್ಳುತ್ತಿದ್ದರೆ ಏಡು ವರ್ಷಗಳ ಹಿಂದೆಯೇ ಸಂಧಿಯಾಗಿಬಿಡುತ್ತಿತ್ತು. ಗಾಂಧಿಯವರು ಸಮ್ಮತಿಸುತ್ತಿದ್ದರೆ ಇಂಗ್ಲಾಂಡು ಮತ್ತು ಹಿಂದೂದೇಶಗಳೊಳಗೆ ಎಂಡು ವರ್ಷಗಳ ಮೊದಲು ಒಂದು ಸಂಧಿಯುಂಟಾಗುತ್ತಿತ್ತು! ಹಿಂದೂ ಮುಸಲ್ಮಾನರು ಒಂದಾಗಿ ಸಾಹಸಗೈಯುತ್ತಿದ್ದರೆ, ಬ್ರಿಟಿಷರನ್ನು ಹಂಗಿಗೆ ತಂದು ಅವರು ಹಿಂದೂಸ್ಥಾನದ ಕೇಳಿಕೆಗಳಿಗೆ ಶಿರಬಾಗುವಂತೆ ಮಾಡಬಹುದಾಗಿದ್ದಿತು. ಆದರೆ ಗಾಂಧಿಯವರು ತನ್ನ ಬೆಂಬಲದಲ್ಲಿದ್ದ ಹಿಂದೂ ವರ್ಗದವರನ್ನು ನಂಬಿ ಇದಕ್ಕೆ ವ್ಯತಿರಿಕ್ತ ನಿರ್ಣಯಗಳನ್ನು ಮಾಡಿಕೊಂಡರು. ಹೆಬ್ಬಾಗಿಲನ್ನು ಮುಚ್ಚಿಕೊಂಡು,—ಶಾಂತಿಗೆ ವಿಘ್ನವನ್ನುಂಟುಮಾಡಿದರು. ಅಶಾಂತಿಗೆ ಕಾರಣೀಭೂತರಾದರು ಎಂದು ಮೌಲಾನಾರೆಂದರು. ಮಹಾತ್ಮಾ ಗಾಂಧಿಯವರು ಹಿಂದೂಗಳನ್ನು ನಂಬಿ ಕೆಟ್ಟರೆಂಬ ವಿಷಯವನ್ನು ಆಲಿಯವರು ಸಭಿಕರಿಗೆ ಮನದಟ್ಟು ಮಾಡಿದರು. ಮುಸ್ಲಿಮರನ್ನು ಬಿಟ್ಟು ಮುಂದೆ ಸಾಗಿದುದೇ ತಪ್ಪೆಂದು ಅವರ ಅಭಿಮತ, ಅದರಲ್ಲೂ ತನ್ನನ್ನು ನಿರಾಕರಿಸಿ ಮಾಡಿದ ಸಾಧನೆಯು ಫಲಪ್ರದವಾಗುವಂತಿಲ್ಲವೆಂಬ ವಿಚಾರವು ಆಲಿಗಳ ಅಂತರ್ಯದಲ್ಲಿತ್ತು. ಆದನ್ನವರು ಸಭೆಯಲ್ಲಿ ಸುವ್ಯಕ್ತಗೊಳಿಸಿದರು. ಆಲಿಗಳು ಅಷ್ಟರಲ್ಲೇ ಸುಮ್ಮಗಾಗಲಿಲ್ಲ—ಮತ್ತೂ ಹೇಳಿದರು "ಗಾಂಧಿ ಮಾಡಿದ್ದು ದೊಡ್ಡ ತಪ್ಪು! ಕಳೆದ ವರ್ಷ ಅವರು ಲಂಡನಿಗೆ ಹೋದರಷ್ಟೆ! ಆಗ ಲಂಡನಿನ ವಾತಾವರಣವು ಹೇಗಿತ್ತು? ಸಂಶಯ ಮನೋಭೇದ ಬೀಜಗಳು ಎಲ್ಲೆಲ್ಲೂ ಪಸರಿಸಿಕೊಂಡಿದ್ದುವು. ಕಡೆಗೇನಾಯಿತು? ಗಾಂಧಿಯವರೂ ಅವರ ಅನುಯಾಯಿಗಳೂ ಹೋದಂತೆ ಹಿಂದೆ ಬಂದರು! ಅವರನ್ನು ಕಾರಾಗೃಹದೊಳಗನೇ ತಳ್ಳಿಬಿಟ್ಟರು. ಕೆನಡಾ ದೇಶಕ್ಕಿರುವಂತಹ ಸ್ವಾತಂತ್ರ್ಯವನ್ನೇ ನಮಗೆ ಕೊಡುತ್ತೇವೆಂದು ಲೋರ್ಡ್ ಅರ್ವಿನರು ಹಿಂದೀಯರಿಗೆ ವಾಗ್ದಾನ ಮಾಡಿದ್ದರು. ಆದರೆ ಕಲವು ಸಕಾರಣಗಳಿಂದಾಗಿ ಆ ವಾಗ್ದಾನವು ಬಿದ್ದುಬಿಟ್ಟಿತು. ಇಷ್ಟೆಲ್ಲ ಆಗುವಾಗ ನಾನು ಮಾತ್ರ ಅವರೊಡನಿರಲಿಲ್ಲ, ಹೊರಗ ಹೋಗಿದ್ದೆ. ಹಿಂತಿರುಗಿ ಬಂದೊಡನೆ ಗಾಂಧಿಯವರೇ ಮೊದಲಾದವರೊಡನೆ ಸ್ಥಿತಿಗತಿಗಳನ್ನು ಕುರಿತು ವಿಚಾರಿಸಿಕೊಂಡೆ. ಹೇಳುವುದೇನು? ನೋಡುವುದೇನು? ಹಿಂದೂಗಳೆಲ್ಲ ಮನೋಪರಿವರ್ತನೆಯನ್ನು ಮಾಡಿಕೊಂಡಿದ್ದರು. ಅವರ ಪೂರ್ವ ನಿರ್ಧಾರವು ಬೇರಾಯಿತು. ನಾನೇನು ಮಾಡಲಿ?' ಎಂದರು.

ಶೌಕತಾಲಿಯವರು ಮುಸ್ಲಿಮ್ ಜನಾಂಗದ ಪ್ರತಿನಿಧಿಯೆಂಬುದೇನೋ ಖರೆ. ಆದರೆ ಅವರು ಇಂತಹ ಬಿಕ್ಕಟ್ಟು ದಿನದಲ್ಲೂ ದ್ವೇಷಾಸೂಯೆಗಳ ಪ್ರಸ್ತಾಪವನ್ನೇ ಊರು ಪರಊರುಗಳಲ್ಲಿ ಪ್ರಚಾರ ಮಾಡುತ್ತಿರುವುದೆಂದರೆ ಖೇದಕರ. ಅಮೆರಿಕದಿಂದ ಡಾ| ಸುಧೀಂದ್ರ ಬೋಸರೆಂಬ ಪತ್ರಿಕಾ ವ್ಯವಸಾಯಿಗಳವರು ಶೌಕತಾಲಿಯವರ ವಾಗ್ಯುದ್ಧವನ್ನು ವಿಮರ್ಶಿಸಿ ಒಂದು ಪತ್ರ ಬರೆದಿರುವರು. ಅವರು ಹೇಳುವುದೇನೆಂದರೆ — ಮೌಲಾನಾ ಆಲಿಯವರು ಗಾಂಧಿಯವರ ಮೇಲೆ ಕಟುಕ್ತಿಯ ಕಿಡಿಗಳನ್ನು ಕಾರುತ್ತಿದ್ದಂತೆ ಭಾಸವಾಯಿತು. ಗಾಂಧಿಯವರನ್ನು ಒಂದು ರೀತಿಯಲ್ಲಿ ಹೊಗಳಿ ಮನಮೆಚ್ಚಿಸುತ್ತಿರುವರಾದರೂ ಅವರ ಹೊಗಳಿಕೆಯಲ್ಲೂ ಒಂದು ವಿಧದ ತೆಗಳಿಕೆ ಇದೆ. ಇಂತಹ ಪ್ರದರ್ಶನದಿಂದ ಆಲಿಗಳಿಗೆ ಎಂತಹ ಲಾಭವಿದೆಯೋ ನಾನರಿಯೆ. ಅವರಿಗೆ ಎಂತಹದು ಲಭ್ಯವಾಗುವುದೋ ನಾನು ತಿಳಿಯೆ. ಅಮೆರಿಕದ ವಿದೇಶೀಯರನ್ನು ಕಂಡು ದೇಶೀಯ ಪ್ರಸಂಗವನ್ನೆತ್ತಿ ಮಾತನಾಡುವಾಗ ಐಕ್ಯದ ಔದಾರ್ಯವನ್ನೇ ತೋರಿಸಬೇಕು. ಸರ್ವ ಪಕ್ಷೀಯರ ದೃಢತೆ, ಘನತೆ, ಒಗ್ಗಟ್ಟುಗಳ ಸತ್ವ ಪ್ರಚಾರವನ್ನು ಮಾಡಬೇಕು. ಇಂತಹ ರೀತಿಯು ರಾಜನೀತಿಜ್ಞರಿಗೆ ಯೋಗ್ಯವಾದುದು ಮತ್ತು ಉಚ್ಚವಾದುದು. ಆದರೆ ನಮ್ಮ ಗತಿಯೇನು? ಅಮೆರಿಕಾದಲ್ಲಿರುವ ಹೆಚ್ಚಿನ ಹಿಂದೀಯರು ತಮ್ಮ ರಾಷ್ಟ್ರೀಯ ಸಮಸ್ಯೆಗಳ ಕುರಿತಾಗ ಬಹಳ ಕರ್ಕಶವಾಗಿ, ಭಿನ್ನ ಮತೀಯರಾಗಿಯೇ ನುಡಿಯುತ್ತಾರೆ! ಈಗಿನ ದಿನಗಳಿಗೆ ತಕ್ಕ ಸೂತ್ರವು ಇದಲ್ಲ. ಈಗ ಬೇಕಾದುದು ಏಕಪಕ್ಷೀಯ ಭಾವನೆ, ಆಲೋಚನೆ, ಏಕವಾಕ್ಯಕ ಕಾರ್ಯಸಾಧನೆ, ಯೋಜನೆ, ಏಕವಾಕ್ಯಿಕ ವರ್ತನೆ, ಆಚರಣೆ, ಹಿಂದೂದೇಶದ ಈಗಿನ ನಡೆಯ ಈ ಕಾಳತ್ತಲೆಯ ದಿನದಲ್ಲಿ ಬೇಕಾದುದು ಈ ರೀತಿಯ ಸೌಹಾರ್ದ್ರ ಪ್ರೇರಿತ ನಿಯಮಾವಳಿಗಳು

ಗಾಂಧಿಯವರ ರೀತಿ ನೀತಿಗಳ ಸಿಂಹಾವಲೋಕನವಾದ ನಂತರ ಆಲಿ ಸಾಹೇಬರವರು ಹಿಂದೂ ಮುಸ್ಲಿಮ 'ಯುದ್ಧ'ದ ಕುರಿತು ಪ್ರಸ್ತಾಪಿಸಿದರು. ಹಿಂದೂ ಮುಸಲ್ಮಾನ ದ್ವಂದ್ವವು ಮತಸಂಬಂಧವಾದುವುಗಳಲ್ಲ. ಅವುಗಳು ಸ್ವಾರ್ಥ, ಅಭಿಲಾಷೆಗಳ ಚಿಹ್ನೆಗಳೆಂದೇ ಅವರ ಹೇಳಿಕೆ. ಹಿಂದೂ ಮುಸಲ್ಮಾನರೊಳಗೆ ತೋರುವ ಸಣ್ಣ ಮಣ್ಣದಿನ್ನೆಯನ್ನು ಕೆಲವು ನೀತಿಜ್ಞರು ಮಹಾಮೇರುವಂತೆ ಮಾಡಿ ತೋರಿಸುತ್ತಿರುವರು. ಇಂತಹ ನಟನದಿಂದ ಹಿಂದೂದೇಶದ ಕೈಯಿಂದ ಸ್ವಾತಂತ್ರ್ಯದ ಹಾಲಿನ ಬಟ್ಟಲನ್ನು ಕಸಕೊಳ್ಳಲು ಯತ್ನಿಸುತ್ತಿರುವರು ಎಂದು ಆಲಿಗಳವರು ಗಂಭೀರವಾಗಿ ನುಡಿದರು.

"ಬ್ರಿಟಿಷರ ಮೇಲೆ ಬಹು ಪಕ್ಷೀಯರ ಹಿಂದೂಗಳು ಹೆಚ್ಚಿನ ವಿಶ್ವಾಸವುಳ್ಳವರಾಗಿರುವರು, "ಅವರ ಸಂಬಂಧವನ್ನಿಟ್ಟುಕೊಳ್ಳಲು ಕಾಂಕ್ಷೆಯುಂದಿರುವವರು ಹೆಚ್ಚಿನವರಿದ್ದಾರೆ— ನಾನಾದರೋ ಬ್ರಿಟಿಷ ಸಂಬಂಧವನ್ನು ಇಟ್ಟುಕೊಳ್ಳಲಪೇಕ್ಷಿಸುವವನು" ಎಂದು ಶೌಕತಾಲಿಗಳವರು ಮುಂದರಿಸಿ ಹೇಳಿದರು. ಆಲಿಗಳಿಗೆ ನಿಜವಾದ ಶಾಂತಿಯು ಅಗತ್ಯವಿದೆಯಂತೆ. 'ಗಾಂಧಿಜೀಯವರ ಬಿಡುಗಡೆ ಮಾಡಿ' ಸ್ವಜ ಶಾಂತಿಸ್ಥಾಪನೆಯಾಗುವುದಾದರೆ ಇಡೀ ಧರಣೀತಲಕ್ಕೇನೆ ಶ್ರೇಯಸ್ಸುಂಟಾಗುತ್ತಿತ್ತು. ಎಂದು ಮೌಲಾನಾರವರ ಅಭಿಪ್ರಾಯ ಸೂಚನೆ. ಆಲಿಗಳವರು ಅಮೇರಿಕಾದಲ್ಲಿ ಮುಸ್ಲಿಮರ ಪ್ರಥಮ ಪ್ರತಿನಿಧಿಯೆಂದೆನ್ನಿಸಿಕೊಳ್ಳಲು ಶತಪ್ರಯತ್ನವನ್ನು ಮಾಡುವಂತಿದೆ. ತನ್ನಲ್ಲಿ ಸ್ವಾರ್ಥದ ಕಳಂಕವಿಲ್ಲವಂತೆ, ತಾನು ಶಾಂತಿಸ್ಥಾಪಕನೆಂಬ ವಿಚಾರವನ್ನು ಅವರು ಲೋಕಪ್ರಸಿದ್ಧ ಮಾಡಬೇಕೆಂದು ಯೋಚಿಸುವಂತಿದೆ. ಒಂದು ಕಡೆಯಿಂದ ಅವರಿಗೆ ಬ್ರಿಟಿಷರ ಮೇಲೆ ಪ್ರೇಮ, ಬ್ರಿಟಿಷ ನೀತಿಯ ಮೇಲೆ ಜಿಗುಪ್ಸೆ. ಹಾಗೂ ಅವರು ಮುಸ್ಲಿಮ ಕ್ಷೇಮಚಿಂತಕರೆಂಬ ಸತ್ಯ ಸಂಗತಿಗೆ ಲೋಪವಿಲ್ಲ

ಶೌಕತಾಲಿಯವರು ಯುಕ್ತಿಯುಕ್ತ ಭಾಷಣವನ್ನು ಕೇಳಿ ಆಂಗ್ಲೋ ಇಂಡಿಯನ್ ಪತ್ರಿಕೆಗಳೂ ಟೀಕೆಗಾರಂಭಿಸಿವೆ. ರಾಷ್ಟ್ರೋನ್ನತಿಯನ್ನು ಶೌಕತಾಲಿಯವರು ಈ ರೀತಿಯಿಂದ ಮಾಡುತ್ತಿರುವುದರಿಂದ ಇಷ್ಟಕ್ಕಿಂತ ಅನಿಷ್ಟವೇ ಹೆಚ್ಚೆಂದು ಹೇಳುತ್ತಿವೆ. ರಾಷ್ಟ್ರೀಯ ಪತ್ರಿಕೆಗಳೂ ಹೀಗೆಯೇ ಅಭಿಪ್ರಾಯಪಡುತ್ತಿವೆ. ಒಂದು ಪತ್ರಿಕೆಯು ಶೌಕತಾಲಿಯವರು ಸ್ವಜಾತ್ಯಾಭಿಮಾನದಿಂದ 'ಹೀಗೆ ನುಡಿದು ತನ್ನ ಬೆಂಬಲವಾಗಿರುವ ಬಾಂಧವರನ್ನು ಕಳೆದುಕೊಳ್ಳುತ್ತಾರೆ ಎಂದು ಹೇಳಿದೆ. ಶೌಕತಾಲಿಯವರು ಇನ್ನೆರಡು ತಿಂಗಳುಗಳ ತನಕ ಅಮೆರಿಕಾದಲ್ಲೇ ಉಳಿದು ಇಸ್ಲಾಂ ಮತಪ್ರಚಾರವನ್ನು ಮಾಡುವರು —ಹಿಂದೂದೇಶದ ಸ್ಥಿತಿಗತಿಗಳನ್ನು ಅವರು ಅಲ್ಲಿಯವರಿಗೆ ಹೇಳಿ, ತನ್ನ ಭಾಷಣಗಳಿಂದಾಗ ಧನಾರ್ಜನೆಯನ್ನು ಮಾಡುವರು

ಮಹಾತ್ಮಾ ಗಾಂಧಿಯವರ ಉಪವಾಸದ ಕುರಿತು ಹಾಸ್ಯವನ್ನೆಬ್ಬಿಸುತ್ತಾ ಶೌಕತಾಲಿಯವರು "ನೋಡಿ ನನಗೆ ಉಪವಾಸದಲ್ಲಿ ಭರವಸ ಇಲ್ಲ. ಕಾರಣ ಅದು ಪ್ರಾಣತ್ಯಾಗಕ್ಕೆ ಸರಿಹೋಗುತ್ತದೆ. ನಾನು ಕೆಟ್ಟವನೆಂದಾದರೆ ನನ್ನ ಕೆಟ್ಟತನವನ್ನು ಹೋಗಲಾಡಿಸಲು ಯತ್ನಿಸಬೇಕು. ಹಾಗೆ ಕೆಟ್ಟತನವನ್ನು ಹೋಗಲಾಡಿಸಬೇಕಾದರೆ ನನ್ನ ಕಾರ್ಯವು ದೃತ್ಯವಾಗಿರಬೇಕು ಎಂದರೆ ಮಾತ್ರ ಸಾಧ್ಯವಾಗುವುದು ಎಂದರು. ಆಲಿಯವರ ಮಾತಿನಂತೆ ಗಾಂಧಿಜೀಯವರಲ್ಲಿ ಕೆಟ್ಟತನವಿದೆಯೆ? ಅದನ್ನು ಹೋಗಲಾಡಿಸಬೇಕಾದರೆ ಗಾಂಧಿಯವರು ದೇಹವನ್ನು ನಾಶಿಸಲಹಬೇಕು ಎಂದು ಅರ್ಥವಾಗುತ್ತದೆ.

ಆಲಿಗಳವರು ಅಮೇರಿಕಕ್ಕೆ ಹೊರಟಾಗ ಗಾಂಧಿಯವರು ಒಂದು ಸಂದೇಶವನ್ನು ಕಳುಹಿಸಿ ಕೊಟ್ಟಿದ್ದರು. ಅದರಲ್ಲಿ "ಸಮಸ್ತೇ ನೀವು ಸರಿಯಾಗಿ ಹುಡುಕಿದರೆ ನಾನು ನಿಮ್ಮ ಜೇಬಿನೊಳಗೇನೆ ಇದ್ದೇನೆ" ಎಂದಿತ್ತು. ಈ ತಂತಿಯನ್ನು ಆಲಿಯವರು ಒಬ್ಬರಿಗೆ ತೋರಿಸಿ "ಗಾಂಧಿಯವರು ಹಾಗೆ ಬರೆದುದರಲ್ಲಿ ಅರ್ಥವಿದೆ. ನಾನು ಗಾಂಧಿಯವರಿಗಿಂತ ೩ ಪಾಲು ಹೆಚ್ಚು ಭಾರವಿದ್ದೇನೆ. ಹಾಗಿರುವಾಗ ಅವರಂತಹ ದೇಹವು ನನ್ನ ಜೇಬಿನೊಳಗೆ ಅಡಗಿ ಕೂತುಕೊಳ್ಳುವುದು ಅಪ್ರಕೃತವಲ್ಲ" ಇದೇ ಅರ್ಥವನ್ನು ಕೆಲವು ರಾಷ್ಟ್ರೀಯ ಪತ್ರಿಕೆಗಳು ಕೊಟ್ಟಿವೆಯೆಂದು ಆಲಿಗಳು ಹೇಳಿದರು.

## ಅನುಕ್ರಮಣಿಕೆ.

ಅಗ್ರಲೇಖ
ಮರುಮಕ್ಕತ್ತಾಯ ಮಸೂದೆ ... ೪
ಸ್ಫುಟಾಭಿಪ್ರಾಯಗಳು ... ೬
ಟೀಕೆಗಳು ... ,,
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ... ೯
ದಕ್ಷಿಣ ಕನ್ನಡ— ಮಂಗಳೂರು, ಸುರತ್ಕಲ್, ಕಾಸರಗೋಡು, ಕುರಂಗಿಪೇಟೆ, ಕಾರ್ಕಳ, ಕಲ್ಯಾಡಿ, ಕಾಪು, ಉಡುಪಿ, ಮೂಡಬಿದ್ರಿ, ಬೆಳ್ತಂಗಡಿ, ಪುತ್ತೂರು, ಸುಳ್ಯ ... ೯
ವಿವಿಧ ಸಮಾಚಾರಗಳು ... ೧೧
ಕೌತಾಲೀಕೆ! ... ೨
ಪತ್ರವ್ಯವಹಾರ ... ೧೪
ಸ್ವದೇಶ ವಾರ್ತೆಯು ಬಾ! ... ೪
೨೭ ರಾಜದ್ರೋಹಗಳಿಗೆ ಶಿಕ್ಷೆ ... ೭
ಅಮೇರಿಕದಲ್ಲಿ ಶೌಕತಾಲಿಯವರ ಯುಕ್ತಾಯುಕ್ತ ಭಾಷಣ ... ೧೦
ಸಂಯುಕ್ತ ಹಿಂದೂಸ್ಥಾನಕ್ಕೆ ಯುಕ್ತವಾದ ವಿದ್ಯಾಭ್ಯಾಸ ... ೧೩

ಸ್ವದೇಶಾಭಿಮಾನಿ.

ತಾ. ೨೭ನೇ ಶುಕ್ರವಾರ ಜನವರಿ ೧೯೩೩.

## ಮರುಮಕ್ಕತ್ತಾಯ ಮಸೂದೆ.

ಮರುಮಕ್ಕತ್ತಾಯದ ಮಸೂದೆಯು ಮದ್ರಾಸು ಕೌನ್ಸಿಲಿನ ಮುಂದೆ ಬಂದು ಹಲವು ತಿಂಗಳುಗಳಾಗಿದ್ದರೂ ಅದರ ವಿಷಯವಾಗಿ, ನಮ್ಮ ಜಿಲ್ಲೆಯ ಅಳಿಯಸಂತಾನ ಕಟ್ಟಿನವರ ತಿಳುವಳಿಕೆಗೆ ಬಂದುದು ಬರೇ ಇತ್ತೀಚೆಗೆಂದು ಕಂಡುಬರುತ್ತದೆ. ಕೇವಲ ಜಾತೀಯ ಮಸೂದೆಯಾದುದರಿಂದಲೂ, ಈ ಸಮಸ್ಯೆಯನ್ನು ನಾವು ಸಂಪೂರ್ಣವಾಗಿ ಪರಿಶೀಲಿಸಿಲ್ಲವಾದುದರಿಂದಲೂ ಈ ಸಮಸ್ಯೆಯ ಮೇಲಿನ ಆಧಾರಪೂರ್ವಕವಾದ ಟೀಕೆಯನ್ನು ನಾವು ಈಗ ಮಾಡಲಾರೆವು. ಆದರೆ ಈ ಮಸೂದೆಯಿಂದ ಹೊರ ತೋರುವಿಕೆಗೆ ಬಂದ ಕೆಲವು ವೈಶಿಷ್ಟ್ಯಗಳನ್ನು ನಾವು ಇಲ್ಲಿ ಸಮಾಲೋಚಿಸದಿರಲಾರೆವು.

ಮರುಮಕ್ಕತ್ತಾಯ ಮಸೂದೆಯು ಅಳಿಯ ಕಟ್ಟನ್ನು ಸುಧಾರಿಸಿ ಪರಿವರ್ತಿಸಲು ಉದ್ದೇಶಿಸುವುದು. ಇದರ ರಚನೆಯಲ್ಲಿ, ಕೌನ್ಸಿಲ್ ಮಂಜೂರಾತಿಯಲ್ಲೂ ಶ್ರೀ. ಎ. ಬಿ. ಶೆಟ್ಟರು ಬಹಳವಾಗಿ ಪರಿಶ್ರಮಿಸಿದ್ದರು. ನಮ್ಮ ಸಹವ್ಯವಸಾಯಿಯಾಗಿದ್ದ ನವಯುಗವೂ ಈ ಮಸೂದೆಯ ವಿಷಯವಾದ ಅನುಭವವನ್ನು ಜನತೆಗೆ ಕೊಡುತ್ತಿತ್ತು. ಆದರೂ ಮಸೂದೆಯು ಮಂಜೂರಾಗುವ ವರೆಗೆ ಸುಮ್ಮಗಿದ್ದ ಕೆಲವರು ಒಮ್ಮಿಂದೊಮ್ಮೆ ಮಸೂದೆಯ ವಿರೋಧದ ಮುಖಂಡತನಕ್ಕೆ ಬಂದುದು ಆಶ್ಚರ್ಯಕರ. ಮಸೂದೆಯ ಹಿತಾಹಿತದ ಲಕ್ಷಣಕ್ಕಿಂತಲೂ ಕಳೆದ ಡಿಸ್ಟ್ರಿಕ್ಟು ಬೋರ್ಡ ಚುನಾವಣೆಯು ಈ ವಿರೋಧಕ್ಕೆ ಎಷ್ಟರ ಮಟ್ಟಿಗೆ ಸ್ವಾರ್ಥಪರ ಕಾರಣವಾಯಿತೆಂದು ಹೇಳಲಾಗುವುದಿಲ್ಲ.

ಹೇಗೂ ಮರುಮಕ್ಕತ್ತಾಯ ಮಸೂದೆಯು ಕೌನ್ಸಿಲಿನಲ್ಲಿ ಮಂಜೂರಾಗಿ ಮದ್ರಾಸ ಗವರ್ನರರ ಒಪ್ಪಿಗೆಗೆ ಕಾಯುತ್ತಿದ್ದುದು ಈ ನೂತನ ಚಳವಳದ ಕಾರಣದಿಂದ, ಅಳಿಯ ಕಟ್ಟಿನ ನಮ್ಮ ಜಿಲ್ಲೆಯವರನ್ನು ಅದರಿಂದ ಹೊರಪಡಿಸುವ ಬಗ್ಗೆ ಗವರ್ನರರಿಂದ ಕೌನ್ಸಿಲಿಗೆ ಪುನಹ ಕಳುಹಿಸೋಣಾಗಿಯದೆ. ಶ್ರೀ. ಎ. ಬಿ. ಶೆಟ್ರು ತಮ್ಮ ಅಭಿಪ್ರಾಯವನ್ನೇ ತಮ್ಮ ಅನುಯಾಯಿಗಳ ಮೇಲೆ ಹೊರಿಸಲು ಇಚ್ಛಿಸದೆ, ಜಾತಿಯೊಳಗಿನ ಐಕ್ಯಕ್ಕಾಗಿ ಪ್ರಯತ್ನಿಸಿದುದು ಅಭಿನಂದನೀಯವಿದೆ.

ಆದರೆ ಮುಖ್ಯವಾಗಿ ಲಕ್ಷಿಸಬೇಕಾದುದೆಂದರೆ ಇಷ್ಟಕ್ಕೆ ಮಸೂದೆಯ ಕತೆಯು ಮುಗಿಯಿತೇ? ಎಂಬುದು. ಅಳಿಯ ಕಟ್ಟಿನವರೊಳಗೆ ಕೆಲವರು ಯಾವ ತರದ ಸುಧಾರಣೆಯೂ ಬೇಡವೆನ್ನುವವರಿದ್ದಾರೆ. ಕೆಲವರು ಚಿಕ್ಕ ಬದಲಾವಣೆಗಳನ್ನೂ ಸೂಚಿಸಿದ್ದಾರೆ. ನಮ್ಮ ಈಗಿನ ಮ್ಯುನಿಸಿಪಲ್ ಛೇರ್ಮ್ಯಾನರಾಗಿರುವ ಡಾ| ವಿಠ್ಠಲ ಶೆಟ್ರು ಈ ಕೆಳಗಿನ ಬದಲಾವಣೆಗಳನ್ನು ಮಸೂದೆಯೊಳಗೆ ಸೂಚಿಸಿದ್ದಾರೆ—

೧. ಗಂಡಸರಿಗೂ ಹೆಂಗಸರಿಗೂ ಅನುಭವ ಪಾಲು ಹೊರತು ಆಸ್ತಿಯನ್ನು ಮಾರುವ ಯಾ ಭೋಗ್ಯಕ್ಕೆ ಕೊಡುವ ವಿಧದಲ್ಲಿ ಪರಾಧೀನ ಮಾಡುವ ಹಕ್ಕಿರ ಕೂಡದು.

೨. ಅಳಿಯ ಸಂತಾನ ಕುಟುಂಬದ ಪ್ರತಿ ಕವಲಿನ ಪ್ರಾಯಸ್ಥ ಸ್ತ್ರೀಸೆಯ ಅಂಶದ ಮೆಂಬರರಿಗೆ ಆಸ್ತಿಯ ವಿಭಾಗವನ್ನು ಕೇಳುವ ಹಕ್ಕಿರ ಬೇಕು.

೩. ಮದುವೆಗಳು ಈ ವರೆಗಿನ ಪದ್ಧತಿ ಕಟ್ಟಳೆಗಳನುಸಾರವಾಗಿರಬೇಕು.

ಶ್ರೀಯುತ ವಿಠಲಶೆಟ್ರು ಒಂದನೇ ಸೂಚನೆಯ ಸರಿಯಾದ ಅರ್ಥವು ನಮಗಾಗುವುದಿಲ್ಲ. ಗಂಡಸರಿಗೂ ಹೆಂಗಸರಿಗೂ ಅನುಭವ ಪಾಲು ಹೊರತು ವಿಕ್ರಯದ ಹಕ್ಕಿರಬಾರದೆಂದು ಅವರು ಸೂಚಿಸುವರು. ಈ ಬದಲಾವಣೆಯು ಈಗಿನ ಅಳಿಯ ಸಂತಾನದ ಕಟ್ಟಿಗಿಂತಲೂ ಹೆಚ್ಚು ಬಿಗುತರವಾದುದು. ಏಕೆಂದರೆ ಈಗ ಸ್ವಲ್ಪ ಪ್ರಯಾಸದಿಂದಾದರೂ ನಾಡವರ ಆಸ್ತಿಯ ಪರಾಧೀನ ಮಾಡುವ ಹಕ್ಕು ಇದ್ದೇ ಇದೆ. ಮೇಲಿನ ಸೂಚನೆಯು ಜಾರಿಗೆ ಬಂದರೆ ಪರಾಧೀನತೆಯ ಹಕ್ಕೇ ಹೋಗಿ, ಪ್ರತಿ ಜಮೀನುದಾರರೂ ನಮ್ಮ ಮಠ ಸೊತ್ತಿನ ಸನ್ಯಾಸಿಗಳಂತೆ ಹಕ್ಕುಳ್ಳವರಾಗುವರು. ಪ್ರಾಯಶಃ ಇದರಿಂದ ಆಸ್ತಿಗಳನ್ನು ಭದ್ರಪಡಿಸಿದಂತಾಗಬಹುದು. ಆದರೆ ಈ ಮೂಲಕ ಈಗಿನ ಪರಿಸ್ಥಿತಿಗಿಂತ ಹೆಚ್ಚಿನ ಲಾಭವು ಅಳಿಯಕಟ್ಟಿನವರಿಗೆ ದೊರಕುವುದೆಂದು ನಾವು ನೆನಸಲಾರೆವು. ಇದರಿಂದ ವ್ಯಾಜ್ಯಗಳೂ, ಮನಃಕ್ಲೇಶಗಳೂ, ಜಗಳಗಳೂ ಇನ್ನೂ ಹೆಚ್ಚುವುವು. ಆದುದರಿಂದ ಈ ಬದಲಾವಣೆಗಿಂತಲೂ ಇದ್ದ ಕಟ್ಟನ್ನೇ ಆಚರಿಸಿ ಬರುವುದೊಳ್ಳೆಯದೆಂದು ಕಾಣುವುದು.

ಅಳಿಯಸಂತಾನ ಕಟ್ಟಿನ ಬಾಧೆ ತೊಂದರೆಗಳನ್ನು ಅಳಿಯ ಕಟ್ಟಿನವರೇ ಬಲ್ಲರು; ಅದು ನಮಗೆ ತಿಳಿಯಲಾರದು; ಆದರೆ ನಮ್ಮ ಕೆಲವು ಅವಿಭಕ್ತ ಕುಟುಂಬಗಳ ಒಳಚರಿತ್ರೆಗಳನ್ನು ಕಂಡರೆ ಅಳಿಯಸಂತಾನ ಕ್ರಮವು ಯಾವ ರೀತಿಯದ್ದಿರಬಹುದೆಂದು ನಾವು ಊಹಿಸಬಲ್ಲೆವು. ಇಷ್ಟಾದರೂ ಭೂಮಿಗಳು ಎಲ್ಲಿ ದಿಕ್ಕಾಪಾಲಾಗುವವೋ ಎಂಬ ಒಂದೇ ಭಯವನ್ನಿಟ್ಟುಕೊಂಡು ವ್ಯಕ್ತಿಯ ಸ್ವತಂತ್ರ ಬೆಳವಣಿಗೆಯನ್ನು ಆಜೀವನ ಬಿಗಿದು ಹಾಕಿ ಆ ಮೂಲಕ ಜಾತೀಯ ಗೌರವವಾಗಲಿ ಅಭಿವೃದ್ಧಿಯಾಗಲಿ ಉಂಟಾಗುವುದೆಂದು ಅಳಿಯಸಂತಾನ ಕಟ್ಟಿನವರೇ ನೆನಸುವುದಾದರೆ ನಾವು ಹೆಚ್ಚು ಹೇಳಲಾರೆವು.

++++

## ವಿದೇಶ ವರ್ತಮಾನ.

ಆಗಾಖಾನರ ಪತ್ನಿಯವರು ಒಂದು ಗಂಡು ಶಿಶುವನ್ನು ಪ್ಯಾರಿಸಿನಲ್ಲಿ ಹೆತ್ತಿರುವರು. ಆಗಾಖಾನರು ಮುಂದಿನಂತೆ ಹೆಣ್ಣು ಮಗುವು ಹುಟ್ಟುವುದೆಂದು ಭಾವಿಸಿದ್ದರು.

— ಇಂಗ್ಲೆಂಡಿನ ಈಶಾನ್ಯ ಭಾಗದಲ್ಲಿ ತಾ. ೧೮ನೇ ದಿನ ವಿಶೇಷ ಭೂಕಂಪ! ಹಟ್ಟಿಗ ಮನೆಗಳು ಬಿದ್ದುವು. ಜನರು ಸುರಕ್ಷಿತ!

—ರಷ್ಯದ ಸೆಬಲಿನ್ ಎಂಬ ಸ್ಟೀಮರಿಗೆ ಬೆಂಕಿ ತಗಲಿತು. ಅದರಲ್ಲಿದ್ದ ೩೪೮ ಜನರ ಸ್ಥಿತಿಯೇನೆಂದು ತಿಳಿಯುವುದಕ್ಕೆ ವಿಮಾನಗಳು ಧಾವಿಸಿವೆ.

— ಅಮೇರಿಕವು ಫಿಲಿಪೈನ್ ದ್ವೀಪಗಳವರಿಗೆ ೧೨ ವರ್ಷಗಳೊಳಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ನಿರ್ಧರಿಸಿರುತ್ತದೆ. ಜನರು ಇದಕ್ಕಿಂತ ಮುಂಚೆ ಕೊಡಬೇಕೆಂದು ಹಟಗಟ್ಟಿರುವರು.

ಕೇಪ್ ಟೌನಿನಿಂದ ವಿಮಾನದಲ್ಲಿ ಜಾರ್ಕ್ಯಾಕ ಹೊರಟ ಮಿಸ್ ಜೋನ್ ಪೇಜ್ ಮತ್ತು ಮಿಸ್ ಸೇಲ್ ಬಾರ್ಕರ್ ಎಂಬಿಬ್ಬ ತರುಣಿಯರ ಪತ್ತೆಯೇ ಇಲ್ಲ. ಕಡಲಿಗೆ ಬಿದ್ದರೋ ಎಂದು ಸಂದೇಹ!

—ಲಂಡನಿನಲ್ಲಿ ೧೪,೦೦೦ ಬಸ್ ಡ್ರೈವರರು ಒಂದುಗೂಡಿ ಮುಷ್ಕರ ಹಿಡಿದು ಇಡೀ ಪಟ್ಟಣದಲ್ಲಿ ಗಲಭೆಯನ್ನುಂಟು ಮಾಡಿ ತಮ್ಮ ಧಣಿಗಳು ಹಣ್ಣಾಗುವಂತೆ ಮಾಡಿದರು.

— ಲಂಡನಿನಲ್ಲಿ ತಾ. ೨೪ನೇ ದಿನ ಅತೀ ವಿಪರೀತ ಚಳಿ! ೧೮ ವರ್ಷಗಳಿಂದ ಇಂತಹ ಹಿಮ ಬಿದ್ದಿಲ್ಲವೆಂದು ತಿಳಿದುಬರುತ್ತದೆ.

+++

## ಚಿಕ್ಕಮಗಳೂರು.

ಇದೇ ತಾ. ೨೮ರಲ್ಲು ಜರಗಬೇಕಾದ ಅಖಿಲ ಭಾರತ ಸ್ವದೇಶೀ ಪ್ರದರ್ಶನವನ್ನು ಕೆಲವು ತೊಂದರೆಗಳಿಂದ ಇದೇ ತಿಂಗಳ ತಾ. ೨೯ಕ್ಕೆ ಮುಂದರಿಸಿರುವರು. ಪೂಜ್ಯ ಮಾಲವೀಯರು ದಯಮಾಡಿಸುವುದಿಲ್ಲವಾಗಿ ತಿಳಿದುಬರುತ್ತದೆ. ಅಧ್ಯಕ್ಷರಾಗಿರುವ ಶ್ರೀಮಾನ್ ಕೊಪ್ಪ ಕೃಷ್ಣರಾಯರು ಮೈಸೂರು ದಿವಾನ್ ಸರ್ ಮಿರ್ಜಾ ಇಸ್ಮಾಯಿಲರನ್ನು ಸಭಾಧ್ಯಕ್ಷತನಕ್ಕೆ ಕೇಳಿಕೊಂಡರಾಗಿಯೂ, ಸದರಿಯವರಿಗೆ ಅವಕಾಶವಿಲ್ಲದಾದುದರಿಂದ ಬರಲಾಗುವುದಿಲ್ಲವೆಂದು ತಿಳಿಸಿದರೆಂದೂ ತಿಳಿದು ಬರುತ್ತದೆ. ಈಗ ಮಹಾರಾಜರ ಮಿ| ಜಮಾಲ್ ಮುಹಮ್ಮದರೆಂಬವರನ್ನು ಅಧ್ಯಕ್ಷರಾಗಿರುವರಾಗಿ ತಿಳಿಯುತ್ತದೆ.

## ಒಳದೇಶ ವರ್ತಮಾನ

**—ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಮದ್ರಾಸು ನ್ಯಾಯವಿಧಾಯಕ ಸಭೆಗೆ ಡಾ| ಸುಬ್ಬರಾಯನ್ ಮತ್ತು ಶ್ರೀ. ರಂಗ ಅಯ್ಯರರು ತಂದ 2 ಬಿಲ್ಲುಗಳಲ್ಲಿ ಎರಡನೆಯದ್ದನ್ನು ಸರಕಾರವು ಮಂಜೂರು ಮಾಡಿ ವೈಸರಾಯರ ಒಪ್ಪಿಗೆಗೆ ಕಳುಹಿಸಿದೆ. ರಂಗ ಅಯ್ಯರರ ಬಿಲ್ಲು ಜಾರಿಗೆ ಬಂದು ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ದೇವಸ್ಥಾನಗಳ ಸಂಕಷ್ಟಗಳು ನಿವಾರಿಸಲ್ಪಡುವುವು.**

—ಕರಾಚಿಯಲ್ಲಿ ಎಂ. ಜಿ. ಹಜಾರಿ ಕಂಪೆನಿಯದ್ದ ಉಗ್ರಾಣಕ್ಕೆ ಬೆಂಕಿ ತಗಲಿ, ಅದರ ಬಳಿಯಿರುವ ಕೆಲವು ಅಂಗಡಿಗಳು ಸುಟ್ಟು ೩೦೦,೦೦೦ ರೂಪಾಯಿಯ ನಷ್ಟವಾಯಿತು. ಇಂತಹ ದೊಡ್ಡ ಅನಾಹುತ ಅಲ್ಲಿ ಇತ್ತಲಾಗೆ ನಡೆದಿದ್ದಿಲ್ಲ. ಇನ್ಶೂರ್ ಮಾಡಿರುವುದರಿಂದ ನಷ್ಟ ಇನ್ಶೂರ್ ಕಂಪೆನಿಗೆ.

—ಮುಂಬಾಯಿಯಲ್ಲಿ ಹಿಂದೂಸ್ಥಾನೀ ಸೇವಾದಳದ ನಾಲ್ಕು ಮಂದಿ ಕೆಲಸಗಾರರನ್ನು ಗುಮಾನಿನ ಮೇಲೆ ಹಿಡಿದರು.

—ತಾ. ೨೫ನೇ ದಿನ ವೈಸರಾಯರನ್ನು ಸರ್ ಟಿ. ಬಿ. ಸಪ್ರೂರವರು ಕಂಡು ಮಾತನಾಡಿದರು.

"ಏನೂ ಆಗಲಿ! ನೀವು ಬ್ರಿಟಿಷ್ ಸರಕಾರದ ದಾನವನ್ನು ಈ ಸಲ ಸ್ವೀಕರಿಸಲೇ ಬೇಕು" ಎಂದು ಶ್ರೀ. ಜಯಕರರು ಪುಣೆಯಲ್ಲಿ ಧೈರ್ಯವಾಗಿ ಹೇಳಿದರು.

—ಅಮೃತಸರದಲ್ಲಿ ಒಂದು ಸೈಕ್ಲೋಸ್ಟೈಲ್ ಯಂತ್ರದ ಪತ್ತೆಗಾಗಿ ೧೨ ಮನೆ, ಕೆಲವು ಅಂಗಡಿ, ಕೆಲವು ಮಂದಿರ, ಅಲ್ಲಿಯ ರಾಮಾಶ್ರಮ ಇಷ್ಟು ಜಡ್ತಿಗೊಳಗಾದರೂ ಪೋಲೀಸರು ಬರಿಗೈಯಲ್ಲಿ ನಡೆದರು.

—ನಾಗಪುರದಲ್ಲಿ ಕೂಲಿಗಳ ಮುಖಂಡರಾದ ೫ ರುಯಿಕರರು ಕೆಲಸಗಾರರ ಶರ್ತಗಳು ದೊರೆತ ನಂತರ ೪ ದಿವಸಗಳ ಉಪವಾಸ ಮಾಡಿ ಅದನ್ನು ಮೊನ್ನೆ ತೊರೆದರು.

—ಮುಂಬಾಯಿಯಲ್ಲಿ ಲೇಡಿ ಡಾಕ್ಟರ್ ಶ್ರೀಮತಿಬಾಯಿಯೆಂಬವರನ್ನು ತಿವಿದು ತಪ್ಪಿಸಿಕೊಂಡ ಡ್ರೈವರ್ ನಾರಾಯಣ ಲಕ್ಷ್ಮಣನಿಗೆ ೮ ತಿಂಗಳ ಕಠಿಣ ಸಜೆ.

—ಅಹ್ಮದಾಬಾದಿನಲ್ಲಿ ಕಳ್ಳತನಗಳು ಹೆಚ್ಚುತ್ತಲಿವೆ. ಪೋಲೀಸರು ೭೦೦ ಮಂದಿಗಳನ್ನು ಸೆರೆಹಿಡಿದು ವಿಚಾರಿಸಿ ಬಿಟ್ಟರು.

—ಗೌರೀಶಂಕರ ಶಿಖರವನ್ನೇರಲು ಹಿಂದೂಸ್ಥಾನಕ್ಕೆ ಬ್ರಿಟಿಷ್ ಸಾಹಸಿಗಳು ಹೊರಟಿರುವರು.

—ಬೆರಹಾಂಪುರದ ಜೈಲಿನಿಂದ ಇಬ್ಬರು ಡೆಟಿನ್ಯೂ ಬಂಧಿಗಳು ತಲೆ ತಪ್ಪಿಸಿ ಓಡಿದ್ದಾರೆ!

—ಡಕ್ಕಾ ನಗರದಲ್ಲಿ ಕ್ರಾಂತಿಕಾರರ ಭಯವು ಹೆಚ್ಚಾಗುತ್ತಿದೆ ತರುಣರನ್ನು ಗುಮಾನಿನ ಮೇಲೆ ಹಿಡಿದು ವಿಚಾರಿಸಿ ಬಿಡುತ್ತಲಿದ್ದಾರೆ.

—ಬಂಗಾಳದ ಕ್ರಾಂತಿಕಾರ ಸಂಜೀವ ಚಂದ್ರ ಮುಖರ್ಜಿ ಎಂಬವನನ್ನು ಪೋಲೀಸರು ರಂಗೂನಿನಲ್ಲಿ ಸೆರೆಹಿಡಿದರು.

ಇಂಡಿಯಾ ಸರಕಾರವು ಇದೇ ತಾ. ೨೪ರಿಂದ ೧೯೪೬ನೇ ಇಸವಿಯ ತನಕ ೧೫ ಕೋಟಿ ರೂಪಾಯಿಯ ಸಾಲವನ್ನೆತ್ತುವುದು. ಸೇಕಡಾ ೪ರಂತೆ ಬಡ್ಡಿ ದೊರೆಯುತ್ತದೆ.

—ಮುಂಬಾಯಿಯ ಹತ್ತಿಯ ಬ್ರೋಕರ್ಸ್ ಎಸೋಸಿಯೇಶನಿನವರು ಒಬ್ಬ ಯುರೋಪಿಯಾನನೊಡನೆ ವ್ಯಾಪಾರ ನಡೆಸಲು ಅಸಮ್ಮತಿಸಿದುದಕ್ಕಾಗಿ ಅವರ ಒಂದು ಸಭೆ ಜರಗಿ ಕೆಲವು ಸದಸ್ಯರು ರಾಜೀನಾಮೆಕೊಟ್ಟರು.

—ಕರಾಚಿಯಲ್ಲಿ ಹನ್ನೊಂದು ಮಂದಿ ಪಾರ್ಸಿಗಳಿಗೆ ಕಡಲ ಪಯಣಕ್ಕೆ ಮನಸ್ಸು ಹುಟ್ಟಿ ಸ್ತ್ರೀಪುರುಷರೊಟ್ಟುಗೂಡಿ ಒಂದು ದೋಣಿಯಲ್ಲಿ ಸಮುದ್ರಕ್ಕೆ ಹೋದರು. ದೋಣಿ ಮುಳುಗಿತು.

—ಅಲ್ವಾರ್ ಸಂಸ್ಥಾನದ ಬಂಡಾಯದ ಶಮನಾರ್ಥವಾಗಿ ಮಹಾರಾಜರು ಕೃಷೀವಲರ ಸ್ಥಿತಿಗತಿ ವಿಚಾರಣೆಗಾಗಿ ಒಂದು ಸಮಿತಿ ಸ್ಥಾಪನೆಗೆ ಅನುಮತಿಯಿತ್ತರು.

—ಕಾಶ್ಮೀರದಲ್ಲಿ ಅಕ್ರಮ ಕೂಟಗಳು ಜರಗಬಾರದಾಗಿಯೂ ಜರಗಿದರೆ ಪೋಲೀಸರ ಲಾಠಿಯು ಕೆಲಸ ಮಾಡುವುದಾಗಿಯೂ ಒಂದು ಹುಕುಮನ್ನು ಹೊರಟಿದೆ.

—ಡಾ| ಆಲಮರು ಕೆನ್ಯಾಕ್ಕೆ ಹೋಗಲು ಅಪ್ಪಣೆ ಸಿಗಲಾರದೆಂದು ಆಫ್ರಿಕನ್ ಸರಕಾರವು ಖಂಡಿತವಾಗಿ ಹೇಳಿದೆ.

—ಎಲ್ಲೂರಿನಲ್ಲಿ ಕಾಂಚ ಮೋಹನ ಕಮ್ಮಾರಿ ಎಂಬವನು ಕೃತಕ ನಾಣ್ಯಗಳನ್ನು ತಯಾರಿಸಿ ಸಿಕ್ಕಿಬಿದ್ದು ಎರಡು ವರ್ಷಗಳ ಸಜೆಗೆ ಗುರಿಯಾದನು.

—ಮದ್ರಾಸಿನ ವಿಮಾನ ಕ್ಲಬ್ಬಿನ ಒಂದು ವಿಮಾನವು ಬೆಂಗಳೂರಿಗೆ ಬಂದು ಮೇಲೆ ಹಾರುತ್ತಿದ್ದಾಗ ಕೆಳಗೆ ಬಿದ್ದುಬಿಟ್ಟಿತು. ಯಾರಿಗೂ ಅಪಾಯ ಆಗಲಿಲ್ಲ. ವಿಮಾನವನ್ನು ರೈಲಿನಲ್ಲಿ ಹಾಕಿ ಮದ್ರಾಸಿಗೊಯ್ದರು.

—ಶ್ರೀ. ಪಿ.ಸಿ. ರೋಯರವರ ಸ್ವರಾಜ್ಯವಾಗಿಯೂ ಅವರ ಅಪರ್ಪ್ರಚಾರದ ಬಗ್ಗೆ ಮನ್ನ ಸಿಲ್ಹೆಟಿನಲ್ಲಿ (ಬಂಗಾಳದಲ್ಲಿ) ರೋಯಸ್ ವೀಕ್ಲಿ ಎಂಬ ವಾರಪತ್ರಿಕೆಯು ಹೊರಟಿದೆ.

ಬಿಂಧದ ಮಹಾರಾಜರು ಪಡೆಗೆ ಸಲ್ಲುವ ಕಂಗೆಯನ್ನು ಕೈಯಿಂದ ರೂಪದಿಂದ ಕೊಡುವುದೆಂದು ಸಾರಿದ್ದಾರೆ.

### ಹಾಸನ.

ಹಾಸನದ ಡಿಪ್ಯುಟಿ ಕಮಿಶ್ನರ್ ಶ್ರೀ. ಟಿ. ಜಿ. ರಾಮಯ್ಯರ್ ಬಿ. ಎ. ಇವರು ಕೋಲಾರಕ್ಕೆ ವರ್ಗಾಯಿಸಲ್ಪಟ್ಟಿರುವರು. ಶ್ರೀ. ಎಚ್. ಪಿ. ರಾಮಸ್ವಾಮಿ ಬಿ. ಎ. ಬಿ. ಎಲ್. ಇವರು ಹಾಸನಕ್ಕೆ ಬಂದು ತಾ. ೨೩ರಲ್ಲಿ ಚಾರ್ಜ್ ತೆಗೆದುಕೊಂಡಿರುತ್ತಾರೆ.

### ಸಕಲೇಶಪುರ.

ಚಂದ್ರಕಲಾ ನಾಟಕ ಕಂಪೆನಿಯವರು ಇಲ್ಲಿಗೆ ಬಂದಿದ್ದು ತಾ. ೨೩ರಲ್ಲಿ 'ಸಂಸಾರ ನೌಕೆ' ಎಂಬ ತಮ್ಮ ಪ್ರಥಮ ನಾಟಕವನ್ನು ಆಡಿರುವರು.

## ದಕ್ಷಿಣ ಕನ್ನಡ.

**ಮಂಗಳೂರು.** ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳು ಎಕ್ಸ್‌ಟ್ರಾ ಕರಿಕ್ಯುಲರ್ ಕೆಲಸಗಳನ್ನು ನಡೆಸುವುದಕ್ಕೆ ಸ್ಥಾಪಿಸಿದ ಶಾರದೋತ್ಸವ ಕ್ಲಬ್ಬಿನ ವರ್ಧಂತ್ಯುತ್ಸವವು ಕಳೆದ ರವಿವಾರ ಸದ್ರಿ ಶಾಲೆಯಲ್ಲಿ ಬಹಳ ಉತ್ಸಾಹದಿಂದ ನೆರವೇರಿತು. ಅವರ ಕಾರ್ಯಕ್ರಮಗಳು ಆ ದಿನ ಬೆಳಗ್ಗೆ ಗಂಟೆ ೮ರಿಂದ ರಾತ್ರಿ ೯ರ ತನಕ ನಡೆದುವು. ಕ್ಲಬ್ಬಿನ ಸದಸ್ಯರೇ ಸಿದ್ಧಗೊಳಿಸಿದ ಭೋಜನ ಉಪಹಾರಗಳು ಆದ ತರುವಾಯ ಸಾಯಂಕಾಲ ೭ ಘಂಟೆಗೆ ಅವರು ಭುವನೇಂದ್ರ ಹಾಲಿನಲ್ಲಿ ನಾಟಕ ರೂಪವಾದ ಚಿಕ್ಕ ಪ್ರಹಸನಗಳನ್ನೂ, ಇತರ ಆಟ ವಿನೋದಗಳನ್ನೂ ನೆರೆದ ಸಭಿಕರ ಮುಂದೆ ಅಭಿನಯಿಸಿ ಆ ದಿನದ ಕಾರ್ಯಕ್ರಮಗಳನ್ನು ಕೊನೆಗೊಳಿಸಿದರು.

ರಾಜಪುತಾನದಲ್ಲಿ ನಡೆದ ೨೩ನೇ ಆಯುರ್ವೇದ ಮಹಾ ಸಮ್ಮೇಳನದಲ್ಲಿ ನಡೆದ ವಿಷಯಗಳನ್ನು ಮತ್ತು ಉತ್ತರ ದೇಶದ ಪ್ರಯಾಣದ ಅನುಭವದ ಕುರಿತು ಶ್ರೀ. ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಇವರು ತಾ. ೨೪ನೇ ದಿನ ಕೆನರಾ ಹೈಸ್ಕೂಲಿನಲ್ಲಿ ಭಾಷಣವಿತ್ತರು.

ಮಿಶನ್ ಹೈಸ್ಕೂಲಿನ ಹೊಸ್ಟೆಲಿನ ವರ್ಧಂತ್ಯುತ್ಸವವು ಕಳೆದ ಆದಿತ್ಯವಾರ ದಿನ ಸುಸೂತ್ರವಾಗಿ ನಡೆಯಿತು.

ಇಲ್ಲಿಯ ಶ್ರೀ. ವೆಂಕಟರಮಣ ದೇವಸ್ಥಾನದ ರಥಸಪ್ತಮಿಯ ಉತ್ಸವಗಳು ತಾ. ೨೯ನೇ ರವಿವಾರ ಪ್ರಾರಂಭವಾಗಿ ಫೆಬ್ರವರಿ ತಾ. ೨ನೇ ಗುರುವಾರ ಅಂತ್ಯವಾಗುವುದು.

ಶಂಕರ್ ವಿಠ್ಠಲ್ ಮೋಟರ ಕಂಪೆನಿಯ ಹಿಂಗಡೆ ಬಾವಿಯಲ್ಲಿ ದೊರೆತ ಶವದ ಪರಿಚಯವು ಆಗಲೇ ಇಲ್ಲ.

ಇಲ್ಲಿಯ ಸಿ. ಪಿ. ಸಿ. ಕಂಪೆನಿ ಲಿಮಿಟೆಡ್, ಶಂಕರ್ ವಿಠ್ಠಲ್ ಮೋಟರ್ ಕಂಪೆನಿ, ಲಿಮಿಟೆಡ್ ಮತ್ತು ಹನುಮಾನ್ ಟ್ರಾನ್ಸ್‌ಪೋರ್ಟ್ ಕೋ. ಲಿಮಿಟೆಡ್ ಕಂಪೆನಿಗಳು ಫೆಬ್ರವರಿ ತಾ. ೧ರಿಂದ ಸಮ್ಮಿಳಿತ ವಾಗಲಿವೆಯೆಂದು ತಿಳಿದುಬರುತ್ತದೆ.

ಶಾರದಾ ಪ್ರೆಸ್ ಮತ್ತು 'ಸ್ವದೇಶಾಭಿಮಾನಿ'ಗೆ ಕೆಲೆಂಡರು ಗಳನ್ನು ಕಳುಹಿಸಿದವರಿಗೆಲ್ಲ ಮೆನೇಜರರ ಧನ್ಯವಾದಗಳಿವೆ.

**ಶ್ರೀ ಕೃಷ್ಣ ಸಿನೆಮ ಟಾಕಿ ಮಂದಿರದಲ್ಲಿ** ಪ್ರದರ್ಶಿಸಲ್ಪಡುತ್ತಿರುವ 'ಶ್ರೀ ಕೃಷ್ಣಾವತಾರ'ವು ತಾ. ೨೮ರ ತನಕ ನಡೆಯುವುದು. ತಾ. ೨೯-೧-೩೩ರಿಂದ ಮೆಟ್ರೊ ಗೋಲ್ಡ್‌ವಿನ್ ಮೇಯರರ ಅತ್ಯಮೋಘವಾದ 'ಬ್ರೊಡ್‌ವೇ ಮೆಲೊಡಿ' ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು. ಎನಿಟ ಪೇಜ್ ಮತ್ತು ಬೆಸಿಲವ್ ಎಂಬ ಸಿನೆಮಾ ರತ್ನಗಳಿಂದ ಅಭಿನಯಿಸಲ್ಪಟ್ಟ ಚಿತ್ರ. ಅತ್ಯುತ್ತಮವಾದ ಅಭಿನಯದಿಂದಲೂ ಅನೇಕಾನೇಕ ಸ್ವಾರಸ್ಯವುಳ್ಳ ಹೆಜ್ಜೆಗಳನ್ನಿಡುತ್ತಾ ನರ್ತಿಸುವ ನರ್ತನದಿಂದಲೂ ಮೆರೆಯುತ್ತಿರುವ ಚಿತ್ರ. ಅನಂತರ 'ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ' ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು.

ದ. ಕ. ಜಿಲ್ಲಾ ಹರಿಜನ ಸೇವಾಸಂಘದ ಪರವಾಗಿ ಶ್ರೀಯುತರು ಗಳಾದ ಹಿ. ರಾಮರಾಯ ಮಲ್ಯರೂ, ಟಿ. ರಂಗರಾಯರೂ, ಗೋವಿಂದ ರಾಯರೂ ಕಳೆದ ವಾರ ಕಾಸರಗೋಡಿಗೆ ಹೋಗಿ ಅಲ್ಲಿಯ ಗೃಹಸ್ಥರನ್ನು ಕಂಡು ಆ ತಾಲೂಕಿನಲ್ಲಿ ಸಂಘದ ಕಾರ್ಯವನ್ನು ಮುಂದೊತ್ತುವುದಕ್ಕಾಗಿ ಒಂದು ತಾಲೂಕು ಕಮಿಟಿಯನ್ನು ಏರ್ಪಡಿಸಿದರು. ಈ ಕಮಿಟಿಗೆ ಶ್ರೀಗಳಾದ ವಕೀಲ ಕೆ. ರಾಮಶೆಟ್ಟಿ ಅಧ್ಯಕ್ಷರಾಗಿಯೂ ವಕೀಲ ಕೆ. ಸಿ. ಬಿ. ಫ್ರೆರ್ನಾಂಡ್ ಮತ್ತು ವಕೀಲ್ ಕುನ್ಹಂಬುನಾಯರರು ಜತೆ ಕಾರ್ಯದರ್ಶಿಗಳಾಗಿಯೂ ಆಗಿರುವುದಲ್ಲದೆ, ಕಮಿಟಿಯಲ್ಲಿ ಶ್ರೀಗಳಾದ ಕೆ. ಪರಮೇಶ ನಾಯಕರೂ, ರಘುರಾಮ ದಂಡಿಲ್ಲಾಯರೂ, ನಾರಾಯಣ ಮಣೋಲರೂ, ಉಮೇಶರಾಯರೂ ಇನ್ನಿತರರೂ ಸಹ ಮೆಂಬರರಾಗಿರುತ್ತಾರೆ.

**ಫರಂಗಿಪೇಟೆ** — ಈ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ತಾ. ೨೧ರಲ್ಲಿ ವೇರಮಜಲ್ಲು ಸೈಂಟ್ ಜೊಸೆಫ್ಸ್ ಹಾ. ಎ. ಶಾಲೆಯಲ್ಲಿ ರೆವೆರೆಂಡ್ ಫಾದರ್ ಎನ್. ಎಸ್. ಫೆರ್ನಾಂಡಿಸರವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀರಾಮ ಸ್ಕೌಟ್ ಟ್ರೂಪಿನ ಶಿಬಿರವು ತಾ. ೨೨ರಲ್ಲಿ ಹರೇಕಳ ಗ್ರಾಮದಲ್ಲಿ — ರಾಜಶ್ರೀ ಹರೇಕಳ ವೆಂಕಪ್ಪ ನಾಯ್ಕ್ ಪಟ್ಟೆಲು ಮೊದಲಾದವರ ಮತ್ತು ಶಾಲಾ ಹೆಡ್ ಮಾಸ್ಟರ್ ಕೆ. ವೆಂಕಪ್ಪ ರೈ ಇವರುಗಳ ಪ್ರೋತ್ಸಾಹದಿಂದ ನಡೆಯಿತು. ಮಕ್ಕಳು ತಮಗೆ ನೂತನವಾಗಿ ಕಂಡ ವಿಷಯಗಳನ್ನು ಉಪಾಧ್ಯಾಯರುಗಳಿಂದ ತಿಳಿದುಕೊಂಡರು. ಗ್ರಾಮಸ್ಥರ ಅಪೇಕ್ಷೆಯಂತೆ ರಾತ್ರಿ ಶಿಬಿರಾಗ್ನಿಯು ರಾ। ವೆಂಕಪ್ಪ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು.

**ಕಟಪಾಡಿ** — ಸ್ಥಳೀಯ ನಾಯಕ್ ಮನೆತನದವರು ಈ ವರೆಗೆ ನಡೆಸಿಕೊಂಡು ಬರುತ್ತಿದ್ದ ಶ್ರೀಭುವನೇಂದ್ರ ಮಹೌಷಧಾಲಯವನ್ನು ಇಂದಿನ ಉತ್ಸಾಹೀ 'ನಾಯಕ್ ಸಹೋದರರು' ಅತ್ಯಂತ ವೃದ್ಧಿಗೊಳಿಸಿ, ಜಿಲ್ಲೆಯ ಎಲ್ಲೆಡೆಯಲ್ಲಿಯೂ ಅದರ ಶಾಖೆಗಳನ್ನು ಸ್ಥಾಪಿಸಿ, ಅತೀ ಸುಲಭ ಕ್ರಯಕ್ಕೆ ಔಷಧಗಳನ್ನು ವಿಕ್ರಯಿಸುವ ಯೋಜನೆಯನ್ನು ಕೈಕೊಂಡಿರುವುದು ಅಭಿವಂದನೀಯವಿದೆ.

**ಕಾಪು:** — ಇಲ್ಲಿಯ ದಂಡ ತೀರ್ಥದವರಾದ ಅನಂತಶಯನದಲ್ಲಿ ಆ ಸ್ಥಾನ ಜೋತಿಷ್ಯ ವಿದ್ವಾನರಾಗಿದ್ದ ಬ್ರಹ್ಮಶ್ರೀ ರಾಮ ಕೃಷ್ಣ ಜೋತಿಷ್ಯರು (ತಮ್ಮಣ್ಣ ಜೋಯಿಸ) ತಾ. ೧೧ ರಲ್ಲಿ ದೈವಾಧೀನರಾಗಿರುವರೆಂಬ (ಅನಂತ ಶಯನದಲ್ಲಿ) ದುಃಖಕರ ವಾರ್ತೆಯು ತಲುಪಿದೆ. ಜನಪ್ರಿಯರಾಗಿದ್ದ ಇವರ ಪವಿತ್ರಾತ್ಮಕ್ಕೆ ಶಾಂತಿ ದೊರೆಕಲಿ.

**ಉಡುಪಿ:** — ತಾ. ಬೋ ಸಭೆಯು ಇದೇ ತಾ. ೩೧ಕ್ಕೆ ಹಂಗಾರ ಕಟ್ಟೆ ಮೊಕ್ಕಾಂನಲ್ಲಿ ಜರಗಲಿದೆ.

ಉಪಾಧ್ಯಾಯರ ಅಧಿವೇಶನವೊಂದು ಬರುವ ತಾರೀಖು ೧೧ಕ್ಕೆ ಜರಗಲಿರುವುದು.

ಉಡುಪಿ ಟೀಚರ್ಸ್ ಕೋಪರೇಟಿವ್ ಸೊಸೈಟಿಯ ಮಹಾ ಸಭೆಯೊಂದು ತಾ. ೨೮ಕ್ಕೆ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಕೂಡಲಿರುವುದೆಂದು ಕೇಳುತ್ತೇವೆ.

ತಾ. ೨೦ರಲ್ಲಿ ಶ್ರೀ. ಎಸ್. ಯು. ಪಣಿಯಾಡಿಯವರ ಅಧ್ಯಕ್ಷತೆಯಲ್ಲಿ ಜರಗಿದ ಅಸ್ಪೃಶ್ಯತಾ ನಿವಾರಣ ಸಭೆಯಲ್ಲಿ ಇಲ್ಲಿಗೆ ಆಗಮಿಸಿದ್ದ ಶ್ರೀ. ಕೆ. ಬಿ. ನಾರಾಯಣ ಶೆಟ್ಟಿ, ಕಿಲ್ಲೆಯವರ ಸುಪರಿಣಾಮಕರ ಉಪನ್ಯಾಸವಿತ್ತು.

ಇಲ್ಲಿ ಮೊಕ್ಕಾಂ ಮಾಡಿರುವ ಡಿ. ಈ. ಒ. ಗಳು ಸ್ಥಳೀಕ ಎರಡೂ ಹೈಸ್ಕೂಲುಗಳ ಇನ್ಸ್‌ಪೆಕ್ಷನನ್ನು ಕೊನೆಗೊಳಿಸಿದರು.

ಸ್ಥಳೀಕ ರಾಮಕೃಷ್ಣ ವಿದ್ಯಾರ್ಥಿ ಭವನದವರು ಈ ವರ್ಷ ಹೊಸತಾಗಿ ಏರ್ಪಡಿಸಿದ ಬ್ಯಾಡ್‌ಮಿಂಟನ್ ಟೂರ್ನಮೆಂಟ್ ಅತ್ಯುತ್ಸಾಹದಿಂದ ನಡೆಯುತ್ತಿದೆ.

**ಕಾರ್ಕಳ** — ಇಲ್ಲಿ ಈಗೀಗ ಭಾಷಣಗಳ ಸುರಿಮಳೆಯಾಗುತ್ತಿದೆ. ಮಿತ್ರ ಮಂಡಳಿಯ ಆಶ್ರಯದಲ್ಲಿ ಸೂರತ್ಕಲ್ಲಿನ ಬ್ರಹ್ಮಚಾರಿ ಶೀತಲ ಪ್ರಸಾದಜೀಯವರು 'ಧರ್ಮ ಮತಗಳ ತುಲನಾತ್ಮಕ ವಿಚಾರ' ಎಂಬ ವಿಷಯವನ್ನೆತ್ತಿ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಭಾಷಣವನ್ನಿತ್ತರು. ಸಂದರ್ಭೋಚಿತವಾಗಿ ಸ್ವದೇಶಿ ಪ್ರಚಾರದ ಅವಶ್ಯಕತೆಯನ್ನು ಕುರಿತೂ ಮಾತನಾಡಿದರು.

ಆ ಮೇಲೆ ಶೃಂಗೇರಿಯ ಶ್ರೀ ರಾಮಕೃಷ್ಣ ಶಾಸ್ತ್ರಿಗಳು 'ಹರಿಜನೋದ್ಧಾರವೂ ಹಿಂದೂ ಸಂಘಟನೆಯೂ' ಎಂಬೀ ವಿಷಯದ ಮೇಲೆ ಮಾರ್ಮಿಕವಾಗಿ ಒಂದು ಭಾಷಣವಿತ್ತು, ಪ್ರಕೃತದ ಆಂದೋಲನೆವನ್ನು ಪ್ರಸ್ತಾಪಿಸಿ ಮಾತನಾಡಿದರು. ಈ ಸಭೆಗೆ ಜನರು ಕಿಕ್ಕಿರಿದು ತುಂಬಿದ್ದರು.

ಕಾರ್ಕಳ ತಾಲೂಕಿನ "ಟೀಚರ್ ಮೆನೇಜರರ ಸಂಘ"ವನ್ನು ಇದೇ ತಾ. ೨೮-೧-೩೩ನೇ ಶನಿವಾರ ಮಧ್ಯಾಹ್ನ ೩ಕ್ಕೆ ಕಾರ್ಕಳ ಬೋರ್ಡ್ ಮೈನ್ ಶಾಲೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿದುತ್ತದೆ, ಸದ್ರಿ ಸಂಘಕ್ಕೆ ಎಲ್ಲಾ ಶಾಲೆಗಳ ಮೆನೇಜರರುಗಳು ತಪ್ಪದೆ ಹಾಜರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆಂದು ಸಂಘದ ಸೆಕ್ರೆಟರಿಯವರು ತಿಳಿಸುತ್ತಾರೆ.

**ಕಾಸರಗೋಡು** — ಬರುವ ಫೆಬ್ರವರಿ ತಿಂಗಳ ತಾ. ೯ಕ್ಕೆ ಗುರುವಾರ ಗಂಟೆ ೨-೩೦ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ತಾಲೂಕು ಬೋರ್ಡ್ ಮೆಂಬರರ ಸಭೆಯು ಕಾಸರಗೋಡಿನಲ್ಲಿ ತಾ. ಬೊ. ಆಫೀಸಿನಲ್ಲಿ ಕೂಡುವುದು.

ಇದೇ ~~ಕಳೆದ ವಾರ~~ ತಾ. ೨೧ರಲ್ಲಿ ಇಲ್ಲಿಯ ಲೇಬರ್ ಶಾಲೆಯಲ್ಲಿ ಶಾಲಾ ಆದಿದ್ರಾವಿಡ ಮಕ್ಕಳಿಂದ "ಚಂದ್ರಹಾಸ" ಎಂಬುದೊಂದು ನಾಟಕವು ಅಭಿನಯಿಸಲ್ಪಟ್ಟಿತು. ನಾಟಕಾರಂಭದಲ್ಲಿ ಲೇಬರ್ ಆಫೀಸರರಾದ ರಾ। ಕೆ. ಕೃಷ್ಣಯ್ಯ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಶ್ರೀ. ಕೆ. ಪಿ. ಪದ್ಮನಾಭಯ್ಯ, ಆನಂದ ಮೇಸ್ತ್ರಿ ಮೊದಲಾದವರು ಹರಿಜನರ-ಉದ್ಧಾರದ ಕುರಿತು ಭಾಷಣಮಾಡಿದರು.

ಇಲ್ಲಿಯ "ಶ್ರೀ. ಶಂಕರನಾರಾಯಣ ಪ್ರಸಾದಿಕ ಯಕ್ಷಗಾನ ಸಭೆ"ಯವರು ಇದೇ ಬುಧವಾರ 'ಸೂರ್ಪನಖಿ ಮಾನಭಂಗ' ಎಂಬ ನಾಟಕವನ್ನು ಅಭಿನಯಿಸಲಿಕ್ಕಿರುವರು.

ಇಲ್ಲಿಯ ಕೂರಕೋಡು ಆರ್ಯಕಾತ್ಯಾಯನಿ ಅಮ್ಮನವರ ದೇವಸ್ಥಾನದಲ್ಲಿ ಬರುವ ಫೆಬ್ರವರಿ ತಾ. ೨೧ರಿಂದ ಪ್ರಾರಂಭವಾಗಿ ೨೮ರ ವರೆಗೆ ಮಹಾ ಮಾರಿ ಪೂಜೆ ಜರಗುವುದೆಂದು ತಿಳಿದುಬಂದಿರುತ್ತದೆ. (ಪಶುಬಲಿ ಇದೆಯೇ?)

**ಸುರತ್ಕಲ್** — ಇಲ್ಲಿಯ ನೇಗೆಗಾರರ ಆಡಳಿತಗೊಳಪಟ್ಟ 'ವೀರಭದ್ರ ದೇವಸ್ಥಾನ'ದಲ್ಲಿ ವರ್ಷಂಪ್ರತಿ ನಡೆಯತಕ್ಕ ಜಾತ್ರೆಯು ಇದೇ ತಾ. ೨೬ರಲ್ಲಿ 'ಧ್ವಜಾರೋಹಣ'ವಾಗಿ, ತಾ. ೩೦ನೆಯ. ದಿನ 'ಅವಭೃತೋತ್ಸವ'ವು ಸಂಭ್ರಮದಿಂದ ಜರಗಲಿರುವುದು.

**ಬೆಳ್ತಂಗಡಿ:** — ಇಲ್ಲಿ ಮಾರಿಯಮ್ಮ ದೇವರ ಎದುರಿನಲ್ಲಿ ದೇವರ ಹೆಸರಲ್ಲಿ ಮೂಕ ಪ್ರಾಣಿಗಳ ಬಲಿ ಕೊಡುವುದನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ಒಂದು ಸಭೆಯು ಸ್ಥಾಪಿಸಲ್ಪಟ್ಟಿದೆ — ಇದರ ಹೆಸರು "ಪ್ರಾಣಬಲಿ ನಿಷೇದ ಸಭಾ, ಬೆಳ್ತಂಗಡಿ" ಆಗಿರುತ್ತದೆ.

**ಮೂಡಬಿದ್ರೆ** — ಈ ಸೆಂಟರಿನ ಉಪಾಧ್ಯಾಯರ ಸಂಘದ ಪ್ರಥಮ ಸಭೆಯು ಇದೇ ತಿಂಗಳ ೨೧ನೇ ಶನಿವಾರ ೨ ಗಂಟೆಗೆ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಮಿಡ್ಲ್ ಸ್ಕೂಲ್ ಅಧ್ಯಾಪಕರಾದ ಮ. ರಾ. ರಾ. ಕಳವಾರ ಭವಾನಿ ಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

**ಪೊಳಲಿ** — ಇದೇ ತಾ. ೧೪-೧-೩೩ನೇ ಶನಿವಾರ ದಿನ ಪೊಳಲಿಯ ಶ್ರೀವಿದ್ಯಾ ವಿಲಾಸ ಶಾಲೆಯಲ್ಲಿ ಈ ಸೆಂಟರಿನ ಸಭೆ ಜರಗಿತು. ಆ ದಿನ ವರುಷಾವಧಿ ವರದಿಯೂ ಓದಲಾಯಿತು. ರಾ। ಬಡಕಬೈಲು ಪರಮೇಶ್ವರಯ್ಯನವರು ಅಧ್ಯಕ್ಷರು.

**ಸುಳ್ಯ:** — ಇಲ್ಲಿ ಮಾಮೂಲು ಆಗತಕ್ಕ ಜಾತ್ರೆಯು ಇದೇ ಜನವರಿ ತಾ. ೮ ಮೊದಲುಗೊಂಡು ಈ ವರುಷವೂ ಕ್ರಮ ಪ್ರಕಾರ ನಡೆಯಿತು. ಇಲ್ಲಿ ಜವಳಿ, ಜೀನಸು, ಕಟ್ಲೇರಿ ತಾಮ್ರ ವ್ಯಾಪಾರಿಗಳೇ ಮುಂತಾದ ಊರ ಮತ್ತು ಪರವೂರ ವರ್ತಕರು ಬಂದು ಚಿಕ್ಕ ಚಿಕ್ಕ ಸಪ್ಪಿನ ಗುಡಿಸಲನ್ನು ಕಟ್ಟಿಕೊಂಡು ಕೆಲವು ದಿವಸ ವ್ಯಾಪಾರ ಮಾಡುವ ವಾಡಿಕೆಯಾಗಿದೆ.

ಅದೇ ಪ್ರಕಾರ ಜವಳಿ ವ್ಯಾಪಾರಕ್ಕೆ ಬಂದವರ ಪೈಕಿ ನಾಲ್ಕೈದು ಜವಳಿ ಅಂಗಡಿಗಳಿಗೆ ತಾ. ೯ನೇ ರಾತ್ರಿ ಅಕಸ್ಮಾತ್ ಬೆಂಕಿತಾಗಿ ಪೂರ್ಣ ಸುಟ್ಟುಹೋಗಿ ನಾಲ್ಕೈದು ಸಾವಿರ ರೂಪಾಯಿಗಳ ನಷ್ಟವಾಗಿರುವುದೆಂಬ ಕರ್ಕಶ ವಾರ್ತೆಯು ವಿಷಾದಕರವಾಗಿದೆ. ಇಲ್ಲಿಯೇ ಈ ಮೊದಲು ಅಂದರೆ ಐದಾರು ವರುಷಗಳ ಹಿಂದೊಮ್ಮೆ ಹೀಗೆ ಬೆಂಕಿ ತಾಗಿ ಕೆಲವು ಅಂಗಡಿಗಳು ಸುಟ್ಟು ಹೋಗಿ ತುಂಬಾ ನಷ್ಟವಾಗಿರುತ್ತದೆ. ಇಲ್ಲಿ ವ್ಯಾಪಾರಿಗಳಿಗೆ ತಕ್ಕ ಹಂಚಿನ ಕಟ್ಟೋಣವಾಗಲೀ ಹತ್ತಿರ ಬಾವಿ, ಕೆರೆ ವಗೈರೆ ಜಲಾಶಯಗಳು ಇಲ್ಲದ್ದೂ ದೊಡ್ಡ ಕಷ್ಟಕ್ಕೆ ಕಾರಣ.

---

## ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. E. P. No 1127/32. O. S. No. 481/29.

ವಾದಿರು. ಶ್ರೀಮದ ಸುದೀಂದ್ರ ತೀರ್ಥಸ್ವಾಮಿರು ಪುತ್ತಿಗೆ ಮಟ, ಉಡುಪಿ — ಅರ್ಜಿದಾರರು.

ಮತ್ತು

ಪ್ರತಿವಾದಿ. ದೇವಕಿ ಅಮ್ಮ ಕೂಡಾ ಎದ್ರಿರು.

೨ನೆ ಎದ್ರಿಳು, ಯಮುನಮ್ಮ, ಮಧ್ವರಾಯ ಭಂಡಾರಿ ಮಗಳು ಉಡುಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮದಲ್ಲಿರುವವಳು — ೨ನೇ ಪ್ರತಿವಾದಿಳು.

ಇವಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ: —

ಸದರಿ O. S. No. 481/29ನೇ ಡಿಕ್ರಿ ಬಗ್ಗೆ, ಸದರಿ ಡಿಕ್ರಿ ವಾದಿರು ದಾಖಲು ಮಾಡಿರುವ ಸದರಿ ಅಮಲಜಾರಿಯು 1-2-33ಕ್ಕೆ ತನಿಕೆಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪ ಇರುವುದಾದರೆ ಸದರಿ ತನಿಕೆ ದಿವಸ ಬೆಳಗ್ಗೆ ಗಂಟೆ 10ಕ್ಕೆ ಸದರಿ ಕೋರ್ಟ್ ಮುಂದೆ ಜಾಹೀರು ಮಾಡತಕ್ಕದ್ದು.

ಬಿ. ಭುಜಂಗ ರಾವ್,
ಅರ್ಜಿದಾರರ ಕಡೆ ವಕೀಲ್.

---

THE CANARA BANKING CORPORATION,
UDIPI LTD, UDIPI.

### NOTICE.

Is hereby given that under Section 37 of the Indian Companies Act No. VII of 1913, the register of members of the Corporation will be closed from 20—1—1933 to 15—2—1933 (both days inclusive).

*By Order*

Udipi, 20—1—33.

N. ANANDA RAU,
Manager.

---

## ನೋಟೀಸು.

ಕೀರ್ತಿಶೇಷ ದಿವಾನಬಹದ್ದೂರ್ ಅಮ್ಮೆಂಬಳ ಅನಂತ ಕೃಷ್ಣಪ್ಪೈಗಳು, ಗೌಡ ಸಾರಸ್ವತ ಬ್ರಾಹ್ಮಣ ಯಾತ್ರಿಕರಿಗಾಗಿ ಪಂಢರಪುರ ಕ್ಷೇತ್ರದಲ್ಲೊಂದು ಧರ್ಮಶಾಲೆಯನ್ನು ಕಟ್ಟಿಸುವ ಉದ್ದೇಶದಿಂದ ಸಂಗ್ರಹಿಸಿದ ನಿಧಿಯನ್ನು ಹೇಗೆ ವಿನಿಯೋಗಿಸಬೇಕೆಂಬ ಕುರಿತಾಗಿ ಚರ್ಚಿಸಲು ಈ ಜಿಲ್ಲೆಯಿಂದ ವಂತಿಗೆ ಕೊಟ್ಟ ಮಹನೀಯರ ಸಭೆಯು ಇದೇ ತಾ. ೨೯—೨—೩೩ನೇ ರವಿವಾರ ಸಾಯಂಕಾಲ ಗಂಟೆ ೫-೩೦ಕ್ಕೆ ಮಂಗಳೂರು ಬಂದರದಲ್ಲಿರುವ ಕೆನರಾ ಬೇಂಕಿನ ಆಫೀಸಿನಲ್ಲಿ ಕೂಡುವುದೆಂದೂ, ಸಂಬಂಧಪಟ್ಟವರು ದಯಮಾಡಿಸಬೇಕಾಗಿಯೂ, ಎಲ್ಲವರ ಅವಗಾಹನೆಗೆ ಪ್ರಕಟಿಸಿದೆ.

ಕಸ್ತೂರಿ ಸರ್ವೋತ್ತಮ ಪೈ.

## ೪ ವರ್ಷ ೧೦ ತಿಂಗಳ ವಿಚಾರಣೆ! ೧೭ ಲಕ್ಷ ರೂಪಾಯಿಗಳ ವೆಚ್ಚ!

### ಮೀರತ್ ಪಿತೂರಿ ಇತಿಹಾಸದ ಕಡೆ ಕೇಳಿ!

# ೨೭ ರಾಜದ್ರೋಹಿಗಳಿಗೆ ಶಿಕ್ಷೆ!

೨೦-೩-೧೯೨೯ನೆಯ ದಿನ ಭರತಖಂಡದ ಬೇರೆ ಬೇರೆ ಕಡೆ ೩೧ ಮಂದಿಯ ದಸ್ತಗಿರಿಯಾಯಿತು. ಅನೇಕ ಮನೆಗಳ ಪರೀಕ್ಷೆಗಳಾದವು. ಕಾಗದ ಪತ್ರಗಳನ್ನು ಬಂಡಿ ಬಂಡಿಗಳಲ್ಲಿ ಹೇರಿಕೊಂಡು ಬಂದರು. ೩೧ ಮಂದಿಯ ಮೇಲೂ ಪಿತೂರಿ ಮೊಕದ್ದಮೆಯು ಮೀರತ್ತಿನಲ್ಲಿ ಮೊದಲಾಯಿತು. ವಿಚಾರಣೆಯು ಎಡಿಷನಲ್ ಮ್ಯಾಜಿಸ್ಟ್ರೇಟರ ಮುಂದೆ ೧೨-೬-೨೯ನೇ ದಿನ ಆರಂಭವಾಯಿತು. ಅಪರಾಧಿಗಳ ಮೇಲೆ ಹೊರಿಸಿದ ತಪ್ಪು ಇದು.

"ಅಪರಾಧಿಗಳೆಲ್ಲ ಪಿತೂರಿ ನಡೆಸಿ ಭಾರತ ಸಮ್ರಾಟರಾದ ಸಾರ್ವಭೌಮ ಪಂಚಮ ಜಾರ್ಜರನ್ನು ಸಿಂಹಾಸನದಿಂದ ಉರುಳಿಸಬೇಕೆಂದು ಸಂಕಲ್ಪಮಾಡಿದರು. ಇದನ್ನು ಸಾಧಿಸಲು ಭರತಖಂಡದಲ್ಲಿ ಕ್ರಾಂತಿಯನ್ನುಂಟುಮಾಡಬೇಕೆಂದು ನಿರ್ಧಾರ ಮಾಡಿದರು. ಅಪರಾಧಿಗಳು ಬಯಸಿದುದು ರಾಷ್ಟ್ರೀಯ ಕ್ರಾಂತಿಯಲ್ಲ. ರಾಷ್ಟ್ರ ವಿಘಾತುಕ ಕ್ರಾಂತಿಯನ್ನು, ಅವರು ಸಾರ್ವಭೌಮ ಪಂಚಮ ಜಾರ್ಜರನ್ನು ಸಿಂಹಾಸನದಿಂದಿಳಿಸಿ ಆ ರಾಜ್ಯಸೂತ್ರಗಳನ್ನು ರಷ್ಯದ ರಷ್ಯಾಸೋವಿಯಟ್ ಸರಕಾರದ ಸ್ಟ್ಯಾಲಿನ್ ಕೈಲಿಡಬೇಕೆಂದು ನಿಶ್ಚಯ ಮಾಡಿದರು. ಅಪರಾಧಿಗಳೆಲ್ಲರೂ ಬೋಲ್‌ಷೆವಿಕರು. 'ಬೋಲ್‌ಷೆವಿಕರೆಂದರೇನು? ಇವರಿಗೆ ದೇಶಭಕ್ತಿ ಇಲ್ಲ; ದೇಶದ್ರೋಹಿಗಳು; ಇವರೆಲ್ಲ ನಾಸ್ತಿಕರು ಸಂಸಾರಪ್ರೇಮವೇ ಇವರಿಗೆ ಶೂನ್ಯ; ಮಾನವನಿಗೆ ಸಹಜ, ನ್ಯಾಯವಾಗಿ ಕಾಣಬರುವುದಕ್ಕೆಲ್ಲ ಇವರು ವೈರಿಗಳು. ಇವರ ವಿರೋಧಿಗಳನ್ನು ಕೊಲ್ಲುವುದೇ ಇವರ ಪರಮೋದ್ದಿಶ್ಯ. ಈ ಅಪರಾಧಿಗಳಿಗೂ ಭರತಖಂಡ ಯುರೋಪಿನ ೬೩ ಸಂಸ್ಥೆಗಳಿಗೂ ಸಂಬಂಧವಿದೆ."

ಇದೇ ಅಪಾದನೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಪೋಲೀಸಿನ ಪರವಾಗಿ ೩೨೦ ಸಾಕ್ಷಿಗಳ ವಿಚಾರಣೆಯಾಯಿತು. ೭೦೦೦ ಪುಟಗಳ ಸಾಕ್ಷಿ ಸಾಹಿತ್ಯವಾಯಿತು. ೧೪-೧-೧೯೩೦ರಲ್ಲಿ ಅಪರಾಧಿಗಳನ್ನು 'ಛಾರ್ಜು' ಮಾಡಿದರು. ೩೧ ಮಂದಿ 'ಸೆಷನ್ ಕೋರ್ಟಿ'ನಲ್ಲಿ ನಿಲ್ಲಬೇಕಾಯಿತು. 'ರಿಮ್ಯಾಂಡ್' ಕಾಲ ಬಿಟ್ಟು ಕೆಳಗಿನ ಕೋರ್ಟಿನಲ್ಲಿ ವಿಚಾರಣೆಯು ೭ ತಿಂಗಳು ನಡೆಯಿತು. ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡಲಿಲ್ಲ.

೩೧-೧-೧೯೩೦ರಲ್ಲಿ 'ಸೆಷನ್ ಕೋರ್ಟಿ'ನಲ್ಲಿ ವಿಚಾರಣೆ ಆರಂಭವಾಯಿತು. ಈ ಕಾಲದಲ್ಲಿ ಅಪರಾಧಿಗಳು ಹಲವರು ರೋಗಗ್ರಸ್ತರಾದ ಕಾರಣ ಜಾಮೀನು ಮೇಲೆ ಬಿಡಲಾಗಿತ್ತು. ೧೪ ತಿಂಗಳು ಕಾಲ ಪೋಲೀಸಿನವರು ೨೮೧ ಸಾಕ್ಷಿಗಳನ್ನು ಮುಂದಿಟ್ಟು ಅಪಾದನೆಯನ್ನು ೧೭-೩-೧೯೩೦ಕ್ಕೆ ಮುಗಿಸಿದರು. ಇದಾದ ಮೇಲೆ ಅಪರಾಧಿಗಳೆಲ್ಲ, ತಮ್ಮ ತಮ್ಮ ವಾಙ್ಮೂಲಗಳನ್ನು ಕೊಟ್ಟರು. ಇದಕ್ಕೆ ೧೦ ತಿಂಗಳುಕಾಲ ಹಿಡಿಯಿತು, ವಾಙ್ಮೂಲಗಳು ಸುಮಾರು ೭೦೦೦ ಪುಟಗಳಿವೆ. ಅಪರಾಧಿಗಳಲ್ಲಿ ಒಂದು ಗುಂಪಿನವರು 'ಕಮ್ಯೂನಿಸ್ಟ್' ತತ್ವಗಳನ್ನೇ ಪ್ರತಿಪಾದಿಸಿ ತಾವು ಮಾಡಿದ್ದು ನ್ಯಾಯವೆಂದು ಹೇಳಿದರು. ಮಾರ್ಕ್ಸ್ ಲೆನಿನ್ ಇವರ ಸಿದ್ಧಾಂತಗಳನ್ನು ಒಪ್ಪಿಕೊಂಡರು: ೧೮ ಮಂದಿ ಈ ಗುಂಪು. ಎರಡನೆ ಗುಂಪಿನವರು 'ನಾವು ಕಮ್ಯೂನಿಸ್ಟರಲ್ಲ'ವೆಂದರು. ಕಾಂಗ್ರೆಸಿನವರೋ ಕೂಲಿಗಾರ ಸಂಘದವರೋ, ಸಮಾಜವಾದಿಗಳೋ ಹೌದೆಂದು ಹೇಳಿದರು.

ಕಮ್ಯೂನಿಸ್ಟ್ ಅಪರಾಧಿಗಳಲ್ಲ ಹಲವು ವಿದೇಶೀಯ ಸಾಕ್ಷಿಗಳ ಪಟ್ಟಿಕೊಟ್ಟರು. ಅದಕ್ಕೆ ಅವಕಾಶ ಸಿಗಲಿಲ್ಲವಾಗಿ 'ನಾವು ವಾದಿಸುವುದೇ ಇಲ್ಲ'ವೆಂದುಬಿಟ್ಟರು. ಇತರರು ೩೩ ಸಾಕ್ಷಿಗಳ ವಿಚಾರಣೆ ಮಾಡಿದರು. ೨೯-೩-೩೨ಕ್ಕೆ ಇದು ಮುಗಿಯಿತು. ಈ ಗುಂಪಿನ ಹಲವಪರಾಧಿಗಳು ತಾವೇ ವಾದಿಸಿದರು. ಮಿ|| ಕೆಂಪರು ಸರಕಾರದ ಪರವಾಗಿ ೧೭-೬-೩೨ರಲ್ಲಿ ವಾದವನ್ನಾರಂಭಿಸಿ ೧೫-೮-೩೨ಕ್ಕೆ ಮುಗಿಸಿದರು. ಮಾರನೆಯ ದಿನ ಪಂಚಾಯಿತರ ಮತ ತೆಗೆದುಕೊಂಡದ್ದಾಯಿತು. ಅವರೆಲ್ಲ ಬೇರೆ ಬೇರೆ ತೀರ್ಮಾನ ಕೊಟ್ಟರು. ಎಲ್ಲರೂ ೧೭ ಮಂದಿ ಅಪರಾಧಿಗಳೆಂದರು. ೫ ಮಂದಿ ನಿರಪರಾಧಿಗಳೆಂದರು. ಉಳಿದವರನ್ನು ಮೂರಲ್ಲೊಂದು ಸಂಖ್ಯಾತರು 'ನಿಂಪರಾಧಿ'ಗಳೆಂದು ಹೇಳಿದರು. ೨೯-೯-೩೨ರಲ್ಲಿ ಅಪರಾಧಿ ಶೆಂಗಡಿಯು ಸತ್ತನು. ೧೬-೧-೧೯೩೩ನೆಯ ದಿನ 'ಸೆಷನ್ ಜಡ್ಜಿ'ಗಳಾದ ಮಿ|| ಯಾರ್ಕರು ೧೨ ಗಂಟೆಗೆ ಸರಿಯಾಗಿ ತೀರ್ಮಾನಕೊಟ್ಟರು. ಒಟ್ಟು ೨೭ ರಾಜದ್ರೋಹಿಗಳಿಗೆ ಶಿಕ್ಷೆ.

ಮುಜಫರ್ ಅಹಮದ್, ಅಮರಣಾಂತ ಶಿಕ್ಷೆ. ಅಯೋಧ್ಯಾಪ್ರಸಾದ್, ಅಧಿಕಾರಿ, ಈ ನಾಲ್ಕು ಮಂದಿಗೂ ೫ ವರ್ಷಗಳ. ಜೋಶಿ, ದೇಸಾಯಿ, ದ್ವೀಪಾಂತರ ಶಿಕ್ಷೆ. ಡಂಗೆ, ಸ್ಪ್ರಾಟ್, ಗಾಟೆ, ಜೋಗ್ಲೇಕರ್, ಈ ಐದು ಮಂದಿಗೆ ೧೨ ವರ್ಷ. ನಿಂಬಕರ್, ದ್ವೀಪಾಂತರ ಶಿಕ್ಷೆ. ಬ್ರಾಡ್ಲೆ, ಮಿರಾಜಕರ್, ಈ ಮೂವರಿಗೆ ೧೦ ವರ್ಷ. ಉಸ್ಮಾನಿ, ದ್ವೀಪಾಂತರ ಶಿಕ್ಷೆ. ಸೋಹನಸಿಂಗ್, ಮಜೀದ್, ಈ ಮೂವರಿಗೆ ೭ ವರ್ಷ. ಗೋಸ್ವಾಮಿ, ದ್ವೀಪಾಂತರ ಶಿಕ್ಷೆ. ಚಕ್ರವರ್ತಿ, ಬಾಸಕ್, ಹಚಿನ್‌ಸನ್, ಈ ಆರು ಮಂದಿಗೂ ೪ ವರ್ಷ. ಮಿತ್ರ, ಝಾಬ್‌ವಾಲಾ, ಸೇಗಲ್, ಕಠಿಣ ಶಿಕ್ಷೆ. ಶಾಮ್ಸುಲ್ ಹುದಾ, ಅಲ್ವೆಯಿ, ಈ ಐವರಿಗೂ ೩ ವರ್ಷ. ಕಸಲೆ, ಗೌರಿಶಂಕರ, ಕದು, ಕಠಿಣ ಶಿಕ್ಷೆ.

---

ಸೋಡ್ಡಿ ಎತ್ತಲಾಗಿ, ಈ ಸಲದ ಬಹುಮಾನವಾಗಿ ಒಂದೊಂದು ರೂಪಾಯಿಯು ನಂಬ್ರ ೨೨, ೩೧, ೪೩ ೫೭, ೬೨ ಇವುಗಳಿಗೆ ದೊರೆತಿದೆ. ಎಲ್ಲರ ಉತ್ತರಗಳೂ, ಸಮರ್ಪಕವಾಗಿರುವುದರಿಂದ ಒಗಟಿನ ಉತ್ತರದ ಪ್ರಕಟಣೆಯು ಅನಗತ್ಯ. ಒಗಟಿನ ಸ್ಪರ್ಧೆಯನ್ನು ಕನ್ನಡ ವಾಙ್ಮಯ ಶ್ರೇಯಃ ದೃಷ್ಟಿಯಿಂದ ಪ್ರಾರಂಭಿಸಿರುವುದರಿಂದ ಸರ್ವ ಕನ್ನಡಾಭಿಮಾನಿಗಳೂ, ಪ್ರೋತ್ಸಾಹಿಸಬೇಕಾಗಿ ಅರಿಕೆ. ಮಹಿಳಾವರ್ಗದವರು ಈ ವಿಷಯದಲ್ಲಿ ಹೆಚ್ಚಿನ ಲಕ್ಷ್ಯವನ್ನಿರಿಸದಿರುವುದು ಇದು ಕನ್ನಡದ ದೌರ್ಭಾಗ್ಯ ಸೂಚನೆ.

## ಕಳೆದ ಸಲದ 'ನವವರ್ಷ' ಒಗಟಿಗೆ ಸರಿಯಾಗಿ ಉತ್ತರವಿತ್ತ ಮಹನೀಯರ ಹೆಸರುಗಳು.

೧. ಶ್ರೀಗಳಾದ ಎನ್. ಎಸ್. ರಾವ್. ಉಪಾಧ್ಯಾಯ ಪಾಣೆಮಂಗಳೂರು. ೨. ಪಿ. ಸಿ. ಶೆಟ್ಟಿ ಶೈನ್. ಪಾಣೆಮಂಗಳೂರು. ೩. ಕೆ. ಪಾಂಡುರಂಗ ಕುಡ್ವ, ಪಾಣೆಮಂಗಳೂರು. ೪. ಬಿ. ಎಚ್. ಲಕ್ಷ್ಮಣ ಪೈ, ಪಾಣೆಮಂಗಳೂರು. ೫. ವಿ. ಲಕ್ಷ್ಮಣ ಪೈ. ಪಾಣೆಮಂಗಳೂರು. ೬. ಕೆ. ಶಂಕರನಾರಾಯಣ ರಾವ್, ಉಪಾಧ್ಯಾಯ ಪಾಣೆಮಂಗಳೂರು. ೭. ಪಿ. ತಿಮ್ಮಪ್ಪ. ವಿದ್ಯಾರ್ಥಿ ಮೂಲ್ಕಿ. ೮. ಚಂದ್ರಯ್ಯಾಚಾರಿ, ವಿದ್ಯಾರ್ಥಿ ಮೂಲ್ಕಿ. ೯. ಕೆ. ಜಿ. ಶೆಟ್ಟಿ. ವಿದ್ಯಾರ್ಥಿ ಮೂಲ್ಕಿ. ೧೦. ಕೆ. ನಾರಾಯಣ ಶೆಟ್ಟಿ. ವಿದ್ಯಾರ್ಥಿ ಮೂಲ್ಕಿ. ೧೧. ಕೆ. ನಾರಾಯಣ ಭಟ್ಟ. ವಿದ್ಯಾರ್ಥಿ ಮೂಲ್ಕಿ. ೧೨. ಎನ್. ನಾರಾಯಣರಾಯ ಶೆಣೈ. ಬಂಟ್ವಾಳ. ೧೩. ಬಿ. ನರಸಿಂಹ ದಾಮೋದರ ಬಾಳಿಗಾ. ಬಂಟ್ವಾಳ. ೧೪. ಮಾಣೂರು ಪುಂಡಲೀಕ ಅಣ್ಣ ಶೆಣೈ, ಬಂಟ್ವಾಳ. ೧೫. ಮಾಣೂರು ಅಪ್ರಾಯ ಶೆಣೈ ಬಿ. ಎ. ಬಂಟ್ವಾಳ. ೧೬. ಬಿ. ಗೋಪಾಲಕೃಷ್ಣ ಬಾಳಿಗಾ. ಬಂಟ್ವಾಳ. ೧೭. ಶ್ರೀಮತಿ ಸುರತ್ಕಲ್ ರುಕ್ಮಿಬಾಯಿ ಮುಂಬಾಯಿ. ೧೮ ಶ್ರೀಮತಿ ಮೂಲ್ಕಿ ಹೊನ್ನು ಬಾಯಿ. ಮುಂಬಾಯಿ. ೧೯. ಕಾಡಿಪಟ್ಣ ಕಾಶೀರ ಟಿ. ಕರ್ಕೇರ ಮುಂಬಾಯಿ. ೨೦. ಸುರತ್ಕಲ್ ವೆಂಕ ಪಿ. ಕರ್ಕೇರ. ಮುಂಬಾಯಿ. ೨೧. ಕಾಪು ಜಿರ್ದಪ್ಪ ಎನ್. ಶೆಟ್ಟಿ ಮುಂಬಾಯಿ. ೨೨. ಕಾಪು ಪುರುಷೋತ್ತಮ ಎನ್. ಶೆಟ್ಟಿ. ಮುಂಬಾಯಿ. ೨೩. ಕಾಪು ಗೋಪಾಲ ಶೆಟ್ಟಿ ಮುಂಬಾಯಿ. ೨೪. ಪಸಿಹಿತ್ಲು ಚಂದ್ರಯಾಚಾರಿ. ಮುಂಬಾಯಿ. ೨೫. ವಾಸುದೇವ ಶಿರ್ಧ್ರೆಕಾರ್. ಮುಂಬಾಯಿ. ೨೬. ಸುರತ್ಕಲ್ ತಿಮ್ಮಪ್ಪ ಬಿ. ಕೋಟಿಂಕಾರ್. ಮುಂಬಾಯಿ. ೨೭. ಮೂಲ್ಕಿ ಮನ್ನಳ. ಕೋಟ್ಯಾನ್. ಮುಂಬಾಯಿ. ೨೮. ಸುರತ್ಕಲ್ ಐತು ಪಿ. ಕಂಗ್ಯಾನ್ ಮುಂಬಾಯಿ. ೨೯. ಪಿ. ವಾಮನ ವಾಸುದೇವ ನಾಯಕ್. ಪಾಣೆಮಂಗಳೂರು. ೩೦. ಪಂಚಮಹಾಲ್ ವಾಸುದೇವ ಕಾಮತ್, ಮಂಗಳೂರು. ೩೧. ಶ್ರೀಮತಿ ಎಮ್. ನಾರಾಯಣಿ ಬಾಯಿ, ವಿದ್ಯಾರ್ಥಿನಿ ಪಡುಬಿದ್ರಿ. ೩೨. ಕೆ. ಕೇಶವ ಭಟ್. ಮಂಗಳೂರು. ೩೩. ಬಿ. ನಾರಾಯಣ ಹೆಗ್ಡೆ. ಕಟಪಾಡಿ. ೩೪. ಟಿ. ನಾರಾಯಣ ಭಟ್ಟ. ಮಂಜೇಶ್ವರ. ೩೫. ಕ. ಅನಂತಯ್ಯ. ಪಕ್ಲಾಡಿ. ೩೬. ಸಿ. ಶಂಕರಭಟ್ಟ. ಮಂಜೇಶ್ವರ, ೩೭. ಟಿ. ಸುಬ್ಬಣ್ಣ ಭಟ್ಟ. ಮಂಜೇಶ್ವರ. ೩೮. ಅ. ಶಂಕರ ನಾರಾಯಣ ನಾವಡ. ಪಕ್ಲಾಡಿ ೩೯. ದಗ್ಗು ಮರಕಾಲ. ಕಾಪು. ೪೦. ಕೆ. ಗೋಪಾಲ ಹೆಗ್ಡೆ. ಪಡುಬಿದ್ರಿ. ೪೧. ಆರ್ ಎಲ್. ಪೈ. ಹೊಸಂಗಡಿ. ೪೨ ಪಿ. ನರಸಿಂಹ ಕಿಣಿ. ಕಾರ್ಕಳ. ೪೩. ಬಿ. ಗಣಪತಿ ಆಚಾರಿ. ಬಂಟ್ವಾಳ. ೪೪. ಕೆ. ಸೂರ್ಯನಾರಾಯಣ ರಾವ್. ಬಂಟ್ವಾಳ. ೪೫. ಎಚ್. ಕೆ. ಕಾಮತ್. ಪುಂಜಾಲಕಟ್ಟೆ. ೪೬. ಪಿ. ನಾರಾಯಣ ರಾವ್ ಮಂಗಳೂರು. ೪೭. ಶ್ರೀಮತಿ ಕೆ. ಮಹಲಕ್ಷ್ಮಿ ಅಮ್ಮ ಬಂಟ್ವಾಳ. ೪೮. ಪದ್ಮನಾಭ ಹೆರ್ಳೆ. ಕೋಟ. ೪೯. ಬಾಬು ರಾವ್. ಸಾಣೂರು. ೫೦. ಎಸ್. ವೆಂಕಟೇಶ ಶೆಟ್ಟಿ. ಸಾಣೂರು. ೫೧. ಎ. ಎನ್. ಪೈ. ಮಂಗಳೂರು. ೫೨ ಮಾರೂರು ಅಚ್ಯುತ ಪೈ. ಮಂಗಳೂರು. ೫೩. ಬಿ. ಗಣಪತಿ ಪೈ. ಮಂಗಳೂರು. ೫೪. ಎಸ್ ವಿಟ್ಠಲ್ ಶೆಣೈ. ಕಾರ್ಕಳ ೫೫. ಎಸ್. ಎನ್. ಶಾನುಭೋಗ್. ಸಾಣೂರು. ೫೬. ಟಿ. ಕೆ. ಕರ್ಕೇರ. ಮಂಗಳೂರು. ೫೭. ಎ. ವೇಣುಗೋಪಾಲ ಪಂಡಿತ. ಮಂಗಳೂರು. ೫೮. ಎಂ. ಡಿ. ಹುಸೇನ. ಮಂಗಳೂರು. ೫೯. ಬಿ. ಸುಬ್ರಾಯ ಭಟ್. ಬಾರ್ಕೂರು. ೬೦. ಕೆ. ನಾರಾಯಣ ಹೆಗ್ಡೆ. ಬಾರ್ಕೂರು. ೬೧. ಹಾರಾಡಿ ಗೋಪಾಲ ಪೈ. ಬಾರ್ಕೂರು. ೬೨. ಬಿ. ಪರಮೇಶ್ವರ ಭೈರಿ. ಬಾರ್ಕೂರು. ೬೩. ಹಾರಾಡಿ ಶ್ರೀನಿವಾಸ ಪೈ. ಬಾರ್ಕೂರು. ೬೪. ಎನ್. ನಾರಾಯಣ ಆಚಾರ್. ಬಂಟ್ವಾಳ. ೬೫. ಪಂಚಮಹಾಲ್ ವೆಂಕಟ್ರಾಯ ಕಾಮತ್. ಮಂಗಳೂರು. ೬೬. ಯುನ್ ಯುಸ್. ಆಚಾರ್. ಬಂಟ್ವಾಳ. ೬೭. ಕೆ. ಬಾಬು ಟೈಲರ್ ಮಂಗಳೂರು. ೬೮. ಹರಿ ಬಾಳಿಗಾ. ಕೊಕ್ಕಡ. ೬೯. ಪಿ. ಕೆ. ಅನಂದ. ನಿಡ್ಲೆ. ೭೦. ಎಂ. ಗೋಪಾಲ ಕಿಣಿ. ಶಿರ್ವ. ೭೧. ಎಂ. ಶ್ರೀನಿವಾಸ ಕಾಮತ್. ಕಟಪಾಡಿ. ೭೨. ಎಂ. ಶ್ರೀಧರ ಕಿಣಿ. ಉಡುಪಿ. ೭೩. ಟಿ. ಪಿ. ಬಂಗೇರ. ಸುರತ್ಕಲ್. ೭೪. ತಿಸ್. ಬಸಪ್ಪ ಬಿ. ಕೋಟಿನ್‌ಕಾರ್. ಸುರತ್ಕಲ್. ೭೫. ಬಿ. ವಿ. ಮೆಂಡನ್ ಸುರತ್ಕಲ್. ೭೬. ವಿ. ಬಾಬು. ಸುರತ್ಕಲ್. ೭೭. ಜಿ. ಆರ್. ಶೆಮುರ್ದೆ. ಸುರತ್ಕಲ್. ೭೮. ಕೆ. ಸೂರ್ಯನಾರಾಯಣ ರಾವ್. ಎಸಳೂರು. ೭೯. ಬಿ. ಬಸವೇಗೌಡ. ಎಸಳೂರು. ೮೦. ಟಿ. ಎನ್. ನರಸಿಂಹಮೂರ್ತಿ. ಎಸಳೂರು. ೮೧. ವೈ. ಬಿ. ಕೋಟಯ್ಯ. ಎಸಳೂರು. ೮೨. ಪಿ. ಪುಟ್ಟನಂಜಪ್ಪ ಎಸಳೂರು, ಹಾಸನ ಡಿಸ್ಟ್ರಿಕ್ಟು. ೮೩. ಎಸ್. ಕಾಳಪ್ಪ. ಸೀತಾನದಿ.


## 56 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಹ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ದಿವ್ಯೌಷಧ. ಬಾಟ್ಲಿ 1ರ ರೂ. 1—2—0. 1 ಪಪ್ಪು ಮಾತ್ರೆಗೆ ರೂ. 1-6-0. 2 ಬಾಟ್ಲಿ ಔಷದಕ್ಕೂ ರೂ. 4-12-0.

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ. ಬಾಟ್ಲಿ 1ಕ್ಕೆ 0—10—0. 3ಕ್ಕೆ 1—12—0.

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕಿಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಆಣೆ 3. 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ರ ರೂ. 1—8—0. 2 ಬಾಟ್ಲಿಗಳಿಗೆ ರೂ. 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ। ಶ್ರೀನಿವಾಸ ಕೈಯರ ಶಾಪಿನಲ್ಲಿ ಸಿಗುತ್ತವೆ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.

# ಮಹಾತ್ಮಾಜೀಯವರ ಬಿಡುಗಡೆ ನಿಶ್ಚಯ!

(ಸಿಮ್ಲಾದಿಂದ ವಾರ್ತೆ)

# ಸರ್ ಸಾಮುವೇಲ್ ಹೋರರ ಮನೋಪರಿವರ್ತನೆ!

## ಕೇಳ್ಕರರ ಎರಡು ದೋಣಿಗಳು! ಯುದ್ಧದ ಚಿಹ್ನೆಯು ಕಂಡುಬಂದಿದೆ!!

**ಭೂತ! — ಅಂದಿನ ಆನೆ ಬದುಕಿದೆ? — ವಿಚಿತ್ರ ಬುಗ್ಗೆ — ಮದುವೆಯಲ್ಲಿ ಮರಣ — ಕೆಮ್ಮಿದಾಗ ಗುಂಡು ಹೊರಗೆ ಬಂತು.**

'ಹೇರಲ್ಡ್' ಪತ್ರಿಕೆಯ ಸಿಮ್ಲಾ ಸುದ್ದಿಗಾರನು ತಿಳಿಸುವಂತೆ ಸರ್ ಸಾಮುವೇಲ್ ಹೋರರು ಗಾಂಧಿಜೀಯವರನ್ನು ಶರ್ತವಿಲ್ಲದೆ ಬಿಡುಗಡೆ ಮಾಡಲಿರುವರಂತೆ. ಅವರೆನ್ನುವಂತೆ, ಮುಂಬಾಯಿಯಿಂದ ಪ್ರಮುಖ ಅಧಿಕಾರಿಗಳಲ್ಲೊಬ್ಬರು ಗಾಂಧಿಜಿಯವರನ್ನು ಸೆರೆಯಲ್ಲಿ ಕಂಡು ಮಾತನಾಡುವರು. ಗಾಂಧಿಜೀಯವರು ಬಂಧನ ಸಹಿತ ಬಿಡುಗಡೆಗೆ ಸಮ್ಮತಿಸುವುದಿಲ್ಲವಾದುದರಿಂದ ಅವರ ಮೇಲೆ ಯಾವ ನಿರ್ಬಂಧವೂ ಇರಲಿಕ್ಕಿಲ್ಲ. ಗಾಂಧಿಜೀಯವರ ಅತ್ಯಂತ ಆಪ್ತ ಕೈದಿಗಳೂ ಬಿಡುಗಡೆ ಹೊಂದುವರು. ಲಂಡನಿನಲ್ಲಿ ಮಾರ್ಚ ಎಪ್ರಿಲ್ ತಿಂಗಳಲ್ಲಿ ಜರಗಲಿರುವ ಜೊಯಿಂಟ್ ಸಿಲೆಕ್ಟ್ ಕಮಿಟಿಯಲ್ಲಿ ಕೊಂಗ್ರೆಸ್ ಪಕ್ಷೀಯರ ಸಹಕಾರವನ್ನು ತೆಗೆದುಕೊಳ್ಳಬೇಕೆಂದು ಸರ್ ಹೋರರು ಮನೋಪರಿವರ್ತಿಸಿ, ಉದಾರದಿಂದ ಚಿಂತಿಸಿಕೊಂಡುದರ ಸಂತೋಷದಾಯಕ ಪರಿಣಾಮವಿದು. ಈ ತಿಂಗಳೊಳಗೆ ಸರಕಾರದ ವ್ಹೈಟ್ ಪೇಪರ್ ಪ್ರಕಟವಾಗುವುದು. ಚತುರ್ಥ ಗೋಷ್ಠಿಯು ಲಂಡನಿನಲ್ಲಿ ಸೇರುವುದು. ಗಾಂಧಿಜೀಯವರ ಬಿಡುಗಡೆಯ ಕುರಿತಾಗಿ ಸರ್ ಹೋರರು ಕಳೆದ ವಾರದ ಮೊದಲೇ ಒಂದು ಸೂಚನೆಯನ್ನು ಕಳುಹಿಸಿದ್ದರು. ಅದನ್ನು ವಿವೇಚಿಸಿಕೊಳ್ಳುವುದಕ್ಕಾಗಿ ವೈಸರಾಯರು ತನ್ನ ಎಲ್ಲಾ ಕಾರ್ಯಗಳನ್ನು ಬದಿಗೊತ್ತಿ, ತನ್ನ ಮಂತ್ರಾಲೋಚಕರ ಎಮರ್ಜೆನ್ಸಿ ಸಭೆಯನ್ನು ಜರಗಿಸಿದರು. ಈ ಸುದ್ದಿಯು ಜವಾಬ್ದಾರೀ ಪಕ್ಷದಿಂದ ಆಧಾರಸಹಿತವಿದೆಯೆಂದು ವಾರ್ತೆಯಿರುವುದು.

### ಕೇಳ್ಕರರ ಎರಡು ದೋಣಿಗಳು!

ಶ್ರೀ. ಎನ್. ಸಿ. ಕೇಳ್ಕರರ ಮನೋಭಾವವು ಹೇಗಿರುವುದೆಂದು "ಹಿಂದೂಸ್ಥಾನ್ ಟೈಮ್ಸ್" ಪತ್ರಿಕೆಯು ಒಂದು ಚಿಕ್ಕ ಲೇಖನ ಮೂಲಕ ತಿಳುಹಿಸಿಯದೆ! ಕೇಳ್ಕರರು ಲಂಡನಿನಿಂದ ಮುಂಬಾಯಿಗೆ ಬಂದು ತಲಪಿದಾಗ ಅವರನ್ನೊಬ್ಬರು ಸಂದರ್ಶಿಸಿ ಪರಿಷತ್ತಿನ ಪರಿಣಾಮವು ಹೇಗೆ? ಎಂದು ಕೇಳಿದರು. ಕೇಳ್ಕರರು—'ಅದು ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ'ವೆಂದರು. ಇಂಗ್ಲೆಂಡಿನ ಹವೆಯ ಕುರಿತು ಕೇಳ್ಕರನ್ನು ಕೇಳಿದಾಗ, ಅವರು 'ಅದು ಅಷ್ಟು ಬಿಸಿಯೂ ಅಲ್ಲ, ತಂಪೂ ಅಲ್ಲ' ಎಂದರು. ಅಂತರ್‍ರಾಷ್ಟ್ರೀಯ ಸಮಸ್ಯೆಯ ಕುರಿತು ಕೇಳಿದಾಗ ಅವರು—ಅದು ಉನ್ನತಿ ಹೊಂದುವಂತೆಯೂ ಇಲ್ಲ; ಅವನತಿ ಹೊಂದುವಂತೆಯೂ ಇಲ್ಲ—ಎಂದರು. ಪೌಂಡ್ ಸ್ಟರ್ಲಿಂಗುಗಳ ನಿಕಟ ಸಂಬಂಧದ ಕುರಿತಾಗಿ ಕೇಳಿದಾಗ ಅವರು—'ಅದು ಆಶಾದಾಯಕವೂ ಅಲ್ಲ, ನಿರಾಶಾಜನಕವೂ ಅಲ್ಲ'ವೆಂದರು. ಹೀಗೆಯೇ ಇನ್ನೂ ಕೆಲವು ವಿಷಯಗಳಲ್ಲಿ ಅವರು ಇದೇ ರೀತಿಯ ದ್ವಿಮುಖ ಭಾವವನ್ನು ತೋರ್ಪಡಿಸಿದರು. ಕೇಳ್ಕರರು ಎರಡು ದೋಣಿಗಳ ಮೇಲೆ ನಿಂತಿರುವುದಾದರೆ—?

### ಯುದ್ಧದ ಚಿಹ್ನೆಯು ಕಂಡುಬಂದಿದೆ.

ಒಂದು ಕಡೆಯಿಂದ ಲೀಗ್ ಒಫ್ ನೇಶನ್ಸು ಶಸ್ತ್ರತ್ಯಾಗಕ್ಕಾಗಿ ಯತ್ನಿಸುತ್ತದೆ. ಒಂದು ಕಡೆಯಿಂದ ಶಸ್ತ್ರಗಳ ಸಿದ್ಧತೆಯಾಗುತ್ತಿದೆ. ಬ್ರಿಟನಿಗೆ ಯುದ್ಧದ ಚಿಹ್ನೆಯು ಕಂಡುಬಂದಿದೆ. ಕಳೆದ ವರ್ಷ ಪ್ರೊಡಕ್ಷನ್ನಿಂದು ನಾನಾ ರೀತಿಯ ಶಸ್ತ್ರಗಳ ಉಪಯೋಗವನ್ನು ನಾಗರಿಕರಿಲ್ಲರೂ ಕಲಿಯುತ್ತಿದ್ದಾರೆ. ವಿಷಗಾಳಿಯುಪಯೋಗದಿಂದ ಬ್ರಿಟನಿಗೆ ಬಾಧಕವಿದೆಯೆಂದು ತಿಳಿಯಲಾಗಿದೆ. ಈಗ ಅಂತಹ ವಿಷಗಾಳಿಯನ್ನು ತಮ್ಮ ಮೇಲೆ ಹರಡಿಸಿದರೆ ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹೆಂಡಾಯರ್ ಟೆರಿಟೋರಿಯಲ್ ಎಸೋಸಿಯೇಶನ್ ಎಂಬುದು ಸ್ಥಾಪಿತವಾಗಿ ಅದರ ೫,೦೦೦ ಮೆಂಬರರು ರಕ್ಷಣಾ ಕವಚಗಳನ್ನು ಧರಿಸುವ ಕ್ರಮನಿಯಮಗಳನ್ನು ಕಲಿತಿದ್ದಾರೆ. ೫,೦೦೦ ಮೆಂಬರುಗಳಲ್ಲಿ ೬೦೦೦ ಮಂದಿಗಳು ಈ ಕವಚದ ಉಪಯೋಗದಲ್ಲಿ ಸಂಪೂರ್ಣ ಮಾಹಿತಿಯನ್ನುಳ್ಳವರಾಗಿ ತಂತಮ್ಮ ವಠಾರಗಳಲ್ಲಿರುವ ಇನ್ನಿತರರಿಗೆ ಅದರ ಕುರಿತಾದ ವಿದ್ಯೆಯನ್ನು ಕಲಿಸುತ್ತಿರುವರು. ಮೇಜರ್ ಜನರಲ್ ಸರ್ ಪರ್ಸಿ ವಿಲ್ಸನ್ ಎಂಬ ಅದರ ಸೆಕ್ರಟರಿಯವರನ್ನು ಸಂದರ್ಶಿಸಿ ಅವರ ಸಂಘವು ಅಂತಹ ಭಯಭೀತಿಯಿಂದ ಈಗಲೇ ರಕ್ಷಣೋಪಾಯಗಳನ್ನು ಯೋಚಿಸುತ್ತಿರುವುದು ನಿಜವೋ ಎಂದು ಕೇಳಿದಕ್ಕೆ ಅವರು ಒಪ್ಪಿ, ಎಲ್ಲ ಗುಟ್ಟನ್ನು ಬಯಲುಮಾಡಿರುವರು. ಯುದ್ಧವಾಗದಿರುವುದಿಲ್ಲವೆಂಬುದು ೧೫ ಆಣೆ ಸತ್ಯಸಂಗತಿಯಾಗಿದೆ.

### ಮತ್ತು ಹೇಗಾಯಿತು?

ಲೋರ್ಡ್ ವಿಲ್ಲಿಂಗ್ಡನರು ಇಂಡಿಯದ ಅರಸರು ಹೇಗಾದರು! ಎಂದು ತಿಳಿದು ಮುಂದಿಗೆ ಆಶ್ಚರ್ಯ! ಲೇಡಿ ಇಂಗ್ಲೀಸ್ ಎಂಬವರು "Fore and Aft" ಎಂಬ ಪುಸ್ತಕವನ್ನು ಬರೆದಿರುತ್ತಾರೆ. ಅವರು ವ್ಯಾಸರಾಯ ಲೋರ್ಡ್ ವಿಲ್ಲಿಂಗ್ಡನ್ನರ ವಿಷಯವಾಗಿ ಬರೆದು, ವಿಲ್ಲಿಂಗ್ಡನರು ತನ್ನ ಬಾಲ್ಯದಲ್ಲಾಗಲಿ, ಶಿಕ್ಷಣದಲ್ಲಾಗಲೀ ಹೆಚ್ಚಿನ ಕುಶಲಮತಿಯಾಗಿರಲಿಲ್ಲ. ತಾರುಣ್ಯದಲ್ಲಿ ವಿಲ್ಲಿಂಗ್ಡನರನ್ನು ಫ್ರೀಮೇನ್ ಥೋಮಸ ಎಂದೇ ಸಂಬೋಧಿಸುತ್ತಿದ್ದರೆಂದು ಲೇಡಿಯವರ ಬರೆದಿಟ್ಟ ಮಾತು. ವೈಸರಾಯ ಪದವಿಗೆ ವಿಲ್ಲಿಂಗ್ಡನ್ನರು ಹೇಗೆ ಏರಿದರು? ಇಂದೊಂದು ಆಶ್ಚರ್ಯ!

### ಭೂತ! ಭೂತ!! ಭೂತ!!!

ಚಂದ್‌ಪುರದ ಶಾಲೆಯ ಹೆಡ್ ಮಾಸ್ತರ್ ಒಬ್ಬರ ಸ್ವಾಧೀನದಲ್ಲಿ ಶ್ರೀ. ಕೃಷ್ಣದಾಸ್ ಎಂಬವರಿಂದ ವಿರಚಿತವಾದ "Six months with Mahatmaji" ಎಂಬ ಪುಸ್ತಕವೂ, ಶ್ರೀಮತಿ ಸರೋಜಿನಿ ದೇವಿಯವರ ಚಿತ್ರವೂ ಮಹಾತ್ಮಾಜೀಯವರ ಆತ್ಮ ಚರಿತ್ರ ಪುಸ್ತಕವೂ ಇದ್ದುದಕ್ಕಾಗಿ ಕೈದುಮಾಡಲ್ಪಟ್ಟರು. ಸಬ್ ಡಿವಿಜನಲ್ ಆಫೀಸರರು ತನಿಖಿ ನಡೆಸಿ, ಆರೋಪಣೆಯು ನಿಜವೆಂದು ಕಂಡು ಬಂದ ಮೇಲೆ, ಒಂದು ಬಲವಾದ ಎಚ್ಚರವನ್ನು ಕೊಟ್ಟು ಶಾಲೆಯ ಹೆಡ್ ಮಾಸ್ತರರನ್ನು ಬಿಡುಗಡೆ ಮಾಡಿದರು!

### ಅಂದಿನ ಆನೆ ಬದುಕಿದೆ?

ಬ್ಯುಡಪೆಸ್ಟ್ ನಗರದಲ್ಲಿ ಪ್ರಾನ್ಸಿನ ಲೋಕಪ್ರಸಿದ್ಧ ಚಕ್ರವರ್ತಿಯಾದ ನೆಪೋಲಿಯನ್ ಕಾಲದ ಆನೆಯೊಂದಿರುವುದು. ಇದು ಸಯ್ಯಾಂ ದೇಶದಲ್ಲಿ ಹುಟ್ಟಿ, ನೆಪೋಲಿಯನ್ನನು ಈಜಿಪ್ಟಿನ ಮೇಲೆ ದಂಡೆತ್ತಿ ಬಂದಿದ್ದಾಗ ಅವನಿಗೆ ಬಹುಮಾನವಾಗಿ ಕೊಡಲ್ಪಟ್ಟಿತು. ಹಿಂತಿರುಗಿ ಹೋಗುವಾಗ ನೆಪೋಲಿಯನ್ನನು ಅದನ್ನು ತನ್ನೊಡನೆ ಪೆರಿಸ್ ನಗರಕ್ಕೆ ಕರೆದುಕೊಂಡು ಹೋದನು. ಆದರೆ ಆ ಆನೆಯ ತುಂಟುತನವು ನೆಪೋಲಿಯನನಿಗೆ ಬೇಸರ ಹುಟ್ಟಿಸಿದುದರಿಂದ ಅವನು ಅದನ್ನು ತನ್ನ ಮಾವನಾದ ಆಸ್ಟ್ರಿಯಾ ದೇಶದ ಚಕ್ರವರ್ತಿಗೆ ಬಹುಮಾನರೂಪವಾಗಿ ಕೊಟ್ಟನು. ಅನಂತರ ಅದು 'ವಿಯನ್ನಾ' ನಗರದ ಮೃಗಾಲಯದಲ್ಲಿಡಲ್ಪಟ್ಟಿತು. ಅಲ್ಲಿಯೂ, ಅದರ ತುಂಟತನವು ಹೆಚ್ಚಾಗಿ ಬ್ಯುಡ್‌ಪೆಸ್ಟ್ ನಗರಕ್ಕೆ ಸಾಗಿಸಲ್ಪಟ್ಟಿತು. ಅಂದಿನಿಂದಲೂ ಅದು ಅಲ್ಲಿಯೇ ಇರುವುದು. ಅದಕ್ಕೆ ಸಾಧಾರಣ ೧೫೦ ವರ್ಷಗಳಾಗಿರುವುವೆಂಬು ನಿರ್ಧರಿಸಲ್ಪಟ್ಟಿರುವುದು.

### ವಿಚಿತ್ರ ಬುಗ್ಗೆ!

ಟರ್ಕಿದೇಶದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಒಂದು ಕೃತಕ ಬುಗ್ಗೆ ಇರುವುದು. ಇದರ ತಳ ಭಾಗವು ಭೂಮಿಯಿಂದ ಮೇಲೆ ೬ ಅಡಿ ಎತ್ತರದಲ್ಲಿದ್ದು ಒಂದು ಕಲ್ಲಿನ ಕಂಭದೊಳಗೆ ಅಡಗಿರುವ ಕೊಳವೆಯಿಂದ ನೀರು ಬುಗ್ಗೆಯೊಳಕ್ಕೆ ಬರುವುದು. ಈ ಬುಗ್ಗೆಯ ೬ ಮುಖಗಳಿಂದ ನೀರು ಸರ್ವದಾ ಹೊರಕ್ಕೆ ಉಕ್ಕುತ್ತಲೇ ಇರುವುದು. ಇವುಗಳಲ್ಲಿ ಯಾವುದಾದರೊಂದು ಮುಖದಲ್ಲಿ ನೀರು ಉಕ್ಕದೆ ನಿಂತು ಹೋಗುವುದನ್ನು ಮೊದಲು ನೋಡಿದವರು ಪುರುಷರಾಗಿದ್ದರೆ ಕೂಡಲೆ ಸ್ತ್ರೀಯಾಗುವರೆಂದೂ, ಸ್ತ್ರೀಯಾಗಿದ್ದರೆ ಪುರುಷರಾಗುವರೆಂದೂ ಒಂದು ದಂತ ಕಥೆಯು ಬಹುಕಾಲದಿಂದಲೂ ಜನರಲ್ಲಿ ಪ್ರಚಾರವಿರುವುದು. ಅಮೇರಿಕಾ ದೇಶದ ಕೆಲವು ಕೋಟ್ಯಾಧೀಶ್ವರರು ಎಷ್ಟು ದ್ರವ್ಯವನ್ನಾದರೂ ಕೊಟ್ಟು ಈ ಬುಗ್ಗೆಯನ್ನು ಕೊಂಡುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವರು. ಆದರೆ ಅಧಿಕಾರಿಗಳಿಗೆ ಅದನ್ನು ಮಾರುವುದಕ್ಕೆ ಇಷ್ಟವಿಲ್ಲವಂತೆ!

### ಮದುವೆಯಲ್ಲಿ ಮರಣ.

ದೇಹಲಿಗೆ ೧೨ ಮೈಲು ದೂರದಲ್ಲಿ ಪಾಲಂ ಎಂಬ ಗ್ರಾಮದಲ್ಲಿಯ ಒಬ್ಬ ಶ್ರೀಮಂತನ ಮನೆಯಲ್ಲಿ ಮದುವೆ ನಡೆಯುತ್ತಿದ್ದಾಗ ಗೋಡೆಯು ಅಕಸ್ಮಾತ್ತಾಗಿ ಬಿದ್ದು ೧೨ ಜನರು ಮರಣ ಹೊಂದಿದರು. ಇವರಲ್ಲದೆ ೧೦ ಮಂದಿ ಸ್ತ್ರೀಯರೂ ಒಂದು ಮುದುಕಿ, ೧ ಮಗುವೂ ಮಣ್ಣಿನೊಳಗೆ ಸಿಕ್ಕಿಬಿದ್ದಿದ್ದರು. ಅವರಲ್ಲಿ ೯ ಮಂದಿಗೆ ಬಲವಾದ ಗಾಯಗಳಾಗಿವೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಮದುವೆಯಾಗದೆಯೇ ಉತ್ತರಕ್ರಿಯೆಗಳು ಆರಂಭಿಸಲ್ಪಟ್ಟವು.

### ಕೆಮ್ಮಿದಾಗ ಗುಂಡು ಹೊರಗೆ ಬಂದಿತು!

ಆಸ್ಟ್ರಿಯಾ ದೇಶೀಯನೊಬ್ಬನಿಗೆ ಕಳೆದ ಮಹಾಯುದ್ಧದಲ್ಲಿ ಗುಂಡಿನ ಏಟು ಬಿದ್ದಿತು. ಅಂದಿನಿಂದ ಆತನು ಆರೋಗ್ಯಸ್ಥಿತಿಯೆಂಬುದನ್ನು ಅರಿತಿರಲಿಲ್ಲ. ಈ ತಿಂಗಳ ಮೊದಲನೇ ದಿನ ಅವನು ಹೆಚ್ಚಾಗಿ ಕೆಮ್ಮಲಾರಂಭಿಸಿದನು. ಆ ಕೆಮ್ಮಿನಲ್ಲಿ ಒಂದು ಸಾರಿ ಬಾಯಿಯೊಳಗಿಂದ ೧ ಗುಂಡು ಹೊರಗೆ ಬಂದಿತು. ಈಗ ಗುಣ ಹೊಂದುತ್ತಿರುವನು.


## ಕೆನರಾ ಬೇಂಕ್ ಲಿಮಿಟೆಡ್.

**ನೋಟೀಸು.**

1913ನೇ ಇಸವಿಯ ನಂಬ್ರ 7ನೇ ಇಂಡಿಯನ್ ಕಂಪೆನೀಸ್ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಈ ಬೇಂಕಿನ ಶೇರ್ ರೆಜಿಸ್ಟರ ಮತ್ತು ಮೆಂಬರರ ರೆಜಿಸ್ಟರ್ ಇವು 1933ನೇ ಇಸವಿ ಫೇಬ್ರುವರಿ ತಾ. 6ನೇ ಸೋಮವಾರದಿಂದ 1933ನೇ ಇಸವಿ ಫೇಬ್ರುವರಿ ತಾ. 25ನೇ ಶನಿವಾರದ ವರೆಗೆ (ಉಭಯ ದಿವಸಗಳು ಕೂಡಿ) ಮುಚ್ಚಲ್ಪಡುವವು.

(ಅಪ್ಪಣೆ ಮೇರೆಗೆ)

ಬೇಂಕಿನ ಆಫೀಸು, ಮಂಗಳೂರು, ೨೪-೧-೧೯೩೩. — ಶಾಂಗಾಳ ಸರ್ವೋತ್ತಮ ನಾಯಕ್, ಆಕ್ಟಿಂಗ್ ಸೆಕ್ರೆಟರಿ ಮತ್ತು ಟ್ರೆಜರರ್.

ರಥೋತ್ಸವ ಬಂತೆನ್ನುವಾಗಲೇ ಈ ಉತ್ಸವ!

ದರಗಳಲ್ಲಿ — ತರಗತಿಯಲ್ಲಿ — ರಚನೆಯಲ್ಲಿ

ಎಲ್ಲವೂ ಎಲ್ಲರಿಗೂ ಮಹೋತ್ಸವವೆನಿಸುವಂತೆ,

ನೂತನ ಸೃಷ್ಟಿಯಾಗಿಯೇ — ನೂತನ ರೂಪದಲ್ಲೇ!!

ಹೊಸವರ್ಷದಲ್ಲಿ ಶುಭವುಂಟಾಗ ಬಯಸುವವರು ಶುಭೋದಯದ ಚಿಹ್ನೆಯಾಗಿ ಹೊಸ ಖಾದಿಯನ್ನುಡಲೇ ಬೇಕು.

— ಹಾಗೆಂದೇ —

ಎಲ್ಲರ ಎಲ್ಲ ಬಗೆಯ ಫ್ಯಾಶನುಗಳಿಗೊಪ್ಪುವಂತೆ, ತೀರ ಕಡಿಮೆ ದರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಈಗಾಗಲೇ ತರಿಸಲಾಗಿದೆ.

ಶೀಟ್ ಖಾದಿಯ ಕೆಲವು ದರಗಳು:—

45"—6½ ಆಣೆ; 50"—7½ ಆಣೆ; 54"—8½ ಆಣೆ.

27" ಮತ್ತು 36" ಅಗಲದ ಖಾದಿಗೆ ಮತ್ತೂ ಕಡಿಮೆ ಬೆಲೆ!!!

ವಿಶೇಷ ಸೂಚನೆಗಳು:—ಹೊಸ ಖಾದಿಯನ್ನು ಮಾತ್ರ ನಾವು ವಿಕ್ರಯಿಸುತ್ತಿರುವೆವೆಂದು ನಾವು ಹೊಸದಾಗಿ ತಿಳಿಸಬೇಕಾಗಿಲ್ಲದ ಕಾರಣ ಹಳೇ ಖಾದಿಯನ್ನು ಇತರ ಕಡೆಗಳಲ್ಲಿ ಕೊಂಡುಕೊಂಡು ಮೋಸಹೋಗದಿರೆಂದು ಸೂಚನೆ.

ಮಂಗಳೂರು ಸ್ವದೇಶೀ ಸ್ಟೋರ್ಸ್, ರಥಬೀದಿ, ಮಂಗಳೂರು.

[illegible] ಅಂಗೀರಸ ಸಂವತ್ಸರದ ಪುಷ್ಯ ಶು ೩ ಶನಿವಾರದಿಂದ ಅಂಗೀರಸ ಸಂವತ್ಸರದ ಮಾಘ ಶು ೧ ರ ಶುಕ್ರವಾರದ ವರೆಗಿನ ಪಂಚಾಂಗ (ಸ್ಟಾಂಡರ್ಡ್ ಟೈಮ್ [illegible]).

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ ಉ. | ಅಸ್ತ |
|---|---|---|---|---|---|---|---|---|
| 28 | ಶನಿ | [illegible] | [illegible] | [illegible] | [illegible] | [illegible] | 6 59 | 6.28 |
| 29 | ರವಿ | [illegible] | [illegible] | ಪೂ. ಭಾ. | [illegible] | [illegible] | 6 59 | 6.28 |
| 30 | ಸೋಮ | [illegible] | [illegible] | ಉ. ಭಾ. | [illegible] | [illegible] | 6 59 | 6 29 |
| 31 | ಮಂಗಳ | [illegible] | [illegible] | ರೇವತೀ | [illegible] | [illegible] | 6 59 | 6.30 |
| 1 | ಬುಧ | [illegible] | [illegible] | ಅಶ್ವಿನೀ | [illegible] | [illegible] | 6 59 | 6.30 |
| 2 | ಗುರು | [illegible] | [illegible] | ಭರಣೀ | [illegible] | [illegible] | 6 59 | 6.30 |
| 3 | ಶುಕ್ರ | [illegible] | [illegible] | ಭರಣೀ | [illegible] | [illegible] | 6 59 | 6.31 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) | | Rainfall ಮಳೆ | |
|---|---|---|---|---|
| | Maximum ಅಧಿಕವಾದ | Minimum ಕಡಿಮೆ | ದಿನದ ಮಳೆ | ಒಟ್ಟು ಮಳೆ |
| 19 | 90— 6 | 68— 0 | — | — |
| 20 | 88— 9 | 67— 9 | — | — |
| 21 | 85— 6 | 69— 9 | — | — |
| 22 | 85— 0 | 71— 9 | — | — |
| 23 | 84— 7 | 71— 9 | — | — |
| 24 | 84— 7 | 69 · 9 | — | — |
| 25 | 80— 9 | 68— 9 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ | ವರೆಗೆ |
|---|---|---|
| | ರೂ. ಆ. | ರೂ. ಆ. |
| ಹೊಸ ಮಸೂರಿ | 4— 0 | 4—10 |
| ಹೊಸ ರಾಶಿ ಅಕ್ಕಿ | 3— 8 | [illegible]— 0 |
| ಮಸ್ಸೂರಿ | 4— 0 | [illegible]— 4 |
| ಗುಡ್ಡ | 4— 0 | 4— 2 |
| ಸುಗ | 3—10 | 4— 0 |
| ಊರ ಅವಲ್ ಬೆಲ್ಲಗೆ | 4—10 | 6— 4 |
| ರಂಗೂನು ಬೆಳ್ತಿಗೆ ಗೋಣಿ ಗಳ್ಳಿ | 6— 8 | 7— |
| ಎಲ್ಲೂರು ಬೆಳ್ತಿಗೆ ಮುಡಿ ಗಳ್ಳಿ | 4— 8 | 4—10 |
| ಗೋಧಿ ಗೋಣಿ ಗಳ್ಳಿ | 10— 8 | 14— 8 |
| ತೊಗರಿ ಗೋಣಿ ಗಳ್ಳಿ | 9— 8 | 12— 0 |
| ಹುರುಳಿ ಗೋಣಿ ಗಳ್ಳಿ | 6— | 6— 4 |
| ಕಡಲೆ ಗೋಣಿ ಗಳ್ಳಿ | 8— 8 | 10 — |
| ಕೊಗಂಬೀಜ ಗೋಣಿ ಗಳ್ಳಿ | 10— 8 | 20— 0 |
| ಉದ್ದು ಗೋಣಿ ಗಳ್ಳಿ | 9— 8 | 10 [illegible] |
| ಹೆಸರು ಗೋಣಿ ಗಳ್ಳಿ | 8— 0 | 9 0 |
| ಊರುಬೆಲ್ಲ ಖಂಡಿ ಗಳ್ಳಿ | 31— 4 | 32 8 |
| ಉಪ್ಪು ಗೋಣಿ ಗಳ್ಳಿ | 4—14 | 6— 4 |
| ಕೊಬ್ರಿ ಖಂಡಿ ಗಳ್ಳಿ | 65— | 72— |
| ಕೊಬ್ರಿ ಹಿಂಡಿ ಖಂಡಿ ಗಳ್ಳಿ | 24— 8 | 30— |
| ಎಳ್ಳಿಂಡಿ ಖಂಡಿ ಗಳ್ಳಿ | 26— 4 | 27— 8 |
| ಕೊಬ್ರಿ ಎಣ್ಣೆ ಮುಡಿ ಗಳ್ಳಿ | 4—12 | 6—12 |
| ಎಳ್ಳೆಣ್ಣೆ ಮುಡಿ ಗಳ್ಳಿ | 6—12 | 7— 0 |
| [illegible] ಪಟ್ಟಿಗೆ ಗಳ್ಳಿ | 4— 7 | 8—12 |
| [illegible] ಸಕ್ಕರೆ [illegible] ಗಳ್ಳಿ | 3—16 | 4— 0 |
| [illegible] | 5— [illegible] | 5—12 |
| [illegible] ಮುಡಿ ಗಳ್ಳಿ | 4—12 | 5— 0 |
| [illegible] ಕಾಫಿ ಖಂಡಿ ಗಳ್ಳಿ | 275— 0 | 300— |
| [illegible] ಖಂಡಿ ಗಳ್ಳಿ | 170— 0 | 180— |
| [illegible] ಮುಡಿ ಗಳ್ಳಿ | 27— 0 | 28— |
| [illegible] ಮುಡಿ ಗಳ್ಳಿ | 2— 4 | 2 6 |
| [illegible] ಖಂಡಿ ಗಳ್ಳಿ | 25— 0 | 25— 8 |
| [illegible] ಮುಡಿ ಗಳ್ಳಿ | 9 10 | 10— 0 |
| [illegible] ಮುಡಿ ಗಳ್ಳಿ | 15— 0 | 16—0 |
| [illegible] ಗಳ್ಳಿ | 13— 4 | 13— 8 |
| [illegible] ಮುಡಿ ಗಳ್ಳಿ | 19— 0 | 9— 4 |
| [illegible] ಗಳ್ಳಿ | 9— | 19— 4 |
| [illegible] ಗಳ್ಳಿ | 40— | 45— |
| [illegible] ಕಾಫಿ ಖಂಡಿ ಗಳ್ಳಿ | 320— | 325— |
| ಹಳೆ ಅಡಿಕೆ | 180— | 205— |
| ಹೊಸ ಅಡಿಕೆ | 147— | 145— |


**THE CANARA PUBLIC CONVEYANCE CO., LTD, MANGALORE.**
(ESTABLISHED 1914)

**ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,**

**ಮಂಗಳೂರು.**

**ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.**

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೆಲವು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಯಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Company Ltd., Mangalore*



**Chikmagalur Public Conveyance Motor Service.**

**CHIKMAGALUR.**

**ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,**

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

**ನಿರಾಯಾಸದ ಪ್ರಯಾಣ!** **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

## ಪತ್ರವ್ಯವಹಾರ

(ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು ಸಂ ಸ್ವ)

ಪ್ರಿಯ ಬಾಲಚಂದ್ರಾ,

ತುಳುಪಕ್ಷದ ಚಂದ್ರನೋಪಾದಿಯಲ್ಲಿ ಬೆಳೆಯು ಬೇಕಾಗಿರುವ ನೀನು ನಿನ್ನ ಬಾಲ್ಯಾವಸ್ಥೆಯಲ್ಲಿಯೇ ನಿನಗೆ ಬರುವ ಲೇಖನಗಳನ್ನು ಅವರಿಂದ ಸ್ವೀಕರಿಸಿ ಉಲ್ಲಾಸಭಾವವನ್ನು ತೋರಿಸುವುದು ಯೋಗ್ಯವಲ್ಲ. ನಿನಗೆ ಕಳುಹಿಸಿಕೊಟ್ಟ ಲೇಖನಗಳನ್ನು ಮೂಲೆಗೊತ್ತಿಟ್ಟು ಬೇರೆ ಪ್ರತಿಯನ್ನು ಕಳುಹಿಸಬೇಕಾಗಿ ಲೇಖಕರಿಗೆ ತಿಳಿಸುವುದೂ ಯೋಗ್ಯವಲ್ಲ ಇರಲಿ.

ನಿನ್ನ ಡಿಶಂಬರ ತಿಂಗಳ ೧೫ನೇ ತಾರೀಕಿನ ೬ನೇ ಸಂಚಿಕೆಯಲ್ಲಿ "ಪುತ್ತೂರು ಬೋರ್ಡು ಶಾಲಾ ಉಪಾಧ್ಯಾಯರ ಪರ್ಯಟನ"ದಲ್ಲಿ ಎಲಿಮೆಂಟರಿ ಶಾಲೆಯಲ್ಲಿರುವ ಸೆಕೆಂಡರಿ ಗ್ರೇಡ್ ಉಪಾಧ್ಯಾಯರ ಆರ್ತನಾದವನ್ನು ಕೇಳಿ ನನಗೆ ತುಂಬಾ ವ್ಯಸನವಾಗಿದೆ ಮಾತ್ರವಲ್ಲ ಬಹಳ ನಾಚಿಕೆಯೂ ಆಗುತ್ತದೆ ಒಂದೇ ಟ್ರೈನಿಂಗ್ ಶಾಲೆಯಲ್ಲಿ ಕಲಿತರೂ ದುರಾವೇಶದಿಂದ ದ್ವೇಷಾರಿತು ತೀಕ್ಷ್ಣ ಬಾಣಗಳಿಂದ ಅಕಾರಣವಾಗಿ ನಮ್ಮನ್ನು ನೋಯಿಸಲು ಪ್ರಯತ್ನಿಸುವುದು ತೀರಾ ಅಸಹ್ಯಕರವು.

ಬಿ. ಎ ಕಲಿತವನಾದರೂ ಒಬ್ಬನಿಗೆ ೨೦ ರೂಪಾಯಿ, ಮತ್ತೊಬ್ಬನಿಗೆ ೩೫ ರೂಪಾಯಿ, ಇನ್ನೊಬ್ಬನಿಗೆ ೬೦ ರೂಪಾಯಿ, ಬೇರೊಬ್ಬನಿಗೆ ೧೫೦ ರೂಪಾಯಿ ಹೀಗೆ ತರತರದ ರೀತಿಯ ಸಂಬಳದಲ್ಲಿ ಕೆಲಸ ಮಾಡುವ ಎಷ್ಟೋ ಜನರನ್ನು ನಾವು ನೋಡುತ್ತೇವೆ ಬಾಲಚಂದ್ರಾ, ಅವರ ಯೋಗ್ಯತೆಯು ಒಂದೇಯಾದರೂ ಏತಕ್ಕಾಗಿ ಈ ರೀತಿಯಲ್ಲಿ ಅವರ ಸಂಬಳದ ವ್ಯತ್ಯಾಸ ಮಾಡುತ್ತಾರೋ ನೀನಾದರೂ ಹೇಳುವೆಯಾ?

ಎಲಿಮೆಂಟರಿ ಶಾಲೆಗಳನ್ನೂ ಸೆಕೆಂಡರಿ ಶಾಲೆಗಳನ್ನೂ ಸಂಯೋಜಿಸಿ ಪ್ರಯೋಜನವಿದೆಯೇ? ಅಲ್ಲಿಯ ವಿದ್ಯಾಭ್ಯಾಸವೇ ಬೇರೆ ಪಾಠ ಪಟ್ಟಿಯಲ್ಲಿಯೂ ತುಂಬಾ ಭೇದವಿದೆ. ಮಾತ್ರವಲ್ಲ ಎಲಿಮೆಂಟರಿ ಶಾಲೆಗಳಲ್ಲಿ ಒಬ್ಬ ಸೆಕೆಂಡರಿ ಗ್ರೇಡಿನ ಉಪಾಧ್ಯಾಯನಿಗಿಂತಲೂ ಹೆಚ್ಚಿಗೆ ಬೇಡ ಹೀಗಿದ್ದರೂ ಈಗ ಕೆಲಸ ಸಿಗುವುದೇ ದುರ್ಲಭವಾಗಿರುವುದರಿಂದ ಕಡಿಮೆ ಸಂಬಳವಾದರೂ ಚಿಂತೆ ಇಲ್ಲವೆಂದು ತಮಗಿಂತಲೂ ಕೆಳಗಿನ ಗ್ರೇಡಿನ ಪೋಸ್ಟಿಗೆ ತಾವು ಸೇರಿ ಬೇರೆಯವರನ್ನು ಏಕೆ ದೂರಬೇಕು? 'ಇರಳು ಕಂಡ ಬಾವಿಯಲ್ಲಿ ಹಗಲು ಬಿದ್ದ' ಹಾಗೆ ಮಾಡಿಕೊಂಡರೆ ಈಗ ಪಶ್ಚಾತ್ತಾಪ ಪಟ್ಟು ಪ್ರಯೋಜನವೇನು? ಎಲ್ಲಿಯೂ ಕೆಲಸ ಸಿಗದೆ ಕೆಲವು ಸಮಯ ಬಿ. ಎ. ಕಲಿತವರು ನಮ್ಮ ಶಾಲೆಗಳಲ್ಲಿ ನಮ್ಮ ಸಂಬಳಕ್ಕೆ ಕೆಲಸಮಾಡುತ್ತಿದ್ದಾರೆ ಇದರಿಂದ ಅವರ ಯೋಗ್ಯತೆ ಏನಾದರೂ ಕಡಿಮೆಯಾಯಿತೇ? ಅಥವಾ ಅವರ ಉತ್ಸಾಹಕ್ಕೆ ಭಂಗವಾಯಿತೇ?

ಬಾಲಚಂದ್ರಾ, ಇನ್ನಾದರೂ ಎಲಿಮೆಂಟರಿ ಶಾಲೆಗಳಲ್ಲಿ ಕೆಲಸ ಮಾಡುವ ನಮ್ಮ ಸೆಕೆಂಡರಿ ಗ್ರೇಡಿನ ಬಂಧುಗಳು ನಾವು ಒಂದೇ ಟ್ರೈನಿಂಗ್ ಶಾಲೆಯಲ್ಲಿ ಕಲಿತ್ತಿದ್ದೆವೆಂಬ ಒಂದೇ ಕಾರಣದಿಂದ ಮಾತ್ಸರ್ಯ ಪಡದೆ ಅವರು ಮಾಡುವ ಕೆಲಸಕ್ಕೂ ನಾವು ಮಾಡುವ ಕೆಲಸಕ್ಕೂ ಅಜಗಜಾಂತರ ವ್ಯತ್ಯಾಸವಿರುವುದೆಂದು ನೆನಪಿನಲ್ಲಿಟ್ಟುಕೊಳ್ಳಲಿ ನಮ್ಮ ಕೆಲಸವು ಅವರ ಕೆಲಸಕ್ಕಿಂತಲೂ ಕಡಿಮೆಯೆಂತಾಗಲಿ ಸುಲಭವೆಂತಾಗಲಿ ಎಂದಿಗೂ ಎಣಿಸದಿರಲಿ.

ಮತ್ತೊ ಒಂದು ಮಾತು, ಪುತ್ತೂರು ಶಾಲಾ ಉಪಾಧ್ಯಾಯರು ಜಿಲ್ಲಾ ಬೋರ್ಡಿನ ಯಾವ ಯಾವ ಶಾಲೆಗಳನ್ನು ಸಂದರ್ಶಿಸಿರುವರಾಗಿ ಹೇಳಬಾರದೇ? ಅವರು ಕೆಲವು ತಾಲೂಕು ಬೋರ್ಡು ಅಥವಾ ಖಾಸಗಿ ಶಾಲೆಗಳನ್ನು ಸಂದರ್ಶಿಸಿದುದು ರಾತ್ರಿಕಾಲದಲ್ಲಿ ಹೀಗಿರುವಾಗ ತಮ್ಮ ಉಪಾಧ್ಯಾಯರ ವಚನಗಳನ್ನೇ ವೇದವಾಕ್ಯಗಳೆಂದು ನಂಬಿ ಸೆಕೆಂಡರಿ ಶಾಲಾ ಉಪಾಧ್ಯಾಯರ ವಿಷಯವಾಗಿ ಏನಾದರೂ ಬರೆಯುವುದು ಯುಕ್ತವೇ?

ಇದನ್ನು ಚರ್ಚೆಗಾಗಿ ನಾನು ಬರೆದಿರುವುದಿಲ್ಲ ಆದುದರಿಂದ ಸುಮ್ಮನೆ ಗುಲ್ಲನ್ನು ಎಬ್ಬಿಸುವುದು ಬೇಡ

ಇತಿ

ಸೆಕೆಂಡರಿ ಸ್ಕೂಲಿನಲ್ಲಿರುವ ಸೆಕೆಂಡರಿ ಗ್ರೇಡಿನ ಉಪಾಧ್ಯಾಯ

---

### ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್

ಈ ರಿಪೋರ್ಟಿನಲ್ಲಿ ರಾಜಕೀಯ ವಿಷಯಗಳನ್ನು ನಿರೂಪಿಸುವುದರಲ್ಲಿ ನಮ್ಮ ಗವರ್ನಮೆಂಟಿನವರು ಪ್ರಜಾಪ್ರತಿನಿಧಿ ಸಭೆಯ ವಿಷಯವನ್ನು ಪ್ರಕಟಿಸಿರುವರು. ೧೮೮೧ನೆಯ ಇಸವಿಯಲ್ಲಿ ಈ ಸಭೆಯು ಪ್ರತಿಷ್ಠಿಸಲ್ಪಟ್ಟಿತು ಆಗ ವರ್ಷಕ್ಕೆ ಒಂದಾವರ್ತಿ ಸಭೆಯ ಮೀಟಿಂಗ್ ನಡೆಯುತ್ತಿತ್ತು ನಮ್ಮ ಮಹಾಪ್ರಭುಗಳವರು ವರ್ಧಂತಿ ಮಹೋತ್ಸವ ಕಾಲದಲ್ಲಿ ಬಜೆಟ್ Session ನವರಾತ್ರಿ ಕಾಲದಲ್ಲಿ ಜನರಲ್ Session ನಡೆಯುವಂತೆ ಏರ್ಪಾಡುಮಾಡಿದರು. ಈ ಏರ್ಪಾಡಿನಿಂದ ಈ ಸಭೆಯ ಕೆಲಸಗಳು ಬಹಳ ಸಮರ್ಪಕವಾಗಿ ನಡೆಯುವುದಕ್ಕೆ ಅವಕಾಶವಾಯಿತು. ಅನೇಕ ಮುಂಬರುಗಳು ಬಹಳ ಶ್ರದ್ಧೆಯಿಂದ ಸಂಪದಭಿವೃದ್ಧಿಗೆ ಸಾಧಕವಾದ ವಿಷಯಗಳನ್ನು ಸಾವಧಾನವಾಗಿ ತಿಳಿದುಕೊಂಡು ಬಂದು ಸರಕಾರಕ್ಕೆ ವಿಜ್ಞಾಪನೆ ಮಾಡುತ್ತಲಿದ್ದಾರೆ ಸಾಂಘಿಕ ಪ್ರವರ್ತನವು ಹೆಚ್ಚಿ, ಸರ್ವತೋಮುಖ ರಾಜ್ಯಾಭ್ಯುದಯ, ಎಂಬ ನಮ್ಮ ಮಹಾಪ್ರಭುಗಳವರ ಬಿರುದು ಫಲಕಾರಿಯಾಗುವುದಕ್ಕೆ ಸಾಧಕವಾದ ಅನೇಕ ಸಲಹೆಗಳನ್ನು ಕೊಡುತ್ತಲಿದ್ದಾರೆ ಈ ಸಂಸ್ಥಾನವು ಮಾದರಿ ಸಂಸ್ಥಾನವಾಗುವುದಕ್ಕೆ ಅನುಕೂಲವಾದ ಅನೇಕ ಏರ್ಪಾಡುಗಳನ್ನು ಸೂಚಿಸುತ್ತಲಿದ್ದಾರೆ. ಪ್ರಜೆಗಳ ಸಂಪತ್ತೇ, ಪ್ರಭುಗಳ ಸಂಪತ್ತು ಪ್ರಭುಗಳಿಗೆ ಸದ್ಗತಿಯಾಗಬೇಕಾದರೆ ಪ್ರಭುಗಳು ಮತ್ತು ಅವರ ಅಧಿಕಾರಿಗಳು, ಪ್ರಜೆಗಳನ್ನು ಶ್ರೀರಾಮನೇ ಮೊದಲಾದ ರಾಜರ್ಷಿಗಳಂತೆ ಪುತ್ರ ನಿರ್ವಿಶೇಷರಾಗಿ ರಕ್ಷಿಸಬೇಕೆಂದು ವಿಜ್ಞಾಪಿಸುವುದರಲ್ಲಿ ವಿಶೇಷ ರಾಜ ಭಕ್ತಿಯನ್ನು, ವಿವೇಕವನ್ನು, ವಿನಯವನ್ನು, ಭಯಭಕ್ತಿಯಿಂದ ತೋರಿಸುತ್ತಲಿದ್ದಾರೆ ನಮ್ಮ ಮಹಾಪ್ರಭುಗಳವರು ಮತ್ತು ದಿವಾನರೇ ಮೊದಲಾದ ಅವರ ಅಧಿಕಾರಿಗಳು ಈ ಸಲಹೆಗಳಲ್ಲಿ ಸಾವಿರದಲ್ಲಿ ಒಂದು ಪಾಲನ್ನು ನಡೆಸಿದಾಗ್ಯೂ ದೇವರ ಪ್ರೀತಿಗೆ ಪಾತ್ರರಾಗಿ ಜನಕಾದಿಗಳಂತೆ ಆಚಂದ್ರಾರ್ಕಸ್ಥಾಯಿಯಾದ ಕೀರ್ತಿಯನ್ನು ಹೊಂದುವರು ಇಂತಹ ಕೀರ್ತಿಯು ಬರಬೇಕಾದರೆ ಅಧಿಕಾರವನ್ನು ಚಲಾಯಿಸ ತಕ್ಕವರಿಗೆ, ಮನೋವಾಕ್ಕರ್ಮಗಳ ಪರಿಶುದ್ಧತೆಯಿರಬೇಕು ಭೇದಭಾವಗಳು, ಇರಬಾರದು ಗುಣೈಕ ಪಕ್ಷಪಾತಿತೆಯು ಇರಬೇಕು ಇಂದ್ರಿಯ ಪರವಶತೆಯು ಇರಬಾರದು ಕಾಮಕ್ರೋಧಾದಿಗಳಿಗೆ ಅಧೀನರಾಗಬಾರದು ಹೊನ್ನು, ಹೆಣ್ಣು, ಮಣ್ಣು ಅಧಿಕಾರ ಮೊದಲಾದುವುಗಳ ಮೇಲೆ ದುರಾಶೆಯು ಇರಬಾರದು ಬುದ್ಧನೇ ಮೊದಲಾದ ಅವತಾರ ಪುರುಷರಂತೆಯೂ ನಸರ್‌ದೀನ್ ಮಹಮ್ಮದನೇ ಮೊದಲಾದ ಮಹಾತ್ಮರಂತೆಯೂ ಇರಬೇಕು ದೈವ ಯೋಗದಿಂದಲೂ, ಈ ಸಂಸ್ಥಾನದ ಸತ್ಪುರುಷರ ಪುಣ್ಯಪರಿಪಾಕದಿಂದಲೂ, ನಮ್ಮ ಮಹಾಪ್ರಭುಗಳವರು ಈ ಗುಣಾತಿಶಯಗಳನ್ನೆಲ್ಲ ಹೊಂದಿ ನಿಸ್ಪೃಹತೆಯಿಂದ ಪ್ರಜಾರಂಜನೆಯನ್ನು ಮಾಡುವುದರಲ್ಲಿ ಆಸಕ್ತರಾಗಿರುವರು ಶೀಘ್ರದಲ್ಲಿಯೇ ಈ ಪುಣ್ಯ ಭೂಮಿಯಲ್ಲಿ ನಿರ್ದುಷ್ಟವಾದ ಧರ್ಮಯುಗವು ಆವಿರ್ಭವಿಸುವುದೆಂದು ನನಗೆ ತೋರುತ್ತದೆ ದೇವರು ಅನುಗ್ರಹಿಸಲೆಂದು ನಾನು ಕೋರುತ್ತೇನೆ

ಎಂ ವೆಂಕಟಕೃಷ್ಣಯ್ಯ.

---

### ನೋಟಿಸು

**ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

ಒ ಪಿ ನಂಬ್ರ 9/1933

ಸುಶೀಲಾ ಯಾನೆ ಇಂದಿರಾ ಬಬ್ಬ (ಪ್ರಾಪ್ತವಯಸ್ಕಳು) ಗಾರ್ಡಿಯನ್ ತಾಯಿ ಎಚ್ ಯಮುನಾ ಯಾನೆ ಅಂಬಾ ಬಬ್ಬ— ಅರ್ಜಿದಾರಳು

ರೆಂಜಾಳ ಹಂ ಶೆಟ್ಟಿ—ಎದ್ರಿ,

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವದೇನಂದರೆ—

ಕೊಡಗು ಜಿಲ್ಲಾ ಮಡಿಕೇರಿಯಲ್ಲಿದ್ದು ಹಾಲಿ ಮೃತವಾದ ರೆಂಜಾಳ ಅಣ್ಣಪಯ್ಯ ಶೆಟ್ಟಿರಿಗೆ ಬರಬೇಕಾದ ಲೈಫ್ ಇನ್ಸೂರೆನ್ಸಿನ ಹಣ ರೂಪಾಯಿ 1036 ವಸೂಲು ಮಾಡುವರೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿದಾರಳ ಕಡೆಯಿಂದ ಸದರಿ ನಂಬರಿನಲ್ಲಿ ಅರ್ಜಿ ಕೊಟ್ಟಿರುವುದರಿಂದ ಈ ವಿಷಯದಲ್ಲಿ ಆಕ್ಷೇಪ ಉಳ್ಳಂತವರು 1933ನೇ ಫೆಬ್ರವರಿ ತಾರೀಕು 16ರ ಒಳಗೆ ಖುದ್ದಾನಿಂದಾಗಲೀ ವಕೀಲರ ದ್ವಾರಾಗಲೀ ಸದರಿ ಕೋರ್ಟಿನಲ್ಲಿ ಹಾಜರಾಗಿ ಅವರವರಿಗೆ ಇರುವ ಆಕ್ಷೇಪಣೆಗಳನ್ನು ತಿಳಿಯ ಪಡಿಸಿ ರುಜುಮಾಡಿಕೊಳ್ಳಬೇಕು

ಪುತ್ತೂರು } H. Ganapathi Rao,
೨೨—೧—೩೩ } ಅರ್ಜಿದಾರಳ ಕಡೆ ವಕೀಲ್

---

### ನೋಟೀಸು.

ಕಾಸರಗೋಡು ತಾಲೂಕು ಪೆರ್ಡಾಲ ಗ್ರಾಮದ ಪಳ್ಳತ್ತಡ್ಕದಲ್ಲಿರುವ ಯೇಳ್ಕಾನ ಮಹಾಲಿಂಗ ಭಟ್ರ ಮಗಳು ವ ಪಳ್ಳಂಜೆ ನಾರಾಯಣ ಭಟ್ಟರ ಹೆಂಡತಿ ದೇವಕಿ ಹೆಂಗಸು ಈ ಮೂಲಕ ತಿಳಿಸುವುದೇನೆಂದರೆ:—

ಸದರಿ ಪೆರ್ಡಾಲ ಗ್ರಾಮದ ಪಳ್ಳತ್ತಡ್ಕ ಶಂಭಟ್ಟರ ಮಗ ಕೇಶವ ಭಟ್ರು ನನ್ನ ಗಂಡನಿಂದ ಒಂದು ಬಿಳಿ ಪಾವತಿ ರಶೀದಿ ಮಾಡಿಸಿ, ಹಣವೂ ಕೊಡದೆ ಅಷ್ಟರಿಂಗೆ ತಾ 14—1—33ನೇ ಶನಿವಾರ ಸಾಯಂಕಾಲ 5 ಗಂಟೆ ಸಮಯ ಹಣ ಕೊಡುತ್ತೇನೆ ಎಂತ ಸದರಿ ಕೇಶವ ಭಟ್ಟರು ನನ್ನ ಗಂಡನನ್ನು ಪುಸಲಾಯಿಸಿ ಹೋಗಿರುತ್ತಾರೆ ಈ ವರೆಗೂ ಮನೆಗೆ ಬಾರದಿರುವ ಕಾರಣ ಸದರಿ ಕೇಶವ ಭಟ್ಟರು ನನ್ನ ಗಂಡನನ್ನು ಮರೆಪಡಿಸಿ ಅವರಿಂದ ಇನ್ನು ಹೆಚ್ಚೆಟ್ಟು ವಗೈರೆ ತೆಗೆದು ರಿಕಾರ್ಡು ಮಾಡಿ ತೊಂದ್ರೆಗೆ ಆಸ್ಪದ ಕೊಟ್ಟಿರಬಹುದಾಗಿ ನಾನು ತಿಳಿಯುತ್ತೇನೆ. ಆದ್ದರಿಂದ ನನ್ನ ಗಂಡನನ್ನು ಯಾರಾದರು ತಲಾಸಿ ಮಾಡಿಕೊಟ್ಟಲ್ಲಿ ನನ್ನ ಶಕ್ತಿಗೆ ಮೀರಿ ರೂಪಾಯಿ 10 ಬಹುಮಾನಕೊಡುತ್ತೇನೆ. ಮತ್ತು ನನ್ನ ಗಂಡನಿಂದ ಪುಸಲಾಯಿಸಿ ಮಾಡಿಸಿದ ಯಾವ ತರದ ರಿಕಾರ್ಡು ದಸ್ತಾವೇಜು ನನ್ನ ಪ್ರಾಪ್ಯದ ಹಕ್ಕುಗಳಿಗೆ ಬಾಧಿಸುವದಲ್ಲ ಶಿಂಧು ವ ಮುಂಜೂರು ಆಗತಕ್ಕದ್ದಲ್ಲ ಎಂತ ಸಹಾ ಈ ಮೂಲಕ ತಿಳಿಸಿರುತ್ತೇನೆ

ಪೆರ್ಡಾಲ } ದೇವಕಿ ರುಜು.
23—1 1933 }

---

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

R O P 5/1933

ಮಹಾಬಲ ಹೆಗಡೆ ಕೂಡಾ—ಅರ್ಜಿದಾರರು

ಮತ್ತು

ಚಂದಯ್ಯ ಹೆಗಡೆ—ಎದ್ರಿ

ಇವರೊಳಗೆ

ಅರ್ಜಿದಾರರ ತಾಯಿ, ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಕಟ್ಟೆಬೆಟ್ಟು ಹೂವಮ್ಮ ಹೆಗಡ್ತಿ ಮಗಳು ಇತ್ತಲಾಗಿ ಮೃತಪಟ್ಟ ಯಾಗಮ್ಮ ಹೆಗಡ್ತಿ ಎಂಬವಳಿಗೆ ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಹೊನ್ನಮ್ಮ ಹೆಗಡ್ತಿ ಮಗಳು ಮುತ್ತಕ್ಕ ಹೆಗಡ್ತಿ ಎಂಬವಳು ಕಳೆದ ತಾರೀಕು 4-1-1930ರಲ್ಲಿ ರೂಪಾಯಿ 164-4-0ಕ್ಕೆ ಬರಕೊಟ್ಟ ಪ್ರೊಮಿಸರಿ ನೋಟಿನ ಪ್ರಕಾರ ಬಹಾ ಅಸಲು ಬಡ್ಡಿ ಐವೇಜಿನ ವಸೂಲಿ ಕುರಿತು ಅಗತ್ಯವಿರುವ ವಾರೀಸ್ ಸರ್ಟಿಫಿಕೇಟು ತಮಗೆ ಸಿಕ್ಕಬೇಕಾಗಿ ಅಪೇಕ್ಷಿಸಿ ಸದರಿ ಯಾಗಮ್ಮ ಹೆಗಡ್ತಿ ಮಕ್ಕಳಾದ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಸದರಿ ಅರ್ಜಿಯನ್ನು ಇದೇ ಬರುವ ತಾರೀಕು 21-2-1933ಕ್ಕೆ ತನಿಕೆ ಒಗ್ಗೆ ಇಡೋಣಾಗಿಯದೆ—ಎಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗುತ್ತದೆ ಈ ಕುರಿತು ಆಕ್ಷೇಪವುಳ್ಳವರು ಸದರಿ ತಾರೀಕಿನ ಒಳಗಾಗಿ ಸದರಿ ಕೋರ್ಟಿಗೆ ಅವರ ಆಕ್ಷೇಪಗಳನ್ನು ದ್ಯಾಹೀರು ಮಾಡಿಕೊಳ್ಳಬಹುದು

ಕಾರ್ಕಳ, } K Venkatesha Pai,
೧೯—೧—೩೩ } ಅರ್ಜಿದಾರರ ಕಡೆ ವಕೀಲ್

---


# WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co. Ltd.
64, 3rd Cross Road, Srirampur Extn.
Malleswaram Post, BANGALORE.

OR

*The Managing Agents,*
The S. I. G. A. Co Ltd.
55, Poonamallee High Road, Kilpauk, MADRAS.

ನಾಳೆ— ಈ ದಿನ—
ನಿಮಗೆ ಬೇಕಾದುದು!

## ರಬ್ಬರ್ ಮೊಹರುಗಳು

ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿಶ್ಚಯ ತಾರೀಕನ್ನು ಬದಲಾಯಿಸ ಬಹುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳೆ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ

ವಿ. ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರಕ್ ಕೊಡುವೆವು

**ಹೆಡ್ ಆಫೀಸು**—

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No 2 ಬಲ್ಮಠ ರಸ್ತೆ, ಮಂಗಳೂರು,
ದ. ಕನ್ನಡ



# 1933.

1933ನೇ ಇಸವಿಯ

## ಸುಂದರವಾದ ಬ್ಯಾಂಡಿನ ಮತ್ತು ಕಾಗದದ

ಸಣ್ಣ ಸ್ಸಾಜು ಮತ್ತು ದೊಡ್ಡ ಸಾಜು

## ಡೈರಿಗಳು.

ಶಾರದಾ ಛಾಪಖಾನೆ.
ಮಂಗಳೂರು

ಇಲ್ಲಿಗೆ ಬರೆದುಕೊಳ್ಳಿರಿ



**S U N & CO.**

*Choukhamba Benares City*

**ಮೂರು ಇನಾಮುಗಳು.**

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ ೨ ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3–12–0 5¼ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3–8–0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ—
ತಿರೋಪತಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಖಾಂಬಾ, ಬೆನಾರಿಸ್ (ಕಾಶೀ)



## ಕೇಸರಿಯವರ

# ಲೋಧ್ರ

**ಗರ್ಭಾಶಯ ರೋಗನಿವಾರಿಣಿ.**

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನು ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ ೩–೦–೦
ಸಣ್ಣ ಬಾಟಲ್ ೬ ಔನ್ಸ್ ರೂ ೧–೧೦–೦

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರರ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್— ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು — ಷಾ ಕಂಪೆನಿ, ಹಂಪನಕಟ್ಟೆ, ಮಂಗಳೂರು



**The Zandu Pharmaceutical Works, Ltd., Bombay, 14**

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

## 'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾಪಕಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪೌಂಡು ಜಾಡಿ ರೂ. 10/– ಕ್ರಯ 1 ಪೌಂಡು ಸೀಸೆ ರೂ. 2/8, ½ ಪೌ ರೂ. 1/5 ¼ ಪೌ. ಆ 18.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು,
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿಸಿ ಏಜಂಟರು — ಎಸ್. ವೆಲ್ ಥಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ ಪ್ರೊಸಟ್ ಲಾಲ್ ಕಂಪೆನಿ ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



ಪಂಡಿತ ಡಿ ಗೋಪಾಲಚಾರ್ಯರ

## ಜೀವಾಮೃತ.

ದೇಹಪುಷ್ಟಿ ಜ್ಞಾಪಕ ಶಕ್ತಿ.

೧೮೭೮ನೇ ವರ್ಷದಿಂದಲೂ ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧಿಹೊಂದಿದ ಆರೋಗ್ಯಪ್ರದಾಯಿನಿ.

ಇದರ ಉಪಯೋಗದಿಂದ—

ಬಲಹೀನರಿಗೆ—ಬಲವನ್ನೂ, ದುರ್ಬಲರಿಗೆ—ಪಟುತ್ವವನ್ನೂ,
ನಿದ್ರಾಹೀನರಿಗೆ—ಸುಖನಿದ್ರೆಯನ್ನೂ, ನರಗಳ ಸೆಳೆತಕ್ಕೆ—ಖಂಡಪುಷ್ಟಿಯನ್ನೂ,
ಜೀರ್ಣಶಕ್ತಿಯಿಲ್ಲದವರಿಗೆ—ಜೀರ್ಣಶಕ್ತಿಯನ್ನೂ, ರಕ್ತಹೀನರಿಗೆ—ರಕ್ತಪುಷ್ಟಿಯನ್ನೂ,
ತೇಜೋಹೀನರಿಗೆ—ತೇಜಸ್ಸನ್ನೂ, ಮಂದಬುದ್ಧಿಗಳಿಗೆ—ಉಲ್ಲಾಸವನ್ನೂ,
ಜ್ಞಾಪಕಶಕ್ತಿಯಿಲ್ಲದವರಿಗೆ—ಜ್ಞಾಪಕಶಕ್ತಿಯನ್ನೂ,

ಇನ್ನು ಅನೇಕ ಅಸಂಖ್ಯಾತವಾದ ಎಷ್ಟೋ ಸುಗುಣಗಳನ್ನೂ ಉಂಟುಮಾಡುತ್ತದೆ ಸ್ತ್ರೀಪುರುಷರು ಎಲ್ಲಾ ವಯಸ್ಸುಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಸೇವಿಸಬಹುದಾದ ದಿವ್ಯವಾದ ಟಾನಿಕ್ಕು. ಎಲ್ಲಾ ಸ್ಥಳಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

ದೊಡ್ಡ ಸ್ಸಾಜು ರೂ ೩—೮—೦ ಸಣ್ಣ ಸ್ಸಾಜು ರೂ. ೧—೧೨—೦.

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೫೦೭, ಮದ್ರಾಸು!

ಸೋಲ್ ಏಜಂಟರು:– ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು.
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 140

## ಸಮಾಲೋಚನೆ.

**ನಮ್ಮ ಕಥೆಗಳು**—ಮಂಗಳೂರಿನ ಮಿತ್ರಮಂಡಳಿಯು ಪ್ರಕಟಣೆ, ಪುಟ ೯೭, ಬೆಲೆ ಆರಾಣೆ.

ಸಾಹಿತ್ಯವೆಂದರೆ ಪದ್ಯಗಳು ಮಾತ್ರ ಎಂದು ಕೆಲವರಲ್ಲಿ ಅಭಿಪ್ರಾಯವಿದೆ, ಅದು ದರಿಂದಲೆ ಏನೋ, ಅನೇಕ ಸಾಹಿತ್ಯ ಸಂಘಗಳು ಪದ್ಯ ಸಂಗ್ರಹಗಳಲ್ಲಿಯೂ ರಚನೆಯಲ್ಲಿಯೂ ಮಗ್ನವಾಗಿವೆ. ಅಂಥ ತಪ್ಪು ಗ್ರಹಿಕೆಯನ್ನು ಕಿತ್ತೆಯಲಿಕ್ಕೆಂಬಂತೆ ಸಣ್ಣ ಕತೆಗಳ ಪುಸ್ತಕವನ್ನು ಪ್ರಕಟಿಸಿದ ಮಿತ್ರಮಂಡಳಿಯ ಕಾರ್ಯವು ಸ್ತುತ್ಯವಾಗಿದೆ. ನಮ್ಮ ಮುಂದಿರುವ ಪುಸ್ತಕದಲ್ಲಿ ಒಂಭತ್ತು ಕತೆಗಳಿವೆ ಒಂದೊಂದು ಕತೆ ಒಬ್ಬೊಬ್ಬ ಲೇಖಕನದು, ಬರೆದವರಲ್ಲಿ ಹೆಚ್ಚಿನವರು ಲೇಖನ ವ್ಯವಸಾಯದಲ್ಲಿ ನುರಿತವರಲ್ಲ ಉತ್ಸಾಹಿಗಳಾದ ತರುಣರು ಈ ಎರಡು ಸಂಗತಿಗಳನ್ನು ಗ್ರಹಿಸಿದರೆ ಪುಸ್ತಕವು ಪ್ರಶಸ್ತವಾಗಿದೆಯೆನ್ನಬೇಕು ಹಾಗೆಂದು ಓದುವವರ ದೃಷ್ಟಿಗೆ ತೋರಬರುವ ಕೆಲವು ಕುಂದುಗಳನ್ನು ಹೇಳದಿರುವುದು ಸರಿಯಲ್ಲ ಸಣ್ಣ ಕತೆಯಲ್ಲಿ ವಿಶಾಲವಾದ ಕಾದಂಬರಿಗಳಲ್ಲಿದ್ದಂತೆ ಅನೇಕ ವ್ಯಕ್ತಿಗಳ ಅಂತರಂಗಗಳ ವಿಕಾಸಕ್ಕೆ ಎಡೆಯಿಲ್ಲವೆಂಬುದು ನಿಜ, ಆದರೆ ಸಣ್ಣ ಕತೆಯೆಂದರೆ ಕಾರಿರುಳಲ್ಲಿ ಮಿಂಚಿನ ಹೊಳಪಿನಲ್ಲಿ ಕ್ಷಣ ಮಾತ್ರ ಗೋಚರವಾದ ಅಸ್ಪಷ್ಟ ದೃಶ್ಯದ ಚಿತ್ರವೂ ಅಲ್ಲ ಪ್ರತಿಯೊಂದು ಕತೆಯು ಸಣ್ಣ ಕತೆಯಾಗದೇಕಾದರೆ ಅದರಲ್ಲಿನ ಪ್ರಮುಖ ವ್ಯಕ್ತಿಯ ಪರಿಚಯವಾದರೂ ನಮಗಾಗಬೇಕು ನಮ್ಮ ಅಭಿಪ್ರಾಯವನ್ನು ಅನುಸರಿಸಿ ಪರೀಕ್ಷಿಸುವಾಗ ಈ ಪುಸ್ತಕವಲ್ಲಿನ ಅಂಧಶಿಲ್ಪಿ, ದೊಡ್ಡಣ್ಣ, ಲೇಖನ ವ್ಯವಸಾಯ, ಇವು ಮೂರು ಒಳ್ಳೆಯದಿವೆಯೆನ್ನಬೇಕು ಉಳಿದುವುಗಳಲ್ಲಿ ಕತೆಯ ಬೀಜವಿದೆ ಕತೆಯಿಲ್ಲ ನಿರಪರಾಧಿಯಲ್ಲಿನ ತರುಣ ವಕೀಲನು ಯಾವ ತರದ ಮನುಷ್ಯನೋ ತಿಳಿಯದು, ಬಿ ಎಲ್ ಪಾಸಾಗಿ ಸಭೆದಿಗೆ ಕಾಯುವವನಿಗೆ ಪೋಲೀಸಿನವರೊಡನೆ ಕಳ್ಳನು ತಪ್ಪಿಸ್ಕೊಪ್ಪಿದರೆ ಏನಾಗುವುದೆಂದು ಗೊತ್ತಿಲ್ಲವಂತೆ, ವಿಮೋಚನೆಯ ಲೇಖಕರು ಮಿತ್ರದ್ರೋಹಿಯ ಅಂತ್ಯವನ್ನು ಉದಾಹರಿಸಲಿಕ್ಕೆ ವೀರಾವೇಶವನ್ನು ತಾಳಿದ್ದಾರೆ, ಮಾತ್ರವಲ್ಲ ಜೋಧಪುರದ ಸ್ವಾತಂತ್ರ್ಯಕ್ಕಾಗಿ ಕಾದಾಡಿದ ಬಂದಿಯೆಂದರಲ್ಲ ಯಾವ ಜೋಧಪುರ? ಯಾವ ದಂಗೆ? ಅದರ ಪರಿಣಾಮವೇನಾಯಿತು ಈ ಪ್ರಶ್ನೆಗಳಿಗೆ ಕತೆಯಲ್ಲಿ ಉತ್ತರದ ಸೂಚನೆ ಸಹ ಇಲ್ಲದಿದ್ದರೆ ಕತೆಯ ಹಿರಿಕೆಯು ಅಪ್ರಶಸ್ತವಾಗುವುದಿಲ್ಲವೆ? ಅದೇ ಕತೆಯಲ್ಲಿ ವಿದ್ರಿಸಿದ ವೀರನ ಮುಖವನ್ನು ವರ್ಣಿಸುವಾಗ ಕತೆಗಾರರಿಗೆ ಅವನ ಕೊರೆಯುವ ದೃಷ್ಟಿಯೂ ತೋರಿತೆ? ಹಣೆಬರಹದಲ್ಲಿ ಶಾಸ್ತ್ರಿಗಳ ಮಗಳಿಗೆ ಮದುವೆಯಾಗಿಲ್ಲ ಪ್ರಾಯವಿದಾರಿತು, ಅವರಿಗೆ ಯಾವ ಶಿಕ್ಷೆ ಕೊಡಬೇಕು ಎಂದು ಚರ್ಚಿಸಲಿಕ್ಕೆ ಎಲ್ಲ ಜಾತಿಯವರೂ ಕೂಡುವುದು ಸಂಭವನೀಯವೆ? ಬ್ರಾಹ್ಮಣರು ತಮ್ಮ ಹುಡುಗಿಯರನ್ನು ಬಾಲ್ಯದಲ್ಲಿ ವಿವಾಹ ಮಾಡದಿದ್ದರೆ ಇತರರಲ್ಲಿಯೂ ಆ ಪದ್ಧತಿಯು ಹಬ್ಬುವುದೆಂದು ಹೇಳಿದ್ದಕ್ಕೆ ಸಿಟ್ಟಿನಿಂದ "ಸ್ಮೈ"ಹಾಕಬೇಕಾದರೆ ಈಗ ನಾಡವರಲ್ಲಿ ನಡೆಯುವ ಪದ್ಧತಿಯೇನು?

**ಫ್ರಾನ್ಸಿನ ಮಹಾ ಕ್ರಾಂತಿ**—ಲೇಖಕರು ಪಿ ಆರ್ ರಾಮಯ್ಯ ಬಿ ಎಸ್ ಸಿ, ಪುಟ ೧೬೩, ಬೆಲೆ ರೂ ೧

ಅರಸರು ಉನ್ಮತ್ತರಾಗಿ ಪ್ರಜೆಗಳು ಅನುಭವಿಸುವ ಪೀಡೆಯು ಅಸಹನೀಯವಾದಾಗ ಅವರು ದಂಗೆಯೆದ್ದು, ರಾಜನನ್ನು ಸಹ ಕೊಂದ ನಿದರ್ಶನಗಳು ಜಗತ್ತಿನ ಇತಿಹಾಸದಲ್ಲಿ ಅನೇಕ ಕಾಣುತ್ತವೆ ಅವುಗಳಲ್ಲೆಲ್ಲ ಫ್ರಾನ್ಸಿನಲ್ಲಿ ಹದಿನೆಂಟನೆ ಶತಮಾನದಲ್ಲಿ ನಡೆದ ಕ್ರಾಂತಿಯಷ್ಟು ಭಯಾನಕವೂ, ಜಗತ್ತನ್ನು ಬೆರಗುಗೊಳಿಸುವುದೂ ಇನ್ನೊಂದಿಲ್ಲ ಆ ಕ್ರಾಂತಿಯಿಂದ ಇಡೀ ಯುರೋಪುಖಂಡವೆ ಭೂಕಂಪದಿಂದ ನಡುಗಿಸಲ್ಪಟ್ಟಂತಾಯಿತು, ಫ್ರಾನ್ಸಿನಲ್ಲಿ ರಕ್ತಪಾತವೂ ಅನಾಚಾರಗಳೂ ಅನಂತವಾದುವು, ಕ್ರಾಂತಿಯ ಗರ್ಭದಿಂದ ಕ್ಷಿತಿಜಕ್ಕೆದ್ದ ನೆಪೋಲಿಯನ ಬೋನೆಪಾರ್ಟನಿಂದ ಯುರೋಪು ಇಪ್ಪತ್ತು ಅಡಿಮೇಲಾಯಿತು ಅಂಥ ಕ್ರಾಂತಿಯ ಚರಿತ್ರೆಯನ್ನು ಕನ್ನಡಿಗರಿಗೆ ಮಾಡಿಕೊಡಲು ಗ್ರಂಥಕರ್ತರು ಪ್ರಯತ್ನಿಸಿದ್ದು ಅಭಿನಂದನೀಯವಾಗಿದೆ ಕನ್ನಡದಲ್ಲಿ ಈ ತರದ ರಾಜಕೀಯ, ಐತಿಹಾಸ, ಸಾಂಪತ್ತಿಕ ಗ್ರಂಥಗಳು ಹೆಚ್ಚಿದ ವಿನಹ ಜನರಲ್ಲಿ ಸ್ವರಾಜ್ಯದ ಯೋಗ್ಯತೆಯು ಹೆಚ್ಚುವುದಿಲ್ಲ ಈ ಗ್ರಂಥದಲ್ಲಿ ಕ್ರಾಂತಿಯ ಕಾರಣಗಳು, ಆರಂಭದಲ್ಲಿ ಕ್ರಾಂತಿಕಾರರಲ್ಲಿದ್ದ ಉದಾತ್ತ ಭಾವನೆಗಳು ಬರಬರುತ್ತ ಅವರು ಮಾಡಿದ ಘೋರಕೃತ್ಯಗಳು, ಇವೆಲ್ಲ ಉಕ್ತವಾಗಿವೆ ಆದರೆ ಕ್ರಾಂತಿಯ ಕಾರಣಗಳು ಅಷ್ಟೊಂದು ವಿಶದವಾಗಿಲ್ಲ, ಪುಸ್ತಕವು ಪುನಹ ಮುದ್ರಿಸುವಾಗ ಆ ಕಾಲದ ಫ್ರೆಂಚಸಮಾಜದ ಸರಿಯಾದದ್ದೊಂದು ಚಿತ್ರವು ನಮಗೆ ಮುಂದಿಟ್ಟಾಗುವಂತೆ ಗ್ರಂಥಕರ್ತರು ವರ್ಣಿಸುವರೆಂದು ಭರವಸೆ ಲೇಖಕರು ಪರಿಶೀಲಿಸಿದ ಪುಸ್ತಕಗಳಲ್ಲಿ ಬರ್ಕ ಎಂಬ ಮಹಾಜ್ಞಾನಿಯ Reflections on the French Revolution ಎಂಬುದು ಇಲ್ಲವಾದುದು ಆಶ್ಚರ್ಯದ ಸಂಗತಿ ಇಂಗ್ಲಿಷು ಪುಸ್ತಕಗಳಲ್ಲದೆ ಒಂದೆರಡು ಫ್ರೆಂಚ ಪುಸ್ತಕಗಳನ್ನು ಸಹ ಪರಿಶೀಲಿಸಿದರೆ ಗ್ರಂಥವು ಇನ್ನಷ್ಟು ಉತ್ತಮವಾದೀತು

**ಇಂಗ್ಲಿಷ ಆಶಾನು**—ಗೋಪಾಲ ಕೃಷ್ಣ ಕಾಲೇಜ ಮದ್ರಾಸ, ಬೆಲೆ ರೂ ೨

ಉಪಾಧ್ಯಾಯರ ಹಂಗಿಲ್ಲದೆ ಇಂಗ್ಲಿಷು ಕಲಿಯಲಿಕ್ಕಾಗಬೇಕೆಂಬ ಉದ್ದೇಶದಿಂದ ಈ ಪುಸ್ತಕವು ಬರೆಯಲ್ಪಟ್ಟಿದೆ ಆದರೆ ಗ್ರಂಥಕರ್ತರು ಅನುಸರಿಸಿದ ಮಾರ್ಗವು ಪ್ರಯೋಜನಕಾರಿಯಾದುದಲ್ಲ ಇಂಗ್ಲಿಷು ಶಬ್ದಗಳನ್ನು ಎರಡಕ್ಷರದುವು ಮೂರಕ್ಷರದುವು ಎಂದು ಮೊದಲಾಗಿ ವಿಭಾಗಿಸಿ ಪಟ್ಟಿಗಳನ್ನು ತಯಾರಿಸಿ ಅರ್ಥ ಬರೆಯುವುದರಿಂದ ಕೆಲವು ಶಬ್ದಗಳೇನೋ ತಿಳಿದಾವು ಬೇರೇನೂ ಫಲವಿಲ್ಲ ಪುಸ್ತಕದಲ್ಲಿ ಕೊಟ್ಟ ಉಚ್ಚಾರವಂತೂ ಬರಹವಿಲ್ಲದವರ ಉಚ್ಚಾರ—Bad ಬಾಡ್ Cat ಕಾಟ್ ಎಂದು ಮೊದಲಾದ ಉಚ್ಚಾರಕ್ಕೆ ಬೇರೇನು ಹೇಸರಿದದೇಕು? ಗ್ರಂಥದಲ್ಲಿನ ಕನ್ನಡವು ಸಹ ಸೇಲಮಿನ ಗ್ರಾಮ್ಯ ಶುದ್ಧವಲ್ಲ, ಮುದ್ರಣ ದೋಷ ತುಂಬ ಲೇಖಕರ ಶ್ರಮವು ಫಲಕಾರಿಯಾಗಿಲ್ಲವೆಂಬುದು ಶೋಚನೀಯ.

**ನಾಡ ಕತೆಗಳು.**

ನಮ್ಮ ಕತೆಗಳಲ್ಲಿನ ಕೆಲವು ದೃಶ್ಯಗಳಂತಹ ಸಮಾಜದ ಕೆಲವು ನೋಟಗಳನ್ನು ಈ ಪುಸ್ತಕದಲ್ಲಿ ಕಾಣಬಹುದು ಚಿಕ್ಕ ಕತೆಗಳ ಮರ್ಮವನ್ನು ಬರಹಗಾರರು ಇನ್ನೂ ಅರಿತುಕೊಳ್ಳಬೇಕಾಗಿದೆ ಎಳೆಯವರ ಈ ಪ್ರಯತ್ನಕ್ಕೆ ಮಹಾಜನರು ನೆರವಾದರೆ ಮುಂದೆ ಉತ್ತಮ ಗ್ರಂಥಗಳು ಬಂದಾವು

ಇತರ ಪುಸ್ತಕಗಳು **ಮಂಜುಳಾ**—ಲೇಖಕ ಎಸ್ ರಾಘವೇಂದ್ರರಾವ್, ಪುಟ ೧೫, ಬೆಲೆ ಎರಡಾಣೆ

**ನಮ್ಮದೇಶ**—ಲೇಖಕ ಲಕ್ಷ್ಮಣದೇವ ವಿದ್ಯಾರ್ಥಿ, ಪುಟ , ಬೆಲೆ ಆರು ಪೈ

**ಜಯಕರ್ನಾಟಕ:**—ಹತ್ತು ವರ್ಷಗಳಿಂದ ಕನ್ನಡದ ಸೇವೆಯನ್ನು ಮಾಡುತ್ತ ಬಂದ ಗೆಳೆಯರ ಗುಂಪಿನ ಕೈಮಗುವಾದ ಜಯಕರ್ನಾಟಕದ ಈ ಸಾರಿಯ ವಿಶೇಷ ಸಂಚಿಕೆಯು ವಿಶೇಷ ತರದ್ದಾಗಿದೆ. ಮನೋಹರವಾದ ಮೂರ್ಬಣ್ಣದ ಮುಖಚಿತ್ರ, ಅನೇಕ ಏಕವರ್ಣದ ಪಡಿಅಚ್ಚುಗಳು ವ್ಯಂಗ್ಯ ಚಿತ್ರಗಳು ೩೪೪ ಪುಟತುಂಬ ಓದಬೇಕಾದ ವಿಚಾರ ಪೂರ್ಣ ಲೇಖನಗಳು ಮುಖ್ಯವಾಗಿ ನವಯುಗದ ಧರ್ಮ ಹಿಂದೂ ಗೃಹಾಲಂಕಾರ ಮಹರ್ಷಿ ರೋಮನ್ ರೋಲೆಂಡರು ತಾಳ ಗುಂಡದ ಸ್ತಂಭಲೇಖ ಪ್ರಯೋಗಿಕ ಮನಃಶಾಸ್ತ್ರದ ಪರಿಚಯ ಇವು ಮನನ ಮಾಡಬೇಕಾದಂಥವುಗಳು

ಎಷ್ಟು ಕಷ್ಟನಷ್ಟಗಳು ಬಂದರೂ ಸಹಿಸಿ ಕನ್ನಡ ಮಾತೆಯ ಪೂಜೆಗೆ ವಿಘ್ನವಾಗಬಾರದೆಂದು ಹಗಲು ರಾತ್ರಿ ದುಡಿಯುವ ಜಯಕರ್ನಾಟಕ ಮಂದಿರದ ನೈವೇದ್ಯ ನಂದಾದೀಪಗಳ ಭಾರವನ್ನಾದರೂ ವಾಚಕರು ವಹಿಸಬೇಕ"

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು

ಸಾಹಿತ್ಯ **ಸ್ವದೇಶಾಭಿಮಾನಿ** ಸಂಚಿಕೆ.

ಸಂಪುಟ ೧ ಜನವರಿ ೨೭—೧—೧೯೩೩. ಸಂಚಿಕೆ ೧೨

— ಅನುಕ್ರಮಣಿಕೆ —


| | ಪುಟ |
|---|---|
| ಹೊಸ ಹೂವುಗಳು | ೨೭ |
| ನೀನು ಯಾರು? | ೨೮ |
| ಸದಾರಮೆ | |
| ರಾವ್ ಬಹದ್ದೂರು ಸುಬ್ಬಪ್ಪನವರು | ೩೦ |
| ಪುಸ್ತಕ ಭಂಡಾಗಾರ | ೩೨ |
| ಸಮಾಲೋಚನೆ | ೩೪ |


ಜನವರಿ ತಾರೀಕು ೨೭ನೇ ಶುಕ್ರವಾರ ೧೯೩೩

# ಹೊಸ ಹೂವುಗಳು.

ಸ್ವದೇಶಾಭಿಮಾನಿಯ ಸಾಹಿತ್ಯ ಸಂಚಿಕೆಯು ಪ್ರಕಟವಾಗಲಿಕ್ಕೆ ಆರಂಭವಾಗಿ ಒಂದು ವರ್ಷವು ಕಳೆಯಿತು ಸಾಹಿತ್ಯ ಸಂಚಿಕೆಯನ್ನು ಹೂಡುವಾಗ ನಮ್ಮ ಉದ್ದೇಶವು ದ್ವಿವಿಧವಾಗಿದ್ದಿತು—ಹೊಸದಾಗಿ ಶಾರದೆಯ ಸೇವೆಗಂದು ಸೊಂಟಗಟ್ಟಿದವರಿಗೊಂದು ರಂಗಸ್ಥಳವನ್ನು ಕಲ್ಪಿಸುವುದು ಮತ್ತು ಜನಸಮೂಹಕ್ಕೆ ಸಹ ತಿಂಗಳಿಗೊಮ್ಮೆಯಾದರೂ ನವ ಸಾಹಿತ್ಯ ಸೇವನೆಯಿಂದಾಗುವ ಆಹ್ಲಾದವನ್ನು ಹಂಚುವುದು ನಮ್ಮ ಆಶೆಯು ಸರಿಯಾಗಿ ಯಶಸ್ವಿಯಾಗಿದೆಯೆಂದು ಹೇಳಲಿಕ್ಕಾಗುವುದಿಲ್ಲ ಪ್ರತಿ ತಿಂಗಳಲ್ಲಿಯೂ ಎಂಟು ಪುಟ ತುಂಬ ಸ್ವಾರಸ್ಯವಾದ ಲೇಖನಗಳನ್ನು ಒದಗಿಸಬೇಕಾದರೆ ದಕ್ಷಿಣ ಕನ್ನಡದ ಯುವಕಯುವತಿಯರಲ್ಲಿ ಅಂತರ್ಹಿತವಾದ ಅನುಭವವೂ ಆಕಾಂಕ್ಷೆಗಳೂ ಉದ್ದೀಪನವಾಗಿ ಲೇಖನಿಯಿಂದ ಹೊರ ಹೊಮ್ಮಬೇಕು ಬೇಗನೆ ಅಂಥ ದಿನವು ಉದಯಿಸುವುದೆಂಬ ಆಶೆಯಿಂದಲೆ ನಮ್ಮ ಕಾರ್ಯವನ್ನು ಮುಂದರಿಸಲಿದ್ದೇವೆ

ನಮ್ಮ ಸಂಚಿಕೆಗೆ ಯಾವ ತರದ ಬರಹಗಳು ಸಮಂಜಸವಾದಾವು ಎಂಬ ಪ್ರಶ್ನೆಯು ಅನೇಕರ ಬಾಯಿಂದ ಬಂದಿದೆ ಒಂದೆ ಮಾತಿನಲ್ಲಿ ಹೇಳುವುದಾದರೆ, ಜನಸಾಮಾನ್ಯರು ಗ್ರಾಹ್ಯ ಮಾಡಲಿಕ್ಕೆ ಸಾಧ್ಯವಿರುವ ಶೈಲಿಯಲ್ಲಿ ಸೌಂದರ್ಯವನ್ನುಣ್ಣಿಸುವ ಸುಲಭ ರಚನೆಗಳೆ ನಮಗೆ ಬೇಕಾದುವು ಮಹಾಕಾವ್ಯಗಳು, ಉದ್ದುದ್ದ ಕತೆಗಳು, ವಿಸ್ತಾರವಾದ ಉಪನ್ಯಾಸಗಳು, ಅನೇಕಾಂಕ ನಾಟಕಗಳು, ಇವೆಲ್ಲವುಗಳಿಗೆ ಸಾಹಿತ್ಯ ಕ್ಷೇತ್ರದಲ್ಲಿ ಮನ್ನಣೆಯ ಸ್ಥಾನವಿದೆ, ಈ ಸಂಚಿಕೆಯಲ್ಲಿ ಮಾತ್ರ ಸ್ಥಳವಿಲ್ಲ ಅದಕ್ಕಾಗಿ ಹೃದಯಂಗಮವಾದ ಚಿಕ್ಕ ಕವನಗಳು, ಸುಲಭದಲ್ಲಿ ಹಾಡಬಹುದಾದ ಹಾಡುಗಳು, ಹಾಸ್ಯವನ್ನೊ, ಕ್ಲೇಶವನ್ನೊ, ಕ್ರೋಧವನ್ನೊ ಕಣಕುವ ಮಿಂಚಿನ ಸುಳಿವಿನಂತೆ ಸೂಕ್ಷ್ಮವಾದ ದೃಶ್ಯಗಳು, ಲಘುತರವಾದ ಉಪನ್ಯಾಸಗಳು ಇವುಗಳನ್ನೆಲ್ಲಾ ನಾವು ಅತ್ಯಾದರದಿಂದ ಸ್ವೀಕರಿಸುವೆವು.

ನಮ್ಮ ಕಣ್ಣಿಗೆ ಬೀಳುವ ಪದ್ಯಗಳಲ್ಲಿ ವೀರಾವೇಶದುವು ಏಕಿಲ್ಲ? ಎಂಬುದು ಆಶ್ಚರ್ಯದ ಸಂಗತಿಯಾಗಿದೆ ಕನ್ನಡಿಗರಲ್ಲಿ ಹುರುಪಿಲ್ಲವೆ? ಕನ್ನಡ ಭಾಷೆಗೆ ರೌದ್ರಾವತಾರವು ಅಸಹ್ಯವೆ? ನವಜೀವನ, ನವೀನ ಆಕಾಂಕ್ಷೆ, ನವೀನ ಸಮಸ್ಯೆಗಳು ನಮ್ಮ ರಕ್ತದಲ್ಲಿ ಹರಿಯುವ ಈ ಯುಗದಲ್ಲಿ ಸೈನಿಕರು ಯುದ್ಧಕ್ಕೆ ಹೋಗುವಾಗ ಹಾಡಬಹುದಾದ ಧ್ವನಿಪೂರಿತ ಗೀತಗಳು ಏಕೆ ಮೊಳೆಯುವುದಿಲ್ಲ?

ಮಕ್ಕಳೆಂದರೆ ಭಾರತೀಯರಿಗಿರುವ ಮಮತೆಯು ಇನ್ನಾರಿಗೂ ಇಲ್ಲವೆಂಬಂತೆ ನಮ್ಮ ಪ್ರಾಚೀನ ಗ್ರಂಥಗಳಲ್ಲೆಲ್ಲ ಮಕ್ಕಳು ಹುಟ್ಟಬೇಕೆಂದು ಹಾತೊರೆದ ಅರಸ ಅರಸಿಯರ ಕತೆಗಳು ನೂರಾರು ಇವೆ. ಆದರೂ ಬಾಲ್ಯದ ಅನುಭವವನ್ನು ಚಿತ್ರಿಸುವ ಪದ್ಯಗಳು ಈಗಿನ ಕಾಲದಲ್ಲಿ ಕಡಿಮೆ ಪುರಂದರದಾಸರ ಒಂದು ಉದಯರಾಗದಲ್ಲಿನ

**"ಅಮ್ಮ ಕೇಳೊ, ಎನ್ನಗಲ ಬೇಡವೊ!**
**ಗುಮ್ಮ ಬರುತಿದೆ, ಗುಡುಗುಡೆನುತಲಿ!"**

ಎಂಬ ಪಂಕ್ತಿಗಳು ಯಾವ ಬಾಗುಬೆನ್ನಿನ ಮುದುಕನನ್ನೂ ತೊಟ್ಟಿಲು ಮಗುವನ್ನಾಗಿ ಮಾರ್ಪಡಿಸುತ್ತವೆ ಅದೆ ರೀತಿಯಲ್ಲಿ ಕಳೆದ ದಿನಗಳನ್ನು ಪುನರುಜ್ವಲಿಸಿ ನಮ್ಮ ಮುಂದೆ ಹೊಳೆಯುವಂತೆ ಮಾಡುವ ಕವನಗಳನ್ನು ಬರೆಯಲು ಯತ್ನಿಸಬೇಕಾಗಿದೆ. ಬಂಗಾಳಿಯಲ್ಲಿ ರವೀಂದ್ರನಾಥ ಠಾಕೂರರು, ಇಂಗ್ಲಿಷಿನಲ್ಲಿ ಆರ ಎಲ್ ಸ್ಟಿವನ್ಸನರು ಇವರೆ ಮೊದಲಾದವರು ಬರೆದಿಟ್ಟ ಮೇಲ್ಪಂಕ್ತಿಗಳನ್ನಾದರೂ ಅನುಸರಿಸುವುದು ಉಚಿತವೆಂದು ನಮಗೆ ತೋರುತ್ತದೆ.

ನಗೆ ಬೀರುವಂಥ ದೃಶ್ಯಗಳನ್ನು ಸಹ ಕನ್ನಡಿಗರು ಹೆಚ್ಚಾಗಿ ಚಿತ್ರಿಸುವುದಿಲ್ಲ. ಇತ್ತೀಚೆಗೆ ನಮ್ಮ ಕೈಸೇರಿದ ಅನೇಕ ಸಣ್ಣ ಕತೆಗಳಲ್ಲಿ ಸಹ ಕಣ್ಣೀರು, ಬಾಡಿದ ಮೋರೆ, ಇಳಿತಲೆಗಳೆ ಹೊರತು

ಮಂದಹಾಸವು ತರಿದೋರುವುದಿಲ್ಲ. ಹಾಸ್ಯರಸವನ್ನು ಸಹ ಪಕ್ವ ಮಾಡಲಿಕ್ಕೆ ಅರಿಯುವವನು ಸಂಪೂರ್ಣತೆಯನ್ನು ಹೊಂದಿಲ್ಲವೆಂದು ಹೇಳಬಹುದು. ನಮ್ಮ ಸಂಚಿಕೆಯಲ್ಲಿ ಪ್ರಕಟವಾಗಿದ್ದ "ಕರ್ನಾಟಕ ದೇಶಹಿತೈಷಿಗಳು" ಎಂಬ ಉಪನ್ಯಾಸ ಮಾಲೆಯನ್ನು ಓದಿದವರಿಗೆ ಅದರಲ್ಲಿರುವ ಹಾಸ್ಯರಸವು ಅರಿದೀತು. ಆ ಮಾಲೆಯನ್ನು ಬರೆದವರಿಗೆ ನಮ್ಮ ವಾಚಕರ ಪರವಾಗಿ ನಾವು ಆಭಾರಿಗಳಾಗಿದ್ದೇವೆ. ಅದರಲ್ಲಿನ ಹಾಸ್ಯಕ್ಕೆ ನಂಜು ಸೇರಿಯದೆ; ಹಾಗೆಂದು ನಂಜಿಲ್ಲದ ಋಜು ಹಾಸ್ಯವು ಅಸಾಧ್ಯವೆಂದಲ್ಲ. ಹಾಸ್ಯವು ಋಜುವಾಗಲಿ, ವ್ಯಂಗ್ಯವಾಗಲಿ ಅಶ್ಲೀಲತೆ ಇಲ್ಲವೆ ದೊರಗುತನವಿಲ್ಲದಿದ್ದರೆ ಸರಿ, ಅದಕ್ಕೆ ಮೇಲ್ಮೆಯುದ್ದೇ ಇದೆ.

ಹೀಗೆ ಆಲೋಚಿಸುತ್ತ ಹೋದರೆ ಕನ್ನಡ ಸಾಹಿತ್ಯದಲ್ಲಿ ಇದುವರೆಗೆ ಅರಳದ, ಅರೆಯರಳದ ಪುಷ್ಪಗಳೆಷ್ಟೊ ಇವೆಯೆಂದು ತೋರಿಬರುವುದು. ಅಂಥವುಗಳನ್ನು ಬೆಳೆಸಿ ಅವುಗಳ ಪರಿಮಳವನ್ನು ಕನ್ನಡ ವಾಡಿಕಲ್ಲಿ ಬೀರಲಿಕ್ಕೆ ಇನ್ನಾದರೂ ಸಾಧ್ಯವಾದೀತೆಂದು ಭರವಸೆ.

---

# ನೀನು-ಯಾರು?

೧

[illegible] ಸ್ನಾನವನು ಮಾಡಿ ಪಲ್ಲಂಗದಲಿ,
[illegible] ಮಲಗಿರಲು ವೈಭವದಿ
[illegible] ಪಡೆದಿದ್ದ ಮಾನವಗೆ ಕ್ಷಣದಲ್ಲಿ
[illegible] ಸ್ನಾನ ಗೈಸುವೆ ನೀನು—ಯಾರು?

೨

ಮನೆಮನೆಯ ಬಾಗಿಲಲಿ ತಿರಿದುಂಡ ನಿರ್ಭಾಗಿ
ಮನುಜನಿಗೆ ಕೈಗೊಟ್ಟು ವೈಭವದ ಶಿಖರಕೆಳೆ—
ವನು ತೋರಿಸುತಲವನ ಪೂರ್ವಗತಿಗಳನೆಲ್ಲ—
ವನು ಮರೆಸಿ ಬಿಡಿಸುತಿಹೆ ನೀನು—ಯಾರು?

೩

[illegible] ದೋರ್ಛರಿಯಿಂ, ಬಂಧುಗಳು ನೆರೆದಿರಲು,
[illegible] ಕುಣಿಯುತಿರೆ, ಸಾಗುತಿಹ ಲಗ್ನವನು
[illegible] ಮರಣದಾ ವಾರ್ತೆಯನು
[illegible] ನೆಂಟರನು ಗೋಳಿಸುವೆ ನೀನು—ಯಾರು?

೪

ಹುಟ್ಟದೇ? ಹುಟ್ಟದ್ದೇ ಇಂದೀಗ ಗಂಡು ಮಗು
ಹುಟ್ಟಿತೆನ್ನುತ ತೋಷಸಾಗರದಿ ಮುಳುಗೆದ್ದು,
ಅಟ್ಟಹಾಸದಿ ನಕ್ಕು ನಲಿದಿದ್ದ ಚಿತ್ತವನು
ಸುಟ್ಟೊಗೆವೆ ಕ್ಷಣದೊಳಗೆ ನೀನು—ಯಾರು?

೫

[illegible] ತಳ್ಳಿಯಲಿ ಸೆರೆಯಾಗಿ
[illegible] ಸವಿ ಪ್ರೇಮದಲಿ ಮುಳುಗಾಡಿ
[illegible] ಮರೆದು ಸುಖಸ್ವಪ್ನದಲಿ ಕುಣಿದಾಡಿ
[illegible] ಅರೆ ಘಳಿಗೆಯಲಿ ಕೂಗಿಸುವೆ ನೀನು—ಯಾರು?

ಬಿ. ನರಸಪ್ಪ, ಮಂಗಳೂರು.

# ಸದಾರಮೆ.

— ೧ —

ಸಂಧ್ಯಾಕಾಲ. ಕಲ್ಕತ್ತದ ೧೧೮ನೇ ಮನೆಯುಪ್ಪರಿಗೆಯಲ್ಲಿ ವಸಂತ ಕುಮಾರನು ಒರಗು ಕುರ್ಚಿಯಲ್ಲಿ ಕುಳಿತುಕೊಂಡು ಬೀದಿಯ ಕಡೆಗೆ ದಿಟ್ಟಿಸುತ್ತಲಿದ್ದನು. ಆತನ ವದನವನ್ನು ಕಂಡ ಮಾತ್ರಕ್ಕೆ ಏನೋ ಒಂದು ಮಹತ್ತಾದ ವಿಷಯದ ಕುರಿತು ಯೋಚನಾಪರನಾಗಿದ್ದಂತೆ ಭಾಸವಾಗುತ್ತಲಿತ್ತು. ತುಸು ಸಮಯ ಕಳೆಯುತ್ತಲೆ ರುಕ್ಮಿಣಿಯು ಅಲ್ಲಿಗೆ ಬಂದಳು. ವಸಂತಕುಮಾರನು "ರುಕ್ಮಿಣೀ—ನೀನು ಬಂದ ವಿಚಾರವು ತಿಳಿಯಿತು. ಏನು ವಿಶೇಷ—" ಎಂದನು.

**ರುಕ್ಮಿಣಿ**—ಭಯಂಕರವಾದ ಆ ವಿಚಾರವು ನನ್ನ ಕಿವಿ ಮುಟ್ಟಿದಂದಿನಿಂದ ಅದರ ಕೂಲಂಕುಶ ವಿಚಾರವನ್ನು ತಿಳಿದುಕೊಳ್ಳಬೇಕೆಂದು ಅದೆಷ್ಟು ಹವಣಿಸಿದರೂ ಫಲಿಸಲಿಲ್ಲ. ಆದರೆ ನನ್ನ ಸದಾರಮೆಯ ಕೊಲೆಗಾರರನ್ನು ಫಾಸಿಗೇರಿಸುವುದನ್ನು ಈ ಕಣ್ಣುಗಳಿಂದ ನೋಡಿಯೇ ಬಿಡಬೇಕಾಗಿದೆ.

**ವಸಂತಕುಮಾರ**—ನೀನೆಷ್ಟೆಂದರೂ ಅಬಲೆಯು. ಇಂತಹ ಭಯಂಕರ ವಿಚಾರಗಳಲ್ಲಿ ಮನಸ್ಸನ್ನು ಮನಬಂದಂತೆ ಹರಿಯಗೊಟ್ಟರೆ ಕಾರ್ಯ ಹಾನಿಯಾಗಬಹುದು. ಧೈರ್ಯವನ್ನು ವಹಿಸಬೇಕಾದುದೆ ಪ್ರಾಮುಖ್ಯ ವಿಚಾರವು. ಅದೇನೋ ಸುಲಭ ಸಾಧ್ಯವಲ್ಲೆಂಬುದು ನಿಜ. ನಾನು ಕೂಡ ಈ ಪ್ರಾತಃಕಾಲ ಗುಪ್ತವಾಗಿ ಸಂಚರಿಸಿದೆನಾದರೂ ನನಗೆ ಹೆಚ್ಚಿನ ಪ್ರಯೋಜನ ಸಿಗಲಿಲ್ಲ. ನೀನೇ ಇಲ್ಲಿ ತನಕ ಬಂದೆ—ಇಲ್ಲವಾದರೆ ನಾನು ನಿನ್ನಲ್ಲಿಗೆ ಬರುವವನಿದ್ದೆ. ನಿನ್ನಿಂದ ಸಂಗತಿಗಳನ್ನು ಅರಿತುಕೊಂಡರೆ ಕೊಲೆಗಾರನ ಪತ್ತೆಯು ದುಸ್ತರವೆನಿಸದು.

**ರುಕ್ಮಿಣಿ**—ಇಲ್ಲ—ನನಗೇನೂ ತಿಳಿದಿಲ್ಲವಲ್ಲ—ನಿಮ್ಮಂತಹ ಪತ್ತೆದಾರಿಗಳು ಮಾಡುವ ಯುಕ್ತಿಯು ಹೀಗೆಯೇ ಎಂದು ತೋರುತ್ತಿದೆ.

**ವಸಂತ**—ನನ್ನ ಮಾತುಗಳು ನಿನಗೆ ಹೃದಯ ಭೇದಕವಾಗಿ ತೋರಬಹುದು. ನನ್ನ ಶಾಂತಭಾವವನ್ನು ಹಾಳುಮಾಡಲೆಳಸದಿರು. ನನ್ನ ಮಾತಿನಲ್ಲಿ ಹುರುಳಿಲ್ಲವೆಂದು ಭಾವಿಸುವವರ ಪರಿಣಾಮವು ನೆಟ್ಟಗಾಗಲಾರದು. ವೈದ್ಯ ಉದ್ಯೋಗಸ್ಥರು, ಕಳೇಬರವು ಸಾಧಾರಣ ಏಳು ದಿವಸಗಳ ತನಕ ನೀರಲ್ಲಿದ್ದುದರಿಂದ ಅಷ್ಟು ಕೊಳೆತುಹೋಗಿರುವುದಾಗಿ ಅಭಿಪ್ರಾಯಪಿತ್ತಿರುವರು. ನಿನ್ನ ಸಹೋದರಿಯು ಕೆಲವು ದಿವಸಗಳಿಂದ ಮನೆಯಲ್ಲಿರಲಿಲ್ಲವೆಂದು ನಿನಗೆ ತಿಳಿದಿಲ್ಲವೆ? ನೀನದನ್ನು ಗಣಿಸಲಿಲ್ಲ. ಮೊನ್ನೆ ಬುಧವಾರ ಸನಾತನ ಧರ್ಮದ ಕುರಿತು ಸದಾರಮೆಯು ಗೋಖಲೇ ಮಂದಿರದಲ್ಲಿ ಭಾಷಣ ಕೊಡುವಳೆಂದು ಕರಪತ್ರಗಳಲ್ಲಿತ್ತು. ಕಟ್ಟಕಡೆಗೆ ನಿಯಮಿಸಿದ ದಿವಸ "ಸದಾರಮೆಯು ತಲೆಶೂಲೆ ಎಂದು ಮಲಗಿರುತ್ತಾಳೆ. ಸಭೆಗೆ ಬರಲು ಅನುಕೂಲವಿಲ್ಲ" ಎಂಬುದಾಗಿ ನೀನು ಬರೆದು ಕಳುಹಿದ ಪತ್ರವನ್ನು ಸಭೆಯಲ್ಲಿ ಓದಿರುತ್ತಾರೆ. ಈಗ ಅವಳು ಮನೆಯಲ್ಲಿದ್ದಾಳೋ



ಕೋಚನೀಯ ಸ್ಥಿತಿಗೆ ವ್ಯಾಪಾರಿಗಳು ಹೊಣೆಗಾರರಲ್ಲ; ಜನರಿಗೆ ಪುಸ್ತಕಗಳು ಬೇಡವಾಗಿವೆ. ಅವುಗಳಲ್ಲಿನ ಜ್ಞಾನದ ಆನಂದವನ್ನು ಪಡೆದುಕೊಳ್ಳುವ ಆಶೆಯೂ ಹಂಬಲಿಕೆಯೂ ಇದ್ದವರು ಬಹಳ ಕಡಮೆ. ಅನೇಕರು ಹೇಳುತ್ತಾರೆ, "ಪುಸ್ತಕಗಳನ್ನು ಕೊಂಡುಕೊಳ್ಳುವಷ್ಟು ಧನಿಕರು ನಾವಲ್ಲ. ಹೊಟ್ಟೆ ಹೊರಕೊಳ್ಳುವುದೆ ನಮಗೆ ಕಷ್ಟವಾಗಿದೆ." ಇದನ್ನು ಅನ್ನುವ ಮಹಾಪುರುಷರೆ ತಾವು ಅಗತ್ಯವಿಲ್ಲದ ಎಷ್ಟೋ ವಿಷಯಗಳಿಗೆ ಖರ್ಚು ಮಾಡುತ್ತಿರುವರೆಂದು ಆಲೋಚಿಸಲಿ. ದೇಹದ ಸುಖಕ್ಕಾಗಿಯೂ ಇಂದ್ರಿಯಗಳ ವಿಲಾಸಕ್ಕಾಗಿಯೂ ಜನರು ವೆಚ್ಚಮಾಡುತ್ತಾರೆ; ಮನಸ್ಸಿಗೂ ಸುಖವನ್ನು ಕೊಡಬೇಕೆಂದು ಯಾರೂ ಲಕ್ಷ್ಯದಲ್ಲಿಡುವುದಿಲ್ಲ.

ಪುಸ್ತಕಗಳಿಗೇನೊ ಈಗ ಮೊದಲಿನಂತೆ ತುಟ್ಟಿಯಿಲ್ಲ. ಕಮ್ಮಿ ಕ್ರಯಕ್ಕೆ ಒಳ್ಳೆಯ ಪುಸ್ತಕಗಳು ದೊರೆಯುತ್ತವೆ. ಜನರು ಉತ್ತೇಜನ ಕೊಟ್ಟರೆ ಕಡಿಮೆ ದರಕ್ಕೆ ಪುಸ್ತಕಗಳನ್ನು ಮಾರುವುದೇನು ಕಷ್ಟವಲ್ಲ. ಮನೆಯನ್ನು ಕಟ್ಟುವಾಗ ಒಳ್ಳೆಯ ಕಲ್ಲುಗಳಿರಬೇಕು. ಸುಂದರವಾದ ಹಂಚುಗಳನ್ನು ಹಾಕಿಸಬೇಕು ಎಂದು ನಮ್ಮ ಮನಸ್ಸಿಗೆ ಹೋಗುತ್ತದೆ. ಈ ರೀತಿಯಲ್ಲಿ ಅರಮನೆಯಂತೆ ಕಟ್ಟಿದ ಮನೆಯನ್ನು ನೋಡಿದರೆ ಅದರ ಯಜಮಾನನು ಧನಿಕನು ಎಂದು ನಮಗೆ ತಿಳಿಯುವುದು. ಅದೇ ಮನೆಯಲ್ಲಿ ಒಂದು ಪುಸ್ತಕದ ಭಂಡಾಗಾರವಿದ್ದರೆ ಅದರ ಶೋಭೆಯೇ ಬೇರೆ ತರದ್ದಾಗುತ್ತದೆ. ಅಲ್ಲಿಯ ಯಜಮಾನನು ಯಾವ ತರದ ಮನುಷ್ಯನು ಎಂದು ನಮಗೆ ತಿಳಿಯುವುದು. ಪುಸ್ತಕಗಳೆಂದರೆ ಪ್ರತಿಯೊಬ್ಬನಿಗೆ ಜೀವನ ಸಾಗರವನ್ನು ಇಣಿಕಿ ನೋಡಲಿಕ್ಕಾಗುವ ಕಿಟಕಿಯಂತಿರುವುವು. ಒಂದು ಮನೆಯಲ್ಲಿ ಪುಸ್ತಕಾಲಯವಿದ್ದರೆ ಅದರಲ್ಲಿನ ಗ್ರಂಥಗಳನ್ನು ನೋಡಿ ಅವುಗಳ ಯಜಮಾನನ ಮನಸ್ಸು ಯಾವ ರೀತಿಯಲ್ಲಿರುವುದು, ಅವನ ರುಚಿ ಯಾವುದಿದೆ ಎಂದು ತಿಳಿದುಬರುತ್ತದೆ. ಆಡಂಬರವು ಮನುಷ್ಯನ ಐಶ್ವರ್ಯವನ್ನು ತೋರಿಸುವುದು. ಆದರೆ ಅವನೊಡನೆ ಪುಸ್ತಕಗಳಿಲ್ಲದಿದ್ದರೆ ಅವನು ಮಾನಸಿಕ ಗರೀಬನೆಂದೇ ಹೇಳಬೇಕಾಗುವುದು.

ಪುಸ್ತಕಗಳನ್ನು ಕೊಂಡುಕೊಳ್ಳದೆ ಇರುವುದು ಹಣ ಇಲ್ಲದಿದ್ದುದರಿಂದಲ್ಲ. ಯಾಕೆಂದರೆ ಉಳಿದ ಎಲ್ಲವುಗಳಿಗೆ ಹಣವಿದ್ದವನಿಗೆ, ಈ ಕೆಲಸಕ್ಕೆ ಮಾತ್ರ ಹಣವಿಲ್ಲವೆಂದರೆ ನಾಚಿಕೆಯಲ್ಲವೆ? ಓದುವ ಅಭಿರುಚಿ ಇಲ್ಲದುದೆ ಅದಕ್ಕೆ ಕಾರಣ. ಈಗಿನ ನಾಗರೀಕತನದಲ್ಲಿ ಜೀವಮಾನವನ್ನು ಸಾಗಿಸಬೇಕಾದರೆ ಮನಸ್ಸನ್ನು ನಾವು ವಿಶಾಲ ಮಾಡಿಕೊಳ್ಳಬೇಕು. ಹಾಗಿದ್ದರೆನೆ ದೇವರು ನಮಗೆ ಕೊಟ್ಟ ಮನಸ್ಸಿನ ಉಪಯೋಗವನ್ನು ನಾವು ಚೆನ್ನಾಗಿ ಮಾಡಿಕೊಂಡಂತಾಗುವುದು.

ಪುಸ್ತಕಗಳು ಮನುಷ್ಯನ ಆಲೋಚನೆಗಳ ಮೂರ್ತಿಗಳು; ಜ್ಞಾನಿಗಳ ಮನಸ್ಸಿನ ಪ್ರತಿಬಿಂಬ; ಅವುಗಳಿಂದ ಸಂತೋಷ ಪಡೆಯದವನು ಈ ಲೋಕದ ಒಂದು ದಾರಿಯನ್ನು ಮುಚ್ಚಿಟ್ಟವನಂತಾಗುವನು. ಪುಸ್ತಕಗಳೆ ನಮ್ಮನ್ನು ಯಾವಾಗಲೂ ವಿದ್ಯಾರ್ಥಿಗಳ ಸುಖದಲ್ಲಿ ಇಡುವ ಸಂಜೀವನವು.

"ಕನ್ನಡ ಕುವರ", ಮಂಗಳೂರು.

(೨೯ನೇ ಪುಟದಿಂದ ಮುಂದುವರಿದುದು)

ಅವರನ್ನು ಒಂದೆಡೆಗೆ ಕರೆದೊಯ್ದು ಕುಳ್ಳಿರಿಸಿ, ತನ್ನ ಕಮೆರಾವನ್ನು ಸರಿಮಾಡಹತ್ತಿದನು. ಅಷ್ಟರಲ್ಲಿ ವಸಂತಕುಮಾರನು ಅಲ್ಲಿಂದೆದ್ದು ಹೋದನು. ನರಸಿಂಗರಾಯನ ಮುಖವು ಕಪ್ಪಾಯಿತು. ಮೈಯಲ್ಲ ಬೆವರಿನಿಂದ ನೆನೆದುಹೋಯಿತು. ಆದರೂ ತೋರ್ಪಡಿಸಿಕೊಳ್ಳಲಿಲ್ಲ. ವಸಂತಕುಮಾರನು ಚಿತ್ರಶಾಲೆಯ ಎಡಭಾಗದ ಕೋಣೆಯೊಂದನ್ನು ಪ್ರವೇಶಿಸುತ್ತಲೆ ನರಸಿಂಗರಾಯನು ಏನೋ ನೆವವನ್ನು ಹೇಳಿ ತಾನೂ ಅಲ್ಲಿಗೆ ಹೋದನು. ಉತ್ತರಕ್ಷಣವೇ "ಇನ್ಸ್‌ಪೆಕ್ಟರ್—ಇನ್ಸ್‌ಪೆಕ್ಟರ್" ಎಂದಂತಾಯಿತು. ಸದಾಶಿವರಾಯನು ಕೂಡಲೇ ಅಲ್ಲಿಗೋಡಿದನು. ವಸಂತಕುಮಾರನೂ ನರಸಿಂಗರಾಯನೂ ಉರುಡಾಡುತ್ತಿದ್ದರು. ಸದಾಶಿವರಾಯನು ಬಲವಾದ್ದೊಂದು ಏಟು ಕೊಟ್ಟೊಡನೆ ನರಸಿಂಗರಾಯನು ಬಿದ್ದುಬಿಟ್ಟನು. ಕೂಡಲೇ ವಸಂತಕುಮಾರನು "ರಘುರಾಮರಾಯನು ನಿರಪರಾಧಿ—ಸದಾರಮೆಯ ಕೊಲೆಗಾರನಿವನು—ಇವನನ್ನು ಕೈದು ಮಾಡಿರಿ" ಎಂದನು. ಆತನನ್ನು (ನರಸಿಂಗರಾಯನನ್ನು) ಕೈದುಮಾಡಿದುದಾಯಿತು. ವಿದ್ಯುಚ್ಛಕ್ತಿಯ ದೀಪವನ್ನು ತಂದು ಕೋಣೆಯೊಳಗೆಲ್ಲ ಪರೀಕ್ಷಿಸಲು ನೆಲವೆಲ್ಲ ರುಧಿರಮಯವಾಗಿರುವುದನ್ನು ಕಂಡರು. ಸರಿ. ಖೂನಿಯು ನಡೆದ ಸ್ಥಳವು ಇದಾಗಿರಬೇಕು ಎಂದು ನಿಶ್ಚಯಿಸಲಾಯಿತು. ನರಸಿಂಗರಾಯನ ಮೇಲೆ ವ್ಯವಹರಣೆ ನಡೆದು ಅವನು ಫಾಶಿಗೊಳಗಾದನು. ನಿರಪರಾಧಿ ಎಂದು ರಘುರಾಮರಾಯನನ್ನು ಬಿಡುಗಡೆ ಮಾಡಿದರು. ಪತ್ತೆದಾರಿ ಕೆಲಸದಲ್ಲಿ ಅತಿಶಯ ಯುಕ್ತಿ ನಡಿಸಿದುದಕ್ಕಾಗಿ ವಸಂತಕುಮಾರ ಸದಾಶಿವರಾಯರಿಗೆ ಹೇರಳ ದ್ರವ್ಯವು ಸರಕಾರದಿಂದ ಬಹುಮಾನವಾಗಿ ಸಿಕ್ಕಿತು.

ವಾಚಕರೆ—ನರಸಿಂಗರಾಯನು ಸದಾರಮೆಯ ಕೊಲೆಗಾರನೆಂತಾದನೆಂದು ನಾವು ನಿಮಗೆ ಹೇಳಲಿಲ್ಲ. ಸದಾರಮೆಯ ಪತಿಯ ತಮ್ಮನಾದ ನರಹರಿಯೇ ನರಸಿಂಗರಾಯನು. ಆತನು ಒಂದು ಚಿತ್ರಶಾಲೆಯನ್ನು ತೆರೆದಿದ್ದನು. ಸದಾರಮೆಯನ್ನು ವರಿಸಬೇಕೆಂದು ಅವನೆಷ್ಟು ಯತ್ನಿಸಿದರೂ ಫಲಿಸಲಿಲ್ಲ. ಆಕೆಯು ತಾನಾಗಿಯೇ ಅಲ್ಲಿಗೆ ಬಂದುದರಿಂದ ಅವನಿಗತ್ಯಾನಂದವಾಯಿತು. ಆಕೆಯು ತನ್ನ ಭಾವಚಿತ್ರವನ್ನು ತೆಗೆಯಬೇಕೆಂದು ನರಸಿಂಗರಾಯನೊಡನೆ ಕೇಳಿಕೊಂಡಳು. ಆತನು ಆಕೆಯನ್ನು ವಸಂತಕುಮಾರನಿಗೂ ಅವನಿಗೂ ಉರುಡಾಟವಾದ ಕೋಣೆಗೆ ಕರೆದೊಯ್ದು ಅಲ್ಲಿ ತನ್ನ ಇಚ್ಛೆ ಪೂರೈಸ ಲೆತ್ನಿಸಿದನು. ಅವಳು ಅಲ್ಲಗಳೆದುದರಿಂದ ಆಕೆಗೆ ಒಂದೇಟು ಹೊಡೆದನು. ಅವಳು ಗತಪ್ರಾಣಳಾಗಿ ಧರಾತಲಕ್ಕೆ ಬಿದ್ದಳು. ಕೊಲೆಯ ಅಪರಾಧವು ತನ್ನ ಮೇಲೆ ಬರಬಹುದೆಂದು ಹೆದರಿ ಹೆಣವನ್ನು ಯಾರೂ ತಿಳಿಯದಂತೆ ತನ್ನ ಚಿತ್ರಶಾಲೆಯ ಹಿಂಬದಿಯ ತೋಡಿಗೆ ಬಿಸುಟನು. ಅದು ಪೋಲೀಸ್ ಇನ್ಸ್‌ಪೆಕ್ಟರರಿಗೆ ತಿಳಿದು, ಪತ್ತೆದಾರಿಯಾದ ವಸಂತಕುಮಾರನನ್ನು ತನಿಖೆಗಾಗಿ ನಿಯಮಿಸಿದರು. ಮುಂದಿನ ವಿಚಾರವಂತೂ ಮೇಲೆ ವಿವರಿಸಿರುತ್ತೇವೆ.

ಕೆ. ಸೂರ್ಯನಾರಾಯಣರಾವ್,
ಕಂಬಳ, ಮಂಗಳೂರು.

ಸಿದರು. ಇದ್ದುದು ಇವರನ್ನು ಕೂಡಿ ೧೧೧ ಮಂದಿ. ಆದರೆ ಮೆರವಣಿಗೆ ಸಾಲು, ದೀವಟಿಗೆ ಕಂಡರೆ ಕನಿಷ್ಠ ೫೦೦ ಜನರಿಗೆ ಕಡಿಮೆ ಇಲ್ಲವೆಂದು ಕಾಣುತಿತ್ತು. ಮೇಲಾಫೀಸರರು ಅವರು ಬಾರದೆ ಹೋದ್ದಕ್ಕಾಗಿ ಮಂಗಳೂರಲ್ಲಿ ಸ್ವೀಕಾದರಂತೆ. ಆದರೆ ನಾಲ್ಕು ದಿವಸಗಳಲ್ಲಿ, ಜಾರ್ಮೂಡಿಯಲ್ಲಿ ನಡೆದ ಆ ಅದ್ಭುತ ಮೆರವಣಿಗೆ ಸುದ್ದಿ ಕೇಳಿ ಆಶ್ಚರ್ಯಭರಿತರಾದರು. ಅದರ ಮೇಲೆ ಸುಬ್ಬಪ್ಪಯ್ಯನೆಂದರೆ ಕಲೆಕ್ಟರಿಗೆ ಕುಲಪುರೋಹಿತರಿದ್ದಂತೆ. ಅವರಾದರೂ ತಮ್ಮ ಆಫೀಸರರ ಕಡೆಗೆ, ದೈವಕ್ಕೆ ನಡೆದುಕೊಳ್ಳುವ ಹಾಗೆ, ಕಾಲಕಾಲಕ್ಕೆ ಸರಿಯಾದ ಬಲಿ, ಪೂಜೆ, ನೇಮಗಳಿಂದ ತೃಪ್ತಿಪಡಿಸುತ್ತಿದ್ದರೆಂಬುದು ಹೇಳಬೇಕಿಲ್ಲವಷ್ಟೆ.

ಅದೆಲ್ಲಾ ಆಯಿತು. ಸರಿದು ಹೋಯಿತು ಪೂರ್ಣ ಅವರ ಕಾಲದಲ್ಲಿ ಈಗ ಅವರು ಪೆನ್ಶನುದಾರರು ಹಳ್ಳಿಯಲ್ಲೇ ವಾಸ ಹೆಚ್ಚಿನ ಸಂಪಾದನೆಯಿಲ್ಲ. ಅವರು ತೋರಿಸಿದ ರಾಜಭಕ್ತಿಗಾಗಿ ರಾವ್‍ಬಹುದ್ದೂರಿಯೇನೊ ಸರಕಾರದವರು ಅನುಗ್ರಹಿಸಿದ್ದಾರೆ ಮೇಲಿನ ದೇವರ ಅನುಗ್ರಹ ಅವರ ವಿಷಯದಲ್ಲಿ ತನಗೆ ಕಡಿಮೆಯಾಗಲಿಕ್ಕಿಲ್ಲ ಎಂಬ ಭರವಸೆ ಅವರಿಗೆ ಇದೆ ಆದರೆ ಕೀಳು ದೈವಗಳು ಅಂದರೆ—ಶ್ಯಾನುಭಾಗರು, ಪಟೇಲರು, ಅವರ ಅನ್ನ ತಿಂದ ನೂರಾರು ಹಳ್ಳಿಗಳ ಸಾವಿರಾರು ಗ್ರಾಮಸ್ಥರು, ಅವರು ಒಂದು ಕಾಲದಲ್ಲಿ ತಹಶೀಲ್ದಾರರಾಗಿದ್ದರು ಎಂಬ ವಿಚಾರ ಮರೆತ ಹಾಗೆ ಕಾಣುತ್ತದೆ. ರಾಮಾಯಣ ಕಳೆದ ನಂತರದ ಹನುಮಂತ ನಾನು ಅಂತ ಸುಬ್ಬಪ್ಪಯ್ಯ ಅನ್ನುವುದಿತ್ತು ಹನುಮಂತ ಚಿರಂಜೀವಿ ಹೌದು, ಪೂಜೆಯೂ, ಪಿತೃಗಳಿಗೆ ಪಿಂಡ ಹಾಕಿದ ಹಾಗೆ ನಗುತ್ತದೆ. ಎಂದೂ ನಿಜ—ಆದರೆ ಆ ಸಮುದ್ರ ಲಂಘನ ಕಾಲದ—ಗೌರವ, ಠೀವಿ, ಅಧಿಕಾರ ಈಗಿಲ್ಲ. ಊರ ಹೊರಗಿನ ಗುಡಿಯು ಮುಂದೆ ಬಾಲ ನಿಕ್ರಿಸಿ ಕೂತಿರಬೇಕಷ್ಟೆ. ಆದರೆ ಅವರಿಗೆ ಊರ ಹಂಗೇನು? ಸ್ವಂತ ಕಷ್ಟಪಟ್ಟು ದುಡಿದ ಲಕ್ಷರೂಪಾಯಿ ಸಂಪತ್ತಿರುವಾಗ ಊರ ಲಕ್ಷ್ಯ ಅವರಿಗೇನು?

—+—+—+—

# ಪುಸ್ತಕ ಭಂಡಾಗಾರ.

ನಮ್ಮ ಊರುಗಳಲ್ಲಿ ಪುಸ್ತಕಗಳು ವಿದ್ಯಾರ್ಥಿಗಳ ಕೈಗಳಲ್ಲಿ ನೋಡ ಸಿಗುವುವಲ್ಲದೆ, ಇತರರಲ್ಲಿ ಇರುವುದು ವಿರಳ ಪುಸ್ತಕವೆಂದರೆ ಪರೀಕ್ಷೆ ಮಾಡಲಿಕ್ಕಾಗುವ ಕೋಶವೆಂದೇ ಎಲ್ಲರ ಅಭಿಪ್ರಾಯ ಹೀಗಾಗಿ ಪರೀಕ್ಷೆ ಮುಗಿದೊಡನೆ ಓದುವ ಅಭ್ಯಾಸವೂ ಕೊನೆಗಾಣುವುದು. ಈ ಸಂಗತಿಯು ವಿಷಾದಕರವಲ್ಲವೆ?

ಪುಸ್ತಕಗಳೆಂದರೆ ಜ್ಞಾನಕೋಶವು. ಅವುಗಳಲ್ಲಿ ಭೂಲೋಕದ ಪ್ರಾಚೀನ ಅಥವಾ ಈಗಿನ ಮಹಾಪುರುಷರ ಮತ್ತು ಜ್ಞಾನಿಗಳ ಆಲೋಚನಾತರಂಗಗಳು ಅಡಗಿಕೊಂಡಿವೆ ಅವುಗಳನ್ನು ಓದಿದರೆ ಜ್ಞಾನ ಸಂಪಾದನೆ, ಅಲ್ಲದೆ ದೇಶದ ಜನತೆಗಳ ಪರಿಚಯವನ್ನೂ ಮಾಡಿಸುದು. ಪುಸ್ತಕ ಪ್ರಪಂಚವು ಭೂಲೋಕಕ್ಕಿಂತಲೂ ವಿಸ್ತಾರ ಅವುಗಳ ವಾತಾವರಣಕ್ಕೆ ಗಡಿಯಿಲ್ಲ ಆ ಲೋಕದಲ್ಲಿ ಧುಮುಕಿದಷ್ಟಕ್ಕೆ ಅದರ ವಿಶಾಲತೆಯು ಹೆಚ್ಚಾಗಿ ನಮ್ಮ ಮನಸ್ಸಿನ ಭಾವನೆಗಳು ಪಕ್ವವಾಗುವುವು. ಜ್ಞಾನ ಸಂಪಾದನೆಯು ಮಾತ್ರ ಪುಸ್ತಕಗಳ ಉದ್ದೇಶವಲ್ಲ ಮನಃಶಾಂತಿಯೂ, ಆಹ್ಲಾದವೂ ಪುಸ್ತಕಾವಲೋಕನದಿಂದಲ್ಲದೆ ಮತ್ತೇತರಿಂದ ದೊರಕುವುದು? ಯಾರ ಸ್ನೇಹವನ್ನು ಕಳೆದುಕೊಂಡರೂ ಗ್ರಂಥಗಳ ಪರಿಚಯವನ್ನು ಮಾಡದಿರುವುದು ನಾಗರೀಕನ ಲಕ್ಷಣವಲ್ಲ ಹಾಗಿಲ್ಲದಿದ್ದರೆ ನಮಗೂ, ಮೂಕ ಪ್ರಾಣಿಗಳಿಗೂ ಯಾವ ತರದ ಭೇದ?

ಒಂದು ಮನೆಯನ್ನು ಬಿಟ್ಟು ಇನ್ನೊಂದೆಡೆಗೆ ಹೋಗುವಾಗ, ತೆಗೆದುಕೊಂಡು ಒಯ್ಯುವ ಸರಕುಗಳಲ್ಲಿ ಪುಸ್ತಕಗಳ ಪೆಟ್ಟಿಗೆ ಇರುವುದನ್ನು ನಾನು ಎಂದೂ ನೋಡಿಲ್ಲ. ದಬ್ಬೆಗಳನ್ನೂ, ಹರಕು ಬಟ್ಟೆಗಳನ್ನೂ, ಮುರಿದ ಕುರ್ಚಿಗಳನ್ನೂ ಚೆನ್ನಾಗಿ ಕಾದಿಡುವವರಿಗೆ ಪುಸ್ತಕಗಳ ಕಡೆಗೆ ಲಕ್ಷ್ಯವಾದರೂ ಹೇಗೆ ಹೋದೀತು?

ಮಧ್ಯಮ ತರಗತಿಯ ಮನೆತನವನ್ನು ನೋಡಿದರೆ ಅವರಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳುವ ಆಲೋಚನೆ ಇದ್ದವರು ಬಹಳ ಕಡಿಮೆ ಅವುಗಳ ಪ್ರಯೋಜವು ಮಾತ್ರವಲ್ಲ, ಅವುಗಳಿಂದಾಗುವ ಆನಂದದ ಗಂಧವು ಕೂಡ ಅವರೆಡೆಗೆ ಬೀಸಲಿಲ್ಲವೆನ್ನಬಹುದು ಮನೆಗಳನ್ನು ಚೊಕ್ಕವಾಗಿಡಲಿಕ್ಕೂ, ತಮಗೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳಲಿಕ್ಕೂ ಹಣ ವೆಚ್ಚ ಮಾಡುವುದೆಂದರೆ ಪಾತಕವೆಂದು ಯಾರೂ ಎಣಿಸುವುದಿಲ್ಲ ಆದರೆ ಪುಸ್ತಕಗಳನ್ನು ಕೊಂಡುಕೊಳಬೇಕೆಂದರೆ ಅವರ ಕಣ್ಣು ದೊಡ್ಡದಾಗುವುದು. ಮುಖವು ಕಳೆಗುಂದುವುದು.

ಶ್ರೀಮಂತರು ತಮ್ಮ ಸುಖವಿಲಾಸಗಳಿಗೆ ಹಣ ವೆಚ್ಚಮಾಡತ್ತಾರಲ್ಲವೆ? ತಿನ್ನುವುದಕ್ಕೂ, ಕುಡಿಯುವುದಕ್ಕೂ, ಉಟ್ಟುಕೊಳ್ಳುವುದಕ್ಕೂ ಅವರೇನೂ ಕಡಿಮೆ ಮಾಡುವುದಿಲ್ಲ ಉಡಿಗೆ ನುಣುಪಾದ ಬಟ್ಟೆಯನ್ನು ಕೋರುತ್ತಾರೆ ಆದರೆ ತಮ್ಮ ಮನಸನ್ನು ಒಂದು ಪುಸ್ತಕಾಲಯದಿಂದ ಶೃಂಗರಿಸಬೇಕೆಂದು ಅಂತವರ ಮನಸ್ಸಿಗೆ ಹೊಳೆಯುವುದಿಲ್ಲ ಕೆಲವರಲ್ಲಿ ಯಾವ ಪುರಾತನ ಕಾಲದ್ದೊ ಸ್ವಲ್ಪ ಪುಸ್ತಕಗಳಿರಬಹುದು ಆದರೆ ಅವುಗಳು ತಗಣೆಗಳಿಗೆ ಆಹಾರವಲ್ಲದೆ, ಓದಿ ಸಂತೋಷಪಡೆಯಲಿಕ್ಕಲ್ಲ. ಹಾರ್ಮೋನಿಯಮ್, ಗ್ರಾಮಾಫೋನ್ ಮುಂತಾದುವುಗಳನ್ನು ಕೊಂಡುಕೊಳಲಿಕ್ಕೆ ನಾನ್ನೂರು, ಐನೂರು ರೂಪಾಯಿಗಳನ್ನು ಖರ್ಚುಮಾಡುವವರು, ವರ್ಷಕ್ಕೆ ಇಪ್ಪತ್ತು ಮೂವತ್ತು ರೂಪಾಯಿಗಳನ್ನು ಖರ್ಚುಮಾಡಿದರೆ ಕೆಲವು ವರ್ಷಗಳಲ್ಲಿಯೆ ಒಂದು ಸುಂದರವಾದ ಗ್ರಂಥಾಲಯವನ್ನು ತಮ್ಮ ತಮ್ಮ ಮನೆಗಳಲ್ಲಿ ಮಾಡಿಕೊಳ್ಳಬಹುದು ಹಾಗೆ ಮಾಡಿದರೆ ಭೂಲೋಕದ ಜ್ಞಾನಿಗಳೆಲ್ಲರೂ ಅವರ ಕಪಾಟಿನಲ್ಲಿ ಕುಳಿತಂತಾಗಲಿಲ್ಲವೆ?

ಯಾವ ಊರಿಗೆ ಹೋದರೂ ಅಂಗಡಿಗಳಿಗೆ ಈಗೇನು ಕಡಿಮೆಯಿಲ್ಲ. ಆದರೆ ಅವುಗಳಲ್ಲಿ ಪುಸ್ತಕ ಮಾರುವ ಅಂಗಡಿಗಳೆಷ್ಟೆಂದು ನೀವು ಕಂಡುಹಿಡಿದಿರುವಿರಾ? ಇರುವ ಅಂತಹ ಅಂಗಡಿಗಳಲ್ಲಿ ಶಾಲಾ ಪುಸ್ತಕಗಳಲ್ಲದ ಇತರ ಪುಸ್ತಕಗಳು ಸಿಗುವುದು ದುರ್ಲಭ ಈ



ಇಲ್ಲವೋ ಹೇಳು—ವಿಚಾರವನ್ನು ಒತ್ತಟ್ಟಿಗಿರಿಸಿ ವ್ಯರ್ಥವಾಗಿ ಕಷ್ಟಕ್ಕೆ ತುತ್ತಾಗದಿರು—ಜೋಕೆ!

ರುಕ್ಮಿಣಿ—ವಿಧಿವಿಲಾಸವಿದು. ನಿರಪರಾಧಿಯಾದ ನನ್ನನ್ನೇಕೆ ಹೆದರಿಸುವೆ? ಮೊದಲೇ ದುಃಖಾಗ್ನಿಯಲ್ಲಿ ಬೆಂದ ನನ್ನನ್ನು ಮತ್ತಷ್ಟು ಭಂಗಿಸುವುದೇಕೆ?

ವಸಂತ—ರುಕ್ಮಿಣಿ, ನಿನಗೆ ವಿಚಾರಗಳ ಪರಿಣಾಮವು ತಿಳಿದಿಲ್ಲ ಪತ್ತೆದಾರಿಯು ಸಾಮಾನ್ಯ ಕೆಲಸವೆಂದು ಭಾವಿಸಧಿರು ನೀನು ಈ ರೀತಿಯಾಗಿ ವರ್ತಿಸುವುದು ನಿನಗೆ ಹಾಳೆಂದು ತಿಳಿದಿರು ಪತ್ತೆದಾರಿಯಲ್ಲಿ ವಿಶ್ವಾಸವಿರಬೇಕು — ಹೇಳು — ಜಾಗ್ರತೆಯಾಗಿ ತಿಳಿಸು.

ರುಕ್ಮಿಣಿ—ಆಗಲಿ, ನನಗೆ ತಿಳಿದ ವಿಚಾರವನ್ನು ತಿಳಿಸುತ್ತೇನೆ. ನನಗೇತರ ಭಯ? ನನ್ನ ವಿವಾಹವಾದ ಐದು ವರುಷಗಳ ನಂತರ ಎಂಟು ವರುಷ ಪ್ರಾಯದ ನನ್ನ ಸಹೋದರಿ ಸದಾರಮೆಯನ್ನು ಧನಿಕನಾದ ಇಪ್ಪತ್ತು ವರುಷದ ಯುವಕನೋರ್ವನಿಗೆ ಲಗ್ನಮಾಡಿ ಕೊಟ್ಟರು ಬಳಿಕ ನನ್ನ ತಂದೆಯೂ ಭಾವನೂ ಒಟ್ಟಿನಿಂದ ವ್ಯಾಪಾರ ನಡಿಸಿ ಅಪಾರ ದ್ರವ್ಯ ನಷ್ಟವಾಯಿತು ಸಾಲಗಾರರ ಕಾಟವನ್ನು ತಡೆಯಲಾರದೆ ಅವರೀರ್ವರೂ ವಜ್ರವನ್ನು ತಿಂದು ತೀರಿಕೊಂಡರು. ಸದಾರಮೆಗೆ ತನ್ನ ಪತಿ ವಿಯೋಗ ದುಃಖ ಪ್ರಾಪ್ತಿಯಾಗುವಾಗ ಲಗ್ನದ ವಿಚಾರವೇ ತಿಳಿದಿರಲಿಲ್ಲ ಬಳಿಕ ನನ್ನ ಪತಿಯು ಸದಾರಮೆಯನ್ನು ಮಗಳಂತೆ ಪೋಷಿಸುತ್ತಿದ್ದು ಆಕೆಗೆ ವಿ ... ತನಕ ಕಲಿಸಿದರು ಆಕೆಯ ಪ್ರಾಯವು ವಿ ... ವಾಸಾಗುವಾಗ ೨೨ ವರುಷ ಆಕೆಯ ಪತಿಯ ಸಹೋದರ ನರಹರಿಯು ಸದಾರಮೆಯನ್ನು ತಾನು ವರಿಸುವುದಾಗಿ ಹೇಳುತ್ತಿದ್ದುದರಿಂದ ನನ್ನ ಪತಿಗೆ ಸದಾರಮೆಯ ನಡತೆಯ ಕುರಿತು ಅನುಮಾನವುಂಟಾಯಿತು

ಇಷ್ಟಕ್ಕೆ ಇನ್ಸ್‌ಪೆಕ್ಟರ್ ಸದಾಶಿವರಾಯನು ಒಂದುದರಿಂದ ರುಕ್ಮಿಣಿಯು ಮಾತನ್ನು ನಿಲ್ಲಿಸಿದಳು ಸದಾಶಿವರಾಯನು ರುಕ್ಮಿಣಿಗೊಂದು ಭಾವಚಿತ್ರವನ್ನು ತೋರಿಸಿ "ಇದಾರ ಚಿತ್ರ ಹೇಳಬಲ್ಲೆಯಾ?" ಎಂದು ಕೇಳಿದನ—

ರುಕ್ಮಿಣಿ—ಸದಾರಮೆಯ ಭಾವಚಿತ್ರವು

ಸದಾಶಿವ—ಸದಾರಮೆಯನ್ನು ಪ್ರೀತಿಸುತ್ತಿದವನಾರು ತಿಳಿದಿರುವುದೆ?

ರುಕ್ಮಿಣಿ—ಇಲ್ಲ, ಆ ವಿಚಾರವು ನನಗೆ ತಿಳಿದಿಲ್ಲ

ಒಂದು ಮೋಟರ್ ಕಾರು ಒಂದು ವಸಂತಕುಮಾರನ ಮನೆ ಬಾಗಿಲಲ್ಲಿ ನಿಂತಿತು ಹೆಡ್ ಕಾನ್‌ಸ್ಟೇಬಲ್ ಶ್ಯಾಮಸುಂದರನು ಬಂದು ವಸಂತಕುಮಾರನ ಕಿವಿಯಲ್ಲೇನೋ ಅಂದನು ಆಗ ವಸಂತ ಕುಮಾರನು "ಒಹೋ ಸರಿ, ಸರಿ ಹಾಗಾದರೆ ಅವನನ್ನು ಇಲ್ಲಿ ಬರಮಾಡು" ಎಂದನು ಕೂಡಲೇ ಡ್ರೈವರನಂತೆ ಪೋಷಾಕು ಧರಿಸಿದವನೊಬ್ಬನು ಬಂದು ವಸಂತಕುಮಾರನ ಇದಿರು ನಿಂತನು ಇನ್ಸ್‌ಪೆಕ್ಟರ್ ಸದಾಶಿವರಾಯನೂ ಶ್ಯಾಮ ಸುಂದರನೂ ಹೊರಟು ಹೋದರು ವಸಂತಕುಮಾರನು ಡ್ರೈವರನಂತೆ ವೇಷ ಧರಿಸಿದ್ದ ಮನುಷ್ಯನನ್ನು ಕುಸು ಕುಳಿತುಕೊಳ್ಳ ಹೇಳಿ ರುಕ್ಮಿಣಿಯ ಮಾತನ್ನು ಕೇಳಹತ್ತಿದನು.

ರುಕ್ಮಿಣಿ—ಸದಾರಮೆಯು ಬಂದಳು. ಕೋಪದಿಂದ ಉರಿಯುತ್ತಿದ್ದ ನನ್ನ ಪತಿಯು ಆಕೆಯನ್ನು ಕೂಡಲೇ ಮನೆಯಿಂದ ಹೊರಡಿಸಿದನು. ಪ್ರತಿಮಾತೆತ್ತದೆ ಆಕೆಯು ಹೊರಟುಹೋದಳು. ಮುಂದಿನ ವಿಚಾರ ನನಗೆ ತಿಳಿದಿಲ್ಲ.

ವಸಂತ—(ಡ್ರೈವರನನ್ನು ಕುರಿತು) ಮೊನ್ನೆ ನಡೆದ ಕೊಲೆಯ ವಿಚಾರವಾಗಿ ನಿನಗೇನಾದರೂ ತಿಳಿದಿರುವುದೆ?

ಡ್ರೈವರ್—ಸ್ವಾಮಿ! ಕೊಲೆಯ ವಿಚಾರ ತಿಳಿದಿಲ್ಲ. ಆದರೆ ಏಳೆಂಟು ದಿವಸಗಳ ಕೆಳಗೆ ಒಂದೊಂದು ಸಾಯಂಕಾಲ ಲಾಲಬಜಾರಿನ ಬಳಿ ಓರ್ವ ಲಲನೆಯು ನಿಂತಿದ್ದಳು. ಅವಳ ವದನವು ಬಾಡಿತ್ತು ನಾನು ಆ ಮಾರ್ಗವಾಗಿ ನನ್ನ ಮೋಟಾರನ್ನು ಓಡಿಸುತ್ತಾ ಹೋಗುತ್ತಿದ್ದ ಆಗ ಆಕೆಯು ಮೋಟಾರು ನಿಲ್ಲಿಸ ಹೇಳಿ ನರಸಿಂಗರಾಯರ ಚಿತ್ರಶಾಲೆಗೆ (Photo Studio) ಕರೆದೊಯ್ಯಬೇಕೆಂದು ಹೇಳಿದಳು ನಾನು ಆಕೆಯನ್ನು ಅಲ್ಲಿಗೆ ಕರೆದೊಯ್ದು ಬಿಟ್ಟು ನನ್ನ ದಾರಿ ಹಿಡಿದೆನು. ಹೆಚ್ಚಿನ ವಿಚಾರವಾಗಲೀ ಕೊಲೆಯಾದವಳಾರೆಂಬುದಾಗಲೀ ನನಗೆ ಗೊತ್ತಿಲ್ಲ.

ವಸಂತ—(ಕೆಲವು ಚಿತ್ರಗಳನ್ನು ತೋರಿಸಿ) ನೀನು ಕರೆದೊಯ್ದ ನಾ... ಮಣಿಯ ಭಾವಚಿತ್ರವು ಈ ಚಿತ್ರಗಳ ನಡುವೆ ಇರುವುದೇ?

ಡ್ರೈವರ್—(ಎಲ್ಲ ಚಿತ್ರವನ್ನು ನೋಡಿ ಸದಾರಮೆಯ ಚಿತ್ರ... ಈಚೆಗೆ ತೆಗೆದು) ಇದೇ ಆ ಲಲನೆಯ ಭಾವಚಿತ್ರವು.

ವಸಂತ—ಸರಿ ಹಾಗಾದರೆ ನೀನು ಹೊರಗೆ ಕಾದಿರು. ನಾ... ಗಲೇ ಬರುವೆವು ರುಕ್ಮಿಣಿ—ನೀನಿನ್ನು ಹೋಗಬಹುದು.

— ೨ —

ರಘುರಾಮರಾಯರೆಂದರೆ ರುಕ್ಮಿಣಿಯ ಗಂಡ. ಇನ್ಸ್‌ಪೆಕ್ಟರ್ ಸದಾಶಿವರಾಯನೂ, ಶ್ಯಾಮಸುಂದರನೂ ರಾ... ಎರಡು ಗಂಟೆ ಸಮಯಕ್ಕೆ ರಘುರಾಮರಾಯರಲ್ಲಿಗೆ ಬಂ... ಬಾಗಿಲು ಹಾಕಿದ್ದಿತು ಬಾಗಿಲಲ್ಲಿ ಕರೆಯುತ್ತಲೆ ರುಕ್ಮಿಣಿಯು ಬಾಗಿಲು ತೆರೆದಳು

ಶ್ಯಾಮ—ರಘುರಾಮರಾಯನನ್ನು ಸದಾರಮೆಯ ಕೊಲೆಯ ವಿಚಾರದಲ್ಲಿ ಕೈದುಮಾಡಬೇಕಾಗಿದೆ. ...ವರೆಲ್ಲಿ?

ರುಕ್ಮಿಣಿ—ಪ್ರಮಾದವಿದು! ಏನೇ? ನನ್ನ ಪತಿಯು ಕೊಲೆಗಾರನೆಂದೆಯಾ?

ಶ್ಯಾಮ—ನನಗದು ತಿಳಿದಿಲ್ಲ ನನ್ನ ...ಲಸವನ್ನೀಗ ಜ್ಯಾರಿಮಾಡಬೇಕಾಗಿದೆ ಸಂಭಾಷಣೆಗ... ಮಯವಲ್ಲ.

ವಸಂತಕುಮಾರನು ಸ್ವಾಕಳ...ಲ್ಲಿ ಬಂದು "ರಘುರಾಮನಿಲ್ಲಿರುವನು ಪೋಲೀಸರು ವಶ... ಇರಲಿ. ನಾವೀಗ ಇನ್ನೊಬ್ಬನನ್ನು ಪತ್ತೆಮಾಡಬೇಕಾಗಿದೆ ...ಕ್ಮಿಣಿಯೂ ನೀವೂ ಬರಬೇಕಾಗಿದೆ" ಎಂದು ಸದಾಶಿವ ರುಕ್ಮಿಣಿ...ಯೊಂದಿಗೆ ತನ್ನ ಮನೆಯಿದಿರು ಕಾದಿದ್ದ ಮೋಟಾ... ...ನಲ್ಲಿ ...ನರಸಿಂಗರಾಯರ ಚಿತ್ರಶಾಲೆಯ ಇದಿರು ಇಳಿದರು. ನರಸಿಂಗರಾಯನೊಡನೆ ವಸಂತಕುಮಾರನು "ನಮ್ಮ ಮೂವರ ಚಿತ್ರ ...ಯಬೇಕಾಗಿದೆ" ಎಂದನು. ನರಸಿಂಗರಾಯನು ಅನುಮತಿಸಿ

(೩೩ನೇ ಪುಟಕ್ಕೆ ಮುಂದುವರಿಯುದೆ)

ಕರ್ನಾಟಕದ ದೇಶ ಜ್ಯೋತಿಗಳು. ಲೇಖ ೯.

# ರಾವ್ ಬಹದೂರು ಸುಬ್ಬಪ್ಪನವರು.

(ಲೇಖಕ: ಶ್ರೀ ಕೊ. ಶಿ. ಕಾರಂತರು.)

ಸುಬ್ಬಪ್ಪನವರು ಹಳೇ ಕಾಲದ ಮನುಷ್ಯರಂತೆ. ಈಗಿನ [illegible]ದ ಹುಡುಗರಾದ ನಮ್ಮ ಕಣ್ಣಿಗೆ ಅವರನ್ನು ಕಂಡರೆ ಅಷ್ಟೊಂದು [illegible]ವಾಗಿ ಕಾಣಿಸುವುದಿಲ್ಲ. ನಮಗಿಂತ ಹಳಬರೆ ಅವರು ನಿಜ [illegible] ಅವರ ಮೀಸೆ, ಮುಂಡಾಸು, ಠೀವಿ, ಜಬ್ಬಾ—ಗಳನ್ನು ಕಂಡರೆ [illegible] ೩೦-೩೫ರೊಳಗೇನೆ ವಯಸ್ಸು ಎನ್ನಬಹುದು. ಆದರೂ [illegible]ಸದಿಂದ ಪೆನ್ಶನ್ ಹೊಂದಿದುದು ನಿಜ. ತಲೆಗೂದಲು [illegible]ದ್ದು, ಅಂದರೆ ಇದ್ದ ತುಸು ಕೂದಲು ನರೆತದ್ದು ನಿಜ. [illegible]ದಿಂದ ಯಾರಪ್ಪಾದರೂ ಹಳಬರೆಂದು ಅನ್ನಲಿಕ್ಕೆ ಬರುವುದಿಲ್ಲ. [illegible]ದವರಲ್ಲ, ಮುದುಕರಲ್ಲ. ಸುಬ್ಬಪ್ಪನವರ ಲಗ್ನಪತ್ರಿಕೆ, [illegible]ಕ್ಷರದಲ್ಲಿ ಮುದ್ರಿತವಾದುದು ನನಗೆ ಮೊನ್ನೆ ಮೊನ್ನೆ ಕಂಡ [illegible]. ಅವರೀಗ, ಸರಕಾರಿ ಉದ್ಯೋಗದಲ್ಲಿ ದುಡಿದು ದಣಿದು, [illegible] ವೇತನವೋ, ಶಿಸ್ತೀಕೋ ಅದನ್ನು ಪಡೆಯುತ್ತ ತಮ್ಮ ಹಳ್ಳಿಯ [illegible]ಲ್ಲಿ ಸುಖವಾಗಿ ವಾಸವಾಗಿದ್ದಾರೆ. ಅವರು, ತಮ್ಮ ತರುಣ [illegible]ಸಾರವನ್ನು ಬೆಳಗುವುದಕ್ಕೆ ಎಂಬುವಂತೆ ಒಬ್ಬನೇ ಒಬ್ಬ [illegible] ಜೀವದ ಸಂಗತಿಯೆಂದರೆ, ಅವರು ಮೊದಲಿನ ಮಡದಿಯ [illegible]ವರಿಗೆ ಸಂತಾನ ಲಾಭವನ್ನು ಉಂಟುಮಾಡಲಿಲ್ಲ. ಅವರ [illegible]ಗ ದೇವರು ಮುನಿದನೋ ಎಂಬಂತೆ, ಅವರೂ, ತಮ್ಮ [illegible]ನೆಯ ಮದುವೆಗೆ ಮೊದಲು, ರಜೆಹೊಂದಿದರು. [illegible] ಕೌಟುಂಬಿಕ ಜೀವನವೆಂದರೆ ಸುಖದ ಸರಸ್ಸು.

ಅವರು [illegible] ಪೇಟೆ ಜೀವನದಿಂದ ಬೇಸರಗೊಂಡು ಹಳ್ಳಿಯ ವಿಶ್ರಾಂತಿ ಜೀವನಕ್ಕೆ [illegible]ದ್ದಾರೆಂದೆನಲ್ಲಾ. ಅಲ್ಲೂ ಅವರನ್ನು ಅವರ ಗೌರವವು ಬೆನ್ನು ಬಿಡಲಿಲ್ಲ. ರಾವ್ ಬಹದೂರರ ಪದವಿ ಅವರಿಗೆ ದೊರೆತುದು ಕಳೆದ ವರುಷ. ಈ ಬಿರುದು, ಚಿಕ್ಕ ಮನೆ, ತಕ್ಕ ಸಂಪತ್ತು, ಅವರ ಜೀವನದ ಮೆರುಗುಗಳು ಎಲ್ಲವೂ ಸ್ವಾರ್ಜಿತವಾದುವು. ಬಲು ಕಷ್ಟದಿಂದ ಅಲ್ಲಿಂದ ಇಲ್ಲಿಗೆ ಮುಟ್ಟಿದವರು ಅವರು. ಅವರ ತಂದೆಯ ಹೆಸರು ರಾಮು—ಅಂತ. ಆದುಗೆ ರಾಮು ಎಂಬುದು [illegible] ಹೆಸರಾಗಿತ್ತು, ಅವರು ಬದುಕಿದ್ದಾಗ [illegible] ಸತ್ತ ಮೇಲೆ ಎಲ್ಲರೂ ಅವರನ್ನು, ತಹಶೀಲ್ದಾರರ ತಂದೆ ರಾಮಯ್ಯನವರು ಎಂದೇ ಕರೆಯುತ್ತಾರೆ. ಆಗಿನ ರಾಮು ಅಂದರೆ [illegible] ರಾಮು. ಯಾರೋ [illegible] ಮದುವೆ ಮಾಡಿಸಿ ಅವರ ಮೇಲೆ [illegible]ವಿಟ್ಟರು. ಅವರ ಹೊಟ್ಟೆಯಲ್ಲಿ ಹುಟ್ಟಿದ ಇವರು, ಮೂರನೆ [illegible]ಮಕ್ಕಳು. ಉಳಿದವರಿಬ್ಬರು ಎಲ್ಲೋ, ಏನೋ ಕೆಲಸ [illegible]ತ್ತ ಇರುವರಂತೆ. ಇವರು ಹಾಗೂ [illegible] ಬಡತನದಲ್ಲಿ [illegible] ಬರೆಹ ಇಂಗ್ಲಿಷು ಕಲಿತರು. ಆ ಮೇಲೆ ದೈವಾನುಗ್ರಹದಿಂದ [illegible] ಆಫೀಸಿನಲ್ಲಿ ಸ್ವಲ್ಪ ಸಮಯ ಗುಮಾಸ್ತರಾದರು. [illegible] "ಅಸ್ಟಾಂಗಿ". ಅಲ್ಲಿಂದ ಕೆಲವು ದಿನ "ಅಬಕಾರಿ" ಇಲಾ[illegible] [illegible] ಅವರಿಗೆ ಉಪಕಾರಿ ಗಾಳಿ ತಿರುಗಿದರು. ತಿರುಗಿ ರೆವಿನ್ಯೂ ಇಲಾಖೆಗೆ ಸೇರಿದರು. ತಿರುಗಿ ಇಲಾಖೆ ಬದಲಾಗಲಿಲ್ಲ. ಅದೃಷ್ಟದ ಮಟ್ಟಿಗೆ ಆ ಬಡತಿ ಬಂತು. ಗುಮಾಸ್ತೆ, ಸರ್ಕಿಟು ಗುಮಾಸ್ತೆ, ಮಣೆಗಾರಿಕೆ, ಅದರಲ್ಲೂ ಬದಲಿ, ಕಾಯಂ, ವರ್ಗಗಳು. ಆ ಮೇಲೆ ಹಾಗಾಗಿ ತಹಶೀಲ್ದಾರಿಕೆಗೆ ಬಂದರು. ಹಾಳು ವಯಸ್ಸೊಂದಲ್ಲದಿದ್ದರೆ ಅಲ್ಲಿಂದ ಕಲೆಕ್ಟರಿಗೂ, ಮುಂದೆ ಪ್ರಾಯಶಃ ಸ್ವರಾಜ್ಯ ಸರಕಾರದಲ್ಲಿ ಗವರ್ನರಿಗೂ ಕುಳ್ಳಿರಿಸುವಷ್ಟು ಯೋಗ್ಯತೆ ಅವರಲ್ಲಿತ್ತು.

ಅವರ ಮೇಲೆ ನೂರೆಂಟು ಜನ ಆಫೀಸರರು ಹಾದುಹೋದರು. ರಾಯರು ಈ ವರೆಗೆ, ಯಾರೊಬ್ಬರ ಅವಕೃಪೆಗೆ ಗುರಿಯಾದ್ದು ಇಲ್ಲ. ಮೇಲಾಫೀಸರರೆಂದರೆ ಬಗ್ಗಿ ಬೆನ್ನು ಕೋಲು ಗೂನಾಗುತ್ತಿತ್ತು. ಯಾರಾದರೂ ಬಂದವರು ಆಫೀಸರರೆಂದು ವಾಸನೆ ಸಿಕ್ಕಿದರೆ ಸಾಕು—ಅಲ್ಲಿಂದಲೇ ಅವರ ವಿನಯದ ಪ್ರವಾಹವು ಹರಿಯುತಿತ್ತು. ಒಂದು ದಿನ, ಅವರು ಮಣೆಗಾರಿಕೆಯಲ್ಲಿದ್ದಾಗ ಒಂದು ಕಥೆ ನಡೆಯಿತು. ಹೊಸ ಕಲೆಕ್ಟರ ದೊರೆಗಳವರು ಜಿಲ್ಲೆಗೆ ಬರುವರೆಂದು ವಾರ್ತೆಯಿತ್ತು. ಸುಬ್ಬಪ್ಪನವರು, ಉಗ್ರಾಣಿ, ಶ್ಯಾನುಭಾಗ, ಸಕುಟುಂಬ ಸಪರಿವಾರ ಸಮೇತವಾಗಿ, ಕೈಯಲ್ಲಿ ನಾಗಬೆತ್ತ ಹಿಡಿದು ಹೋಗುತ್ತಿದ್ದರು. ಹೋಗುವ ಸಮಯಕ್ಕೆ ಸರಿಯಾಗಿ ಕೆಮ್ಮೋರೆ ಸರದಾರರೊಬ್ಬರು ಎದುರಾದರು. ಅವರನ್ನು ಕಂಡ ಕೂಡಲೆ, ರಾಯರು ಸಲಾಮಿಗೆ ಕೈಯೆತ್ತಿದರು. ಅವರ ಹಿಂದೆ ಅವರ ಪರಿವಾರವೂ ಸಲಾಮಿನ ಪಡೆಯಾಯಿತು. ಆದರೆ ಅದು ದೊರೆಯ ಕಣ್ಣಿಗೆ ಬೀಳಲಿಲ್ಲ. ಅವನು ದಣಿದ ಕುದುರೆಯೇರಿ ಒಂದು ಫರ್ಲಾಂಗು ಸಾಗಿ ತೀರ ಸಮೀಪ ಬರುವ ತನಕವೂ, ಇವರ ಕೈ ಇಳಿಯಲಿಲ್ಲ. ಪ್ರಯಾಣದಿಂದ ದಣಿದ ಆ ದೊರೆಗೆ ಆ ಊರು ಹೊಸತಾಗಿತ್ತು. ಹಾಗಾಗಿ ಇವರೊಂದಿಗೆ ಸಂಭಾಷಿಸಿದನು. ಇವರು ಮಾತನಾಡಿದರು. ಲಿಂಬೇ ಹಣ್ಣನ್ನು ಕೊಟ್ಟರು, ಎಳನೀರಿನ ಪೂಜೆಯಾಯಿತು. ಹೋಗುವಾಗ ಹೂಮಾಲೆ ಹಾಕಿದರು. ಅವನು ಇವರಿಗೆ ಖುದ್ದು ತಾನಾಗಿ 'ಥ್ಯಾಂಕ್ಸ್' ಕೊಟ್ಟು ಹೊರಟುಹೋದನು. ಅವನು ಅದೃಶ್ಯನಾಗುವ ತನಕ ಇವರು ತಿರುಗಿ ಕೈ ಇಳಿಸಲಿಲ್ಲ. ಸಂಪೂರ್ಣ ಅವನ ರೂಪ ಕಾಣದಾದ ಬಳಿಕ ಕೈ ಇಳಿಯಲು, ರಾಯರ ಬಳಿಯಲ್ಲಿದ್ದ ನಾಗಜೆ ಶ್ಯಾನುಭಾಗ ನರ್ಸಪ್ಪಯ್ಯನವರು "ಮಹಾ ಸ್ವಾಮಿ, ಅದು ಯಾರು?" ಎಂದರು. ಅದಕ್ಕೆ ಇವರು—"ಪ್ರಾಯಶಃ ನಮ್ಮ ಹೊಸ ಕಲೆಕ್ಟರರೋ ಏನೋ" ಎಂದರು. ಹೆಚ್ಚಿನ ಮಾತನ್ನು ಹಳ್ಳಿ ಶ್ಯಾನುಭಾಗನು, ಮಣೆಗಾರರ ಮುಂದಾಡುವುದುಂಟೇ? ಆ ರಾತ್ರಿಯಂತೆ ಎರಡೆರಡು ಉಗ್ರಾಣಿಗಳು ಮಣೆಗಾರರ ತೋಳಿಗೆ ಬಿಸಿನೀರಿನ "ಶಾಖ" ಕೊಡುತ್ತ ಕುಳಿತಿದ್ದರಂತೆ.

ಸುಬ್ಬಪ್ಪನವರಿಗೆ ಈಗಿನ ಕಾಲದ ಮೇಲೆ ಅಷ್ಟು ಮಮತೆ ಇಲ್ಲ. ಅವರು ಮಾತು ಮಾತಿಗೂ ನಮ್ಮ ಕಾಲ ಹೀಗಿರಲಿಲ್ಲ ಎನ್ನುವುದಿದೆ. ಅವರ ಕಾಲದ ಕಥೆ ಕೇಳುವಾಗ ನನಗೂ ಮಣೆಗಾರನಾಗುವ ಆಸೆಯಾಗುತ್ತಿತ್ತು. ಮೇಲಾಫೀಸರರು ಇಲ್ಲವಾದರೆ ಮಣೆಗಾರರು ಊರಿಗೆ ಬರುವುದೆಂತಾದರೆ ದಾರಿಯುದ್ದಕ್ಕೂ ತೋರಣ. ವಾದ್ಯದಿಂದ ಅವರನ್ನು ಇದಿರುಗೊಳ್ಳುವ ಪಟೇಲ ಶ್ಯಾನುಭಾಗರು, ಊರಿನ ಪುರ ಪ್ರಮುಖರು. ಒಂದು ಗ್ರಾಮದಲ್ಲಿ ಬಂದ ಲಿಂಬೆ ಹಣ್ಣಿನ ಕಾಣಿಕೆಯು ಒಂದು ಮನೆಗೆ ವರ್ಷದ ಉಪ್ಪಿನಕಾಯಿಗೆ ಸಾಕು. ತೆಂಗಿನ ಮರವಿರುವುದೇ ಮಣೆಗಾರರಿಗಾಗಿ. ಅವರು ಕಿರಿಸ್ತಾನರಾದರೆ ಊರಿನ ಕೋಳಿಗಳ ಮೋಕ್ಷವೇ ಅವರಿಂದಾಗಿ. ಇನ್ನು ಅವರ ಸಂತೋಷಕ್ಕಾಗಿ, ನರ್ತನ, ಯಕ್ಷಗಾನ, ಕೋಳಿಕಟ್ಟ, ದಶಾವತಾರ ಆಟಗಳ ಗದ್ದಲವೇನು? ಊರಿನ ಗುಡಿಯ ಮುಂದೆ ಆಗದ ಆಡ ಬರ ರಾಜವತ್ತಿಗಳಿಗೆ. ಇನ್ನು ಊಟ ಉಪಚಾರಗಳೇ—ಉಡುಪಿಯ ಬಡ ಸನ್ಯಾಸಿಗಳ, ಚೌತಿ ಊಟ ಸುಳ್ಳು—ಅವರು ಬದಲಿ ಮಣೆಗಾರರ ಕಾಣುವಾಗಲೇ ಈ ವೈಭವ. ಅದು ಕಾಯಂ ಆಗಿ ಮುಂದೆ ಬದಲಿ ತಹಶೀಲ್ದಾರರಾಗಿ, ತಿರುಗಿ ಅದು ಕಾಯಂ ಆಗುವಾಗ ಈ ಸತ್ಕಾರ ವೈಭವಗಳು ಯಾವ ಪ್ರಮಾಣದಲ್ಲಿ ಇದ್ದಿರಬಹುದು. ತ್ರೈರಾಶಿಕ ಹಾಕಿ ನೋಡಿ.

ಸುಬ್ಬಪ್ಪನವರ ಕಾಲದಲ್ಲಿ, ಅವರನ್ನುವಂತೆ ಗುಡ್ಡೆ ಕಾಡಾಗುತ್ತಿತ್ತು, ಕಾಡು ಗುಡ್ಡೆ ಆಗುತ್ತಿತ್ತು. ಅವರೇ ಎಲ್ಲಾದರೂ ತಮ್ಮ ಕಾಲಮಹಾತ್ಮೆಯನ್ನು, ಈಗಿನ ಕಿರಿಜನರ ಸಲುವಾಗಿ ಆಡುವುದಿದೆ. ಅದನ್ನು ಇಲ್ಲಿ ಉದ್ಧರಿಸಿ ಬರೆಯುತ್ತೇನೆ. ಒಂದು ಸಾರಿಯಂತೆ—ಮಣೆಗಾರರು ಕಿಡಿಯೂರು ಗ್ರಾಮಕ್ಕೆ ಬಂದರಂತೆ. ಒಂದು ಸ್ಥಳ ತನಖಿ ನಡೆಯಿಸಲು ಒಂದು ವಿವಾದದ ಭೂಮಿಗೆ ಬರುವವರಿದ್ದರು. ಅದು ಬಲು ಸೊಗಸಾದ ಒಂದು ಬಾಗಾಯ್ತು ಸ್ಥಳ. ಕಿಡಿಯೂರು ಹೊಳೆ ಮಗ್ಗಲಲ್ಲಿದ್ದು, ಸರಕಾರದ್ದು ಎಂದ ಸರಕಾರದ ಸಾಧನೆ. ತನ್ನದ ಎಂದು ಕಿಡಿಯೂರು ಅಪ್ಪಣ್ಣಯ್ಯನ ಸಾಧನೆ. ಈ ಉಭಯ ಕಕ್ಷಿಗೆ ಸಿಲುಕಿದ್ದಾಗಿತ್ತು. ಅದು ಅಪ್ಪಣ್ಣಯ್ಯನದ್ದಲ್ಲ. ಯಾರೂ ಹಕ್ಕುದಾರರಿಲ್ಲದವರ ಆಸ್ತಿಯಾದ ಅದು ಸರಕಾರಕ್ಕಾರಕ್ಕೆ ಹೋಗುವುದೆಂದು ಊರವರು ಹೇಳುತ್ತಿದ್ದರು. ಸರಿ, ತಳ್ಳಿ ಅರ್ಜಿಯಿಂದ ತನಖಿಗೆ ಬಂತು. ಇಡಿಕಿತಿಯಾಗಿ ಕಿಡಿಯೂರಿಗೆ ಮಣೆಗಾರರು ಬರುತ್ತಾರೆ ಎಂತಾಯಿತು. ಪಟೇಲರು ಅಪ್ಪಣ್ಣಯ್ಯನ ವಿರೋಧಿ. ಅಪ್ಪಣ್ಣಯ್ಯನನ್ನು ಗತಿಗೆಡಿಸಿ ಬಿಡುತ್ತೇನೆ ಎಂದು ಛಲ. ಅಪ್ಪಣ್ಣಯ್ಯ ಶ್ಯಾನುಭಾಗರ ಬೆನ್ನು ಸವರಿ, ಪಟೇಲರಿಗೆ ಮುಂಚಿತವಾಗಿ ಮಣೆಗಾರರನ್ನು ಎದುರುಗೊಂಡು, ಮನೆಗೆ ಕರೆದುಕೊಂಡು ಹೋಗಿ, ತನ್ನ ಹಾಲಾಹವಾಲೆಗಳನ್ನು ಹೇಳಿಕೊಂಡು, ಯೋಗ್ಯ ರೀತಿಯಿಂದ ನಡೆದುಕೊಂಡ. ಸರಿ, ಮಣೆಗಾರರು ಮರಳಿದರು. ಆ ಮೇಲೆ ಹುಕುಂ ಬಂತು. ತನಖಿ ಪೂರ್ಣ ನಡೆದು ಪ್ರತಿಫಲ ಹೊರಬಿತ್ತು. ಅಪ್ಪಣ್ಣಯ್ಯನ ಸ್ಥಳ ಅವನದ್ದೇ 'ಆಗುವೆ'. ಸರಕಾರಕ್ಕೆ ಸಲಬೇಕಾದ ಸ್ಥಳ ನದಿಯ ವಕ್ರಗತಿಯಿಂದ ಕೊರೆದು ಹೋಗಿ ಇಲ್ಲವಾಗಿದೆ. ಆ ಮಣ್ಣೇನೋ ಅಪ್ಪಣ್ಣಯ್ಯನ ಆಗುವೆ ಬಳಿ ಬಿದ್ದದ್ದು ನಿಜ—ವೆಂದು ತೀರ್ಮಾನ. ಕಲೆಕ್ಟರರು ಕಿಡಿಯೂರು ಹೊಳೆಯ ಮೇಲೆ ಬಲವಾಗಿ ರೇಗಿಕೊಂಡರಂತೆ. ಮಣೆಗಾರರು ತಹಶೀಲ್ದಾರರಾದ ಮೇಲೆ ಅನ್ನುತ್ತಿದ್ದರು—"ಸತ್ತವರನ್ನು ಸಹ ಬದುಕಿಸಿದ್ದವ ನಾನು"—ಎಂದು ಎಷ್ಟರ ಮಟ್ಟಿಗೆ ನಿಜವೋ—ಈಗಿನ ಕಾಲದವರು ನಂಬಲಾರರು. ಆದರೆ ಇಷ್ಟು ನಿಜ—ಸತ್ತವರು ಒಬ್ಬರು ಅವರ ರಿಕಾರ್ಡಿನಲ್ಲಿ ತಮ್ಮ ದಸ್ಕತು ಹಾಕಿ ಹೋದ್ದೆಂಬುದು.

ತಹಶೀಲ್ದಾರ ಸುಬ್ಬಪ್ಪನವರ ಕಾಲಕ್ಕೂ ಮಣೆಗಾರ ಸುಬ್ಬಪ್ಪನವರ ಕಾಲಕ್ಕೂ ತಫಾವತು ಬಹಳ. ಅವರ ಕೈಗುಣದಿಂದ ತಹಶೀಲ್ದಾರಿಕೆಯ ಸಮಯ, ಕಲ್ಲೆ ಚಿನ್ನಾ ಆದ್ದುಂಟು. ನಮ್ಮ ಹಳೇ ಶ್ಯಾನುಭಾಗರು ಅನ್ನುತ್ತಿದ್ದರು, ಸುಬ್ಬಪ್ಪಯ್ಯನ ಮೀಸೆ ಗಾಳಿಗೆ ಅಲುಗಾಡಿದರೆ ಊರಿನ ಸರ್ವೆ ಕಲ್ಲುಗಳು ಹೆದರಿ ನಡುಗುತ್ತಿದ್ದುವು. ಅಂದರೆ ಅವರ ಮಹಾತ್ಮೆ ಅಷ್ಟು. ಅವರು ಜನರಿಗೆ ಮಾಡಿದ ಉಪಕಾರ ಅವರೇ ಮರೆತಿದ್ದರೂ, ಊರವರು ಎಂದಿಗೂ ಮರೆಯಲಿಕ್ಕಿಲ್ಲ. ನಮ್ಮ ನಾರಂಜ ಸೀತಾರಾಮಯ್ಯನಿಗೆ ೧೦೦೦ ರೂಪಾಯಿ ತೀರ್ವೆ ಆಸ್ತಿ ಬಂತೆಲ್ಲಿಂದ? ಅಂಥಾ ಹೆಸರು ಒಂದಲ್ಲ ಹತ್ತು ಹೇಳಬಹುದು. ಆದರೂ ಅವರು ನಗದಿಯಿಂದ ಒಂದು ಕಾಸು ಲಂಚ ತಿಂದ ಸುದ್ದಿಯನ್ನು ಬಹಿರಂಗವಾಗಿ ಯಾರು ನುಡಿದದ್ದನ್ನು ನಾನು ಕೇಳಲಿಲ್ಲ. ಅಷ್ಟು ಪ್ರಾಮಾಣಿಕತನದಿಂದ ಅವರು ಕೆಲಸ ಮಾಡಿದುದರಿಂದಲೇ ಅವರು ಪೆನ್ಶನು ಹೊಂದಿ ಮನೆಗೆ ಬರುವಾಗ ಆಸ್ತಿ ನಗದಿಯೆಂತ ಒಂದು ಲಕ್ಷದ ಗಂಟು ಕೈಯಲ್ಲಿತ್ತು.

ಅವರು ಅನ್ನುತ್ತಿದ್ದರು—ತನಗೆ ಈ ರೆವಿನ್ಯೂ ಖಾತೆಯಲ್ಲದೆ ಅಬಕಾರಿಗಿಬಕಾರಿ ಇಲಾಖೆ ಸಿಕ್ಕಿದ್ದರೆ, ಸರಕಾರಕ್ಕೆ ನೂರಕ್ಕೆ ಸಾವಿರ ಹುಟ್ಟುವಳಿ ಕೊಡಿಸುತ್ತಿದ್ದೆ—ಎಂತ. ಅಂಥ ಸ್ವಾಮಿನಿಷ್ಠೆ ಅವರದ್ದು. ರಾಣಿಯವರ ಕಾಲದಿಂದ ಹಿಡಿದು ಜೋರ್ಜ ಚಕ್ರವರ್ತಿಗಳ ತನಕ ಅಖಂಡವಾದ ಭಕ್ತಿವಿಶ್ವಾಸ ತೋರಿಸಿ ಬಂದವರವರು.

ಕಳೆದ ಡಿಲ್ಲಿ ದರ್ಬಾರದ ಸಮಯ ೧೯೧೧ನೇ ಇಸವಿಯ ರಬೇಕು. ಅವರು ಸರ್ಕಿಟಿನ ಮೇಲೆ ಜಾಮರ್ಾಡಿ ಘಟ್ಟದ ಹತ್ತಿರ ಹೋಗಿ ಮಲೆರಾಯನ ಕಾಯಿಲೆಯಲ್ಲಿ ಸಿಕ್ಕಿಬಿದ್ದರು. ಡಿಲ್ಲಿ ದರ್ಬಾರದ ಮೆರವಣಿಗೆ ಹೊರಡಿಸುವುದು ತೀರ ಅವಶ್ಯವಿತ್ತು. ಅವರ ಪರ್ಚಸ್ಸಿನಿಂದ ತುಂಗಳೂರೇ ಡಿಲ್ಲಿಯಾಗುತ್ತಿತ್ತೆಂದು ಕಲೆಕ್ಟರರು ಅನ್ನುತ್ತಿದ್ದರಂತೆ. ಆದರೆ, ಆದರೆ ಗತಿಗೇಡಿ ಮಲೆರಾಯ ಅವರನ್ನು ಜಾಮರ್ಾಡಿ ಘಟ್ಟದ ಬರೆಯ ಬಳಿ ನಿಲ್ಲಿಸಿಬಿಟ್ಟು ದೆಸೆಂಬರ ೧೧ನೇ ತಾರೀಖು, ಜೋರ್ಜ ಪ್ರಭುಗಳು ಡಿಲ್ಲಿಯಲ್ಲಿ ಕಿರೀಟಧಾರಣೆ ಮಾಡುವ ಗಳಿಗೆ ಬಂದಿದೆ, ಇವರು ನಾಲ್ಕು ಕಂಬಳಿ ಹೊದೆದು ಇತ್ತಿನ ಸ್ಮರಣೆಯಿಲ್ಲದೆ ಗಡಗಡ ನಡುಗುತ್ತಿದ್ದಾರೆ. ಥಕ್ಕನೆ ಡಿಲ್ಲಿ ನೆನಪಾಯಿತು. ಮನಸ್ಸು ತಡೆಯಲಿಲ್ಲ. ಎದ್ದು ಕೂಕರು—ಪಟೇಲರನ್ನು ಕರಕಳುಹಿಸಿದರು. ಆ ಪುಣ್ಯಾತ್ಮ ಊರಲ್ಲಿರಲಿಲ್ಲ. ಇನ್ನೇನು ಮಾಡಲಿ? ತಾವೇ ಮನೆಮನೆಗೆ ತಿರುಗಾಡಿದರು. ಗ್ರಹಚಾರಕ್ಕೆ ಜನಸಂಪತ್ತು ಇರಲಿಲ್ಲ. ಏನೋ ಸುದೈವದಿಂದ ೧೦ ಮಂದಿ ಮಲೆಕುಡಿಯರು ಆ ಹಾದಿಯಾಗಿ ಸಾಗುವವರನ್ನು ತಡೆದುಹಿಡಿದರು. ತಾವು ಅರಸರ ಪರ ತೆಗೆದುಕೊಂಡು ಮೆರವಣಿಗೆ ಮಾಡುವ ನಿಶ್ಚಯಮಾಡಿದರು. ಮೆರವಣಿಗೆಗೆ ಜನರಿಲ್ಲದಾಯಿತು. ಕೊನೆಗೆ ಕರಡಹುಲ್ಲಿನಿಂದ ಮನುಷ್ಯಾಕೃತಿಗಳ ಮಾಡಿಸಿ, ಉದ್ದದ ಸಾಲು ಮಾಡಿ ಪಂಜಿನ ಕಟಾಂಜನದ ಹಾಗೆ ಕಟ್ಟಿ, ರಾತ್ರಿ ೧೨ ಘಂಟೆಗೆ ಮೆರವಣಿಗೆ ಹೊರಡಿಸಿಯೇ ಹೊರಡಿ

## ಸಂಯುಕ್ತ ಹಿಂದೂಸ್ಥಾನದಲ್ಲಿ

# ಯುಕ್ತವಾದ ವಿದ್ಯಾಭ್ಯಾಸ

ಡಾಕ್ಟರ್ ಕೆ. ಎಸ್. ಶೆಣೈ, ಎಂ. ಎ, ಪಿ ಎಚ್ ಡಿ.
ಜೆನ್ನೈನ್ಸ್ ಗೌ ಪ್ಲಸ್ಕೂಲ್ ಹುಬ್ಬಳ್ಳಿ

ಲೇಖನ ೪

### ಕಸಬಿನಲ್ಲಿರುವಾಗಲೇ ವಿದ್ಯಾಭ್ಯಾಸ

ಅವಿದ್ಯಾವಂತರಾದ ಜನರೇ ಹೆಚ್ಚಾಗಿ ಉಳ್ಳ ಒಂದು ದೇಶದಲ್ಲಿ ಜನರನ್ನು ತಮ್ಮ ಉದ್ಯೋಗದಲ್ಲಿ ಹೆಚ್ಚು ವಿಚಕ್ಷಣೆಯುಳ್ಳವರನ್ನಾಗಿ ಮಾಡಿ ಅವರ ಜೀವನ ಕ್ರಮವನ್ನು ಉತ್ತಮಗೊಳಿಸುವುದಕ್ಕೆ ತಕ್ಕ ಜ್ಞಾನವನ್ನುಂಟುಮಾಡಬೇಕಾದರೆ, ಚಲನಾ ಚಿತ್ರಗಳ ಮೂಲಕ ಪ್ರದರ್ಶನಗಳನ್ನು ಏರ್ಪಡಿಸುವುದೇ ಒಂದು ಉಪಾಯ. ವ್ಯವಸಾಯ ಮತ್ತು ಗೃಹರಚನಾ ಇವುಗಳೆರಡೇ ನಮ್ಮ ದೇಶದ ಜನರ ಮುಖ್ಯ ಉದ್ಯೋಗಗಳಾಗಿರುತ್ತವೆ. ಗ್ರಾಮಗಳಲ್ಲಂತು ಓದು ಬರಹಗಳನ್ನರಿಯದವರೇ ಹೆಚ್ಚಾಗಿ ಇರುತ್ತಾರೆ ಇವರು ತಮ್ಮ ಉದ್ಯೋಗಗಳಲ್ಲಿ ಹೆಚ್ಚು ದಕ್ಷತೆಯನ್ನು ತೋರಿಸಲಾರರು ಆದುದರಿಂದ ಅವರು ಅನುಸರಿಸುತ್ತಿರುವ ತಮ್ಮ ವೃತ್ತಿಗೆ ಅಡಚಣೆಯಾಗದಂತೆ ಅವರಿಗೆ ವಿದ್ಯೆಯನ್ನು ಕಲಿಸಿ ಜ್ಞಾನವನ್ನು ಹೆಚ್ಚಿಸುವುದು ಅತ್ಯಂತ ಅವಶ್ಯಕ ಇದಕ್ಕಾಗಿಯೇ "ಕಸಬಿನಲ್ಲಿರುವಾಗಲೇ-ವಿದ್ಯಾಭ್ಯಾಸ"ದ ವ್ಯವಸ್ಥಾಪಕರು, ಎಂಬುದಾಗಿ ಒಂದು ಸಮಿತಿಯು ಏರ್ಪಡಿಸಲ್ಪಡಬೇಕು ಗ್ರಾಮ ವಾಸಿಗಳಾದ ಜನರಿಗೆ, ವ್ಯವಸಾಯ, ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಮತ್ತು ಗೃಹರಚನೆ ಇವುಗಳಿಗೆ ಸಂಬಂಧಪಟ್ಟ ಶಿಕ್ಷಣವನ್ನು ಕೊಟ್ಟು ಅವರ ಜ್ಞಾನವನ್ನು ವೃದ್ಧಿಗೊಳಿಸುವುದೇ ಇವರ ಕರ್ತವ್ಯವಾಗಿರಬೇಕು.

೨ ಈಗ 'ವ್ಯವಸಾಯ ವಿಚಾರಣಾ ಅಧಿಕಾರಿಗಳು ಇರುವುದರಿಂದ ಇವರ ಮೂಲಕ ವ್ಯವಸಾಯದ ಶಿಕ್ಷಣವು ನಡೆಯುತ್ತಿರುವುದೆಂದು ಹೇಳಬಹುದು ಆದರೆ ಈಗ ಇವರ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತದೆ ಆದುದರಿಂದ ಇವರು ಅಷ್ಟು ಚೆನ್ನಾಗಿ ಕೆಲಸ ಮಾಡಲು ಅವಕಾಶ ಕಡಿಮೆಯಾಗಿರುತ್ತದೆ ಒಂದು ತಾಲೂಕಿಗೆ ಒಬ್ಬೊಬ್ಬರು ವ್ಯವಸಾಯ ವಿಚಾರಣಾ ಅಧಿಕಾರಿಯು ಇರುವಂತೆ ಇವರ ಸಂಖ್ಯೆಯು ಹೆಚ್ಚಿಸಲ್ಪಡಬೇಕು ಇದೇ ಪ್ರಕಾರ ಒಂದೊಂದು ತಾಲೂಕಿಗೂ ಒಬ್ಬೊಬ್ಬ ಕೈಗಾರಿಕೆ, ವಾಣಿಜ್ಯ ಮತ್ತು ಗೃಹರಚನಾ ಕಾರ್ಯಸ್ಥರು ಇರಬೇಕು

೩ ನಮ್ಮ ದೇಶದಲ್ಲಿ ಈಗ ಇರುವ ಅನೇಕ ಮನೆಗಳ ಸ್ಥಿತಿಯು ಬಹಳ ಅಸಮರ್ಪಕವಾಗಿರುತ್ತದೆ ಏಕೆಂದರೆ ಇವುಗಳ ರಚನೆ, ಸನ್ನಾಹ, ಗಾಳಿ ಮತ್ತು ಬೆಳಕು ಬರುವುದು ಇತ್ಯಾದಿಗಳು ಆಧುನಿಕ ಪ್ರಮಾಣದಲ್ಲಿ ಇಲ್ಲದೇ ಇರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ ಗ್ರಾಮಗಳಲ್ಲಿರುವ ಅನೇಕ ಮನೆಗಳು ಕೇವಲ ಮಣ್ಣಿನ ಜೋಪಡಿಗಳಾಗಿರುತ್ತವೆ ಇವುಗಳು ಮಾನುಷ ವಾಸಕ್ಕೆ ಬಹು ಅನರ್ಹವಾದವುಗಳು ಜನರ ಆರ್ಥಿಕ ಅಂತಸ್ತುಗಳಿಗೆ ಅನುಕೂಲವಾಗುವಂತೆ ಆಧುನಿಕ ಪ್ರಮಾಣಗಳನ್ನನುಸರಿಸಿ ಯೋಗ್ಯಗಳಾಗಿರುವ ಮನೆಗಳ ನಕ್ಷೆಗಳನ್ನೂ ಮತ್ತು ಅವುಗಳಿಗಾಗುವ ಖರ್ಚುಗಳ ಅಂದಾಜುಗಳ ಪಟ್ಟಿಗಳನ್ನೂ ತಯಾರು ಮಾಡಿ ಅವುಗಳು ಎಲ್ಲಾ ಜನರಿಗೂ ತಿಳಿಯುವಂತೆ ಪ್ರಕಟಿಸಬೇಕು ಗೃಹರಚನಾ ಕಾರ್ಯಸ್ಥರು ಸ್ತ್ರೀಯರಾಗಬೇಕು ಇವರಾದರೆ ಸ್ತ್ರೀಯರಿಗೆ ಮನೆಯನ್ನು, ಅದರಲ್ಲಿಯೂ ಅಡಿಗೆಯ ಮನೆಯನ್ನು ಯಾವ ರೀತಿಯಲ್ಲಿ ಇಡಬೇಕೆಂಬುದನ್ನೂ ಚೆನ್ನಾಗಿ ಬೋಧಿಸಲು ಅರ್ಹರಾಗುತ್ತಾರೆ ಇಷ್ಟೇ ಅಲ್ಲ ಪುಷ್ಟಿಯಾದ ಆಹಾರ, ಗೃಹ ಸ್ವಚ್ಛತೆ, ಮಕ್ಕಳ ಕ್ಷೇಮ, ಮತ್ತು ಮಾತೃಧರ್ಮ ಇವುಗಳನ್ನೂ ಅವರಿಗೆ ಮುಖ್ಯವಾಗಿ ತಿಳಿಸಬೇಕು ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಒಂದು ಕೇಂದ್ರ 'ಗೃಹರಚನಾ ವಿದ್ಯಾಲಯ'ವನ್ನು ಸ್ಥಾಪಿಸಿ, ಅಲ್ಲಿ ಸ್ಥಳೀಯ ಅವಶ್ಯಕತೆಗಳನ್ನನುಸರಿಸಿ, ಗೃಹರಚನಾ ಕಾರ್ಯಸ್ಥರಾಗುವವರಿಗೆ ತಕ್ಕ ಶಿಕ್ಷಣವನ್ನು ಕೊಡಬೇಕು ಇಂತಹ ಪ್ರಯತ್ನಗಳನ್ನು ಪ್ರಾರಂಭದಲ್ಲಿ ಅನೇಕರು ವಿರೋಧಿಸಬಹುದು ಆದರೆ ಕೊಂಚ ಕಾಲದಲ್ಲಿಯೇ ಇಂತಹ ಬೋಧನೆಗಳಿಂದ ಜನರಿಗಾಗುವ ಪ್ರಯೋಜನವನ್ನು ಅವರು ತಿಳಿದು ತಾವೂ ಕೂಡ ಈ ಏರ್ಪಾಟುಗಳಿಗೆ ತಮ್ಮ ಸಹಾಯವನ್ನೂ ಕೊಡುವುದರಲ್ಲೇನೂ ಸಂಶಯವಿಲ್ಲ

೪ ವ್ಯವಸಾಯ ವಿಚಾರಣಾ ಅಧಿಕಾರಿಯು, ಜಮೀನಿನ ಆಡಳಿತ, ವ್ಯಾಪಾರ ವಿಧಾನ, ಪಶು ವೈದ್ಯವಿಜ್ಞಾನ, ಹಾಲು ಮೊಸರು ಮುಂತಾದುವುಗಳನ್ನು ಕ್ರಮವಾಗಿಯೂ ಮತ್ತು ಹೆಚ್ಚು ಲಾಭಕರವಾಗುವಂತೆಯೂ, ತಯಾರಿಸುವ ರೀತಿಗಳ ತೋಟದ ಕೆಲಸ ಮತ್ತು ಕೋಳಿ ಜಾತು, ಮುಂತಾದುವುಗಳನ್ನು ಸಾಕುವ ವಿಧಾನ ಇಂತಹ ವಿಷಯಗಳಲ್ಲಿ ತನಗೆ ಕ್ಲಿಷ್ಟವಾದ ಸಮಸ್ಯೆಗಳ ಒದಗಿದಲ್ಲಿ ಅವುಗಳ ವಿಮರ್ಶೆಗಾಗಿ ಆಯಾಯ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದಿರುವವರ ಸಹಾಯವನ್ನು ಪಡೆಯಬೇಕು ಕೈಗಾರಿಕೆಯ ಕಾರ್ಯಸ್ಥನಾದ ಅಧಿಕಾರಿಯು, ಗ್ರಾಮದಲ್ಲಿ ಅನುಸರಿಸುತ್ತಿರುವ ವಿದಾರು ಕೈಗಾರಿಕೆಗಳಲ್ಲಿ ಪ್ರೌಢಿಮೆಯನ್ನು ಪಡೆದಿರಬೇಕು ಮತ್ತು ಕೇಂದ್ರ ಸಂಸ್ಥೆಯಲ್ಲಿರುವ ಹೆಚ್ಚು ಪಾಂಡಿತ್ಯವನ್ನು ಪಡೆದಿರುವ ಶಾಸ್ತ್ರಜ್ಞರ ಸಹಾಯವನ್ನು ಪಡೆಯಬೇಕು

೫ ಈ ಮೇಲೆ ವಿವರಿಸಿರುವ ಕಾರ್ಯಸ್ಥರಾದ ಅಧಿಕಾರಿಗಳು ಉಪನ್ಯಾಸಗಳನ್ನು ಕೊಡುತ್ತಲೂ, ಹೊಲ ಗದ್ದೆಗಳಲ್ಲಿಯೂ, ಮನೆಗಳಲ್ಲಿಯೂ, ಮತ್ತು ಇತರ ಕಾರ್ಯಸ್ಥಾನಗಳಲ್ಲಿಯೂ, ಕ್ರಮವಾದ ಪ್ರದರ್ಶನಗಳನ್ನು ಏರ್ಪಡಿಸುತ್ತಲೂ, ಸಾಮಾನ್ಯ ಜನರೊಂದಿಗೂ, ಮತ್ತು ಪ್ರಜಾಮುಖಂಡರೊಂದಿಗೂ ಚರ್ಚಿಸುತ್ತಲೂ, ಅವರು ಕೇಳುವ ಅನೇಕ ಪ್ರಶ್ನೆಗಳಿಗೆ, ಪತ್ರ ವ್ಯವಹಾರ ಮೂಲಕವೂ, ಮತ್ತು ವರ್ತಮಾನ ಪತ್ರಿಕೆಗಳ ಮೂಲಕವೂ ಉತ್ತರಗಳನ್ನು ಕೊಡುವುದರಿಂದಲೂ ವಿಶೇಷವಾದ ಪ್ರಕಟನಾ ಕಾರ್ಯಗಳನ್ನು ಮಾಡಬೇಕು

೬ ಈಗ ಈ ಮೇಲೆ ವಿವರಿಸಿರುವ ಪ್ರಕಟನೆಯನ್ನು ಕೆಲವು ಸರ್ಕಾರದ ಅಧಿಕಾರಿಗಳು ಮಾಡುತ್ತಿರುವರು ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಒಂದು ಕೇಂದ್ರ ಸಂಸ್ಥೆಯನ್ನು ಏರ್ಪಡಿಸಿ, ಇವರು ನಡೆಸುತ್ತಿರುವ ಪ್ರಯತ್ನಗಳನ್ನು ಒಟ್ಟುಗೂಡಿಸಬೇಕು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಸಂಸ್ಥೆಗಳು ಏರ್ಪಾಡಾಗಬೇಕು ಜಿಲ್ಲಾ ಕಾರ್ಯಗಳ ಆಡಳಿತಕ್ಕೂ ಏರ್ಪಾಟುಗಳಿಗೂ ಈ ಸಂಸ್ಥೆಯು ಗಮನಕೊಡಬೇಕು. ಈ ಸಂಸ್ಥೆಗಳಿಗೆ ದ್ರವ್ಯ ಸಂಪತ್ತಿಯು ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳಿಂದಲೂ, ಮತ್ತು ಸ್ಥಳೀಯ ತೆರಿಗೆಗಳಿಂದಲೂ ಒದಗಿಸಲ್ಪಡತಕ್ಕದ್ದು.

### ಉದ್ಯೋಗಿಕ ನಿರ್ದೇಶ ದೇಶೀಯ ಸಂಸ್ಥೆ.

ವಿಜ್ಞಾನಶಾಸ್ತ್ರ ಮತ್ತು ಕೈಗಾರಿಕೆ ಇವುಗಳು ಅಭಿವೃದ್ಧಿಯಾಗಿ ಅವುಗಳ ಮೂಲಕ ವ್ಯವಸಾಯ, ಹೆಚ್ಚು ಪದಾರ್ಥಗಳನ್ನು ತಯಾರು ಮಾಡುವುದು, ವ್ಯಾಪಾರ ಮತ್ತು ವಾಣಿಜ್ಯ ಇವುಗಳಲ್ಲಿ ನೂತನ ವಿಧಾನಗಳು ಆವಿರ್ಭವಿಸಲು, ಪ್ರಪಂಚದ ಇತರ ಭಾಗಗಳಲ್ಲಿ ಹೇಗೋ ಹಾಗೆಯೇ ಈ ನಮ್ಮ ಹಿಂದೂಸ್ಥಾನದಲ್ಲಿ ಕೂಡ ಜೀವನ ಕರ್ತೃತ್ವ (Life activity) ಹೆಚ್ಚುತ್ತಾ ಬರುತ್ತಿದೆ ಆದುದರಿಂದ ತಂದೆ ತಾಯಿಗಳಿಗೆ, ತಮ್ಮ ಮಕ್ಕಳಿಗೆ ಅವರ ಬುದ್ಧಿ ಕೌಶಲ್ಯಕ್ಕೂ, ಸಾಮರ್ಥ್ಯಕ್ಕೂ ಕಸುಬುಗಳಲ್ಲಿರುವ ಅಭಿರುಚಿಗಳ ವ್ಯತ್ಯಾಸಕ್ಕೂ ಮತ್ತು ಆ ಕಸಬುಗಳಲ್ಲಿನ ಆದಾಯ ವ್ಯತ್ಯಾಸಗಳಿಗೂ ತಕ್ಕಂತೆ, ಕಸಬುಗಳಿಗೆ ಸಂಬಂಧಪಟ್ಟ ವಿದ್ಯೆಯನ್ನೂ ಕಲಿಸಲು, ತಿಳಿಯುವುದಿಲ್ಲ ಅನೇಕರು ಸಾಧಾರಣವಾಗಿ ಹೆಚ್ಚು ಧನಾರ್ಜನೆಗೆ ಅವಕಾಶವುಳ್ಳದ್ದೆಂದು ಎಣಿಕೆಯಾಗಿರುವ ಕಸಬುಗಳಿಗೇ ಹೋಗುವಂತೆ ತಮ್ಮ ಮಕ್ಕಳಿಗೆ ಬೋಧಿಸುವರು ಆದುದರಿಂದ ಆಯಾಯ ಕಸಬುಗಳಲ್ಲಿ ಎಷ್ಟು ಜನರ ಕೆಲಸ ಮಾಡಲು ಅವಕಾಶವುಂಟೋ ಅದಕ್ಕಿಂತ ಹೆಚ್ಚು ಜನರು ಕೆಲಸಗಳಿಗಾಗಿ ಬಂದು ಕೆಲಸ ಪಡೆಯಲು ಅವಕಾಶವಿಲ್ಲದೆ ತಮ್ಮ ಮುಖ್ಯವಾದ ವಯಸ್ಸಿನಲ್ಲಿ ಆಶಾಹೀನರಾಗಿ ಉದ್ಯೋಗವಿಲ್ಲದವರಾಗಿ ಇರಬೇಕಾಗಿದೆ ಕಸಬನ್ನು ಸಂಪಾದಿಸಲು, ಪಡೆದಿರಬೇಕಾದ ಯೋಗ್ಯತೆಯು ದಿನೇ ದಿನೇ ಹೆಚ್ಚು ಕಠಿಣವಾಗಿ ಒದಗುತ್ತಾ ಇರುತ್ತದೆ ಈ ಸಂದರ್ಭಗಳನ್ನೆಲ್ಲಾ ಅರಿತು ತಮ್ಮ ಮಕ್ಕಳಿಗೆ ತಕ್ಕ ಸಲಹೆಗಳನ್ನು ಕೊಡುವುದು ತಂದೆ ತಾಯಿಗಳಿಗೆ ಸಾಧ್ಯವಾಗಲಾರದು ಕೈಗಾರಿಕೆಗಳಲ್ಲಿ ಹೆಚ್ಚು ಅಭಿವೃದ್ಧಿಯನ್ನು ಹೊಂದಿರುವ ಪಾಶ್ಚಾತ್ಯ ದೇಶಗಳಲ್ಲಿರುವಷ್ಟು ನಮ್ಮ ದೇಶದಲ್ಲಿ ಕಸಬುಗಳಿಗೆ ಅವಕಾಶವಿಲ್ಲವೆಂಬುದೇನೋ ನಿಜ ಆದರೆ ಇದ್ದದ್ದರಲ್ಲೂ ಇರುವ ಕಸಬುಗಳನ್ನು ಅವಲಂಬಿಸಲು ನಮ್ಮ ದೇಶದಲ್ಲಿನ ವಯಸ್ಕರಾದ ಬಾಲಕ ಬಾಲಕಿಯರಿಗೆ ಕಸುಬನ್ನು ಅರಿಸುವುದಕ್ಕೂ ಮತ್ತು ಅಂತಹ ಕಸುಬಿಗೆ ತಯಾರಾಗುವುದಕ್ಕೂ, ಮತ್ತು ಆ ಕಸುಬನ್ನು ಅವಲಂಬಿಸಿ ಅದರಲ್ಲಿ ಅಭಿವೃದ್ಧಿಗೆ ಬರುವುದಕ್ಕೂ ಸಲಹೆಗಳನ್ನು ಕೊಡಲು ಒಂದು "ವೃತ್ತಿ ನಿರ್ದೇಶ ಸಂಸ್ಥೆಯು ಇಲ್ಲ ಈ ದೇಶದಲ್ಲಿ ಆರ್ಥಿಕ ವ್ಯತ್ಯಾಸಗಳು ಹೆಚ್ಚು ಜಾಗ್ರತೆಯಾಗಿ ಆಗುತ್ತಿರುವುದರಿಂದ ವಿದ್ಯಾವಂತರಾದ ಪ್ರೌಢ ಬಾಲಕರಿಗೆ ವೃತ್ತಿ ನಿರ್ದೇಶ ಕೊಡಲು ಒಂದು ಸಂಸ್ಥೆಯಿರುವುದು ಅವರಿಗೂ ಮತ್ತು ನಮ್ಮ ದೇಶಕ್ಕೂ ಉಪಯೋಗವಾದದ್ದು

ಸಶೇಷ


## The Canara Industrial & Banking Syndicate Limited.

Established in 1925.

Branches Mangalore, Payyanur, Brahmavar, Kumta, Karwar & Hubli

Head Office — UDIPI

Authorised Capital Rs 1 00 000 Subscribed Capital Rs 1 00 000 Paid up Capital Rs 20 000

### Fixed Deposits

Fixed deposits are received at any office of the Syndicate at the undermentioned rates of interest (interest being paid half yearly)

| | |
|---|---|
| Deposits of 3, 4 and 5 months | 4% |
| Deposits of 6 7 and 8 months | 4½% |
| Deposits of 9, 10 & 11 months | 5% |
| Deposits of 12 months up to 23 months | 5½% |
| Deposits of 24 months | 6% |

Interest allowed on current account at 2½ percent, Savings Bank at 4 per cent,

Long and Short term Loans on attractive Schemes are grant .

ALL KINDS OF BANKING BUSINESS UNDERTAKEN.

Udipi, 20—1—1933.

P A. Pai Bros, *Managing Agents*

ಕರ್ನಾಟಕ ದೇಶ ಜ್ಯೋತಿಗಳು. ಲೇಖ ೯.

# ರಾವ್ ಬಹದೂರು ಸುಬ್ಬಪ್ಪನವರು.

(ಲೇಖಕ: ಶ್ರೀ ಕೊ. ಶಿ. ಕಾರಂತರು.)

ಸುಬ್ಬಪ್ಪನವರು ಹಳೇ ಕಾಲದ ಮನುಷ್ಯರಂತೆ. ಈಗಿನ ಕಾಲದ ಹುಡುಗರಾದ ನಮ್ಮ ಕಣ್ಣಿಗೆ ಅವರನ್ನು ಕಂಡರೆ ಅಷ್ಟೊಂದು ಹಳಬರಾಗಿ ಕಾಣಿಸುವುದಿಲ್ಲ. ನಮಗಿಂತ ಹಳಬರೆ ಅವರು ನಿಜ. ಆದರೆ ಅವರ ಮೀಸೆ, ಮುಂಡಾಸು, ಲೀವಿ, ಜರ್ಬು—ಗಳನ್ನು ಕಂಡರೆ ಅವರಿಗೆ [illegible]ರೊಳಗೇನೆ ವಯಸ್ಸು ಎನ್ನಬಹುದು. ಆದರೂ ಅವರು [illegible] ಪೆನ್ಶನ್ ಹೊಂದಿದುದು ನಿಜ. ತಲೆಗೂದಲು ತುಸು ನರೆತದ್ದು, ಅಂದರೆ ಇದ್ದ ತುಸು ಕೂದಲು ನರೆತದ್ದು ನಿಜ. [illegible] ಯಾರನ್ನಾದರೂ ಹಳಬರೆಂದು ಅನ್ನಲಿಕ್ಕೆ ಬರುವುದಿಲ್ಲ. [illegible]ಸ್ಸಾದವರಿಲ್ಲ ಮುದುಕರಲ್ಲ. ಸುಬ್ಬಪ್ಪನವರ ಲಗ್ನಪತ್ರಿಕೆ, [illegible]ರದಲ್ಲಿ ಮುದ್ರಿತವಾದುದು ನನಗೆ ಮೊನ್ನೆ ಮೊನ್ನೆ ಕಂಡ[illegible]. ಅವರೀಗ, ಸರಕಾರಿ ಉದ್ಯೋಗದಲ್ಲಿ ದುಡಿದ್ದು ದಣಿದು, [illegible]ವೋ, [illegible]ಯೋ ಅದನ್ನು ಪಡೆಯುತ್ತ ತಮ್ಮ ಹಳ್ಳಿಯ[illegible]ಲ್ಲಿ ಸುಖವಾಗಿ ವಾಸವಾಗಿದ್ದಾರೆ. ಅವರು, ಅವರ ತರುಣ [illegible]ರವನ್ನು ಬೆಳಗುವುದಕ್ಕೆ ಎಂಬುವಂತೆ ಒಬ್ಬನೇ ಒಬ್ಬ [illegible] ವೇದದ ಸಂಗತಿಯೆಂದರೆ, ಅವರು ಮೊದಲಿನ ಮಡದಿಯು [illegible]ರಿಗೆ ಸಂತಾನ ಲಾಭವನ್ನು ಉಂಟುಮಾಡಲಿಲ್ಲ. ಅವರ [illegible]ಗ ದೇವರು ಮುನಿದನೋ ಎಂಬಂತೆ, ಅವರೂ, ತಮ್ಮ [illegible]ನೆಯ ಮದುವೆಗೆ ಮೊದಲು, ರಜೆಹೊಂದಿದರು. ಈಗಿನ ರಾಯ[illegible] ಕೌಟುಂಬಿಕ ಜೀವನವೆಂದರೆ ಸುಖದ ಸರಸ್ಸು.

ಅವರು ಈ ಪೇಟೆ ಜೀವನದಿಂದ ಬೇಸರಗೊಂಡು ಹಳ್ಳಿಯ ವಿಶ್ರಾಂತಿ ಜೀವನವನ್ನು ದ್ವಾರಿಂದನಲ್ಲಾ. ಅಲ್ಲೂ ಅವರನ್ನು ಅವರ ಗೌರವವು ಬೆನ್ನು ಬಿಡಲಿಲ್ಲ. ರಾವ್ ಬಹುದೂರದ ಪದವಿ ಅವರಿಗೆ [illegible] ಕಳೆದ [illegible]. ಈ ಬಿರುದು, ಚಿಕ್ಕ ಮನೆ, ತಕ್ಕ [illegible] ಅವರ ಜೀವನದ ಮಿರುಗುಗಳು. ಎಲ್ಲವೂ ಸ್ವಾರ್ಜಿತ [illegible]. ಬಲು ಕಷ್ಟದಿಂದ ಅಲ್ಲಿಂದ ಇಲ್ಲಿಗೆ ಮುಟ್ಟಿದವರು ಅವರು. ಅವರ ತಂದೆಯ ಹೆಸರು ರಾಮು—ಅಂತ. ಅಡುಗೆ ರಾಮು ಎಂಬುದು [illegible] ಹೆಸರಾಗಿತ್ತು, ಅವರು ಬದುಕಿದ್ದಾಗ. [illegible] ಸತ್ತ ಮೇಲೆ ಎಲ್ಲರೂ ಅವರನ್ನು, ತಹಶೀಲ್ದಾರರ ತಂದೆ ರಾಮಯ್ಯನವರು ಎಂದೇ ಕರೆಯುತ್ತಾರೆ. ಆಗಿನ ರಾಮು ಅಂದರೆ [illegible] ರಾಮು. ಯಾರೋ [illegible]ದುವೆ ಮಾಡಿಸಿ ಅವರ ಮೇಲೆ [illegible]ಬಿಟ್ಟರು. ಅವರ ಹೊಟ್ಟೆಯ[illegible] ಹುಟ್ಟಿದ ಇವರು, ಮೂರನೆ [illegible]. ಉಳಿದವರಿಬ್ಬರು ಎಲ್ಲೋ, ಏನೋ ಕೆಲಸ [illegible]ರುವರಂತೆ. ಇವರು ಹಾಗೂ [illegible] ಬಡತನದಲ್ಲಿ [illegible] ಇಂಗ್ಲಿಷು ಕಲಿತರು. ಆ ಮೇಲೆ ದೈವಾನುಗ್ರಹದಿಂದ [illegible] ಆಫೀಸಿನಲ್ಲಿ ಸ್ವಲ್ಪ ಸಮಯ ಗುಮಾಸ್ತರಾದರು. [illegible] “ಅಪ್ರೆಂಟಿಸ್”. ಅಲ್ಲಿಂದ ಕೆಲವು ದಿನ “ಅಬಕಾರಿ” ಇಲಾ[illegible] ಇವರಿಗೆ ಅಬಕಾರಿ ಗಾಳಿ ತಿರುಗಿದರು. ತಿರುಗಿ ರೆವಿನ್ಯೂ ಇಲಾಖೆಗೆ ಸೇರಿದರು. ತಿರುಗಿ ಇಲಾಖೆ ಬದಲಾಗಲಿಲ್ಲ. ಅದೃಷ್ಟದ ಮಟ್ಟಿಗೆ ಆ ಬಡತಿ ಬಂತು. ಗುಮಾಸ್ತೆ; ಸರ್ಕೀಟು ಗುಮಾಸ್ತೆ, ಮಣೆಗಾರಿಕೆ, ಅದರಲ್ಲೂ ಬದಲಿ, ಕಾಯುಮು, ವರ್ಗಗಳು, ಆ ಮೇಲೆ ಹಾಗಾಗಿ ತಹಶೀಲ್ದಾರಿಕೆಗೆ ಬಂದರು. ಹಾಳು ವಯಸ್ಸೊಂದಲ್ಲದಿದ್ದರೆ ಅಲ್ಲಿಂದ ಕಲೆಕ್ಟರಿಗೂ, ಮುಂದೆ ಪ್ರಾಯಶಃ ಸ್ವರಾಜ್ಯ ಸರಕಾರದಲ್ಲಿ ಗವರ್ನರಿಗೂ ಕುಪ್ಪಳಿಸುವಷ್ಟು ಯೋಗ್ಯತೆ ಅವರಲ್ಲಿತ್ತು.

ಆ ಭೀಮಸೇನನು ಎಂಥವನಾಗಿದ್ದಾ? ಅಜ್ಞಾತವಾಸದಲ್ಲಿದ್ದ ಭೀಮನೇ? ದುಃಶಾಸನನನ್ನು ಕೊಂದವನೇ? ವಯಸ್ಸು ೭೦ ವರ್ಷ, ನೆಟ್ಟಗೆ ನಿಲ್ಲಲಾರ, ಮುದಿಯಾಗಿ ಹಣ್ಣಾಗಿ ಈಗಲೋ ಇನ್ನೊಂದು ಗಳಿಗೆಯಲ್ಲೋ ಬೀಳುವಂತಿದ್ದಾನೆ!

* * * *

ಅವನು ಕೊಡಲಿ ಬೀಸಿ, ಕತ್ತಿಯಿಂದ ಚೆಲ್ಲಾಡುತ್ತಾ, ಹತ್ತು ಅಡಿ ಎತ್ತರದ ಗೋಡೆ ಹಾರಿ, ಮನೆಗಳ ಮಾಡುಗಳನ್ನೇರಿ ಇತ್ಯಾದಿ ಅಭಿನಯಿಸಿದ್ದುದು ರಿಕಾರ್ಡಿನಲ್ಲಿದೆ. ಈ ಮುದಿ ಕಪ್ಪನಿಗೆ ಅಂಥ ಸ್ವಪ್ನ ಬಿದ್ದರೂ ಅವನು ಮಡಿಯಬಹುದು!

* * * *

ಕೊರಡುವೆಯೋ ಸುಳ್ಳಾದ ಮೇಲೆ, ಅವನು ಎಂಥೆಂಥ ಕಸ್ರತನ್ನು ಮಾಡಬಾರದೆಂದಿಯೆ?

* * * *

ಒಟ್ಟೊಬ್ಬನನ್ನಾಗಿಯೆ ಕರೆದು, ನಮ್ಮ ಪ್ರತಿನಿಧಿಗಳನ್ನು ವೈಸ್ರಾಯರ ತೂಕಮಾಡುತ್ತಾರೆ. ಹೋರರಿಗಿಂತಲೂ ಡಾಯ್ ಹಾರ್ಡರಿಗಿಂತಲೂ ಇವರಲ್ಲಿ ಪ್ರತಿಯೊಬ್ಬನ ತೂಕ ಕಡಿಮೆಯಾಗದೆ ಇದ್ದೀತೆ?

* * * *

ಎಲ್ಲರೂ ಒಂದಾಗಿ ಹೋಗಿದ್ದರೆ, ಇವರೆಷ್ಟೋ ಮಡಿ ಭಾರವಾಗಿ ತೂಕ ತೂಗುತ್ತಿದ್ದರು. ಇವರನ್ನು ಹಾಗೆ ಬರಲು ಕರೆದಿಲ್ಲವೆಂದ ಮೇಲೆ ಇವರೇಕೆ ಒಂದಾಗಿ ಹೋಗುವರು? ಅಲ್ಲದೆ, ಪ್ರತಿಯೊಬ್ಬರ ಉದ್ದೇಶವೇ ಬೇರೆ ಬೇರೆ ಎಂದಿರುವಾಗ, ಎಲ್ಲರೂ ಒಂದಾಗಿ ಹೋಗಲು, ಎಲ್ಲವರೂ ಒಂದೇ ಉದ್ದೇಶವಿರುವುದು ಹೇಗೆ?

* * * *

ತೀರ್ವೆಯನ್ನು ರೂಪಾಯಿಯಲ್ಲಿ ಎರಡಾಣೆ ಕಡಿಮೆಮಾಡಬೇಕಾಗಿ ನಮ್ಮ ಕೌನ್ಸಿಲಿನ ಶಿಫಾರಸು ಆಗಿದೆ. ಈ ವರ್ಷ ಸಿಲ್ಕು ಚೆನ್ನಾಗಿ ಇದೆ. ಅದುದರಿಂದ ಈ ರಿಯಾಯಿತಿ ಆಗಲಿ ರೈತರಿಗೆ ಎಂದು ಸೂಚನೆ.

* * * *

ಲೇಕಡಾ ೧೧೦ರಂತೆ ತಿಂಗಳಿಗೆ ನೂರು ನೂರೈವತ್ತು ರೂಪಾಯಿ ಕಡಿತ ಹೊಂದಿದ ದೊರೆ ಆಫೀಸರರ ತಲಬನ್ನು ಈಗ ಪುನಃ ಏರಿಸದೆ ಇದ್ದರೆ, ಗದ್ದೆ ಮಣ್ಣಿಗೆ ರಿಯಾಯಿತಿ ತೋರಿಸಿದ್ದನ್ನೆಲ್ಲ ಮಣ್ಣುಪಾಲು ಮಾಡುವುದೇ? ಅದರ ಬದಲಾಗಿ ಜನರೇ ಒಂದೊಂದು ತುತ್ತು ಅನ್ನ ಕಡಿಮೆ ನುಂಗಿದರಾಗದೆ?

* * * *

ಮೊದಲೇ ಅರೆಹೊಟ್ಟೆಯಲ್ಲಿದ್ದವರಿಗೆ ಒಂದು ತುತ್ತು ಕಡಿಮೆ ತಿಂದರೇನು ಹೆಚ್ಚಿಗೆ ಸಂಕಟವಾದೀತೆ? ೩೦೦೦ ರೂಪಾಯಿ ಪಡೆದೇ ಅಭ್ಯಾಸವಿರುವವರಿಗೆ ೧೮೦೦ ರೂಪಾಯಿ ಕೊಟ್ಟರೆ ಎಷ್ಟು ನರಳಿಕೆಯಾದೀತು ನೋಡಿ.

* * * *

ಆದರೂ ಉದಾಹರಣೆಯೋ ಮಾದರಿಯೋ ಎಂದು, ಮಾನ್ಯ ದಿವಾನ್ರು ಮೆಂಬರರೇ ನಾಳೆನಿಂದ ಒಂದು ಲಂಚ್ ಪಹಾ ಮಾಡುವರು ಎಂದಾದರೆ, ರೈತರಿಗೆ ರಿಯಾಯಿತಿಬೇಕೆಂದು ಮತ್ತೆ ಯಾರು ರಗಳೆ ತಂದಾರು!

* * *

## ದಕ್ಷಿಣ ಕನ್ನಡ

**ಮೂಲ್ಕಿ:**— ಇಲ್ಲಿ ಒಂದು ಹೈಸ್ಕೂಲ್ ಆಗುವ ವಿಷಯ ಆಲೋಚಿಸುವ ಬಗ್ಗೆ ಮೂಲ್ಕಿ ಮಹಾಜನರ ಸಭೆಯೊಂದು ಇದೇ ಕಳೆದ ತಾ. ೨೨—೧—೩೭ನೇ ರವಿವಾರ ಸಾಯಂಕಾಲ ಘಂಟೆ ೫ಕ್ಕೆ ಸ್ಟೇಟ್ ಯೂನಿಯನ್ ಕ್ಲಬ್ಬಿನಲ್ಲಿ ಕೂಡಿ ಬಂತು ರಾ॥ ವಿ ಶೆರಿಂಗ ರಾಮುಕಾರವರು ಅಂದಿನ ಸಭಾಧ್ಯಕ್ಷರಾಗಿದ್ದರು

ಸ್ಟೇಟ್ ಯೂನಿಯನ್ ಕ್ಲಬ್ಬಿನ ನೇತೃತ್ವದಿಂದ ಏರ್ಪಡಿಸಲ್ಪಟ್ಟ ಸಾರ್ವಜನಿಕ ಭಾಷಣದ ಪ್ರಥಮ ಸಭೆಯು ನಿನ್ನೆ ತಾ. ೨೮—೧—೩೭ನೇ ಗುರುವಾರ ಸಾಯಂಕಾಲ ಘಂಟೆ ೫ಕ್ಕೆ ಜರಗಿತು

**ಉಡುಪಿ:**— ಸಂದರ್ಭಗಳು ಅನುಕೂಲಿಸಿದರೆ ಇದೇ ಏಪ್ರಿಲ್ ತಿಂಗಳ ಮಧ್ಯದಲ್ಲಿ ಅಖಿಲ ಕರ್ನಾಟಕ ಇಲ್ಲವೆ ಕನಿಷ್ಠ ಪಕ್ಷ ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶೀ ಪ್ರದರ್ಶನವನ್ನು ಜರುಗಿಸಬೇಕೆಂದಿರುತ್ತಾ, ಆ ಕುರಿತು ಉತ್ಸಾಹವುಳ್ಳ ಮಹಾಶಯರು ತಮ್ಮ ಹೆಸರು ವಿಳಾಸಗಳನ್ನು, ತಮ್ಮ ಯಾವುದಾದರೂ ಈ ಬಗ್ಗೆಯ ಸೂಚನೆಗಳ ಸಮೇತ ಅವನ್ನು ತೀಕ್ಷ್ಣ ಶ್ರೀ ಆರ್ ಕೆ. ಪ್ರಭು ಮಂಗಳೂರು ಅಥವಾ ಎ ಮೆನೇಜರ್, ಖಾದಿ ನಿಲಯ ಉಡುಪಿ ಇವರಿಗೆ ಪತ್ರ ಮೂಲಕ ತಿಳುಹಿಸಬೇಕಾಗಿ ಅಪೇಕ್ಷಿಸಲಾಗುತ್ತದೆ ನಮ್ಮ ಜಿಲ್ಲೆಯಲ್ಲಿ ಇಂತಹ ಏರ್ಪಾಟು ಪ್ರಥಮದ್ದಾಗಿರುತ್ತಾ ದೇಶ ಬಾಂಧವರು ಇದರಲ್ಲಿ ಸಂಪೂರ್ಣ ಮನಸ್ಸುಗೊಂಡು ಇದನ್ನು ಜರುಗಿಸಿ ಯಶಸ್ವಿಯಾಗಿ ಮಾಡುವುದು ವಿಹಿತವೂ ಅಶ್ಯಗತ್ಯವೂ ಆಗಿರುವುದಷ್ಟೆ!

ಕೇವಲ ಅಗಲ್ಪ ಕೂಟಗಳಲ್ಲೇ ಬರೇ ಕಾಲಯಾಪನೆ ಮಾಡುತ್ತಿರುವ ಗ್ರಾಮಸ್ಥರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಿ ಹಳ್ಳಿಗರ ದೌರ್ಬಲ್ಯವನ್ನು ಬಹು ಮಟ್ಟಿಗೆ ನಿವಾರಿಸಿ ಜನಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ (ಅದಿ ಉಡುಪಿ ಮಾಧ್ಯಮಿಕ ಶಾಲೆಯಿಂದ) ಜನ್ಮವೆತ್ತಿದ 'ಸರಸ್ವತಿ ವಾಚನಾಲಯ'ಕ್ಕೆ ಉದಾರಾಂತಃಕರಣದಿಂದ ಪೋಷಕರಾಗಿಯೂ ಸದಸ್ಯರಾಗಿಯೂ [illegible], ಈ ವರ್ಷ ನಮ್ಮನ್ನು ಪ್ರೋತ್ಸಾಹಿಸಿದ ಈ ಕೆಳಗಿನ ಮಾನನೀಯರಿಗೂ, ಈ ಮುಂಚೆ ಪುಸ್ತಕ ವ ದ್ರವ್ಯರೂಪದಿಂದ ಸಹಾಯ ಮಾಡಿದವರಿಗೂ, ತುಂಬಾ ಆಭಾರಿಯಾಗಿದ್ದೇವೆಂಬ ಸಂಗತಿಯನ್ನು ಈ ಮೂಲಕ ನಿವೇದಿಸಿಕೊಳ್ಳುತ್ತೇವೆ

---

### ಪುಣ್ಯಕಾರ್ಯ

ಶ್ರೀ ವೆಂಕಟರಮಣ ದೇವಸ್ಥಾನದವರು ಅಸ್ಪೃಶ್ಯತಾ ನಿವಾರಣೆಗೆ ಕೈಹಚ್ಚಲಾಗದಿದ್ದರೂ, ಈ ವರ್ಷದ ರಥೋತ್ಸವದ ವೇಳೆ ಹರಿಜನರಿಗೆ ಎಂಜಲೆಲೆಗಳನ್ನು ದಾನ ಮಾಡುವ ಕ್ರಮವನ್ನು ನಿಲ್ಲಿಸಬೇಕೆಂದು ಇಲ್ಲಿಯ ಹರಿಜನ ಸಂಘದ ಅರಿಕೆ ಮೇರೆಗೆ ಶ್ರೀ ಗಣೇಶ ಶ್ರೀನಿವಾಸ ಶೆಣೈಗಳವರು ಅದನ್ನು ಉದಾರತೆಯಿಂದ ನಿಲ್ಲಿಸಿ, ಅನ್ನವನ್ನು ಯಾಚಿಸಿ ಬಂದ ನೂರಿನ್ನೂರು ಹರಿಜನರಿಗೆ ಉತ್ಸವದ ದಿನಗಳಲ್ಲಿ ಶುದ್ಧ ಅನ್ನ ಪದಾರ್ಥಗಳನ್ನೇ ಧಾರಾಳವಾಗಿ ದಾನ ಕೊಡುತ್ತಿರುವರು ಶ್ರೀ ವೆಂಕಟರಮಣ ದೇವಸ್ಥಾನದ ಈ ಉದಾರ ಮಾದರಿಯನ್ನು ಇನ್ನಿತರ ದೇವಸ್ಥಾನಗಳ ಆಡಳಿತದಾರರೂ ಅನುಸರಿಸುವರೆಂದು ಹಾರೈಸುವೆವು

---

### ಪ್ರೋತ್ಸಾಹಕರು

ಶ್ರೀಯುತರಾದ —೧ ಎ ಗಿರಿಯ ಶೆಟ್ಟಿ ೨ ಐರಿಯಣ್ಣ ಶೆಟ್ಟಿ ೩ ಸಿದ್ಧಯ್ಯ ಶೆಟ್ಟಿ. ೪ ಶೀನಪ್ಪ ಶೆಟ್ಟಿ ೫ ಕೆ ಆರ್ ಹೆಬ್ಬಾರ್ ೬ ಎಸ್ ಮೊನ್ನ ಪೂಜಾರಿ ೭ ಯು ಅನಂತ ಕಾಮತ್ ೮. ಆನಂದ ಶಂಗ್ಲನ್ನ ೯ ಕೆ ಎಲ್ ಬ್ಯಾರಿ. ೧೦ ಶ್ರೀಧರ ಕಲ್ಕೂರ ೧೧ ಕಾನಂಗಿ ರಾಮರಾವ್ (ಇವರೇ ಮೊದಲಾದವರು)

ವಿದ್ಯಾಭಿಮಾನಿಗಳಾದ ಗ್ರಾಮಸ್ಥರೂ ಶಾಲೆಯ ಹಳೆಯ ವಿದ್ಯಾರ್ಥಿಗಳೂ, ಈ ವಾಚನಾಲಯದ ಅಭಿವೃದ್ಧಿಯ ಕಾರ್ಯದಲ್ಲಿ ಅಭಿಮಾನವಿಟ್ಟು ಸಹಾಯ ಮಾಡಬೇಕಾಗಿ ವಿನಂತಿ ಪ್ರಕೃತದ ನಿಧಿಯು ರೂ ೬೨—೧೦—೮ಕ್ಕೆ ಏರಿರುತ್ತದೆಂಬುದನ್ನು ಈ ಸಂದರ್ಭದಲ್ಲಿ ಸೂಚಿಸಲು ಸಂತೋಷವಾಗುತ್ತದೆ

**ಗುರುವಾಯನ ಕೆರೆ:**— ಇಲ್ಲಿಯವರಲ್ಲಿ ಹಿಂದಿ ಭಾಷೆಯನ್ನು ಕಲಿಯಲಿಚ್ಛೆ ಉತ್ಸಾಹವಿದ್ದವರೆಲ್ಲರ ಅನುಕೂಲತೆಗಾಗಿ ಮಂಗಳೂರಿನ "ಭಾರತ ಭಾಷಾ ಪ್ರವರ್ಧಕ ಸಂಘ"ದ ಪರವಾಗಿ ಪ್ರತಿ ತಿಂಗಳಲ್ಲಿ ಹತ್ತು ಯಾ ಹನ್ನೆರಡು ದಿವಸಗಳಂತೆ ಧರ್ಮಾರ್ಥವಾಗಿ ಹಿಂದಿ ಕಲಿಸಲಾಗುವುದು ಇದೇ ಬರುವ ಸಪ್ಟಂಬರ ತಿಂಗಳಲ್ಲಿ ಜರಗುವ ಪ್ರಥಮ ಮಧ್ಯಮ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳಲ್ಲಿ ಕುಳಿತುಕೊಳ್ಳುವ ಉಮೇದ್ವಾರರು ಈ ಸುಸಂದರ್ಭವನ್ನು ಕಳೆದುಕೊಳ್ಳಬಾರದಾಗಿ ವಿನಂತಿ

**ಪ್ರೋಟೆಸ್ಟೆಂಟ್ ಆರ್ಯ ಸಮಾಜ, ಮುಂಬೈ.**

ಸಪ್ತಾಹಿಕ ಅಧಿವೇಶನದಲ್ಲಿ ಸೇರಿದ ಸಭೆಯಲ್ಲಿ—ಸಮಾಜದ ಸದಸ್ಯರೂ, ಸೇವಾದಳದಲ್ಲಿ ಮುಖಮಾರ್ಗಕರಿಂದ ಕಾರ್ಯಗೈಯ್ಯುತ್ತಿದ್ದ ತರುಣರೂ ಆಗಿದ್ದ ಶ್ರೀಯುತ ಪಿ. ಗಣಪತಿಯವರ ಅಕಾಲ ಮರಣಕ್ಕಾಗಿ ದುಃಖಸೂಚಕ ಠರಾವು ಪಾಸಾಯಿತು.

(೯ನೇ ಪುಟಕ್ಕೆ ಮುಂದುವರಿದುದು.)

# ವಿದ್ಯಾವಂತ ಪಿತೂರಿಗಾರರ ಗತಿ!

## (ಪರಿಚಯ.)

ಮೊನ್ನೆ ತಾನೆ ಮೀರತ್ ಮೊಕದ್ದಮೆಯಲ್ಲಿ ೨೭ ಜನ ಅಪರಾಧಿಗಳಿಗೆ ವಿವಿಧ ಶಿಕ್ಷೆಗಳನ್ನು ವಿಧಿಸಿದರಷ್ಟೆ ಅವರ ಮತ್ತು ಬಿಡುಗಡೆ ಮಾಡಲ್ಪಟ್ಟ ಮೂವರ ಪರಿಚಯವನ್ನು ವಾಚಕರಿಗೆ ಈ ಮೂಲಕ ಮಾಡಿಕೊಡುವೆವು

ಮಿ॥ ಎಸ್ ಎ ಡಾಂಗೆ ಇವರು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಉಪಕಾರ್ಯದರ್ಶಿಗಳು ಬೊಂಬಾಯಿಯ ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಜನರಲ್ ಸೆಕ್ರೆಟರಿಯವರು ಬೊಂಬಾಯಿಯ ಟ್ರಾಂವೆ ಕೆಲಸಗಾರರ ಸಂಘದ ಜನರಲ್ ಸೆಕ್ರೆಟರಿಯವರು ಕೆಲಸಗಾರರ ಮತ್ತು ರೈತರ ಸಂಸ್ಥೆಯಲ್ಲಿ ಪ್ರಧಾನ ಸದಸ್ಯರು ೧೯೨೨ನೇ ಇಸವಿಯ ತನಕ 'ಸೋಷಿಯಲಿಸ್ಟ್' ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು ಆಗ್ಗೆ ಕಾನ್ಪುರದ ಧರ್ಮಸಲತ್ತಿನ ಮೊಖದ್ದಮೆಯಲ್ಲಿ ಅವರಿಗೆ ನಾಲ್ಕು ವರ್ಷ ಶಿಕ್ಷೆಯಾಗಿತ್ತು ಇವರು ಬೊಂಬಾಯಿಯವರು

ಮಿ॥ ಎಸ್ ವಿ ಘಾಟೆ ಇವರು ಬೊಂಬಾಯಿಯ ಮುನಿಸಿಪಲ್ ಕೆಲಸಗಾರರ ಸಂಘದ ಉಪಾಧ್ಯಕ್ಷರು ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಖಜಾಂಚಿಯವರು ಕೆಲಸಗಾರರ ಮತ್ತು ರೈತಾಪಿ ಜನರ ಸಂಸ್ಥೆಯ ಕಾರ್ಯಕಾರೀ ಮಂಡಲದ ಸದಸ್ಯರು ಇವರು ಬೊಂಬಾಯಿಯವರು

ಮಿ॥ ಕೆ ಎನ್ ಜೋಗಳೇಕರ್—ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಕಾರ್ಯದರ್ಶಿಗಳು ಅಖಿಲ ಪ್ರಪಂಚದ ಇಂಪೀರಿಯಲಿಸಮ್ ವಿರುದ್ಧದ ಕಾಂಗ್ರೆಸ್ಸಿಗೆ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನಿಂದ ಪ್ರತಿನಿಧಿಗಳಾಗಿ ಹೋಗಿದ್ದವರು ಜಿ ಐ ಪಿ ರೈಲ್ವೆ ಕೆಲಸಗಾರರ ಸಂಘದ ವ್ಯವಸ್ಥಾಪಕ ಕಾರ್ಯದರ್ಶಿಗಳು ಕೆಲಸಗಾರರ ಮತ್ತು ರೈತಾಪಿ ಸಂಘದ ಸದಸ್ಯರು ಅಖಿಲ ಭಾರತದ ಕಾಂಗ್ರೆಸ್ ಕಮಿಟಿಯಲ್ಲಿ ಸದಸ್ಯರು ಕೆಲಸಗಾರರ ಮುಖಂಡರು ಮತ್ತು ರಾಷ್ಟ್ರೀಯ ಭಾವನೆಯುಳ್ಳವರು ಇವರೂ ಬೊಂಬಾಯಿಯವರು

ಮಿ॥ ಎಸ್ ಎಚ್ ಜಾಬ್‌ವಾಲಾ ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಉಪಾಧ್ಯಕ್ಷರು ಜಿ ಐ ಪಿ ರೈಲ್ವೆ ಕೆಲಸಗಾರರ ಸಂಘದ ಕಾರ್ಯದರ್ಶಿಗಳು (ಈ ಸಂಘದಲ್ಲಿ ೪೧ ಸಾವಿರ ಸದಸ್ಯರಿದ್ದಾರೆ) ಅಖಿಲ ಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ನಿನ ವ್ಯವಸ್ಥಾಪಕ ಕಾರ್ಯದರ್ಶಿಗಳು ಬೊಂಬಾಯಿಯ ಅನೇಕ ಕೆಲಸಗಾರರ ಸಂಸ್ಥೆಗಳ ಸೇರಿದವರು ಇವರೂ ಬೊಂಬಾಯಿಯವರೇ

ಮಿ॥ ಶೌಕತ್ ಉಸ್ಮಾನಿ ಇವರು ೧೯೨೧ನೇ ಇಸವಿಯಲ್ಲಿ ರಷ್ಯಾಕ್ಕೆ ಹೋಗಿದ್ದು ತಮ್ಮ ಅನುಭವಗಳನ್ನು ಕುರಿತು ಒಂದು ಪುಸ್ತಕವನ್ನು ಬರೆದರು ೧೯೨೩ನೇ ಇಸವಿಯಲ್ಲಿ ಇವರು ಇಂಡಿಯಕ್ಕೆ ಬಂದ ಮೇಲೆ ದಸ್ತಗಿರಿ ಮಾಡಲ್ಪಟ್ಟರು. ಆಗ್ಗೆ ನಾಲ್ಕು ವರ್ಷಗಳ ಶಿಕ್ಷೆ ವಿಧಿಸಲಾಯಿತು. ೧೯೨೭ನೇ ಇಸವಿಯಲ್ಲಿ ಬಿಡುಗಡೆಯಾಯಿತು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರತಿನಿಧಿಗಳಾಗಿದ್ದರು ಕೆಲಸಗಾರರ ಮತ್ತು ರೈತಾಪಿ ಜನರ ಸಂಘದಲ್ಲಿ ಸದಸ್ಯರಾಗಿದ್ದರು 'ದಿ ಪಾಯಮಿ ಮಜದೂರ್' ಎಂಬ ಉರ್ದು ಪತ್ರಿಕೆಗೆ ಸಂಪಾದಕರಾಗಿದ್ದರು ಇವರೂ ಸಹ ಬೊಂಬಾಯಿಯವರೇ

ಮಿ॥ ಎಫ್ ಬ್ರಾಡ್ಲೆ ಇವರೊಬ್ಬ ಆಂಗ್ಲ ಇಂಜಿನಿಯರು ಲಂಡನ್ ಡಿಸ್ಟ್ರಿಕ್ಟ್ ಕಮಿಟಿಯ ಸದಸ್ಯರು, ಜಿ ಐ ಪಿ ರೈಲ್ವೆ ಕೆಲಸಗಾರರ ಸಂಘಗಳಲ್ಲಿ ಒಬ್ಬ ಸದಸ್ಯರು. ಮುಂಬಾಯಿಯಲ್ಲಿ ನಡೆದ ಗಿರಣಿಗಳ ಮುಷ್ಕರ ಕಮಿಟಿಯಲ್ಲಿ ಖಜಾಂಚಿಯವರು ಅಖಿಲ ಭಾರತ ಕೆಲಸಗಾರರ ಮತ್ತು ರೈತಾಪೀ ಜನರ ಸಂಸ್ಥೆಯ ಕಾರ್ಯಕಾರೀ ಮಂಡಲದವರು

ಮಿ॥ ಎಸ್ ಎಸ್ ಮಿರಜ್‌ಕರ್, ಬ್ರಿಟಿಷ್ ಸ್ಟೀಮ್ ನವಿಗೇಷನ್ ಕಂಪೆನಿಯ ಕೆಲಸಗಾರರ ಸಂಘಕ್ಕೆ ಕಾರ್ಯದರ್ಶಿಗಳು 'ಕ್ರಾಂತಿ' ಎಂಬ ಮರಾಠಿ ವಾರ ಪತ್ರಿಕೆಯ ಸಂಪಾದಕರಾಗಿದ್ದರು

ಮಿ॥ ಎ. ಎ. ಅಲ್ವೆ, ಗಿರಣಿಯ ಕೆಲಸಗಾರರು. ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಅಧ್ಯಕ್ಷರು. ಮುಂಬಾಯಿಯ ಕ್ರೈಸ್ತರ ಸಂಸ್ಥೆಯನ್ನು ಕಳ್ಳಲು ವಿಶ್ವಪ್ರಯತ್ನ ನಡೆಸಿದರು.

ಮಿ॥ ಆರ್ ಕಸಲ, ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಸಂಸ್ಥೆಯಲ್ಲಿ ಒಬ್ಬ ಅಧಿಕಾರಿಗಳು

ಮಿ॥ ಬಿ ಎಮ್ ಅಧಿಕಾರಿ—ಇಂಜಿನಿಯರಿಂಗ್ ಡಾಕ್ಟರ್ ಪದವೀಧರರು ಇವರು ೧೯೨೮ರಲ್ಲಿ ಜರ್ಮನಿಯಿಂದ ಬಂದರು ಮುಂಬಾಯಿ ವಿಶ್ವವಿದ್ಯಾಲಯದ ಬಹಳ ಬುದ್ಧಿಶಾಲಿಯ ವಿದ್ಯಾರ್ಥಿಯಾಗಿದ್ದರು ಬೆಂಗಳೂರು ಟಾಟಾ ಇನ್‌ಸ್ಟಿಟ್ಯೂಟಿನ ಒಬ್ಬ ವಿದ್ಯಾರ್ಥಿಯೂ ಆಗಿದ್ದರು ಇವರೂ ಮುಂಬಾಯಿಯವರು

ಮಿ॥ ಎಮ್ ಜಿ ದೇಸಾಯಿ—ಒಬ್ಬ ಪತ್ರಿಕೋದ್ಯೋಗಿಗಳು ಇವರು ಪ್ರೊ ಬೇಟ್ರಿಕ್ ಗಿಡ್ಡಿಸ್‌ರವರ ಮುಖ್ಯ ಶಿಷ್ಯರು ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ವಿಶೇಷವಾಗಿ ಸಂಚರಿಸಿದ್ದಾರೆ ಇಂಗ್ಲೆಂಡಿನಲ್ಲಿದ್ದಾಗ್ಗೆ 'ಡೈಲಿ ಹೆರಾಲ್ಡ್' ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು ಬ್ರಿಟಿಷ ಪಾರ್ಲಿಮೆಂಟರಿ ಲೇಬರ್ ಸಂಗಡದಲ್ಲಿ ಒಬ್ಬ ಸದಸ್ಯರಾಗಿದ್ದರು ೧೯೨೮ನೇ ಇಸವಿಯಲ್ಲಿ ಇಂಡಿಯಕ್ಕೆ ಬಂದಾಗ ಇಂಡಿಯನ್ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ [illegible] ಸೇರಿದರು ೧೯೨೮ನೇ ಇಸವಿ ಜನವರಿಯಲ್ಲಿ 'ಸ್ಪಾರ್ಕ್' [illegible] ಆಂಗ್ಲ ವಾರಪತ್ರಿಕೆಯನ್ನು ಹೊರಡಿಸಿದರು

ಮಿ॥ ಆರ್ ಎಸ್ ನಿಂಬಕರ್—ಮುಂಬಾಯಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಅಖಿಲ ಭಾರತ ಕೆಲಸಗಾರರ ಮತ್ತು ರೈತಾಪಿ ಸಂಘದ ಜನರಲ್ ಸೆಕ್ರೆಟರಿಗಳಾಗಿದ್ದರು ಗಿರಣಿ ಕಾಮ್‌ಗಾರ್ ಯೂನಿಯನ್ ಮುಂತಾದ ಅನೇಕ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದರು ಇವರು ದಸ್ತಗಿರಿ ಮಾಡಲ್ಪಟ್ಟಾಗ ಅಜ್ಮೀರಿನಲ್ಲಿ ರೈಲ್ವೆ ಕೆಲಸಗಾರರನ್ನು ವ್ಯವಸ್ಥಿತಗೊಳಿಸುತ್ತಿದ್ದರು ಇವರು ಮುಂಬಾಯಿಯವರು

ಮಿ॥ ಲೆಸ್ಟರ್ ಹಚಿನ್‌ಸನ್—ತರುಣ ಆಂಗ್ಲ ಬ್ರಿಟಿಷ್ ಪತ್ರಿಕೋದ್ಯೋಗಿಯು ಇಂಡಿಯನ್ ಡೈಲಿಮೈಲ್ ಪತ್ರಿಕೆಯಲ್ಲಿ ಕೆಲಸಮಾಡಲು ಬಂದರು ತರುವಾಯ ನ್ಯೂ ಸ್ಪಾರ್ಕ್ ಎಂಬ ಪತ್ರಿಕೆಯ ಸಂಪಾದಕರ ಇವರು ಆಕ್ಸ್‌ಫೋರ್ಡ್ ವಿಶ್ವವಿದ್ಯಾಲಯದ ಪದವೀಧರರು ಇವರ ತಾಯಿಯು ಗ್ರೇಟ್‌ಬ್ರಿಟನ್ ಕಮ್ಯೂನಿಸ್ಟ್ ಸಂಗಡಕ್ಕೆ ಸೇರಿದವರು ಗಿರಣಿ ಕಾಮ್‌ಗಾರ್ ಯೂನಿಯನ್ನಿನ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

++ ++

**Seventy Five Years!**

Two generations of approved service enables us to pick and choose what is cheap lasting and good to suit the pockets and the tastes of our longstanding wide circle of

**CUSTOMERS**

who know our

**Premier House for Swadeshi**

**Mill Yarns — Handloom Cloths, Dhoties—Saries—Chintzes etc**

**Shrinivas Rang Pai,**

**Sawkar Mahal,**

**Car Street, MANGALORE**

ಅಗ್ರಲೇಖ
[illegible]
ಸ್ವವಿಚಾರಗಳು
ಟಿಪ್ಪಣಿಗಳು ,,
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ವಿದೇಶ ವರ್ತಮಾನ, ಮಂಗಳೂರು, ೯
ವಿಶೇಷ ಸಮಾಚಾರಗಳು . . . ೧೧
"[illegible]" ೩
ಪತ್ರವ್ಯವಹಾರ ೧೩
ಸ್ವದೇಶ [illegible] ೪
ದಕ್ಷಿಣ ಕನ್ನಡ—ಮೂಲ್ಕಿ, ಉಡುಪಿ, ಗುರುಪುರ ಕೆರೆ, ೭
ವಿದ್ಯಾರ್ಥಿ ವಿಹಾರಗಾರರ ಗತಿ! ,,
ಹನ್ನೊಂದು ಬೆರೆಯ ಜನರು ಹುಡಿಸರು! ೧೦
ಸಂಯುಕ್ತ ಹಿಂದೂಸ್ಥಾನಕ್ಕೆ ಯುಕ್ತವಾದ ವಿದ್ಯಾಭ್ಯಾಸ ೧೫



# ಸ್ವದೇಶಾಭಿಮಾನಿ.

ತಾ. ೩ನೇ ಶುಕ್ರವಾರ ಫೆಬ್ರವರಿ ೧೯೩೩.


## ಔದ್ಯೋಗಿಕ ಶಿಕ್ಷಣ

ಕಳೆದ ಒಂದು ತಿಂಗಳಿಂದ ನಮ್ಮ ಪತ್ರಿಕೆಯಲ್ಲಿ ಡಾಕ್ಟರ್ ಕೆ. ಎಸ್. ಕಿಣಿ ಎಮ್. ಎ. ಪಿ. ಎಚ್. ಡಿಯವರು 'ಹಿಂದೂಸ್ಥಾನಕ್ಕೆ ಯುಕ್ತವಾದ ವಿದ್ಯಾಭ್ಯಾಸದ ಮೇಲೆ ಬರೆದ ಆಲೋಚನಾಪರವಾದ ಲೇಖಗಳನ್ನು ವಾಚಕರು ಓದಿರಬಹುದು. ಈಗಿನ ನಮ್ಮ ವಿದ್ಯಾ ಕ್ರಮವು ಅಸಮರ್ಪಕವೆಂದೂ, ಅಪೂರ್ಣವೆಂದೂ ಅವರು ಬರೆದುದು ಸಹಜವೆಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಮ್ಮ ವಿದ್ಯಾಭ್ಯಾಸದಲ್ಲಿ ಇಂಗ್ಲಿಷಿಗೂ, ಅದರೊಡನೆ ಸೇರಿದ ಇತರ ಅಂಗಗಳಿಗೂ ಕೊಟ್ಟ ಪ್ರಾಮುಖ್ಯತೆಯ ದುಷ್ಪರಿಣಾಮಗಳನ್ನು ಈಗ ಎತ್ತದೆ, ಉಳಿದ ವಿಷಯಗಳಲ್ಲಿ ಈಗಿನ ಶಿಕ್ಷಣವು ನಮ್ಮ ಮುಂದಿನ ಜನಾಂಗವನ್ನು ಎಷ್ಟು ಸಮರ್ಥವಾಗಿ ಮಾಡುತ್ತದೆಂಬುದನ್ನು ವಿಚಾರಿಸಬೇಕಾಗುವುದು. ಸರಕಾರಿ ನೌಕರಿಯನ್ನು ಕೋರುವ ವಿದ್ಯಾವಂತರನ್ನೆ ನಮ್ಮ ಶಾಲಾ ಕಾಲೇಜುಗಳು ತಯಾರಿಸುವುವು. ಅವರಿಗೆ ಸಿಕ್ಕುವ ಜ್ಞಾನವನ್ನು ಲೋಕಾನುಭವಕ್ಕೆ ಯಾವ ತರದಲ್ಲಿಯಾದರೂ ಮಿಳಿತವಾಗುವುದಿಲ್ಲ. ಹೀಗಾಗಿ ನಮ್ಮ ಸುಶಿಕ್ಷಿತರು ಬೇರೊಂದು ಜಾತಿಯಾಗಿಯೆ ನಮ್ಮ ಜನಾಂಗದಲ್ಲಿ ಇದ್ದಿರುತ್ತಾರೆ. ಅವರಿಗೂ, ಜನಸಾಮಾನ್ಯಕ್ಕೂ ಯಾವ ತರದ ಸಂಸರ್ಗವೂ ಇರದೆ, ಶಿಕ್ಷಿತರು, ಅಶಿಕ್ಷಿತರೆಂಬ ತೀಕ್ಷ್ಣ ಭೇದವು ನಮ್ಮಲ್ಲಿ ಉಳಿದಿದೆ.

ಡಾಕ್ಟರ್ ಕಿಣಿಯವರ ಹೇಳಿಕೆಯ ಪ್ರಕಾರ ಪ್ರತಿಯೊಬ್ಬ ಹುಡುಗನು ೬ ವರ್ಷ ಕಾಲ ಓದುಬರಹಗಳನ್ನು ಉಚಿತವಾಗಿಯೂ, ಒತ್ತಾಯವಾಗಿಯೂ ಕಲಿಯಬೇಕು. ಆ ವೇಳೆ ಊರುಗಳಲ್ಲಿ ಎರಡು ತರದ ಶಾಲೆಗಳನ್ನು ಸ್ಥಾಪಿಸುವುದು, ಉಚಿತ—ಔದ್ಯೋಗಿಕ ಶಾಲೆಗಳೂ ಮತ್ತು ವಿದ್ಯಾಶಾಲೆಗಳೂ. ಇವು ಸರಿಸಮಾನವಾಗಿ ಒಂದಕ್ಕೊಂದು ಹೊಂದಿಕೊಂಡು ಇರತಕ್ಕವು. ಯಾವನಿಗೆ ಸಾಹಿತ್ಯ ಕಲೆಗಳಲ್ಲಿ ಅಭಿರುಚಿ ಇರುವುದೊ ಅಂತಹವನು ಆ ತರದ ವಿದ್ಯಾ ಶಾಲೆಗೆ ಹೋಗಬೇಕಲ್ಲದೆ ಎಲ್ಲರೂ ಅದನ್ನು ನುಗ್ಗಿ ತಮ್ಮ ಹಿರಿಯರ ಉದ್ಯೋಗಗಳನ್ನು ಮರೆಯುವುದರಲ್ಲಿ ಏನೂ ಅರ್ಥವಿಲ್ಲ. ಉಳಿದವರೆಲ್ಲರೂ ತನ್ನ ತಮ್ಮ ಉಚಿತ ಉದ್ಯೋಗಗಳಿಗೆ ತಕ್ಕುದಾಗಿ ಔದ್ಯೋಗಿಕ ಶಾಲೆಗಳಿಗೆ ಹೋಗಿ, ಉದ್ಯೋಗಗಳನ್ನು ಕಲಿತು ಮುಂದೆ ಇತರರ ಹಂಗಿಲ್ಲದೆ ಸ್ವತಂತ್ರ ಜೀವನೋಪಾಯವನ್ನು ಹುಡುಕುವುದು ಲೇಸು.

ದೇಶದಲ್ಲಿ ಈಗ ನಿರುದ್ಯೋಗವು ಹೆಚ್ಚಾಗಿದೆ. ನಮ್ಮ ಜಿಲ್ಲೆಯ ಹಳ್ಳಿಗಳನ್ನೆ ನಾವು ನೋಡಿದರೆ, ಎಷ್ಟು ತರುಣರು ನಿರುದ್ಯೋಗಿಗಳಾಗಿ ಬೀದಿಗಳಲ್ಲಿ ಅಲೆದಾಡುವರು ಎಂದು ಗೊತ್ತಾಗುವುದು. ಅಂತಹವರಿಗೆ ನೊವೆಲುಗಳನ್ನು ಓದಲಿಕ್ಕೂ ಪದ್ಯಗಳಲ್ಲಿನ ಛಂದಸ್ಸಲಂಕಾರವನ್ನು ಹುಡುಕಲಿಕ್ಕೂ ಮಾತ್ರ ನಾವು ಕಲಿಸಿದರೆ ಹಾಸ್ಯಾಸ್ಪದವಾಗುತ್ತದೆ. ಈ ನಿರುದ್ಯೋಗಿ ತರುಣರಿಗೋಸ್ಕರ ಔದ್ಯೋಗಿಕ ಶಾಲೆಗಳನ್ನು ಸ್ಥಾಪಿಸಿ, ತಕ್ಕುದಾದ [illegible] ಕೆಲಸಗಳನ್ನು [illegible] ಮಾಡುವುದು, ಮರ ಕೆಲಸ, ಚಿಕ್ಕ ಚಿಕ್ಕ ಕೈಗಾರಿಕೆಗಳು ಇವೇ ಮೊದಲಾದ ಎಷ್ಟೋ ಉದ್ಯೋಗಗಳಿವೆ. ಅಂತಹವುಗಳನ್ನು ಶಿಸ್ತಿನಿಂದಲೂ, ಜಾಣ್ಮೆಯಿಂದಲೂ ಮಾಡುವಂತೆ ಬೇಕಾದವರಿಗೆ ಕಲಿಸಿಕೊಟ್ಟರೆ, ಆ ಉದ್ಯೋಗಗಳು ಈಗಿನದಕ್ಕಿಂತ ಎಷ್ಟೋ ಸುಧಾರಿಸುವುವು. ನಮ್ಮಲ್ಲಿ ಬಡಗಿಗಳು ಈಗ ಇರಬಹುದು. ಆದರೆ ಅವರಿಗೆ ಮೊದಲಿನಿಂದ ಮಾಡಿಕೊಂಡು ಬಂದ ರೀತಿಯ ಕೆಲಸಗಳ ಹೊರಗೆ ಎಷ್ಟು ಜ್ಞಾನವಿದೆ? ಅದೇ ರೀತಿಯಲ್ಲಿ ವ್ಯಾಪಾರ, ನಮ್ಮಲ್ಲಿ ವ್ಯಾಪಾರವನ್ನು ಚೆನ್ನಾಗಿ ಅಭ್ಯಾಸಿಸಿ ಮುಂಗಡವಾಗಿಯೇ ಆಲೋಚನೆ ಮಾಡಿ ಅದನ್ನು ಶಾಸ್ತ್ರೀಯ ರೀತಿಯಲ್ಲಿ ನಡೆಸುವವರು ಎಷ್ಟು ಮಂದಿ ಸಿಗುವರು? "ಈ ದೇಶದಲ್ಲಿನ ಅನೇಕ ಜನಸಮುದಾಯಗಳಿಗೆ ಬೇರೆ ಬೇರೆ ಶಾಗಶಾಲೆಗಳು ಏರ್ಪಡಿಸಬೇಕು" "ಎಂದು ಕಿಣಿಯವರು ಹೇಳಿದುದು ಸಮಂಜಸವಾದುದು.

ಔದ್ಯೋಗಿಕ ಶಾಲೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸುವುದು ಅಗತ್ಯವಿದೆ. ಎಂಟನೆ ತರಗತಿಯನ್ನು ಅಥವಾ ಐದನೆ ತರಗತಿಯನ್ನು ಕಲಿತು ವ್ಯಾಸಂಗವನ್ನು ನಿಲ್ಲಿಸುವವರು ಹಳ್ಳಿಗಳಲ್ಲಿ ಅನೇಕರಿರುತ್ತಾರೆ. ಅಂತಹವರಿಗೆ ಹಳ್ಳಿಯ ಜನರು ಒಟ್ಟು ಸೇರಿ ಉದ್ಯೋಗ ಶಾಲೆಗಳನ್ನು ಏರ್ಪಡಿಸಿಕೊಟ್ಟರೆ ಮುಂದೆ ಅವರಿಗೆ ಸ್ವತಂತ್ರಜೀವನೋಪಾಯವನ್ನನುಕೂಲಿಸಿ ಕೊಟ್ಟಂತಾಗುವುದು.

ಈ ಕೆಲಸವೇನೂ ಸುಲಭವಲ್ಲ. ಮೊದಲು ಅದಕ್ಕೆ ಬೇಕಾದುದು ದ್ರವ್ಯಸಹಾಯ. ಈಗಿನ ಸರಕಾರದ ಆಡಳಿತೆಯಲ್ಲಿ ವಿದ್ಯಾಖಾತೆಯು ಉಪವಾಸ ಬಿದ್ದಿರುವುದು. ಸರಕಾರವು ಉಚಿತವಾದ ವಿದ್ಯಾ ಧೋರಣೆಯನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ಮೊದಲು ಎಂದೂ ಮಾಡದ ಶರ್ತಗಳಂತೆ ಶಾಲೆಗಳನ್ನು ಸ್ಥಾಪಿಸುವುದೂ, ಜನರು ಶಾಲೆಗೆ ಹಣಸಹಾಯ ಮಾಡುವುದೂ, ಆಗಿನ ಕಾರ್ಯ ಪಟ್ಟಿಯಂತೆ ಶಾಲೆಗಳಲ್ಲಿ ಪಾಠಗಳು ಮುಂದರಿಸುವುದೂ ಎಂದು ಇನ್ಸ್‌ಪೆಕ್ಷನ್ ಮಾಡುವುದು ಇವ ನಮಗೆ ತೋರುವುದಲ್ಲದೆ, ಆಯಾ ಜಿಲ್ಲೆಯ ಬೇಡಿಕೆಗಳನ್ನು ಅಭ್ಯಸಿಸಿ ವಿದ್ಯಾ ಧೋರಣವನ್ನು ಇಟ್ಟಂತೆ ಕಾಣುವುದಿಲ್ಲ.

ಜಿಲ್ಲೆಯಲ್ಲಿಯ ವಿದ್ಯಾ ಪ್ರಸಾರವೂ, ಔದ್ಯೋಗಿಕ ಶಾಲಾ ಸ್ಥಾಪನೆಯೂ ಆಗಬೇಕಾದರೆ ಹಣಸಹಾಯವು ದೊರೆಯಬೇಕು. ಅದಕ್ಕಿಂತಲೂ ಮುಖ್ಯವಾದುದು ಜನಸಹಾಯ. ವಿದ್ಯಾ ಪ್ರಸಾರವನ್ನೆ ತಮ್ಮ ಜೀವನದ ಧ್ಯೇಯವೆಂದು ಇಟ್ಟುಕೊಂಡ ಜನರು ಬೇಕಾಗುತ್ತಾರೆ. ಊರ ಜನರ ಸಹಾಯವೂ ಉತ್ತೇಜನವೂ ಬೇಕಾಗಿದೆ. ನಮ್ಮಲ್ಲಿಯ ಊರ ಜನರಿಗೆ ತಮ್ಮ ವ್ಯವಹಾರಕೆಯ ಗೊಂದಲವೇ ಜೀವಮಾನದ ಕರ್ತವ್ಯವೆಂಬಂತೆ ಬಾಲಕರ ವಿದ್ಯಾ ವ್ಯಾಸಂಗದ ಕಡೆಗೆ ಲಕ್ಷ್ಯಕೊಡುವ ಉದಾರತೆಯು ಇರುವುದಿಲ್ಲ. ಜನಾಭಿಪ್ರಾಯವು ವಿದ್ಯಾ ಖಾತೆಯ ಮೇಲೆ ಇನ್ನೂ ಹರಿದಿಲ್ಲ. ಹೀಗಾಗಿ ಹಳ್ಳಿಗಾರರು ಯಾವ ತರದ ಶಾಲೆಗಳಿದ್ದರೂ ಗಣ್ಯ ಮಾಡದೆ ಶಾಲೆಯು ತಮ್ಮ ಜೀವಮಾನದ ಮುಖ್ಯ ಅಂಗವೆಂದು ಭಾವಿಸಿಕೊಳ್ಳುವುದಿಲ್ಲ.

ಜನರಿಗೆ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ಉತ್ಸಾಹವಿಲ್ಲದೆ ಯಾವ ಕೆಲಸವೂ ಸಾಗವುದಿಲ್ಲ. ಪ್ರತಿ ಜಿಲ್ಲೆಯ ಶಾಲೆಗಳಿಗೆ ದೂರದಲ್ಲಿರುವ ವಿದ್ಯಾ ಖಾತೆಯವರು ಸೂತ್ರಧಾರಿಗಳಾಗಿರುವ ಬದಲು ಜಿಲ್ಲೆಗಳಲ್ಲಿ ಸ್ಕೂಲ್ ಕೌನ್ಸಿಲುಗಳನ್ನು ಸ್ಥಾಪಿಸಿ ಜಿಲ್ಲೆಯ ಸಂಪೂರ್ಣ ವಿದ್ಯಾಭಿವೃದ್ಧಿಯನ್ನು ಅದಕ್ಕೆ ಒಪ್ಪಿಸಿ, ಅದರ ಉದ್ಯೋಗ ಕೆಲಸಗಳನ್ನು ನೋಡಿಕೊಳ್ಳಲು ಒಬ್ಬ ಸ್ವಂತ ವಿದ್ಯಾ ಆಫೀಸರನನ್ನು ಮುಖ್ಯಾಧಿಕಾರಿಯಾಗಿ ನೇಮಿಸಿ ಜಿಲ್ಲೆಯಲ್ಲಿಯ ವಿದ್ಯಾ ಪ್ರಸಾರವನ್ನು ಮಾಡುವಂತೆ ಉತ್ತೇಜನವಿತ್ತರೆ ಒಳ್ಳೆಯದಾಗುವುದಿಲ್ಲವೆ? ದ್ರವ್ಯಸಹಾಯ ಮಾಡುವಾಗ ಔದ್ಯೋಗಿಕ ಶಾಲೆಗಳನ್ನು ಸ್ಥಾಪಿಸುವಂತೆ ಉತ್ತೇಜನ ಕೊಟ್ಟರೆ ಆಗುವುದಿಲ್ಲವೆ? ಗ್ರಾಮಸ್ಥರಿಗೆ ಬೇಕಾದ ಜ್ಞಾನವು ಇಂಗ್ಲಿಷಿನದಲ್ಲ, ಅವರಿಗೆ ಬೇಕಾದುದು ಸಾರ್ವಜನಿಕ ವಿದ್ಯಾಭ್ಯಾಸ—ಗ್ರಾಮ ಸ್ವರಾಜ್ಯ, ಗ್ರಾಮ ಸಮಾಜ ಶಾಸ್ತ್ರ, ಅರ್ಥಶಾಸ್ತ್ರದ ಬೀಜ, ವ್ಯವಸಾಯ, ಪರಸ್ಪರ ಸಹಾಯ, ಗ್ರಹರಚನೆ, ಇವೇ ಮುಖ್ಯವಾದುವು. ಇವುಗಳನ್ನೂ, ಉದ್ಯೋಗಗಳನ್ನೂ ಸಮ್ಮಿಳಿಸಬೇಕು. ಸಾಹಿತ್ಯಕಲೆಯನ್ನೆ ಪುಸ್ತಕ ಭಂಡಾಗಾರದಿಂದಲೂ, ವಾಚನಾಲಯಗಳಿಂದಲೂ, ಪ್ರಸಾರಮಾಡಬಹುದು. ಅವರ್ಕೆ ಹೊಸ ಹೊಸ ಉದ್ಯೋಗಗಳನ್ನು ಅಭ್ಯಾಸಿಸಿಯೇ ಕಲಿಯಬೇಕಾಗುವುದು. ಅವನ್ನು ಚೆನ್ನಾಗಿ ಪರಿಶೀಲಿಸಿ ಜಿಲ್ಲೆ ಜಿಲ್ಲೆಗಳಿಗೆ ತಕ್ಕಂತೆ ಬೇಕಾದ ರೀತಿಯ ಔದ್ಯೋಗಿಕ ಶಾಲೆಗಳನ್ನು ಹೆಚ್ಚಿಸಿದ ವಿನಹ, ನಮ್ಮ ಈಗಿನ ಬಡತನವಾಗಲೀ, ಹೇಡಿತನವಾಗಲೀ, ಮೂಢತನವಾಗಲೀ ಹೋಗಲಾಡಿಸುವುದಕ್ಕಾಗಲಾರದು.

## ವಿದೇಶ ವರ್ತಮಾನ.

—ಮೊಂಟೆಸ್ಕ್ಯೂರಿಕ ಸ್ಥಿತಿಯು ಬಂಗಾಲಿಕ ಅವಸ್ಥೆಗೆ ಬಂದು ಮುಟ್ಟಿದುದರಿಂದ ಮೊಂಟೆಸ್ಕ್ಯೂರ್ ಚೇಂಬರ್ ಆಫ್ ಕೊಮರ್ಸ್ ಇವರು ಸಭೆಗೂಡಿ, "ಹಿಂದೂದೇಶದವರು ಮೊಂಟೆಸ್ಕ್ಯೂರ್ ಸಾಮಾನುಗಳ ಮೇಲೆ ಹೊರಿಸಿರುವ ಸುಂಕವನ್ನು ತೆಗೆಯದಿದ್ದರೆ ಅವರಿಗೆ ಹೊಸ ರಾಜ್ಯಾಧಿಕಾರವನ್ನು ಕೊಡಬಾರದೆಂದು ನಾವು ಪಾರ್ಲಿಮೆಂಟಿನವರಿಗೆ ಹೇಳುವೆವು" ಎಂದು ಗದರಿಸಿರುವರು!

—ಡೆಟ್ರೊಯಿಟ್‌ನಲ್ಲಿಯ ಬ್ರಿಗ್ ಎಂಬಲ್ಲಿನ ಫೋರ್ಡ್ ಮೋಟರ್ ಕಂಪೆನಿಯವರು ಸಂಬಳಕ್ಕಾಗಿ ಮುಷ್ಕರ ಹಿಡಿದು ಜಯಶೀಲರಾದರು.

—ಐರ್ಲೆಂಡಿನ ಜನರಲ್ ಇಲೆಕ್ಷನಿನಲ್ಲಿ ಡಿವೆಲೆರವರು ಗೆದ್ದರು. ಬ್ರಿಟಿಷರಿಗೆ ಸಹಕಾರವನ್ನು ತೋರಿಸುತ್ತಿದ್ದ ಕೊಸ್‌ಗ್ರೇವರು ಸೋತರು. ಇಂಗ್ಲೆಂಡಿನ ಪಡೆಯಿಂದ ತಪ್ಪಿದಂತಾಯಿತೆಂದು ಜನರ ಹೇಳಿಕೆ.

—ಯುದ್ಧದ ಸಾಲಗಳ ಕುರಿತು ಅಮೇರಿಕವು ಇಂಗ್ಲಾಂಡ್ ಮೊದಲಾದ ದೇಶಗಳವರೊಡನೆ ಮಾತುಕತೆ ನಡೆಸಲಿದೆ. ಇದು ಅಮೇರಿಕದ ಕೊನೆಯ ಎಚ್ಚರಿಕೆ.

—ಕ್ರೊಯ್‌ಡೊನಿನಿಂದ ಕೇಪ್‌ಟೌನಿಗೆ ವಿಮಾನದ ಮೂಲಕ ಹೊರಟ ಲೇಡಿ ಬೈಲಿಯೆಂಬವಳು ಒಮ್ಮೆ ಕಾಣೆಯಾಗಿ ಹಿಮಪ್ರಾಂತ್ಯದಲ್ಲಿ ಕಷ್ಟಕ್ಕೆ ಸಿಕ್ಕಿ ಬದುಕಿ ಬಂದಳು.

—ತನ್ನ ಚಿತ್ತದಲ್ಲಿ ವಯರ್‌ಲೆಸ್ ಸೆಟ್ಟನ್ನು ಇಡುವಂತಹ ಒಂದು ಯೋಜನೆಯನ್ನು ಬರ್ಲಿನ್‌ನಲ್ಲಿ ಒಬ್ಬನು ಕಂಡು ಹಿಡಿದಿರುವನು.

—೧೯೧೯ರಲ್ಲಿ ಜಪಾನ ಅರಸನ ಮೇಲೆ ಪಿತೂರಿ ನಡೆಸಿದರು. ಆ ಜನರ ಮುಖಂಡನಾದ ಟಕೇಡ ಎಂಬವನನ್ನು ಸೆರೆಹಿಡಿದು ಜಾತಿ ಶಿಕ್ಷೆ ಕೊಟ್ಟರು. ಅಪೀಲಾಗಿ ಆ ಶಿಕ್ಷೆಯು ಆಮರಣಾಂತಿಕ ಗಡೀಪಾರಿನಲ್ಲಿ ನಿಂತಿತು. ಕಳೆದ ತಿಂಗಳಲ್ಲಿ ಆ ಶಿಕ್ಷೆಯಿಂದಲೂ ಬಿಡುಗಡೆ ಹೊಂದಿ ಅವನು ಮನೆಗೆ ಸಂತೋಷದಿಂದ ನಡೆಯುತ್ತಿದ್ದನು. ಮನೆಯ ಸಮೀಪ ಬರುತ್ತಲೇ ಒಂದು ಮೋಟರ್ ಲೋರಿಯು ಅವನ ಮೇಲೆ ಬಿತ್ತು. ಆಸ್ಪತ್ರೆಯಲ್ಲಿ ತರತರದ ಚಿಕಿತ್ಸೆ ನಡೆಸಿದರೂ ಕೆಲವು ಘಂಟೆಗಳ ನಂತರ ಅವನು ಸ್ವರ್ಗಸ್ಥನಾದನು.

—ಜರ್ಮನಿಯಲ್ಲಿ ನಾಜೀ ಮುಖಂಡರಾದ ಹೆರ್ ಹಿಟ್ಲರರ್ ಚಾನ್ಸಲರಾಗಿ ಚುನಾಯಿಸಲ್ಪಟ್ಟು ಇದೀಗ ಮಂತ್ರಿಮಂಡಳವೇ ಹೊಸತಾಗಿ ಅಧಿಸ್ಥಾಪಿತವಾಗಿದೆ. ರಾಷ್ಟ್ರೀಯವಾದಿಗಳೇ ವಿಜಯಗೊಂಡರು.

—ನೊಬೆಲ್ ಪಾರಿತೋಷಕ ಪಡೆದ ಜೊನ್ ಗಾಲ್ಸ್‌ವರ್ದಿಯವರು ವಿಷಮ ಕಾಯಿಲೆಯಲ್ಲಿರುವರು.

—ಸಂಯುಕ್ತ ಅಮೇರಿಕಾ ಸರಕಾರದವರು ೧೯೧೮ರಲ್ಲಿ ೧೦೦ ಕಾಗದಗಳಲ್ಲಿ ಏಯರ್ ಮೈಲ್ ಸ್ಟಾಂಪನ್ನು ಮುದ್ರಿಸಿದರು. ಅದರಲ್ಲಿ ಒಂದು ಕಾಗದದಲ್ಲಿನ ವಿಮಾನ ಚಿತ್ರವು ತಲೆಕೆಳಗಾಗಿ ಮುದ್ರಿತವಾಯಿತು. ಈ ತಪ್ಪನ್ನು ಯಾರೂ ಗಮನಿಸಲಿಲ್ಲ. ಆ ಅಂಚೆ ಚೀಟಿನ ಕಾಗದವನ್ನು ಒಬ್ಬನು ಪಡೆದುಕೊಂಡನು. ಇತ್ತೀಚೆಗೆ ಅದಕ್ಕೆ ಬಹಳ ಗಿರಾಕಿಗಳು ಬಂದರು. ಕೊನೆಗೆ ಅದನ್ನು ಏಲಂ ಹಾಕಲಾಗಿ ೨೭೫೦ ಡೊಲ್ಲರು ದೊರಕಿತು. ಒಂದು ತಪ್ಪಿನಿಂದಾದ ವಿಚಿತ್ರ ಚಿತ್ರದಿಂದಾಗಿ ಆ ಅಂಚೆ ಚೀಟಿಗೆ ಅಷ್ಟು ಕ್ರಯ!

—ಇಟೆಲಿಯಲ್ಲಿ ಸೀನಿಯರ್ ಮುಸೊಲಿನಿಯವರ ಮಿತ್ರ ಸಿಲ್‌ವೆಸ್ಟ್ರಿ ಎಂಬವರ ಎರಡು ಮಾಳಿಗೆಯ ಮನೆಯು ಅತ್ರಾಂತಿಕಾರರ ಗುಂಡಿನೇಟಿನಿಂದ ಚಿಮುರು ಚುಮುರಾಗಿ ಅವರ ಪತ್ನಿಯವರು ತೀರಿಕೊಂಡು ಅವರ ಇಬ್ಬರು ಮಕ್ಕಳು ಆಸ್ಪತ್ರೆಗೊಯ್ಯಲ್ಪಟ್ಟರು.

## ಒಳದೇಶ ವರ್ತಮಾನ

—ಶ್ರೀಯುತ ಸುಭಾಷ್‌ಚಂದ್ರ ಬೋಸರು ೨೪ನೇ ತಾರೀಕಿನ ದಿನ ಮುಂಬಯಿ ಮಾರ್ಗವಾಗಿ ಯುರೋಪಿಗೆ ತೆರಳಲಿರುವರು. ಬಹಳ ಕ್ಷೀಣಾವಸ್ಥೆಯಲ್ಲಿರುವರು.

—ಅಹ್ಮದಾಬಾದಿನಲ್ಲಿ ಹರಿಜನರ ವಾಸಕ್ಕಾಗಿ ಪ್ರೀತಮನಗರವೆಂಬ ಕೊಲೊನಿ ಒಂದನ್ನು ಮುನಿಸಿಪಾಲಿಟಿಯ ಅಧ್ಯಕ್ಷರು ತೆರೆದಿರುವರು. ಅದರಲ್ಲಿ ೫೦ ಮನೆಗಳಿವೆ.

—ಕಲ್ಕತ್ತೆಯ ಹೂಗ್ಲಿ ಎಂಬ ಗ್ರಾಮದಲ್ಲಿ ತಾ. ೨೬ನೇ ದಿನ ಸ್ವಾತಂತ್ರ್ಯ ದಿನಾಚರಣೆಗಾಗಿ ಕೂಡಿ ಗುಲ್ಲೆಬ್ಬಿಸಿದ ಜನತೆಯ ಮೇಲೆ ಪೋಲೀಸರು ಗೋಲಿಬಾರು ಮಾಡಿದರು. ೬ ಮಂದಿ ಜಖಂಗೊಂಡರು.

—ಮುಂಬಾಯಿಯಲ್ಲಿ ಮೂಸಾಂತ್ಯದ ರಾಷ್ಟ್ರಧ್ವಜಾರೋಹಣವಾದಾಗ ಪೋಲೀಸರು ೫ ಮಂದಿಗಳನ್ನು ಹಿಡಿದರು.

—"ಸುಧಾರಣಾ ಯೋಜನೆಯು ಬಹಳ ಅಸಮರ್ಪಕವಾಗಿದೆ"ಯೆಂದು ಶ್ರೀ. ಎನ್. ಸಿ. ಕೇಳ್ಕರರು ಪುಣೆಯಲ್ಲಿ ಲಂಡನ್ ಪರಿಷತ್ತಿನ ಕುರಿತಾಗಿ ಹೇಳಿದರು.

—ತಾಜಮಹಾಲನ್ನು ಇಟೆಲಿ ದೇಶದವರು ಕಟ್ಟಿದರೆಂದು ಇಂಗ್ಲೀಷರು ಸುಳ್ಳು ಬರೆದಿರುವರೆಂದೂ ಅದು ಏಸಿಯಾಖಂಡದ ಶಿಲ್ಪಿಗಳಿಂದಲೇ ನಿರ್ಮಿತವಾದುದೆಂದೂ ಕಂಡುಹಿಡಿಯಲಾಗಿದೆ.

—ಕಲ್ಕತ್ತೆಯಲ್ಲಿ ಒಟ್ಟು ೬೦ ಕೈದಿಗಳು ತಾ. ೨೬ನೇ ದಿನ ಪಡೆದು [illegible]

—ದಿಲ್ಲಿಯ ಸಮೀಪ ಶಹದಾರ ಎಂಬಲ್ಲಿ ಇಬ್ಬರು ಬಸ್ ಡ್ರೈವರರು ಒಬ್ಬನಿಗಿಂತ ಇನ್ನೊಬ್ಬನು ಮುಂದೋಗಬೇಕೆಂದು ಮಿತಿಮೀರಿದ ವೇಗದಿಂದ ಬಸ್ಸನ್ನು ಓಡಿಸಿ ಒಂದು ಬಸ್ಸು ಹೊಳೆಗೆ ಬಿದ್ದು ೧೬ ಮಂದಿಗಳಿಗೆ ಘಾಯವಾಯಿತು ಡ್ರೈವರನು ಕೈದಿನಲ್ಲಿರುವನು.

—ಲಾಹೋರಿನಲ್ಲಿ ಒಂದು ಮಿಲಿಟರಿ ಕಾರು, ಬೀದಿಯ ಮೇಲೆ ನಿಂತು ವಾಹನಗಳನ್ನು ಚಲಾಯಿಸುವ ಪೋಲೀಸನ ಮೇಲೆ ಬಿತ್ತು ಅವನು ಆಸ್ಪತ್ರೆಯಲ್ಲಿ ಮಡಿದನು. ಮಿಲಿಟರಿ ಡ್ರೈವರನನ್ನು ಹಿಡಿಯಲಾಗಿದೆ.

—ಮದ್ರಾಸಿನಲ್ಲಿ ಸ್ಟೀಮ್‌ಲೋರಿಯೊಂದು ಒಬ್ಬ ಸೈಕಲ್ ಸವಾರನ ಮೇಲೆ ಓಡಿ ಅವನನ್ನು ಕೊಂದಿತು

—ಮುಂಬಯಿಯ ಕೊಂಗ್ರೆಸ್ ಕೆಲಸಗಾರರ ಲಿಷ್ಟು ಪುಸ್ತಕ ಸಾಹಿತ್ಯಗಳ ಸಮೇತ ಹತ್ತು ಮಂದಿ ಮುಂದಾಳುಗಳನ್ನು ಪೋಲೀಸರು ಹಿಡಿದರು.

—ಮುಂಬಯಿಯ ಇ. ಡಿ. ಸೆಸ್ಸೂನ್ ಮಿಲ್ಲಿನ ಹನ್ನೊಂದು ಸಾವಿರ ಕೆಲಸಗಾರರನ್ನು ತೆಗೆಯಲಿದ್ದಾರೆ. ವ್ಯಾಪಾರ ಮಾಂದ್ಯವು ಕಾರಣ.

—ಡಾ। ಸುಬ್ಬರಾಯನರ ದೇವಸ್ಥಾನ ಪ್ರವೇಶಬಿಲನ್ನು ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚಿಸಬೇಕೆಂದು ಶ್ರೀ ಸಿ.ಎಸ್ ರಂಗಯ್ಯನವರು ಅಪೇಕ್ಷಿಸಿದುದಕ್ಕೆ ವೈಸರಾಯರು ಒಪ್ಪಿದ್ದಾರೆ.

—ಅಹ್ಮದಾಬಾದಿನ ನ್ಯಾದಾದಿನಲ್ಲಿ ಜರಗಿದ ಯುವಕ ಪರಿಷತ್ತಿನಲ್ಲಿ ಪೋಲೀಸರು ೧೦೦ ಜನರನ್ನು ಹಿಡಿದರು.

—ಮಾಜಿ ಮಿನಿಸ್ಟರ್‌ರಾಗಿದ್ದ ಶ್ರೀ ಆರ್ ಎಸ್ ಆರೋಗ್ಯಸ್ವಾಮಿ ಮುದಲಿಯರವರು ಇದೇ ತಾ. ೩೧ನೇ ದಿನ ಮದ್ರಾಸಿನಲ್ಲಿಯ ತನ್ನ ಮನೆಯಲ್ಲಿ ಸ್ವರ್ಗಸ್ಥರಾದರು. ವಿದ್ಯಾಖಾತೆ, ರಾಷ್ಟ್ರದೇಳ್ಗೆಗಳಲ್ಲಿ ತಲ್ಲೀನರಾಗಿದ್ದವರಿವರು

—ಹತ್ತು ರೂಪಾಯಿಯ ಒಂದು ಶಾಲನ್ನು ಕದ್ದುದಕ್ಕಾಗಿ ಅಹ್ಮದಾಬಾದಿನಲ್ಲಿ ಮತೂರ್ ಸಿಂಗ್ ಎಂಬವನಿಗೆ ೧೮ ತಿಂಗಳ ಕಠಿಣ ಶಿಕ್ಷೆ!

—ಪೂನೆಯಲ್ಲಿ ಮಹಾತ್ಮಾಜೀಯವರನ್ನು ಜ. ಡಿ. ಬಿರ್ಲ, ರಾಜಗೋಪಾಲಾಚಾರಿ, ದೇವದಾಸಗಾಂಧಿಯವರು ಭೇಟಿಯಾದರು

—ಗುಜರಾಥಿನ ಜಾತಿ ಹಿಂದೂಗಳಿಗೆ ಮಹಾತ್ಮರು ಒಂದು ಬಹಿರಂಗ ಪತ್ರವನ್ನು ಬರೆಯುತ್ತಾ "ನನ್ನನ್ನು ಅಂದು ಅನುಸರಿಸಿ ಅಸ್ಪೃಶ್ಯತೆಯನ್ನು ಖಂಡಿಸಿದ್ದಿರಿ. ಈಗಲೂ ಹಾಗೆ ಮಾಡಿರಿ ಅಥವಾ ನನ್ನನ್ನು ಬಲಿಯಾಗಿ ಅರ್ಪಿಸಿರಿ' ಎಂದಿರುವರು

—ಮುಂಬಾಯಿಯಲ್ಲಿ ಠಕ್ಕು ಚೆಕ್ಕನ್ನು ಕೊಟ್ಟು ಕಾಲಿಗೆ ಬುದ್ಧಿ ಹೇಳಿದ ಪೀರ್ ಕರಂಶಾ ಎಂಬವನನ್ನು ಜಲಂಧರದಲ್ಲಿ ಹಿಡಿದು ವಿಚಾರಣೆಗೆ ತಂದಿರುವರು

## ಚಿಕ್ಕ ಮಂಗಳೂರು ವಾರ್ತೆ

ಶ್ರೀಗಳಾದ ಹೊಸಕೊಪ್ಪ ಕೃಷ್ಣರಾವ್ ಕೆ ಟಿ ಸತ್ಯನಾರಾಯಣ, ಕಲಸಾ ಕೃಷ್ಣರಾವ್, ಬಾಗಮನೆ ದೇವೇಗೌಡ ಎಂ ಅಬ್ದುಲ್ ಅಜೀಜ್, ವಿ ಎಸ್. ಸಂಜೀವರಾವ್, ತಗಡೂರು ರಾಮಚಂದ್ರರಾವ್ ಮುತ್ತಿನ್ನಿತರ ಐವರು ತಾ ೨೯ರಿಂದ ಪ್ರಾರಂಭವಾದ ವಸ್ತು ಪ್ರದರ್ಶನದ ವೇಳೆ ರಾಷ್ಟ್ರಧ್ವಜಾರೋಹಣವನ್ನು ಮಾಡಬಾರದೆಂದು ಚಿಕ್ಕಮಂಗಳೂರು ಮೆಜಿಸ್ಟ್ರೇಟರು ಕಟ್ಟಪ್ಪಣೆ ಮಾಡಿರುವರು

**ಮಂಗಳೂರು** ಜಿಲ್ಲಾ ಸ್ವದೇಶೀ ಪ್ರಚಾರ ಸಭೆಯವರು ಈ ಕೆಳಗಿನ ಕಾರ್ಯಕ್ರಮದಂತೆ ತಾ ೪ರಿಂದ ಕುಂದಾಪುರ ತಾಲೂಕಿನಲ್ಲಿ ಪ್ರವಾಸ ಮಾಡಲಿಕ್ಕಿರುವರು ನಿಶ್ಚಿತ ನಿಯಮದಂತೆ ಮನೆ ಮನೆ ಖಾದಿ ಮತ್ತು ಸ್ವದೇಶಿ ಮಾರಾಟ, ಸಾರ್ವಜನಿಕ ಭಾಷಣ ಕರಪತ್ರ ಹಂಚೋಣ, ಇತ್ಯಾದಿ ರೀತಿಯಿಂದ ಪ್ರಚಾರ ಕಾರ್ಯವು ನಡೆಸಲ್ಪಡುವುದು ತಾ ೪—ಸೋಮೇಶ್ವರ, ತಾ ೫, ೬—ಹಾಲಾಡಿ ಶಂಕರನಾರಾಯಣ ಇತ್ಯಾದಿ; ತಾ ೭, ೮—ಕೋಟೇಶ್ವರ ಕುಂದಾಪುರ ಇತ್ಯಾದಿ; ತಾ ೯, ೧೦, ೧೧—ಗಂಗೊಳ್ಳಿ ಉಪ್ಪುಂದ, ಬೈಂದೂರು, ಕೊಲ್ಲೂರು; ತಾ. ೧೪, ೧೫, ೧೬—ಹಟ್ಟಿ, ಸೀರೆಕಟ್ಟೆ, ಗೋಳಿಕಟ್ಟೆ ಇತ್ಯಾದಿ. ಮೇಲಿನ ಸ್ಥಳಗಳಲ್ಲದೆ ಪ್ರವಾಸ ಮಾರ್ಗದಲ್ಲಿರುವ ಇತರ ಹಲವು ಸ್ಥಳಗಳು ಸಂದರ್ಶಿಸಲ್ಪಡುವುವು. ಸ್ಥಳೀಯ ಮಹಾಶಯರು ಎಲ್ಲಾ ರೀತಿಯಲ್ಲಿಯೂ ಸಹಕರಿಸಬೇಕಾಗಿ ವಿ. ಕೆ. ಭಂಡಾರಿ, ಕಾರ್ಯದರ್ಶಿ ಇವರ ವಿನಂತಿ.

'ಸ್ಥಳೀಕ ವಾರ್ತೆಗಳ ಬಾಣ'ದಲ್ಲಿ "ದಿವ್ಯದೃಷ್ಟಿ"ಯು, ನಿನ್ನೆ ಬೆಳಗ್ಗಿನ ತನಕ ಶಾರದಾ ಪ್ರೆಸ್ಸಿನ ಎದುರು ಇದ್ದ ಕೆಸರಿನ ಕುರಿತು ಬರೆದಿರುವನಾದರೂ, ಮಧ್ಯಾಹ್ನದಲ್ಲಿ ಆ ಕೆಸರನ್ನು ರಥೋತ್ಸವದ ಸಂಬಂಧ ತೆಗೆಸಲಾಗಿದೆ ಈ ತೋಡು ಮುಂದಕ್ಕೂ ಅದಷ್ಟು ಬಾಚಿಯಾಗಿದ್ದೀತೆಂದು ಹಾರೈಸಬಹುದೇ?

ಕಳ್ಳತನಕ್ಕೆ ಮದ್ದಾವುದು? ಪಾಣಾಜೆ ಗ್ರಾಮದಲ್ಲೆಲ್ಲಾ ಈಗ ಅಡಿಕೆ ತೆಂಗಿನಕಾಯಿ ಕಾಯಿಪಲ್ಯಗಳ ಕಳವು ದಿನನಿತ್ಯವೆಂಬಂತೆ ಆಗುತ್ತಲಿದೆ ಶಂಕರನಾರಾಯಣ ಭಟ್ಟರ ಗಡಿಯಾರ ಕೋಟೆಯು ಕಳ್ಳರಿಂದ ನಾಶವಾಗುತ್ತಿರುವುದು ಏನು ಮಾಡಲಿ? ಎಂದು ಒಂದು ಪತ್ರವ್ಯವಹಾರ ಬಂದಿದೆ ಕಳ್ಳನಾರೆಂದು ಸಾಹಸಪಟ್ಟು ಹಿಡಿದು ಪಟೇಲಂಗೊಪ್ಪಿಸಿರಿ

ಸಂ ಸ್ವ

ಇದೇ ಬರುವ ಫೆಬ್ರವರಿ ತಾರೀಕು ೧೯ಕ್ಕೆ ಜರಗುವ ಹಿಂದೀ ಪರೀಕ್ಷೆಗಳು—ಮಂಗಳೂರಿನ "ಭಾರತ ಭಾಷಾ ಪ್ರವರ್ಧಕ ಸಂಘದ ಪರವಾಗಿ ಮೂಡಬಿದ್ರಿ, ಗುರುಪುರ ಯನಕೆರೆ, ಮಂಗಳೂರು, ಮಂಜೇಶ್ವರ ಮುಂತಾದ ಕಡೆಗಳಲ್ಲಿ ತೆರೆದಿರುವ ಕೇಂದ್ರಗಳಲ್ಲಿ ಪ್ರಥಮಾ, ಮಧ್ಯಮಾ ರಾಷ್ಟ್ರಭಾಷಾ ಈ ಮೂರು ಪರೀಕ್ಷೆಗಳು ಇದೇ ಫೆಬ್ರವರಿ ತಿಂಗಳ ತಾ ೧೯ರಲ್ಲಿ ಜರಗುವುದು ಈ ಪರೀಕ್ಷೆಗಳಲ್ಲಿ ಸ್ತ್ರೀಯರು ೪೯ ಪುರುಷರು ೧೯೦ ಮಂದಿ ಉಮೇದ್ವಾರರು ಕುಳಿತುಕೊಳ್ಳುವರು.

ಸ್ಥಾನಿಕ ಕೆನರಾ ಡಿಸ್ಟ್ರಿಕ್ಟ್ ಅತ್ಲೆಟಿಕ್ ಎಸೋಸಿಯೇಶನ್ ನಿನ ಬೆಡ್ಮಿಂಟನ್ ಸ್ಪರ್ಧೆಯಲ್ಲಿ ಫೈನಲ್ಸ್ ಮೇಚಿನಲ್ಲಿ ಕೆನರಾ ಹೈಸ್ಕೂಲ್ ಪ್ರಜೆಂಟ್ ಮತ್ತು ಅದೇ ಶಾಲೆಯ ಓಲ್ಡ್ ಬೋಯ್ಸ್ ಅತ್ಲೆಟಿಕ್ ಕ್ಲಬ್ಬಿನವರಿಗೆ ಸ್ಪರ್ಧೆಯಾಗಿ ಎರಡನೇಯವರು ಕಪ್ಪನ್ನು ಗೆದ್ದಿರುವರು ಇತರ ಶಾಲಾ ಕೋಲೆಜುಗಳ ಪೈಕಿ ಸೈಂಟ್ ಎಲೋಸಿಯಸ್ ಕೋಲೆಜಿನಿಂದ ೩ ಟೀಮುಗಳೂ ಗವರ್ನಮೆಂಟ್ ಕೋಲೆಜಿನಿಂದ ಒಂದು ಟೀಮು ಬಂದಿತ್ತು

ತಾ ೨೯ನೇ ಆದಿತ್ಯವಾರ ದಿವಸ ಶ್ರೀ ವಿಮುದ್ದೀಕ್ಷಾನಂದ ಜಯವರ ನಿರ್ಯಾಣೋತ್ಸವಕ್ಕಾಗಿ ಮಹಾ ಸಭೆಯೊಂದು ಡಿ. ಸಿ ಮಿಶ್ಯನ್ ಶಾಲೆಯಲ್ಲಿ ಶ್ರೀ ಎಂ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಸ್ತ್ರೀ ಪುರುಷ ಭಿನ್ನಭೇದವಿಲ್ಲದೆ ಜರಗಿತು

ಹರಿಜನ ಸೇವಾಸಂಘದ ಪರವಾಗಿ ರಿಟಾಯರ್ಡ್ ಡಿಸ್ಟ್ರಿಕ್ಟ್ ಜಡ್ಜ್ ಮ ರಾ ಮೂಲ್ಕಿ ನರಸಿಂಹರಾಯರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನಲ್ಲಿ (೨೯—೧—೩೩)ಆದಿತ್ಯವಾರ ಸಾರ್ವಜನಿಕ ಸಭೆಯೊಂದು ಎಡ್ವೋಕೇಟ್ ಶ್ರೀ ಶ್ರೀನಿವಾಸ ಪೈ ಬಿ ಎ, ಬಿ ಎಲ್ ಅಚ್ಯುತ ಬಾಳಿಗ ಬಿ ಎ ಎಲ್ ಟಿ, ಮೊದಲಾದ ಸುಧಾರಕರೂ ಸುಶಿಕ್ಷಿತ ಮಹಿಳೆಯರನೇಕರೂ ಸಭೆಗೆ ದಯ ಮಾಡಿಸಿದ್ದರು ಮೊದಲಾಗಿ ಶ್ರೀ ಪುಣಿಂಚತ್ತಾಯರು ತಾನು ರಚಿಸಿದ ದೇವದರ್ಶನದ ಪದವನ್ನು ಸುಂದರವಾಗಿ ಹಾಡಿದರು ಆ ಮೇಲೆ ಸೈಂಟ್ ಎಲೋಸಿಯಸ್ ಕೋಲೇಜ್ ಪಂಡಿತ ಮ ರಾ ನಿಡ್ಲೋಡಿ ಅನಂತ ಉಪಾಧ್ಯಾಯರೂ ಶ್ರೀ ಕೋಟ ಶಿವರಾಮ ಕಾರಂತರೂ ಶಾಸ್ತ್ರಾಧಾರಗಳಿಂದಲೂ, ಸ್ವಾನುಭವ ಸಿದ್ಧಾಂತಗಳಿಂದಲೂ ಹರಿಜನೋದ್ಧಾರಣೆಯನ್ನ ಸಮರ್ಥಿಸಿ ಮಾತನಾಡಿದರು. ಕೊನೆಗೆ ಅಧ್ಯಕ್ಷರ ಸಮಯೋಚಿತ ಭಾಷಣಾನಂತರ ಸಭೆಯು ಮುಕ್ತಾಯವಾಯಿತು

ತಾ ೧೨—೨—೩೩ ಆದಿತ್ಯವಾರ ಸಾಯಂಕಾಲ ಮಿತ್ರ ಮಂಡಲಿಯ ವರ್ಧಂತ್ಯಾಚರಣೆಯು ಕೆನರಾ ಹೈಸ್ಕೂಲಿನಲ್ಲಿ ನಡೆಯಲಿರುವುದು. ಸರ್ವರಿಗೂ ಸ್ವಾಗತವಿದೆ

**ಶ್ರೀಕೃಷ್ಣಾ ಟೋಕಿ ಸಿನೆಮಾ ಮಂದಿರದಲ್ಲಿ** ಈಗ ನಡೆಯುತ್ತಿರುವ "ದಾಯೂ ಬರ್ಮಾ" ಚಿತ್ರವು ದಕ್ಷಿಣ ಹಿಂದುಸ್ಥಾನದ ಪೈಕಿ ಮಂಗಳೂರಿನಲ್ಲಿ ಇದೇ ಮೊದಲಾಗಿ ಪ್ರದರ್ಶಿಸಲ್ಪಟ್ಟಿರುತ್ತದೆ. ಈ ಚಿತ್ರದ ಮಹತ್ವವು ಒಮ್ಮೆ ಬಂದು ನೋಡಿದ್ದಲ್ಲಿ ತಿಳಿದು ಬರುವುದು ಘಟೋತ್ಕಚನಿಗೂ ಅಭಿಮನ್ಯುವಿಗೂ ನಡೆಯುವ ಯುದ್ಧವು ಭಯಭೀತಿಯನ್ನುಂಟು ಮಾಡುತ್ತಿರುವುದು ಗಾನವೂ ಅಭಿನಯವೂ ಬಹು ಮಧುರವಾಗಿಯೂ, ಮನೋಹರವಾಗಿಯೂ ಇವೆ. ಅನಂತರ ಬೋಬ್ ಸ್ಟೀಲನಿಂದ ಅಭಿನಯಿಸಲ್ಪಟ್ಟ "ದಿ ರೈಡಿಂಗ್ ಫೂಲ್" ಎಂಬ ಮನೋಹರವಾದ ಚಿತ್ರವನ್ನು ಪ್ರದರ್ಶಿಸಲಾಗುವುದು. ಶ್ರೀರಾಮ ಪಾದುಕಾ ಪಟ್ಟಾಭಿಷೇಕ ಚಿತ್ರವು ಬೆಂಗಳೂರಿನಲ್ಲಿ ೪ ವಾರಗಳ ತನಕ ನಡೆದುದಲ್ಲದೆ ಇನ್ನೂ ೧ ವಾರ ಮುಂದರಿದಿರುವುದರಿಂದ ಆ ಚಿತ್ರವನ್ನು ರಥೋತ್ಸವದ ಸಮಯದಲ್ಲಿ ಪ್ರದರ್ಶಿಸಲು ಆಗಲಿಲ್ಲ ಅತಿ ಬೇಗನೇ ಪ್ರದರ್ಶಿಸಲಾಗುವುದು ಸ್ರಾವಣಕುಮಾರ್, ಸಿರಿನ್ ಫರಾದ್ ಭಸ್ಮಾಸುರ ಮೋಹಿನಿ "ಚೀಸ್ಟ್ ಆಫ್ ಬೋರ್ನಿಯೋ (ಭೂಲೋಕದಲ್ಲಿನ ಎಲ್ಲಾ ಚಿತ್ರಗಳಿಗಿಂತಲೂ ಮಿಗಿಲಾದ ಚಿತ್ರ) ಮೊದಲಾದ ಚಿತ್ರಗಳು ಅತಿ ಬೇಗನೆ ಬರುವುವು. ಸ್ರಾವಣ ಕುಮಾರ್ ಚಿತ್ರದಲ್ಲಿ ಗಾನ ಮಣಿಯಾದ ಮುಖ್ತಾರ್ ಬೇಗಮಳೇ ಮುಖ್ಯ ಪಾತ್ರವನ್ನು ವಹಿಸಿರುವಳು

**ಫಲಿಮಾರು.** ಇಲ್ಲಿ ವಾಚನಾಲಯವು ದಿನೇ ದಿನೇ ವೃದ್ಧಿ ಹೊಂದುತ್ತಾ ಬರುತ್ತದೆ ಹಳ್ಳಿಗರಲ್ಲಿ ವಾಚನಾಭಿರುಚಿ ಹೆಚ್ಚಿದೆ ಹಿಂದಿ ಶಾಲೆಯಿಂದ ಫೆಬ್ರವರಿ ೧೯ನೇ ತಾರೀಕಿನಲ್ಲಿ ಜರಗುವ ಹಿಂದೀ ಪರೀಕ್ಷೆಗೆ ೧೦ ಜನರು ಕೂತುಕೊಳ್ಳಲು ಹಣ ಕಟ್ಟಿದ್ದಾರೆ

---

## ನೋಟೀಸು.

ಕಾರ್ಕಳ ಕಸಭೆಯಲ್ಲಿರುವ ನೆಕ್ಲಾಜೆ ಶ್ರೀ ಮಹಾಕಾಳಿ ಅಮ್ಮನವರ ದೇವಳದ ಭಜಕರಾದ ಕಾರ್ಕಳ ತಾಲೂಕು ೩೬ ಮಾಗಣೆ ೩೬ ಗ್ರಾಮಗಳಲ್ಲಿ ಇರುವ ವಿಶ್ವಕರ್ಮ ಬ್ರಾಹ್ಮಣ ಮಹಸ್ಥರಿಗೆ ಈ ಮೂಲಕ ಕೆಳಗೆ ವಸ್ಕತು ಹಾಕಿದ ಭಜಕರು ತಿಳಿಯಪಡಿಸುವುದೇನೆಂದರೆ

ನಮ್ಮ ಮಹಸ್ಥರು ಭಜಿಸಿ ಬರುವ ಕಾರ್ಕಳ ನೆಕ್ಲಾಜೆ ಶ್ರೀ ಮಹಾಕಾಳಿ ಅಮ್ಮನವರ ದೇವಳದ ಆಡಳ್ತೆ ಮೊಕ್ತೆಸರ್ ನಿಟ್ಟೆ ಶಂಕ್ರಯಚಾರಿಯ ಮೇಲೆ ಸದರಿ ದೇವಳದ ಭಜಕರು ಮದ್ರಾಸ್ ಎಂಡೋಮೆಂಟ್ ಬೋರ್ಡಾಫಿಸಿಗೆ ಬರಕೊಂಡ ಅರ್ಜಿಗಳ ತನಿಖೆ ಮತ್ತು ಲೆಕ್ಕ ಪತ್ರಗಳ ತನಿಖೆ ಬಗ್ಗೆ ಕಳೆದ ತಾರೀಕು ೨೫—೧೨—೩೨ನೆಯ ದಿನ ಜರಗಿದ ಮಹಾ ಸಭೆಯಲ್ಲಿ ನಿಯಮಕರಾದ ಟ್ರಸ್ಟಿಗಳ ಮಂಜೂರಾತಿ ಬಗ್ಗೆ ಇದೇ ತಾ ೬—೨—೩೩ ನೇ ಸೋಮವಾರ ಮಧ್ಯಾಹ್ನ ಒಂದು ಗಂಟೆಯ ಸಮಯ ಸದರಿ ಕಾರ್ಕಳ ಕಸಬಾ ನೆಕ್ಲಾಜೆ ಮಹಾಕಾಳಿ ಅಮ್ಮನವರ ದೇವಸ್ಥಾನದ ಕಟ್ಟೋಣದಲ್ಲಿ ಕೂಡಬೇಕಾದ ಮಹಾ ಸಭೆಗೆ ಸರ್ವರೂ ಅಗತ್ಯ ಬರಬೇಕಾಗಿ ವಿನಂತಿ ಈ ಮಹಾ ಸಭೆಯು ಸದರಿ ಎಂಡೋಮೆಂಟ್ ಬೋರ್ಡಾಫಿಸ್ ಸುಪರಿಂಟೆಂಡೆಂಟ್ ಆಚ್ಯುತ ಮೆನನ್‌ನವರ ಆಜ್ಞೆ ಪ್ರಕಾರ ಕೂಡುವುದಾದುದರಿಂದ ಅವರು ಸಹ ಈ ಮಹಾ ಸಭೆಗೆ ಹಾಜರಿರುತ್ತಾರೆ

1 ಕಾರ್ಕಳ ಪೇಟೆಯಲ್ಲಿರುವ ತಿಮ್ಮಯ್ಯಾಚಾರಿ ಮಗ ಅಣ್ಣಪ್ಪಾಚಾರಿ ರುಜು. 2 ಶಿವಪ್ಪಾಚಾರಿ ಮಗ ಶಂಕರಪ್ಪಾಚಾರಿ ರುಜು. 3 ನಾರಾಯಣ ಲಕ್ಷ್ಮಣಾಚಾರಿ ರುಜು.

++ ++


## ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

**ಅಖಿಲ ಕರ್ಣಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ಣಾಟಕದ ಗೌರವಕ್ಕೂ ಕರ್ಣಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ**

ನಮ್ಮಲ್ಲಿ ಬ್ರಿಟಿಷ್ ಫಾರ್ಮಕೋಪಿಯಾ, ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೊಡೆಕ್ಸ್, ಫ್ರಿಸ್ಕ್ರಿಪ್ಶನ್ ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟೋಯಿಲೆಟ ದ್ರವ್ಯಗಳೂ ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯಾರಿಸಲ್ಪಡುವುವು

ಪಾಶ್ಚಾತ್ಯ ದ್ರವ್ಯಗಳೂ ಎಷ್ಟೊಂದು ಅಮೂಲ್ಯವ ಪ್ರಮುಖವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಮುಖ್ಯ ಔಷಧಗಳು

ಅಶ್ವನಸ್ಥಾನ ಲೇಹ ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ ೧ ಪೌಂಡು ಬಾಟ್ಲಿ ರೂ. ೩ ೧೦ ಔನ್ಸು ಬಾಟ್ಲಿ ರೂ ೨ ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ಪ ಮಡಿಮೇಹ ಶಾಂತತೆಯನ್ನೀಯುವ ಔಷಧ. ೧ ಪೌಂಡು ಬಾಟ್ಲಿಗೆ ರೂ 1—8

ಅಶ್ವಗಂಧಾರಿಷ್ಟ, ಅತ್ಯುತ್ತಮವಾದ ನರಗಳ ಹಾಗೂ ಸಾಧಾರಣ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ. 3, ೮ ಔನ್ಸು ಬಾಟ್ಲಿಗೆ ರೂ. 1—10— ಪ್ರಸೂತಿ ಸಂಜೀವನ ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ. ೧೦ ಔನ್ಸು ಬಾಟ್ಲಿಗೆ ರೂ 1 8—1 ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ. ೧ ಪೌಂಡು ಬಾಟ್ಲಿಗೆ 3—8—0, ೮ ಔನ್ಸು ಬಾಟ್ಲಿಗೆ ರೂ 1—12—0

ಬ್ರಾಹ್ಮಿ ತೈಲ. ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಬ್ರೈನ್ ಟಾನಿಕ್ಕು ೪ ಔನ್ಸು ಬಾಟ್ಲಿಗೆ ಆಣೆ 14 ಹಿಮಸಾಗರ ತೈಲ ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ ೪ ಔನ್ಸು ಬಾಟ್ಲಿಗೆ ರೂ —9— ನಾರಾಯಣ ತೈಲ ವಾತರೋಗಗಳಿಗೆ ಪ್ರಸಿದ್ಧವಾದ ತೈಲ. ೪ ಔನ್ಸು ಬಾಟ್ಲಿಗೆ ರೂ —6—' ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಮುಂತಾದ ವಾತ ಕಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೩ನೇಯ ಆವರ್ತನೆ ೧ ಔನ್ಸಿಗೆ ರೂ ' ೧೪ನೇಯ ಆವರ್ತನೆ ೧ ಔನ್ಸಿಗೆ ರೂ — 3 ೨೧ನೇ ಆವರ್ತನೆ ೧ ಔನ್ಸಿಗೆ ರೂ 2— ೬೧ನೇಯ ಆವರ್ತನೆ ೧ ಔನ್ಸಿಗೆ ರೂ 4 ೫೦ನೇ ಆವರ್ತನೆ ರೂ 4—1 ೧೦೧ನೇ ಆವರ್ತನೆ ರೂ ೮ ಧನ್ವಂತರಿ ತೈಲ ರಕ್ತವಾತ, ಆಮವಾತ, ಸರ್ವಾಂಗವಾತವಮುಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ಮೈಗೆ ಹಚ್ಚುವ ದಿವ್ಯೌಷಧ. ೭ನೇಯ ಆವರ್ತನೆ ೧ ಔನ್ಸಿಗೆ ರೂ. , ೧೪ನೇ ಆವರ್ತನೆ ೧ ಔನ್ಸಿಗೆ ರೂ — 2 ೨೧ ನೇ ಆವರ್ತನೆ ೧ ಔನ್ಸಿಗೆ ರೂ 2 8—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಅಸವ, ಅರಿಷ್ಟಗಳೂ, ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ ಸುಕುಮಾರಾಮೃತ, ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರಿಸ್ಕ್ರಿಪ್ಶನ್ ಔಷಧಗಳೂ, ಕರ್ಣಾಟಕ ಸ್ನೋ, ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅರೋರಾ ಕ್ರೀಮ್, ಬ್ಯೂಟಿಕ್ರೀಮ್, ಕ್ರಿಮೋರ್ ಆಮೋನಿಸ್ (Limes & Glycerine) ವಗೈರೆ ಟೊಯಿಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು, ಹಚ್ಚೆ, ರಕ್ತನೀಲ, ವರ್ಣಗಳ, ಫೌಂಟೆನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಯೋಗಿಸುವ ಸಾಬೂನುಗಳೂ ತಯಾರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡ್ಯರೆಕ್ಟರರಿಗೆ ಬರೆದುಕೊಳ್ಳಿರಿ.

**Managing Director: — Venkataraya Annappa Baliga**

# ಹನ್ನೊಂದು ಮಿಲಿಯ ಜನರು ಮಡಿದರು!

## ಆದರೂ ಬುದ್ಧಿಯಿಲ್ಲ! ವ್ಯಸನವಿಲ್ಲ! ಜ್ಞಾನವಿಲ್ಲ!

# ಜಗನ್ನಿಯಾಮಕನ ಲೀಲೆಗೆ ಪಾರವುಂಟೆ?

ಒಬ್ಬ ವ್ಯಕ್ತಿಯ, ಒಂದು ಕುಟುಂಬದ, ಒಂದು ಸಮಾಜದ, ಒಂದು ರಾಷ್ಟ್ರದ ಉನ್ನತಿ ಅವನತಿಗಳಿಗೆ ಕರ್ಮವು ಹೇಗೆ ಕಾರಣಭೂತವೋ, ಹಾಗೆ ವಿಶ್ವದ ಊರ್ಧ್ವ ಮತ್ತು ಅಧೋಗತಿಗೆ ಅದರ ಕರ್ಮವೇ ಕಾರಣವಾಗಿರುತ್ತದೆ ಆ ಕರ್ಮವೇ ಜಗನ್ನಿಯಾಮಕನ ಪ್ರೇರಣೆಯ ಲೀಲೆ!

ತನ್ನನ್ನರಿಯಲೆಂದು ಪರಮಾತ್ಮನು ಚರಾಚರವನ್ನು ಸೃಷ್ಟಿಸಿದನು. ಎಲ್ಲರೂ ತನ್ನವರೇ ಆಗಬೇಕೆಂದು ಅದೃಶ್ಯನಾದ ಆ ಭಗವಂತನು ಬಗೆದನು ಆಧ್ಯಾತ್ಮಿಕ ಪಥದಿಂದ ತನ್ನನ್ನು ಸಕಲರೂ ಸೇರಬೇಕೆಂದು ಅವನು ಆಶಿಸಿದನು ಆದರೆ ವಿಶ್ವದ ಪ್ರಾಣಿಗಳು ತಮ್ಮ ಅಜ್ಞಾನಾಂಧಕಾರದಿಂದ ಸದ್ದಾರಿಯನ್ನು ಮರೆತುವು ನ್ಯಾಯನೀತಿಗಳನ್ನೂ ತ್ಯಜಿಸಿದುವು ಕಾಮ, ಕ್ರೋಧ, ಮೋಹ, ಮದ, ಮಾತ್ಸರ್ಯಗಳಿಂದ ಜೀವನ ಪಥದಲ್ಲಿ ಹೆಣಗಾಡಿದುವು ಸೃಷ್ಟಿಕರ್ತನನ್ನೇ ಮರೆತವು

ಪ್ರಪಂಚವೆಂಬ ನಾವೆಯನ್ನು ಸುಸೂತ್ರವಾಗಿ ನಡೆಸುವುದೇ ಭಗವಂತನ ಮುಖ್ಯ ಕೆಲಸ. ಅನಿಷ್ಟಗಳ ತರಂಗಗಳು ದಿಗಿಲೆಬ್ಬಿಸಿದರೆ ಅವನ್ನು ಒಡನೆ ಶಾಂತಗೊಳಿಸುವನು ಅನಿಷ್ಟಗಳು ಸ್ವಾಭಾವಿಕವಾಗಿ ಅಳಿದುಹೋಗುವುವೋ ಎಂದು ಅವನು ನಿರೀಕ್ಷಿಸುವನು ಆದರೆ ಅವುಗಳು ಪರಮಾವಧಿಯನ್ನು ಮುಟ್ಟಿತೆಂದರೆ ಒಡನೆ ತನ್ನ ಗೂಢ ಚೈತನ್ಯದಿಂದ ತಪ್ಪಡಿಯನ್ನು ಸರಿಗೊಳಿಸುವನು ಅವನ ಈ ರೀತಿಯ ಪರಿಹರಿಸುವಿಕೆಯೇ ನಾಶ—ಲಯ ಮಾನವ ಕುಟುಂಬವು ಸುಖದಿಂದಿರಬೇಕೆಂದೇ ಈ ಪ್ರಕೃತಿಶಾತನಾದ ಭಗವಂತನ ಉದ್ದೇಶ ಆದರೆ ಆಪರ ಅಂತಹ ಸುಖಕ್ಕೆ ಅನ್ಯಾಯವು ವಿಘಾತುಕವಾಗುವುದಾದರೆ ಅವನು ಅಂತಹ ಅನ್ಯಾಯವನ್ನು ಒಂದೊಂದು ವೇಳೆ ನಡುಮಧ್ಯ ಅಥವಾ ಒಂದೊಂದು ಸಲ ಅದರ ಪರಮಾವಧಿಯಲ್ಲೇ ಲಯಗೊಳಿಸುವನು

೧೭ನೇ ಶತಮಾನ ಬೊಹೇಮಿಯಾದಲ್ಲಿ ಅನ್ಯಾಯದ ವಿಷವೇ ಹರಡಿದ್ದಿತು ಏನಾಯಿತು? Thirty Years War' ಎಂಬ ಮೂವತ್ತು ವರ್ಷಗಳ ಯುದ್ಧವು ೧೬೧೮ರಿಂದ ೧೬೪೮ರ ವರೆಗೆ ನಡೆಯಿತು ಬೊಹೇಮಿಯಾದ ೪,೦೦೦;೦೦೦ ಜನಸಂಖ್ಯೆಯು ೮೦೦,೦೦೦ಕ್ಕೆ ಒಂದು ನಿಂತಿತು ಮದೋನ್ಮತ್ತರ ಪಡೆಯೇ ಹೋಯಿತು. ದೈವಿಕ ಪುರುಷರಿಗೆ ಜಯವಾಗಿ ಸುಖಶಾಂತಿಯು ನೆಲಸಿತು

ರಶ್ಯಾ ಆಸ್ಟ್ರೀಲಿಯಾಗಳಲ್ಲಿ ಅಧರ್ಮವು ಹೆಚ್ಚಿತು ನ್ಯಾಯವಾದಿಗಳ ಮೇಲೆ ಅನ್ಯಾಯಿಗಳ ಹಗೆತನದ ಕಾಟಕ್ಕಾರಂಭವಾಯಿತು. ಭಗವಂತನು ಲೀಲಾ ವಿನೋದವನ್ನು ಪ್ರದರ್ಶಿಸಬೇಕಾಯಿತು 'Seven Years' War' ಏಳು ವರ್ಷಗಳ ಯುದ್ಧವು ಅವರೊಳಗೆ ೧೭೫೬—೬೩ರ ವರೆಗೆ ನಡೆಯಿತು ೧೮೦,೦೦೦ ಪ್ರಶ್ಯನರು. ೧೩೫,೦೦೦ ಆಸ್ಟ್ರೀಯನರು ಮಡಿದರು ಅಲ್ಲಿಯೂ ದೈವಭಕ್ತರು ಸುಖಸಾಮ್ರಾಜ್ಯದಲ್ಲಿ ಬದುಕುವಂತಾದರು.

೧೭೯೯ರಲ್ಲಿ ನೆಪೋಲಿಯಾನನು ಭಗವತ್ಕರುಣೆಯಿಂದ ಪದವೀಗೇರಿದಾಗ ಅವನು ಉದ್ಧರಿಸಿದ ಮಹಾತ್ಮನನ್ನೆ ಮರೆತು ರಾತ್ರಿ ಹಗಲೆನ್ನದೆ ರಾಜ್ಯವಿಸ್ತರಣೆಯಲ್ಲಿ ಮನವಿಕ್ಕಿದನು. ಭಕ್ತರ ಕೊಲೆಯಾಯಿತು ಅಧರ್ಮದ ಯುಗವು ತಲೆದೋರಿತು. ನಿಯಾಮಕನಿಗೆ ಸರಿದೋರಲಿಲ್ಲ. ರಷ್ಯಾ ಎದುರು ಬಂತು, ಅಧರ್ಮದ ನಿರ್ಮೂಲನಕ್ಕಾರಂಭವಾಯಿತು. ೫,೦೦೦,೦೦೦ರಿಂದ ೬,೦೦೦,೦೦೦ ಅಧರ್ಮಿಗಳು ಮಡಿದರು. ರಷ್ಯಕ್ಕೆ ನೆಪೋಲಿಯಾನನ್ನು ಹಿಂಬಾಲಿಸಿದ ೬೦೦,೦೦೦ ಜನರಲ್ಲಿ ಕೆಲವು ಸಾವಿರ ಕಾಲಾಳುಗಳು ಬದುಕಿ ಹಿಂದೆ ಬಂದರು.

೪೦ ವರ್ಷಗಳು ದಾಟಿದುವು. ಸೃಷ್ಟಿ ಪಾಲಕನ ಶಕ್ತಿಯು ಯುರೋಪ್ ಖಂಡದಲ್ಲಿ ಸರಿಯಾಗಿ ನಿಲ್ಲಲಿಲ್ಲ ಅಲ್ಲಿಯ ರಾಷ್ಟ್ರಗಳಿಗೆ ಜ್ಞಾನದ ಬೆಳಕು ಕಾಣಲಿಲ್ಲ. ಅಜ್ಞಾನದ ಕಗ್ಗತ್ತಲೆಯೇ ಕಂಡಿತು ೧೮೫೪—೧೮೫೬ರಲ್ಲಿ ಕ್ರೈಮಿಯನ್ ಯುದ್ಧವು ನಡೆಯಿತು ಧರ್ಮಸಂಸ್ಥಾಪನೆಗೆ ಪ್ರಾರಂಭವಾಯಿತು. ೫೦೦,೦೦೦ ರಶ್ಯನರು, ೧೦೦,೦೦೦ ಫ್ರೆಂಚರು, ೨೫೦೦೦ ಬ್ರಿಟಿಷರು ಹತರಾಗಿ ಹೋದರು ಆ ಮೇಲೆ ಆ ದೇಶಗಳ ಧಮನಿಯು ಶಾಂತಗೊಂಡಿತು

೧೮೬೧—೧೮೬೫ರ ವರೆಗೆ ಅಮೇರಿಕನ್ ಯುದ್ಧಗಳು ನಡೆದುವು ೬೦೦,೦೦೦ ಜನರು ಸತ್ತುಬಿದ್ದರು ೧೬೦೦೦ ಜನರು ಕೋಲ್ಡ್ ಹಾರ್ಬರ್ ಎಂಬಲ್ಲಿ ಹತ್ತು ನಿಮಿಷಗಳಲ್ಲಿ ಹತರಾಗಿ ಬಿಟ್ಟರು. ಆದರೂ ಮಾನವ ಕುಟುಂಬದ ಕಣ್ಣು ತೆರೆಯಲ್ಪಡಲಿಲ್ಲ ಯುದ್ಧದ ಲೀಲಾಜಾಲವನ್ನು ಅರಿಯಲಾಗಲಿಲ್ಲ ಅರಿತವರ ಮಾತನ್ನು ಕಿವಿ ಮೇಲೆ ಹಾಕಿಕೊಳ್ಳಲಾಗಲಿಲ್ಲ ಅಧರ್ಮವು ನಡೆಯುತ್ತಾ ಹೋಯಿತು ಸೃಷ್ಟಿಕರ್ತನು ನಾಶದ ಖಡ್ಗವನ್ನುಪಯೋಗಿಸುತ್ತ ಹೋಗಬೇಕಾಯಿತು ತನ್ನನ್ನು ಮೀರಿದ ಮಗನನ್ನು ತಂದೆಯು ಏನು ಮಾಡನು? ತನ್ನನ್ನು ಧಿಕ್ಕರಿಸಿದ ಶಿಷ್ಯನನ್ನು ಉಪಾಧ್ಯಾಯನು ಏನು ಮಾಡನು? ಶಿಕ್ಷೆ! ಶಿಕ್ಷೆ! ಶಿಕ್ಷೆ!

ರಾಷ್ಟ್ರದ ಹಿತಾಹಿತ ಭಾರವನ್ನು ಸರ್ವೋತ್ತಮನೊಬ್ಬನು ಹಿಡಿದಿರುವನೆಂಬುದನ್ನು ಮಾನವನು ತಿಳಿದೂ ನಟಿಸಿದನು ಫಲವಾಗಿ, ದಮನನೀತಿಯೇ ಪ್ರಯೋಗಿಸಲ್ಪಟ್ಟಿತು.

ಫ್ರಾನ್ಸ್ ಜರ್ಮನಿಗಳ ಕಡೆಗೆ ಕರ್ತನ ದೃಷ್ಟಿಯು ಹೋಯಿತು ಧರ್ಮ ಸಾಮ್ರಾಜ್ಯ ಸ್ಥಾಪನೆಗೆ ಮನಗೊಟ್ಟನು. ೧೮೭೦ರಲ್ಲಿ ಫ್ರಾಂಕೊ ಜರ್ಮನ್ ಯುದ್ಧವು ನಡೆಯಿತು ಮದೋನ್ಮತ್ತರು ಭಾಗ ವಹಿಸಿದರು ತಾನು ಮೇಲು ತಾನು ಮೇಲೆಂಬ ಅಹಂಕಾರ ಮಮಕಾರಗಳು ದಿಕ್ಪಾಲರಾಗಿ ಮೆರೆಯಲಾರಂಭಿಸಿದುವು ೧೫೦,೦೦೦ ಫ್ರೆಂಚರು ಮಡಿದರು ೪೫೦೦೦ ಜರ್ಮನ್ ಅಧರ್ಮಿಗಳು ಹತರಾದರು

ಏಳು ವರ್ಷಗಳು ಕಳೆಯಲಿಲ್ಲ ಆ ಪರಮಾತ್ಮನಿಗೆ ಪುನಃ ದುಷ್ಟದಮನ ಶಿಷ್ಟ ಪರಿಪಾಲನಾ ಕಾರ್ಯವು ರಷ್ಯಾ ಟರ್ಕಿಶ್ ಯುದ್ಧದಲ್ಲಿ ಕೈಮೇಲೆ ಬಿತ್ತು ೧೮೭೭ರ ಯುದ್ಧದಲ್ಲಿ ಸಾವಿರಾರು ಜೀವಿಗಳ ಕೊಲೆಯಾಯಿತು ಪ್ಲೆವ್‌ನಾ ಎಂಬಲ್ಲಿ ಒಂದೇ ಒಂದು ದಿನದಲ್ಲಿ ೧೧೦,೦೦೦ರಿಂದ ೧೮೦೦೦೦ ರಷ್ಯನರು ಮಡಿದರು ಏನು ಮಾಡುವನು ಆ ಭಗವಂತ? ಲೀಲಾ ವಿನೋದದಿಂದ ಕೊಲ್ಲುತ್ತಾ ನಡೆದ ಆದರ ಯಾವ ರಾಷ್ಟ್ರಕ್ಕೂ ಅವನ ಮರೆಯಲ್ಲಡಗಿದ ಕೈಯು ಕಾಣದಾಯಿತು

೧೮೯೯—೧೯೦೨ರ ವರೆಗೆ ಬೋರ್ ಯುದ್ಧವು ನಡೆಯಿತು ಅಧರ್ಮ ಪ್ರವೃತ್ತರಾದ ಅಂದಿನ ೩,೫೦೦೦ ಸಾವಿರ ಜನರು ಸತ್ತರು ಅಷ್ಟಕ್ಕೆ ಮುಗಿಯಲಿಲ್ಲ—ರಷ್ಯಾವು ಪುನಃ ಎಚ್ಚೆದ್ದಿತು ಆದರೆ ದುಷ್ಟದಮನ ಕಾರ್ಯವು ಸಂಪೂರ್ಣವಾಗಲಿಲ್ಲ. ರಶ್ಯಾ ಜಾಪಾನಗಳೊಳಗೆ ೧೯೦೪ರಲ್ಲಿ ಯುದ್ಧವು ನಡೆಯಿತು ದ್ವಿಪಕ್ಷಗಳ ಮಿಲಿಯ ಜನರೂ ಹೊಡೆದಾಡಿದರು ಪ್ರತಿ ಪಕ್ಷದ ೩೫೦,೦೦೦ ಜನರು ರಣದೇವತೆಗೆ ಬಲಿಯಾದರು ರುದ್ರಾವತಾರಿಯು ನೋಡಿ ನಕ್ಕನು

೧೮೯೯—೧೯೦೨ ತನಕ ಸೈಪ್ರಸ್ಸು ಬ್ರಿಟನುಗಳೊಳಗೆ ನಡೆದ ಅದೊಂದು ಯುದ್ಧದಲ್ಲಿ ೨೨೦೦೦ ಬ್ರಿಟಿಷ ಸೈನಿಕರು ಸತ್ತರು. ೫೦,೩೮೪ ನಾವಿಕರು ಮಡಿದರು. ೬೩,೧೦೨ ಜನರು ಜ್ವರಪೀಡಿತರಾಗಿ ನಾಶವಾದರು. ಇದನ್ನು ತಿಳಿದೂ ಬ್ರಿಟನು ೧೯೧೪ರ ಯುದ್ಧಕ್ಕೆ ತಲೆ ಕೊಟ್ಟಿತು.

೧೯೧೪ರಲ್ಲಿ ಪ್ರಾರಂಭವಾದ ಮಹಾಯುದ್ಧದಲ್ಲಿ ರಷ್ಯಾ ಜರ್ಮನಿಯರಲ್ಲದೆ ೩½ ಮಿಲಿಯ ಜನರು ಲಯವಾದರು. ಒಟ್ಟು ೧೧ ಮಿಲಿಯ ಜನರು ಕಾಲಧರ್ಮವಶಗಾಹುತಿಯಾದರು. ಇಲ್ಲಿಗೆ ಸೃಷ್ಟಿಕರ್ತನ ಧರ್ಮ ತಕ್ಕಡಿಯು ಸಾಧಾರಣ ಸರಿಯಾಯಿತು ಆದರೆ ಅದು ಇಷ್ಟರಲ್ಲೇ ಮುಗಿಯಲಿಲ್ಲ. ಮುಗಿಯುವಂತಿಲ್ಲ ಅವನ ಸಾಮ್ರಾಜ್ಯ ಸ್ಥಾಪನಾ ಕೆಲಸವು ನಡೆಯುತ್ತಾ ಇದೆ ನಡೆಯುತ್ತಿದೆ ಮುಂದೆ ನಡೆದಿದೆ. ಇನ್ನೂ ಮುಂದಾಗಲಿದೆ

ಕೊಲೆಗಾರನೊಬ್ಬನಾದರೂ, ಆ ಕೊಲೆಗೆ ಕಾರಣರಾದ ಇನ್ನಿತರ ಅಪರಾಧಿಗಳಿಗೂ ವಿವಿಧ ಶಿಕ್ಷೆಯಾಗುವಂತೆ, ಯುದ್ಧದಲ್ಲಿ ಭಾಗವಹಿಸಿ ಕೊಲೆಮಾಡಿದವನಿಗೆ ಭಗವಂತನಿಂದ ಶಿಕ್ಷೆಯು ವಿಧಿಸಲಾಯಿತಲ್ಲದೆ, ಅವನ ಕುಟುಂಬ ಪರಿವಾರವೂ ಶಿಕ್ಷಿಸಲ್ಪಟ್ಟಿತು ದೇಹದ ಯಾವ ಭಾಗದಲ್ಲಾದರೂ ನೋವುಂಟಾದರೆ ಅದರಿಂದ ಇಡೀ ದೇಹವೇ ಪರಿತಪಿಸುವಂತೆ ಅಸ್ವಾದಲ್ಲಾದ ಯುದ್ಧಗಳಿಂದ ಯೂರೋಪು ಖಂಡವೂ, ಯೂರೋಪಿನಲ್ಲಾದ ಯುದ್ಧಗಳಿಂದ ಏಷ್ಯಾ ಖಂಡವೂ ಬಳಲಿತು, ದಣಿಯಿತು, ಬಾಡಿತು, ಬೆಂದು ಹೋಯಿತು ಶಿಕ್ಷೆ! ಶಿಕ್ಷೆ! ಶಿಕ್ಷೆ!

ಒಪ್ಪುವವರು ಒಪ್ಪಲಿ, ಒಪ್ಪದವರು ಒಪ್ಪದಿರಲಿ, ಧರ್ಮಸಂಸ್ಥಾಪನೆಯೇ ಪ್ರಕೃತಿಯ-ನಿಯಾಮಕನ, ಉದ್ದೇಶ ಬಂದ ರೋಗಕ್ಕೆ ಮನುಷ್ಯನು ಮದ್ದು ಮಾಯೆಗಳನ್ನು ಮಾಡಿ ಬದುಕಲಾಶಿಸುವಂತೆ, ತಲೆದೋರಿದ ಅಧರ್ಮ ಯುಗವನ್ನು ನಾಶದ ಔಷಧಿಯಿಂದ ಗುಣಪಡಿಸಿ ಮುರಿದು ಹರಿದು ಧರ್ಮಯುಗ ಸ್ಥಾಪನೆಯನ್ನು ಮಾಡುವುದೇ ಆ ಮಹಿಮಾತಿಶಯನ ಮೂಲೋದ್ದೇಶ ಪ್ರತಿಯೊಬ್ಬನಿಗೂ ಇದು ತಿಳಿದಿದೆ. ಆದರೂ ತಿಳಿದಿಲ್ಲ

ಪ್ರಪಂಚದಲ್ಲಿ ಸಂಪೂರ್ಣ ಧರ್ಮವು ಸಂಸ್ಥಾಪಿಸಲ್ಪಡದೆ ಭಗವಂತನಿಗೆ ತೃಪ್ತಿಯಾಗದು ಎಷ್ಟರ ತನಕ ಮಾನವ ವರ್ಗವು ಅವನ ಆಜ್ಞೆಯನ್ನು ಪರಿಪಾಲಿಸುವುದಿಲ್ಲವೋ, ಅಷ್ಟರ ತನಕ ಸುಖವಿಲ್ಲ, ಶಾಂತಿಯಿಲ್ಲ.

ಮಹಾ ಯುದ್ಧದ ಅನಿಷ್ಟ ಪರಿಣಾಮವು ಸಂಪೂರ್ಣ ಮಾಯವಾಗಲಿಲ್ಲ ಅದರೊಳಗೆ, ಇನ್ನೊಂದು ಯುದ್ಧದ ಚಿಹ್ನೆಯು ಕಾಣದಿಲ್ಲ ದೂರುವುದಾದನ್ನು? ಮಾತಿಗಾಗಿ ಅವನಿವನನ್ನು, ಆ ರಾಷ್ಟ್ರ ಈ ರಾಷ್ಟ್ರಗಳನ್ನು ದೂರಬಹುದು—ದೂಷಿಸಬಹುದು ಕಾರಣಗಳನ್ನು ಕೊಡಬಹುದು ಆದರೆ ಸರ್ವಶಕ್ತನಾದ ಅವನೊಬ್ಬನ ಇಚ್ಛೆಯ ಕಾರಣವನ್ನು ಕೊಡುವುದೇ ಸುಲಭತರದ್ದು, ಯೋಗ್ಯವಾದದ್ದು ಮಾನವನ ಕರ್ಮವನ್ನು ದೂರಿಕೊಳ್ಳುವುದೂ ವಿಹಿತವಾದದ್ದು

ಸೂತ್ರಧಾರನು ಮರೆಯಲ್ಲಿದ್ದು ಪ್ರೇರೇಪಿಸಿ ಕಾರ್ಯಸಾಧನೆಯನ್ನು ಮಾಡುತ್ತಿರುವಾಗ ಲೀಗ್ ಒಫ್ ನೇಶನ್ಸ್ ಆಗಲಿ, ಇಂಗ್ಲೆಂಡಾಗಲಿ, ಜರ್ಮನಿಯಾಗಲಿ ಅಮೇರಿಕವಾಗಲಿ, ಜಾಪಾನ್ ಚೀನವಾಗಲೀ ಏನು ಗೈದಾವು? ಅವುಗಳ ಶಕ್ತಿ ಯುಕ್ತಿಗಳು ಕರ್ತನನ್ನು ಮಿಕ್ಕಿ ನಡೆಯುವುದಾದರೂ ಎಂತು? ಸೃಷ್ಟಿಯೂ ಅವನಿಂದ—ಪಾಲನೆಯೂ ಅವನಿಂದ—ನಾಶವೂ ಅವನಿಂದ!!! **ಜಗನ್ನಿಯಾಮಕನ ಲೀಲೆಗೆ ಪಾರವುಂಟೆ?**

ಮ. ಶಾ.

---

**ಮಹೀಜರಿಗೆ ಸೂಚನೆ.**

[illegible]

# ದೇಶದ ಹಲವೆಡೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ!

## ಪುನಃ ಲಾಠಿ ರಾಜ್ಯ! ಪುನಃ ದಸ್ತಗಿರಿ! ನೂರಾರು ಕೈದಿಗಳು.

# ಪತ್ರಿಕಾ ವ್ಯವಸಾಯಿಗಳು ಗುಂಡುಹಾಕಿಕೊಂಡರು!

## ಹುಗ್ಗಿಯಲ್ಲಿ ಪೋಲೀಸರು ಗೋಳಿಬಾರು ಮಾಡಿದರು !!!

### ಮದ್ರಾಸಿನಲ್ಲಿ

ತಾ. ೨೬ನೇ ದಿನ ಸ್ವಾತಂತ್ರ್ಯ ದಿನಾಚರಣೆ! ಮದ್ರಾಸಿನ ಹೈಕೋರ್ಟ ಬಿಲ್ಡಿಂಗ್, ಪಚ್ಚಯಪ್ಪಸ್ ಕಾಲೇಜುಗಳ ಬಳಿ, ಮತ್ತಿತರ ಕಡೆಗಳಲ್ಲಿ ಪ್ರದರ್ಶನವನ್ನು ಜರಗಿಸಿದ ೬೦ ಮಂದಿಗಳ ದಸ್ತಗಿರಿ ನಡೆಯಿತು. ಹಳೆಯ ಪಿನಾಲ್‌ಕೋಡ್ ಪುಸ್ತಕವನ್ನು ಸಾರ್ವಜನಿಕರು ಭಸ್ಮೀಕರಿಸಿದ ಕೆಲವರನ್ನು ಸೆರೆ ಹಿಡಿದಿರುವರು. ಆ ದಿನ ವಿದೀ ಕಾಂಗ್ರೆಸ್‌ವಾಲರ ಚಟುವಟಿಕೆಯು ನಡೆಯಿತು.

### ಕಲ್ಕತ್ತದಲ್ಲಿ

ಮೆರವಣಿಗೆ ಸಭೆಗಳನ್ನು ಮಾಡಲು ಸಾಧಿಸಿದ ೨೦೦ ಮಂದಿ ಕಾಂಗ್ರೆಸ್‌ವಾಲರನ್ನು ಸೆರೆಹಿಡಿದರು. ೫೦ ಮಂದಿ ಸ್ತ್ರೀಯರೂ ದಸ್ತಗಿರಿಮಾಡಲ್ಪಟ್ಟರು. ಎಲ್ಲೆಲ್ಲೂ ರಾಷ್ಟ್ರಧ್ವಜಗಳು ಹಾರ್‍ಯಾಡಿದುವು. ೩೦೦ ಮಂದಿ ಮೆರವಣಿಗೆಗಾರರ ಮೇಲೆ ಲಾಠಿಚಾರ್ಜು ನಡೆದು ಅನೇಕರನ್ನು ಬಂಧಿಸಲಾಯಿತು. ಕಲ್ಕತ್ತ ಕಾರ್ಪೋರೇಶನಿನ ಎಡ್ಯುಕೇಶನಲ್ ಆಫೀಸರರಾದ ಶ್ರೀ ಕೆ. ಪಿ. ಚಟರ್ಜಿ ಎಂಬವರು ಮೆರವಣಿಗೆಯನ್ನು ಮುನ್ನಡೆಸಿದುದಕ್ಕಾಗಿ ದಸ್ತಗಿರಿಗೊಳಗಾದರು.

### ಮುಂಬಾಯಿಯಲ್ಲಿ

ಸ್ವಾತಂತ್ರ್ಯ ದಿನಾಚರಣೆಗಾಗಿ ಚೌಪಾತಿಯಲ್ಲಿ ನೂರಾರು ಜನರು ಸೇರಿ ಸಭೆಗೂಡುವುದರಲ್ಲಿದ್ದರು. ಅದರೆ ಎಚ್ಚರದಲ್ಲೇ ಇದ್ದ ಪೋಲೀಸ ಪಡೆಯು ಸಭೆಗಾರರನ್ನು ಲಾಠಿಯಿಂದ ಚದರಿಸಿತು. "ಗಾಂಧಿಕಿ ಜೈ ಇಂಕ್ವಿಲಾಬ್ ಜಿಂಧಬಾದ್" ಎಂದ ಅಪರೂಪ ಶಬ್ದಗಳು ದಿಕ್ಕುತಟಗಳಲ್ಲಿಯೂ ಪ್ರತಿಧ್ವನಿಸಿದುವು. ಅನೇಕರ ದಸ್ತಗಿರಿ ನಡೆಯಿತು. ಎಮರ್ಜನ್ಸಿ ಕೌನ್ಸಿಲಿನ ಶ್ರೀ ಸಿ. ಬಿ. ದೇಸಾಯಿ ಎಂಬವರನ್ನೂ, ಹಿಂದುಸ್ಥಾನೀ ಸೇವಾದಲದ ಶ್ರೀ ಕೆ. ಕೆ. ಚೌಸಾ, ಶ್ರೀ ಕಪಾಡಿಯಾ ಮೊದಲಾದವರನ್ನೂ ಸ್ಟೇಶನಿಗೊಯ್ದರು. ಪಿಕೆಟರ ಕೈದುಗಳೂ ಇದ್ದುವು. ಮಾರ್ಕೆಟುಗಳೆಲ್ಲಾ ಮುಚ್ಚಲ್ಪಟ್ಟಿದ್ದುವು.

### ಪಾಟ್ನಾದಲ್ಲಿ

ಸ್ವಾತಂತ್ರ್ಯದಿನಾಚರಣೆಯ ಸಂಬಂಧವಾಗಿ ಶ್ರೀಮಾನ್ ಬಾಬು ರಾಜೇಂದ್ರ ಪ್ರಸಾದ, ಬಾಬು ರಾಜೇಂದ್ರ ಪ್ರಸಾದರ ಸಹೋದರಿ ಶ್ರೀಮತಿ ಭಗವತಿ ದೇವಿಯವರು ಏರ್ಪಡಿಸಿದ ಸಭೆಗಳನ್ನು ಪೋಲೀಸರು ಚದರಿಸಿದರು. ಕಾಂಗ್ರೆಸ್ ಸಾಹಿತ್ಯಗಳು ಪೋಲೀಸರ ವಶವಾದುವು. ೨೮ ಮಂದಿಗಳನ್ನೂ ಚೀಫ್ ಜಸ್ಟಿಸರ ಕೋರ್ಟಿನಲ್ಲಿ ಕಾಂಗ್ರೆಸ್ ಗೀತೆಯನ್ನು ಹಾಡಿದ ಸ್ವಯಂಸೇವಕರನ್ನೂ ಬಂಧಿಸಿಟ್ಟರು.

### ಬನಾರೆಸ್‌ನಲ್ಲಿ

ಸ್ವಾತಂತ್ರ್ಯದಿನಾಚರಣೆಯ ಸಂಬಂಧವಾಗಿ ಚಿತ್ತರಂಜನ ಪಾರ್ಕಿನಲ್ಲಿ ಧ್ವಜಾರೋಹಣವಿತ್ತು. ಇದನ್ನು ತಿಳಿದ ಪೋಲೀಸರು ಲಾಠಿಯನ್ನು ಸಿದ್ಧಗೊಳಿಸಿದ್ದರು. ಸಭೆ ಜರಗಲು ಹವಣಿಕೆ ನಡೆದು ಕೆಲವು ಸ್ತ್ರೀ ಪುರುಷರು ಪೋಲೀಸರೊಡನೆ ನಡೆಯಬೇಕಾಯಿತು. ಅಲ್ಲಿಯ ಟೌನ್ ಹಾಲನ್ನು ಪೋಲೀಸರು ಭದ್ರತೆ ನೋಡುತ್ತಿದ್ದರು.

### ಡಿಲ್ಲಿಯಲ್ಲಿ.

ಕಾಂಗ್ರೆಸ್ ಕರಪತ್ರಗಳು ಹಂಚಲ್ಪಟ್ಟುವು. ಮೂರು ಮಂದಿ ಸನ್ಯಾಸಿಗಳು ಕಾಂಗ್ರೆಸ್ ಸಾಹಿತ್ಯಗಳನ್ನು ಹಂಚಿ ಸೆರೆಗೆ ಸಿಕ್ಕಿದರು. ಶ್ರೀಮತಿ ಲಕ್ಷ್ಮೀದೇವಿ ಮೊದಲಾದವರನ್ನು ಕೈದು ಮಾಡಿದರು. ಕಾಂಗ್ರೆಸ್ ಪ್ರದರ್ಶನಗಳು ನಡೆಯದಂತೆ ಪೋಲೀಸರ ಜಾಗ್ರತೆಯು ಬಹಳವಿತ್ತು.

### ಅಲ್ಲಹಾಬಾದಿನಲ್ಲಿ.

ಪುರುಷೋತ್ತಮದಾಸ್ ಪಾರ್ಕಿಗೆ ಕಾಂಗ್ರೆಸ್‌ವಾಲರ ದೊಡ್ಡ ಮೆರವಣಿಗೆಯು ನಡೆಯಲಿತ್ತು. ಕೂಡಲೇ ಪೋಲೀಸರ ಆಗಮನವಾಗಿ ಒಬ್ಬ ಕುರುಡನ ಸಮೇತ ಕೆಲವರನ್ನು ಸೆರೆಹಿಡಿದರು.

### ಲಾಹೋರಿನಲ್ಲಿ.

೬ ಮಂದಿಗಳ ಕೈದು. ಗಾಂಧೀ ಅಶ್ರಮದ ಜಪ್ತಿ ನಡೆಯಿತು. ಸೂರತ್, ಜಬ್ಬಲ್‌ಪುರ, ಮೊರದಾಬಾದ, ಹಲವು ಸ್ಥಾನಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಯೋಜನೆಯಾಯಿತು. ಪೋಲೀಸರ ಚಾತುರ್ಯದಿಂದ ತಡೆಯಲಾಯಿತು.

### ಅಹ್ಮದಾಬಾದಿನಲ್ಲಿ

ತಾ. ೨೬ನೇ ದಿನ ೧೨ ಮಂದಿ ಸ್ವಯಂಸೇವಕರನ್ನು ಹಿಡಿದರು. ರಾಷ್ಟ್ರಧ್ವಜಾರೋಹಣ ಅಂಚೆ ಆಫೀಸಿನ ಪಿಕೆಟಿಂಗ್ ಬ್ರಿಟಿಷ ಸಾಹಿತ್ಯಗಳನ್ನು ವಿಕ್ರಯಿಸುವ ಕಂಪೆನಿಗಳ ಪಿಕೆಟಿಂಗ್ ಇತ್ತು.

### ಪೀಟರ್‍ಸನರು ಗುಂಡು ಹಾಕಿಕೊಂಡರು.

ಲಂಡನಿನ ಟೈಮ್ಸ್ ಪತ್ರಿಕೆಯ ಸ್ಪೆಶಲ್ ವಾರ್ತಾವಾಹಕರಾದ ಮಿ. ಪೀಟರ್‍ಸನ್ ಎಂಬವರು ತಾ. ೨೬ನೇ ದಿನ ಸಂಜೆ ೫ ೪೦ಕ್ಕೆ ನ್ಯೂ ಡಿಲ್ಲಿಯಲ್ಲಿ ಗುಂಡು ಹಾಕಿಕೊಂಡು ಆತ್ಮಹತ್ಯೆ ಮಾಡಿದರು. ಆ ಸಂಜೆಯಲ್ಲಿ ಹಿಂದೂ ರಾವ್ ಆಸ್ಪತ್ರೆಗೆ ಪೀಟರ್‍ಸನ್ನರು ಹೋಗಬೇಕಾದ ಅಗತ್ಯ ಕೆಲಸವಿತ್ತು. ಪೇದೆಯು ಅವರಿಗೆ ನೆನಪು ಮಾಡಿದನು. ಅದರೆ ಪೀಟರ್‍ಸನ್ನರು ಹೋಗುವುದಿಲ್ಲ ಎಂದರು. ಅರು ಘಂಟೆಯಾದರೂ ಅವರು ಕೋಣೆಯೊಳಗಿಂದ ಹೊರಡದಿರುವುದನ್ನು ಕಂಡು ಪೇದೆಯು ಕೋಣೆಯೊಳಗಿಣಿಕಿದನು. ಪೀಟರ್‍ಸನ್ನರು ಘಾಯಗೊಂಡು ಮರಣಪಟ್ಟಿರುವುದನ್ನು ಕಂಡು ದಿಗಿಲುಗೊಂಡು ಅವನು ಬೊಬ್ಬಿಟ್ಟನು. ಬಲಗಣ್ಣಿನ ಮೇಲೆ, ಹಣೆಯು ಗುಂಡಿನಿಂದ ಕೊರೆದು ಹೋಗಿತ್ತು. ಎಡಿಶನಲ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೇ ಮೊದಲಾದವರು ಬಂದು ತನಿಕೆ ಮಾಡಿ ಆತ್ಮಹತ್ಯೆಯೆಂದು ನಿರ್ಧರಿಸಿದರು. ಪೀಟರ್‍ಸನ್ನರು ಹೆಚ್ಚಿನ ದೇಶಸಂಚಾರ ಮಾಡಿದವರು. ಡಿಲ್ಲಿಯಿಂದ ಲಂಡನಿಗೆ ಬೇಕುಬೇಕಾದ ವಾರ್ತೆಯನ್ನು ಬೇಕಾದಂತೆ ಕಳುಹಿಸಿ ಅಲ್ಲಿನ ಮತ್ತು ಇಲ್ಲಿನ ಅಧಿಕಾರ ವರ್ಗಗಳನ್ನು ಸಂತೃಪ್ತಿಗೊಳಿಸಿದ್ದರು.

### ಈ ರೀತಿಯ ಆಫೀಸರರೂ ಇದ್ದಾರೆಯೇ?

ಸಂಕ್ರಾನ. ಸಾಹೇಬ ರೈಲ್ವೇ ಸ್ಟೇಶನಿನಲ್ಲಿ ಟ್ರೈನು ಹೊರಡಲು ಸಿದ್ಧವಾಯಿತು. ಅದರೆ ಸ್ತ್ರೀಯರಿಗೆ ರಿಜರ್ವ ಮಾಡಿಟ್ಟಿದ್ದ ಒಂದು ಕಂಪಾರ್ಟ್‌ಮೆಂಟಿನಲ್ಲಿ ಒಬ್ಬ ಮೇಜಿಸ್ಟ್ರೇಟರು ಕುಳಿತಿದ್ದರು. ಇದನ್ನು ಕಂಡ ಅಧಿಕಾರಿಗಳು ಅವರನ್ನು ಅಲ್ಲಿಂದೆದ್ದು ಇನ್ನಿತರ ಕೋಣೆಗೆ ಹೋಗಲು ಹೇಳಿದರು. ಆದರೆ ಮೇಜಿಸ್ಟ್ರೇಟರು ಅಲ್ಲಿಂದೇಳಲಿಲ್ಲ. ಸತ್ಯಾಗ್ರಹದಂತೆ ಅಲ್ಲೇ ಕುಳಿತರು. ಈ ಸುದ್ದಿಯು ಒಡನೆ ಇಡೀ ಸ್ಟೇಶನಿಗೆ ಹರಡಿತು. ಈ ಮೇಜಿಸ್ಟ್ರೇಟರು ನಿಶ್ಚಿಂತರಾಗಿ ಸತ್ಯಾಗ್ರಹ ಮಾಡಿ ಅಲ್ಲೇ ಕುಳಿತುಕೊಂಡುದರಿಂದ ಹೊರಡುವ ರೈಲು ಹೊರಡಲಿಲ್ಲ. ಅರ್ಧ ಘಂಟೆ ತಡವಾಯಿತು. ಆದರೂ ಮೇಜಿಸ್ಟ್ರೇಟರು ತಗ್ಗಲಿಲ್ಲ ಬಗ್ಗಲಿಲ್ಲ. ಇದನ್ನು ಕಂಡು ರೈಲ್ವೇ ಅಧಿಕಾರಿಗಳು ಮೇಜಿಸ್ಟ್ರೇಟರನ್ನು ಎತ್ತಿಕೊಂಡು ಹೊರಹಾಕುವುದರಲ್ಲಿದ್ದರು. ಆಪ್ಪಾಗ ಮೇಜಿಸ್ಟ್ರೇಟರ ಪಿತ್ತವು ಕೆಳಗಿಳಿಯಿತು. ಒಮ್ಮೆ ಕುಳಿತಲ್ಲಿಂದ ಎದ್ದು ನೀವೆದಂತೆ ಅತ್ತಿತ್ತ ಹೋಗಿ ನಾನು ನನ್ನ ಮರ್ಯಾದೆಯನ್ನು ಕಳಕೊಳ್ಳುವುದಿಲ್ಲ! ಸರಕಾರದ ಮರ್ಯಾದೆಯನ್ನೂ ಕಳಕೊಂಡಂತಾಯಿತು" ಎಂದು ಅವರು ಹೇಳುತ್ತಾ ಕೆಳಗಿಳಿದು ಬಿಟ್ಟರು.

### ಒಂದು ವರ್ಷದಲ್ಲಿ ನಾಲ್ಕು ಮಕ್ಕಳು.

ಚಿಕಾಗೋವಿನ ಮಿಸೆಸ್ ಮೇರಿ ಮೆಹಿಲ್ಲನ್ ಎಂಬ ೨೫ ವರ್ಷದ ಸ್ತ್ರೀಯೊಬ್ಬಳು ೧೯೩೨ರ ಜನವರಿ ಹತ್ತನೇ ತಾರೀಕಿನ ದಿನ ಒಂದು ಜೋಡಿ (ಅವಳಿ ಜವಳಿ) ಮಕ್ಕಳನ್ನು ಹಡೆದಳು. ಅವುಗಳಲ್ಲಿ ಒಂದು ಗಂಡು ಇನ್ನೊಂದು ಹೆಣ್ಣು. ೧೯೩೨ರ ದಶಂಬರ ೧೯ರಲ್ಲಿ ಪುನಃ ಒಂದು ಜೋಡಿ ಮಕ್ಕಳನ್ನು ಹೆತ್ತಳು. ಅವುಗಳಲ್ಲಿ ಒಂದು ಹೆಣ್ಣು ಒಂದು ಗಂಡು. ಅಂತೂ ೧೨ ತಿಂಗಳುಗಳಲ್ಲಿ ನಾಲ್ಕು ಮಕ್ಕಳಾದುವು. ಮೂರು ತಿಂಗಳಿಗೆ ಒಂದಂತಾಯಿತು. ಮೇರಿಯು ಈ ಸಾಹಸವು ಮಿಕ್ಕ ಎಲ್ಲಾ ಸ್ತ್ರೀಯರನ್ನು ಪ್ರತಿಭಟಿಸಿತು. ಮಕ್ಕಳು ಸುಖದಿಂದಿವೆ.

### ಕಣ್ಣಿನ ದೋಷ'

'ಲೋಕಕ್ಕೆ ಕಣ್ಣೇ ಕಾರಣವು ಸರ್ವಜ್ಞ' ಗ್ಲಾಸ್‌ಗೊದಲ್ಲಿ ಸಿನೆಮ ನಟರ ಭಾವಚಿತ್ರ ಮಾರುವವನು ಅನೇಕ ಸಿನೆಮ ನಟನಟಿಯರ ಭಾವಚಿತ್ರಗಳಿಗೆ ಕನ್ನಡಿ ಹಾಕಿ ತೂಗಾಡಿಸಿದ್ದನು. ಅವುಗಳನ್ನು ನೋಡಲು ಎಲ್ಲರಂತೆ ಒಬ್ಬ ಬೆಳೆದ ತರುಣನು ಬಂದನು. ನೋಡಿ ನೋಡಿದಂತೆಯೇ ಮಿಸ್ ಗಾರ್ಬೋ ಎಂಬ ಸಿನೆಮ ನಟಿಯ ಭಾವಚಿತ್ರವನ್ನು ಕಂಡು ಅವನ ನಖಶಿಖಾಂತ ವರೆಗೆ ತಣ್ಣಗಾದನು. ಅದನ್ನು ಪಡೆಯುವರೆ ಅವನಲ್ಲಿ ಹಣವಿರಲಿಲ್ಲ. ಅತ್ತಿತ್ತ ನೋಡಿ ಚಿತ್ರವನ್ನು ತೆಗೆದು ಕೋಟಿನೊಳಗಡಗಿಸಿಟ್ಟು ದಾರಿ ನಡೆದ. ಮಾರಾಟದವನಿಗೆ ಸಂಶಯವಾಯಿತು. ಹಿಂಬಾಲಿಸಿ ಹಿಡಿದ. ಕೋರ್ಟಿನಲ್ಲಿ ವಿಚಾರಣೆ ನಡೆಯಿತು. ಮಿಸ್ ಗಾರ್ಬೋಳ ದೃಷ್ಟಿಯು ನನ್ನ ಮನಸ್ಸನ್ನಾಕರ್ಷಿಸಿತು. ಅದರಿಂದಾಗಿ ನಾನು ಚಿತ್ರವನ್ನು ಕದ್ದೆನೆಂದು ಅಪರಾಧಿಯು ನ್ಯಾಯಾಧೀಶರಿಗೆ ಹೇಳಿ ಮುಜರೆ ಗಿಸಿ ದಂಡ ತೆತ್ತನು.

### ಸಾಧುಗಳ ಮಂತ್ರ ಶಕ್ತಿ'

ಧುಲಿಯದಲ್ಲಿ ಒಬ್ಬ ಐಶ್ವರ್ಯವಂತ ಮಾರ್ವಾಡಿ ಬ್ರಾಹ್ಮಣನು ತನ್ನ ಮನೆಯಲ್ಲಿನ ದುಷ್ಟ ಗಾಳಿಯನ್ನು ಹೋಗಲಾಡಿಸಬೇಕೆಂದಾಶಿಸಿದನು. ಅವನ ಆಶೆಯ ವಾರ್ತೆಯು ಅಲ್ಲಿ ಒಬ್ಬ ಸಾಧುವಿಗೆ ಮುಟ್ಟಿತು. ಸಾಧುವು ತನ್ನ ಪರಿವಾರ ಸಮೇತನಾಗಿ ಬ್ರಾಹ್ಮಣನ ಬಳಿ ಗೈದಿದನು. ಇಬ್ಬರಿಗೂ ಬಹಳ ಮೈತ್ರಿಯುಂಟಾಗಿ ಗೃಹದಲ್ಲಿನ ಪೈಶಾಚೀ ಗಾಳಿಯನ್ನು ಉಚ್ಚಾಟನಮಾಡುವ ಕೆಲಸದ ಭಾರವು ಸಾಧುವಿನ ತಲೆಗೆ ಬಿತ್ತು. ಮರುದಿನ ಪೂಜೆಗಾರಂಭವಾಯಿತು. ಸರಸ್ವತಿ ಎದುರು ಭಂಗಾರವನ್ನು ತಂದೊಡ್ಡಬೇಕೆಂದಾಯಿತು. ರೂ ೬,೦೦೦ದ ನಗನಾಣ್ಯಗಳು ಸರಸ್ವತಿ ದೇವಿಯ ಮುಂದಿರಿಸಲ್ಪಟ್ಟವು. ಸಂಜೆಯಾಗುತ್ತಲೇ ಪೂಜೆಯು ಮುಗಿಯುತ್ತಾ ಬಂತು. ಸಾಧುವು ಇದ್ದ ಭಂಗಾರವನ್ನೆಲ್ಲ ತನ್ನ ಗೂಢಚಾರರ ಮೂಲಕ ಹೊರಗೆ ಸಾಗಿಸಿದನು. ಎಂಟು ಘಂಟೆ ರಾತ್ರಿಯಾಗುತ್ತಲೇ ಸಾಧುವೂ ಕಾಣೆ-ಅವನ ಒಡನಾಡಿಗಳೂ ಪರಾರಿ! ಈಗ ಹುಡುಕುತ್ತಲಿದ್ದಾರೆ.

### ಲಕ್ಷಾಧಿಪತಿ — ಅಲ್ಲ ಕಳ್ಳ!

ಡಾಬಾಸಿನಲ್ಲಿ ಯೋಯೋರೇಸ್ ನಡೆಯುತ್ತಿತ್ತು. ಒಬ್ಬ ಪ್ರೇಕ್ಷಕನ ಕಿಸೆಯಲ್ಲಿ ೨೦೦ ರೂಪಾಯಿಯ ನೋಟು ಇತ್ತು. ಇದನ್ನು ತಿಳಿದ ಒಬ್ಬ ಜವಾನನು ಮೆಲ್ಲನೆ ಆತ್ಮಕರಳ ಬೆರಳನ್ನು ಜೇಬಿನೊಳಗಿಳಿಸಿಬಿಟ್ಟ. ಸಿ. ಐ. ಡಿ. ಯೊಬ್ಬನು ಹಿಂದಿನಿಂದ ಥಕ್ಕನೆ ಹಿಡಿದ. ಕಿಸೆಕಳ್ಳನನ್ನು ಕೋರ್ಟಿಗೊಯ್ದರು. ಪರಿಶೋಧಿಸುವುದೇನು? ಆ ತರುಣನ ಖಾಸಗಿ ಆಸ್ತಿಯು ೫ ಲಕ್ಷ ರೂಪಾಯಿಗೆ ಮಿಕ್ಕಿತ್ತು. ಹತ್ತಿಯ ವ್ಯಾಪಾರದಲ್ಲಿ ಅಗ್ರಗಣ್ಯ ಐಶ್ವರ್ಯವಂತ ದುರದೃಷ್ಟ.

---


## ನೋಟೀಸು

### ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R L P 234/32 (S C S 1113/31)

and

R E P 235/32 (S C S 1114/31).

A ಸಂಜೀವ ಕಾಮ್ತಿ — ವಾದಿ, ಅರ್ಜಿದಾರ

ಮತ್ತು

ಶ್ಯಾಬುದ್ದಿನ್ ಸಿಲಾರ್ ಸಾಹೇಬ — ಪ್ರತಿವಾದಿ, ಎದ್ರಿ

ಇವರೊಳಗ

ಎದ್ರಿ — ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದಲ್ಲಿರುವ ಸಿಲಾರ ಸಾಹೇಬರ ಮಗ ಶ್ಯಾಬುದ್ದಿನ್ ಸಿಲಾರ್ ಸಾಹೇಬರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ —

ಮೇಲೆ ಹೇಳೋಣದ ವ್ಯಾಜ್ಯಗಳಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಸದರಿ ಅಮಲ್ ಜಾರಿಗಳಲ್ಲಿ ಜಪ್ತಾದ ಸ್ಥಿರಾಸ್ತಿ ಮಾರಾಟದ ಬಗ್ಗೆ ಇಸ್ತಿಹಾರುಗಳನ್ನು ಹಾಜರು ಪಡಿಸಿರುವುದರಿಂದ ಸದರಿ ಇಸ್ತಿಹಾರುಗಳ ಶರ್ತಗಳನ್ನು ನಿರ್ಣಯಿಸಲಿಕ್ಕೆ 1933 ಇಸವಿ ಫೆಬ್ರವರಿ ತಿಂಗಳ 11ನೇ ತಾರೀಕು ನಿಶ್ಚಯಿಸಲಾಗಿಯದೆಂತ ಸದರಿ ಎದ್ರಿಗೆ ಇದರಿಂದ ತಿಳಿಸಲಾಗುತ್ತದೆ.

Udipi, 27—1—33.

**H. Keshava Pai,**
*Vakil for Petitioner.*

| | | | | | | | [illegible] | |
|---|---|---|---|---|---|---|---|---|
| 4 | [illegible] | [illegible] | [illegible] | [illegible] | [illegible] | [illegible] | 6 59 | 6.31 |
| 5 | [illegible] | ೧೦ | [illegible] | [illegible] | [illegible] | [illegible] | 6 58 | 6.32 |
| 6 | [illegible] | ೧೧ | [illegible] | [illegible] | [illegible] | [illegible] | 6 58 | 6 32 |
| 7 | [illegible] | ೧೨ | [illegible] | [illegible] | [illegible] | [illegible] | 6 58 | 6.32 |
| 8 | [illegible] | ೧೪ | [illegible] | [illegible] | [illegible] | [illegible] | 6 58 | 6.33 |
| 9 | [illegible] | ೧೪ | [illegible] | [illegible] | [illegible] | [illegible] | 6 57 | 6.33 |
| 10 | [illegible] | ೧೫ | | [illegible] | [illegible] | [illegible] | 6 57 | 6.33 |

## ಮಂಗಳೂರಿನ ವಾಯುಸ್ಥಿತಿ.

| Date | Temperature. (Maximum) | Temperature. (Minimum) | Rainfall. (ದಿನದ ಮಳೆ) | Rainfall. (ಜಮಖಾ ಮಳೆ) |
|---|---|---|---|---|
| 26 | 82— 7 | 67— 9 | — | — |
| 27 | 82— 7 | 70— 1 | — | — |
| 28 | 84— 1 | 72— 0 | — | — |
| 29 | 85— 4 | 72— 6 | — | — |
| 30 | 89— 9 | 72— 2 | — | — |
| 31 | 90— 7 | 71— 7 | — | — |
| 1 | 90— 3 | 72— 0 | — | 119—95 |

## ಮಂಗಳೂರಿನ ಪೇಟೆ ಧಾರಣೆ.

| [illegible] | [illegible] | ಜಾಸ್ತಿ |
|---|---|---|
| | ರೂ. ಆ. | ರೂ. ಆ. |
| [illegible] | 4— 0 | 4—10 |
| [illegible] | 3— 8 | 3—11 |
| [illegible] | 4— | 4—10 |
| [illegible] | 3 12 | 4— 2 |
| [illegible] | 3—11 | 4— 0 |
| [illegible] | 4—10 | 6— 4 |
| [illegible] | 6— 8 | 7— 0 |
| [illegible] | 4— 8 | 4—10 |
| [illegible] | 10— 8 | 12— 8 |
| [illegible] | 9— 8 | 12— 0 |
| [illegible] | 6— | 6— 4 |
| [illegible] | 8— 8 | 10— |
| [illegible] | 10— 8 | 20— 0 |
| [illegible] | 9— 8 | 10— 0 |
| [illegible] | 8— 0 | 9— 0 |
| [illegible] | 31— 4 | 32— 8 |
| [illegible] | 4—14 | 5— 4 |
| [illegible] | 65— | 72— |
| [illegible] | 34— 8 | 35— |
| [illegible] | 26— 4 | 27— 8 |
| [illegible] | 4—12 | 5—12 |
| [illegible] | 6—12 | 7— 0 |
| [illegible] | 4— 7 | 8—12 |
| [illegible] | 3—15 | 4— 0 |
| [illegible] | 5— 5 | 5—12 |
| [illegible] | 4—12 | 5— 0 |
| [illegible] | 275— 0 | 300— |
| [illegible] | 170— 0 | 180— |
| [illegible] | 27— 0 | 28— |
| [illegible] | 2— 4 | 2— 6 |
| [illegible] | 25— 0 | 25— 8 |
| [illegible] | 9 10 | 10— 0 |
| [illegible] | 16— 0 | 16—0 |
| [illegible] | 13— 4 | 13— 8 |
| [illegible] | 19— 0 | 19— 4 |
| [illegible] | 91— | 19— 4 |
| [illegible] | 40— | 45— |
| [illegible] | 320— | 325— |
| [illegible] | 180— | 205— |
| [illegible] | 140 | 145— |


**THE CANARA PUBLIC CONVEYANCE CO., LTD, MANGALORE.**

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ-ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ, ಒಂದೇ ಶಿಲೆಯಲ್ಲಿ ಕೊರೆದು ರಚಿತವಾಗಿ, 37, ಫೀಟು ಉದ್ದವಾಗಿ ಚಿತ್ರರವಾದ ಶಿಲಾಪರ್ವತದ ಮೇಲೆ ನಿಲಿಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ನಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗೆಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Company Ltd., Mangalore*



# Chikmagalur Public Conveyance Motor Service.

## CHIKMAGALUR.

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಶೀಘ್ರಾಯಾಸದ ಪ್ರಯಾಣ! ಉತ್ತಮೋತ್ತಮ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

## ಪತ್ರವ್ಯವಹಾರ.

(ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಕೈಲಿಯಲ್ಲಿರತಕ್ಕದ್ದು. ಸಂ. ಸ್ವ.)

ಅಯ್ಯಾ,

ರಾಷ್ಟ್ರಬಂಧುವಿನ ತಾ. ೧೮—೧೧—೩೦ನೆಯ ಸಂಚಿಕೆಯಲ್ಲಿ "ಬ್ರಾಹ್ಮಣೇತರ ವಿಷಯವೂ ಬ್ರಾಹ್ಮಣರ ಪರಿಷತ್ತು" ಎಂಬ ಶಿರೋನಾಮೆಯಿಂದ ರೇವನೇ ದಶಂಬ್ರದಲ್ಲಿ ಕೋಟೆದಲ್ಲಿ ಜರಗಿದ ದ್ರಾವಿಡ ಬ್ರಾಹ್ಮಣ ಪರಿಷತ್ತಿನಲ್ಲಿ ಕೆಲವು ಸುಧಾರಕರು ಸಮಾಜ ಸುಧಾರಣೆಯ ಕುರಿತ ನಿರ್ಣಯಗಳನ್ನು ತರಲು ಯತ್ನಿಸಿದಾಗ ಆಗಿನ ನಿಯಮಗಳ ಪ್ರಕಾರ ಸಾಮಾಜಿಕ ಮತ್ತು ರಾಜಕೀಯ ವಿಷಯಗಳನ್ನು ಪರಿಷತ್ತಿನಲ್ಲಿ ಚರ್ಚಿಸಲು ಅನುಕೂಲವಿಲ್ಲದ್ದರಿಂದ ಸದರಿ ವಿಷಯಗಳ ನಿರ್ಣಯಗಳನ್ನು ಪರಿಷತ್ತಿನಲ್ಲಿ ತರಲು ಸಮಾಜದವರಿಗೆ ಇಷ್ಟವಿದೆಯೋ ಎಂದು ವಿಚಾರಿಸಲು ನೇಮಕ ಹೊಂದಿದ ಕಮಿಟಿಯು ಹನ್ನೊಂದು ತಿಂಗಳುಗಳ ಪರ್ಯಂತ ಚಟುವಟಿಕೆಯಾಗಿದ್ದು ಅನಂತರ ಕಮಿಟಿಯ ಅನೇಕ ಸಭೆಗಳಲ್ಲಿ ನಿಯುಕ್ತ ಸಮಾಜದ ಎಲ್ಲಾ ಮುಖ್ಯಸ್ಥರೂ ತಮ್ಮ ಅಭಿಪ್ರಾಯಗಳನ್ನು ಗಣವಿಷಯಗಳೊಳಗೆ ಕಳುಹಿಸಕೊಡಬೇಕಾಗಿ ಪತ್ರ, ಕಮಿಟಿ ಮೆಂಬರರಲ್ಲೊಬ್ಬರಾದ ಕಾರ್ಕಳ ವಕೀಲ್ ... ಪಾದೂರು ವಾಸುದೇವ ಉಪಾಧ್ಯಾಯರವರು ಕೊಟ್ಟಿರುವ ನೋಟೀಸಿನ ಸ್ವಭಾವದ ವಿನಂತಿಯೊಂದನ್ನು ವಾಚಕರು ಓದಿದ್ದು ನೆನಪಿರಬಹುದು. ಪತ್ರಿಕೆಗಳಲ್ಲಿ ಈ ಕುರಿತು ಜನರ ಅಭಿಪ್ರಾಯಗಳೇನೂ ಪ್ರಕಟವಾಗಿದ್ದರೂ ರಾಜಕೀಯ ಮತ್ತು ಸಮಾಜ ಸುಧಾರಣೆಯ ಕೆಲಸಗಳನ್ನು ಕಾಂಗ್ರೆಸ್ಸಿನವರು ಕೈಕೊಂಡಿರುವಾಗ, ಬ್ರಾಹ್ಮಣ ಪರಿಷತ್ತಿನಲ್ಲಿ ಅವು ಅಗತ್ಯವೇ ಎಂಬ ಅಭಿಪ್ರಾಯದ ಪ್ರಶ್ನೆಯೊಂದು ಉಡುಪಿಯ ತಕ್ಕರೆಯ ಒಬ್ಬ ಮುಖ್ಯಸ್ಥರಿಂದ ಪ್ರಕಟವಾಗಿತ್ತೆಂದು ಗೊತ್ತಾಗಿದೆ. ಅನಂತರ ಈ ವಿಷಯದಲ್ಲಿ ಏನೊಂದೂ ಪ್ರಕಟವಾದ್ದು ತಿಳಿದು ಬರುವುದಿಲ್ಲ.

ಅಂತೂ ಸಕಾಲದಲ್ಲಿ ಜರಗಬೇಕಾಗಿದ್ದ ಪರಿಷತ್ತು ಜರಗಲಿಲ್ಲವೆಂಬುದು ಸ್ಪಷ್ಟ. ಪರಿಷತ್ತಿನ ವಿಚಾರವಾಗಿಯಾಗಲಿ, ಸಮಾಜದ ಮುಖ್ಯಸ್ಥರಿಂದ ಸದರಿ ಉಪಾಧ್ಯಾಯರವರು ಸಂಗ್ರಹಿಸಿದ ಅಭಿಪ್ರಾಯಗಳ ಕುರಿತಾಗಿಯಾಗಲಿ ಅಥವಾ ಸದರಿ ಕಮಿಟಿಯ ವರದಿಯ ವಿಷಯವಾಗಿಯಾಗಲಿ ಏನೊಂದೂ ತಿಳಿದು ಬಾರದಿರುವುದರಿಂದ ಬಗೆಬಗೆಯ ಊಹನೆಗಳಿಗೆ ಎಡೆಯಿದೆ.

ಆದುದರಿಂದ ಇನ್ನಾದರೂ ಸದರಿ ಪರಿಷತ್ತು ಜರಗುವ ಸಂಭವವಿದೆಯೋ ಯಾ ಇಲ್ಲವೋ, ಜರಗುವುದಿದ್ದರೆ ಯಾವಾಗ ಮತ್ತು ಎಲ್ಲಿ ಎಂಬ ವಿವರವನ್ನೂ ಜರಗೇರುವ ಪರಿಷತ್ತು ಯಾವ ಸ್ವಭಾವದ್ದೆಂಬುದನ್ನೂ ಬಲ್ಲವರು ಪತ್ರಿಕೆಗಳ ಮೂಲಕ ದಯವಿಟ್ಟು ತಿಳಿಸಿದರೆ ತುಂಬಾ ಕೃತಜ್ಞನಾಗಿರುವೆನು.

ತಾ. ೨೮—೭—೧೯೨೯ ಓರ್ವ ಸುಧಾರಕ

### ಹರಿಕೀರ್ತನೆ

ಬೆಂಗಳೂರಿನಲ್ಲಿ ಇದೇ ತಿಂಗಳ ತಾ. ೧೫—೧೬—೧೯೨೯ನೇ ಭಾನುವಾರ ಹೋರ್ಸ್‌ರೋಡಿನಲ್ಲಿರುವ ಸ್ಟಂಡರ್ ಬಿಲ್ಡಿಂಗಿನ ಮೂರನೇ ಮಾಳಿಗೆಯಲ್ಲಿ ಭೋಜಂಯರೆಂಬ ಹರಿದಾಸರು 'ಭಕ್ತ ಚಂದ್ರಹಾಸ'ನೆಂಬ ಭಗೋದ್ಧಕ್ತನ ಕಥೆಯನ್ನು ಕೀರ್ತನ ರೂಪವಾಗಿ ಹಾಡಿ ತೋರಿಸಿದರು. ಪರಂತು ಈಗಿನ ಕಾಲಪರಿಸ್ಥಿತಿಗನುಗುಣವಾಗಿ ಜನರ ಮನಸ್ಸನ್ನು ದೇಶೋನ್ನತಿಯ ಕಡೆಗೂ ಪರಿವೃದಯಾಮಯನಾದ ಪರಮಾತ್ಮನ ದಿವ್ಯ ಜ್ಯೋತಿಯನ್ನು ಮನಮಂದಿರದಲ್ಲಿ ನೆನೆದು ಆನಂದಪಡೆಯುವಂತೆಯೂ ಮಾಡಬೇಕಿತ್ತು. ಹೀಗೆ ಮಾಡಬೇಕಾದರೆ ಆ ಹರಿಯ ಅನಂತಗುಣಗಳ ಪೈಕಿ ಕೆಲವನ್ನಾದರೂ ಹರಿದಾಸರು ತಮ್ಮ ಮನಸ್ಸಿನೊಳಗೆ ಮುಳುಗಿಸಿ, ಅದರ ಸಾರವನ್ನು ಕಾಣದೆ, ಬಳಿಕ ಆ ದಿವ್ಯಾಮೃತವನ್ನು ಮಾನವರ ಕರ್ಣೇಂದ್ರಿಯಗಳ ಮೂಲಕ ಪಾನ ಮಾಡಿಸಿ, ಭಕ್ತಿಭಾವಗಳಿಂದ ಪ್ರಫುಲ್ಲಿತರನ್ನಾಗಿ ಮಾಡಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲ. ಇಂತಹ ಲಕ್ಷಣಗಳೆಲ್ಲ ಹರಿದಾಸರಲ್ಲಿಯೇ ಕಾಣ್ಮವೆಂದರೆ, ಅವರ ಕೀರ್ತನೆಗೆಷ್ಟು ಮಹತ್ವ! ಇದು ಕೇವಲ ಬಾಯಲ್ಲಿ ಬ್ರಹ್ಮಜ್ಞಾನ ಹೃದಯದಲ್ಲಿ ಗುಮ್ಮಜ್ಞಾನ"ದ ಸರಿ. ಅಂತೂ ಉಪಯುಕ್ತ ದಾಸರ ಕೀರ್ತನೆಯನ್ನು ಹರಿಕೀರ್ತನೆಯೆನ್ನುವುದಕ್ಕಿಂತ ಹಾಸ್ಯಗಾರರ ನಾಟಕವೆನ್ನುವುದೇ ಸಾಧ್ಯವಿಲ್ಲ. ಅದಿರಲಿ, ಇನ್ನು ಮೇಲೆ, ಅವನ್ನು "ಬಂಡ ದಾಸ"ದ ಕೊರಳಿಗೆ ಸರಿ ಹೊಂದಿಸಿದರೆ, ಸಮಂಜಸವಾಗಬಹುದೆಂದು ನನ್ನ ಊಹೆ!

ಶ್ರೀಕೃಷ್ಣದಾಸ.

### ಅಳ್ವಾರ್ ಸಂಸ್ಥಾನ.

ಈ ಸಂಸ್ಥಾನದ ಸ್ಥಿತಿಯು ಬಹಳ ಶೋಚನೀಯವಾಗಿದೆ. ಭಾರತೀಯರಾದ ಹಿಂದೂ ಪ್ರಜೆಗಳಿಗೆ ಯಾವುದೇ ಕಷ್ಟವು ಉಂಟಾಗಿರುವುದಿಲ್ಲ. ಪ್ರಭುಗಳಿಗೂ, ಪ್ರಜೆ ಕಷ್ಟ ಉಂಟಾಗಿದೆ. ಅದಕ್ಕೆ ಈ ಪ್ರಭುಗಳು ಮತ್ತು ಇವರ ಅಧಿಕಾರಿಗಳು ಕಾರಣಭೂತರು. ಹಾಗೂ ಇದೇ ಮುಸಲ್ಮಾನ ಕೊಲೆಗಾರ ಪ್ರೇಮಿಗಳು ಹೋಗುವುದರಿಂದಲೂ, ಎಲ್ಲರೂ ಪ್ರಮಾಣಿಕತೆಯಿಂದ ಯಾರಿಗೂ ಬಾಧಕವಾಗದಂತೆ ಕೆಲಸ ಮಾಡುವ ಮಾರ್ಗದಿಂದ ಬರುತ್ತಿರುವುದು ಕಷ್ಟವಲ್ಲ. ಸರಕಾರದ ಕೆಲಸವನ್ನು ಮಾಡುವುದಕ್ಕೆ ಯಾರು ದಕ್ಷರೋ, ಯಾರು ಪ್ರಜಾಪಾಲಕರೋ ಯಾರು ಭಯದಿಂದಲೂ ಭಕ್ತಿಯಿಂದಲೂ, ಕೆಲಸ ಮಾಡುವರೋ ಯಾರು ಬಂಧುಮಿತ್ರರಲ್ಲವೋ ಅಂತವರನ್ನು ಜವಾಬ್ದಾರಿ ಕೆಲಸಗಳಿಗೆ ಇಟ್ಟುಕೊಂಡು ಅವರು ತಮ್ಮ ಕೆಲಸಗಳನ್ನು ನಿಷ್ಪಕ್ಷಪಾತದಿಂದ ಮಾಡದೆ ಇದ್ದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತಾ ಬಂದರೆ ಪ್ರಜಾರಂಜನೆಯು ಪರಿಪೂರ್ಣವಾಗಿ ಆಗುವುದು. ಜನಗಳಿಗೆ ಪ್ರಭುಗಳಲ್ಲಿಯೂ ಅಧಿಕಾರಿಗಳಲ್ಲಿಯೂ ಪ್ರೀತಿಯು ಹುಟ್ಟುವುದು. ಹಾಗಿಲ್ಲದೆ ಹೋದರೆ ಜನಗಳು ಅತೃಪ್ತರಾಗಿ ಸರಕಾರದವರ ಮೇಲೆ ಬೀಳುವರು. ನಿರಂಕುಶ ಪ್ರವರ್ತಕರಾದ ಅಧಿಕಾರಿಗಳು ಪ್ರಜೆಗಳನ್ನು ಶಿಕ್ಷಿಸುವುದರಿಂದ ಅನೇಕರು ಬೆಳೆಯುವುದು, ಪ್ರಭುಗಳಿಗೂ ಅಧಿಕಾರಿಗಳಿಗೂ ಅಪಕೀರ್ತಿಯು ಬರುವುದು. ಈಗ ಅಳ್ವಾರು ಮಹಾರಾಜರಿಗೆ ಇಂತಹ ಅಪಯಶಸ್ಸು ಬಂದಿರುವುದು. ಇವರ ದೇಶದಲ್ಲಿ ಅನೇಕ ಮುಸಲ್ಮಾನರು ಕೃಷಿಯಿಂದ ಕಸಬುಗಳಿಂದ ಜೀವಿಸುತ್ತಲಿರುವರು. ಅವರಿಗೆ ತೊಂದರೆಗಳು ಉಂಟಾದದ್ದರಿಂದ ಅವರು ಪ್ರತಿಭಟಿಸಿ ದಂಗೆಯನ್ನು ಮಾಡಿರುವರು. ಪೋಲೀಸ್ ಮತ್ತು ಮಿಲಿಟರಿಯವರು ಅವರನ್ನು ಹಠೋಟಿಗೆ ತರುವ ವ್ಯಾಜದಿಂದ ಮದ್ದು ಗುಂಡನ್ನೂ ಕೂಡ ಪ್ರಯೋಗಿಸುತ್ತಲಿರುವರು. ಧರ್ಮದಿಂದ ಪ್ರಜಾರಂಜನೆಯನ್ನು ಮಾಡುವುದು ಅಸಾಧ್ಯವೇ? ಪ್ರಜೆಗಳನ್ನು ಪುತ್ರನಿರ್ವಿಶೇಷವಾಗಿ ಆದರಿಸಿದರೆ ಅವರು ನಮ್ಮ ಮೇಲೆ ಬೀಳುವರೇ? ಎಲ್ಲಿ ದಂಗೆ ಆಗುವುದೋ ಅಲ್ಲಿ ಅದಕ್ಕೆ ಕಾರಣಭೂತರಾದವರು ಪ್ರಾಯಶಃವಾಗಿ ಪ್ರಭುಗಳಾಗಿಯೂ, ಅವರ ನೌಕರರಾಗಿಯೂ ಇರುವುದಿಲ್ಲವೇ? ಈ ವಿಷಯವನ್ನು ಪರ್ಯಾಲೋಚಿಸದೇ ಅಳ್ವಾರು ಮಹಾರಾಜರು ಪರಾಕ್ರಮದಿಂದ ದಂಗೆಯನ್ನು ನಿಲ್ಲಿಸುವ ನಿರ್ಧಾರ ಮಾಡಿದ್ದಕ್ಕಾಗಿ ಮುಖ್ಯಾತ್ಮರು ವ್ಯಸನಪಡುತ್ತಾರೆ. ಮಹಾರಾಜರು ಮನಸ್ಸುಮಾಡಿದ್ದರೆ ತಾನೇ ಪರ್ಯಟನೆ ಮಾಡಿ ಅತೃಪ್ತರಾದ ಜನಗಳನ್ನು ಕರೆಸಿಕೊಂಡು ವಿಚಾರಣೆ ಮಾಡಿ ನಿರ್ದಾಕ್ಷಿಣ್ಯದಿಂದ ದುಷ್ಟನಿಗ್ರಹವನ್ನು ಮಾಡಿದ್ದರೆ ಅದು ನಿಮಿಷಗಳಲ್ಲಿ ಜನಗಳು ಹಠೋಟಿಗೆ ಬರುತ್ತಿದ್ದರು. ಅನೇಕರು ತಮ್ಮ ಪ್ರಜೆಗಳನ್ನು ಚತಾವಣೆ ಮಾಡಿರುತ್ತಾರೆಂಬುದಾಗಿಯೂ ಬ್ರಿಟಿಷ್ ಗವರ್ನಮೆಂಟಿನ ಸಹಾಯ ಬೇಕೆಂಬುದಾಗಿಯೂ ಅಪೇಕ್ಷಿಸಿ ಇವರು ಮಾಡುತ್ತಲಿರುವ ಪರ್ಯಟನೆಗಳನ್ನು ನೋಡಿದರೆ ವಿಷಾದವಾಗುತ್ತದೆ. ಮುಖ್ಯಳು ಅತ್ತರೆ ಅದರನ್ನು ಒಳ್ಳೇ ಮಾತಿನಿಂದ ಸಮಾಧಾನ ಮಾಡುವುದಕ್ಕೆ ಬದಲಾಗಿ ಛಡಿ ಏಟು ಮೊದಲಾದವುಗಳಿಗೆ ಗುರಿಮಾಡುವುದು ಎಂದಿಗೂ ಧರ್ಮವಲ್ಲ. ಈ ವಿಷಯಕ್ಕೆ ಮಹಾರಾಜರವರ ಗಮನವು ಹೋಗಲ್ಪಡುವುದೆಂದು ನಾನು ನಂಬಿದ್ದೇನೆ.

ಯಂ. ವೆಂಕಟಕೃಷ್ಣಯ್ಯ

## ನೋಟಿಸು

ಇದರಿಂದ ಪುತ್ತೂರು ತಾಲೂಕು ಗರ್ಡಾಡಿ ಗ್ರಾಮದ ದೊಡ್ಡ ಮನೆಯಲ್ಲಿರುವ ತಂಗಿ ಹೆಂಗ್ಸಿನ ಮಗ ಕಿದ್ದು ಶೆಟ್ಟಿಯು ಎಲ್ಲಾ ಜನರಿಗೆ ತಿಳಿಸುವುದೇನೆಂದರೆ—

ನನಗೆ, ನನ್ನ ಸ್ವಂತ ನೆಲೆಯ ಪೂರ್ಣ ಹಕ್ಕಿನ ಬಾಬ್ತು ಪುತ್ತೂರು ತಾಲೂಕು ನಂಬ್ರ 144ನೇ ಗರ್ಡಾಡಿ ಗ್ರಾಮದಲ್ಲಿ—ಬೆಳ್ತಂಗಡಿ ಸಬ್ ರಿಜಿಸ್ಟ್ರಿ ಆಫೀಸಿನ 1ನೇ ಪುಸ್ತಕದ ನಂಬ್ರ 452/10—9—29ಕ್ಕೆ ರಿಜಿಸ್ಟ್ರಿ ಆದ ವಿಭಾಗಪತ್ರ ಪ್ರಕಾರ, ಅದರಲ್ಲಿ ತೋರುವ B ಶೆಡ್ಯೂಲಿನ ಸ್ಥಿರಾಸ್ತಿಯು ಮುತ್ತ್ಯ ಶೆಟ್ಟಿ ಅಳಿಯ ಹೆಂಡು ಸೆಟ್ಟಿಯಿಂದ ನಗದಾಗಿ ಒರತಕ್ಕ ರೂಪಾಯಿ 100 ಹತ್ತು ಪವನಿನ 4 ಎಳೆಯ ಕುತ್ತಿಗೆಗೆ ಹಾಕುವ ಚಿನ್ನದ ಸರ 1, ರೂಪಾಯಿ 25 ಕ್ರಯ ಬಾಳುವ ಕಂಚು ತಾಮ್ರ ಹಿತ್ತಾಳೆ ಪಾತ್ರೆಗಳು, 5 ನಡೆ ಜಾನುವಾರುಗಳೂ ವಾಸ್ತವ್ಯದ ಮನೆ ಹಟ್ಟಿ ಕೊಟ್ಟಿಗೆ ಕೂಡಾ ಇರುತ್ತದೆ. ಈಗ ನಾನು ವೃದ್ಧಾಪ್ಯದವನಾಗಿ 8 ತಿಂಗಳಿನಿಂದ ಉಲ್ಬಣವಾದ ಶ್ವಾಸಕಾಸ, ಉಷ್ಣಾತಿಸಾರದ ಕಾಯಿಲೆಯಿಂದ ಎಷ್ಟು ಮದ್ದು ಮಾಡಿದರೂ ಗುಣವಾಗದೆ ಹೆಚ್ಚುತ್ತಾ ಬಂದು ದೇಹದಲ್ಲಿ ಬಹು ಕ್ಷೀಣನಾಗಿ ಈ ಕಾಯಿಲೆಯಿಂದ ತಪ್ಪಿಕೊಳ್ಳು ನಾನು ಪರಿಹಾರವು ಹೊಂದುವ ಸ್ಥಿತಿ ಕಾಣದುದರಿಂದ, ನನ್ನ ತಂಗಿಯಾದ ಶೇಸಮ್ಮನ ಮಗಳು ಅಕ್ಕಮ್ಮ ಎಂಬವಳನ್ನು ಚಿಕ್ಕಂದಿನಿಂದ ಬಹಳ ಪ್ರೀತಿಯಿಂದ ನಾನು ಸಾಕಿ ಪ್ರಾಯಭರಿತಳಾದ ಅವಳನ್ನು ಬಂಟ್ವಾಳ ತುಂಬೆ ಗುತ್ತು ಬಾಬು ಸೆಟ್ಟಿಗೆ ಮದುವೆಮಾಡಿ ಕೊಟ್ಟಿರುವ ಸದರಿ ಅಕ್ಕಮ್ಮಗೆ ಪೋಲ್ಯಂಡ ಸ್ಥಿರ ಚರಾಸ್ತಿ ಸರ್ವಾದಿಯೂ ನನ್ನ ಹಕ್ಕು ಸ್ಥಾಪಿಸಿ ಆಕೆ ಹೆಸರಿನಲ್ಲಿ ವಿಲ್‌ನಾಮೆ ಮಾಡಿ ಕೊಟ್ಟಿರುತ್ತೇನೆ—ಅದು ರಿಜಿಸ್ಟ್ರಿ ಮಾಡಿಸುವರೆ ನನ್ನ ಕಾಯಿಲೆಯ ಅಶಕ್ತಿ, [illegible] ಬರುವ ಕಾರಣದಿಂದ, ಅನಾನುಕೂಲತೆಯಿಂದ ಸಾಧ್ಯವಾಗಿಲ್ಲ. ಸದರಿ ವಿಲ್‌ನಾಮೆಯಲ್ಲಿ ಎಲ್ಲಾ ನಡಿಯತಕ್ಕ ತಪಶೀಲು ಕಾಣಿಸಿರುತ್ತೇನೆ. ಆ ಪ್ರಕಾರದ ವಿಲ್‌ನಾಮೆ ಹಕ್ಕಿನ ಸರ್ವಾದಿಯಲ್ಲಿ ನನ್ನ ಅವಸಾನದ ನಂತರ ಅಕ್ಕಮ್ಮನಿಗೆ ಮಾತ್ರ ಸಂಪೂರ್ಣ ಹಕ್ಕಲ್ಲದೆ, ನನ್ನ ಕುಟುಂಬದ ಬೇರೆ ಯಾರೊಬ್ಬರಿಗೂ ಯಾವದೊಂದು ಬಾಬ್ತು ಕಾರಣದಿಂದ ಏನಾದರೂ ಹಕ್ಕಿರುವುದಿಲ್ಲ. ಮತ್ತು ಸದರಿ ವಿಲ್‌ನಾಮೆ ಪ್ರಕಾರ ನನ್ನ ಪ್ರತಿನಿಧಿಯಾಗಿ ಪೂರ್ಣ ನಡಕೊಳ್ಳುವರೆಯೂ, ಪರ್ತಿಸುವರೆಯೂ ಆಕೆಯೇ—ಆಕೆಯೇ ಹಕ್ಕುದಾರಳಾಗಿರುತ್ತಾಳೆ ಎಂದು ಸರ್ವ ಎಲ್ಲಾ ಜನರು ತಿಳಿಯುವುದು.

ಈ ಗರಿಡಾಡಿ ಎಡಹೆಬ್ಬೆಟ್ಟಿನ ಗುರುತು ಸಹಾ
ಕಿದ್ದು ಶೆಟ್ಟಿ ರುಜು


## "ಭಾರತಿ"

ಧಾರ್ಮಿಕ ಮತ್ತು ಲೋಕರಂಜಕವಾದ
ವಿಷಯಗಳನ್ನೊಳಗೊಂಡ

- ಕನ್ನಡ ಮಾಸಪತ್ರಿಕೆ —

ವಾರ್ಷಿಕ ಚಂದಾ ಹಣ, ಅಂಚೆವೆಚ್ಚ ಸೇರಿ

ರೂ. 2-4-0 ಮಾತ್ರ.

ಚಂದಾದಾರರಾಗಲು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ಮೆನೇಜರ್,
"ಭಾರತಿ" ಕಾರ್ಯಾಲಯ,
ಮುಲ್ಕಿ, ದ. ಕ.

ವಿ. ಸೂ. ಹಲವು ಕಡೆಗಳಲ್ಲಿ ಏಜಂಟರು ಬೇಕು. ಅಪೇಕ್ಷೆ ಇದ್ದವರು ಮೇಲಿನ ವಿಳಾಸಕ್ಕೆ ಬರೆಯುವುದು

# WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

*The Divisional Manager*
The South Indian General Assurance Co Ltd
64 3rd Cross Road Srirampur Extn
Malleswaram Post BANGALORE
OR
*The Managing Agents,*
The S I. G. A Co Ltd.
55 Poonamallee High Road Kilpauk, MADRAS

ನಿಮಗೆ ಬೇಕಾದುದು!
ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲುಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್ ಟುವಾಲಗಳೂ, ಧೋತಿ, ಸೀರೆ— ಬೈರವಾಸು — ಚಿಕ್ಕ — ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು

## ಅನುಕ್ರಮಣಿಕೆ


ಅಗ್ರಲೇಖ
ನಮ್ಮ ಜಿಲ್ಲೆಗಳೊಳಗಿನ ಬೇಂಕುಗಳು ೮
ಸ್ಫುಟ ವಿಚಾರಗಳು ೩
ನೋಟಗಳು 〃
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ವಿದೇಶ ವರ್ತಮಾನ, ೮
ವಿವಿಧ ಸಮಾಚಾರಗಳು ೧೧
ಹಿಂದಿಯರ ಮೇಲೆ ಗದೆ! ೩
ಪತ್ರವ್ಯವಹಾರ ೧೩
ಸ್ವದೇಶ ನೋಟಗಳ ಬಾಣ! ೪
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಕಾಸರಗೋಡು ಉದ್ಯಾವರ, ಫರಂಗಿಪೇಟೆ, ಅಜೆಕಾರು, ಸುರತ್ಕಲ್ ೯
ಮತ ವಿಚಾರ ೭
ಕಾಂಗ್ರೆಸ್ಸನ್ನು ನಡೆಸದಿದ್ದರೂ ಜೀವಂತವಿದೆ ೧೦
ಭಾರತ ವರ್ಷದ ಮಹಿಳಾ ಸಮಾಜ ೧೨
ಧರ್ಮವೂ ಸಿನೆಮವೂ! 〃



# ಸ್ವದೇಶಾಭಿಮಾನಿ.

ತಾ. ೧೦ನೇ ಶುಕ್ರವಾರ ಫೆಬ್ರವರಿ ೧೯೩೩.


## ನಮ್ಮ ಜಿಲ್ಲೆಗಳೊಳಗಿನ ಬೇಂಕುಗಳು

ಬೇಂಕುಗಳ ಪರಿಚಯವು ಪ್ರಥಮತಃ ಉಂಟಾಗಿ ಸ್ವಲ್ಪವೇ ಸಮಯವಾಗಿದ್ದರೂ, ಈ ಅಲ್ಪ ಕಾಲದೊಳಗೆ ನಮ್ಮ ಜಿಲ್ಲೆಯಲ್ಲಿ ಉಂಟಾದ ಬೇಂಕುಗಳನ್ನೂ ಅವುಗಳು ಜರುಗಿಸುತ್ತಿರುವ ಕೆಲಸಗಳನ್ನೂ ನೋಡಿದರೆ ಆಶ್ಚರ್ಯವಾಗದಿರದು. ಮತ್ತು ಬೇಂಕುಗಳಿಂದ ಜಿಲ್ಲೆಗೆ ಉಂಟಾದ ಲಾಭ ವ ನಷ್ಟದ ಲೆಕ್ಕಾಚಾರದಲ್ಲಿ ಹಲವರು ಹಲವು ವಿಧವಾಗಿ ಹೇಳಬಹುದಾದರೂ, ತಕ್ಕಷ್ಟು ಮಟ್ಟಿಗೆ ಅವು ನಮ್ಮ ಜಿಲ್ಲೆಯ ವ್ಯಾಪಾರದ ದೃಢವಾದ ಅಂಗವಾಗಿರುತ್ತವೆ. ಅಲ್ಲದೆ ದೇಶದ ಇತರ ಕಡೆಗಳ ಬೇಂಕುಗಳ ಪರಿಸ್ಥಿತಿಯನ್ನೂ, ಏಕೆ? ಯುರೋಪ, ಅಮೇರಿಕಾ ದೇಶಗಳಲ್ಲಿ ತೋರಿಬರುವ ಬೇಂಕುಗಳ ಪರಿಸ್ಥಿತಿಯನ್ನೂ ಲಕ್ಷಿಸಿದರೆ ನಮ್ಮ ಬೇಂಕುಗಳು ಬಹು ಮಟ್ಟಿಗೆ ಉತ್ತಮವೆನ್ನುವುದರಲ್ಲಿ ಸಂದೇಹವಿಲ್ಲ. ಹಾಗೆಂದ ಬೇಂಕುಗಳ ಪರಿಸ್ಥಿತಿಯನ್ನು ಇನ್ನೂ ಸುಧಾರಿಸುವ ಸಂದರ್ಭವಾಗಲಿ, ಆವಶ್ಯಕತೆಯಾಗಲಿ, ಇಲ್ಲವೆಂದು ನಾವೆನ್ನುವುದಿಲ್ಲ, ಬದಲಾಗಿ ಬೇಂಕುಗಳನ್ನು ಹಲವು ರೂಪದಲ್ಲಿ ಸುಧಾರಿಸುವ ಆವಶ್ಯಕತೆಯಿದೆಯೆಂದು ನಿರೂಪಿಸುವುದೇ ನಮ್ಮ ಪ್ರಸ್ತುತದ ಉದ್ದೇಶವಾಗಿರುತ್ತದೆ.

ಪ್ರಸ್ತುತ ಕಾಣುವ ವ್ಯಾಪಾರದ ದುಃಸ್ಥಿತಿಯು ಬೇಂಕುಗಳ ಮೇಲೆ ಬಹಳವಾಗಿ ಪರಿಣಾಮವನ್ನುಂಟುಮಾಡಿದೆ. ಊರಿನಲ್ಲಿ ದುಡ್ಡಿಲ್ಲವೆಂದು ಎಲ್ಲರೂ ತಡಬಡಿಸುವಾಗ ಬೇಂಕುಗಳು ತಮ್ಮ ಲಕ್ಷಾವಧಿ ರೂಪಾಯಿಗಳನ್ನು ಹೇಗ ವಿನಿಯೋಗಿಸಲಿ? ಎಂಬ ಚಿಂತೆಯಿಂದಲೇ ಕೊರಗುತ್ತಿವೆ! ಎರಡೇ ವರ್ಷಗಳ ಹಿಂದೆ ಶೇ. ೯||ಯಂತೆ ಇನ್ಕಮ್ ಟೇಕ್ಸ ಮಾಫಿಯಾಗಿ ಸಾಲವನ್ನು ಕೊಳ್ಳುತ್ತಿದ್ದ ಸರಕಾರವು ಈಗ ಶೇಕಡಾ ೪ರಂತೆ ಇನ್ಕಮ್ ಟೇಕ್ಸ ಸಹಿತವಾಗಿ ಸಾಲವನ್ನು ಸುಲಭವಾಗಿ ಪಡೆಯುತ್ತಿದೆ' ಎನ್ನುವಾಗ ಇಷ್ಟರಲ್ಲಿಗೆ ದುಡ್ಡು ಎಷ್ಟು ಅಗ್ಗವಾಗಿಯದೆಂದೂ ಇಲ್ಲದವರಿಗೆ ಅದು ಎಷ್ಟು ಪ್ರಿಯವಾಗಿಯದೆಂದೂ ಕಂಡುಬರುವುದು.

ಹೀಗಾಗಿ ಕೊಟ್ಟ ಸಾಲವನ್ನು ಹಿಂದೆ ಪಡಕೊಳ್ಳುವುದೂ, ಇಟ್ಟ ಹಣವನ್ನು ಭದ್ರತೆಯಿಂದ ಸಾಲ ಕೊಡುವುದೂ ಎರಡೂ ಪ್ರಯಾಸಕರವಾಗಿ ಬಂದದೆ. ಬೇಂಕುಗಳ ಅಭಿವೃದ್ಧಿಯು ಹಣದ ಚಲಾವಣೆಯಲ್ಲಿದೆ. ಈ ಚಲಾವಣೆಯು ನಿಂತರೆ, ಮನುಷ್ಯನ ರಕ್ತ ಸಂಚಲನೆಯು ನಿಂತಂತೆ ಹಾನಿಕಾರಕವಾಗಿದೆ. ಆದುದರಿಂದ ಬೇಂಕುಗಳ ಅಭಿವೃದ್ಧಿಯು ಮುಂದೆ ಸಾಗಬೇಕಾದರೆ ಹಣದ ಚಲಾವಣೆಯಾಗಬೇಕು, ಹಣದ ಚಲಾವಣೆಯಾಗಬೇಕಾದರೆ ದವಸಗಳ ಬೆಲೆ ಏರಬೇಕು. ದವಸಗಳ ಬೆಲೆ ಏರಬೇಕಾದರೆ ವ್ಯಾಪಾರವು ಚೇತರಿಸಬೇಕು. ಈ ಮೂಲಕ ಬೇಂಕುಗಳೂ, ವ್ಯಾಪಾರವೂ ಅತ್ಯಂತ ಹತ್ತಿರದ ಸಂಬಂಧ ಉಳ್ಳದ್ದಾಗಿವೆ.

ಇಂತಹ ಪರಿಸ್ಥಿತಿಯ ಸಂದರ್ಭದಲ್ಲಿಯೇ ನಮ್ಮ ಜಿಲ್ಲೆಯಲ್ಲಿ ಹಲವು ಬೇಂಕುಗಳು ಹೊಸತಾಗಿ ಉಂಟಾದುದು ವಿಚಾರಣೀಯವಿದೆ. ನಮ್ಮ ಜಿಲ್ಲೆಯಲ್ಲಿ ಇನ್ನು ಇನ್ನು ಹೆಚ್ಚಿನ ಬೇಂಕುಗಳ ಆವಶ್ಯಕತೆಯುಳ್ಳದೆಂದು ನಾವು ಎರಡು ವರ್ಷಗಳ ಹಿಂದೆಯೇ ಹೇಳಿದ್ದೆವು. ಆದರೆ ಅನಂತರವೇ ಹಲವು ಬೇಂಕುಗಳಾದುವು. ಮತ್ತು ಆಗಿನ ಸಮಯದಲ್ಲಿ ಬೇಂಕುಗಳು ಕೊಡುತ್ತಿದ್ದ ಹೆಚ್ಚಿನ ಬಡ್ಡಿಯ ಕಾರಣದಿಂದ, ಚಿಲ್ಲರೆಯಾಗಿ ವ್ಯಕ್ತಿಗಳ ಕೈಯಲ್ಲಿ ವ್ಯವಹಾರಕ್ಕಾಗಿ ಸಂಚಲಿಸುತ್ತಿದ್ದ ಹಣವೆಲ್ಲ ಬೇಂಕುಗಳಲ್ಲಿ ಶೇಖರವಾದವು. ಈಗ ಈ ಬೇಂಕುಗಳು ತಾವು ಉಂಟುಮಾಡಿದ ಪರಿಸ್ಥಿತಿಯನ್ನು ತಾವೇ ಸುಧಾರಿಸಲು ಕಷ್ಟಗೊಳ್ಳುತ್ತಿವೆ. ಈ ಮಧ್ಯದಲ್ಲಿ ನಮ್ಮ ಜಿಲ್ಲೆಯ ಮುಖ್ಯ ಬೇಂಕುಗಳು ತಾವು ಪಡೆಯುವ ಹಣದ ಬಡ್ಡಿಯ ದರವನ್ನು ಬಹು ಮಟ್ಟಿಗೆ ತಗ್ಗಿಸಿದುದು ಅಭಿನಂದನೀಯವಿದೆ. ಈ ಮೂಲಕ ಬೇಂಕುಗಳಲ್ಲಿ ದಿಕ್ಕುಗಾಣದೆ ಜಮೆಯಾದ ಠೇವಣಿಗಳಲ್ಲಿ ಕೆಲವು ಇನ್ನು ಸ್ವಲ್ಪ ಸಮಯದ ನಂತರ ಇತರ ಉಪಯೋಗಕ್ಕಾಗಿ ಹೊರಗೆ ಹೋಗುವ ಸಂದರ್ಭವೆಂಬಹುದಾಗಿ ಊಹಿಸಲಾಗಿಯದೆ, ಮತ್ತು ಈ ಮೂಲಕ ದ್ರವ್ಯ ಸಂಚಲನೆಯು ಪುನಃ ಉಂಟಾಗಿ ಕೃಷಿ ವ್ಯಾಪಾರವೂ ಪುನರುಜ್ಜೀವಿಸಬಹುದಾಗಿ ನೆನಸಲ್ಪಟ್ಟಿದೆ.

ಆದರೆ ಬೇಂಕುಗಳಲ್ಲಿ ಇನ್ನೊಂದು ತರದ ಪೀಡೆಯು ಇತ್ತೀಚೆಗೆ ಉಂಟಾದುದರ ಕಡೆಗೆ ಬೇಂಕುಗಳ ಲಕ್ಷ್ಯವನ್ನೆಳೆಯಬೇಕಾಗಿದೆ. ಈ ದುಃಸ್ಥಿತಿಯ ಸಮಯದಲ್ಲಿಯೇ ಹಲವು ಬೇಂಕುಗಳಲ್ಲಿ ದ್ರವ್ಯಾಪಹಾರದ ಲಕ್ಷಣಗಳು ತೋರಿ ಬಂದಿವೆ. ವ್ಯಾಪಾರದ ಮೂಲಕ ಬೇಂಕುಗಳಿಗೆ ಉಂಟಾಗುವ ನಷ್ಟವು ಅನಿವಾರ್ಯವಾದುದು. ಆದರೆ ನಿವಾರಿಸಲ್ಪಡಬಹುದಾದ ನಷ್ಟಗಳ ಕಡೆಗೆ ಪ್ರತಿ ಬೇಂಕಿನ ಪಾಲುಗಾರರು ಹೆಚ್ಚಿನ ಲಕ್ಷ್ಯವಿಡುವುದು ಆವಶ್ಯಕ ಮತ್ತು ಹಾಗೆ ಅಪಹಾರಕ್ಕೆ ಕಾರಣವಾದ ವ್ಯಕ್ತಿಗಳು ತಪ್ಪಿಹೋಗುವುದನ್ನೂ ಬಿಡಬಾರದು. ಬೇಂಕುಗಳ ಸಾರ್ವಜನಿಕ ಸಂಸ್ಥೆಗಳು. ಅವುಗಳಲ್ಲಿ ಅವುಗಳ ಪಾಲುದಾರರ ಹಣ ಮಾತ್ರವಲ್ಲದೆ ನೂರಾರು ಜನರ ಕಷ್ಟದಿಂದ ಗಳಿಸಲ್ಪಟ್ಟ ಹಣವು ವಿಶ್ವಾಸದಿಂದ ಬೇಂಕುಗಳಲ್ಲಿಡಲ್ಪಡುತ್ತಿವೆ. ಒಬ್ಬಿಬ್ಬರ ಮೋಸದಿಂದ ಅವು ನಾಶವಾಗುವುದನ್ನು ನೋಡಲಾಗುವುದಿಲ್ಲ. ಅಂತಹ ಮೋಸಗಳನ್ನು ಯಾವ ಕಾರಣದಿಂದಲಾದರೂ ಕ್ಷಮಿಸುವುದರಲ್ಲಿ ನ್ಯಾಯವಿಲ್ಲ.

## LATEST NEWS.

**ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರಿಗೆ ಅಹ್ಮದಾಬಾದಿನಲ್ಲಿ ೬ ತಿಂಗಳ ಸಜೆ ಮತ್ತು ೫೦೦ ರೂಪಾಯಿ ಜುಲ್ಮಾನೆ, ತಪ್ಪಿದರೆ ಪುನಃ ೬ ವಾರಗಳ ಶಿಕ್ಷೆ ವಿಧಿಸಲಾಗಿದೆ!**

ಮೋತಿಲಾಲ ದಿನಾಚರಣೆಗಾಗಿ ಸರ್ ಸಪ್ರೂರವರ ಅಧ್ಯಕ್ಷತೆಯಲ್ಲಿ ಜರಗಲಿದ್ದ ಸಭೆಯನ್ನು ಅಲ್ಲಹಾಬಾದಿನಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ನಿಷಿದ್ಧಿಸಿದುದಕ್ಕಾಗಿ ಸೆಶ್ಯನ್ಸ್ ಜಡ್ಜರಿಗೆ ಅರ್ಜಿ ಹೋಗಿ ಆ ಅರ್ಜಿಯು ತಳ್ಳಿಹಾಕಲ್ಪಟ್ಟಿತು.

—ಮೋತಿಲಾಲರ ದಿನಾಚರಣೆಗಾಗಿ ದೇಶದ ಹಲವೆಡೆಗಳಲ್ಲಿ ತಾ ೬ನೇ ದಿನ ಪ್ರದರ್ಶನಗಳಾಗಲು ಸಾಹಸವಾಯಿತು.

—ಲಂಡನಿನಲ್ಲಿ ಸರ್ ಹೋರರು ಭಾಷಣ ಮಾಡುತ್ತಾ ಕಾಂಗ್ರೆಸ್ಸನ್ನು ಮುಷ್ಟಿಯಲ್ಲೇ ಹಿಡಿದುಕೊಂಡಿದ್ದೇನೆ ನವಂಬರದಲ್ಲಿ ೧೭೮೪೫ ಜನರು ಬಂಧಿಗಳಾಗಿದ್ದರು. ಈಗ ಜೈಲಿನಲ್ಲಿ ೧೪೪೧೫ ಜನರುವರು ಎಂದಿರುವರು.

—ಮೀರತ್ ಕೈದಿಗಳಿಗೆ ಶಿಕ್ಷೆ ಕೊಟ್ಟುದು ನ್ಯಾಯವೋ ಎಂದು ಸರ್ ಹೋರರೊಡನೆ ಕೇಳಿದ್ದಕ್ಕೆ "ಅದು ಅಲ್ಲಿಯ ಜಡ್ಜರಿಗೇನೆ ಗೊತ್ತು" ಎಂದರು.

—ಈ ತಿಂಗಳಲ್ಲಿ ಅಲ್ಲಲ್ಲಿ ಬೆಂಕಿಯ ಅನಾಹುತ. ಕರಾಚಿ ಮುಂಬಾಯಿ ಕಲ್ಕತ್ತ ಕೊಯಮುತ್ತೂರು ಕೊಲೊಂಬೊಗಳಲ್ಲಿ ಬೆಂಕಿಯ ಅನಾಹುತ! ಕೊಲೊಂಬೊದಲ್ಲಿ ಆದಮ್ಸ್ ಪೀಕ್ ಎಂಬ ಹೊಟೆಲು ಸುಟ್ಟು ಬೂದಿ.

—ಜರ್ಮನಿಯಲ್ಲಿ ಹರ್ ಹಿಟ್ಲರರು ಅಧಿಕಾರಕ್ಕೆ ಬಂದಂದಿನಿಂದ ತೀಕ್ಷ್ಣ ಬಾಣರಾಜ್ಯಕ್ಕಾರಂಭವಾಗಿದೆ!

—ಜರ್ಮನಿಯ ಎಕ್ಸ್ ಕೈಜರನನ್ನು ಸಿಂಹಾಸನಕ್ಕೇರಿಸುವ ಹವಣಿಕೆಯು ಕೆಲವೆಡೆಯಾಗುತ್ತಿದೆ.

—ಪೆರಿಸಿನ ರೆನಾಲ್ಡ್ ಮೋಟರ್ ಫೆಕ್ಟರಿಯಲ್ಲಿ ಒಂದು ಉಗ್ರ ಸ್ಫೋಟನವಾಗಿ ಎಂಟು ಜನರು ಮರಣ ಹೊಂದಿದರು. ಅನೇಕರು ಜಖಂಗೊಂಡಿರುವರು.

—ಉತ್ತರ ಆಯರ್ಲೇಂಡಿನಲ್ಲಿ ಒಂದು ರೈಲು ಕಂಬಿ ತಪ್ಪಿಸಿ ರೈಲನ್ನು ಮಗುಚಿ ಬಿಡಲು ಸಾಹಸವಾದರೂ ಕ್ಲಪ್ತ ಸಮಯದಲ್ಲಿ ಮೋಸವು ಬಯಲಾದುದರಿಂದ ೬೦೦ ಜನರು ಉಳಿದರು.

+ + + +

## ಒಳದೇಶ ವರ್ತಮಾನ

—ರೋಡ್ ಬಂದೋಬಸ್ತರೂ, ರೈಲ್ವೇ ಬೋರ್ಡಿನವರೂ ಒಂದು ರಿಪೋರ್ಟನ್ನು ಪ್ರಕಟಿಸಿ, ಮೋಟರ್ ಸ್ಪರ್ಧೆಯಿಂದಾಗಿ ವರ್ಷಕ್ಕೆ ೧೯೦ ಲಕ್ಷ ರೂಪಾಯಿ ನಷ್ಟವಾಗುತ್ತದೆ ಎಂದಿರುವರು.

—ಸನಾತನಿಗಳೆದುರು ಶಾಸ್ತ್ರಿಯರಲಿ, ಸಹಿಷ್ಣುತೆಯಿರಲಿ. ಈಗ ಸತ್ಯಾಗ್ರಹ ಬೇಡ. ನಾವೂ ಸನಾತನಿಗಳಂತಿರಲಿಲ್ಲವೇ? ಶಾಂತರಾಗಿ ಕೆಲಸ ಮಾಡಿರೆಂದು ಗಾಂಧೀಜಿಯವರು ಕರಾಚಿಯ ಡಾ. ಜಿ. ಡಿ. ಹಿಂಗೋರಾಣಿಯವರಿಗೆ ಬರೆದಿದ್ದಾರೆ.

—ದಂಗೆಗಳನ್ನು ನಿಲ್ಲಿಸಲೋಸುಗ ಬೊಂಬೇ ವ್ಹಿಪ್ಪಿಂಗ್ ಏಕ್ಟ್ ಎಂಬುದು ಹೊರಬಿದ್ದಿದೆ. ದಂಗೆಗಾರರಿಗೆ ಛಡಿ ಕೊಡುವುದೇ ಮೇಲೆಂದು ನಿರ್ಧರಿಸಲಾಗಿದೆ.

—ಕರಾಚಿಯಲ್ಲಿ ಇಂದರ್ ಸಿಂಘನ ಪ್ರೇಯಸಿಯು ಬಲವಂತ ಸಿಂಘನೊಡನೆ ನಡೆದು ಬಿಟ್ಟುದಕ್ಕಾಗಿ ಮೊದಲನೆಯವನು ಅವಳ ಮೇಲೆ ಬೊಂಬು ಎಸೆದು ಅವಳನ್ನು ಜಖಂಗೊಳಿಸಿದನು.

—ಸಪ್ರೂರವರ ಅಧ್ಯಕ್ಷತೆಯಲ್ಲಿ ಜರಗಲಿದ್ದ ಮೋತಿಲಾಲ ದಿನಾಚರಣೆ ಸಭೆಯು ನಿಷೇಧಿಸಲ್ಪಟ್ಟಿತು! ಇದಕ್ಕಿಂತ ವಿಶೇಷವೇನಿದೆ? ಎಂದು ಅಲ್ಲಾಹಾದಿನ 'ಲೀಡರ್' ಪತ್ರಿಕೆಯ ಪ್ರಶ್ನೆ.

—ಕಲ್ಕತ್ತದಲ್ಲಿ ಅರಾಜಕರನ್ನು ಹಿಡಿಯುವುದಕ್ಕಾಗಿ ನಾಲ್ಕು ಮನೆಗಳಲ್ಲಿ ಜಪ್ತಿ ನಡೆಸಿ ನಾಲ್ಕು ಜನರನ್ನೂ ನಾಲ್ಕು ಕಟ್ಟುಗಳನ್ನೂ ಹಿಡಿದುಕೊಂಡು ಪೋಲೀಸರು ಹೋದರು.

—ಮುಂಬಾಯಿಯಲ್ಲಿ ಸ್ಮಾಲಿಗೆ ರೋಗವು ವಿಶೇಷವಾಗಿದೆ. ಹೋದ ಬನೆ ವಾರ ೩೧೯ ಜನರಿಗೆ ತಗಲಿ ೯೭ ಜನರು ಮಡಿದರು. ಈ ವಾರ ೩೯೪ ಜನರಿಗೆ ತಗಲಿ ೧೬೦ ಜನರು ಮರಣ ಹೊಂದಿದರು. ವಾಕು ಹಾಕಿಸಿದರೆ ಉಪಯೋಗವುಂಟೆಂದು ಅರಿಕೆಯಾಗಿದೆ.

—ಹೈದರಾಬಾದಿನಲ್ಲಿ ಸ್ವಿನಿ ಎಂಬ ಮಿಲಿಟರಿ ಆಫೀಸರನು ಕುದುರೆ ಸವಾರಿ ಮಾಡುತ್ತಿರುವಾಗ ಬಿದ್ದು, ಕುತ್ತಿಗೆ ಮುರಿದು ಸ್ವರ್ಗಸ್ಥನಾದನು.

ಮುನಿಸಿಪಾಲಿಟಿಯ ಮಾರ್ಗ ಮೊದಲಾದವುಗಳ ವೆಚ್ಚಕ್ಕಾಗಿ ಬೆಂಗಳೂರು ಸಿಟಿ ಮುನಿಸಿಪಾಲಿಟಿ ಕೌನ್ಸಿಲಿನವರು ೧೦ ಲಕ್ಷದ ಸಾಲವನ್ನು ಪಡೆಯಲಿರುವರು.

—ಆಸ್ಯಾ ಖಂಡವನ್ನು ಸುತ್ತುವುದಕ್ಕಾಗಿ ಪೇಶಾವರದಲ್ಲಿನ ತಿಲಾಮೋದ್ ಖಾನ್ ಎಂಬ ಯುವಕನು ಸೈಕಲ್ ಮೇಲೆ ತಾ ೫ನೇ ದಿನ ಹೊರಟಿರುವನು.

—ಟ್ರಾನ್ಸ್‌ಫರ್ ರಿಟಾಯರ್‌ಮೆಂಟ್ ಮೊದಲಾದ ಸಂದರ್ಭಗಳಲ್ಲಿ ಸರಕಾರೀ ಉದ್ಯೋಗಸ್ಥರು ವಿದಾಯ ಸತ್ಕಾರವನ್ನು ಅಪ್ಪಣೆ ವಿನಹ ಮಾಡಬಾರದೆಂದು ಪಶ್ಚಿಮೋತ್ತರ ಗಡಿನಾಡಿನ ಸರಕಾರದ ಹುಕುಂ.

—ಪೂನೆಯಲ್ಲಿ ಸಭೆ ಮೆರವಣಿಗೆಗಳು ಜರಗಬಾರದೆಂದು ೧೪೪ನೇ ಸೆಕ್ಷನ್ ಜ್ಯಾರಿಯಾಯಿತು. ಗಾಂಧೀಜಿಯವರಿರುವ ಊರು ಅದು.

—ಪಂಚಮಾಲ್ ಜಿಲ್ಲೆಯಲ್ಲಿ ಕದ್ದುಲಾಲ್ ಎಂಬವನು ಕತ್ತಲೆಯಲ್ಲಿ ಮನೆ ನುಗ್ಗುವುದು ಕಳ್ಳನೆಂದು ಭಾವಿಸಿ ತನ್ನ ಸಹೋದರನನ್ನು ಕೊಂದನು. ಪಾಪಿ ಶಿಕ್ಷೆ ವಿಧಿಸಲ್ಪಟ್ಟರೂ ಪಶ್ಚಾತ್ತಾಪಿಯೆಂದು ೮ ತಿಂಗಳ ಕಾರಾಗೃಹವಾಸವಾಯಿತು.

ಕಲ್ಕತ್ತದ ಪೆರಂಪೋರ್ ಕೈದಿ ಪಂಜರದಲ್ಲಿದ್ದ ಒಬ್ಬ ಕೈದಿಯು ಬರೆಯುತ್ತಿದ್ದ ಮೆಜಿಸ್ಟ್ರೇಟರ ಕಪೋಲಕ್ಕೆ ಚೆನ್ನಾಗಿ ಕೈ ತಾಗಿಸಿ ಹಾರಿ, ಓಡಿ ಸಿಕ್ಕಿಬಿದ್ದಿರುವನು.

ಮುಂಬಾಯಿ ಪೋರ್ಟ್ ವಠಾರದಲ್ಲಿ ತಾ. ೪ನೇ ದಿನ ಬೆಂಕಿ ಎದ್ದು, ಸುಮಾರು ಸಾವಿರ ರೂಪಾಯಿಯ ನಷ್ಟವಾಯಿತು.

—ಸರಕಾರಿ ನೌಕರರ ಸಂಬಳಕ್ಕೆ ಕಳೆದ ವರ್ಷ ಕಡಿತವಾಗಿತ್ತಷ್ಟೆ! ಶೇಕಡಾ ೫ರಷ್ಟನ್ನು ಪುನಹ ಅವರಿಗೆ ಕೊಡಲಿದ್ದಾರೆ.

—ಬೆಂಗಳೂರಿನ ನ್ಯೂ ವರ್ಲ್ಡ್ ಶೋ ಪ್ರದರ್ಶನದಲ್ಲಿ ಮಹಮ್ಮದ ಪೈಗಂಬರರ ಚಿತ್ರವನ್ನು ಪ್ರದರ್ಶಿಸಿದುದಕ್ಕಾಗಿ ಮುಸ್ಲಿಮರು ಉದ್ವಿಗ್ನಗೊಂಡಿರುವರು.

### ಹಾಸನ

ತಾ. ೨೧—೧೧—೩೨ರಲ್ಲಿ ಖೂನಿ ಕೇಸಿನ ತನಿಖೆಯು ಕೊಲೆಗಡಕರು ಸಿಕ್ಕದೆ ಹಿಂದೆ ಹಿಂದೆ ಹೋಗುತ್ತಿರುವುದು. ಸಂಬಂಧಪಟ್ಟ ಗುರುಲಿಂಗೇಗೌಡ ಬಸವೆ ಗೌಡ ಮತ್ತೂ ಒಬ್ಬಾತ ಇವರು ಇನ್ನೂ ರಿಮಾಂಡಿನಲ್ಲಿರುವರು. ಬಲ್ಲಾದ ಗಾಯ ಪಟ್ಟ ಚಿಕ್ಕರಾಮೇಗೌಡನು ಹಾಸನ ಆಸ್ಪತ್ರೆಯಿಂದ ಗುಣ ಹೊಂದಿ ಊರಿಗೆ ಹೋಗಿದ್ದಾನಾಗಿ ತಿಳಿದುಬರುತ್ತದೆ.

ಚಂದ್ರಕಲ್ ಕರ್ನಾಟಕ ನಾಟಕ ಸಂಘದವರು ಕಳೆದ ಮೂರು ವಾರಗಳಿಂದ ತಮ್ಮ ನಾಟಕಗಳನ್ನು ಆಡಿ ತೋರಿಸುತ್ತಿರುವರಲ್ಲದೆ ಇದೇ ಬರುವ ತಾ ೧೫ರಲ್ಲಿ "ಸಂಸಾರ ನೌಕಾ" ಎಂಬ ಮುಖ್ಯ ನಾಟಕವನ್ನು ಸ್ಥಳೀಯ ಇಂಡಿಯನ್ ಕ್ಲಬ್ಬಿನ ಪರವಾಗಿ ಆಡಿ ತೋರಿಸುವರಾಗಿಯೂ, ಆ ಬಗ್ಗೆ ಸದರಿ ಇಂಡಿಯನ್ ಕ್ಲಬ್ಬಿನವರು ಸದರಿ ಬೆನೆಫಿಟ್ ನಾಟಕಕ್ಕೆ ಜಿಲ್ಲಾಧಿಕಾರಿಗಳಾದ ಯುಜ್ ವಿ. ರಾಮಸ್ವಾಮಿ ಬಿ. ಎ. ಇವರನ್ನು ಆಹ್ವಾನಿಸುವರಾಗಿಯೂ ತಿಳಿದುಬರುತ್ತದೆ.

# ದಕ್ಷಿಣ ಕನ್ನಡ.

**ಮಂಗಳೂರು.** ಇಲ್ಲಿಯ ಶ್ರೀ ಶಾಂತೀಶ್ವರಸ್ವಾಮಿ ಸ್ವಾಧೀನ ಚೈತ್ಯಾಲಯ (ಬಸದಿ)ವನ್ನು ಜೈನ ಶ್ರಾವಕರೂ ಶ್ರೀಮಾನ್ ಶೆಟ್ಟಿಯವರು ರಘುಚಂದ್ರ ಬಲ್ಲಾಳರವರು ಬಹುವ್ಯಯ ಮುಟ್ಟಿಸಿ ಜೀರ್ಣೋದ್ಧಾರಮಾಡಿಸಿರುವರಷ್ಟೆ. ಪ್ರತಿಷ್ಠಾಪೂರ್ವಕ ಪ ಚಕಲ್ಯಾಣ ಪೂಜಾಮಹೋತ್ಸವಗಳು ಇದೇ ತಾ ೧ ೩–೩೩ನೇ ಬುಧವಾರ ಸೂರ್ಯೋದಯಕ್ಕೆ ಆರಂಭವಾಗಿ ತಾ ೧೯–೩–೩೩ನೇ ರವಿವಾರದ ದಿನದ ವಿಜೃಂಭಣೆಯಿಂದ ಶಾಸ್ತ್ರೋಕ್ತವಿಧಿಯಲ್ಲಿ ಜರಗಲಿದೆ ಈ ಮಹೋತ್ಸವಗಳಿಗೆ ದಯಮಾಡಿಸುವ ಪರವೂರ ಜೈನ ಗೃಹಸ್ಥರು ಮುಂಚಿತವಾಗಿ ಶ್ರೀ 'ವಕೀಲ ಶ್ರೀ ಎಸ್ ನಾಗರಾಜಯ್ಯ ಬಿ ಎ ಬಿ ಎಲ ಕರಂಗಲಪಾಡಿ, ಕೊಡಿಯಾಲ್ ಬೈಲ'' ಇವರಿಗೆ ಬರೆದರೆ ಅವರಿಗೆ ಉಳಕೊಳ್ಳುವ ವ್ಯವಸ್ಥೆಗಳನ್ನು ಮಾಡಲಾದೀತೆಂದು ಶ್ರೀ ರಘುಚಂದ್ರ ಬಲ್ಲಾಳರು ತಿಳಿಸುತ್ತಾರೆ

ಕಳೆದ ತಾ ೫ನೇ ಆದಿತ್ಯವಾರ ಇಲ್ಲಿನ ...ತ್ರಮಂಡಲಿ'ಯ ಆಶ್ರಯದಲ್ಲಿ ವಿದ್ಯಾರ್ಥಿಗಳ ಸಂಬಂಧವಾದ ಕನ್ನಡ ಭಾಷಣ ಸ್ಪರ್ಧೆ ಸುಮಾರು ೪ ಗಂಟೆಗಳ ಕಾಲ ನಡೆಯಿತು ಮಂಗಳೂರಿನ ವಿದ್ಯಾರ್ಥಿಗಳಲ್ಲದೆ, ಜಿಲ್ಲೆಯ ಬಂಟ್ವಾಳವೇ ಮೊದಲಾದ ಇತರ ಕಡೆಗಳಿಂದಲೂ ವಿದ್ಯಾರ್ಥಿಗಳು ಬಂದಿದ್ದರು ರಾಜಗೋಪಾಲ ಉಳ್ಳಾಲ ವ ಂಗೇಶರಾವ್ ಎಸ್ ಮುಕುಂದ ರಾವ್ ಮತ್ತು ಜಿ ಆರ್ ಶೆಣೈ ಇವರು ನ್ಯಾಯಾಧೀಶರಾಗಿದ್ದರು ಸುಮಾರು ೨೭ ಮಂದಿ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗ ವಹಿಸಿದ್ದರು ಸ್ಪರ್ಧೆಯ ವಿಷಯಗಳೆರಡು ಜಾತಿಭೇದ ಬೇಕೋ, ಬೇಡವೋ?" 'ಪಾಶ್ಚಾತ್ಯ ಸಂಸ್ಕೃತಿಯಿಂದ ಗುಣ–ದೋಷ ಈ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನವು ಬಂಟ್ವಾಳದ ಟೆಂಪಲ್ ಸೆಕೆಂಡರಿ ಹೈಸ್ಕೂಲಿನ ಫೋರ್ತ್ ಫಾರ್ಮಿನ ವಿದ್ಯಾರ್ಥಿಯಾದ ಪಿ. ಪೌಲ್ ಫ್ರಾನ್ಸಿಸ್ ಪ್ರೇಗ್ಸ್ ಎಂಬವನಿಗೂ ಎರಡನೆಯದು ಸ್ಯಾಂಟ್ ಆ ಕಾಲೇಜಿನ ಬಿ. ಎ ಕ್ಲಾಸಿನ ಶ್ರೀಯುತ ಶರ್ಮ ಎಂಬವನಿಗೂ ದೊರಕಿತು

ಚಿಕ್ಕಮಗಳೂರಿನಲ್ಲಿ ಜರಗಿದ ಅಖಿಲಭಾರತ ವಸ್ತು ಪ್ರದರ್ಶನದಲ್ಲಿ ಮಂಗಳೂರಿನ "ದಿ ಮಂಗಳೂರು ಇಂಡಸ್ಟ್ರಿಯಲ್ ಟೈಲೆಟ್ ವರ್ಕ್ಸ್" ಇವರ ಸುಪ್ರಸಿದ್ಧ ಮಂಗಳೂರ ನಶ್ಯಕ್ಕೆ ಸುವರ್ಣಪದಕವೂ ರಾ ಎ. ಎಸ್ ಕಾಮತರ ಆರೋಗ್ಯ ಸೋಪಿನ ಇದಕ್ಕೆ ಬೆಳ್ಳಿಯ ಕಪ್ ಕೂಡಾ ಸಿಕ್ಕಿರುತ್ತದೆ

**ಶ್ರೀ ಕೃಷ್ಣಾ ಸಿನೆಮಾ ಟಾಕೀ ಮಂದಿರದಲ್ಲಿ** ನಡೆಯುತ್ತಿರುವ ಭಸ್ಮಾಸುರ ಮೋಹಿನಿ ಎಂಬ ಚಿತ್ರವು ಶುಕ್ರವಾರ ದಿನದ ಮೋಳೆಗೆ ನಡೆದು ಶನಿವಾರದಿಂದ ಟೋಬ ಸ್ಟೀಲಿನಿಂದ ಅಭಿನಯಿಸಲ್ಪಟ್ಟ 'ದಿ ರೈಡಿಂಗ್ ಫೂಲ್' ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು ಆನಂತರ ಮದನ್ ಕಂಪೆನಿಯವರ ಇಡೀ ಹಿಂದೂಸ್ಥಾನವನ್ನೇ ಆನಂದ ಸಾಗರದಲ್ಲಿ ಮುಳುಗಿಸುವ ಶಿರಿನ್ ಫರಾದ್ ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು ನವರಸಗಳಿಂದ ಕಂಗೊಳಿಸುತ್ತಿರುವ ಚಿತ್ರವಾಗಿದೆ ಕಜ್ಜನ್ ಮತ್ತು ನಿಸ್ಸಾರ್ ಸಿನೆಮ ಮಣಿಗಳು

ಮೈಲಿಗೆ ರೋಗವು ಕಾಸರಗೋಡಿನ ಸೀಟೀಶ್ವರ ಜವಸ್ವಾಡ್ ಗಳಲ್ಲಿ ಬಹಳವಾಗಿದೆ ಉತ್ತರ ಕನ್ನಡದಿಂದ ಶಿರೂರು ಬಡಕೆರೆ ಮರವಂತೆ ಮತ್ತು ನಕ್ಕಾಡಿಗಳಿಗೆ ಈ ರೋಗವು ಬೀಸಿದಂತಿದೆ ಎಲ್ಲೂರು ಬಪ್ಪನಾಡು ಉಡುಪಿಯ ಕಚ್ಚೂರಿನಲ್ಲಿಯೂ ಈ ರೋಗವಿದೆ. ಮಂಗಳೂರಿನಲ್ಲಿಯೂ ಇದೆ ಈ ಜಾಡ್ಯವಿರುವ ಸ್ಥಳಗಳಿಗೆ ಜನರು ಹೋಗದಿರುವುದು ಉತ್ತಮ ಎಲ್ಲರೂ ದಾಕು ಹಾಕಿಸಿಕೊಳ್ಳಬೇಕೆಂದು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರ ಸಲಹೆ ಇದೆ

ಇದೇ ತಾ ೧೭ನೇ ಬುಧವಾರ ಬೆಳಿಗೆ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಶ್ರೀ ಶಿವರಾತ್ರಿ ಸಂಬಂಧವಾದ ಧ್ವಜಾರೋಹಣವಾಗಿ ಏಳು ದಿನಗಳ ಪೂಜೆ, ಉತ್ಸವಾದಿಗಳ ನಂತರ ತಾ ೨೩ನೇ ದಿನಕ ಅವಭೃತ ಸ್ನಾನವಾಗಲಿದೆ ಈ ಉತ್ಸವದಲ್ಲಿ ಎಲ್ಲರೂ ನೆರವಾಗಿ ಇದನ್ನು ಚಂದಗಾಣಿಸಿ ಕೊಡಬೇಕಾಗಿ ಸಂಬಂಧಪಟ್ಟವರ ಆರಿಕೆ ಇದೆ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮದಲ್ಲಿರುವ ಕರ್ನಲ್ ಮತ್ತು ಮೇಜರ್ ಭಾಸುರವರರೂ ೨೭೫ ಪೌಲ್ಯದ ಇಂಡಿಯನ್ ಪ್ಲೆಂಟ್ಸ್ ಪುಸ್ತಕದ ಅನುಭವಶಾಲಿಯುವರೇ ವೈದ್ಯರು ಬಂದು ಅಶ್ರಮದಲ್ಲಿಯೇ ಓದಿ ಕುಳಿತುಕೊಳ್ಳಲು ಪ್ರತ್ಯೇಕ ಸ್ಥಳದ ಏರ್ಪಾಡು ಮಾಡಿರುತ್ತಾರೆಂದು ಇದರ ಅಧಿಕಾರಿಗಳು ತಿಳಿಸುತ್ತಾರೆ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೮೫೫ ಮಾ ಬ ೬ಯು ಗುರುವಾರ (೧೬–೨–೩೪) ಲಾಗಾಯ್ತು ಶ್ರೀರಾಮ ಸಪ್ತಾಹವನ್ನು ನಡೆಸಬೇಕೆಂದು ಶ್ರೀ ಸಮರ್ಥನಾರಾಯಣ ಮಹಾರಾಜರವರ ಆಜ್ಞೆ ಪ್ರಕಾರ ಮಂಗಳೂರು ಕದ್ರಿ ಶ್ರೀ ದುರ್ಗಾ ಪರಮೇಶ್ವರಿ ಪ್ರೋಪ್ರೈಟರ್ ಶ್ಯಾಂಭಟ್ಟರವರ ಮನೆಯಲ್ಲಿ ನಡೆಯಲಿರುವುದರಿಂದ ಆಸ್ತಿಕರಾದ ಮಹಾಜನರು ಶ್ರೀ ರಾಮಸೇವೆಗೆ ಬಂದು ತನುಮನಧನಗಳಿಂದ ಸೇವೆಮಾಡಿ ಶ್ರೀರಾಮ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಗಳಿಂದ ಕೃಷ್ಣಭಟ್ಟ ಮುಳಿಯ ಶ್ಯಾಂಭಟ್ಟ ಮುಳಿಯರ ಅರಿಕೆಯಿದೆ

**ಉಡುಪಿ** — ಇಲ್ಲಿಯ ಅಸ್ಪೃಶ್ಯತಾ ನಿವಾರಣೇ ಸಭೆಯನ್ನು ಈ ಮೊದಲೇ ಜಿಲ್ಲಾ ಹರಿಜನಸೇವಾ ಸಂಘಕ್ಕೆ ಸೇರಿಸಲಾಗಿದೆಯಲ್ಲದೆ ತಾ ೨೮ ೧–೩೪ರಲ್ಲಿ ಜರಗಿದ ಸಭೆಯೊಂದರಲ್ಲಿ ಹೆಸರನ್ನು ಉಡುಪಿ ತಾಲೂಕು ಹರಿಜನ ಸೇವಾ ಸಂಘ ಎಂಬದಾಗಿ ಮಾರ್ಪಡಿಸಲಾಗಿದೆ ಆ ಬಗ್ಗೆ ಒಂದು ಕಮಿಟಿಯೂ ಏರ್ಪಟ್ಟಿದೆ ಅಧ್ಯಕ್ಷರಾಗಿ ಶ್ರೀ ಎನ್ ಸುಬ್ಬರಾವ್, ಎಂ ಎ ಬಿ ಎಲ್ ಜೊತೆ ಕಾರ್ಯದರ್ಶಿಗಳಾಗಿ ಶ್ರೀಗಳಾದ ಎಂ ವಿಟ್ಠಲ ಕಾಮತ, ಜಿ ಎ ಬಿ ಎಲ್ ಮತ್ತು ಬಿ ಎನ್ ಮಾಧವರಾವ್ ಎಂ ಎ ಬಿ ಎಲ್ ಕೋಶಾಧಿಕಾರಿಗಳಾಗಿ ಶ್ರೀ ಕೊಬ್ಬರಿ ಪಾಂಡುರಂಗ ಶೆಣೈ ಸಾಮಾನ್ಯ ಸದಸ್ಯರಾಗಿ ಶ್ರೀಗಳಾದ ಎಸ್ ಯು ಪಣಿಯಾಡಿ ಕೊರಡಿಕಲ್ ಶ್ರೀನಿವಾಸ ರಾವ ಇವರು ಆರಿಸಲ್ಪಟ್ಟರುವರು

ವಾಡಿಕೆಯಾಗಿ ನಡೆದುಕೊಂಡು ಬರುವ ಮಧ್ವನವಮಿ ಯು ತಾ ೪ರಲ್ಲಿ ಯಥಾಸಾಂಗವಾಗಿ ಜರಗಿತು

**ಉದ್ಯಾವರ** — ಇಲ್ಲಿಯ ನವ ತರುಣೋತ್ಸಾಹಿಗಳು ಕೆಲವರು ಬೇಡ್‍ಮಿಂಟನ್ ಟೂರ್ನಮೆಂಟೊಂದನ್ನು ಜರಗಿಸಬೇಕೆಂದಿರುವರು ಸ್ಪರ್ಧಿಸಲಿಚ್ಛಿಸುವ ಟೀಮುಗಳವರು ಡಬ್ಬಲ್ಸಿಗೆ ರೂ ೧ರಂತೆಯೂ ಸಿಂಗಲ್ಸಿಗೆ ರೂ ೦–೮ ರಂತೆಯೂ ಇದೇ ತಾ ೨೦ರೊಳಗೆ ಕಳುಹಿಸಿಕೊಡಬೇಕು. ಸ್ಪರ್ಧೆಯು ಬರುವ ಮಾರ್ಚ ತಾ ೧ಕ್ಕೆ ತಪ್ಪದೆ ಪ್ರಾರಂಭಿಸುವುದು ಕೊನೆತನಕ ಗೆದ್ದು ಬರುವ ಆಟ್ಗಾರರಿಗೆ ಡಬ್ಬಲ್ಸಿಗೆ ೨, ಸಿಂಗಲ್ಸಿಗೆ ೫ ಪದಕಗಳನ್ನು ಬಹುಮಾನವಾಗಿ ಕೊಡಲಾಗುವುದು ಮುಂದಾಗಿ ತಿಳಿಸಿದ್ದಲ್ಲಿ ಊಟೋಪಚಾರದ ಕುರಿತು ಗಮನವಿಡಲಾಗುವುದು ಇಡೀ ಜಿಲ್ಲೆಯ, ಮುಖ್ಯವಾಗಿ ತಾಲೂಕಿನ ಎಲ್ಲಾ ಟೀಮುಗಳ ಆಟಗಾರರು ಇದರಲ್ಲಿ ಭಾಗವಹಿಸಿ, ತಮ್ಮನ್ನು ಪ್ರೋತ್ಸಾಹಿಸಿ ಸ್ಪರ್ಧೆಯನ್ನು ಜಯಶೀಲಗೊಳಿಸಬೇಕಾಗಿ ಟೂರ್ನಮೆಂಟ್ ಕಮಿಟಿಯ ಜೊತೆಕಾರ್ಯದರ್ಶಿಗಳು ಸೂಚಿಸುತ್ತಾರೆ

ಇಲ್ಲಿಯ ಸಂಪಿಗೆಕಟ್ಟೆ ದೇವಸ್ಥಾನದ ಕಳ್ಳಾಟ (ಕಲ್ಲಾಡ?) ಎಂಬ ವಿನೋದಕರ ಉತ್ಸವವು ಯಥಾಸಾಂಗವಾಗಿ ಇದೇ ಮುಣ್ಣವಂಗೆ ಜರಗಿದೆ'

**ಕಾಸರಗೋಡು** — ಇಲ್ಲಿಯ ಸ್ಟೇಶನರಿ ಸಬ ಮ ಜಿಸ್ಟ್ರೇಟ ಕೋರ್ಟಿನಲ್ಲಿ ಇಂದು (೧–೨ ೩೪) ಕಾಡಿನ ಸತ್ಯಾಗ್ರಹ ಚಳವಳದ ಸಂಬಂಧವಾದ ಮುಂದರಿಸಿಟ್ಟ ಮೂರು ಮೊಕದ್ದಮೆಗಳು ವಿಚಾರಣೆಗೆ ತೆಗೆಲ್ಪಟ್ಟವು ನಂತರ ರಾಮನ್ ನಾಯರರು ಕಾಸರಗೋಡಿನಿಂದ ಬಸ್ಸಿನಲ್ಲಿ ಹೋಗುವಾಗ ಸದರಿ ಬಸ್ಸಿನಲ್ಲಿರುವ ತಮ್ಮಪ್ಪ ಕಣ್ಣನ್ ನಾಯರಿಗೆ ಕೋಂಗ್ರೆಸ್ ಕರಪತ್ರಗಳನ್ನು ಕೊಡುವರೆಂದು ಅವರ ಮೇಲಿರುವ ಮೊಕದ್ದಮೆಯನ್ನು ವಿಚಾರಿಸಿ ಇದೇ ಬರುವ ೧೩ಕ್ಕೆ ಮುಂದರಿಸಿರುತ್ತದೆ. ಸದರಿ ರಾಮನಾಯರರು ಸ್ವಯಂ ಸೇವಕರನು ಜಂಗ್ಲಿ ಕಾನೂನನ್ನು ಭಂಗ ಪಡಿಸುವಂತೆ ಪ್ರೇರೇಪಿಸುತ್ತಾರೆಂದು ಇವರ ಮೇಲೆ ಹೂಡಿರುವ ಚಾರ್ಜನ್ನು ನಾರಂತಟ್ಟೆ ಕೃಷ್ಣನ್ ನಾಯರ್ ಮತ್ತು ಪ್ರಸ್ತುತ ಜೈಲಿನಲ್ಲಿರುವ ನಾರಾಯಣ ನಾಯರ್ ಎಂಬವರು ಕಾಡಿನ ಕಾನೂನನ್ನು ಉಲ್ಲಂಘಿಸಿದರೆಂದು ಅವರ ಮೇಲಿರುವ ಮೊಕದ್ದಮೆಯನ್ನು ತಾ ೨೭ಕ್ಕೆ ಮುಂದರಿಸಿಟ್ಟಿರುತ್ತದೆ.

ಕೊಳ್ಯೂರು ಶ್ರೀ ಶಂಕರ ನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಸಭೆಯವರು ಇದೇ ಕಳೆದ ಸೋಮವಾರ 'ನಳ ದಮಯಂತಿ ಚರಿತ್ರೆ ಎಂಬ ಕಥೆಯನ್ನು ಆಡಿದರು ಶ್ರೀ ಬಲಿಪ ನಾರಾಯಣ ಭಾಗವತರೊಡಗೂಡುವಿಕೆಯಿಂದಲೂ, ಗಣಪತಿ ಭಟ್ಟ, ಗುಂಡ್ಯಾಯರೇ ಮೊದಲಾದ ನಟ ವರ್ಗದಿಂದಲೂ ಥಿಯೇಟರು ಪ್ರೇಕ್ಷಕರಿಂದ ಕಿಕ್ಕಿರಿದು ಹೋಗಿತ್ತು

**ಫರಂಗಿಪೇಟೆ** — ಯಕ್ಷಗಾನ ಸಭಾ ಮತ್ತು ಯಕ್ಷಗಾನ ನಾಟಕಗಳ ಮಹಾಸಭೆಯು ಫರಂಗಿಪೇಟೆ ಶ್ರೀರಾಮ ಪಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ತಾ ೧೩ ೨–೩೪ನೇ ಆದಿತ್ಯವಾರ ರಾತ್ರಿ ೯ಗಂಟೆ ಆಕ್ಕೆ ಶ್ರೀಯುತ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಶ್ರೀಯುತ ಮೈಂದಪ್ಪರೈ ಭಾಗವತರ ಹಾಡುವಿಕೆಯಿಂದಲೂ ಶ್ರೀಯುತ ಪೊಳಲಿ ಕೃಷ್ಣಭಟ್ಟರ ಮೃದಂಗವಾದನದಿಂದಲೂ ಮತ್ತು ಇನ್ನಿತರರ ಸಹಾಯದಿಂದಲೂ ಜರಗಲಿದೆ

**ಅಜೆಕಾರು:** — ಶೃಂಗೇರಿಯ ಶ್ರೀ ರಾಮಕೃಷ್ಣ ಶಾಸ್ತ್ರಿಗಳವರು ಸ್ಥಳೀಯ ಶಾಲಾ ಸಭಾ ಸದನದಲ್ಲಿ ಸೀತಾಕಲ್ಯಾಣದ ವಿಷಯ ಹರಿಕಥೆಯನ್ನು ಮನೋರಂಜಕವಾಗಿ ಮಾಡಿ ಸರ್ವರ ಮೆಚ್ಚಿಗೆಗೆ ಪಾತ್ರರಾಗಿರುವರು ಸದ್ಯದಲ್ಲಿಯೇ ಇನ್ನೊಂದು ಹರಿಕಥಾ ಕಾಲಕ್ಷೇಪವು ಜರಗಲಿರುವುದು

ಮೈಸೂರು ಪ್ರಾಂತ್ಯದ ಓಬ್ಬಾಲು ಇದೇ ಫೆಬ್ರವರಿ ತಾ ೧೧ರಿಂದ ಸೋಮೇಶ್ವರ ಅಜೆಕಾರಿಗೆ ೧ ಕಾರ್ಡಕ್ಕೆ ಮೋಟರಿನಲ್ಲಿ ಕೊಂಡು ಹೋಗುವ ನೂತನ ಏರ್ಪಾಡಾಗಿರುವುದು ಅತೀ ಸಂತೋಷ ಮುಖ್ಯ ಪರಂಗದಲ್ಲಿ ಬೇಕಾಗುವ ಅಂಚೆಕಟ್ಟೆಯ ಅಭಾವವು ಈ ಸಲ ನಿವಾರಣೆಯಾಗುವುದಾಗಿ ತುಂಬಾ ಹರ್ಷ ಇದೆ

**ಸುರತ್ಕಲ್** — ಇದೇ ಕಳೆದ ಜನವರಿ ತಾ ೨೬ನೆಯ ದಿನ ಮೂಳ್ಕಿ ಮೇಳದವರು ಇಲ್ಲಿಯ ಸಂತೆಕಟ್ಟೆ ಬಳಿಯ ವಿಶಾಲವಾದ ಮೈದಾನದಲ್ಲಿ ದ್ರೌಪದೀ ವಸ್ತ್ರಾಪಹರಣ ಎಂಬ ಕಥೆಯನ್ನು ಆಡಿ ತೋರಿಸಿದರು ಪ್ರೇಕ್ಷಕ ವರ್ಗವು ಮೂರು ಸಾವಿರಕ್ಕೆ ಸಮೀಪಿಸುವಷ್ಟು ನೆರೆದಿದ್ದಿತು ಪ್ರಸಿದ್ಧ ವೇಷಧಾರಿ ಕುಂಬಳೆ ಗುಂಡನವರ ಕೌರವನ ಭೂಮಿಕೆಯನ್ನು ಗಣಪತಿಭಟ್ಟರು ದ್ರೌಪದಿಯ ಭೂಮಿಕೆಯನ್ನು ವಹಿಸಿಕೊಂಡು ಜನಮನೋರಂಜನಗೊಳಿಸಿದರು ಶ್ರೀ ಜೋಯಿಸ ರಾಮಕೃಷ್ಣ ಭಾಗವತರ ಹಾಡುಗಾರಿಕೆಯಿಂದಂತೂ ಜನರ ಚಿತ್ತಾಕರ್ಷಣವಾಗಿ ಮಹಾ ಸಭೆಯ ವೇಗೆಗ್ಗೆವರೆಗೂ ಕದಲದೆ ನಿಶ್ಶಬ್ದವಾಗಿದ್ದು ಸಂತೋಷ ರಾಶಿಯಲ್ಲಿ ಮುಳುಗಿದ್ದಿತು

ಜನವರಿ ತಾ ೩೦ನೆಯ ದಿನ ಹೊಸ ಬೆಟ್ಟುವಿನಲ್ಲಿ ಹಟ್ಟಿ ಕೋಣಗಳ ಓಟವು ನಡೆಯಲ್ಪಟ್ಟಿತು ಈ ಸ್ಪರ್ಧೆಯಲ್ಲಿ ಮಿ ಆದಿಮಾರು ಪೂವಯ್ಯ ಶೆಟ್ಟರ ಕೋಣವು ೧ನೆಯ ತರಗತಿಯೂ ಮಿ ಪಾವಂಜೆ ಮುಸ (ವೆಂಕಪ್ಪ) ಪೂಜಾರಿಯವರ ಕೋಣವು ೨ನೆಯ ತರಗತಿಯಾಗಿಯೂ ಜಯಪ್ರದವಾಗಿರುವುದು

ತಾ ೩೧ನೆಯ ದಿನ ಇಲ್ಲಿಯ ವೀರಭದ್ರದೇವಾಲಯದಲ್ಲಿ ಅದಾಟೋತ್ಸವ ವವು ಬಹು ಸಂಭ್ರಮದಿಂದ ಜರಗಿತು


## ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

**ಅಖಿಲ ಕರ್ನಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ನಾಟಕದ ಗೌರವಕ್ಕೂ ಕರ್ನಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ**

ನಮ್ಮಲ್ಲಿ ಬ್ರಿಟಿಷ್ ಫಾರ್ಮ ಕೋಪಿಯೂ ಬ್ರಿಟಿಷ್ ಫಾರ್ಮ ಸ್ಯೂಟಿಕಲ್ ಕೋಡೆಕ್ಸ್ ದ ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ಯೊಲೆಟ್ ದ್ರವ್ಯಗಳೂ ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುವುವು

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಗಳನ್ನು ತಯಾರಿಸುವೆವು ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ವಿಶ್ರಮುಖ್ಯ ಔಷಧಗಳು

ಚ್ಯವನಪ್ರಾಶ ಲೇಹ ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ ೧ ಪೌಂಡು ಬಾಟ್ಲಿ ರೂ ೩ ೧೦ ಔನ್ಸು ಬಾಟ್ಲಿ ರೂ ೨ ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ದ ಮೆದುಳಿಗೆ ಶಾಂತತೆಯನ್ನೀಯುವ ಔಷಧ ೧ ಪೌಂಡು ಬಾಟ್ಲಿಗೆ ರೂ 1–8

ಅಶ್ವಗಂಧಾರಿಷ್ಟ, ಅತ್ಯುತ್ತಮವಾದ ನರಗಳ ಟಾನಿಕ್ಕೂ, ಸಾಧಾರಣ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ 3, ೮ ಔನ್ಸು ಬಾಟ್ಲಿಗೆ ರೂ 1–10– ಪ್ರಸೂತಿ ಸಂಜೀವನ ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ ೧೦ ಔನ್ಸು ಬಾಟ್ಲಿಗೆ ರೂ 1 8–0 ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ಕೂಡಲೇ ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3–6–0, ೮ ಔನ್ಸು ಬಾಟ್ಲಿಗೆ ರೂ 1–12–0

ಬ್ರಾಹ್ಮಿ ತೈಲ. ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಟ್ರೆಸ್ ಟಾನಿಕ್ಕು ೮ ಔನ್ಸು ಬಾಟ್ಲಿಗೆ ಅಣೆ ೧೪ ಹಿಮಸಾಗರ ತೈಲ ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ ೮ ಔನ್ಸು ಬಾಟ್ಲಿಗೆ ರೂ –೨– , ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ ೮ ಔನ್ಸು ಬಾಟ್ಲಿಗೆ ರೂ –6–1 ಕ್ಷೀರಬಲಾ ಪಕ್ವ ವಾತ ಅರ್ಧಾಂಗ ವಾತ ಮುಂತಾದ ವಾತ ಕಾಯಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ ೩ನೇಯ ಆವರ್ತನೆ ೧ ಔನ್ಸಿಗೆ ರೂ ೧೪ನೇಯ ಆವರ್ತನೆ ೧ ಔನ್ಸಿಗೆ ರೂ ,೨ ೨೧ನೇ ಆವರ್ತನೆ ೧ ಔನ್ಸಿಗೆ ರೂ –, ೬೧ನೇಯ ಆವರ್ತನೆ ೧ ಔನ್ಸಿಗೆ ರೂ ೩ ೫೧ನೇ ಆವರ್ತನೆ ರೂ 4 5 ೧ ೧೦೧ನೇ ಆವರ್ತನೆ ರೂ ೮ ಧನ್ವಂತರಿ ತೈಲ ರಕ್ತವಾತ ಆಮವಾತ ಸರ್ವಾಂಗವಾತವ ಎಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ವ ಮೈಗೆ ಹಚ್ಚುವ ದಿವ್ಯೌಷಧ ೭ನೇಯ ಆವರ್ತನೆ ೧ ಔನ್ಸಿಗೆ ರೂ , ೧೪ನೇ ಆವರ್ತನೆ ೧ ಔನ್ಸಿಗೆ ರೂ – ೭ ೨೧ ನೇ ಆವರ್ತನೆ ೧ ಔನ್ಸಿಗೆ ರೂ 2 8–

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಆಸವ ಅರಿಷ್ಟಗಳೂ ಲೇಹಗಳೂ ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ ಮಹಾಮದನಕಾಮೇಶ್ವರ ಲೇಹ, ಸುಕುಮಾರಾಘೃತ, ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ನಾಟಕ ಸ್ನೋ, ಬ್ರಿಲ್ಲಿಂಟೈನ್ ರೋಜ್ ಪೊಮೇಡ್ ಆರೋರಾ ಕ್ರೀಮ್, ಬ್ಯೂಟಿಕ್ರೀಮ್ ಕ್ರಿಮೊರ ಆವೋಸಿಸ್ (Limes & Glycerine) ವಗೈರೆ ಟ್ಯೊಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು, ಹಚ್ಚ, ರಕ್ತ ನೀಲ, ವರ್ಣಗಳ, ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಯಾಗಿಸುವ ಸಾಬೂನುಗಳೂ ತಯಾರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡ್ಯಾರೆಕ್ಟರರಿಗೆ ಬರೆದುಕೊಳ್ಳಿರಿ.

**Managing Director:—Venkatraya Annappa Baliga**

# "ಕಾಂಗ್ರೆಸ್ಸನ್ನು ಸದೆಬಡೆದರೂ ಜೀವಂತವಿದೆ!"

## "ಲಂಕಾಶಯರಿನೊಡನೆ ವ್ಯಾಪಾರ ಮಾಡಿರಿ! ಇಲ್ಲದಿದ್ದರೆ ನಿಮ್ಮನ್ನು ಇನ್ನೂ ದಣಿಸುವೆವು!"

**Steadily and surely, the march to Federation proceeds** (LORD WILLINGDON)

ತಾರೀಕು ೧ನೇ ದಿನ ನ್ಯೂ ಡಿಲ್ಲಿಯ ಎಸೆಂಬ್ಲಿ ಅಧಿವೇಶನವನ್ನು ಪ್ರಾರಂಭಿಸುತ್ತಾ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಟನ್ನರು ತನ್ನ ರಾಜ್ಯಭಾರ ಸ್ಥಿತಿಗಳ ಸಿಂಹಾವಲೋಕನವನ್ನು ಮಾಡಿದರು.

### "ಶುಭ! ಶುಭ!"

ಮೊದಲಾಗಿ ಅವರು ರಾಜ್ಯಭಾರ ಕಾರ್ಯದಲ್ಲಿ ತನ್ನೊಡನೆ ಸಹಕರಿಸಿ ಶಾಂತಿಸ್ಥಾಪನೆಯನ್ನುಂಟು ಮಾಡಿದ ಸಕಲ ಅಧಿಕಾರಿಗಳನ್ನು ಅಭಿನಂದಿಸಿದರು. ಆ ಮೇಲೆ ಪಶ್ಚಿಮೋತ್ತರ ಗಡಿ ಪ್ರಾಂತ್ಯದಲ್ಲಿನ ಜನತೆಯನ್ನು ಶ್ಲಾಘಿಸುತ್ತಾ ಅಲ್ಲಿಯವರನ್ನು ಶಾಂತಗೊಳಿಸಲು ತಾನು ಮಾಡಿದ ಯೋಜನೆಗಳೆಲ್ಲಾ ಅತ್ಯಂತ ಫಲಪ್ರದವಾಗಿವೆ ಎಂದರು. ದೇಶದ ರೈತಾದಿ ಜನರ ಸ್ಥಿತಿಗತಿಗಳು ತಾನು ಮೊದಲೊಮ್ಮೆ ಸೂಚಿಸಿದುದಕ್ಕಿಂತ ಉನ್ನತ ಸ್ಥಿತಿಗೆ ಮುಟ್ಟಿದೆಯೆಂದೂ ಜನರು ಈಗ ಸುಖ ಶಾಂತಿಗಳನ್ನು ಪಡೆಯುವ ಚಿಹ್ನೆಯು ಅಲ್ಲಲ್ಲಿ ತೋರುತ್ತಿದೆಯೆಂದೂ ಹೇಳಿದರು. ದವಸ ಧಾನ್ಯಗಳ ಬೆಲೆಯು ದಿನೇ ದಿನೇ ಏರುತ್ತಾ ಇರುವ ಶುಭ ಚಿಹ್ನೆಗಳಿವೆಯೆಂದೂ ವಿಷಮ ಆರ್ಥಿಕ ದುಃಸ್ಥಿತಿಯ ದವಡೆಯೊಳಗಿಂದ ಜನತೆಯು ಪಾರಾಯಿತೆಂದೂ ವೈಸರಾಯರು ಆಶಾವಾದವನ್ನೇ ತೋರ್ಪಡಿಸಿದರು.

### ಮಂಗಲ

ಬಾಹ್ಯ ಪ್ರಪಂಚದ ಪ್ರಗತಿಯನ್ನೂ ತನ್ನ ಕೈಕೆಳಗಿರುವ ಹಿಂದೂದೇಶದ ಪ್ರಗತಿಯನ್ನೂ ಸರಿದೂಗುತ್ತಾ, ವೈಸರಾಯರು ಹಿಂದೂದೇಶದ ಸ್ಥಿತಿಯು ಬಹು ಶ್ರೇಯಸ್ಕರವಾಗಿದೆ ಎಂದೇ ಹೇಳಿದರು. ದಕ್ಷಿಣಾಫ್ರಿಕದಲ್ಲಿ ನಿರುದ್ಯೋಗವಿರುವುದಾದರೂ ಬ್ರಿಟಿಷ ಏಜಂಟರು ಅಂತಹ ನಿರುದ್ಯೋಗ ನಿವಾರಣಾರ್ಥವಾಗಿ ಸದಾ ಅತ್ತ ಕಣ್ಣಿಡುತ್ತಿರುವರೆಂದೂ ವೈಸರಾಯರ ಅಭಯ. ಒಟ್ಟಾವಾ ಪರಿಷತ್ತಿನ ಹಿತ, ಅವರು ಹೇಳುತ್ತಾ, ಹಿಂದೂದೇಶವು ಸದ್ಯದ ಮಟ್ಟಿಗೆ ಒಟ್ಟಾವಾ ಒಪ್ಪಂದವನ್ನು ಶಿರಸಾ ವಹಿಸುವಂತಾದುದು ಶುಭ ಸಂಗತಿಯೆಂದರು.

### ಕಾಂಗ್ರೆಸ್ಸಿನ ಅನಾಹುತ

ವೈಸರಾಯರು ಮೆಲ್ಲನೆ ತನ್ನ ಕೈಯ ಲ್ಲಿದ್ದ ಪತ್ರವನ್ನು ಓದುತ್ತಾ ಕಾಂಗ್ರೆಸ್ಸಿನ ಅನಾಹುತಗಳನ್ನು ಬಣ್ಣಿಸಿದರು— ಕಾಯಿದೆಭಂಗ ಚಳವಳಿಗಾರರನ್ನು ಸದೆಬಡೆದಿದ್ದೇವೆ, ಆದರೂ ಅವರ ಸಂಸ್ಥೆಯು ಜೀವಂತವಿದೆ. ಎಷ್ಟರ ತನಕ ಶಾಸನೋಲ್ಲಂಘನಾ ಚಳವಳಿವು ಎದೆಗೂಟ್ಟು ಮುಂದರಿಯಲು ಸಿದ್ಧವಿದೆಯೋ, ಅಷ್ಟರ ವರೆಗೆ ಬಾಣರಾಜ್ಯವನ್ನು ಕೊನೆಗೊಳಿಸುವಷ್ಟು ಔದಾರ್ಯವನ್ನು ಸರಕಾರವು ಪ್ರದರ್ಶಿಸಲಾರದೆಂಬ ದೃಢ ನಿರ್ಧಾರವನ್ನು ಅವರು ಸಭಿಕರಿಗೆ ಮಾಡಿಕೊಟ್ಟರು. ಎರಡು ವರ್ಷಗಳಲ್ಲಿ ತಾನು ಹೊರಡಿಸಿದ ಓರ್ಡಿನೆನ್ಸುಗಳು ಸತ್ಪರಿಣಾಮಕಾರಿಯಾದುವೆಂದೂ, ಶಾಸನೋಲ್ಲಂಘನಕಾರರು ತಂತಮ್ಮ ದುರ್ಮಾರ್ಗ ಪ್ರವರ್ತನೆಯ ದುಷ್ಪರಿಣಾಮವನ್ನು ಕಂಡುಕೊಂಡು ಪ್ರಸ್ತುತದಲ್ಲಿ ಅವರ ಬೆಂಬಲವಾಗಿ ಅತೀ ಅಲ್ಪ ಜನಸಂಖ್ಯೆ ಇರುವುದೆಂದೂ ಅವರು ಅಭಿಪ್ರಾಯಪಟ್ಟರು. ಕಾಂಗ್ರೆಸ್ಸಿನ ಅನರ್ಥಕಾರೀ ಮಾರ್ಗಾನುಸರಣೆಯಿಂದಾಗಿ, ಅನೇಕರು ಬೇಸರಗೊಂಡು ಸರಕಾರಕ್ಕೆ ಬೆಂಬಲರಾಗಿರುವರೆಂದೂ ವೈಸರಾಯರು ಹೇಳಿದರು. ಕಾಂಗ್ರೆಸ್ಸನ್ನು ಸದೆಬಡೆಯಲು ನ್ಯಾಯ ವಿಧಾಯಕ ಸಭೆಯಲ್ಲಿ ಮಂಜೂರಾದ ನಿರಂತರ ಶಾಸನಗಳು ಆಗತ್ಯವಿರುವ ವೇಳೆಯ ಪರಿಯಂತ ಕಾನೂನಾಗಿ ಇರುವುವೆಂದೂ, ಅವುಗಳ ಉಪಯೋಗವು ಆಗತ್ಯವಿರುವುದಿಲ್ಲವಾದರೆ, ಅವುಗಳನ್ನು ರದ್ದುಗೊಳಿಸಲಾಗುತ್ತದೆಂದೂ ಆಶ್ವಾಸನೆಯಿತ್ತರು. ಈ ಶಾಸನಾವಳಿಗಳ ಪರಿಣಾಮದಿಂದಾಗಿ ಎಲ್ಲೆಲ್ಲಿ ಕಾಂಗ್ರೆಸ್ ಚಳವಳಿಗಾರರ ಹಾವಳಿಯಿತ್ತೋ ಅಲ್ಲಲ್ಲಿ ಈಗ ಶಾಂತಿಯುಂಟಾಗಿದೆಯೆಂದರು. ಬ್ರಿಟಿಷ ಸರಕಾರವು ಹಿಂದೀಯರಿಗೆ ಸುಧಾರಿತ ಸರಕಾರ ದಾನವನ್ನು ಮಾಡಲು ಕಂಕಣಬದ್ಧರಾಗಿರುವ ಈ ಶುಭದಿನಗಳಲ್ಲೂ ಕಾಂಗ್ರೆಸ್‌ವಾಲರು ತಮ್ಮ ನಾಶಕರ ವೃತ್ತಿಯಲ್ಲಿ ಮಗ್ನರಾಗಿರುವುದರಿಂದ ವೈಸರಾಯರು ಬೇಸರಗೊಂಡರು. ನವರಾಜ್ಯ ರಚನಾ ದಾನದ ಸಮಯದಲ್ಲೂ ಈ ಕಾಂಗ್ರೆಸ್ ಎದುರಾಳಿಗಳು ಕ್ಷೋಭೆಯನ್ನೆಬ್ಬಿಸದಂತೆ ಇನ್ನೂ ಕೆಲವು ಸಮಯದ ವರೆಗೆ ಈ ಓರ್ಡಿನೆನ್ಸ್ ರಾಜ್ಯವನ್ನು ಮುಷ್ಟಿಯೊಳಗೆ ಹಿಡಿದುಕೊಳ್ಳಲಾಗುವುದೆಂದು ವೈಸರಾಯರ ಮಾತಾಯಿತು.

### ಫೆಡರೇಶನ್.

ಹಿಂದೂದೇಶಕ್ಕೆ ಅತೀ ತ್ವರೆಯಾಗಿ ಫೆಡರೇಶನನ್ನು ಕೊಡುವ ಇರಾದೆಯಿಂದ ಖಂಡಿತವಾದ, ಯೋಗ್ಯವಾದ ಏರ್ಪಾಡುಗಳಾಗುತ್ತಿವೆಯಂತೆ.

### ಬಂಗಾಳದ ಕ್ರಾಂತಿ

ಬಂಗಾಳದ ಕ್ರಾಂತಿಯ ವಿಷಯಕವಾಗಿ ವೈಸರಾಯರು ನುಡಿಯುತ್ತಾ ಇತ್ತೀಚಿಗೆ ಪಹರ್ತಾಲಿಯ ರೈಲ್ವೇ ಇನ್ಸ್‌ಟಿಟ್ಯೂಟ್ ಮತ್ತು ಕಲ್ಕತ್ತದ "ಸ್ಟೇಟ್ಸ್ ಮೇನ್" ಪತ್ರಿಕೆಯ ಸಂಪಾದಕರಾದ ಸರ್ ವಾಟ್ಸನರ ಮೇಲೆ ಕೈಮಾಡಿದುದನ್ನು ವೈಸರಾಯರು ಚಿತ್ರಕ್ಕೆ ತಂದು ಸಭಿಕರ ಮನಃ ಕರಗಿಸಿದರು. ಕ್ರಾಂತಿಕಾರ ಚಳವಳಿವನ್ನು ಡಂಗುಬಡೆಯುವುದಕ್ಕಾಗಿ ಬಂಗಾಳ ಸರಕಾರಕ್ಕೆ ತಾನು ಸಂಪೂರ್ಣ ಜವಾಬ್ದಾರಿಕೆಯನ್ನು ಕೊಟ್ಟುದರಿಂದ ಇಂದು ಅಲ್ಲೂ ಹೆಚ್ಚಿನ ಶಾಂತಿಯು ಸ್ಥಾಪಿತವಾಗಿದೆಯೆಂದು ಲೋರ್ಡ್ ವಿಲ್ಲಿಂಗ್ಡನ್ನರೆಂದರು.

### ರೌಂಡ್‌ಟೇಬಲ್ ಪರಿಷತ್ತು

ಕಳೆದ ತೃತೀಯ ರೌಂಡ್‌ಟೇಬಲ್ ಪರಿಷತ್ತಿನ ಕಾರ್ಯಕಲಾಪಗಳ ಪರಿಣಾಮವೇನೆಂದು ವೈಸರಾಯರು ಸಭಿಕರಿಗೆ ಮನದಟ್ಟು ಮಾಡುತ್ತಾ "ಲಂಡನಿನಲ್ಲಿ ನಡೆದ ವ್ಯವಹಾರಗಳಿಂದಾಗಿ ಹಿಂದೂದೇಶಕ್ಕೆ ಬೇಗನೆ ಸ್ವತಂತ್ರರಾಜ್ಯ ದಾನವಾಗಲಿದೆ, ಬ್ರಿಟಿಷ ಸರಕಾರವು ತನ್ನ ಶ್ವೇತಪತ್ರ (White paper) ವನ್ನು ಪ್ರಕಟಿಸಿದೊಡನೆ ಅದರ ದಾನವು ಪಾರ್ಲಿಮೆಂಟಿನವರ ತಿಳಿಹರಿಸಿನ ನಂತರ ಕಾನೂನಾಗಿ ಹಿಂದೀಯರು ಸುಖ ಸಾಮ್ರಾಜ್ಯದಲ್ಲಿ ಓಲಾಡಲಿದೆಯೆಂದರು.

### ಇಷ್ಟು ಹೇಳಿದರೂ

ವೈಸರಾಯರು ಗಾಂಧಿಜೀಯವರ ಅಥವಾ ಕಾಂಗ್ರೆಸ್‌ವಾಲರ ಬಿಡುಗಡೆಯ ಕುರಿತು ಸುದ್ದಿಯೆತ್ತಲಿಲ್ಲ. ನಿಕ್ಕದಂತೆ ತನ್ನ ಒಂದೇ 'ಸರ್ವಸ್ಯ ಶುಭ ಮಂಗಲಂ' ಎಂಬ ಪಲ್ಲವಿಯನ್ನೇ ಹಾಡಿದರು. ತನ್ನ ದಮನನೀತಿಯು ಯೋಗ್ಯವೆಂದೇ ಅವರು ಹೇಳಿದರು!

ನುಡಿಗಳ ನ್ಯೂನತೆಗೆ ಹಾನಿಯುಂಟೆಂದು ನೆನಸಿ ವೈಸರಾಯರು ತನ್ನ ಭಾಷಣವನ್ನು ಬರೆದು ತಂದು ಓದಿದರು. ಅದು ಬಹಳ ಜಾಗರೂಕತೆಯಿಂದ ಲಿಖಿತವಾದ ಬರಹ. ವೈಸರಾಯರ ಭಾಷಣದಲ್ಲಿ ತಿರುಳಿಲ್ಲ, ಆಶೆಯ ನರಳೂ ಇಲ್ಲವೆಂಬುದೇ ಎಲ್ಲರ ದೂರು. ಶ್ರೀ ಎನ್ ಎಮ್ ಜೋಶಿಯವರು "ವೈಸರಾಯರ ಭಾಷಣದಲ್ಲೇನುಂಟು" ಎಂದರು. ಎಲ್ಲಾ ರಾಷ್ಟ್ರೀಯ ಪತ್ರಿಕೆಗಳು ಅವರ ಭಾಷಣದಿಂದ ನಿರಾಶೆಗೊಂಡುವು. ಎರಡು ವರ್ಷಗಳ ತನಕ ದೇಶವನ್ನು ಬಗ್ಗಿಸಿ ಹಿಡಿದು ವೈಸರಾಯರು ದಣಿಯಲಿಲ್ಲವಲ್ಲಾ ಎಂದು ಎಲ್ಲರ ಆರೋಪ. ಅಂತೂ ವೈಸರಾಯರು ಕಾಂಗ್ರೆಸ್ಸನ್ನು ಸಂಪೂರ್ಣ ಬಡೆದು ಬಿಡದೆ ಯಾವ ಶಾಂತಿ ಸಮಾಧಾನಕ್ಕೂ ಒಡಂಬಡುವುದಿಲ್ಲವೆಂದು ಅವರ ನಡೆನುಡಿಗಳಿಂದ ವ್ಯಕ್ತವಾಗುತ್ತದೆ. ಇದೇ ಅಭಿಪ್ರಾಯವನ್ನು ಡಿಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಹೋಮ್ ಮೆಂಬರರು ಪ್ರಕಟಿಸಿರುವಂತಿದೆ. ಗಾಂಧಿಜೀಯವರೂ ಅವರ ಅನುಯಾಯಿಗಳೂ ಶಾಸನಭಂಗ ಚಳವಳಿವನ್ನು ಪುನರಾರಂಭಿಸುವುದಿಲ್ಲವೆಂದು ಭರವಸವನ್ನಿತ್ತರೆ ಎಲ್ಲವೂ ಸರಿಹೋಗುವುದೆಂದು ಹೋಮ್ ಮೆಂಬರರು ಹೇಳುತ್ತಾರೆ.

### ಲಂಕಶಯರಿನ ಗತಿ!

#### ಹಿಂದೂಸ್ಥಾನಕ್ಕೆ ಬೆದರಿಕೆ

ತಾನು ನೋಡಿದ್ದು ಪತ್ರಪರ್ವತ ತಾನು ಮಾಡಿದ್ದು ಮುತ್ತಿನ ಸರವೆಂದು ಮಾನ್ಯ ವೈಸರಾಯರು ಒಂದು ಕಡೆಯಿಂದ ಹೇಳುತ್ತಿರುವರಾದರೂ ಹಿಂದೀಯ ಬಹಿಷ್ಕಾರಾಸ್ತ್ರವು ಮಾಡಿ ಹೂಡಿದ ಕಾರ್ಯದ ಪರಿಣಾಮವೇನಾಗಿದೆಯೆಂದು ಲಂಕಶಯರಿನ ದುರ್ಗತಿಯಿಂದ ತಿಳಿದುಕೊಳ್ಳಬಹುದು. ವೈಸರಾಯರ ಓರ್ಡಿನೆನ್ಸು ರಾಜ್ಯವು ಎಷ್ಟು ಪ್ರಬಲವಾಯಿತೋ, ಅಷ್ಟು ತೀಕ್ಷ್ಣತೆಯಿಂದ ಬಹಿಷ್ಕಾರಾಸ್ತ್ರವೂ ಪುಷ್ಟಿಯಾಯಿತು. ಕಾರಣವಾಗಿ, ಲಂಕಶಯರ್ ಮೆಂಚೆಸ್ಟರ್ ವಸ್ತುಗಳು ಅಲ್ಲಲ್ಲೇ ಬಿಕ್ಕಿ ಮೂಲೆಪಾಲಾದುವು. ಗಿರಾಕಿಗಳಿಲ್ಲದೆ ಅವು ದಶದಿಕ್ಕುಗಳಲ್ಲೂ ಕೊಳೆತು ಬಿದ್ದುವು. ಗಾಳಿರಲ್ಲ ಗಾಳಿಗಿಂತ ಖಿಲಮಿಲಿಯ ಗಜ ನೂಲು ಹೆಚ್ಚು ವೆಚ್ಚವಾಯಿತೆಂದು ಲಂಕಶಯರಿನ ಫೆಡರೇಶನ್ ಒಫ್ ಮಾಸ್ಟರ್ ಕೋಟನ್ ಸ್ಪಿನ್ನರ್ಸ್ ಎಸೋಸಿಯೇಶನಿನವರು ಬರೆದಿರುವರು. ಆದರೂ ಲಂಕಶಯರಿನ ವ್ಯಾಪಾರವು ಮೊದಲಿನಷ್ಟು ಚೈತನ್ಯಯುಕ್ತವಾಗಿ ಮುಂದಾಗದೆಂದೂ ಅವರ ಅಭಿಪ್ರಾಯವಿರುತ್ತದೆ.

### ಬೆದರಿಕೆ

ಈಗ ಮೆಂಚೆಸ್ಟರ್ ಲಂಕಶಯರುಗಳು ಕಂಗಾಲಾಗಿದ್ದಾರೆ. ಮೊನ್ನೆ ಮೆಂಚೆಸ್ಟರ್ ಚೇಂಬರ್ ಒಫ್ ಕೊಮರ್ಸ್ಸಿನವರು ತಮ್ಮ ವಾರ್ಷಿಕ ವರದಿಯನ್ನು ಪ್ರಕಟಿಸುತ್ತಾ ಕೆಲವು ವಿಚಾರಾರ್ಹ ಸಂಗತಿಗಳನ್ನು ಬಹಿರಂಗಪಡಿಸಿರುವರು. "ಕಾಂಗ್ರೆಸ್ಸಿನವರು ಇಂಗ್ಲೆಂಡು ವಸ್ತ್ರಗಳನ್ನು ಬಹಿಷ್ಕರಿಸಿ ಈ ಅಸ್ತ್ರವನ್ನು ತಮ್ಮ ರಾಜಕೀಯ ಸಮಸ್ಯೆಯೊಡನೆ ಮಿಲನಗೊಳಿಸಿರುವರು. ಅವರ ಈ ಸೂತ್ರಕ್ಕೆ ಹಿಂದೀಯ ಗಿರಣಿಕಾರರೂ ಬೆಂಬಲವಿತ್ತಿರುವ ಹಿಂದೀಯ ಮಿಲ್ಲುಗಳನ್ನು ಹಿಂದೀಯರು ನಂಬಿ ತಮ್ಮ ಮಿಲಿಯಗಟ್ಟಲೆ ಜನತೆಗೆ ಹಾನಿಯನ್ನು ತಂದೊಡ್ಡುವಂತಿದೆ. ಬ್ರಿಟಿಷ ವಸ್ತ್ರ ವ್ಯಾಪಾರವು ಹಿಂದೂದೇಶದಲ್ಲಿ ನಡೆಯದಿದ್ದರೆ ವ್ಯಾಪಾರದ ತಕ್ಕಡಿಯು ತಲೆಕೆಳಗಾಗಲಿದೆ. ಹಿಂದೂಸ್ಥಾನದ ಆಯದಲ್ಲಿ ಭಯಂಕರ ಸ್ಥಿತಿಯುಂಟಾಗಲಿದೆ. ಬ್ರಿಟಿಷ ಸರಕಾರವೂ ಚೇಂಬರ್ ಒಫ್ ಕೋಮರ್ಸ್ ಕೂಡಾ ಹಿಂದೀಯರ ರಾಷ್ಟ್ರಸಮಸ್ಯೆಯ ಸದಿಚ್ಛಾರ್ಥದ ದೃಷ್ಟಿಯಿಂದ ತಮ್ಮ ವ್ಯಾಪಾರದ ಒಗೆ ಯಾವ ಒಗೆಯ ಹಣಗಾಟಕ್ಕೂ ತಲೆಯೊಡ್ಡಿರುವುದಿಲ್ಲ. ಆದರೆ **ಹಿಂದೀಯರು ಲಂಕಶಯರಿನ ನ್ಯಾಯಪೂರ್ವಕ ಆಶಯವನ್ನು ಧಿಕ್ಕರಿಸಿ ವರ್ತಿಸಿದರೆ ಈ ಕುರಿತು ಪಾರ್ಲಿಮೆಂಟು ಸದಸ್ಯರು ಹಿಂದೀಯರಿಗೆ ನವೀನ ರಾಜ್ಯದಾನವನ್ನು ಮಾಡದಂತೆ ತಕ್ಕ ವ್ಯವಸ್ಥೆಗಳನ್ನು ಮಾಡುವಂತೆ ಹಟಗಟ್ಟಿ ಪ್ರೇರೇಪಿಸಲಾದೀತು ಎಂದು ಹೇಳಿದೆ.**

+ + + +

---

(ನಾಲ್ಕನೇ ಪುಟದಿಂದ ಮುಂದುವರಿದುದು)

ಪೇಟೆಯಿಂದ ಪೇಟೆಯ ರಾಮ ಹೆಗ್ಗಡೆಯವರ ಮನೆಯ ಎದುರು ನಾಯಿ ಸತ್ತು ನಾರುತ್ತಿತ್ತು. ಹೆಲ್ತಾಫೀಸರರಿಗೆ ಅರ್ಜಿಮಾಡಿದರು. ಅರ್ಜಿ ಮಾಡಿದ ಮೂರು ದಿವಸಗಳ ತರುವಾಯ ತನ್ನಿಯಾಯಿತು. ಮುನ್ಸಿಪಲ್ ಲೋರಿ ಸ್ಥಳಕ್ಕೆ ಹೋಯಿತು. ಫೀಸು ೦-೮-೦ ಕೇಳೋಣಾಯಿತು. ಹೆಗ್ಗಡೆಯವರು ಕೊಡಲೊಪ್ಪರು. ಲೋರಿ ಪುನಹ ಹೋಯಿತು. ಹೆಗ್ಗಡೆಯವರು ಹೆಲ್ತಾಫೀಸಿಗೆ ಹೋಗಿ ಬೊಬ್ಬೆ ಹಾಕಿದರು. ಹ್ಯಾಗೂ ತೆಗೆಸಿದರು. ಒಂದು ನಾಯಿ ತೆಗೆಸಲಿಕ್ಕೆ ಎರಡು ಸಲ ಲೋರಿ ಪೇಟೆಯಿಂದಿಗೆ ಹೋಯಿತು. ಒಂದಿಷ್ಟು ಪೆಟ್ರೋಲು ಖರ್ಚು ಪೆಟ್ರೋಲು ಕಂಪೆನಿಗೆ. ಮುನಿಸಿಪಾಲಿಟಿಗೇನು ನಷ್ಟ?

**ದಿವ್ಯದೃಷ್ಟಿ.**

++ ++

# ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು ದಸ್ತಗಿರಿ ಮಾಡಿದರು!

ಬೋರ್ಸದ್ ತಾಲೂಕಿನ ರಾಸ್ ಎಂಬ ಗ್ರಾಮದಲ್ಲಿ ನೂರಿನ್ನೂರು ಮಂದಿಗಳು ಕೂಡಿ ಸರ್ದಾರ್‌ಧಿಕಾರಿಗಳ ಜಯಪತ್ರವನ್ನು ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಮುಖಂಡತನದಿಂದ ಜರಗಿಸಲಿದ್ದರು. ಇದನ್ನು ಕಂಡ ಪೋಲೀಸ್ ಅಧಿಕಾರಿಗಳು ಅವರು ಸೇರಬೇಕೆಂದು ನಿರ್ದಿಷ್ಟವಾದ ಸ್ಥಳದಲ್ಲಿ ಕಾದಲಿದ್ದು, ಹೊರಟ ಮೆರವಣಿಗೆಯನ್ನು ಮಾರ್ಗದಲ್ಲಿ ತಡೆದರು. ೩ ಮಂದಿ ಮುಂದಾಳುಗಳನ್ನು ಶ್ರೀಮತಿ ಕಸ್ತೂರಿಬಾಯಿಯವರ ಸಮೇತ ದಸ್ತಗಿರಿ ಮಾಡಿ ಬೋರ್ಸದಿಗೆ ಕಳುಹಿಸಿದರು. ವಿಚಾರಣೆಯಾಗಲಿದೆ. ಮಿಕ್ಕುಳಿದವರನ್ನು ಚದರಿಸಲಾಯಿತು.

## ಮೂಗು ಹಿಡಿದುದಕ್ಕೆ ಮಿಲಿಟರಿಯವನ ಕೊರಡೆ!

ಕೆಲವು ಸಮಯದ ಮೊದಲು ಕಲ್ಕತ್ತದಲ್ಲಿ ಕಾಳಿಪಾದನೆಂಬ ಬಂಗಾಳಿ ವಿದ್ಯಾರ್ಥಿಯು ಮಿಲಿಟರಿ ಕವಾಯತು ನಡೆಯುತ್ತಿರುವಾಗ ದಾರಿ ಮೇಲೆ ಹೋಗುತ್ತಿದ್ದುದನ್ನು ಕಂಡು ಫೌಜಿನ ಮುಂದಾಳುವು ಆ ಯುವಕನಿಗೆ ತನ್ನ ಕೊರಡೆಯಿಂದ ಹೊಡೆದನೆಂಬ ವಾರ್ತೆಯನ್ನು ಪ್ರಕಟಿಸಲಾಗಿತ್ತಷ್ಟೆ. ಈ ವಿಚಾರವಾಗಿ ಆ ವಿದ್ಯಾರ್ಥಿಯು ಮೇಲಧಿಕಾರಿಗಳಿಗೆ ಬರೆದನು. ವಿದ್ಯಾರ್ಥಿಯ ಮನವಿಗೆ ಉತ್ತರವಾಗಿ ಫೌಜಿನ ಮುಖ್ಯಾಧಿಕಾರಿಯಾದ ಜನರಲ್ ಜೆ. ಸಿ. ಬೆನರ್ಜಿ ಇವರಿಗೆ ಮಿಲಿಟರಿಯಧಿಪತಿಯಿಂದ ಈ ರೀತಿ ಉತ್ತರ ಬಂದಿದೆ— "ಕವಾಯತು ನಡೆಯುತ್ತಿರುವಾಗ ಆ ಬಂಗಾಳಿ ಯುವಕನು ತನ್ನ ಕೋರ್ಟಿನ ಹೆಬ್ಬೆಟ್ಟುಗಳಿಂದ ಮೂಗನ್ನು ಹಿಡಿದುಕೊಂಡಿದ್ದನು ನಮ್ಮ ಸೋಲ್ಜರರು ಅವನ ವರ್ತನೆಯು ಮಿಲಿಟರಿಯವರನ್ನು ಧಿಕ್ಕರಿಸಿದ್ದಾಗಿ ಆದುದೆಂದು ಅಭಿಪ್ರಾಯಪಡುತ್ತಿರುವರು. ಅವನಿಗೆ ಹೊಡೆದುದು ಖರೆಯಾದರೂ ಈ ವಿಷಯವಾಗಿ ಅನಾವಶ್ಯಕ ತನಿಖೆ ನಡೆಸಲಾಗುವುದಿಲ್ಲ" ಈ ಹಾಸ್ಯಜನಕ ತೀರ್ಮಾನವನ್ನು ಓದಿದವರು ಟೀಕೆಗಾರಂಭಿಸಿರುವರು. ಮಿಲಿಟರಿಯವರು ನಡೆಯುವಾಗ ಬದಿಯಲ್ಲಿದ್ದ ಪ್ರವಾಸಿಕನು ಸಿಂಬಳ ತೆಗೆಯಲೂ ಕೂಡದೇ ಎಂಬರ್ಥವನ್ನು ಸೂಚಿಸಿ 'ಸಂಡೆ ಟೈಮ್ಸ್' ಒಂದು ವ್ಯಂಗ್ಯ ಚಿತ್ರವನ್ನು ಚಿಡಿಸಿದೆ. ಮೂಗನ್ನು ಸಿಂಬಳಕ್ಕಾಗಿ ಬೆರಳಲ್ಲಿ ಹಿಡಿದುದರಿಂದ ತಪ್ಪೇನು?

## ಸೋಲ್ಜರರಿಗೆ ಸುಸ್ವಾಗತ!

ಸೋಲ್ಜರರೆಂದರೆ ಕೆಲವು ಕಡೆಗಳಲ್ಲಿ ಪಶುಗಳಂತೆಯೇ. ಡಕ್ಕಾದಲ್ಲಿನ ಗ್ರಾಮಗಳಿಗೆ ಸೋಲ್ಜರರ ಆಗಮನವಾಗಲಿದೆ. ಅವರ ಸ್ವಾಗತಕ್ಕಾಗಿ ಅಲ್ಲಿಯ ಯೂನಿಯನ್ ಬೋರ್ಡಿನವರು ಕೆಲವು ಸರ್ಕ್ಯುಲಾರುಗಳನ್ನು ಹಳ್ಳಿಯವರಿಗೆ ಕಳುಹಿಸಿ, ಪ್ರತಿ ಹಳ್ಳಿಯವರು ಸೋಲ್ಜರರ ಸ್ವಾಗತಕ್ಕಾಗಿ ೧೨೫-೧೫೦ ರೂಪಾಯಿಗಳನ್ನು ಸಬ್ ಡಿವಿಜನಲ್ ಆಫೀಸರರ ಕೈಯಲ್ಲಿ ಕೊಡಬೇಕು ಎಂದು ಕೇಳಿಕೊಂಡಿರುವರು. ಹಾಗೆ ಕೊಡದವರ ಹಳ್ಳಿಗಳಲ್ಲಿ ಸೋಲ್ಜರರು ಕೆಲವು ಸಮಯ ಉಳಿದು ಹೆಚ್ಚಿನ ನಷ್ಟವನ್ನು ಮಾಡಬಹುದೆಂದು ಒಬ್ಬ ಮೆಂಬರನ ಕುಟಿಲೋಕ್ತಿಯಂತೆ. ಈ ವಿಷಯಕವಾಗಿ ಕಲ್ಕತ್ತದಲ್ಲಿ ಬಹಳ ಜುಗುಪ್ಸೆಯುಂಟಾಗಿದೆ.

## ಎಕ್ಸ್‌ರೇ ಕಣ್ಣು!

ಆಧುನಿಕ ವಿಜ್ಞಾನದ ಬೆಳೆಯಿಂದಾಗಿ ಮನುಷ್ಯನ ದೇಹದ ಅಂತರ್ಯವನ್ನು ಯಂತ್ರ ಮೂಲಕ ನೋಡಬಹುದು. ಆದರೆ ಬರೀ ಕಣ್ಣಿನಿಂದಲೂ ಬೇರೆಯವರ ಒಳದೇಹವನ್ನು ಕಾಣುವ ಮಿಸ್. ಹಿಲಾನೀ ಅಲ್ಲೆ ಎಂಬವಳಿದ್ದಾಳೆ. ಇವಳಿಗೆ ೨೩ ವರ್ಷ ಪ್ರಾಯ. ತನ್ನ ಹತ್ತಿರ ನಿಂತವರ ದೇಹದೊಳಗಿನ ಎಲುಬು, ಚೀಲ, ಮಾಂಸ, ರಕ್ತ, ನರಗಳು ಎಲ್ಲವೂ ಅವಳ ಕಣ್ಣಿಗೆ ತನ್ನಷ್ಟಕ್ಕೆ ಕಾಣುತ್ತವೆ. ತನ್ನ ಈ ಶಕ್ತಿಯ ಅರಿವು ಅವಳಿಗೆ ೫ ವರ್ಷಗಳ ಹಿಂದೆ ಒಂದು ಮಗುವನ್ನು ಮಿಾಯಿಸುವಾಗ ಆಯಿತು. ಮಗುವಿನ ಒಳಗಿನ ದೇಹವೆಲ್ಲಾ ಅವಳಿಗೆ ಕಂಡುಬಂತು. ಚರ್ಮವು ಕನ್ನಡಿಯಂತೆಯೂ, ಒಳಗಿನ ಅಂಗಾಂಗಗಳು ಸ್ವಚ್ಛವಾಗಿಯೂ ಅವಳಿಗೆ ಕಂಡುವು. ಇದರಿಂದಾಶ್ಚರ್ಯಗೊಂಡ ಅವಳು ಮನೆಯೊಳಗೆ ಹೋಗಿ ಕಾಲಡಿಗೆ ಬಂದ ಬೆಕ್ಕನ್ನು ತಟ್ಟುವಾಗ ಅಲ್ಲಿಯೂ ಅವಳಿಗೆ ಅದರ ಒಳದೇಹವು ಕಂಡಿತು. ಅದರ ಮೊದಲು ಬಟ್ಟೆಯೊಳಗಿನ ಅಂಗಗಳು ಎಕ್ಸ್‌ರೇ ಶಕ್ತಿಯಿಂದ ಕಾಣುವಂತೆ ಕಾಣುತ್ತಿದ್ದುವು. ಕಟ್ಟಕಡೆಗೆ ನಾನಾ ಯಾರೊಡನೆಯೂ ಮಾತನಾಡುವಾಗ ಅವರ ದೇಹಾಂಗಗಳು ಕಾಣುತ್ತಿದ್ದುದರಿಂದ ನನಗೆನೇ ಮನಸ್ಸಿನಲ್ಲಿ ಕಳವಳವುಂಟಾಗಲಾರಂಭವಾಯಿತು. "ಅವರ ಒಳದವಡೆ ಮೊದಲಾದ ಒಳಭಾಗಗಳು ನನಗೆ ಕಂಡುವು" ಎಂಬ ಸ್ಥಿತಿಗೆ ಅವಳು ಮುಟ್ಟಿದಳು. ತನ್ನ ಕಣ್ಣಿನಲ್ಲಿ ದೋಷವಿರಬಹುದೆಂದು ಅವಳು ಆಸ್ಪತ್ರೆಗೆ ಹೋಗಿ ಪರೀಕ್ಷೆ ಮಾಡಿಸಿದಳು. 'ಕಣ್ಣು ಸರಿ ಇದೆ'ಯೆಂಬುದೇ ಪ್ರತಿ ವೈದ್ಯನ ಶಿಫಾರಸು! ಈಗೀಗ ಅವಳಿಗೆ ಬಟ್ಟೆಬರೆ ಮೊದಲಾದ ಕೆಲ ವಸ್ತುಗಳು ಕಾಣುವುದಿಲ್ಲವೆಂದು ತಿಳಿದುಬರುತ್ತದೆ. ಎಕ್ಸ್‌ರೇ ತರುಣಿಯಾಗಿರಬಹುದು!

## ಮೂರು ಆನೆಗಳನ್ನು ಸೋಲಿಸಿದ ಕನ್ನಡಿ

ಲಂಡನಿಗೆ ಸ್ವಿಂಟ್ ಹೆಲೆನ್ಸ್ ಕಂಪೆನಿಯವರಿಂದ ಒಂದು ಕನ್ನಡಿಯು ತಯಾರಾಗಿದೆ. ೪೦ ಇಂಚು ಉದ್ದ, ೨೪ ಇಂಚು ಅಗಲ, ಒಂದು ಇಂಚು ದಪ್ಪ. ಇದನ್ನು ಒಂದು ತೋಳನಂತೆ ಅಡ್ಡ ಮಾಗಾಡಿಸಿ ಸಂಕೋಲೆಯಿಂದ ಒಂದು ತಕ್ಕಡಿಯನ್ನು ನೇತಾಡಿಸಿ ಆ ತಕ್ಕಡಿಯಲ್ಲಿ ಮೂರು ಆನೆಗಳನ್ನು ನಿಲ್ಲಿಸಿದರು! 'ಕನ್ನಡಿ ಒಡೆಯಿತೇ?' ಇಲ್ಲ! ಸ್ವಲ್ಪ ಬಾಗಿತು ಅಷ್ಟೆ! ಆದು ಟನ್ನುಗಳನ್ನು ಹೊತ್ತು ಕೊಂಡಾಗ ಕನ್ನಡಿಯ ಶಕ್ತಿಯಷ್ಟು!

## ಐರ್ಲೆಂಡು ಬ್ರಿಟನ್ನಿಗೆ ಸಿಗದು!

ಬ್ರಿಟನಿನ ಬಾಯಿಂದ ತಪ್ಪಿಸಲು ಐರ್ಲೆಂಡಿನವರು ಹೋರಾಡುವ ಪರಿಯು ಆಗಾಗ ಪ್ರಕಟವಾಗುತ್ತಿದೆಯಷ್ಟೆ! ಮೊನ್ನೆ ಮಹಾ ಚುನಾವಣೆಯು ನಡೆಯಿತು. ಬ್ರಿಟನನ್ನು ಎದುರಿಸುತ್ತಿರುವ ಡಿವೆಲರನು ಸೋಲುವನೋ ಎಂದಿತ್ತು! ಆದರೆ ಬ್ರಿಟನಿನ ದುರ್ಗತಿ ಎನ್ನಬೇಕು;— ಡಿವೆಲರಾನ ಪಕ್ಷವು ಗೆದ್ದಿತು. ಎಲ್ಲರಿಗಿಂತ ಹೆಚ್ಚು ಓಟು ಅವನ ಪಕ್ಷಕ್ಕೆ ದೊರೆಯಿತು. ಬ್ರಿಟನಿನ ಸಹಾನುಭೂತಿಗಾರನಾದ ಕೊಸ್‌ಗ್ರೇವನು ಸೋತನು. "ಬ್ರಿಟಿಷರ ಯಾವ ಪ್ರತಿನಿಧಿಯೂ ನಮ್ಮ ದೇಶಕ್ಕೆ ಕಾಲಿಡುವುದು ಬೇಡ. ನಮಗೆ ಬ್ರಿಟಿಷರ ತುಂಡು ವಸ್ತುವೂ ಬೇಡ. ಬ್ರಿಟಿಷ ಆಧಿಪತ್ಯದಡಿಯಲ್ಲಿ ನಾವು ಇರಲೊಪ್ಪೆವು" ಎಂಬುದೇ ಐರ್ಲೆಂಡಿನವರ ಖಂಡಿತ ವಾದ. ಅದಕ್ಕಾಗಿಯೇ ಅವರು ಡಿವೆಲರಾನನ್ನು ಗದ್ದುಗೆಗೇರಿಸಿದರು. ಅವನೇ ತಮ್ಮ ಸ್ವಾತಂತ್ರ್ಯದಾತನೆಂದು ಶರಣಾದರು!

## ಭಂಗಾರದ ಓಟ!

ಜನವರಿ ೧೪ನೇ ತಾರೀಕಿಗೆ ಅಂತ್ಯವಾದ ವಾರದಲ್ಲಿ ಪರದೇಶಗಳಿಗೆ ಮುಂಬಾಯಿಯಿಂದ ರಫ್ತಾದ ಭಂಗಾರದ ಬೆಲೆ ೧,೯೦,೩೪,೦೪೦ ರೂಪಾಯಿಗಳು. ಇದರಲ್ಲಿ ಅಮೇರಿಕಾಕ್ಕೆ ಮಾತ್ರ ಓಡಿದ ಭಂಗಾರದ ಬೆಲೆ ೯೦,೬೨,೫೩೯ ರೂಪಾಯಿಗಳು. ಗ್ರೇಟ್ ಬ್ರಿಟನಿನಲ್ಲಿ ಭಂಗಾರದ ಸ್ಟೇಂಡಾರ್ಡ್ ಕಡಿಮೆಯಾದ ಮೇಲೆ ಇಷ್ಟರ ತನಕ ಮುಂಬಾಯಿ ಮಾರ್ಗವಾಗಿ ಹೋದ ಭಂಗಾರದ ಬೆಲೆ ೧,೦೭,೪೧,೩೫,೨೦೪ ರೂಪಾಯಿಗಳು ಫೆಬ್ರವರಿ ನಾಲ್ಕಕ್ಕೆ ಅಂತ್ಯವಾದ ವಾರದಲ್ಲಿ ೧೯,೭೦,೩೬,೫೭೦ ರೂಪಾಯಿಯ ಭಂಗಾರವು ವಿದೇಶಕ್ಕೆ ಕಾಲ್ಕೊಟ್ಟಿತು. ದೇಶವು ಅಮೂಲ್ಯ ಭಂಗಾರವನ್ನು ಕಳೆದುಕೊಂಡು ಕಾಗದ ತುಂಡನ್ನು ಪಡೆದುಕೊಂಡು ಎಷ್ಟು ಬಡವಾಗುತ್ತಿದೆ! ಬಡವಾಗಲಿದೆ! ಬಡವಾಗಿದೆ.

## ಬ್ರಿಟನಿನ ಗಾಂಧಿ!

ಟೋಮ್ ಮೇನರೆಂದರೆ ಗಾಂಧಿಜೀಯವರಿಗಿಂತ ಮುದುಕ. ೭೬ ವರ್ಷ ಪ್ರಾಯ! ಕೂಲಿಗಾರರ ಪಕ್ಷವನ್ನು ವಹಿಸಿ ಸಭೆ ಜರಗಿಸಿದುದಕ್ಕೆ ಸೆರೆಗೊಳಗಾಗಿದ್ದಾರೆ. ಈಗ ಈ ಮಹಾಶಯರು ಗಾಂಧಿಜೀಯವರಂತೆ, ಕಾರಾಗೃಹದಲ್ಲಿ ಸಾತ್ವಿಕ ಗ್ರಂಥಗಳನ್ನು ಓದುತ್ತಿರುವರು. ಟೋಮ ಮೇನರು ಬ್ರಿಟನಿನ ಗಾಂಧಿಯೆಂದು ಜೋರ್ಜ್ ಲಾನ್ಸ್‌ಬರಿಯವರೇ ಹೇಳಿದರು. ಟೋಮ್ ಮೇನರು ಬೌದ್ಧಿಕ ತತ್ವಗಳ ಗ್ರಂಥಗಳನ್ನು ಪಠಿಸುತ್ತಿರುವರು. ಗಾಂಧಿಜೀಯವರಂತೆ ಧ್ಯಾನ ಭಕ್ತಿ ತ್ಯಾಗಗಳನ್ನೂ ಅನುಭವಿಸುತ್ತಿರುವರು. 'Light of Asia' ಎಂಬ ಗ್ರಂಥಪಠನದಲ್ಲಿ ಈಗ ತಲ್ಲೀನರಾಗಿದ್ದಾರೆ. "ಈ ಮುದುಕನನ್ನೂ ಏಕೆ ಬಂಧಿಸಿಟ್ಟಿದ್ದೀರಿ?" ಎಂದು ಬ್ರಿಟಿಷ ಸರಕಾರಕ್ಕೆ ಪ್ರಶ್ನೆಗಳು ಬರುತ್ತಿವೆ.

## ಕಂದಾಯ ನಿರಾಕರಣೆಯಾಯಿತು.

ನ್ಯೂಬಾರ್ನೆಟ್‌ನಲ್ಲಿ ಮಿಸ್ ಕಿಟ್ಟಿಂಗ್ ಎಂಬ ಮಿಶನರಿಯೊಬ್ಬಳು ತನ್ನ ಪಾಲಿಗೆ ಬಿದ್ದ ೧೧ ಶಿಲಿಂಗ್ ೩ ಪೆನ್ಸ್ 'ಇನ್‌ಕಮ್‌ಟೇಕ್ಸ'ನ್ನು ಕೊಡಲು ಅಸಮ್ಮತಿಸಿರುವಳು. ಇನ್ನಿತರ ಎಲ್ಲಾ ಕಂದಾಯಗಳನ್ನೂ ತೆತ್ತಿರುವಳು. 'ನನ್ನೀ ಇನ್‌ಕಮ್‌ಟೇಕ್ಸಿನ ಹಣವು ಯುದ್ಧದ ಉಪಯೋಗಾರ್ಥವಾಗಿ ಹೋಗುತ್ತಾದುದರಿಂದ ಈ ಹಣವನ್ನು ನಾನು ಕೊಡಲಾರೆ. ಪ್ರತಿಯೊಬ್ಬರೂ ಈ ಕಂದಾಯವನ್ನು ಕೊಡಲೊಪ್ಪದಿದ್ದರೆ ಶಸ್ತ್ರತ್ಯಾಗವು ಪ್ರತಿ ರಾಷ್ಟ್ರದವರಿಂದ ಆಗುತ್ತದೆ. ಯುದ್ಧಗಳಾಗದಂತೆ ಮಾಡಲು ಇದು ಒಂದು ತಕ್ಕ ಯೋಜನೆ. ನನ್ನನ್ನು ಸೆರೆಗೊಯ್ಯಲಿ! ನಾನದಕ್ಕೆ ಹೆದರಲಾರೆ—ಬೆದರಲಾರೆ" ಎಂಬುದೇ ಅವಳ ಹೇಳಿಕೆ.

## ಸುಂದರಾಂಗಿಯರೇ, ಎದ್ದೇಳಿರಿ!

ಚಿಕಾಗೋ ವರ್ಲ್ಡ್ ಫೇರ್‌ನಲ್ಲಿ ನಡೆಯುವ ಸೌಂದರ್ಯ ಸ್ಪರ್ಧೆಗಾಗಿ ಪ್ರಪಂಚದ ಎಲ್ಲಾ ಭಾಗಗಳಿಂದ ಒಟ್ಟು ೫೧ ಅತ್ಯಂತ ಸುಂದರಾಂಗಿಯರು ಬೇಕಾಗಿದ್ದಾರೆ. ಈ ಸ್ಪರ್ಧೆಯಲ್ಲಿ ಪ್ರಪಂಚದ ಪ್ರತಿಯೊಂದು ದೇಶವು ಭಾಗ ವಹಿಸಬೇಕೆಂದು ಅದರ ವ್ಯವಸ್ಥಾಪಕರ ಆಶೆಯಾಗಿದೆ. ಗೆದ್ದ ಸುಂದರಿಗೆ ೩೦೦೦ ಪೌಂಡುಗಳು ದೊರೆಯುವುವು. ಭಾವಚಿತ್ರಗಳನ್ನು ಕಮಿಟಿಯವರಿಗೆ ಕಳುಹಿಸಿದರೆ ೫೧ ಜನ ಸುಂದರಿಯನ್ನು ಅವರು ಚುನಾಯಿಸುವರು.

## ಬಡತನವು ಬಿರುದನ್ನೇ ಮಾರಿಸಿತು!

ಜಪಾನಿನ ವೈಕೌಂಟ್ ಮಿಚಿನೊಬು ಹೋಂದ ಎಂಬವನು ಒಂದು ಕಾಲದಲ್ಲಿ ಐಶ್ವರ್ಯವಂತನಾಗಿದ್ದರೂ ಈಗ ಬಡತನದ ಹೊಂಡದಲ್ಲಿ ಬಿದ್ದಿದ್ದಾನೆ. ಅದಕ್ಕಾಗಿ ತನಗಿರುವ 'ವೈಕೌಂಟು' ಎಂಬ ಬಿರುದನ್ನು ಬೇಕಾದವರಿಗೆ ೫೦೦೦ ಪೌಂಡುಗಳಿಗೆ ವಿಕ್ರಯಿಸುವೆನೆಂದು ಜಾಹೀರು ಮಾಡಿದ— ಇದು ಸರಕಾರಕ್ಕೆ ತಿಳಿಯಿತು— ನ್ಯಾಯವಿಚಾರಣೆಯಾಗುತ್ತಿದೆ.

## ಹೃದಯಕೋಶದಲ್ಲಿ ಬಗಿಲು!

ಅಲ್ಬರ್ಟ್ ಎಂಬಲ್ಲಿ ಕ್ರಿಸ್‌ಮಸ್ ದಿನ ಒಬ್ಬನ ಎಂಟು ವರ್ಷದ ಮಗುವು ಒಂದು ಸಣ್ಣ ಬಗಿಲನ್ನು ನುಂಗಿಬಿಟ್ಟಿತು. ತುರುಕ್ಷಣದಲ್ಲಿ ಮಗುವಿನ ಹೃದಯದಿಂದ ಬಗಿಲಿನ ಧ್ವನಿಯು ಹೊರಡಲಾರಂಭ! ಈ ಈ ಶಬ್ದವನ್ನು ಕೇಳಿ ತಂದೆಯು ಆಶ್ಚರ್ಯಗೊಂಡನು. ಟೆಲಿಫೋನಿನ ಮೂಲಕ ಡಾಕ್ಟರರನ್ನು ಕರೆದು ಮಗುವನ್ನು ಟೆಲಿಫೋನಿನ ಹತ್ತಿರ ನಿಲ್ಲಿಸಿದನು. ಮಗುವಿನ ಹೃದಯದ ಕುಂಯಿ ಕುಂಯಿ ರಾಗವು ಟೆಲಿಫೋನಿನ ಮೂಲಕ ಡಾಕ್ಟರರಿಗೆ ಕೇಳಿತು! ಮಗುವನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸಲಾಗಿ ಒಂದು ಬಗಿಲು ಹೃದಯದಲ್ಲಿ ಬಾಯಿ ಮೇಲೆ ಮಾಡಿ ಶ್ವಾಸಕೋಶದ ಗಾಳಿಯನ್ನು ಒಳ ಬಿಡುತ್ತಿತ್ತು. ಒಂದು ವಿಧದ ಯಂತ್ರದ ಮೂಲಕ ಆ ಬಗಿಲನ್ನು ಬಹಳ ಪ್ರಯಾಸದಿಂದ ಹೊರತೆಗೆದರು. ರಾಗ ನಿಂತಿತು.

## ಅಭ್ಯಾಸದ ಮಹಿಮೆ!

ವಿಯೆನ್ನಾದಲ್ಲಿ ವಿಕ್ಟೋರಿಯಾ ರೀಗರ್ ಎಂಬವಳೊಬ್ಬಳು ಒಂದು ಗ್ಲಾಸು ವೈನು ಮತ್ತು ಒಂದು ಹೊಗೆ ಬತ್ತಿಗಾಗಿ ಎಂತಹ ಕೊಲೆಯನ್ನೂ ಮಾಡುವಷ್ಟು ಅಭ್ಯಾಸವನ್ನು ಪಡೆದಿದ್ದಳು. ಕೊಲೆ ಮಾಡಿಯಾದರೂ ಅವಳು ತನ್ನ ಇಂಗಿತವನ್ನು ನೆರವೇರಿಸುತ್ತಿದ್ದಳು. ಕೊನೆಗೆ ತನ್ನ ಶೌರ್ಯ ಪ್ರದರ್ಶನಕ್ಕಾಗಿಯೂ ಅಭ್ಯಾಸವನ್ನು ಪೂರೈಸುವುದಕ್ಕಾಗಿಯೂ ಅವಳು ಪುರುಷವೇಷವನ್ನು ಧರಿಸಿ ೨೫ ವರ್ಷಗಳ ಕಾಲವನ್ನು ಹಂಗೇರಿಯಾದಲ್ಲಿ ಕಳೆದಳು. ಈ ಸಮಯದಲ್ಲಿ ಒಟ್ಟು ೯ ಮಂದಿಗಳ ಕೊಲೆಗೈದಳು. 'ಪೀಟರ್ ದಿ ಪೈಪ್ ಸ್ಮೋಕರ್' ಎಂದು ಹೆಸರುವಾಸಿಯಾದಳು. ಇವಳು ಚಿಕ್ಕಂದಿನಲ್ಲೇ ಈ ಹೊಗೆಸೊಪ್ಪು ಮತ್ತು ಅಮಲಿನ ಅಭ್ಯಾಸಕ್ಕೆ ಬಿದ್ದವಳು. ಈ ಕೊಲೆಗಡಕಳ ವಿಚಾರಣೆಯಾಗುತ್ತಿದೆ

## ಎಚ್ಚರವಿರಲಿ!

ಶಾರದಾ ಬಾಲ್ಯವಿವಾಹ ನಿರೋಧ ದಿಲ್ಲಿನ ಪ್ರಕಾರ ಬಾಲ್ಯವಿವಾಹವನ್ನು ಮಾಡಿದವರಿಗೆ ಶಿಕ್ಷೆ ವಿಧಿಸಲ್ಪಡುವುದು ಆಚರಣೆಯಲ್ಲಿದ್ದಾಗ್ಯೂ ಅತಿ ಬಾಲ್ಯವಿವಾಹಗಳು ನಡೆಯುತ್ತಲೇ ಇವೆಯಷ್ಟೆ! ಇವುಗಳನ್ನು ತಡೆಯುವುದಕ್ಕಾಗಿ ಬಾಲ್ಯವಿವಾಹವು ನಡೆಯುತ್ತಿದೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಅರ್ಜಿ ಬಂದ ಕೂಡಲೇ ಆ ವಿವಾಹವನ್ನು ಇಂಜಕ್ಷನ್ ಮೂಲಕ ತಡೆಯುವ ಅಧಿಕಾರವನ್ನು ಕೊಡಬೇಕೆಂದು ದಿಲ್ಲಿಯ ಶಾಸನ ಸಭೆಯಲ್ಲಿ ದಿವಾನ್ ಬಹದ್ದೂರ್ ಹರವಿಲಾಸ ಶಾರದರವರು ಒಂದು ಠರಾವು ತರಲಿರುವರು. ಇದು ಮಂಜೂರಾಗುವಂತಿದೆ. ಇಂತಹ ವಿವಾಹಗಳು ನಡೆಯುವುದನ್ನು ಕಂಡು ಒಡೆಯಲು ಸಿ. ಐ. ಡಿ. ಶಾಖೆಯಂತಹದೊಂದು ಶೋಧಕ ಶಾಖೆಯ"ನ್ನುಏರ್ಪಡಿಸಬೇಕೆಂದಾಲೋಚನೆಯಾಗಿದೆ. ಬಾಲ್ಯವಿವಾಹ ಮಾಡುವವರು ಎಚ್ಚರವಿರಲಿ!

## ಮಹಾರಾಣಿಯವರ ಹೆಂಗಸರ ಟ್ರೈನಿಂಗ್ ಕಾಲೇಜು ಮೈಸೂರು.

ಈ ಕಾಲೇಜು ದಿನ ಮಹೋತ್ಸವವು ಕಾಲೇಜಿನಲ್ಲಿ ಹಾಕಿದ ಒಂದು ಡೇರಾದಲ್ಲಿ ನಡೆಯಿತು. ಬಹುಜನ ಸ್ತ್ರೀ ಪುರುಷರು ದಯಮಾಡಿಸಿದ್ದರು. ನಮ್ಮ ಒಂದನೇ ಕೌನ್ಸಿಲರಾದ ಮಿ. ಮಾಥನ್‌ರವರು ಅಗ್ರಾಸನವನ್ನು ವಹಿಸಿದ್ದರು. ದೇವತಾ ಪ್ರಾರ್ಥನೆ ಆದ ತರುವಾಯ 'ಸರ್ಜೆಂಟ್ಸ್ ಡಾಟರ್' ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ಒಬ್ಬ ಮುದುಕನಿಗೆ ಒಬ್ಬ ಹುಡುಗಿಯನ್ನು ಕೊಟ್ಟು ಮದುವೆ ಮಾಡಬೇಕೆಂದು ತಂದೆತಾಯಿಗಳು ನಿಷ್ಕರ್ಷೆ ಮಾಡಿದ ಕೂಡಲೆ ಅವಳಿಗೆ ಆರೋಗ್ಯವು ಹೇಗೆ ತಪ್ಪಿತೋ ತನಗೆ ಬೇಕಾದ ಗಂಡನನ್ನು ಸ್ವಯಂವರ ಮಾಡಿಕೊಳ್ಳಬಹುದೆಂದು ಹೇಳಿದ ಕೂಡಲೆ ಹೇಗೆ ವಾಸಿ ಆಯಿತೋ ಅದು ನಿರೂಪಿಸಲ್ಪಟ್ಟಿತು. ಕ್ರೀಡೆಯ ಗಾನ ನರ್ತನ, ಇನಾಮುಗಳನ್ನು ಕೊಡುವುದು, ಅಧ್ಯಕ್ಷರ ಭಾಷಣ ವಂದನೆಗಳು ಇವುಗಳೆಲ್ಲಾ ನಡೆದ ಮೇಲೆ 'ನೇಶನಲ್ ಆಂಥೆಮ್' ಎಂಬ ರಾಜಾಶೀರ್ವಾದವು ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸ್ತ್ರೀಯರು ಇಹಪರ ಸುಖಗಳನ್ನು ಹೊಂದಬೇಕಾದರೆ ಅವರ ವಿದ್ಯಾಭ್ಯಾಸಕ್ಕೆ ಸರಿಯಾದ ಏರ್ಪಾಡುಗಳಾಗಬೇಕೆಂದು ಹೇಳಿ ಈ ಕಾಲೇಜು ದಿನಾಚರಣೆ ಮಹೋತ್ಸವವನ್ನು ಮಾಡಿದವರಿಗೆ ವಂದನೆಗಳನ್ನು ಅರ್ಪಿಸಿದರು.

ಸಿ. ವಿ. ವೈದೇಶ್ವರಯ್ಯರ್.

## ನೋಟೀಸು.

### ಮೂಡುಪೆರಾರ ಪಂಚಾಯಿತಿ ಕೋರ್ಟಿನಲ್ಲಿ

C. S. No. 75/1932.

ನಾರಾಯಣ ಮೂಡಲಗಿರಿ ಪ್ರಭು—ವಾದಿ.

ತನ್ಯ ಮಂಜುಪೂಜಾರಿ ಕೂಡಾ—ಪ್ರತಿವಾದಿಗಳು.

ಮೂಡುಪೆರಾರ ಗ್ರಾಮದ ತನ್ಯ ಮಂಜುಪೂಜಾರಿ ಮಗ 2ನೇ ಪ್ರತಿವಾದಿ ತೌಡಪೂಜಾರಿಗೆ ತಿಳಿಸುವುದೇನೆಂದರೆ—

ವಾದಿಯು ಅಂಗಡಿ ಲೆಕ್ಕಾಚಾರ ಬಾಕಿ ರೂಪಾಯಿ 37—14—11ಕ್ಕೆ ನಿಮ್ಮ ಮೇಲೆ ಮಾಡಿದ ಈ ದಾವೆಯು ತಾ. 25—2—33ಕ್ಕೆ ತನ್ಖಿಗೆ ಇಡಲಾಗಿದೆ. ಅಂದು ನೀವು ಹಾಜರಾಗಿ ಉದಾಹರಣೆ ಕೊಡದಿದ್ದರೆ ನಿಮ್ಮನ್ನು ಶಿವಾಯಿ ಮಾಡಿ ತೀರ್ಮಾನಿಸಲಾದೀತು.

ತನ್ನಿಕಯಲ,
16—1—33.

R. S. Baglodi
President

(ಗ[illegible] ಮ[illegible]—[illegible])

| [illegible] | [illegible] | [illegible] | [illegible] | [illegible] | [illegible] | [illegible] | ಸೂರ್ಯ ಉ | ಅಸ್ತ |
|---|---|---|---|---|---|---|---|---|
| 11 | ಶನಿ | ೧ | ೨೮॥ | ಮಘಾ | ೩೭। | ೨೯ | 6 57 | 6 34 |
| 12 | ರವಿ | ೨ | ೨೫॥ | ಪೂ. ಫಾ | ೩೫। | ೩೦ | 6 56 | 6.34 |
| 13 | ಸೋಮ | ೩ | ೨೨೯ | ಉ. ಫಾ. | ೩೪ | ೧ | 6 56 | 6 34 |
| 14 | ಕುಜ | ೪ | ೧೮॥ | ಹಸ್ತಾ | ೩೧॥ | ೨ | 6 ೫೧ | 6.35 |
| 15 | ಬುಧ | ೫ | ೧೪೪ | ಚಿತ್ರಾ | ೨೯ | ೩ | 6 57 | 6.35 |
| 16 | ಗುರು | ೬ | ೯೧೪ | ಸ್ವಾತಿ | ೨೫॥ | ೪ | 6 56 | 6.35 |
| 17 | ಶುಕ್ರ | ೭ | ೪॥ | ವಿಶಾಖಾ | ೨೨॥ | ೫ | 6 55 | 6.36 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ(ಕಾವು) Maximum ಹೆಚ್ಚಾದದ್ದು | | Minimum ಕಡಿಮೆ | | Rainfall. ಮಳೆ ದಿನದ ಮಳೆ | ಜುಮಲಾ ಮಳೆ. |
|---|---|---|---|---|---|---|
| 2 | 86— | 2 | 72— | 8 | — | — |
| 3 | 88— | 6 | 73— | 5 | — | — |
| 4 | 92— | 7 | 71— | 9 | — | — |
| 5 | 87 | 7 | 72— | 9 | — | — |
| 6 | 89 | 9 | 73— | 6 | — | — |
| 7 | 87— | 8 | 75 | 2 | — | — |
| 8 | 87— | 6 | 74— | 2 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ. ಆ. | ವರೆಗೆ ರೂ. ಆ. |
|---|---|---|
| ಹೊಸ ಮಸ್ಕತಿ | 4— 0 | 4—10 |
| ಹೊಸ ರಾಶಿ ಅಕ್ಕಿ | 3— 6 | 3—11 |
| ಮಸ್ಕತಿ | 4— ( | 4—1 |
| ಗುಡ್ಡ | ೨ 12 | 4— 2 |
| ಸುಗ್ಗಿ | 3—1 | 4— 1 |
| ಊರ ಅವ್ವಲ್ ಬೆಳ್ತಿಗೆ | 4—10 | 5— 4 |
| ರಂಗೂನು ಬೆಳ್ತಿಗೆ ಗೋಣಿ ಗಳ್ಳೆ | 6— 8 | — |
| ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ | 4— 8 | 4—10 |
| ಗೋದಿ ಗೋಣಿ ಗಳ್ಳೆ | 1— 8 | 12— 8 |
| ತೊಗರಿ ಗೋಣಿ ಗಳ್ಳೆ | 9— 8 | 12— 0 |
| ಹುರುಳಿ ಗೋಣಿ ಗಳ್ಳೆ | 8— | 8— 4 |
| ಕಡಲೆ ಗೋಣಿ ಗಳ್ಳೆ | 8— 8 | 10— |
| ತೊಗರಿಬೇಳೆ ಗೋಣಿ ಗಳ್ಳೆ | 10— 8 | 20— 0 |
| ಉದ್ದು ಗೋಣಿ ಗಳ್ಳೆ | 9— 8 | 10 0 |
| ಹೆಸರು ಗೋಣಿ ಗಳ್ಳೆ | 8— 0 | 9— 0 |
| ಊರುಬೆಲ್ಲ ಖಂಡಿ ಗಳ್ಳೆ | 31— 4 | 32— 8 |
| ಉಪ್ಪು ಗೋಣಿ ಗಳ್ಳೆ | 4—12 | 5— 0 |
| ಕೊಬ್ಬರಿ ಖಂಡಿ ಗಳ್ಳೆ | 66— | 72— |
| [illegible] ಖಂಡಿ ಗಳ್ಳೆ | 28— | 29— |
| [illegible] ಖಂಡಿ ಗಳ್ಳೆ | 25— 4 | 26— 8 |
| [illegible] ಎಣ್ಣೆ ಮಣ ಗಳ್ಳೆ | 4—10 | 5— 9 |
| ಎಳ್ಳೆಣ್ಣೆ ಮಣ ಗಳ್ಳೆ | 6—12 | 7— 0 |
| [illegible] ಗಳ್ಳೆ | 4— 7 | 6—12 |
| [illegible] ಸಕ್ಕರೆ ಮಣ ಗಳ್ಳೆ | 3—15 | 4— 0 |
| [illegible] | 5— 5 | 5—12 |
| [illegible] ಮುಡಿ ಗಳ್ಳೆ | 4—12 | 5— 0 |
| [illegible] ಕಾಫಿ ಖಂಡಿ ಗಳ್ಳೆ | 275— 0 | 300— |
| [illegible] ಖಂಡಿ ಗಳ್ಳೆ | 171— 0 | 180— |
| [illegible] ಮಣ ಗಳ್ಳೆ | 27— | 28— |
| [illegible] ಮುಡಿ ಗಳ್ಳೆ | 2— 4 | 2 6 |
| [illegible] ಖಂಡಿ ಗಳ್ಳೆ | 25— 0 | 25— 8 |
| [illegible] ಮಣ ಗಳ್ಳೆ | 9 10 | 10— 0 |
| [illegible] ಮಣ ಗಳ್ಳೆ | 15— 0 | 16—0 |
| [illegible] ಗಳ್ಳೆ | 13— 4 | 13— 8 |
| [illegible] ಮಣ ಗಳ್ಳೆ | 19— 0 | 19— 4 |
| [illegible] ಗಳ್ಳೆ | 19— | 19— 4 |
| [illegible] ಖಂಡಿ ಗಳ್ಳೆ | 42— 8 | 45— |
| [illegible] ಕಾಫಿ ಖಂಡಿ ಗಳ್ಳೆ | 295— | 300— |
| [illegible] | 180— | 205— |
| [illegible] | 140 | 145— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

## ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಬೇಕೆಂದಾದರೆ ಪ್ರತಿದಿನವೂ ನಾಲ್ಕು ಸಾರಿ ಕಟಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೈ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧½ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary,**
*The Canara Public Conveyance Company Ltd. Mangalore*



# Chikmagalur Public Conveyance Motor Service.

## CHIKMAGALUR

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

**ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು**

**ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ**

**ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ**

**ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.**

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

**ನಿರಾಯಾಸದ ಪ್ರಯಾಣ!** **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

# ಪತ್ರವ್ಯವಹಾರ

(ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಬಿಳಿಯ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು.—ಸಂ ಸ್ವ)

ಅಯ್ಯಾ ಸೆಟ್ಟರೆ,

ತಾ. ೧೩—೧—೩೬ನೇ ಸ್ವದೇಶಾಭಿಮಾನಿಯಲ್ಲಿ ಬರೆದ ನಿಮ್ಮ ಲೇಖನ ಬಹಳ ಮಚ್ ಟೂಚ್ ಇದೆ ಸೆಟ್ರೆ. ಹಾಸ್ಕೂಲುಗಳ ಉಪಾಧ್ಯಾಯರ ಕರ್ತವ್ಯಗಳ ಕುರಿತು ಮಾತನಾಡುವಾಗ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಪುತ್ತೂರು ತಾಲೂಕಿನ ಹಾಯರ್ ಎಲಿಮೆಂಟರಿ ಶಾಲಾ ಮಗಜಿನುಗಳನ್ನು ಮಾದರಿಯಾಗಿ ಎತ್ತಿಕೊಂಡದ್ದು ಲಾಂಛನಾಸ್ಪದವಾಗಿ ತೋರಲಿಕ್ಕಿಲ್ಲವೇ ನಿಮಗೆ? ಎತ್ತರ ಶಾಲೆಗಳಿಗೆ ಕಿಗ್ಗಿನ ಶಾಲೆಗಳ ಮಾದರಿಯನ್ನು ತೋರಿಸುವುದೆಂದರೆ ನಿಜವಾಗಿಯೂ ಅದೊಂದು ಅವಮಾನ. ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೆ ಅದು ತಿಳಿಯಲಿಲ್ಲವೆಂದು ತೋರುತ್ತದೆ. ಅದಕ್ಕಾಗಿ ನೀವು ರೇಗಿದ್ದಲ್ಲವೇ! ಆದರೆ ಗುಣದಲ್ಲಿ ಮತ್ಸರ ವಹಿಸುವುದು ಯಾವ ನ್ಯಾಯ ಸೆಟ್ರೆ, ನೀವೆ ಹೇಳಿ.

"ಪುತ್ತೂರು ತಾಲೂಕಿನ ಶಾಲೆಗಳ ಉಪಾಧ್ಯಾಯರು ಪ್ರೆಸಿಡೆಂಟರ ಹೊಗಳಿಕೆಯಿಂದಲೂ, ಮೇಲಾಧಿಕಾರಿಗಳ ಪ್ರೀತಿಯನ್ನು ಹೊಂದುವುದಕ್ಕಾಗಿಯೂ ತಾವು ಟ್ರೈನಿಂಗ್ ಶಾಲೆಯಲ್ಲಿ ಕಲಿತ ಕೆಲವು ವಿಷಯಗಳನ್ನು ಬಹಿರಂಗ ಪಡಿಸುವುದಕ್ಕಾಗಿ ಮಾಡುವ ಮೆಗಜಿನುಗಳಿಗೆ ವಿದ್ಯಾರ್ಥಿ ಮೆಗಜಿನುಗಳೆಂದು ನಾಮಕರಣ ಮಾಡಿದ ಕಾರಣವೇ ಅವು ಶ್ಲಾಘನೀಯವೇ?" ಎಂಬ ನಿಮ್ಮ ಮಿಥ್ಯಾಪವಾದದ ಮಾತು ನಿಷ್ಪಕ್ಷಪಾತ ಮತ್ತಿಗೆ ಸಮಂಜಸವೆಂಬುದಕ್ಕೆ ನಿಮ್ಮ ಮನಸ್ಸೇ ಸಾಕ್ಷಿಯಾಗಿರುವುದಲ್ಲವೇ? ಪುತ್ತೂರು ತಾಲೂಕಿನ ಶಾಲೆಗಳಲ್ಲಿ ನಡೆಯುತ್ತಿರುವ ಕಾರ್ಯ ಕಲಾಪಗಳ ನೆರವಾದರೂ ನಿಮ್ಮ ತಿಳುವಳಿಕೆಗೆ ಬಾರದಿರುವಾಗ ಅಲ್ಲಿಯ ಮೆಗಜಿನುಗಳನ್ನು ಸರಿಯಾಗಿ ಓದಿ ತಿಳಿದುಕೊಳ್ಳದೆ ಮೇಲಿಂದ ಮೇಲೆ ಅರ್ಧ ಗಂಟೆಯಲ್ಲಿ ಹಾಳೆಗಳನ್ನು ತಿರುವಿ ಹಾಕಿ ನೀವು ಇಂತಹ ಟೀಕೆಯನ್ನು ಟಪ್ಪಣಿಸುವುದೆಂದರೆ ಬಹಳ ವ್ಯಸನಾಸ್ಪದವಲ್ಲವೇ? ಪುತ್ತೂರು ತಾಲೂಕಿನ ಮೆಗಜಿನುಗಳ ಕೆಲವು ಸಂಚಿಕೆಗಳನ್ನಾದರೂ ಅತ್ಯಂತವಾಗಿ ಓದಿದ್ದರೆ ಸೆಟ್ಟರು ಹೀಗೆ ಬರೆಯುತ್ತಿರಲಿಲ್ಲ. ಮಂಗಳೂರಲ್ಲಿ ನಡೆದ ವಿದ್ಯಾಪ್ರದರ್ಶನಕ್ಕೆ ಹೋಗಿದ್ದರೆ ನೀವು ಆ ಮೆಗಜಿನುಗಳನ್ನು ಓದಿ ತಿಳಿಯ ಬಹುದಿತ್ತು. ಅಥವಾ ಕಳೆದ ವರ್ಷ ಮತ್ತು ಈ ವರ್ಷ ಈ ತಾಲೂಕಿನಲ್ಲಿ ಜರಿಗಿದ 'ಮಕ್ಕಳ ಕೂಟಕ್ಕೆ' ಬಂದಿದ್ದರೆ ವಿದ್ಯಾರ್ಥಿಗಳಲ್ಲಿ ಮುಂದೆ ತುಳುಕುತ್ತಿದ್ದ ಉಲ್ಲಾಸೋತ್ಸಾಹಗಳ ಮೊತ್ತವನ್ನೂ ಚಟುವಟಿಕೆಯ ಅನಂತ ಪ್ರವಾಹವನ್ನೂ ಕಣ್ಣಾರೆ ಕಂಡು ಮನದಣಿಯ ಬಹುದಿತ್ತು. ಕೂಟದ ಸಮಯ ಅಲ್ಲಿಯೇ ಮಕ್ಕಳು ಹೊರಡಿಸಿದ 'ಕೂಟ' ಮೆಗಜಿನನ್ನು ಓದಬಹುದಿತ್ತು. ಆಗ ಸೆಟ್ಟರಿಗೆ ಗೊತ್ತಾಗುತ್ತಿತ್ತು ಪುತ್ತೂರು ತಾಲೂಕಿನ ಮೆಗಜಿನುಗಳು ನಿಜವಾಗಿಯೂ ವಿದ್ಯಾರ್ಥಿಗಳಿಂದಲೇ ಹೊರಡಿಸಲ್ಪಡುತ್ತವೆ ಎಂದು. ಉಪಾಧ್ಯಾಯರುಗಳು ಪ್ರೆಸಿಡೆಂಟರ ಹೊಗಳಿಕೆಯಿಂದ ನಡೆಸುವಂಥವುಗಳಲ್ಲವೆಂದು ಪುತ್ತೂರು ತಾಲೂಕಿನ ವಿದ್ಯಾರ್ಥಿಗಳು ಶಾಲೆಯ ಪಟ್ಟಿಯ ಬವಣೆಯನ್ನೇ ನೆಟ್ಟು ಕೃಷಿ ಮಾಡದೆ, ರಾಷ್ಟ್ರಾಭಿಮಾನದಿಂದಲೂ ಭಾಷಾಭಿಮಾನದಿಂದಲೂ ಭಾವೀ ಜನಾಂಗ ರಚನೆ ಹಾಗೂ ಸ್ವಾವಲಂಬನ ಸ್ವಾತಂತ್ರ್ಯಗಳ ಉದಾತ್ತ ಜೀವನಕ್ಕೆ ಕಳೆದಿಯನ್ನು ಹಾಕುತ್ತಿದ್ದಾರೆಂಬ ವಿಚಾರಗಳು ಪುತ್ತೂರು ತಾಲೂಕಿನ ಸಂಗತಿ ಏನೂ ಗೊತ್ತಿಲ್ಲದ ಸೆಟ್ಟರ ಮನಸ್ಸಿನಲ್ಲಿ ಹೇಗೆ ತಾನೆ ಹೊಳೆಯಬೇಕು? ಸೆಟ್ಟರ ಈ ಟೀಕೆಗಾಗಿ ನಾನವರನ್ನು ದ್ವೇಷಿಸಿ ತೆಗಳುವ ಬದಲಿಗೆ ಅವರ ಅನನುಭವಕ್ಕಾಗಿ ಕನಿಕರದಿಂದ ಅನುತಾಪ ಪಡಬೇಕಾಗಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಹಲವು ಶಾಲೆಗಳಲ್ಲಿ ಸ್ಕೌಟುಗಳು ಸರಿಯಾಗಿ ನಡೆಯುವುದಿಲ್ಲ. ಪ್ರೆಸಿಡೆಂಟರು ಇದನ್ನು ಏಕೆ ವಿಚಾರಿಸುವುದಿಲ್ಲ ಎಂಬುದು ಸೆಟ್ಟರದೊಂದು ಆಕ್ಷೇಪಣೆ. ಡಿಸ್ಟ್ರಿಕ್ಟ್ ಪ್ರೆಸಿಡೆಂಟರ ಮೇಲೆ ಸೆಟ್ಟರೆ, ಹಾಗೆ ಬರಿ ವಿಚಾರಕರಣಗಳ ಮೇಲೆ ವಾಯುಮಂಡಲದಲ್ಲಿ ಸವಾರಿ ಮಾಡಿ ನಾವು ಏನು ಮಾಡಿದರೂ ಏನೂ ಆಗಲಿಕ್ಕಿಲ್ಲ. ಪ್ರಯತ್ನಿಸುವುದಿಲ್ಲ ವ್ಯರ್ಥ. ಅದ್ದರಿಂದ ಸುಮ್ಮನೆ ಚಟಕ್ಕಾಗಿ ಕುಳಿತು ಬರೆಯುವುದೇ ಲೇಸೆಂದು ಹೇಳುವವರ ಸಂಖ್ಯೆ ಅಧಿಕವಾದದ್ದೇ, ಅದಕ್ಕೆ ಕಾರಣವೆಂದಾದರೂ ಸೆಟ್ಟರಿಗೆ ಯಾಕೆ ಹೊಳೆಯುವುದಿಲ್ಲವೋ ನಾನರಿಯೆ. ರಾಷ್ಟ್ರ ರಚನೆಯು ಒಬ್ಬಿಬ್ಬರ ಕೈಯಲ್ಲಿಲ್ಲ. ಅದು ಪ್ರತಿ ವ್ಯಕ್ತಿಯನ್ನು ಹೊಂದಿಕೊಂಡಿದೆ ಎಂಬ ಸಂಗತಿಯನ್ನು ಸೆಟ್ಟರು ಸ್ವಲ್ಪ ಯೋಚಿಸಿದರೆ ಅವರಿಗೇ ಸಮಾಧಾನವಾಗದಿರಲಿಕ್ಕಿಲ್ಲ. ಶಾಲೆಯಲ್ಲಿ ಮಕ್ಕಳನ್ನು ಪಾಠದ ಪಟ್ಟಿಯಿಂದ ಹೊರಗಿನ ವಿಚಾರಗಳ ಚಟುವಟಿಕೆಗಳಲ್ಲಿ ನಿರತ ಮಾಡಿ ಪ್ರಾಪಂಚಿಕ ವ್ಯವಹಾರದ ಅನುಭವವನ್ನು ಹುಟ್ಟಿಸಿ ತನ್ಮೂಲಕ ಮುಂದಿನ ಜನಾಂಗ ರಚನೆಗೆ ಅಸ್ತಿವಾರವನ್ನು ಹಾಕುವುದು ನಮ್ಮ ಕರ್ತವ್ಯವೆಂಬುದನ್ನು ಮನಗಂಡಿದ್ದರೆ ಸೆಟ್ಟರು ಹೀಗೆಂದಿಗೂ ಪ್ರಲಾಪಿಸುತ್ತಿರಲಿಲ್ಲ. ಪರೀಕ್ಷೆಗೆ ತಯಾರಿಸುವ ಬೊಂಬೆಗಳ ಪ್ರದರ್ಶನದಿಂದ ಜನಾಂಗ ರಚನಾ ಕಾರ್ಯವು ಎಂದೆಂದಿಗೂ ನಡೆಯಲಾರದೆಂಬುದನ್ನು ಸೆಟ್ಟರಿಗೆ ಒತ್ತಿ ಹೇಳಬೇಕಾಗಿದೆ. ಪಾಠದ ಪಟ್ಟಿಯಲ್ಲಿ, ಎಷ್ಟೇ ಅಕ್ಷರಗಳಿಂದ ಪರೀಕ್ಷೆಗಳಲ್ಲಿ ಬೊಂಬೆಯಾಟದ ಪ್ರದರ್ಶನವನ್ನು ತಯಾರಿಸಿ ಇಡುವುದರಿಂದ ಜನಸಮುದಾಯದಲ್ಲಿ ರಾಷ್ಟ್ರಾಭಿಮಾನದ ತಿರುಳನ್ನುಂಟು ಮಾಡುವುದು ತೀರ ಅಸಾಧ್ಯವಲ್ಲವೇ? ಪುತ್ತೂರು ತಾಲೂಕಿನಲ್ಲಿ ಈ ದೃಷ್ಟಿಗೆ ನಡೆಯುತ್ತಿರುವ ಕಾರ್ಯಕಲಾಪಗಳು ಇನ್ನು ಇತರ ಶಾಲೆಗಳ ಅನುಕರಣ ಫಲ ಕೊಡತಕ್ಕ ಬೀಜ ಪ್ರಸಾರವೆಂಬುದು ಸರಿಯಾಗಿ ಅರಿವಾಗದಿರಲಿಕ್ಕಿಲ್ಲ.

ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಒಂದು ಶಾಲೆಯ ವಿಷಯ ಸದಭಿಪ್ರಾಯ ಪಟ್ಟದ್ದರಿಂದ ಆ ಶಾಲೆಯ ಮುಖ್ಯೋಪಾಧ್ಯಾಯರನ್ನು ಎಲ್ಲಾ ಶಾಲೆಗಳಿಗೂ ವರ್ಗಾಯಿಸಬೇಕೆಂದು ಸೆಟ್ರು ಸೂಚನೆ. ಇದರ ಇದರಿಂದ ಯಾವ ಪ್ರಯೋಜನವೆಂದು ಸೆಟ್ಟರು ಹೇಳಲಿಲ್ಲ. ಒಂದು ಶಾಲೆಯಲ್ಲಿ ಮುಖ್ಯೋಪಾಧ್ಯಾಯರಿಂದಲೇ ಯಾವ ಕಾರ್ಯವೂ ನಡೆಯಲಾರದೆಂದು ಸೆಟ್ಟರಿಗೆ ಗೊತ್ತಿದ್ದರೂ ಈ ಉದ್ಗಾರವನ್ನು ಎತ್ತಿ ಎತ್ತಿರುವುದರಿಂದ ತಿಳಿಯುವುದಿಲ್ಲ. ಸೆಟ್ಟರು ತಮ್ಮ ಅನುಕೂಲವಾದ ವಿಚಾರಗಳನ್ನು ಭಾವೀ ಜನಾಂಗ ಮತ್ತು ರಾಷ್ಟ್ರದ ಪುರೋಭಿವೃದ್ಧಿಯ ಕಡೆಗೆ ತಿರುಗಿಸಿ ಪರ್ಯಾಲೋಚಿಸಬೇಕೆಂದು ನನ್ನ ಆಶೆ.

ಎಂ ಎಸ್ ರಾವ್

'ಪುತ್ತೂರು ತಾಲೂಕಿನ ಒಬ್ಬ ಉಪಾಧ್ಯಾಯ'ರೂ ಈ ವಿಷಯನ್ನು ಕುರಿತು ಚರ್ಚಿಸಿದ್ದಾರೆ. ಭಾವ ಮೇಲ್ಕಂಡಂತೆಯೇ.

ಸಂ ಸ್ವ

ಸ್ವದೇಶಾಭಿಮಾನಿಯ ೨೭ನೇ ಶುಕ್ರವಾರದ ಸಂಚಿಕೆಯಲ್ಲಿ ಸೆಕೆಂಡರಿ ಶಾಲೆಯಲ್ಲಿರುವ ಸೆಕೆಂಡರಿ ಉಪಾಧ್ಯಾಯ ಬಂಧುಗಳೊಬ್ಬರು "ಇದನ್ನು ಚರ್ಚೆಗಾಗಿ ಬರೆದಿರುವುದಿಲ್ಲ. ಅದುದರಿಂದ ಸುಮ್ಮನೆ ಗುಲ್ಲೆಬ್ಬಿಸುವುದು ಬೇಡ" ಎಂದು ಅಂತ್ಯ ಮಾಡಿ "ಬಾಲಚಂದ್ರ"ನಿಗೆ ಬರೆದ ಒಂದು ಪತ್ರವನ್ನು ಓದಿದೆ. ಗುಲ್ಲೆಬ್ಬಿಸುವುದು ಬೇಡವೆಂದು ಅವರು ಹೇಳಿರುವರು. ಇದು ಗುಲ್ಲೆಂದು ನಾನು ತಿಳಿಯುವುದಿಲ್ಲ ಮತ್ತು ಈ ಪತ್ರದಿಂದ ಯಾರ ಮನಸ್ಸನ್ನಾದರೂ ನೋಯಿಸುವುದು ನನ್ನ ಉದ್ದೇಶವಲ್ಲ. ಲೋಕಲ್ ಬೋರ್ಡುಗಳಲ್ಲಿ ಕೆಲಸ ಮಾಡುತ್ತಿರುವ ಒಂದೇ ಗ್ರೇಡಿನ ಉಪಾಧ್ಯಾಯರುಗಳಿಗೆ ಒಂದೇ ರೀತಿಯ ಸಂಬಳದ ಸ್ಕೇಲನ್ನು ನಿರ್ಧರಿಸುವುದು ನ್ಯಾಯಕರವೆಂಬ ತತ್ವವನ್ನನುಸರಿಸಿ ಅದಕ್ಕಾಗಿ ಹೆಣಗಾಡುವವರಲ್ಲಿ ನಾನೂ ಒಬ್ಬನು. ನಾನು ಬರೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಇರುವೆನೆಂದು ಸೆಕೆಂಡರಿ ಶಾಲೆ ಸೆಕೆಂಡರಿ ಉಪಾಧ್ಯಾಯರ ಬಂಧುಗಳಿಗೆ ಈ ಪತ್ರವನ್ನು ಬರೆಯುತ್ತಿರಲಿಲ್ಲ. ಉಪಾಧ್ಯಾಯರಾದ ನಾವೆಲ್ಲರೂ ಯೋಚಿಸಬೇಕಾದ ಈ ವಿಷಯದಲ್ಲಿ ಆ ಬಂಧುಗಳಿಗಿರುವ ದುರಭಿಪ್ರಾಯವನ್ನು ಹೋಗಲಾಡಿಸುವುದೇ ಈ ಪತ್ರದ ಉದ್ದೇಶ.

ಈಗ ಅವರ ಕೆಲವು ಆಕ್ಷೇಪಗಳನ್ನು ನೋಡೋಣ. ಡಿ. ಎ ಕಲಿತ ಹಲವು ಮಂದಿಗೆ ಹಲವು ವಿಧದ ಸಂಬಳವಂತೆ. ಇರಲಿ ಆದರೆ ಒಂದೇ ರೀತಿಯ ಸಂಸ್ಥೆಯ ಒಂದೇ ತರಗತಿಯವರಲ್ಲಿ ಅಂಥಾ ಭೇದವು ಬರಬಾರದೆಂಬುದೇ ನನ್ನ ಮತ. ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಸ್ಕೇಲಿನ ವ್ಯತ್ಯಾಸವಿರಲಿ. ಲೋಕಲ್ ಬೋರ್ಡುಗಳ ಮಟ್ಟಿಗೆ ಅಂಥಾ ವ್ಯತ್ಯಾಸಗಳಿರಬಾರದು.

ಇನ್ನು ನಾವು ಮಾಡುವ ಕೆಲಸಕ್ಕೂ ಅವರು ಮಾಡುವ ಕೆಲಸಕ್ಕೂ ವ್ಯತ್ಯಾಸವಿದೆಯಂತೆ. ಆ ವ್ಯತ್ಯಾಸಗಳಾವುವೋ ನಾನರಿಯೆ. ಯಾವುದಿದ್ದರೂ ಈ ಮಾತನ್ನು ಧೈರ್ಯದಿಂದ ಹೇಳಬಲ್ಲೆ. ಅವರು ಕಲಿಸಿದ ರೀತಿಯಲ್ಲಿ ನಾವು ಕಲಿಸಬಲ್ಲೆವು. ಅವರದ್ದೇ ಒಂದು ದೇವದತ್ತವಾದ ಪದ್ಧತಿಯಿದೆಯೆಂದೂ, ನಮ್ಮದೊಂದು ಅತೀ ಕೀಳು ತರವಾದ ಬೋಧನಾ ಕ್ರಮವೆಂದೂ ಅವರು ತಿಳಿಯಬೇಕಾಗಿಲ್ಲ. ಸೆಕೆಂಡರಿ ಶಾಲೆಗಳಲ್ಲಿ ಕೆಲಸ ಮಾಡುವ ಅದೊಂದು ಸ್ವರ್ಗೀಯ ಭಾಗ್ಯವು ನಮಗೆ ದೊರೆತರೆ ನಾವು ಹೇಗೆ ಕೆಲಸ ಮಾಡಬಲ್ಲೆವೆಂದು ಆಗ ನೋಡ ಬಹುದು. ಇನ್ನು ಪಾಠಪಟ್ಟಿ, ಬೋಧನಾ ಕ್ರಮ, ಶಾಲಾ ಚಟುವಟಿಕೆಗಳು ಇತ್ಯಾದಿಗಳ ವಿಷಯಗಳ ಚರ್ಚೆ ಇದ್ದರೆ ಅದಕ್ಕೆ ಈ ಸಣ್ಣ ಪತ್ರದಲ್ಲಿ ಎಡೆಯಿಲ್ಲ. ಅದನ್ನು ಸಂದರ್ಭ ದೊರೆತಾಗ ನೋಡಿಕೊಳ್ಳಬಹುದು.

ನನ್ನ ಸೆಕೆಂಡರಿ ಶಾಲೆ ಸೆಕೆಂಡರಿ ಗ್ರೇಡಿನ ಬಂಧುಗಳೇ! ನಿಮಗೊಂದು ಮಾತು. ಈಗ ನಾವು ಹೋರಾಡುತ್ತಿರುವ ಈ ಪ್ರಶ್ನೆಯು ನಮಗೆ ನಿಮಗೆ ಮಾತ್ರ ಅನ್ವಯಿಸುವುದಿಲ್ಲ. ಈ ಜಿಲ್ಲೆಯೊಳಗಿರುವ ಲೋಕಲ್ ಬೋರ್ಡುಗಳಲ್ಲಿ ಕೆಲಸ ಮಾಡುವ ಒಂದೇ ಗ್ರೇಡಿನ ಉಪಾಧ್ಯಾಯರುಗಳಲ್ಲಿ ಸ್ಕೇಲಿನಲ್ಲಿ ವ್ಯತ್ಯಾಸವಿದ್ದರೆ ಅವೆಲ್ಲವುಗಳ ಸಮಾನತೆಯ ಬಗ್ಗೆ ಯತ್ನಿಸುವುದು ನಮ್ಮೆಲ್ಲರ ಕರ್ತವ್ಯವಿರುತ್ತದೆ. ಆದಕಾರಣ ಅಂಥಾ ಒಂದು ಚಳವಳಿಯು ಏಳುವುದಿದ್ದರೆ, ಹೊಸ್ಸ್ಕೇಲಿನ ಉಪಾಧ್ಯಾಯರುಗಳಾದ ನೀವು ಮಾತ್ರ ಸಿಟ್ಟುಗೊಳ್ಳಬೇಕಾಗಿಲ್ಲ. ಆದ ಕೆಲ್ಸಕ್ಕರ ನಮ್ಮ ನಮ್ಮ ನ್ಯಾಯನಿಯಮಗಳಿಗಾಗಿ ನಾವು ಹೋರಾಡುತ್ತೇವೆ. ಕರ್ತವ್ಯವು ನಮ್ಮದು. ಫಲವು ನಮ್ಮದಕ್ಕೆ. ನಮ್ಮ ಯತ್ನವನ್ನಂತೂ ಮುಂದೊತ್ತುತ್ತೇವೆ, ಫಲವು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಕೈಯಲ್ಲಿದೆ. ನ್ಯಾಯಕ್ಕಾಗಿ ನಮ್ಮದಿದು ಹೋರಾಟ. ಮಾತ್ಸರ್ಯಕ್ಕಾಗಿ ಅಲ್ಲ. "ನಾನು ಸೆಕೆಂಡರಿ ಶಾಲೆಯ ಸೆಕೆಂಡರಿ ಉಪಾಧ್ಯಾಯ"ನೆಂದು ಮುಂತಾಗಿ ಬರೆದ ಅನಾಮಧೇಯನಾಗುವುದಿಲ್ಲ. ನನಗೆ ಹೆಸರಿದೆ. ನಾನು ನಾನೇ.

ನಿಮ್ಮ ಬಂಧು.

ನಿಮ್ಮ ಬಂಧು ಏನ ಅಡಿಯಲ್ಲಿ ಲೇಖಕರು ತನ್ನ ಹೆಸರು ವಿಳಾಸಗಳನ್ನು ಇಂಗ್ಲಿಷಿನಲ್ಲಿ ಕೊಟ್ಟರೂ ಅದನ್ನು ಪ್ರಕಟಿಸಬೇಕೋ ಏನೆಂಬ ವಿಚಾರವನ್ನು ತಿಳುಹಿಸಿಲ್ಲ. ಕಾರಣ, ಪ್ರಕಟಿಸಲಿಲ್ಲ.

ಉಡುಪಿಯ ಬ್ರಹ್ಮಾವರ ಶಾಲಾ ಉಪಾಧ್ಯಾಯರೊಬ್ಬರು ಈ ವಿಚಾರವಾಗಿ ಇದೇ ರೂಪದಿಂದ ಬರೆದಿರುವರು. ಚರ್ವಿತಚರ್ವಣ ವಾಗಬಾರದೆಂದು ಅದನ್ನು ಪ್ರಕಟಿಸಿಲ್ಲ.

ಸಂ ಸ್ವ

ಈಗ್ಗೆ ಕೆಲವು ಕಾಲದಿಂದ ಮ್ಯುನಿಸಿಪಲ್ ಕೋಟೆಗುಡ್ಡ ಕಸ ಗುಡಿಸ ತಕ್ಕವರೂ ಬೆಳಗ್ಗೆ ಕೆಲಸಕ್ಕೆ ಬಾಜಾರಾ ತಕ್ಕ ಸಮಯವು ಬದಲಾಯಿಸಲ್ಪಟ್ಟಿರುತ್ತದೆ. ಮೊದಲು ಬೆಳಗ್ಗೆ ೭ ಗಂಟೆಗೆ ಹಾಜರಿಯಾಗುತ್ತಿತ್ತು. ಈಗ ೬ ಗಂಟೆಗೆ ಬರತಕ್ಕದೆಂದು ನಿರ್ಧರಿಸಲಾಗಿದೆ. ಈ ಅಪ್ಪಣೆಯನ್ನು ವಿಚಾರಿಸಿಕ್ಕೆ ಉಂಟೇ? ಇಲ್ಲ. ಈ ಕಡ್ಡಾಯಿ ಯಾಕೆಂದು ಕೇಳಲಿಕ್ಕೆ ಉಂಟೇ? ಇಲ್ಲ. ಕೆಲಸ ಬೇಕಾದರೆ ಮೇಲಿನ ಅಪ್ಪಣೆಯಂತೆ ಧನಿಗಳ ಮರ್ಜಿಯಂತೆ ನಡೆಯಲೇ ಬೇಕು. ಆದರೆ ಈ ಅಪ್ಪಣೆಯಿಂದ ಸಮಯದ ವ್ಯತ್ಯಾಸದಿಂದ ಬಡಬಗ್ಗರಾದ ಎಷ್ಟೋ ಮಂದಿ ಕೆಲಸಗಾರರಿಗೆ ವಿಶೇಷವಾದ ತೊಂದರೆಯೂ ಅನನುಕೂಲತೆಯೂ ಉಂಟೆಂದು ನಾನು ಅರಿತವನಾದಕ್ಕಾಗಿ ಇದನ್ನು ಬರೆದೆ. ಈ ಕೆಲಸಗಾರರಲ್ಲಿ ಜೆಪ್ಪಿನಮೊಗರು, ಬಿಜ್ಜ, ದೇರೆಬೈಲ್ ಮೊದಲಾದ ಊರ ಹೊರಗಿನ ಸ್ಥಳಗಳಲ್ಲಿ ಇರತಕ್ಕವರು. ಇವರಲ್ಲಿ ಎಷ್ಟೋ ಮಂದಿ ಮುದುಕರು, ಹೆಂಗಸರು ಇದ್ದು ಬೆಳಗ್ಗೆ ೬ ಗಂಟೆಗೆ ಬಂದು ಹಾಜರು ಕೊಡಬೇಕಾದರೆ ಬೇಗನೆ ಏಳಬೇಕಲ್ಲದೆ ಎದ್ದು ಅಥವಾ ರಾತ್ರಿಯಲ್ಲಿ ೩ ಗಂಟೆಗೆ ಊಟ ತಯಾರಿಸಿ, ಉಂಡು ಓಡಿ ಬರಬೇಕಾಗುವುದು ಕತ್ತಲಿನ ಸಮಯದಲ್ಲಿ ಎಷ್ಟು ತೊಂದರೆ. ಕೆಲವರು ಲಾಂದ್ರಗಳನ್ನು ಉಪಯೋಗಿಸಿಕೊಂಡರೂ ಅನೇಕರಿಗೆ ಲಾಂದ್ರಗಳಿಲ್ಲ. ಎಷ್ಟೋ ಮಂದಿ ಮುದುಕರು ಹೆಂಗಸರು ಕತ್ತಲಲ್ಲಿ ನಡೆಯುತ್ತ ಹೊತ್ತಾಯಿತೆಂದು ಓಡುವುದನ್ನು ಕಂಡ ಕನಿಕರ ಪಡಬೇಕಾಗಿದೆ. ಇವರು ಈ ೬ ಗಂಟೆಯ ಹಾಜರಿಯ ಅರ್ಥ ರಾತ್ರಿಯೇ ಬಂದು ಇಲ್ಲಿ ಪಟ್ಟಣದ ಅಂಗಡಿಯ ಜಗಲಿ ಮೇಲೆ ರಾತ್ರಿ ಮಲಗಿ ಮುದುಕರ ಉಂಟು. ಇವರು ಸಂಬಳದ ೬ ಮೈಲಿಗೆ ಸಮೀಪದಲ್ಲಿ ಹೆಚ್ಚು ಕೊಟ್ಟು ದಿನಾದ ಮಾಡಿಕೊಳ್ಳಲಿಕ್ಕೆ ಶಕ್ಯದಲ್ಲಿ ಸ್ವಕರಣ ಮೇಲೆ ಬರಲಿಕ್ಕಾಗಲೀ ಅನುಕೂಲ ಇಲ್ಲದ ಸಂಬಳದ ಈ ನೌಕರರಿಗೆ ಅದೆಲ್ಲ ಎಲ್ಲಿಂದ ಬಂದೀತು? ಅನೇಕರು ಮುಖ್ಯವಾಗಿ ಹೆಂಗಸರು ಲಾಂದ್ರಗಳನ್ನು ಕೂಡ ಉಪಯೋಗಿಸುತ್ತಾರೆ ಮುನ್ಸಿಪಲಿಟಿಯವರ ಮೇಲೆ ಅವರ ಸುಖದುಃಖಗಳ ಕಡೆಗೆ ದೃಷ್ಟಿಯಿಟ್ಟು ದುರ್ಭಾಗ್ಯದ ಕಡೆಗೆ ಯಾರೂ ಏಕೆ ಲಕ್ಷ್ಯ ಕೊಡುವುದಿಲ್ಲವೋ ತಿಳಿಯದು. ನಮ್ಮ ಜಿಲ್ಲೆಯ ಮ್ಯಾನೇಜರು ದಯಾಳುಗಳು. ಬಡಬಗ್ಗರ ವಿಷಯದಲ್ಲಿ ಸಹಾನುಭೂತಿಯುಳ್ಳವರು ಎಂದು ಅನೇಕರು ಹೊಗಳುತ್ತಿದ್ದಾರೆ. ಅವರಿಗಾದರೂ ಈ ಕ್ರಮ ಬದಲಿಸಿ ಅರ್ಹರಿಗೆ ಕೇಳಿಸಿ ಈ ಬಡಬಗ್ಗರ ಕಷ್ಟನಿವಾರಣೆಯಾಗಬೇಕೆಂದು ಹಾರೈಸುತ್ತೇನೆ.

ಪಟ್ಟಣಿಗ


# WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

*The Divisional Manager,*

The South Indian General Assurance Co Ltd

64 3rd Cross Road, Srirampur Extn

Malleswaram Post, BANGALORE

OR

*The Managing Agents,*

The S I, G A Co Ltd.

55 Poonamallee High Road, Kilpauk, MADRAS.

ನಾಳೆ— ಈ ದಿನ—
ನಿಮಗೆ ಬೇಕಾದುದು!
# ರಬ್ಬರ್ ಮೊಹರುಗಳು
ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ. ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳೆ, ಕಂಚು ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ. ಸೂ.: ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರಂದಿದ್ದಲ್ಲಿ ಹಣ ಫಿರ್ತ ಕೊಡುವೆವು.

ಹೆಡ್ ಆಫೀಸು:—

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No. 2 ಬಲ್ಮಠ ರಸ್ತೆ, ಮಂಗಳೂರು,
ದ. ಕನ್ನಡ.



# 1933.

1933ನೇ ಇಸವಿಯ
## ಸುಂದರವಾದ
## ಬ್ಯಾಂಡಿನ
ಮತ್ತು
## ಕಾಗದದ
ಸಣ್ಣ ಸ್ಸಾಜು ಮತ್ತು ದೊಡ್ಡ ಸ್ಸಾಜು
## ಡೈರಿಗಳು.

ಶಾರದಾ ಛಾಪಖಾನೆ.
ಮಂಗಳೂರು

ಇಲ್ಲಿಗೆ ಬರೆದುಕೊಳ್ಳಿರಿ



**S·U N & CO.**
*Choukhamba, Benares City*

**ಮೂರು ಇನಾಮುಗಳು**



ನಮ್ಮಲ್ಲಿ ಕಾಶ್ಮೀರ್ ಶಾಲುಗಳ್ ಗಿಂತಲೂ ಅತ್ಯುತ್ತಮವಾದ ಕಸೂತಿಗೆಲಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ಬರೂ ?—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಶ್ವಾಮಿಗೆ ಮಿಶ್ಶನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ—

**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)**



# ಕೇಸರಿಯವರ
# ಲೋಧ್ರ

## ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು,-ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನು ಗುಣಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭಿಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ ೩—೦—೦
ಸಣ್ಣ ಬಾಟಲ್ ೬ ಔನ್ಸ್ ರೂ ೧—೧೦—೦

ಟಪಾಲು ಖರ್ಚು ಪ್ರತ್ಯೇಕ. ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

**ಕೇಸರಿ ಕುಟೀರಂ,**
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟಾಕಿಸ್ಟ್ಸ—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.
ಷಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.



**The Zandu Pharmaceutical Works, Ltd., Bombay, 14.**
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ
# 'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾನಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಸ್ಫೂರ್ತಿಯುಳ್ಳವನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಶಾ.ಜಾಡಿ ರೂ. 10/– ಕ್ರಯ 1 ಶಾನು ಸೀಸೆ ರೂ. 2/8. ½ ಶಾ. ರೂ. 1/5 ¼ ಶಾ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಕೃಷ್ಣಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು.— ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು:— ಷಾ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು:— ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು:— ಟಿ ಸಿ. ನಟರಾಜ್ ಅಂಡ್‌ಕೊ, ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಪೂಪಟ್‌ಲಾಲ್ ಕಂಪೆನಿ, ಚಿಕ್ಕಪೇಟೆ
ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



ಪಂಡಿತ ಡಿ. ಗೋಪಾಲಚಾರ್ಯರ
# ಜೀವಾಮೃತ.
ದೇಹ ಪುಷ್ಟಿ ಜ್ಞಾಪಕ ಶಕ್ತಿ.

**೧೮೯೬ನೇ ವರ್ಷದಿಂದಲೂ ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧಿಹೊಂದಿದ ಆರೋಗ್ಯಪ್ರದಾಯಿನಿ.**
ಇದರ ಉಪಯೋಗದಿಂದ—

ಬಲಹೀನರಿಗೆ—ಬಲವನ್ನೂ, ದುರ್ಬಲರಿಗೆ—ಪಟುತ್ವವನ್ನೂ,
ನಿದ್ರಾಹೀನರಿಗೆ—ಸುಖನಿದ್ರೆಯನ್ನೂ ನರಗಳ ಸಡಿಲಿಕೆಗೆ—ಖಂಡಪುಷ್ಟಿಯನ್ನೂ,
ಜೀರ್ಣಶಕ್ತಿಯಿಲ್ಲದವರಿಗೆ—ಜೀರ್ಣಶಕ್ತಿಯನ್ನೂ, ರಕ್ತಹೀನರಿಗೆ—ರಕ್ತಪುಷ್ಟಿಯನ್ನೂ,
ತೇಜೋಹೀನರಿಗೆ—ತೇಜಸ್ಸನ್ನೂ, ಮಂದಬುದ್ಧಿಗಳಿಗೆ—ಉಲ್ಲಾಸವನ್ನೂ,
ಜ್ಞಾಪಕಶಕ್ತಿಯಿಲ್ಲದವರಿಗೆ—ಜ್ಞಾಪಕಶಕ್ತಿಯನ್ನೂ,

ಇನ್ನು ಅನೇಕ ಅಸಂಖ್ಯಾತವಾದ ಎಷ್ಟೋ ಸುಗುಣಗಳನ್ನೂ ಉಂಟುಮಾಡುತ್ತದೆ ಸ್ತ್ರೀಪುರುಷರು ಎಲ್ಲಾ ವಯಸ್ಸುಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಸೇವಿಸಬಹುದಾದ ದಿವ್ಯವಾದ ಟಾನಿಕ್ಕು. ಎರಡು ಸೈಜುಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

**ದೊಡ್ಡ ಸ್ಸಾಜು ರೂ. ೩—೪—೦. ಸಣ್ಣ ಸ್ಸಾಜು ರೂ. ೧—೧೨—೦.**

**ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೮೭, ಮದ್ರಾಸು.**

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು.
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 140

# FOR YOUNG MEN.

**Permanent employment substantial cash incomes.**

**FOR**

**Kanara men who are reputable, active and adaptable to this kind of work.**

Our business is more active and more successful right now than ever since it started in **1913** in this country and substantial, permanent positions are open at once at our office for responsible men who want **to make money**

This kind of sales work must be studied and learned. Our visual method is very unusual—moreover amazingly efficient. This is a business where diligent conscientious effort is decently **rewarded with increases**

Men selected for these positions may soon find themselves locally earning two, three & four times as much as they ever made in

**Banking, Clerical, Mechanical work, Selling & Engineering.**

Regardless of previous experience, we train you thoroughly in this **1933** method. We supply all equipments, supplies and training

**NO DEPOSIT. NO COST.**

If you are permanently qualified to merit a successful place for yourself in this winning enterprise you can get along on nominal earnings of

**Rs. 100 to Rs. 500 a month**

while learning as well as after. Make applications immediately or interview personally at our Chief Organising Office

## East & West Insurance Co., Ltd.

HARBOUR VIEW, BUNDER,

MANGALORE.

# ಗಾಂಧಿಯ ಬಿಡುಗಡೆಯಾಗಲಿ!

**ಮೋತಿಲಾಲ ದಿನಾಚರಣೆ!** **ಮೇಜಿಸ್ಟ್ರೇಟರ ಅಪ್ಪಣೆ!**

## ಎಸೆಂಬ್ಲಿಯಲ್ಲಿ ಬಿರುಸು ಪ್ರಶ್ನೋತ್ತರ!

ಮಹಾತ್ಮಾ ಗಾಂಧಿಯವರ ಬಿಡುಗಡೆಯ ಕುರಿತು ನ್ಯೂಡಿಲ್ಲಿಯ ಎಸೆಂಬ್ಲಿಯಲ್ಲಿ ಬಿರುಸು ಪ್ರಶ್ನೋತ್ತರಗಳಾದುವು. ಪ್ರತಿಯೊಬ್ಬ ಸದಸ್ಯನೂ ಹೋಮ್ ಮೆಂಬರರಾದ ಸರ್ ಹೆರ್ರಿ ಹೈಗರನ್ನು ಚುಮ್ಮನೆ ಚೀರುವ ಆವೇಶದಿಂದ ಮಾತನಾಡಿದರು

ಮಿ। ಮಸ್‌ವುದ್ ಅಹ್ಮದ್—ಗಾಂಧಿಜೀಯವರ ಬಿಡುಗಡೆಗಾಗಿ ಜನವರಿಯಲ್ಲಿ ಎಷ್ಟು ಮನವಿಗಳು ಬಂದಿವೆ?

ಹೋಮ್ ಮೆಂಬರ—ಆ ತಿಂಗಳಲ್ಲಿ ಯಾವ ಮನವಿಯೂ ಬಂದಿಲ್ಲ!

ಮಿ ಅಹ್ಮದ್—ಕಾಯಿದೆಭಂಗ ಚಳವಳಿ ಸಂಬಂಧವಾಗಿ ಸರಕಾರವು ಗಾಂಧಿಜೀಯವರೊಡನೆ ವಿಚಾರಿಸಿಕೊಳ್ಳಲು ಪತ್ರವ್ಯವಹಾರ ನಡೆಸುತ್ತಿದೆಯೋ?

ಹೋ ಮೆಂಬರ—ಅಂತಹ ಪತ್ರವ್ಯವಹಾರ ನಡೆದುದಿಲ್ಲ!

ಶ್ರೀ ರಂಗ ಅಯ್ಯರ್—ಗಾಂಧಿಜೀಯವರ ಶಾಸನೋಲ್ಲಂಘನಾ ಚಳವಳಿ ದೃಷ್ಟಿಯು ಈಗ ಅಸ್ಪೃಶ್ಯತಾ ನಿವಾರಣೆಯ ಮೇಲಿದೆಯಷ್ಟೆ, ಈಗ ಅವರನ್ನೂ ಇನ್ನಿತರ ರಾಜಕೀಯ ಕೈದಿಗಳನ್ನೂ ಬಿಡಲಾಗದೋ?

ಹೋ ಮೆಂಬರ—ಅವರ ಮನಸ್ಸು ಈಗ ಈ ಸಮಸ್ಯೆಯ ಮೇಲಿದ್ದಿರಬಹುದು ಆದರೆ ಕೊಂಗ್ರೆಸವಾಲರ ಕಾಯಿದೆಭಂಗ ಕ್ರಮವೇ ಅವರ ಶಪಥವಾಗಿದೆ

ರ ಅಯ್ಯರ್—ರಾಜಕೀಯ ಕೈದಿಗಳನ್ನೂ ಗಾಂಧಿಜೀಯವರನ್ನೂ ಬಂಧಿಸಿಟ್ಟುದರಿಂದಾಗಿ ನವೀನ ರಾಜ್ಯದಾನದ ವೇಳೆ ತೊಡಕುಂಟಾಗುವುದಿಲ್ಲವೇ?

ಹೋ ಮೆಂಬರ—ಏನೇ ಆಗಲಿ, ಶಾಸನೋಲ್ಲಂಘನ ಚಳವಳಿಗಾರರಲ್ಲೇ ಎಲ್ಲಾ ಹೊಂದಿಕೊಂಡಿದೆ ಬೀಗದ ಕೈಯು ಅವರಲ್ಲಿದೆ

ರ ಅಯ್ಯರ್ ಗಾಂಧಿಯವರನ್ನೂ ಅವರ ಅನುಯಾಯಿಗಳನ್ನೂ ಬಿಡುಗಡೆ ಮಾಡಿದರೆ ಅವರು ತಮ್ಮ ಚಳವಳಿಯನ್ನು ಬಿಡಲಾರರೇ?

ಹೋ ಮೆಂಬರ—ಈ ಕ್ರಮವನ್ನು ಕಾರ್ಯತಃ ಹೂಡಿ ನೋಡಲಾಗಿದೆ ಸತ್ಪರಿಣಾಮವುಂಟಾಗಲಿಲ್ಲ

ರ ಅಯ್ಯರ್—ಗಾಂಧಿಜೀಯವರು ಲಂಡನಿನಿಂದ ಹಿಂದಿರುಗಿದಾಗ ವೈಸರಾಯರ ಭೇಟಿಯಾಚಿಸಿದರು ಆ ಭೇಟಿಯನ್ನು ತಿರಸ್ಕರಿಸಲಾಯಿತು ಆಗ ಭೇಟಿ ಕೊಡುತ್ತಿದ್ದರೆ ಶಾಸನೋಲ್ಲಂಘನ ಚಳವಳಿವು ಪುನರಾರಂಭವಾಗುತ್ತಿದ್ದಿಲ್ಲ

ಹೋ ಮೆಂಬರ ನಿಮ್ಮ ಮಾತಿಗೆ ನಾನೊಪ್ಪಲಾರೆ ಕೊಂಗ್ರೆಸ್ಸಿನವರು ಕಾಯಿದೆಭಂಗ ಚಳವಳಿವನ್ನು ಹೂಡಲು ನಿರ್ಧರಿಸಿದ ಮೇಲೆಯೇ ಆ ಭೇಟಿಯನ್ನು ತಿರಸ್ಕರಿಸಲಾಯಿತು ಗಾಂಧಿಯವರ ಸಂಯುಕ್ತ ಪ್ರಾಂತ್ಯ, ಗಡಿನಾಡುಗಳಲ್ಲಿನ ಸ್ಥಿತಿಗತಿಗಳನ್ನು ವಿಚಾರಿಸಿ ಅಲ್ಲಿಯ ಕೊಂಗ್ರೆಸ್‌ವಾಲರನ್ನು ತಡೆಯಬೇಕಿತ್ತು ಸರಕಾರವು ಶಾಂತಿಗೆ ಸಿದ್ಧವಿದೆ ಆದರೆ ದೇಶದ ಶಾಂತಿಭಂಗ ಮಾಡಿ ಅಲ್ಲ

ಶ್ರೀ ಎಸ್ ಸಿ ಮಿತ್ರ—ಕೊಂಗ್ರೆಸ್ಸಿನವರು ತಮ್ಮ ಚಳವಳದ ಭವಿಷತ್ತನ್ನು ನಿರ್ಧರಿಸುವುದಕ್ಕಾಗಿ ಅವರೆಲ್ಲರನ್ನು ಬಿಡಬೇಕು

ಹೋ ಮೆಂಬರ—ಏಕೆ? ಜೈಲಿನ ಹೊರಗೆ ಎಷ್ಟೋ ಮಂದಿ ಕೊಂಗ್ರೆಸ್‌ವಾಲರಿದ್ದಾರೆ. ಅವರು ತಂತಮ್ಮೊಳಗೆ ಈ ಕುರಿತು ನಿರ್ಧರಿಸಿಕೊಳ್ಳಬಹುದಲ್ಲ

ಶ್ರೀ ಗಯಾಪ್ರಸಾದ ಸಿಂಘ—ನೀವು ಹೀಗೆ! ಲೋರ್ಡ್ ಅರ್ವಿನರು, ಚಳವಳವು ಇರುವಾಗಲೂ ಗಾಂಧಿಜೀಯವರಿಗೆ ಭೇಟಿ ಕೊಟ್ಟಿದ್ದಾರೆ.

ಹೊ ಮೆ.—ಸರಿ! ಆಗ ಗಾಂಧಿಯವರು ಚಳವಳವನ್ನು ಹಿಂತೆಗೆಯಲು ಯೋಚಿಸಿದ್ದರು! ಅದಕ್ಕಾಗಿ ಅವರೊಡನೆ ಮಾತುಕತೆ ನಡೆಸಲಾಯಿತು.

ಶ್ರೀ. ರಾಮಕೃಷ್ಣ ರೆಡ್ಡಿ—ನೀವು ಗಾಂಧಿಜೀಯವರನ್ನು ಬಿಡುವುದೇ ಇಲ್ಲವೇ?

ಗಯಾ ಪ್ರಸಾದ—ನನ್ನ ಪ್ರಶ್ನೆಯೂ ಅದೇ!

ಹೊ ಮೆ—ಅವರನ್ನು ಬಿಡುಗಡೆಮಾಡಿದ ಮೇಲೆ ಅವರು ಪುನಃ ಚಳವಳವನ್ನು ಹೂಡುವುದಿಲ್ಲವೆಂಬ ಬಗ್ಗೆ ಪ್ರತಿಜ್ಞೆ ಸಿಕ್ಕರೆ—ಆಲೋಚಿಸ ಬಹುದು

ಗಯಾ ಪ್ರಸಾದ ನಿಮ್ಮ ಓರ್ಡಿನೆನ್ಸುಗಳು ಶಕ್ತಿಯುತವಾಗಿಲ್ಲ ಅದಕ್ಕಾಗಿ ಗಾಂಧಿಜೀಯವರನ್ನು ಬಿಡುಗಡೆ ಮಾಡಲು ನೀವು ಸಮ್ಮತಿಸುವುದಿಲ್ಲ

ಹೊ ಮೆ—ಹಾಗಲ್ಲ ಹಾಗಲ್ಲ ಓರ್ಡಿನೆನ್ಸ್ ಶಸ್ತ್ರವು ಒಳ್ಳೆ ಫಲಕಾರಿಯಾಗಿದೆ ಆದರೆ ಕೊಂಗ್ರೆಸ್‌ವಾಲರ ಪ್ರತಿಜ್ಞೆಯು ದೊರೆಯದೆ ಅವರನ್ನು ಬಿಟ್ಟಬಿಟ್ಟರೆ ಅಪಾಯವಿದೆ

ರಂಗ ಅಯ್ಯರ್—ಅನೇಕರನ್ನು ಬಿಡುಗಡೆ ಮಾಡಲಾಯಿತಷ್ಟೆ! ಅವರು ಚಳವಳವಳವನ್ನು ಪುನರಾರಂಭಿಸಿದರೆ?

ಹೊ ಮೆ—ಅದು ಸರಿ

ಸರ್ ಹರಿ ಸಿಂಘ ಗೌರ್—ಸರಕಾರವು ತನ್ನ ಸೌಹಾರ್ದತೆಯಲ್ಲಿ ಇದೆಯೋ?

ಹೊ ಮೆ—ನಿಜವಾಗಿ ಅದರ ಸೌಹಾರ್ದತೆಯನ್ನು ಮಾನ ಕಾಲದಲ್ಲಿ ಪರೀಕ್ಷಿಸಬಹುದು

ಶ್ರೀ ಅಂಕ್ಲೆಸರಿಯಾ—ಹಿಂದೀಯರಲ್ಲಿ ಬಹುಸಂಖ್ಯಾತರು ಗಾಂಧಿಯವರ ಚಳವಳದಿಂದಾಗಿ ಸೋತು, ನೊಂದು ಬಂದುಕೊಳ್ಳುವುದು ನಿಜವಲ್ಲವೇ? (ಎಲ್ಲರೂ ನಕ್ಕರು)

ಹೊ ಮೆ—ಈ ಅಭಿಪ್ರಾಯವು ಒಂದು ಪಕ್ಷದವರ ಪರವಾಗಿ ಮಾತ್ರ ಆದಂತಾಯಿತು

ಶ್ರೀ ಎಸ್ ಸಿ ಸೆನ್—ಈಗ ಗಾಂಧಿಜೀಯವರು, ದೇವಸ್ಥಾನ ಪ್ರವೇಶ ಸಮಸ್ಯೆಯ ಶೋಧನೆಯಲ್ಲಿ ನಿರತರಾಗಿರುವರು. ಅಲ್ಲದೆ ಸರಕಾರದ ಬೆಂಬಲವನ್ನು ಯಾಚಿಸುತ್ತಿರುವರು ಅವರನ್ನು ಬಿಡುಗಡೆ ಮಾಡಿದರೆ ಅವರು ಚಳವಳವನ್ನಾರಂಭಿಸಲಿಕ್ಕಿಲ್ಲ

ಹೊ ಮೆಂಬರ—ಅದು ಸಂಭವನೀಯವಲ್ಲ ೧೪ನೇ ಜನವರಿ ದಿನವೂ ಗಾಂಧಿಯವರು ಚಳವಳದ ಮುನ್ನಡೆಯ ಕುರಿತು ಮಾಡಿದ ಪ್ರಕಟಣೆ ಇದೋ, ಇಲ್ಲಿದೆ

ಹೋಮ್ ಮೆಂಬರರ ಉತ್ತರಗಳು ಸಭಿಕರಿಗೆ ಅಸಮರ್ಪಕ ಅಸಂತೃಪ್ತಿಕರವೆಂದು ತಿಳಿದು ಬಂದಿದೆ ಗಾಂಧಿಜೀಯವರ ಬಿಡುಗಡೆಗಾಗಿ ಇನ್ನೂ ಹೆಚ್ಚಿನ ತಿಕ್ಕಾಟ ಮುಕ್ಕಾಟವಾಗಲಿದೆ

---

**'ಸಂಘೇ ಶಕ್ತಿಃ ಕಲೌ ಯುಗೇ'** ಎಂಬ ತತ್ವವು ಮುಖ್ಯವು ಸಂಘಶಕ್ತಿಯ ಬಲವನ್ನು ನಾವು ಹಿಡಿಯಬೇಕು. ಈ ಕಾಲದಲ್ಲಿ ಸಂಘಶಕ್ತಿಯ ಮುಂದೆ ರಾಜನಾಗಲಿ, ಗುರುವಾಗಲಿ ಅಲ್ಲ ಇಂತಹ ಸ್ಥಿತಿಯಲ್ಲಿ **'ಮಹಾಜನೋ ಏನಗತಃ ಸ ಪಂಥಃ'** ಮಹಾಜನರ ಮನಸ್ಸು ಹರಿದ ಕಡೆ ಧರ್ಮವಿದೆಯೆಂದು ನಾವು ತಿಳಿದು ವರ್ತಿಸುವುದು ಅವಶ್ಯವೆಂದು ನನಗೆ ತೋರುವುದು ಆದುದರಿಂದ ಈಗ ಬಂದಿರುವ ಅಸ್ಪೃಶ್ಯತಾ ಪ್ರಶ್ನೆಯನ್ನು ಕುರಿತು ನನ್ನ ಅಲ್ಪಬುದ್ಧಿಗೆ ತೋರಿಬಂದ ಅಭಿಪ್ರಾಯವನ್ನು ಸಮಾಜದ ಮುಂದೆ ನಮ್ರತಾಪೂರ್ವಕವಾಗಿ ಇರಿಸಿರುತ್ತೇನೆ

++ ++

## ನೋಟೀಸು

### ಕೆಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.

ಬಸ್ಸು ಕಂಪೆನಿಗಳ ಪರಸ್ಪರ ಮೇಲಾಟಗಳಿಂದ ಕಂಪೆನಿಗಳಿಗೆ ಉಂಟಾಗುವ ನಷ್ಟವನ್ನೂ, ಪ್ರಯಾಣಿಕರಿಗೆ ಉಂಟಾಗುವ ಅಸೌಕರ್ಯಗಳನ್ನೂ, ತೊಂದರೆಗಳನ್ನೂ ಹೋಗಲಾಡಿಸಿ ನಮ್ಮ ಜಿಲ್ಲೆಯ ಪ್ರಯಾಣ ಸೌಕರ್ಯಗಳನ್ನು ವ್ಯವಸ್ಥೆಗೊಳಿಸುವ ಬಗ್ಗೆ ಈ ಮೇಲಿನ ಟಿಕೇಟು ಮಾರಾಟದ ಏಜನ್ಸಿಯು ಸ್ಥಾಪಿಸಲ್ಪಟ್ಟಿರುತ್ತದೆ ಇದು ಈಗ ತತ್ಕಾಲಕ್ಕೆ ದಿ ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ, ಲಿಮಿಟೆಡ್, ದಿ ಹನುಮಾನ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್, ದಿ ಶಂಕರ ವಿಠಲ್ ಮೋಟರ್ ಕಂಪೆನಿ, ಲಿಮಿಟೆಡ್, ದಿ ಸ್ಟಾರ್ ಮೋಟರ್ ಸರ್ವಿಸ್, ದಿ ಬೆಳ್ಳಿ ಸುಬ್ಬಯ್ಯ ಶೆಟ್ಟಿ ಎಂಡ್ ಕೊ, ಮತ್ತು ದಿ ಸುಪರ್ಬ್ ಮೋಟರ್ ಸರ್ವಿಸ್, ಈ ಬಸ್ಸು ಕಂಪೆನಿಗಳ ಟಿಕೇಟು ಮಾರಾಟವನ್ನು ವಹಿಸಿಕೊಂಡು, ಇದೇ ರೀತಿಯಲ್ಲಿ ಇತರ ಬಸ್ಸು ಕಂಪೆನಿಗಳಿಗೂ ಈ ವ್ಯವಸ್ಥೆಯ ಪ್ರಯೋಜನವನ್ನುಂಟುಮಾಡಲು ಉದ್ದೇಶಿಸುತ್ತದೆ

ಈ ಏಜನ್ಸಿಯು ಟಿಕೇಟು ಮಾರಾಟದ ಮೇಲಾಟವನ್ನು ನಿಲ್ಲಿಸಿದೆಯಾದರೂ, ಅದರೊಡನೆ ಪ್ರಯಾಣಿಕರಿಗೆ ಈ ಮೊದಲಿಗಿಂತಲೂ ಅತಿಶಯವಾಗಿ ಹೆಚ್ಚಿನ ಸೌಕರ್ಯಗಳನ್ನು ಕೊಡಲು ನಿಶ್ಚಯಿಸಿದೆ ಡಿಸ್ಟ್ರಿಕ್ಟ ಬೋರ್ಡಿನವರು ನಿರ್ಣಯಿಸಿರುವ ದರಗಳೊಳಗೆ ಅತ್ಯಂತ ಕಡಿಮೆಯಾದ, ಪ್ರಯಾಣಿಕರೊಬ್ಬರಿಗೆ ಮೈಲಿಗೊಂದರ ಆರು ಪೈಯ ದರವನ್ನು, ಮೇಲಾಟ ನಿಂತಿರುವುದಾದರೂ, ಈ ಏಜನ್ಸಿಯು ಹೆಚ್ಚಿಸುವುದಿಲ್ಲ ಪ್ರಯಾಣಿಕರಿಗೆ ಅನುಕೂಲವಾದ ಸಮಯಗಳಿಗೆ ಬಸ್ಸುಗಳು ದೊರಕುವಂತೆಯೂ, ಅವರಿಗೆ ನಿಲ್ಲಲು ಊರುಗಳಲ್ಲಿ ವಿಶ್ರಾಂತಿ ಗೃಹಗಳ ಏರ್ಪಾಡನ್ನೂ, ಅವರ ಅನುಕೂಲತೆಗಳನ್ನು ಒದಗಿಸುವರೆ ಸಾಕಷ್ಟು ನೌಕರರ ನೇಮಕವನ್ನೂ ಈ ಏಜನ್ಸಿಯು ಮಾಡಿರುತ್ತದೆ

ಪ್ರಯಾಣಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾದಲ್ಲಿ ಆ ಒಕ್ಕೆ ಕೆಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಕಾರ್ ಸ್ಟೇಂಡ್, ಮಂಗಳೂರು ಎಂದು ಬರೆದಲ್ಲಿ ಆ ವಿಷಯದಲ್ಲಿ ಕೂಡ್ಲೆ ಸಿಗಾ ತೆಗೆದುಕೊಳ್ಳೋಣಾಗುವುದು

ಪ್ರಯಾಣಿಕರು ಯಥೋಪಯುಕ್ತ ಸೂಚನೆಗಳನ್ನು ಕಳುಹಿದಲ್ಲಿ ಅವುಗಳನ್ನು ಸ್ವೀಕರಿಸಲು ಪ್ರಯತ್ನಿಸೋಣಾಗವುದು

ಈ ಏಜನ್ಸಿಯೊಡನೆ ಎಲ್ಲಾ ಜನರೂ ಸಹಕರಿಸಿ ಇದರ ಪ್ರಯೋಜನವನ್ನು ಹೆಚ್ಚಿಸಿಕೊಳ್ಳಬೇಕಾಗಿ ವಿನಂತಿ

**ದಿ ಕೆಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.**

---

(೩ನೇ ಪುಟದಿಂದ ಮುಂದುವರಿಸಿದ್ದು)

ನಾಡಿನವರೇ ಪತಿತನಾಗುವನು, ತ್ರೇತದಲ್ಲಿ ಪತಿತರ ಸ್ಪರ್ಶಾದಿ ಸಂಸರ್ಗದಲ್ಲಿರುವವನು ಪತಿತನು, ದ್ವಾಪರದಲ್ಲಿ ಇವೆಂಡು ನಿಯಮಗಳೂ ಹೋಗಿ, ಅನ್ನಮಾದಿಯ ಅಂದರೆ—ಪತಿತರಿಂದ ತುಪ್ಪ, ಎಣ್ಣೆ, ಹಾಲು ಇವುಗಳಿಂದ ತಯಾರಿಸಿದ ಆಹಾರ ಸ್ವೀಕರಿಸಿ ತಿಂದಲ್ಲಿ ಪತಿತನಾಗುವನು ಈ ಕಲಿಯುಗಕ್ಕೆ ಕೇವಲ ತನ್ನ ಕರ್ಮವೇ ಒಬ್ಬನ ಪತನಕ್ಕೆ ಕಾರಣವೆಂದೂ ಯಾರ ಸಂಸರ್ಗದಿಂದಲೂ, ನಮ್ಮ ಧರ್ಮವು ಕೆಡುವುದಿಲ್ಲವೆಂದು ಅವರು ಸ್ಪಷ್ಟವಾಗಿ ನುಡಿದಿಯತ್ತ ಅಸ್ಪೃಶ್ಯತೆಗೆ ಎಡೆಯೆಲ್ಲಿ? ಇದು ಇಷ್ಟರವರೆಗ ಉಳಿದ ಬಗೆಯೇ ಆಶ್ಚರ್ಯವಾಗಿದೆ ಸಂಗತಿ ಹಾಗಿದ್ದರೂ, ಇದು ಹೇಗೆ ಉಳಿದುಕೊಂಡು ಒಂದಿದ್ದರೂ, ದೇಶಕಾಲ ಸ್ಥಿತಿಗಳಿಗೂ, ಜನರ ಬುದ್ಧಿವಿಚಾರಕ್ಕೂ ಅನುಸರಿಸಿ, ಇದನ್ನೀಗ ನಿವಾರಿಸಿಕೊಳ್ಳುವುದು ತೀರ ಅವಶ್ಯವು ಆಯಾಯ ಕಾಲಕ್ಕೆ ಸರಿಯಾಗಿ ಧರ್ಮವನ್ನು ತಿದ್ದಿಕೊಳ್ಳುವ ಅಧಿಕಾರವನ್ನು ನಮ್ಮ ಧರ್ಮಶಾಸ್ತ್ರಗಳೇ ಸೂಚಿಸುವುವು ನಮ್ಮ ಭರತಖಂಡದಲ್ಲೀಗ, ಹಿಂದೂ ಧರ್ಮದಲ್ಲಿ ತುಂಬಾ ಒಡಕು ಉಂಟಾಗಿ, ಐಕ್ಯತೆ ಹೋಗಿ, ನಿರುದ್ಯೋಗ ಬಡತನಗಳು ತುಂಬಿರುವುವು. ಇಂಥ ಪರಿಸ್ಥಿತಿಯ ನಿವಾರಣೆಗೆ ನಮ್ಮಲ್ಲಿ ಐಕ್ಯತೆಯು ಅವಶ್ಯವೆಂದು ವಿಚಾರಿಗಳು ಹೇಳುತ್ತಿರುವರು ಇದು ಧರ್ಮಕ್ಕೊಂದು ವಿರುದ್ಧವಲ್ಲ **'ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ'**—ಎಂದಿದೆ ಧರ್ಮದ ರೀತಿಯು ತೀರ ಸೂಕ್ಷ್ಮವಾದುದು ಧರ್ಮಾಧರ್ಮಗಳನ್ನು ವಿಂಗಡಿಸಿ ತೋರಿಸುವುದು ಕಷ್ಟ ಅಲ್ಲದೆ ಒಂದು ಕಾಲದಲ್ಲಿ ಧರ್ಮವೆಂದು ಆದುದು ಇನ್ನೊಂದು ಕಾಲಕ್ಕೆ ಅಧರ್ಮವಾಗುವುದು; ಹಾಗೆಯೇ ಅಧರ್ಮವು ಧರ್ಮವಾಗುವುದು. ಕಲಿಯುಗಕ್ಕೆ

## ಭಾರತ ವರ್ಷದ ಮಹಿಳಾ ಸಮಾಜ.

[illegible] ಗಣ್ಣಾತಿ, ಮಂಗಳೂರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸ್ತ್ರೀಯರು ಕೃಷಿಕಸ್ಥಿ ತೋರಿಸಿದ ಪಾದರಕ್ಷೆಗಳಿಗಿಂತಲೂ ನಿಕೃಷ್ಟರೆಂದು ಪರಿಗಣಿಸಲ್ಪಡತೊಡಗಿದರು. ಇಂಥಾ ಮಹಿಳೆಯರಿಂದ ಹುಟ್ಟುವ ಸಂತಾನವು ಯಾವ ರೀತಿಯ ಸ್ವಾಭಿಮಾನ ಅಥವಾ ದೇಶಾಭಿಮಾನದಿಂದ ಶೋಭಿಸುವುದು? ಸಿಂಹದ ಗರ್ಭದಲ್ಲಿ ಸಿಂಹವೇ ಜನಿಸಬೇಕಲ್ಲದೆ ನರಿಯು ಮರಿಗಳು ಎಂದಿಗೂ ಜನಿಸಲಾರವು. ಯಾವ ಕಾಲದಲ್ಲಿ ಭಾರತೀಯ ಮಹಿಳಾ ಸಮಾಜದ ಅಧಃಪತನ ಉಂಟಾಯಿತೋ ಅಂದಿನಿಂದಲೇ ಪುರುಷ ಸಮಾಜವು ಆಲಸ್ಯದಲ್ಲಿ ಮುಳುಗಿತು. ಇದರಿಂದಾಗಿ ನಾವೆಲ್ಲರೂ ಅನ್ಯರ ಪಾದಾಕ್ರಾಂತರಾದೆವು. ಯಾವ ಕಾಲದಲ್ಲಿ ಈ ದೇಶದಲ್ಲಿ ಪ್ರಾಚೀನ ಆರ್ಯ ಸಭ್ಯತೆಯ ಪ್ರಕಾಶವು ಎಲ್ಲಾ ಕಡೆಗಳಲ್ಲಿ ಹರಡುತ್ತಿತ್ತೋ ಆ ಸಮಯದಲ್ಲಿ ಮಹಿಳೆಯರಿಗೆ ಎಲ್ಲಾ ತರದ ಅಧಿಕಾರವಿತ್ತು. ಎಂದಿಗೆ ಗಾರ್ಗಿಯಂಥಾ ಬ್ರಹ್ಮವಾದಿನಿಯರು ಆರ್ಯಾವರ್ತದಿಂದ್ದ ತೊಲಗಿ ಹೋದರೋ, ಅಂದಿಗೆ ನಾವು ನಮ್ಮ ಸರ್ವಸ್ವವನ್ನು ಕಳೆದುಕೊಂಡಿರುವೆವು. ವೈದಿಕ ಕಾಲದಲ್ಲಿ ಸ್ತ್ರೀ ಸಮಾಜವು ಜಗತ್ತಿಗೆ ಆದರಣೀಯವಾಗಿತ್ತು. ಎಲ್ಲಿಯ ವರೆಗೆಂದರೆ ಸರ್ವಸಾಮಾನ್ಯವಾದ ಸಾರ್ವಜನಿಕ ಕಾರ್ಯಗಳಲ್ಲಿ ಮಾತ್ರವಲ್ಲದೆ ದೊಡ್ಡ ದೊಡ್ಡ ಯಜ್ಞಗಳಲ್ಲಿಯೂ ಭಾಗವಹಿಸುತ್ತಿದ್ದರು. ಪುರುಷರಂತೆಯೇ ವೇದ ಪಾರಾಯಣವನ್ನು ಮಾಡುತ್ತಿದ್ದರು. ರಣಕ್ಷೇತ್ರದಲ್ಲಿ ವಿರಾದಿ ವೀರತೆಯಿಂದ ಶತ್ರುನಿಪಾತಗೈಯುತ್ತಿದ್ದರು. ಇದು ಮಾತ್ರವಲ್ಲದೆ ಪಠನ ಪಾಠನಗಳಲ್ಲಿ ಅತ್ಯಂತ ವಿದುಷಿಯರಾಗಿ ವೇದಗಳಿಂದ ಹೊರಡುತ್ತಿರುವಂಥಾ ಅಪೂರ್ವವಾದ ದಾರ್ಶನಿಕ ಸಿದ್ಧಾಂತಗಳನ್ನು ಪುರುಷರಿಗೆ ಬೋಧಿಸುತ್ತಿದ್ದರು. ವೇದಗಳ ಸೂಕ್ತಗಳನ್ನು ರಚನೆ ಮಾಡಿದಂತಾ ದೊಡ್ಡ ದೊಡ್ಡ ಋಷಿಗಳನ್ನು ವಾಗ್ವಾದಕ್ಕೆ ಕರೆಯುತ್ತಿದ್ದ ಮಹಿಳೆಯರು ಆ ಕಾಲದಲ್ಲಿದ್ದರು. ಜ್ಞಾನ ವಿಜ್ಞಾನಗಳಲ್ಲಿ ನಿಪುಣರಾಗಿದ್ದುದಲ್ಲದೆ ರಾಜನೀತಿಯನ್ನೂ ಚನ್ನಾಗಿ ತಿಳಿ[illegible] ಕೊಂಡಿದ್ದರು. ಪ್ರತಿಯೊಂದು ಸಭೆಗಳಿಗೂ ಉತ್ಸವಗಳಿಗೂ ನಿರಾತಂಕವಾಗಿ ಹೋಗುತ್ತಿದ್ದರು. ಪ್ರಾಚೀನ ಭಾರತದಲ್ಲಿ ಮಹಿಳೆಯರು ಯಾವ ರೀತಿಯ ಗೌರವದಲ್ಲಿರುತ್ತಿದ್ದರೆಂಬು[illegible] ಕುರಿತು ಕೆಲವು ಶಾಸ್ತ್ರೀಯ ಪ್ರಮಾಣಗಳನ್ನು ಇಲ್ಲಿ ಕೊಡುವೆವು.

ಕನ್ಯೆಯರಿಗೆ ಬ್ರಹ್ಮಚರ್ಯ ವ್ರತಂ [illegible] ಯೋಗ್ಯವಾದ ಶಿಕ್ಷಣವನ್ನು ಕೊಟ್ಟು ಯುವಾವಸ್ಥೆಯಲ್ಲಿ ವಿದ್ಯಾವಂತನಾದ ಯುವಕನೊಡನೆ ವಿವಾಹಗೈಯಬೇಕೆಂದು ಅಥರ್ವವೇದ ಮತ್ತು ಇತರ ಶಾಸ್ತ್ರಗ್ರಂಥಗಳಲ್ಲಿ ವರ್ಣಿಸಿರುವುದು. ಶ್ರೀರಾಮನ ತಾಯಿಯಾದ ಕೌಸಲ್ಯೆಯು ಎಲ್ಲಾ ತರದ ವೈದಿಕ ವಿಧಿಗಳನ್ನು ಕಾಲ ಕಾಲಕ್ಕೆ ಸರಿಯಾಗಿ ನೆರವೇರಿಸುತ್ತಿದ್ದಳೆಂಬುದಾಗಿ ವಾಲ್ಮೀಕಿ ರಾಮಾಯಣದ ಅಯೋಧ್ಯಾಕಾಂಡ ಸರ್ಗ ನಾಲ್ಕರಿಂದ ಇಪ್ಪತ್ತರ ವರೆಗ ಬಲ್ಲೀ [illegible]ತಿಯಿಂದ ವಿವರಿಸಿದೆ. ಅದುದರಿಂದಲೇ ಆ ಕಾಲದಲ್ಲಿ ಸ್ತ್ರೀಯರು ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದ[illegible]

ಪ್ರಾಚೀನ ಕಾಲದಲ್ಲಿ ಬಾಲ್ಯ ವಿವಾಹಾದಿ ಕೆಟ್ಟ ರೂಢಿಗಳಿದ್ದಿಲ್ಲ. ಎಲ್ಲಾ ವಿವಾಹಗಳೂ ವೇದೋಕ್ತವಾದ ಧರ್ಮಾನುಕೂಲವಾಗಿಯೇ ನೆರವೇರುತ್ತಿದ್ದವು. ವಧೂವರರು ಪರಸ್ಪರ ಯೋಗ್ಯತೆಯನ್ನು ತಮ್ಮ ವಿದ್ಯಾಬಲದಿಂದಲೇ ಗೊತ್ತುಪಡಿಸಿಕೊಳ್ಳುತ್ತಿದ್ದರಲ್ಲದೆ, ಈಗಿನ ಕಾಲದಲ್ಲಿ ನಡೆಯುವಂತೆ ತಂದೆ ತಾಯಿಗಳು ಎತ್ತಿದ ನೊಗಕ್ಕೆ ಕುತ್ತಿಗೆಯನ್ನೊಡ್ಡುತ್ತಿದ್ದಿಲ್ಲ. ವಧೂವರರಲ್ಲಿ ಇರುವ ವಿದ್ಯಾಬಲವನ್ನು ಅವರವರೇ ತಿಳಿದುಕೊಂಡು ಮಾಡಿಕೊಂಡಂತಹ ಸ್ವಯಂವರ ಪದ್ಧತಿಯಿಂದ ತಮ್ಮ ಜೀವನವನ್ನು ವ್ಯರ್ಥಗೊಳಿಸಿಕೊಂಡಂತಹ ದಂಪತಿಗಳು ಪ್ರಾಚೀನ ಕಾಲದಲ್ಲಿರಲಿಲ್ಲವೆಂಬುದನ್ನು ನಾವು ನಿಸ್ಸಂದೇಹವಾಗಿ ಹೇಳಬಹುದು. ಅನಿವಾರ್ಯ ಸಮಯದಲ್ಲಿ ಸ್ವೈರರೂಪದಲ್ಲಿ ಮಾಡಿಕೊಂಡಂತಹ ಗಾಂಧರ್ವ ವಿವಾಹವು ಕೂಡಾ ಆ ಸಮಯದಲ್ಲಿ ಸಿಂಧುವಾಗುತ್ತಿತ್ತು. ಇದು ಮಾತ್ರವಲ್ಲದೆ, ಕಾರಣಾಂತರದಿಂದ ಯೌವನದಲ್ಲಿಯೇ ಪತಿಯನ್ನು ಕಳಕೊಂಡವರಿಗ ಪುನರ್ವಿವಾಹವನ್ನು ಮಾಡಿಕೊಳ್ಳುವರೇ ಹಿಂದಿನ ಕಾಲದಲ್ಲಿ ಸ್ತ್ರೀಯರಿಗೆ ಅಧಿಕಾರವಿತ್ತು. ಇದೆಲ್ಲವೂ ವೈದಿಕ ಕಾಲದಿಂದ ಮಹಾಭಾರತ, ರಾಮಾಯಣ ಇತ್ಯಾದಿಗಳ ಸಮಯದ ವರೆಗಿನ ಪರಿಸ್ಥಿತಿಗಳು.

ಜಗತ್ತಿನಲ್ಲಿ ಕಾಲ ಕಾಲಕ್ಕೆ ವಿವಿಧ ಪರಿವರ್ತನೆಗಳಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪ್ರಾಕೃತಿಕ ತತ್ವಗಳು ಯಾವ ವಿಧದಲ್ಲಿಯೂ ಪರಿವರ್ತಿಸಲ್ಪಡುವುದಿಲ್ಲ. ಧರ್ಮ, ಅಥವಾ ಆಚಾರ ವಿಚಾರದ ಮೂಲ ಸಿದ್ಧಾಂತವು ಏನೂ ವ್ಯತ್ಯಾಸವಾಗುವುದಿಲ್ಲ. ಜನರು ಮಾತ್ರ ಅವುಗಳನ್ನು ಪದೇ ಪದೇ ಸಮಾಲೋಚನೆಮಾಡುತ್ತಾ ಅವುಗಳಿಂದ ದೊರಯುವ ತತ್ವಗಳ ಆಧಾರದಿಂದ ತರ ತರದ ನವೀನ ಸಭ್ಯತೆಗಳನ್ನು ಹೊರಗೆಡಹುತ್ತಾರೆ. ಇವುಗಳಿಂದಲೇ ಜಗತ್ತಿನಲ್ಲಿ ಒಂದೊಂದು ವಿಧದ ಪರಿವರ್ತನೆಗಳುಂಟಾಗುತ್ತವೆ. ಯಾವ ಪರಿವರ್ತನೆಯು ಮೂಲ ಸಿದ್ಧಾಂತವನ್ನು ಬಿಟ್ಟಿರುತ್ತದೋ ಅದರಿಂದಲೇ ಜನಾಂಗಕ್ಕೆ ಬಹು ವಿಧದ ಹಾನಿಯುಂಟಾಗುತ್ತದೆ. ಮಹಿಳಾ ಸಮಾಜದ ಅಧಃಪತನಕ್ಕೂ ಈ ರೀತಿಯ ಒಂದಾನೊಂದು ನವೀನ ಸಭ್ಯತೆಯ ಆವಿಷ್ಕಾರವೇ ಮುಖ್ಯ ಕಾರಣ.

ಈ ಪ್ರಕಾರ ಹೆಚ್ಚು ಕಡಿಮೆ ಒಂದು ಸಾವಿರ ವರ್ಷಗಳ ವರೆಗೆ ಭಾರತೀಯ ಮಹಿಳೆಯರ ಪರಿಸ್ಥಿತಿಯು ಬಹು ವಿಧದ ಅಧಃಪತನದ ದಾರಿಯಲ್ಲಿ ಬತ್ತು. ಸ್ತ್ರೀಯರು ಎಲ್ಲಾ ವಿಧದಲ್ಲಿಯೂ ಪುರುಷರ ಅಧೀನರಾದರು. ಈ ವಿಧದ ಶೋಚನೀಯ ಪರಿವರ್ತನೆಯ ಮುಖ್ಯ ಕಾರಣವು ಬ್ರಾಹ್ಮಣರು ಮತ್ತು ಧರ್ಮ ಗುರುಗಳೆಂದು ಹೇಳಿಸಿಕೊಳ್ಳುವವರ ಕಪೋಲ ಕಲ್ಪಿತ ಶಾಸ್ತ್ರಗಳು ಮತ್ತು ಸ್ವಾರ್ಥಸಾಧನೆಗಳನ್ನಿಹುದು. ಸ್ತ್ರೀಯರಿಗಿದ್ದ ಎಲ್ಲಾ ಅಧಿಕಾರಗಳನ್ನು ಇವರು ಕಿತ್ತುಕೊಂಡರು. ಕ್ರಮೇಣ ಸ್ತ್ರೀಯರು ಮನೆಯಿಂದ ಹೊರಗೆ ಹೋಗದಂತಹ ಬಂಧನಗಳಿಗೊಳಗಾದರು. ಇದಾದ ಕೆಲವು ಕಾಲಾನಂತರ ಈ ದೇಶಕ್ಕೆ ಮಹಮ್ಮದೀಯರು ಆಕ್ರಮಣವಾಗಿ ಹಿಂದೂ ರಮಣಿಯರ ಅಧಃಪತನವು ಪರಾಕಾಷ್ಠೆಯನ್ನೈದಿತು. ಪುರುಷ ಸಮಾಜದಲ್ಲಿ ಪರಸ್ಪರ ಪಕ್ಷಪಾತಾದಿ ದ್ವೇಷಗಳು ಪ್ರಬಲವಾಗಿದ್ದುದರಿಂದ ಮಹಮ್ಮದೀಯರಿಗೆ ತಮ್ಮ ಶಾಸನವನ್ನು [illegible]

## ಧರ್ಮವೂ ಸಿನೇಮವೂ.

ಧರ್ಮದ ನೀತಿಯೇ ಬೇರೆ, ಸಿನೇಮ(ಎಂಬ ಚಲಚಿತ್ರ)ದ ನೀತಿಯೇ ಬೇರೆ. ಮೊದಲನೆಯದನ್ನು ಎಲ್ಲಿಯೋ ಕೆಲವರು ಮಾತ್ರಗೆ ಗೌರವಿಸುವರು. ಎರಡನೆಯದನ್ನು ಲಕ್ಷಗಟ್ಟಲೆ ಜನರು ಕೊಂಡಾಡುವರು.

ಹೀಗಿದ್ದರೂ ಜಗತ್ತಿನ ಭವಿಷ್ಯತ್ಕಲ್ಯಾಣವು ಆ ಕೆಲವು ಜನರನ್ನವಲಂಬಿಸಿರುವುದೇ ಹೊರತು ಈ ಬಹು ಜನರನ್ನು ಅವಲಂಬಿಸಿರುವುದಿಲ್ಲ, ಏಕೆಂದರೆ ಸಮಾಜವೆಂಬ ಭವನದಲ್ಲಿ ಮಾನವ ಶಿಲಾಭಿತ್ತಿಯ ಪೀಡುಗಲ್ಲುಗಳನ್ನು ಕೂಡಿಸಿಡುವುದಕ್ಕೆ ಅವರೇ ಅಂಟುಗಾರೆಯಂತಿರುವರು. ಆದ್ದರಿಂದ ಚಿಕಾಗೋ ಖೂನಿಕಾರನೊಬ್ಬನ ಸಾಹಸಗಳನ್ನು ಅಥವಾ ಕ್ಯಾಲಿಫೋರ್ನಿಯದ ನೀಚನೊಬ್ಬನು ತನ್ನ ಇಂದ್ರಿಯ ತೃಪ್ತಿಗಾಗಿ ಮಾಡುವ ಮೋಸದ ಒಳಸಂಚುಗಳನ್ನು ಹತ್ತು ಕೋಟಿಗಟ್ಟಲೆಯ ಜನರಿಗೆ ಸಿನೇಮದಲ್ಲಿ ತೋರಿಸುವುದಕ್ಕಿಂತಲೂ ಹತ್ತೇ ಜನರಿಗೆ ಸ್ಪಷ್ಟವಾಗಿಟ್ಟುಕೊಳ್ಳುವ ಬಗೆಯನ್ನೂ ಸಮಾಜದಲ್ಲಿ ಧಾರ್ಮಿಕನಾಗಿರುವ ರೀತಿಯನ್ನೂ ತಿಳಿಸಿಕೊಡುವುದೇ ಮೇಲೆಂಬುದು ನನ್ನ ಮತವು. ಮತ್ತೊಬ್ಬನನ್ನು ತನ್ನ ಕಾಮಲೋಭಗಳಿಗಾಗಿ ಉಪಯೋಗಿಸಿಕೊಂಡು ಮೆರೆಯುವ ನೀಚವಾದ ಐಶ್ವರ್ಯದಲ್ಲಿ ಹೊರಳಾಡುವುದಕ್ಕಿಂತಲೂ ದಟ್ಟದಾರಿದ್ರ್ಯದಲ್ಲಿ ಕಾಲಹಾಕುತ್ತಿದ್ದು ಯಾರ ಬಾಯಿಗೂ ಬಾರದಂತೆ ಯಾವುದೋ ಒಂದು ಮೂಲೆಯಲ್ಲಿ ಸಾಯುವುದೇ ಮೇಲು.

—Rev Herbert Crabtree, Inquirer

++ + +

ಪಡಿಸಲಿಕ್ಕೆ ಮತ್ತಷ್ಟು ಅನ ಕೂಲವಾಯಿತು. ಮಹಮ್ಮದೀಯರ ಅತ್ಯಾಚಾರಗಳಿಂದ ತಮ್ಮ ಮಾನವನ್ನುಳಿಸಿಕೊಳ್ಳುವ ಯೋಗ್ಯ ಉಪಾಯವನ್ನು ಕಾಣದ ಅನೇಕರು ಸ್ತ್ರೀಯರಲ್ಲಿ ಘೋಷಾ (ಪರದೆ) ಪದ್ಧತಿಯನ್ನು ಪ್ರಚುರಗೊಳಿಸಿದರು. ಇದರಿಂದಾಗಿ ಸ್ತ್ರೀಯರಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಜ್ಞಾನವು ನಾಶವಾಯಿತು. [illegible] ಸೂರ್ಯ ಪ್ರಕಾಶವನ್ನು ಮಾತ್ರವಲ್ಲ ತಮ್ಮ ಮನೆಯ ಸಮೀಪ ಸಂಬಂಧಿಕರನ್ನು ನೋಡದಂತಹ ಪ್ರಬಲವಾದ ಮುಸುಕಿನಲ್ಲಿ ಸ್ತ್ರೀಯರು ಇಡಲ್ಪಟ್ಟರು. ಇದರಿಂದಾಗಿ ಅವರ ಶರೀರ ಸ್ವಾಸ್ಥ್ಯವು ಕೆಡುತ್ತಾ ಮಾನಸಿಕ ಮತ್ತು ಆತ್ಮಿಕ ವಿಕಾಸವು ತಡೆಯಲ್ಪಟ್ಟು ದಿನೇ ದಿನೇ ದುರ್ಬಲರಾಗುತ್ತಾ ಬಂದರು. [illegible]ದಗ ಪುರುಷ ಸಮಾಜವು ಮಹಿಳೆಯರನ್ನು ಅಬಲೆಯ ರೆಂಬುದಾಗಿ ಕರೆಯತೊಡಗಿತು. ಒಂದು ಕಾಲದಲ್ಲಿ ಈ ಅಬಲೆಯರ ಗರ್ಭದಿಂದಲೇ ದೊಡ್ಡ ದೊಡ್ಡ ವಿದ್ಯಾವಂತರೂ ಅಪ್ರತಿಮ ಶೂರ ವೀರರೂ ಜನಿಸುತ್ತಿದ್ದರೆಂಬುದನ್ನು ಜನರ ಮರೆತೇಬಿಟ್ಟರು.

— ಸಂಪೂರ್ಣ —

The Canara Industrial & Banking Syndicate Limited.

Established in 1925. Branches Mangalore, Payyanur, Brahmavar, Kumta, Karwar, Hubli & Honnavar

Head Office — UDIPI

Authorised Capital Rs 1 00 000  Subscribed Capital Rs 1 00 000  Paid up Capital Rs 20 000

**Fixed Deposits**

Fixed deposits are received at any office of the Syndicate at the undermentioned rates of interest (interest being paid half yearly).

| | |
|---|---|
| Deposits of 3, 4 and 5 months | 4% |
| Deposits of 6, 7 and 8 months | 4½% |
| Deposits of 9, 10 & 11 months | 5% |
| Deposits of 12 months up to 23 months | 5½% |
| Deposits of 24 months | 6% |

Interest allowed on current account at 2½ percent Savings Bank at [illegible] per cent,

Long and Short term Loans on attractive Schemes are grant

ALL KINDS OF BANKING BUSINESS UNDERTAKEN.

Udipi, 20—1—1938.

P. A. Pai Bros., *Managing Agents*.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳು, ಉಕ್ಕಿ ಉಕ್ಕಿ ಬರುವ ಕೆಮ್ಮಿನ ದೆಸೆಯಿಂದ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷಧ ಕೊಟ್ಟು ರಕ್ಷಿಸಿರಿ!

ಶ್ವಾಸನಾಳದ ಚಿಕಿತ್ಸೆಯು ಅದ್ಭುತ ಶಕ್ತಿ ಕೆಮ್ಮುಗಳಿಂದ ಪಾರುಮಾಡುವುದು. ಮಹತ್ವಪೂರ್ಣ ಕರವಾದ ಈ ರೋಗನಿವಾರಕವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ಔಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯೌಷಧವಾಗಿದೆ

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೋರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು

ಮತ್ತು ಇತರ ಕಡೆಗಳಲ್ಲಿಯೂ ದೊರೆಯುವುದು

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ರಥಬೀದಿ, ಮಂಗಳೂರು

ಡಾಕ್ಟರ್ ವಾಮನ ಗೋಪಾಲರವರ




ಸಾರ್ಸಾಪರಿಲ್ಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ. ಉಪಯೋಗಿಸಿದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್.

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್

ಠಾಕುರದ್ವಾರ, ಮುಂಬಾಯಿ ೨ ಸೋಲ್ ಏಜೆಂಟ್ಸ್ ಶಾ ಕಂಪೆನಿ,

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]. ಮಂಗಳೂರು

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೋಂಗರಕೇರಿ ರಸ್ತೆ, ಮಂಗಳೂರು.

ವೃದ್ಧ ಮೋಹನಲಾಲರ ಅತ್ಯಂತ ಧಾತು ಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅತ್ಯಮೂಲ್ಯವಾದ ೬೦ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿದೆ

## ಮದನಮಸ್ತಪಾಕು

ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ ಗರ್ಮಿಯ ಪರಿಣಾಮ ಎಂಥದಾದರೂ ಪರಮ ನ್ಯೂನತೆ ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಸಾಬಾಗುತ್ತದೆ. ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ. ೪೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ಖ ರೂ ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ ಸವಿರಾದ. ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

| | |
|---|---|
| ಡಾಕ್ಟರ ಎಮ್ ಬಿಯ್ ಟಖು ಎಲ್ ಎಮ್ ಎಂಡ್ ಎಸ್ ಜಿ ಪಿ ವ ೦೩೦ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು | ಡಾಕ್ಟರ ಪಿ ಎನ್ ದತ್ತ ಎಮ್ ಬಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ |

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

## ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಹೆತ್ತವಳಲ್ಲಿ ಕ್ಷೀಣ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸ್ಕಾರವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಗರ್ಭವಾಗುವುದಿಲ್ಲ. ಮೊದಲು ಪೂರ್ಣ ವಿಚಾರ ಮಾಡಿ ಔಷಧ ಬೇಡಿರಿ. ವಿಶ್ವಸನೀಯ ಸರ್ಟಿಫಿಕೇಟು ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಪೂರ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ ವಿ ಪಿ ಖರ್ಚು ೦||೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಸೆರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಹೊಟ್ಟೆಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನ ಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು, ಮಿ ರಾ ಎ, ಎಚ್ ಇನ್ಸಪೆಕ್ಟರ, ಬೆಳಗಾಂವಿ:— ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಿತ್ರನ ಹೆಂಡತಿಯ ಕೆಂಪು ಮತ್ತು ಬಿಳಿ ಸೆರಗು ಇಲ್ಲದಂತಾದವು. ೪೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೪ ವಿ. ಪಿ. ಖರ್ಚ

ವಿಳಾಸ — ಸಂಜೀವಿನಿ ಔಷಧಾಲಯ, ಮು. ಪೋ. ಮಿರಜ, S. M. C.

THE SOUTH INDIA CO-OPERATIVE INSURANCE SOCIETY, LIMITED MADRAS.

**LOCAL BOARD.—**

THE SOUTH CANARA CENTRAL CO-OPERATIVE BANK LTD, MANGALORE

Applications are invited for 'Sub Agents from capable and energetic persons and Co-operative Institutions to canvass business on behalf of the Local Board of the Society at Mangalore

*FOR TERMS APPLY TO—*

***The Secretary,***

South Canara Central Co-operative Bank Ltd KODIALBAIL P O (Mangalore)

*SOUTH CANARA*

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚರ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಮ್ಯಾನೇಜರ್,


EDITED, PRINTED & PUBLISHED BY V. S. KUDVA AT THE SHARADA PRESS, MANGALORE.

[illegible]—ವರ್ಷ ಒಂದಕ್ಕೆ [illegible] | Registered No. M. 498. | ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ ಮತ್ತೆ ವಿಕ್ಷ್ವದ ಸುಡುತ ಬರ ಕಿರವ ।
ಗರಲಕಂಜಿದರೆ ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದ ಧೀರರ ನಿಶ್ಚಿತಾರ್ಥವ ॥ ೨ ॥

ಪುಸ್ತಕ ೨೭. | ಮಂಗಳೂರು ತಾ ೧೭ನೇ ಶುಕ್ರವಾರ ಫೆಬ್ರವರಿ ೧೯೩೩ | (17 2 33) | ಸಂಚಿಕೆ ೭


## THE CANARA BANKING CORPORATION, UDIPI, LTD.
## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head offic: —UDIPI.** **Branches:—Coondapoor, Mangalore, Shimoga & Madras**
ಹೆಡ್ ಆಫೀಸು—ಉಡುಪಿ | ಶಾಖೆ—ಕುಂದಾಪುರ ಮಂಗಳೂರು ಶಿವಮೊಗ್ಗ ಮತ್ತು ಮದ್ರಾಸು

Authorised Capital Rs 3,50,000 Subscribed & Collected up Rs 2,25,000
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅರ್ಪಿಸಿದ ವ ವಸೂಲಾದ ಮೂಲಧನ ರೂ 2,25,000

Consistent with the financial condition prevailing in the market due to the unprecedented economic slump the Canara Banking Corporation reluctantly obliged to reduce the rates of interest on Deposits as follows from 1–1–1933

**Current Deposits** at 2 % on daily credit balances from 1st January to 30th June & at 1 from 1st July to 31st December
**Short-term Deposits** —at $3\frac{1}{2}$ %
**Fixed Deposits** -3 months 4% 4, 5 & months 4½ • 12 months & above [illegible]
Payable quarterly as before

UDIPI 14– 3

N. ANANDA RAO
*Secretary & Manager*

Regd

## ಅಮೃತಾಂಜನ.

ತಲೆ ಕುತ್ತಿಗೆ ಶಿರೋಪೀಡನೆ, ಕಷ್ಟಕೊಡುವ ವಾತ ಧಾತು ನೋವು, ಎದೆನೋವು, ಗಂಟಲು ಹುಣ್ಣುನೋವು ವಿಪರೀತ ಶೀತ ಸಹಿಸಲಸದಳವಾದ ಚಳಿ, ಕೈಕಾಲು ಮುರಗಟ್ಟುವುದು, ಉಳುಕು ಮೊದಲಾದ ವೇದನೆಗಳನ್ನೂ ಬಹಳ ಕ್ಷಣದಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

**ರಿಂಗ್‌ವರ್ಮ್ ಮುಲಾಮು** – ಇದು ಹುಳುಕಡ್ಡಿಯನ್ನೂ ತುರಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ... ರೋಗ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3–8–0 ಅಂಚೆವೆಚ್ಚ ಪ್ರತ್ಯೇಕ

**ಅಮೃತಾಂಜನ ಡಿಪೋ,**
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಬವಾಗಿ,

# ಡೊಂಗರೆ

ಇವರ

## ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

**ಕೆ. ಟಿ. ಡೊಂಗರೇ ಕಂಪೆನಿ.**
ಗಿರಗಾಂವ್, ಮುಂಬಯಿ ನಂ. ೪.
ವಿಜಾಪುರು— ಸಾ ಕಂಪೆನಿ,

INSURE WITH
**The Popular Insurance Co. Ltd.**
Head Office MANGALORE S India
**First of its kind in the West Coast**

CHAIRMAN
*Dewan Bahadur N Subba Rao*

*STRIKING FEATURES*

**Policy Conditions Liberal**
**Claims Settlement Prompt**

MANAGEMENT PURELY INDIAN

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS
LIBERAL TERMS TO COMPETENT MEN

*For further particulars apply to the Head Office*

## ಅಸ್ವಸ್ಥದ ನಂತರ ನವ ಶಕ್ತಿ

ಅಸ್ವಸ್ಥವು ನಿಮ್ಮನ್ನು ನಿಶ್ಶಕ್ತರನ್ನಾಗಿ ಮಾಡಿ ಬಿಡುತ್ತದೆ. ನಿರಾಮಯ ಸಮಯವನ್ನು ನೀವು ನಿರೀಕ್ಷಿಸುತ್ತಾ ಕುಳಿತಿರಬೇಕಾಗುತ್ತದೆ. ಆದರೆ ಪ್ರಕೃತಿ ಸಿದ್ಧವಾದ ಟೋನಿಕ್ ಆಹಾರವೂ, ನಿಶ್ಶಕ್ತರಿಗೆ ಭೂಲೋಕದ ಎಲ್ಲಾ ಕಡೆಗಳಲ್ಲೂ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟಿರುವಂತಹ ರುಚಿಕರವಾದ ಓವಲ್ಟಿನ್ನನ್ನು ನೀವು ಪಾನ ಮಾಡಿದರೆ ನಿಮ್ಮ ಅಶಕ್ತತೆಯು ಶೀಘ್ರವಾಗಿಯೇ ಕಳೆದು ಹೋಗಿ ನವಶಕ್ತಿಯುಂಟಾಗುತ್ತದೆ.

ಓವಲ್ಟಿನ್‌ನ್ನು ಬೆಳೆದ ಬಾರ್ಲಿ ಮೋಲ್ಟು ದನದ ದಪ್ಪ ಕೆನೆ ಹಾಲು ಮತ್ತು ಕೋಳ್ಮೊಗಳಿಂದ ತಯಾರಿಸಲಾಗಿದೆ ಅದು ಶೀಘ್ರವಾಗಿ ಜೀರ್ಣಿಸುತ್ತದೆ ಪರಿಪುಷ್ಟವಾದ ಪೋಷಣಾಶಕ್ತಿಯನ್ನೊಳಗೊಂಡಿದ್ದು ಶರೀರ ಶಕ್ತಿಯನ್ನು ಕೂಡಲೇ ವೃದ್ಧಿಸಿ ಬೆಳೆಸುತ್ತದೆ ತಯಾರಿಸುವಾಗ ಅದಕ್ಕೆ ಹಸ್ತಸ್ಪರ್ಶವಾಗುವುದಿಲ್ಲ

# OVALTINE

TONIC FOOD BEVERAGE

ನಿದ್ರೆ, ನರ ಮತ್ತು ದೇಹಗಳನ್ನು ಪೋಷಿಸುತ್ತದೆ.

ಎಲ್ಲಾ ಕಡೆಗಳ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟರು—ಜೇಮ್ಸ್ ರೈಟ್ 8 ... ರಸ್ ಸ್ಟ್ರೀಟ ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸ ರಂಗೂನುಗಳಲ್ಲಿ


## ಬಿಟ್ಟೀ ಬಸವಯ್ಯ !

ಬಿಟ್ಟೀ ಬಸವಯ್ಯನೆಂದರೆ ಬಿಟ್ಟಿಗಾಗಿ ಕೆಲಸ ಮಾಡುವವನು ಶ್ರಮ ಉಂಟಲ್ಲಾ ರಜಾ ಇದೆಯಲ್ಲಾ ಮಾಡುವುದೇನೆಂದು? ಬಿಟ್ಟಿಗೆ ಕೆಲಸ ಮಾಡುವವನು

× × × ×

ಅವನಂತೆ ನಮ್ಮ ಎಸೆಂಬ್ಲಿಯ ಗತಿ. ಎಲ್ಲಾ ಬಿಟ್ಟಿಗಾಗಿ' ಎಲ್ಲಾ ಎಲ್ಲೊವೆಸ್ಸಿಗಾಗಿ!' ಎಲ್ಲಾ ಗೌರವಕ್ಕಾಗಿ' ಎಲ್ಲಾ ಪ್ರದರ್ಶನಕ್ಕಾಗಿ!

× × + ×

ಎಸೆಂಬ್ಲಿಗಳೆಂದರೆ ಹಿಂದೂದೇಶದ ಪಾರ್ಲಿಮೆಂಟುಗಳು ಇಡೀ ರಾಷ್ಟ್ರದ ಹಿತವು ಅದರ ಭದ್ರಮುಷ್ಟಿಯೊಳಗಿದೆ. ಆದರೆ ನಮ್ಮ ಎಸೆಂಬ್ಲಿಗಳ ಗತಿಯೇನು? ಎಲ್ಲಾ ಬಿಟ್ಟೀ ಬಸವಯ್ಯನಂತೆ!

× × × ×

ರಾಷ್ಟ್ರೀಯ ಪಕ್ಷದವರಿದ್ದಾರೆ! ಅವರ ಬಿಟ್ಟಿಯು ನಡೆಯುತ್ತದೆ ಆದರೆ ಫಲಪ್ರದವಿಲ್ಲ! ಫಲದಾಯಕವಾಗುವಂತೆ ಅವರು ಸಾಹಸವನ್ನು ಮಾಡುವುದೇ ಇಲ್ಲವೆಂದು ಹೇಳ ಬಹುದು!

× × + ×

ನಾಲ್ಕು ಪ್ರಶ್ನೆಗಳನ್ನು ಕಾಗದದ ಮೇಲೆ ಬರೆದು ಹೋಮ್ ಮೆಂಬರರಿಗೆ ಜೋರಿನಿಂದ ಓದಿ ಹೇಳುತ್ತಾರೆ! ಹೋಮ್ ಮೆಂಬರರು ಕೊಟ್ಟ ಉತ್ತರದಲ್ಲಿ ಸಂತುಷ್ಟರಾಗಿ ಕುಳಿತು ಬಿಡುತ್ತಾರೆ!

× × × ×

ಹೋಮ್ ಮೆಂಬರರ ಅನೇಕಾನೇಕ ಉತ್ತರಗಳು "ಮುಂದಾಗುವುದನ್ನು ನೋಡಬೇಕು! ಆದರೂ ಈ ಸದಸ್ಯರು ನೋಡಿ, ಅವುಗಳನ್ನು ಕೇಳಿ, ಹಿ—ಹಿ—ಹಿ—ಹಿ—ಹಿ ಎಂದು ನಕ್ಕು ಸುಮ್ಮನಿದ್ದು ಬಿಡುತ್ತಾರೆ

× + × ×

ರಾಷ್ಟ್ರದ ಚುಕ್ಕಾಣಿಯನ್ನು ಹಿಡಿದಿರುವ ಇವರಿಗೆ ಇವು ಅಧಿಕಾರ ಬಲವನ್ನು ತೋರಿಸಲು ಎಡೆಯಿಲ್ಲ ಬಲವಿಲ್ಲ ಶಕ್ತಿಯಿಲ್ಲ ಯುಕ್ತಿಯಿಲ್ಲ ಯಾರೇನು ಮಾಡುವರು ತಾ ಪಾಪಿಯಾದರೇ?

× × × ×

ಈ ಎಸೆಂಬ್ಲಿ ಸದಸ್ಯರು ಎಷ್ಟು ನಿರ್ಬಲರೆಂದರೆ ಒಂದು ಠರಾವನ್ನು ಇವರೆಲ್ಲರೂ ಕೂಡಿ ಮಂಜೂರು ಮಾಡಿದ್ದರೂ ಗವರ್ನರ್ ಜನರಲರು ಒಂದೇ ಒಂದು ಮಾತಿನಿಂದ ಅದನ್ನು 'ಸರ್ಟಿಫೈ' ಮಾಡಿಬಿಡುತ್ತಾರೆ' ನೋಡಿ! ಎಂತಹ ಅಧಿಕಾರ! ಎಂತಹ ಶಕ್ತಿ!

× × × ×

ಸರಿಯಾದ ಬಲವಿದ್ದರೆ, ಸರಿಯಾದ ಸ್ವಾತಂತ್ರ್ಯವಿರುತ್ತಿದ್ದರೆ ಹಿಂದೀಯ ಪಾರ್ಲಿಮೆಂಟಿನವರ ಅಭಿಮತವನ್ನು ಮೆಟ್ಟಿ ನಡೆಯಲು ಶಕ್ತಿ ಯಾರಿಗುಂಟು? ನೀವೇ ಹೇಳಿ!

× × + ×

ಎಸೆಂಬ್ಲಿಯ ಸದಸ್ಯರು ನ್ಯಾಯಕ್ಕೆ ತಗ್ಗುವವರು ಅಲ್ಲದೆ ಅನ್ಯಾಯಕ್ಕೆ ಬಗ್ಗುವವರು! ಅಂತಹ ದಾಕ್ಷಿಣ್ಯದರಸರು!

× × × ×

ಇಷ್ಟು ವಿಶಾಲವಾದ ಭಾರತವಂತೆ! ಅದಕ್ಕೊಂದು ನಿರ್ಬಲ ಪಾರ್ಲಿಮೆಂಟಂತೆ—ಆ ಪಾರ್ಲಿಮೆಂಟಿಗೆ ಪ್ರಬಲ ಗವರ್ನರ ಜನರಲರಂತೆ—ಆ ಗವರ್ನರ ಜನರಲರ ಮೇಲೊಂದು ಇನ್ನೊಂದು ಬ್ರಿಟಿಷ ಪಾರ್ಲಿಮೆಂಟಂತೆ—ಆ ಪಾರ್ಲಿಮೆಂಟಿನ ಹಿಡಿತದ ಕೈಯು ಟೋರಿಗಳ ಕೈಯಲ್ಲಂತೆ! ಏನು ಸ್ವಾತಂತ್ರ್ಯ! ಹ! ಹ!

× × + ×

ಮೊನ್ನೆ ಗಾಂಧಿಯವರ ಬಿಡುಗಡೆಯ ಕುರಿತು ಡಿಲ್ಲಿಯ ಎಸೆಂಬ್ಲಿಯಲ್ಲಿ ಚರ್ಚೆ ನಡೆಯಿತು. ಅನೇಕರು ರಾಷ್ಟ್ರೀಯ ವಾದಿಗಳು ಗಾಂಧಿಯವರ ವಿಮುಕ್ತತೆಯ ಕುರಿತು ಚರ್ಚಿಸಿದರು ಹೋಮ್ ಮೆಂಬರರ ಉತ್ತರದ ಸಹಿಯೇನು? ಕಾಸಿನ ರಸಕ್ಕಿಂತಲೂ ಕಹಿ!

× + × ×

ಗಾಂಧಿಜೀಯವರು ಲಂಡನಿನಿಂದ ಬಂದೊಡನೆ ವೈಸರಾಯರ ಭೇಟಿಯನ್ನು ಯಾಚಿಸಿದರು. ಆದರೆ ವೈಸರಾಯರು 'ಓರ್ಡಿನೆನ್ಸ್' ಗಳನ್ನು ತೆಗೆಯಬೇಕು ನೀವು ನನ್ನೊಡನೆ ಹೇಳಲಿರುವುದಾದರೆ ನನ್ನನ್ನು ಭೇಟಿಯಾಗದೇ ಬೇಡವೆಂದು ನಿರಾಕರಿಸಿದುದು ಲೋಕವಿದಿತ ವಿಷಯ! ಆ ಹೋಮ್ ಮೆಂಬರರು ಎಲ್ಲಾ ತಪ್ಪನ್ನು ಗಾಂಧಿಯ ತಲೆ ಮೇಲಿಟ್ಟರು!

× × × ×

ಮೊನ್ನೆ ಲಂಡನ್ನಿನಲ್ಲಿ ಸರ್ ಸಾಮುವೇಲ್ ಸಾಹೇಬರು "ಎಲ್ಲಾ ಸರಿಯಾಗಿದೆ' ಕೊಂಚ ಇಲ್ಲದಂತಾಗಿದೆ" ಎಂದು ಊರು ಬಿಟ್ಟು ಹೇಳಿಬಿಟ್ಟರು ಹೊರೆ, ಹಾಗಿರುವುದಾದರೆ ಓರ್ಡಿನೆನ್ಸ್‌ಗಳನ್ನು ಏಕೆ ಜಾರಿಸುವುದಿಲ್ಲ ಸೈರ್ಯವೇಕಿಲ್ಲ?

× + + +

ರೋಗ ಗುಣವಾಗಿದೆಯೆಂದೆನ್ನುವ ನೀವು ರೋಗ ಗುಣವಾದ ಮೇಲೆ ಮದ್ದನ್ನೇಕೆ ಕೊಡುತ್ತಿರುವಿರಿ?

× × × ×

ಸರ್ ಸಾಹೇಬ, ನಿಮ್ಮದೂ ಹಟ, ವೈಸರಾಯರದ್ದೂ ಹಟ, ಆ ಗಾಂಧಿ ಕೊಂಗ್ರೆಸ್ಸಿನ ಹಟ! ಈ ಹಟಗಳ ಮಧ್ಯೆ ಇದ್ದ ನನ್ನಂತಹ ಬಡವರು ಹುಡಿ! ಹ!

ಸ್ವಾಮಿ.

# Canara Bank Limited.

Head Office,—Dongerkery Street, Mangalore Local Office —Bunder, Mangalore

BRANCHES -Karkal Kasargod, Cochin, Udipi, Gangolli, Coondapur, Bombay, Puttur, Calicut Alleppey, Ernakulam, & Chikmagalur

| | |
|---|---|
| Authorised Capital | 10,00,000 - 0 - 0 |
| Paid up Capital | 3,00,000 - 0 - 0 |
| Reserve and other Funds | 5 26,000 - 0 - 0 |

A recent issue of further 3 lacs of capital has been over subscribed within a short period The allotment will be made in January 1933

In view of the existing monetary conditions the phenomenal downfall in the value of land and of commodities in general and in view of the combined action of Banks, both exchange and Indigenous in lowering rates all round, we have been reluctantly compelled as and from 1st January 1933 to reduce the rates of interest on deposits The rules of business have also been amended and copies of the same can be had on application

CURRENT ACCOUNTS —Interest will be paid at 2 per cent p a from 1st January to 30th June and at 1 per cent from 1st July to 31st December

SAVINGS BANK 4 per cent per annum

FIXED DEPOSITS – 5 per cent per annum for 1 year or more

For rates on other deposits please apply to our Agents at Branches or to the undersigned at Head Office

Depositors are requested to take notice that the interest accrued on deposits till 31 – 12 – 32 will be paid to them on 3rd January 1933, and interest accrued thereafter will be paid half yearly on 2nd July and 2nd January or at maturity

Mangalore, 28 – 12 1932

P. Sarvothum Nayak, Ag Secretary & Treasurer



ನಮ್ಮ ಕಾರ್ಖಾನೆಯು ಈಚೆಗೆ ೬ ತಿಂಗಳ್ಳೀ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತು ಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ

ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

## ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತುಬೆಂತು ಹೊಂದಿದವರ ಆಡಳಿತಕ್ಕೊಳಪಟ್ಟು ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು

ಸೆಂಡಲ್‌ಉಡ್, ಜಸ್ಮಿನ್, ಲಿಲಿರೋಸ್, ಲೀಮ್ಹಾ ಸಾಬೂನುಗಳು

(ಲೀಮ್ಹಾ=ನೀಮ ಮಾರ್ಗೊಸಾ=ವಪ್)

ಇವುಗಳು ಮುಖ್ಯವಾದ ಟ್ವಾಲಿಟಗಳು

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು

ಈ ಜಿಲ್ಲೆಗೆ ಪ್ರವರ್ತಕರು —

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913)

East & West Buildings Fort Bombay

VALUATION REPORT for the Triennium ending 31st December 1931

Reveals Certain Striking Features

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation

Interim Bonus Rs 15/ per 1,000/ per year

both on whole life and endowment with Profit Policies becoming claims before 1st January 1934. FORECAST STILL GREATER PROSPERITY

**WANTED LADIES & GENTS in Unrepresented Areas**

Earn Rs. 100/- to 500/- independently per month

*For particulars apply or please call at —*

**Chief Organising Office,**

Harbour View, MANGALORE


## ಬೇರೆ-ಬೇರೆ.

(ಮೈಸೂರು ಸುದ್ದಿಗಾರರಿಂದ)

ಬೆಂಗಳೂರಿನಲ್ಲಿ ಕೆಲವು ಕ್ರಿಸ್ತ ಸ್ಕೂಲುಗಳನ್ನು ಮುಚ್ಚಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಬದಲಾಗಿ ಜೀವನಕ್ಕೆ ಸಾಧಕವಾದ ಕೈಗಾರಿಕೆಗಳನ್ನು ಕಲಿಸಬೇಕೆಂದಿರುತ್ತಾರೆ. ೧೬ ವಯಸ್ಸು ಆಗುವ ವರೆಗೂ ಸ್ತ್ರೀಪುರುಷರಿಬ್ಬರಿಗೂ ವಿದ್ಯಾಭ್ಯಾಸದ ಜೊತೆಗೆ ಕೈಗಾರಿಕೆಗಳನ್ನು ಕಲಿಸುವುದು ಆವಶ್ಯಕ ೧೬ನೇ ವರ್ಷದಿಂದ ಜಾಣ್ಮೆಯುಳ್ಳವರು ಯುನಿವರ್ಸಿಟಿ ಪರೀಕ್ಷೆಗಳಿಗೆ ಹೋಗಬಹುದು ಬಡವರು ಜೀವನಕ್ಕೆ ಸಾಧಕವಾದ ಯಾವುದಾದರೂ ಉದ್ಯೋಗದಲ್ಲಿ ಶಿಕ್ಷಣವನ್ನು ಹೊಂದಿ ಸ್ವಶಕ್ತಿಯಿಂದ ಬದುಕುವ ಏರ್ಪಾಡನ್ನು ಮಾಡಿಕೊಳ್ಳಬೇಕು ಪಾಶ್ಚಾತ್ಯರಲ್ಲಿ ಈ ಏರ್ಪಾಡು ಇರುವುದು

× × × × + + ×

ಮೈಸೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕಳೆದ ವಿಜಯದಶಮಿ ಮಹೋತ್ಸವ ಕಾಲದಲ್ಲಿ ನಡೆದ ಗಲಭೆಯ ಮೊಕದ್ದಮೆಯು ನಡೆಯುತ್ತಲಿರುವುದು ಈ ಮೊಕದ್ದಮೆಯಲ್ಲಿ ಪೋಲೀಸಿನವರೂ ಅತ್ಯಾಚಾರ ಮಾಡಿದರು ಜನಗಳಲ್ಲಿ ಕುಂಟರ್ಯಾರೋ ಕೆಲವರು ಕಲ್ಲುಗಳನ್ನು ಎಸೆದರು ನಿರಪರಾಧಿಗಳಾದ ಪ್ರೇಕ್ಷಕರಿಗೆ ಲಾಠಿ ಏಟುಗಳು ಬಿದ್ದವು ಹಣ್ಣು ತಿಂದವರು ತಪ್ಪಿಸಿಕೊಂಡರು ಇತರರಲ್ಲಿ ಕೆಲವರಿಗೆ ಪೋಲೀಸಿನವ ಏಟು ಈಗ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಲಿದೆ ಇನ್ನು ಮೇಲೆ ಮಹಾರಾಜರವರ ದರ್ಶನವು ಕೂಡ ನಮಗೆ ಬೇಡವೆಂಬ ಮನೋಭಾವವು ಹುಟ್ಟುತ್ತಲಿದೆ ಈ ವಿಚಾರಣೆಯಿಂದ ಪ್ರಯೋಜನವುಂಟೇ? ಪೋಲೀಸಿನವರು ಹೇಳತಕ್ಕ ಮಾತುಗಳೆಲ್ಲ ನಿಜವೇ ಎಂಬದಾಗಿ ಕೆಲವರು ಕೇಳುತ್ತಾರೆ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಕ್ಷೇತ್ರದ ಮಾಡಬೇಕಾದ ಕೆಲಸವನ್ನು ಬಿಡ ಪುದಕ್ಕಾಗುತ್ತದೆಯೇ

+ × × × × × ×

ಅಪರಾಧಿಗಳಿಗಾದರೇ ಆಥವಾ ನಿರಪರಾಧಿಗಳಿಗೇ ಶಿಕ್ಷೆಯನ್ನು ಮಾಡಿಯೇ ಮಾಡಬೇಕು ಇಲ್ಲದೆ ಹೋದರೆ ಸರಕಾರದ ದರ್ಪಕ್ಕೆ ಹಾನಿಯುಂಟಾಗುವುದು ಎಂಬುದಾಗಿ ಕೆಲವು ಜನ ಪೋಲೀಸಿನವರು ಹೇಳುವರು ಲಕ್ಷ ಜನ ಅಪರಾಧಿಗಳು ತಪ್ಪಿಸಿಕೊಂಡರೂ ಬಾಧಕವಿಲ್ಲ ಒಬ್ಬ ನಿರಪರಾಧಿಗೆ ಶಿಕ್ಷೆಯಾದರೆ ಅದನ್ನು ದೇವರು ಸಹಿಸುವುದಿಲ್ಲ ಎಂಬುದಾಗಿ ಧರ್ಮ ಶಾಸ್ತ್ರಗಳ ಹೇಳುತ್ತವೆ ಇದನ್ನು ಶ್ರೀಮಾನ ಮಹಾರಾಜರವ ಗವರ್ನಮೆಂಟಿನವರು ಪರಾಂಬರಿಕೆಗೆ ತಂದುಕೊಳ್ಳಬೇಕು

× × + × × × ×

ಕಳೆದ ಮ್ಯುನಿಸಿಪಲ ಮೀಟಿಂಗಿನಲ್ಲಿ • ಉರ್ದು ಪ್ರೈಮರಿ ಸ್ಕೂಲ್‌ಗಳನ್ನು ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಿಂದ ಎಕ್ಸಿಬಿಷನ್ ಕಟ್ಟಡಕ್ಕೆ ವರ್ಗ ಮಾಡಿದೆವು ಈ ಕಟ್ಟಡದಲ್ಲಿ ಹವಾ ಸರಿಯಾಗಿರುವದೆಂಬುದಾಗಿಯೂ ಅಲ್ಲಿಗೆ ಕಳುಹಿಸಿದರೆ ಮಕ್ಕಳಿಗೆ ಕ್ಷಯರೋಗ ಮೊದಲಾದವುಗಳು ಬರುವುದಿಲ್ಲವೆಂಬುದಾಗಿಯೂ ಮ ಅಲ್ಲೀಖಾನ್‌ರವರೂ ಮೊ ಮಹಮುದ್ ಶೇಟ್‌ರವರೂ ಮ ರಾ। ದಾಸಪ್ಪನವರೂ ವಾದಿಸಿದರು ಮಿ। ಹೈದಾ ಹುಸೇನ್‌ರವರೂ ಮ ಆನಪ್ಪರಿಯವರೂ ಈ ಸ್ಕೂಲಿನ ಹುಡುಗಿಯರು ಬಡವರೆಂಬುದಾಗಿಯೂ ಅರ್ಧ ಮೈಲುಗಳಿಗಿಂತ ಹೆಚ್ಚಾಗಿ ಹೋಗಬೇಕಾಗುತ್ತದೆ ಎಂಬುದಾಗಿಯೂ ಅವರು ಇರತಕ್ಕ ಸ್ಥಳಗಳಲ್ಲಿಯೇ ಆರೋಗ್ಯವಾದ ಮನೆಗಳನ್ನು ಏರ್ಪಡಿಸಿ ಅಲ್ಲೇ ಸ್ಕೂಲ್ ಮಾಡುವುದು ಉತ್ತಮವೆಂಬುದಾಗಿಯೂ ಹೇಳಿದರು ಅವರ ಮಾತಿಗೆ ಬೆಲೆಯು ಕೊಡಲ್ಪಡಲಿಲ್ಲ ಮೊ। ಅಲ್ಲೀಖಾನ್‌ರವರು ನವಾಬರ ವಂಶಕ್ಕೆ ಸೇರಿದವರು ಶ್ರೀಮಾನ್ ಮಹಾರಾಜರವರ ಸಹಾಧ್ಯಾಯಿಗಳಾಗಿದ್ದರು ಮಹಮ್ಮದ್ ಶೇಟ್‌ರವರು ಮತ್ತು ಮ ರಾ। ದಾಸಪ್ಪನವರು ಬಹಳ ದೊಡ್ಡವರು ಆವರ ಮಾತಿಗೆ ಬೆಲೆಯು ಉಂಟಾಯಿತು ಎಂಬುದಾಗಿ ಜನರು ಹೇಳಿ ಕೊಳ್ಳುತ್ತಾರೆ.

## ಪ್ರಕಟಣೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C No 297/30 K F P 94

[illegible] ದಾಸ [illegible] ಅರ್ಜಿದಾರ [illegible]

ಅನಂತಯ್ಯ ಪ್ರೋತಿ—ಎದ್ರಿ

ಇವರೊಳಗೆ

ಸದರಿ ಎದ್ರಿ ಅನಂತಯ್ಯ ಪ್ರೋತಿಗೆ ಈ ಮೂಲಕ ತಿಳಿಸುವದೇನಂದರೆ —

ಸದರಿ ಅಮಲ್‌ದಾರಿಯಲ್ಲಿ ಎದ್ರಿಯು ಮೂಲಗೇಣಿ ಹಕ್ಕಿನ ಶಿವಳ್ಳಿ ಗ್ರಾಮದಲ್ಲಿರುವ ಸ್ಥಿರ ಆಸ್ತಿಯನ್ನು ಅರ್ಜಿದಾರನು ಜಪ್ತು ಮಾಡಿಸಿ ಏಲಮಿನ ಕುರಿತು ಇಸ್ತಿಹಾರು ಡ್ರಾಫ್ಟ್ ಹಾಜರು ಪಡಿಸಿದ್ದಾನೆ ಅದರ ತನಿಖೆ ತಾರೀಖು 28—2—1933ಕ್ಕೆ ಇಟ್ಟಿದೆ ಆಕ್ಷೇಪ ಇದ್ದರೆ ಎದ್ರಿಯು ಆ ದಿವಸ ಹಗಲು 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಸ್ವತಹಾ ಯಾ ನೇಮಕಪಟ್ಟ ಪ್ಲೀಡರರ ಮೂಲಕ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ಪ್ರಕಟಿಸಲಾಗಿಯದೆ

Udipi, 11-2-1933

M. Vittal Kamath, B A B.L
Vakil for Petitione

+++ +

ಊರಗಳಲ್ಲಿ    ಕೇರಿಗಳಲ್ಲಿ    ಪೇಟೆಯಲ್ಲಿ

ಎಲ್ಲವೂ ಎಲ್ಲರಿಗೂ ಮಹೋತ್ಸವವೆನಿಸುವಂತೆ,

ನೂತನ ಸೃಷ್ಟಿಯಾಗಿಯೇ ———— ನೂತನ ರೂಪದಲ್ಲೇ!!

ಹೊಸವರ್ಷದಲ್ಲಿ ಶುಭವುಂಟಾಗ ಬಯಸುವವರು ಶುಭೋದಯದ ಚಿಹ್ನೆಯಾಗಿ ಹೊಸ ಖಾದಿಯನ್ನುಡಲೇ ಬೇಕು.

— ಹಾಗೆಂದೇ —

ಎಲ್ಲರ ಎಲ್ಲ ಬಗೆಯ ಫ್ಯಾಶನುಗಳಿಗೊಪ್ಪುವಂತೆ, ತೀರ ಕಡಿಮೆ ದರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಈಗಾಗಲೇ ತರಿಸಲಾಗಿದೆ

ಬೀಳೀ ಖಾದಿಯ ಕೆಲವು ದರಗಳು —

45''—7 ಆಣೆ, 50''—8 ಆಣೆ, 54''—9 ಆಣೆ

27'' ಮತ್ತು 36'' ಅಗಲದ ಖಾದಿಗೆ ಮತ್ತೂ ಕಡಿಮೆ ಬೆಲೆ!!!

ವಿಶೇಷ ಸೂಚನೆಗಳು — ಹೊಸ ಖಾದಿಯನ್ನು ಮಾತ್ರ ನಾವು ವಿಕ್ರಯಿಸುತ್ತಿರುವೆವೆಂದು ನಾವು ಹೊಸದಾಗಿ ತಿಳಿಸಬೇಕಾಗಿಲ್ಲದ ಕಾರಣ ಹಳೇ ಖಾದಿಯನ್ನು ಇತರ ಕಡೆಗಳಲ್ಲಿ ಕೊಂಡುಕೊಂಡು ಮೋಸಹೋಗದಿರೆಂದು ಸೂಚನೆ.

ಮಂಗಳೂರು ಸ್ವದೇಶೀ ಸ್ಟೋರ್ಸ್, ರಥಬೀದಿ, ಮಂಗಳೂರು



**Panchmal Narasimha Kamath & Brothers,**

CAR STREET MANGALORE

*31st Oct 1932*

To

The Manager,

**Zenith Life Assurance Company, Limited,**

MANGALORE

DEAR SIR,

I have great pleasure to acknowledge receipt of your cheque No B 942296 on the National Bank of India Ltd Bombay for Rs 1954—12—0 in full settlement of the claim on Policy No 3765 of my deceased brother Ganapathi Kamath

The Policy was deliverd to you duly discharged on 21st October 1932 add your Head Office have issued the cheque on the 25th October i. e. **on the very day they received the Policy in their hands**

I am really greatful for the prompt settlement of the claim for which your Company is so well known

YOURS FAITHFULLY,

*Sd* Panchamal Narasimha Kamath



# 56 ವರುಷಗಳ ಅನುಭವಸಿದ್ಧ ಔಷಧಗಳು

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ ಮೇಹ ಪಿತ್ತದ ಬಾಧೆ, ರಕ್ತಪಿತ್ತ ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ 7

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ ಬಾಟ್ಲಿ 1ರ ರೂ 1—2—0 1 ಡಬ್ಬಿ ಮಾತ್ರೆಗೆ ರೂ —6 0 2 ಬಾಟ್ಲಿ ಔಷಧಕ್ಕೂ ರೂ 4 12 0

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

(ಕಸ್ತೂರಿ ಮಿಶ್ರಿತ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಸಂಕುಚಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ದೂರವಾಗಿ ಬಾಣಂತಿಯರು ಪುಷ್ಟಿ ಹೊಂದುವರು ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರಗೆ ಆಣೆ 3 4ನೇ ದಿವಸ ದಿಂದ ದಶಮೂಲ ಬೆಲೆ ಬಾಟ್ಲಿ 1ರ ರೂ 1—8—0. 2 ಬಾಟ್ಲಿಗಳಿಗೆ ರೂ, 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ॥ ಶ್ರೀನಿವಾಸ ಪೈಯವರ ಕೋಟಿನಲ್ಲಿ ಸಿಗುತ್ತವೆ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು


## ಸ್ಥಳೀಕ ನೋಟಗಳ ಬಾಣ

ಕಾರುಸ್ಟ್ರೀಟಿನಲ್ಲಿರುವ Night Soil Binsಗಳಿಗೆ ಇದುವರೆ ರೂ ೧೫೦ ಖರ್ಚು ತಗೆದು ಒಂದು ಕಟ್ಟೋಣವನ್ನು ಕಟ್ಟಿಸುತ್ತಾರೆ. ಆದರೂ ಇಲ್ಲಿಂದ ಅದನ್ನು ತೆಗೆಯುವ ಯೋಜನೆ ನಡೆಯುವುದಿಲ್ಲ. ರಥಬೀದಿಯವರ ದುರದೃಷ್ಟವೇ

o o o o o o

೧೫೦ ರೂಪಾಯಿ ಖರ್ಚುಮಾಡಿ ಕಟ್ಟೋಣ ಕಟ್ಟಿ ಅದಕ್ಕೆ ಒಂದು Mosquito curtain ಸುತ್ತಲೂ ಕಟ್ಟಿದರೆ ತುಂಬಾ ಪ್ರಯೋಜನ ಸೊಳ್ಳೆಗಳು ಹೊರಗೆ ಬರಲಾರವು. ಇದು ಮಾಡಿದರೊಂದು ಉಪಕಾರ.

o o o o o o

ಈ ವರ್ತಮಾನವನ್ನು ಕೇಳಿ ಬೇಸರಿಸುವುದು ಬೇಡ ಮುನ್ಸಿಪಾಲಿಟಿಯವರು ಇನ್ನೊಂದು ಹೊಸ ಟೇಕ್ಸನ್ನು ಹಾಕುವ ಯೋಜನೆಯಲ್ಲಿದ್ದಾರೆ. 'ಇದ್ದ ಮಕ್ಕಳಿಗೆ ರೂಳಿಲ್ಲ. ಇನ್ನೂ ಕೂಡ ಸದಾಶಿವ' ಎಂಬಂತೆ ಒಂದು "ಎಡ್ಯುಕೇಶನಲ್ ಟೇಕ್ಸ್' ಜಾರಿಯಲ್ಲಿ ಬರುತ್ತದೆ

o o o o o o

ಈ ಟೇಕ್ಸ್ ಮಾಡಬಾರದಾಗಿ ಕ್ರೈಸ್ತ ಬಂಧುಗಳು ಅರ್ಜಿ ಮಾಡುತ್ತಾರಾಗಿ ತಿಳಿದುಬರುತ್ತದೆ ಹಿಂದೂ ಬಂಧುಗಳ ಗತಿಯೇನು?

o o o o o o

ಹೆಚ್ಚಿಗೊಂದು ಕಾಫಿ ಹೋಟೇಲು ಊರಲ್ಲೆಲ್ಲ! ಹೆಚ್ಚಾಗೊಮ್ಮೆ ಕಾಫಿ ಕುಡಿಯುವ ಅಭ್ಯಾಸ ಊರಿನವರಿಗೆಲ್ಲ! ಕೈಗೆ ಬಂದಷ್ಟು ಹಣ ಕೊಡುವುದು ಊರವರ ಅಭ್ಯಾಸ!

o o o o o o

ಜನರಲ್ ಡಿಪ್ರೆಶನ್ ಕಾಫಿ ಹೋಟೇಲುಗಳಿಗಿಲ್ಲ! ಅಕ್ಷಯ ಪಾತ್ರದಂತೆ ಹೋಟೇಲೆಂಬುದು! ತೆಗೆದಷ್ಟು ಬರುತ್ತದೆ!

o o o o o o

ದವಸಧಾನ್ಯಗಳಿಗ ಕ್ರಯವು ತೀರ ಇಳಿದಿದೆ ಆದರೆ ಹೋಟೇಲಿನ ತಿಂಡಿತಿನಸುಗಳ ಬೆಲೆ ಕಡಿಮೆಯಾಗಲಿಲ್ಲ

o o o o o o

ನಮ್ಮವರು ಆಲೋಚಿಸುವವರಲ್ಲ ಮೊದಲಿನಿಂದ ಕಾಫಿಯು ಇದ್ದುದೆಂದು ಮೊದಲಿನಷ್ಟೇ ಕ್ರಯವನ್ನು ಕೊಡುತ್ತಿರುವರು

o o o o o o

ಒಂದು ಸೇರು ಗೋದಿ ಹಿಟ್ಟಿನಿಂದ ೨೦ ಟೀಕ್ ರೊಟ್ಟಿಗಳನ್ನು ಮಾಡಿ ಒಂದೊಂದಕ್ಕೆ ಅರ್ಧಾಣೆಯಂತೆ ಮಾರಿದರೆ ೧೦ ಆಣೆ ಕೈಯಲ್ಲಾಯಿತು ಸೇರು ಗೋದಿ ಹಿಟ್ಟಿಗೆ ೪ ದುಡ್ಡು (ತುಪ್ಪ (?) ಎಣ್ಣೆಗೆ ೧ ಆಣೆ ಕಟ್ಟಿಗೆಗೆ ೧ ಆಣೆ ಹೀಗೆ ೩ ಆಣೆ ೩ ಪೈ ವೆಚ್ಚ ಮಾಡಿ ೧೦ ಆಣೆಯನ್ನು ಗಳಿಸುತ್ತಾರೆ ೬ ಆಣೆ ೯ ಪೈ ಲಾಭ

o o o o o o

ಸಂಬಳದ ಬಾಡಿಗ ಮತ್ತು ಲೈಸೆನ್ಸುಗಳ ಬಾಬ್ತು ಈ ಲಾಭದಿಂದ ೨ ಆಣೆ ಕಳೆಯಬಹುದು ಬಾಕಿ ೪ ಆಣೆ ೯ ಪೈ ಹಿಡಿಯೋಣ!

o o o o o o

ಎಂತಹ ಲಾಭ! ಕಣ್ಣು ಮುಚ್ಚಿ ಕೊಡುವವರಿದ್ದರೆ ಕಣ್ಣು ಮುಚ್ಚಿ ಪಡೆಯುವವರಿಲ್ಲವೇ ನಮ್ಮೂರಲ್ಲಿ! ಇದಕ್ಕಾಗಿಯೇ ಬ್ರಾಹ್ಮಣರೂ ಈಗ ಕಾಫಿ ಹೋಟೇಲಿನಾಶ್ರಯಕ್ಕೆ ಧಾವಿಸುತ್ತಿರುವರು

o o o o o o

ಹೋಟೇಲು ಹೋಗಬಾರದೆಂದಲ್ಲ ನನ್ನ ಇರಾದೆ! ಹೀಗಿರಲು ಎಲ್ಲರಿಗೆ ಸಾಧ್ಯವಿಲ್ಲ! ಮನ್ಮಥನ ಬಾಣದಂತೆ ಆ ಮಾರಿ ಕಾಫಿ! ಅದರಿಂದ ಪಾರಾಗುವವನು ಪುಣ್ಯಾತ್ಮ!

o o o o o o

ಆದರೆ ಹಣವೆಂಬುದು ಈಗ ಪ್ರಿಯ ಅದನ್ನು ತಿಂಡಿ ಕಳೆದೂ ಸಿಕ್ಕಾ ಒಟ್ಟೆ ವ್ಯಯಿಸಿ ಮಿತಿಮೀರಿದ ಲಾಭ ಹೊಂದುವವರನ್ನು ಏಕೆ ಪ್ರೋತ್ಸಾಹಿಸ ಬೇಕು?

o o o o o o

ಕಾಫಿ ಹೋಟೇಲುಗಳಿಗೆ ಲೈಸೆನ್ಸು ಕೊಡುವವರು ಈ ಕುರಿತು ಒಂದು ಯೋಜನೆಯನ್ನು ಮಾಡಿದರೆ ಫಲವಿತ್ತು! (ಅವರಿಗೂ ಎಲ್ಲರಿಗೂ).

o o o o o o

ಹರಿಜನರಿಗೆ ತೆರೆಯಲ್ಪಡದ ಕಾಫಿ ಹೋಟೇಲಿಗೆ ಮುಂಬರುವಿಕೆಯಲ್ಲಿ ಲೈಸೆನ್ಸು ಕೊಡಬಾರದೆಂಬ ಆಲೋಚನೆಯಾಗಿದೆ! ತಿಂಡಿ ತಿನಸುಗಳ ಬೆಲೆ ಇಳಿಸದ ಕಾಫಿ ಹೋಟೇಲುಗಾರರಿಗೆ ಲೈಸೆನ್ಸು ಕೊಡಬಾರದೆಂದೂ ನಮ್ಮ ಕೌನ್ಸಿಲರುಗಳು ನಿರ್ಧರಿಸಿದರೆ?

**ದಿವ್ಯ ದೃಷ್ಟಿ!**

++ ++

# DUO-TREAD TIRES.

## Seiberling's Novel Features.

1. Air Cooled.
2. Duo Tread.
3. Twice the Mileage.

FOR

4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ಫುಟ ವಿಚಾರಗಳು

### ಸೆಕೆಂಡರಿ ವಿದ್ಯಾಭ್ಯಾಸವು

ಇದುವರೆಗೆ ಎಂದಾದರೂ ಅಭ್ಯವಾಗಿಯಾಗಲಿ ಹೊಸನಾಗಿಯಾಗಲೀ ಇದ್ದುದೇ ಇಲ್ಲ ಧುಸ್ಥಿಲ್ಲವಾದುದರಿಂದಲೇ, ಹೆಚ್ಚರನ್ನು ಹೆಚ್ಚಿಸಬೇಕೆನ್ನುವ ದುರದೃಷ್ಟವು ನಮ್ಮನ್ನು ಹಿಂಸೆಗೀಡು ಮಾಡಿರುವುದು ಗುಟ್ಟೇನು ಬಲ್ಲಿರಾ? ಸೆಕೆಂಡರಿ ವಿದ್ಯಾಭ್ಯಾಸವು ಸ್ವಯಂ ಸಂಪನ್ನವಾಗಿರಬೇಕೆಂದೇ ಸರಕಾರದ ಅಧಿಕಾರಿಗಳಲ್ಲೂ ಇತರ ಮಹನೀಯ ಅಧಿಕಾರಿಗಳಲ್ಲೂ ಹರಡಿರುವ ಅಭಿಪ್ರಾಯವೇ ಇದಕ್ಕೆ ಕಾರಣವಾಗಿವೆ. ಹೀಗೆ, ಮೊದಲೇ ಕುರುಡಾದವನ ಕಣ್ಣುಗುಡ್ಡೆಗಳನ್ನೂ ಕಿತ್ತು ಬಿಸುಡುವಂತೆ, ಈಗಂತೂ ಆರ್ಥಿಕ ಅಡಚಣೆಯು ಇನ್ನಷ್ಟು ಪೂರ್ಣವಾಗಿ ಸೆಕೆಂಡರಿ ವಿದ್ಯಾಭ್ಯಾಸವನ್ನು ಬೆಂದೊಣಗಿಸಿಯದೆ. ಸಾಕ್ಷ್ಯವಾಗಿ, ಕಳೆದ ವರ್ಷದ ಬಗ್ಗೆ ಇಂಡಿಯಾ ಸರಕಾರವು ಹೊರಡಿಸಿರುವ ರಿಪೋರ್ಟನ್ನು ಓದಬಹುದು. ಸರಕಾರೀ ಶಾಲೆಗಳಲ್ಲಿ ತರ್ಬೇತಾದ ಉಪಾಧ್ಯಾಯರ ಸಂಖ್ಯೆ ಹೆಚ್ಚಾಗಿದ್ದು ಶಿಕ್ಷಣವು ಸಂಪನ್ನವಾಗಿದೆಯಂತೆ, ಹಲವೆಡೆಗಳಲ್ಲಿ ಮುಖ್ಯೋಪಾಧ್ಯಾಯರ ಮೇಲ್ತನಿಖೆ ಚೆನ್ನಾಗಿರದೆ ಆಲಸ್ಯವೇ ಹೆಚ್ಚಿರುವುದಂತೆ, ಉಪಾಧ್ಯಾಯರನ್ನು ಯಾವಾಗ ಹೊರಡಿಸುವರೊ ಎಂಬ ಅಂಜಿಕೆಯಿಂದಲೂ ಶಿಕ್ಷಣವು ಕಳೆಗೆಟ್ಟಿರುವುದಂತೆ. ಖಾಸಗಿಯಾಗಿ ಮಿಶನರಿಗಳಾಗಲಿ ಸಾರ್ವಜನಿಕರಾಗಲಿ ನಡೆಸಿ ಬರುವ ಶಾಲೆಗಳಲ್ಲಿ ಶಿಕ್ಷಣವು ಸಾಮಾನ್ಯವಾಗಿ ಸರಕಾರೀ ಶಾಲೆಗಳಿಗಿಂತ ಉತ್ತಮವಾಗಿ ಉಪಾಧ್ಯಾಯರು ಮೆಹನತ್ತಿನಿಂದ ಕೆಲಸ ಮಾಡುತ್ತಾರೆಂದು ಸಹ ಇದೇ ವರದಿಯಲ್ಲಿ ತಿಳಿದು ಬರುವಲ್ಲಿ, ಸರಕಾರಿ ಶಾಲೆಗಳಿಗೆ ಈ ದುಸ್ಥಿತಿಯೇಕೆ?

### ಸಿನೆಮಾ ಮತ್ತು ಮಕ್ಕಳು

ಇಂಗ್ಲೆಂಡಿನದೊಂದು ಮ್ಯುನಿಸಿಪಾಲಿಟಿಯು ಒಬ್ಬ ಡಾಕ್ಟರರನ್ನು, ೫೦೦ ಮಕ್ಕಳನ್ನು ವಿಚಾರಿಸಿ ಈ ಬಗ್ಗೆ ಅಗತ್ಯ ತೋರುವ ಅಭಿಪ್ರಾಯ ಕೊಡುವಂತೆ ನೇಮಿಸಿತು. ಅವರ ಅಭಿಪ್ರಾಯಗಳು ಈಗ ಪ್ರಕಟವಾಗಿವೆ. ೧೧—೧೪ನೇ ವಯಸ್ಸಿನ ಬಾಲಕರನ್ನು ಇವರು ವಿಚಾರಿಸಿದ್ದಲ್ಲಿ, ೬೦ ಮಕ್ಕಳು ಸಿನೆಮಾ ನೋಡಿಲ್ಲವೆಂದರು, ಸೇಕಡಾ ೧೨ ನೋಡಿದವರಲ್ಲಿ ಸೇಕಡಾ ೬೪ಕ್ಕೆ ದುಸ್ವಪ್ನಗಳೇ ಬಾಧಿಸತೊಡಗಿದುವು. ಬಾಲಿಕೆಯರಲ್ಲಿ ಸಿನೆಮಾ ನೋಡುವ ಅಭ್ಯಾಸವು ಹೆಚ್ಚಾಗಿದೆ. ನೂರರಲ್ಲಿ ೪೪ರಂತೆ ಪ್ರತಿವಾರಕ್ಕೊಮ್ಮೆ ಸಿನೆಮಾ ನೋಡುವರು. ಮೂವರು ವಾರಕ್ಕೆ ಮೂರು ಸಲ, ಒಬ್ಬನು ಆರು ಸಲ ನೋಡಿದವರಿದ್ದರು. ಯಾವ ತರದ ಚಿತ್ರಗಳು ಮನೋರಂಜಕವೆಂದು ವೋಟು ತೆಗೆದಲ್ಲಿ, ಸಾಹಸಗಳ ೧೮೪, ತಮಾಷೆಗಳು ೧೦೫ ವೋಟು ಪಡೆದಿವೆ. ಅತಿಹೇಯವಾಗಿ ನಾಟಕಗಳೆಂದುದು ಎಂದರೆ ಪ್ರೇಮ ಚಿತ್ರಗಳು, ಈ ಬಗ್ಗೆ ೧೫೩ ಜನರೂ, ಕೊಲೆಗಳ ಬಗ್ಗೆ ೧೨೩ ಜನರೂ ಅವುಗಳನ್ನು ನಿಂದಿಸಿದರು. ೫೦ ಮಂದಿಗೆ ಯುದ್ಧ ಚಿತ್ರವು ಪ್ರಿಯವಾದರೆ, ೬೭ಕ್ಕೆ ಅಪ್ರಿಯವಾಯಿತು. ಸೇಕಡಾ ೫೩ ಮಂದಿ ಬೆದರಿದವರೂ, ನೂರಕ್ಕೆ ೪೬ರಂತೆ ದೃಷ್ಟಿಮಂದವಾದವರೂ ದೊರೆತಿರುವರು. ಎಲ್ಲರೂ 'ಸಿನೆಮಾ ನೋಡಿ ಕಲಿತುದೇನು?' ಎಂಬ ಪ್ರಶ್ನೆ ಕೇಳಿದಾಗ,—ಸೊನ್ನೆ ಎಂಬ ಉತ್ತರ ದೊರೆತಿದೆ. ಹಾಳು ಮಾತುಗಳನ್ನು ಕಲಿತೆವು ಎಂದೂ ಅಭಿಪ್ರಾಯವುಂಟು. ಡಾಕ್ಟರರು "ಶಾಲಾ ಮಕ್ಕಳು ಸಿನೆಮಾವನ್ನು ಈಗಣ ಪರಿಸ್ಥಿತಿಯಲ್ಲಿರುವ ಹಾಗೆ ನೋಡಿದರೆ, ಅವರ ಆರೋಗ್ಯವೂ ದೇಹಸ್ಥಿತಿಯೂ ಕಡುವುದಾಗಿಯೂ, ನೈತಿಕ ಹಾಗೂ ಮಾನಸಿಕ ಬೆಳವಣಿಗೆಗಳು ತಡೆಗಟ್ಟುವುವಾಗಿಯೂ" ತೀರ್ಮಾನಿಸಿ ಬರೆದಿರುವರು.

### ಶಿಕ್ಷಕರ ಕೂಟಕ್ಕೆ ಐರ್ವಿನರ ಉಪದೇಶವು

ಇಂಗ್ಲೆಂಡಿನಲ್ಲಿ, ಇಂಗ್ಲಿಷ ಶಿಕ್ಷಕರಿಗೆ ಕುರಿತು ಇಲ್ಲಿ ಇಂಡಿಯದಲ್ಲಿ ವೈಸ್ರಾಯರಾಗಿದ್ದಾಗ ಅಲ್ಲ. ಪ್ರಜಾಸತ್ತಾತ್ಮಕ ರಾಜ್ಯಭಾರದ ಕ್ರಮದಲ್ಲಿ, ಸಾಮಾನ್ಯನಾದೊಬ್ಬನ ಸಾಮಾನ್ಯ ತಿಳುವಳಿಕೆ ಮತ್ತು ಅಭಿಪ್ರಾಯಗಳ ಮೇಲೆಯೆ ರಾಜ್ಯಭಾರದ ಪರಿಣಾಮ ಫಲಗಳು ಹೊಂದಿರುತ್ತವೆ. ಅದುದರಿಂದ ಇದೀ ಹಿಂದಿನ ಮೇಲೆ ಬೋಧನೆಯ ಪ್ರಚಾರವನ್ನು ಮಾಡುವ ಬದಲಾಗಿ ಪ್ರತಿಯೊಂದು ವಿಷಯದಲ್ಲಿ ಎಳೆಯವರು ವ್ಯಕ್ತಿಗತವಾಗಿ ವಿಚಾರ ಮಾಡುವ ಹಾಗೆ ಶಿಕ್ಷಕರು ಸಾಧಿಸಬೇಕು. 'ಶಾಬಾಶ' ಮತ್ತು 'ಶಕಾರ'ಗಳ ನಡುವೆ ಇರುವ ಭೇದವನ್ನು ವಿದ್ಯಾರ್ಥಿಗಳು ಕಂಡುಕೊಳ್ಳುವ ಹಾಗಾಗಬೇಕು. ಈಗಂತೂ ಇಂತಹ ಪ್ರಚಾರ ಪ್ರವೃತ್ತಿಯೇ ಬೇಕಾಗಿದೆ. ಆಗ ವಿಷಯಗಳಿಗೆ ಮಾತ್ರ ವಿದ್ಯಾರ್ಥಿಗಳು ಆಸಕ್ತಿ ತೋರಿದರೆ, ಪ್ರಯೋಜನವಿಲ್ಲ. ಶಾಸಕರು ತಮ್ಮ ಮಟ್ಟಿಗೆ ರಾಷ್ಟ್ರೀಯರಾಗಿರುವುದು ಸಾಲದು. ಅಂತರ್ ಜನಾಂಗಿಕ ವಿಚಾರಗಳನ್ನು ಅವರು ಬಹು ಮಟ್ಟಿಗೆ ಶೋಧಿಸಿ ಮನನ ಮಾಡುವುದಗತ್ಯ. ಆಗ ತಾನೇ ಜನಾಂಗದ ಹೃದಯದೊಳಗೆ ವಿವೇಕಮಯವಾದ ವಿಚಾರಗಳು ಏಳುವುವು. ಈ ವಿಧದಲ್ಲಿ ಕೆಲಸ ಮಾಡುವಲ್ಲಿ, ಬಹಳ ಕುತೂಹಲ ನಿರೀಕ್ಷಿಸಬಹುದಾಗಿದೆ. ಶೈರು ಉತ್ತಮವಾಗ ಬೇಕಾದರೆ, ಉಳುವುದೂ ಉತ್ತಮವಾಗಬೇಡವೆ? ಇಷ್ಟು ಅವರ ಭಾಷಣದ ಸಾರಾಂಶ. ನಮ್ಮ ದೇಶದ ವಿದ್ಯಾಭ್ಯಾಸವೂ ಇದೇ ರೀತಿ ಪ್ರಚಾರಗೊಳ್ಳಬೇಕೆ? ಬೇಡವೆ?

### ಬರ್ಮದ ಪೃಥಕ್ಕರಣ

ಇದೇ ಈಗ ಸಾಮ್ರಾಜ್ಯವಾದಿಗಳಿಗೆ ಬೇಕಾದುದು. ಈ ವಿಷಯ ಚಪಲಪಡಿಸಿದಷ್ಟು ಕಡಿಮೆಯೆ ಎಂದು ಅವರ ನಂಬುಗೆ. ಆದರೆ ಬರ್ಮದ ಜನರು ಮಾತ್ರ ಅದರ ಅರ್ಥವನ್ನು ತಮಗೆ ತಿಳಿದಂತೆಯೇ ಕೌನ್ಸಿಲು ಚುನಾವಣೆಯ ಫಲಿತಾಂಶದಲ್ಲಿ ವ್ಯಕ್ತಪಡಿಸಿರುವರು. ಬರ್ಮವನ್ನು ಇಂಡಿಯಾದಿಂದ ಪ್ರತ್ಯೇಕಗೊಳಿಸಬಾರದೆಂದು ಅವರ ಅಭಿಮತ. ಅದರೂ ಇನ್ನೂ ಪ್ರಯತ್ನಿಸಿ ಪ್ರತ್ಯೇಕಿಸುವರೆ ಒತ್ತಾಯಗಳಾಗಿವೆ ಎಂದು ತಿಳಿದು, ಬರ್ಮೀಯ ಪ್ರತಿನಿಧಿಗಳು ಎಸೆಂಬ್ಲಿಯ ಹಲವು ಪ್ರತಿನಿಧಿಗಳನ್ನು ಸ್ವತಃ ಕಂಡು ಅಭಿಪ್ರಾಯ ಪಡೆಯುತಲಿದ್ದಾರೆ. 'ಬರ್ಮದವರು ಕೆಲವು ಶರ್ತಗೊಳಪಟ್ಟು ಪ್ರತ್ಯೇಕಗೊಳ್ಳುವರಾದರೆ ನಮ್ಮ ಒಪ್ಪಿಗೆ' ಎಂದೂ ಕೆಲವು ಎಸೆಂಬ್ಲಿ ಮೆಂಬರರು ತಿಳಿಸಿರುವರೆಂದೂ ನಾಮದಾರ ಶಾಸ್ತ್ರಿಗಳು ದೂರುತ್ತಾರೆ. ಒಮ್ಮೆ ಬರ್ಮವು ಬೇರೆಯಾಗುವ ಅಧಿಕಾರವನ್ನು ಇಟ್ಟುಕೊಳ್ಳಬಹುದಾದರೆ, ಬರ್ಮವನ್ನು ಬೇರ್ಪಡಿಸಬೇಕೆನ್ನುವವರ ಹಾವಳಿ ಪಿತೂರಿಗಳಿಗೆ ಸಂಚಕಾರ ಕೊಟ್ಟಂತಾಗುವುದೆಂದೇ ಸೂಚನೆಯಲ್ಲವೇ? ಎಂಬ ಪ್ರಶ್ನೆಯಿದೆ. ಬರ್ಮದಂತೆ ಇತರ ಪ್ರಾಂತ್ಯಗಳೂ ಶರ್ತದ ಮೇಲೆ ಒಂದುಗೂಡಲೊಪ್ಪಿ, ಮೆಲ್ಲನೆ ಬೇರೆಯಾಗಲಾರವೆ? ಎಂಬ ಬೆದರಿಕೆಯೂ ಇದೆ. ಹೇಗೂ ಮಾಡಿ ಇದುವರೆಗೆ ಸೋದರತೆಯಿಂದ ಬಾಳಿರುವ ಪ್ರಾಂತ್ಯಗಳ ವಿಚ್ಛೇದಕ್ಕಾಗಿ ಒಪ್ಪಲಾರವೆಂದೇ ತೋರುವುದು. ಸೃಷ್ಟಿಯು ಈ ದೇಶವನ್ನು ಹುಟ್ಟಿಸುವಾಗಲೆ, ಬರ್ಮವೊಂದು ದೂರದಲ್ಲಿ ಬೇರೆಯಾಗಿರುವ ಹಾಗೆಯೆ ಮಾಡಿತ್ತು. ಕಾರಣ ಈ ರೀತಿ [illegible]ಯಾಗಿದೆ, ಆದರೆ, ಪ್ರಾಂತ್ಯಗಳೆಲ್ಲ ಒಂದುಗೂಡಿಯೆ ಇವೆ. ಅವು ಯಾವಾಗಲೂ ಒಂದೇ ಇದ್ದಾವಲ್ಲ?

### ಒತ್ತಾಯದ ಮೂಲಕ ವ್ಯಾಪಾರದ ಪ್ರಯತ್ನಗಳು

ಲಂಕೇಶಯರಿನ ಹತ್ತೀ ಬಟ್ಟೆಗಳ ವ್ಯಾಪಾರವು ಸುಸೂತ್ರವಾಗಿ ಸಾಗುವ ಹಾಗೆ ಮಾಡಬೇಕಾದ ರಕ್ಷಣೋಪಾಯಗಳನ್ನು ಖಂಡಿತವಾಗಿಯೂ ಕೈಗೊಳ್ಳಲಾಗುವುದಾಗಿ ಪಾರ್ಲಿಮೆಂಟು ಭರವಸೆಯನ್ನು ಎಂತೂ ಕೊಟ್ಟಿರುವುದು. ಬ್ರಿಟಿಷ ಬಟ್ಟೆಗೆ ಈಗ ಇಂಡಿಯಾದಲ್ಲಿ ರಿಯಾಯಿತಿಯಲ್ಲಿ ಸುಂಕ ಹೊರಿಸಿರುವುದನ್ನು ತಿಳಿದೂ ಲಂಕೇಶಯರಿನ ಬಟ್ಟೆಯ ಮೇಲಣ ಸುಂಕವನ್ನು ಇನ್ನಷ್ಟು 'ಸ್ಪೆಶಲ್' ಆಗಿ ಇಳಿಸಲೇ ಬೇಕೆಂದು ಮೆಂಬರರೊಬ್ಬರು ವಾದಿಸಿದರು! ಮತ್ತೊಬ್ಬರು, ಬ್ರಿಟಿಷ ಬಟ್ಟೆ ಮೊದಲಾದವನ್ನು ಇಂಡಿಯವು ಕೊಂಡುಕೊಳ್ಳುವುದಾಗಿಯೂ ಭದ್ರತೆ ಕೊಡಬೇಕೆಂದೂ ಕೇಳಿದರು!! ಆದರೆ ಇಂಡಿಯದ ಹತ್ತಿಯನ್ನು ಬ್ರಿಟಿಷ ಗಿರಣಿಗಳು ಮುಂದೆ ಎಂದಾದರೂ ವಿಶೇಷ ಪ್ರಮಾಣದಲ್ಲಿ ಕೊಂಡುಕೊಳ್ಳುವವಾಗಿ ಭರವಸೆಯನ್ನು ಕೊಡಲೇಬೇಕೆಂದು ಯಾರೂ ಸೂಚಿಸಿಕೊಂಡಿಲ್ಲವಾದರೂ, ಗಿರಣಿಗಳು ಹಾಗೆ ಮಾಡಬಹುದೆಂದು ಊಹಿಸುವುದಷ್ಟೆ, ಈ ಮೆಂಬರ ಮಹಾಶಯರ ಮಹಾ ವಾಕ್ಯವಾಯಿತು. ಇಂಡಿಯವು ಜಾಮೀನು ಕೊಡಲು ಬದ್ಧವಾಗಿಲ್ಲ, ಸಾಧ್ಯವೂ ಅಲ್ಲ. ಇಂಡಿಯವು ತನಗೆ ಬೇಕಾದಷ್ಟು ಬಟ್ಟೆಯ ಪೂರೈಕೆಯನ್ನು ತಾನು ಮಾಡಿಕೊಂಡೇ ತೀರಿಸಬೇಕೆಂದು ನಿಶ್ಚಯಿಸಿರುವುದೆಂಬುದನ್ನು ಇನ್ನೂ ಲಂಕೇಶಯರು ಕೇಳಿಲ್ಲವೆ? ಬ್ರಿಟಿಷರ ಸರಕಿನ ಮೇಲೆ ಸುಂಕ ಇಳಿಸಿದರೂ, ಸ್ವದೇಶೀ ಪ್ರಚಾರವು ತಡೆಯಲಾರದು.

### ಜಪಾನು ಏನುಮಾಡುವುದು?

ಮೆಂಚೂರಿಯದಲ್ಲಿ ತನ್ನ ಅಧಿಕಾರವನ್ನು ಬಲವಾಗಿ ಪ್ರಯೋಗಿಸಿ, ಲೀಗ್ ಒಫ್ ನೇಶನ್ಸಿನ ಯಾವತ್ತು ಸೂಚನೆಗಳಿಗೆ ಗಮನಕೊಡದೆ ದುಡುಕುತ್ತಿದ್ದ ಜಪಾನು, ಈಗ ಆ ಜನಾಂಗ ಸಮಿತಿಯು ಕೊಟ್ಟಿರುವ ಕೊನೆಯ ಸೂಚನೆಯನ್ನು ಆಲಿಸಿ, ಮೆಂಚೂರಿಯವು ತನಗೆ ಇಷ್ಟವಾದುದಲ್ಲವೆಂದು ಒಪ್ಪಿ ಚೀನಾದೊಡನೆ ಸಂಧಾನಮಾಡುವುದೆ? ಅಥವಾ ಹಾಗೆ ಮಾಡಲಾರದಿರುವಲ್ಲಿ ಮುಂದಣ ದುರ್ದೈವವನ್ನು ಕಾಣುವುದೆ? ಎಂಬುದೊಂದು ಪ್ರಶ್ನೆಯು ಈಗ ಎದುರಿಗೆ ಬಂದಿದೆ. ಜಪಾನಿನ ಹಣವು ಯೆನ್ ನಾಣ್ಯ, ಮೊದಲಿನ ಅದರ ಬೆಲೆಗೂ ಈಗಣ ಬೆಲೆಗೂ ಸೇಕಡಾ ೬೦ರಷ್ಟು ಅಂತರವಿದೆ,—ಎಂದರೆ ೬೯ ಸೆಂಟ್ಸಿನಿಂದ ೨೦ ಸೆಂಟ್ಸಿಗೆ ಇಳಿದಿದೆ. ೧೯೩೧ನೇ ಇಸವಿ ಸಪ್ಟೆಂಬರಿನಲ್ಲಿದ್ದ ಅದರ ಆರ್ಥಿಕ ಸ್ಥಿತಿಯು ಈಗ ಸೈನ್ಯದ ಖರ್ಚು ಹೆಚ್ಚಿ, ಕಟ್ಟುಹೋಗಿದೆ. ಕಂದಾಯಕ್ಕಿಂತ ೬೦ ಮಿಲ್ಲಿಯ ಯೆನ್ ಹೆಚ್ಚಿಗೆ ಖರ್ಚು, ೫೬ ಮಿಲ್ಲಿಯ ಯೆನ್ ಸಾಲ ಪಡಕೊಂಡಿದೆ. ಕಳೆದ ಜೂನ್‌ನಲ್ಲಿ ಜಪಾನಿಗೆ ೩೧೯ ಕೋಟಿ ಯೆನ್ ಸಾಲವಿತ್ತು. ಅದರ ಬಡ್ಡಿಯು ಈಗ ನಾಣ್ಯದ ಬೆಲೆಯ ಕಡಿಮೆಯಾಗಿ ೫೪ ಕೋಟಿ ಯೆನ್ ನಷ್ಟವಾಗಿದೆ. ಈಗಂತೂ, ಎಲ್ಲಾ ಕಂದಾಯದ ಆದಾಯವನ್ನು ಭೂಸೈನ್ಯಕ್ಕಾಗಿ ವ್ಯಯಿಸುವುದೆಂದು ಬಜೇಟು ಹೊಂದಿದ್ದಿದೆ, ಮೂರನೇ ಒಂದಂಶವು ನೌಕಾಸೈನ್ಯಕ್ಕಾಗಿ ಎಂದಿದೆ. ಈ ವರ್ಷದ ಖರ್ಚಿಗೆ ನೂರು ಕೋಟಿ ಯೆನ್ (೬೧ ಮಿಲ್ಲಿಯ ಪವನು) ಸಾಲವೆತ್ತಬೇಕಾಗಿಯೆ ಇದೆ. ಖಜಾನೆಯಲ್ಲಿರುವ ಚಿನ್ನವು ೪೫ ಕೋಟಿ ಯೆನ್ ನಷ್ಟ ಮಾತ್ರ ಇದೆ. ಹೀಗಿರುವಾಗ, ಜಗತ್ತಿನ ಪ್ರಬಲ ರಾಷ್ಟ್ರಗಳ ಮಾತು ಮೀರಿ ಜಪಾನು ನಡೆಯಲಾರದೆಂದು ಅಂದಾಜು.

+ + + +

## NOTE...S
## ನೋಟಗಳು

ಅಖಿಲ ಕರ್ನಾಟಕದ ಹಿಂದೀ ಸಮ್ಮೇಲನವು ಮಂಗಳೂರಲ್ಲಿ ಜರಗುವುದಾಗಿ ನಿಶ್ಚಯವಾಗಿದೆ. ಅಖಿಲ ಕರ್ನಾಟಕ ಪರಿಷತ್ತುಗಳು ಮೈಸೂರಲ್ಲಲ್ಲದೆ ಮಂಗಳೂರಲ್ಲಿ ನಡೆವುದು ಬರೇ ಕಂಪೋಜಿಟರಗಳಿಗೂ ಮುದ್ರಾಪಿಸಲೂ ಅಸಂಭವವೆಂದು ತಿಳಿದು ಮಂಗಳೂರನ್ನು ಬೆಂಗಳೂರೆಂದು ಹಿಂದೂ ಪತ್ರಿಕೆ ಛಾಪಿಸಿ ಮರುದಿನ ತಿದ್ದಿಕೊಳ್ಳಬೇಕಾಯಿತು.

• • • •

ನೂರನೆ ತರಗತಿಯ ತಮಿಳು ತೆಲುಗು ಮಲೆಯಾಳ ಜಿಲ್ಲೆಗಳ ಮೂಲೆಹಳ್ಳಿಗಳ ನೂತನಗಳಿಗೆ ಸ್ಥಳಾಭಾವವಿಲ್ಲದೆ 'ಹಿಂದೂ' ಪತ್ರಿಕೆಯಲ್ಲಿ, ದಕ್ಷಿಣ ಕನ್ನಡದ ನ್ಯೂಸ್ ಪುಸ್ತಕ ರೂಪವಾಗಿ ಕಳಿಸಿದರೆ ಅಕ್ಷರ ಪ್ರಮಾಣದಲ್ಲಿ ಹೊರಡುವ ಕ್ರಮವೂ ಮಾಮೂಲಾಗಿದೆ. ದಕ್ಷಿಣ 'ಕನ್ನಡ'ವೂ ಒಂದು ಜಿಲ್ಲೆಯೇ? 'ಕನ್ನಡ' ಎಂದಿರಬೇಕಾದರೆ 'ಮೈಸೂರೊಳಗೆ' ಎಂದು ಅದರ ಅಭಿಪ್ರಾಯ.

• • • •

ಕರ್ನಾಟಕ ಸಾಹಿತ್ಯ ಪರಿಷತ್ತು ಮಂಗಳೂರಲ್ಲಿ ಸೇರಿದಾಗ ಮೈಸೂರಿನಿಂದ ಮೂರುವರೆ ಪ್ರತಿನಿಧಿಗಳೇನೋ ಇದ್ದರೆಂದು. ಅಲ್ಲಿನವರೇ ಅಭಿಪ್ರಾಯ ಕೊಟ್ಟಿದ್ದರು. ಅದಕ್ಕಾಗಿ ಅದನ್ನು ಯಾರೂ ದೂರಬೇಕಾಗಿಲ್ಲ. ಅದು ಬರೇ ಕರ್ನಾಟಕ ಸಾಹಿತ್ಯ ಪರಿಷತ್ತು ಹೊಂತಾಗಿ, 'ಅಖಿಲ ಕರ್ನಾಟಕ'ದ್ದಾಗಿಲ್ಲವಷ್ಟೆ. ಅಖಿಲ ಕರ್ನಾಟಕಕ್ಕೆಲ್ಲ ಆತ್ಮೀಯತೆ ಇಲ್ಲಿ, ಇಲ್ಲಿ ಅದು ಆತ್ತೆ ಒದ್ದಿದೆ. ತವರ್ಮನೆ ಅಲ್ಲಿ, ಅಲ್ಲಿ ಅದು ತವರವಾಗಿ ಕಲಾಯಿ ಕೊಟ್ಟು ಕಳೆ ಹೆಚ್ಚಿರುವುದಷ್ಟೆ.

• • • •

ಆದರೂ, ಈಗ ಬೆಂಗಳೂರಿನ ಪ್ರೊಫೆಸರ್ ವಾಡಿಯಾರವರೇ ಅಧ್ಯಕ್ಷರಾಗುವರಲ್ಲ! ಆದುದರಿಂದ ಮೈಸೂರು, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಪ್ರಾಂತ್ಯಗಳಿಂದಲ್ಲ ಹೊರಡುವ ಪ್ರತಿನಿಧಿಗಳಿಗೆಲ್ಲ ಈಗಲೆ ಬಸ್ ಟಿಕೇಟ ಪಡೆದಿವೆ. ಈ ಜಿಲ್ಲೆಯ ಅಧ್ಯಕ್ಷರಾಗೂ ಇದ್ದಿದ್ದರೆ ಅಧಿವೇಶನವೂ ಇಲ್ಲೇ ಆಗಿದ್ದರೆ, ಮೈಸೂರಿಂದ ಬರುವ ಬಸ್ಸುಗಳನ್ನು ಖಾಲಿಯಾಗಿ, ಇದೀ ಲೈನ್ ಮೇಲಿಂದ ಏಜಂಟರುಗಳನ್ನೆ ಪೆಸೆಂಜರುಗಳನ್ನಾಗಿ ಪ್ರತಿನಿಧಿಗಳಂತೆ ತರಬೇಕಾಗುತ್ತಿತ್ತು!

• • • •

ಮೈಸೂರೇ, ರಾಯಲ ಸೀಮೆ ಈಗ ಯಾವ ಪ್ರಾಂತ್ಯದ್ದಾಯಿತ? ತೆಲುಗು ಕೃಷ್ಣದೇವ ರಾಯನ ವರ್ಧಂತಿಯನ್ನು ಕಡ ತೆಲುಗರಿಂದ ಅಲ್ಲಿ ಜರುಗಿಸಿ, ಪೂರ್ವೋತ್ತರ ವಿಚಾರ ಮಾಡಿ, ಸೀಡೆಡ ಡಿಸ್ಟ್ರಿಕ್ಟುಗಳನ್ನು ತೆಲುಗಾಗಿಯೆ ಇನ್ನೂ ಮಾಡದಿರುವುದಕ್ಕೆ ಅಧ್ಯಕ್ಷರು ಹಿಂದಣ ಇತರ ತೆಲುಗರ ತಪ್ಪನ್ನು ತಾವೇ ಪ್ರಾಯಶ್ಚಿತ್ತ ಮಾಡಿಸುವರೆ ವ್ಯಾಖ್ಯಾನ ಮಾಡಿ, ಅನಂತಪುರದಲ್ಲಿ ಅನಂತೋತ್ಸಾಹ ಹುಟ್ಟಿಸಿದರು. 'ಹಿಂದೂ' ಪತ್ರಿಕೆ ಸೋಮವಾರವೇ ಪ್ರಕಟಿಸಿಯದೆ.

→ ← ← ←

# ಮುಂಬಾಯಿಯಲ್ಲಿ ಧುರೀಣರ ಅಸಂತೃಪ್ತಿ!

## ಪ್ರಚಂಡ ಸಭೆ. ನಿಮ್ಮ ದಾನವು ನಿಷ್ಪ್ರಯೋಜಕ.

# "ರಾಜಕೀಯ ಕೈದಿಗಳ ಬಿಡುಗಡೆಯಾಗಲಿ!"

ತಾ. ೯ನೇ ದಿನ ಮುಂಬಾಯಿಯ ಕೌವಾಸ್ಜಿ ಜಹಾಂಗೀರ್ ಹೋಲ್‌ನಲ್ಲಿ ಪ್ರಮುಖ ಮುಖಂಡರ ಆಶ್ರಯದಿಂದ ಪ್ರಚಂಡ ಸಭೆಯೊಂದು ಜರಗಿತು. ರೌಂಡ್ ಟೇಬಲ್ ಪ್ರತಿನಿಧಿಗಳಾಗಿದ್ದ ಸರ್ ಚಿಮನ್‌ಲಾಲ್ ಸೆತಲ್‌ವಾಡರು ಅಧ್ಯಕ್ಷರಾಗಿದ್ದರು. ಸರ್ ಗೋವಿಂದ ರಾವ್ ಪ್ರಧಾನ್, ಸರ್ ಎಮ್. ವಿಶ್ವೇಶ್ವರಯ್ಯ, ಶ್ರೀ ಮಥುರ್‌ದಾಸ್ ವಿಸ್ಸಂಜಿ, ಶ್ರೀ ಎಚ್. ಪಿ ಮೋದಿ, ಶ್ರೀ ಆರ್ ಪಿ ಮಸಾನಿ, ಶ್ರೀ ಕೆ ಕೆ ಮೆಹ್ತ ಪ್ರೊಫೆಸರ್ ದಾವರ್ ಮೊದಲಾದ ಧುರೀಣರು ಭಾಷಣ ಮಾಡಿದರು. ಕೊನೆಗೆ "ಮುಂಬಾಯಿಯ ಜನತೆಯ ತೃತೀಯ ಪರಿಷತ್ತಿನ ಪರಿಣಾಮವಾಗಿ ಹೊರಬಿದ್ದಿರುವ ಸುಧಾರಣೆಗಳು ಹಿಂದೀಯ ಜನಾಂಗದ ಆಶಯವನ್ನು ನೆರವೇರಿಸುವಂತಹದ್ದಲ್ಲ, ಅವುಗಳು ಅಸಮರ್ಪಕ—ಅಸಂತೃಪ್ತಿಕರ. ಹಿಂದೀಯರನ್ನು ಸಂತುಷ್ಟಗೊಳಿಸುವರೆ ಆ ಸುಧಾರಣೆಗಳನ್ನು ಇನ್ನೂ ರೂಪುಗೊಳಿಸದಿದ್ದರೆ ಸರಕಾರವು ಕೊಡಲಿರುವ ರಾಜ್ಯದಾನವು ಪ್ರಯೋಜನಕಾರಿಯಾಗಲಿಕ್ಕಿಲ್ಲವೆಂದೂ ಶಾಂತಿಸ್ಥಾಪನೆಯಾಗಬೇಕಾದರೆ ರಾಜಬಂಧಿಗಳಾದ ಎಲ್ಲಾ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಸಭೆಯು ಠರಾವನ್ನು ಮಂಜೂರ ಮಾಡಿತು. ಅಧ್ಯಕ್ಷರಾದ ಸರ್ ಚಿಮನ್‌ಲಾಲರು ಮುಂದಕ್ಕೆ ಸಿಗಲಿರುವ ರಾಜ್ಯದಾನದ ನ್ಯೂನತೆಗಳನ್ನು ಹೆಕ್ಕಿ ಹೊರಹಾಕುತ್ತಾ—ಫೆಡರೇಶನನ್ನು ಕೊಡುತ್ತಾರಂತೆ. ಆಶ್ರಿತ ರಾಜ್ಯಗಳ ಗತಿಯೇನೋ ನಿರ್ಧರಿಸಲ್ಪಡಲಿಲ್ಲ. ರಕ್ಷಣೆ ಮತ್ತು ಬಾಹ್ಯ ದೇಶಗಳ ವ್ಯವಹಾರ ವಿಚಾರಗಳು ಗವರ್ನರ್ ಜನರಲರ ಕೈಯಲ್ಲಿ ಇರಬೇಕಂತೆ. ಅಲ್ಲದೆ ಎಲ್ಲಾ ವಿಷಯಗಳಲ್ಲೂ ನಿರಂಕುಶ ಪ್ರಭುಗಳಂತೆ ಅವರು ಒರ್ಡಿನೆನ್ಸುಗಳಲ್ಲದೆ ಶಾಶ್ವತವಾದ ಕಾನೂನು ಕ್ರಮಗಳನ್ನೂ ಸ್ಥಾಪಿಸಿ ಬಿಡಬಹುದಂತೆ! ಇದು ಯಾವ ನ್ಯಾಯ? ಹೀಗಾದರೆ ಹಿಂದೀಯರಿಗೆ ತಮ್ಮ ರಾಜ್ಯದಾಡಳಿತೆಯಲ್ಲಿ ಯಾವ ಜವಾಬ್ದಾರಿಕೆ ಕೊಟ್ಟಂತಾಯಿತು? ಹಿಂದೂ ದೇಶಕ್ಕೊಂದು ರಿಜರ್ವ ಬೇಂಕನ್ನು ಸ್ಥಾಪಿಸಿ ಕರೆನ್ಸಿ ಮತ್ತು ಎಕ್ಸ್‌ಚೇಂಜುಗಳ ವ್ಯವಸ್ಥೆ ಮಾಡಬೇಕೆಂದು ಯೋಜಿಸಿದ್ದಾರೆ. ಈ ವ್ಯವಸ್ಥೆಗಳಲ್ಲಿ ಅಧಿಕಾರವು ಹಿಂದೀಯರ ನ್ಯಾಯವಿಧಾಯಕ ಸಭೆಗಳವರ ಹಸ್ತವಿರುವುದೋ ಎಂದು ತಿಳಿದು ಬಂದಿಲ್ಲ. ಸಂಯುಕ್ತ ನ್ಯಾಯವಿಧಾಯಕ ಸಭೆಯು ತನ್ನ ಇಚ್ಛೆಯಂತೆ ತನ್ನ ಭದ್ರತೆಗಾಗಿ ಬೇಕಾದ ಏರ್ಪಾಡುಗಳನ್ನು ಮಾಡಬಹುದೋ ಏನೆಂದು ನಿರ್ಧರಿಸಲಿಲ್ಲ. ಈ ವಿಷಯದಲ್ಲೂ ಗವರ್ನರ್ ಜನರಲರು ನ್ಯಾಯವಿಧಾಯಕ ಸದಸ್ಯರನ್ನು ಮುಟ್ಟಿ ನಡೆಯಲಿಡಗೊಡುವ ಯೋಜನೆಗಳನ್ನು ಹೂಡಿದ್ದಾರೆ. ವೈಸರಾಯರು ಬ್ರಿಟಿಷ ಸರಕಾರವು ಹೇಳಿದಂತೆ, ಭಾರತ ಸಚಿವರು ಹೇಳಿದಂತೆ ಮಾಡಬೇಕಂತೆ. ಹಾಗಾದರೆ ಹಿಂದೀಯರಿಗೆ ಏನು ದೊರೆತಂತಾಯಿತು? ಇದು ಹಿಂದೀಯ ಜನಾಂಗವನ್ನು ಸಂತೃಪ್ತಿಗೊಳಿಸುವ ಸುಧಾರಣೆಗಳೇ? ಸೈನ್ಯದ ವೆಚ್ಚವನ್ನು ಕಡಿಮೆಮಾಡುವ ಕುರಿತೂ ಯಾವ ನಿರ್ಧಾರವೂ ಆಗಿರುವುದಿಲ್ಲ. ಈ ಸುಧಾರಣಾ ಸಂಕಾರದಲ್ಲಿ ಬ್ರಿಟಿಷರಿಗೆ ಭದ್ರತೆಗಳು ಅಧಿಕ, ಹಿಂದೀಯರಿಗೆ ಸ್ವಾತಂತ್ರ್ಯದ ನೆಂಳು ವಿರಳ. ಎಷ್ಟಲ್ಲೆಂದರೆ—ನಮಗೆ ಡೊಮಿನಿಯನ್ ಸ್ಟೇಟಸ್ ಕೂಡಾ ಬರುವುದೆಂದು ಭಾವಿಸಲೆಡೆಯಿಲ್ಲ! ಶಾಂತಿಸ್ಥಾಪನೆಗಾಗಿ ರಾಜಕೀಯ ಕೈದಿಗಳನ್ನೆಲ್ಲ ಬಂಧವಿಮುಕ್ತಗೊಳಿಸಬೇಕು. ಅವರು ಹೊರ ಬಂದು ಕಾಯಿದೆಭಂಗ ಚಳವಳವನ್ನು ಆರಂಭಿಸದೆ ಭಾವೀ ರಾಜ್ಯರಚನೆಗೆ ಬೇಕಾದ ಸುಧಾರಣೆಗಳನ್ನು ರೂಪಿಸಬೇಕು ಎಂದರು.

### ಸಪ್ರೂಗಳಿಗೆ ಪಾಠ ದೊರೆಯಿತು

ದಿವಂಗತ ಪಂಡಿತ ಮೋತಿಲಾಲ ನೆಹರುರವರ ಮರಣದಿನಾಚರಣೆಗಾಗಿ ತಾ. ೬ನೇ ದಿನ ಅಲ್ಲಹಾಬಾದಿನ ಪುರುಷೋತ್ತಮ ದಾಸ ಪಾರ್ಕಿನಲ್ಲಿ ಸರ್ ತೇಜ ಬಹದ್ದೂರ್ ಸಪ್ರೂಗಳವರ ಅಧ್ಯಕ್ಷತೆಯಲ್ಲೊಂದು ಅಭಿಮಾನ ಸಭೆಯು ಜರಗಲಿಕ್ಕಿದ್ದಿತು. ಈ ಸಭೆಯನ್ನು ಶ್ರೀಯುತ ಸಿ ವೈ ಚಿಂತಾಮಣಿ, ಪಂಡಿತ ಹಿದ್ಯಾರ್ನಾಥ್ ಕುಂಜ್ರು, ಖ್ವಾಜಾ ಅಬ್ದುಲ್ ಮಜೀದರೇ ಮೊದಲಾದ ಮಂದ ಪಕ್ಷೀಯರೇ ಜರಗಿಸುವುದರಲ್ಲಿದ್ದರು. ಇದನ್ನು ತಿಳಿದ ಅಲ್ಲಿಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಒಡನೆ ಅಂತಹ ಸಭೆಯನ್ನು ನಿಷೇಧಿಸಿ ಬಿಟ್ಟು ಪೋಲೀಸ್ ಪಡೆಯನ್ನು ಕಾವಲಿಗೋಸ್ಕರ ಕಳುಹಿಸಿದರು. ಈ ಅನಪೇಕ್ಷಿತ ಘಟನೆಯನ್ನು ಕಂಡು ಸಪ್ರೂರವರು ಆಶ್ಚರ್ಯಗೊಂಡರು. ಸರಕಾರದ ಬಲಗೈಯಂತಿರುವ ತನ್ನ ಅಧ್ಯಕ್ಷತೆಯಲ್ಲಿ ಜರಗಲಿದ್ದ ಸಭೆಯನ್ನು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ನಿಷೇಧಿಸಿ ತನಗೂ ತನ್ನ ಮಂದ ಪಕ್ಷೀಯ ಒಡನಾಡಿಗಳಿಗೂ ಅಪಮಾನವನ್ನುಂಟುಮಾಡುವರೆಂದು ಅವರು ಭಾವಿಸಿರಲಿಲ್ಲ. ಹೈಕೋರ್ಟು ಜಡ್ಜ ಸಪ್ರೂರವರ ವಸತಿಗೆ ಖಾನ್ ಬಹದ್ದೂರ್ ಇಕ್ರಮ್ ಹುಸ್ಸೇನರು ಹೋಗಿ ಸಪ್ರೂಗಳನ್ನು ಈಚೆಗೆ ಕರೆದು ಜರಗಬೇಕೆಂದು ನಿರ್ಧಾರವಾದ ಆ ಸಭೆಯು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಂದ ನಿಷೇಧಿಸಲ್ಪಟ್ಟಿದೆಯೆಂದು ಭಾವಭರಿತರಾಗಿ ಹೇಳಿದರು.

ಸಪ್ರೂಗಳಿಗೆ ಪಾಠ ಸಿಕ್ಕಿದಂತಾಯಿತು. ಈಗ ಸಪ್ರೂರವರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಸಭೆ ಜರಗೋಣದ ರೀತಿ ಕ್ರಮ, ಉದ್ದೇಶಗಳನ್ನು ಪೂರ್ವ ಭಾವಿಯಾಗಿ ತಿಳಿದುಕೊಳ್ಳಲು ಯತ್ನಿಸದೆ, ಏಕಾಏಕಿಯಾಗಿ ಸಭೆಯನ್ನು ಒಮ್ಮೆಲೆ ನಿಷೇಧಿಸಿದ ಅನುಚಿತ ಕಾರ್ಯಕ್ಕಾಗಿ ಬೆಸರಗೊಂಡು ಒಂದು ದೊಡ್ಡ ಪ್ರಕಟಣೆಯನ್ನು ಮಾಡಿರುತ್ತಾರೆ. ತನ್ನ ಅಧ್ಯಕ್ಷತೆಯಲ್ಲಿ ಜರಗಲಿದ್ದ ಆ ಸಭೆಯಲ್ಲಿ ಕೊಂಗ್ರೆಸ್ ಪ್ರದರ್ಶನವು ಆಗುವಂತಿದ್ದಿಲ್ಲ, ಅಲ್ಲದೆ ಮೆರವಣಿಗೆ, ಜಯಕಾರ ಮೊದಲಾದ ಯಾವ ಕಾನೂನು ವಿರೋಧ ಪ್ರದರ್ಶನವು ಜರಗುತ್ತಿದ್ದಿಲ್ಲ. ತನ್ನ ಒಡನಾಡಿಗಳಾದ ಪಂಡಿತ ಸುಂದರಲಾಲರಾಗಲೀ ಇನ್ನಿತರರಾಗಲೀ ಜವಾಬ್ದಾರರ ಹಿತರಾದ ವ್ಯಕ್ತಿಗಳಲ್ಲ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಈ ಸಭೆಯನ್ನು ನಿಸಿದ್ಧಗೊಳಿಸಿ ಜನತೆಗೂ ಸರಕಾರಕ್ಕೂ ಪರಸ್ಪರ ಒಕ್ಕಟ್ಟು ಮಾಡುವ ಬದಲಿಗೆ ಸೌಹಾರ್ದತೆಯನ್ನು ಛಿನ್ನ ವಿಚ್ಛಿನ್ನ ಮಾಡಲು ಹವಣಿಸಿದಂತಿದೆ. ರಾಷ್ಟ್ರ ಪುಂಗವರಾದ ಪಂಡಿತರ ಮರಣದ ಪುಣ್ಯ ದಿನ ಸ್ಮರಣೆಯನ್ನು ಮಾಡುವುದು ರಾಷ್ಟ್ರಾಭಿಮಾನಿಯಾದ ಭಾರತೀಯನ ಆದ್ಯ ಕರ್ತವ್ಯವಿದೆ. ಪಂಡಿತರು ಕಾಲದ ಪುರುಷೋತ್ತಮರು. ಸಭೆಯನ್ನು ತಡೆದುದರಿಂದಾಗಿ ಜನಾಂಗದ ಹೃದಯದಲ್ಲಿ ದಿವಂಗತರಿಗಾಗಿರುವ ಪ್ರೇಮ ಭಾವವಾಗಲೀ, ಅಭಿಮಾನವಾಗಲೀ [illegible] ಸರಕಾರದೊಡನೆ ಕೆಣಕಿಗೆ ಇಳಿಯದ [illegible] ಮನಸ್ಸೋಯಿಸಿದ ಈ ವರ್ತನೆಯ ಕೌಶಲ್ಯ ಪೂರ್ಣವೆಂದುದೆಂದು ಅರಿತವರು ಭಾವಿಸುವಂತೆಯೂ ಇಲ್ಲ. ಸಾರ್ವಜನಿಕ ಮನೋಭಾವದ ಒಗ್ಗಟ್ಟನ್ನು [illegible] ವಿಶಾರದಿ ಬಹು ದಿಕ್ಕು ಎಂದು ಸಪ್ರೂಗಳವರು ಬರೆದಿರುತ್ತಾರೆ.

ಕೊಂಗ್ರೆಸ್ಸಿನ ಪದೆಬಡಿತದೆದುರು ಅಧಿಕಾರಿಗಳ ರೌಂಡ್ ಟೇಬಲ್ ಪುಣ್ಯಾಹಗಳಾದ ಸಪ್ರೂಗಳಂತಹ ಮಹಾ ಪ್ರತಿಭಾಶಾಲಿ ವ್ಯಕ್ತಿಗಳನ್ನೂ ಲೆಕ್ಕಿಸಲ್ಲದ ಮರ್ಲೆಯಿಂದ ಈ ಘಟನೆಯಿಂದ ಲೋಕ ವಿಶ್ರುತವಾಯಿತು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ವರ್ತನೆಯ ಮೇಲಿನ ಅರ್ಜಿಯು ಹೈಕೋರ್ಟಿಗೆ ಹೋಯಿತು. ಅಲ್ಲಿ ನ್ಯಾಯಾಧೀಶರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಕಾಯ್ದ ಕರ್ತವ್ಯ ದಕ್ಷತೆಯ ಚಿಹ್ನೆಯೂ, ಯೋಗ್ಯವಾದುದೂ ಎಂದೂ ಹೇಳಿ ಆ ಮನವಿಯನ್ನು ತಳ್ಳಿ ಹಾಕಿದರು. ಇದರಿಂದಲೂ ಮಂದಪಕ್ಷದವರ ಹೃದಯವು ಬಹಳ ನೋವುಗೊಂಡಿದೆ. ಹಿಂದೀಯರ ಸ್ವತ್ವಕ್ಕೆ ಸ್ಟ್ ಸಪ್ರೂಗಳಿಗೆ ಮೊದಲು ಗಾಳಿಯು ಬದ್ಧಿಯಾಗಿದ್ದಿತು. ಈಗ ಅಂತಹ ಕಷ್ಟವು ತನ್ನ ಮೇಲೂ ಬಂದೆರಗಿದ ಮೇಲೆ ಅವರು ಉದ್ವಿಗ್ನಗೊಳ್ಳುವುದು ಅಪ್ರಸ್ತುತವಲ್ಲ. ಅಸಂಭವನೀಯವಲ್ಲ. ನಿರಂಕುಶ ಪ್ರಭುತ್ವದ ಮಿತಿಯನ್ನು ಸಪ್ರೂಗಳು ಕಂಡು ಬಹಳ ಖಿನ್ನರಾದಂತಿದೆ.

+ + ++

*Seventy Five Years!*

Two generations ot approved service enables us to pick and choose what is cheap lasting and good to suit the pockets and the tastes of our longstanding wide circle of

CUSTOMERS

who know our

Premier House for Swadeshi

Mill Yarns — Handloom Cloths, Dhoties—Sarees—Cintzesh etc

**Shrinivas Rang Pai,**

***Sawkar Mahal,***

**Car Street, MANGALORE**

ಶಿಷ್ಯನು ತನ್ನ ಗುರುವನ್ನು ಗೌರವಿಸಬೇಕು. ಗುರುವು ಶಿಷ್ಯನನ್ನು ಪ್ರೀತಿಸಬೇಕು. ಪತಿಯು ಪತ್ನಿಯನ್ನು ಸಂರಕ್ಷಿಸಬೇಕು. ಪತ್ನಿಯು ಪತಿಯನ್ನು ಹಿಂಬಾಲಿಸಬೇಕು. ಗೌರವ ವ್ಯಕ್ತಿಯು ಒಡನಾಡಿಗಳನ್ನು ಸೌಹಾರ್ದತೆಯಿಂದ ಕಾಣಬೇಕು. ಒಡೆಯನು ಸೇವಕನ ಶ್ರೇಯಸ್ಸನ್ನು ಬಯಸಬೇಕು. ಸೇವಕರು ಒಡೆಯನಿಗೆ ವಿಧೇಯರಾಗಿರಬೇಕು. ಮಧ್ಯಮ ಸ್ಥಿತಿಯ ಜನರು ದೀನರನ್ನು ಪೊರೆಯಬೇಕು. ಮಧ್ಯಮ ಸ್ಥಿತಿಯ ಜನರು ಬ್ರಾಹ್ಮಣರಿಂದ ಪೋಷಿಸಲ್ಪಡಬೇಕು.

—ಭಗವಾನ್ ಬುದ್ಧದೇವ

## ಅನುಕ್ರಮಣಿಕೆ


ಅಗ್ರಲೇಖ
ಸ್ವದೇಶಿ . . . . . ೮
ಸ್ವಪಕ್ಷಾಭಿಪ್ರಾಯಗಳು . . . . . ೬
ಸೂಚನೆಗಳು . . . . . . ,,
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ವಿದೇಶ ವರ್ತಮಾನ, . . . ೮
ವಿವಿಧ ಸಮಾಚಾರಗಳು . . . . ೧೧
ಬಿಟ್ಟೀ ಬಸವಯ್ಯಾ! . . . ೨
ಪತ್ರವ್ಯವಹಾರ . . . ೧೪
ಸ್ವದೇಶ ನೋಟುಗಳ ಬಾಬು! . . . ೪
ದಕ್ಷಿಣ ಕನ್ನಡ— ಮಂಗಳೂರು, ಕಾಸರಗೋಡು ಸುರತ್ಕಲ್
ಮೂಲ್ಕಿ, ಕಿನ್ನಿಗೋಳಿ, ಕಟುಬಿದ್ರಿ . . . ೯
ದಾನ್ಯದಾನ ಮಾಡುವೆವು! ಬ್ರಿಟಿಷ ಭದ್ರತೆ ಬಿಡಲಾರೆವು, ೧೦
ಮುಂಬಾಯಿಯಲ್ಲಿ ಧುರೀಣರ ಅಸಂತೃಪ್ತಿ . . ೭
ಅಸ್ಪೃಶ್ಯರಾರು? . . . ೧೫



# ಸ್ವದೇಶಾಭಿಮಾನಿ.

ತಾ. ೧೭ನೇ ಶುಕ್ರವಾರ, ಫೆಬ್ರವರಿ ೧೯೩೩.


## ಸ್ವದೇಶಿ.

ಸ್ವದೇಶಿ' ಎಂಬ ಶಬ್ದವು ಇಂಗ್ಲೆಂಡಿನಲ್ಲಿ ಅತ್ಯಂತ ಪ್ರಶಸ್ತಿ ಪಡೆದಿರುವುದಾದರೂ ನಮ್ಮ ದೇಶದಲ್ಲಿ ಅದು ರಾಜ ದ್ರೋಹವೋ ಎಂಬಂತಿದೆ ಬಂಗಾಳ ವಿಭಜನೆಯ ಕಾಲದಲ್ಲಿ ಉಂಟಾದ ಈ ಚಳವಳವನ್ನು ಸರಕಾರವು ನಿರೋಧಿಸಿದುದು ಮಾತ್ರವಲ್ಲ, ಲಿಬರಲ್ ಪಕ್ಷದವರೆನ್ನಿಸಿಕೊಂಡ ಹಿಂದೀಯರು ಕೂಡ ನಿರೋಧಿಸಿದರು ಆದರು ಈ ಚಳವಳವು ಎಡೆ ಬಿಡದೆ ಬೆಳೆಯುತ್ತ ಬಂದಿದೆ ಎಂಬುದು ಸಂತೋಷದ ವಿಷಯ ಆದರೆ ಈ ಚಳವಳಕ್ಕೆ ಹಿಂದೂಸ್ಥಾನದಲ್ಲಿ ಮಾತ್ರ ಸರಕಾರದ ಪ್ರೋತ್ಸಾಹವಿರುವುದಿಲ್ಲ

ಇಂಗ್ಲಂಡಿನಲ್ಲಿ ಸ್ವದೇಶೀ ಭಾವನೆಯು ಬಲಗೊಳ್ಳುತ್ತಾ ಬಂದಿದೆ ಒಂದು ಬಾರಿ ಬ್ರಿಟಿಷ ಸರಕಾರವು ಉಪಯೋಗಕ್ಕೆ ಅನುಕೂಲವಾದ ವೇಗ ಹೆಚ್ಚುಳ್ಳ ಅಮೇರಿಕದ ಮೋಟರು ಕಾರು ಗಳನ್ನು ಕೆಲವನ್ನು ತರಿಸಿಕೊಂಡಿತು ಕೂಡಲೆ ಎಲ್ಲಾ ಬ್ರಿಟಿಷ ಪತ್ರಿಕೆಗಳು ಸರಕಾರದ ಮೇಲೆ ಬಿದ್ದುವು, ಫಲವಾಗಿ ಬ್ರಿಟಿಷ ಸರಕಾರವು ಅಮೇರಿಕದೊಡನೆ ಇಟ್ಟಿದ್ದ ಮುಂದಿನ ಆರ್ಡರು ಗಳನ್ನು ಹಿಂತೆಗಯಿತು ಇತ್ತೀಚೆಗೆ ಇಂಗ್ಲೆಂಡಿಗೆ ಬರಲಿಕ್ಕಿದ್ದ ಜರ್ಮನ್ ಸರ್ಕಸ್ ಕಂಪೆನಿಗೆ ಇಂಗ್ಲೆಂಡಿನ ಸರಕಾರವು ಬರಲು ಲೈಸೆನ್ಸು ಕೊಟ್ಟಿದ್ದರೂ ಮತ್ತು ಸರ್ಕಸ್ ಕಂಪೆನಿಯು ತನ್ನ ಜನರೊಳಗ ಹೆಚ್ಚಿನವರಾಗಿ ಬ್ರಿಟಿಷರನ್ನೇ ಹೊಸದಾಗಿ ಸೇರಿಸಿ ಕೊಂಡಿದ್ದರೂ, ಬ್ರಿಟಿಷ ಪತ್ರಿಕೆಗಳು ಒಹಳವಾಗಿ ಬೊಬ್ಬಿಟ್ಟು ದನ್ನು ನೋಡಿ ಬ್ರಿಟಿಷ ಸರಕಾರವು ಅವರಿಗೆ ಕೊಟ್ಟ ಲೈಸನ್ಸನ್ನು ಹಿಂತೆಗೆಯಿತು ಇದೇ ರೀತಿಯಲ್ಲಿ ಸರ್ವ ತರದಲ್ಲಿಯೂ ಇಂಗ್ಲೆಂಡು ಇಂಗ್ಲಂಡಿಗಾಗಿಯೇ ಎಂಬ ಪ್ರಬಲ ತರದ ಚಳವಳ ವನ್ನು ಹೂಡಿರುತ್ತದೆ

ಇಂಗ್ಲೆಂಡಿನ ವ್ಯಾಪಾರವು ಪರದೇಶಗಳಿಗೆ ಕಳುಹಿಸಲ್ಪಡುವ ಕೈಗಾರಿಕೆ ಸಾಮಾನುಗಳ ಮಾರಾಟದ ಮೇಲೆಯೇ ಹೊಂದಿರುವುದಾದರೂ, ಪರದೇಶವನ್ನು ಬಹಿಷ್ಕರಿಸಲು ಅದು ನಿರತವಾಗುವುದನ್ನು ಕಂಡರೆ, ಪರದೇಶದ ರಫ್ತಿನಲ್ಲಿ ಹೊಂದಿರದ ನಾವು ಯಾವ ರೀತಿಯಲ್ಲಿ ದೇಶದ ಸಾಂಪತ್ತಿಕ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಕಾಣಬಹುದು

ಇತ್ತ ಇಂಗ್ಲೆಂಡು ಸಾಮ್ರಾಜ್ಯದ ಹೆಸರಿನಲ್ಲಿ ಸುತ್ತು ಸುಂಕದ ಗೋಡೆಗಳನ್ನೆಬ್ಬಿಸಿ ಇತರ ದೇಶಗಳನ್ನು ಬಹಿಷ್ಕರಿಸುತ್ತಿದೆ ಒಟ್ಟಾವಾ ಪರಿಷತ್ತಿನಿಂದ ತನ್ನ ಸಾಮ್ರಾಜ್ಯದ ವ್ಯಾಪಾರವನ್ನು ತಾನೇ ಸ್ವಾಧೀನ ಪಡಿಸಿಕೊಳ್ಳಲು ಯತ್ನಿಸಿದೆ. ಕೆನಡಾ, ಆಫ್ರಿಕಾ, ಆಸ್ಟ್ರೇಲಿಯಾ ಮೊದಲಾದ ದೇಶಗಳು ತಮ್ಮ ಹಿತಾಹಿತಗಳನ್ನು ಸರಿಯಾಗಿ ಯೋಚಿಸಿ, ತನಗೆ ಹಿತವೆಂದು ಕಂಡಲ್ಲಿ ಮಾತ್ರ ಇಂಗ್ಲೆಂಡಿನ ಈ ನೂತನ ಯುಕ್ತಿಗೆ ಒಪ್ಪಿಗೆಯನ್ನಿತ್ತಿವೆ ಯಾದರೂ ತಮಗೆ ಅಹಿತವೆನ್ನುವಲ್ಲಿ ಒಪ್ಪಿ ಯಿತ್ತುದನ್ನು ಮತ್ತೆ ನಿರಾಕರಿಸಲು ಹಿಂಜರಿದಿಲ್ಲ; ಅರ್ಥಾತ್ ಒಳಗೊಳಗಿನ ಸಾಧಕ ಸಂಧಿಗಳು ನಡೆಯುತ್ತಲೇ ಇದ್ದು ಒಟ್ಟಾವಾ ಪರಿಷತ್ತಿನ ಕರಾರುಗಳು ಬಹುಬೇಗನೆ ಮುರಿಯಲ್ಪಡುತ್ತಿವೆ.

ಆದರೆ ಹಿಂದೂಸ್ಥಾನದ ಹಿತಗಳನ್ನು ಮಾತ್ರ ಲಕ್ಷಿಸುವವರು ಯಾರೂ ಇಲ್ಲ. ನಮ್ಮ "ಪ್ರತಿನಿಧಿ"ಗಳೆಂದು ಹೋದವರು ತಮಗೆ ಸಿಕ್ಕಿದ ಮಾನ ಮರ್ಯಾದೆಗಳಿಂದ ವಿವೇಕವನ್ನೇ ಕಳೆದು ಕೊಂಡರೆಂದರೂ ಸಲ್ಲುವುದು. ಕರಾರುಗಳ ಹಿತಾಹಿತ ಪರಿಣಾಮಗಳನ್ನು ಅವರು ತರ್ಕಿಸಿಲ್ಲವೆಂದು ಕಾಣುವುದು. ಹಿಂದೀ ಪ್ರತಿನಿಧಿಗಳು ರುಜು ಹಾಕಿ ಬಂದ ಸಂಧಿಯ ಕರಾರುಗಳನ್ನು ಎರಡು ವರ್ಷಗಳ ಮೊದಲೇ ಬ್ರಿಟಿಷ ಸಾಮ್ರಾಜ್ಯವಾದದ ಕಮಿಟಿಯು ರಚಿಸಿತ್ತೆಂಬ ಸುದ್ದಿ ಕೂಡ ಕೇಳ ಬರುತ್ತದೆ. ಇದು ನಿಜವಾದರೆ, ಈ ಒಟ್ಟಾವಾ ಒಪ್ಪಿಗೆಯ ತಯಾರಿಯಲ್ಲಿ ಹಿಂದೀ ಪ್ರತಿನಿಧಿಗಳಿಗೆ ಯಾವ ಕೆಲಸವೂ ಇರಲಿಲ್ಲವೆನ್ನುವುದು ಸ್ಪಷ್ಟವಾಗುವುದು

ಚಲಾವಣೆ ಪವನಿನ ಬೆಲೆಯು ಶೇಕಡಾ ೪೦ರಷ್ಟು ತಗ್ಗಿ, ಬ್ರಿಟಿಷ ವ್ಯಾಪಾರಕ್ಕೆ ಇಷ್ಟು ಅನುಕೂಲವಾದರೂ, ಬ್ರಿಟಿಷರು ಪುನಃ ತಮ್ಮ ವ್ಯಾಪಾರದ ಬಗ್ಗೆ ಹಿಂದೂಸ್ಥಾನದಲ್ಲಿ ಸುಂಕದ ಸಹಾಯ ಪಡೆಯುವುದು ಹಿಂದೂಸ್ಥಾನಕ್ಕೆ ಅಹಿತವೂ ಬ್ರಿಟಿಷರು ಸ್ವಾರ್ಥದ ಪರಮಾವಧಿಯೂ ಆಗಿದೆ ಮೊದಲೆ ಆಮದಾಗುವ ಸಾಮಾನುಗಳ ಮೇಲೆ ಶೇಕಡಾ ೨೫ರಿಂದ ೫೦ರ ವರೆಗೆ ಬಹು ಮಟ್ಟಿಗೆ ಸುಂಕವಿದೆ ಕೆಲವಕ್ಕೆ ೧೫ರಿಂದ ೨೦ರ ವರೆಗೆ ಇದೆ. ಈ ಏರಿದ ಸುಂಕಗಳನ್ನು ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿರದ ದೇಶಗಳಿಗೆ ಮತ್ತು ಶೇಕಡಾ ೫ರಂತೆ ಹೆಚ್ಚಿಸಿ ಬ್ರಿಟಿಷ ಸಾಮ್ರಾಜ್ಯಕ್ಕೆ ಶೇಕಡಾ ೫ರಂತೆ ಕಡಿಮೆ ಮಾಡಿ, ಬ್ರಿಟಿಷ ಸಾಮ್ರಾಜ್ಯಕ್ಕೂ ಇತರ ದೇಶಗಳಿಗೂ ಶೇಕಡಾ ೧೦ರ ವ್ಯತ್ಯಾಸವನ್ನು ಉಂಟು ಮಾಡಿರುತ್ತದೆ

ಬ್ರಿಟಿಷ ಈ ಯುಕ್ತಿಗಳಿಂದಲೂ ಧೋರಣೆಗಳಿಂದಲೂ ಒಂದೇ ಪಾರವು ಹಿಂದೀಯರಿಗೆ ಕಂಡುಬರತಕ್ಕದು. ಹಿಂದೀಯರು ಸ್ವದೇಶಿಯನ್ನು ಆಚರಿಸದಿದ್ದರೆ ಹಿಂದೂಸ್ಥಾನಕ್ಕೆ ಖಂಡಿತ ಮುಕ್ತಿಯಿರುವುದಿಲ್ಲ

— —

## ವಿದೇಶ ವರ್ತಮಾನ.

—ಗಾಂಧೀ ಚಲಚಿತ್ರವನ್ನು ಸರಕಾರವು ಬಹಿಷ್ಕರಿಸಿದುದೇಕೆಂದು ಹೋರರಿಗೆ ಪ್ರಶ್ನೆಯಿಟ್ಟಾಗ ಅವರು ಅದು ಕಾಯಿದೆಭಂಗ ಚಳವಳದ ಉಪಶಮನಾರ್ಥವಾಗಿ ಎಂದರು.

—ಚೀನಾ ಜಾಪಾನರ ಹೋರಾಟವನ್ನು ಹೇಗಾದರೂ ತಡೆಯಬೇಕೆಂದು ಜನಾಂಗ ಸಭೆಯು ನಿರ್ಧರಿಸಿದೆ.

—ಶ್ರೀ ವಿ. ಜೆ. ಪಟೇಲರು ಅಮೇರಿಕದಲ್ಲಿ ಹಿಂದೀಯ ಸ್ವತಂತ್ರ ಚಳವಳದ ಧ್ಯೇಯವನ್ನು ಸಾರುತ್ತಿರುವರು.

—ರಶ್ಯದ ಟರ್ಕಮೇನ್ ಎಂಬಲ್ಲಿ ೨೫೦ ಅಡಿ ಹಾರುವ ಎಣ್ಣೆಯ ಬುಗ್ಗೆಯು ಕಂಡು ಹಿಡಿಯಲ್ಪಟ್ಟಿದೆ ಹತ್ತು ದಿನಗಳಲ್ಲಿ ೧೦೦ ೦೦೦ ಟನ್ ಎಣ್ಣೆ ಇದರಿಂದ ದೊರೆತಿದೆ.

—ಬಾಟಾವಿಯಾದಲ್ಲಿ ದಂಗೆಗಾರರ ಸ್ಟೀಮರ್ ಒಂದರ ಮೇಲೆ ಬೊಂಬು ಹಾಕಿ ಕೆಲವರು ಮರಣ ಹೊಂದಿದರು.

—ಜರ್ಮನಿಯ ಮಾಜಿ ಕೈಸರರ ಚತುರ್ಥ ಪುತ್ರ ವಿಲ್ ಹೆಮ್ ಎಂಬವರನ್ನು ಹನೋವರಿನ ಗವರ್ನರನ್ನಾಗಿ ನೇಮಕ ಮಾಡಲಿರುವುದರಿಂದ ಕ್ಷೋಭೆಯದ್ದಿದೆ.

—ಕಿಂಗ್ ಆಲ್ಫೋನ್ಸರ ಪ್ರಥಮ ಪುತ್ರನು ಮೆಡ್ರಿಡ್ ನಲ್ಲಿದ್ದು ತಂದೆಯ ಆಜ್ಞೆಗೆ ವಿರೋಧವಾಗಿ ಒಬ್ಬಳು ಮೆಕ್ಸಿಕೋ ತರುಣಿಯನ್ನು ವಿವಾಹವಾಗಲಿರುವನು.

—ಲಿವರ್ ಪೂಲಿನಲ್ಲಿ ಸರ್ ಎ ವಿಂಟ್ಸನರು ಭಾಷಣ ಮಾಡುತ್ತಾ ೯೦ ಮಿಲಿಯ ಮಹಮ್ಮದೀಯರು ಅಸಂಖ್ಯಾತ ಅಸ್ಪೃಶ್ಯ ರಾಜ್ಯಗಳಿರುವಾಗ ಕೊಂಗ್ರೆಸ್ಸಿನ ಅಲ್ಪ ಸಂಖ್ಯಾತರನ್ನು ಬಡೆಯಲು ನಿರಂಕುಶ ಪ್ರಭುತ್ವವೇ ಬೇಕೆಂದರು

— ಜರ್ಮನಿಯಲ್ಲಿ ಸಮಾಜವಾದಿಗಳು ಸಭೆ ಸೇರಲು ಸ್ಥಾಪಿಸಿದಾಗ ನಾಜಿಗಳು ಅವರನ್ನು ಚದರಿಸಿದರು ಸಮಾಜವಾದಿಗಳು ಉದ್ರೇಕಗೊಂಡಿರುವರು

—ಲಂಡನಿನ ಕಿಂಗ್ಸ್ ಬೆಂಚ್ ಕೋರ್ಟಿನಲ್ಲಿ ಜಸ್ಟಿಸ್ ರಿಪೋರಿ ಎಂಬ ಜಡ್ಜರು ಸ್ಮೃತಿ ತಪ್ಪಿ ಬಿದ್ದು ಬಿಟ್ಟರು.

—ಜರ್ಮನಿಯ ಶಾಕ್ ಎಂಬಲ್ಲಿ ಮೊನ್ನೆ ಸಿಡಿಮದ್ದು ಸಿಡಿದು ಕೆಲವರು ಮೃತರಾದರು.

—ಲೆಂಕೆಶಯರ್ ಸರಕಿಗೆ ಹಿಂದೂ ದೇಶದಲ್ಲಿ ನಡೆಯಲು ಒಳ್ಳೇ ಮಾರ್ಗವನ್ನು ಮಾಡಿಕೊಡತಕ್ಕದ್ದಾಗಿ ಚೇಂಬರ್ ಒಫ್ ಕೊಮರ್ಸ್ಸಿ ಇದರಅರಿಕೆ!

## ಒಳದೇಶ ವರ್ತಮಾನ

—ಅಲ್ಲಹಾಬಾದಿನ ಸ್ವದೇಶಿ ಲೀಗಿನಲ್ಲಿ ಭಾಷಣ ಮಾಡುತ್ತಾ ಸರ್ ತೇಜ ಬಹದ್ದೂರ್ ಸಪ್ರೂರವರು ಇನ್ನು ನಿರುದ್ಯೋಗವು ಸ್ಥಿರವಾಗಲಿದೆ ಯುವಕರು ವ್ಯಾಪಾರ ವಾಣಿಜ್ಯಗಳಿಗೆ ಕೈಹಚ್ಚಲಿ ಎಂದರು.

—ಅಖಿಳ ಭಾರತ ಕೊಂಗ್ರೆಸ್ ಮಹಾಸಭೆಯು ಕಲ್ಕತ್ತದಲ್ಲಿ ಜರಗುವುದಾಗಿ ಪಂಡಿತ ಮಾಲವೀಯರೇ ಮೊದಲಾದವರು ಸಂಕಲ್ಪಿಸಿರುತ್ತಾರೆ.

—ಕ್ರಾಂತಿಕಾರರ ವಾರ್ತೆಯನ್ನು ತಿಳಿಸಿದವರ ಮೇಲಿನ ದಂಡ ತೆರಿಗೆಯನ್ನು ತೆಗೆಯಲಾಗುವುದು. ಅವರ ಹೆಸರನ್ನು ರಹಸ್ಯವಾಗಿಡಲಾಗುವುದು ಎಂದು ಚಿಟ್ಟಗೊಂಗಿನ ಡಿ. ಮೆಜಿಸ್ಟ್ರೇಟರು ಹೇಳಿಕೊಂಡಿರುವರು.

—ಕಲ್ಕತ್ತದಲ್ಲಿ ಕಳೆದ ವರ್ಷ ಬೆಂಕಿಯ ಅನಾಹುತದಿಂದ ಒಟ್ಟು ೧೪ ೩೦,೭೫೧ ರೂಪಾಯಿ ನಷ್ಟವಾದ ಪಟ್ಟಿಯು ಪ್ರಕಟವಾಗಿದೆ.

—ಗಾಂಧಿಜೀಯವರ ಮುಂದಾಳುತ್ವದಲ್ಲಿ 'ಹರಿಜನ' ವೆಂಬ ಇಂಗ್ಲಿಷ್ ವಾರ ಪತ್ರಿಕೆಯು ಪ್ರಕಟವಾಗಿ ಅದರ ಪ್ರಥಮ ಸಂಚಿಕೆಯು ತಾ. ೧೧ರಲ್ಲಿ ಹೊರಬಿತ್ತು

—ಕಲ್ಕತ್ತದಿಂದ ಮೂರನೇ ಪಂಗಡವಾಗಿ ಕ್ರಾಂತಿಕಾರ ಕೈದಿಗಳ ೧೫ ಮಂದಿಗಳನ್ನು ಅಂಡಮಾನಕ್ಕೆ 'ಮಹಾರಾಜಾ' ಹಡಗಿನ ಮೂಲಕ ಒಯ್ದುದು.

—ಪೇಶಾವರದಲ್ಲಿ ಮೂವತ್ತು ಮಂದಿಗಳು ತಮ್ಮ ಚಟುವಟಿಕೆಗಳನ್ನು ಮೇರೆ ಮೀರಿಸಿ ನಡೆಯಬಾರದೆಂದು ನೋಟೀಸು ಹೊರಟಿದೆ.

—ಡಾ ಅನ್ಸಾರಿಯವರು ಯೂರೋಪಿನಿಂದ ಹಿಂದೂದೇಶಕ್ಕೆ ಮೊನ್ನೆ ಬಂದಿದ್ದು ಇನ್ನು ರಾಷ್ಟ್ರೀಯ ಚಳವಳವೇ ಮೊದಲಾದ ಆವೇಶಪರ ಕೆಲಸಕ್ಕೆ ಆರೋಗ್ಯ ನಿಮಿತ್ತವಾಗಿ ಕೈಹಾಕುವುದಿಲ್ಲವಾಗಿ ನಿರ್ಧರಿಸಿರುವರು.

—ಡಾ. ಮಹಮದ್ ಆಲಮರು ಅಸ್ವಸ್ಥರಾಗಿದ್ದು ಸಂಪೂರ್ಣ ಗುಣ ಹೊಂದುವ ತನಕ ವಿಶೇಷ ಚಟುವಟಿಕೆಗಳನ್ನು ನಡೆಸುವುದಿಲ್ಲವಾಗಿ ತಿಳಿಸಿರುತ್ತಾರೆ

—ದೇವಸ್ಥಾನ ಪ್ರವೇಶ ಬಿಲ್ಲಿಗೆ ಡಿಲ್ಲಿಯ ನ್ಯಾಯವಿಧಾಯಕ ಸಭೆಯವರು ಬೆಂಬಲವನ್ನಿತ್ತು ಪುಣ್ಯ ಸಂಪಾದಿಸಬೇಕಾಗಿ ಗಾಂಧಿಜೀಯವರ ತಂತಿ ಹೋಗಿದೆ.

"ಅಸ್ಪೃಶ್ಯತೆಯ ರೋಗದಿಂದ ಭರತ ವರ್ಷವು ಕ್ಷೀಣಿಸಿದೆ ಇನ್ನೂ ಕ್ಷೀಣಿಸಬಿಡಲಾರೆವು" ಎಂದು ಶ್ರೀ ಸಿ ಎಸ್ ರಂಗ ಅಯ್ಯರರು ನ್ಯೂಡಿಲ್ಲಿಯಲ್ಲಿ ಹೇಳಿದರು.

—ಶ್ರೀ ಸುಭಾಸ ಬೋಸರನ್ನು ಅವರ ಪಿತರಾದ ಶ್ರೀ ಜಾನಕಿ ನಾಥ್ ಬೋಸರವರು ಮುಂಬಾಯಿಯಲ್ಲಿ ಕಂಡು ಮಗನನ್ನು ಪರದೇಶಕ್ಕೆ ಕಳುಹಿಸಬಹುದೆಂದು ಸರಕಾರವು ಸಮ್ಮತಿಸಿದೆ.

—ಗುಂಟೂರಿನ ರೆಪಲೆ ತಾಲೂಕಿನಲ್ಲಿ ಮಂತೆನರವರಿಪಲೆಮ್ ಎಂಬ ಕ್ಷತ್ರಿಯ ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಟ್ಟಿತು.

ಪಂಜಾಬ ಅಂತ್ಯಜರ ಸಭೆಯೊಂದು ಲಾಹೋರಿನಲ್ಲಿ ಜರಗಿ "ಕೂಡಲೇ ಗಾಂಧಿಜೀಯವರ ಬಿಡುಗಡೆಯಾಗಬೇಕು" ಎಂದು ಠರಾವಾಯಿತು

—ಸ್ಪೈನ್ ದೇಶದ ಮಾಜಿ ಅರಸರಾದ ಕಿಂಗ್ ಆಲ್ಫೋನ್ಸರು ಮುಂಬಾಯಿಗೆ ಬಂದಿದ್ದು ಬರುವ ತಿಂಗಳಲ್ಲಿ ಮೈಸೂರಿಗೆ ತೆರಳುವರಾಗಿ ತಿಳಿದುಬಂದಿದೆ.

—ಜಬ್ಬಲ್ ಪುರದಲ್ಲಿ ಎರಡು ಬಾಯಿಗಳ, ನಾಲ್ಕು ಕಣ್ಣುಗಳ ಎರಡು ಕಿವಿಗಳ ಒಂದು ಆಡಿನ ಮರಿಯು ಎರಡು ಬಾಯಿಗಳಿಂದಲೂ ವಾಟ್ಲಿಯ ಹಾಲನ್ನು ಕುಡಿಯುತ್ತಿರುವುದನ್ನು ಪ್ರದರ್ಶಿಸಿ ಒಬ್ಬ ಮುಸ್ಲಿಮನು ಸಂಪಾದನೆಯನ್ನು ಮಾಡುತ್ತಿರುವನು

—ರತ್ನಗಿರಿ ಜೈಲಿನಲ್ಲಿ ಶ್ರೀ ಪಟುವರ್ಧನರು ಪುನಃ ಉಪವಾಸ ತೊಟ್ಟಿರುವರಾಗಿಯೂ ಗಾಂಧಿಜೀಯವರು ಈ ಕುರಿತು ಸರಕಾರದೊಡನೆ ಪತ್ರವ್ಯವಹಾರ ನಡೆಸುತ್ತಿರುವರಾಗಿಯೂ ವಾರ್ತೆಯಿದೆ

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನೂ ಇನ್ನಿತರ ಆರು ಮಂದಿಗಳನ್ನೂ ಸಬರ್ಮತಿ ಜೈಲಿನಲ್ಲಿರಿಸಿರುವರು. ಶ್ರೀಮತಿ ಮಿಸ ಬೆನ್ ರವರು ಆಸ್ಪತ್ರೆಯಲ್ಲಿದ್ದು ಇದೇ ಜೈಲಿಗೆ ವರ್ಗಾಯಿಸಲ್ಪಟ್ಟಿರುವರು.

—ಚಿತ್ತಗೊಂಗ್ ಶಸ್ತ್ರ ಪಿತೂರಿಯಲ್ಲಿ ಆರೋಪಿತನಾದ ಅಂಬಿಕಾ ಚರಣನೆಂಬವನಿಗೆ ಪಾಶಿ ಶಿಕ್ಷೆ ಕೊಟ್ಟರು.

ಗ್ರೀಸ್ ದೇಶಕ್ಕೆ ಹಿಂದೂಸ್ಥಾನದಿಂದ ವಿಮಾನ ಮೂಲಕ ಹೋಗುವವರು ಮೊದಲು ದಾಕು ಹಾಕಿಕೊಳ್ಳಬೇಕೆಂದಾಗಿದೆ.

—ಮುಂಬಾಯಿಯ ಗಿರ್ಗಾಂ ಪೋಲೀಸ್ ಕೋರ್ಟಿನಲ್ಲಿ ಮಿ। ಅಬ್ದುಲ್ ರಹಿಮಾನ್ ಎಂಬ ಅಧಿಕಾರಿಯನ್ನು ಒಬ್ಬ ಸಿಪಾಯಿಯು ನೂಕಿ, ತಳ್ಳಿ ಜಗಲಿಯಿಂದ ಹೊರ ದೂಡಿದನು.

—ಟರ್ಕಿ ದೇಶದ ಮಾಜಿ ಮಂತ್ರಿಯವರಾದ ಮಾನ್ಯ ಹುಸೇನ್ ರಾಫ್ ಬೇಯವರು ಶುಕ್ರವಾರ ದಿನ ಮುಂಬಾಯಿಗೆ ಬಂದರು.

—ಸರ್ ಹೋರರ ವಾದವು ಸಂತೃಪ್ತಿಕರವಲ್ಲವೆಂದೂ ಅವರು ಉತ್ತಮ ವಾತಾವರಣವನ್ನು ಸೃಷ್ಟಿಸಲು ಮನಸ್ಸು ಮಾಡಬೇಕೆಂದೂ ಸರ್ ಸಪ್ರೂಗಳವರು ಬಾಮ್ಬೆಟ್ಟು ನುಡಿದರು.

+ + ++

## ದಕ್ಷಿಣ ಕನ್ನಡ

**[illegible]** — [illegible] ೧೯, ಕಲಂ ೩, ಶೀಟ್ಸ್ ೧೩, [illegible] [illegible] ಎಂದೋದುವುದು.

**ಮಂಗಳೂರು.** ಇಲ್ಲಿಯ ಆರ್ಯ ಸಮಾಜದಲ್ಲಿ ಇದೇ [illegible] ಆದಿತ್ಯವಾರ ಬೆಳಿಗ್ಗೆ ಗಂಟೆ ೭ ಕ್ಕೆ ಸಿರಿಯನ್ ಕ್ರಿಸ್ತ [illegible] ರೆವರೆಂಡ್ ಎಮ್. ಜೋಸೆಫ್ ಎಂಬವರನ್ನು ಪಂಡಿತ ಬಿ. [illegible] ವಿದ್ಯಾರ್ಥಿಯವರು ಶುದ್ಧೀ ಸಂಸ್ಕಾರಗೊಳಿಸಿದರು. ಈ [illegible] ತಂದೆ ತಿರುವಾಂಕೋಡು ಜಿಲ್ಲೆಯ ತಿರಿ ಮಹಿಯಾರ್ ಎಂಬಲ್ಲಿರುವ ಪಿ. ಎಮ್. ಕುತ್ತಾಯಿಯವರು ನಂಬೂದ್ರಿ ಬ್ರಾಹ್ಮಣರಾಗಿದ್ದು ಕುಟುಂಬ ಸಮೇತ ಕ್ರೈಸ್ತ ಮತಕ್ಕೆ ಸೇರಿದ್ದರು.

ರೆವರೆಂಡ್ ಜೋಸೆಫರು ಸುಮಾರು ೧೪ ವರ್ಷಗಳ ವರೆಗೆ ಸಿರಿಯನ್ ಕ್ರೈಸ್ತಪಾದ್ರಿಯಾಗಿದ್ದು ತಿರುವಾಂಕೋಡು ಜಿಲ್ಲೆಯಲ್ಲಿ ಪಟ್ಟಿನ ಕೆಲಸವನ್ನು ಮಾಡುತ್ತಿದ್ದರು. ಅನಂತರ ಕ್ರೈಸ್ತ ಮತದಲ್ಲಿ ತನಗೆ ಅವಿಶ್ವಾಸ ಉಂಟಾಗಿ ೧೯೨೮ನೇಯ ಇಸ್ವಿಯಲ್ಲಿ ಹಿಂದುಸ್ಥಾನದ-ಕ್ಷೇತ್ರಗಳ ಯಾತ್ರೆ ಮಾಡುತ್ತಿರುವಾಗ ಉತ್ತರ ಹಿಂದೂಸ್ಥಾನದಲ್ಲಿ ಆರ್ಯ ಸಮಾಜದ ತತ್ವಗಳನ್ನು ತಿಳಿದುಕೊಂಡು ಪವಿತ್ರವಾದ ಸನಾತನ ವೈದಿಕ ಧರ್ಮವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿ ಕ್ರೈಸ್ತ ಪಾದ್ರಿ ಕೆಲಸಕ್ಕೆ ರಾಜಿಕೊಟ್ಟು ಅತ್ಯಂತ ಸಂತೋಷ ಮತ್ತು ಪೂರ್ಣ ವಿಶ್ವಾಸದಿಂದ ತನ್ನನ್ನು ಶುದ್ಧಿಗೊಳಿಸಿ ಹಿಂದೂ ಮತಕ್ಕೆ ಸೇರಿಸಿಕೊಳ್ಳಬೇಕೆಂದು ಮಂಗಳೂರು ಆರ್ಯ ಸಮಾಜದ ಕಾರ್ಯದರ್ಶಿಯವರಾದ ಉಳ್ಳಾಲ ಗೋಪಾಲ ನಾಯ್ಕರವರಿಗೆ ಬರೆಕೊಂಡಂತೆ ಈ ದಿವಸ ಶುದ್ಧೀಗೊಳಿಸಿ ವಿ. ಎಸ್. ಕೃಷ್ಣ ಎಂಬ ಹೆಸರನ್ನಿತ್ತು ಹಿಂದೂ ಮತಕ್ಕೆ ಸೇರಿಸಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷರಾದ ಎಮ್. ಮಾಧವರಾವ್, ಬಿ. ಎ., ಬಿ. ಎಲ್.ರವರೂ ಪ್ರಚಾರಕರಾದ ಶ್ರೀಯುತ ವಿದ್ಯಾರ್ಥಿಯವರೂ, ಮೋಹನಪ್ಪ ತಿಂಗಳಾಯರೂ ವೈದಿಕ ಧರ್ಮದ ಮಹತ್ವದ ಕುರಿತು ಕಾಲೋಚಿತ ಭಾಷಣ ಮಾಡಿದರು.

ಇಲ್ಲಿಯ ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಿಂಗಳ ತಾ. ೯ನೇ ಗುರುವಾರ ಸಾಯಂಕಾಲ ರಾ। ಎ. ಶ್ರೀನಿವಾಸ ಪೈ. ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಇಲ್ಲಿಯ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಧಾರವಾಡದ ಗೆಳೆಯರ ಗುಂಪಿನ ಪರವಾಗಿ ಬಂದಿದ್ದ ಪ್ರಹ್ಲಾದ ನರೆಗಲರವರು, ಕೊಡಗಿನಲ್ಲಿಯ ಬೇರೆ ಬೇರೆ ಹಳ್ಳಿಗಳಲ್ಲಿಯೂ, ವಯನಾಡಿನಲ್ಲಿಯೂ ಈಗಿನ ಕನ್ನಡ ಪದ್ಯಗಳನ್ನು ಜನರಲ್ಲಿ ಪ್ರಸಾರ ಮಾಡಿ, ಮೊನ್ನೆ ಆದಿತ್ಯವಾರ ತಾ. ೧೨ಕ್ಕೆ ಮಂಗಳೂರಿಗೆ ಬಂದಿರುವರು. ಜಯಕರ್ನಾಟಕದ ಪ್ರಚಾರ ಕಾರ್ಯವನ್ನು ಅವರು ಇಲ್ಲಿ ಮಾಡುವವರಿದ್ದಾರೆ.

ಇದೇ ತಿಂಗಳ ತಾರೀಕು ೧೯ನೇ ಆದಿತ್ಯವಾರ ಶ್ರೀ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಇಲ್ಲಿಗೆ ಬಂದು ತಾ. ೨೧ಕ್ಕೆ ಹಿಂತಿರುಗುವರಾಗಿ ತಿಳಿದು ಬರುತ್ತದೆ.

ಕೆನರಾ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಇದೇ ಬರುವ ಆದಿತ್ಯವಾರ ೧೯ಕ್ಕೆ ಸದರಿ ಬ್ಯಾಂಕಿನ ಕಟ್ಟಡದಲ್ಲಿ ಜರುಗುವುದು.

ಗೌಡ ಸಾರಸ್ವತ ಸಮಾಜದವರಾದ ನಮ್ಮ ಜಿಲ್ಲೆಯ ಕೆ. [illegible] [illegible] ರಾಯರು ಎರಡನೆ ಸಲ ಹ್ಯಾಕೋರ್ಟಿನ ಆಕ್ಟಿಂಗ್ ಜಡ್ಜಿರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಶ್ರೀಯುತ ತೋನ್ಸೆ ಮಂಗೇಶರಾಯರ ಸ್ಮಾರಕ ನಿಧಿಗಾಗಿ ಟ್ರೈನಿಂಗ್ ಶಾಲಾ ವಿದ್ಯಾರ್ಥಿಗಳು ಮೂರು ನಾಟಕಗಳನ್ನಾಡಿ ತೋರಿಸಿದರು.

[illegible] ಬುಧವಾರ ಸಾಯಂಕಾಲ ಪ್ರಸ್ತುತ ಸೂಚನೆಯ [illegible] ಸಾಹಿತ್ಯದ ಹಾಡುಗಳನ್ನು ಹಾಡಿ ತೋರಿಸಿ ಸಭಿಕರನ್ನು ಆನಂದಗೊಳಿಸಿದರು.

ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಬ್ರಹಸ್ಪತಿ ಸ್ಕೌಟು ದಳದ ಶಿಬಿರಾಗ್ನಿ (Camp fire) ಯೊಂದು ಇದೇ ಕಳೆದ ತಾ. ೮—೨—'೩೩ನೇ ಬುಧವಾರ ಅಪರಾಹ್ನ ಗಂಟೆ ೬ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಆಫೀಸರರ ಅಧ್ಯಕ್ಷತೆಯಲ್ಲಿ ನಡೆಯಿತು. ಜನ ಸಮೂಹವು ತುಂಬಾ ನೆರೆದಿತ್ತು. ಸ್ಕೌಟರ ಗಾಯನ ಆಟ ವಿನೋದಗಳು ಕ್ರಮವಾಗಿ ಪ್ರದರ್ಶಿಸಲ್ಪಟ್ಟ ಮೇಲೆ ಅಧ್ಯಕ್ಷರು ಈ ದಳದ ಕಾರ್ಯ ಕಲಾಪಗಳ ಶ್ಲಾಘನೀಯವಾದ ಅಭಿಪ್ರಾಯದಿಂದ ತಾವು ಸಂತೋಷಪಟ್ಟಿರುವದಾಗಿಯೂ ಅಲ್ಲದೆ, ಈ ಸಂಸ್ಥೆಯು ಪ್ರಚಾರವಾಗಲು ಇದೇ ಜಿಲ್ಲೆಗೊಂದಾಗಿರುವ ಈ ಟ್ರೈನಿಂಗ್ ಶಾಲೆಯು ಸ್ಕೌಟು ಶಿಬಿರವು ಬಹು ಆವಶ್ಯಕವಾದುದೆಂಬುದಾಗಿಯೂ ಭಾಷಣವೀಯಲು ಮುಖ್ಯೋಪಾಧ್ಯಾಯರ ಉಪಕಾರ ಸ್ಮರಣೆಯೊಂದಿಗೆ ಅಂದಿನ ಸಮಾರಂಭವು ಕೊನೆಗೊಂಡಿತು.

**ಕಾಸರಗೋಡು** — ಶ್ರೀ ಶಂಕರನಾರಾಯಣ ಪ್ರಸಾದಿಕ ಯಕ್ಷಗಾನ ನಾಟಕ ಸಭೆಯವರು ಇದೇ ಶನಿವಾರ 'ಲಂಕಾದಹನ'ವೆಂಬ ನಾಟಕವನ್ನು ಜನರ ಪ್ರೋತ್ಸಾಹದಿಂದ ಎರಡನೇ ಸಲ ಆಡಿ ತೋರಿಸಿದರು. ಹನುಮಂತನ ಪಾರ್ಟನ್ನು ವಹಿಸಿದ ರಾ। ವಿಟ್ಠಲ ಭಟ್ಟರಿಗೆ ಒಂದು ಶಾಲು ಇನಾಮಾಗಿ ದೊರೆತಿರುವುದು.

ಕಾರಡ್ಕ ರಾಮಣ್ಣಾಯರ ಮೇಲಿರುವ ಪೋಲೀಸ್ ಚಾರ್ಜನ್ನು ತಾ. ೧೩ರಿಂದ ೧೭ಕ್ಕೆ ಮುಂದರಿಸಿಟ್ಟಿರುತ್ತದೆ.

**ಸುರತ್ಕಲ್** — ಕಳೆದ ಜನವರಿ ತಾ. ೨೯ನೆಯ ದಿನ ರಾತ್ರೆ ಗಂಟೆ ೯ರಿಂದ ಮರುದಿನ ಬೆಳಿಗ್ಗೆ ಗಂಟೆ ೬ರ ತನಕ ಇಲ್ಲಿಯ ಇಡ್ಯ ವಿದ್ಯಾದಾಯಿನೀ ಶಾಲೆಯಲ್ಲಿ ರಾತ್ರಿ ಶಾಲಾಭ್ಯಾಸಿಗಳಾಗಿದ್ದ ೧೩ ಮಂದಿ ಉಪಾಧ್ಯಾಯರುಗಳೊಂದಾಗಿ ತಮಗೆ ಹಾಯರ್ ಕ್ಲಾಸ್ ಸರ್ಟಿಫಿಕೇಟು ದೊರಕಿದುದರ ಆನಂದಸೂಚಕಾರ್ಥವಾಗಿ, ಸಂತೋಷ ಕೂಟ ಹಾಗೂ ಯಕ್ಷಗಾನ 'ಸೀತಾಪಹಾರ ಮತ್ತು ವಾಲೀಸಂಹಾರ,' ವೆಂಬ ಪ್ರಸಂಗದ ತಾಳಮದ್ದಳೆಯನ್ನು ರಾ॥ ಶ್ರೀ. ಕೆ. ಬಾಲಕೃಷ್ಣ ರಾವ್, ಬಿ. ಎ. ಬಿ. ಎಲ್. ಎಡ್ವೊಕೇಟರ ಅಧ್ಯಕ್ಷತೆಯಲ್ಲಿ ಜರಗಿಸಿದರು.

ಇದೇ ತಾ. ೧೯ನೇಯ ಆದಿತ್ಯವಾರ ಗಂಟೆ ೩ಕ್ಕೆ 'ಸುರತ್ಕಲ್ ಸಹಕಾರ ಸಂಘ'ದ ಮಹಾಸಭೆಯು, 'ಸಹಕಾರ ಮಂದಿರ'ದಲ್ಲಿ ನೆರವೇರುವದು. ಇದೇ ದಿನ ಇಲ್ಲಿಯ 'ಇಡ್ಯದಾಯಿನೀ ಶಾಲಾ ಭವನ'ದಲ್ಲಿ ಇ. ವಿ. ಸಂಘದ ಮಹಾಸಭೆಯೂ ಜರಗುವುದಾಗಿ ತಿಳಿದು ಬರುತ್ತದೆ.

**ಮೂಲ್ಕಿ** — ಇಲ್ಲಿಯ ಪಂಚಾಯತ ಬೋರ್ಡ ಎಲಿಮೆಂಟರಿ ಶಾಲಾ ವರ್ಧಂತಿ ಉತ್ಸವವು ಇದೇ ಫೆಬ್ರವರಿ ತಾ. ೪ ಮತ್ತು ೫ರಲ್ಲು ಜರಗಿಸಲ್ಪಟ್ಟಿತು.

**ಕಿನ್ನಿಗೋಳಿ** — ಇಲ್ಲಿ ಹೊಸತಾಗಿ ತೆರೆದಿರುವ ನೇಶನಲ್ ಕ್ಲಬ್ಬಿಗೆ ತಾ. ೫—೨—'೩೩ರ ವರೆಗೆ ಸಹಾಯ ಮಾಡಿದ ಮಹನೀಯರ ಹೆಸರು ಮತ್ತು ಮೊಬಲಗು ರೂ. ೫ರಂತೆ ಮ. ರಾ. ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಅತ್ತಾವರ ಬಾಲಕೃಷ್ಣ ಶೆಟ್ರು, ಜಿಲ್ಲಾ ಬೋರ್ಡ ಮೆಂಬರ ಮೂಲ್ಕಿ ರಾಮಕೃಷ್ಣ ಪೂಂಜರು, ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟ್ ಎ. ಸಿ. ಗೊನ್ಸಾಲ್ವಿಸ್, ಬಿ. ಎ., ಬಿ. ಎಲ್.; ತಾಲೂಕು ಬೋರ್ಡ ಮೆಂಬರ ಕಿಲೆಂಜೂರು ಗುತ್ತು ಕೋಟಿ ಶೆಟ್ಟಿ. ರೂ. ೪ರಂತೆ ತಾಲೂಕು ಬೋರ್ಡ ಮೆಂಬರ ಮೂಲ್ಕಿ ರಾಜು ಹೆಗ್ಡೆ. ರೂ. ೩ರಂತೆ ಬಳ್ಕುಂಜೆ ಬಲ್ತ್ ಶಾಂತಿಸ್ ಜಮೀನುದಾರ, ದಾಸುರ್ಸ ಕಟ್ಟೆ ಬೆನ್ ಡಿ'ಸೋಜರು, ನಡಿಗುತ್ತು ಕಿಟ್ಟಣ್ಣ ಶೆಟ್ರು, ವಕೀಲ್ ಸದಾಶಿವ ಶೆಟ್ರು ಉಡುಪಿ, ಕಟೀಲು ಶಾಲಾ ಹೆಡ್ ಮಾಸ್ತರರು, ಕಡಂದಲೆ ನಾರಾಯಣ ಶೆಟ್ರು, ಮೂಲ್ಕಿ ಲೋಕಲ್ ಫಂಡ್ [illegible] [illegible] ಶಾಲೆಯ ಉಪಾಧ್ಯಾಯರು. ರೂ. ೨ರಂತೆ, ಕೆಮ್ರಾಲ್ ತಿಮ್ಮಪ್ಪ ಹೆಗ್ಡೆ, ಕೆಮ್ರಾಲ್ ಮೈಲ ಹೆಗ್ಡೆ, [illegible] ಶೆಟ್ರು, ಪಟೇಲರ್ ಮೂಲ್ಕಿ ರಾಯುತ್ತ ಕಾಮತ್ ಎಲ್. ಎಂ. ಪಿ. ಮೂಲ್ಕಿ, ಕೆ. ಶ್ಯಾಮ ಶೆಟ್ರು ಎಲ್. ಎಂ. ಪಿ. ಮೂಲ್ಕಿ, ಯು. ಕೇಶವರಾವ್,—ಟೀಚರ್ ಕೆನರಾ ಹ್ಯಾಸ್ಕೂಲು ಮಂಗಳೂರು. ಕಡಂದಲೆ ಸರ್ವ ಶೆಟ್ರು, ಕಡಂದಲೆ ಮೋನಪ್ಪ ಶೆಟ್ರು, ಕಲ್ಲಮುಂಡ್ಕೂರು ಸಿಪ್ರಿಯಾನ್, ಉಳೆಪ್ಪಾಡಿ ಗುತ್ತು ಕುಂಞಪ್ಪ ಶೆಟ್ರು. ಮೆಂಬರ ನೇಶನಲ್ ಕ್ಲಬ್ ಮ. ರಾ. ಕ್ಲಬ್ಬಿನ ಪ್ರೆಸಿಡೆಂಟ್ ಉಳೆಪ್ಪಾಡಿ ಗುತ್ತು ವಿಟ್ಠಲ ಶೆಟ್ರು ಕ್ಲಬ್ಬಿನ ತಿಂಗಳು ಒಂದರ ಬಾಡಿಗೆ ರೂ. ೧ನ್ನು ೧ ವರ್ಷದ ವರೆಗೆ ಕ್ಲಬ್ಬಿನ ಅಭಿವೃದ್ಧಿಗಾಗಿ ಉದಾರದಾನ ಮಾಡಿರುವರು. ಮೇಲಿನ ಎಲ್ಲಾ ಮಹನೀಯರು ಕ್ಲಬ್ಬಿನ ಮೇಲೆ ಪ್ರೀತಿಯಿಟ್ಟು ಸಹಾಯವಾಗಿದ್ದಕ್ಕೆ ಕ್ಲಬ್ಬಿನ ಪರವಾಗಿ ತುಂಬಾ ಸಂತೋಷಪಡುತ್ತೇನೆಂದು ಸದ್ರಿ ಕ್ಲಬ್ಬಿನ ಸೆಕ್ರೆಟರಿಯವರು ತಿಳಿಸುತ್ತಾರೆ.

**ಪಡುಬಿದ್ರೆ** — ಇದೇ ಕಳೆದ ಜನವರಿ ತಾರೀಕು ೧೬ರಲ್ಲಿ ಇಲ್ಲಿಯ ಸದ್ಗೃಹಸ್ಥರಲ್ಲೊಬ್ಬರು ಜವಳಿ ವ್ಯಾಪಾರಿಗಳೂ ಆಗಿರುವ ಶ್ರೀಯುತ ಕೆ. [illegible] ಸಟ್ರುವರ ಜೇಷ್ಠ ಪುತ್ರ ನಾರಾಯಣ [illegible] ವಿದ್ಯಾರ್ಥಿಯು ಅಕಾಲ ಮೃತ್ಯುವಿಗೆ ತುತ್ತಾದನೆಂದು ಸಂಗತಿಯನ್ನು ತಿಳಿಸುವರೆ ತುಂಬಾ ವಿಷಾದವಾಗುತ್ತದೆ. ಈ ವಿದ್ಯಾರ್ಥಿಯು ಪಡುಬಿದ್ರೆ ಹಾಯರ್ ಎಲಿಮೆಂಟರಿ ಬೋರ್ಡ ಶಾಲೆಯ [illegible] ಯಲ್ಲಿ ಕಲಿಯುತ್ತಿದ್ದು ಬಾಲ್ಯದಾರಭ್ಯದಿಂದಲೂ ಅಲ್ಲಿಯ ಉಪಾಧ್ಯಾಯ ವರ್ಗ ಮತ್ತು ವಿದ್ಯಾರ್ಥಿ ವೃಂದಗಳ ವಿಶೇಷ ಪ್ರೀತಿಗೆ ಪಾತ್ರನಾಗಿದ್ದುದಲ್ಲದೆ, ಓದು ಬರಹ ವಿನಯಶೀಲತೆ ಇತ್ಯಾದಿ ಸದ್ಗುಣಗಳಲ್ಲಿ ತುಂಬಿದ್ದ ಒಬ್ಬ ಆದರ್ಶ ವಿದ್ಯಾರ್ಥಿಯಾಗಿದ್ದನು.

---

## Canara Bank, Ltd., Mangalore.
## ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.
## ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಮೊಬಲಗುಗಳನ್ನು ವಾಯಿದೆಗೆ ಕೊಡದೆ, ಸದ್ರಿಯವರ ಪೈಕಿ ೧ನೇಯವರಿಗೆ ಬಿಟ್ಟ ಟಪ್ಪಾಲು ರಜಿಸ್ತ್ರಿ ನೋಟೀಸು ಸದ್ರಿಯವರು ಸಿಕ್ಕದೆ ಬಟವಾಡೆಯಾಗಲಿಕ್ಕೆ ಅಸಾಧ್ಯವೆಂದು ಪುನಹ ಬಂದಿರುವುದರಿಂದಲೂ, ೩ನೇಯವರಿಗೆ ಬಿಟ್ಟ ಟಪ್ಪಾಲು ರಜಿಸ್ತ್ರಿ ನೋಟೀಸು ಸದ್ರಿಯವರು ಮೃತಪಟ್ಟದ್ದಾರೆಂದು ಪುನಹ ಬಂದಿಯುವುದರಿಂದಲೂ, ಅಡವಿಟ್ಟ ನಗಗಳನ್ನು ಇದೇ ಬರುವ ಮಾರ್ಚ ತಿಂಗಳ ತಾ. ೩ನೇ ಶುಕ್ರವಾರ ದಿವಸ ಮಧ್ಯಾಹ್ನ ಘಂಟೆ ೧೨ರ ತರುವಾಯ, ಯಾ ಬ್ಯಾಂಕಿನವರಿಗೆ ಯುಕ್ತ ತೋರುವ ಮುಂದಣ ತಾರೀಕು ಯಾ ತಾರೀಕುಗಳಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

೧. ಲೋನ್ ನಂಬ್ರ 993/31. ಜೋಸೆಫ್ ಕುಂಞಾಬಾಯಿ, ಡಿ. ಸಿಲ್ವರ ವಿಧವೆ, C/o ಎಲ್. ಎ. ಪೆರೀಸ್, ಕುಡುಬುಗೆರೆ, ಸಂಗಮೇಶ್ವರ ಪೋಸ್ಟ್, ಕಡೂರು ಡಿಸ್ಟ್ರಿಕ್ಟ್. ಅಸ್ಲು ರೂ. 75. ಏಲಂ ತಾ. ವರೆಗೆ ಬಡ್ಡಿ ರೂ. 4—14—3. ಖರ್ಚು 0—3—9.

2. ಲೋನ್ ನಂಬ್ರ 993/31. ಜೋಸೆಸ್ ಕುಂಞಾಬಾಯಿ, ಡಿ. ಸಿಲ್ವರ ವಿಧವೆ, C/o ಎಲ್. ಎ. ಪೆರಿಸ್. ಕುಡುಬುಗೆರೆ, ಸಂಗಮೇಶ್ವರ ಪೋಸ್ಟ್, ಕಡೂರು ಡಿಸ್ಟ್ರಿಕ್ಟ್, ಅಸ್ಲು ರೂ. 250. ಏಲಂ ತಾ. ವರೆಗೆ ಬಡ್ಡಿ ರೂ. 16—9—6. ಖರ್ಚು 0—4—0.

3. ಲೋನ್ ನಂಬ್ರ 284/31. ಮುನ್ನೂರು ಶಿವರಾಮಯ್ಯ, ವಾಸುದೇವಯ್ಯನವರ ಮಗ, ಶ್ರೀಉಲೇಶ್ವರ ದೇವಸ್ಥಾನದ ಸಮೀಪ—ಮಂಗಳೂರು. ಅಸ್ಲು ರೂ. 26. ಏಲಂ ತಾರೀಕು ವರೆಗೆ ಬಡ್ಡಿ ರೂ. 1—8—5. ಖರ್ಚು 0—3—3.

ಈ ನೋಟೀಸಿನ ಖರ್ಚು ಅಲ್ಲಾದಾ.

Office of the Bank,
Mangalore
15—2—1933.

**M. Mukund Kini,**
*For Secretary.*

---


## ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ)

**ಅಖಿಲ ಕರ್ನಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ,**
**ಕರ್ನಾಟಕದ ಗೌರವಕ್ಕೂ ಕರ್ನಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ.**

ನಮ್ಮಲ್ಲಿ ಬ್ರಿಟಿಷ್ ಫಾರ್ಮಕೋಪಿಯಾ, ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೋಡೆಕ್ಸ್, ವ, [illegible] ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ಯೊಲೆಟ್ ದ್ರವ್ಯಗಳೂ, ಸ್ನಾನಕ್ಕೂ [illegible] ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ, ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುವವು.

ಶಾಸ್ತ್ರೀಯ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು. ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ವಿಶ್ರಮುಖ್ಯ ಔಷಧಗಳು,

ಚ್ಯವನಪ್ರಾಶ ಲೇಹ, ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ. ೧ ಪೌಂಡು ಬಾಟ್ಲಿ ರೂ. 3. ೧೦ ಔನ್ಸು ಬಾಟ್ಲಿ ರೂ. 2. ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ವ ಮುದುಕರಿಗೆ ಶಕ್ತಿಯನ್ನೀಯುವ ಔಷಧ ೧ ಪೌಂಡು ಬಾಟ್ಲಿಗೆ ರೂ 1—8—

ಅಶ್ವಗಂಧಾರಿಷ್ಟ ಅತ್ಯುತ್ತಮವಾದ ನರಗಳ ಹಾಗೂ ಸಾಮಾನ್ಯ ಟಾನಿಕ್ಕು. ೧ ಪೌಂಡು ಬಾಟ್ಲಿಗೆ ರೂ. 3. ೮ ಔನ್ಸು ಬಾಟ್ಲಿಗೆ ರೂ. 1—10—0. ಪ್ರಸೂತಿ ಸಂಜೀವನ ಬಾಣಂತಿಯರಿಗೆ ೧೦ ದಿವಸ ಸೇವನೆ ಕೊಡುವ ಔಷಧ. ೧೦ ಔನ್ಸು ಬಾಟ್ಲಿಗೆ ರೂ. 1—8—0. [illegible] ಶ್ರೀಯುತ ಪ್ರಸವದ ತರುವಾಯ ಕೊಡುವ ಪುಷ್ಟಿಕರ ಔಷಧ. ೧ ಪೌಂಡು ಬಾಟ್ಲಿಗೆ 3—8—0, ೮ ಔನ್ಸು ಬಾಟ್ಲಿಗೆ ರೂ. 1—12—0. [illegible] ಗಳಿಗೂ, ಹಸುಳೆಗಳಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಬ್ರೈನ್ ಟಾನಿಕ್ಕು. ೪ ಔನ್ಸು ಬಾಟ್ಲಿಗೆ ಆಣೆ 14. ಹಿಮಸಾಗರ ತೈಲ. ತಲೆಗೆ ತಂಪನ್ನೀಯುವ ದಿವ್ಯವಾದ ಔಷಧ. ೪ ಔನ್ಸು ಬಾಟ್ಲಿಗೆ ರೂ. ೧—8—. ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ. ೪ ಔನ್ಸು ಬಾಟ್ಲಿಗೆ ರೂ. —6—. ಕ್ಷೀರಬಲಾ ತೈಲ ವಾತ ಅರ್ಧಾಂಗ ವಾತ ಮುಂತಾದ ವಾತ ಕಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೩ನೇಯ ಆವರ್ತನೆ ೧ ಔನ್ಸಿಗೆ ರೂ. 1. ೧೪ನೇಯ ಆವರ್ತನೆ ೧ ಔನ್ಸಿಗೆ ರೂ. [illegible], ೨೧ನೇ ಆವರ್ತನೆ ೧ ಔನ್ಸಿಗೆ ರೂ. 2—8. ೪೧ನೇಯ ಆವರ್ತನೆ ೧ ಔನ್ಸಿಗೆ ರೂ. 4. ೫೧ನೇ ಆವರ್ತನೆ ರೂ. 4—8—0. ೧೦೧ನೇ ಆವರ್ತನೆ ರೂ. ೮. ಧನ್ವಂತರಿ ತೈಲ, ರಕ್ತವಾತ, ಆಮವಾತ, ಸರ್ವಾಂಗವಾತ ಮುಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವದೇ ವ ಮೈಗೆ ಹಚ್ಚುವ ದಿವ್ಯೌಷಧ. ೭ನೇಯ ಆವರ್ತನೆ ೧ ಔನ್ಸಿಗೆ ರೂ. [illegible] ೧೪ನೇ ಆವರ್ತನೆ ೧ ಔನ್ಸಿಗೆ ರೂ. [illegible] ೨೧ ನೇ ಆವರ್ತನೆ ೧ ಔನ್ಸಿಗೆ ರೂ. [illegible]

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಆಸವ, ಅರಿಷ್ಟಗಳೂ, ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ, ಸುಕುಮಾರಾಮೃತ, ಮಲೇರಿಯಾ ಮಿಕ್ಶ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, [illegible] ಟಾಲ್ಕ್, ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅರೋರಾ ಕ್ರೀಮ್, [illegible], [illegible] ಎಮೋಶಿನ್ (Limes & Glycerine) ವಗೈರೆ ಟ್ಯೊಲೆಟ್ ಉಪಕರಣಗಳೂ, ನೀಲಿ ಕಪ್ಪು (Blue Black) ಶಾಯಿ, [illegible], [illegible], [illegible], ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಸುವ ಸಾಬೂನುಗಳೂ ತಯಾರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳಿರಿ.

***Managing Director:—*** **Venkatraya Annappa Baliga**

# ರಾಜ್ಯದಾನ ಮಾಡುವೆವು! ಭದ್ರತೆ ಬಿಡಲಾರೆವು!

## ಬ್ರಿಟನಿನಲ್ಲಿ ಮಹಾ ಜಾಲ!

## ಹೋರರ ಭಾಷಣ! ಅರ್ವಿನರ ಸಮರ್ಥನೆ!

# ಗಾಂಧಿಯನ್ನು ಕರೆಯುವಿರಾ?

"ಸ್ವಾತಂತ್ರ್ಯ! ಸ್ವಾತಂತ್ರ್ಯ!"ವೆಂದು ಹೆಣಗಾಡುತ್ತಿರುವ ಹಿಂದೀಯರನ್ನು ಸಮಾಧಾನಪಡಿಸುವುದಕ್ಕಾಗಿ ಎರಡರ ಮೇಲೆ ಇನ್ನೊಂದು ರೌಂಡ್ ಟೇಬಲ್ ಪರಿಷತ್ತು ಜರಗಿ ಸಮಾಪ್ತಿಯಾಯಿತಷ್ಟೆ! ಈ ತೃತೀಯ ಪರಿಷದದಲ್ಲಿ ಹಿಂದೀಯ ಸಮಸ್ಯೆಯ ಪರಿಷ್ಕಾರದ ಬಗ್ಗೆ ಆಳರಸರ ವಾಗ್ದಾನವು ಧಾರಾಳವಾಗಿ ಲಭಿಸಿರುವುದು. ಈ ವಾಗ್ದಾನದ ಪರಿಣಾಮವು ಹೇಗಿರುವುದೋ ಎಂಬುದೀಗ ವಿಚಾರಾರ್ಹ ವಿಷಯವಾಗಿ ನಿಂತಿದೆ. ಗಾತ್ರಾರೊಳಗೆ ಭಾರತಕ್ಕೆ ಯೋಗ್ಯ ರಾಜ್ಯದಾನವನ್ನು ಮಾಡುವೆವೆಂದು ಭಾರತ ಮಂತ್ರಿಗಳಾದ ಸರ್ ಸಾಮ್ಯುವೇಲ್ ಹೋರರು ಅನಿವಾರ್ಯವಾಗಿ ಹೇಳಿದ್ದರಷ್ಟೆ! ಆ ಹೇಳಿಕೆಯನ್ನು ನಂಬಿ ನಮ್ಮ ಪ್ರತಿನಿಧಿಗಳನೇಕರು ಸ್ವದೇಶಕ್ಕೆ ತೆರಳಿ ನಿಶ್ಚಿಂತರಾಗಿ ಕುಳಿತು ಬ್ರಿಟಿಷರರಿಂದ ಬರುವ ಪುಷ್ಪವೃಷ್ಟಿಯನ್ನೇ ನಿರೀಕ್ಷಿಸುತ್ತಿರುವರು.

ಈಗ ಲಂಡನಿನಲ್ಲಿಯ ಪಾರ್ಲಿಮೆಂಟಿನಲ್ಲಿ ಮಾಯಾಜಾಲಕ್ಕಾರಂಭವಾಗಿದೆ. ಹೋರರ ಮಾತು ಮಿತಿಮೀರಿ ಹೋಯಿತೆಂದೂ, ಅವರು ಭಾರತ ವರ್ಷದ ಕಡೆಗೆ ನೀಡಿದ ಸಹಾನುಭೂತಿಯ ಕೈಯು ಬಹಳ ಉದ್ದವಾಗಿ ಬಿಟ್ಟಿತೆಂದೂ, ಅದನ್ನು ಪುನಃ ಹಿಂದಕ್ಕೆಳೆಯಲೇ ಬೇಕೆಂದೂ ಪಾರ್ಲಿಮೆಂಟಿನ ಟೋರಿ ಪಕ್ಷದವರು ಹವಣಿಸುತ್ತಿರುವರು. ಇವರ ಬೆಂಗಾಟ, ಕೋಲಾಹಲಗಳ ಕಾಠಿಣ್ಯವನ್ನು ಕಂಡುಕೊಂಡ ಸರ್ ಸಾಮ್ಯುವೇಲ್ ಹೋರರು ಸಮಾಧಾನದ ಅಭಯ ಹಸ್ತವನ್ನು ಮೇಲೆತ್ತುತ್ತಾ ಮೊನ್ನೆ ಹೀಗೆ ಚಡಪಡಿಸುತ್ತಿರುವ ಸಚಿಕರನ್ನು ಒಟ್ಟು ಕರೆದು ತನ್ನ ನಿಜವಾದ ಅಂತರ್ಯವಿರುವುದೇನೆಂದು ಅವರಿಗೆ ತಿಳುಹಿಸಿದರು! ಸರ್ ಹೋರರು ಸರ್ಕಲಾರುಗಳನ್ನು ಮುದ್ರಿಸಿ ತನ್ನ ಸುತ್ತಮುತ್ತಲಿನವರಿಗೆ ಕೊಟ್ಟು, ಹಿಂದೂ ದೇಶದ ಪ್ರಸ್ತುತ ಸ್ಥಿತಿಗತಿಗಳ ವಿಶಾಲ ಸಿಂಹಾವಲೋಕನವನ್ನು ಮಾಡುತ್ತಾ —, ಹಿಂದೀಯ ಸರಕಾರದಲ್ಲಿ ಪರಿವರ್ತನೆಗಳುಂಟಾಗಲಿರುವುದು ಖರೆ—ಅದು ಅನಿವಾರ್ಯವಾಗಿದೆ. ಅಂತಹ ಪರಿವರ್ತನೆಗಳನ್ನು ಮಾಡಲೇ ಬೇಕಾಗುತ್ತದೆ. ಆದರೂ ನಮ್ಮ ಕೊಮನ್ಸ್ ಸಭೆಯವರೂ ಸರಕಾರವೂ ಅತ್ಯಂತ ಜಾಗರೂಕತೆಯಿಂದಿದ್ದಾರೆ. ನಮ್ಮ ಮೇಲಿನ ಅತೀವ ಜವಾಬ್ದಾರಿಕೆಯನ್ನು ನಾವು ಮರೆತು, ಬಿಟ್ಟುಕೊಟ್ಟು, ವರ್ತಿಸಲು ನಾವು ಸಿದ್ಧರಿಲ್ಲ. ಹಾಗೆ ಮಾಡಿ ನಮಗೆ ಆಯರ್ಲೆಂಡಿನವರಿಂದ ದೊರೆತ ದುಷ್ಟ ಪಾಠವನ್ನು ನಾವು ಪುನಃ ಕಲಿಯಲಾರೆವು! ಹಿಂದೀಯ ಸ್ವತಂತ್ರ ಸರಕಾರ ದಾನವನ್ನು ಮಾಡಲೂ, ಅಂತಹ ಹಂಬಲವನ್ನು ಪ್ರೋತ್ಸಾಹಿಸಲೂ ನಾವು ಸಿದ್ಧರೇ ಇದ್ದೇವೆ. ಆದರೆ—ನಾವು ಬ್ರಿಟಿಷರ ಮತ್ತು ಸಾಮ್ರಾಜ್ಯದ ಭದ್ರತೆಗಳ ಹೋಮವನ್ನು ಮಾಡಿ ಸ್ವನಾಶವನ್ನು ಬಯಸಿಕೊಳ್ಳಲು ಸಿದ್ಧರಿಲ್ಲ ಎಂದರು. ಹೋರರ ಈ ಮಾತಿನಿಂದ ಪಾರ್ಲಿಮೆಂಟಿನ ಅನೇಕ ಕನ್ಸರ್ವೇಟಿವರು ಸಂತುಷ್ಟರಾಗಿದ್ದಾರೆ. ಹೋರರು ತನ್ನ ಜನರ ಕಿವಿಯುಗಲಿಸುವ ಮೇಲಿನ ಮಾತನ್ನು ಹೇಳಿದರೂ ಅವರು ಪುನಃ 'ಚೆಲ್ಸಿ ಕನ್ಸರ್ವೇಟಿವ್' ಸಭೆಯಲ್ಲಿ ಒಂದು ಭಾಷಣವನ್ನು ಮಾಡುತ್ತಾ,—ನಾವು ಹಿಂದೀಯರ ಪ್ರಬಲಾಶಯಗಳನ್ನು ನೆರವೇರಿಸಿ ಕೊಡಬೇಕೆಂದೇ ವಿಚಾರ್ಯಗಳನ್ನು ಮಾಡುತ್ತಿದ್ದೇವೆ. ಬ್ರಿಟನು ಮತ್ತು ಹಿಂದೂ ದೇಶಗಳೊಳಗಿನ ಅನ್ಯೋನ್ಯತೆಯನ್ನು ಕಾಯ್ದುಕೊಳ್ಳಬೇಕೆಂದೇ ಎಲ್ಲರ ಆಶಯವಿದೆ. ಭಾವೀ ರಾಜ್ಯಾಂಗ ರಚನಾ ದಾನ ಮಾಡಿದೊಡನೆ ಬ್ರಿಟಿಷ್ ಸರಕಾರದ ಔದಾರ್ಯವು ಎಷ್ಟಿರುವುದೆಂದು ಮತ್ತೆ ತಿಳಿದೀತು ಎಂದು ಅವರು ಹೇಳಿದರು. ಹೋರರ ಈ ಬಣ್ಣದ ನುಡಿಗಳನ್ನು ಕೇಳಿದ ಲೋರ್ಡ್ ರೇಂಕೇಲ್ಲರವರು ಎದ್ದು ನಿಂತು ನಾವು ಮಾಡುವ ರಾಜ್ಯದಾನವು ಯಾವ ನಿರ್ಬಂಧಗಳಿಂದಲೂ ಕೂಡಿದುದಾಗಿರಬಾರದು ಎಂದರು, ಅವರ ಭಾವವನ್ನು ಸಮರ್ಥಿಸಿ ಲೋರ್ಡ್ ಸೆಲಿಸ್ಬರಿಯವರು ಮಾತನಾಡಿಸಿದರು. ಕ್ರಮೇಣ ಬ್ರಿಟನಿನ ಕಷ್ಟ ಸಂಕಷ್ಟಗಳು ಪರಿಹಾರವಾಗುವುದೆಂದರು. ಅಷ್ಟರಲ್ಲಿ ಪ್ರಖ್ಯಾತರಾದ ಲೋರ್ಡ್ ರೀಡಿಂಗ್ ದೊರೆಗಳವರು ಎದ್ದು ನಿಂತು "ಬ್ರಿಟಿಷ್ ಸರಕಾರವು ಹಿಂದೂದೇಶಕ್ಕೆ ಕೊಡುವ ಎಲ್ಲಾ ದಾನವನ್ನು ಪಾರ್ಲಿಮೆಂಟಿನವರು ಪರಿಶೀಲಿಸಿಯೇ ನೋಡಬೇಕು. ತಮ್ಮಭಿಮತವನ್ನು ಕೊಡಲೇಬೇಕು" ಎಂದರು. ಅವರು ಸರ್ ಸಾಮ್ಯುವೇಲ್ ಹೋರರ ನಿಶ್ಚಲ ಮನೋಭಾವವನ್ನು ಪ್ರಶಂಸಿಸಿ, ತೃತೀಯ ಪರಿಷತ್ತಿನಲ್ಲಿ ನಡೆದ ಕಾರ್ಯಕಲಾಪಗಳನ್ನು ಬಾಯಿ ತುಂಬ ಹೊಗಳಿದರು. ತಾನು ಔದಾರ್ಯವನ್ನು ಸಂದರ್ಭೋಚಿತವಾಗಿ ತೋರಿಸುವ ವ್ಯಕ್ತಿ! ಸಾಮ್ರಾಜ್ಯದ ಭದ್ರತೆಗೆ ಹಾನಿಯುಂಟಾಗುವ ಯಾವ ರಿಯಾಯಿತಿಯನ್ನೂ ತಾನು ಮಾಡುವುದಿಲ್ಲ. ಈಗ ಹಿಂದೂದೇಶಕ್ಕೆ ಒಂದು ಸುವ್ಯವಸ್ಥಿತ ದಾರಿಯನ್ನು ತೋರಿಸಿ ಕೊಡಲು ಸರಕಾರವು ಮನಸ್ಸು ಮಾಡಿರುವುದನ್ನು ನೋಡಿ ತನಗೆ ಅತ್ಯಾನಂದವಾಗಿದೆ ಎಂದರು. ಆ ಮೇಲೆ ಲೋರ್ಡ್ ಪೀಲರು ಇಲ್ಲಿಯ ಸ್ಥಿತಿಗತಿಗಳನ್ನು ಹೇಳುತ್ತಾ ಸಾಂಪತ್ತಿಕ ಸ್ಥಿತಿಯಲ್ಲಿ ಹಿಂದೂದೇಶದಷ್ಟು ಉತ್ತಮ ದೇಶವು ಈಗ ಬೇರೊಂದಿಲ್ಲ. ಅಲ್ಲಿ ಎಷ್ಟು ಸಾಲವಿದೆಯೋ ಅಷ್ಟೇ ಮೂಲವಿದೆ, ಆಸ್ತಿಯಿದೆ, ನಷ್ಟವಾಗಲಿಲ್ಲ ಎಂದರು. ಮಾಜಿ ವೈಸರಾಯರಾದ ಲೋರ್ಡ್ ಅರ್ವಿನವರು ಎಲ್ಲರಿಗೂ ಒಂದು ಉತ್ತರವನ್ನು ಕೊಟ್ಟರು. ಬ್ರಿಟಿಷ್ ಸರಕಾರವು ಸ್ವಲ್ಪ ಸಮಯದಲ್ಲಿ ಜೋಯಿಂಟ್ ಸಿಲೆಕ್ಟ್ ಕಮಿಟಿಯೊಂದನ್ನು ಕರೆದು, ಅದರಲ್ಲಿ ಹಿಂದೀಯ ಮೆಂಬರರನ್ನು ಸೇರಿಸಿ ಒಂದು ರಾಜ್ಯದಾನದ ನಿರ್ಣಯವನ್ನು ಮಾಡಿ ಪಾರ್ಲಿಮೆಂಟಿನ ಶಿಫಾರಸಿನ ಬಗ್ಗೆ ಕಳುಹಿಸುವುದ ಎಂದರು. ಅವರ ಮಾತಿನಲ್ಲೂ ಬ್ರಿಟಿಷರು ಮುಷ್ಟಿಯನ್ನು ಸಂಪೂರ್ಣ ತೆರೆಯಲು ಸಾಧ್ಯವಿಲ್ಲ ಎಂಬ ಭಾವವು ಹೊರಬಿದ್ದಿದೆ.

ಪಾರ್ಲಿಮೆಂಟಿನವರ ತರ್ಕವಿತರ್ಕಗಳನ್ನು ಪರಿಶೀಲಿಸುವಾಗ ಅವರು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಯಾವ ಕಾಲದಲ್ಲೂ ಕೊಡುವುದು ಅಸ್ವಾಭಾವಿಕವೇ ಆಗುವುದೆಂದು ಯಾರೂ ತಿಳಿಯದಿರರು. ಪ್ರತಿಯೊಂದು ಪರಿಷತ್ತಿನಲ್ಲೂ ಹಿಂದೂ ದೇಶದ ಸ್ವಾತಂತ್ರ್ಯ ಸುಧಾರಣೆಗಳನ್ನು ಮಾಡುತ್ತಾರಾದರೂ ಅಂತಹ ಸುಧಾರಣಾ ಸ್ಥಾಪನೆಯ ನೆನಪು ಮರುಕ್ಷಣವೇ ಮಾಯವಾಗುತ್ತಿದೆ. ಇದಕ್ಕೆ ಕಾರಣ ಬ್ರಿಟನಿನ ಪಾರ್ಲಿಮೆಂಟಿನಲ್ಲಿಯ ವಿರುದ್ಧ ಪಾಕ್ಷಿಕ ತಂಡಗಳ ಪ್ರಾಬಲ್ಯ. ಕ್ರಾಂತಿಯುತಪಕ್ಷದವರಾದ ಬಹು ಸಂಖ್ಯಾತ ಪಾರ್ಲಿಮೆಂಟು ಸದಸ್ಯರು ಹಿಂದೀಯರ ಆಶಯಗಳನ್ನು ಮನಃಪೂರ್ವಕ ಖಂಡಿಸುವವರು. ಯಾವ ಕಾಲಕ್ಕೂ ಏನಾದರೂ ಹಿಂದೂ ದೇಶದಲ್ಲಿ ತಮಗೆ ಈಗಿರುವ ಹಕ್ಕು ಬಾಧ್ಯತೆ ಪ್ರಯೋಜನಗಳು ಸಿಗುವುದಿಲ್ಲವಾದರೆ ಹಿಂದೂದೇಶಕ್ಕೆ ಯಾವ ರಾಜ್ಯ ಸುಧಾರಣೆಗಳನ್ನು ಕೊಡಬಾರದೆಂದೇ ಅವರ ಹಟವಿರುತ್ತದೆ. ಹಿಂದೂ ದೇಶಕ್ಕೆ ಸ್ವಾತಂತ್ರ್ಯವು ಲಭಿಸುವುದು ನಿಜವಾದರೆ ಬ್ರಿಟಿಷರ ಹಕ್ಕು ಭದ್ರತೆ ಬಾಧ್ಯತೆಗಳು ಇಂಬಾರದು. ಹಾಗೆ ಹಕ್ಕು ಬಾಧ್ಯತೆಗಳನ್ನು ಅವರು ತಮ್ಮ ವ್ಯಾಪಾರೀ ದೃಷ್ಟಿಯಿಂದ ಮರೆಯಲಿಕ್ಕೂ ಇಲ್ಲ, ಹಿಂದೂ ದೇಶಕ್ಕೆ ಸ್ವಾತಂತ್ರ್ಯವು ದೊರೆಯಲಿಕ್ಕೂ ಇಲ್ಲ. ಇಂತಹ ಸಂದಿಗ್ಧ ಸ್ಥಿತಿಯು ಈಗ ಸನ್ನಿಹಿತವಾಗಿದೆ. ಕೊಂಗ್ರೆಸ್ಸು ತನ್ನ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸಿ ತಾವು ಕೊಟ್ಟುದರಲ್ಲಿ ಸಂತೃಪ್ತಿಗೊಂಡಿರಬೇಕೆಂದೇ ಬ್ರಿಟಿಷ್ ಮುತ್ಸದ್ದಿಗಳ ಛಲವಿರುತ್ತದೆ. ಹಿಂದೂ ಪತ್ರಿಕೆಯ ಲಂಡನ್ ಸುದ್ದಿಗಾರನು ಈ ವಿಷಮಾವಸ್ಥೆಯು ಥಟ್ಟನೆ ಹೋಗಲು ಸಾಧ್ಯವಿಲ್ಲ. ಕೊಂಗ್ರೆಸ್ಸು ಥಟ್ಟನೆ ವಿಜಯಗೊಳ್ಳಲು ಕಾರಣವಿಲ್ಲ. ಕಾಯಿದೆಭಂಗ ಚಳವಳದಂತಹ ಪ್ರದರ್ಶನಗಳು ಸುಘಟಿತ ರಾಜ್ಯವನ್ನು ತರುವಂತಿಲ್ಲ ಎಂದಿದ್ದಾನೆ. ಮೇಲಿನ ಪಾರ್ಲಿಮೆಂಟು ಮೆಂಬರರ ಮಾತುಕತೆಗಳಿಂದ, ಗೂಢಾರ್ಥಗಳ ಪರಿಶೀಲನೆಯಿಂದ, ಅವರ ನಿಜವಾದ ಅಂತರ್ಯವು ಹೇಗಿರುವುದೆಂದು ತಿಳಿಯದಿರಲಾರದು. ಆಂದಿನ ರೌಂಡ್ ಟೇಬಲ್ ಪರಿಷತ್ತಿನ ಸದಸ್ಯರಲ್ಲೊಬ್ಬರಾಗಿದ್ದ ಸರ್ ಚಿಮನ್‌ಲಾಲ್ ಸೆತಲ್ವಾದರು ಮೊನ್ನೆ ಮುಂಬಾಯಿಯಲ್ಲಿ ಮಾಡಿದ ಭಾಷಣದಿಂದ ಮಂದಪಕ್ಷದವರೂ ಕೂಡಾ ಈಗೀಗಿನ ಬ್ರಿಟಿಷರ ದಾನದ ಮೇಲೆ ಪ್ರಯೋಜನಕರ ಆಶೆಯನ್ನಿಡುತ್ತಿಲ್ಲವೆಂದು ತಿಳಿಯಲಾಗುವುದು.

ತೃತೀಯ ರೌಂಡ್ ಟೇಬಲಿನಲ್ಲಿ ಹಿಂದೀಯ ಪ್ರತಿನಿಧಿಗಳು ಒಪ್ಪಿದ ಸುಧಾರಣೆಗಳು ತಮ್ಮ ಪ್ರಯೋಜನವನ್ನು ಹೆಚ್ಚಿಸುವಂತಹುದೆಂದು ಭಾವಿಸಿ ಈಗ ಲಂಡನಿನ ಒಫೀಶಿಯಲ್ ಕನ್ಸರ್ವೇಟಿವರು ಒಂದಾಗಿ ಸರಕಾರವು ಪರಿಷತ್ತಿನಲ್ಲಿ ನಿರ್ಧರಿಸಿದಂತೆಯೇ ನಡೆಯಬೇಕೆಂದು ಹಟಗಟ್ಟಿದ್ದಾರೆ. 'ದಿ ಬರ್ಮಿಂಗ್‌ಹೇಮ್ ಯೂನಿಯನ್ ಎಸೋಶಿಯೇಶನಿನ'ವರು ಪ್ರಧಾನಾಮಾತ್ಯರಾದ ಮೆಕ್‌ಡೊನಾಲ್ಡರಿಗೆ ಒಂದು ಮನವಿಯನ್ನು ಮಾಡುತ್ತಾ, ಬ್ರಿಟಿಷ್ ಸರಕಾರದ ಮುಂದಡಿಯಿಡುವ ಕ್ರಮವೂ ಅದು ಬ್ರಿಟಿಷ ಹಿತವನ್ನು ಚಿತ್ತದಲ್ಲಿಟ್ಟು ಹೂಡಿದ ರಾಜ್ಯದಾನಯೋಜನೆಗಳೂ ಪ್ರಶಂಸನೀಯವೆಂದೂ ಹೇಳಿಕೊಂಡಿರುತ್ತಾರೆ. ಲೋರ್ಡ್ ರೇಂಕಿಲ್ಲರ್ ಎಂಬವರು ಮಾತ್ರ ಹಿಂದೀಯರಿಗೆ ಕೊಡಲಿರುವ ಯಾವ ದಾನವನ್ನೂ ಮೊದಲು ಪಾರ್ಲಿಮೆಂಟಿನವರು ಸಂಪೂರ್ಣವಾಗಿ ತರ್ಕಿಸಿ, ಪರೀಕ್ಷಿಸಿ ನೋಡಲೇಬೇಕೆಂದು ಅಭಿಪ್ರಾಯವಿತ್ತಿರುವರು.

ಮೊನ್ನೆ ನ್ಯೂಡಿಲ್ಲಿಯಲ್ಲಿ ವೈಸರಾಯರು ಮಾಡಿದ ಭಾಷಣದಿಂದ ಲಂಡನಿನಲ್ಲಿ ಅನೇಕರು ಅಸಮಾಧಾನಗೊಂಡಿರುವರು. ಲಂಡನಿನ ಟ್ರೆಫಲ್‌ಗರ್ ಸ್ಕ್ವೇರ್‌ನಲ್ಲಿ ಹಿಂದೀಯರ ಒಂದು ಮಹಾ ಸಭೆಯು ಜರಗಿ ಮೀರತ್ ಕೈದಿಗಳ ಮತ್ತೂ ರಾಜಕೀಯ ಕೈದಿಗಳ ವಿಮುಕ್ತತೆಗಾಗಿ ಠರಾವುಗಳು ಮಂಜೂರಾದವು. ನ್ಯೂಸ್ ಕ್ರೊನಿಕಲ್ ಪತ್ರಿಕೆಯಲ್ಲಿ ಮಿ| ಸ್ಪೆಂಡರ್ ಎಂಬವರು ಒಂದು ಲೇಖನವನ್ನು ಬರೆದು—ಎಷ್ಟರ ತನಕ ಗಾಂಧಿಯನ್ನು ಬಂಧಿಸಿಟ್ಟಿರೋ ಅಷ್ಟರ ತನಕ ಕಂಗಾಲಾವಸ್ಥೆಯು ತೀರಿಹೋಗದು. ಇದನ್ನು ಹೋಗಲಾಡಿಸಬೇಕಾದರೆ ಮೊದಲು ಗಾಂಧಿಯನ್ನೂ ಅವರ ಅನುಯಾಯಿಗಳನ್ನೂ ಬಿಡುಗಡೆ ಮಾಡಿ ಅವರಲ್ಲರೂ ಭಾವೀ ರಾಜ್ಯಾಂಗದ ಕುರಿತು ಅನ್ಯೋನ್ಯವಾಗಿ ಆಲೋಚಿಸಲಿ ಎಂದರು. ಲಂಡನಿನಲ್ಲಿ ಸರ್ ಮೈಕಲ್ ಒಡ್ವಾಯರರೆಂಬ ಅತ್ಯಂತ ಪ್ರಖ್ಯಾತ ಕರ್ತವ್ಯದಕ್ಷರು ಮೀರತ್ ಮೊಕದ್ದಮೆಯಲ್ಲಿ ಪೋಲೀಸರು ತೋರಿಸಿದ ಸಾಹಸ, ನ್ಯಾಯನೀತಿಗಳನ್ನು ಶ್ಲಾಘಿಸುತ್ತಾ,—ಪೋಲೀಸ ಫೌಜು ಬ್ರಿಟಿಷ ಸರಕಾರದ ಕೈಯಡಿಯಲ್ಲಿದ್ದುದರಿಂದ ಅದು ಇಂತಹ ಯಶಸ್ವಿಯಾದ ಸಾಹಸವನ್ನು ಮಾಡಲನುಕೂಲವಾಯಿತು. ಇನ್ನು ಹೊಸ ರಾಜ್ಯಭಾರ ಕ್ರಮದಲ್ಲಿ ಪೋಲೀಸರನ್ನು ಚಲಾಯಿಸುವ ಮುಖ್ಯಾಧಿಕಾರವು ನ್ಯಾಯವಿಧಾಯಕ ಸಭೆಯ ಮಂತ್ರಿಯವರ ಕೈಯಡಿಯಲ್ಲಿ ಎಂದಾದರೆ ಮತ್ತೆ ನಮ್ಮ ಪೋಲೀಸರು ಅನೈತಿಕ ಅಧರ್ಮ ಮಾರ್ಗಕ್ಕೆ ತೆರಳುವುದು ಖರೆ! ಕಾರಣ, ನ್ಯಾಯವಿಧಾಯಕ ಸಭೆಯಲ್ಲಿ ಹಿಂದೂ ಮುಸ್ಲಿಮರ ಬಹು ಪಕ್ಷೀಯರು ತುಂಬುವುದರಿಂದ ಬ್ರಿಟಿಷ ಹಿತಕ್ಕೆ ಮಹಾ ಘಾತವಾಗಲಿದೆ ಎಂದರು. ಮೈಕೆಲರ ದೂರದೃಷ್ಟಿಯು ಆಧಾರ ರಹಿತವಾದುದೋ ಎಂದು ಅನೇಕರು ಪ್ರಶ್ನಿಸುತ್ತಿರುವರು.

+ + ++

# ಪತ್ರಿಕಾಲೋಕ:— ಮಕ್ಕಳನ್ನು ಶಾಲೆಗೆ ಕಳುಹಿಸದಿರುವಿರಾ! ಜೋಕೆ! ಆಸ್ಟ್ರೇಲಿಯಾದಲ್ಲಿ — ಪರಾಮೋಶಿ — ಸುಟ್ಟ ಮೋರೆ. ವಿವಾಹವು ಕಡ್ಡಾಯವಾಯಿತು. ೧೯೩೨ರಲ್ಲಿ ವಿಶ್ವದಲ್ಲಿನ ಪ್ರಗತಿ — ಇತ್ಯಾದಿ.

## ಮಕ್ಕಳನ್ನು ಶಾಲೆಗೆ ಕಳುಹಿಸದಿರುವಿರಾ! ಜೋಕೆ!

ಮುಂಬಾಯಿ ಮುನಿಸಿಪಲ್ ಸ್ಕೂಲ್ ಕಮಿಟಿಯ ವರದಿಯಲ್ಲಿ, ಕಡ್ಡಾಯವಾದ ಪ್ರಾಥಮಿಕ ಶಿಕ್ಷಣಕೊಡುವ ಪ್ರಾಥಮಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸದಿರುವ ಹೆತ್ತವರ ಮೇಲೆ ದಾವೆ ನಡೆಸಬೇಕೆಂದು ಒಂದು ಠರಾವು ಬಂದಿದೆಯಾಗಿ ತಿಳಿದುಬಂದಿದೆ. ಅಲ್ಲಿಯ ಮತ್ತು ಕೆಲ ವಾರ್ಡುಗಳ ಒಟ್ಟು ೮೬೭೬ ಮಕ್ಕಳು ವಿದ್ಯಾಹೀನರಾಗಿದ್ದುದರಿಂದ ಈ ಕಾನೂನನ್ನು ಅಲ್ಲಿಗೆ ತರಲಿರುವರು. ಈ ಕುರಿತಾಗಿ ಮುಂಬಾಯಿ ಸ್ಕೂಲ್ ಕಮಿಟಿಯವರು ಬ್ರೋಡ್‌ಕಾಸ್ಟಿನ ಮೂಲಕ ಒಂದು ಅರಿಕೆಯನ್ನೂ, ಎಚ್ಚರಿಕೆಯನ್ನೂ ಹೆತ್ತವರಿಗೂ ರಕ್ಷಕರಿಗೂ ಕಳುಹಿಸಲಿರುವರು.

ಮು. ಕ್ರೊ.

## ಆಸ್ಟ್ರೇಲಿಯಾದಲ್ಲಿ

ಸಿಡ್ನಿ ಹಾರ್ಬರಿನಲ್ಲಿ ೪೫,೦೦೦,೦೦೦ ಡೊಲ್ಲರುಗಳ ವೆಚ್ಚದಿಂದ ಒಂದು ಸಂಕವನ್ನೂ, ಲಂಡನಿನ ಥೇಮ್ಸ್ ನದಿಗೆ ಲೋಕ ಪ್ರಖ್ಯಾತವಾದ ಒಂದು ಸಂಕವನ್ನೂ, ಇಡೀ ಯುರೋಪದಲ್ಲಿ ಅತ್ಯಂತ ಉದ್ದವೆಂದು ಹೆಸರುಗೊಂಡ ಒಂದು ಸಂಕವನ್ನು ಆಫ್ರಿಕದ ನಿಗಾರ್ ಎಂಬಲ್ಲೂ ಬಹಳ ವ್ಯಯ ಮಾಡಿಸಿ ಹಾಕಿದರು. ಯುನೈಟೆಡ್ ಸ್ಟೇಟ್ಸಿನಲ್ಲಿ ಹಡ್ಸನ್ ನದಿ ನ್ಯೂಯಾರ್ಕ್ ಎಂಬಲ್ಲಿ ನಾಲ್ಕು ಮೈಲುಗಳ ಸಂಕವನ್ನು ಕಟ್ಟಿಸಿದರು. ಇವೆಲ್ಲಾ ರಚನೆಗಳು ಅಸಂಖ್ಯಾತ ಮಿಲಿಯ ಡೊಲ್ಲರುಗಳನ್ನು ವ್ಯಯಿಸಿದುವು. ಹಿಂದೂ ದೇಶವು ಹೇಗೆ ಪ್ರಗತಿ ಹೊಂದಿತು? ಕಾಂಗ್ರೆಸ್ಸು ಒಂದು ಜೈಲಿಗೆ ಹೋಯಿತು! ಅಷ್ಟೆ!

## ಪರಾಮೋಶಿ!

ಸರಗೋಸಾದ ಕೋರ್ಟಿನಲ್ಲಿ ಒಬ್ಬನ ಫಿರ್ಯಾದು ನಡೆದಿದೆ. ತಾನು ರಾತ್ರಿ ತನ್ನ ಹಾಸಿಗೆಯ ಮೇಲೆ ನಿದ್ರಿಸುತ್ತಿದ್ದೆ. ಯಾರೋ ಕೆಲವು ಪುಂಡರು ಬಂದು ತನ್ನನ್ನು ಹಾಸಿಗೆ ಸಮೇತ ಹೊರಗೆ ಹೊತ್ತುಕೊಂಡು ಹೋಗಿ ತಾನು ಸ್ತ್ರೀಯೆಂದು ಭಾವಿಸಿ ಹಿಡಿದರು. ಆದರೆ ತಾನು ಪುರುಷನೆಂದು ತಿಳಿದು ಬಂದೊಡನೆ ಅವರು ತನ್ನನ್ನು ಹೊಡೆದೋಡಿಸಿದರು ಎಂಬುದೇ ಅವನ ದೂರು. ಪರಾಮೋಶಿಗೆ ತುತ್ತಾದ ಸಾಹಸಿಗರಲ್ಲೊಬ್ಬನೂ ಇಷ್ಟರ ತನಕ ಸಿಗಲಿಲ್ಲ.

## ಸುಟ್ಟ ಮೋರೆ!

ಶಿಂಘಾಯ್ ಪಟ್ಟಣದಲ್ಲಿ ಯುಂಬಿಯಾನನೆಂಬೊಬ್ಬ ಸೇನಾಧಿಕಾರಿಯು ಒಂದು ದಿನ ಕನ್ನಡಿ ಎದುರು ನಿಂತಾಗ ಅವನಿಗೆ ತನ್ನ ಮೋರೆಯು ಕುರೂಪ ವಿರೂಪದ ಅರಿವಾಯಿತು! ಸುಟ್ಟ ಮೋರೆ! ಇದನ್ನಿಟ್ಟುಕೊಂಡು ಬದುಕಿ ಫಲವೇನೆಂದು ಚೀಟು ಬರೆದು, ದೋಣಿ ತೆಗೆದುಕೊಂಡು ಹೋಗಿ ನದಿಯಲ್ಲಿ ಥಕ್ಕನೆ ಮುಳುಗಿದ. ಅವನನ್ನು ಕೆಲವರು ಹೇಗೋ ಬದುಕಿಸಿ ಆಸ್ಪತ್ರೆಗೊಯ್ದರು. ಅವನ ಚೀಲವನ್ನು ನೋಡುವಾಗ ಅವನು ತನ್ನ ಸುಟ್ಟ ಮೋರೆಗಾಗಿ ಪಶ್ಚಾತ್ತಾಪಗೊಂಡು ಪ್ರಾಣಹತ್ಯಕ್ಕೆ ಉದ್ಯುಕ್ತನಾದನೆಂದು ತಿಳಿದು ಬಂತು.

## ವಿವಾಹವು ಕಡ್ಡಾಯವಾಯಿತು!

ಸಿನಿಯರ್ ಮುಸೋಲಿನಿಯವರ ಅಧಿಕಾರದಲ್ಲಿ ಸ್ತ್ರೀ ಪುರುಷರು ಅವಿವಾಹಿತರಾಗಿರುವುದು ತಪ್ಪೆಂದು ಕಾನೂನು ಮಾಡಲಾಗಿದೆ. ಇದನ್ನು ಹೆಚ್ಚು ಮಂದಿಗಳು ವಿವಾಹಿತರಾಗಿ ಜನ ಸಂಖ್ಯೆಯನ್ನು ಹೆಚ್ಚಿಸಬೇಕೆಂದೇ ಮುಸೋಲಿನಿಯವರ ಉದ್ದೇಶ. ಅಲ್ಲಿಯ ನೇಪಲ್ಸ್ ಎಂಬಲ್ಲಿಯ ಫೆಸಿಸ್ಟ್ ಸಂಘವು ೧೯೩೩ರಲ್ಲಿ ವಿವಾಹವಾಗುವ ಪ್ರತಿಯೊಬ್ಬ ಬಡ ದಂಪತಿಗಳಿಗೆ ೧೫ ಪವನು ಬೋನಸ್ಸು ಕೊಡುತ್ತದೆ. ಇದನ್ನು ಹೆಚ್ಚು ಮಂದಿ ಫೆಸಿಸ್ಟ್ ಪಕ್ಷೀಯರು ಉದ್ಯುಕ್ತವಾಗಲೆಂದು ಈ ಹಂಚಿಕೆ. ಯುದ್ಧವಾಗುವುದಾದರೆ ಮುಂದಕ್ಕೆ ಜನ ಸಂಖ್ಯೆಯ ಇಳಿತದಿಂದ ಸೋತುಹೋಗಬಾರದೆಂಬುದು ಒಂದು ಗೂಢಾಲೋಚನೆ.

## ೧೯೩೨ರಲ್ಲಿ ವಿಶ್ವದಲ್ಲಿನ ಪ್ರಗತಿ.

ಆರ್ಥಿಕ ಸಂಕಷ್ಟವೆಂಬುದು ಲೋಕದಲ್ಲೆಲ್ಲ ಹರಡಿದುದು ೧೯೩೦-೩೧ರಲ್ಲಿ. ೧೯೩೨ರಲ್ಲಿ ಅದರ ಪ್ರಸಂಗ ಒದಗಿತು. 'ಆರ್ಥಿಕ ಸಂಕಷ್ಟ'ವೆಂಬ ಪ್ರತಿಧ್ವನಿಯು ಎಲ್ಲೆಲ್ಲಿಯೂ ಕೇಳಿತು. ಆದರೆ ೧೯೩೨ರಲ್ಲಿ ಇನ್ನು ವರ್ಷಗಳಲ್ಲಾಗದಷ್ಟು ಪ್ರಗತಿಯು ಪ್ರಪಂಚದಲ್ಲಾಯಿತು. ಅಮೇರಿಕದ ನ್ಯಾಶನಲ್ ಜಿಯೊಗ್ರಫಿಕಲ್ ಸೊಸೈಟಿಯವರು ಪ್ರಕಟಿಸಿರುವಂತೆ ೧೯೩೨ರಲ್ಲಿ ರಶ್ಯನ್ ಸೋವಿಯಟ್ ಯೂನಿಯನಿನ ಡ್ನೀಪ್ರೊಸ್ಟ್ರೊಯ್ ಎಂಬಲ್ಲಿ ಡ್ನೀಪರ್ ನದಿಗೆ [illegible] ಅಡಿ ಉದ್ದವೂ, ೧೯೦ ಅಡಿ ಎತ್ತರದ ಗೋಡೆಯನ್ನು ಹಾಕಲಾಯಿತು. [illegible] ೧೯೧೦ ಅಡಿ ಉದ್ದ ೧೯೧ ಅಡಿ ಎತ್ತರದ ಒಂದು ಗೋಡೆಯನ್ನು ಹಾಕಲಾಯಿತು. [illegible] ಅಮೇರಿಕದ [illegible] ಗ್ರೇಟ್ [illegible] ಸಾಹಸಕ್ಕೆ ಜಯಪ್ರದವಾಯಿತು. [illegible]

ಇದೇ ಮೊದಲು! ಮಿಲಿಯ ವರ್ಷಗಳಲ್ಲಿದ್ದ ಸೃಷ್ಟಿ ಸ್ಥಿತಿಯನ್ನೇ ಬದಲಾಯಿಸಿದರು. ಯುರೋಪಿನ ಜೂಯಿಡರ್ ಸರೋವರವನ್ನು ೧೮೦ ವರ್ಷಗಳ ಮೊದಲು ಕಟ್ಟಬೇಕೆಂದು ಯತ್ನಿಸಿದ್ದರು. ೧೯೩೨ರಲ್ಲಿ ಅದು ಫಲಪ್ರದವಾಯಿತು. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇಲಿನೋಯ್ ಜಲಾಶಯವನ್ನು ಬಟುವಮಾಡಿದರು. ಇಟಲಿಯಲ್ಲಿ ಜಿನೋವ ಮಿಲಾನ್‌ಗಳನ್ನು ಒಂದು ಗೂಡಿಸಲು ಪ್ರಥಮದ್ದಾಗಿ ಮೋಟರ್ ಮಾರ್ಗವನ್ನು ರಚಿಸಿ ಯಶಸ್ವಿಗಳಾದರು.

## ಕಾರ್ಖಾನೆಗಳ ಜನನ!

೧೯೩೧ನೇ ಸಾಲಿನ ಆದಿಭಾಗದಲ್ಲಿ ಹಿಂದೂದೇಶದಲ್ಲಿ ಒಟ್ಟು ೩೨ ಸಕ್ಕರೆ ಕಾರ್ಖಾನೆಗಳಿದ್ದುವು. ೧೯೩೨ರಲ್ಲಿ ೨೭ ಕಾರ್ಖಾನೆಗಳು ಸ್ಥಾಪನೆಯಾದವು. ೧೯೩೩ನೇ ಸಾಲಿನಲ್ಲಿ ಕನಿಷ್ಠಪಕ್ಷ ೨೦ ಸಕ್ಕರೆ ಕಾರ್ಖಾನೆಗಳು ನೂತನವಾಗಿ ಏರ್ಪಡುವುವೆಂದು ಅಂದಾಜಾಗಿದೆ. ಅಂದರೆ ಕಾರ್ಖಾನೆಗಳು ಮೂರು ವರುಷಗಳಲ್ಲಿ ಶೇಕಡ ೨೫೦ರಂತೆ ಅಭಿವೃದ್ಧಿಗೆ ಬಂದಿವೆ. ಆದರೆ ಕಾರ್ಖಾನೆಗಳ ಸಂಖ್ಯೆ ಹೆಚ್ಚಿದಂತೆ ಕಬ್ಬಿನ ಬೆಳೆಯಾಗುವ ವಿಸ್ತೀರ್ಣವು ಹೆಚ್ಚಾಗಬೇಕಾದುದು ಅಗತ್ಯವಾಗಿದೆ. ದೇಶೀಯ ಕಾರ್ಖಾನೆಗಳಿಂದ ದೇಶಕ್ಕೆ ಬೇಕಾದಷ್ಟು ಸಕ್ಕರೆಯನ್ನು ಒದಗಿಸಿಕೊಂಡು ವಿದೇಶಗಳಿಗೆ ಸಕ್ಕರೆಗಾಗಿ ಕಳುಹಿಸುತ್ತಿರುವ ಅಪಾರವಾದ ದ್ರವ್ಯವನ್ನು ನಿಲ್ಲಿಸಿಕೊಳ್ಳುವುದು ಮೊದಲನೇ ಪ್ರಯತ್ನ. ಅನಂತರ ಹಿಂದೂದೇಶದ ಸಕ್ಕರೆಯನ್ನು ವಿದೇಶಗಳಿಗೆ ಕಳುಹಿಸುವ ಯೋಚನೆಮಾಡಬಹುದಾಗಿದೆ.

## ಗಂಡ?

ಅಮೇರಿಕದ ಮಿಸ್ ಆರ್ನಾಲ್ಡ್ ಎಂಬ ಧನಿಕಳು ಫ್ರಾನ್ಸಿನಲ್ಲಿ ರೈಲ್ವೇ ಪ್ರಯಾಣ ಮಾಡುತ್ತಿರುವಾಗ ಲೊಥೇರಿಯೊ ಎಂಬ ಸುಂದರ ಪುರುಷನ ಪರಿಚಯವಾಯಿತು. ಆತನು ತಾನೊಬ್ಬ ಬ್ರಿಟಿಷ್ ರಾಯಭಾರಿಯೆಂದೂ, ಸ್ಕಾಟ್‌ಲೆಂಡಿನಲ್ಲಿ ತನಗೆ ಆಸ್ತಿಪಾಸ್ತಿಗಳಿರುವುವೆಂದೂ ಆಕೆಗೆ ತಿಳಿಸಿ ಆಕೆಯ ನಂಬಿಕೆಯನ್ನು ಸಂಪಾದಿಸಿಕೊಂಡು ಸಂಜೆಯಾಗುವುದರೊಳಗೆ ವಿವಾಹಕ್ಕೆ ಆಕೆಯನ್ನು ಒಡಂಬಡಿಸಿದನು. ರೈಲಿನಲ್ಲಿಯೇ ಒಬ್ಬ ಕೃತ್ರಿಮ ಪುರೋಹಿತನ ಸಹಾಯದಿಂದ ಅದೂ ನಡೆದುಹೋಯಿತು. ಕತ್ತಲಾಗುತ್ತಲೇ ಸ್ಪೈನ್ ದೇಶದ ಸರಹದ್ದಿನಲ್ಲಿ ರೈಲಿನಿಂದ ಇಳಿದು ಒಂದು ಹೊಟೇಲಿನಲ್ಲಿ ತಂಗಿದರು. ಬೆಳಗಾಗುವುದರೊಳಗಾಗಿ ಮೋಸಗಾರನು ಆಕೆಯ ನಗನಾಣ್ಯಗಳನ್ನು ದೋಚಿಕೊಂಡು ಪರಾರಿಯಾದನು. ಆ ಯುವತಿಯು ಗಂಡನ ಮೇಲೆ ಈಗ ಫಿರ್ಯಾದಿ ದಾಖಲು ಮಾಡಿರುವಳು.

ಅ. ಸಾ. ಪ.

## ಟಿಪ್ಪೂ ಸುಲ್ತಾನರ ರುಮಾಲು.

ಲಂಡನ್ ನಗರದಲ್ಲಿರುವ ಭಾರತ ಭವನ (India House) ದಲ್ಲಿ ಒಂದು ವಸ್ತು ಪ್ರದರ್ಶನವು ಜರಗುತ್ತಿದೆ. ಅದರಲ್ಲಿ, ಟಿಪ್ಪೂ ಸುಲ್ತಾನರ ರುಮಾಲಿಗೆ ಒಂದು ಗೌರವವಾದ ಸ್ಥಾನವನ್ನು ನಿಯಮಿಸಿದ್ದಾರೆ. ಈ ರುಮಾಲು ರಕ್ತವರ್ಣದ್ದು, ಸುಲ್ತಾನರು ತಮ್ಮ ಮರಣ ಪರ್ಯಂತ (೧೭೯೯ರಲ್ಲಿ ಶ್ರೀರಂಗಪಟ್ಟಣದ ಪತನವಾದ ತನಕ) ಇದನ್ನು ಉಪಯೋಗಿಸುತ್ತಿದ್ದರಂತೆ. ಈ ರುಮಾಲು ಇತಿಹಾಸಕ್ಕೆ ಸಂಬಂಧಪಟ್ಟುದು. ಅದು ಮೈಸೂರು ಸುಲ್ತಾನರ ಪತನವಾದ ಮೇಲೆ ಸ್ಕಾಚ್ ಬ್ರಿಗೇಡ್ ಸೈನ್ಯದಲ್ಲಿ ಲೆಫ್ಟಿನೆಂಟಾಗಿದ್ದ ಹ್ಯಾಮಿಲ್ಟನ್‌ರವರ ವಶಕ್ಕೆ ಹೋಗಿತ್ತು. ಅದು ಅಂದಿನಿಂದಲೂ ಆತನ ವಂಶೀಯರ ವಶದಲ್ಲಿಯೇ ಇದ್ದು, ಈಗ ಆತನ ಎಡಿನ್‌ಬರ್ಗಿನ ಮಿಸೆಸ್ ಇಂಗ್ಲಿಷ್ ಎಂಬಾಕೆಯಿಂದ ಇಂಡಿಯಾ ಹೌಸಿಗೆ ಬಹುಮಾನವಾಗಿ ಕೊಡಲ್ಪಟ್ಟಿತು. ಇದನ್ನು ನೋಡಲು ಲಂಡನ್ನಿನ ಪ್ರಜೆಗಳು ದಿನವೂ ಪ್ರದರ್ಶನಕ್ಕೆ ಹೋಗುವರಂತೆ.

ಪ್ರ. ಮ.

## 'ಹರಿಜನ' ಸನಾತನ ಧರ್ಮ ಸಮಾಚಾರ್

ಮಹಾತ್ಮಾ ಗಾಂಧಿಯವರ ಆಶ್ರಮದಿಂದ ಪೂನೆಯಲ್ಲಿ ಹರಿಜನವೆಂಬ ಇಂಗ್ಲಿಷ್ ವಾರ ಪತ್ರಿಕೆಯು ಕಳೆದ ಶನಿವಾರ ದಿನ ಹೊರಟಿದೆ. ಈ ಪತ್ರಿಕೆಯ ಮೂಲಕ ಹರಿಜನ ಸೇವಾ ಕಾರ್ಯಕರ್ತರಿಗಾಗಬೇಕೆಂದು ಮಹಾತ್ಮರ ಉದ್ದೇಶವಿರುತ್ತದೆ. ಹೆಚ್ಚಿನ ಲೇಖನಗಳೆಲ್ಲಾ ಗಾಂಧೀಜೀಯವರದ್ದೇ. ಪ್ರಥಮ ಸಂಚಿಕೆಯಲ್ಲಿ ಹರಿಜನೋದ್ಧಾರಣೆಯ ಕುರಿತು ಘನವುಳ್ಳ ಅಭಿಪ್ರಾಯವಿದೆ. ಬನಾರಸ್‌ನಲ್ಲಿ ಮಾಲವೀಯರು 'ಸನಾತನ ಧರ್ಮ ಸಮಾಚಾರ' ಎಂಬ ಹಿಂದೀ ವಾರ ಪತ್ರಿಕೆಯನ್ನು ಹೊರಡಿಸಬೇಕೆಂದಿದ್ದಾರೆ.

## ಮೌಂಟ್ ಎವರೆಸ್ಟ್ ಹತ್ತಲಿರುವರು.

ಭೂಲೋಕದಲ್ಲಿ ಅತ್ಯುನ್ನತವಾದ ಎವರೆಸ್ಟ್ ಪರ್ವತವನ್ನು ಹತ್ತುವುದಕ್ಕಾಗಿ ಇಂಗ್ಲೆಂಡಿನ ೬ ಮಂದಿ ಸಾಹಸಿಗಳು ಮೊನ್ನೆ ಮುಂಬಾಯಿಗೆ ತಲಪಿರುವರು. ಹಗ್ ರಟ್ಲೆಜ್ ಐ. ಸಿ. ಎಸ್. ಇವರು ಅದ್ಭುತ ಸಾಹಸಕ್ಕೆ ಮುಂದಾಳು. ಪ್ರಪಂಚದಲ್ಲೇ ಉನ್ನತವಾದ ಎವರೆಸ್ಟ್ ಪರ್ವತವನ್ನು ಹತ್ತುವ ಸಂಕಲ್ಪದಿಂದ ನಾವು ಹಿಂದೂ ದೇಶಕ್ಕೆ ಬಂದುದು ನಮ್ಮ ಭಾಗ್ಯವೆಂದೇ ಇವರೆಲ್ಲರ ಅಂಬೋಣ. ನಾಲ್ಕು ತಿಂಗಳ ತನಕ ಸಾಹಸಪಟ್ಟು ಈ ಸಲ ಈ ಪರ್ವತದ ಶಿಖರವನ್ನು ಮುಟ್ಟಬೇಕೆಂದು ಯೋಚನೆ. ನಾನಾ ಕಡೆ [illegible] ಸಾಮಗ್ರಿಗಳನ್ನು [illegible] — [illegible] ಮೇಲೆ ಹೇರಿ ಕೊಂಡೊಯ್ಯುವರು. ಇವರಿಗೆ ಜಯವಾಗಲಿ. ಸೃಷ್ಟಿಯು ತನ್ನ ರಹಸ್ಯವನ್ನು ಇವರಿಗಾದರೂ ತೆರೆದು ತೋರಿಸಲಿ.

## ಪುನಃ ಲಿಂಡ್‌ಬರ್ಗ್ ಮಗು!

ನ್ಯೂಯೋರ್ಕಿನ ಕರ್ನೆಲ್ ಲಿಂಡ್ ಬರ್ಗ್ ಎಂಬವರ ಹಸುಗೂಸೊಂದನ್ನು ಭಂಡಾಯಗಾರರು ಕದ್ದೊಯ್ದು ಕೊಂದಸುದ್ದಿ ಇಡೀ ಪ್ರಪಂಚವನ್ನೇ ಹಾಹಾಕಾರದಿಂದ ತುಂಬಿಸಿದರಷ್ಟೆ! ಆ ಮಗುವು ಕಳೆದು ಹೋದ ಮೇಲೆ ಕರ್ನೆಲರ ಪತ್ನಿಯು ಇನ್ನೊಂದು ಮಗುವನ್ನು ಹೆತ್ತಳಷ್ಟೆ! ಮೊನ್ನೆ ಭಂಡಾಯಗಾರರು ತಮಗೆ ೫೦,೦೦೦ ಡೊಲ್ಲರುಗಳನ್ನು ಕೊಡದಿದ್ದರೆ ಈ ಎರಡನೆಯ ಮಗುವನ್ನೂ ಕದ್ದೊಯ್ಯುವೆವೆಂದು ಹೆತ್ತವರಿಗೆ ಬೆದರಿಕೆ ಹುಟ್ಟಿಸಿರುವರು. ಈ ಬೆದರಿಕೆಗೆ ಕರ್ನೆಲರು ಹೆದರಿ ಪೋಲೀಸರೊಡನೆ ಸರಕಾರದ ಪ್ರೋತ್ಸಾಹನದಿಂದಾಗಿ ೧೬,೦೦೦ದ ಚೆಕ್ ಒಂದನ್ನು ಒಂದು ಮಂದ ಪೆಟ್ಟಿಗೆಯಲ್ಲಿಟ್ಟರು. ಈ ಚೆಕ್ಕನ್ನು ಭಂಡಾಯಗಾರರು ಒಂದು ಬೇಂಕಿನಲ್ಲಿ ಪಡೆಯುವಾಗ ಅವರಲ್ಲಿಬ್ಬರನ್ನು ದಸ್ತಗಿರಿ ಮಾಡಿರುತ್ತಾರೆ. ಸೆರೆಗೆ ದೊರೆತವರು ತಮ್ಮ ಮೇಲಿನ ಅಪಾದನೆಯನ್ನು ಅಲ್ಲಗಳೆಯುತ್ತಿರುವರು. ಕೊಲೆಗಾರರು ಸಿಕ್ಕಿದರೆ ವಿಷದ ಶಿಕ್ಷೆಯನ್ನು ಕೊಡಬೇಕೆಂದು ಸರಕಾರವು ನಿರ್ಣಯಿಸಿ ಅವರನ್ನು ಬೆನ್ನು ಮುಟ್ಟಿಸಲು ಯತ್ನವಾಗುತ್ತಿದೆ.

## ಚಳವಳ ಬಿಡದೆ ಬಿಡುಗಡೆ ಇಲ್ಲ!

ಗಾಂಧೀಜೀಯವರ ಮತ್ತು ಇನ್ನಿತರ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಲಂಡನಿನ ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಮಿ. ತೋಮಸ್ ವಿಲ್ಲಿಯಮ್ ಎಂಬವರು ಪ್ರಶ್ನಿಸಿದಾಗ ಸರ್ ಸಾಮುವೇಲ್ ಹೋರರು ಎಷ್ಟರ ತನಕ ಕಾಯಿದೆ ಭಂಗ ಚಳವಳವನ್ನು ಗಾಂಧಿಯವರೂ ಕೊಂಗ್ರೆಸ್ಸಿನವರೂ ಬಿಡುವುದಿಲ್ಲವೆಂದು ಸರಕಾರದ ಅವಗಾಹನೆಗೆ ಬರುತ್ತದೋ ಅಷ್ಟರ ತನಕ ಯಾವ ರಾಜಕೀಯ ಕೈದಿಗಳ ಬಿಡುಗಡೆಯೂ ಇಲ್ಲ ಎಂದರು. ಕೈದಿಗಳನ್ನು ಬಿಟ್ಟರೆ ರೌಂಡ್ ಟೇಬಲ್ ಸುಧಾರಣೆಗಳ ಫಲಿತಾಂಶವು ಉತ್ತಮವಾದೀತಲ್ಲಾ ಎಂದು ಮೇಲಿನ ಪ್ರಶ್ನಾಕರ್ತರು ಅಭಿಪ್ರಾಯಪಟ್ಟಾಗ "ಅವರಿಲ್ಲದಿದ್ದರೇನು? ಹಿಂದೀಯ ಅಭಿಪ್ರಾಯವನ್ನು ಕೊಡುವ ಇನ್ನಿತರ ಎಷ್ಟೋ ಜನರು ಹೊರಗಿಲ್ಲವೇ? ಎಂದರು. ತಮ್ಮ ಮುಖಂಡರನ್ನು ಬಿಟ್ಟಾಗ ಕೊಂಗ್ರೆಸ್‌ವಾಲರಿಗೆ ಸಂತೋಷವಾದೀತಲ್ಲ ಎಂದು ಹೋರರಿಗೆ ಅವರೇ ಪ್ರಶ್ನಿಸಲು, ಹೋರರು, "ನಿಮ್ಮ ಸವಾಲಿಗೆ 'ಹೌದು' ಅಥವಾ 'ಅಲ್ಲ' ಎಂದುತ್ತರವನ್ನು ಕೊಡಲು ನಾನು ಅಸಮರ್ಥನು" ಎಂದರು.

## ವ್ಯಾಪಾರ (?)

ಪಾಟಿಯಾಲದ ಮಹಾರಾಜರ ದ್ವಿತೀಯ ಪುತ್ರನಿಗೆ ವಿವಾಹ. ಹೆಚ್ಚಿನ ನಗಗಳು ಆವಶ್ಯವಿದೆ ಎಂದು ಪ್ರಕಟಿಸಿದರು. ಹಿಂದೂಸ್ಥಾನದ ಎಲ್ಲಾ ಕಡೆಗಳಿಂದಲೂ ನಾಲ್ಕು ಕೋಟಿಗಳಷ್ಟು ಬೆಲೆಯ ನಗಗಳನ್ನು ಅಕ್ಕಸಾಲಿಗರು ತಂದರು. ಮಹಾರಾಜರು ಅಷ್ಟು ನಗಗಳಿಂದ ನಾಲ್ಕೈದು ಲಕ್ಷ ರೂಪಾಯಿಯ ನಗಗಳನ್ನು ಪಡೆದರು.

## ಹುಳುಕು ಹಲ್ಲು.

ಹಲ್ಲುಗಳು ಹುಳುಕು ಹಿಡಿಯುವುದು ರೋಗ ಸಂಬಂಧವಾದ ಸ್ಥಿತಿಯಿಂದಲೂ, ಅದು ಪೋಷಣಾಶಕ್ತಿಯಿಲ್ಲದ ಆಹಾರದಿಂದಲೋ, ದೇಹದಲ್ಲಿ ಯಾವುದೋ ನಮಗೆ ತಿಳಿಯದಂತಿರುವ ದುರ್ಬಲತೆ ಅಥವಾ ನ್ಯೂನತೆಯಿಂದಲೋ, ಅಥವಾ ಹಲ್ಲುಗಳನ್ನು ಅಲಕ್ಷ್ಯ ಮಾಡುವುದರಿಂದಲೋ ಉಂಟಾಗುವುದೆಂದು ಪ್ರಪಂಚದಲ್ಲೆಲ್ಲಾ ಒಂದು ನಂಬಿಕೆಯುಂಟಾಗಿದೆ. ಒಳ್ಳೇ ಬಲವಾಗಿಯೂ ಆರೋಗ್ಯವಾಗಿಯೂ ಇದ್ದುಕೊಂಡು, ದೇಹದ ಅವಯವಗಳೆಲ್ಲವೂ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು ಬರುವ ಪಕ್ಷದಲ್ಲಿ, ಹಲ್ಲುಗಳು ದೃಢವಾಗಿಯೂ, ಚೆನ್ನಾಗಿಯೂ ಇರುವುವೆಂದು ಜನರು ಎಣಿಸುವರು. ಆದರೆ, ಆ ನಂಬಿಕೆಯು ಸರಿಯಾದುದಲ್ಲ. ನಮ್ಮಂತೆ ಈಗಿನ ನಾಗರಿಕ ಸ್ಥಿತಿಯಲ್ಲಿರುವ ಸಾಮಾನ್ಯ ಮನುಷ್ಯರ ಹಲ್ಲುಗಳೂ ಬಾಲ್ಯದಲ್ಲಿಯೇ ಕೊಳೆತು ಹೋಗುವುದುಂಟು. ಕ್ರಮತಪ್ಪಿದವರ ಹಲ್ಲುಗಳು ಕೊಳೆಯದೆ ಇರುವುದೂ ಉಂಟು. ನಾಗರಿಕತೆಯುಳ್ಳ ಮನುಷ್ಯನ ಹಲ್ಲುಗಳು ಕೆಟ್ಟು ಹೋಗುವುದು ಪ್ರಕೃತಿಯ ಕಟ್ಟುಪಾಡಿಗೇ ಒಳಪಟ್ಟಿವೆ. ಹೇಗೆಂದರೆ ದೇಹದಲ್ಲಿ ಯಾವ ಅವಯವವು ಅಧಿಕವಾಗಿ ಉಪಯೋಗಿಸಲ್ಪಡದೆ ಇರುವುದೋ, ಆ ಅವಯವವು ಶೀಘ್ರದಲ್ಲಿಯೇ ತುಕ್ಕು ಹಿಡಿದು ಕೆಟ್ಟುಹೋಗುವುದೆಂಬುದೇ ಪ್ರಕೃತಿಯ ಕಟ್ಟುಪಾಡು. 'ವರ್ಮಿ ಫಾರ್ಮ್ ಅಪ್ಪೆಂಡಿಕ್ಸ್' ಮತ್ತು ಗಂಡಸರ ಸ್ತನ್ಯಗೋಳಗಳು, ಇವೇ ಇದಕ್ಕೆ ಉದಾಹರಣಗಳು. ಪ್ರಕೃತಿಯು ಯಾವಾಗಲೂ ನ್ಯಾಯಕ್ಕೆ ಸರಿಯಾಗಿಯೇ ನಡೆಯುವುದು. ದೇಹದಲ್ಲಿ ಈ ಅವಯವಕ್ಕೆ ಉಪಯೋಗವಿಲ್ಲ. ಆದುದರಿಂದ ಅದು ಹೋಗಲೇಬೇಕು, ಇಲ್ಲದಿದ್ದರೆ ಅದು ವಿಷಸಂಬಂಧವಾಗಬೇಕು ಎಂಬುದೇ ಪ್ರಕೃತಿಯ ನೀತಿ. ಹೇಗೆ ಮನುಷ್ಯನ ದೇಹದಲ್ಲಿ [illegible] ರೋಮಗಳು ಉಪಯೋಗವಿಲ್ಲದಿರುವಾಗ ಹೋಗಿ, ಯಾವಾಗಲೂ ಬೇಕಾದಾಗ ತಿರುಗಿ ಬರುತ್ತ, ಬೆಳೆಯುವುದೋ, ಅದರಂತೆಯೇ ಹಲ್ಲುಗಳೂ ಕೊಳೆತು ಬೇಕಾದಾಗ ತಿರುಗಿ ಬೆಳೆಯುವುವು.

[illegible]
(ಗ್ರಾಸಾಸ್ತೆಯ ಮಕರ—ಕೃಯುಂಚಿರ್).

| ತಾರೀಖು | ವಾರ | ತಿ. | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ. ಉ | ಅಸ್ತ |
|---|---|---|---|---|---|---|---|---|
| 18 | ಶನಿ | ೯ | [illegible] | ಅನುರಾಧಾ | [illegible] | [illegible] | 6.54 | 6.36 |
| 19 | ರವಿ | ೧೦ | [illegible] | ಜ್ಯೇಷ್ಠಾ | [illegible] | [illegible] | 6.54 | 6.36 |
| 20 | ಸೋಮ | ೧೧ | [illegible] | ಮೂಲಾ | [illegible] | [illegible] | 6.54 | 6.36 |
| 21 | ಮಂಗಳ | ೧೨ | [illegible] | ಪೂ. ಷಾ | [illegible] | [illegible] | 6.53 | 6.37 |
| 22 | ಬುಧ | ೧೩ | [illegible] | ಉ. ಷಾ. | [illegible] | ೧೦ | 6.53 | 6.37 |
| 23 | ಗುರು | ೧೪ | [illegible] | ಶ್ರವಣಾ | [illegible] | ೧೧ | 6.52 | 6.37 |
| 24 | ಶುಕ್ರ | ● | [illegible] | ಧನಿಷ್ಠಾ | [illegible] | ೧೨ | 6.52 | 6.37 |

## ಮಂಗಳೂರಿನ ವಾಯುಸ್ಥಿತಿ.

| ತಾರೀಖು Date | Temperature. ಉಷ್ಣ (ಕಾವು) Maximum ಹೆಚ್ಚಿನದು | Minimum ಕಡಿಮೆದು | Rainfall. ಮಳೆ ದಿನದ ಮಳೆ | ಜುಮುಲಾ ಮಳೆ. |
|---|---|---|---|---|
| 9 | 87—7 | 74—0 | — | — |
| 10 | 87—7 | 74—5 | — | — |
| 11 | 86—7 | 72—7 | — | — |
| 12 | 86—6 | 72—9 | — | — |
| 13 | 86—9 | 72—9 | — | — |
| 14 | 86—7 | 72 8 | — | — |
| 15 | 86—1 | 73—1 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ. ಆ | ವರೆಗೆ ರೂ. ಆ |
|---|---|---|
| ಹೊಸ ಮಸ್ಸೂರಿ | 4—0 | 4—10 |
| ಹೊಸ ರಾಶಿ ಅಕ್ಕಿ | 3—6 | 3—11 |
| ಮುಸ್ಸೂರಿ | 4—0 | 4—10 |
| ಗುಡ್ಡೆ | 3 12 | 4—2 |
| ಸುಗ್ಗಿ | 3—10 | 4—0 |
| ಊರ ಅಚ್ಚಲ್ ಬೆಲ್ಲ | 4—10 | 6—4 |
| ರಂಗೂನು ಬೆಲ್ಲ ಗೋಣಿ ಒಳ್ಳೆ | 6—8 | 7—0 |
| ಎಲ್ಲೂರು ಬೆಲ್ಲ ಮುಡಿ ಒಳ್ಳೆ | 4—8 | 4—10 |
| ಗೋದಿ ಗೋಣಿ ಒಳ್ಳೆ | 10—8 | 12—8 |
| ತೊಗರಿ ಗೋಣಿ ಒಳ್ಳೆ | 9—8 | 12—0 |
| ಹುರುಳಿ ಗೋಣಿ ಒಳ್ಳೆ | 6— | 6—4 |
| ಕಡಲೆ ಗೋಣಿ ಒಳ್ಳೆ | 8—8 | 10— |
| ಕೊಂಗಂಬೇಳೆ ಗೋಣಿ ಒಳ್ಳೆ | 10—8 | 20—0 |
| ಉದ್ದು ಗೋಣಿ ಒಳ್ಳೆ | 9—8 | 10—0 |
| ಹೆಸರು ಗೋಣಿ ಒಳ್ಳೆ | 8—0 | 9—0 |
| ಊರುಬೆಲ್ಲ ಖಂಡಿ ಒಳ್ಳೆ | 31—4 | 32—8 |
| ಉಪ್ಪು ಗೋಣಿ ಒಳ್ಳೆ .. | 4—12 | 5—0 |
| ಕೊಬ್ರಿ ಖಂಡಿ ಒಳ್ಳೆ .. | 65— | 72— |
| ಕೊಬ್ರಿ ಹಿಂಡಿ ಖಂಡಿ ಒಳ್ಳೆ .. | 28— | 29— |
| ಎಳ್ಳಿಂಡಿ ಖಂಡಿ ಒಳ್ಳೆ | 25—4 | 26—8 |
| ಕೊಬ್ರಿ ಎಣ್ಣೆ ಮುಡಿ ಒಳ್ಳೆ .. | 4—10 | 5—0 |
| ಎಳ್ಳೆಣ್ಣೆ ಮುಡಿ ಒಳ್ಳೆ | 6—12 | 7—0 |
| [illegible] ಒಳ್ಳೆ .. | 4—7 | 8—12 |
| [illegible] ಒಳ್ಳೆ ... | 3—16 | 4—0 |
| ಹೊಸ ಮೆಣಸು ... | 5—8 | 5—12 |
| [illegible] ಮುಡಿ ಒಳ್ಳೆ ... | 4—12 | 5—0 |
| [illegible] ಖಂಡಿ ಒಳ್ಳೆ .. | 275—0 | 300— |
| [illegible] ಖಂಡಿ ಒಳ್ಳೆ . | 170—0 | 180— |
| [illegible] ಮುಡಿ ಒಳ್ಳೆ . | 27—0 | 28— |
| [illegible] ಮುಡಿ ಒಳ್ಳೆ .. | 2—4 | 2—6 |
| [illegible] ಖಂಡಿ ಒಳ್ಳೆ ... | 25—0 | 25—8 |
| [illegible] ಮುಡಿ ಒಳ್ಳೆ ... | 9 10 | 10—0 |
| [illegible] ಮುಡಿ ಒಳ್ಳೆ | 15—0 | 16—0 |
| [illegible] ಒಳ್ಳೆ ... | 13—4 | 13—8 |
| [illegible] ಮುಡಿ ಒಳ್ಳೆ ... | 19—0 | 19—4 |
| [illegible] ಒಳ್ಳೆ . | 19— | 19—4 |
| [illegible] ಖಂಡಿ ಒಳ್ಳೆ ... | 42—8 | 45— |
| [illegible] ಖಂಡಿ ಒಳ್ಳೆ ... | 295— | 300— |
| [illegible] ... | 150— | 205— |
| ಹೊಸ [illegible] — | 140— | 145— |


# THE CANARA PUBLIC CONVEYANCE CO., LTD., MANGALORE.
(Established 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಟಪಾಡಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಾಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary,**
*The Canara Public Conveyance Company Ltd., Mangalore*



# Chikmagalur Public Conveyance Motor Service.
## CHIKMAGALUR.

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
## ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ
ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಕೊಳ್ಳಿರಿ.

# ಪತ್ರವ್ಯವಹಾರ.

(ಪ್ರಕಟವಾದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ಅಪೂರ್ಣ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಕೈಯಲ್ಲಿ ಬರೆಯಲ್ಪಟ್ಟದ್ದು. ಸಂ. ಸ್ವ.)

## ಸ್ವದೇಶಿ ಪ್ರಚಾರವೋ ವಿದೇಶಿ ಉಪಚಾರವೋ

ಸ್ವದೇಶಿ ಪತ್ರಗಳು ಹೊರ ಹೊರಟ ಕೆಲವು ದಿನಗಳೊಳಗೇನೇ ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶಿ ಪ್ರಚಾರ ಸಭೆಗೆ ಸ್ಥಾಪಕ, ಪೋಷಕ, ಸಂರಕ್ಷಕ ಇತ್ಯಾದಿ ಬಿರುದಾಂಕಿತ ಮಹಾಶಯರುಗಳಿಂದಲೂ ಒಂದೆರಡು ಹಳ್ಳಿಹಳ್ಳಿಗಳಿಂದಲೂ ಸೇರಿತಯ್ಯಾ!— ರೂಪಾಯಿ ಒಂದು ಸಾವಿರ! ಇದರಲ್ಲೇನೂ ಆಶ್ಚರ್ಯವಿಲ್ಲ. ಕೊಡುಗೈಯ್ಯ ಊರೆಂದರೆ ಮಂಗಳೂರು! ಈ ಒಂದು ಸಾವಿರ ರೂಪಾಯಿಗಳಿಂದ ಆದುದೇನು?

'ಅತ್ತ ಕೆಲಸವಿಲ್ಲ, ಇತ್ತ ಕೂಳಿಲ್ಲ'ವೆಂಬ ಗಾದೆಯಂತೆ ಅಲ್ಲಲ್ಲಿ ತಿರುಗಾಡುತ್ತಿರುವ ಕೆಲವರಿಗೆ ಏನಾದರೂ ಸಹಾಯ ಅದರಿಂದ ದೊರಕಿತೆ? ಇಲ್ಲ! ಅಂತೂ, ಪ್ರಚಾರಕ ಸಭೆಯ ಪೋಷಕರಿಂದ ಸಂಗ್ರಹಿಸಲ್ಪಟ್ಟ ರೂಪಾಯಿಗಳಲ್ಲಿ ಹೆಚ್ಚು ಕಡಿಮೆ ಒಂದು ಸಾವಿರವು ವಿದೇಶಿ ಮೋಟರ ವಾಹನ ಮೂಲಕ ಭಕ್ಷಿಸಲ್ಪಟ್ಟಿತು.

ಈ ಮೋಟರ ವಾಹನ ಇದೇ ಕಳೆದ ಮಕರಸಂಕ್ರಮಣದ ಶುಭ ಮುಹೂರ್ತಕ್ಕೆ ಉಡುಪಿಯ ಶ್ರೀ ಕೃಷ್ಣನ ಸನ್ನಿಧಿಯನ್ನು ಸೇರಿತು. ಅಲ್ಲಿಂದ ಕೆಲವು ಮನೆ, ಊರು ಕೇರಿಗಳನ್ನು ಸಂಚರಿಸಿ (ನಾನು ಇದ್ದಲ್ಲೇ ಪ್ರಚಾರಕರು ಹೋಕ್ತ) ಪ್ರಚಾರ ಕಾರ್ಯವನ್ನು ಗೈಯಲಾಯಿತು. ಸಭೆಯ ಕಾರ್ಯದರ್ಶಿಯವರಾದ ಶ್ರೀಮಾನ್ ಬಿ. ಕೆ. ಭಂಡಾರಿಯವರು ತಾ. ೨೫-೧-೩೩ರಲ್ಲಿ ಪ್ರಕಟಿಸಿದ ಒಂದು ವರದಿಯಂತೆ ರೂ. ೫೬೬-೩-೬ರ ಸ್ವದೇಶಿ ಸಾಮಾನುಗಳು ವಿಕ್ರಯಿಸಲ್ಪಟ್ಟವೆಂದು ತಿಳಿದು ಸಂತೋಷವಾಯಿತು. ಪರಂತು, ಶ್ರೀಯುತರು ತಮ್ಮ ವರದಿಯಲ್ಲಿ ಪ್ರಕಟಿಸಿದ ಅಂದರೆ, ಪೆಟ್ರೋಲ್, ಗ್ರೀಸ್, ಮೊಬಿಲ್ ಆಯಿಲ್, ವಾಹನಕ್ಕೆ ಬೇಕಾದ ಇತರ ಸಾಮಾನುಗಳ ವೆಚ್ಚವನ್ನೂ, ಸರಕಾರಕ್ಕೆ ಮೂರು ತಿಂಗಳಿಗೊಮ್ಮೆ ಕೊಡುವ ಪ್ರಾಂತಿಕ ತೆರಿಗೆ (ಪ್ರೋವಿನ್ಸಿಯಲ್ ಟೇಕ್ಸ್)ಯ ವಿವರವನ್ನೂ ಕೊಡುತ್ತಿದ್ದರೆ, ಸಾವಿರ ರೂಪಾಯಿಯು ಹೇಗೆ ವಿನಿಯೋಗಿಸಲ್ಪಟ್ಟಿತೆಂದು ಸರಿಯಾಗಿ ಗೊತ್ತಾಗುತ್ತಿತ್ತಲ್ಲವೇ? ಅದೇನು ಆಗಿ ಹೋದರೂ ಈ ಪ್ರಚಾರ ಸಭೆಯ ಕುರಿತಾಗಿ ನನ್ನಲ್ಲಿ ಕೆಲವು ಸಂದೇಹಗಳು ಉತ್ಪನ್ನವಾಗಿವೆ. ಅದನ್ನು ಈ ಕೆಳಗೆ ವಿವರಿಸುವೆನು.

೧. ಸ್ವದೇಶೀ ಪ್ರಚಾರ ಸಭೆಗೆ ಮೋಟರ್ ವಾಹನ ಅಗತ್ಯವೇನು? ಈಗಿನ ಬಸ್ಸುಗಳಲ್ಲಿ ಪ್ರಯಾಣ ಮಾಡುವುದರಿಂದ ಪ್ರಚಾರ ಕಾರ್ಯಕ್ಕೆ ಬರುವ ಆತಂಕವೇನು? ೨. ಹಳ್ಳಿಯ ಪ್ರಚಾರ ಕಾರ್ಯಕ್ಕೆ ಅನುಕೂಲವಾಗುವಂತೆ ಈ ಊರ ಕ್ರಮದಂತೆ (ಅವರಲ್ಲೂ ಯಾವದಾದರೊಂದು ಹೊಸ ರೀತಿಯಲ್ಲಿ) ಗಟ್ಟಿಮುಟ್ಟಾದ ಗಾಡಿ ಎತ್ತುಗಳನ್ನು ಮಾಡಿದರೆ ವಾಹನಕ್ಕಿಂತಲೂ ಹೆಚ್ಚು ವೆಚ್ಚ ತಗಲಬಹುದೇ? (ಅದರಲ್ಲಿ ಮಂಗಳೂರಂತಹ ಪಟ್ಟಣಗಳಲ್ಲಿ ಸಂಚರಿಸಲಿಕ್ಕೆ ಮಾತ್ರ ಸಾಧ್ಯವಿಲ್ಲ) ೩. ಪ್ರಚಾರ ಸಭೆಗೆ ಇದು ವರೆಗೆ ದೊರೆತ ಧನ ಸಹಾಯವನ್ನು ಬಂಡವಾಳವಾಗಿರಿಸಿ ಸ್ವಯಂಸೇವಕರ ಕೆಲವು ಪಂಗಡಗಳನ್ನಾಗಿ ಮಾಡಿ ಅವರ ಮೂಲಕ ಈ ಪ್ರಚಾರ ಕಾರ್ಯವನ್ನು ನಡೆಸಲು ಸಾಧ್ಯವಿಲ್ಲವೇ?

ಈ ಮೇಲಿನ ಎಲ್ಲಾ ಅಭಿಪ್ರಾಯಗಳಿಗೂ ತಾ ೧೬-೨-೩೩ರ 'ಸ್ವದೇಶಾಭಿಮಾನಿ'ಯಲ್ಲಿ ಪ್ರಕಟಿಸಿದ 'ಸ್ವದೇಶಿ ಪ್ರಚಾರ ಸಭೆಯ ಕವಲುಗಳೆಷ್ಟು?' ಎಂಬ ಶಿರೋನಾಮೆಯಿಂದ ಬರೆದ ಅಭಿಪ್ರಾಯಕ್ಕೂ ಉತ್ತರವನ್ನು ಕೊಟ್ಟು, ಪ್ರಚಾರ ಸಭೆಯವರು ನನ್ನ ಸಂದೇಹಗಳನ್ನು ದೂರ ಮಾಡುವರೇ?

'ಸ್ವದೇಶೀ ಪ್ರೇಮಿ'

---

## ಅಸ್ಪೃಶ್ಯತೆ ಎಂದರೇನು?

ಎಂ. ಚಂದ್ರೇಶ್ವರ, ಬೊಂಬಾಯಿ.

ಅಸ್ಪೃಶ್ಯತೆಯೆಂದರೆ, ಅ (ಇಲ್ಲ) ಸ್ಪೃಶ್ಯ (ಮುಟ್ಟುವಿಕೆ) ಅರ್ಥಾತ್, ಸ್ಪರ್ಶಿಸಲು ಅಯೋಗ್ಯವಾದ ವಸ್ತುಗಳೆಂದು ಭಾಸವಾಗುವುದಾದರೂ, ಯಾವುದನ್ನು ಮುಟ್ಟಬಾರದು? ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಹೊಳೆಯುತ್ತದೆ. ಇದಕ್ಕೆ ನಾವು ಮಾನವರಿಗೆ ಯಾವುದರಿಂದ ಅಪಾಯವುಂಟಾಗುತ್ತದೋ ಅಂತಹ ವಸ್ತುಗಳನ್ನು ಮುಟ್ಟಬಾರದೆಂದು ಸಮಾಧಾನಗೊಳಿಸಬಹುದು. ಇದರಿಂದ ಮತ್ತೊಂದು ಪ್ರಶ್ನೆಯುಂಟಾಗುವುದು, ಅಂದರೆ, ಮಾನವರಿಗೆ ಅಪಾಯಕಾರಕವಾದ ವಸ್ತುಗಳಾವುವು? ಎಂದು. ಈ ಕುರಿತು ಕೊಂಚ ಆಲೋಚಿಸಿದರೆ ೧ ಅಗ್ನಿ, ೨ ವಿದ್ಯುಚ್ಛಕ್ತಿ, ೩ ಸರ್ಪಾದಿ ವಿಷ ಜಂತುಗಳು. ಅಗ್ನಿಯ ಗುಣ ಸುಡುವುದು. ಕಾರಣ ಅದನ್ನು ಸ್ಪರ್ಶಿಸಿದವನನ್ನು ಅದು ದಹಿಸದೆ ಬಿಡಲಿಕ್ಕಿಲ್ಲ. ವಿದ್ಯುಚ್ಛಕ್ತಿ (ಇಲೆಕ್ಟ್ರಿಕ್ ಪವರ್)ಯನ್ನು ಸ್ಪರ್ಶಿಸಿದರೆ ಅದು ಇಡೀ ಶರೀರವನ್ನೇ ಭಸ್ಮಮಾಡುವುದು. ಸರ್ಪಾದಿ ವಿಷ ಜಂತುಗಳಲ್ಲಿ ಕಚ್ಚುವ ಗುಣವೇ ಪ್ರಧಾನವಾಗಿರುವುದು. ಆದ ಪ್ರಯುಕ್ತ, ಇವುಗಳನ್ನು ಪ್ರಯತ್ನದ ವಿನಹ ಸ್ಪರ್ಶಿಸಿದರೆ ಅದರ ಫಲಿತಾಂಶವು ದುಃಖಕರವಲ್ಲದೆ ಸುಖಕರವಲ್ಲವಾದುದರಿಂದ ಇವುಗಳು 'ಅಸ್ಪೃಶ್ಯ'ವೆನ್ನಲ್ಪಡುವುವಲ್ಲದೆ, ಮನುಷ್ಯರನ್ನು 'ಅಸ್ಪೃಶ್ಯ'ರೆನ್ನಲು ಯಾವ ಆಧಾರವೂ ಇರುವುದಿಲ್ಲವೆಂದು ಒತ್ತಿಹೇಳಬಹುದು. ಅಲ್ಲದೆ ಈ ಉಪಯುಕ್ತ ಶಬ್ದಾರ್ಥವು ಮಾನವರಿಗೆ ಅನ್ವಯಿಸುವುದಿಲ್ಲ, ಎನ್ನುವಾಗ ಅಂತಹ ಅನರ್ಥವುಳ್ಳ ಪ್ರತ್ಯಯವನ್ನು ಮನುಷ್ಯರಿಗಿಡುವುದು ಅಯೋಗ್ಯವೇ ಸರಿ.

ಸತೀಶ

## ಮಿತ್ರರ ವರ್ಷೋತ್ಸವ.

ಕಳೆದ ವಾರ ಸೂಚಿತವಾಗಿದ್ದಂತೆ "ಮಿತ್ರ ಮಂಡಲಿ"ಯು ತನ್ನ ಶಾಸ್ತ್ರಾನುಸಾರವಾಗಿ ರವಿವಾರ ಒಂದು ವರ್ಷೋತ್ಸವವನ್ನು ಜರಗಿಸಿತು. ಬೆಳಗ್ಗೆ ಮಂಡಲಿಯವರ ಫಲಾಹಾರವೂ, ಶ್ರೀ ರಾಘವೇಂದ್ರ ಬಾಳಿಗರ ಜೊತೆಗೊಂದು ಹರಿಕಥೆಯೂ ನಡೆದುವು; ಮಿತ್ರರ ಚಿತ್ರವನ್ನು ಎತ್ತಿದ್ದಾಯಿತು. ಸಾಯಂಕಾಲ "ಭುವನೇಂದ್ರ ಸಭಾಸದನ"ದಲ್ಲಿ ಇಡೀ ಸದನವು ತುಂಬುವಷ್ಟು ಸಭಿಕರಿದ್ದರು. ಮಹಿಳೆಯರೇನೋ ಹಿಂದಿನ ಉತ್ಸಾಹದಿಂದಲೋ ಸಾಕಷ್ಟು ತಿಳಿಯ ಬಾರದೆಯೋ ಕಡಿಮೆಯೇ ಇದ್ದರೂ, ಕನ್ನಡ ಭಾಷೆಗೆ ಭೂಷಣವಾಗಲೆಂದು ಸೇವಾಭೂಷಿತರಾಗಿದ್ದ ಮಹನೀಯರುಗಳೆಲ್ಲರೂ, ವಿಶೇಷವಾಗಿ ವಿದ್ಯಾರ್ಥಿ ವರ್ಗದವರೂ ಹಾಜರಿದ್ದರು. ಸರಕಾರವೂ ಪ್ರೋತ್ಸಾಹ ಕೊಡಲೆಂದು ಇಬ್ಬರು ಪ್ರತಿನಿಧಿಗಳೂ ಅನುಕೂಲಾರ್ಥವಾಗಿ ಪರಿಶೀಲನ ಮಾಡುತಿದ್ದರೆಂದೂ ತಿಳಿದು ಸಂತೋಷವಾಯಿತು. ಭರತೇಶ ವೈಭವದ ವಿಸ್ತಾರವಾದ ಪೀಠಿಕೆ ಬರೆದು, ಆ ವೈಭವವು ನಿರ್ಮಲವಾಗಿ ಬೆಳಕಿಗೆ ಬರುವಂತೆ ಮಾಡಿ ಹೆಸರು ಪಡೆದ ಶ್ರೀ| ಉಗ್ರಾಣ ಮಂಗೇಶರಾಯರು ಅಧ್ಯಕ್ಷರಾದರು. ವರ್ಷದ ವರದಿಯಲ್ಲಿ ೮ ವರ್ಷಗಳಿಂದೀಚೆಗೆ ನಡೆದ ಕಿರಿ ನಮ್ಮ ಭಾವದ ಸಾಧು ಚರಿತೆಯ ಮಿತ್ರರು ಹೇಗೆ ಭಾಷಾಸೇವೆ ಮಾಡುತ್ತಿರುವರೆಂದೂ, ಮುಂದಣ ಕಾರ್ಯಕ್ರಮದಲ್ಲಿ ಅವರು ಯಾವ್ಯಾವ ರೀತಿಯಲ್ಲಿ ನಡೆದರೆ ಹಿತ ಪರಿಣಾಮವಾಗುವುದೆಂದೂ ಸೂಚಿಸಿ ಕೊಂಡಿದ್ದಿತು. ಶ್ರೇಯೋಕಾಂಕ್ಷೆ ಬಯಸಿ ಭಾಷಣವಾಗುತ್ತಲೆ, ಶ್ರೀ. ಎಮ್. ಎಸ್. ಕಾಮತರು ಈ ಶತಮಾನದ ಆರಂಭದಿಂದಾಗಿ ಕನ್ನಡದಲ್ಲಿ ಹೊಸ ಬಗೆಯ ಸಾಹಿತ್ಯವುಂಟಾಗುವುದಕ್ಕೆ ಇಲ್ಲಿನವರು ನಡೆಸಿದ ಮೂಲ ಪ್ರಯತ್ನಗಳ ಸಂಗ್ರಹವೊಂದಾಗಬೇಕೆಂದೂ, ಹಿಂದಣ ರೀತಿ ಸಂಸ್ಕೃತಿ ಕ್ರಮಾದಿಗಳನ್ನು ತಿಳಿದುಕೊಂಡ ಬಳಿಕ ಅದರ ಆಧಾರದ ಮೇಲೆ ಮುಂದಣ ಹೊಸ ಕಟ್ಟಡವನ್ನು ಕಟ್ಟುವರೆ ಈಗ ಪ್ರಯತ್ನಗಳಾಗಬೇಕೆಂದೂ, ಯೋಗ್ಯತೆ ಹೆಚ್ಚಿಸಿಕೊಳ್ಳುವುದೇ ಮುಖ್ಯವಾಗಿರುವ ಕಾರಣ, ಉತ್ತಮ ದಾರಿಯಲ್ಲಿ ಮಿತ್ರರು ಮುಂದರಿವಲ್ಲಿ ಅನುಭವಿಗಳು ಆ ದಾರಿಯಲ್ಲಿ ಬೆಳಕನ್ನು ಬೀರಲೆಂದೂ ಆಶಿಸಿಯೂ, ಶ್ರೀ| ಶಿವರಾಮ ಕಾರಂತರು ಸ್ವಾನುಭವದ ಪ್ರಮಾಣಕತೆಯಿಂದ ಸಾಹಿತ್ಯವು ಹೇಗೆ ಬೆಳೆದು ಬಂದರೆ ಅದು ಸತ್ಯವೂ, ಚಿರಸ್ಥಾಯಿಯೂ ಆಗುವುದೆಂದೂ ವಿವರಿಸಿಯೂ, ಶ್ರೀ ವೇದಾಂತ ಶಿರೋಮಣಿ ಶಂಭ ಶರ್ಮರು ತಮ್ಮ ಸಹೃದಯತಾಪೂರ್ಣವಾದ ಉದ್ಗಾರಗಳಿಂದ ಆಧುನಿಕ ರೀತಿಯನ್ನು ಹೊಗಳುತ್ತ ಅವರೆ ಅಷ್ಟು ಸೀತಿಗೆಡದಂತೆ ವಿಮರ್ಶೆಗೊಳಗಾಗಿ ನಡೆವುದಗತ್ಯವೆಂಬುದನ್ನು ಕಿರ ಸಹಜವಾದ ದೃಷ್ಟಾಂತಗಳನ್ನು ಕೊಟ್ಟು ವಿವರಿಸಿ ನಮ್ಮ ಪ್ರಯತ್ನಗಳು ಪುರಾತನ ನಿಯಮ ಸಮಯಾದಿಗಳನ್ನು ಮೀರದ ಹಾಗೆ ನಡೆಯಲೆಂದು ಬೋಧಿಸಿಯೂ ಮಿತ್ರರ ಪ್ರಯತ್ನಗಳು ಪ್ರೋತ್ಸಾಹಿಸಲಾದುವು. ಭಾಷಣ ಸ್ಪರ್ಧೆಯಲ್ಲಿ ಮುಂದಾದವರಿಗೆ ಬಹುಮಾನಗಳನ್ನು ಕೊಡ್ಲಾಯಿತು., ಕೆಲ ವರ್ಷಗಳ ಹಿಂದೆಯಾದರೆ ಯಾವ ಸಮಾಜವು ಕನ್ನಡವೆಂದರೆ ಮೂಗನಾಗುತಿತ್ತೋ, ಅಂತಹ ಸಮಾಜದ ಹೈಸ್ಕೂಲ್ ಪ್ರವೇಶಿಸಿದ ವಿದ್ಯಾರ್ಥಿಯೋರ್ವ ಈಗ ಕನ್ನಡ ಭಾಷಣ ಸ್ಪರ್ಧೆಯಲ್ಲಿ ಮೊದಲಿಗನಾದುದರಿಂದ, ನಮ್ಮ ಜಿಲ್ಲೆಯಲ್ಲಿ ಕನ್ನಡವು ಹಬ್ಬಿ ಪುಷ್ಟಿ ಹೊಂದುವುದಕ್ಕೆ ಇದೊಂದೇ ಕಲಾಂತರವು ಸಾಕಷ್ಟೆನಿಸುವ ಶುಭ ಲಕ್ಷಣವು ಈ ಸಭೆಗೆ ತೋರಿ ಬಂದಿತು.

ಶ್ರೀ ಪೇಜಾವರ ಸದಾಶಿವರಾಯರ ಶ್ರೀ. ಗೋವಿಂದ ಪೈಗಳವರ ಉತ್ತಮ ಕವಿತೆಗಳಲ್ಲೊಂದನ್ನು ಇಂಪಾಗಿ ಓದಲಾಯಿತು. ಎಳೆ ಮಕ್ಕಳ ಗೀತಾಭಿನಯವಾಯಿತು. ಕಳೆದ ಸಲ ಪ್ರಕಟಿಸಿರುವ 'ಸಣ್ಣ ಕತೆಗಳ' ಹಿಂದೆ ಮತ್ತೊಂದು ಪುಸ್ತಕವೂ ಸದ್ಯದಲ್ಲೇ ಮಿತ್ರರಿಂದ ಹೊರಡುವುದಾಗಿಯೂ, ಮಿತ್ರ ಮಂಡಲಿಯಲ್ಲಿ ಸಾಹಿತ್ಯಾಭಿರುಚಿಯುಳ್ಳ ಸರ್ವರೂ ಬೇರೆ ಬೇರೆ ತರಗತಿಗಳಲ್ಲೂ ಸೇರಬಹುದಾಗಿ ಸುಲಭ ನಿಯಮಗಳಿದ್ದು ಸದಸ್ಯರಿಗೆಲ್ಲ ವರ್ಷದಲ್ಲಿ ಹೊರಡುವ ಗ್ರಂಥಗಳು ಸುಲಭವಾಗಿ ಸಿಗುವ ಏರ್ಪಾಡಾದುದೂ ಸಂತೃಪ್ತಿಯನ್ನು ಉಂಟುಮಾಡಿರುವುದು. ಇದುವರೆಗಣ ಕಾರ್ಯಕ್ರಮದ ವಿಮರ್ಶೆ ಹೇಳುವುದಾದರೆ, — ಮುಂದಣ ದಾರಿಯು ನಿಶ್ಚಿತವಾಗಿಯೂ ಸ್ವಕೀಯವಾಗಿಯೂ, ಹಿತಕರವಾಗಿಯೂ ಇದೆ ಎಂದೂ, ಶ್ರೀ ಶರ್ಮರು ಮಡಿಕೇರಿಯಲ್ಲಿ ಮಾಡಿದ ಆ ಸುಪ್ರಸಿದ್ಧ ಭಾಷಣವೇ ಇಲ್ಲಿ ಸಾಕಷ್ಟು ಬಲ್ಲವರ ಮುಂದೆಯೂ ಮಾಡಿದಾಗ ಅದಕ್ಕಾಗಿ ರೇಗಿ ಎದುರ್ನುಡಿದು ಆಕ್ರಮಣ ಘೋಷಲಿಡೆತೋರದ ಸಲ್ಲಕ್ಷಣಗಳು ನಮ್ಮಲ್ಲಿವೆ ಎಂದೂ, ಎಂಟು ವರ್ಷಗಳಲ್ಲಿ ಮಿತ್ರರ ಕಾರ್ಯವು ಮೌನವಾಗಿ ದೃಢವಾಗಿ ಬೇರೂರಿ ಬರುತ್ತಲಿದೆ ಎಂದೂ ವ್ಯಕ್ತವಾಯಿತೆನ್ನಬೇಕು.

ಇದೇ ಸಮಯಕ್ಕೆ ಸರಿಯಾಗಿ ಉತ್ತರಕರ್ನಾಟಕದ ಶ್ರೀ ಪ್ರಹ್ಲಾದರು ಸಭೆಗೆ ಬಂದುದು ಸಂತೋಷಕರವಾಯಿತು. ಅವರು ಕೂಡಲೆ ಮೂರು ಕವಿತೆಗಳನ್ನು ರಾಗಾಭಿನಯಗಳಿಂದ ಹಾಡಿ ಸದಸ್ಯರಲ್ಲೊಂಟಿದ ವಿನೋದವನ್ನು ಆನಂದವನ್ನಾಗಿ ಮಾರ್ಪಡಿಸಿದರು. ಒಂದು ಪ್ರಾಂತ್ಯದ ಕನ್ನಡ ಸೇವಕರಲ್ಲಿ ಮತ್ತೊಂದು ಪ್ರಾಂತ್ಯದವರು ಹೇಗೆ ಅಯಾಚಿತವಾಗಿಯೂ ಬಂದು ಕೂಡುವ ಸಹೃದಯತೆಯುಳ್ಳವರೆಂಬುದು ಸಾಧು ವಾಕ್ಯವಾಯಿತು. ಆತಿಯಾಗಿ ವಿಶಿಷ್ಟ ವಿಚಾರಗಳನ್ನೂ ಸೂಕ್ಷ್ಮವಾಗಿ ವಿವರಿಸಿ ಅಧ್ಯಕ್ಷರು ಭಾಷಣಮಾಡುತ್ತ, ಪ್ರಾಚೀನರಿಂದ ಬಂದ ಸಾಹಿತ್ಯ ರೀತಿನೀತಿಗಳನ್ನು ಸಂಗ್ರಹಿಸಿ ಗ್ರಂಥಾಧ್ಯಯನದಿಂದಾಗಿ ಮುಂದಣ ರಚನೆಗಳು ದೋಷ ವಿರಹಿತವಾಗಿ ಹೊರಟು ವಿಮರ್ಶೆಯಿಂದ ವಿಶುದ್ಧವಾಗಿ ಸರ್ವರಿಗೂ ಕೊಡುವಂತಾಗುವ ಬಗೆಗೆ ಬೇಕಾದ ಸಕಲ ಉಪಾಯಗಳನ್ನೂ ದೃಷ್ಟಾಂತ ಮೂಲಕ ವಿಶದಗೊಳಿಸಿದರು. ಇದೊಂದು ಮಿತ್ರರಿಗೆ ಬೋಧಪ್ರದವಾದ ಪಾಠವಾಯಿತು. ಕೊನೆಗೆ ಶ್ರೀ ರಾಜಲಕ್ಷ್ಮಂದವರ ಗಂಡಾಕೊಡಲಿಯಿಂದ ಒಂದು ದೃಶ್ಯವೂ 'ಸೋಲಿಗರ ಸಿದ್ಧ' ನಾಟಕವೂ ಉತ್ತಮವಾಗಿ ಪ್ರದರ್ಶಿಸಲಾದ ಬಳಿಕ ಸಕಲರಿಗೆ ಧನ್ಯವಾದಗಳಾಗಿ ಉತ್ಸವವು ಮುಗಿಯಿತು.

ಹೀಗೆ ಮಿತ್ರರ ಕಾರ್ಯಕಲಾಪ ಧ್ಯೇಯ ಕಾರ್ಯಕ್ರಮಗಳನ್ನು ತಿಳಿದು ಈ ಜಿಲ್ಲೆಯ ಸಮಸ್ತರೂ ಮಿತ್ರಮಂಡಳಿಯನ್ನು ಸೇರಿ ಅದೊಂದು ನಮ್ಮೆಲ್ಲರ ಸಂಭಾವ್ಯ ಧಾರವಾಹದ ಗೆಳೆಯರ ಗುಂಪು ಎಂದೆನಿಸುವಂತೆ ಪ್ರಯತ್ನಗಳು ಇನ್ನಷ್ಟು ತೀವ್ರ ನಡೆದರೆ ಅನುಭವಿಗಳೂ ಹಿತಚಿಂತಕರೂ ನಮ್ಮಲ್ಲಿದ್ದು ಸಹಕರಿಸಿ ಪ್ರೋತ್ಸಾಹಿಸಲು ಮುಂದೊತ್ತುತ್ತಿರುವರೆಂದೂ ವಿದಿತವಾಯಿತು. ಸಾಹಿತ್ಯ ಸೇವೆಯಲ್ಲಾದರೂ ನಮ್ಮ ಜಿಲ್ಲೆಯು ತನ್ನ ಕಾಲಿಂದ ನಿಲ್ಲುವಂತಾಗಲಿ.

+ + + +


# WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co Ltd.
64, 3rd Cross Road, Srirampur Extn
Malleswaram Post, BANGALORE

OR

*The Managing Agents,*
The S. I. G. A. Co. Ltd.
55 Poonamallee High Road, Kilpauk, MADRAS.

ನಾಳೆ— ಈ ದಿನ—
ನಿಮಗೆ ಬೇಕಾದುದು!
# ರಬ್ಬರ್ ಮೊಹರುಗಳು
ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ಕಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ. ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳಿ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ. ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು.

**ಹೆಡ್ ಆಫೀಸು:—**

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No. 2. ಬಲ್ಮಠ ರಸ್ತೆ, ಮಂಗಳೂರು,
ದ. ಕನ್ನಡ.

---

# 1933.

1933ನೇ ಇಸವಿಯ
# ಸುಂದರವಾದ
## ಬ್ಯಾಂಡಿನ
ಮತ್ತು
## ಕಾಗದದ
## ಸಣ್ಣ ಸ್ಸಾಜು ಮತ್ತು ದೊಡ್ಡ ಸ್ಸಾಜು
# ಡೈರಿಗಳು.

ಶಾರದಾ ಛಾಪಖಾನೆ,
ಮಂಗಳೂರು.

ಇಲ್ಲಿಗೆ ಬರೆದುಕೊಳ್ಳಿರಿ.

---

## S·U·N·& CO.
*Choukhamba, Benares City*

**ಮೂರು ಇನಾಮುಗಳು.**

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8-0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8-0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರ್ಿಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ, ಸುದರ್ಶನ ಹಿತ್ತಾಳಿ ಕ್ಷ್ಯಾಮಿಗೆ ಮಿಶೈನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊದನೆ 3 ಇನಾಮುಗಳು.

ವಿಳಾಸ—
**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಿಸ್ (ಕಾಶೀ)**

---

ಕೇಸರಿಯವರ
# ಲೋಧ್ರ
## ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ,ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ. ೩—೦—೦.
ಸಣ್ಣ ಬಾಟಲ್ ೬ ಔನ್ಸ್ ರೂ. ೧—೧೦—೦.

ಟಪ್ಪಾಲು ಖರ್ಚು ಪ್ರತ್ಯೇಕ. ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

## ಕೇಸರಿ ಕುಟೀರಂ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ್— **ಪೊಪ್ಯುಲರ್ ಸ್ಟೋರ್ಸ್,** ರಥಬೀದಿ ಮಂಗಳೂರು. **ಶಾ ಕಂಪೆನಿ,** ಹಂಪನಕಟ್ಟೆ, ಮಂಗಳೂರು.

---

**The Zandu Pharmaceutical Works, Ltd., Bombay, 14.**
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ
# 'ಝಂಡು' ಚ್ಯವನಪ್ರಾಶ ಲೇಹವು.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!!**

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾನಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ.ಜಾಡಿ ರೂ. 10/- ಕ್ರಯ 1 ಪಾನು ಸೀಸೆ ರೂ. 2/8. ½ ಪಾ. ರೂ. 1/5 ¼ ಪಾ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು:—ಶಾ ಕಂಪೆನಿ, ಡೈಮಂಡ್ ಬಿಲ್ಡಿಂಗು
ಶಿರ್ಸಿ ಏಜಂಟರು:—ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು:—ಟಿ. ಸಿ. ನಟರಾಜ್ ಅಂಡ್ ಕೊ., ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:—ಬಿ. ಫೂಲಚಂದ್ ಲಾಲ್ ಕಂಪೆನಿ ಚಿಕ್ಕಪೇಟೆ
ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

---

ಪಂಡಿತ ಡಿ. ಗೋಪಾಲಚಾರ್ಯರ
# ಜೀವಾಮೃತ.
ದೇಹಪುಷ್ಟಿ ಜ್ಞಾಪಕ ಶಕ್ತಿ.

೧೮೮೮ನೇ ವರ್ಷದಿಂದಲೂ ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧಿಹೊಂದಿದ ಆರೋಗ್ಯಪ್ರದಾಯಿನಿ.
ಇದರ ಉಪಯೋಗದಿಂದ:—

ಬಲಹೀನರಿಗೆ—ಬಲವನ್ನೂ, ದುರ್ಬಲರಿಗೆ—ಪಟುತ್ವವನ್ನೂ,
ನಿದ್ರಾಹೀನರಿಗೆ—ಸುಖನಿದ್ರೆಯನ್ನೂ. ನರಗಳ ಸೆಳೆತಕ್ಕೆ—ಖಂಡಪುಷ್ಟಿಯನ್ನೂ,
ಜೀರ್ಣಶಕ್ತಿಯಿಲ್ಲದವರಿಗೆ—ಜೀರ್ಣಶಕ್ತಿಯನ್ನೂ, ರಕ್ತಹೀನರಿಗೆ—ರಕ್ತಪುಷ್ಟಿಯನ್ನೂ,
ತೇಜೋಹೀನರಿಗೆ—ತೇಜಸ್ಸನ್ನೂ, ಮಂದಬುದ್ಧಿಗಳಿಗೆ—ಉಲ್ಲಾಸವನ್ನೂ,
ಜ್ಞಾಪಕಶಕ್ತಿಯಿಲ್ಲದವರಿಗೆ—ಜ್ಞಾಪಕಶಕ್ತಿಯನ್ನೂ,

ಇನ್ನು ಅನೇಕ ಅಸಂಖ್ಯಾತವಾದ ಎಷ್ಟೋ ಸುಗುಣಗಳನ್ನೂ ಉಂಟುಮಾಡುತ್ತದೆ. ಸ್ತ್ರೀಪುರುಷರು ಎಲ್ಲಾ ವಯಸ್ಸುಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಸೇವಿಸಬಹುದಾದ ದಿವ್ಯವಾದ ಟಾನಿಕ್ಕು. ಎರಡು ಸೈಜುಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

**ದೊಡ್ಡ ಸ್ಸಾಜು ರೂ. ೩—೮—೦. ಸಣ್ಣ ಸ್ಸಾಜು ರೂ. ೧—೧೨—೦.**

**ಆಯುರ್ವೇದಾಶ್ರಮಂ, ಪೋ. ದಬಕ್ಸ್ ನಂ, ೨೦೭, ಮದ್ರಾಸು.**

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು.
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 140

# ಅಸ್ಪೃಶ್ಯರಾರು?

ಉತ್ತರ ಹಿಂದೂಸ್ಥಾನದ ಖೇರಪುರಕವೆಂಬಲ್ಲಿನ ಆನಂದಾಶ್ರಮದಿಂದ ಹೊರಡುವ 'Message' ಎಂಬ ಮಾಸಿಕ ಪತ್ರಿಕೆಯಲ್ಲಿ ಸ್ವಾಮಿ ಸದಾನಂದರಿಂದ ವಿರಚಿತವಾದ "Who are the untouchables" ಎಂಬ ಲೇಖನವಿದ್ದಿತು. ಇದು ಅದರ ಅನುವಾದ—

ಸರ್ವ ಸಜ್ಜನರೆ, ಓ ಎನ್ನ ಸಹೋದರರೆ! ಲಾಲಿಸಿರಿ. ಸನಗಿಂತಲೂ ಮಿಕ್ಕದ ಅಸ್ಪೃಶ್ಯನಿಲ್ಲ. ಯಾವನು ಈ ರೀತಿ ಪರ್ಯಾಲೋಚಿಸುವನೋ ಅವನು ನನ್ನ ಗೆಳೆಯರೆಲ್ಲರಿಗಿಂತಲೂ ಮಿಗಿಲೆನ್ನಿಸುವನು.

ಓ ದೇವ! ನಮಗಿಂತಲೂ ಮಿಗಿಲಾದ ಅಸ್ಪೃಶ್ಯರಿನ್ನಾರಿರುವರು? ನೀನು ನಮ್ಮ ಸಂಗಡಲೆ ಜೀವಿಸುವೆ, ನೀನು ನಮ್ಮಲ್ಲಿಯೆ ವಾಸಿಸುವೆ, ನಿನ್ನ ಸ್ವರವನ್ನು ನಾವು ಕೇಳುತ್ತಲಿರುವೆವು, ನಿನ್ನ ಆಜ್ಞೆಗಳನ್ನು ಶಿರಸಾವಹಿಸುವೆವು, ನಿನ್ನ ಅಪಾರ ದಯೆಯನ್ನು ತಿಳಿಯುವೆವು, ನಿನ್ನ ಕರುಣೆಯನ್ನು ನಾವು ಗ್ರಹಿಸುತ್ತಲಿರುವೆವು, ನಿನ್ನ ಉದಾರತೆಯು ನಮ್ಮ ಮನದಟ್ಟಾಗುವುದು, ಪರಂತು, ಇಷ್ಟೆಲ್ಲ ತಿಳಿದೂ ನಿನ್ನನ್ನು ಸ್ಪರ್ಶಿಸುವ ಧೈರ್ಯವು ನಮಗಿಲ್ಲ. ನಾವು ಬಲಹೀನರಾಗಿ ಹೋಗುವೆವು, ನಮ್ಮ ಅಯೋಗ್ಯತೆಯು ನಮಗೆ ಭಾಸವಾಗುವುದು, ನಮ್ಮ ಅಂತಃಕರಣದ ಅಪವಿತ್ರತೆಯನ್ನು ನಾವು ತಿಳಿದಿರುವೆವು, ನಮ್ಮ ಮನಸ್ಸಿನ ಅಪವಿತ್ರತೆಯು ನಮಗೆ ಗೋಚರವಾಗುತ್ತಿದೆ, ನಮ್ಮ ಪಾಪ ಕೃತ್ಯಗಳ ಜ್ಞಾಪಕವು ನಮಗುಂಟಾಗುವುದು, ಇಷ್ಟಾದರೂ ನಾವು ಭಯಗ್ರಸ್ತರಾಗುವೆವು, ಅಲ್ಲದೆ, ನಿನ್ನಿಂದ ಅಡಗಿಕೊಳ್ಳಲೂ ನಿನ್ನಿಂದ ಬಹು ದೂರವಿದ್ದುಕೊಳ್ಳಲೂ ಯತ್ನಿಸುವೆವು. ಓ ಪರಮ ಪೂಜ್ಯನಾದ ಪರಮಾತ್ಮನೆ! ನಮ್ಮ ಪಾಪಗಳೂ ಕುಂದು ಕೊರತೆಗಳೂ ನಾವು ನಿನ್ನ ಪವಿತ್ರ ದೇವಾಲಯಕ್ಕೆ ಪ್ರವೇಶಿಸಲು ಪ್ರತಿಬಂಧಕಗಳಾಗಿರುವುವು. ನಾವು ಅಸ್ಪೃಶ್ಯರೆಂದು ಸ್ಪಷ್ಟೀಕರಿಸಲು ಇನ್ನು ಬೇರೆ ಸಾಕ್ಷಿ ಬೇಕೆ?

ನಮ್ಮ ಧಾರ್ಮಿಕ ಬುದ್ಧಿಲೋಪದಿಂದಲೂ ಜಾತ್ಯಭಿಮಾನದಿಂದಲೂ ನಿನ್ನ ಮಕ್ಕಳನ್ನು ನಾವು ಅಸ್ಪೃಶ್ಯರೆಂದು ಕಾಣುವೆವು, ಅವರನ್ನು ಪಂಚಮರೆಂದು ಕಾಡುವೆವು, ಅವರನ್ನು ಶ್ವಾನಗಳಿಗಿಂತಲೂ ಹೀನವಾಗಿ ನೋಡುವೆವು, ನಿನ್ನ ನಾಮಕ್ಕಾಗಿ ನಿರ್ಮಿಸಿದ ದೇವಾಲಯಗಳಿಗೂ ಪ್ರವೇಶಿಸಲು ಬಿಡುವುದಿಲ್ಲ, ನಾವವರನ್ನು ಸ್ಪರ್ಶಿಸುವುದೂ ಇಲ್ಲ. ಅವರು ಮಾಡಿದ ಯಾವ ತಪ್ಪುಗಳಿಗಾಗಿ ನಾವವರನ್ನು ಈ ರೀತಿ ನೋಡುವೆವು? ವಿದ್ಯೆಯಿಂದಾಗಿಯೂ ಗುಣ ನಡತೆಯಿಂದಾಗಿಯೂ ಅವರು ನಮ್ಮಂತೆಯೆ ಸೌಜನ್ಯತೆಯಿಂದ ವರ್ತಿಸುವರೆಂದು ನಾವು ತೀರಾ ಮರೆತುಬಿಡುವೆವು, ವಿದ್ಯಾವಿಹೀನರಾದ ಅವರಲ್ಲಿಯೂ ವಜ್ರಪ್ರಾಯರಾದವರು ಇರುವರೆಂಬುದನ್ನು ನಾವು ಮರೆತುಬಿಡುವೆವು. ಅವರ ಸಮಾಜದಲ್ಲಿಯೂ ಹಲಕೆಲವು ಸಾಧುಸಂತರಿರುವರೆಂಬ ಅಭಿಮಾನವು ಅವರಿಗೂ ಇರುವುದೆಂಬುದನ್ನು ನಾವು ಮರೆಯುವೆವು. ದಕ್ಷಿಣ ಹಿಂದೂಸ್ಥಾನದ ನಂದನೂ, ಅಯೋಧ್ಯಾ ದೇಶದ ರವಿದಾಸನೂ ಮಹಾರಾಷ್ಟ್ರ ದೇಶದ ಚೋಕಾಮೇಳನೂ, ತಮ್ಮ ಸೌಜನ್ಯತೆಯಿಂದಲೂ ಸಾತ್ವಿಕ ಗುಣ ನಡತೆಯಿಂದಲೂ ಹಿಂದೂ ಸಮಾಜದ ಸಮಸ್ತ ಜಾತೀಯರಿಂದಲೂ ಚಿರಸ್ಥಾಯಿಯಾದ ಗೌರವಗಳನ್ನು ಹೊಂದಿದ ಕನಕದಾಸನೆ ಮೊದಲಾದ ಸಾಧು ಸಂತರು, ನಾವು ಅಸ್ಪೃಶ್ಯರೆಂದೆನ್ನುವ ಪತಿತ ವರ್ಗದಲ್ಲಿ ಜನ್ಮವೆತ್ತಿದರು. ಆ ಮಹಾ ರಾಮಾನುಜ ಮಹರ್ಷಿಯ ಗುರುವು ನಂಬಿಯೆಂಬ ಹೆಸರುಳ್ಳ ಅಸ್ಪೃಶ್ಯನಾಗಿದ್ದನು. ಲಿಂಗಾಯತ ಸಮಾಜದ ಪ್ರಮುಖ ವಾಸವನಿಗೆ ಒಬ್ಬ ಚಾಂಡಾಲನು ಗುರುವಾಗಿದ್ದನು, ಮತ್ತು ಮೇಲುಜಾತೀಯರಾದ ಬ್ರಾಹ್ಮಣರು ತಮ್ಮ ಗುರುಗಳ ಉಚ್ಛಿಷ್ಟವಾದರೂ ದೊರಕುತ್ತಿದ್ದರೆ ನಾವು ಭಾಗ್ಯಶಾಲಿಗಳಾಗುತ್ತಿದ್ದೆವು ಎಂದು ಭಾವಿಸುವಷ್ಟು ಮಟ್ಟಿಗೆ ಮಾನ್ಯತೆಯನ್ನೀಯುತ್ತಿದ್ದರು. ಆದರೆ, ನಿಮ್ಮ ಧಾರ್ಮಿಕ ಜೀವನದಲ್ಲಿ ನೀವು ಅವರಿಗಿಂತಲೂ ಬಹಳ ಕೀಳಾಗಿದ್ದರೂ ಈ ಅಸ್ಪೃಶ್ಯರೆಂಬವರನ್ನು ಮುಟ್ಟಲೂ ಹೇಸುವಿರಿ. ಎಂತಹ ಕನಿಕರ ಸ್ಥಿತಿಯಿದು!

ನಿಮ್ಮ ಮರಾಟಾ ಸಾಧುವಾದ ಏಕನಾಥನು ರಾಣ್ಯಾ ಮಹಾರ್ ಎಂಬ ಕಸಗುಡಿಸಕನ ಮನೆಯಲ್ಲಿ ಉಂಡಿರುವನು, ಮತ್ತು ನಿಮ್ಮ ಶ್ರೀರಾಮ ಚಂದ್ರಮನು ಅಸ್ಪೃಶ್ಯಳಾದ ಶಬರಿಯು ತಿಂದುಳಿದ ಹಣ್ಣನ್ನು ತಿಂದಿರುವನು. ನಿಜವಾಗಿಯೂ ಅವರಿಗಿಂತಲೂ ನೀವು ಮಿಗಿಲಲ್ಲವಷ್ಟೆ!

ಯಾರು ಪರಮಾತ್ಮನನ್ನು ತಿಳಿದುಕೊಂಡಿರುವರೊ, ಅವರು ಆತನನ್ನು ನಿಜವಾಗಿಯೂ ಪ್ರತಿಯೊಂದು ವಸ್ತುವಿನಲ್ಲಿಯೂ ಪ್ರತಿಯೊಂದು ಜೀವಿಯಲ್ಲಿಯೂ ಕಾಣುವರು. ಭಗವದ್ಗೀತೆಯಲ್ಲಿ :—

ಯಾವನು ನನ್ನನ್ನು ಸರ್ವ ವಸ್ತುಗಳಲ್ಲಿಯೂ ಕಾಣುವನೊ ಅವನಿಗೆ ನಾನು ಅಗೋಚರನಲ್ಲ ಮತ್ತು ನನಗಾವನು ಅದೃಶ್ಯನಲ್ಲ (ಅಂದರೆ, ಅಂತಹವನು ಸದಾ ನನ್ನ ಅನುಗ್ರಹವನ್ನು ಪಡೆಯುವಂತಹನಾಗಿರುವನು.)

ಎಲೆ, ಸಹೋದರರೆ! ನಿಮ್ಮಲ್ಲಿ ಯಾರು ನಮ್ಮ ಸ್ಥಿತಿಯಲ್ಲಿರುವರೋ ಅವರು ನಮ್ಮ ಪರಮ ಸ್ನೇಹಿತರು. ಏಕೆಂದರೆ, ನಮ್ಮ ಅಭಾಗ್ಯರಾದ ಸಹೋದರರ ಸಹವಾಸವು ನಮಗಿಲ್ಲದಿದ್ದುದರಿಂದಲೂ, ನಮಗೆ ಪ್ರಾಪ್ತವಾದ ದುಃಖವನ್ನು ನಾವು ಮನಗಂಡಿರುವುದರಿಂದಲೂ, ಮತ್ತು ಈ ತರದ ವಿಯೋಗವು ನಮಗೆಲ್ಲರಿಗೂ ತಂದೆಯಾದ ಆ ಪರಮಾತ್ಮನಿಂದ ವಿಯೋಗ ಹೊಂದಿದಂತೆಯೆ ಆಗಿರುವುದೆಂದು ನಾವು ನಿಶ್ಚಿತವಾಗಿ ತಿಳಿದುದರಿಂದಲೂ, ಅವರಲ್ಲಿ ನಾವು ಕನಿಕರವನ್ನು ತೋರಿಸುವೆವು. ದೇವರ ಕಣ್ಣೆದುರಲ್ಲಿ ಅಸ್ಪೃಶ್ಯರೆಂದೆನಿಸುವ ಜನ ಸಮೂಹಕ್ಕೂ ನಿಮ್ಮಲ್ಲಿ ಮೇಲು ಜಾತೀಯರೆಂದು ಅಭಿಮಾನಗೊಳ್ಳುವವರಿಗೂ ಏನೂ ತಾರತಮ್ಯವಿಲ್ಲ. ಹೆಚ್ಚೇಕೆ? ಮನುಷ್ಯ ನಿರ್ಮಿತವಾದ ಸಮಾಜಗಳಲ್ಲಿ ಅವರ ಪಾಲಿಗಿರುವ ಅಧೋಗತಿಯಿಂದಾಗಿಯೂ ಅವರನ್ನು ಆ ರೀತಿ ಅಧೋಗತಿಯಲ್ಲಿಟ್ಟುದುದರಿಂದ ಅವರಿಗೆ ಪ್ರಾಪ್ತವಾದ ದಾರಿದ್ರ್ಯದಿಂದಾಗಿಯೂ, ಭಯಾತ್ಮಕವಾದ ಜಾತಿ ವೈಷಮ್ಯ ಪರಿಣಾಮವಾದ ದ್ರೋಹವನ್ನು ಅವರಲ್ಲಿ ತೋರಿಸುವುದರಿಂದಾಗಿಯೂ, ಅವರು ನಮಗಿಂತಲೂ ಪರಮಾತ್ಮನಿಗೆ ಸಮೀಪವಿರುವರು. ಏಕೆಂದರೆ, ಪರಮಾತ್ಮನು ದೀನಬಂಧುವೆಂದೂ ಪತಿತೋದ್ಧಾರಕನೆಂದೂ ಅನ್ನಿಸಿಕೊಂಡಿರುವನು. ಈ ಅಸ್ಪೃಶ್ಯರು ತಮ್ಮ ಪ್ರತಿಯೊಂದು ಉಸಿರಾಟದಲ್ಲೂ ತಮಗೆ ಉಂಟಾಗುವ ದ್ರೋಹವನ್ನು ತಿಳಿದುಕೊಳ್ಳುವರು, ತಮಗುಂಟಾಗುವ ಉಪದ್ರವಗಳಿಂದಾಗಿ ಕೊರಗುವರು, ತಾವು ಸಮಾಜ ಬಾಹಿರರಾದುದನ್ನು ತಿಳಿದು ಮರುಗುವರು. ಮತ್ತು ತಮ್ಮ ಒಬ್ಬನೇ ಒಬ್ಬ ಗೆಳೆಯನಾದ ಆ ಕರುಣಾನಿಧಿಯೂ ಸೃಷ್ಟಿಕರ್ತನೂ ಆದ ಪರಮಾತ್ಮನಿಗೆ ತಮ್ಮ ನೇತ್ರದ್ವಯಗಳನ್ನೂ ಕರಗಳನ್ನೂ ಎತ್ತಿ ಈ ಕಷ್ಟ ವಿಮೋಚನೆಗಾಗಿ ಮೊರೆಯಿಡುವರು. ಅವರ ಹೃದಯಪೂರ್ವಕವಾದ ಪ್ರಾರ್ಥನೆಯೂ ಅವರ ದುಃಖಾಶ್ರುವೂ ಪರಮಾತ್ಮನ ಕರ್ಣಗಳನ್ನು ಭೇದಿಸುವುವು. ಈ ಮೊರೆಗಳೂ, ಈ ದುಃಖಾಶ್ರುವೂ ನಿರರ್ಥಕವಾಗುವುದೆಂದು ನೀವು ಎಣಿಸುವಿರೇನು? ನಿಮ್ಮ ಪಾಪಗಳಿಗೆ ತಕ್ಕ ಪ್ರತಿಕ್ರಿಯೆಗಳಾಗಲೇ ಬೇಕು. ಪ್ರತಿಕ್ರಿಯೆಗಳೇನೊ ಮೊದಲೇ ಆಗಿರುವುವು. ನಿಮ್ಮ ಈಗಿನ ಪರಿಸ್ಥಿತಿಯೆ ಅದಕ್ಕೆ ಸಾಕ್ಷಿಭೂತವು. ಪ್ರತಿಯೊಬ್ಬನ ಅಂತರ್ಯದಲ್ಲೂ ಈಗೀಗ ಹೆಚ್ಚು ಕಡಿಮೆಯಾಗಿ ಪಶ್ಚಾತ್ತಾಪ ವೇದನೆಯು ಕಂಡುಬರುವುದು. ಸಹಸ್ರಾರು ವರುಷಗಳಿಂದಿತ್ತ ರಾಶಿ ಹಾಕಿದ ನಿಮ್ಮ ಪಾಪಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾದುದು ಸಮರ್ಪಕವಾಗಿಯೆ ಇದೆ.

ಅಸ್ಪೃಶ್ಯತೆಯು ಮನುಷ್ಯನೆದುರಲ್ಲೂ ಪರಮಾತ್ಮನ ಸಮ್ಮುಖದಲ್ಲೂ ಒಂದು ಪಾಪವಾಗಿದೆ. ಅಸ್ಪೃಶ್ಯರೆಂದೆನ್ನಿಸಿಕೊಳ್ಳುವ ಜನರು ನಮ್ಮಂತೆಯೆ ಪರಮಾತ್ಮನ ಮಕ್ಕಳಾಗಿರುವರು. ನೀವು ಅವರನ್ನು ಕೇವಲ ಪಂಚಮರೆಂದು ನೋಡಲು ಅವರು ನಿಮಗೆ ಮಾಡಿದ ತಪ್ಪಾದರೂ ಏನು? ಪತಿತ ವರ್ಗವೆಂದು ನೀವು ಹೆಸರಿಟ್ಟ ಆ ಸಮಾಜದಲ್ಲಿ ಅವರು ಜನ್ಮವೆತ್ತಿದುದು ಅವರ ತಪ್ಪಲ್ಲ. ಅದು ಪರಮಾತ್ಮನ ಇಚ್ಛೆಯೆ ಆಗಿರುವುದು. ಮನುಷ್ಯ ಮಾತ್ರನಿಗೇನೂ ಅದರಲ್ಲಿ ಪ್ರವೇಶವಿಲ್ಲ. ನೀವವರನ್ನು ಸಮಾಜ ಬಾಹಿರರೆಂದು ನೋಡುವುದರಿಂದ ನೀವು ಪರಮಾತ್ಮನ ಇಚ್ಛೆಗೆ ವ್ಯತಿರಿಕ್ತವಾಗಿ ನಡೆದಂತಾಯಿತು. ಪರಮಾತ್ಮನು ನಿಮ್ಮಲ್ಲಿ ವಾಸಿಸಿರುವಂತೆ ಅವರಲ್ಲಿಯೂ ವಾಸಿಸಿರುವನು. ಅವರನ್ನು ದೂರ ಮಾಡುವುದೆಂದರೆ ಪರಮಾತ್ಮನ ಒಂದಂಶವನ್ನು ದೂರ ಮಾಡಿದಂತಾಗುವುದು. ಅವರನ್ನು ನಿಂದಿಸುವುದೆಂದರೆ ಪರಮಾತ್ಮನ ಒಂದಂಶವನ್ನು ನಿಂದಿಸಿದಂತಾಗುವುದು, ಅವರನ್ನು ತಿರಸ್ಕರಿಸುವುದೆಂದರೆ ಪರಮಾತ್ಮನ ಒಂದಂಗವನ್ನೇ ತಿರಸ್ಕರಿಸಿದಂತಾಗುವುದು. ಆದುದರಿಂದ ಇದೊಂದು ಮಹಾ ಪಾಪಕೃತ್ಯವಲ್ಲವೆ? ಪರಮಾತ್ಮನಿಗೇನೆ ಒಂದು ಪಾಪಕೃತ್ಯವನ್ನು ಮಾಡಿದಂತಾಗುವುದಿಲ್ಲವೆ? ಸಹೋದರರೆ! ಪರ್ಯಾಲೋಚಿಸಿರಿ. ನೀವು ಪರಮಾತ್ಮನನ್ನು ಸಂಪೂರ್ಣವಾಗಿ ಪ್ರೀತಿಸದಿದ್ದರೆ ಆ ಪ್ರೇಮವು ಪವಿತ್ರವೆನಿಸಲಾರದು. ಆತನನ್ನು ಒಂದೇ ಸಮನೆ ಪ್ರೀತಿಸಲೂ ದ್ವೇಷಿಸಲೂ ನಿಮಗೆ ಸಾಧ್ಯವೆ?

ಸಪೇಷ.

+ + + +


## The Canara Industrial & Banking Syndicate Limited.

**Established in 1925.** Branches: Mangalore, Payyanur, Brakmavar, Kumta, Karwar, Hubli & Honnavar. **Head Office:— UDIPI.**

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

### Fixed Deposits

Fixed deposits are received at any office of the Syndicate at the undermentioned rates of interest (interest being paid half yearly).

| | |
|---|---|
| Deposits of 3, 4 and 5 months | 4% |
| Deposits of 6, 7 and 8 months | 4½% |
| Deposits of 9, 10 & 11 months | 5% |
| Deposits of 12 months up to 23 months | 5½% |
| Deposits of 24 months | 6% |

Interest allowed on current account at 2½ percent; Savings Bank at [illegible] per cent;

Long and Short term Loans on attractive Schemes are grant

ALL KINDS OF BANKING BUSINESS UNDERTAKEN.

Udipi,
20—1—1938

P. A. Pai Bros.,
*Managing Agents.*

## ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!

ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿಯದೆ. ಮಹಾದಾಪಾಯಕರವಾದ ಈ ರೋಗನಿವಾರಣಾರ್ಥವಾಗಿ, ಮದ್ರಾಸ್ ಮಾತ್ರ ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯಔಷಧವಾಗಿದೆ.

**ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲಿಬೊರೆಟರಿಯವರಿಂದ ಸಿದ್ಧವಾದುದು.**

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್—

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.**



ವೈದ್ಯ ಮೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ನಾನಾಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

### ಮದನಮಸ್ತ ಪಾಕು. ರಿಜಿಸ್ಟರ್ಡ್.

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸ್ಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿಧ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆ ಯಾದ ಕೂಡಲೇ ವೀರ್ಯಪತನವಾಗೋಣ, ಗರ್ಭಿಯ ಪರಿಣಾಮ, ಎಂಥದಾದರೂ ಪರಮ್ಮೆ ಸ್ವಪ್ನದೋಷ, ಇತ್ಯಾದಿ ರೋಗಗಳು ನಾಶವಾಗಿ ಕೌಚಕ್ಕೆ ಸಾಪಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫. ಟ. ಖ. ರೂ. ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ. ೧೧ ಮೂರ ಡಬ್ಬಿಗೆ ರೂ. ೧॥ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಟಮಿಟ್, ಎಲ್. ಎಮ್. ಎಂಡ್. ಎಸ್., ಜೆ. ಪಿ., ಮುಂಬಯಿ:— ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗದಮು, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ:— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ.

ಪತ್ತೆ:—**ವೈದ್ಯ ಮೋಹನಲಾಲ ಎಸ್. ಔಷಧಾಲಯ,** ಮು. ಪೋ. ಮಿರಜ, S. M. C.



## ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

### ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಓದತನದಲ್ಲಿ ಎಷ್ಟೇನ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರ ಮಾಡಿ ಔಷಧಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ. ತಾರೀ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚ ೦|೦

### ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಸರಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಸ್ಯಾಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ಬಿಟ್ಟಿಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ. ಮುಖ್ಯ ಸರ್ಟಿಫಿಕೇಟ್, ಮೆ. ರಾ. ಎ. ಎಮ್. ಇನ್ನವೆಲ್ಕರ ಬೆಳಗಾಂವ:— ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಿತ್ರನ ಹೆಂಡತಿಯ ರಕ್ತದುತ್ತು ಬಿಳಿ ಸರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩. ಟ. ಖ. ೧ಣೆ ೮.

**ವಿಳಾಸ— ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.**



## ಕೋ-ಆಪರೇಟಿವ್ ಸೊಸೈಟಿಗಳಿಗೆ

**ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.**

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್**

ರಥಬೀದಿ, ಮಂಗಳೂರು



### ಡಾಕ್ಟರ ವಾಮನ ಗೋಪಾಳರವರ

**ಬಹುಕಾಲಾಯುಷ್ಯ ಸಾರ್ಸಪರಿಲಾ**

ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨. ಏಜೆಂಟರು ... ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.



**ಕ್ಷಯಕ್ಷೀಣಾದಿಗಳಿಗೆ**

## ಚ್ಯವನಪ್ರಾಶಾನ ಲೇಹ.

**ಪ್ರಸೂತಿ ರೋಗಾದಿಗೆ**

## ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

**ಸಮಸ್ತ ವಾತರೋಗಗಳಿಗೆ**

## ಮಹಾನಾರಾಯಣ ತೈಲ.

**ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,**

ಡೊಂಗರಕೇರಿ ರಸ್ತೆ, ಮಂಗಳೂರು.



## THE SOUTH INDIA CO-OPERATIVE INSURANCE SOCIETY, LIMITED, MADRAS.

**LOCAL BOARD:—**

THE SOUTH CANARA CENTRAL CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

*FOR TERMS APPLY TO:—*

***The Secretary,***

South Canara Central Co-operative Bank, Ltd., KODIALBAIL P. O. (Mangalore),

*SOUTH CANA'*



ಮಾರಾಟಕ್ಕಿವೆ! ಮಾರಾಟಕ್ಕಿವೆ!!

**ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂಥ**

## ಚಕ್ರೋಲ್‌ಗಳು

**ಮೂರು ಸ್ಯಾಜಿನಲ್ಲಿ, ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.**

**ರಖಂ ತೆಗೆದುಕೊಳ್ಳುವವರಿಗೆ, ರಿಯಾಯಿತಿ ದರವಿದೆ**

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಗಣಪತಿ ಫಾರ್ಮಸಿ,
ರಥಬೀದಿ, ಮಂಗಳೂರು.



EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪ

# ಸ್ವದೇಶಾಭಿಮಾನ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ' ಮತ್ತೆ ವಿಶ್ವವ ಸುಡುತ ಬರುತಿರುವ ।
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ' ತೊರೆದು ಧೀರರು ನಿಶ್ಚಿತಾರ್ಥವನು । ೧ ।

ಪುಸ್ತಕ ೨೭. ಮಂಗಳೂರು ತಾ ೨೪ನೇ ಶುಕ್ರವಾರ ಫೆಬ್ರವರಿ ೧೯೩೩ (24—2—33) ಸಂಚಿಕೆ ೮


## THE CANARA BANKING CORPORATION, UDIPI, LTD.
## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras**
ಹೆಡ್ ಆಫೀಸು:— ಉಡುಪಿ ಶಾಖೆ – ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Subscribed & Called up Rs 2,25,000
ನಿಯಮಿತ ಮೂಲಧನ ರೂ 3,50,000- ಚಂದಾ ಕಾಣಿಕೆಗೆ ಅರ್ಪಿಸಿದ ವ ಎತ್ತಿದ ಮೂಲಧನ ರೂ 2,25,000

Consistent with the financial condition prevailing in the market due to the unprecedented economic slump the Canara Banking Corporation is reluctantly obliged to reduce the rates of interest on Deposits as follows from 1—1—1933.

**Current Deposits**. at 2 % on daily credit balances from 1st January to 30th June & at 1 from 1st July to 31st December
**Short-term Deposits**—at 3½ %
**Fixed Deposits**-3 months 4% 4, 5 & ? months 4½ % 12 months & above 5%
Payable quarterly as before

UDIPI 14—1—'33

**N. ANANDA RAO**
*Secretary & Manager*

(Regd.)

## ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕೊಡುವ ವಾತ, ಭಾರಿ ನೋವು, ವಿಶೇಷ ಕೆಮ್ಮು, ಅಸಹನೀಯ ಹಲ್ಲುನೋವು, ವಿಪರೀತ ಥಂಡಿ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಬಹು ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತದೆ

**ರಿಂಗ್‌ವರ್ಮ್ ಮುಲಾಮು**— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ

**ಅಮೃತಾಂಜನ ಡಿಪೋ,**

ಮದರಾಸು ಮತ್ತು ಬೊಂಬಾಯಿ.



ಸಣ್ಣ ಹುಡುಗರ ಸಲುವಾಗಿ,

# ಡೋಂಗರೆ

ಇವರ

## ಬಾಲಾಮೃತ

ಇದನ್ನು ಕೊಡುವುದರಿಂದ ಮಕ್ಕಳು ಸಶಕ್ತರೂ, ಪುಷ್ಟರೂ ಮತ್ತು ಸಂತೋಷಚಿತ್ತರೂ ಆಗುವರು.

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ.

ಏಜಂಟರು— ... ಕಂಪೆನಿ, ...



INSURE WITH
**The Popular Insurance Co. Ltd.**
Head Office -MANGALORE S. India
**First of its kind in the West Coast**

CHAIRMAN
***Dewan Bahadur N Subba Rao***

*STRIKING FEATURES*

**Policy Conditions Liberal**
**Claims Settlement Prompt**

MANAGEMENT PURELY INDIAN

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS
LIBERAL TERMS TO COMPETENT MEN

*For further particulars apply to the Head Office.*

## ಎಲ್ಲಾ ಬಾಯಿ ಬಡಾಯಿ ಸ್ವಾಮಿ, ಬಾಯಿ ಬಡಾಯಿ !

ದಕ್ಷಿಣ ಕನ್ನಡದಲ್ಲಿ ಎಷ್ಟೋ ದೇವಸ್ಥಾನಗಳಿವೆ! ಎಷ್ಟೋ ಸುಧಾರಕರಿದ್ದಾರೆ ಎಷ್ಟೋ ಮಾತು ಮಲ್ಲರಿದ್ದಾರೆ ಎಷ್ಟೋ ಹರಿಜನ ಸೇವಕರಿದ್ದಾರೆ ಪಾಪ! ಅದುದೇನು?

× × + × × × ×

ಬರ ಹರಿಜನ ಸೇವಾ ಸಂಘದವರು ತಮ್ಮಿಂದಾದಷ್ಟು ಕೆಲಸ ಗಾಡುತ್ತಿದ್ದಾರೆ ಅವರದ್ದೂ ಪಾಪ! ಅವರ ಸಾಹಸದ ಪರಿಣಾಮವಾಗಿ ದಕ್ಷಿಣ ಕನ್ನಡದಲ್ಲಿ ಒಬ್ಬರಾದರೂ ಗಾಂಧೀಜೀಯವರ ಮಾತನ್ನು ಕಿವಿ ಮೇಲೆ ಹಾಕಿಕೊಂಡರೇ? ಇಲ್ಲ! ಇಲ್ಲ! ಇಲ್ಲ!

\+ × × × × × ×

ಎಲ್ಲಾ ಬಾಯಿ ಬಡಾಯಿ ಸ್ವಾಮಿ, ಬಾಯಿಬಡಾಯಿ! "ಹರಿಜನರನ್ನುದ್ಧರಿಸಬೇಕು" ಎಂದು ದೊಡ್ಡ ಕುಂಬಳಕಾಯಿ ಅಕ್ಷರದಿಂದ ಬರೆಯುವ ಪತ್ರಿಕೆಗಳೂ ಇವೆ ದೂರವಕ್ತರದು ಹಲ್ಲುಗಳನ್ನು ತೋರಿಸಿ ಗುಡಾಣದಂತೆ ಬಾಯ್ತೆರೆದು ಬೊಬ್ಬಿಡುವವರೂ ನಮ್ಮಲ್ಲಿ ಇದ್ದಾರೆ ಅದರ ಕಾರ್ಯತಃ ಸಕಲಂ ನಾಸ್ತಿ!

× × × × + + ×

ಕನ್ನಡಿಗರು ಅಂಕುಬುರುಕರಲ್ಲವಂತೆ! ಆದರೆ ದಕ್ಷಿಣ ಕನ್ನಡಿಗರು ಅದಕ್ಕೆ ತೀರ ವಿರೋಧ! ಇಲ್ಲದಿದ್ದರೆ ಇದೇ ದಕ್ಷಿಣ ಕನ್ನಡದಲ್ಲಿ ಒಂದು ದೇವಸ್ಥಾನವಾದರೂ ಹರಿಜನರಿಗಾಗಿ ತೆರೆಯಲ್ಪಡಲಿಲ್ಲ— ಏಕೆ?

× × × ×

ನಮ್ಮಲ್ಲಿ ಇಮಿಟೇಶನ್ ಜಾಸ್ತಿ! ಒಬ್ಬನು ಮಾಡಿದಂತೆ ನಾವು ಮಾಡುವುದು. ಒಬ್ಬನು ಮಾಡಿದ ಮೇಲೆ ನಾವು ಮಾಡುತ್ತೇವೆನ್ನುವ ಈ ರೂಢಿ ದ. ಕ. ದ ನಮ್ಮಲ್ಲಿ ಕಡಿಮೆಯಾಗಿಲ್ಲ!

× × + ×

ಆ ಮುದಿ ಗಾಂಧಿಯವರು ದಕ್ಷಿಣ ಪ್ರಾಂತ್ಯದವರು ದೇವಸ್ಥಾನಗಳ ಬಾಗಿಲನ್ನು ತೆರೆಯಬೇಕೆಂದು ಒಂದು ಸ್ಪೆಶಲ್ ಮನವಿಯನ್ನು ಎರಡು ಮೂರು ತಿಂಗಳ ಹಿಂದೆ ಬರೆದುಕೊಂಡರು. ಅದು ದಕ್ಷಿಣದವರಿಗೆ ಅರಣ್ಯರೋಧನವಾಯಿತು

× + × ×

ಇದಕ್ಕೆಲ್ಲಾ ಕಾರಣವೇನು? ಹೇಳುತ್ತೇನೆ ಕೇಳಿ ನಮ್ಮಲ್ಲಿ (Hero worship) ವೀರರ ಮೇಲಿನ ಭಕ್ತಿಯಿಲ್ಲ ನಮಗೆ ವೀರರಿಲ್ಲ!

× + + ×

ನಮ್ಮಲ್ಲಿ ಶ್ರೀ ರಾಜಗೋಪಾಲಾಚಾರ್ಯರಂತಹ ಪ್ರತಿಭಾಸಂಪನ್ನ ವ್ಯಕ್ತಿಯ ಅಭಾವವಿದೆ! ಮಾಲವೀಯರವರಂತಹರು ಇಲ್ಲ ಗಾಂಧಿಜೀಯವರಂತಹರು ಕಾಣೆ! ಅಂದರೆ ನಮಗೆ ಮುಖಂಡರಿಲ್ಲ! ಎಲ್ಲಾ ತುಂಡು ತುಂಡು ಮುಖಂಡರು ಇವರೊಳಗೂ ಮು+ಖಂಡ - ಮೂರು ಖಂಡ!

× × × ×

ನಮ್ಮಲ್ಲಿ ಜಾತಿಭೇದ ಬಹಳ ಏಕ ಭಾಷೆಯಿಲ್ಲ ಒಬ್ಬನು ಕಹಲ್ ಎಂದರೆ ಇನ್ನೊಬ್ಬನು ಇಹಳ್ ಎನ್ನುತ್ತಾನೆ; ಒಬ್ಬನು ದಾನೆ ಎಂದರೆ, ಇನ್ನೊಬ್ಬನು ಏನು ಎನ್ನುತ್ತಾನೆ ಒಬ್ಬನು ಎಂಡೆ ಎಂದರೆ, ಇನ್ನೊಬ್ಬನು ಕ್ಯಾ ಅನ್ನುತ್ತಾನೆ ಭಾಷೆಯ ಬಲವಿಲ್ಲ ಒಗ್ಗಟ್ಟು ಸತ್ವವಿಲ್ಲ

× × × ×

ಹೀಗಾಗಿ ದಕ್ಷಿಣ ಕನ್ನಡದವರು ಹಿಂದೆ! ಎಲ್ಲರಿಗಿಂತಲೂ ಹಿಂದೆ! ಸಾವಿರ ಮೈಲು ಹಿಂದೆ! ನಾವು ಉನ್ನತಿ ಹೊಂದಬೇಕೆಂದಾದರೆ ನಮ್ಮ ಹೃದಯವನ್ನು ಕದ್ದುಕೊಳ್ಳುವ ಮಹಾವ್ಯಕ್ತಿ ಉತ್ಪತ್ತಿಯು ಜನನವಾಗಬೇಕಾಗಿದೆ! ಅವನು ನಮ್ಮೆಲ್ಲರನ್ನು ಜಾತಿಮತ ಭೇದವಿಲ್ಲದೆ ಮುನ್ನಡೆಸಬೇಕಾಗಿದೆ

× × × ×

ಸಂಯುಕ್ತಪ್ರಾಂತ್ಯವು ಎದ್ದುಕೊಂಡಿತು ಏಕೆ? ಮೋತಿಲಾಲ, ಜವಾಹರಲಾಲ ಮಾಲವೀಯರಿದ್ದರು! ಪಂಜಾಬ ಪ್ರಾಂತ್ಯವೆದ್ದಿತು! ಏಕೆ ಕೇಸರಿ ಲಾಲಾ ಲಜಪತರಾಯರಿದ್ದರು! ಮುಂಬಯಿ ಪ್ರಾಂತ್ಯವೆದ್ದಿತು. ದಾಧಾಬಾಯಿ ನೌರೋಜಿ ಮೊದಲಾದ ಅನೇಕರಿದ್ದರು ಆಂಧ್ರವು ಎದ್ದುಕೊಂಡಿತು ಹೇಗೆ? ರಾಜಗೋಪಾಲಾಚಾರ್ಯರು ಎದ್ದರು! ಬಂಗಾಳವೆದ್ದಿತು ಹೇಗೆ! ಸಿ ಆರ್ ದಾಸ್, ಸುಭಾಷರಿದ್ದರು ನಾವು ಬಿದ್ದೆವು! ಹೇಗೆ?—ಮೂಗು ಮುಸುಡು ಒಡೆದು ನೆಲಕ್ಕಪ್ಪಳಿಸಿ!

× × × ×

ಆದುದರಿಂದ ಈಗ ನಡೆಯುತ್ತಿರುವುದೆಲ್ಲ ಬರಿದು ಬಡಾಯಿ! ಇಮಿಟೇಶನ್! ಅನುಕರಣೆ! ಪ್ರತಿಬಿಂಬ! ಇದರಿಂದ ಫಲವಿಲ್ಲ, ಬೆಲೆಯಿಲ್ಲ, ಶಕ್ತಿಯಿಲ್ಲ, ಜಯವಿಲ್ಲ, ಗೊತ್ತಾಯಿತೇ? ನನ್ನಂತಹ (ಸ್ವಾಬ) ಒಬ್ಬ ಮಹಾ ಪ್ರತಿಭಾಶಾಲಿ ಎಳೆದು! ನೋಡಿ, ದಕ್ಷಿಣ ಕನ್ನಡವು ಬುಬುಗೊಳ್ಳುವುದು

× × + ×

ದಕ್ಷಿಣ ಕನ್ನಡದಲ್ಲಿ ಕೆಲವರೇನೋ ಮುಖಂಡರಿರುವರು. ಆದರೆ ಫಲವಿಲ್ಲ ವಿದ್ಯಾವಂತನೂ, ಐಶ್ವರ್ಯವಂತನೂ, ಸರ್ವತ್ಯಾಗಿಯೂ ಆದವನು—ದೇಶೋದ್ಧಾರಕನನ್ನೇ ಮುಂದಿಟ್ಟು ಯತ್ನಿಸುವ ವ್ಯಕ್ತಿಗಳು ನಮ್ಮಲ್ಲಿ ಕಾಣೆ!

'ಸ್ವಾಬ'

\+ + + +

ವರಂತೆ. ಶ್ರೀ ಕೃಷ್ಣಯ್ಯಗೌಡರು ಬಾಲ್ಯದಿಂದಲೂ ಸ್ವಾವಲಂಬನ ದೀರ್ಘ ಪರಿಶ್ರಮಗಳಿಂದ ಸಿಕ್ತಾರ್ಜಿತವಾದ ಅಲ್ಪ ಆಸ್ತಿಯನ್ನೇ ಇಷ್ಟು ಅಪಾರವಾಗಿ ಮಾಡಿದ್ದಾರೆ ಅವರು ನೆರವಾಗದ ಸಾರ್ವಜನಿಕ ಕಾರ್ಯಗಳೇ ಇಲ್ಲ ಆ ಭಾಗದಲ್ಲಿ ಅವರಿಗೀಗ ೬೫ ವರ್ಷಗಳ ಅಪರ ವಯಸ್ಸು. (ದೇವರು ಅವರಿಗೆ ಸಂಪೂರ್ಣ ನೂರು ವರ್ಷಗಳನ್ನು ಕೊಡಲಿ)—ಅವರು ಜೈನ ಸಂಪ್ರದಾಯದವರಾದ್ದರಿಂದ ತಾವು ವಾಸವಾಗಿರುವ ಪುಲಿಯೂರ ಬೆಟ್ಟದಲ್ಲಿ ಪೂರ್ವದ ಬಸ್ತಿಯೊಂದು ಇದ್ದ ಸ್ಥಳದಲ್ಲೇ ನೂತನವಾದ ಅನಂತ ತೀರ್ಥಂಕರರ ಬಿಂಬ ಪ್ರತಿಷ್ಠೆಯನ್ನು ಮೊನ್ನೆ ಮೊನ್ನೆ ಮಾಡಿಸಿದರು ಜನವರಿ ೨೮ರಿಂದ ೧೫ ದಿನಗಳ ವರೆಗೂ ಈ ಸಂಬಂಧವಾದ ಪಂಚ ಕಲ್ಯಾಣ ಮಹೋತ್ಸವವು ಬಹು ವಿಜೃಂಭಣೆಯಿಂದ ಸಾಂಗವಾಯಿತು

ಜೈನಧರ್ಮ ಬಂಧುಗಳಲ್ಲಿ ನವ ಚೈತನ್ಯವನ್ನೂ ಈಗ ೨೫ ವರ್ಷಗಳಿಂದಲೂ ತುಂಬುತ್ತ ಬಂದಂಥವರೂ ಮೂಲಕ ದಕ್ಷಿಣ ಕನ್ನಡಿಗರೂ ಆದ ಸದ್ಯದ ಶ್ರವಣ ಬೆಳ್ಗೊಳದ ಸ್ವಸ್ತಿ ಶ್ರೀ ಚಾರು ಕೀರ್ತಿ ಮಹಾಸ್ವಾಮಿಗಳವರು ವೈನಾಡಿಗೆ ಬಂದದ್ದರಿಂದಂತೂ ಅದೊಂದು ವಿಶಿಷ್ಟ ಶೋಭೆಯುಂಟಾಗಿತ್ತು ಸಕಲ ಧರ್ಮೀಯರೂ ಆಧುನಿಕರೂ ತಲೆದೂಗುವಂತಹ ವಾಗ್ಮಿತೆಯುಳ್ಳ ಸ್ವಾಮಿಜಿಯವರು ತಮ್ಮ ಶುದ್ಧ ಕನ್ನಡದ ನಿರರ್ಗಳ ವಾಣಿಯಿಂದ ೧೫ ದಿನಗಳ ವರೆಗೆ ದಿನಾಲು ಧರ್ಮ ಪ್ರವಚನಗಳನ್ನು ಮಾಡಿದರು ಮೈಸೂರು ಸೀಮೆಯಿಂದಲೂ ಕ್ಷಿಣ ಕನ್ನಡ ಜಿಲ್ಲೆಯಿಂದಲೂ ಸುಮಾರು ೧೫೦೦ರ ಮೇಲೆ ಜೈನರ ಮಹಾಜನರು ಬಂದಿದ್ದು ೨೦೦೦ದ ವರೆಗೂ ಜನಸಮುದಾಯವು ಇವರೆಲ್ಲರಿಗೂ ೧೫ ದಿನಗಳ ವರೆಗೂ ಊಟ ಉಪಚಾರ ವಸತಿಗಳ ಏರ್ಪಾಡು ಮಾಡಿ ಕಾಡಿನಲ್ಲೇ ಒಂದು ನಾಡನ್ನು ಕೃಷ್ಣಯ್ಯಗೌಡರ ಪರಿವಾರದವರು ರಚಿಸಿದ್ದರು ದೇವಾಲಯದ ಜೊತೆಗೆ ಕನ್ನಡ ವಿದ್ಯಾರ್ಥಿಗಳ ಪಾಠಶಾಲೆಯೂ ವಸತಿ ಗೃಹವು ಸ್ಥಾಪನೆಯಾದ ಸಂಗತಿಯೇ ಜಯ ಕರ್ನಾಟಕದ ಪ್ರತಿನಿಧಿಯಾದ ನನ್ನನ್ನು ಅಲ್ಲಿಗೆ ಎಳದೊಯ್ದಿತು ದಕ್ಷಿಣ ಕನ್ನಡಿಗರೂ ವೈನಾಡಿನ ರಾಷ್ಟ್ರೀಯ ಕಾರ್ಯಕರ್ತರೂ ಮೊನ್ನಿನ ಗುರುವಾಯೂರು ಪ್ರಜಾಭಿಪ್ರಾಯ ಸಂಕಲನ ಕಾರ್ಯ (ರೆಫರೆಂಡಂ ವರ್ಕ್)ದಲ್ಲಿ ವಿಶೇಷವಾಗಿ ದುಡಿದ ಕನ್ನಡಿಗರಲ್ಲೊಬ್ಬರೂ ಆಗಿದ್ದು ಕೃಷ್ಣಯ್ಯಗೌಡರ ಆಪ್ತಾಲೋಚಕರಲ್ಲೊಬ್ಬರಾದ ಶ್ರೀ ಕೆ ಕೃಷ್ಣ ಭಟ್ಟರ ಸ್ನೇಹವು ಕೊಡಗಿನಲ್ಲುಂಟಾದುದೂ ವೈನಾಡಿನ ಕನ್ನಡಿಗರನ್ನು ಕಂಡು ಬರಲಿಕ್ಕೆ ನನಗೆ ಉತ್ಸಾಹವನ್ನು ಕೊಟ್ಟಿತು ಶ್ರೀ ಕೃಷ್ಣ ಭಟ್ಟರು ಈ ಪಂಚಕಲ್ಯಾಣದುತ್ಸವದಲ್ಲಿ ಕೊಡಗು ವೈನಾಡ ಕಲ್ಲಿಕೋಟೆಗಳಿಂದ ಬಂದ ತಮ್ಮ ಸ್ವಯಂಸೇವಕರೊಡನೆ ಬಂದವರ ಆದರಾತಿಥ್ಯವನ್ನು ಮಾಡಿದುದು ಅವರ ಸಮಾಜ ಸೇವಾ ತತ್ಪರತೆಗೆ ಸ್ವಾಭಾವಿಕವಾದುದು

ಈ ಕಾಲಕ್ಕೆ ಮೈಸೂರು ಜೈನಸಂಘದವರು ಜೈನಪರಿಷತ್ತನ್ನೊಂದನ್ನು ಕೂಡಿಸಿದುದು ಕಾಲೋಚಿತವಾಗಿತ್ತು ನಮ್ಮ ಬೆಳಗಾಂವಿಯ ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯವರೊಡನೆ ಹೆಚ್ಚು ತೀವ್ರವಾಗಿ ಇವರು ಸಹಕರಿಸಿ ಅವರ ಆ ಅಸಡ್ಡೆ ಹೆಸರನ್ನು ತಲೆದೂಗಿಸಿ ಅಖಿಲ ಕರ್ನಾಟಕಕ್ಕೊಂದು ಸಾಮಾನ್ಯವಾದ ಜೈನ ಮಹಾಸಭೆಯನ್ನು ಏರ್ಪಡಿಸಿದರೆ ಬಹಳ ಚೆನ್ನಾಗುವುದು ಮೈಸೂರು ಜೈನ ಸಂಘದವರು ದಕ್ಷಿಣದ ಜೈನರೊಂದಿಗೆ ಆಸ್ಥೆಯಿಂದ ಸಹಕರಿಸುವಂತೆ ಉತ್ತರ ಕರ್ನಾಟಕದವರನ್ನೂ ತಮ್ಮೊಟ್ಟಿಗೆ ಕೂಡಿಸಿಕೊಳ್ಳುವದು ಕ್ರಮಪ್ರಾಪ್ತವಾಗಿರುವದು ಕರ್ನಾಟಕಕ್ಕೆ ಜೈನ ಮಹಾಜನಗಳು ಹಿಂದೆ ಮಾಡಿದ ಉಪಕಾರದಂತೆ ಈಗಿನ ಏಕೀಕರಣದ ಕಾರ್ಯದಲ್ಲಿ ಅವರಿಂದಲೂ ಬಹಳ ಕೆಲಸವಾಗಬೇಕಾಗಿದೆ ಅದರಲಿ ತಮ್ಮ ಉತ್ಸವದಲ್ಲಿ ತಮ್ಮ ಧರ್ಮಬಂಧುವಿನಂತೆ ನನಗೂ ಭಾಗವಹಿಸಲು ಎಲ್ಲ ಅನುಕೂಲತೆಗಳನ್ನೊದಗಿಸಿ ಕೊಟ್ಟು ಕನ್ನಡ ಸಾಹಿತ್ಯ-ಕರ್ನಾಟಕ ಏಕೀಕರಣಗಳ ವಿಷಯವಾಗಿ ನನಗೆ ಮಾತನಾಡಲು ಅವಕಾಶಕೊಟ್ಟ ಕೃಷ್ಣಯ್ಯಗೌಡರ ಮುಖ್ಯರಾದ ಶ್ರೀ ಸುಬ್ಬಯ್ಯಗೌಡರೇ ಮೊದಲಾದವರಿಗೆ ನಾನು ಬಹು ಉಪಕೃತನಾಗಿದ್ದೇನೆ

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಶ್ರೀ ಕೃಷ್ಣಯ್ಯ ಗೌಡರು ಮಾಡಿದ ಮಹಾದಾನದ ಸಂಗತಿಯೊಂದನ್ನು ಉಲ್ಲೇಖಿಸಬೇಕಾಗಿದೆ ಸಂಸ್ಕೃತದಲ್ಲಿದ್ದ ಪೂರ್ವ ಪುರಾಣ ಮಹಾಗ್ರಂಥವನ್ನು ಆಮೂಲಾಗ್ರವಾಗಿ ಶ್ರೀ ಎ ಶಾಂತಿರಾಜ ಶಾಸ್ತ್ರಿಗಳು (ಮೈಸೂರ ಅರಮನೆಯ ವಿದ್ವಾಂಸರು) ಇವರಿಂದ ಕನ್ನಡಿಸಿ ರೊಯಲ್ ಆಕಾರದ ೧೫೦೦ ಪುಟಗಳು ಮಿಕ್ಕಿರುವ ಕನ್ನಡ ಗ್ರಂಥವೊಂದು ೬-೭ ಸಾವಿರ ರೂಪಾಯಿ ವೆಚ್ಚಮಾಡಿ ಮುದ್ರಿಸಿ ಪ್ರಕಾಶ ಮಾಡಿದ ಸಂಗತಿಯು ಮಹತ್ತದ್ದಾಗಿದೆ ಸಂಸ್ಕೃತ ಗ್ರಂಥಕರ್ತರಾದ ಭಗವಜ್ಜಿನ ಸೇನಾಚಾರ್ಯರೂ ಕರ್ನಾಟಕ ಸಾಮ್ರಾಟನಾದ ರಾಷ್ಟ್ರಕೂಟ ರಾಜನ ಆಸ್ಥಾನಕ್ಕೆ ಸೇರಿದವರೆಂದ ಮೇಲೆ ಈ ಗ್ರಂಥವು ಕನ್ನಡದಲ್ಲಿ ಸಂಪೂರ್ಣವಾಗಿ ಪ್ರಕಟವಾದುದನ್ನು ನೋಡಿ ಸಕಲ ಕರ್ನಾಟಕ ಸಾಹಿತಿಗಳೂ ಶ್ರೀ ಕೃಷ್ಣಯ್ಯ ಗೌಡರನ್ನು ಅಭಿನಂದಿಸಬೇಕಾಗಿದೆ ಉತ್ತರ ಪುರಾಣವನ್ನೂ ಅವರು ಅಚ್ಚುಗೊಳಿಸುವವರಿರುವರೆಂಬುದೂ ಸಂತೋಷದ ವಿಷಯವು ಅಷ್ಟರಲ್ಲಿ ಕನ್ನಡಿಗರು ೧೨ ರೂ ಬೆಲೆ ಮಾತ್ರವಿದ್ದರೂ ಬೆಲೆ ಮೀರಿದ ಈ ಪುಸ್ತಕವನ್ನು ಬೇಗನ ತರಿಸಿ ಓದಲಿ ಕೃಷ್ಣಯ್ಯ ಗೌಡರು ಸುಮಾರು ೧ ಲಕ್ಷ ರೂ ವೆಚ್ಚಮಾಡಿ ಕಟ್ಟಿಸಿದ ಚೈತ್ಯಾಲಯವು ಸಕಲರಲ್ಲಿ ಚೈತನ್ಯವನ್ನು ಟಮಾಡಲಿ ಅವರ ಸ್ಥಾಪಿಸಿದ ಕರ್ನಾಟಕ ಜೈನ ಪಾಠಶಾಲೆಯು ವಿದಿಗೆಯ ಚಂದ್ರನಂತೆ ಬೆಳೆದು ವೈನಾಡಿನಲ್ಲಿ ಜೈನ ಧರ್ಮಾಭಿಮಾನದೊಡನೆ ಕರ್ನಾಟಕ ಸಂಸ್ಕೃತಿಯ ಅಭಿಮಾನವೂ ಹೆಚ್ಚುಹೆಚ್ಚಾಗಿವೆಂದು ನಾವೆಲ್ಲರು ಹಾರೈಸೋಣ ಕರ್ನಾಟಕದ ಉಳಿದ ಭಾಗದವರೂ ತಮ್ಮ ಈ ನೈಋತ್ಯ ದಿಗ್ಭಾಗದವರನ್ನು ದೂರೀಕರಿಸದ ಅವರ ಯೋಗಕ್ಷೇಮವನ್ನು ವಹಿಸುತ್ತಾ ಅವರ ಕಾರ್ಯಗಳಲ್ಲಿ ನೆರವಾಗುವುದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ ಕನ್ನಡ ನಾಡಿನ ನೈಋತ್ಯ ದೀಪವಾಲಯದಲ್ಲಿ ಬೆಳಗುತ್ತಿದ್ದ ಒಂದು ಕನ್ನಡ ನಂದಾದೀಪವನ್ನಾದರೂ ಕನ್ನಡಿಗರು ಜಾಗರೂಕತೆಯಿಂದ ಬೆಳಗಿಸುತ್ತ ಅದನ್ನು ಉಳಿಸಿಕೊಳ್ಳಬೇಕೆಂಬುದೇ ಈ ಚಿಕ್ಕ ಲೇಖನದ ಮಹತ್ತ ಕಾಂಕ್ಷೆಯಾಗಿದೆ

ಹೀಗೆ ವೈನಾಡುಗಳ ನೈಋತ್ಯದ ಪ್ರವಾಸ ಮುಗಿಸಿ ಕರ್ನಾಟಕದ ಪಡುವಲ ಕಡಲನಾಡಾದ ದಕ್ಷಿಣ ಕನ್ನಡಕ್ಕೆ ಬಂದಿರುವೆ ಕನ್ನಡ ಕಡಲನ್ನು ಕಂಡು ಚಿತ್ತದಲ್ಲಿ ನವೀನ ಭಾವನಾತರಂಗಗಳೇಳುತ್ತಿರುವವು

'ಶಾಶ್ವತ ಕನ್ನಡ ಕಡಲಿನ ನಾವಿಕರೇ ಓಂ ನಮೋ ನಮೋ
ವಿಶ್ವಪ್ರೇಮದ ಹೊಸ ಹೊಸ ಹಾಡಿನ ಭಾವಿಕರೇ ಓಂ ನಮೋ ನಮೋ'

ಎಂದು ಇಲ್ಲಿಯ ಕನ್ನಡಿಗರೆಲ್ಲರಿಗೂ ಪ್ರಾರಂಭದ ವಂದನಗಳನ್ನರ್ಪಿಸುತ್ತಿರುವೆನು

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ಸಾಹಿತ್ಯ ಸ್ವದೇಶಾಭಿಮಾನಿ ಸಂಚಿಕೆ.

ಸಂಪುಟ ೨ ಫೆಬ್ರವರಿ ೨೪—೨—೧೯೩೯. ಸಂಚಿಕೆ ೧

— ಅನುಕ್ರಮಣಿಕೆ —


| | ಪುಟ |
|---|---|
| ವಿಮರ್ಶೆ ವಾದ | ೧ |
| ಸಣ್ಣ ಕತೆಗಳು | ೨ |
| ಪತ್ರಿಕಾ ಪ್ರಪಂಚ | ೩ |
| ಹರಿಜನ ಬಂಧು | |
| ಆಗದೆ? | ೪ |
| ಶ್ರೀ ಟಿ. ಪಿ. ಕೈಲಾಸಂ | ೫ |
| ಮಾರುತ | ೬ |
| ವೈನಾಡುಗಳ ಕನ್ನಡಿಗರು | [illegible] |


ಫೆಬ್ರವರಿ ತಾರೀಕು ೨೪ನೇ ಶುಕ್ರವಾರ ೧೯೩೯.

# ವಿಮರ್ಶೆ, ವಾದ.

ಯಾವುದೊಂದು ಕಾರ್ಯ ಮಾಡುವುದರಲ್ಲಿ ಕಾರ್ಯವನ್ನು ಕೈಕೊಂಡವನಾಗಲಿ, ಸಂಗಾತಿಗಳಾಗಲಿ ಆಗಾಗ್ಗ ತಮ್ಮ ಕೆಲಸವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರೀಕ್ಷಿಸಬೇಕಾಗಿದೆ ಸಾಹಿತ್ಯದ ಪ್ರಗತಿಯಲ್ಲಿಯೂ ಸಹ ವಿಮರ್ಶಕರು ಅತಿ ಸಮೀಪದಲ್ಲೆ ಇರಬೇಕು ವಿಮರ್ಶೆಯು ಅಡಗಿ ಎಂದು ಅಂಧಶ್ರದ್ಧೆಯು ಆರಂಭವಾಗುತ್ತದೆ ಅಂದೆ ಅಳಿಗಾಲದ ಪ್ರಾರಂಭವಾಯಿತೆಂದು ಹೇಳಬಹುದು ಹೀಗಿರುವಾಗ ಸಾಹಿತಿಗಳು ತಮ್ಮ ಗ್ರಂಥಗಳನ್ನು ಇತರರು ನಿಂದಿಸಿದರೆಂದಾಗಲಿ ಅವುಗಳಲ್ಲಿನ ಹುಳುಕುಗಳನ್ನ ಎತ್ತಿದರೆಂದಾಗಲಿ ರೇಗವುದು ಸರಿಯಲ್ಲ ನಮ್ಮ ಗ್ರಂಥಗಳು ಪ್ರಕಟವಾಗುವ ವರೆಗೆ ಅವು ನಮ್ಮದು, ಅನಂತರ ಅವು ಬಹು ಜನರ ಕೈವಶವಾಗಿ ಸಮಾಜಕ್ಕೆ ಅದರ ಮೇಲೆ ಒಂದು ರೀತಿಯ ಅಧಿಕಾರವು ಹುಟ್ಟುತ್ತದೆ ಅದನ್ನು ಹೊಗಳಬೇಕೆ, ತೆಗಳಬೇಕೆ ಎಂದು ಹೇಳುವುದು ಗ್ರಂಥಕಾರರ ಕೆಲಸವಲ್ಲ ವಿಮರ್ಶೆಯು ಅತಿ ಸಂಕುಚಿತವಾದರೂ 'ನಿಂದಕಾಚೆಂ ಘರ ಅಸಾವೆಂ ಶೇಜಾರಿ' ಎಂಬ ಮರಾಠಿ ಗಾದೆಯನ್ನನುಸರಿಸಿ, ನಿಂದೆಯೂ ಅಗತ್ಯವೆಂದು ಸುಮ್ಮನಿರಬೇಕು

ಇಂಗ್ಲಿಷಿನಲ್ಲಿ ಫೌಲರ್ ಎಂಬವರು Modern English Usage ಎಂಬ ಪುಸ್ತಕ ಬರೆಯುವಾಗ, ಇಂಗ್ಲಿಷಿನಲ್ಲಿರುವ ರೂಢಿಯು ಏತು ಅದನ್ನು ಮೀರಿದ ಉದಾಹರಣೆಗಳು ಯಾವುವೆಂದು ವಿವರಿಸುವಲ್ಲಿ ಟ್ಯಾಮ್ಸ್, ಡೈಲಿಮೈಲ್, ಮೊದಲಾದ ಪ್ರಸಿದ್ಧ ಪತ್ರಿಕೆಗಳ ಮತ್ತು ಹೆಸರುವಾಸಿಯಾದ ಗ್ರಂಥಕರ್ತರ ಪುಸ್ತಕಗಳಿಂದ ಅನೇಕ ಉದಾಹರಣೆಗಳನ್ನು ಎತ್ತಿ ಬರೆದಿದ್ದಾರೆ ಹಾಗೆಂದು ಆ ಪತ್ರಿಕೆಗಳಾಗಲಿ, ಮಹನೀಯರಾಗಲಿ ಫೌಲರರ ಮೇಲೆ ಸಿಟ್ಟಾಗದೆ ಅವರ ಪುಸ್ತಕವನ್ನು ಪ್ರತಿಯೊಬ್ಬ ಸಾಹಿತಿಯು ಮನಗೊಟ್ಟು ಓದಬೇಕೆಂದು ಹೊಗಳಿದ್ದಾರೆ ಈ ಪಂಥವನ್ನೇ ನಮ್ಮ ಸಾಹಿತಿಗಳು ಅನುಕರಿಸುವುದು ಬಹು ಲೇಸು

ವಿಮರ್ಶಕರು ಸಹ ತಮ್ಮ ಕೆಲಸವನ್ನು ಯೋಗ್ಯ ರೀತಿಯಿಂದ ನಡೆಸಿದರೆ ಮಾತ್ರ ಜನರಿಗೆ ಅವರ ವಿಮರ್ಶೆಯ ಮೇಲೆ ಭರವಸೆಯುಂಟಾಗಿ ಅವರು ತೋರಿಸಿದ ಮಾರ್ಗವನ್ನು ಬಹುಜನರು ಅನುಸರಿಸುವರು ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶಕರಿಗೆ ನಿರಂಕುಶ ಪ್ರಭುತ್ವವುಳ್ಳವರು ಎಂದು ಎಣಿಸದೆ ತಮ್ಮ ಸ್ವಂತ ರುಚಿ, ಅರುಚಿಗಳನ್ನು ಬದಿಗೊತ್ತಿ ಗ್ರಂಥಕರ್ತನ ಉದ್ದೇಶವೇನು? ಅದನ್ನು ಅವನು ಹೇಗೆ ಪೂರೈಸಿದ್ದಾನೆ? ಎಂದು ನಿಷ್ಪಕ್ಷಪಾತ ದೃಷ್ಟಿಯಿಂದ ಪರೀಕ್ಷಿಸುವುದೆ ಅವರ ಕರ್ತವ್ಯ ದೋಷಗಳಿಲ್ಲದ ವಸ್ತುವು ಸಂಸಾರದಲ್ಲಿಲ್ಲ ಅದಕ್ಕಾಗಿ ಪುಸ್ತಕದ ಗುಣದೋಷಗಳನ್ನು ತುಲನಮಾಡಿ ನೋಡಿ ದೋಷಗಳು ಅತಿರೇಕವೆಂದು ಖಚಿತವಾದ ವಿನಹ ಪುಸ್ತಕಕ್ಕೆ ಬಹಿಷ್ಕಾರ ಕೊಡುವುದು ತಪ್ಪು

## ಜನಪದ ಸಾಹಿತ್ಯ.

ಸ್ವದೇಶಾಭಿಮಾನಿಯ ಸಾಹಿತ್ಯ ಸಂಚಿಕೆಯು ತನ್ನ ಕಿರಿಯ ವರ್ಷದಲ್ಲಿಯೂ ಕನ್ನಡ ನುಡಿಯ ಸೇವೆಯನ್ನು ಮಾಡಬೇಕೆಂದು ಮುಂದುವರಿಯುತ್ತಿದೆ ಇದರಲ್ಲಿದ್ದ ನಾಲ್ಕು ಪುಟಗಳಲ್ಲಿ ಸಾಹಿತಿಗಳು ಜನರಿಗೆ ಎಲ್ಲಾ ತರದ ಭಾವನೆಗಳಿದ್ದವರಿಗೆ, ಓದಲಾಗುವ್ಯಾವ ಕೃತಿಗಳನ್ನು ಕೊಡಬೇಕೆಂದು ನಾವು ಪ್ರಯತ್ನಿಸಲಿದ್ದೇವೆ, ವಿವಿಧ ಉದ್ಧೃತ ವಿಷಯಗಳನ್ನೂ ಪ್ರಕಟಿಸಿದ್ದೇವೆ ನಮ್ಮ ಜಿಲ್ಲೆಯ ಕೃಷಿಗಳನ್ನು ಕೋಲಂಕರು ಹಾಡುತ್ತ ಹೋಗುವ ಪದ್ಯಗಳನ್ನೂ, ಮತ್ತು ಹಳ್ಳಿ ಬೇಕಾಗುವ ಕೋಲ, ಮೊದಲಾದ ಸಮಯದಲ್ಲಿ ಜನರು ಹೇಳುವ ಪದ್ಯಗಳನ್ನೂ ಶೇಖರಿಸಿ ನಮ್ಮ ಜಿಲ್ಲೆಯ ಹಳೆ ಹಾಡುಗಳನ್ನು ಈ ಸಂಚಿಕೆಗಳಲ್ಲಿ ಪ್ರಕಟಿಸಿ ಜನರ ಮುಂದೆ ಇಡಬೇಕೆಂದು ನಾವು ಎಣಿಸಿದ್ದೇವೆ ಈ ಕಾರ್ಯದಲ್ಲಿ ಹಳ್ಳಿಯ ಜನರು ನಮಗೆ ನೆರವಾಗಿ ತಮ್ಮ ಹಳ್ಳಿಗಳಲ್ಲಿರುವ ಇಂತಹ ಜನಪದ ಸಾಹಿತ್ಯದ ಗೀತೆಗಳನ್ನು ಶೇಖರಿಸಿ ತಮಗೆ ಕಳುಹಿಸಿ ನಮ್ಮೊಡನೆ ಸಹಕರಿಸುವರೆಂದು ಭಾವನೆ ವರ್ಷಗಳು ದಾಟಿದಷ್ಟಕ್ಕೆ ಅವುಗಳು ಕ್ಷೀಣವಾಗಿ ಹೋಗುವ ಸಂದರ್ಭಗಳಿರುವುವು ಹಾಗೆ ಅಳಿದು ಹೋದರೆ ಅದರಲ್ಲಿನ ನಮ್ಮ ಜನರ ಹಳೆ ಭಾವನೆಗಳೂ, ಉತ್ಸಾಹವೂ ಮಾಯವಾಗುತ್ತದೆ ಅದಕ್ಕಾಗಿಯೇ ನಾವು ಆ ಕಾರ್ಯವನ್ನು ಈಗಲೇ ಮಾಡಬೇಕು

# ಸಣ್ಣ ಕತೆಗಳು

ನಮ್ಮ ಪೂರ್ವಜರಿಂದ ಪರಂಪರಾಗತವಾಗಿ ನಮಗೆ ಅನೇಕ ಕತೆಗಳು ಬಂದಿವೆ. ಉಪನಿಷತ್ತುಗಳು, ಹಿತೋಪದೇಶ ಮತ್ತು ಪಂಚತಂತ್ರ ಇತ್ಯಾದಿ ಗ್ರಂಥಗಳು ಅನೇಕ ಚಿಕ್ಕ ಚಿಕ್ಕ ಕತೆಗಳ ಬೀಡಾಗಿವೆ. ಅವರು ಧಾರ್ಮಿಕ ಗ್ರಂಥಗಳ ಗಹನವಾದ ತತ್ವಗಳು ಜನಸಾಮಾನ್ಯರಿಗೆ ಸುಲಭವಾಗಿ ಗ್ರಾಹ್ಯವಾಗುವಂತೆ ಇವುಗಳನ್ನು ಬರೆದರು. ಇವುಗಳಿಂದ ಮನೋರಂಜಕತೆಯೂ, ತತ್ವಬೋಧೆಯೂ ಒಂದೇ ಸವನೆ ಆಗುತ್ತಿತ್ತು. ಆದರೆ ನಾವು ಈಗ ಕೇಳುತ್ತಿರುವ ಸಣ್ಣ ಕತೆಗಳೆಂಬುವು ಇವುಗಳಿಂದ [illegible] ಭಿನ್ನವಾಗಿವೆ. ಸಣ್ಣ ಕತೆಗಳು (short stories) [illegible] ಅಮೇರಿಕಾ ದೇಶಗಳಲ್ಲಿ ಜನ್ಮವೆತ್ತಿದವು. [illegible] ಅವುಗಳ ಪ್ರಾದು[illegible]ರ್ಭಾವವಾಯಿತು.

ಸಣ್ಣ ಕತೆಯೆಂಬುದು ಪಾರಿಭಾಷಿಕ ಶಬ್ದ. ಸಣ್ಣ ಕತೆಯು ವಿಸ್ತಾರವನ್ನು ಸೂಚಿಸುವುದಿಲ್ಲ; ಏಕೆಂದರೆ [illegible] 'ಕತೆಗಳು ನೂರು ನೂರೈವತ್ತು ಪುಟ[illegible]. 'ಕತೆಯೆಂದರೆ ನಾವು ತಿಳಿಯುವ ಕತೆ [illegible] ಅಥವಾ ಕಾಲ್ಪನಿಕ ಕತೆ, ಇವುಗಳು ಸಣ್ಣ [illegible]. ಏಕೆಂದರೆ ಕತೆಗಳಲ್ಲಿ ನಾವು ಯಾವನಾದರೂ [illegible] ಹುಟ್ಟಿನಿಂದ ಮರಣ ಪರ್ಯಂತ ವೃತ್ತಾಂತವನ್ನು ಕೇಳುತ್ತೇವೆ. [illegible] ಸಣ್ಣ ಕತೆಯು ಯಾವನಾದರೂ ಒಬ್ಬ ವ್ಯಕ್ತಿಯ ಇಡೀ ಜೀವನ[illegible] ಜೀವನದಲ್ಲಿನ ಮಹತ್ವಪೂರ್ಣವಾದ ಘಟನೆಯೊಂ[illegible] ಮಾತ್ರ ಅವಲಂಬಿಸಿಕೊಂಡಿರುತ್ತದೆ. ಕತೆಯಲ್ಲಿ ಪರಸ್ಪರ ನೆಟ್ಟಗೆ [illegible] ಅನೇಕ ಭಾಗಗಳಿರಬಹುದು. ರಾಮನ ಕತೆಯಲ್ಲಿ [illegible] ವಿಸ್ತಾರವಾದ ವೃತ್ತಾಂತವು ಉಲ್ಲೇಖಿಸಲ್ಪಡಬಹುದು. [illegible] ಕತೆಯು ಅಖಂಡವಾಗಿರಬೇಕು. ಬೇರೆ ಬೇರೆ ಅಂಗ[illegible]ಗಳಿಂದ ಚೆನ್ನಾಗಿ ಜೋಡಿಸಲ್ಪಟ್ಟು, ಓದುಗರ ಮನಸ್ಸಿನ [illegible] ಪರಿಣಾಮವನ್ನುಂಟು ಮಾಡಬೇಕು. ಕೊನೆಗೆ, [illegible] ಸಾಧಕನೋಸ್ಕರ ಅಸ್ವಾಭಾವಿಕವಾದ ಸನ್ನಿವೇಶಗಳು [illegible] ಕತೆಗಳಲ್ಲಿ ನಿಯೋಜಿಸಲ್ಪಡಬಹುದು. ಆದರೆ, [illegible] ಉದ್ದೇಶವು ಮುಂದಿಡಬಹುದಾದರೂ [illegible] ಒಂದಂಶವು ಸ್ವಾಭಾವಿಕವಾದ ರೀತಿಯಲ್ಲಿ ಪ್ರತಿ[illegible] ಕತೆಯು ಎಷ್ಟೇ ಮನೋರಂಜಕವಾಗಿರಲಿ, [illegible] ಕಲಾದೃಷ್ಟಿಯಿಂದ ಅದರ ಬೆಲೆಯು ಕಡಿಮೆ.

[illegible] ಸಣ್ಣ ಕತೆಯು ಸೂಕ್ಷ್ಮ ರೂಪದ ಕಾದಂಬರಿ [illegible]. ಆದರೆ ವಸ್ತುತಃ ಈ ಮತವು [illegible] ಕಾದಂಬರಿಯಲ್ಲಿ ಯಾವುದಾದರೂ ವಿಶೇಷ [illegible] ಅವುಗಳ ವಿಶದವಾದ ವಿವೇಚನೆ ಮಾಡಲ್ಪ[illegible] ಪಾತ್ರಗಳ ಜೀವನದ ಸಂಪೂರ್ಣ [illegible]. ಆದರೆ ಸಣ್ಣ ಕತೆಯಲ್ಲಿ ನಾವು ಕಾಣ[illegible] ಯಾವನಾದರೂ ವ್ಯಕ್ತಿಯ ಜೀವನದ ವಿಶೇಷ ಘಟನೆಯೊಂದೇ ಮುಖ್ಯವಾದ ವಿಷಯವು. ಕಾದಂಬರಿಯಲ್ಲಿ ಅವಕಾಶವು ತುಂಬಾ ಇದ್ದುದರಿಂದ ಪಾತ್ರಗಳ ವಿಸ್ತಾರವಾದ ಪರಿಚಯಕ್ಕೆ ಬೇಕಾದಷ್ಟು ಎಡೆ ಇದೆ. ಜೀವನದ ಘಟನೆಗಳನ್ನೆಲ್ಲಾ ಒಡಗೂಡಿಸುವುದು ಸುಲಭ. 'ಕತೆಗಾರನು ಈ ಘಟನೆಗಳಲ್ಲಿ ತನಗೆ ಬೇಕಾದುದನ್ನು ಅತ್ಯಂತ ವಿಚಕ್ಷಣತೆಯಿಂದ ಆರಿಸಿಕೊಳ್ಳಬೇಕು. ಅವನ ಕಾರ್ಯಕ್ಷೇತ್ರವು ಬಹಳ ಸಂಕುಚಿತವಾಗಿದೆ. ಒಬ್ಬ ವ್ಯಕ್ತಿಯ ಜೀವನದ ವಿಶೇಷವಾದ ಒಂದು ಘಟನೆಯನ್ನು ಪ್ರತಿಬಿಂಬಿಸುವುದು. ಕಾದಂಬರಿ ಜೀವನದ ಸಂಪೂರ್ಣ ಚಿತ್ರವಾಗಿದೆ, ಸಣ್ಣ ಕತೆ ಜೀವನದ ಒಂದು ಚಿಕ್ಕ ಅಂಶದ ಪೂರ್ಣ ಚಿತ್ರ. ಈ ಕಾರಣದಿಂದ 'ಕತೆ'ಗಳಲ್ಲಿ ಜಟಿಲವಾದ ಕಥಾನಕಗಳನ್ನು ತರಲು ಸಾಧ್ಯವಿಲ್ಲ. ಸರಳವಾದ ಕಥಾನಕಗಳ ಉಪಯೋಗವನ್ನೇ ಮಾಡಬೇಕಾಗುತ್ತದೆ. ತಂತ್ರ ಚಿತ್ರಣದಲ್ಲಂತೂ ಕತೆಗಾರನು ತುಂಬಾ ಜಾಗರೂಕನಾಗಿರಬೇಕು. ಅತಿ ಮಾರ್ಮಿಕವಾದ ರೀತಿಯಲ್ಲಿ ಶಬ್ದಗಳನ್ನೂ, ವಿಷಯಗಳನ್ನೂ ಸಂಗ್ರಹಿಸಿ ತನ್ನ ಮನಸ್ಸಿನಲ್ಲಿದ್ದ ಉದ್ದೇಶವನ್ನು ಚೆನ್ನಾಗಿ ವ್ಯಕ್ತಪಡಿಸಬೇಕು.

ಸಣ್ಣ ಕತೆಯು ಕತೆಯೂ ಅಲ್ಲ, ಕಾದಂಬರಿಯೂ ಅಲ್ಲವಾದರೆ ಅದು ಬೇರಾವುದಿರಬಹುದು? ಚಿಕಾಗೊ (Chicago) ವಿಶ್ವವಿದ್ಯಾಲಯದ ಜೇಮ್ಸ್ ಡಬ್ಲ್ಯುವಿನ್‌ರವರು ಅದರ ಲಕ್ಷಣವನ್ನು ಈ ರೀತಿಯಲ್ಲಿ ಕೊಟ್ಟಿರುವರು:–

Short story 'is a representation, in a brief, dramatic form, of a turning point in the life of a single character'

ಸಣ್ಣ ಕತೆಯು ಸಂಕ್ಷೇಪವಾದ ರೀತಿಯಲ್ಲಿ ನಾಟಕೀಯರೀತ್ಯಾ ಅಭಿವ್ಯಕ್ತವಾದ ಯಾವನಾದರೂ ಒಬ್ಬ ವ್ಯಕ್ತಿಯ ಜೀವನದೊಳಗಣ ಮಹತ್ವಪೂರ್ಣವಾದ ಘಟನೆಯು.

ಈ ಲಕ್ಷಣದ ಕುರಿತು ತುಸು ವಿಚಾರಿಸೋಣ. ಸಣ್ಣ ಕತೆಯು ಒಬ್ಬ ವ್ಯಕ್ತಿಯ ಜೀವನಕ್ಕೆ ಸಂಬಂಧಪಟ್ಟದ್ದು. ಆದುದರಿಂದ ಹಲವು ವ್ಯಕ್ತಿಗಳ ಜೀವನವು ಅದರಲ್ಲಿ ಒಡಗೂಡಿರಬಾರದು. ಒಬ್ಬ ವ್ಯಕ್ತಿಯ ಜೀವನಕ್ಕೆ ಸಂಬಂಧ ಪಟ್ಟದಾದರೂ ಅವನ ಇಡೀ ಜೀವನಕ್ಕೆ—ಹುಟ್ಟಿನಿಂದ ಸಾವಿನ ತನಕ ಅಲ್ಲ. ಆ ಜೀವನದಲ್ಲಿರುವ ಮಹತ್ವ ಪೂರ್ಣವಾದ ಘಟನೆಯೊಂದನ್ನು ಆರಿಸಿ ಕತೆಗಾರನು ಚಮತ್ಕಾರವಾಗಿ ವರ್ಣಿಸುತ್ತಾನೆ. ಈ ವ್ಯಕ್ತಿಯು ಯಾರೀ ಆಗಿರಬಹುದು. ಕಾದಂಬರಿಗಳಲ್ಲಿ ಮತ್ತು ನಾಟಕಗಳಲ್ಲಿ ಚಿತ್ರಿಸಲ್ಪಟ್ಟ ನಾಯಕ ನಾಯಕಿಯರನ್ನು ಸಾಮಾನ್ಯ ಜೀವನದಲ್ಲಿ ಎದುರ್ಗೊಳ್ಳುವುದು ದುರ್ಲಭವೇ ಸರಿ. ನಮ್ಮ ಜೀವನವು ಇವುಗಳ ಕಥಾನಕವಾಗುವಷ್ಟು ಯೋಗ್ಯವಿಲ್ಲದಿರಬಹುದು. ಆದರೆ ನಮ್ಮ ಜೀವನದಲ್ಲಿ, ಏಕೆ ಕೊಳಕುಗಲ್ಲಿಗಳಲ್ಲಿ ವಾಸಮಾಡುವ ಕೂಲಿಗಾರರ ಜೀವನದಲ್ಲಿ ಕೂಡ, ಅತ್ಯಂತ ಸುಖ ಅಥವಾ ಅತ್ಯಂತ ದುಃಖವನ್ನು ಅನುಭವಿಸಿದ ಕೆಲವು ಕ್ಷಣಗಳು ಇರಬಹುದು. ಇಂತಹ ಅಲ್ಪ ಕ್ಷಣಗಳೇ ಸಣ್ಣ ಕತೆಯ ಕಥಾನಕವಾಗಬಲ್ಲವು. ಇಂಥಾ ಸನ್ನಿವೇಶಗಳನ್ನು ಸಂಕ್ಷೇಪವಾಗಿ ನಾಟಕರೀತ್ಯಾ ಚಿತ್ರಿಸಬೇಕು. ಸಂಕ್ಷೇಪವಾಗಿರಬೇಕು; ಏಕೆಂದರೆ ಕ್ಷೇತ್ರವು ಸಂಕುಚಿತವಾಗಿದೆ. ನಾಟಕಕಾರನು ವಿವಿಧ ಸನ್ನಿವೇಶಗಳನ್ನು ಕಲ್ಪಿಸಿ



# ಮಾ ರು ತ .

ನಲಿನಲಿದಾಡುತ,<br>
ಸುಳಿಸುಳಿದೋಡುತ,<br>
ಕಿಲಕಿಲ ನಗುತಲಿ ಬರುತಿಹನು,<br>
ದೇಹಕೆ ತ ಪನು ಕೊಡುತಿಹನು ॥ ೧ ॥

ಹಣ್ಣುಗಳನು ತಾ<br>
ತಿನ್ನದೆ ಉದುರಿಸಿ,<br>
ಕಣ್ಣಿಗೆ ಕಾಣದೆ ಓಡುವನು,<br>
ಸ ಮ್ ಸುಯ್ ಎನ್ನುತ ಪಾಡುವನು ॥ ೨ ॥

ಮುಟ್ಟಲಯೋಗ್ಯರ<br>
ಮುಟ್ಟುತ ತಾ ಬಲು<br>
ದಿಟ್ಟತನದಿ ಹಾರಾಡುವನು<br>
ದೇವಸ್ಥಾನದ ಹೊಗ್ಗುವನು ॥ ೩ ॥

ಹೊಲೆಯನು, ಬ್ರಾಹ್ಮಣ,<br>
ಮಲಿನವು, ಶುಚಿತನ,<br>
ಕೀಳ ಮೇಲೆನುವಾ ಭೇದವನು<br>
ಖಂಡಿಸಿ ಧರೆಯಲಿ ಮೆರೆಯುವನು ॥ ೪ ॥

ಕೊಂಬೆಯ ಕುಲುಕಿಸಿ<br>
ರೆಂಬೆಯನಲುಕಿಸಿ<br>
ಚುಂಬಿಸಿ ಪುಷ್ಪದ ಅಧರವನು<br>
ಅಂಬರದಲಿ ತಾನೋಡುವನು ॥ ೫ ॥

ಬಿ. ನರ್ಸಪ್ಪ, ಮಂಗಳೂರು.

# ವೈನಾಡುಗಳ ಕನ್ನಡಿಗರು •

(ಜಯಕರ್ನಾಟಕದ ಪ್ರತಿನಿಧಿಗಳಾದ ಶ್ರೀ ಪ್ರಹ್ಲಾದರು ಬರೆದುದು)

ಇಲ್ಲಿ ನಾನು ಕಂಡ ಕೆಲವು ಮಾತುಗಳನ್ನಿಷ್ಟೆ ಬರೆಯಬೇಕೆಂದು ಮಾಡಿರುವೆ. ಕೊಡಗನ್ನು ಕನ್ನಡಿಗರೆಲ್ಲರೂ ಕೇಳಬಲ್ಲರು 'ವೈನಾಡು' ಎಂದರೆಲ್ಲಿ ಎಂದು ಅನೇಕರು—ವಿಶೇಷವಾಗಿ ನಮ್ಮ ಧಾರವಾಡ ಪ್ರಾಂತ್ಯದ ಕನ್ನಡಿಗರು—ಕುತೂಹಲದಿಂದ ಕೇಳಬಹುದಾಗಿದೆ. ಅವರ ಪ್ರಶ್ನೆಗೆ ಮೊದಲೇ ಉತ್ತರ ಕೊಟ್ಟುಬಿಡುವದು ಒಳ್ಳೆಯದು. ಅದ್ದರಿಂದ ಮೊದಲಿಗೆ ವೈನಾಡಿನ ಬಗ್ಗೆ ಬರೆವೆ.

ಮೈಸೂರು ಕೊಡಗುಗಳ ನೈಋತ್ಯಕ್ಕೂ ನೀಲಗಿರಿಯ ಪಶ್ಚಿಮಕ್ಕೂ ಹೊಂದಿಕೊಂಡಿರುವ ಭೂಪ್ರದೇಶವೇ ವೈನಾಡು—ವಯನಾಡು ಎಂದು ಕರೆಯಲ್ಪಡುತ್ತದೆ. ಕೊಡಗಿನ ಕೆಳಗೆ ಬಯ(ಲು) ನಾಡು ಇಲ್ಲಿಂದ ಆರಂಭವಾಗುವದೆಂದು ವಯನಾಡೆಂದು ಹೆಸರುಂಟಾದಂತೆ ತೋರುತ್ತದೆ. ಸಹ್ಯಾದ್ರಿಯೂ ನೀಲಗಿರಿಯೂ ಹೊಂದಿಕೊಳ್ಳುವದು ಇಲ್ಲಿಯೇ. ಮೈಸೂರು ಕೊಡಗು—ನೀಲಗಿರಿ ಜಿಲ್ಲೆಗಳ ಗಡಿಗೂ, ವೈನಾಡಿನ ಮುಖ್ಯ ಪಟ್ಟಣಗಳಾದ ಮಾನಂತವಾಡಿ—ಕಲ್ಪೆಟ್ಟಾ ಪಟ್ಟಣಗಳಿಗೂ ೨೦ ಮೈಲಿನ ಅಂತರ ಮಾತ್ರವಿದೆ. ಈ ಪಟ್ಟಣಗಳಿಗೆ ಮೈಸೂರು ಗುಂಡ್ಲು ಪೇಟೆಯ ವರ್ತಕರು ಸಂತೇಗಾಡಿಗಳೊಂದಿಗೆ ಪ್ರತಿವಾರವೂ ಬಂದು ಸರಕುಗಳನ್ನು ಮಾರಿ ಹೋಗುತ್ತಾರೆ. ವೈನಾಡು ಮದರಾಸು ಅಧಿಪತ್ಯಕ್ಕೆ ಸೇರಿದ ಮಲಬಾರ್ 'ಎಂಬ' ಕೇರಳ ಜಿಲ್ಲೆಯ ಒಂದು ತಾಲೂಕು ಪ್ರದೇಶವಾಗಿದೆ. ಮಲಬಾರದ ಉಳಿದ ಎಲ್ಲ ತಾಲೂಕುಗಳೂ ಘಟ್ಟದ ಕೆಳಗಿದ್ದು ಇದೊಂದೇ ಒಂಟಿಯ ಕೆಂಪದಂತೆ ಘಟ್ಟದ ಮೇಲಿರುವುದು. ನ್ಯಾಯ್ಯವಾಗಿ ಇದು ಕರ್ನಾಟಕದ ನೈಋತ್ಯದ ಕೊನೆಯ ಗಡಿಯೆಂದು ಹೇಳಬಹುದು. ಬಯ(ಲು)ನಾಡು ಕನ್ನಡ ಶಬ್ದವೇ ಆಗಿದೆ. ಭೌಗೋಲಿಕ ರೀತಿಯಿಂದಲೂ ಚರಿತ್ರೆಯ ದೃಷ್ಟಿಯಿಂದಲೂ ಸಾಂಸ್ಕೃತಿಕ ದೃಷ್ಟಿಯಿಂದಲೂ ಮೈಸೂರು ಕರ್ನಾಟಕಕ್ಕಾಗಲಿ ಕೊಡಗಿಗಾಗಲಿ ಇದು ಸೇರಬೇಕಾದುದು. ಕನ್ನಡಿಗರ ಅಜಾಗರೂಕತೆಯಿಂದಲೂ ದುರ್ದೈವದಿಂದಲೂ ಕೇರಳಕ್ಕೆ ಸೇರಿ ಕರ್ನಾಟಕಕ್ಕೆ ಎರವಾಗಿದೆಯೆಂದು ಹೇಳಬೇಕಾಗುತ್ತದೆ. ಈಗ ಅಲ್ಲಿ ಕನ್ನಡ ಮಾತನಾಡುವವರು ನಾಲ್ಕರಲ್ಲಿ ಒಂದು ಪಾಲೂ ಇಲ್ಲವೋ ಎಂದು ಸಂಶಯ ಬರುತ್ತಿದೆ. ೧೧ನೆಯ ಶತಮಾನದ ಕೊನೆಯಿಂದಲೂ ಕಲ್ಲಿಕೋಟೆಯ ಕೇರಳ ರಾಜನಿಗೂ ಕೊಡಗು, ಮೈಸೂರು ರಾಜರಿಗೂ ವೈನಾಡಿಗಳ ವಿಷಯವಾಗಿ ಕಲಹಗಳಾದ ಸಂಗತಿಗಳು ಚರಿತ್ರೆಯಲ್ಲಿವೆ. ಇತಿಹಾಸ ಕಾಲದ ಮಧ್ಯದಲ್ಲಿ ಕೊಡಗು ಮೈಸೂರನ್ನಾಳಿದ ಕನ್ನಡ ಜೈನ ಅರಸರೇ ಇಲ್ಲಿಯೂ ಆಳಿದರೆಂದು ಕಂಡು ಬರುತ್ತಿದೆ. ಜೈನ ಬಸದಿಗಳ ಕುರುಹುಗಳೂ ಅಲ್ಲಲ್ಲಿ ಇವೆ. ವೈನಾಡಿನಲ್ಲಿ ಈಗ್ಗೆ ಅಚ್ಚ ಗನ್ನಡಿಗರೆಂದರೆ ಅಲ್ಲಿ ಗೌಡರೆಂದು ಕರೆಯಲ್ಪಡುವ ಕ್ಷಾತ್ರ ಜಾತಿಯವರೇ ಸರಿ. ಅವರಲ್ಲಿ ಕೆಲವರು ಜೈನ ಸಂಪ್ರದಾಯವನ್ನೂ ಕೆಲವರು ಶ್ರೀಕೃಷ್ಣನ ಸಂಪ್ರದಾಯವನ್ನೂ ಸ್ವೀಕರಿಸಿದ್ದು ಅವರಲ್ಲಿ ಪರಸ್ಪರ ರಕ್ತ ಸಂಬಂಧಾದಿಗಳು ನಡೆಯುತ್ತಿವೆ. ಇವರನ್ನುಳಿದರೆ ದಕ್ಷಿಣ ಕನ್ನಡದಿಂದಲೂ ಕೊಡಗು ಮೈಸೂರುಗಳಿಂದಲೂ ಬಂದ ಕೆಲವು ಬ್ರಾಹ್ಮಣರು—ಕ್ಷತ್ರಿಯರು—ವೈಶ್ಯರು ಹಾಗೂ ಇಲ್ಲಿಯ ಕಾಫಿ ಮತ್ತು ಚಹಾ ತೋಟಗಳಲ್ಲಿ ಕೆಲಸ ಮಾಡುವ ದಕ್ಷಿಣ ಕನ್ನಡದ ಕೂಲಿಕಾರರು ಇವರೆಲ್ಲರು ಕರ್ನಾಟಕದವರು ಇವರೆಲ್ಲರಲ್ಲಿ ಅನುಕೂಲಸ್ಥರೆಂದರೆ ಗೌಡ ಜಾತಿಯವರೇ ಸರಿ. ಮುಂಬಯಿ ಮದರಾಸು ಅಧಿಪತ್ಯಕ್ಕೆ ಸೇರಿದ ಕರ್ನಾಟಕ ಜಿಲ್ಲೆಗಳು ರಾಜಧಾನಿಯಿಂದ ಒಂದು ತುತ್ತತುದಿಗಿದ್ದು ಹಿಂದುಳಿದ ಜಿಲ್ಲೆಗಳೆಂದೆನಿಸಿಕೊಳ್ಳುವಂತೆ ಮಲಬಾರ ಜಿಲ್ಲೆಯಲ್ಲಿ ವೈನಾಡು ತಾಲೂಕಿನ ಸ್ಥಿತಿಯಾಗಿದೆ. ಇಡೀ ತಾಲೂಕಿಗೆ ಒಂದು ಹೈಸ್ಕೂಲಿಲ್ಲ; ಒಳ್ಳೇ ಆಸ್ಪತ್ರೆಯಿಲ್ಲ ಇತ್ಯಾದಿ ಇತ್ಯಾದಿ. ಕನ್ನಡವನ್ನು ಕಲಿಸುವ ಒಂದು ಶಾಲೆಯೂ ಇದು ವರೆಗೆ ಇರಲಿಲ್ಲ. ಆದರೆ ಅಲ್ಲಿಯ ಗೌಡ ಬಾಂಧವರಿಂದ ಈ ಎರಡು ವರ್ಷಗಳಿಂದ ಎರಡು ಶಾಲೆಗಳಲ್ಲಿ ಕನ್ನಡ ಪಾರಂಭವಾದುದು ಕನ್ನಡಿಗರ ಶುಭೋದಯವೇ ಸರಿ. ಇದಕ್ಕೆಲ್ಲಾ ಕಾರಣ ಪುರುಷರೆಂದರೆ ನಮ್ಮ ವೈನಾಡಿನ ಕನ್ನಡ ಗೌಡರಲ್ಲಿ ಮುಖಂಡರೂ ದಾನಿಗಳೂ ಶ್ರೀಮಂತರೂ ದೇಶಾಭಿಮಾನಿಗಳೂ ಧರ್ಮಾಭಿಮಾನಿಗಳು ಆದ ಶ್ರೀ. ಮರ್ಣಿಯಂಗೂಡಿನ ಕೃಷ್ಣಯ್ಯ ಗೌಡರು. ಇವರು ಅಲ್ಲಿಯ ಕಾಫಿ ಮೆಣಸುಗಳ ತೋಟಗಳನ್ನುಳ್ಳವರು. ಇವರ ಮನೆತನದವರೇ ಸುಮಾರು ಅರ್ಧ ಲಕ್ಷ ಕಂದಾಯವನ್ನು ಕಟ್ಟುತ್ತಿರು

ಅವರ ಗ್ರಂಥಗಳು ಎಷ್ಟೋ ಬಂದಿವೆ. ಕೆಲವು ಅಚ್ಚಾಗಿಯೂ, ಕೆಲವು ಅಚ್ಚಿನಲ್ಲೂ, ಕೆಲವು ಕೇವಲ ಅವರ ಮಿದುಳಿನಲ್ಲೂ ಇವೆ. ನನ್ನದೊಂದು "ಕರ್ಣ ನಾಟಕ"ವಿದೆಯೆಂದರೆ 'ಎಲ್ಲಿದೆ ಅದರ ಪ್ರತಿ'—ಎಂದು ನಾವು ಅವರನ್ನು ಕೇಳಬಹುದು. ಅವರು ನಾಟಕವನ್ನು ಅಲ್ಲೇ ತಾಸೆರಡು ತಾಸಿನ ವರೆಗೆ ನಾಲಿಗೆಯಿಂದಲೇ ಸುರುವಿಬಿಡಲೂ ಬಹುದು. ಅವರ ಬರಹಗಳೆಲ್ಲ ತುಂಬಿರುವುದು ಅವರ ಹಣೆಯಲ್ಲಿ. ಅವರ ಈ ವಿಚಿತ್ರ ರೀತಿಯಿಂದಾಗಿ, ಅವರ ಉತ್ತಮ ಗ್ರಂಥಗಳು ಇನ್ನೂ ಮುದ್ರಣಕ್ಕೆ (ಬರಹಕ್ಕೂ) ಬಂದಿಲ್ಲ. ಅವರ ಇಂಗ್ಲಿಷ್ ನಾಟಕಗಳು ತೀರ ಮೇಲ್ತರದುವು. ಪ್ರೌಢವಾದುವು. ಕನ್ನಡ ನಾಟಕಗಳು ಅವುಗಳಷ್ಟು ಪ್ರತಿಭಾ ಸಂಪನ್ನವೆನಿಸುವುದಿಲ್ಲ. ಅಲ್ಲದೆ, ಬರೆದದ್ದು ಬೇರೆಯವರಿಗೆ ಗೊತ್ತಾಗದಂತೆ, ಅಕ್ಷರ ಒಂದಕ್ಕೆ ಎಂಟು ಒತ್ತಕ್ಷರ ಕೊಟ್ಟು ಬರೆಯುವ ಅವರ ವಿಧಾನದಿಂದ, ಆಡುವ, ಶೈಲಿಯಿಂದಾಗಿ, ಅವರ ಕೆಲವು ಕನ್ನಡ ನಾಟಕಗಳು, ಅವರು ಹುಟ್ಟಿದೂರಿನ ಮಟ್ಟಿಗೆ, ಅವರಿರುವ ಕಾಲದ ವರೆಗೆ ಮಾತ್ರ ಉಳಿದುಕೊಂಡಾವು. ಏಕೆ ಅವರು ಹೀಗೆ ಮಾಡುತ್ತಾರೆ ಎಂದರೆ—'ನಾವು ಹಾಗೆ ಮಾಡುತ್ತಲಿಲ್ಲ ಎಂಬುದರಿಂದ' ಎಂದು ಅನ್ನಬೇಕಷ್ಟೆ.

ನಾಟಕ ಭಾಗದಲ್ಲಿ ಅವರ ಪರಿಶ್ರಮ ಬಹಳ. ಸ್ವತಃ ಉತ್ತಮ ನಟರು. ಆದರೆ, ಅವರ ತುಸು ಗೂನು ಬೆನ್ನು, ಮುಂದೆ ಬಗ್ಗಿ ನಿಲ್ಲುವ ರೀತಿಗಳು, ಎಷ್ಟೋ ಭೂಮಿಕೆಗಳ ಗಾಂಭೀರ್ಯವನ್ನು ಕೆಡಿಸುತ್ತವೆ. ಆದರೆ, ನಾಟಕ ವಿಮರ್ಶೆಯಲ್ಲಿ ಅವರಿಗೆ ಅಸಾಧಾರಣ ಪರಿಚಯವಿದೆ. ನಾಟಕದ ಟೀಕೆಯನ್ನು, ನಾಟಕ ರೂಪವಾಗಿ—"ಪೆರಡಿ"ಯ ಮಾದರಿಯಲ್ಲಿ ತಕ್ಷಣವೇ ರಚಿಸಿಬಿಡುವುದು ಅವರ ಒಂದು ಅಸಾಧ್ಯವಾದ ಶಕ್ತಿ. ಅವರನ್ನು ಕೆರಳಿಸಿದರೆ ಬರುವ ಸ್ವಾರಸ್ಯವು ಅಧಿಕ. ಅವರ ಜೀವನವೂ ಕೇವಲ ಕಲಾ ಉಪಾಸನೆಯೇ. ವಾತಾವರಣದ ದಾಸರು ಅವರು ಎಂದೆಷ್ಟೋ ಬಾರಿ ಅನಿಸುತ್ತದೆ. ಅವರ ಸಂಗಾತಿಗಳಂತೆ ಅವರ ಚಟುವಟಿಕೆಗಳ ರೂಪು. ಆದುದರಿಂದ, ಅಪೂರ್ವವಾದ ಅವರ ಶಕ್ತಿಯನ್ನು ನಾವು ಅಳೆಯಬೇಕಾದರೆ, ಅವರನ್ನು ಪಳಗಿಸಬಲ್ಲ ಮಾಹುತನೊಬ್ಬನನ್ನು ಕಾಣಬೇಕು. ಮನೆಗೆ ಬಾ ಎಂದರೆ ಬರುವವರಲ್ಲ, ಬಂದರೆ ಹೋಗೆಂದರೂ ಹೋಗುವವರಲ್ಲ. ಬಂದಾಗ ಬಂದರು. ಹೋದಾಗ ಹೋದರು. "ಸ್ವಾಮಿ, ಮನೆಯಲ್ಲಿ ಅಕ್ಕಿ ಇಲ್ಲ" ಎಂದರೆ "ಪರವಾ ಇಲ್ಲ, ತಿಳಿ ಕೊಟ್ಟರೆ ಸಾಕು"—ಎನ್ನುವ ಗೃಹಸ್ಥರು. ತಮ್ಮ ಗೆಳೆಯರ ಮನೆಯಿಂದ ಅವರನ್ನು ಹೊರಡಿಸಲು ಅರ್ಧಚಂದ್ರ ಪ್ರಯೋಗವೇ ಬೇಕು. ಅವರಲ್ಲಿ ಇಷ್ಟೆಲ್ಲ, ಹೆದಗೆಟ್ಟ ರೀತಿಗಳನ್ನು ಕಂಡರೆ ಸಾಮಾನ್ಯರಿಗೆ ತಲೆಬೇನೆ ಹಿಡಿದೀತು. ಆದರೆ ಅವರ ಪರಿಚಯ ಆಯಿತೆಂದರೆ, ಅವರ ಎಷ್ಟೋ ಹಿಂಸೆಗಳನ್ನೂ ಹವ್ಯಾಸಗಳನ್ನೂ ಸಂತೋಷದಿಂದ ಸಹಿಸುವ ಮನಸ್ಸು ಬರುವುದು.

ಅವರ ವಿಚಾರವಾಗಿ ಉಪಸಂಹಾರದಿಂದ ಇಷ್ಟೆನ್ನಬಹುದು. ಅವರಿಗೆ ನ್ಯಾಯವೂ ಇಲ್ಲ, ನೀತಿಯೂ ಇಲ್ಲ. ಸುಳ್ಳು ಇಲ್ಲ, ಸತ್ಯವೂ ಇಲ್ಲ. ಎಲ್ಲಾ ಇದೆ, ಯಾವುದೂ ಇಲ್ಲ. ಅವರ ಹಿರಿಯರು ಅವರಿಗೆ ಬೇರೆಲ್ಲ ಶಿಕ್ಷಣಗಳನ್ನು ಕೊಡುವ ಬದಲು, ಶಿಸ್ತಿನ ಶಿಕ್ಷಣವನ್ನು ಒಳ್ಳೆವಾಗಿ ಕೊಟ್ಟಿದ್ದರೆ, (ಅವರು ಹೀಗೆಯೇ ಉಳಿದಾರೋ ಎಂದು ನನಗೆ ತಿಳಿಯದು), ಕರ್ನಾಟಕವು ಅವರಿಂದ ಮುಗಿಸಲಾರದಷ್ಟು ಋಣಕ್ಕೆ ಗುರಿಯಾಗುತ್ತಿತ್ತು.

ಇಷ್ಟೆಲ್ಲ ಬರೆಯುತ್ತಿರುವ ಕಾಲದಲ್ಲಿ, ಅವರು ಕರ್ನಾಟಕದಲ್ಲಿ ಇರಲಿಕ್ಕಿಲ್ಲ ಎಂಬುದರಿಂದ ತುಂಬಾ ಧೈರ್ಯ. ಇಲ್ಲವಾದರೆ ಏನೆನ್ನುತ್ತಿದ್ದರೋ? ಕಾರಣ—ನಾವು ಬೈದದ್ದು ಅವರಿಗೆ ಬಿರುದಾಗಿ ತೋರುವದು. ಹೊಗಳಿದರೆ "ಡಿಸ್ಮಾಟಿನ ಧಾರಣೆ ಹೇಗೆ?" ಎಂದು ಅಲ್ಲೇ ಕೇಳುವ ಚುರುಕುತನವೂ ಇದೆ. ಇಂಥದೊಂದು ವ್ಯಕ್ತಿಯ ಶುದ್ಧ ವಿಚಿತ್ರ ವ್ಯಕ್ತಿಯೆನ್ನಲು ಸಂಶಯವಿದೆಯೇ?

## ಮೊದಲಿನ ಮಾತು.

ಈ ಮೇಲಿನ ಶಿರೋನಾಮದಿಂದ ಹೊಸತೊಂದು ಲೇಖನ ಮಾಲೆ ತೊಡಗುವ ಸಾಹಸಕ್ಕೆ ಕೈ ಹಾಕಿದುದೆ. ಮೊದಲಿನ ಬರಹಗಳಾದ ದೇಶಜ್ಯೋತಿಗಳನ್ನು ಬರೆಯುವಾಗ ನನಗೆ ಇಷ್ಟು ಅಂಜಿಕೆಯಿಲ್ಲವಿತ್ತು. ಆ ಲೇಖನಗಳೆಲ್ಲ ನಮ್ಮಲ್ಲಿನ ಧುರೀಣರ ವ್ಯಂಗ್ಯ ಟೀಕೆಗಳಾಗಿದ್ದುವು. ಆದರೆ ಅವು ಒಬ್ಬೊಬ್ಬನ ಟೀಕೆಯೇ ಆಗಿರದೆ ಒಂದೊಂದು ಸಂಘದಲ್ಲಿ ಪರಿಶ್ರಮಪಡುತ್ತಿರುವ ಸಾಧು ಅಸಾಧು ವರ್ಗದವರ ಟೀಕೆಯಾಗಿತ್ತು. ಆದರೆ ಇಂಥವರನ್ನು ಎಂದು ಕೈ ತೋರಿಸುವ ಉದ್ದೇಶದಿಂದ ಬರೆದ ಸಂಗತಿಯಲ್ಲ. ವ್ಯಕ್ತಿಗಳನ್ನು ಮರೆತು ವಿಷಯಗಳನ್ನೇ ಕುರಿತು ಬರೆದ ಬರಹಗಳವು. ಆ ಲೇಖನದಲ್ಲಿ ಟೀಕೆಗೆ ಒಳಿಯಾದವರಲ್ಲಿ ನಾನೂ ಒಬ್ಬನು ಎಂಬುದನ್ನು ಹೇಳುವೆನು.

ಈಗ ಮಾತ್ರ "ನಾಡಿನ ಪ್ರಸಿದ್ಧ ಪುರುಷರು" ಎಂಬ ಬರಹಗಳನ್ನು ಬರೆಯುವಾಗ ಅಂಜಿಕೆ ನನಗೆ. ಕಾರಣ ನಮ್ಮಲ್ಲಿ ಪ್ರಸಿದ್ಧಿಯಿರುವ ವ್ಯಕ್ತಿಗಳನ್ನು ಹೆಸರಿಟ್ಟು ತೋರಿಸಿ ಬರೆಯುವ ಬರಹಗಳವು. ಹೀಗೆ ಬರೆಯುವ ರೂಢಿ ಕನ್ನಡದಲ್ಲಿ ಕಡಿಮೆ. ಬರೆದೊಡನೆ ಅದನ್ನು ವ್ಯಕ್ತಿದ್ವೇಷವೆಂದು ತಿಳಿಯುವವರು ಬಹಳ. ಹೊಗಳಿದರೆ ನಮಗೆ ಸದಾ ತೃಪ್ತಿ. ತೆಗಳಿದರೆ ಸ್ಮರಣೆ ತಪ್ಪುವುದು. ಆದರೆ ವಿಮರ್ಶೆಯು ಎರಡನ್ನೂ ಕೂಡಿದ ಸಾಹಿತ್ಯ. ಅದು ಕನ್ನಡಕ್ಕೆ ಬೇಕು. ಈ ಹಾದಿಯಲ್ಲಿ ಎ. ಜಿ. ಗಾರ್ಡಿನರ್, ಪ್ರೊ. ಹೆರಾಲ್ಡ್ ಲಾಸ್ಕಿ ಮೊದಲಾದವರ ಬರಹಗಳನ್ನು ನೋಡಿದರೆ ಅಲ್ಲಿನ ವಿಮರ್ಶಕರ ಧೈರ್ಯ, ವಿಮರ್ಶೆಗೆ ಗುರಿಯಾದವರ ತಾಳ್ಮೆ ಮೊದಲಾದವುಗಳ ಘನತೆಯು ನಮಗೆ ತಿಳಿಯುವುದು.

ಸ್ವದೇಶಾಭಿಮಾನಿಯ ಸಂಪಾದಕರು ನನ್ನನ್ನು ಈ ಕಾರ್ಯಕ್ಕೆ ಪ್ರೇರಿಸುತ್ತಿದ್ದಾರೆ. ನಾನೂ ಒಪ್ಪಿಕೊಂಡಿರುವೆ. ಆದರೆ ಹೆಜ್ಜೆ ಹೆಜ್ಜೆಗೂ ಭೀತಿ ಬಹಳ. ಹೆಸರೆತ್ತಿ ಬರೆಯಬೇಕಾದ ಹೆಸರಾದ ವ್ಯಕ್ತಿಗಳನ್ನು ಕುರಿತ ಅವರನ್ನು ತಾರೆಗಳೆಂದು ಕರೆಯಬೇಕೆನ್ನುತ್ತಿದ್ದೆ. ಸಿನಿಮಾ ಸ್ಟಾರ್ಸ್ — ಎಂಬ ಮಾದರಿಯಲ್ಲಿ. ಈ ಚಲಚ್ಚಿತ್ರ ತಾರೆಗಳಲ್ಲಿ ಎಷ್ಟೋ ಜನರು ಹುಟ್ಟು ತಾರೆಗಳು. ಎಷ್ಟೋ ಬೆಟ್ಟು ತಾರೆಗಳು. ಅಂತು ತಾರೆಗಳ ಪರೆಗಳೇ. ಅಂತೆಯೇ ನಾನು ಬರೆಯುವ ವ್ಯಕ್ತಿಗಳನ್ನು ಕುರಿತೂ ಇದೆ. ಯಾರಾರು ಹೇಗೆಂದು ತೂಗಿ ನೋಡಿ ಹೇಳುವ ಕೆಲಸ ನನ್ನದಲ್ಲ. ನನಗಾದ ಪರಿಚಯ ಸಂಪರ್ಕ ಸ್ನೇಹ ಸಂಧಾನಗಳಲ್ಲಿ ನನಗುಂಟಾದ ಅಭಿಪ್ರಾಯವನ್ನು ಬರೆಯುವೆನಷ್ಟೆ. ಅದು ಕೇವಲ ನನ್ನೊಬ್ಬನ ಅಭಿಪ್ರಾಯ. ಈ ಅಭಿಪ್ರಾಯದಲ್ಲಿ ವ್ಯಕ್ತಿದ್ವೇಷ ಲೇಶವೂ ಇಲ್ಲ. ಆದುದರಿಂದ ಧೈರ್ಯವಾಗಿ ಬರೆಯುವೆ. ನನ್ನ ತಪ್ಪುಗಳನ್ನು ತೋರಿಸಿದರೆ ತಿದ್ದಿಕೊಳ್ಳಲು ಸದಾ ಸಿದ್ಧನೆ. ಈ ನನ್ನ ಸಾಹಸಕ್ಕಾಗಿ ಸಂಬಂಧಪಟ್ಟ ಮಹನೀಯರು ನನ್ನನ್ನು ಕ್ಷಮಿಸಲಿ.

ವಿ. ಸೂ. — ಓದುಗರ ಸಲುವಾಗಿ ಈ ಪತ್ರಿಕೆಯ ಸಂಪಾದಕರು ಪ್ರತಿ ಟಾರಿಯೊ ನನ್ನ ಮುನ್ನುಡಿಯನ್ನು ಹಾಕಿದರೆ ಲೇಸು. ಇಲ್ಲವಾದರೆ ಈ ಲೇಖನ ಮಾಲೆ ಓದುವವರು ಮುನ್ನುಡಿಯನ್ನು ಓದಿದ ಬಳಿಕವೇ ಆ ಕೆಲಸಕ್ಕೆ ಕೈ ಹಚ್ಚುವುದು—ಎಂದು ತಿಳಿಸಿದರೂ ಆಗಬಹುದು.

(ಮಾತು ಕೊನೆಯಿನದಾದರೂ ವಾಚಕರು ಮೊದಲಿನ ಮಾತಿನಲ್ಲಿಯೇ ಕರಗಾಳಿಸಬಹುದೆಂಬ ಹೆದರಿಕೆಯಿಂದ ಮೊದಲಿನ ಮಾತನ್ನು ಕಡೆಗೆ ಹಾಕಿಯದೆ.)

(ಸಂ. ಸ್ವ)

←++—++←



ಅವುಗಳಲ್ಲಿ ತನ್ನ ಪಾತ್ರಗಳನ್ನು ಚಲಿಸುವಂತೆ ರಚಿಸುತ್ತಾನೆ. ಅವನ ದೃಷ್ಟಿಯು ವಿಶೇಷತಃ ಚರಿತ್ರ ಚಿತ್ರಣದಲ್ಲಿರುವುದರಿಂದ ಮನುಷ್ಯ ಜೀವನದಿಂದ ಉಪಯುಕ್ತವಾದ ವಿಷಯಗಳನ್ನು ಹೆಕ್ಕಿ ತೆಗೆದು ಪಾತ್ರಗಳ ಸ್ವಭಾವವನ್ನು ಪರಿಪುಷ್ಟಿಗೊಳಿಸುತ್ತಾನೆ. ನಾಟಕದ ಕಾರ್ಯ (Action)ವು ಮುಂದುವರಿಯುತ್ತಾ ಪರಾಕಾಷ್ಠೆ (climax)ಯನ್ನು ಏರುತ್ತದೆ. ತದನಂತರ ಉಪಸಂಹಾರವಾಗುತ್ತದೆ. ಕತೆಗಾರನು ಇವೇ ತತ್ವಗಳನ್ನು ಅವಲಂಬಿಸುವುದು ವಿಹಿತವು, ಏಕೆಂದರೆ ನಾಟಕಕ್ಕೂ ಸಣ್ಣ ಕತೆಗೂ ತುಂಬಾ ಅಂತಸ್ಸಾಮ್ಯವಿದೆ. ನಾಟಕಕಾರನಂತೆ ಕತೆಗಾರನೂ ಬಹಳ ವಿಚಕ್ಷಣತೆಯಿಂದ ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳಬೇಕು. ಅವನು ಕತೆಯ ಉದ್ದೇಶಕ್ಕೆ ಸಂಬಂಧಿಸದ ಯಾವ ವಿಷಯವನ್ನಾದರೂ ಎತ್ತಿಕೊಂಡು ಪ್ರಯೋಗಿಸಕೂಡದು. ಪ್ರತಿಯೊಂದು ಶಬ್ದವೂ ಪ್ರತಿಯೊಂದು ವಿಷಯವೂ ಒಂದು ಪಾತ್ರದ ಒಂದು ಮಹತ್ವಪೂರ್ಣವಾದ ಘಟನೆಯನ್ನು ವಿಕಸಿಸುವಂತೆ ನಿಯೋಜಿಸಲ್ಪಡಬೇಕು. ಇದರಿಂದಲೇ ಕಾರ್ಯದ ಐಕ್ಯವು (Unity of action) ಸಾಧ್ಯವಾಗುವುದು. ಇದರಲಿ ಕತೆಗಾರನು ಎಷ್ಟು ಕಲ್ಪನಾಶಕ್ತಿಯನ್ನು ಉಪಯೋಗಿಸಿದರೂ ಸಾಲದು. ನಾಟಕದಂತೆ ಕತೆಯೂ ಪರಾಕಾಷ್ಠೆಯನ್ನು ಹೊಂದಿ ಕೊನೆಗೊಳ್ಳುತ್ತದೆ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ, ಓದುಗರ ಮನಸ್ಸಿನ ಮೇಲೆ ಏಕತೆಯ ಪರಿಣಾಮ (singleness of impression)ವು ಉಂಟಾದರೆ ಲೇಖಕನು ಕಾರ್ಯಸಾಫಲ್ಯವನ್ನು ಹೊಂದಿದನೆಂದು ತಿಳಿಯಬಹುದು.

'ಪದ್ಮಾಕರ'

←←+←←

## ಪತ್ರಿಕಾ ಪ್ರಪಂಚ.

ಈ ತಿಂಗಳಲ್ಲಿ ಮುಲ್ಕಿಯಿಂದ 'ಭಾರತಿ' ಎಂಬ ಹೊಸದೊಂದು ಮಾಸಪತ್ರಿಕೆಯು ಹೊರಟಿರುತ್ತದೆ (ವಾರ್ಷಿಕ ಚಂದಾ ರೂ ೨-೪-೦) ನಮ್ಮ ಜಿಲ್ಲೆಯಲ್ಲಿ ಅದೆಷ್ಟೋ ಮಾಸಪತ್ರಿಕೆಗಳು ಹುಟ್ಟಿ ಬೆಳೆದು ಕ್ಷೀಣವಾದುದನ್ನು ಎಣಿಸಿದರೆ, 'ಭಾರತಿ'ಯ ಸಂಪಾದಕರ ಧೈರ್ಯ, ಮತ್ತು ಉತ್ಸಾಹಗಳು ಸ್ತುತ್ಯವಾದ ಸಂಗತಿಯೆಂದು ತೋರುತ್ತದೆ. ಈ ಮಾಸಪತ್ರಿಕೆಗೆ ಚಂದಾದಾರರಲ್ಲದೆ, ೧೦ ರೂಪಾಯಿಗಳನ್ನು ತೆತ್ತ ಅನೇಕ ಪೋಷಕರಿರುವುದರಿಂದ ಇದರ ಜೀವನಕ್ಕೆ ಕುಂದು ಬರಲಾರದೆಂದು ನಂಬಿಗೆ. ಶ್ರೀ ಗೋವಿಂದ ಪೈಯವರ ಕದ್ರಿಯಲ್ಲಿರುವ ಅವಲೋಕಿತರೊಂದು ಲೇಖನದಿಂದ ಕದ್ರಿಯ ಲೋಕೇಶ್ವರ ಮೂರ್ತಿಯನ್ನು ಕ್ರಿ. ಶ. ೧೦೬೭ನೆ ಇಸವಿ ಜನವರಿ ೩ನೇ ಶುಕ್ರವಾರ ಆಲೂಪ ಅರಸರು ಪ್ರತಿಷ್ಠಿಸಿದರೆಂದು ತಿಳಿದುಬರುತ್ತದೆ. ಗೋಪಾಲಕೃಷ್ಣನ 'ಉರುಪರಮಾ' ಎಂಬ ಚಿಕ್ಕ ಕತೆಯೂ ಚೆಲುವಾಗಿದೆ. ಕನ್ನಡ ಭಾಷಾಭಿಮಾನದಿಂದ ಈ ಅಳಿಲುಸೇವೆಯನ್ನು ಕೈಕೊಂಡ ಭಾರತಿಯು ನಮ್ಮ ಜಿಲ್ಲೆಯ ಯುವಕರಲ್ಲಿ ಸಾಹಿತ್ಯ ಅಭಿರುಚಿಯನ್ನು ಹುಟ್ಟಿಸಿ ಅವರು ಬರೆದ ಲೇಖನಗಳಿಗೆ ಆಸ್ಪದ ಕೊಟ್ಟು ಅವರಿಗೆ ಉತ್ತೇಜನ ಕೊಡಬಹುದೆಂದು ನಾವು ಅದಕ್ಕೆ ಯಶಸ್ಸನ್ನು ಬಗೆಯುವೆವು.

**ಸ್ವದೇಶೀ ಪ್ರಚಾರಕದ** ಫೆಬ್ರವರಿ ಸಂಚಿಕೆಯಲ್ಲಿ ಎಸ್. ಮುಕುಂದರಾಯರು ಪ್ರತಿ ಜಿಲ್ಲೆಯ ಅಭಿವೃದ್ಧಿಗೆ ಸೂತ್ರದಾರ ಮಂಡಲವನ್ನು ಸ್ಥಾಪಿಸಬೇಕೆಂದು ಬರೆದಿರುತ್ತಾರೆ. ನಮ್ಮ ಜಿಲ್ಲೆಗೊಂದಿದ್ದರೆ ಅದು "ದಕ್ಷಿಣ ಕನ್ನಡದಲ್ಲಿರುವ ಮಾರ್ಗಗಳಲ್ಲಿ ಯಾವ್ಯಾವವನ್ನು ಉತ್ತಮ ರೀತಿಗೆ ತರಬೇಕು. ಹೊಸ ರಸ್ತೆಗಳು ಜಿಲ್ಲೆಯ ಸಂಪುಗೊಂದುಗಳಲ್ಲಿ ಎಷ್ಟು ಬೇಕು, ಕಟ್ಟಬೇಕಾದ ಸಂಕಗಳೆಷ್ಟು, ತೆರೆಯಬೇಕಾದ ಶಾಲೆಗಳೆಷ್ಟು, ಚಿಕಿತ್ಸಾ ಗೃಹಗಳೆಷ್ಟು, ಯಾವ್ಯಾವ ಕೈಗಾರಿಕೆಗಳಿಗೆ ಇಲ್ಲಿ ಅನುಕೂಲ ವಾತಾವರಣವಿದೆ, ಇವುಗಳ ಉದ್ಭವಕ್ಕೆ ಪ್ರತಿಬಂಧಕಗಳ್ಯಾವುವು, ಎಂದು ಮೊದಲಾದ ಪ್ರಶ್ನೆಗಳನ್ನು ಕೂಲಂಕುಶವಾಗಿ ವಿಚಾರಿಸಿ ಅವುಗಳಲ್ಲಿ ಪ್ರತಿಯೊಂದಕ್ಕೆ ಬೇಕಾಗುವ ದ್ರವ್ಯಾನುಕೂಲ, ಜನಾನುಕೂಲಗಳನ್ನು ಕಂಡುಹಿಡಿದು ಎಲ್ಲವನ್ನೂ ಹತ್ತು ಯಾ ಇಪ್ಪತ್ತು ವರ್ಷಗಳೊಳಗೆ ಪೂರೈಸುವಂತೆ ಕಾರ್ಯಕ್ರಮವನ್ನು ತಯಾರಿಸಬೇಕು. ಅನಂತರ ಆ ಕಾರ್ಯಕ್ರಮವು ನಿರಾಂತಕವಾಗಿ ತಜ್ಞರ ಮೇಲ್ವಿಚಾರದಲ್ಲೆ ನಡೆಯುವಂತೆ ಏರ್ಪಾಡಾಗಬೇಕು."

ಬಾಲಚಂದ್ರದ ೯ನೇ ಸಂಚಿಕೆಯಲ್ಲಿ (೧—೨—೧೯೩೩) ಶಾಂತಿನಿಕೇತನದ ವಿಷಯ ಚೆಲುವಾದೊಂದು ಲೇಖವಿದೆ. ಹುಡುಗ ಉಪಾಧ್ಯಾಯರೂ ಒಂದೇ ಸ್ಥಳದಲ್ಲಿ ವಾಸಿಸಿ ತಮಗೆ ಬೇಕಾದ್ದನ್ನು ಗಳನ್ನು ಒದಗಿಸಿಕೊಳ್ಳುವುದೇ ಅಲ್ಲಿಯ ವಿಚಿತ್ರವಾದ ಸಂಗತಿ

## ಹರಿಜನ ಬಂಧು.

['ಹರಿಜನ' ಪತ್ರಿಕೆಗೆ ಕವೀಂದ್ರ ಠಾಕೂರರು ದಿವಂಗತ ಸತ್ಯೇಂದ್ರನಾಥ ದತ್ತರ 'ಕೋಟಿ' ಎಂಬ ಪದ್ಯದ ಗದ್ಯಾನುವಾದ ಬರೆದಿರುವರು. ಅದರ ಭಾಷಾನುವಾದವಿದು.]

೧ ಮುಟ್ಟಿದರೆ ಮುನಿವರೇತಕೆ, ಮುಟ್ಟಲೀಸದೆಯೆ
ಕೆಟ್ಟ ಹೆಸರಿಟ್ಟು ಬಲು ದೂರ ಕಟ್ಟುವರೇಕೆ?
ನೀನಿಡುವ ಹಜ್ಜೆಯಲೆ ಅಡಿಯಿಟ್ಟು ಬೆಂಬಳಿಸಿ
ತಾನೆ ನಿರ್ಮಲತೆ ಸಹಚಾರಿಣಿಯು ಬರುತಿರಲು,
ಭೂಮಿಯಿದು ಸುಕ್ಷೇಮಧಾಮ ಮಾನವಗಾಗೆ
ನೀ ಮ್ಲಾನವಂ ತೊರೆದು ಮಾನವರ ಬದುಕಿಸುವೆ!

೨ 'ಕರ್ತವ್ಯ ಕರ್ಮದಲಿ ಹೇಸುಗೆ ಹೊಲೆಗಳಿಲ್ಲ!'
ಈ ಸತ್ಯ ತತ್ವ ಪ್ರಚಾರಕನು ನೀನಹುದು.
ನಿನ್ನ ಸೇವೆಯ ಗಂಗೆಪಾವನ ತರಂಗಿಣಿಯು
ಹೀನ ಹೊಲೆಗಳ ತೊಳೆದು ತಾನೆ ನಿರ್ಮಲವಿಹುದು?
ಒಂದೊಮ್ಮೆ ವಿಶ್ವವೆಮ್ಮುತ್ತು ಹಾಲಾಹಲವ
ಕಂಧರದಿ ಧರಿಸಿ, ಹರ ಜೀವಿಗಳ ಪೊರೆದರೇನ್?
ನಿತ್ಯವೂ ನೀನದೇ ದಿವ್ಯಾನುರಾಗದಿಂ
ಮುತ್ತಿರುವ ಹೇಯ ವಿಷಮೃತ್ಯು ಪರಿಹರಿಸುತಿಹೆ

೩ ನಿಂದೆ ತುಚ್ಛೀಕಾರ ಪಂಚಾಗ್ನಿ ಬಳಸಿರಲು,
ಬೆಂದ ಸೇವಾಸಕ್ತನೆಂತದೇ ಮಾನವನೆ
ಪ್ರೇಮದಿಂದಾಜನ್ಮ ಸೇವೆಗೈವಾ ರೀತಿ—
ನೇಮ ಬೋಧಿಸೆ ಕರ್ಮವೀರ ಸಖ, ಬಾ! ಬಾ!

←+←—++←

ಗಿದೆ. "ಶಾಲೆಯಲ್ಲಿ ಪ್ರತಿದಿನ ಬೆಳಗ್ಗೆ, ಸಾಯಂಕಾಲ, ಧ್ಯಾನ ಮತ್ತು ಪ್ರಾರ್ಥನೆಗೆ ನಿಯಮಿತ ಸಮಯವಿದೆ. ಶಾಲೆಯಲ್ಲಿಯೂ ಸಮೀಪದ ಗ್ರಾಮಗಳಲ್ಲಿಯೂ ಆರೋಗ್ಯ ರಕ್ಷಣೆ, ಕೃಷಿಯ ಸುಧಾರಣೆ, ಬೆಂಕಿಯ ಹಾವಳಿಯ ತಡೆ, ಇವುಗಳೆಲ್ಲಾ ಆಧುನಿಕ ರೀತಿಯ ಸಮಾಜ ಸೇವೆಯ ಪ್ರಯತ್ನಗಳಾಗಿವೆ ಈ ಶಾಲೆಯಲ್ಲಿ ಹಲವು ಹಸ್ತಪ್ರತಿಯ ಮಾಸಿಕ ಪತ್ರಿಗಳು ಇವೆ. ಮತ್ತು ಇವುಗಳಿಗೆ ಅಗತ್ಯವಿರುವ ಚಿತ್ರಗಳು ವಿದ್ಯಾರ್ಥಿಗಳಿಂದಲೇ ತಯಾರಾಗುತ್ತಿವೆ" ಹುಡುಗರು ಬೆಳಗ್ಗೆ ಎದ್ದು ದೇವಪ್ರಾರ್ಥನೆ ಮಾಡುವರು "ಅನಂತರ ಬೆಳಗ್ಗೆ ೧೧-೩೦ ಗಂಟೆಯ ವರೆಗೆ ಶಿಕ್ಷಣ ಕಾರ್ಯವು ನಡೆಯುತ್ತದೆ ಕ್ಲಾಸು ಕೋಣೆಗಳು ಪ್ರತ್ಯೇಕವಿಲ್ಲ. ಮರಗಳ ನೆರಳಲ್ಲಿ ಉಪಾಧ್ಯಾಯರೊಂದಿಗೆ ಎಂಟು ಹತ್ತು ಮಕ್ಕಳು ಕುಳಿತುಕೊಳ್ಳುತ್ತಾರೆ ಪಾಠ ಪ್ರವಚನಗಳು ಸಂಭಾಷಣೆಯ ಮೂಲಕವೆ ನಡೆಯುತ್ತವೆ ಮಧ್ಯಾಹ್ನದ ನಂತರ ಮಾನಸಿಕ ಶಿಕ್ಷಣವೇ ಇಲ್ಲ"—ರಾತ್ರಿಯಲ್ಲಿ ಬಗೆ ಬಗೆಯ ಆಟಗಳು, ಚಿಕ್ಕ ನಾಟಕಗಳ ಅಭಿನಯ, ಟಾಗೂರರು ಮಾಡಿದ ಕೀರ್ತನೆಗಳನ್ನು ಹಾಡುವುದು ಇವೆ ಕೆಲಸಗಳು ರಾತ್ರಿ ೯ರ ತನಕ ನಡೆಯುತ್ತವೆ.

ಪ್ರಬುದ್ಧ ಕರ್ಣಾಟಕದಲ್ಲಿ 'ಲಂಡನಿನ ಚಿತ್ರಗಳು" 'ಗಾಂಧಿಯವರು ಲಂಡನಿನಲ್ಲಿ ಇಳುಕೊಂಡ ಕಿಂಗ್ಸ್ಲೇ ಹಾಲಿನ ವಿಷಯವಾಗಿ ಒದೆ ... ಲೇಖನವನ್ನು ಬರೆದಿರು ... ವಿದ್ಯಾಕ ಸೂರ್ಯನೆಂಬ ಕಾವ್ಯದಲ್ಲಿ ಬೇಂದ್ರೆಯವರು

ಹೊಟ್ಟೆಯ ಮೊಟ್ಟ ಮೊದಲು ಚಿಂತೆಯು
ಹೊಟ್ಟೆಯಲ್ಲಿ ಬಂದವರ ಚಿಂತೆಯು;
ದೆಸ್ಸು ದಿಕ್ಕು ಬಂದವರ ಚಿಂತೆಯು
ಬೆನ್ನು ಹಿಡಿದ ವಿಧಿ ಬಿಡದ ಚಿಂತೆಯು,
ಕೈಯ ಹಿಡಿದು ಬಂದವಳ ಚಿಂತೆಯು
ಕೈಯ ಹಿಡಿವರಾರೆಂಬ ಚಿಂತೆಯು;

ಎಂದು ಮೊದಲಾಗಿ ಇವರಿಗೆ ಚಿಂತೆ ಯಾವದಿರುವುದು ಎಂದು ... ದರು. ಅದೇ ಪತ್ರಿಕೆಯಲ್ಲಿ ಗಣಪತಿರಾವ್ ಐಗಳರವರ ... ದು ರೀಡರ್, ಕರ್ನಾಟಕ ಇತಿಹಾಸವೂ" ಎಂಬ ಲೇಖವಿದೆ.

... ಂಗಳ ಸುಬೋಧದಲ್ಲಿ ಕುಂದಾಪುರ ಕರ್ನಾಟಕ ... ಶಿವರಾಮಯ್ಯನವರ "ವಿದ್ಯಾರಣ್ಯರೂ ವಿದ್ಯಾಶಂಕ ..." ಎಂಬ ಲೇಖವು ಬಂದಿರುತ್ತದೆ. ಶ್ರೀ ಪುರಂದರ ದಾಸರ ವಿಷಯ, "ಅವರ ಜೀವನಚರಿತ್ರೆಯಲ್ಲಿ ನಮಗೆ ಕಂಡು ಬರುವ ಮೊದಲನೆಯ ವಿಷಯದೆಂದರೆ ಅವರ ನಡೆನುಡಿಗಳಲ್ಲಿ ಭಿನ್ನತೆ. ... ಯದು ಅವರ ಸಮಚಿತ್ತತೆ... ಮೂರನೆಯದು ಸರ್ವರಲ್ಲಿಯೂ ... ಆದರೂ ಅವರು ಡಾಂಭಿಕರನ್ನು ನಿರ್ದಾಕ್ಷಿಣ್ಯವಾಗಿ ... ರು. ಇದು ಅವರ ನಾಲ್ಕನೆಯ ಗುಣ." ಇಂತಹ ... ಕನಾಮಗಳೆಂದು ನಾವು ಎಣಿಸಬಾರದು "ಕರ್ನಾ... ಶಿವಶಂಕರನವರು ದಾಸ ಸಾಹಿತ್ಯದ ಜೀರ್ಣೋದ್ಧಾರ... ಪ್ರಯತ್ನವನ್ನು ಮಾಡದೆ, ಅಲಕ್ಷ್ಯವಾಗಿರುವುದಕ್ಕಾಗಿ ...ವಾಗಿದೆ" ಎಂದು "ಅಹೋಬಲು"ರು ದುಃಖಪಡುತ್ತಾರೆ.

# ಆಗದೆ ?

ಎದೆಯು ಮರಳು ಕಾಡಿನಂತೆ
ಕಾದು ಹೋಗಿದೆ'
ಮಳೆಯದೊಂದು ಹನಿಯು ಕೂಡ
ಇಲ್ಲದಾಗಿದೆ'

ನೀಲ ನಭದ ಬಂದು ಸಿಂದು
ಕರುಣ ಜಲದ ವರ್ಷಗೊಂಡು
ಒಡಲ ಮರಳು ಕಾಡ ಏನಿಯು'
ತಣಿಸಲಾಗದೆ?

ಬಿಡಲ ಕಡಲಿನೆಲ್ಲ ನೀರು
ಇಳಿದು ಹೋಗಿದೆ!
ಕೆರೆಗಳೆಲ್ಲ ಘೋಷದಿಂದು
ಅಳಿದು ಹೋಗಿದೆ'

ನಿನ್ನ ಭಕುತಿ ಚಂದ್ರ ಮೂಡಿ,
ಕಡಲ್ಗೆ ತನ್ನ ಸೊದೆಯನೂಡಿ,
ಗಾನಲಹರಿಯೇಳುವಂತೆ
ಮಾಡಲಾಗದೆ?

ಹೃದಯವೀಣೆಯೊಂದು, ದೇವ,
ಮೋನವಾಗಿದೆ!
ಗಾನವೊಂದು ತಾನ ಕೂಡ
ಕೇಳದಾಗಿದೆ'

ನಿನ್ನ ಬೆರಳಿನಿಂದ, ದೇವ
ಒಂದೆ ಆಘಾತ ಗೈದ
ಕರುಣೆದೋರಿ ಬೀಣೆಯನ್ನು
ನುಡಿಸಲಾಗದೆ?

ವೆಂಕಟರಮಣಾಚಾರ್ಯ,
(ಮಿತ್ರಮಂಡಲಿ, ಉಡುಪಿ).

—+—+—+—

ಜನವರಿಯ "ಸರಸ್ವತಿ"ಯಲ್ಲಿ ಕಳೆದ ಜನನಿಯ ವಿಷಯ ದುಃಖವನ್ನು ಅಂದವಾಗಿ ಹಾಡಿನಲ್ಲಿ ಕೆ. ಈಶ್ವರರವರು ಹೊರಸೂಸಿದ್ದಾರೆ.

"ಒಡೆಯಾಡಿ ಬೀಳೆ ನಾನು
ಓಡಿ ಬಂದು ಎತ್ತಿ ನೀನು
"ಕಂದ ನಿನಗೆ ಕಾಗಿತೆ?"
ಎಂದ ಮಾತು ಹೋಯಿತೆ?"

ಟಿ. ಆರ್. ಎಸ್.



ನಾಡಿನ ಪ್ರಸಿದ್ಧ ಪುರುಷರು. ೧.

# ಶ್ರೀ. ಟಿ. ಪಿ. ಕೈಲಾಸಂ.

(ಲೇಖಕ ಶ್ರೀ ಕೊ. ಶಿ ಕಾರಂತರು.)

ಲೇಖನ ಮಾಲೆಯನ್ನು ತೊಡಗುವಾಗ ಗೆಳೆಯರಾದ ಕೈಲಾಸಂರಿಂದ ತೊಡಗುತ್ತೇನೆ. ಅವರು ಕೇವಲ–ಒಂದನೇ ನಂಬರಿನ ಅಸಾಮಿಯೆ ದಲ್ಲ ನಾನು ನಾಲ್ಕು ಬೈದರೂ ನಗುತ್ತ ಕೇಳ ಬಲ್ಲ ಸಹೃದಯರು ಉದಾರಿಗಳು–ಎಂದು

ಐದಾರು ವರುಷಗಳಾದ ವು ನನಗೆ ಕೈಲಾಸಮರ್ಲ್ಲಿ ಪರಿಚಯವಾಗಿ ಧಾರವಾಡಕ್ಕೆ ಹೋದಾಗ ಅವರದ್ದೊಂದು ವಿನೋದಕೂಟ ಒದಿತ್ತು ಅದರ ಮೊದಲೇ ಅವರ "ಪೊಲಿಕಿಟ್ಟಿ" ಓದಿದ್ದೆ ಟೊಳ್ಳು ಗಟ್ಟಿ"ಯೂ ಸಾಹಿತ್ಯ ಸಾಮ್ರಾಜ್ಯದಲ್ಲಿ ಆಗ ಇನ್ಫ್ಲುಯೆಂಜಾ–ದ ತೆ ಹರಡಿತ ಅದ ದರಿಂದ ಅವರನ್ನು ಕಾಣುವ ಆತುರ ನನಗ ಅವರನ್ನು ನೋಡುವುದಕ್ಕೆಂದು ಅವರ ನಾಟಕಕ್ಕೆ ಹೋದೆ ನಾಟಕದ ಹೆಸರಿನಲ್ಲಿ ಮೂರು ನಾಲ್ಕು ಪ್ರಹಸನಗಳಾಗಿದ್ದುವು ಸರ್ವತ್ರ ಕೈಲಾಸಮರಿದ್ದರು ಪರದೆಯೊಳೆಯುವಲ್ಲಿಂದ–ಬಣ್ಣ ಉಜ್ಜುವ ವರೆಗೆ ಅವರ ನಟನೆ, ಹಾಸ್ಯ, ಗಾಯನ–ಎಲ್ಲಾ ಕೇಳದೆ, ಕಂಡೆ ಹಾಸ್ಯ ಕೆಲವು ಸಾರಿ ಬಲು ಚಪ್ಪವಾಗಿ ಕಂಡಿತು ಮುಖದಲ್ಲಿ ಭಾವಗಳು ಕುಣಿಯುವಂತೆ ಕಂಡಿತು ಮುಖಕ್ಕೆ ಅನುಕೂಲವಾದ ಮೈ ಬರಲಿಲ್ಲವೆಂದೂ ಅನಿಸಿತು

ತಿರುಗಿ ಕಾಣುವ ಆಸೆಯಾಗಿ ಅವರ ಬಿಡಾರಕ್ಕೆ ಹೋದೆ ಆಗ ಸುತ್ತಲಿನ ಕದ ಮುಚ್ಚಿ, ಕಂಬಳಿ ಹೊದ್ದು, ಚಾ ಕುಡಿಕೆಯೊಂದನ್ನು ಬಳಿಯಲ್ಲಿರಿಸಿಕೊಂಡು, ಊದುಬತ್ತಿಯೊಳೆಯುತ್ತ, ಮಲಗಿದಲ್ಲಿಂದಲೇ—ತನ್ನ ನಾಟಕ ಸ್ಫೂರ್ತಿಯನ್ನು, ಹೊರಡಿಸಿ ಶಿಷ್ಯರಿಂದ ಬರೆಯಿಸುತ್ತಿದ್ದಂತೆ ಕಂಡ ನೆನಪು ಅವರೊಡನೆ ನನಗೆ ಹೆಚ್ಚಿನ ಮಾತು ಕಥೆ ಆಗಲಿಲ್ಲ ಅವರ ಅವತಾರವನ್ನು ಕಂಡು, ಮುಲೇರಿಯಾ ಅಂಟಿರಬೇಕೆಂದು ತಿಳಿದೆ ಆದರೆ ಹೊರಗೆ ಬಂದ ಮೇಲೆ ನನ್ನನ್ನು ಕರೆದೊಯ್ದ ಗೆಳೆಯರೆಂದರು—'ಭೂಪತಿಯ ರೀತಿಯೇ ಹಾಗೆ'–ಎಂದರು "ಇದು ಎಂಥಾ ಪ್ರಾಣಿ?"–ಎಂದೆಂದುಕೊಂಡು ಮನೆಗೆ ಬಂದೆ

ವ್ಯಕ್ತಿಯೇನೋ ವಿಚಿತ್ರವಾಗಿ ಕಾಣಿಸಿತು. ಆದರೆ ಬೇರೆ ಎಷ್ಟೋ ಮಂದಿ ಅವರನ್ನು ಕುರಿತಾಗಿ 'ವಿಲಾಯತಿಯಿಂದ ಮರಳಿ ಬಂದ ನೀತಿಗೆಟ್ಟ ಸರಕು' ಎಂದಿದ್ದರು ಅದೇ ದುರಭಿಮಾನದಿಂದ ನಾನೂ ದಿನ ಕಳೆದೆ

ಇದಾದ ಎಷ್ಟೆಷ್ಟೋ ಸಮಯದ ನಂತರ ನನಗೆ ತಿರುಗಿ ಅವರ ನಿಕಟ ಪರಿಚಯವಾಯಿತು ಮಂಗಳೂರಿಗೇ ಬಂದು ಕೆಲವು ದಿನ ನಮ್ಮೊಡನಿದ್ದರು ಅವರೊಡನೆ, ಎಲ್ಲಾ ದಿನ, ಎಲ್ಲಾ ಸಮಯ ನಾನಿರಲಿಲ್ಲ ಇದ್ದರೆ ಸಂತೋಷವಾಗುತ್ತಿತ್ತೋ ಏನೋ ಆದರೆ ಅವರಂತೆ ನಾನು–ನಿರುದ್ಯೋಗಿ–ಯಾಗಿರಲಿಲ್ಲ ಅವರ ಜತೆಯಲ್ಲಿ ಇರುವುದು ಕಷ್ಟ ಇರಬೇಕಾದರೆ ಸೂರ್ಯೋದಯ ಸಂಜೆಗೆಂದೂ, ಅಸ್ತಮಯ ಬೆಳಿಗ್ಗೆಂದೂ ತಿಳಿಯ ಬೇಕಾದೀತು ಶಿಷ್ಟಾಚಾರ, ಶಿಸ್ತು ವ್ಯವಸ್ಥೆ–ಇವುಗಳು ಕೈಲಾಸಮರ ಕೈಲಾಸದಲ್ಲಿ ಕಾಣಿಸುವುದಿಲ್ಲ

ಅವರ ಆಫೀಸುಖಾನೆ—ಉಡುಗೆ ತೊಡುಗೆ—ಇತ್ಯಾದಿಗಳನ್ನು ಕಂಡರೆ, ಅಲ್ಲಿ, ಅವರು, ಉಸಿರಾಟ ಮಾಡುವುದು ಹೇಗೆ ಎಂದು ಕಾಣಬೇಕು. ಆದರೆ ಕೈಲಾಸಮರಿಗೆ ಆ ಚಿಂತೆ ಭೀತಿಗಳಿಲ್ಲ. ಮಲಗಿದರೆ ಏಳುವ ಉದ್ದೇಶವನ್ನೂ ಅವರು ಇಟ್ಟುಕೊಳ್ಳುವವರಲ್ಲ. ಊಟದ ಚಿಂತೆಯೂ ಅವರಿಗೆ ಬಹಳವಿಲ್ಲ ಮುಖ್ಯ, ನಿನ್ನೆ ಮೊನ್ನೆ ಮಾಡಿದ ಕಾಫಿಯನ್ನು, ಒಂದು ತುಂಡು ಐಸ್ ಹ್ಯಾಕ್–ಅವರ ಬಳಿ ಇರಿಸಿ, ಸಿಗರೆಟಿನ ಡಬ್ಬಿಗಳನ್ನು ಬಳಿಯಲ್ಲೇ ತಂದಿಟ್ಟ ಅವರು ತೃಪ್ತರು ಸಾಧುಗಳಿಗೆ ಗಾಂಜಾ ಇದ್ದಂತೆ ಅವರ ಪ್ರತಿಭೆಗೆ ಅವು ಅನ್ನ

ಒಂದೊಂದು ಸಾರಿ, ಇಂಥ 'ಮೃಗ'ವನ್ನು ಕಂಡು ನನಗೂ ಅನಿಸುತಿತ್ತು–ಈ ವಿದುಳಿನಿಂದ ಕೊಳೆಯಲ್ಲದೆ ಬೇರೇನು ಬಂದೀತು—ಎಂದು ಆದರೆ ತಪ್ಪು ವಿಚಿತ್ರ ರೀತಿಗೆ ಸರಿಯಾದ ಬುದ್ಧಿ ಶಕ್ತಿ ಅವರದು ಮಾತನಾಡಲು ತೊಡಗಿದರೆ, ಆಡುತ್ತಲೇ ಇರುವುದು ಅವರ ರೂಢಿ ಮಾತಿನಲ್ಲಿ ತುಂಬಾ ಹಾಸ್ಯ ನಗದವರನ್ನು ನಗಿಸುವ ಶಕ್ತಿ ಆ ಮಾತುಗಳಲ್ಲಿದೆ ಕೆಲವು ಸಾರಿ, ಮಾತಿನ ಮಳೆಯಲ್ಲಿ ಉಪನ್ಯಾಸ ತೊಡಗಲೂ ಬಹುದು. ಆದರೆ ಉಪನ್ಯಾಸ ಕೊಡಬೇಕೆಂದು ಕರೆದರೆ, ಹರಟೆ ಹೊಡೆದು ಹೊರಟೇ ಹೋಗಲೂ ಬಹುದು ಅವರನ್ನು ನಂಬಿ ಇಂಥದೇ ಬೇಕೆಂದು ಹೇಳಿ ಅದನ್ನೇ ದೊರಕಿಸಿಕೊಳ್ಳುವುದು ಹಿರಿಯರ ಪುಣ್ಯ ಬಲದಿಂದಲೇ ಸರಿ

ಒಮ್ಮೆ ಅವರಿಗೊಂದು ಆಮಂತ್ರಣ ಬಂದಿತು ಒಬ್ಬರು ಗೃಹಸ್ಥರೊಡನೆ, ಮೂರು ಘಂಟೆಗೆ ಬರಲು ಒಪ್ಪಿದರು, ಐದಕ್ಕೆ ಎದ್ದರು, ಆರಕ್ಕೆ ಹೊರಟರು—ಏಳಕ್ಕೆ ಮುಟ್ಟಿದರು. ಇಷ್ಟೆಲ್ಲಾ ಎಚ್ಚರಿಸಿ ಎಚ್ಚರಿಸಿ ದಣಿದ ಬಳಿಕ

ಆದರೆ ಬುದ್ಧಿ ಹೊರಟರೆ ಅಪ್ರತಿಮವಾಗಿ ಮಾತನಾಡುವರು. ನಟನೆಗೆದ್ದರೂ ಹಾಗೆಯೇ. ವಿಮರ್ಶೆ ಮಾಡಲು ತೊಡಗಿದರೂ ಹಾಗೆಯೇ. ಅವರ ವಿಮರ್ಶೆಗಳಲ್ಲಿ ವಿಶೇಷವಾದ ಆಳವಿದೆ. ಕೆಲವು ಸಾರಿ, ಉದಾಸೀನತೆಯಿಂದೆಂದು ತೋರುವಂತೆ ಆಡಿದ ಒಂದು ಶಬ್ದವನ್ನು ಒಡೆದು ನೋಡಲು ನಮಗೆ ನಾಲ್ಕು ದಿನ ಬೇಕಾದೀತು. ಅವರ ಸೂಕ್ಷ್ಮ ಹಾಸ್ಯವನ್ನು ಇಂದು ಕೇಳಿ, ನಾಳೆ ನಗುವವರು ಎಷ್ಟೋ ಮಂದಿ.

ಅವರ ವಿಚಾರಶಕ್ತಿಯೂ ಅದ್ಭುತವಾದಂತೆ, ವಿಚಿತ್ರವೂ ಅಹುದು. ಎಲ್ಲರಂತೆ ನೇರಾಗಿ ನಿಂತು, ನೆಟ್ಟಗೆ ಕಣ್ಣನ್ನು ಬಿಡಿಸಿ ಕಾಣುವ ರೂಢಿ ಅವರದಲ್ಲ ನಾವು ನಡು ರಸ್ತೆಯಿಂದ ನೋಡುವೆವಾದರೆ ಅವರು ಮರದ ತುದಿಯ ಮೇಲೆ, ತಲೆಕೆಳಗಾಗಿ ನಿಂತು ಅರೆಗಣ್ಣನಿಂದ ಕಾಣುವರು. ದನದ ಹಿಂದಿರುವ ಬಾಲದ ಚವರಿ, ನೊಣಗಳನ್ನೋಡಿಸಲು ಎಂದು ನಮ್ಮ ಕಣ್ಣಿಗೆ ಕಂಡರೆ, ಅದು ತನ್ನ ಹಾದಿ ಗುಡಿಸುವ ಕಸಬರಿಗೆ—ಎಂದು ಅವರು ಅಂದಾರು ದನದ ಗಡ್ಡವೆನ್ನಲೂ ಅಂಜುವವರಲ್ಲ

# Canara Bank Limited.

Head Office.—Dongerkery Street, Mangalore. Local Office —Bunder, Mangalore.

BRANCHES -Karkal, Kasargod, Cochin, Udipi, Gangolli, Coondapur, Bombay, Puttur, Calicut, Alleppey, Ernakulam, & Chikmagalur.

| | |
|---|---|
| Authorised Capital | 10,00,000—0—0 |
| Paid up Capital. | 3,00,000—0—0 |
| Reserve and other Funds | 5,26,000—0—0 |

A recent issue of further 3 lacs of capital has been over subscribed within a short period The allotment will be made in January 1933.

In view of the existing monetary conditions the phenomenal downfall in the value of land and of commodities in general, and in view of the combined action of Banks, both exchange and Indigenous in lowering rates all round, we have been reluctantly compelled as and from 1st January 1933 to reduce the rates of interest on deposits. The rules of business have also been amended and copies of the same can be had on application.

CURRENT ACCOUNTS —Interest will be paid at 2 per cent p a from 1st January to 30th June and at 1 per cent from 1st July to 31st December

SAVINGS BANK - 4 per cent per annum.

FIXED DEPOSITS 5 per cent. per annum for 1 year or more.

For rates on other deposits please apply to our Agents at Branches or to the undersigned at Head Office.

Depositors are requested to take notice that the interest accrued on deposits till 31—12—32 will be paid to them on 3rd January 1933 and interest accrued there after will be paid half yearly on 2nd July and 2nd January or at maturity

Mangalore,
28—12 1932.

**P. Sarvothum Nayak,**
*Ag. Secretary & Treasurer*



ನಮ್ಮ ಕಾರ್ಖಾನೆಯು ಈಚೆಗ ಒಂದೆರಡು ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ.

ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

# ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮಪ್ರಕಾರ, ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು, ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು

ಸೆಂಡಲ್‌ಊಡ್, ಜಸ್ಮಿನ್, ಲಿಲಿರೋಸ್, ಲೀಮ್ಡಾ ಸಾಬೂನುಗಳು

(ಲೀಮ್ಡಾ=ನೀಮು, ಮಾರ್ಗೋಸಾ=ಬೇವು)

ಇವುಗಳು ಮುಖ್ಯವಾದ ಟ್ಯಾಲಿಟಗಳು.

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913)

East & West Buildings, Fort Bombay

VALUATION REPORT for the Triennium ending 31st December 1931

Reveals Certain Striking Features.

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation.

Interim Bonus Rs 15/- per 1,000/- per year. both on whole life and endowment with Profit Policies becoming claims before 1st January 1934. FORECAST-STILL GREATER PROSPERITY

**WANTED LADIES & GENTS in Unrepresented Areas.**

Earn Rs. 100/- to 500/- independently per month.

*For particulars apply or please call at:—*

**Chief Organising Office,**
Harbour View, MANGALORE.


# ನೋಟೀಸು.

## ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 24/1933

1 ಪಾಂಡುರಂಗ, 2. ಸುಬ್ರಾಯ—ಮೈನರರು. ಇವರ ಬಗ್ಗೆ ಗಾರ್ಡಿಯಾನಳು ಯಾನ ಕ್ಷೇಮಚಿಂತಕಳು ಇವರ ತಾಯಿ 3ನೇ ಅರ್ಜಿದಾರಳು ರತ್ನಾಬಾಯಿ; 3. ರತ್ನಾಬಾಯಿ; ನಾರಾಪ ಕೃಷ್ಣರಾಯ ಪ್ರಭು ವಿಧವೆ; ಕಾರ್ಕಳ ಕಸಬಾ ಸಾಲ್ಮರದಲ್ಲಿರುವವರು—ಅರ್ಜಿದಾರರು

ಮತ್ತು

1. ಸುಂದರಿ ಬಾಯಿ, 2 ಮಂಜುನಾಥ ಪ್ರಭು, 3. ವಾಸುದೇವ ಪ್ರಭು—ಎದ್ರಿರು.

ಇವರೊಳಗೆ.

1—2ನೇ ಅರ್ಜಿದಾರರ ತಂದೆ 3ನೇ ಅರ್ಜಿದಾರಳ ಗಂಡ ನಾರಾಪ ಕೃಷ್ಣರಾಯ ಪ್ರಭುಗಳವರು ಇದೇ ಕಳೆದ ತಾರೀಕು 10—12—'32ರಲ್ಲು ಕಾರ್ಕಳ ಕಸಬೆಯಲ್ಲಿ ಮೃತಪಟ್ಟದ್ದರಿಂದ ಸದರಿಯವರ ಸಕಲ ಸ್ಥಿರಚರಸೊತ್ತುಗಳಿಗೂ ಹೊರಗಿನಿಂದ ಬರತಕ್ಕ ಐವಜುಗಳಿಗೂ, 1—2ನೇ ಅರ್ಜಿದಾರರು ಸಂಪೂರ್ಣ ಹಕ್ಕುದಾರರು ವ ವಾರೀಸುದಾರರಾಗಿದ್ದು, ಮೃತನಿಗೆ The Oriental Government Security Life Assurance Companyಇಂದ ನಂಬ್ರ 166847ನೇ ಪೋಲಿಸಿಯ ಮೇಲೆ ಬರತಕ್ಕ ರೂಪಾಯಿ 1047—4—0ನ್ನು 1—2ನೇ ಅರ್ಜಿದಾರರ ಬಗ್ಗೆ 3ನೇ ಅರ್ಜಿದಾರಳು ಸದ್ರಿ ಕಂಪೆನಿಯಿಂದ ವಸೂಲು ಹೊಂದುವ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 21—3—'33ಕ್ಕೆ ತನಿಖೆಗ ಇಟ್ಟಿರುವುದರಿಂದ ಆ ವಿಷಯದಲ್ಲಿ ಯಾರೊಬ್ಬರದಾದರೂ ಏನಾದರೂ ಆಕ್ಷೇಪಣೆಗಳು ಇರುವವಾದರೆ ಸದ್ರಿ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರು ಆಗಿ ಅಂಥಾ ಆಕ್ಷೇಪಣೆಗಳನ್ನು ಜಾಹೀರು ಮಾಡಿಕೊಳ್ಳಬಹುದಾಗಿ ಈ ಮೂಲಕ ಸರ್ವ ಜನರಿಗೂ ತಿಳಿಸೋಣಾಗುತ್ತದೆ

**K Santhaya Kamath,**
*Pleader for Petitioners*

## ಉಡುಪಿ ಡಿ ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 104/32 R I A 1189/32.

ಸಾಲಿಕೆರಿ ವೆಂಕಟೇಶಪೈ—ವಾದಿ

ಮತ್ತು

ಮಹಾಬಲೇಶ್ವರ, ಮ್ಯಾನರ್ ಕೂಡಾ—ಪ್ರತಿವಾದಿ.

...ಜಾರಿ ಬಾಂಜಾ, ಬೂಸಿನ... ಬಾಂಜಾ—ಮ...ಯಣ್ಣ ಬಾಂಜನ ಮಕ್ಕಳು—ಉಡುಪಿ ತಾಲೂಕು ನಿಲಾವರ ಗ್ರಾಮ—3ನೇ 4ನೇ ಪ್ರತಿವಾದಿರು

ವೆಂಕಟಾಚಲ ಹೊಳ್ಳ, ಕೃಷ್ಣ ಹೊಳ್ಳರ ಮಗ, ಪಾಂಡೇಶ್ವರ ಗ್ರಾಮ—12ನೇ ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯದಲ್ಲಿ ಆದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ ಮಾಡಬೇಕಾಗಿ ವಾದಿಯು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 4—3—33ಕ್ಕೆ ತನಿಖೆಗ ಇಟ್ಟದೆ ಅದಕ್ಕೆ ಆಕ್ಷೇಪವಿದ್ದರೆ ಸದ್ರಿ ತಾರೀಕಿನಲ್ಲಿ ಹಗಲು 10 ಘಂಟೆಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಉಡುಪಿ,
[illegible]

**K. Ramanath Pai,**
Pleader for Plaintiff

## ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. 606/32.

ಶಂಕರ ನಾರಾಯಣ ಕಡಂಬಳಿತ್ತಾಯ—ವಾದಿ.

ಕೆ. ಪಿ. ಲಕ್ಷ್ಮೀನಾರಾಯಣ ಕಲ್ಲೂರಾಯ—ಪ್ರತಿವಾದಿ.

ಪ್ರತಿವಾದಿಯಿಂದ ಡಿ. ಪ್ರೊ. ನೋಟಿನ ಬಾಬ್ತು ಬರತಕ್ಕ ಅಸ್ಲು ಒಡ್ಡಿ ರೂ 156—8—0ಕ್ಕೆ ವಾದಿಯು ಮೇಲ್ಕಾಣಿಸಿದ ದಾವೆಯನ್ನು ದಾಖಲು ಮಾಡಿ ಸದ್ರಿ ದಾವೆಯ ತನಿಖೆಯು ತಾ 2—3—33ಕ್ಕೆ ಇರುವುದರಿಂದ ಆ ದಿನ ಸದ್ರಿ ಕೋರ್ಟಿನ ಮುಂದೆ ಪ್ರತಿವಾದಿಯು ಹಾಜರಾಗದಿದ್ದರೆ ಆತನ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಸಿಯದ.

ಪುತ್ತೂರು,
[illegible]

**N Venkatramana Kolathaya,**
*Vakil for Plff.*


ಸ್ವದೇಶಾಭಿಮಾನಿ
ಪತ್ರಿಕೆ [illegible]

ಊರಗಳಲ್ಲಿ ಕೇರಗಳಲ್ಲಿ ಕಣಕೆಯ

"ಎಲ್ಲವೂ ಎಲ್ಲರಿಗೂ ಮಹೋತ್ಸವವೆನಿಸುವಂತೆ,"

**ನೂತನ ಸೃಷ್ಟಿಯಾಗಿಯೇ — ನೂತನ ರೂಪದಲ್ಲೇ!!**

ಹೊಸವರ್ಷದಲ್ಲಿ ಶುಭವುಂಟಾಗ ಬಯಸುವವರು ಶುಭೋದಯದ ಚಿಹ್ನೆಯಾಗಿ ಹೊಸ ಖಾದಿಯನ್ನುಡಲೇ ಬೇಕು:

ಹಾಗೆಂದೇ —

**ಎಲ್ಲರ ಎಲ್ಲ ಬಗೆಯ ಫ್ಯಾಶನುಗಳಿಗೊಪ್ಪುವಂತೆ, ತೀರ ಕಡಿಮೆ ದರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಈಗಾಗಲೇ ತರಿಸಲಾಗಿದೆ.**

ಬಿಳೀ ಖಾದಿಯ ಕೆಲವು ದರಗಳು —

45"—7 ಆಣೆ, 50"—8 ಆಣೆ, 54"—9 ಆಣೆ

**27" ಮತ್ತು 28" ಅಗಲದ ಖಾದಿಗೆ ಮತ್ತೂ ಕಡಿಮೆ ಬೆಲೆ!!!**

ವಿಶೇಷ ಸೂಚನೆಗಳು — ಹೊಸ ಖಾದಿಯನ್ನು ಮಾತ್ರ ನಾವು ವಿಕ್ರಯಿಸುತ್ತಿರುವೆವೆಂದು ನಾವು ಹೊಸದಾಗಿ ತಿಳಿಸಬೇಕಾಗಿಲ್ಲದ ಕಾರಣ ಹಳೇ ಖಾದಿಯನ್ನು ಇತರ ಕಡೆಗಳಲ್ಲಿ ಕೊಂಡುಕೊಂಡು ಮೋಸಹೋಗದಿರೆಂದು ಸೂಚನೆ.

ಮಂಗಳೂರು ಸ್ವದೇಶೀ ಸ್ಟೋರ್ಸ್, ರಥಬೀದಿ, ಮಂಗಳೂರು

**Panchmal Narasimha Kamath & Brothers,**

CAR STREET MANGALORE

*31st Oct 1932*

To

The Manager,

**Zenith Life Assurance Company, Limited,**

MANGALORE

DEAR SIR,

I have great pleasure to acknowledge receipt of your cheque No B 942296 on the National Bank of India Ltd Bombay for Rs. 1954—12—0 in full settlement of the claim on Policy No 3765 of my deceased brother Ganapathi Kamath.

The Policy was deliverd to you duly discharged on 21st October 1932 add your Head Office have issued the cheque on the 25th October i e **on the very d y they received the Policy in their hands**

I am really greatful for the prompt settlement of the claim for which your Company is so well known

YOURS FAITHFULLY,

*Sd* Panchmal Narashimha Kamath

**56 ವರುಷಗಳ ಅನುಭವಸಿದ್ಧ ಔಷಧಗಳು**

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಹ ತುಂಬಿಕೊಳ್ಳುವುದು ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ [illegible]

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ ಬಾಟ್ಲಿ 1ಕ್ಕೆ ರೂ 1—2—0 1 ಡಬ್ಬಿ ಮಾತ್ರೆಗೆ ರೂ 6 ^ 2 ಬಾಟ್ಲಿ ಔಷಧಕ್ಕೂ ರೂ 4 [illegible]

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಅಳುಂಬಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು ಮಗುವಿನ ಆರೋಗ್ಯವು ನಿರಾತಂಕವಾಗುವುದು ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಆಣೆ 3 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ರ ರೂ 1—8—0 4 ಬಾಟ್ಲಿಗಳಿಗೆ ರೂ 3,

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಹಾ [illegible] ವೈಯವರ ಶಾಪಿನಲ್ಲಿ ಸಿಗುತ್ತವೆ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.

## ಕೈಗಾರಿಕೆಯು ವೃತ್ತಿಯೂ ಕಲಾತ್ಮಕ ದೃಷ್ಟಿಯೂ.

ಬಂಗಾಳದ ಪ್ರಸಿದ್ಧ ಕಲಾಭಿಜ್ಞರಾದ ಶ್ರೀಯುತ ಓ. ಸಿ. ಗಾಂಗೂಲಿ ಎಂಬವರು ದೇಶೀಯ ಕೈಗಾರಿಕೆಯ ಉನ್ನತಿಯ ಸಂಬಂಧವಾಗಿ ಒಂದು ಲೇಖದಲ್ಲಿ ಕೆಲವು ಸೂಚನೆಗಳನ್ನು ಮಾಡಿರುವರು. ಅವರ ಸೂಚನೆಗಳು ರಾಷ್ಟ್ರೀಯ ಜಾಗ್ರತಿಯ ಈಗಿನ ಕಾಲದಲ್ಲಿ ವಿಶೇಷ ಮಾರ್ಗದರ್ಶಕವಾಗಿರುವುವೆಂಬುದರಲ್ಲಿ ಸಂಶಯವಿಲ್ಲ. ಅವರು ಹೇಳುವುದೇನೆಂದರೆ—"ಸ್ವದೇಶಿ ಎಂಬ ಹೆಸರಿನಲ್ಲಿ ಮನಸ್ಸಿಗೆ ಬಂದಂತೆ ಅನೇಕ ಒರಟು ಸಾಮಗ್ರಿಗಳನ್ನು ತಯಾರಿಸಿ, ಗಿರಾಕಿಗಳಿಗೆ ಕೊಡುವ ಘಾತುಕ ಯತ್ನವನ್ನು ಕಾರ್ಖಾನೆಯವರು ಪ್ರಾರಂಭಿಸಕೂಡದು. ವಸ್ತ್ರಗಳೂ, ಪಾತ್ರೆಗಳೂ, ಕುರ್ಚಿಗಳೂ, ಮೇಜುಗಳೂ ಇವೇ ಮೊದಲಾದ ಅನೇಕ ಸಾಮಾನುಗಳು ಅತ್ಯುಪಯುಕ್ತವಾಗಿರುವುವೆಂಬುದು ನಿಜ. ಆದರೆ ಅವುಗಳು ಕೂಡ ಸುಂದರವಾಗಿಯೂ ಆಕರ್ಷಕವಾಗಿಯೂ ಇರಬೇಕೆಂದು ಮನುಷ್ಯ ಪ್ರಾಣಿಗೆ ಇಚ್ಛೆಯಿರುವುದು. ಮನುಷ್ಯನು ಕೇವಲ ಉಪಯುಕ್ತತೆಯ ಕಡೆಗೆ ಲಕ್ಷಿಸುವುದಿಲ್ಲ. ಕಲ್ಲಿನ ಮೇಲೆ ಕಲ್ಲನ್ನು ಕೂಡಿಸಿ ಮನೆಯನ್ನು ಕಟ್ಟುವನು. ಅದರಿಂದ ಮನುಷ್ಯನಿಗೆ ಸಾಕಾದಷ್ಟು—ಒಳ್ಳೆಯ—ಆಶ್ರಯವು ದೊರೆಯುವುದು. ಹೀಗಿರುವಾಗ ತಾಜಮಹಾಲಿನಂತಹ ರಮಣೀಯವಾದ ಕಟ್ಟಡವನ್ನು ಕಟ್ಟಲು ಮನುಷ್ಯನು ಪ್ರಯತ್ನಿಸುವುದೇತಕ್ಕೆ? ಸೌಂದರ್ಯ ದರ್ಶನದ ಆಶೆಯು ಇದಕ್ಕೆ ಮೂಲವಾಗಿರುವುದು. ಈ ತತ್ವವು ನಮ್ಮ ಕಾರ್ಖಾನೆಗಳ ಒಡೆಯರಿಗೆ ಮನವರಿಕೆಯಾಗಿಲ್ಲವೆಂಬುದು ದುರ್ದೈವದ ಸಂಗತಿಯಾಗಿದೆ. ವೆಂಬ್ಲಿ ಪ್ರದರ್ಶನದಲ್ಲಿ ಇತರ ದೇಶಗಳ ಮಾಲುಗಳ ದೃಷ್ಟಿಯಿಂದ ಹಿಂದೂಸ್ಥಾನದ ಸರಕು ಹಿಂದೆ ಬಿದ್ದಿತೆಂದು ಹೇಳಬಹುದು. ಆದುದರಿಂದ ಯುರೋಪಿನಲ್ಲಿ ಅದಕ್ಕೆ ಮಾರಾಟದ ಸ್ಥಳವು ಸಿಕ್ಕದಂತಾಯಿತು, ಎಂದರೆ ಗಿರಾಕಿಗಳನ್ನು ಸಂಪಾದಿಸಲಾಗಲಿಲ್ಲ. ಈ ದೇಶದ ಸರಕುಗಳಲ್ಲಿ ಆಕರ್ಷಕತೆಯಿಲ್ಲದಿದ್ದುದೇ ಅದಕ್ಕೆ ಕಾರಣವೆಂದು ಹೇಳಬಹುದು. ಈ ವಿಚಾರದಲ್ಲಿ ಜಾಪಾನಿನ ಉದಾಹರಣೆಯನ್ನು ನೋಡಿರಿ. ಅದು ಉಪಯುಕ್ತವೂ ಸುಂದರವೂ ಆದ ಸಾಮಗ್ರಿಗಳನ್ನು ತಯಾರಿಸಿ ಯುರೋಪು ಮತ್ತು ಅಮೇರಿಕಗಳಲ್ಲಿ ಹೆಚ್ಚು ಜನ ಗಿರಾಕಿಗಳನ್ನು ಸಂಪಾದಿಸಿಕೊಂಡು, ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಿಕೊಂಡಿದೆ. "ಕಲೆಯಿಲ್ಲದೆ ಕೇವಲ ಉಪಯುಕ್ತತೆಯ ದೃಷ್ಟಿಯಿಂದ ತಯಾರಿಸಿದ ಸಾಮಾನು ಅನಾಗರಿಕ ವಸ್ತುವು" ಎಂದು ರಸ್ಕಿನನು ಹೇಳಿರುವನು. ಈ ದೃಷ್ಟಿಯಿಂದ ನಮ್ಮ ಕಾರ್ಖಾನೆಗಳವರು ಅನೇಕ ಸುಧಾರಣೆಗಳನ್ನು ಮಾಡಬೇಕಾಗಿದೆ. 'ಸ್ವದೇಶೀ'ಯ ಭಾವನೆಯಿಂದ ಪ್ರೇರಿತವಾದ ಭಾರತೀಯರು ಎಂತಹ ಒರಟು ಸಾಮಾನನ್ನಾದರೂ ಸ್ವೀಕರಿಸುವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ವ್ಯಾಪಾರದ ಉತ್ಕೃಷ್ಟವನ್ನು ಮಾಡಿ, ಜಗತ್ತಿನಲ್ಲಿ ಭಾರತೀಯ ವಸ್ತುಗಳಿಗೆ ಹೆಚ್ಚು ಗಿರಾಕಿಗಳನ್ನು ಸಂಪಾದಿಸಿಕೊಳ್ಳಬೇಕಾದರೆ ಕಲಾತ್ಮಕ ದೃಷ್ಟಿಯನ್ನು ಬಿಟ್ಟರೆ ನಡೆಯುವಂತಿಲ್ಲ.

**Calcutta Municipal Gazette** (ಜ ಕ)

### ರೈತರ ಗತಿ!

ಸಂಸ್ಥಾನದ ರೈತರ ಕಂದಾಯದಿಂದ ಶೇಕಡಾ [illegible]ಯಷ್ಟನ್ನಾದರೂ ಕಡಿಮೆ ಮಾಡಬೇಕೆಂದು ಮದ್ರಾಸಿನ ನ್ಯಾಯ ವಿಧಾಯಕ ಸಭೆಯವರು ಮಾಡಿದ ನಮ್ರ ಠರಾವಿಗೆ ಮದ್ರಾಸ್ ಸರಕಾರವು ಅಸಮ್ಮತಿಸಿ ಮಾಡಿದ ಪ್ರಕಟನೆಯು [illegible]ಕರವಾಗಿದೆ. "ದವಸ ಧಾನ್ಯಗಳ ಬೆಲೆಯು ಏರಿದಾಗ [illegible] ಕಂದಾಯವನ್ನೇರಿಸುವುದೂ ಅಥವಾ ಅವುಗಳ ಬೆಲೆಯು ತಗ್ಗಿದಾಗ ಕಂದಾಯವನ್ನಿಳಿಸುವುದೂ ಅಸ್ವಾಭಾವಿಕವೆಂದು ಸರಕಾರವು ಅಭಿಪ್ರಾಯ ಪಟ್ಟದ್ದು ತೀರ ಶೋಚನೀಯ. ಕಾರಣ ಕೃಷಿಕ ಜನರು ಜಗದ್ವ್ಯಾಪಕವಾದ ಆರ್ಥಿಕ ಸಂಕಷ್ಟದಿಂದ ಬಳಲುತ್ತಿದೆ. ಅಸಹನೀಯ ಕಷ್ಟ ಪರಂಪರೆಗೊಳಗಾದ ರೈತವರ್ಗವು ತಂದೆ ತಾಯಿಗಳಂತಿರುವ ಸರಕಾರದೊಡನೆ ತಮ್ಮ ಕಷ್ಟ ನಿವಾರಣೆಗಾಗಿ ಬೇಡಿದ್ದಾರೆ. ಬಡವರಲ್ಲಿ ಬಡವರಾದ ರೈತರಿಗೆ ಸಹಾಯ ಕೊಡದ ಸರಕಾರವು ಆ ಬಡವರಿಗಿಂತ ಅತ್ಯುತ್ತಮ ಸ್ಥಿತಿಯಲ್ಲಿರುವ ನೌಕರರ ಮೇಲೆ ಭಾವವಿಟ್ಟು ಎಳೆ ಶೇಕಡಾ [illegible]ರ ಕಡಿತವನ್ನು ಹಿಂದೆ ಕೊಡಲು ನಿರ್ಧರಿಸಿದೆ. ಈ ವಿಚಾರವಾಗಿ ಸರಕಾರವು ತನ್ನ ಲಕ್ಷವನ್ನು ಕೊಡಬೇಕಾಗಿದೆ.

# DUO-TREAD TIRES.

## Seiberling's Novel Features.

1. Air Cooled.
2. Duo Tread.
3. Twice the Mileage. FOR
4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ವಂತ ವಿಚಾರಗಳು.

### ೫೦ ಕೋಟಿ ರೂಪಾಯಿ ನಷ್ಟ!

ಕಳೆದೊಂದೇ ವರ್ಷದಲ್ಲಿ ರೈಲುಗಳಿಂದ! ಕಳೆದ ಎಷ್ಟೋ ವರ್ಷಗಳಿಂದ ಅದರಲ್ಲೂ ೧೯೩೮ರಿಂದ ಒಟ್ಟು ೫೦ ಕೋಟಿ ಯನ್ನು ಮೀರಿ ನಷ್ಟವಾಗಿದೆ. ಇದೇಕೆ? ಹೊಣೆಯಾರು? ಇದೂ ಅಲ್ಲದೆ, ವ್ಯಯವಾಗುವ, (ಅನಾವಶ್ಯಕವಾಗಿಯೂ) ಹಣವನ್ನು ನೋಡಿದರೆ, ಇನ್ನು ಹಲವು ವರ್ಷಗಳ ತನಕ ಇನ್ನೂ ಇನ್ನೂ ನಷ್ಟವೇ ಉಂಟಾಗುವಂತಿದೆಯೆಂಬುದನ್ನು ಅಲ್ಲಗಳೆಯ ಲಾಗುವುದಿಲ್ಲ. ಇದಕ್ಕೇನು ಕಾರಣ? ಕರ್ಮಫಲವೆ? ನೇಕಡಾ ೯೦ ಮಂದಿ ಪ್ರಯಾಣಿಕರು ಮೂರನೆ ತರಗತಿಯವರಾದರೂ ಅವರನ್ನು ಹೀನಸ್ಥಿತಿಯಲ್ಲಿ ಪ್ರಯಾಣಮಾಡುವಂತೆ ವಿಧಿಸಿರುವ ರೈಲ್ವೆಗಳಿಗೆ ಸುಖವುಂಟಾಗುವುದೆ? ಮೇಲ್ತರಗತಿಯ ಕೆಲವೇ ಪ್ರಯಾಣಿಕರಿಗಾಗಿ ವ್ಯಯವಾಗುವ ಹಣವು ದಾವಮಾಶಾಯ ವನ್ನು ಮೀರಿ ಎಷ್ಟೋ ನೂರು ಪಾಲಿಗೆ ಅಧಿಕವಾಗಿದೆ. ಸರಕು ಒಯ್ಯೋಣದರಲ್ಲೂ, ವಿದೇಶೀಯರಿಗೆ ಅನುಕೂಲವಾಗುವಂತೆ ದರಗಳ ಲೆಕ್ಕವಿದೆ. ಕರಾಚಿ ಮಾರ್ಗವಾಗಿ ವಿಲಾಯತಿಗೆ ಗೋಧಿಯು ರಫ್ತಾಗುವಾಗ್ಗೆ, ಅದರ ಬೆಲೆಯು ಇತರ ಗೋಧಿ ಗಿಂತ ಕಡಿಮೆಯೆಂದು ಸ್ಪಷ್ಟವಾಗಿದ್ದೆಯಾದರೂ, ಕಲ್ಕತ್ತವು ಗೋಧಿಯನ್ನು ಹಡಗು ಮೂಲಕವಾಗಿ ಹೊರ ಪ್ರದೇಶಗಳಿಂದ ತರಿಸುತ್ತಿದೆಯಲ್ಲದೆ ಪಂಜಾಬಿನ ಗೋಧಿಯನ್ನು ತರಿಸದು; ಅಷ್ಟು ವಿಪರೀತ ಬಾಡಿಗೆಯನ್ನು ರೈಲು ಕಂಪೆನಿಗಳು ವಿಧಿಸು ತ್ತಿವೆ! ಇದರ ಇನ್ನೊಂದು ಫಲವೆಂದರೆ, ಸರಕನ್ನೊಯ್ಯುವು ದಕ್ಕೆ ಇಟ್ಟಿರುವ ಗಾಡಿಗಳಲ್ಲಿ ನೇಕಡಾ ೪೦ ಮಾತ್ರ ಈಗ ಉಪಯೋಗಕ್ಕೆ ಬೀಳುತ್ತಿವೆ; ಉಳಿದುವು ಖಾಲಿ ಪ್ರಯಾಣ ಮಾಡುತ್ತವೆ!

### ಈ ಬಗೆಯ ಸೊಗಸು!

ಸರಕಾರವು ಯಾವುದೊಂದು ಜಮೀನನ್ನು ಕೆರೆ ಬಾವಿ ಗಳೇ ಮೊದಲಾದ ಸಾರ್ವಜನಿಕ ಕಾರ್ಯಗಳಿಗಾಗಿ ಕೊಡುವು ದಾದರೆ, ಅವನ್ನು ಸಮಸ್ತರ ಎಂದರೆ ಹರಿಜನರಿಗೂ ಸಹ ನಿರಾ ತಂಕವಾಗಿ ಉಪಯೋಗಿಸಲು ಬಿಡುವಂತಾಗಬೇಕೆಂಬ ಶರ್ತವನ್ನು ಮುಂಬಾಯಿ ಸರಕಾರವು ಹಾಕಿದೆ. ಆದರೆ, ಮಹಾಬಲೇಶ್ವ ರದ ಕ್ಲಬ್ಬನ್ನು ಮಾತ್ರ ಸರಕಾರದ ಖಜಾನೆಯಿಂದಲೇ ಕಟ್ಟಿಸಿ ಸಿದರೂ, ಅದರ ಲೈಬ್ರರಿಯ ಉಪಯೋಗವು ಬೆಳಿಗೆ ೬॥ ಗಂಟೆಯ ನಂತರ, ಕ್ಲಬ್ಬಿನ ಮೆಂಬರುಗಳಿಗೆ ಮಾತ್ರವಂತೆ. ಕ್ಲಬ್ಬಿನ ಮೆಂಬರರು ತಾವೇ ಒಂದು ಜಗಲಿ ಕಟ್ಟಿಸಿರುವ ಕಾರಣ, ಇತರ ಯಾರಿಗೂ ಕ್ಲಬ್ಬಿಗೆ ಪ್ರವೇಶವಿಲ್ಲವಂತೆ. ಎಂದರೆ, ಒಂದು ಕಟ್ಟಡಕ್ಕೆ ಹೊರಗಣ ಗೇಟನ್ನು ಒಬ್ಬನು ಕಟ್ಟಿಸಿದರೆ, ಅವನೇ ಕಟ್ಟಡದ ಒಳಗೆ ಹೋಗಲು ಅರ್ಹನೆಂದಾಗುವುದೆ? ಅದೂ ಅಲ್ಲದೆ, ಈ ಕ್ಲಬ್ಬಿನಲ್ಲಿ ಹಿಂದೀಯರು ಅವರು ಮೆಂಬರರೇ ಆಗಿರಬಹುದಾದರೂ, ಜಗಲಿ ದಾಟಿ ಹೋಗಲಪ್ಪಣೆಯಿಲ್ಲ ವಂತೆ. ಹಿಂದೀಯರೆಲ್ಲರೂ ಹರಿಜನರೇ?

### ಜಪಾನು ಭುಜ ತಟ್ಟುತ್ತಿದೆ.

ಲೀಗ್ ಆಫ್ ನೇಶನ್ಸಿನ ಸೂಚನೆಗಳನ್ನು ಮನ್ನಿಸಲೊಪ್ಪದೆ, ಎಂದರೆ ಮೆಂಚೂರಿಯವನ್ನು ಚೀನಿಯರಿಗೆ ಬಿಟ್ಟುಕೊಡ ಲೊಪ್ಪದೆ, ಮತ್ತೂ ೬೦,೦೦೦ ಸೈನಿಕರನ್ನು ಗಡಿನಾಡಿನಲ್ಲಿ ನೆಲೆ ನಿಲ್ಲಿಸಿ, ಜಪಾನು ಜಗತ್ತಿನ ಯಾವ ಸರಕಾರಕ್ಕೂ ಎದುರು ನಿಲ್ಲಲು ಹೇಸುವುದಿಲ್ಲವಾಗಿ ಪತ್ರಿಕೆಗಳು ಟೀಕಿಸಿವೆ. ಆಸ್ಟ್ರೇ ಲ್ಯದ ಪಶ್ಚಿಮೋತ್ತರ ಸರಹದ್ದಿನಲ್ಲಿರುವ ದ್ವೀಪಗಳ ಮೇಲೆ ಜಪಾನಿನ ವಿಮಾನಗಳು ಹಾರಾಡುವುದೂ, ಹಡಗುಗಳು ದೂರದಿಂದ ಸುತ್ತಾಡುವುದೂ ತಿಳಿದು ಬಂದಿದೆ. ಆ ಸರಹದ್ದಿ ನಲ್ಲಿ ವಿಲಾಯತಿಯ ಜನಗಳು ಇರಲು ಅಷ್ಟು ಅನುಕೂಲವಾದ ವಾಯು ಗುಣವಿಲ್ಲವೆಂದೂ, ಜಪಾನಿಯರು ಸುಖವಾಗಿರಲು ಯೋಗ್ಯವಾಗಿದೆಯೆಂದೂ ತಿಳಿದೇ ಇದೆ. ಶಾಂತ ಸಾಗರ ದಲ್ಲಿನ ದ್ವೀಪಗಳು ಯುದ್ಧ ನಂತರದಲ್ಲಿ ಜಪಾನಿನ ಕೈಕೆಳಗೆ ಇವೆ; ಅವನ್ನು ಜಪಾನು ಬಿಟ್ಟುಕೊಡುವುದಿಲ್ಲ ಮಾತ್ರವಲ್ಲದೆ, ಅಲ್ಲೇ ತನ್ನ ನೌಕಾಸೈನ್ಯವನ್ನು ಬೇಸಿ ತಿದ್ದಿ ತರುವುದೆಂದೂ ಪ್ರಕಟವಾಗಿದೆ. ಇನ್ನು ಈ ಭಾಗದಲ್ಲಿ ಯುದ್ಧ ಸನ್ನಾಹ ಗಳಾಗುತ್ತವೆಯೋ?

### 'ಹತ್ತಿ' ಸಡಿಲಾಯಿತು.

[illegible] ಎಂಬುದು ಸಂಬಳಗಳಿಗೆ ಪ್ರಯೋಗಿಸಿದ ಕತ್ತರಿ. [illegible] ಅದರ ಮಾವ ಇನ್ನೊ ಎರಡ ಹಾಗೆ ಮುಂದು, ಪ್ರಯತ್ನ ಫಲವಾಗಿ ಸರಕಾರದ ಹುದ್ದೆದಾರರ ಸಂಬಳವು ಎರಡಂತೆ ಕಟ್ಟು ಕಟ್ಟಿ ದ್ದಿತು. ಅಥವಾ ಈ ಆರ್ಥಿಕ ಸಂಕಷ್ಟದ [illegible] ಭಾರತವಾಸಿಗಳು ಕೊಳ್ಳೆಕೊಂಡು ಹೋಗದಂತೆ ಕಟ್ಟು ಕಟ್ಟ ಲಾಗಿದ್ದಿತು. ಈಗ ಹಲವು ತೆರಿಗೆ ಸುಂಕ ಮೊದಲಾದವುಗಳು ಕಳೆದ ವರ್ಷ ಏರಿಸಿದುದರ ಫಲವಾಗಿ, ಸ್ವಲ್ಪ ಹಣ್ಣಗೆ ಹಣವ ಸರಕಾರದ ಖಜಾನೆಯಲ್ಲಿ ಕೂಡಿದೆ ಎಂದು ಆ ಕಟ್ಟನ್ನು ಅರ್ಧ ಕೃರ್ಧ ಸಡಿಲು ಮಾಡುವರೇ ವಿನಹ, ಪ್ರಜಾಗಣದ ಮೇಲೆ ಹೊರಿಸಲಾದ ತೆರಿಗೆಗಳ ಕಟ್ಟನ್ನು ಕೊಂಚವೂ ಇಳಿಸಿಲ್ಲ ಎಂಬುದೇ ಮುಖ್ಯವಾಗಿ ಪತ್ರಿಕೆಗಳು ಪ್ರಕಟಿಸುವ ದೂರು.

### ಮೂರುವ 'ಜಬರದಸ್ತಿ'

ಲಂಕಾಶೈರಿನ ಕಾರ್ಖಾನೆಗಳಿಗೆ ಲಾಭ ಸಿಗುವ ಹಾಗೆ 'ಈಗ ಇಂಡಿಯಕ್ಕೆ ತಿದ್ದ ಹತ್ತಿಯನ್ನು ಕರುಣಿಸುವ ಮೊದಲು ಇಂಡಿಯವು ಸುಂಕವೇನೂ ಪಡೆಯದೆ ಅತ್ಯಧಿಕವಾಗಿ ಲಂಕೇ ಶಿಯರಿನೊಡನೆ ಖಂಡಿತವಾಗಿ ವ್ಯಾಪಾರ ಮಾಡಿಯೇ ತೀರ ಬೇಕೆನ್ನುವ' ಕಠಿನ ಸೂಚನೆಯನ್ನು ಪಾರ್ಲಿಮೆಂಟಿನ ಮುಂದೆ ಯೂ ಆ ಕಾರ್ಖಾನೆ ಮಾಲಿಕರು ಇಟ್ಟಿರುವರು. ಲೋಕ ವನ್ನು ಕಾಮವು ಕುರುಡೆನ್ನುವ ಇಂಗ್ಲಿಷರು ಕಾಮಗಾರಿಯೂ ಕುರುಡೆಂದು ಈಗ ಸಾರುವ ಹಾಗಾಯಿತು. ರಾಜಕೀ ಯಕ್ಕೂ ವ್ಯಾಪಾರಕ್ಕೂ ಸಂಬಂಧವಿರಬಾರದೆಂದು ಇತ್ತ ಸಾರಿರುವುದು ಬೇರೆ; ಅತ್ತ ವ್ಯಾಪಾರ ಮೊದಲು, ನಂತರ ನ್ಯಾಯ ತೀರಿಸುವುದೆನ್ನುವ ಈ ಮಹಾಶಯರಿಗೆ ಏನೆನ್ನುವುದು? ವ್ಯಾಪಾರವೆಂದರೆ, ತನ್ನದನ್ನು ಮಾತ್ರ ಒತ್ತಾಯದಿಂದ ಮಾರಿ ನಫೆ ಕೂಡಿಸುವುದೆಂದರ್ಥವೆ? ಈ ಕಾರ್ಖಾನೆಗಳು ಇಂಡಿಯದಿಂದ ಕೊಂಡುಕೊಳ್ಳುವ ಹತ್ತಿಯೆಷ್ಟು? ೧೯೩೦ರಲ್ಲಿ ೨೭ ಕೋಟಿ ರೂಪಾಯಿ ಮೌಲ್ಯದ ಹತ್ತಿಯನ್ನು ಜಪಾನು ಕೊಂಡುಕೊಂಡಿತು. ಎರಡನೆಯದು ಚೀನಾ ರಾಜ್ಯ; ೪ ಕೋಟಿಯ ಹತ್ತಿ ಕೊಂಡು ೩-೪-ನೆಯದು ಇಂಗ್ಲೆಂಡು! ಆದರೂ ಮಾರುವುದೆಲ್ಲವೂ ತನ್ನ ದಾಗುವಂತೆ ಪ್ರಯತ್ನ ಮಾಡುವ ಧೂರ್ತನಕ್ಕೆ ಬೇರೇನಾದರೂ ಹೆಸರುಂಟೆ? ಜಪಾನು ವಿದೇಶೀಯರೇ ಆದರೂ, ಅದರ ಸರಕು ಕೊಂಡುಕೊಳ್ಳುವ ಹಾಗೆ ವ್ಯಾಪಾರ ಮಾಡಿ ಪ್ರೋತ್ಸಾ ಹಿಸುತ್ತದಲ್ಲ! ಅಷ್ಟಾದರೂ ಇಂಗ್ಲೆಂಡಿನ ಕರ್ತವ್ಯವೇ, ಅಲ್ಲವೆ?

### ಕಾಸಿಲ್ಲದಿದ್ದರೂ ಮೀಸೆಗೆ ತುಪ್ಪ

ವೇತಕ್ಕೆ? ಬಜೇಟು ಅಂದಾಜು ಪ್ರಕಾರ ೩೫ ಲಕ್ಷ ರೂಪಾಯಿ ನಷ್ಟವೇ ತೋರುತ್ತಿರುವಾಗಲೂ, ೧೫ ಲಕ್ಷ ರೂಪಾಯಿ ಖರ್ಚುಮಾಡಿ, ಕಳೆದ ಸಂಬಳವನ್ನು ಕೂಡಿಸಿ ಕೊಡಲು ಮುಂಬಾಯಿ ಸರಕಾರವು ನಿಶ್ಚೈಸಿಯದೆ; ಮತ್ತೂ, ಈ ೩೫ ಲಕ್ಷವನ್ನು ಕೂಡಿಸುವುದಕ್ಕಾಗಿ ಹೊಗೆ ಸೊಪ್ಪು ಮೇಲೆ ಸುಂಕವೇ ಮೊದಲಾದ ನಾನಾ ಹೊಸ ತೆರಿಗೆಯೇರಿಸುವ ಏರ್ಪಾಡು ಮಾಡುತ್ತಲೆ ಇದೆ. ಇಂಗ್ಲೆಂಡಿನಲ್ಲಿ ನೋಡಬಾರದೆ! ನಮ ಗಿಂತಲೂ ಧನಾಢ್ಯ ದೇಶವದು; ಆದರೂ ಕಳೆದ ವರ್ಷದಲ್ಲಿ ಕತ್ತರಿ ಸಿದ ಸಂಬಳಗಳನ್ನೂ ಗ್ರಾಂಟುಗಳನ್ನೂ ಕಿಂಚಿತ್ತಾದರೂ ಹೆಚ್ಚಿಸ ಬಹುದೆಂದು ಖಜಾನಾ ಮಂತ್ರಿಗಳನ್ನು ಬೇಡಿಕೊಂಡರೆ, ಅವ ರೇನೆಂದಾರು? ಊ—ಹೂಂ? ಇಷ್ಟು ಅಲ್ಲದೆ, ಇನ್ನು ಯಾವ್ಯಾವ ವಿಧಗಳಲ್ಲಿ ಉಳಿತಾಯದ ಕಾಸನ್ನಾದರೂ ಕಷಿಡಿಸ ಲಾಗುವುದೂ ಅದನ್ನು ನೋಡಿಯೇ ನೋಡುವೆನೆಂದರು. ಇಲ್ಲಿಯ ಖಜಾನಾ ಮಂತ್ರಿಗಳೂ ತಂತ್ರಿಗಳೂ ಬ್ರಿಟಿಷರೇ ಆದರೂ, ಬ್ರಿಟಿಷರು ತಮ್ಮ ರಾಜ್ಯದಲ್ಲೂ ಇಂಡಿಯಾದಲ್ಲೂ ಈ ವ್ಯವಹಾರ ಭೇದವನ್ನು ತೋರಿಸುತ್ತಿರುವುದೇಕೆ? ಬ್ರಿಟನ್ನು ಬ್ರಿಟಿಷರ ಸ್ವಂತ ರಾಜ್ಯ, ಇಂಡಿಯವೋ 'ಟ್ರಸ್ಟು'!

### ಯರವಾಡಾದಿಂದ

ಮಹಾತ್ಮಾಜೀಯವರು ಅಸ್ಪೃಶ್ಯತಾ ನಿವಾರಣೆಗಾಗಿ ಆಗಾಗ ಬರೆವ ಸಂದೇಶಾವಳಿಗಳಿಂದ, ಅವರಲ್ಲಿ ಈ ಚಳವಳಿವು ಜಯಹೊಂದುವ ಬಗ್ಗೆ ಎಷ್ಟೊಂದು ಆತ್ಮವ್ಯಥೆ ಉಂಟಾಗುತ್ತ ಲಿದೆ ಎಂಬುದು ವ್ಯಕ್ತವಾಗುವುದು. ಇತ್ತ ಸುಬ್ಬರಾಯನರ ಬಿಲ್ಲು ಮೂಲೆ ಪಾಲಾಯಿತು; ರಂಗೈಯರ ಬಿಲ್ಲು ಇನ್ನೆ ರಡು ವರ್ಷಗಳಲ್ಲೇನೋ ಹೊರ ಬರಬಹುದು; ಮಠಾಧಿಕಾರಿ ಗಳು ನೂತನವಾಗಿ ಧಾರ್ಮಿಕ ತತ್ವಗಳನ್ನು ಸಾರಲು ತೊಡ ಗಿರುವರು; ಇಂದೇಶ್ವರರೂ ಈ ಬಿಲ್ಲುಗಳಿಂದೇನೂ ಪ್ರಯೋ ಜನವಿಲ್ಲ, ಒಂದು ವೇಳೆ ಅವು ಮಂಜೂರಾಗಿ ಕಾನೂನಾದರೂ ಅನಂತರ ಏನು ಮಾಡುವಿರೆಂದು ಈಗಲೇ ತಿಳಿಸಿರಿ ಎನ್ನುತ್ತಾರೆ. ಅಂತೂ ಮಹಾತ್ಮರ ಆತ್ಮವ್ಯಥೆ ಹೆಚ್ಚುತ್ತಲೇ ಇದೆ. ಈ ವ್ಯಥೆಗೆ ಶಾಂತಿಯೆಂದಿಗೆ?

++ ++

## NOTE...S
## ನೋಟಗಳು.

ಮಠಾ ಮಠಾ ಮಠಾಧೀಶರುಗಳು ಆಕಸ್ಮಿಕವಾಗಿ ಭಗವದ್ಗೀತಾದಿ ವಿಚಾರಗಳನ್ನು ಕುರಿತಾಗಿ ಆತ್ಯಾಧುನಿಕ ರೀತಿ ಯಲ್ಲಿ ಭಕ್ತರುಗಳಿಗೆ ಲೆಕ್ಚರು ಕೊಡಲಾರಂಭಿಸಿರುವರು. ನಿಜವಾಗಿಯೂ ಅಸ್ಪೃಶ್ಯತೆಯ ದೋಷಗಳನ್ನು ಭಕ್ತರಲ್ಲಿ ಕಡಿಮೆ ಮಾಡುವುದಕ್ಕೆ ಇದೇ ಸರ್ವಶ್ರೇಷ್ಠ ಉಪಾಯವು.

* • * •

ದೇಶ ಭಾಷೆಗಳೇ ತಾಯಿನಾಡಿನಷ್ಟೆ ಪ್ರಿಯವಾದುವು ಎಂಬುದಕ್ಕೆ ಸರ್ವರೂ ತಲೆದೂಗತಕ್ಕ ಎರಡು ಉದಾಹರಣೆ ಗಳನ್ನು ಇತಿಹಾಸದಿಂದೆತ್ತಿ ತೋರಿಸಿ, ಬೀ. ಎ. ವಿದ್ಯಾರ್ಥಿಗಳು ಪರೀಕ್ಷೆಯಾದ ಮೇಲೂ, ದೇಶ ಭಾಷೆಗಳನ್ನೆ ಅಭ್ಯಸಿಸಿ ಅವು ಗಳಲ್ಲಿಯೆ ತಾವು ವಿದ್ಯಾರ್ಜನೆಯಿಂದ ಲಭಿಸಿ ತಂದ ಅಮೂಲ್ಯ ನೂತನ ಭಾವಗಳನ್ನು ನಿರಕ್ಷರರಿಗೆ ಗ್ರಾಮ ಗ್ರಾಮಗಳ ಬೋಧಿಸಬೇಕು ಎಂದು ಎಲೊಶಿಯಸ್ ಕೋಲೆಜಿನ ಕರ್ನಾಟಕ ಸಂಘದಲ್ಲಿ ರೆವ್ಹರ ಗುರುವರ್ಯರು ಲೆಕ್ಚರು.

• • • •

ಕನ್ನಡ ಭಾಷೆಯ ಮೇಲೆ ಹೆಚ್ಚಾದ ಪ್ರೇಮವನ್ನು ಈ ರೀತಿ ಇತರ ದೇಶದ ಗುರುಗಳು ನಮ್ಮ ವಿದ್ಯಾರ್ಥಿಗಳಿಗೆ ಬೋಧಿ ಸಿರುವ ಬಳಿಕ, ಕನ್ನಡ ಭಾಷಾಭಿಜ್ಞರ ಆಶ್ರಯಲ್ಲಿ ತಿದ್ದಿ ಬೆಳೆದ ನಾಳಿನ ಪದವೀಧರರು, ಮುಂದಣ ತಲಾಂತರದಲ್ಲಾ ದರೂ ನಮ್ಮಲ್ಲಿ ಕನ್ನಡ ಪ್ರೇಮವು ಬೆಳೆವಂತೆ ಮಾಡಲಾರ ರಾದರೆ, ವಾಸ್ತವವಾಗಿಯೂ ನಮ್ಮ ಜಿಲ್ಲೆ ಈ ಭಾಗದಲ್ಲಿ ದುರ್ಭಾಗ್ಯವನ್ನೆ ಬೇಡಿದ್ದುದೆಂದು ಮೈಸೂರಂವರೂ ಹೇಳದಿರು ವರೆ?

• • • •

ಹೆದ್ದಾರಿಗಳ ಬದಿಗಳಲ್ಲಿ ಕೆಂಪು ಕಂಬಗಳೆದ್ದು, ನಾಲ್ಕು ನಾಲ್ಕು ಸಲ ಪ್ರತಿಷ್ಠೆಹೊಂದಿ, ಈಗ ಹತ್ತೆಂಟು ಸರಿಗೆ ದಾರ ಗಳ ಜನಿವಾರ ತಳೆದಿವೆ. ಇನ್ನು ಇವುಗಳಲ್ಲಿ ವಿದ್ಯುತ್ತೇಜಸ್ಸು ತುಂಬಿತ್ತೋ, ಊರಲ್ಲಿ ಮತ್ತೆ ಕತ್ತಲೆಯೆ ಇರದು, ಎಲ್ಲಾ ಬೆಳಕೇ!

* * * *

ಈ ಸರಿಗೆಗಳೂ ತುಂಡಾಗುವುದಿದೆಯಂತೆ, ಹಾಗಾದರೆ, ಅವುಗಳ ತುಂಡುಗಳ ತುದಿಗಳ ದಾರಿಗಳನ್ನು ತಟ್ಟಿ, ಬ್ರಹ್ಮ ತೇಜಸ್ಸಿನಿಂದ ಒಮ್ಮೆಲೇ ಮೋಕ್ಷಕ್ಕೆ ಕಳುಹದ ಹಾಗೆ, ಯಾವು ದಾದರೂ ಶಾಸ್ತ್ರೀಯ ತಡೆಗಳಿವೆಯೊ? ಅವುಗಳ ಪ್ರಯೋಗ ವಾಗಿದೆಯೊ? ಎಂದು ನೋಡದೆ ಇರಬಹುದೆ? ಬೆಳಕು ಬರುವು ದೆಂದು ಅಯಾಚಿತವಾಗಿ ಚಕಿತರಾಗಿ ದಾರಿಗರನ್ನು ಕೊಲ್ಲು ವುದೇ ಮಾತ್ರವಲ್ಲದೆ, ಸ್ಮಶಾನಕ್ಕೊಯ್ಯುವ ರಗಳೆಯು ಬೇಡ ವೆಂದು ಬಿದ್ದಲ್ಲೇ ಬೆಳಕು ಹತ್ತಿಸಿ ಭಸ್ಮೀಭೂತರಾಗಿ ಮಾಡ ದಿದ್ದರೆ ಸಾಕೆನ್ನುವುದು ಜೀವಿರವರ ಪ್ರಾರ್ಥನೆ.

\+ \+ \+ \+

---

### ಈ ಭೂಮಿಯೆಂದರೇನು?

ಪ್ರೊಫೆಸರ್ ರೆಜಿನಾಲ್ಡ್ ಎ. ಡೇಲಿ ಎಂಬ ಹಾರ್ವರ್ಡ್ ಯುನಿವರ್ಸಿಟಿಯ ಭೂಶಾಸ್ತ್ರ ವಿದ್ವಜ್ಞರು ಭೂಮಿಯು ಏನ ನ್ನೆಲ್ಲ ಕೂಡಿಕೊಂಡಿರುವುದೆಂದು ಪ್ರಕಟಿಸಿರುತ್ತಾರೆ. ಭೂಮಿ ಯನ್ನು ಅಗೆದರೆ ೪೦ ಮೈಲುಗಳ ತನಕ ಮಣ್ಣು ದೊರೆಯು ತ್ತದೆ, ೧೮೦೦ ಮೈಲುಗಳ ಅಡಿಯ ಭೂಗರ್ಭದಲ್ಲಿ ದ್ರಾವಕ ರೂಪದ ಬೆಂಕಿಯಿದೆಯೆಂದೂ ೪೦೦೦ ಮೈಲು ಅಡಿಯಲ್ಲಿ ಕಬ್ಬಿಣ, ನಿಕ್ಕೆಲ್ ಲೋಹಗಳ ದ್ರಾವಕವಿದೆಯೆಂದೂ ಅವರು ಶೋಧಿಸಿರುವರು. ಒಂದಾನೊಂದು ಕಾಲದಲ್ಲಿ ಈ ಭೂಮಿಯು ಮೇಲಿನ ಸೂರ್ಯನಂತೆ ಅಗ್ನಿಯ ಚೆಂಡಾಗಿತ್ತೆಂದೂ ಅದು ಸಹಸ್ರಮಿಲಿಯ ವರ್ಷಗಳ ಕಾಲಯಾಪನೆಯಲ್ಲಿ ತಣ್ಣಗಾಗಿ ಭೂಮಿಯುಂಟಾಯಿತೆಂದೂ ಕ್ರಮೇಣ ಸೂರ್ಯನೂ ಉಷ್ಣವನ್ನು ಕಡಿಮೆ ಮಾಡುತ್ತ ಬರಬಹುದೆಂದೂ ಭೂಶಾಸ್ತ್ರ [illegible] ವ್ಯಾಸ್ತಜ್ಞರ ಹೇಳಿಕೆಯಿದೆ.

# "ಗಾಂಧಿಜೀ - ರಾಜಕೀಯ ಕೈದಿಗಳನ್ನು ಬಿಡಿರಿ!"

ಮಹಾತ್ಮಾ ಗಾಂಧಿಯವರ ಬಿಡುಗಡೆಯನ್ನು ಮಾಡಬೇಕೆಂದು ಈಗ ದೇಶ ವಿದೇಶಗಳಲ್ಲಿ ಮಹಾ ಆಂದೋಲನವು ನಡೆಯುತ್ತಿದೆ. ಭರತವರ್ಷದಲ್ಲಿ ಸರ್ ತೇಜ ಬಹದ್ದೂರ್ ಸಪ್ರೂ, ಶ್ರೀ ಶ್ರೀನಿವಾಸ ಶಾಸ್ತ್ರಿ, ಚಿಂತಾಮಣಿ ಮೊದಲಾದ ಪ್ರಭೃತಿಗಳೇ ಈ ಕುರಿತು ಮುಂದಾಳುತ್ವವನ್ನು ವಹಿಸಿಕೊಂಡಿರುವರು. ಲಂಡನಿನಲ್ಲಿ ಹಿಂದೀಯರ ಸಭೆ ಕೂಟಗಳು ಆಗಾಗ್ಗೆ ಜರಗಿ, ಪ್ರತಿಯೊಂದು ಸಂಘವು ಮಹಾತ್ಮರ ಬಿಡುಗಡೆಯಿಲ್ಲದೆ, ನಿರ್ವಾಹವಿಲ್ಲವೆಂದೆನ್ನುತ್ತಿದೆ. ಡಿಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಗಾಂಧಿಜೀಯವರ ಬಿಡುಗಡೆಯ ಕುರಿತು ಬಿರುಸು ಪ್ರಶ್ನೋತ್ತರಗಳು ನಡೆದುವು. ಶ್ರೀ ರಂಗ ಅಯ್ಯಂಗಾರರೇ ಮೊದಲಾದ ದೇಶಧುರೀಣರು ಗಾಂಧೀ ಬಂಧವಿಮುಕ್ತತೆಯ ಪ್ರಶ್ನೆಯನ್ನೇ ದಿನಂಪ್ರತಿ ಎಂಬಂತೆ ಎತ್ತಿ ಹಿಡಿದು ಮಾತನಾಡುತ್ತಿರುವರು. ಸರಕಾರವೇ ಪ್ರಥಮದಲ್ಲಿ ತಪ್ಪು ದಾರಿಯನ್ನು ಹಿಡಿಯಿತು—ಗಾಂಧಿಯವರಲ್ಲ ಎಂದೇ ಹೇಳುತ್ತಿರುವರು. ಗಾಂಧಿಜೀಯವರನ್ನು ೧೯೩೨ರ ಜನವರಿ ೪ನೇ ತಾರೀಕಿನ ದಿನ (ರೌಂಡ್ ಟೇಬಲಿನಿಂದ ಹಿಂತಿರುಗಿದಾಗ) ಬಂಧಿಸಿದರಷ್ಟೆ! ಆ ಬಂಧನದ ನ್ಯಾಯ ವಿಮರ್ಶೆಯು ಈಗ ಸಾರ್ವತ್ರಿಕವಾಗಿ ನಡೆಯುತ್ತಿದೆ. ಪ್ರತಿಯೊಂದು ಹಿಂದೀಯ ಪತ್ರಿಕೆಯು ಲೋರ್ಡ್ ವಿಲ್ಲಿಂಗ್ಡನ್ನರೇ ಈ ರೀತಿಯ ದುಃಸ್ಥಿತಿಯ ಜನನಕ್ಕೆ ಕಾರಣರೆಂದು ಆರೋಪಿಸುತ್ತಿದೆ. ಇಂತಹ ಆರೋಪದ ಜಡಿಮಳೆಯು ವಿಪರೀತವಾಗಿ ಸುರಿಯುತ್ತಿರುವುದನ್ನು ಕಂಡು ಕಳೆದ ಗುರುವಾರ ಇಂಡಿಯಾ ಸರಕಾರವು ಅಂದು ಗಾಂಧಿಜೀಯವರೊಳಗೂ ವೈಸರಾಯರೊಳಗೂ ನಡೆದ ಪತ್ರ ವ್ಯವಹಾರಗಳನ್ನು ಕತ್ತರಿಸಿ ಬೇಕು ಬೇಕಾದ ತುಂಡುಗಳನ್ನು ಪ್ರಕಟಿಸಿತು. ಆ ಪತ್ರವ್ಯವಹಾರದ ತುಂಡುಗಳನ್ನು ಓದುವವರು ಎಲ್ಲಾ ತಪ್ಪು ಗಾಂಧಿಯವರದ್ದೇ ಎಂದು ತಿಳಿಕೊಳ್ಳಲೆಡೆಯಿದೆ. ಆದರೆ ಮದರಾಸಿನ ಹಿಂದೂ ಪತ್ರಿಕೆಯು ಸರಕಾರದ ಈ ತುಂಡು ತುಂಡು 'ಪ್ರೆಸ್ ಕಮ್ಯುನಿಕ್'ಗಳ ಪ್ರಕಟಣೆಯ ಅಡಿಯಲ್ಲಿ ಗಾಂಧೀ ವೈಸರಾಯರೊಳಗೆ ಅಂದು ನಡೆದ ಸಂಪೂರ್ಣ ಪತ್ರವ್ಯವಹಾರವನ್ನು ಪ್ರಕಟಿಸಿ ತಪ್ಪು ಸರಕಾರದ ಕಡೆಯಲ್ಲೇ ನಿಂತಿದೆಯೆಂದೂ, ಹೀಗಿರುವುದರಿಂದ ಯಾವ ನೆವನವನ್ನೂ ಮುಂದಿಕ್ಕದೆ ಸರಕಾರವು ಗಾಂಧಿಜೀಯವರನ್ನೂ ಅವರ ಒಡನಾಡಿಗಳನ್ನೂ ಬಿಟ್ಟು ಕೀರ್ತಿ ಗಳಿಸುವುದು ಯುಕ್ತವೆಂದೂ ತನ್ನ ಅಗ್ರಲೇಖನದಲ್ಲಿ ವಿಮರ್ಶಿಸಿದೆ.

ಗಾಂಧಿಜೀಯವರ ಬಿಡುಗಡೆಯ ಕುರಿತು ಸರ್ ಸಾಮುವೇಲ್ ಹೋರರು, ಲಂಡನಿನಲ್ಲಿ "ಎಷ್ಟರ ತನಕ ಅವರ ಪ್ರತಿಜ್ಞೆ ಸಿಗುವುದಿಲ್ಲವೋ ಅಷ್ಟರ ತನಕ ಗಾಂಧಿಯವರದಾಗಲೀ ಕೊಂಗ್ರೆಸ್‌ವಾಲರದಾಗಲೀ ಬಿಡುಗಡೆ ಇಲ್ಲ! ಎಂದರು. ಅವರ ಈ ಮಾತುಗಳು ಹೊರಬೀಳುವ ಮೊದಲು ನ್ಯುಡಿಲ್ಲಿ ಎಸೆಂಬ್ಲಿಯಲ್ಲಿ ಹೋಮ್ ಮೆಂಬರರಾದ ಸರ್ ಹೆನ್ರಿ ಹೈಗರು "ಗಾಂಧಿಯವರನ್ನು ಬಿಡುಗಡೆ ಮಾಡಿತೆನ್ನುವ, ಅವರು ಚಳವಳಿವನ್ನು ಪುನರಾರಂಭಿಸಿದರೆ! ಎಂಬ ಶಂಕೆಯನ್ನು ತೋರ್ಪಡಿಸಿರುವರು. ಇದರಿಂದ ಗಾಂಧಿಜೀಯವರ ಬಿಡುಗಡೆಯ ಕುರಿತು ಯಾವ ಸದಿಚ್ಛೆಯೂ ಸರಕಾರಗಳೊಳಗೆ ನಡೆದಿರುವುದಿಲ್ಲವೆಂದು ವಿದಿತವಾಗುತ್ತದೆ. ಸರ್ ಸಾಮುವೇಲ್ ಹೋರರ ಉದ್ವಿಗ್ನಪೂರ್ವಕ ನುಡಿಗಳನ್ನು ಕೇಳಿದ ಸರ್ ತೇಜ ಬಹದ್ದೂರ್ ಸಪ್ರೂಗಳು ಈಗ ನಿರಾಶೆಗೊಂಡಿರುವರು. ತಾ

ದಿನ ಅವರು ಈ ಕುರಿತು ಮನ ಕರಗಿಸುವ ಒಂದು ಪ್ರಕಟಣೆಯನ್ನು ಮಾಡಿರುವರು. ಅದರಲ್ಲಿ ಅವರು "ಥೋಮಸ್ ವಿಲ್ಲಿಯಮರು ಪಾರ್ಲಿಮೆಂಟಿನಲ್ಲಿ ಗಾಂಧೀ ವಿಮುಕ್ತತೆಯ ಕುರಿತು ಹಾಕಿದ ಪ್ರಶ್ನೆಗೆ ಸರ್ ಸಾಮುವೇಲ್ ಹೋರರು ಕೊಟ್ಟ ನಿರಾಶಾಜನಕವಾದ ಉತ್ತರವನ್ನು ಕೇಳುವಾಗ ಅವರು ತೃತೀಯ ಗೋಷ್ಠಿಯ ಸಮಯದಲ್ಲಿ ತೋರ್ಪಡಿಸಿದ ಭಾವದ ಅಭಾವವು ಈಗ ತುಂಬಾ ಇದ್ದಂತೆ ತೋರುತ್ತದೆ. ಜೊಯಿಂಟ್ ಸಿಲೆಕ್ಟ್ ಕಮಿಟಿಯಲ್ಲಿ ಖಾಲಿ ಕುರ್ಚಿಗಳಿರುವುದನ್ನು ತಾನು ನೋಡಿ ಸಹಿಸಲಾರೆ ಎಂದು ಸರ್ ಸಾಮುವೇಲ್ ಹೋರರು ಹೇಳಿದ್ದರು. ಹಾಗಿರುವಾಗ ಅವರು ಗಾಂಧಿಜೀಯವರನ್ನು ಬಿಡುಗಡೆ ಮಾಡಿ ಲಂಡನಿಗೆ ಕರೆಯಬಹುದಲ್ಲ — ಭಾರತ ದೇಶದಲ್ಲೂ, ಇಂಗ್ಲಾಂಡಿನಲ್ಲೂ ಪಾರ್ಲಿಮೆಂಟು, ನ್ಯಾಯವಿಧಾಯಕ ಸಭೆಗಳಲ್ಲೂ ಗಾಂಧಿಯವರ ಬಿಡುಗಡೆಗಾಗಿ ಶತವಾರು ಮನವಿಗಳು ಬರುತ್ತಿವೆ. ಪ್ರತಿಥಾ ಪ್ರಾಪನ್ನರಾದವರ ಮನವಿಗಳಿಗೂ ಸರಕಾರಗಳ ಲಕ್ಷ್ಯವು ಹೋಗದಿರುವುದನ್ನು ನೋಡಿ ಬಹಳ ಅನೇಕರು ಖೇದಗೊಂಡಿದ್ದಾರೆ. ಕಾಯಿದೆಭಂಗ ಚಳವಳಿವನ್ನು ಪ್ರಾರಂಭಿಸುವುದಿಲ್ಲವೆಂದು ವಾಗ್ದಾನ ದೊರೆಯಬೇಕಂತೆ! ಇವರು ಅಂತಹ ವಾಗ್ದಾನವನ್ನು ಕೊಡುವವರನ್ನೇ ಬಂಧಿಸಿಟ್ಟರೆ ಅದನ್ನು ಕೊಡುವವರಾರೋ ನಾ ಕಾಣೆ! ಸರಕಾರವು ಈಗ ಗಾಂಧಿಜೀಯವರ ಸದ್ಗುಣದ ಕುರಿತು ಭದ್ರತಾಪೂರ್ವಕ ಪ್ರತಿಜ್ಞೆಯನ್ನು ಕೊಡಬೇಕೆಂದು ಕೇಳುವಂತಿದೆ. ನಿಜವಾದ ರಾಜನೀತಿಜ್ಞರಾದವರು ಈ ರಾಜಕೀಯ ಸಮಸ್ಯೆಯಲ್ಲಿ ಗಾಂಧಿಜೀಯವರಿಂದ ಅಂತಹ ವಾಗ್ದಾನವನ್ನು ಕೇಳುವುದು ಸಹಜವಾಗಿಯೂ ಅಸಂಬದ್ಧ ವಿಷಯವೆಂದು ಭಾಸವಾಗುತ್ತಿದೆ. ಗಾಂಧಿಜೀಯವರನ್ನೂ ಅವರ ಅನುಯಾಯಿಗಳನ್ನೂ ಕತ್ತಲೆಯ ಕೋಣೆಯಲ್ಲಿಟ್ಟು ಸರಕಾರವು ಎಷ್ಟು ದಿನಗಳನ್ನು ದೂಡಬಹುದೆಂದು ಯೋಚಿಸಿದೆ? ಇಂಗ್ಲಾಂಡ್ ಹಿಂದೂಸ್ಥಾನಗಳ ಸಾರ್ವಜನಿಕ ಪ್ರತಿಧ್ವನಿಯನ್ನು ಅದು ಎಷ್ಟರ ಮಟ್ಟಿಗೆ ಕಿವಿ ಮೇಲೆ ಹಾಕಿಕೊಳ್ಳದಿರಲು ಅಸಾಧ್ಯ? ಒಂದು ಮಾತಿನಿಂದ ಸರ್ ಹೋರರು ತಮಗೆ ಎಲ್ಲಾ ಹಿಂದೀಯರ ಸಹಕಾರ ಸೌಹಾರ್ದ್ರತೆಗಳು ಬೇಕೆನ್ನುತ್ತಿದ್ದಾರೆ. ಅದೇ, ಒಂದು ಮಾತಿನಿಂದ ಅಂತಹ ಸಹಕಾರ ಸೌಹಾರ್ದ್ರಗಳು ಬರುತ್ತಿರುವ ಬಾಗಿಲನ್ನೇ ಧಾಲ್ಲನೆಂದು ಮುಚ್ಚುತ್ತಿದ್ದಾರೆ. ಇವರಿಗೆ ಊಹನಾಶಕ್ತಿ ಇಲ್ಲವೆಂದು ನನಗೆ ತೋರುತ್ತದೆ. ಸರ್ ಹೋರರ ಕೈಯಲ್ಲಿರುವ ಈ ಸಮಸ್ಯೆಗೆ ಅವರ ಈ ರೀತಿಯ ವರ್ತನದಿಂದ ಎಷ್ಟು ವಿಘಾತವಾಗಲಿದೆಯೋ, ಎಷ್ಟು ಹಾನಿ ತಟ್ಟಿದೆಯೋ ಅವರೇ ಯೋಚಿಸಲಿ! ಪ್ರಾಮುಖ್ಯವಾದ ರಾಜ್ಯಸಮಸ್ಯೆಗಳನ್ನು ತೀರ್ಮಾನಿಸುವ ವಿಧಾನವು ಇದಲ್ಲ—ಅನುಸರಿಸುವ ಸೂತ್ರವು ಇದಲ್ಲ. ಹಿಂದೀಯರಿಗೆ ಬ್ರಿಟಿಷ ಸರಕಾರವು ಮಾಡಲಿರುವ ರಾಜ್ಯದಾನವು ಅವರ ನಮ್ರ ವಿಧೇಯರಾದ ಕೆಲವರ ಅಭಿಪ್ರಾಯ ವೇರೆಗೂ ಸರಕಾರದ ಹಿತೈಷಿಗಳೆಂದ ನಟಿಸುವ ಕೆಲವು ಪ್ರ[illegible]ಗಳವರ ಸಂತೃಪ್ತಿಗಾಗಿಯೂ ಎಂದು ನಾನು ನಂಬಲಾರೆ. ಈಗ ಕಾಲಾತೀತವಾಯಿತು. ಕೊಂಗ್ರೆಸ್ಸಿನ ಅನುಯಾಯಿಗಳಲ್ಲ" ಇನ್ನಿತರ ಮಂದಪಕ್ಷದವರ ಆಶೆ ಉದ್ದೇಶಗಳು ನೆರವೇರಬೇಕೆಂದಾದರೆ ಬ್ರಿಟಿಷ ಸರಕಾರವೂ ಇಂಡಿಯಾ ಸರಕಾರವೂ ತಮ್ಮ ಪ್ರಸ್ತುತ ನೀತಿಯನ್ನು ತೊರೆದು ಶಾಂತಿಯ ಕೊಡುಗೈಯನ್ನೆತ್ತಿ ಹಿಡಿಯಬೇಕು ಎಂದಿರುವರು.

ದೇಶದೊಳಗಿನ ಈ ಮಹಾ ಆಂದೋಲನಗಳಿಂದಾಗಿಯೂ ಪತ್ರಿಕೆಗಳ ಟೀಕೆಗಳಿಂದಾಗಿಯೂ ಸರಕಾರವು ಗಾಂಧಿಜೀಯವರನ್ನು ಬಿಡುಗಡೆ ಮಾಡುವ ಸಂದರ್ಭವು ಬೇಗನೆ ಸಂಭವನೀಯವಾಗಿ ಒದಗಲಿದೆಯೆಂದು ಊಹಿಸಲಾಗಿದೆ. ಅಂತೂ, ಗಾಂಧಿಜೀಯವರ ಮತವೇನೆಂದು ಇಷ್ಟರ ತನಕವೂ ತಿಳಿದಿಲ್ಲ. ಅವರನ್ನು ಬಿಡುಗಡೆ ಮಾಡಿದರೆ ಗಾಂಧಿಜೀಯವರು ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲೇ ನಿಮಗ್ನರಾಗುವರೆಂದು ಹೆಚ್ಚಿನವರು ಊಹಾಪೋಹ. ಆದರೆ ಗಾಂಧಿಜೀಯವರ ಅಂತರ್ಯವನ್ನರಿಯಲಾರದ ಸರಕಾರದಧಿಕಾರಿಗಳು ಈ ಊಹಾಪೋಹಗಳು ವಿಶ್ವಾಸಾರ್ಹವೆಂದು ಹೇಳುವುದಿಲ್ಲ. ಗಾಂಧಿಜೀಯವರಿಗೆ ತಾವು ಇನ್ನೊಂದು ಸಂದರ್ಭವನ್ನೊದಗಿಸಿಕೊಟ್ಟು ಪರೀಕ್ಷಿಸೋಣವೆಂಬುದೇ ಹೆಚ್ಚಿನ ದೇಶವಿದೇಶೀಯರ ಅಭಿಪ್ರಾಯ. ಕಳೆದ ತಿಂಗಳಲ್ಲಿ ಮಹಾತ್ಮರು ಪ್ರಕಟಿಸಿದ ಒಂದು ಹೇಳಿಕೆಯಂತೆ ತಾನು ಸೆರೆಮನೆಯಲ್ಲಿ ಕುಳಿತು ಕೊಂಗ್ರೆಸ್ಸಿನವರಿಗೆ ಯಾವ ಕಾರ್ಯಸೂಚನೆಯನ್ನು ಮಾಡಲೂ ಅಸಾಧ್ಯ, ಆದುದರಿಂದ ಕೊಂಗ್ರೆಸ್ಸಿನ ಕೆಲಸ ಮಾಡಬೇಕೆಂದಿರುವವರು ಅವರವರಿಗೆ ಸಮ್ಮತ ತೋರಿದಂತೆ ಅಸ್ಪೃಶ್ಯತಾ ನಿವಾರಣೆಯನ್ನೂ, ಪ್ರಚಾರಕಾರ್ಯವನ್ನೂ ಮುಂದೊತ್ತಬಹುದೆಂದು ಹೇಳಿರುತ್ತಾರೆ. ಚಳವಳದ ಮುಂದಾಗಿಸುವಿಕೆಯ ಕುರಿತು ಮಾತ್ರ ಅವರು ಬಾಯಿಬಿಟ್ಟು ಏನನ್ನೂ ನಮೂದಿಸಿರುವುದಿಲ್ಲ. ಹೀಗಾಗಿ ಸರಕಾರಕ್ಕೆ ಅವರ ಭಾವೀ ನಡವಳಿಕೆಯ ಮೇಲೆ ವಿಶ್ವಾಸವು ಹುಟ್ಟಿರುವುದಿಲ್ಲ!

## ಭದ್ರಮುಷ್ಟಿ ಸೂತ್ರದ ಖಂಡನೆ.

ಕಲ್ಕತ್ತ ಯುನಿವರ್ಸಿಟಿಯ ಮಾಜಿ ವೈಸ ಚೆನ್ಸಲರಾದ ಪ್ರಿನ್ಸಿಪಾಲ್ ಅರ್ಕುಹಾರ್ಟ್ ಎಂಬವರು ಲಂಡನಿನ ಅಬಿಡೀನ್ ಬ್ರದರ್‌ಹುಡ್ ಸಂಘದಲ್ಲಿ ಆವೇಶಪರ ಭಾಷಣವನ್ನು ಮಾಡಿ "ಹಿಂದೀಯರಿಗೆ ಬೇಕಾದುದನ್ನು ನಾವು ಕೊಡದೆ ಇದ್ದರೂ ಅವರಿಗೇನು ಬೇಕೆಂದು ನಮಗೆ ತಿಳಿದಿದೆ"ಯೆಂದು ಹೇಳುವ ಭದ್ರಮುಷ್ಟಿ ಸೂತ್ರವನ್ನು ಖಂಡಿಸಿದರು. ಹಿಂದೂಸ್ಥಾನವನ್ನು ತಮ್ಮ ಸಂಪಾದನೆಯ ಕೇಂದ್ರಸ್ಥಳವೆಂದೂ, ಅದರ ಜನರನ್ನು ಸುಲಿಗೆ ಮಾಡಿ ಕಾಲಯಾಪನೆ ಮಾಡಬಹುದೆಂದೂ ಭಾವಿಸುವ ಯಾವ ಜನಾಂಗವನ್ನೂ ತಾವು ಪ್ರೋತ್ಸಾಹಿಸಬಾರದು ಎಂದರು ಪ್ರಿನ್ಸಿಪಾಲರು. "ಕೆಲವರು ಹಿಂದೂದೇಶದಲ್ಲಿ ನಡೆಯುತ್ತಿರುವ ಕ್ರಾಂತಿಯನ್ನು ಉಪೇಕ್ಷೆಗೊಳಿಸುತ್ತಿರುವರೆಂದೂ, ಹಿಂದೂದೇಶದ ಹೆಚ್ಚಿನವರು ತಮ್ಮ ಸ್ವಾತಂತ್ರ್ಯಕ್ಕಾಗಿ ಶಾಂತಿಮಾರ್ಗದಿಂದಲೇ ಹೆಣಗಾಡುತ್ತಿರುವರೆಂದೂ ಹೇಳುತ್ತಾ ಹಿಂದೂದೇಶವನ್ನು ತಾವು ಬೆದರಿಸಿ ಕೆದರಿಸಿ ರಾಜ್ಯವಾಳಲು ಅಲ್ಲಿಯವರೇನು ಮಕ್ಕಳೇ? ಹಿಂದೂದೇಶದ ಮುಖಂಡರು ತಪ್ಪಿಬೀಳಬಹುದು—, ಹಾಗೆ ತಪ್ಪುಗಳಾದರೆ ಅವು ಬೇಕೆಂದು ಮಾಡಲ್ಪಟ್ಟವುಗಳಲ್ಲ, ರಾಷ್ಟ್ರಹಿತ ದೃಷ್ಟಿಯಿಂದಲೇ ಎಂದರು. ಕೊನೆಗೆ ಪ್ರಿನ್ಸಿಪಾಲರು "ಎಷ್ಟು ದೃಢವಾಗಿದ್ದರೂ ಯಾವ ಸರಕಾರವೂ ಎಷ್ಟು ಸಂತೃಪ್ತಿಕರವಾಗಿದ್ದರೂ ಯಾವ ರಾಜ್ಯರಚನೆಯೂ, ನಾವು ಕ್ರಿಸ್ತನ ಭಾವದಿಂದ ಉತ್ತೇಜಿತರಾಗದಿದ್ದರೆ ಶಾಂತಿಸ್ಥಾಪನೆಯನ್ನು ಮಾಡಲಾರದು" ಎಂದರು.

\+ + + +

ಇಪ್ಪತ್ತೆರಡು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು
ಅನುಕೂಲತೆಗಳನ್ನು ಇದೇ ಮುಖ್ಯಾಲುಕತ
ಮಾನದಿಂದ ತಿಳಿದು, ಅವರಿಗ ಸುಲಭ ದರದ
ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ
ತರದ ಉಡುಪುತೊಡುಪುಗಳನ್ನು ಒದಗಿ
ಸುವ ನಮ್ಮ ಎರಡು ತಲಾಂತರಗಳ
ಅನುಭವವು ಮುಂದಕ್ಕೂ ಸಂತೃಪ್ತಿ
ಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು
ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್,
ಬಾತ್ ಟುವಾಲುಗಳೂ, ಧೋತಿ, ಸೀರೆ—
ಬೈರವಾಸು—ಚಿಕ್ಕ—ಚೀಟು ಇತ್ಯಾದಿ
ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.
S C 708/32

S ಗುರುರಾಜ ಹೆಬ್ಬಾರ—ವಾದಿ,
ಮತ್ತು
ಸುಬ್ರಾಯಮಂಜ ಕೂಡಾ—ಪ್ರತಿವಾದಿಯು

ಕುಂದಾಪುರ ತಾಲೂಕು ಉಳ್ಳೂರು ಗ್ರಾಮದ ಸುಬ್ರಾಯ ನ್ಯಾಕರ ಮಗ—2ನೇ ಪ್ರತಿವಾದಿ ವಾಮನ ನ್ಯಾಕಗೆ ತಿಳಿಸುವದೇನಂದರೆ—

ವಾದಿಯು ನಿಮ್ಮ ಮೇಲೆ ಹೂಡಾ ಮಾಡಿದ ಮೇಲ್ಕಂಡ ದಾವೆಯು ತಾರೀಕು 10-3-1933ಕ್ಕೆ ತನ್ಕಿಗೆ ಇಡೋಣಾಗಿಯದೆ. ಸದ್ರಿ ದಿವಸ ನೀವು ಹಾಜರಾಗಿ ಉದಾಹರಣೆ ಕೊಡದಿದ್ದರೆ ನಿಮ್ಮನ್ನು ಶಿವ್ಯಾ ಮಾಡಿ ತೀರ್ಮಾನಿಸಲಾಗುವದು

ಉಡುಪಿ 16-2-'33 | M. Ramakrishna Rao, Vakil for Plf.

**ಅನುಕ್ರಮಣಿಕೆ.**


ಶ್ರೀ ರಾಮಕೃಷ್ಣ ಪರಮಹಂಸರು. ೧
[illegible] ಸಾರಸ್ವತ ಬ್ರಾಹ್ಮಣರ ರಾಮೇಶ್ವರ ದೇವಸ್ಥಾನ ೨
[illegible] ೩
[illegible] ೫
[illegible] ಸಂಗ್ರಹಗಳು.
ಒಳದೇಶ ವರ್ತಮಾನ ವಿದೇಶ ವರ್ತಮಾನ, ೮
[illegible] ಸಮಾಚಾರಗಳು, ೧೧
ಎಲ್ಲಾ [illegible] ! ೭
[illegible] ೧೩
ಶೃಂಗಾರ ಪ್ರಕೃತಿಯೂ ಕಲಾತ್ಮಕ ದೃಷ್ಟಿಯೂ ೬
[illegible] — [illegible], [illegible] [illegible] ಕ್ಷ್ಮಿಗೋಳ, ಉಡುಪಿ, ಉದ್ಯಾವರ ೯
[illegible] ಮೇಲೆ ಡಾ। ಅಂಬೇಡ್ಕರರು ೧೦
ಗಾಂಧೀಜೀ-ರಾಜಕೀಯ ಕೈದಿಗಳನ್ನು ಬಿಡಿರಿ! ೭
ಅಸ್ಪೃಶ್ಯರಾರು? ೧೫


# ಸ್ವದೇಶಾಭಿಮಾನಿ.

ತಾ. ೨೪ನೇ ಶುಕ್ರವಾರ ಫೆಬ್ರವರಿ ೧೯೩೩.

## ಶ್ರೀ ರಾಮಕೃಷ್ಣ ಪರಮಹಂಸರು.

ಸಾಂಸಾರಿಕನ ಜೀವನ ಗತಿಯಲ್ಲಿ ಎಷ್ಟೋ ಸಂದಿಗ್ಧ ಮುಹೂರ್ತಗಳುಂಟಾಗುತ್ತಿವೆ ಬಲವತ್ತರವಾದ ಆಶೆಗಳೂ, ಅನಿರೀಕ್ಷಿತವಾದ ನಿರಾಶೆಗಳೂ, ಅತಿಶಯವಾದ ಸುಖಗಳೂ, ಅಸಹನೀಯವಾದ ದುಃಖಗಳೂ, ಎದೆಯುಬ್ಬರಿಸುವ ಪ್ರೇಮವೂ ಎದೆಯೊಡೆವ ವಿಚ್ಛೇದಗಳೂ ಪ್ರತಿ ಮಾನವನ ಜೀವನದಲ್ಲಿ ಒಂದಿಲ್ಲೊಂದು ಬಾರಿ ಬರತಕ್ಕವುಗಳೇ. ಈ ದ್ವಂದ್ವಗಳ ಅಂತರವಲ್ಲವಾದರೆ ಮಾನವನ ಜೀವನವು ಘಟನಾ ಹೀನ ನಿಶ್ಚಲ ಸಮಯದ ಅಪವ್ಯಯವಾಗುತ್ತಿತ್ತು, ಮನುಷ್ಯನ ಮನಸ್ಸಿನಲ್ಲಿ ದೇವರ ಸುಸ್ಪರ್ಶವಾಗುತ್ತಿರಲಿಲ್ಲ, ಜೀವನವೆಂದರೆ, ಕ್ರಿಮಿ ಕೀಟಾದಿಗಳಂತೆ ಜನನ—ಮರಣದ ಮಧ್ಯ ಪರಿಸ್ಥಿತಿ ಮಾತ್ರವಾಗುತ್ತಿತ್ತು

ಆದರೆ ಈ ದ್ವಂದ್ವಗಳೇ ಮನುಷ್ಯನನ್ನು ಉತ್ತೇಜಿಸುವ ವಿಷಯಗಳಾಗಿವೆ ಇವುಗಳ ಪರಿಣಾಮವು ಅತ್ಯಂತ ಭಯಾನಕವಾಗಿವೆ ಇವುಗಳಿಂದ ಮನುಷ್ಯನು ಮೇರೆ ಮೀರಿದ ಸ್ವಾರ್ಥ ತುಂಬಿ ಹೋಗಿ ಪಶುತುಲ್ಯನಾಗಲೂ ಬಹುದು ಸ್ವಾರ್ಥದ ನಿಷ್ಪ್ರಯೋಜಕತೆಯನ್ನು ಕಂಡು ಹಿಡಿದ ವೈರಾಗಿಯಾಗಲೂ ಬಹುದು ಇವೆರಡಕ್ಕೂ ಸಾಕಷ್ಟು ಆತ್ಮಬಲವಿಲ್ಲವಾದರೆ ಆತ್ಮಘಾತುಕನಾಗಲೂ ಬಹುದು

ಮನುಷ್ಯನನ್ನು ಈ ದ್ವಂದ್ವಗಳ ಪರಿಣಾಮಗಳಿಂದ ರಕ್ಷಿಸಲಿಕ್ಕೋಸ್ಕರ ಮತ ರಚನೆಯಾಯಿತು ಜನನ—ಜೀವನ—ಮರಣ—ಮರಣಾನಂತರ—ಇವೆಲ್ಲವುಗಳನ್ನು ಪ್ರಶ್ನಿಸಿ, ಶೋಧಿಸಿ, ಯೋಚಿಸಿ ಮಹಾತ್ಮರು ಮನುಷ್ಯನ—ಆತ್ಮಗತಿಯ ತತ್ವಗಳನ್ನು ಕಂಡು ಹಿಡಿದರು ಇದೇ ಮತವಾಗಿ ನಮ್ಮಂತಹ ಸಾಮಾನ್ಯರಿಗೆ ಜೀವನಯಾತ್ರೆಯ ಅಡಿಗಲ್ಲಾಯಿತು

ಇಂತಹ ಮತಶೋಧಕರಲ್ಲಿ, ಮತಸ್ಥಾಪಕರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಒಬ್ಬರು, ಮತ್ತು ಇತ್ತೀಚೆಗಿನ ಮತಸ್ಥಾಪಕರಲ್ಲಿ ಪ್ರಾಯಶಃ ಅಗ್ರಗಣ್ಯರು ಅವರು ಸ್ವತಹ ವಿರಕ್ತರೂ, ತ್ಯಾಗಿಗಳೂ ಆಗಿ ಅತ್ಯಂತ ಪವಿತ್ರ ಜೀವನವನ್ನು ನಡೆಸಿದ್ದರು ಆದರೆ ಅವರು ಉಪದೇಶಿಸಿದ ಮತವು ವಿರಕ್ತರದ್ದಾಗಿರಲಿಲ್ಲ ಅಲ್ಲದೆ, ಅವರಿಗಿಂತಲೂ ಹಿಂದಿನ ಮತಸ್ಥಾಪಕರು ಉಪದೇಶಿಸಿದ ಮತದಂತೆ ಆಚಾರದ ಕಟ್ಟುಕಟ್ಟಲೆಗಳಿಂದ ವಿಚಾರಗಳನ್ನು ಬಿಗಿದಿಡುವಂತಹದೂ ಆಗಿರಲಿಲ್ಲ. ಅದು ಮತದ ನಿಜವಾದ ಉದ್ದೇಶವನ್ನು ಪೂರೈಸುವಂತಹುದಾಗಿತ್ತು. ಅದು ಸಾಂಸಾರಿಕರ ಸಮಸ್ಯೆಗಳನ್ನು ಲಕ್ಷಿಸಿ ಸಾಂಸಾ[illegible] ಮುಹೂರ್ತಗಳಿಂದ

ಶ್ರೀ ರಾಮಕೃಷ್ಣ ಪರಮಹಂಸರ ಮಹತ್ವವು ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರಿಂದ ಪ್ರಕಟಗೊಂಡಿತು. ಪ್ರಾಯಶಃ ಶ್ರೀ ರಾಮಕೃಷ್ಣರಂತಹ ಮಹಾತ್ಮರಿಗೆ ಶ್ರೀ ವಿವೇಕಾನಂದರಂತಹ ಶಿಷ್ಯರು ಸಿಕ್ಕಿದುದು ಅಪರೂಪ. ಶ್ರೀ ವಿವೇಕಾನಂದರು ತಮ್ಮ ಗುರುಗಳ ಮನೋಗತವನ್ನು ಸಂಪೂರ್ಣವಾಗಿ ಅರಿತವರಾಗಿದ್ದು ಅವರ ತತ್ವಗಳನ್ನು ಪ್ರಸರಿಸಿ ಅವರ ಇಚ್ಛೆಗಳನ್ನು ಕಾರ್ಯ ಮೂಲಕ ರೂಪಿಸಿಬಿಟ್ಟರು

ಶ್ರೀ ಪರಮಹಂಸರಿಂದ ಹಿಂದೂಮತಕ್ಕೆ ನೂತನ ಚೇತನವುಂಟಾಯಿತು. ಆದರಿಂದ ಹಿಂದೂಮತದ ಕಾರ್ಯಕ್ಷೇತ್ರವೂ ದೃಷ್ಟಿಕೋಣವೂ ವಿಸ್ತರಿತವಾಯಿತು ಹಳೆಯ ಮತಾಚಾರ್ಯರು ತತ್ವಯೋದ್ಧರಾಗಿದ್ದರು, ತರ್ಕಕ್ಷೇತ್ರದಲ್ಲಿ ರಣರಂಗಕ್ಕಿಳಿದು ತತ್ವದ್ವಜವನ್ನೆ ಪ್ರತಿಯೋಧಿಗಳ ಮೇಲೆ ವತ್ತಾಯದಿಂದ ಹೂರಿಸುವವರಾಗಿದ್ದರು ಅವರ ಕಾರ್ಯಕ್ಷೇತ್ರವು ಆಚಾರಗಳ ಆವರಣಗಳಿಂದ ಸಂಕುಚಿತವಾಗಿ ಮಾಡಲ್ಪಟ್ಟಿದ್ದಿತು ಆದರೆ ಪರಮಹಂಸರು ಕೇವಲ ತತ್ವ ಶೋಧಕರಾಗಿದ್ದರು, ತಮ್ಮದೆಂಬ ತತ್ವವನ್ನಾಗಲಿ ಮತವನ್ನಾಗಲಿ ಅವರು ಇಟ್ಟುಕೊಂಡಿರಲಿಲ್ಲ

ಅವರ ಮತಕ್ಕೂ ಪೂರ್ವದ ಮತಾಚಾರ್ಯರ ಮತಕ್ಕೂ ಇರುವ ತಾರತಮ್ಯವನ್ನು ನೋಡ ಬೇಕಾದರೆ ಅವರ ಮತ್ತು ಪೂರ್ವಿಕರ ಮಠಗಳನ್ನು ನೋಡಬೇಕು ಒಂದರಲ್ಲಿ ಶಿಕ್ಷಿತ, ಸ್ವೇಚ್ಛೆಯಿಂದ ವಿರಕ್ತರಾದ ಜನಸೇವಾತತ್ಪರರಾದ, ಸುಸಂಘಟಿತ ಸನ್ಯಾಸಿ ವರ್ಗವಿದೆ, ಉಳಿದವುಗಳಲ್ಲಿ ಅಶಿಕ್ಷಿತ, ಸ್ವಾರ್ಥ ಉದ್ದೇಶದಿಂದ ವತ್ತಾಯದ ವಿರಕ್ತಿ ವೇಷಧಾರಿಗಳಾಗಿದ್ದ, ಸರ್ವ ಭೋಗನಿರತರಾದ, ಸದಾ ದ್ರವ್ಯಲೋಭದಲ್ಲಿಯೇ ಇರುವ, ಅಂಧಾಚಾರಗಳನ್ನೇ ಪ್ರೋತ್ಸಾಹಿಸುವ ಅಹಂಭಾವಿಗಳಿದ್ದಾರೆ

ಶ್ರೀ ರಾಮಕೃಷ್ಣ ಪರಮಹಂಸರ ಮಹತ್ವವು ಈ ಎರಡು ಚಿತ್ರದರ್ಶನದಿಂದಲೇ ವ್ಯಕ್ತವಾಗುವುದು ಅವರನ್ನು ಪೂಜಿಸಿ ಅವರ ತತ್ವಗಳನ್ನು ಅನುಸರಿಸುವುದು ಪ್ರತಿಯೊಬ್ಬನ ಕರ್ತವ್ಯವಿದೆ

## ಗೌಡ ಸಾರಸ್ವತ ಬ್ರಾಹ್ಮಣರ ರಾಮೇಶ್ವರ ದೇವಸ್ಥಾನ.

೧೯೦೬ನೇ ಇಸವಿಯ ಸುಮಾರಿನಲ್ಲಿ ದಿವಂಗತ ದಿವಾನ ಬಹದ್ದೂರ ಅನಂತಕೃಷ್ಣ ಶೈಯವರು ಗೌಡ ಸಾರಸ್ವತ ಬ್ರಾಹ್ಮಣರ ಬಗ್ಗೆ ಪಂಡರಪುರ ಕ್ಷೇತ್ರದಲ್ಲಿ ಯಾತ್ರಿಕರ ಒಂದು ಛತ್ರವನ್ನು ಕಟ್ಟಿಸುವರೆ ನಮ್ಮ ಜಿಲ್ಲೆಯಲ್ಲಿ ಒಂದು ನಿಧಿಯನ್ನು ಕೂಡಿಸಿದರು ಈ ನಿಧಿಗೆ ಸುಮಾರು ರೂ ೩೧೦೦೦ ಮಟ್ಟಿಗೆ ಮಾತ್ರವೇ ಸಿಕ್ಕಿರುದರಿಂದಲೂ, ಮುಂದಿನ ಕಾರಣಾಂತರಗಳಿಂದಲೂ ಶ್ರೀ ಶೈಯವರಿಗೆ ಛತ್ರವನ್ನು ಕಟ್ಟಿಸಲಾಗಲಿಲ್ಲ. ಆ ರೂಪಾಯಿಯು ಇಲ್ಲಿನ ಕೆನರಾ ಬ್ಯಾಂಕಿನಲ್ಲಿಯೇ ಇದ್ದು, ಈಗ ಬಡ್ಡಿ ಕೂಡಿ ರೂ ೬೫೦೦ ರ ನಿಧಿಯು ಮಿಕ್ಕಿದೆ ಆದರೆ ಪಂಡರಪುರದಲ್ಲಿ ಛತ್ರವನ್ನು ಕಟ್ಟಿಸುವ ಆವಶ್ಯಕತೆಯನ್ನು ಈಗ ಯಾರೂ ಕಾಣುವುದಿಲ್ಲವಾದುದರಿಂದ ಅದರ ವಿನಿಯೋಗವು ಹೇಗಾಗಬೇಕೆಂದು ನಿಶ್ಚಯಿಸಲು ಬರುವ ೫ ತಾರೀಕ್ಕು ವಂತಿಗೆ ಕೊಟ್ಟವರ ಸಭೆಯು ಕರೆಯಲ್ಪಟ್ಟಿರುತ್ತದೆ ಪಂಡರಪುರದಲ್ಲಿ ಛತ್ರದ ಆವಶ್ಯಕತೆಯು ಉಂಟೆಂದು ನಾವು ತಿಳಿಯುವುದಿಲ್ಲ ಆದರೆ ಆ ನಿಧಿಯನ್ನು ಗೌಡ ಸಾರಸ್ವತರ ಸಮಷ್ಟಿ ಹಿತದ ಬಗ್ಗೆ ಉಪಯೋಗಿಸಬೇಕೆಂಬುದು ನಿರ್ವಿವಾದದ ಮಾತು ಈ ಸಂದರ್ಭದಲ್ಲಿ, ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ಗೌಡ ಸಾರಸ್ವತ ಹಕ್ಕಿನ ಶ್ರೀ ಕೋದಂಡ ರಾಮದೇವ ಸ್ಥಾನವೊಂದು ಶ್ರೀ ರಾಮೇಶ್ವರ ದೇವಸ್ಥಾನದೊಳಗಿದೆಯೆಂದೂ, ಅದರ ಶಿಲಾಶಾಸನವಾಗುವ ಆವಶ್ಯವಿದೆಯೆಂದೂ, ಹಾಗೆ ಶಿಲಾಶಾಸನವಾಗದಿದ್ದರೆ ದೇವಸ್ಥಾನವು ಕಡವಿ ಗೌಡ ಸಾರಸ್ವತರ ಹಸ್ತ ಕಳೆದು ಹೋಗುವ ಸಂಭವವಿದೆಯೆಂದೂ, ಆದುದರಿಂದ ಆ ನಿಧಿಯನ್ನು ಅದರ ಬಗ್ಗೆ ಉಪಯೋಗಿಸಬೇಕೆಂದೂ, ರಾಮೇಶ್ವರದಲ್ಲಿ ಶ್ರೀಕಾಶಿ ಮಠಕ್ಕಿರುವ ವಿಶ್ರಾಂತಿಗೃಹವು ಸದ್ಯದಲ್ಲಿಯೇ ಶ್ರೀಮಠದ ಶ್ರೀಪಾದಂಗಳವರಿಂದ ದುರುಸ್ತಿಯಾಗಲ್ಪಡಲಿರುವುದರಿಂದ ಅದೇ ಸಮಯದಲ್ಲಿ ಈ ಕೆಲಸವನ್ನೂ ಕೈಕೊಂಡರೆ ಕೆಲಸವು ಸುಲಭವಾಗಬಹುದೆಂದೂ ನಮ್ಮ ಮಿತ್ರರಾಗಿರುವ ಕಸ್ತೂರಿ ಸರ್ವೋತ್ತಮ ಶೈಗಳವರು ಸೂಚಿಸುತ್ತಾರೆ ನಮಗೂ ಇದು ಉತ್ತಮ ಸೂಚನೆಯೆಂದು ಕಂಡು ಬರುತ್ತದೆ. ಈ ರೀತಿಯಲ್ಲಿ ಈ ನಿಧಿಯನ್ನು ಉಪಯೋಗಿಸಿದ್ದಲ್ಲಿ ಗೌಡ ಸಾರಸ್ವತ ವೃಂದಕ್ಕೆ ಅಖಿಲ ಭಾರತೀಯ ಯಶಸ್ಸು ಉಂಟಾಗುವುದೆಂದು ನಮಗೆ ಅನಿಸುತಿದೆ.

## ಒಳದೇಶ ವರ್ತಮಾನ

—ಹಿಂದುಸ್ಥಾನದಲ್ಲಿ ವಿಷಮ ಪರಿಸ್ಥಿತಿಯುಂಟಾಗಿದೆ. ರಾಷ್ಟ್ರವಾದಿಗಳನ್ನು ಸೆರೆಮನೆಗಳಿಂದ ಬಿಡುಗಡೆ ಮಾಡದಿದ್ದರೆ ಕೆಲಸ ಕೆಟ್ಟೀತು ಎಂದು ಸರ್ ಸಪ್ರೂಗಳು ಲಂಡನಿನಲ್ಲಿಯ ಮಿತ್ರರಿಗೆ ತಂತಿಕೊಟ್ಟಿದ್ದಾರೆ.

—ಕಾಯಿದೆ ಕಾನೂನುಗಳ ನಿರ್ಬಂಧವಾಗಿ ದೇವಸ್ಥಾನ ಪ್ರವೇಶ ಸಮಸ್ಯೆಯನ್ನು ಮುಂದೊತ್ತಬಾರದೆಂದು ಮಾಲವೀಯರು ಗಾಂಧೀಜೀಯವರಿಗೆ ಕೊಟ್ಟ ಉತ್ತರಕ್ಕೆ ಗಾಂಧಿಜೀಯವರು ತನ್ನ ಮತ ಸರಿಯಾದುದೆಂದು ಬರೆದಿರುವರು.

—ದಂಗೆಕೋರರನ್ನು ಶಿಕ್ಷಿಸುವುದು ಉಚಿತವಿರುವುದಾದರೂ, ಚಡಿ ಹೊಡೆದು ಶಿಕ್ಷಿಸಕೂಡದು ಎಂದು ಮುಂಬಾಯಿಯ ಇಂಡಿಯನ್ ಮರ್ಚೆಂಟ್ಸ್ ಚೇಂಬರ್ಸಿನ ಸದಸ್ಯರು ತೀರ್ಮಾನಿಸಿ ಠರಾವು ಮಾಡಿಕೊಂಡಿರುವರು

—ಅಹ್ಮದಾಬಾದಿನಲ್ಲಿ ಇನ್ಸ್‌ಪೆಕ್ಟರ್ ಗ್ರೀನರನ್ನು ಅಮಲು ಜೋರತನದಿಂದ ಕೊಂದ ಹೌಸ್ಟನ್ ಎಂಬವನನ್ನು ಖುಲಾಸೆ ಮಾಡಿದರು.

—ಮುಂಬಾಯಿಯ ಖಿಂದಿ ಬಜಾರಿನಲ್ಲಿ ಮೂರು ಮಳಿಗೆಯ ಮನೆಗೆ ಬೆಂಕಿ ತಗಲಿ ೩೬,೦೦೦ ರೂಪಾಯಿ ನಷ್ಟವಾಗಿ ಯಾರಿಗೂ ಪ್ರಾಣ ಹಾನಿಯುಂಟಾಗಲಿಲ್ಲ

—ಮುಂಬಯಿಯ ಬೇಂಕುಗಳಲ್ಲಿನ ಸೇವಿಂಗ್ಸ್ ಬೇಂಕ್‌ಗಳ ಬಡ್ಡಿಯನ್ನು ಕಡಿಮೆ ಮಾಡುತ್ತಾರಾಗಿಯೂ ಅದನ್ನು ಪ್ರಾಯಶಃ ಸೇಕಡಾ ೩ರಲ್ಲಿ ತಂದು ನಿಲ್ಲಿಸುತ್ತಾರಾಗಿಯೂ ತಿಳಿದುಬಂದಿದೆ.

—ಕಳೆದ ತಿಂಗಳಲ್ಲಿ ಅದೇ ಸ್ಥಳದಲ್ಲಿ ಇಬ್ಬರು ಮುಳುಗಿ ಸತ್ತರಾದರೂ ಈ ತಿಂಗಳಲ್ಲಿ ರಂಗೂನಿನ ರೊಯಲ್ ಲೇಕ್‌ನಲ್ಲಿ ೧೨ ವರ್ಷದ ಹುಡುಗನು ನೀರಲ್ಲಿ ಬಿದ್ದು ಮೃತನಾದನು.

—ಮುಂಬಾಯಿಯ ಬಜೆಟು ಪ್ರಕಟವಾಗಿದ್ದು ಈ ವರ್ಷ ಅದಕ್ಕೆ ೫೬ ಲಕ್ಷ ರೂಪಾಯಿಗಳ ಕೊರತೆ ಬೀಳುವದೆಯೆಂದು ಕಂಡುಕೊಂಡಿದ್ದಾರೆ.

—ಮದುರೆಯಲ್ಲಿ ಕಾಂಗ್ರೆಸ್ ಕೆಲಸಗಾರರಾದ ಶ್ರೀಮತಿ ಪಾರ್ವತಿ ವರ್ತಾನಿ ಎಂಬವರ ಮೇಲಿನ ಜುಲುಮಾನೆಗಾಗಿ ಅವರ ಪತಿಯವರು ನಡಸುತ್ತಿದ್ದ ಮೆಸ್ಸರ್ಸ್ ರಾಜಗೋಪಾಲಾಚಾರಿಯರ್, ದೊರೆ ಸ್ವಾಮಿಯರ್ ಎಂಡ್ ಕಂಪೆನಿಯ ಒಂದು ಸಾವಿರ ರೂಪಾಯಿ ಸಾಮಾನುಗಳನ್ನು ಪೋಲೀಸರು ಸ್ವೀಕರಿಸಿಕೊಯ್ದರು'

—ಮದುರೆಯಲ್ಲಿ ಪಿಕೆಟಿಂಗ್ ನಡೆದು ಐದು ಸ್ತ್ರೀಯರನ್ನು ಸೆರೆ ಹಿಡಿದರು. ಒಂದು ಸೈಕ್ಲೋಸ್ಟೈಲ್ ಯಂತ್ರವನ್ನು ಹಿಡಿದಿದ್ದಾರೆ.

—ಜಗತ್ತನ್ನು ಮೆಚ್ಚಿಸುವುದಕ್ಕಾಗಿ ತಾನು ದೇವರೆದುರು ವಿಶ್ವಾಸಘಾತಕಿಯಾಗಲಾರೆನೆಂದು ಗಾಂಧಿಜೀಯವರು ಹರಿಜನ್ ಪತ್ರಿಕೆಯಲ್ಲಿ ತನ್ನ ಉಪವಾಸದ ಕುರಿತು ವಿವರಿಸುತ್ತಾ ಬರೆದಿರುವರು.

—ಅಸ್ಪೃಶ್ಯರು ಅವರ ಕರ್ಮಾನುಸಾರವಾಗಿ ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದರು ಎಂದು ಶ್ರೀ ಎಂ. ಕೆ. ಆಚಾರ್ಯರು ಎದೆಯೊಡ್ಡಿ ನುಡಿದರು ಎಂ ಕೆ ಗಾಂಧಿಯವರಿಗೆ ವಿರೋಧ'

—ಬೆಂಗಳೂರಿನ ಇಂಗ್ಲಿಷ್ ಪತ್ರಿಕೆಯಾದ ಡೆಮೊಕ್ರಟ್' ವಾರಪತ್ರಿಕೆಯು ಅಚ್ಚಾಗುತ್ತಿರುವ ಇಂಡಿಯನ್ ಪ್ರೆಸ್ಸಿನಲ್ಲಿ ಪೋಲೀಸರು ನಾಲ್ಕು ಘಂಟೆಗಳ ವರೆಗೆ ಜಡ್ತಿ ನಡೆಸಿ ಕೆಲವು ಕಾಗದಗಳನ್ನು ಕೊಂಡೊಯ್ದರು.

—ಶ್ರೀ ಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯರು ಮದ್ರಾಸಿನವರಿಗೆ ಮಂಗಳ ವಾರ್ತೆಯನ್ನು ಕಳುಹಿಸಿ ಬ್ರಾಹ್ಮಣರು ತಮ್ಮ ಸಂಸ್ಕಾರ ಕರ್ಮಾನುಷ್ಠಾನಗಳನ್ನೂ ಪಂಚಮರು ತಮ್ಮ ಕುಲಾಚಾರವನ್ನೂ ಬಿಡಬಾರದೆಂದು ಅರ್ಥಗರ್ಭಿತವಾಗಿ ಹರಸಿದ್ದಾರೆ.

—ಶ್ರೀ ಸುಭಾಸಭೋಸರು ಮುಂಬಾಯಿಯನ್ನು ತಲಪುವ ವರೆಗೂ ಅವರನ್ನು ಹೊರಗಿನವರು ಕಾಣಲು ಸಾಧ್ಯವಾಗಲಿಲ್ಲ ಶ್ರೀಯುತರು ಬಹಳ ಕ್ಷೀಣನಾಗಿದ್ದು ಯುರೋಪಿಗೆ ತೆರಳಿದರು

—ಮೀರತ್ ಪಿತೂರಿಯಲ್ಲಿ ಆರೋಪಿತರಾಗಿ ಬಿಡುಗಡೆ ಹೊಂದಿದ ಶ್ರೀ ಕಿಶೋರಿಲಾಲ್ ಘೋಷರು ತಾ ೧೬ನೇ ದಿನ ಕಾಲವಾದರು.

—೧೯೩೨ನೇ ಡಿಸಂಬರದಲ್ಲಿ ಪ್ರಾರಂಭವಾದ ಪ್ಲೇಗ್ ರೋಗದಿಂದಾಗಿ ಮುಂಬಾಯಿಯಲ್ಲಿ ಸುಮಾರು ೯೦೦ ಮಂದಿಗಳು ಮೃತರಾದರು. ಕಳೆದ ವಾರದ ನಾಲ್ಕು ದಿನಗಳಲ್ಲಿ ೧೯ ಮರಣಗಳಾದುವು.

—ಗಾಂಧಿಯವರು ಕಾಯಿದೆ ಭಂಗ ಚಳವಳದ ಹೆದರಿಕೆಯನ್ನು ಸರಕಾರಕ್ಕೆ ಹುಟ್ಟಿಸಿ ಸರಕಾರವು ಈ ರೀತಿಯ ದಮನ ನೀತಿಗೆ ಕೈಹಚ್ಚ ಬೇಕಾಯಿತೆಂದು ಪ್ರತಿಪಾದಿಸುವುದಕ್ಕಾಗಿ ಗಾಂಧೀ— ಸರಕಾರಗಳೊಳಗೆ ೧೯೩೦ರಲ್ಲಿ ನಡೆದ ಪತ್ರವ್ಯವಹಾರವು ಪ್ರಕಟವಾಗಿದೆ.

—ಸೈನ್ಯ ಮತ್ತು ಇಂಪೀರಿಯಲ್ ಸರ್ವಿಸ್‌ನವರು ತಮ್ಮ ಸ್ವಂತ ಉಪಯೋಗಕ್ಕಾಗಿ ಪರದೇಶಗಳಿಂದ ತರಿಸುವ ಆಹಾರ ಮತ್ತು ಉಡಿಗೆ ತೊಡಿಗೆಗಳ ಮೇಲೆ ಸುಂಕವಿಡಬಾರದು ಎಂದು ರೋಡ್ಸ್ ಸ್ಮಿತ್ ಎಂಬವರು ಹೇಳಿದರು!

—ಕಲ್ಕತ್ತದಲ್ಲಿ ಒಂದು ಮನೆಯಲ್ಲಿ ಎರಡು ಬೊಂಬುಗಳು ಸಿಕ್ಕಿ ೫ ಮಂದಿ ಸಿಖ್ಖರು ದಸ್ತಗಿರಿ ಮಾಡಲ್ಪಟ್ಟಿರು.

ಬೆಲ್ಗಾಮ್ ಹೇಡರ್‌ನಲ್ಲಿ ಇನ್‌ಫ್ಲುಯೆಂಜಾ ರೋಗವು ಸಾರ್ವತ್ರಿಕವಾಗಿರುವುದರಿಂದ ಸಾರ್ವಭೌಮರು ಪತ್ನಿ ಸಮೇತರಾಗಿ ಸಂಡ್ರಿಂಗ್‌ಹೇಮ್‌ನಲ್ಲೇ ಉಳಿದುಕೊಂಡರು

ಕಲ್ಕತ್ತದಲ್ಲಿ ವಿದೇಶಿ ವಸ್ತ್ರಗಳನ್ನು 'ಶುದ್ಧ ಸ್ವದೇಶಿ' ಎಂಬ ಕೃತ್ರಿಮ ಹೆಸರಿನಿಂದ ಧಾರಾಳವಾಗಿ ಮಾರುತ್ತಿರುವ ಅಭ್ಯಾಸವನ್ನು ನಿಲ್ಲಿಸಬೇಕೆಂದು ಅಹ್ಮದಾಬಾದ್ ಮಿಲ್ ಮಾಲೀಕರ ಸೆಕ್ರೆಟರಿಯವರು ಇಂಡಿಯಾ ಸರಕಾರಕ್ಕೆ ಬರೆದುಕೊಂಡಿರುವರು.

—ಬಂಗಾಳ ಗವರ್ನರರೊಡನೆ ಭೇಟಿಗೆ ಹೋದ ಸಾರ್ಜಂಟ ಆದಮನೆಂಬವನನ್ನು ಒಂದು ಹುಲಿಯು ಕಲ್ಕತ್ತದ ಹತ್ತಿರ ಎಂಬಲ್ಲಿ ಹಿಡಿದು, ಹರಿದು ಕೊಂದಿತು

—ಇಷ್ಟರ ತನಕ ಕೊಂಗ್ರೆಸ್ಸು ನ್ಯಾಯ ವಿಧಾಯಕ ಸಭೆ, ಪ್ರಾಂತಿಕ ಕೌನ್ಸಿಲುಗಳನ್ನು ಬಹಿಷ್ಕರಿಸಿ ನಡೆಯುತಾದರೂ ಮುಂದಿನ ನವ ರಾಜ್ಯರಚನೆಯಲ್ಲಿ ಅಂತಹ ಬಹಿಷ್ಕಾರವು ದೇಶಕ್ಕೆ ಹಾನಿಯನ್ನುಂಟು ಮಾಡುತ್ತದೆಂದಾದರೆ ಹಾಗೆ ಅವುಗಳನ್ನು ಬಹಿಷ್ಕರಿಸಲಾಗಲಿಕ್ಕಿಲ್ಲ ವೆಂದು ಸಿ ರಾಜಗೋಪಾಲಾಚಾರ್ಯರು ಹೇಳುತ್ತಾರೆ

### ಶಿಕಾರೀಪುರದ ವಾರ್ತೆ

ತಾ. ೨೯—೧೧—೩೨ರಲ್ಲಿ ಆಚಂಗಿಯಲ್ಲಿ ನಡೆದ ಖೂನಿ ಕೇಸಿನ ವಿಚಾರಣೆಯು ಕಳೆದ ತಾ ೧೬—೨—೩೩ರಲ್ಲಿ ನಡೆದಾಗ ಜಖಂ ಹೊಂದಿ ಗುಣಹೊಂದಿದ ಚಿಕ್ಕ ರಾಮೇಗೌಡನ ಮತ್ತು ಚಿಕ್ಕ ಮಲ್ಲಮ್ಮಳ ಸಾಕ್ಷಿಯು ಕೇಳಲ್ಪಟ್ಟಿತು ಈ ಪೈಕಿ ಚಿಕ್ಕ ರಾಮೇ ಗೌಡನ ಸಾಕ್ಷಿ ಹೇಳಿಕೆಯು ೨೦ ಪುಟಗಳ ಮೇಲ್ಪಟ್ಟು ಇತ್ತೆಂದು ತಿಳಿದುಬರುತ್ತದೆ ಕೇಸು ಮುಂದರಿಸಿಯದೆ

ಜನವರಿ ತಾ ೧೮ರಲ್ಲು ಸ್ಥಳೀಯ ಇಂಡಿಯನ್ ಕ್ಲಬ್ಬಿನ ಪರವಾಗಿ ಚಂದ್ರಕಲಾ ನಾಟಕ ಮಂಡಳಿಯವರು ಆಡಿದ 'ಸಂಸಾರ ನೌಕ' ಎಂಬ ನಾಟಕದಲ್ಲಿ ಶೇಖರಿಸಿದ ರೂ ೩೦೦ರ ಪೈಕಿ ರೂ ೪೦೦ನ್ನು ಸದ್ರಿ ಕ್ಲಬ್ಬಿಗೆ ದೊರಕಿದೆಯೆಂದು ತಿಳಿದುಬರುತ್ತದೆ ಸದ್ರಿ ನಾಟಕ ಕಂಪೆನಿಯ ಪ್ರೊಪ್ರೈಟರರೂ ಮುಖ್ಯ ಪಾತ್ರದಾರರೂ ಆದ ಮಿ। ಮಹಮ್ಮದ್ ಪೀರ್ ಇವರಿಗೆ ಕ್ಲಬ್ಬಿನ ಪರವಾಗಿ ಒಂದು ಚಿನ್ನದ ಪದಕವನ್ನು ಬಹುಮಾನವಾಗಿ ಕೊಟ್ಟಿರುವರು

ತಾ ೧೯ರಲ್ಲಿ ಇಂಡಿಯನ್ ಕ್ಲಬ್ಬಿನಲ್ಲಿ ದೊಡ್ಡಗಾಲ್ ಶ್ರೀ ಬಸವೆ ಗೌಡರು ಸದರಿ ನಾಟಕ ಕಂಪೆನಿಯವರಿಗೂ, ಕ್ಲಬ್ಬಿನ ಮೆಂಬರರಿಗೂ ಟೀಪಾರ್ಟಿಯನ್ನು ಕೊಟ್ಟರು ನಾಟಕ ಕಂಪೆನಿಯವರ ಸಂಗೀತ ಕಚೇರಿಯೂ ನಡೆದಿತ್ತೆಂದೂ ತಿಳಿದು ಬರುತ್ತದೆ.

---

## ನೋಟೀಸು.

ಕೀರ್ತಿಶೇಷ ದಿವಾನ ಬಹದ್ದೂರ್ ಅಮ್ಮೆಂಬಳ ಅನಂತ ಕೃಷ್ಣ ಪೈಗಳು ಗೌಡ ಸಾರಸ್ವತ ಬ್ರಾಹ್ಮಣ ಯಾತ್ರಿಕರಿಗಾಗಿ ಪಂಢರಪುರ ಕ್ಷೇತ್ರದಲ್ಲೊಂದು ಧರ್ಮಶಾಲೆಯನ್ನು ಕಟ್ಟಿಸುವ ಉದ್ದೇಶದಿಂದ ಸಂಗ್ರಹಿಸಿದ ನಿಧಿಯನ್ನು ಹೇಗೆ ವಿನಿಯೋಗಿಸಬೇಕೆಂಬ ಕುರಿತಾಗಿ ಚರ್ಚಿಸಲು, ಈ ಜಿಲ್ಲೆಯಿಂದ ವಂತಿಗೆ ಕೊಟ್ಟ ಮಹನೀಯರ ಸಭೆಯು ಇದೇ ತಾರೀಕು ೨೬ನೇ ರವಿವಾರ ಸಾಯಂಕಾಲ ಗಂಟೆ ೫ ೩೦ಕ್ಕೆ ಮಂಗಳೂರು ಬಂದರದಲ್ಲಿರುವ ಕೆನರಾ ಬೇಂಕಿನ ಆಫೀಸಿನಲ್ಲಿ ಕೂಡುವುದೆಂದೂ ಸಂಬಂಧಪಟ್ಟವರು ದಯಮಾಡಿಸಬೇಕಾಗಿಯೂ, ಎಲ್ಲವರ ಅವಗಾಹನೆಗೆ ಪ್ರಕಟಿಸಿದೆ

ಕಸ್ತೂರಿ ಸರ್ವೋತ್ತಮ ಪೈ

## ದಕ್ಷಿಣ ಕನ್ನಡ.

**ಮಂಗಳೂರು.** ವಿಕ್ಟೋರಿಯಾ ಜುಬಿಲಿ ವಿದ್ಯಾವೇತನವನ್ನು ಮಹಮ್ಮದೀಯ ಮತದ ಒಬ್ಬ ವಿದ್ಯಾರ್ಥಿಗೆ ಬಹುಮಾನಿಸುವುದಕ್ಕಾಗಿ ಗವರ್ನಮೆಂಟ ಕೊಲೆಜಿನಲ್ಲಿ ತಾ ೨೩ನೇ ದಿನ ಒಂದು ಪರೀಕ್ಷೆ ನಡೆಯುವುದು.

ದಕ್ಷಿಣ ಕನ್ನಡಾ ಜಿಲ್ಲಾ ವರ್ಗದಾರರ ಸಂಘದ ಪರವಾಗಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಇದೇ ತಾ. ೨೨ನೇ ಬುಧವಾರ ಸಾಯಂಕಾಲ ಘಂಟೆ ೫ ೩೦ಕ್ಕೆ ಈ ವರ್ಷದ ತೀರ್ವೆಯು ಕಡಿಮೆ ಮಾಡುವುದು, ರಿಸೆಟ್ಲ್‌ಮೆಂಟು ಮುಂದೆ ಹಾಕುವುದು, ಅದೇ ಸಂಬಂಧ ಕ್ಲಾಸಿಫಿಕೇಶನ್ ಬದಲಾವಣೆ ವಿಷಯ ಈಗ ನಡೆಯುವ ಕೆಲಸವನ್ನು ನಿಲ್ಲಿಸುವುದು ಮತ್ತು ಜಿಲ್ಲೆಯ ರಿಸರ್ವ್ ಕಾಡುಗಳಲ್ಲಿ ರಿಯಾಯತಿಗಳನ್ನು ಮನ್ನಾ ಮಾಡಿದ ವ ಮಾಡುವ ವಿಷಯಗಳಲ್ಲಿ ಜಿಲ್ಲೆಯ ವರ್ಗದಾರರ ಮಹಾ ಸಭೆಯೊಂದು ಮ ರಾ, ರಾ ಕಕ್ಕುಂಜೆ ಸದಾಶಿವ ಅಡಿಗ, ಎಡ್ವೊಕೇಟ್ ಮತ್ತು ವರ್ಗದಾರ, ಇವರ ಅಧ್ಯಕ್ಷತೆಯಲ್ಲಿ ಜರಗಿತು

ಇಲ್ಲಿಯ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನವರ ಒಂದು ಸಭೆಯು ತಾ ೨೫ನೇ ಸಂಜೆ ೫-೩೦ಕ್ಕೆ ವೆನ್‌ಲೊಕ್ ಆಸ್ಪತ್ರೆಯಲ್ಲಿ ಜರಗುವುದು ಡಾ ಕೆ ಜಿ ಮೆನನ್, ಎಲ್ ಎಮ್ ಎಂಡ್ ಎಸ್ ಇವರು ಭಾಷಣ ಮಾಡುವರು

---

ಸ್ವದೇಶಾಭಿಮಾನಿಯ ಮಾಜಿ ಮ್ಯಾನೇಜರೂ ಸಂಪಾದಕರೂ ಆಗಿದ್ದ ದಿವಂಗತ ವಡೇರಬೆಟ್ಟು ಶ್ರೀನಿವಾಸ ಕಾಮತರ ಹಿರೀ ಸಹೋದರರಾಗಿದ್ದ ವಡೇರಬೆಟ್ಟು ಅಣ್ಣಪ್ಪ ಕಾಮತರು ಇದೇ ತಾ ೨೩ನೇ ಗುರುವಾರ ಮಧ್ಯಾಹ್ನ ಗಂಟೆ ೧ ೩೦ಕ್ಕೆ ದೈವಾಧೀನರಾದರೆಂದು ತಿಳಿಸಲು ಬಹಳ ವಿಷಾದಪಡುತ್ತೇವೆ

---

ಇಲ್ಲಿಯ ತಾಲೂಕು ಬೋರ್ಡು ಮೆಂಬರರ ಒಂದು ಸಾಮಾನ್ಯ ಸಭೆಯು ತಾ ೩ನೇ ಮಾರ್ಚಿ ೨ ಘಂಟೆಗೆ ತಾಲೂಕು ಬೋರ್ಡು ಆಫೀಸಿನಲ್ಲಿ ಜರಗುವುದು.

ಇದೇ ತಾ ೨೮ನೇ ದಿನ ಮಂಗಳವಾರ ಮಧ್ಯಾಹ್ನ ಗಂಟೆ ೨ ೩೦ಕ್ಕೆ ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ತಾಲೂಕು ಬೋರ್ಡುಗಳ ಬಜೆಟು ೧೯೩೩—೩೪ರ ಅಂದಾಜು ಮಾಡಲಾಗುವುದು

ಇಲ್ಲಿಯ ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ನಡೆಯುತ್ತಿರುವ "ಫೋರ್ ರಾಸ್ಕಲ್ಸ್" ತಾ ೨೪ರ ತನಕ ನಡೆದು ತಾ ೨೫ರಿಂದ ಮೆಟ್ರೊ ಗೋಲ್ಡ್‌ವಿನ್ ಮೇಯರರ "ಅವರ್ ಡೆನ್ಸಿಂಗ್ ಡೋಟರ್ಸ್" ಎಂಬ ಚಿತ್ರವನ್ನೂ ಪ್ರದರ್ಶಿಸಲಾಗುವುದು ಎನಿಟ ಪೇಜ್ ದೊರತಿ ಸಬೇಸ್ಟಿಯನ್, ಜೋನ್ ಕ್ರೊ ಫೋರ್ಡ್ ಮೊದಲಾದವರಿಂದ ಅಭಿನಯಿಸಲ್ಪಟ್ಟ ಚಿತ್ರ ಕೋಕಿಲ ವಾಣಿ ಎಂದು ಖ್ಯಾತಿ ಪಟ್ಟಿರುವ, ಅನೇಕ ಭಂಗಾರದ ಪದಕಗಳನ್ನೂ, ಬಹುಮಾನ ಪತ್ರಗಳನ್ನೂ ಕಪ್‌ಗಳನ್ನೂ ಬಹುಮಾನವಾಗಿ ಪಡೆದಿರುವ ಸಕಲ ಕಿಯರ್ ರಾಣಿಯೆಂದು ಹೆಸರುವಾಸಿಯಾದ, ಮಿಸ್ ಕಮಲ ಕುಮಾರಿಯು ಬಹು ಬೇಗನೇ ಬರುವಳು

ಶ್ರೀ ರಾಮಕೃಷ್ಣ ಪರಮ ಹಂಸರವರ ೯೮ನೆಯ ಜಯಂತ್ಯುತ್ಸವವು ಇದೇ ತಾ ೨೬ನೇ ಆದಿತ್ಯವಾರ ದಿನ ಸಂಜೆ ೫ ೩೦ಕ್ಕೆ ಕೆನರಾ ಹೈ ಸ್ಕೂಲಿನ ಹೊಸ ಕಟ್ಟಡದಲ್ಲಿ ಮಾಜಿ ಜಡ್ಜ ಮ। ರಾ। ಎಮ್ ನರಸಿಂಗ ರಾವ್ ಬಿ. ಎ. ಎಂ ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು ಮ ರಾ ಗಳಾದ ಆಯುರ್ವೇದ ಭೂಷಣ, ಎಮ್ ವಿ ಶಾಸ್ತ್ರಿ, ಎಸ್ ಎಸ್, ಕಾಮತ್, ಎಚ್ ರಾಮರಾಯ ಮಲ್ಯ, ಎಮ್ ನಾರಾಯಣ ಭಟ್ ಮೊದಲಾದವರು "ವರ್ಣಾಶ್ರಮ ಧರ್ಮ" ಮತ್ತು 'ಅಸ್ಪೃಶ್ಯತೆ'ಯ ವಿಷಯ ಭಾಷಣ ಮಾಡುವರು. ಪ್ರಾತಃಕಾಲ ೮ ಘಂಟೆಯಿಂದ ೯೦ ವರೆಗೆ ಭಜನೆ ಆ ಮೇಲೆ ಶ್ರೀ ರಾಮಕೃಷ್ಣರವರ ವಚನಾಮೃತ ವಾಚನ ಪೂಜೆ ಮತ್ತು ಮಂಗಳಾರತಿ, ೧೧ರಿಂದ ೧೨ರ ತನಕ ದರಿದ್ರ ನಾರಾಯಣರಿಗೆ ಅಕ್ಕಿ ಹಂಚೋಣ ಮೊದಲಾದ ಕಾರ್ಯಕ್ರಮಗಳಿರುವುವು.

**ಸುರತ್ಕಲ್**—ಕಳೆದ ತಾ ೧೯ನೆಯ ದಿನ ಇಲ್ಲಿಯ ಇಡ್ಯ ವಿದ್ಯಾದಾಯಿನೀ ಶಾಲೆಯಲ್ಲಿ ಇ. ವಿ. ಸಂಘದ ಮಹಾ ಸಭೆಗಾಗಿ ಸಭಾಸ್ಯರುಗಳೆಲ್ಲರೂ ಕೂಡಿದ್ದರಾದರೂ, ಅಧ್ಯಕ್ಷ ಮಹಾಶಯರ ಬೇಲಿಯೇ ಹೊಲ ಮೇಯಂತೆ ಇರುವ ವರ್ತನೆಗಳಿಂದ ಸದಸ್ಯರು ಬೇಸರಗೊಂಡವರಾಗಿ ಎದ್ದು ತೆರಳಿರುವ ಕಾರಣ ಇಂದಿನ ಮಹಾ ಸಭೆಯು ಜರಗಲಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ

ಇದೇ ದಿನ 'ಸುರತ್ಕಲ್ ಸಹಕಾರ ಸಂಘ'ದ ಮಹಾ ಸಭೆಯು ಯಶಸ್ವಿಯಾಗಿ ನೆರವೇರಿತು

ಶ್ರೀಮದ್ದುಡುಪಿಯ ಕೃಷ್ಣಾಪುರ ಮಠಾಧೀಶ ಶ್ರೀ. ಶ್ರೀವಿದ್ಯಾಪೂರ್ಣ ತೀರ್ಥ ಶ್ರೀ. ಪಾದಂಗಳವರ ಅನುಜ್ಞೆಯಂತೆ ಕೃಷ್ಣಾಪುರದಲ್ಲಿ ಸ್ಥಾಪಿತವಾಗಿರುವ 'ಶ್ರೀ. ಕೃಷ್ಣ ಎಲಿಮೆಂಟರೀ ಶಾಲೆ'ಯಲ್ಲಿ, ಶಾಲಾ ಬಾಲಕರಿಂದ ಪ್ರಾರಂಭಿಸಿರುವ 'ಭಜನಾ ಸಂಘ'ದ 'ಗ್ರಾಮ ಸಂಚಾರ ಭಜನೆ'ಯ ಮಂಗಲ ಸಮಾರಂಭವು ಇದೇ ತಾ. ೨೭ನೆಯ ಸೋಮವಾರ ಗಂಟೆ ೪ಕ್ಕೆ ಈ ಶಾಲೆಯಲ್ಲಿ ಮಟ್ಟಾಡಿ ಪಟೇಲರೂ, ಶ್ರೀ ಕೃಷ್ಣಾಪುರ ಮಠದ ಮನೇಜರರೂ ಆಗಿರುವ ಬ್ರಹ್ಮ ಶ್ರೀ ದಾಸಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಲಿದೆ ವಿದ್ಯಾಭಿಮಾನಿಗಳಾದ ಸರ್ವರಿಗೂ ಸುಸ್ವಾಗತವಿದೆ' — ಎಂಬುದಾಗಿ ಶಾಲಾಧ್ಯಾಪಕರೂ, ಸಂಘದ ಅಧ್ಯಕ್ಷರೂ ಆದ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ತಿಳಿಸುತ್ತಾರೆ

**ಉಡುಪಿ**—ಇತ್ತೀಚೆಗೆ ಹರಿಜನರಲ್ಲೊಂದು ವಿಧದ ಚಟುವಟಿಕೆಯುಂಟಾದಂತೆ ತೋರುವುದು. ಇದೇ ತಾ. ೧೩ರಲ್ಲಿ ಶ್ರೀ ರಾಮಚಂದ್ರನವರ ಮುಂದಾಳುತ್ವದಲ್ಲಿ ಅವರ ಮಂಡಳಿಗೆ ಭಜನೆಗಳಿದ್ದುದೇ ಅದಕ್ಕೊಂದು ಉದಾಹರಣೆ ಮೆರವಣಿಗೆಯು ಬ್ರಹ್ಮಗಿರಿಯಿಂದ ಹೊರಟು ಪಟ್ಟಣದ ಪ್ರಾಮುಖ್ಯ ಬೀದಿಗಳಲ್ಲೆಲ್ಲಾ ಸರಾಸರಿಯಾಗಿ ಸಂಚರಿಸಿರುವುದು. ಅವರ ಅಂದಿನ ಸಂಕೀರ್ತನೆಯಲ್ಲಿ ಯಾವ ಧರ್ಮದ ಉಪದೇಶಗಳು ಇದ್ದಂತೆ ಕಾಣಲಿಲ್ಲ ಅಸ್ಪೃಶ್ಯತೆಯು ಇನ್ನಾದರೂ ಕಡ್ಡಾಯವಾದೀತೆ?

ತಾ. ೧೨ರಲ್ಲಿ ವಕೀಲ ಸೀನಪ್ಪ ಹೆಗ್ಡೆಯವರ ನೋಟೀಸ್ ಕೊಟ್ಟಂತೆ ಸ್ಥಳೀಕ ಬಂಟರ ಸಭೆಯೊಂದು ವಕೀಲ ವೆಂಕಪ್ಪ ಹೆಗ್ಡೆರ ಮನೆಯಲ್ಲಿ ಕೂಡಿ, ಶ್ರೀ ಎ ಬಿ ಶೆಟ್ಟರು ತರುವ ಹೊಸ ಬಿಲ್ಲಿನ ಕುರಿತು ಚರ್ಚಿಸಿರುವರೆಂದು ತಿಳಿದುಬರುತ್ತದೆ ಜಾಹೀರಾಗದಿರುವಂತೆ ಸಭೆಯು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರಿರುವುದಿಲ್ಲ

**ಉದ್ಯಾವರ**—ಬ್ರಹ್ಮಾವರದ ಹರಿಜನ ಸೇವಾ ನೂತನವಾಗಿ ಏರ್ಪಡಿಸಿದ ದಿಶಾವತಾರ ಮೇಳದ ಒಂದು ಬೈಲಾಟವು ಇದೇ ತಾ ೧೬ರಲ್ಲಿ ಜರಗಿರುತ್ತದೆ ಯಾವುದರಲ್ಲೂ ಹಟ್ಟಿನ ದೋಷಗಳಿರಲಿಲ್ಲ ಉಚ್ಚವರ್ಣೀಯರೆನಿಸುವ ಕೆಲವರು ಬಾರದಿದ್ದರೂ ಬಂದವರೆಲ್ಲರೂ ಶಭಾಸ್ ಕೊಟ್ಟೇ ಹಿಂದಿರುಗುವಂತಾದುದು ಸಂತೋಷಕರ. ಇವರಿಗೆ ಸರ್ವತ್ರ ಜಯ ದೊರಕಲೆಂದು ಹಾರೈಕೆ.

**ಕಾಸರಗೋಡು**—ಕೆಲವು ಸಮಯದಿಂದ ಉಡುಪಿಯಲ್ಲಿ ಚಳವಳವನ್ನು ಮಾಡುತ್ತಾ ಮಠಾಧಿಪತಿಗಳನ್ನೆಚ್ಚರಿಸಿರುವ ಸುಪ್ರಸಿದ್ಧ ಹಿಂದೂ ಮಿಶನರಿಗಳಾದ ಶ್ರೀ ಅಂಕುರಾಜ ಸುಬ್ರಾಯ ಶರ್ಮರು ಇದೇ ಬರುವ ತಾ ೨೮ನೇ ಶನಿವಾರ ಸಾಯಂಕಾಲಕ್ಕೆ ಈ ಕಸಬೆಯಲ್ಲಿಯೂ ಭಾಷಣ ಮಾಡಲಿಕ್ಕಿರುವರೆಂದು ತಿಳಿಯುತ್ತೇವೆ

**ಗುರುವಾಯನಕೆರೆ** ಇದೇ ತಾ ೧೯ನೇ ಆದಿತ್ಯವಾರ ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರಿಣೀ ಸಭೆಯ ಪರವಾಗಿ ಹಿಂದೀ ಪರೀಕ್ಷೆಗಳು ಬೆಳ್ತಂಗಡಿಯ ಡಾಕ್ಟರ್ ಪಿ ಎ ಅಮ್ಮಂತಾಯರ ಅಧ್ಯಕ್ಷತೆಯಲ್ಲಿ ಜರಗಿದ್ದುವು. ಈ ಕೇಂದ್ರದಿಂದ ಪ್ರಾಥಮಿಕಕ್ಕೆ ೪, ಮಧ್ಯಮಕ್ಕೆ ೧, ರಾಷ್ಟ್ರಭಾಷೆಗೆ ೨—ಹೀಗೆ ಒಟ್ಟಿಗೆ ೭ ಮಂದಿ ಕುಳಿತಿರುವರು ಇವರಲ್ಲಿ ೪ ಮಂದಿ ಸ್ತ್ರೀಯರು


## ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

**ಅಖಿಲ ಕರ್ಣಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ಣಾಟಕದ ಗೌರವಕ್ಕೂ ಕರ್ಣಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ**

ನಮ್ಮಲ್ಲಿ ಬ್ರಿಟಿಷ್ ಫಾರ್ಮ ಕೋಪಿಯಾ, ಬ್ರಿಟಿಷ್ ಫಾರ್ಮ ಸ್ಯೂಟಿಕಲ್ ಕೋಡೆಕ್ಸ್, ವ ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟೊಯ್ಲೆಟ್ ದ್ರವ್ಯಗಳೂ ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ, ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುವುವು.

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಗಳನ್ನು ತಯಾರಿಸುವೆವು ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಾಮುಖ್ಯ ಔಷಧಗಳು

ಜೀವನಪ್ರಾಶ ಲೇಹ ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ. ೧ ಪೌಂಡು ಬಾಟ್ಲಿ ರೂ. 3, ೧೦ ಔನ್ಸು ಬಾಟ್ಲಿ ರೂ. 2 ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ವ ಮೆದುಳಿಗೆ ಶಾಂತತೆಯನ್ನೀಯುವ ಔಷಧ. ೧ ಪೌಂಡು ಬಾಟ್ಲಿಗೆ ರೂ 1—9

ಅಶ್ವಗಂಧಾರಿಷ್ಟ, ಅಶಕ್ತರಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ. 3. ೮ ಔನ್ಸು ಬಾಟ್ಲಿಗೆ ರೂ. 1—10—1 ಪ್ರಸೂತಿ ಸಂಜೀವನ. ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ ೧೦ ಔನ್ಸು ಬಾಟ್ಲಿಗೆ ರೂ. 1-8—0 ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3—6—0, ೮ ಔನ್ಸು ಬಾಟ್ಲಿಗೆ ರೂ 1—12—0

ಬ್ರಾಹ್ಮೀ ತೈಲ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಟ್ರೈನ್ ಟಾನಿಕ್ಕು ೪ ಔನ್ಸು ಬಾಟ್ಲಿಗೆ ಆಣೆ 14 ಹಿಮಸಾಗರ ತೈಲ ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ. ೪ ಔನ್ಸು ಬಾಟ್ಲಿಗೆ ರೂ —8—0 ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ. ೪ ಔನ್ಸು ಬಾಟ್ಲಿಗೆ ರೂ —6—0 ಕ್ಷೀರಬಲಾ ಪಕ್ವ ವಾತ ಅರ್ಧಾಂಗ ವಾತ ಮುಂತಾದ ವಾತ ಕಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೩ನೇಯ ಆವರ್ತನೆ ೧ ಔನ್ಸಿಗೆ ರೂ 1 ೧೪ನೇಯ ಆವರ್ತನೆ ೧ ಔನ್ಸಿಗೆ ರೂ —12 ೨೦ನೇ ಆವರ್ತನೆ ೧ ಔನ್ಸಿಗೆ ರೂ 2—8 ೪೧ನೇಯ ಆವರ್ತನೆ ೧ ಔನ್ಸಿಗೆ ರೂ 4 ೫೧ನೇ ಆವರ್ತನೆ ರೂ 4 ೧೦೧ನೇ ಆವರ್ತನೆ ರೂ ೮ ಧನ್ವಂತರಿ ತೈಲ ರಕ್ತವಾತ ಆಮವಾತ, ಸರ್ವಾಂಗವಾತ ಮುಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ವ ಮೈಗೆ ಹಚ್ಚುವ ದಿವ್ಯೌಷಧ ೭ನೇಯ ಆವರ್ತನೆ ೧ ಔನ್ಸಿಗೆ ರೂ. , ೧೪ನೇ ಆವರ್ತನೆ ೧ ಔನ್ಸಿಗೆ ರೂ 1—4 ೨೧ ನೇ ಆವರ್ತನೆ ೧ ಔನ್ಸಿಗೆ ರೂ 2—6—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಆಸವ, ಅರಿಷ್ಟಗಳೂ, ಲೇಪಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ, ಸುಕುಮಾರಾಮೃತ, ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ಣಾಟಕ ಸ್ನೋ, ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅಕೋರಾ ಕ್ರೀಮ್, ಟ್ರಿಪ್ಲಿಕ್ರೀಮ್, ಕ್ರಿಮೋರ್ ಅಮೋನಿಸ್ (Limes & Glycerine) ವಗೈರೆ ಟೊಯ್ಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು, ಹಸ್ರು, ರಕ್ತನೀಲ, ವರ್ಣಗಳ, ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಸುವ ಸಾಬೂನುಗಳೂ ತಯಾರಾಗುತ್ತವೆ

*Managing Director:—Venkatrava*




**ಅಜೆಕಾರು** — ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯವರು ಇಲ್ಲಿಗೆ ಬಂದು ಮನೆ ಮನೆ ಖಾದಿ ಮಾರಾಟ ಕರಪತ್ರ ಹಂಚೋಣವನ್ನು ಮಾಡಿ ಕುಂದಾಪುರದತ್ತ ಕಡೆ ತೆರಳಿರುವರು.

ಮಂಗಳೂರು ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರರು ತಾ. ೮–೨–೩೩ರಲ್ಲು ಇಲ್ಲಿಯ ಸಹಕಾರ ಸಂಘವನ್ನು ಸಂದರ್ಶಿಸಿದುವರು. ಇದೇ ಬರುವ ಎಪ್ರಿಲ್ ಅಖೈರಿ ಒಳಗೆ ಪುನಃ ಬರಲಿರುವರು.

ವರಂಗ ಶ್ರೀ ಪದ್ಮಾವತಿ ಅಮ್ಮನವರ ಮಠದ ವರ್ಷಾವಧಿ ರಥೋತ್ಸವವು ಇದೇ ಮಾಘ ಬ. ಚೌತಿ ದಿನ ಯಥಾ ವಿಧಿಯಂತೆ ಜರಗಿತು.

**ಕುಂಬಳೆ** — ಶ್ರೀ ಮೇಣ ರಾಮಪ್ಪ ಭಟ್ಟರ ಮಗ ವೆಂಕಟರಮಣ ಭಟ್ಟ ಬಿ. ಎ ಇವರು ಎಲ್ ಎಲ್ ಬಿ ಕಲಿಯುವುದಕ್ಕಾಗಿ ಬೊಂಬಾಯಿಯಲ್ಲಿ ವಾಸಿಸುತ್ತಿದ್ದರು ಇವರು ತನ್ನ ಮದುವೆಯ ಸಂಬಂಧವಾಗಿ ಕೆಲವು ದಿನಗಳ ಹಿಂದೆ ಇಲ್ಲಿಗೆ ಬಂದಿದ್ದು ಕನ್ನೆಪ್ಪಾಡಿಯಲ್ಲಿ ವಿವಾಹವಾಯಿತು ಇದೇ ಕಳೆದ ತಾ ೧೯ನೇ ಆದಿತ್ಯವಾರ ಪುನಃ ವಿದ್ಯಾಭ್ಯಾಸಕ್ಕಾಗಿ ಬೊಂಬಾಯಿಗೆ ಹೋಗುವುದಕ್ಕೆ ಹೊರಟು ರಾತ್ರಿಯಲ್ಲಿ ಕುಂಬಳೆಯ ರೈಲ್ವೇಸ್ಟೇಷನ ಬಳಿಯಿರುವ ಬಾಯಾರತ್ತ ಕಡೆಯ ಶಂಕರ ನಾರಾಯಣ ಭಟ್ಟನೆಂಬವನ ಹೋಟೆಲಲ್ಲಿ ಉಳಕೊಂಡರು. ಊಟವಾಯಿತು. ತನ್ನ ಕೈಯಲ್ಲಿದ್ದ ಗಂಟನ್ನು ಒಳಗಿಡುವುದಕ್ಕಾಗಿ ಹೋಟಲಿನವನ ವಶಕ್ಕೆ ಕೊಟ್ಟು ತಾವು ಹೊರಗೆ ಮಲಗಿದರು. ಬೇರೆ ಎಳೆಂಟು ಜನರೂ ಹೊರಗೆ ಮಲಗಿದ್ದರು ಅಷ್ಟರಲ್ಲಿ ವೆಂಕಟರಮಣ ಭಟ್ಟರನ್ನು ಯಾರೋ ಕಡಿಯುವಂತೆ ಬೊಬ್ಬೆಯಾಯಿತು! ಮಲಗಿದ್ದವರಲ್ಲೊಬ್ಬನು ಬೇಟ್ರಿ ದೀಪವನ್ನು ಹಿಡಿದು ನೋಡಲಾಗಿ— ಹೋಟೆಲಿನ ಶಂಕರನಾರಾಯಣ ಭಟ್ಟನು ಸದ್ರಿ ವೆಂಕಟರಮಣ ಭಟ್ಟರ ಕುತ್ತಿಗೆಗೂ, ಇತರ ಕಡೆಗಳಿಗೂ ಕಡಿಯುತ್ತಿದ್ದನು! ಗಲಭೆಯಾಯಿತು! ಹೋಟೆಲ್ ಭಟ್ಟನು ಒಳಗೆ ಹೋಗಿ ಕೋಣೆಯ ಬಾಗಿಲನ್ನು ಹಾಕಿಕೊಂಡನು ಹೊರಗಿನವರು ಸಂಕಲೆಯನ್ನು ಸಿಕ್ಕಿಸಿದರು ಅನಂತರ ವೆಂಕಟರಮಣ ಭಟ್ಟರನ್ನು ಚಿಕಿತ್ಸೆಗಾಗಿ ಕಾಸರಗೋಡಿನ ಜನಪ್ರಿಯ ಡಾಕ್ಟರ್ ಕೆ ಪಿ ರಾಘವೇಂದ್ರ ರಾಯರಲ್ಲಿಗೆ ತಂದಿದ್ದಾರೆ. ಇವರಿಗೆ ಹೆಚ್ಚಿನ ಗಾಯಗಳಿದ್ದರೂ ಮರಣಾಪಾಯ ಬರಲಿಕ್ಕಿಲ್ಲವೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ

ಹೋಟೆಲಿನ ಕೋಣೆಯ ಬಾಗಿಲನ್ನು ತೆಗೆದು ನೋಡಲಾಗಿ ಮನೇಜರ್ ಶಂಕರನಾರಾಯಣ ಭಟ್ರು ತಾನು ಉಟ್ಟಿದ್ದ ಬಟ್ಟೆಯನ್ನು ಕುತ್ತಿಗೆಗೆ ಸುತ್ತಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದೂ ತಿಳಿಯುತ್ತೇವೆ "ತಾನೊಂದ ನೆನೆದರೆ ದೈವತಾ ಬೇರೊಂದ ನೆನೆದುದು." ತಪ್ಪಿಗೆ ತಕ್ಕ ಶಿಕ್ಷೆಯಾಯಿತು! ದೈವಗತಿಯಂತಾಯಿತು!

**ಬಂಟ್ವಾಳ** — ಈ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯಲ್ಲಿ ಮಂಗಳೂರು ತಾಲೂಕು ಬೋರ್ಡಿನವರು ಹುಡುಗರ ಶಾಲೆಗಳಲ್ಲಿ ಮಕ್ಕಳಿಗೆ ಸಂಬಳ ವಿಧಿಸಿದಂತೆಯೇ ಬೋರ್ಡು ಹುಡುಗಿಯರ ಶಾಲೆಗಳಲ್ಲಿ ಸಂಬಳ ವಿಧಿಸಬೇಕೆಂದೂ ಅಥವಾ ಉಪಾಧ್ಯಾಯಿನಿಯರ ಸಂಬಳ ಕಡಿಮೆ ಮಾಡಬೇಕೆಂದೂ ಮಂಗಳೂರು ತಾಲೂಕು ಬೋರ್ಡಿಗೆ ಬರೆಯಬೇಕೆಂದು ನಿರ್ಣಯವಾಗಿದೆ.

ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರವರೂ ಹೆಚ್ಚು [illegible]

ಈ ವರುಷದ ಎಸ್ ಎಸ್ ಎಲ್ ಸಿ. ಪರೀಕ್ಷೆಗೆ ಬಂಟ್ವಾಳ ಹ್ಯಾಸ್ಕೂಲಿನಿಂದ ೨೬ ವಿದ್ಯಾರ್ಥಿಯರಲ್ಲಿ ೧೯ ಮಂದಿಯನ್ನು ಕಳುಹಿಸಿರುವರು.

**ಫರಂಗಿಪೇಟೆ** — ಈ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ತಾ. ೧೮ರಲ್ಲು ಫರಂಗಿಪೇಟೆ ಶ್ರೀ ರಾಮ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬೋಳೂರು ಸೈಂಟ್ ತೋಮಸ್ ಶಾಲೆಯ ಹೆಡ್ ಮಾಸ್ತರ್ ಮಿ। ಎಸ್ ಎಸ್ ಎ. ಸಾಲ್ದಾಂಞರವರ ಅಧ್ಯಕ್ಷತೆಯಲ್ಲಿ ಜರಗಿತು

ಇಲ್ಲಿಯ ಶ್ರೀರಾಮಾ ಸ್ಕೌಟು ಟ್ರೂಪಿನವರು ತಮ್ಮ ಶಿಬಿರವನ್ನು ತಾ. ೧೮ರಲ್ಲು ಕಲ್ಲಡ್ಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆಸಿ ಅಲ್ಲಿಯ ಶಿಬಿರಾಗ್ನಿಯಲ್ಲಿ ಭಾಗವಹಿಸಿ ಜನರ ಶ್ಲಾಘನೆಗೆ ಪಾತ್ರರಾದರು

**ಕಿನ್ನಿಗೋಳಿ** — ನೇಶನಲ್ ಕ್ಲಬ್ಬಿನ ಪ್ರೆಸಿಡೆಂಟ್ ಮ। ರಾ। ಕುಡೆತ್ತೂರು ಗುತ್ತು ವಿಟ್ಠಲ ಶೆಟ್ರು ಸದ್ರಿ ಕ್ಲಬ್ಬಿನ ತಿಂಗಳು ಒಂದರ ಬಾಡಿಗೆ ರೂ ೨ನ್ನು ಒಂದು ವರ್ಷದ ಮಟ್ಟಿಗೆ ಉದಾರ ದಾನಮಾಡಿರುವರು

ಇದೇ ತಾ. ೧೯ರಲ್ಲು ದಕ್ಷಿಣ ಕನ್ನಡ ಜಿಲ್ಲಾ ಹೆಲ್ತ್ ಆಫೀಸರರು ಇಲ್ಲಿಯ ಕೆಲವು ನೆರೆ ಗ್ರಾಮಗಳಾದ ಅತ್ತೂರ ಮೆನ್ನಬೆಟ್ಟು ಐಕಳ್ತೂರು ಮೊದಲಾದ ಕಡೆಗಳಲ್ಲಿ ಸಿಡುಬಿನ ಹಾವಳಿಯಿದ್ದದ್ದನ್ನು ಕಂಡು ಆಯಾಯ ಗ್ರಾಮಗಳಲ್ಲಿ ಸಂಚರಿಸಿ ಅದರ ನಿವಾರಣಾ ಉಪಾಯವನ್ನು ಸೂಚಿಸಿದ್ದಲ್ಲದೆ ಈ ಎಲ್ಲಾ ಗ್ರಾಮಗಳ ಮಧ್ಯಸ್ಥಳವಾದ ಕಿನ್ನಿಗೋಳಿಯಲ್ಲಿ ಸಂಜೆ ೭ ಘಂಟೆಗೆ ಎಲಿಮೆಂಟರಿ ಶಾಲಾ ವಠಾರದಲ್ಲಿ ತಮ್ಮ ಮಾಯಾಲಾಂದ್ರ ಪ್ರದರ್ಶನ ಮೂಲಕ ಎಲ್ಲರಿಗೂ ತಿಳಿಯುವಂತೆ ಸಿಡುಬು ಕ್ಷಯರೋಗ ಕೊಕ್ಕೆ ಹುಳುಗಳ ಅಪಾಯ ಇವೆಲ್ಲಾ ರೋಗಗಳು ಉಂಟಾಗದ ರೀತಿಯಲ್ಲಿ ನಾವು ಕೈಕೊಳ್ಳುವ ಕಾರ್ಯವನ್ನು ನಕಾಶೆಗಳ ಮೂಲಕ ವಿವರಿಸಿ ಭಾಷಣವಿತ್ತರು.

++ ++

# ಸರ್ವಾತ್ಮಸಮರ್ಥರ ಸ್ಥಿತಿ
## ಡಾ। ಅಂಬೇಡ್ಕಾರರು
### ಗಾಂಧಿ—ಮಾಲವೀಯರೊಳಗೆ ಭಿನ್ನಮತ!

**ಶ್ರೀ** ರಂಗ ಅಯ್ಯರರು ಹರಿಜನ ಶ್ರೇಯೋದೃಷ್ಟಿಯಿಂದ ಮುಂದೆ ತಂದ ಬಿಲ್ಲಿಗೆ ಸಾರ್ವಜನಿಕ ಸಹಾನುಭೂತಿಯು ದೊರೆಯಬೇಕೆಂದು ಗಾಂಧಿಜೀಯವರು ಬರೆಯುತ್ತಿದ್ದಾರಷ್ಟೆ! ಅದನ್ನು ಜಯಪ್ರದವನ್ನಾಗಿ ಮಾಡಬೇಕೆಂದು ರಾತ್ರಿಂದಿವವೂ ಸಾಹಸವಾಗುತ್ತಲಿದೆ ಎಸೆಂಬ್ಲಿಯ ಎಲ್ಲಾ ಸದಸ್ಯರೂ ಅದರ ಬೆಂಬಲವಾಗಿ ನಿಂತು ದೇವಸ್ಥಾನ ಪ್ರವೇಶ ಸಂಬಂಧವಾಗಿ ಹರಿಜನರಿಗಿರುವ ನಿರ್ಬಂಧಗಳನ್ನು ಕಳಚಿಬಿಡಲು ಟೊಂಕಕಟ್ಟಿದ್ದಾರೆ ಈ ಬಿಲ್ಲಿನ ಸ್ಥಿತಿ ಪ್ರಯೋಜನಗಳನ್ನು ಡಾ। ಅಂಬೇಡ್ಕಾರರು ಪರಾಮರ್ಶಿಸುತ್ತಾ ಮೊನ್ನೆ ಒಂದು ಲೇಖನದಲ್ಲಿ— ರಂಗ ಅಯ್ಯರರ ಮಸೂದೆಗಳು ಹರಿಜನರಿಂದ ಅಂಗೀಕೃತವಾಗಲಾರವು ಈ ಮಸೂದೆಗಳ ಮೂಲತತ್ತ್ವವು ಅಸ್ಪೃಶ್ಯತೆಯ ನಿರ್ಮೂಲವನ್ನು ಮಾಡುವಂತಿಲ್ಲ ಲೋಕಮತವೆಲ್ಲಾ ಹರಿಜನರ ದೇವಾಲಯ ಪ್ರವೇಶಕ್ಕೆ ಒಪ್ಪಿರುವುದಿಲ್ಲ ಹರಿಜನರ ದೇವಾಲಯ ಪ್ರವೇಶದಲ್ಲಿ ಬಹುಮತವು ಒಂದಾಗಿರುವುದಿಲ್ಲ ಜನರ ಸಮ್ಮತಿ ಇಲ್ಲದೆ ಮಸೂದೆಯ ವಿಸ್ತೃತನದಿಂದ ಹರಿಜನರಿಗೆ ದೇವಸ್ಥಾನ ಪ್ರವೇಶದ ಹಕ್ಕು ದೊರೆಯುವುದೆಂದು ಭಾವಿಸುವುದು ಭ್ರಾಂತಿ ಗುರುವಾಯೂರು ದೇವಸ್ಥಾನ ಪ್ರವೇಶದ ವಿಷಯದಲ್ಲಿ ಬಹುಮತವು ಗಾಂಧಿಯವರ ಕಡೆಗೆ ನಿಲ್ಲಲು ಗಾಂಧಿಯವರ ಮಹತ್ಪ್ರತಿಭೆಯೇ ಕಾರಣ ಎಲ್ಲಾ ಕಡೆಗಳಲ್ಲೂ ಗಾಂಧಿಯವರ ಪ್ರತಿಭೆಯ ಶಕ್ತಿಯು ಕಾರ್ಯಕಾರಿಯಾಗುವುದೆಂದು ನೆನಸಲು ಸಾಧ್ಯವಿಲ್ಲ ಶ್ರೀ ರಂಗ ಅಯ್ಯರರ ಮಸೂದೆಯಿಂದ ಹರಿಜನರಿಗೆ ನಿಜವಾದ ಪ್ರಯೋಜನವಾಗುವಂತಿಲ್ಲ ಹರಿಜನರು ನಿಜವಾಗಿಯೂ ಹಿಂದೂತ್ವದಲ್ಲಿದ್ದು ಜಾತಿಹಿಂದೂಗಳಂತೆ ಸಮಾನಸ್ಕಂಧರಾಗಿ ತಮ್ಮ ಐಹಿಕ ವ್ಯವಹಾರವನ್ನು ಸುಲಭ ತರದಿಂದ ನಡೆಸಬೇಕಾದರೆ, ಮೊದಲು ವರ್ಣಾಶ್ರಮಧರ್ಮವು ಹೋಗಬೇಕು ಅಸ್ಪೃಶ್ಯತೆಯು ಅನೀತಿ, ಅನ್ಯಾಯ, ಪಾಪಗಳ ಹೇತುವಾಗಿರುತ್ತದೆ ಅದನ್ನು ನಿರ್ಮೂಲಿಸುವುದೇನೋ ಹರಿಜನ ವರ್ಗದವರ ಆದ್ಯಕರ್ತವ್ಯವಿದೆ ಹರಿಜನರಿಗೆ ಈಗ ಬೇಕಾದುದು ಐಹಿಕ ಸುಖಸಾಧನೆ ಹರಿಜನರು ಸುಶಿಕ್ಷಿತರೂ ಸಂಸ್ಕೃತರೂ ಆದರೆಂದರೆ ಅವರಿಗೆ ಕಾಲವಶಾತ್ ಸ್ಥಾನಮಾನ ಗೌರವಾದಿಗಳು ದೊರತೇ ದೊರಕುತ್ತವೆ ಆದುದರಿಂದ ಪ್ರಥಮದಲ್ಲಿ ಜಾತುವರ್ಣವು ಹೋಗಬೇಕು—ಜಾತಿಭೇದವು ಮಾಯವಾಗಬೇಕು ಅದರಿಂದಾಗಿಯೇ ಇಷ್ಟು ಹಾನಿಯುಂಟಾಗಿದೆ ಹರಿಜನರಿಗೆ ದೇವಾಲಯ ಪ್ರವೇಶವು ಮುಖ್ಯವಲ್ಲ ಈಗ ಹರಿಜನರಿಗೆ ಬೇಕಾದುದು ಸಮಾಜದಲ್ಲಿ ಸಮಾನಸ್ಕಂಧತೆಯ ಸ್ಥಾನಮಾನ ಗೌರವಗಳು ಅನೀತಿಕರವಾದ ಆಚಾರಗಳನ್ನು ಪರಿಪೋಷಿಸುವ ಯಾವ ಧರ್ಮವನ್ನೂ ಹರಿಜನರು ಲಕ್ಷೀಕರಿಸಬಾರದು ಅದನ್ನು ಧ್ವಂಸೀಕರಿಸಲೇ ಬೇಕು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣಭೇದಗಳಾಗಿಬಿಟ್ಟು ಒಂದು ಮತದವರನ್ನು ಇನ್ನೊಂದು ಮತದವರು ಕಂಡು ದ್ವೇಷಿಸುತ್ತಿದ್ದಾರೆ ಹಿಂದೂಧರ್ಮವು ಪರಿಶುದ್ಧವಾಗಬೇಕಾದರೆ ಚಾತುರ್ವರ್ಣ್ಯ ತತ್ವವು ನಾಶವಾಗಬೇಕು ಹರಿಜನರಿಗೆ ಸ್ಥಾನಮಾನ ಗೌರವಾದಿಗಳು ಎಲ್ಲರಂತೆ ದೊರೆಯಬೇಕು. ಬರೇ ದೇವಸ್ಥಾನ ಪ್ರವೇಶದಿಂದ ಇವೆಲ್ಲವೂ ಎಂದಿಗೂ ದೊರೆಯವು—ಎಂದಿದ್ದಾರೆ. ಗಾಂಧಿಜೀಯವರು ಅಂಬೇಡ್ಕಾರರ ಈ ರೀತಿಯ ವಿಮರ್ಶೆಯನ್ನು ಓದಿ ಅವರನ್ನು ಸಮಾಧಾನ ಪಡಿಸುತ್ತಾ, "ಅಂಬೇಡ್ಕಾರರು ದ್ವೇಷವನ್ನು ಬಿಟ್ಟು ವರ್ತಿಸಲಿ ಹಿಂದೂಧರ್ಮವು ಕೆಟ್ಟುದಲ್ಲ ವರ್ಣ ವಿಭಾಗವು ಹಾಳಲ್ಲ ಹಿಂದೂಧರ್ಮ ತತ್ವವನ್ನು ಅವರು ಸಂಪೂರ್ಣ ಅಧ್ಯಯನ ಮಾಡದೆ [illegible]ಗಳನ್ನು ಮಾಡುವುದು ಯುಕ್ತವಲ್ಲ ಅಂಬೇಡ್ಕಾರರ ಸತ್ವ ಪರೀಕ್ಷೆಯ ಸಮಯದಲ್ಲಿ ಅವರ ಆತ್ಮಕ್ಕೆ ಶಾಂತಿ ಸಮಾಧಾನಗಳನ್ನು ಕೊಡುವುದು ಹಿಂದೂಧರ್ಮವೇ ಆಗಿರುತ್ತದೆ. ಹಿಂದೂತ್ವದಲ್ಲಿ ಉಚ್ಚ ನೀಚವೆಂಬ ತಾರತಮ್ಯಕ್ಕೆ ಎಡೆಯುಲ್ಲ. ಹಾಗೆ ಭೇದಾಭೇದಗಳಿಗೆ ಅದು ಎಡೆಗೊಡುತ್ತದಾದರೆ, ಅಂತಹ ಧರ್ಮವು ನಶಿಸಿದ ಶಾಸ್ತ್ರವೇ ಸರಿ ದೇವಸ್ಥಾನ ಪ್ರವೇಶವು ಬಹುಸಂಖ್ಯಾಕ ಹರಿಜನರಿಗೆ ಅಗತ್ಯವಿದೆ" ಎಂದು ಮೊದಲಾಗಿ ಬರೆದಿರುವರು. ರಂಗ ಅಯ್ಯರ ಮಸೂದೆಯಿಂದಾಗಿ ದೇವಸ್ಥಾನ ಪ್ರವೇಶ ಸಾಧನೆಯನ್ನು ಸಾಧಿಸಬಾರದೆಂದು [illegible] ಮಾಲವೀಯರು ಗಾಂಧಿಜೀಯವರಿಗೆ ತಂತಿ ಕೊಡುತ್ತಾ, "[illegible]ದೆಯ ಬಲಾತ್ಕಾರಸಂಬಂಧವನ್ನು ಹಾಕಿ ದೇವಸ್ಥಾನ ಪ್ರವೇಶ[illegible]ಯನ್ನು ತೀರ್ಮಾನಿಸುವುದಕ್ಕೆ ನಾನು ಸಮ್ಮತಿಸೆನು. [illegible] ಸ್ಥಾನ ಪ್ರವೇಶ ಸಂಗತಿಯು ಧಾರ್ಮಿಕ ಸಂಗತಿ[illegible] ಅದಕ್ಕೆ ಆಯಾ ಧರ್ಮದವರು, ದೇವಸ್ಥಾನದಾಡಳಿತದವರು ಮೊದಲು ಸಮ್ಮತಿಸಬೇಕು ಬಲಾತ್ಕಾರದಿಂದ ಮಾಡುವ ಮಸೂದೆಯಿಂದಾಗಿ ನಾವು ಸಾಧಿಸಲು ಸಾಧ್ಯವಾದ ಸಮಸ್ಯೆಯು ದುಸ್ಸಾಧ್ಯವಾದೀತು ಎಂದು ಹೇಳಿದ್ದಾರೆ ಗಾಂಧಿಜೀಯವರು ಇವಕ್ಕುತ್ತರವಾಗಿ ಮಾಲವೀಯರನ್ನು ಭೇಟಿಗಾಗಿ ಪೂನೆಗೆ ಕರೆದು, ಮಾಲವೀಯರಂತಹ ಭ್ರಾತೃವರ್ಗದವರ ನುಡಿಗಳಿಗೂ ತಾನು ಅಸಮ್ಮತಿಸುವ ಕಾಲ ಬಂದಿದೆ ದೇವಸ್ಥಾನ ಪ್ರವೇಶ ವಿಷಯದಲ್ಲಿ ಶ್ರೀ ರಂಗ ಅಯ್ಯರರು ತಂದಿರುವ ಬಿಲುಗಳು ಯಾರ ಮನವನ್ನೂ ನೋಯಿಸುವಂತಿಲ್ಲ ಈ ಮಸೂದೆಯು ಬಲಾತ್ಕಾರವನ್ನುಂಟು ಮಾಡುವುದಿಲ್ಲ ದೇವಸ್ಥಾನಗಳ ಮುಖ್ಯಸ್ಥರ ಸಂಕಲ್ಪಗಳನ್ನು ಕಾಪಾಡುತ್ತದೆ. ಆದುದರಿಂದ ಮಸೂದೆಯ ಮೂಲಕದ ಸಾಧನೆಯು ಯೋಗ್ಯ"ವೆಂದು ಬರೆದಿದ್ದಾರೆ.

# ವಿವಿಧ ಸಮಾಚಾರಗಳು.

## ಮಕ್ಕಳಿಗಾಗಿ ತಾಯಿಯೊಬ್ಬಳಿಗೆ ಗೌರವದಾನ!

### ಅಮೇರಿಕಾ ಕೊಲೆಜ್ ಒಂದರ ಉದಾಹರಣೆ!

ಸ್ವನಾಮವನ್ನು ಕೃಚಿಸಿ ಬಾಹ್ಯ ಪ್ರಪಂಚಕ್ಕೆ ಅಡಿಯಿಟ್ಟ ಅನೇಕ ಮಹಿಳೆಯರಿಗೆ ಅವರ ಜೀವಿತ ಚಿನ್ಹೆಗಾಗಿ ಗೌರವವು ದೊರೆಯುತ್ತದೆ. ಅವರು ಜೀವನದಲ್ಲಿ ಹೆಣಗಾಡಿ ಧೀರತೆಯಿಂದ ಮುಂದೊತ್ತಿ, ಒಲೆಯ ಬೆಳಕನ್ನು ಆರಗೊಡದೆ, ಅತ್ಯಲ್ಪ ಸಂಪಾದನೆಯಿಂದ ತಮ್ಮ ಇಡೀ ಕುಟುಂಬವನ್ನು ಸುಸಂಸ್ಕೃತವನ್ನಾಗಿ ಮಾಡುವುದು ನಿಜವಾಗಿಯೂ ಆನಂದಜನಕ ಸಂಗತಿಯಿದೆ. ದಿ ಟಲ್ಸ್ರಂಸ್ ನ್ಯೂಸ್ ಪೇಪರ್ ಎಂಬುದು ಹೀಗೆ ಬರೆಯುತ್ತದೆ —ಬರ್ಕ್‌ಶೈರಿನ ಒಹಿಯೋದ ವೆಸ್ಟರ್ನ್ ಕೊಲೆಜ ಒಂದು ಮಿಸೆಸ್ ಒಟೆಲಿಯಾ ಕೊಂಪ್ಟನ್ ಎಂಬ ೭೪ ವರ್ಷ ಪ್ರಾಯದ ವೃದ್ಧೆಯೊಬ್ಬಳ ಜೀವಿತ ಸಾಮರ್ಥ್ಯದ ಯಶಸ್ವಿತೆಗಾಗಿ ಬಿರುದಿನಿಂದ ಗೌರವಿಸಿದುದು ಆನಂದಕರವಿದೆ. ಮೂರು ಗಂಡು ಮಕ್ಕಳನ್ನೂ ಒಬ್ಬಳು ಹೆಣ್ಣು ಮಗಳನ್ನೂ ಅವರೆಲ್ಲರೂ ತಮ್ಮ ಜೀವನದಲ್ಲಿ ಉಚ್ಚ ಸ್ಥಿತಿಯನ್ನು ಹೊಂದಿ ಖ್ಯಾತರಾಗುವಂತೆ ಮಾಡಿದ ಆ ತಾಯಿಯ ಅತ್ಯುನ್ನತ ಜೀವನ ಸಾಹಸವನ್ನು ಕಂಡು 'ಡಾಕ್ಟರ್ ಒಫ್ ಲೋಸ್,' Doctor of Laws ಎಂಬ ಬಿರುದು ಅವಳಿಗೆ ದಾನ ಮಾಡಲ್ಪಟ್ಟಿತು.

ಯಾವ ಕೊಲೆಜೇ ಆಗಲಿ ಒಬ್ಬಳ ಜೀವಿತ ಕಾರ್ಯಕಲಾಪಗಳ ಪ್ರಾಶಸ್ತ್ಯವನ್ನೊಪ್ಪಿ ಅವಳಿಗೆ ಗೌರವಾಸ್ಪದ ಪದವಿಯನ್ನು ದಾನಕ್ಕೆ ಬಿಡುವುದಿಲ್ಲ. ಆದರೆ ಈ ಕೊಲೇಜಿನ ಮೇಲಧಿಕಾರಿಗಳು ಮಿಸೆಸ್ ಕೊಂಪ್ಟನ್‌ಳ ಸೇವೆಯು ಮಾನುಷಿಕ ಜಯದಲ್ಲಿ ಅತ್ಯಂತ ಶ್ರೇಷ್ಠವಾದುದೆಂದು ಭಾವಿಸಿದ್ದಾರೆ.

ಬಹಳವಾದ ಅತ್ಯಯಜ್ಞವನ್ನು ಮಾಡಿ ಆ ಮಾತೆಯು ತನ್ನ ಪ್ರತಿಯೊಂದು ಮಗುವಿಗೆ ಶ್ರೇಯಸ್ಕರ ವಿದ್ಯಾಜ್ಞಾನವನ್ನು ಕೊಡಲು ಸಮರ್ಥಳಾದಳು. ಅವಳ ಪ್ರಥಮ ಪುತ್ರನಾದ ಕಾರ್ಲ್ ಎಂಬವನು ಬೊಸ್ಟನಿನ Massachusetts Institute of Technology ಈ ಸಂಸ್ಥೆಯ ಅಧ್ಯಕ್ಷನಾಗಿರುವನು. ದ್ವಿತೀಯ ಪುತ್ರನಾದ ಆರ್ಥರ್ ಎಂಬವನು ಚಿಕಾಗೋದಲ್ಲಿ ಫಿಸಿಕ್ಸ ಪ್ರೊಫೆಸರ್ ಆಗಿರುವನು. ಇವನು ನೊಬೆಲ್ ಪಾರಿತೋಷಕವನ್ನು ಹೊಂದಿ ಜಗತ್ತಿನಲ್ಲಿ ಪ್ರಖ್ಯಾತ ವಿಜ್ಞಾನಿಯಾದನು. ತೃತೀಯ ಪುತ್ರ ವಿಲ್ಸನನೆಂಬವನು ವಾಶಿಂಗ್ಟನ್ ನಗರದಲ್ಲಿ ವಕೀಲನಾಗಿರುವನು. ಈ ತಾಯಿಯ ಒಬ್ಬಳು ಪುತ್ರಿಯು ಇಂಡಿಯದ ಅಲ್ಲಹಾಬಾದ್ ಎವಿಂಗ್ ಕೊಲೆಜಿನ ಅಧ್ಯಕ್ಷರಾದ ಮಿ। ಚಾರ್ಲ್ಸ್ ರೈಸ್‌ರವರ ಪತ್ನಿಯಾಗಿರುವಳು. 'ಮಾತೃತ್ವವೆಂಬುದು ಒಂದು ಸಂಪೂರ್ಣ ಜೀವನ. ಅದಕ್ಕಿಂತ ಶ್ರೇಯಸ್ಕರವಾದುದು ಇನ್ನೊಂದಿಲ್ಲ. ಮಾತೃತ್ವವೆಂಬುದು ಮಹಿಳೆಯ ಮಹತ್ವದ ಜವಾಬ್ದಾರಿಕೆ, ಹಕ್ಕು ಮತ್ತು ಸಾಮರ್ಥ್ಯಪರೀಕ್ಷೆ, ಸತ್ವ ಪರಿಶೀಲನೆ, ನನ್ನ ಮಕ್ಕಳಿಗಾಗಿ ನಾನು ಎಂತಹ ತ್ಯಾಗವನ್ನಾಗಲೀ ಎಂತಹ ಕಷ್ಟ ಕೆಲಸವನ್ನಾಗಲೀ ಘನವೆಂದು ಭಾವಿಸಿರಲಿಲ್ಲ" ಎಂದು ಪದವಿಯ ಅಂಗೀಕಾರವನ್ನು ಮಾಡುವಾಗ ಮಿಸೆಸ್ ಕೊಂಪ್ಟನಳು ಹೇಳಿದಳು. (ಧೀರೆಯಾದ ಈ ಮಹಿಳೆಯ ಉದಾಹರಣೆಯನ್ನು ನಮ್ಮ ಸ್ತ್ರೀಯರೂ ಈ ಮೇಲಿನ ಕೊಲೆಜಿನ ಮಾದರಿಯನ್ನು ವಿದ್ಯಾಲಯದ ಅಧಿಕಾರಿಗಳೂ ಅನುಸರಿಸುವುದು ಆಗತ್ಯವಿದೆ.)

## ಶಬ್ದಗಳ ಜ್ಞಾನ.

ಆಂಗ್ಲ ಭಾಷೆಯಲ್ಲಿ ತಜ್ಞರಾಗಬೇಕೆಂದು ಡಿಲ್ಲಿಯ ಒಂದು ವ್ಯಾಪಾರಿ ಸಂಸ್ಥೆಯು ಜಾಹೀರಾತು ಮಾಡುತ್ತಲಿದೆ. ಅವರ ಜಾಹೀರಾತಿನಂತೆ ರೂಸ್‌ವೆಲ್ಟರೆಂಬವರಿಗೆ ಆಂಗ್ಲ ಭಾಷೆಯ ೧,೩೪,೦೦೦ ಶಬ್ದಗಳು ತಿಳಿದಿವೆ. ಗ್ಲೆಡ್‌ಸ್ಟನ್ ಜೋರ್ಜರಿಗೆ ೧೦೦,೦೦೦ ಶಬ್ದಗಳು ತಿಳಿದಿವೆ. ಶೇಕ್ಸ್‌ಪಿಯರರಿಗೆ ೨೪೦೦೦ ತಿಳಿದಿದ್ದುವು. ೧೬ನೇ ಶತಮಾನದಲ್ಲಿ ಶೇಕ್ಸ್‌ಪಿಯರರಿಗೆ ತಿಳಿದಿದ್ದ ೨೪೦೦೦ ಶಬ್ದಗಳು ಅವನನ್ನು ಮಹಾ ಕಾವ್ಯಕನೆಂದೂ, ಕವಿ, ನಾಟಕಕಾರನೆಂದೂ ಪ್ರಖ್ಯಾತಿಗೊಳಿಸಿದುವು. ಆದರೆ ಲ್ಯೋಡ್ ಜೋರ್ಜ, ರೂಸ್‌ವೆಲ್ಟರಿಗೆ ಅವನಿಗಿಂತಲೂ ಹೆಚ್ಚು ಶಬ್ದಗಳು ತಿಳಿದಿವೆ ಯಾದರೂ ಅವರು ಶೇಕ್ಸ್‌ಪಿಯರರನ್ನು ವಿದ್ಯಾಸಂಪನ್ನರಾಗಲಿಲ್ಲ. ಮಿಲ್ಟನರಿಗೆ ೧೩,೦೦೦ ಶಬ್ದಗಳು ತಿಳಿದಿದ್ದುವು. ಇದರಿಂದಾಗಿ ಆಂಗ್ಲ ಭಾಷೆಯು ಕಾಲಕ್ರಮದಿಂದ ಹೇಗೆ ವಿಕಾಸವಾಯಿತೆಂದು ತಿಳಿಯುವುದು.

## ಮನುಷ್ಯನು ರಾಕ್ಷಸನಂತೆ ಬೆಳೆಯಬಹುದೋ?

ಜೋರ್ಜ ಗೋಡ್‌ವಿನರೆಂಬವರು ಒಂದು ಲೇಖನದಲ್ಲಿ ಮನುಷ್ಯನ ವಿಜ್ಞಾನ ದೃಷ್ಟಿಯು ದಿನೇ ದಿನೇ ವಿಶಾಲವಾಗುತ್ತಿರುವುದರಿಂದ ಅವನು ಪ್ರಕೃತಿಯ ರಹಸ್ಯವನ್ನರಿಯಲು ಸಮರ್ಥನಾಗುವನೋ ಎಂಬ ಶಂಕೆ ಈಗೀಗ ಬಂದಿದೆ. ಮನುಷ್ಯನು ಈಗಿರುವಷ್ಟೆ ಗಾತ್ರದಲ್ಲಿರಬೇಕೋ, ಅವನು ತನ್ನ ದೇಹವನ್ನು ತನ್ನಿಚ್ಛೆ ಪ್ರಕಾರ ಬೆಳೆಸಬಹುದೋ ಎಂದು ಅವರು ಬರೆಯುತ್ತಾ,—ಶಾಸ್ತ್ರೀಯ ರೀತಿಯ ಆಹಾರ, ಶಾಸ್ತ್ರೀಯ ರೀತಿಯ ಬೆಳಕು ಮತ್ತು ಅಣುಗಳ ಪರಿಷ್ಕಾರ [illegible] ಮನುಷ್ಯನು ರಕ್ಕಸನಂತೆ ಬೆಳೆಯಬಹುದು. Ultra violet ಬೆಳಕಿನಿಂದ ಮನುಷ್ಯನ ದೇಹಾಕೃತಿಯನ್ನು ಸಾವಿರ ಪಾಲಷ್ಟು [illegible]. ಎಕ್ಸ್‌ರೇ ಮೂಲಕವೂ ಪ್ರಾಣಿ ಮಾತ್ರಗಳ [illegible] ಬೆಳೆಸಿ ಗಾತ್ರವನ್ನು ಹೆಚ್ಚಿಸಬಹುದು. ಪ್ರೊಫೆಸರ್ ಮುಲ್ಲರ್ [illegible] ಈ ಎಕ್ಸ್‌ರೇ ಮೂಲಕ ಸಣ್ಣ ಸಣ್ಣ ನುಸಿಗಳನ್ನು ಬಹಳ [illegible] ವಿಚಿತ್ರವಾಗಿಯೂ ಬೆಳೆಸಿದ್ದಾರೆ. ಪ್ರಾಣಿ ಮಾತ್ರ

(Glands)ಗಳನ್ನು ಆಹಾರ ಮತ್ತು ಬೆಳಕುಗಳಿಂದ ಬೆಳೆಸಿದರೆ ದೇಹವು ತನ್ನಿಷ್ಟಕ್ಕೆ ಬಾಗಿ ಹೊಂದುತ್ತದೆಂದು ಇವರ ಅಭಿಪ್ರಾಯವಿರುವುದು. ಸಾಧಾರಣ ಮನುಷ್ಯನು ನೂರರಿಂದ ನೂರೈವತ್ತು ಪೌಂಡುಗಳಷ್ಟು ಭಾರವಿದ್ದರೂ, ಯಾರ 'ಗ್ಲೇಂಡ್ಸ್' ಸರಿಯಾಗಿದೆಯೋ ಅವರು ೪೦೦ ಪೌಂಡುಗಳನ್ನು ಮಿಕ್ಕಿ ಬೆಳೆಯುತ್ತಾರಂತೆ. ಲೂಸ ಏಂಗೆಲ್ಸ ಕುಟುಂಬ ವರದಲ್ಲಿ ಲಿಯೋನಾರ್ಡ ಎಂಬವನು ೪೧೬ ಪೌಂಡುಗಳ ಭಾರವಿದ್ದು ಸಿನೆಮ ನಟನಾಗಿರುವನು. ಇವನ ಆ "ಗ್ಲೇಂಡ್ಸ್" ಅತ್ಯುತ್ತಮ ರೀತಿಯಿಂದಿರುವುದರಿಂದಲೇ ಇವನು ಇಷ್ಟು ಪುಷ್ಟಿಯಂತೆ.

## ಮನುಷ್ಯನು ಮಂಗನಾಗಿದ್ದನೋ?

"ಡಾರ್ವಿನ್ ಥಿಯರಿ" ಪ್ರಕಾರ ಮನುಷ್ಯನ ಉದ್ಭವವು ಮಂಗನಿಂದಾಯಿತೆಂದೂ, ಅವನು ಕಾಲಕ್ರಮೇಣ ಸಂಸ್ಕೃತನಾದನೆಂದೂ ತಿಳಿಯಲಾಗಿದೆ. ಆದರೆ ಈಗ ಡಾರ್ವಿನ್ನನ ನಿರೂಪಣೆಯನ್ನು ವಿರೋಧ ಶಾಸ್ತ್ರಜ್ಞಾನದಿಂದಲೇ ಡಾ। ಜೆ ಜೆ ಸ್ಕೆನ್‌ಲಾನ್ ಎಂಬವರು ಹಿಮಾಲಯಗಳಲ್ಲಿ ಜೆಕಿನ್, ಜಾವಾ ಪಿಲ್ಟ್‌ಡೌನ್ ಮೊದಲಾದ ಎಷ್ಟು ಬಗೆಯ ಮನುಷ್ಯ ಜಾತಿಗಳಿದ್ದರೂ ಜೀವಂತ ಮನುಷ್ಯನ ಪರಿಶೀಲನೆಯಿಂದ ಅವನು ಮಂಗನಿಂದಾಗಲೀ ಯಾವುದೇ ಒಂದು ಪ್ರಾಣಿಯಿಂದಾಗಲೀ ಉದ್ಭವವಾಗಿಲ್ಲವೆಂದು ಉದಾಹರಿಸುತ್ತಿರುವರು. ಡಾರ್ವಿನ್ನನ ನಿರೂಪಣೆಯು ಎಂತಿದ್ದರೂ ಮನುಷ್ಯಮಾತ್ರನ ಹಸ್ತಪರಿಶೀಲನೆಯಿಂದ ಅವನು ಯಾವ ಪ್ರಾಣಿಯಿಂದಾದರೂ ಉದ್ಭವವಾಗಿರುವುದಿಲ್ಲವೆಂದು ತಿಳಿಯಲಾಗುತ್ತದೆ. ಎಂದೇ ಅವರ ಅಭಿಮತ. 'ಮಂಗ, ಮಾಗು ಕಪ್ಪು ಕಪಿಗಳು ಮನುಷ್ಯನಂತೆ ಕೆಲವು ಪ್ರಾಣಿಗಳಿಗಿರಬಹುದು. ಆದರೆ ಮಂಗನ ಅಂಗೈಯಂತಹ ಅಂಗೈಯು ಯಾವ ಮನುಷ್ಯ ಪ್ರಾಣಿಗೂ ಇಲ್ಲ. ಇದರಿಂದಾಗಿ ಡಾರ್ವಿನ್ನನ ನಿರೂಪಣೆಯ ಸತ್ಯಾಸತ್ಯತೆಯು ನಿರ್ಧಾರವಾಗಿರುವುದಿಲ್ಲ. ಎಲ್ಲಿಯ ತನಕ ಇದನ್ನು ಕಂಡುಹಿಡಿಯಲಾಗುವುದಿಲ್ಲವೋ ಎಲ್ಲಿಯ ತನಕ ಈ ಉಭಯುಕ್ತ ವಿಷಯವನ್ನು ಯಾರೂ ಕಂಡು ಹಿಡಿಯುವುದಿಲ್ಲವೋ ಅಲ್ಲಿಯ ತನಕ ಮನುಷ್ಯನ ಜನನವು ಪ್ರಥಮದಲ್ಲಿ ಎಲ್ಲಾಯಿತೆಂದು ನಿರೂಪಿಸಲಸಾಧ್ಯವೆಂದೇ ಈ ಭೂಶಾಸ್ತ್ರ ಪ್ರಾಣಿ ಶಾಸ್ತ್ರಜ್ಞರ ಮತವಿರುತ್ತದೆ.

## ಜರ್ಮನಿಯಲ್ಲಿ ಮಹಾ ಸಿಡಿತ!

ತಾ. ೧೦ನೇ ಫೆಬ್ರವರಿ ದಿನ ಜರ್ಮನಿಯ ಸಾರ್ ಎಂಬಲ್ಲಿ ಗ್ಲೇಸಿನ ಅತ್ಯಂತ ದೊಡ್ಡ ಗ್ಲೇಸ್ ಟೇಂಕ್ ಒಂದು ಒಡೆಯಿತು. ಆದರ ಒಳಗಿದ್ದ ಉದ್ಭವವಾದ ಮಾರ್ಗವು ನಾಶವಾಯಿತು. ಆ ಗ್ಲೇಸ್ ಹಂಡೆಯನ್ನು ಮುಚ್ಚಿದ ಕಬ್ಬಿಣದ ಮುಚ್ಚಳವು ರೈಲ್ವೆ ಸ್ಟೇಶನನ್ನು ಹಾಯ್ದು ೨೫೦೦ ಗಜ ದೂರಕ್ಕೆ ಎಸೆಯಲ್ಪಟ್ಟಿತು. ನೂರುಗಟ್ಟಲೆ ಜನರು ಮನೆಮಾರು ಇಲ್ಲದಂತಾದರು. ಸುಮಾರು ೬೦ ಜನರು ಮೃತರಾದ ಪಟ್ಟಿಯಾಗಿದೆ. ಒಂದು ಸಾವಿರಕ್ಕಿಂತಲೂ ಹೆಚ್ಚಿನವರಿಗೆ ಜಖಂ ಆಗಿದೆ. ಅಧ್ಯಕ್ಷರಾದ ಹಿಂಡೆನ್‌ಬರ್ಗರು ೧೦೦ ೦೦೦ ಮಾರ್ಕುಗಳನ್ನು ಕಳುಹಿಸಿರುವರು. ಜಖಂಗೊಂಡು ಸತ್ತ ಪ್ರತಿ ಕುಟುಂಬಕ್ಕೆ ೧೫೦೦ ಫ್ರೇಂಕ್‌ಗಳನ್ನು ಕೊಡಬೇಕೆಂದು ಸಾರ್ ಕಮಿಶನ್‌ನವರು ರಕ್ಷಣಾದ್ರವ್ಯವನ್ನು ಶೇಖರಿಸಿರುವರು. ಮಹತ್ವಾದ ನಷ್ಟವು ಸಂಭವಿಸಿದುದರಿಂದ ಜರ್ಮನಿಯ ಅಧಿಕಾರಿಗಳು ಹೆಚ್ಚಿನ ಜಾಗ್ರತೆಯುಳ್ಳವರಾಗಿರುವರು.


ತಿದ್ದುಪಡಿ

Canara Bank, Ltd, Mangalore
ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಮೊಬಲಗುಗಳನ್ನು ವಾಯಿದೆಗೆ ಕೊಡದೆ, ಸದ್ರಿಯವರ ಪೈಕಿ ೧ನೇಯವರಿಗೆ ಬಿಟ್ಟ ಟಪ್ಪಾಲು ರಿಜಿಸ್ತ್ರಿ ನೋಟೀಸು ಸದ್ರಿಯವರು ಸಿಕ್ಕದೆ ಬಟವಾಡೆಯಾಗಲಿಕ್ಕೆ ಅಸಾಧ್ಯವೆಂದು ಪುನಹ ಬಂದಿರುವುದರಿಂದಲೂ ೨ನೇಯವರಿಗೆ ಬಿಟ್ಟ ಟಪ್ಪಾಲು ರಿಜಿಸ್ತ್ರಿ ನೋಟೀಸು ಸದ್ರಿಯವರು ಮೃತಪಟ್ಟಿದ್ದಾರೆಂದು ಪುನಹ ಬಂದಿರುವುದರಿಂದಲೂ, ಅಡವಿಟ್ಟ ನಗಗಳನ್ನು ಇದೇ ಬರುವ ಮಾರ್ಚ ತಿಂಗಳ ತಾ ೩ನೇ ಶುಕ್ರವಾರ ದಿವಸ ಮಧ್ಯಾಹ್ನ ಘಂಟೆ ೩ರ ತರುವಾಯ, ಯಾ ಬೇಂಕಿನವರಿಗೆ ಯುಕ್ತ ತೋರುವ ಮುಂದಣ ತಾರೀಕು ಯಾ ತಾರೀಕುಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

1 ಲೋನ್ ನಂಬ್ರ 993/31 ಕೊಸೆಸ್ ಕಾಂಞಾ ಬಾಯಿ, ಡಿ ಸಿಲ್ವರ ವಿಧವೆ, C/o ಎಲ್ ಏ ಪೆರಿಸ್, ಕುಡುಬುಗೆರೆ ಸಂಗಮೇಶ್ವರ ಪೋಸ್ಟ್ ಕಡೂರು ಡಿಸ್ಟ್ರಿಕ್ಟ್. ಅಸ್ಲು ರೂ ‐ ಏಲಂ ತಾರೀಕಿಗೆ ಬಡ್ಡಿ ರೂ 4—14-3 ಖರ್ಚು 0—3—9

ಲೋನ್ ನಂಬ್ರ 993/31 ಕೊಸೆಸ್ ಕಾಂಞಾಬಾಯಿ, ಡಿ, ಸಿಲ್ವರ ವಿಧವೆ, C/o ಎಲ್ ಎ ಪೆರಿಸ್ ಕುಡುಬುಗೆರೆ, ಸಂಗಮೇಶ್ವರ ಪೋಸ್ಟ್, ಕಡೂರು ಡಿಸ್ಟ್ರಿಕ್ಟ್ ಅಸ್ಲು ರೂ. 250 ಏಲಂ ತಾರೀಕಿಗೆ ಬಡ್ಡಿ ರೂ 16—9 6 ಖರ್ಚು 0—4—0

2. ಲೋನ್ ನಂಬ್ರ 284/31. ಮುನ್ನೂರು ಶಿವರಾಮಯ್ಯ, ವಾಸುದೇವಯ್ಯನವರ ಮಗ, ಶ್ರೀಕುಲೇಶ್ವರ ದೇವಸ್ಥಾನದ ಸಮೀಪ—ಮಂಗಳೂರು. ಅಸ್ಲು ರೂ. 25. ಏಲಂ ತಾರೀಕು ವರೆಗೆ ಬಡ್ಡಿ ರೂ 1—8—5 ಖರ್ಚು 0—5—3

ಈ ನೋಟೀಸಿನ ಖರ್ಚು ಅಲ್ಲಾದಾ.

Office of the Bank, Mangalore 15—2—1933 } M. Mukund Kini, For Secretary.


## ಶ್ರೀ ರಾಮಕೃಷ್ಣ ಪರಮಹಂಸರು.

"ಯಾವುದನ್ನು ತಿಳಿಯಲು ಸನ್ಯಾಸಿಗಳೂ ಸಾಧುಗಳೂ ಪ್ರಪಂಚದಲ್ಲಿ ದೇಹಾಭಿಮಾನವನ್ನೂ ಸಹ ಬಿಟ್ಟು ಪ್ರಯತ್ನಿಸುವರೋ, ಅದೊಂದನ್ನು ತಿಳಿದರೆ ಎಲ್ಲವನ್ನೂ ತಿಳಿಯುವೆ."

ಹತ್ತೊಂಬತ್ತನೆಯ ಶತಮಾನದ ಅಸಾಧಾರಣ ವ್ಯಕ್ತಿಯೂ, ಚಿಕಾಗೋ ಪಟ್ಟಣದಲ್ಲಿ ಸೇರಿದ ಸರ್ವ ಮತಗಳ ಸಂಘದಲ್ಲಿ ಹಿಂದೂ ಮತದ ಉದ್ದೇಶವನ್ನು ಪ್ರಪಂಚದ ಕಣ್ಣೆದುರಿಗಿರಿಸಿದ ಸ್ವಾಮಿ ವಿವೇಕಾನಂದರ ಪರಮ ಗುರುವೂ, ಭಗವಂತನ ಅವತಾರವೂ ಆದ ಶ್ರೀರಾಮಕೃಷ್ಣ ಪರಮಹಂಸರು ೧೮೩೬ನೆಯ ಸಂವತ್ಸರದಲ್ಲಿ ಬಂಗಾಳದಲ್ಲಿರುವ ಕಮಾರ ಪೂಕೂರ್ ಎಂಬ ಹಳ್ಳಿಯಲ್ಲಿ ಒಬ್ಬ ಬಡ ಬ್ರಾಹ್ಮಣನ ಮನೆಯಲ್ಲಿ ಜನಿಸಿದರು. ಭಗವಾನ್ ಶ್ರೀ ವಿಷ್ಣುವಿನ ಅನುಗ್ರಹದಿಂದ ಜನಿಸಿದ ಇವರಿಗೆ ಗದಾಧರನೆಂಬ ಹೆಸರಿಡಲಾಯಿತು. ಇವರಿಗೆ ಭಗವಂತನಲ್ಲಿ ಚಿಕ್ಕಂದಿನಿಂದಲೂ ವಿಶೇಷವಾದ ಭಕ್ತಿಯಿತ್ತು. ಪ್ರಪಂಚ ಜೀವನೋಪಯುಕ್ತ ವಿದ್ಯೆಯನ್ನು ತಿರಸ್ಕರಿಸಿದುದೇ ಅವರ ಅದ್ಭುತ ತ್ಯಾಗಕ್ಕೆ ಸಾಕ್ಷಿಯಾಗಿದೆ. ತಮ್ಮ ತಂದೆಯವರ ಮರಣಾನಂತರ ಅವರು, ಅವರ ಅಣ್ಣಂದಿರಾದ ರಾಮಕುಮಾರರ ಜೊತೆಯಲ್ಲಿ ಕಲಕತ್ತೆಗೆ ಹೋದರು.

ಐಶ್ವರ್ಯವಂತಳೂ ವಿಧವೆಯೂ ಆದ ರಾಣಿ ರಾಸಮಣಿ ಎಂಬವಳು ದಕ್ಷಿಣೇಶ್ವರದಲ್ಲಿ ಒಂದು ಕಾಳಿಕಾ ಮಂದಿರವನ್ನು ಪ್ರತಿಷ್ಠಿಸಿದಳು. ಅವಳು ಶೂದ್ರ ಕುಲದವಳಾದುದರಿಂದ ಬ್ರಾಹ್ಮಣರು ಮಂದಿರಕ್ಕೆ ಅರ್ಚಕರಾಗಲು ಒಪ್ಪಲಿಲ್ಲ. ಆದರೆ ರಾಮಕುಮಾರರು ಮೊದಲನೆಯ ಅರ್ಚಕರಾದರು. ಭಗವಾನರೂ ಕೂಡ ಅವರಣ್ಣನ ಜೊತೆಯಲ್ಲಿಯೇ ಇದ್ದರು. ಸ್ವಲ್ಪ ದಿನಗಳಲ್ಲಿಯೇ ಅವರೂ ಕಾಳಿಕಾದೇವಿಯ ಅರ್ಚಕರಾದರು. ಅಲ್ಲಿ ಸದಾ ಅಂತರ್ಮುಖರಾಗಿ ಭಗವತಿಯ ಬಳಿಯಲ್ಲಿಯೇ ಕಠಿಣ ಸಾಧನೆಯನ್ನು ಮಾಡುತ್ತಿದ್ದರು. ಸಾಧನಾ ಮಗ್ನರಾದ ಇವರ ಚಿತ್ತವೃತ್ತಿಯು ಬದಲಾದಂತೆ ಕಂಡು ಬಂತು. ವಿವಾಹ ಮಾಡಿದರೆ ಈ ಚಿತ್ತವೃತ್ತಿಯು ಹೋಗುವುದೆಂದು ಬಂಧುಗಳು ಸೂಚಿಸಿದರು. ಅದರಂತೆಯೇ ಭಗವಾನರು ಕಮಾರಪೂಕೂರಿನ ಹತ್ತಿರದ ಮಣಿಯೆಂಬವಳನ್ನು ಮದುವೆಯಾದರು. ಕೆಲವು ಸಮಯದ ತರುವಾಯ ಕಲಕತ್ತೆಗೆ ಹಿಂದಿರುಗಿ ಬಂದು ಭಗವತಿಯ ಪೂಜಾನಿರತರಾದರು. ಕೆಲವು ದಿನಗಳಲ್ಲಿಯೇ ಅವರಿಗೆ ಭಾವಾಂತರವಾಗಿ ಅವರಲ್ಲಿ ಬದಲಾವಣೆಗಳುಂಟಾದುವು. ಇತರರಿಗೆ ಅವರು ಪೂಜೆ ಮಾಡುವುದು ವಿಚಿತ್ರವೆಂದು ಕಂಡಿತು. ಆಗ ಭಗವಾನರಲ್ಲಿಗೆ ಅನೇಕ ಸನ್ಯಾಸಿಗಳು ಸಿದ್ಧರೂ ಬಂದು ಅವರಿಗೆ ಉಪದೇಶ ಕೊಟ್ಟರು. ಭಗವಾನರು ಅವುಗಳನ್ನೆಲ್ಲಾ ಕ್ರಮವಾಗಿ ಸಾಧನೆ ಮಾಡಿ ಸರ್ವ ಮತಗಳ ಸತ್ಯವನ್ನೂ ಅರಿತುಕೊಂಡರು.

ಅನಂತರ ಅವರ ಪೂಜಾ ಕಾರ್ಯ ನಿಂತವು ಹೋಯಿತು. ಅಂತರಂಗ ಭಕ್ತರು ಬರಲಾರಂಭಿಸಿದರು. ಅವರಿಗೆಲ್ಲ ಸರಿಯಾದ ಉಪದೇಶವನ್ನಿತ್ತು ಸಾಧನೆ ಮಾಡಲು ಅನುಜ್ಞೆಯಿತ್ತರು. ಹೀಗಿರಲು ಅವರಿಗೆ ಅಸಾಧ್ಯವಾದ [illegible] ಬೇನೆಯುಂಟಾಯಿತು. ಆದರಿಂದ ಅವರು ತಮ್ಮ ೫೦ನೇ ವಯಸ್ಸಿನಲ್ಲಿ ಈ ಮಾನವ ಶರೀರವನ್ನು ತ್ಯಜಿಸಿ ಪರಂಧಾಮವನ್ನೈದಿದರು.

ಸರ್ವ ಧರ್ಮಸಮನ್ವಯ ಮಾಡಿದ ಈ ಮಹಾವ್ಯಕ್ತಿಯ ತೇಜಃಪುಂಜವಾಗಿಯೂ ಸ್ಫೂರ್ತಿದಾಯಕವಾಗಿಯೂ ಇರುವ ಉಪದೇಶ ವಾಕ್ಯಗಳಲ್ಲಿ ಕೆಲವನ್ನು ತಿಳಿಯುವ.

'ಭಕ್ತಿಯೋಗವೇ ಈ ಯುಗದ ಧರ್ಮ. ಕರ್ಮ ಮಾರ್ಗವು ಅತಿ ಕಠಿಣವೂ ಮತ್ತು ತೊಂದರೆದಾಯಕವೂ ಆಗಿದೆ. ಜ್ಞಾನ ಮಾರ್ಗವು ಮತ್ತೂ ಕಠಿಣವಾದುದು. ಕಾಮಿನೀ ಕಾಂಚನದಲ್ಲಿ ಆಸಕ್ತಿಯು ಲೇಶಮಾತ್ರವಿದ್ದರೂ ಜ್ಞಾನವುಂಟಾಗಲಾರದು. ಈ ಮಾರ್ಗವು ಕಲಿಯುಗಕ್ಕೆ ತಕ್ಕುದಲ್ಲ. ಭಕ್ತಿಯೊಂದರಿಂದಲೇ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ಪ್ರತಿಫಲಾಪೇಕ್ಷೆಯನ್ನು ಬಿಡು. ಪುಸ್ತಕಗಳಿಂದಲ್ಲದೆ ಭಗವಂತನ ದರ್ಶನವು ಅಲಭ್ಯವೆಂದು ಯೋಚಿಸಬೇಡ. ಪುಸ್ತಕಗಳು ಕೈಮರಗಳಂತೆ. ದಾರಿ ತಿಳಿದ ಮೇಲೆ ಅವು ನಿಷ್ಪ್ರಯೋಜನ ವಸ್ತುಗಳಾಗುತ್ತವೆ. ಬಾಹ್ಯಾಚರಣೆಗೆ ಪ್ರಾಮುಖ್ಯತೆಯನ್ನೀಯದಿರು. ತಾನೇ ದೊಡ್ಡವನೆಂದು ಎಂದಿಗೂ ಅಹಂಕಾರ ಪಡಬೇಡ. ನಿನಗೆ ಇಷ್ಟಬಂದ ರೀತಿಯಲ್ಲಿ ಪರಮಾತ್ಮನನ್ನು ನಿಸ್ಪೃಹವೂ ಸಹಜವೂ ಆದ ಭಕ್ತಿಯಿಂದ ಪೂಜಿಸು. ಸಾಮಾನ್ಯ ಜನರು ಯಶಸ್ಸಿಗೂ, ಹಣಕ್ಕೂ ಕಣ್ಣೀರು ಬಿಡುವಂತೆ, ಭಗವಂತನಿಗೋಸ್ಕರ ಕಣ್ಣೀರು ಸುರಿಸಿದರೆ ಆಗ ಭಗವಂತನು ಲಭಿಸುವನು. ಅಹಂಕಾರಕ್ಕಿಂತಲೂ ಪ್ರಬಲ ಶತ್ರುವಿಲ್ಲ. ಕಷ್ಟಗಳು ಬರುವುದು ನಮ್ಮ ಸತ್ವಪರೀಕ್ಷೆಗೋಸ್ಕರ. ಭಗವಂತನ ಅಡಿದಾವರೆಗಳಲ್ಲಿ ಮರೆ ಹೊಕ್ಕ ಮೇಲೆ ಕೊಂಚವೂ ಭಯವಿಲ್ಲ. ಪ್ರಾಪಂಚಿಕ ಸುಖಗಳೆಲ್ಲವೂ ಕ್ಷಣಿಕವಾದವು. ಇಂದ್ರಿಯಗಳಿಗೆ ಗುಲಾಮನಾಗಿ ಬಾಳುವುದಕ್ಕಿಂತಲೂ ಜೀವನ ಸಂಗ್ರಾಮದಲ್ಲಿ ಕಾದು ಮಡಿವುದು ಲೇಸು. ಹಣವನ್ನೇ ನಿನ್ನ ಪರಮೋದ್ದೇಶವಾಗಿಟ್ಟುಕೊಳ್ಳದಿರು. ಭಗವಂತನನ್ನು ಪ್ರೀತಿಸಿದರೆ ವಿವೇಕವೂ ವೈರಾಗ್ಯವೂ ಲಭಿಸುವುದು. ಮನಸ್ಸೇ ಸರ್ವಸ್ವ. ಮನಸ್ಸಿನಂತೆ ಮಾಯೆ, ಮನಸ್ಸಿನಂತೆ ಮುಕ್ತಿ. ವಿಷಯಾಸಕ್ತಿಯಾದ ಮನಸ್ಸು ಹಿದ್ದೆಯಾದ ಬೆಂಕಿಕಡ್ಡಿಯಂತೆ ನಿಷ್ಪ್ರಯೋಜಕ. ಭಿನ್ನ ಭಿನ್ನ ಮತಗಳು ಒಬ್ಬನೇ ಪರಮಾತ್ಮನಲ್ಲಿಗೆ ನಮ್ಮನ್ನು ಕೊಂಡೊಯ್ಯುವ ವಿಧವಿಧದ ಪಥಗಳಾಗಿವೆ. ಪ್ರತಿದಿನವೂ ಪೂಜೆ ಮಾಡುತ್ತಾ ಮಾಡುತ್ತಾ [illegible]

[illegible] ಇಂಗ್ಲೀಷ ಸರದ [illegible] ತಾರೀಖಿನಿಂದ ಇಂಗ್ಲೀಷ ಸರದ [illegible] ಶುಕ್ರವಾರದ ವರೆಗಿನ ಪಂಚಾಂಗ (ಉತ್ತರಾಯಣ [illegible]—ಮಾಘ).

| [illegible] | [illegible] | [illegible] | [illegible] | [illegible] | [illegible] | ಸೂರ್ಯ. ಉ | ಅಸ್ತ |
|---|---|---|---|---|---|---|---|
| [illegible] | [illegible] | [illegible] | [illegible] | [illegible] | [illegible] | 6 51 | 6 38 |
| ರವಿ | [illegible] | [illegible] | [illegible] | [illegible] | [illegible] | 6 51 | 6.38 |
| 17 ಸೋಮ | [illegible] | [illegible] | [illegible] | [illegible] | [illegible] | 6 5 | 6 38 |
| 18 [illegible] | [illegible] | [illegible] | ರೇವತಿ | [illegible] | [illegible] | 6 50 | 6.39 |
| ಬುಧ | [illegible] | [illegible] | ಅಶ್ವಿನಿ | [illegible] | [illegible] | 6 49 | 6.38 |
| ಗುರು | [illegible] | [illegible] | ಭರಣೀ | [illegible] | [illegible] | 6 48 | 6.38 |
| 3 ಶುಕ್ರ | [illegible] | [illegible] | ಕೃತ್ತಿಕಾ | [illegible] | [illegible] | 6 46 | 6.39 |

## ಮಂಗಳೂರಿನ ವಾಯುಸ್ಥಿತಿ.

| ತಾರೀಖು Date | Temperature. ಉಷ್ಣ (ಕಾವು) Maximum ಹೆಚ್ಚಾದದ್ದು | Minimum ಕಡಿಮೆ | Rainfall. ಮಳೆ ದಿನದ ಮಳೆ | ಒಟ್ಟು ಮಳೆ. |
|---|---|---|---|---|
| 16 | 86— 6 | 71— 2 | — | — |
| 17 | 86— 9 | 70— 0 | — | — |
| 18 | 87— 2 | 74 · 0 | — | — |
| 19 | 87— 6 | 75— 0 | — | — |
| 20 | 88— 0 | 74— 2 | — | — |
| 21 | 86— 2 | 73 9 | — | — |
| 22 | 85— 7 | 71— 9 | — | 119–95 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ. ಆ | ವರೆಗೆ ರೂ. ಆ |
|---|---|---|
| ಹೊಸ ಮಸ್ಕತಿ | 4— 0 | 4—10 |
| ಹೊಸ ರಾಶಿ ಅಕ್ಕಿ | 3— 8 | 3—11 |
| ಮುಸ್ಕತಿ | 4— 0 | 4—10 |
| ಗುಡ್ಡು | 3 12 | 4— 2 |
| ಸುಗ | 3—11 | 4— 0 |
| ಊರ ಅಸ್ಸಲ್ ಬೆಳ್ತಿಗೆ | 4 —10 | 5— 4 |
| ರಂಗೂನು ಬೆಳ್ತಿಗೆ ಗೋಣಿ ಒಕ್ಕೆ | 6 — 8 | 7— 1 |
| ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ | 4— 8 | 4—10 |
| ಗೋದಿ ಗೋಣಿ ಒಕ್ಕೆ | 10— 8 | 14— 8 |
| ತೊಗರಿ ಗೋಣಿ ಒಕ್ಕೆ | 9— 8 | 12— 0 |
| ಹುರುಳಿ ಗೋಣಿ ಒಕ್ಕೆ | 6— | 6— 4 |
| ಕಡಲೆ ಗೋಣಿ ಒಕ್ಕೆ | 8— 8 | 10 |
| ತೊಗರಿಬೇಳೆ ಗೋಣಿ ಒಕ್ಕೆ | 10 — 8 | 20— 0 |
| ಉದ್ದು ಗೋಣಿ ಒಕ್ಕೆ | 9 — 8 | 10 0 |
| ಹೆಸರು ಗೋಣಿ ಒಕ್ಕೆ | 8— 0 | 9 0 |
| ಊರುಬೆಲ್ಲ ಖಂಡಿ ಒಕ್ಕೆ | 31— 4 | 32— 8 |
| ಉಪ್ಪು ಗೋಣಿ ಒಕ್ಕೆ | 4—12 | 5— 0 |
| ಕೊಬ್ರಿ ಖಂಡಿ ಒಕ್ಕೆ | 65— | 72— |
| ಕೊಬ್ರಿ ಹಿಂಡಿ ಖಂಡಿ ಒಕ್ಕೆ | 23 — | 24— |
| ಎಳ್ಳಿಂಡಿ ಖಂಡಿ ಒಕ್ಕೆ | 26— 4 | 26— 8 |
| ಕೊಬ್ರಿ ಎಣ್ಣೆ ಮುಡಿ ಒಕ್ಕೆ | 4— 5 | 5— 5 |
| ಎಳ್ಳೆಣ್ಣೆ ಮುಡಿ ಒಕ್ಕೆ | 6—12 | 7— 0 |
| [illegible] ಒಕ್ಕೆ | 4— 1 | 6—12 |
| [illegible] ಸಕ್ಕರೆ [illegible] ಒಕ್ಕೆ | 3—15 | 4— 0 |
| ಹೊಸ ಮೆಣಸು | 5— 5 | 5—12 |
| ಸಾಸಿವೆ ಮುಡಿ ಒಕ್ಕೆ | 4—12 | 6— 0 |
| [illegible] ಕಾಫಿ ಖಂಡಿ ಒಕ್ಕೆ | 275— 0 | 300— |
| [illegible] ಖಂಡಿ ಒಕ್ಕೆ | 170— 0 | 180— |
| [illegible] ಮುಡಿ ಒಕ್ಕೆ | 27— 0 | 28— |
| ಗೇರುಬೀಜ ಮುಡಿ ಒಕ್ಕೆ | 2— 4 | 2 — 6 |
| [illegible] ಖಂಡಿ ಒಕ್ಕೆ | 25— 0 | 25— 8 |
| [illegible] ಮುಡಿ ಒಕ್ಕೆ | 9— 10 | 10— 0 |
| [illegible] ಮುಡಿ ಒಕ್ಕೆ | 16— 0 | 16—0 |
| [illegible] ಒಕ್ಕೆ | 13— 4 | 13— 8 |
| [illegible] ಒಕ್ಕೆ | 19— 0 | 19— 4 |
| | 19— | 19— 4 |
| | [illegible]— 8 | [illegible]— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ, ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಣಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary**

*The Canara Public Conveyance Company Ltd, Mangalore*

# Chikmagalur Public Conveyance Motor Service

## CHIKMAGALUR.

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

## ಅಸ್ಪೃಶ್ಯತೆ ಎಂದರೇನು?

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಹಾಗಾದರೆ ಮನುಷ್ಯರಲ್ಲಿ ಕೆಲವರನ್ನು "ಅಸ್ಪೃಶ್ಯ"ರೆನ್ನುವುದೇತಕ್ಕೆ? ಈ ಕುರಿತು ನಾವು ಪೂರ್ವಾಪರ ಆಲೋಚಿಸುವಾಗ್ಯೆ "ಕೆಲವರು ಆಚಾರ ವಿಚಾರಗಳಿಂದ ವಿಹೀನರಾಗಿ, ಮದ್ಯ ಮಾಂಸಾದಿ ಮೊದಲಾದ ಪದಾರ್ಥಗಳನ್ನು ಸೇವಿಸಿ ಉನ್ಮತ್ತರಂತೆ ವರ್ತಿಸುವುದಲ್ಲದೆ, ತಮ್ಮ ಮನೆಮಾರುಗಳನ್ನೂ, ಮೈ ಕೈಗಳನ್ನೂ, ವಸ್ತ್ರ ವಗೈರೆಗಳನ್ನೂ ಶುಚಿತ್ವದಲ್ಲಿಡುವುದಿಲ್ಲವಾದ ಕಾರಣ ಅಂಥವರನ್ನು ಸ್ಪರ್ಶಿಸಿದರೆ, ಆರೋಗ್ಯವು ಕೆಡುವುದೆಂಬ ಭಯದಿಂದ ಅವರನ್ನು "ಅಸ್ಪೃಶ್ಯ"ರೆಂದು ದೂರ ಮಾಡಲು ಕಾರಣ"ವೆಂದು ಖಚಿತವಾಗುತ್ತದೆ. ಪರಂತು ಈಗಿನ ಕಾಲದಲ್ಲಿ ಇಂಥ ಅಭಿಪ್ರಾಯವೂ ಯುಕ್ತವಲ್ಲ. ಏಕೆಂದರೆ, ಮನುಷ್ಯರ ದೇಹದಿಂದ ಹೊರಡೇಳುವ ದುರ್ಗಂಧ ವಾಸನೆಗಿಂತಲೂ, ಸಹನಾತೀತವಾದ ದುರ್ವಾಸನೆಯನ್ನು ಕ್ಷಣ ಕ್ಷಣಕ್ಕೆ ಅನುಭವಿಸುತ್ತೇವೆ. ಇದರಿಂದಲೇ ನಮ್ಮ ಆರೋಗ್ಯವು ಕೆಡದೇಕಲ್ಲದೆ, ನೈರ್ಮಲ್ಯಹೀನರನ್ನು ಸ್ಪರ್ಶಿಸಿದ ಮಾತ್ರಕ್ಕದು ಕೆಡುವುವಾದರೂ ಹೇಗೆ? ಮಲಮೂತ್ರಗಳ ವಿಸರ್ಜನೆಯ ಸಮಯದಲ್ಲಿ ಹೊರಡುವ ಆ ದುರ್ಗಂಧಯುಕ್ತ ವಾಸನೆಯನ್ನು ಘ್ರಾಣಿಸದಿರುವವರಿರುವರೆ? ಇರಲಿಕ್ಕಿಲ್ಲ! ಹಾಗಾದರೆ ಮನುಷ್ಯರ ಶರೀರದಿಂದ ಅಷ್ಟು ಹೇಯವಾದ ವಾಸನೆ ಹೊರಡುವುದಿಲ್ಲವಲ್ಲ! ಅಲ್ಲದೆ, ನಮ್ಮ ಸ್ಪರ್ಶೇಂದ್ರಿಯವು ಶ್ವಾಸಕೋಶವಲ್ಲವಾದುದರಿಂದ ಮಾನವರನ್ನು ಸ್ಪರ್ಶಿಸಿದ ಮಾತ್ರಕ್ಕೆ ಆರೋಗ್ಯವು ಕೆಡಲಿಕ್ಕಿಲ್ಲವೆಂಬುದನ್ನು ಸರ್ವರೂ ಒಪ್ಪಲೇಬೇಕಾಗುವುದು. ಪ್ರಚಲಿತ ಕಾಲದಲ್ಲಿ ನಾವು "ಪಾಯಖಾನೆ"ಯನ್ನು ಪ್ರವೇಶಿಸಬೇಕಾಗುತ್ತದೆ. ಅದರ ಪ್ರವೇಶ ಮಾತ್ರದಿಂದ ಎಂತಹ ಪರಿಣಾಮವುಂಟಾಗುತ್ತದೆಂಬುದು ಪ್ರವೇಶಕರಿಗೇನೆ ಗೊತ್ತು! ಶ್ವಾಸಕಟ್ಟಿಕೊಳ್ಳುವ ಅಭ್ಯಾಸ ಇಲ್ಲದ ನನ್ನಂತಹವರು ಅಲ್ಲಿಯೂ ಶ್ವಾಸೋಚ್ಛ್ವಾಸ ತೆಗೆಯುತ್ತಾರಷ್ಟೆ. ಮನುಷ್ಯರನ್ನು ಮುಟ್ಟಿದಾಕ್ಷಣಕ್ಕೆ ಆರೋಗ್ಯವು ಕೆಡುವುದೆನ್ನುವ ಆ ಆರೋಗ್ಯಶಾಲಿಗಳು ಅಲ್ಲೇನು ಮಾಡುತ್ತಾರೆಂಬುದು ಯಾರಿಗೆ ಗೊತ್ತು! ಅಂತೂ ಮಾನವರ ದೇಹದಿಂದ ಹೊರಡುವ ದುರ್ಗಂಧಕ್ಕೂ, 'ಪಾಯಖಾನೆ'ಯಿಂದ ಹೊರಡುವ ದುರ್ಗಂಧಕ್ಕೂ ಅಜಗಜಾಂತರ ವ್ಯತ್ಯಾಸವಿರುವುದಷ್ಟೆ! ಈ ದೃಷ್ಟಿಯಿಂದ ನೋಡಿದರೂ ಮಾನವರನ್ನು ಸ್ಪರ್ಶಿಸುವುದಕ್ಕೆ ಯಾವ ಅಡ್ಡಿಯೂ ಇಲ್ಲವೆಂದು ವ್ಯಕ್ತವಾಗುವುದು. ಮನುಷ್ಯರು ಮನುಷ್ಯರನ್ನು ಸ್ಪರ್ಶಿಸುವುದರಿಂದ ಆರೋಗ್ಯವು ಕೆಡುವುದೆಂಬುದು ವ್ಯರ್ಥಪ್ರಲಾಪವೇ ಸರಿ. ಏಕೆಂದರೆ, ಮೇಲ್ಜಾತಿಯವರೆನ್ನಿಸಿಕೊಳ್ಳುವ ನಾವು ಎಷ್ಟು ಶುಚಿತ್ವದಿಂದಿದ್ದರೂ ಹೃದಯ (ಶರೀರ)ದಿಂದ ಹೊರಡುವ ವಾಸನೆಯ ಅರಿವು ನಮಗೆನೇ ಆಗುವುದಷ್ಟೆ! ನಮ್ಮ ಪರಿಸ್ಥಿತಿಯೇ ಹೀಗಿರುವಾಗ ನಾವು ಕೂಡ ಇತರರಿಗೆ "ಅಸ್ಪೃಶ್ಯ"ರಾಗಬಾರದೇಕೆ? ಪ್ರಕೃತಿಯಿಂದ, ಹಾಗೂ ನಮ್ಮ ಶರೀರದಿಂದ ಹೊರಡುವ ದುರ್ಗಂಧದಿಂದ ನಮ್ಮ ಆರೋಗ್ಯವು ಕೆಡದೆ, ಅನ್ಯ ಮನುಷ್ಯರನ್ನು ಸ್ಪರ್ಶಿಸಿದ ಮಾತ್ರಕ್ಕೆ ಕೆಡುವುದೆಂಬುದು ಸ್ವಾರ್ಥ ಸಾಧನೆಯಲ್ಲದೆ ಮತ್ತೇನು?

ಧಾರ್ಮಿಕ ದೃಷ್ಟಿಯಿಂದಲೂ, ಮಾನವಸಮುದಾಯದಲ್ಲಿ 'ಅಸ್ಪೃಶ್ಯತೆ' ಇರುವುದು ಯುಕ್ತವಲ್ಲ. ಈ "ಅಸ್ಪೃಶ್ಯತೆ" ಎಂಬ ಘನಘೋರ ಕೊರತೆಯೇ ನಮ್ಮ ಅಧಃಪತನಕ್ಕೆ ಕಾರಣ. ಭಾರತವರ್ಷದ ಇತಿಹಾಸಗಳು ಈ ಅಸ್ಪೃಶ್ಯತೆಯನ್ನು ಪುಷ್ಟೀಕರಿಸುವುದಿಲ್ಲ. ನಾವು ನಮ್ಮ ಧರ್ಮಗಳನ್ನು ಬದಿಗಿಟ್ಟು, ಮನ ಬಂದಂತೆ ವರ್ತಿಸತೊಡಗಿದ್ದರಿಂದಲೇ ಆ ನಮ್ಮ ಉಜ್ವಲ ಸ್ವರೂಪದಲ್ಲಿದ್ದ ಕೀರ್ತಿಯು ಲುಪ್ತವಾಗಿ, ಮಾನಮರ್ಯಾದೆಗಳನ್ನೂ, ಹಕ್ಕುಬಾಧ್ಯತೆಗಳನ್ನೂ, ತೊರೆದು ಪರಾಧೀನರಾಗಿ ಹೊಟ್ಟೆಗೂ, ಬಟ್ಟೆಗೂ ಗತಿ ಇಲ್ಲದೆ ನರಳಬೇಕಾಗಿರುವುದು. ಇಷ್ಟು ಮಾತ್ರವಲ್ಲದೆ, ನಮ್ಮ ಬಂಧುಗಳಿಗೆ ಮನೆಮಾರುಗಳಿಲ್ಲದೆ, ತಮ್ಮ ಮಕ್ಕಳನ್ನು ಹಿಡಿದು ಮರದಡಿಯಲ್ಲಿಯೋ ಮಾರ್ಗದ ಬದಿಯಲ್ಲಿಯೋ ಇದ್ದು ಸಹನಾತೀತ ಕಷ್ಟಗಳನ್ನು ಸಹಿಸುತ್ತ, ಉದರಾಗ್ನಿಗಾಹುತಿ ಇಲ್ಲದೆ, ಹಾ ವಿಧಾತ! ದೀನಬಂಧು! ಪತಿತೋದ್ಧಾರ!!! ಅನಾಥರಾದ ನಮ್ಮನ್ನು ರಕ್ಷಿಸಲಾರೆಯಾ! ಎಂದು ಗೋಳಿಟ್ಟು ಕಣ್ಣೀರುರುಳಿಸುವರು. ಹಾ! ನಾವಾದರೂ ಅವರ ಗೋಳನ್ನು ನೋಡುತ್ತೇವಲ್ಲದೆ, ಅವರ ದರಿದ್ರ್ಯ ನಾರಾಯಣನು ಸಂತೃಪ್ತನಾಗುವಂತಹ ಯತ್ನವನ್ನು ಗೈಯದೆ, ಅವರನ್ನು "ಅಸ್ಪೃಶ್ಯ"ರೆಂದೂ, ಅವರ ಮುಖಾವಲೋಕನವನ್ನು ಮಾಡಕೂಡದೆಂದೂ ಗ್ರಹಿಸಿ, ನಮ್ಮಿಂದ ದೂರ ಮಾಡಿರುವೆವು. ಇದರ ಫಲರೂಪವಾಗಿ ನಾವಿಂದು ಅನ್ಯ ಜಾತಿಯವರ ಮುಂದೆ ತೃಣ ಸಮಾನವಾಗಿರುವೆವು. ಯದ್ಯಪಿ, ನಾವು ನಿಷ್ಪಕ್ಷಪಾತ ಬುದ್ಧಿಯಿಂದಲೂ, ವಿಶಾಲ ದೃಷ್ಟಿಯಿಂದಲೂ ನೋಡಿದರೆ, ನಾವೆಲ್ಲರೂ ಜಗತ್ಪಿತನ ಸಂತತಿಗಳೆಂದೂ, ಒಂದೇ ಮಾತೆ (ಭಾರತಮಾತೆ)ಯ ಉದರದಿಂದ ಬಂದವರೆಂದೂ, ಪ್ರಪಂಚವೆಂಬ ಒಂದೇ ಗೃಹದಲ್ಲಿ ವಾಸಿಸುತ್ತಿದ್ದೇವೆಯೆಂದೂ ವಿದಿತವಾಗುವುದು. ಹೀಗಿರುವಾಗ ನಾವೆಲ್ಲರೂ ಪರಸ್ಪರ ಸಹೋದರರಲ್ಲವೆನ್ನುವುದಾದರೂ ಹೇಗೆ? ಇಂಥಾ ನಿರ್ದಿಷ್ಟ ಸಂಬಂಧದ ಕಡೆಗೆ ದೃಷ್ಟಿ ಇಡದೆ, ನಮ್ಮೊಳಗೆ ತುಚ್ಛ ಭೇದ ಭಾವನೆಗಳನ್ನಿಟ್ಟುಕೊಳ್ಳುವುದು ಪೂರ್ವಾಚಾರ ಪದ್ಧತಿಗಳಿಗೆ ತೀರಾ ವಿರುದ್ಧವಾಗಿರುವುದು.

ಪ್ರಕೃತ ಸಮಯದಲ್ಲಿ ಯಾರನ್ನು "ಅಸ್ಪೃಶ್ಯರೆನ್ನುವರೋ ಅವರು ಅನೇಕ ಹೆಸರುಗಳನ್ನು ಪಡೆದಿರುವರು. ಅಂದರೆ,— ಹೊಲೆಯ, ಮಾದಿಗ, ಚಮ್ಮಾರ, ಹೋಲಗ್ಯ, ಪಂಚಮ, ಅಂತ್ಯಜ, ಶೂದ್ರ, ದಲಿತ, ... ಮುಂತಾದ ಹೆಸರುಗಳೆಲ್ಲ ಅವರ ಗುಣ ಕರ್ಮಗಳನ್ನು ಸೂಚಿಸು ...ಪ್ರತ್ಯಕ್ಷ "ಅಸ್ಪೃಶ್ಯತೆ"ಯನ್ನು ವ್ಯಕ್ತಪಡಿಸುವುದಿಲ್ಲ. ಆದ ಪ್ರಯುಕ್ತ ಅವರನ್ನು "ಅಸ್ಪೃಶ್ಯ"ರೆನ್ನುವುದು ಹಾಗೂ ಸ್ಪರ್ಶಿಸಬಾರದೆನ್ನುವುದು ನಮ್ಮ (ಮನುಷ್ಯರ) ಕರ್ತವ್ಯವಲ್ಲ. ಇದೆಲ್ಲ ಅಂಧ ಪರಂಪರೆಯಿಂದ ಬೆಳೆದುಕೊಂಡಿರುವುವೆಂದೂ, ಅದು ನಮ್ಮ ಉನ್ನತಿಗೆ ವಿಘ್ನಕಾರಕವಾಗಿರುವುದೆಂದೂ ಗ್ರಹಿಸಿ, ಇಂಥ ರೋಗವನ್ನು ಈಕ್ಷಣವೇ ಕಿತ್ತೊಗೆದು, ಸಂಪೂರ್ಣ ಭ್ರಾತೃ ಪ್ರೇಮವನ್ನು ಬೆಳೆಸಿ, ಕಳೆಕೊಂಡಿರುವ ಹಿಂದೂ (ಆರ್ಯ) ವೈಭವವನ್ನು ಪುನರಪಿ ಸಂಗ್ರಹಿಸಿಕೊಳ್ಳುವ ಸತ್ಪ್ರಯತ್ನವನ್ನು ಮಾಡೋಣ! ಇದಕ್ಕಾಗಿ ಪರಮಾತ್ಮನು ನಮಗೆ ಸಂಪೂರ್ಣ ಶಕ್ತಿಯನ್ನೂ, ಉತ್ಸಾಹವನ್ನೂ ದಯಪಾಲಿಸಲೆಂದು ಆತನಲ್ಲಿ ನನ್ನ ವಿನೀತ ಪ್ರಾರ್ಥನೆ.

ಎಂ. ಚಂದ್ರೇಶ್ವರ, ಬೊಂಬಾಯಿ

## ಅಸ್ಪೃಶ್ಯತಾ ನಿವಾರಣ ನಾಟಕ ಸ್ಪರ್ಧೆ.

ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಅತಿ ತೋರಿಸಬಹುದಾದಂಥಾ ನಾಟಕವನ್ನು ಬರೆದವರಿಗೆ ಶ್ರೀ ಎಚ್. ಕೆ. ತಿಂಗಳಾಯರು ಪ್ರಥಮ ಪಾರಿತೋಷಕವಾಗಿ ಒಂದು ಸುವರ್ಣ ಪದಕವನ್ನೂ ದ್ವಿತೀಯ ಪಾರಿತೋಷಕವಾಗಿ ಬೆಳ್ಳಿಯ ಪದಕವನ್ನೂ ಕೊಡುವರು. ಸ್ಪರ್ಧೆಯು ಇಲ್ಲಿನ ಹರಿಜನ ಸೇವಾ ಸಂಘದಿಂದ ನಡೆಸಲ್ಪಡುವುದು.

ನಿಯಮಗಳು:—

(೧) ನಾಟಕವು ಸ್ವಕಪೋಲ ಕಲ್ಪಿತವಾಗಿರಬೇಕು. ಯಾವುದಾದರೂ ಐತಿಹಾಸಿಕ ಹಾಗೂ ಪೌರಾಣಿಕ ಘಟನೆಯನ್ನನುಸರಿಸಿ ಬರೆಯಬಹುದು.

(೨) ನಾಟಕವು ಅಜಮಾಸು ಎರಡು ಗಂಟೆ ಅಭಿನಯಿಸುವಷ್ಟಿರಬೇಕು. ಸಂಗೀತವಿದ್ದರೆ ಪದಗಳು ಹಾಡಲು ಸುಲಭವಾಗಿರಬೇಕು. ಸಂಗೀತ ಬೇಕೆಂಬ ನಿರ್ಬಂಧವಿಲ್ಲ.

(೩) ನಾಟಕವು ಮೇ ತಿಂಗಳ ಅಖೈರಿಯೊಳಗಾಗಿ ಕೆಳಗೆ ಸಹಿ ಮಾಡಿದವರಿಗೆ ತಲುಪಬೇಕು. ಕಾಗದದ ಒಂದೇ ಕಡೆಯಲ್ಲಿ ಸ್ಪಷ್ಟ ಅಕ್ಷರಗಳಲ್ಲಿ ಬರೆಯಬೇಕು.

(೪) ನಿರ್ಣಯದ ಬಗ್ಗೆ ಯೋಗ್ಯ ಸಮಿತಿಯು ನೇಮಿಸಲ್ಪಡುವುದು.

(೫) ಪಾರಿತೋಷಕಗಳನ್ನು ಪಡೆದವರು ತೀರ್ಮಾನವನ್ನು ಜಾಹೀರು ಮಾಡಿದ ಎರಡು ತಿಂಗಳೊಳಗಾಗಿ ತಮ್ಮ ನಾಟಕಗಳನ್ನು ಪ್ರಕಟಿಸಬೇಕು. ಅಥವಾ ಪ್ರಕಟಿಸುವ ಹಕ್ಕನ್ನು ಸಂಘಕ್ಕೆ ಬಿಟ್ಟುಕೊಡಬೇಕು. ಸಂಘವು ಪ್ರಕಟಿಸಿದರೆ, ಲಾಭದಲ್ಲಿ ಕೆಲವೊಂದು ಅಂಶವನ್ನು ಲೇಖಕರಿಗೆ ಕೊಡುವುದರಲ್ಲಿ ಬಂಧೀತು.

ರಂಗರಾವ ತಲಚೇರಿಕರ,

ಕಾರ್ಯದರ್ಶಿ ಹರಿಜನ ಸೇವಾಸಂಘ ಮಂಗಳೂರು

— — — —

ಪೋದಿಸುವ ಅವರ ಸನಾತನ ಧರ್ಮವು ಹರಿಜನರಿಂದಾಗುವ ದೇವಸ್ಥಾನ ಪ್ರವೇಶಕ್ಕೆ ಸಮ್ಮತಿಸುತ್ತದೆಯೋ. ಅದರ ವರ್ಣನೆಯು ಮುಂದ ನಾರ್ಥವಾಗಿ ಅವರು ವಾರ್ತಾ ಪತ್ರಿಕೆಗಳಲ್ಲಿ ಅವರ ಅಭಿಪ್ರಾಯವನ್ನು ಪ್ರಕಟಿಸಬೇಕಾಗಿಯೂ ಇಲ್ಲದಿದ್ದರೆ ಕಾರ್ಯದರ್ಶಿತ್ವಕ್ಕೆ ರಾಜೀ ಕೊಡಬೇಕಾಗಿಯೂ ಅರಿಕೆ ಮಾಡಿಕೊಳ್ಳುತ್ತೇನೆ.

ಅಂಕುರಾಜ ಸುಬ್ರಾಯ ಶರ್ಮ

ಧಟ್ಟರು ಕೈಕೊಂಡ ಕೆಲಸವು ಶ್ಲಾಘನೀಯವಾದದ್ದು ಮತ್ತು ಪರೋಪಕಾರದ್ದೂ ಶಾಸ್ತ್ರೀಯವಾದದ್ದಾಗಿರುವುದರಿಂದ ಸದರಿಯವರು ಕೈಕೊಂಡ ಬಾಲ್ಯವಿವಾಹಕ್ಕೆ ಸರ್ವರೂ ಪ್ರೋತ್ಸಾಹ ಕೊಡಬೇಕಾಗಿಯೂ ನನ್ನ ಪಸಂತಿ ಮತ್ತು ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ" ಎಚ್. ಕೆ. ನೆಕ್ಕ[illegible] ( ... ನಾರಾಯಣ ಅಕ್ಕಾದಾಸ, ಶಿರ್ಶಿ ಉತ್ತರ ಕನ್ನಡ ಇವರ ಬಾಲ ವಿಧವಾ ವಿವಾಹ ಪ್ರಚಾರವೂ ಮಹನೀಯರ ಅಭಿಪ್ರಾಯಗಳೂ ಎಂಬ ಪ್ರಕಟಿಸಿದ ಪುಸ್ತಕದಲ್ಲಿ)

## ಪತ್ರವ್ಯವಹಾರ.

(ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು. ಸಂ. ಸ್ವ.)

ವಗ್ಗದಲ್ಲಿ ಪ್ರತೀ ಸೋಮವಾರ ಸಂತೆ ಕೂಡುವ ಒಂದು ಮಾರ್ಕೇಟನ್ನೂ ಮಿಡ್‌ವ್ಯಾಫ್ (ಸೂಲಗಿತ್ತಿ)ನ ಹೆಡ್ ಕ್ವಾರ್ಟರನ್ನೂ ಕೂಡಾ ಮಾಡಬೇಕೆಂದು ಗ್ರಾಮಸ್ಥರು ಮನವಿಗಳನ್ನು ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಸನ್ನಿಧಾನಕ್ಕೆ ಬರೆಕೊಂಡಿದ್ದಾರೆ. ಮಿಡ್‌ವ್ಯಾಫ್‌ನ ಹೆಡ್ ಕ್ವಾರ್ಟರು ಪುತ್ತೂರು ತಾಲೂಕಿನ ಗಡಿಯಾದ ಪುಂಜಲ್ಕಟ್ಟೆಯಲ್ಲಿದ್ದು, ನಮಗೆ ಯಾವ ಪ್ರಯೋಜನವೂ ಇರುವುದಿಲ್ಲ. ಅತ್ತ ಪುಂಜಲ್ಕಟ್ಟೆಗೂ ಬಂಟ್ವಾಳಕ್ಕೂ ೧೨ ಮೈಲು ಅಂತರವಿದ್ದು ಅಸ್ಪಾಸಿನ ಗ್ರಾಮಸ್ಥರಿಗೆ ಬಹಳ ತೊಂದರೆಯು ಒದಗಿದೆ. ಆದ್ದರಿಂದ ಸರ್ವಸಾಧಾರಣ ಮಧ್ಯ ಸ್ಥಳವಾದ ವಗ್ಗದಲ್ಲಿ ತೆರೆಯುವುದು ಅತೀ ಅಗತ್ಯ. ಮಾರ್ಕೇಟನ್ನು ತೆರೆಯುವರೆ ಹುಕುಂ ಆದಲ್ಲಿ ಒಂದು ಚಾವಿಯನ್ನು ಮ. ರಾ. ಕಾಡುಬೆಟ್ಟು ಗ್ರಾಮದ ಪಟೇಲ್ ಜನ್ನಪ್ಪಶೆಟ್ಟಿಯವರು ತನ್ನ ಸ್ವಂತ ಖರ್ಚಿನಿಂದ ಮಾಡಿಸುವೆನೆಂದು ಮನವಿಯಲ್ಲಿ ಒಪ್ಪಿ ಸಹಿ ಮಾಡಿರುತ್ತಾರೆ. ಪೋಸ್ಟಾಫೀಸಿಗೆ ಸೇರಿರುವ ಈ ಗ್ರಾಮಗಳಲ್ಲದೆ ಬಂಟ್ವಾಳದಿಂದ ಬಟ್ಟುಡೆಯೂ ತ್ರಿರು ದೇವಸ್ಯ ಮೂಡರು ಮಣಿನಾಲ್ಕೂರು ಕಾಪಾಡಿ ಮುಂತಾದ ಆರು ಗ್ರಾಮಗಳನ್ನು ಸೇರಿಸಿ ಬಂಟ್ವಾಳದಿಂದಲೇ ಒಬ್ಬ ಪೋಸ್ಟುಮೇನನನ್ನೇ ವಗ್ಗಕ್ಕೆ ಕೊಟ್ಟಲ್ಲಿ, ಗ್ರಾಮಸ್ಥರಿಗೆ ಉಪಕಾರವಾಗುವುದಲ್ಲದೆ ಕೆಲಸಕ್ಕೂ ಅನುಕೂಲ. ಮೇಲಿನ ವಿಷಯದಲ್ಲಿ ಪೋಸ್ಟಲ ಅಧಿಕಾರಿಗಳೂ ಮಾನ್ಯ ತಾಲೂಕು ಬೋರ್ಡ ಪ್ರೆಸಿಡೆಂಟ್‌ರೂ ಸೆಂಟರಿನ ತಾಲೂಕು ಬೋರ್ಡ ಮೆಂಬರರೂ ಪರಾಂಬರಿಸಿ ಬಡ ಗ್ರಾಮಸ್ಥರ ಮೇಲೆ ಪೂರ್ಣ ದಯೆ ಇಟ್ಟು ಕೋರಿಕೆಗಳನ್ನು ಪೂರ್ತಿಗೊಳಿಸುವರಾಗಿ ನಂಬಿಕೆ.

'ವಗ್ಗ ನಿವಾಸಿ'

## ಪಂಡಿತ ನೆಕ್ಕತ್ತಾಯರ ಸನಾತನ ಧರ್ಮ.

ತಾ. ೨೦-೨ ೩೩ನೇ ರಾಷ್ಟ್ರಬಂಧು'ವಿನಲ್ಲಿ ಕುಂದಾಪುರದ ಪಂಡಿತ ನೆಕ್ಕತ್ತಾಯರು ಕೋಟೇಶ್ವರದ ಸನಾತನ ಚಾತುರ್ವರ್ಣ್ಯ ಮಹಾಸಭೆಯ ಕಾರ್ಯದರ್ಶಿಯಾಗಿ ಚುನಾಯಿತರಾದರೆಂದು ಪ್ರಕಟವಾಗಿದೆ. ಈ ಕೆಳಗೆ ಕಂಡಂತೆ ಈ ಮಹನೀಯರು ವಿಧವಾ ವಿವಾಹ ಆಚಾರವನ್ನು ಬಹುವಾಗಿ ಶ್ಲಾಘಿಸಿರುತ್ತಾರೆ. ಪ್ರಥಮದಲ್ಲಿ ಕುಂದಾಪುರದ ಶೇಷಶಾಸ್ತ್ರಿಗಳನ್ನೂ ನೆಕ್ಕತ್ತಾಯರನ್ನೂ ರಮಣಾಚಾರ್ಯರನ್ನೂ ನಾನು ಸ್ವಾಗತೀಕರಿಸಿ ಚರ್ಚಿಗಿಳಿದೆನು. ಆದರೆ ಅವರು ಚರ್ಚಿಗಿಳಿಯ ಇಚ್ಛಿಸದೆ ಇದು ಚರ್ಚೆಗೆ ಸಮಯವಲ್ಲವೆಂದು ಬಹಿರಂಗವಾಗಿ ಹೇಳಿಬಿಟ್ಟರು. ಬರಿದಾದ ವಿವಾದಗಳಿಂದ ಸಾರ್ವಜನಿಕರು ನಿಜಸ್ಥಿತಿಯ ಸತ್ಯತೆಯನ್ನರಿಯದೆ ಹಿಂಬಾಲಿಸರು. ಈ ಮೂರು ವ್ಯಕ್ತಿಗಳು ರಹಸ್ಯವಾಗಿ ಹಳ್ಳಿಗಳ ಬ್ರಾಹ್ಮಣರನ್ನು ಬೆದರಿಸಿ ತಮ್ಮ ಅರ್ಜಿಗೆ ದಸ್ತಕು ಕೊಡದಿದ್ದರೆ ಮಠಾಧಿಪತಿಗಳು ಅಂತಹ ಬ್ರಾಹ್ಮಣರನ್ನು ಜಾತಿ ಬಹಿಷ್ಕಾರನ್ನಾಗಿ ಮಾಡುವರೆಂದು ಹೆದರಿಸಿ ದಸ್ತಕು ಪಡೆಯುತ್ತಿರುವರಾಗಿ ಕೇಳುತ್ತೇನೆ. ಇಂತಹ ವ್ಯಕ್ತಿಗಳನ್ನು ಕೂಡಲೇ ಹಿಡಿದು ಅಂತಹ ಕಾ. ದ ಪತ್ರಗಳ ದೊರೆತಲ್ಲಿ ಅವುಗಳನ್ನು ಸಾರ್ವಜನಿಕರ ಅನುಮತಿ ಮೇರೆಗೆ ಹರಿದೊಗೆಯಬೇಕೆಂದು ನನ್ನ ಅಂತ ಶಾಸ್ತ್ರಿಯವರು ಅವರ ಮರದೃಷ್ಟಿಯಿಂದಾಗಿ ಸ್ನಾನ ಸಂಧ್ಯಾವಂದನೆಗಳಾಗುವ ಪ್ರಥಮದಲ್ಲೇ ಟೀಗ್ಗೆ ಕಾಫಿ ಸೇವಿಸುವ ಅಭ್ಯಾಸಕ್ಕೆ ಬಲಿಬಿದ್ದವರು. ಇದು ಸನಾತನ ಧರ್ಮವೋ? ಈ ಮೂವರು ಮಹನೀಯರು ಧರ್ಮಶಾಸ್ತ್ರಗಳ ಮೇರೆಗೆ ಪಟ್ಟವರ್ಗಗಳನ್ನೂ ಅಗ್ನಿಹೋತ್ರಗಳನ್ನೂ ಮಾಡುವುದಿಲ್ಲ. ಇವರನ್ನು ಸನಾತನ ಬ್ರಾಹ್ಮರೆಂದು ಕರೆಯಬಹುದೇ?

ಶ್ರೀ ನೆಕ್ಕತ್ತಾಯರನ್ನು ನಾನು ನಮ್ರತೆಯಿಂದ ಕೇಳಿಕೊಳ್ಳುವುದೇನೆಂದರೆ—ವಿಧವಾ ವಿವಾಹವನ್ನು ಸಂತೋಷ ಚಿತ್ತದಿಂದ ಅನು


# WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager*
The South Indian General Assurance Co. Ltd
64, 3rd Cross Road, Srirampur Extn
Malleswaram Post, BANGALORE.

OR

*The Managing Agents,*
The S. I. G. A. Co. Ltd
55, Poonamallee High Road, Kilpauk, MADRAS.

ಈ ದಿನ— ನಿಮಗೆ ಬೇಕಾದುದು!

# ರಬರ್ ಮೊಹರುಗಳು

ಕಡಿಮೆ ದರ.

ದೀರ್ಘ ಕಾಲಬಾಳಿಕೆ ಉತ್ಕೃಷ್ಟ ತರಗತಿ

ನಿಮ್ಮ ... ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸ್ಥಿರವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ತುತಿನ ಮೊಹರು, ಹಿತ್ತಾಳಿ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ದೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ. ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫಿರತ್ ಕೊಡುವೆವು

ಹೆಡ್ ಆಫೀಸು:—

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,

No 2 ಬಿಲ್ಡರ ರಸ್ತೆ, ಮಂಗಳೂರು,

ದ ಕನ್ನಡ



# "ಜಯಕರ್ನಾಟಕ"

ಕನ್ನಡನಾಡಿನ ಸರ್ವತೋಮುಖ ಉನ್ನತಿಯನ್ನೇ ಗುರಿಯಾಗಿಟ್ಟುಕೊಂಡ ಅಖಿಲಕರ್ನಾಟಕದ ಏಕಮಾತ್ರ ಪ್ರಮುಖ ಮಾಸಪತ್ರಿಕೆ ಪರದೇಶದಲ್ಲಿಯ ಪ್ರಾಜ್ಞ ಕನ್ನಡಿಗರ ಲೇಖನಗಳೂ, ಕತೆ, ಕವಿತೆ, ಹರಟೆ, ಜನಪದಸಾಹಿತ್ಯ, ವಿನೋದ ಮೊದಲಾದುವುಗಳ ಮೇಲೆ ಕನ್ನಡ ವಿದ್ವನ್ಮಣಿಗಳ ಲೇಖನಗಳೂ, ಕನ್ನಡ ಚಿತ್ರಕಾರರ ಚಿತ್ರಗಳೂ ಬರುತ್ತಿವೆ. ಪ್ರತಿ ತಿಂಗಳೂ ಕ್ರೌನ ಆಕಾರದ ೮೦ ಪುಟಗಳು ಮುದ್ರಿಸಿದ ಅಚ್ಚು ಪ್ರತಿ ತಿಂಗಳೂ ಮೊದಲನೆಯ ತಾರೀಖಿಗೆ ಹೊರಡುವ ಈ ಪತ್ರಿಕೆಗೆ ಚಂದಾದಾರರಾಗುವದು ಕನ್ನಡಿಗರ ಕರ್ತವ್ಯ ಜಾಹೀರಾತು ದಾರರಿಗೆ ಉತ್ತಮ ಸ್ಥಾನ

ಹಿಂದುಸ್ಥಾನ ರೂ ೩-೮-೦ ಪರದೇಶ ೭-೦-೦

## ಜಯಕರ್ನಾಟಕ ಗ್ರಂಥಮಾಲೆ

ಕನ್ನಡಿಗರಲ್ಲಿ ಹೊಸ ಬಗೆಯ ವಾಚನಾಭಿರುಚಿಯನ್ನು ಹುಟ್ಟಿಸುವುದೇ ಇದರ ಉದ್ದೇಶ ವರ್ಷದಲ್ಲಿ ಕತೆ, ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಮತ್ತು ಲಲಿತ ಶೈಲಿಯ ಆರು ಪುಸ್ತಕಗಳಿಗೆ ಚಂದಾ ಹಣವು ಟಪಾಲ ರೂ ೩-೪-೦

ಕ್ಯಾಟಲಾಗಿಗಾಗಿ ಬರೆಯಿರಿ ಎಲ್ಲ ಕಡೆಗೂ ಏಜಂಟರು ಬೇಕು

ಕಾರ್ಯದರ್ಶಿ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ



# ಕೇಸರಿಯವರ

# ಜಾಲೋಥ್ರಾ

## ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ ೩-೦-೦

ಸಣ್ಣ ಬಾಟಲ್ ೬ ಔನ್ಸ್ ರೂ ೧-೧೦-೦

ಟಪ್ಪಾಲು ಖರ್ಚು ಪ್ರತ್ಯೇಕ ಕಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರಂ,

ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ—ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

ಶಾ ಕಂಪೆನಿ, ಹಂಪನಕಟ್ಟೆ ಮಂಗಳೂರು



**The Zandu Pharmaceutical Works, Ltd, Bombay, 14**

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

# 'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ... ಶರೀರದ ... ಅವಯವಗಳಿಗೂ ಶಕ್ತಿಯನ್ನುಂಟುಮಾಡುತ್ತದೆ ... ಸ್ತ್ರೀಯರೋಗ, ... ಶಕ್ತಿಗಳನ್ನು ಹೋಗಲಾಡಿಸಿ ... ಶಕ್ತಿಹೀನತೆ, ... ಶರೀರದಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ... ಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಶಾ ಜಾಡಿ ರೂ 10/- ಕ್ರಯ 1 ಶಾನು ಸೀಸೆ ರೂ 2/8 ½ ಶಾ ರೂ 1/5 ¼ ಶಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ ಮದ್ರಾಸು

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ಶಾ ಕಂಪೆನಿ, ಡೈಮಂಡ್ ಬಿಲ್ಡಿಂಗು

ಸಿರ್ಸಿ ಏಜಂಟರು — ಎಸ್ ಎಲ್ ಘಾಟಕಲ್ಲಾ ಎಂಡ್ ಬ್ರದರ್ಸ್

ಸಬ್ ಏಜಂಟರು—ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್‌ಕೊ, ಸಯಾಜೀರಾವ್ ರೋಡ್

ಬೆಂಗಳೂರು ಏಜಂಟರು — ಬಿ ಪೂಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



# S U N & CO.

*Choukhamba Benares City*

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒದಕ್ಕೆ ರೂ 2-8-0ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3-8-0, 4-8-0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4-8-0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ-ಶೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಕ್ರಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ, 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—



ಪಂಡಿತ ದಿ ಗೋಪಾಲಾಚಾರ್ಯರ

# ಜೀವಾಮೃತ.

ದೇಹಪುಷ್ಟಿ ಜ್ಞಾಪಕ ಶಕ್ತಿ

ಇರ್ವತ್ತನೇ ವರ್ಷದಿಂದಲೂ ಹಿಂದೂಸ್ಥಾನದಲ್ಲೆಲ್ಲಾ ಪ್ರಸಿದ್ಧಿಹೊಂದಿದ ಆರೋಗ್ಯಪ್ರದಾಯಿನಿ.

ಇದರ ಉಪಯೋಗದಿಂದ—

| | |
|---|---|
| ಬಲಹೀನರಿಗೆ—ಬಲವನ್ನೂ, | ದುರ್ಬಲರಿಗೆ—ಪಟುತ್ವವನ್ನೂ, |
| ನಿದ್ರಾಹೀನರಿಗೆ—ಸುಖನಿದ್ರೆಯನ್ನೂ | ನರಗಳ ಸೆಳೆತಕ್ಕೆ—ಬಂಡಪುಷ್ಟಿಯನ್ನೂ, |
| ಜೀರ್ಣಶಕ್ತಿಯಿಲ್ಲದವರಿಗೆ—ಜೀರ್ಣಶಕ್ತಿಯನ್ನೂ, | ರಕ್ತಹೀನರಿಗೆ—ರಕ್ತಪುಷ್ಟಿಯನ್ನೂ, |
| ತೇಜೋಹೀನರಿಗೆ—ತೇಜಸ್ಸನ್ನೂ, | ಮಂದಬುದ್ಧಿಗಳಿಗೆ—ಉಲ್ಲಾಸವನ್ನೂ, |

ಜ್ಞಾಪಕಶಕ್ತಿಯಿಲ್ಲದವರಿಗೆ—ಜ್ಞಾಪಕಶಕ್ತಿಯನ್ನೂ,

ಇನ್ನು ಅನೇಕ ಅಸಂಖ್ಯಾತವಾದ ಎಷ್ಟೋ ಸುಗುಣಗಳನ್ನು ಉಂಟುಮಾಡುತ್ತದೆ ಸ್ತ್ರೀಪುರುಷರು ಎಲ್ಲಾ ವಯಸ್ಸುಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಸೇವಿಸಬಹುದಾದ ದಿವ್ಯವಾದ ಟಾನಿಕ್ಕು. ಎರಡು ಸೈಜುಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ

ದೊಡ್ಡ ಸ್ಯಾಜು ರೂ. ೩-೪-೦. ಸಣ್ಣ ಸ್ಯಾಜು ರೂ. ೧-೧೨-೦.

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ ೨೧೭, ಮದ್ರಾಸು.

ಸೋಲ್ ಏಜಂಟರು— ಸ್ಟೇಟ್ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು-

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P No 1

# ಅಸ್ಪೃಶ್ಯರಾರು?

(ಲೇಖಕ [illegible])

ಮಾತೃಭೂಮಿಯನ್ನು ನೀವು ಪ್ರೀತಿಸುವಿರೆಂದೆನ್ನುವಿರಿ. ಅನಾದರದಿಂದಲೂ ದ್ರೋಹದಿಂದಲೂ ಪೀಡಿಸಲ್ಪಡುವ ಆ ವ್ಯಕ್ತಿಗಳು ನಿಮ್ಮದೇ ಮಾತೃಭೂಮಿಯಾದ ಭರತಮಾತೆಯ ಮಕ್ಕಳಲ್ಲವೆ? ಒಂದೇ ಭೂಮಿಯಲ್ಲಿ ಅವರು ಜನ್ಮವೆತ್ತಿರುವರು. ಒಂದೇ ವಾತಾವರಣದಲ್ಲಿದ್ದು ಸಂರಕ್ಷಿಸಲ್ಪಡುವರು ನಿಮ್ಮ ಸಂಕಟ ತೊಂದರೆಗಳಲ್ಲಿ ಅವರು ಭಾಗಿಗಳಾಗುವರು ನಿಮ್ಮ ಸಹೋದರರಂತೆಯೆ ಏಕನಿಷ್ಠೆಯಿಂದ ಅವರು ನಿಮ್ಮ ಸೇವೆ ಮಾಡುವರು, ನಿಮ್ಮ ಅತೀವ ನಿಕೃಷ್ಟ ಸೇವೆಗಳನ್ನು ಅವರು ಹರ್ಷಚಿತ್ತದಿಂದ ಮಾಡುವರು. ಹೆಚ್ಚೇಕೆ? ಅವರು ವಿನಹ ನಿಮಗೆ ಒಂದೇ ಒಂದು ದಿವಸವನ್ನು ಕಳೆಯಲು ಸಾಧ್ಯವಿಲ್ಲ. ಹೀಗಿರಲು ನೀವವರಲ್ಲಿ ಇಷ್ಟೊಂದು ಕ್ರೂರತೆಯನ್ನೂ ಕೃತಘ್ನತೆಯನ್ನೂ ತೋರಿಸುವುದೇತಕ್ಕೆ? ಅವರನ್ನು ಮುಟ್ಟಲಿಕ್ಕೆ ಏಕೆ ಹೇಸುವಿರಿ? ಅವರನ್ನು ಆಲಂಗಿಸಲೂ ನಿಮ್ಮ ಸಹೋದರರಂತೆಯೆ ನೋಡಿಕೊಳ್ಳಲೂ ಏಕೆ ಅಂಜುವಿರಿ? ನಿಮ್ಮ ಮಾತೃಭೂಮಿಯಲ್ಲಿ ನೀವು ತೋರಿಸುವ ಪ್ರೇಮವು ಇದುವೆ? ನಿಮ್ಮ ಮನುಷ್ಯತ್ವವು ಇದುವೆ? ನಿಮ್ಮ ಧರ್ಮವು ಇದುವೆ?

"ಅಸ್ಪೃಶ್ಯತೆಯನ್ನು ನಿಮ್ಮ ಧರ್ಮವು ಪ್ರತಿಪಾದಿಸುವುದಿಲ್ಲ. ಅದು ಪೈಶಾಚಿಕ ಸೃಷ್ಟಿಯು. ಶಾಸ್ತ್ರವನ್ನು ಯಾವಾಗಲೂ ಮೇಲ್ಪಂಕ್ತಿಯಾಗಿಟ್ಟುಕೊಳ್ಳುವುದು ಪಿಶಾಚಿಯು. ಆದರೆ ಶಾಸ್ತ್ರಗಳು ವಿವೇಕ ಸತ್ಯಗಳನ್ನು ಮೀರಲಾರವು. ಅವುಗಳ ಉದ್ದೇಶವು ವಿವೇಕವನ್ನು ಪವಿತ್ರಗೊಳಿಸಲೂ ಸತ್ಯ ಪ್ರಕಾಶಕ್ಕಾಗಿಯೂ ಇದೆ." ಎಂದು ನಿಮ್ಮ ಆಧುನಿಕ ಋಷಿಯು (ಮಹಾತ್ಮಾ ಗಾಂಧಿ) ಅನ್ನುವರು.

ಋಷಿಗಳಿಗೂ ಅವತಾರ ಪುರುಷರಿಗೂ ಸಾಧುಸಂತರಿಗೂ ತವರುಮನೆಯಾದ ಭರತಖಂಡದಲ್ಲಿ ನೀವು ಜನ್ಮವೆತ್ತಿರುವಿರೆಂದು ನೀವು ಮರೆತಿರುವಿರಿ. ಆಗಲಿ ಪರಮಾತ್ಮನಿಗೋಸ್ಕರವಾಗಿಯಾಗಲಿ ಒಮ್ಮೆ ಸೃಷ್ಟಿಯಲ್ಲಿ ಸ್ವರ್ಗಲೋಕವೆಂದೆನಿಸಿಕೊಂಡ ಈ ಭರತಖಂಡದ—ಬುದ್ಧ, ಶ್ರೀಕೃಷ್ಣ, ಶ್ರೀರಾಮಚಂದ್ರರ ತೊಟ್ಟಿಲಂತಿದ್ದ ಈ ಭರತಖಂಡದ ಪುಣ್ಯನಾಮಕ್ಕೆ ಕಳಂಕವನ್ನು ತರಬೇಡಿರಿ.

ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕವಾದ ಮಾತುಗಳನ್ನು ದಯವಿಟ್ಟು ಲಾಲಿಸಿರಿ.

ಎಲೆ ಭಾರತವರ್ಷ! ನೀನು ಆ ದಿವ್ಯಮಾತೆಯ ಯಜ್ಞಕುಂಡಕ್ಕೆ ಬಲಿಯಾಗಬೇಕೆಂದೇ ಜನ್ಮವೆತ್ತಿರುವೆ ಎಂಬುದನ್ನು ಮರೆಯದಿರು, ನಿನ್ನ ಸಮಾಜ ವ್ಯವಸ್ಥೆಗಳು ಅಪರಿಮಿತ ಜಗನ್ಮಾತೃತ್ವದ ಕೇವಲ ಪ್ರತಿಚ್ಛಾಯೆಯೆಂಬುದನ್ನು ಮರೆಯದಿರು. ಪತಿತವರ್ಗದವರೂ, ಅಜ್ಞಾನಿಗಳೂ, ದರಿದ್ರರೂ, ನಿರಕ್ಷರ ಕುಕ್ಷಿಗಳೂ, ಚಮ್ಮಾರರೂ ಕಸಗುಡಿಸುವವರೂ ನಿನ್ನ ಕೇವಲ ಮಾಂಸರಕ್ತಗಳೂ, ಸಹೋದರರೂ ಆಗಿರುವರೆಂಬುದನ್ನು ಮರೆಯದಿರು. ಎಲೆ, ವೀರ! ಧೈರ್ಯವಂತನಾಗಿರು. ನೀನು ಭಾರತೀಯನೆಂಬಭಿಮಾನದಿಂದ ದೀರ್ಘ ಸ್ವರದಿಂದ, "ನಾನು ಭಾರತೀಯನು, ಪ್ರತಿಯೊಬ್ಬ ಭಾರತೀಯನೂ ನನ್ನ ಸಹೋದರನು," ಎಂದೆನ್ನು. ಅಜ್ಞಾನಿಯಾದ ಭಾರತೀಯನೂ ದರಿದ್ರನೂ ಅನಾಥನೂ ಆದ ಭಾರತೀಯನೂ ಬ್ರಾಹ್ಮಣ ಭಾರತೀಯನೂ ನನ್ನ ಸಹೋದರನಾಗಿರುವನು," ಎಂದು ಹೇಳು. ಅಜ್ಞಾನಿಯಾದ ಭಾರತೀಯನೂ ದರಿದ್ರನೂ ಅನಾಥನೂ ಆದ ಭಾರತೀಯನೂ ಎಲ್ಲರೂ ನನ್ನ ಸಹೋದರರೆಂದು ಹೇಳು. ಕೇವಲ ಕೌಪೀನಧಾರಿಯಾಗಿದ್ದರೂ ಅತ್ಯಂತ ಸ್ವಾಭಿಮಾನದಿಂದ "ಭಾರತೀಯನು ನನ್ನ ಸಹೋದರ, ಭಾರತೀಯನು ನನ್ನ ಜೀವ, ಭಾರತ ಸಮಾಜವು ನನ್ನ ತೊಟ್ಟಿಲು, ನನ್ನ ಯೌವನ ಕಾಲದ ವಿಹಾರಕ್ಕಾಗಿದ್ದ ಉದ್ಯಾವನ, ಪರಮ ಪಾವನವಾದ ಸ್ವರ್ಗಲೋಕ, ನನ್ನ ಮುಪ್ಪಿನ ಕಾಲದ ವಾರಣಾಸಿ" ಎಂದು ಉಚ್ಚಸ್ವರದಿಂದ ಪ್ರತಿಪಾದಿಸು ಸಹೋದರ! "ಭರತಖಂಡದ ಧೂಳು ನನ್ನ ಪವಿತ್ರ ಸ್ವರ್ಗ; ಭರತಖಂಡದ ಹಿತವೇ ನನ್ನ ಹಿತ,"ವೆಂದು ಹೇಳು "ಓ! ಓ!! ವಿಶ್ವಮಾತೆ, ನನಗೆ ಮನುಷ್ಯತ್ವವನ್ನು ದಯಪಾಲಿಸು ಎಲೆ, ಶಕ್ತಿಮಾತೆ! ನನ್ನ ನಿರ್ಬಲತೆಯನ್ನು ನಿರ್ಮೂಲಗೊಳಿಸು, ನನ್ನ ಅಪೌರುಷತ್ವವನ್ನು ಮಾಯಗೊಳಿಸು ಮತ್ತು ನನ್ನನ್ನು ಒಬ್ಬ ಪುರುಷನನ್ನಾಗಿ ಮಾಡು," ಎಂದು ಅಹರ್ನಿಶಿಯೂ ಜಪಿಸುತ್ತಲೂ ಪ್ರಾರ್ಥಿಸುತ್ತಲೂ ಇರು.

— ಸಂಪೂರ್ಣ —

ಕೆ ರಾಘು

+ + + +

ಭಾರತೀಯ ಮಹಿಳೆಯರ ದುರ್ದೆಶೆಗೆ ಇನ್ನೊಂದು ಕಾರಣವೇನೆಂದರೆ ಶಿಕ್ಷಣದ ಅಭಾವ. ಇದರಿಂದಾಗಿ ಎಷ್ಟೋ ಮಹಿಳೆಯರು ತಮ್ಮ ವ್ಯವಹಾರದಿಂದ ಪತಿತರಾಗುತ್ತಾರೆ. ಧಾರ್ಮಿಕ ಶಿಕ್ಷಣದ ಮಾತಂತಿರಲಿ, ವ್ಯಾವಹಾರಿಕ ಜ್ಞಾನವೂ ಕೂಡ ದೊರೆಯುವುದಿಲ್ಲ. ಇದರಿಂದಾಗಿ ಎಷ್ಟೋ ಮಹಿಳೆಯರು ಬಹು ವಿಧದ ಮೂಢಭಕ್ತಿಯಲ್ಲಿ ಬಿದ್ದು ತಮ್ಮ ಎಲ್ಲಾ ಇಷ್ಟಾರ್ಥಗಳನ್ನು ಸಾಧು ಸಂತರ ಆಶೀರ್ವಚನದಿಂದಲೇ ನೆರವೇರಿಸಿಕೊಳ್ಳಬೇಕೆಂಬ ಭಾವನೆಯಿಂದ ಅವರ ಬೆನ್ನು ಹತ್ತಿ ಅವರಲ್ಲಿರುವ ಬಹು ವಿಧದ ದುರಾಚಾರಗಳ ಪರಮ ಸುಖವನ್ನನುಭವಿಸಿ ತಮ್ಮ ಜೀವನವನ್ನು ಅಂತ್ಯಗೊಳಿಸುತ್ತಾರೆ. ಇಂಥ ಸಂತಮಂಡಳಿಗಳಲ್ಲಿ ನಿರಕ್ಷರ ಕುಕ್ಷಿಗಳಾದ ಮಹಿಳೆಯರೇ ಬಹುಮಂದಿ. ಈಗಿನ ಹಳ್ಳಿನ ಮಹಿಳೆಯರಿಗೆ ಒಪ್ಪೊತ್ತಿನ ಅನ್ನವಾದರೂ ಜೀರ್ಣವಾಗಬೇಕಾದರೆ ಯಾರಾದರೊಬ್ಬ ರಾವಣ ಸನ್ಯಾಸಿಯಂತಿರುವ ಸಾಧು ಸಂತನ ಪಾದಸೇವೆಯನ್ನು ಮಾಡಬೇಕಾಗುತ್ತದೆ. ಈಗಿನ ಸಾಧುಗಳಲ್ಲಿ ಅನೇಕರು ಇವರ ಪಾದಸೇವೆಯಿಂದ ತೃಪ್ತರಾಗಿ ಇವರ ಮನಸ್ಸಿನ ಎಲ್ಲಾ ಅಭಿಷ್ಟಗಳನ್ನು ನೆರವೇರಿಸಿ ನಿತ್ಯಾನಂದಗೊಳಿಸುತ್ತಾರೆ. ನಿಜವಾಗಿಯೂ ಮಹಿಳೆಯರಲ್ಲಿ ಉತ್ತಮವಾದ ಧಾರ್ಮಿಕ ಶಿಕ್ಷಣವು ಇರುತ್ತಿದ್ದಲ್ಲಿ ಈ ವಿಧದ ದುರ್ವ್ಯವಹಾರಗಳು ನಡೆಯುತ್ತಿದ್ದಿಲ್ಲ. ಇದರಿಂದ ಮಹಿಳಾ ಸಮಾಜವು ಬಹಳ ಅಧಃಪತನವಾಗುತ್ತಾ ಬಂದಿತು. ನಗರಗಳಲ್ಲಿ ವಾಸಮಾಡುವ ಸ್ತ್ರೀಯರಲ್ಲಿ ನೂರರಲ್ಲಿ ಒಬ್ಬಿಬ್ಬರು ಸ್ವಸ್ಥಚಿತ್ತರಾಗಿರಬಹುದು.

[ಶೇಷ,]

# ಭಾರತವರ್ಷದ ಮಹಿಳಾ ಸಮಾಜ.

(ಲೇಖಿಕಾ — ಶ್ರೀಮತಿ ಶಾಂತಾದೇವಿ ಗುಲ್ವಾಡಿ, ಮಂಗಳೂರು)

ಮಹಮ್ಮದೀಯ ಶಾಸನದ ಪ್ರಾಬಲ್ಯದಿಂದ ಹಿಂದೂ ಸಮಾಜದಲ್ಲಿ ಬಾಲ್ಯ ವಿವಾಹದ ಪದ್ಧತಿಯು ಅತ್ಯಧಿಕವಾಯಿತು. ಕನ್ಯೆಯು ತನ್ನ ಸ್ತ್ರೀತ್ವವನ್ನು ಸಹ ತಿಳಿಯದಂಥ ಶಿಶುತನದಲ್ಲಿ ಅವರ ಕೊರಳಿಗೆ ವಿವಾಹದ ನೊಗವು ಕಟ್ಟಲ್ಪಡತೊಡಗಿತು. ವಧುವರರ ಯೋಗ್ಯತೆಯನ್ನು ಎಳ್ಳಷ್ಟಾದರೂ ಪರೀಕ್ಷಿಸಲ್ಪಡುತ್ತಿಲ್ಲ. ಯಾವ ಸಮಯದಲ್ಲಿ ಮಕ್ಕಳು ಆಟಪಾಟಗಳಲ್ಲಿ ನಿರತರಾಗುತ್ತಿದ್ದರೋ ಆ ಸಮಯದಲ್ಲಿ ಅವರಿಗೆ ಗೃಹಸ್ಥಾಶ್ರಮದಲ್ಲಿ ಬೀಳಬೇಕಾಗಿ ಬಂತು. ಈ ಪ್ರಕಾರ ವರಿಸಲ್ಪಟ್ಟ ಬಾಲ ದಂಪತಿಗಳು ಯೌವನಾವಸ್ಥೆಗೆ ಬಂದಾಗ ಅವರ ಪರಸ್ಪರ ಶಾರೀರಿಕ, ಮಾನಸಿಕ, ಮತ್ತು ಆತ್ಮಿಕ ಪ್ರಕೃತಿಯು ಸರಿದೀಳದಿರುವುದೂ ಉಂಟು. ಈ ಪ್ರಕಾರ ಭಿನ್ನ ಭಿನ್ನ ಪ್ರಕೃತಿಯ ದಂಪತಿಗಳಿಂದ ಹುಟ್ಟುವ ಸಂತಾನವು ಸಹ ಉತ್ತಮವಾಗಲಾರದು. ಭಿನ್ನ ಭಿನ್ನ ಮಾನಸಿಕ ಪ್ರಕೃತಿಯುಳ್ಳ ದಂಪತಿಗಳಲ್ಲಿ ಬಹು ವಿಧದ ಕಲಹಗಳು ಯಾವಾಗಲೂ ಇದ್ದೇ ಇರುತ್ತದೆ. ಬಾಲ್ಯ ವಿವಾಹದಿಂದ ಒದಗುವ ಇನ್ನೊಂದು ಹಾನಿಯೇನೆಂದರೆ ದಂಪತಿಗಳು ಯೌವನಕ್ಕೆ ಬಂದಾಗ ಪತಿಯ ಅಯೋಗ್ಯತೆಯ ಕುರಿತು ಪತ್ನಿಯೂ, ತನ್ನ ಯೋಗ್ಯತೆಗೆ ವಿರುದ್ಧವಾಗಿರುವ ಪತ್ನಿಯ ಕುರಿತು ಪತಿಯೂ ಪರಸ್ಪರ ದುಃಖಿತರಾಗಬೇಕಾಗುತ್ತದೆ. ಕಡೆಗೆ ಉಪಾಯವಿಲ್ಲದೆ ದುಃಖದಿಂದಲೇ ತಮ್ಮ ಜೀವನವನ್ನು ಕೊನೆಗೊಳಿಸಬೇಕಾಗುತ್ತದೆ. ಬಾಲ್ಯ ವಿವಾಹದಿಂದ ಹುಟ್ಟುವ ಸಂತಾನವಂತೂ ಅತ್ಯಂತ ನಿರ್ಬಲವಾಗಿರುತ್ತದೆ. ಬಾಲ್ಯ ವಿವಾಹದಿಂದಲೇ ಲಕ್ಷಗಟ್ಟಲೆಯಲ್ಲಿ ವಿಧವೆಯರು ಭಾರತವರ್ಷದಲ್ಲಿ ತುಂಬಿರುವರು. ಗೃಹಸ್ಥ ಜೀವನದ ಉದ್ದೇಶವೇನೆಂಬುದನ್ನರಿಯದೆ, ಪತಿ ಪತ್ನಿಯರೇನೆಂಬುದನ್ನು ತಿಳಿಯದ ಸಣ್ಣ ಸಣ್ಣ ಶಿಶುಗಳೇ ಬಹು ಸಂಖ್ಯೆಯಲ್ಲಿ ವೈಧವ್ಯ ದೀಕ್ಷೆಯನ್ನು ಪಡೆದಿರುವರು. ಇವರಿಗೆ ಮನೆಯಿಂದ ಹೊರಡಲಿಕ್ಕೂ ಅಧಿಕಾರವಿಲ್ಲ. ಸ್ವತಂತ್ರರಾಗಿ ಯಾವ ಕೆಲಸವನ್ನು ಮಾಡಲು ವಿದ್ಯೆಯಿಲ್ಲ. ಪುನರ್ವಿವಾಹವನ್ನು ಮಾಡಿಕೊಳ್ಳೋಣವೆಂದರೆ ಧರ್ಮಾಂಧರಾದ ಕೆಲವು ಸಂಪ್ರದಾಯವಾದಿಗಳ ಸನಾತನ ಧರ್ಮದ ಅಂಧವಿಶ್ವಾಸವೆಂಬ ನೌಕೆಯು ಮುಳುಗಿ ಹೋಗುವುದು. ಎಂಭತ್ತು ವರ್ಷದ ವೃದ್ಧ ತರುಣನ ಪತ್ನಿಯು ಸತ್ತ ಮರುದಿನವೇ ನವವಧುವಿನ ಜಾತಕವು ಆ ವೃದ್ಧ ವಿಧುರನಿಗೆ ಕೂಡಿಬಂದು ಪುನರ್ವಿವಾಹವಾಗುವುದಾದರೂ ಬಾಲ್ಯದಲ್ಲಿ ವಿಧವೆಯಾದ ನವತರುಣಿಯ ಪುನರ್ವಿವಾಹಕ್ಕೆ ಸಮಾಜವು ಸಮ್ಮತಿಯನ್ನೀಯುವುದಿಲ್ಲ. ಇನ್ನೊಂದೆಡೆಯಿಂದ ಮನೆಯವರಿಂದ ದೊರೆಯುವ ನಿಂದನೀಯವಾದ ಅತ್ಯಾಚಾರ, ವಿವಾಹಾದಿ ಶುಭಕಾರ್ಯಗಳ ಸಮಯದಲ್ಲಿ, ಈ ವಿಧವೆಯರಿಗೆ ಒಂದು ವಿಧದ ಕಾರಾಗೃಹವಾಸ. ಈಗಿನ ಸನ್ಯಾಸಿಗಳೋ ಅಥವಾ ಮಠಾಧಿಪತಿಗಳೋ ಮುಂತಾದವರು ಒಂದಲ್ಲಿ ಇವರಿಗೆಲ್ಲಾ ಅಜ್ಞಾತವಾಸ. ಲೋಕವನ್ನೇ ಪಾವನಗೊಳಿಸುವವರೆಂದು ಹೇಳಿಸಿಕೊಳ್ಳುವ ಈಗಿನ ಯತಿವರ್ಯರು ವಿಧವೆಯರನ್ನು ನೋಡಿದ ಮಾತ್ರಕ್ಕೆ ಅಪವಿತ್ರರಾಗುತ್ತಾರೆ. ಇದೆಲ್ಲವೂ ಧರ್ಮದ ಹೆಸರಿನಲ್ಲೇ ನಡೆಯುವ ವ್ಯವಹಾರ.


## The Canra Industrial & Banking Syndicate Limited.

Established in 1925. Branches Mangalore, Payyanur, Brahmavar, Kumta, Karwar, Hubli & Honnavar — Head Office:— UDIPI

Authorised Capital Rs 1,00,000, Subscribed Capital Rs 1,00,000 Paid up Capital Rs 20,000

**Fixed Deposits**

Fixed deposits are received at any office of the Syndicate at the undermentioned rates of interest (interest being paid half yearly).

| | |
|---|---|
| Deposits of 3, 4 and 5 months | 4% |
| Deposits of 6, 7 and 8 months | 4½% |
| Deposits of 9, 10 & 11 months | 5% |
| Deposits of 12 months up to 23 months | 5½% |
| Deposits of 24 months | 6% |

Interest allowed on current account at 2½ percent, Savings Bank at per cent;

Long and Short term Loans on attractive Schemes are grant

ALL KINDS OF BANKING BUSINESS UNDERTAKEN.

Udipi, 20—1—1933

P. A. Pai Bros, Managing Agents.

ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಅಪಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷಧ ಕೊಟ್ಟು ರಕ್ಷಿಸಿರಿ!

ಸಾವಿರಾರು ಮಕ್ಕಳನ್ನು ಈ ಔಷಧವು ಹೊತಹ ಕೆಟ್ಟ ಕೆಮ್ಮುವಿಂದ ಪಾರುಮಾಡಿ ಯದೆ. ಮಹದುಪಾಯ ಕರವಾದ ಈ ರೋಗನಿವಾರ ಕಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯಔಷಧವಾಗಿದೆ.

ಮದ್ರಾಸಿನಲ್ಲಿ ದಿ ಒರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು



ವೈದ್ಯ ನೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ನಾದಂಥ ಅಮೂಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

## ಮದನಮಸ್ತಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸ್ಸುವೆವು. ಹಸ್ತಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆ ಯಾದ ಕೂಡಲೇ ವೀರ್ಯಪತನವಾಗೋಣ ಗರ್ಭಿಯ ಪರಿಣಾಮ, ಎಂಥದಾದರೂ ಪರಮ, ಮೈನೂರೋಣ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೦ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ [illegible] ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚು ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧[illegible] ಮಾತ್ರ ಪಡ್ಡವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಎಚ್ಚುಲಿ, ಎಲ್. ಎಮ್. ಎಂಡ್ ಎಸ್, ಜೆ. ಪಿ., ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗಂಧ, ಸರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ.

ಪತ್ತೆ — ವೈದ್ಯ ಮೋಹನಲಾಲ ಎಸ್. ಔಷಧಾಲಯ, ಮು ಪೋ ಮಿರಜ, S. M. C.



## ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಕಿರಿತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ ಇವರು ಬರೆಯುತ್ತಾರೆ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦||೦

### ಶ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು ಬಿಳಿ ಸೆರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೀಣ, ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಶುದ್ಧವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ. ಮುಖ್ಯ ಸರ್ಟಿಫಿಕೇಟು, ಮಿ॥ ರಾ. ವಿ. ಎನ್. ಇನಾಮದಾರ ಬೆಳಗಾಂವಿ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಸೆರಗು ಇಲ್ಲದಂತಾದವು. ೨೦ ದಿವಸದ ಡಬ್ಬಿಯ ಕಿಮ್ಮತ್ತು ರೂ ೩ [illegible]

ವಿಳಾಸ— ಸಂಜೀವಿನೀ ಔಷಧಾಲಯ ಮು॥ ಪೋ॥ ಮಿರಜ, S. M. C.



## ಕೋ-ಆಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ರಥಬೀದಿ, ಮಂಗಳೂರು



ಡಾಕ್ಟರ ವಾಮನ ಗೋಪಾಳರವರ

ಐವತ್ತಾಯುಷ್ಯ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ರಾಮೌಷಧ [illegible] ವರ್ಷದ ಅನುಭವ ಉಪಯೋಗಿಸಿ ದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,

ಧಾಕುರದ್ವಾರ, ಮುಂಬಯಿ ೩ ಸ್ಟೊರಿಸ್ಟ [illegible] ಕಂಪನಿ,

[ಪತ್ರಿಕ್ಷಾದರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು



ಕ್ಷಯಕ್ಷೀಣಾದಿಗಳಿಗೆ

## ಚ್ಯವನಪ್ರಾಶಾನ ಲೇಹ

ಪ್ರಸೂತಿ ರೋಗಾದಿಗೆ

## ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

## ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು



## The South India Co-operative Insurance Society, Limited, Madras.

**LOCAL BOARD:—**

The South Canara Central Co-operative Bank Ltd., Mangalore.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore

*FOR TERMS APPLY TO—*

*The Secretary,*

South Canara Central Co-operative Bank, Ltd, KODIALBAIL P O (Mangalore)

*SOUTH CANARA*



ಮಾರಾಟಕ್ಕಿವೆ                ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂತಹ

## ಚೆಕ್ ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.



EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಅಂಚೆ ಸಹಾಯ:—ವರ್ಷ ಒಂದಕ್ಕೆ ರೂಪಾಯಿ 2-0-0 ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರಕ್ನೈರ್ಮಹಾರ್ಹೈರ್ನಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ।
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ' ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ' ಸುಧೆಯನು. ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ' ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೭. ಮಂಗಳೂರು ತಾ ೩ನೇ ಶುಕ್ರವಾರ ಮಾರ್ಚಿ ೧೯೩೩ (3-3-'33) ಸಂಚಿಕೆ ೯

## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches: Goondapoor, Mangalore, Shimoga & Madras**

ಹೆಡ್ ಆಫೀಸು:— ಉಡುಪಿ ಶಾಖೆ — ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000- ಈಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

onsistent with the financial condition prevailing in the market due to the unprecedented economic slump the Canara Banking Corporation is reluctantly obliged to reduce the rates of interest on Deposits as follows from 1-1-1933.

**Current Deposits.** at 2 % on daily credit balances from 1st January to 30th June & at 1 % from 1st July to 31st December

**Short-term Deposits** — at $3\frac{1}{2}$ %

**Fixed Deposits** -3 months 4%. 4, 5 & 6 months 4½ %. 12 months & above 5 Payable quarterly as before.

UDIPI 14-1-'33

**N. ANANDA RAO**
*Secretary & Manager*

(Regd.)

## ಅಮೃತಾಂಜನ.

ಇದು ತಲೆ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಕುಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಉಷ್ಣ ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರಿತದಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

**ರಿಂಗ್‌ವರ್ಮ್ ಮುಲಾಮು** — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಹಚ್ಚುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3-8-0 ಅಂಚೆವೆಚ್ಚ ಪ್ರತ್ಯೇಕ

**ಅಮೃತಾಂಜನ ಡಿಪೋ,**

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

# ಡೋಂಗರ

ಇವರ

## ಬಾಲಾಮೃತ

ಇದನ್ನು ಕೊಡುವುದರಿಂದ ಮಕ್ಕಳು ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

**ಕೇ. ಟಿ. ಡೋಂಗರೇ ಕಂಪೆನಿ.**
ಗಿರಗಾಂವ, ಮುಂಬಯಿ

ಏಜಂಟರು— ಪೈ ಕಂಪೆನಿ, ಮಂಗಳೂರು.

INSURE WITH
**The Popular Insurance Co. Ltd.**
Head Office - MANGALORE S. India
**First of its kind in the West Coast**

CHAIRMAN
***Dewan Bahadur N. Subba Rao***

*STRIKING FEATURES*

**Policy Conditions Liberal**
**Claims Settlement Prompt**

MANAGEMENT PURELY INDIAN

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS LIBERAL TERMS TO COMPETENT MEN

*For further particulars apply to the Head Office*

## ಅಸ್ವಸ್ಥದ ನಂತರ ಆರೋಗ್ಯವನ್ನು ಶೀಘ್ರವಾಗಿ ಪ್ರವರ್ಧಿಸುತ್ತದೆ.

ಅಸ್ವಸ್ಥದ ನಂತರ ನಿಮ್ಮ ದೇಹದಾರ್ಢ್ಯವು ಕ್ಷೀಣ ಹೊಂದುತ್ತದೆ—ಕೃಶರಾಗುತ್ತೀರಿ ಆಗ ನಿಮಗೆ ರುಚಿಕರವಾದ ಜೀರ್ಣಕರವಾದ ಆಹಾರವು ಬೇಕಾಗುತ್ತದೆ ಅದು ನಿಮ್ಮ ಆರೋಗ್ಯವನ್ನು ಶೀಘ್ರವಾಗಿ ಪುನರ್ವೃದ್ಧಿಸುವಂತೆ ಒಳ್ಳೇ ಸಾರವತ್ತಾಗಿರಬೇಕು

'ಓವಲ್ಟಿನ್' ಅಸ್ವಸ್ಥದ ನಿರ್ಬಲತೆಯಲ್ಲಿರುವವರಿಗೆ ಆದರ್ಶ ಪಾನೀಯವಾಗಿರುತ್ತದೆ ಇದು ಬೆಳೆದ ಬಾರ್ಲಿ ಮೋಲ್ಟ್, ದನದ ಕೆನೆ ಹಾಲು ಮತ್ತು ಕೋಳಿ ಮೊಟ್ಟೆಗಳಿಂದ ತಯಾರಿಸಲ್ಪಟ್ಟು ಪ್ರಕೃತಿಸಿದ್ಧವಾಗಿರುತ್ತದೆ ಇವುಗಳು ಸ್ವಾಭಾವಿಕವಾದ ಆಹಾರಗಳಾಗಿದ್ದು, ಪುಷ್ಟಿಪೋಷಣೆಯನ್ನೊದಗಿಸುತ್ತವೆ ನಿರ್ಬಲತೆಯನ್ನು ತ್ವರೆಯಾಗಿ ವಾಸಿಗೊಳಿಸುತ್ತವೆ ಓವಲ್ಟಿನ್ನನ್ನು ತಯಾರಿಸುವಾಗ ಅದಕ್ಕೆ ಹಸ್ತಸ್ಪರ್ಶವಾಗುವುದಿಲ್ಲ

# OVALTINE
**TONIC FOOD BEVERAGE**

ಮೆದುಳು, ನರ, ದೇಹವನ್ನು ವೃದ್ಧಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ಸ್—ಜೇಮ್ಸ್ ರೈಟ್ 8, ಎ. ರಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಬೊಂಬಾಯಿ ಮದ್ರಾಸ್, ರಂಗೂನುಗಳಲ್ಲಿ

OV/168


## ಬರೀ ಭ್ರಾಂತಿ!

'ಗಾಂಧೀಜಿಯವರನ್ನು ಬಿಡುಗಡೆ ಮಾಡಿರಿ! ಇನ್ನಿತರ ರಾಜಕೀಯ ಕೈದಿಗಳನ್ನು ಬಿಡಿರಿ! ಓರ್ಡಿನೆನ್ಸ್ ತೆಗೆಯಿರಿ! ದಯಮಾಡಿರಿ!" ಎಂದು ಈಗ ಎಲ್ಲೆಲ್ಲಿಯೂ ಗಲಭೆ! ಈ ಗಲಭೆಗಿಂತ ದೊಡ್ಡ ಹುಚ್ಚು ಬೇರಿಲ್ಲ! 'ಬಿಡಿರೆನ್ನುವುದು ಬರೀ ಭ್ರಾಂತಿ'

× × × ×

ಒಬ್ಬ ವ್ಯಕ್ತಿಯ ಉನ್ನತಿ ಅವನತಿಯು ಅವನ ವರ್ತನೆಯನ್ನು ಹೊಂದಿಕೊಂಡಿದೆ. ಅವನ ವರ್ತನೆಯು ಅವನ ಭಾವನೆಯನ್ನೊಳಗೊಂಡಿದೆ. ಅವನ ಭಾವನೆಯು ಅವನ ಅದೃಷ್ಟವನ್ನು ಹೊಂದಿಕೊಂಡಿದೆ. ಅವನ ಅದೃಷ್ಟವು ಅವನ ಜನನ ಮುಹೂರ್ತವನ್ನೊಳಗೊಂಡಿದೆ. ಅಲ್ಲವೆಂದರಾಗದು!

× × × ×

ಹಾಗೆ ಒಂದು ರಾಷ್ಟ್ರದ ಉನ್ನತಿ ಅವನತಿಯೂ ಅದರ ಭವಿತವ್ಯವನ್ನು ಕೈಲಿ ಹಿಡಿದಿರುವ ಪ್ರಭುಗಳನ್ನು ಹೊಂದಿಕೊಂಡಿದೆ

× + + ×

ಧರ್ಮಾಧರ್ಮಗಳಿಗೆ ಮೇರೆಯುಂಟು. ಅಂತಹ ಮೇರೆಯನ್ನು ಮೀರಿದ ಧರ್ಮಾಧರ್ಮಗಳ ಉನ್ನತಿ ಅವನತಿಗಳನ್ನು ಪ್ರಕೃತಿಯು ಸರಿಪಡಿಸುತ್ತದೆ. ಇದು ನನ್ನ ಶಾಸ್ತ್ರಸಿದ್ಧ ಮಾತು!

× + × ×

ಹಾಗೆಯೆ ನೋಡಿ, ಈಗ ಧರ್ಮದ ಅಭಾವವು ತೋರಿ ಬಂದಿದೆ. ಅದನ್ನು ಸರಿಪಡಿಸುವ ಕೆಲಸದಲ್ಲಿ ಪ್ರಕೃತಿದೇವಿಯು ತನ್ನ ಕಾಳೀಯ ವೇಷವನ್ನು ಧರಿಸಿ ಹೊರಟಿದ್ದಾಳೆ!

× × + ×

ಗಾಂಧಿಯವರನ್ನೂ ಇನ್ನಿತರರನ್ನೂ ಸೆರೆಯಿಂದ ಬಿಡುಗಡೆಗೊಳಿಸಲು ಆವಳ ಅಗೋಚರ ಪ್ರೇರೇಪಣೆಯು ಸರ್ ಸಾಮುವೇಲ್ ವೈಸರಾಯ ಮಂತ್ರಿಗಳಿಗೆ ಹೇಳುವುದಿಲ್ಲ. ಅಂಥರೆ ಪ್ರಕೃತಿಮಾತೆಯು ತಕ್ಕಡಿಯನ್ನು ಸರಿಪಡಿಸುವ ಕಾರ್ಯ ಪ್ರವೃತ್ತಳಾಗಿರುವಳು!

× × × ×

ಒಮ್ಮೊಮ್ಮೆ ಮನುಷ್ಯನು ತನ್ನ ಉನ್ನತಿ ಅವನತಿಗಳ ಸಾಫಲ್ಯಾರ್ಥವಾಗಿ ಅಂಧನಾಗಿ ವರ್ತಿಸುತ್ತಾನೆ! 'ಏನೇ ಆಗಲಿ! ಮುಳುಗುವೆನು! ನಾನು ಮಾಡುವುದು ಸಿದ್ಧಾಂತ' ತಪ್ಪಿಲ್ಲ!' ಎಂದು ಅವನು ಭಾವಿಸುತ್ತಾನೆ! ಒಂದು ವಿಷಯವು ತಪ್ಪೆಂದು ತಿಳಿದಿದ್ದರೂ ಅವನು ಅದು 'ಸರಿ'ಯೆಂದು ಅದರ ಮೇಲೆ ಹಾರುತ್ತಾನೆ! ಯಾರು ಏನೆಂದರೂ, ಪ್ರಪಂಚವೇ ತಲೆ ಕೆಳಗಾದರೂ ಅವನು ಕೇಳುವುದಿಲ್ಲ!

× × × ×

ಆಗ ನಾವು ನೆನೆಸಬೇಕು—ಒಂದು ಅದ್ಭುತ ಶಕ್ತಿಯು ಕೆಲಸಕ್ಕೆ ತೊಡಗಿದೆಯೆಂದು! ಮಾನವಾತೀತವಾದ ಗೂಢ ಶಕ್ತಿಯೊಂದು ಕಾರ್ಯಕ್ಕಿಳಿದಿದೆಯೆಂದು!

× × + ×

ಇಡೀ ಪ್ರಪಂಚವೇ ಗಾಂಧಿಯವರ ಬಂಧ ವಿಮುಕ್ತಿಗಾಗಿ ಕೂಗುತ್ತಿದೆ. ಆದರೆ ಎಲ್ಲರಂತೆ ಮಾನವ ಹೃದಯವುಳ್ಳ ಕೆಲವು ರಾಜ ನೀತಿಜ್ಞರು ಆ ಮೊರೆಯನ್ನು ಕೇಳುವುದಿಲ್ಲ! ಕಾರಣ—ಆ ಪ್ರಕೃತಿಮಾತೆ! ನಮ್ಮ ರಾಷ್ಟ್ರದ ಉನ್ನತಿ!

× × × ×

ಇಲ್ಲದಿದ್ದರೆ ಮಿಲಿಯಾಧಿ ಜನರ ಮೊರೆಗೆ ನಾಲ್ಕು ಮಂದಿ ಅಧಿಕಾರಿಗಳು ಕಿವಿಗೊಡುವುದಿಲ್ಲವೆಂದರೇನು? ಅವರ ಮನೋಪರಿವರ್ತನಗೊಳಿಸುವಷ್ಟು ಸಾಹಸಿಗರು ಈ ಮಾನವ ಕುಟುಂಬದಲ್ಲಿಲ್ಲವೇನು? ಇದ್ದಾರೆ! ಆದರೆ ಭಾರತದ ಅದೃಷ್ಟವು ತನ್ನ ಕೆಲಸದಲ್ಲಿದೆ! ಅದನ್ನು ಹಿಂದು ನಿಲ್ಲಿಸಲು ಯಾರಿಂದಲೂ ಅಸಾಧ್ಯ!

ಆದುದರಿಂದ ಗಾಂಧಿಯನ್ನು ಬಿಡಿರೆಂದು ನಾವು ಬೊಬ್ಬಿಡುವುದು ಬರೀ ಭ್ರಾಂತಿ! ಹಾಗೆ ಬೊಬ್ಬಿಡುವುದರಿಂದ ನಾವು ಪ್ರಕೃತಿದೇವಿಯ ರೂಪಕತೆಗೆ, ರಚನೆಗೆ ಬಾಧಕರನ್ನುಂಟುಮಾಡಿದಂತಾಗುತ್ತದೆ! ತಿಳಿದಿರಲಿ!

× × + ×

ಗಾಂಧಿ ಹುಟ್ಟಿದುದು ರಾಷ್ಟ್ರದ ಹಿತಕ್ಕೆಂದು ವ್ಯಕ್ತವಾಗಿದೆ! ಭಾರತದ ಹಿತಕ್ಕೆ ಕಾರಣೀಭೂತನಾದವನು ಅವನು! ಅವನನ್ನು ಪ್ರಕೃತಿದೇವಿಯು ಅಧಿಕಾರಿಗಳ ಸೆರೆಗಿನಲ್ಲಾಡಿಸಿ ಉಪಾಯವನ್ನು ಹೂಡುತ್ತಿರುವಳು!

× × × ×

ಯಾರನ್ನೂ ದೂರಿ ಫಲವಿಲ್ಲ! ಯಾರನ್ನೂ ನಿಂದಿಸಿ ಯುಕ್ತವಿಲ್ಲ! ರೌಂಟೇಬಲುಗಳೂ ಚರ್ಚಾ ಕೂಟಗಳೂ, ಎಲ್ಲಾ ಅನಾವಶ್ಯಕ! ಅಗೋಚರ ಶಕ್ತಿಯು ಹರಡಿದೆ! ಅದು ಹಿಡಿದಿದೆ! ಅದು ಕಟ್ಟೀತು! ಕಟ್ಟಿ ಕೆಲಸವಾದ ನಂತರ ಬಿಟ್ಟೀತು!

× × × ×

ಆದುದರಿಂದ ಪ್ರಿಯ ಸೋದರಾಸಿಗರೇ, ಪ್ರಿಯ ಸತ್ಪ್ರುಗಳವರೇ, ಪ್ರಿಯ ಬಂಧುಗಳೇ, ಪ್ರಿಯರೇ, ಬೊಬ್ಬಿಡಬೇಡಿ! ಬೊಬ್ಬಿಡಬೇಡಿ! ಬಂಧನೆಯನ್ನು ವಿಧಿಯು ಕಾಲಲ್ಲಿಯಲ್ಲಿ ಹಾಕಿರುವನು. ಅದು ಚೆನ್ನಾಗಿ ಕಾದು ಬೆಂದ ಮೇಲೆಯೇ ಅದನ್ನವನು ಎತ್ತಿ ಯಂತ್ರದೊಳಗೆ ತೆಗೆದಾನು? ಅರೆ ಹಸಿ ಅಂದೋಳನದಿಂದ ಫಲವಿಲ್ಲೆಂದು ಈಗ ತಿಳಿದಿದೆ!

ಇಂತಿ ನಿಮ್ಮ ಆರ್ಯರ ಉಪಾಸಕ,

ಸ್ವಾಮಿ!

# Canara Bank Limited.

**Head Office:—Dongerkery Street, Mangalore.** **Local Office:—Bunder, Mangalore.**

***BRANCHES*:—Karkal, Kasargod, Cochin, Udipi, Gangolli, Coondapur, Bombay, Puttur, Calicut, Alleppey, Ernakulam, & Chikmagalur.**

| | |
|---|---|
| Authorised Capital | 10,00,000—0—0 |
| Paid up Capital | 3,00,000—0—0 |
| Reserve and other Funds | 5,26,000—0—0 |

A recent issue of further 3 lacs of capital has been over subscribed within a short period. The allotment will be made in January 1933.

In view of the existing monetary conditions the phenomenal downfall in the value of land and of commodities in general, and in view of the combined action of Banks, both exchange and Indigenous in lowering rates all round, we have been reluctantly compelled as and from 1st January 1933 to reduce the rates of interest on deposits. The rules of business have also been amended and copies of the same can be had on application.

| | |
|---|---|
| CURRENT ACCOUNTS:— | Interest will be paid at 2 per cent p. a. from 1st January to 30th June and at 1 per cent. from 1st July to 31st December |
| SAVINGS BANK:- | 4 per cent. per annum. |
| FIXED DEPOSITS:- | 5 per cent. per annnm for 1 year or more. |

For rates on other deposits please apply to our Agents at Branches or to the undersigned at Head Office.

Depositors are requested to take notice that the interest accrued on deposits till 31—12—32 will be paid to them on 3rd January 1933 and interest accrued there after will be paid half yearly on 2nd July and 2nd January or at maturity.

Mangalore,
28—12—1932.

**P. Sarvothum Nayak,**
*Ag. Secretary & Treasurer.*



ನಮ್ಮ ಕಾರ್ಖಾನೆಯು ಈಚೆಗೆ ಒಂದೆರಡು ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ.

**ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ**

# ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಬಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು, ಸ್ಥಾಪಿತವಾದ

**ಈ ಕಂಪೆನಿಯು ಮಾಡುವ**

## ಅಚ್ಚ ಸ್ವದೇಶೀ ಸಾಬೂನುಗಳು.

**ಸೆಂಡಲ್‌ಉಡ್, ಜಸ್ಮಿನ್, ಲಿಲಿರೋಸ್, ಲೀಮ್ಸಾ ಸಾಬೂನುಗಳು**

**(ಲೀಮ್ಸಾ=ನೀಮ, ಮಾರ್ಗೋಸಾ=ಬೇವ್)**

**ಇವುಗಳು ಮುಖ್ಯವಾದ ಟ್ವಾಲಿಟಗಳು.**

**'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ**

# ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

## ಕಲ್ಲಿಕೋಟೆ.

**ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು.**

**ಈ ಜಿಲ್ಲೆಗೆ ಪ್ರವರ್ತಕರು:—**

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913.)

**East & West Buildings, Fort Bombay.**

VALUATION REPORT for the Triennium ending 31st December 1931.

**Reveals Certain Striking Features.**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation.

Interim Bonus Rs. 15/- per 1,000/- per year.

both on whole life and endowment with Profit Policies becoming claims before 1st January 1934. FORECAST:-STILL GREATER PROSPERITY.

**WANTED LADIES & GENTS in Unrepresented Areas.**

Earn Rs. 100/- to 500/- independently per month.

*For particulars apply or please call at:—*

**Chief Organising Office,**

Harbour View, MANGALORE.


## ನೋಟೀಸು.

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.**

O. P. No. 24/1933.

1. ಪಾಂಡುರಂಗ, 2. ಸುಬ್ರಾಯ—ಮ್ಯಾನರರು. ಇವರ ಬಗ್ಗೆ ಗಾರ್ಡಿಯಾನಳು ಯಾನೆ ಕ್ಷೇಮಚಿಂತಕಳು ಇವರ ತಾಯಿ 3ನೇ ಅರ್ಜಿದಾರಳು ರತ್ನಾಬಾಯಿ, 3. ರತ್ನಾಬಾಯಿ, ನಾರಾಯಣ ಕೃಷ್ಣರಾಯ ಪ್ರಭು ವಿಧವೆ; ಕಾರ್ಕಳ ಕಸಬಾ ಸಾಲ್ಮರದಲ್ಲಿರುವವರು— ಅರ್ಜಿದಾರರು.

ಮತ್ತು

1. ಸುಂದರಿ ಬಾಯಿ, 2. ಮಂಜುನಾಥ ಪ್ರಭು, 3. ವಾಸುದೇವ ಪ್ರಭು— ಎದ್ರಿರು.

ಇವರೊಳಗೆ.

1—2ನೇ ಅರ್ಜಿದಾರರ ತಂದೆ 3ನೇ ಅರ್ಜಿದಾರಳ ಗಂಡ ನಾರಾಯಣ ಕೃಷ್ಣರಾಯ ಪ್ರಭುಗಳವರು ಇದೇ ಕಳೆದ ತಾರೀಕು 10—12—'32ರಲ್ಲು ಕಾರ್ಕಳ ಕಸಬೆಯಲ್ಲಿ ಮೃತಪಟ್ಟದ್ದ ರಿಂದ ಸದರಿಯವರ ಸಕಲ ಸ್ಥಿರಚರಸೊತ್ತುಗಳಿಗೂ ಹೊರಗಿನಿಂದ ಬರತಕ್ಕ ಐವಜುಗಳಿಗೂ, 1—2ನೇ ಅರ್ಜಿದಾರರು ಸಂಪೂರ್ಣ ಹಕ್ಕುದಾರರು ವ ವಾರೀಸುದಾರರಾಗಿದ್ದು, ಮೃತನಿಗೆ The Oriental Government Security Life Assurance Company ಇಂದ ನಂಬ್ರ 166847ನೇ ಪೋಲಿಸಿಯ ಮೇಲೆ ಬರತಕ್ಕ ರೂಪಾಯಿ 1047-4-0ನ್ನು 1—2ನೇ ಅರ್ಜಿದಾರರ ಬಗ್ಗೆ 3ನೇ ಅರ್ಜಿದಾರಳು ಸದ್ರಿ ಕಂಪೆನಿಯಿಂದ ವಸೂಲು ಹೊಂದುವ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 21—3—'33ಕ್ಕೆ ತಸ್ತಿಗೆ ಇಟ್ಟಿರುವುದರಿಂದ ಆ ವಿಷಯದಲ್ಲಿ ಯಾರೊಬ್ಬರದಾದರೂ ಏನಾದರೂ ಆಕ್ಷೇಪಣೆಗಳು ಇರುವವಾದರೆ ಸದ್ರಿ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರು ಆಗಿ ಅಂಥಾ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳಬಹುದಾಗಿ ಈ ಮೂಲಕ ಸರ್ವ ಜನರಿಗೂ ತಿಳಿಸೋಣಾಗುತ್ತದೆ.

**K. Santhaya Kamath,**
*Pleader for Petitioners.*

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ-**

ಕ್ರಮ ನಂಬ್ರ 2/1933.

ವಾದಿ— ಮುಡ್ಲಗಿರಿ ನಾಯ್ಕ.

ಪ್ರತಿವಾದಿರು— ಕುಂಞಮ್ಮದ ಕೋಯಾ ಕೂಡಾ.

ಅಮೀನದೀವಿಯಲ್ಲಿರುವ ಕೈಕೋಟ ಪನ್ನಿಕಲಮು ಅಬ್ದುಲ್ಲ ಕಾದ್ರಿ ಕೋಯರ ಮಗ 1ನೇ ಪ್ರತಿವಾದಿ ಕುಂಞಮ್ಮದ ಕೋಯನು ಗಂಗೊಳ್ಳಿ ಶ್ರೀನಿವಾಸ ಪೈಗಳಿಗೆ ತಾರೀಕು 26—12—29ಕ್ಕೆ ರೂ. 300/ಕ್ಕೆ ಬರಕೊಟ್ಟ ನೋಟಿನ ಹಕ್ಕು ಟ್ರಾನ್ಸಫರ್ ಪಡೆದು ವಾದಿಯು ಸದ್ರಿ ಕೋರ್ಟಿನಲ್ಲಿ ಕುಂಞಮ್ಮದ ಕೋಯನ ಮತ್ತು ಆತನ ಸೂಕ ನೈಲಾನಾಪಿ ಕೂಡಾ ಮೇಲೆ ಮಾಡಿದ ದಾವೆಯು ತಾ.15—3—33ಕ್ಕೆ ತಸ್ತಿಗೆ ಇಟ್ಟರುತ್ತದೆ.

ಕುಂದಾಪುರ
15—2—33.

**K. Narasimha Kamath.**
*Pleader for Plaintiff.*

## ನೋಟೀಸು.

ಮಂಗಳೂರು ತಾಲೂಕು ಮೂಳೂರು ಗ್ರಾಮದಲ್ಲಿರುವ ರುಕ್ಮಿಣಿ ಆಚಾರಿದಿಯ ಮಗಳು ಕಾಳಮ್ಮ ಆಚಾರಿದಿಯಾದ ನಾನು ಈ ಮೂಲಕ ಎಲ್ಲಾ ಜನರಿಗೂ ತಿಳಿಯಪಡಿಸುವುದೇನೆಂದರೆ— ಇತ್ತ ಕೆಲವು ದಿವಸಗಳ ಹಿಂದೆ ನನ್ನ ಅಣ್ಣ ಜನ್ನಾಚಾರಿಯು ಕುಳಿತಬರಿ ಸುಬ್ಬಣ್ಣ ಭಟ್ಟರನ್ನು ನನ್ನ ಮನೆಗೆ ಕರಕೊಂಡು ಒಂದು ನನ್ನ ತಾಯಿಯ ಕಡೆಯಿಂದ ನನಗೆ ಬರತಕ್ಕ ದಸ್ತಾವೇಜಿನ ಬಿಡ್ಡಿಯನ್ನು ತೆಗೆಸಿಕೊಡುತ್ತೇನಾಗಿ ವಂಚನೆಯ ಮಾತುಗಳನ್ನು ಹೇಳಿ ನನ್ನಿಂದ ಖಾಲಿ ಕಾಗದದ ಮೇಲೆ ನನ್ನ ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಂಡು ಹೋಗಿರುತ್ತಾರೆ. ಇತ್ತೀಚೆಗೆ ನನ್ನ ಹೆಸರಲ್ಲಿ ಮೇಲೆ ಹೇಳಿದ ಆಸಾಮಿಗಳು ನೋಟು, ವ ರಶೀದಿ ವಗೈರೆ ಮಾಡಿಕೊಡುತ್ತಾರಾಗಿ ತಿಳಿದು ಬರುತ್ತದೆ. ನಾನು ಈ ವರೆಗೂ ಯಾರಿಗಾದರೂ ನೋಟು ವ ರಶೀದಿ ವಗೈರೆ ಬರಕೊಟ್ಟದ್ದಿಲ್ಲ. ಯಾರಾದರೂ ಇಂಥಾ ವಂಚನೆಯಿಂದ ಮಾಡಿಕೊಂಡಿದ್ದಾದರೆ ಅದು ನಾನು ಸ್ವತಹ ಮಾಡಿಕೊಟ್ಟದ್ದಲ್ಲ ಮತ್ತು ಅದು ಸಿಂಧುವಾಗತಕ್ಕದ್ದಲ್ಲ.

ಈ ಹೆಬ್ಬೆಟ್ಟಿನ ಗುರುತು ಕಾಳಮ್ಮ ಆಚಾರದಿಯ ರುಜು.


# ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ

# ಚಂದಾದಾರರಾಗಿರಿ

## Panchmal Narasimha Kamath & Brothers,

CAR STREET, MANGALORE.

31st Oct. 1932.

To

The Manager,

## Zenith Life Assurance Company, Limited,

MANGALORE.

DEAR SIR,

I have great pleasure to acknowledge receipt of your cheque No: B 942296 on the National Bank of India Ltd. Bombay for Rs. 1954—12—0 in full settlement of the claim on Policy No. 3765 of my deceased brother Ganapathi Kamath.

The Policy was deliverd to you duly discharged on 21st October 1932 add your Head Office have issued the cheque on the 25th October *i. e.* **on the very dy they received the Policy in their hands.**

I am really greatful for the prompt settlement of the claim for which your Company is so well known.

YOURS FAITHFULLY,

*Sd.* Panchamal Narasimha Kamath



## 56 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ. ಬಾಟ್ಲಿ 1ರ ರೂ. 1—2—0 1 ಡಬ್ಬಿ ಮಾತ್ರೆಗೆ ರೂ. 1—6. 2 ಬಾಟ್ಲಿ ಔಷದಕ್ಕೂ ರೂ. 4-12-0.

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ. ಬಾಟ್ಲಿ 1ಕ್ಕೆ 0—10—0. 3ಕ್ಕೆ 1—12—0.

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಅಣೆ 3. 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ರ ರೂ. 1—8—0. 2 ಬಾಟ್ಲಿಗಳಿಗೆ ರೂ. 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಿ. ಶ್ರೀನಿವಾಸ ಶೈಯವರ ಕೋಠಿನಲ್ಲಿ ಸಿಗುತ್ತವೆ.

**ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.**



### ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವಮಾನದ ಅಮೃತಾ ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನೀ ಔಷಧಗಳ ರಾಜ" "ಸರ್ವ ಸಿದ್ಧೌಷಧ"

"ವ್ಯಾಧಿಗಳಿಂದ ಸಂಕಟಪಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ. ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಕಾರವೂ ಆದ

## ಜೀವಾಮೃತವೇ.

ಇದು ಪಂಡಿತ ಡಿ. ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ೧೮೯೯ನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ. ನರಗಳ ದೌರ್ಬಲ್ಯವು ದುಷ್ಕೃತ್ಯದ ಹೀನತೆ ಪಡೆದು, ಆಯಾಸ ರಕ್ತಹೀನತೆ, ನರಗಳ ಅಶಕ್ತತೆ, ಮೆದುಳು ಚೈತನ್ಯಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವುದು. ಇತ್ಯಾದಿಗಳಿಂದ ನರಳುತ್ತಿದ್ದಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ಮೊದಲನೇ ಸಾರಿ ಸೇವಿಸಲು ಪ್ರಾರಂಭಿಸಿದಾರಭ್ಯವೇ ಅದರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡ ಸೈಜುಗಳಲ್ಲಿ ರೂ. ೩—೪—೦ ಮತ್ತು ರೂ. ೧—೧೦—೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

**ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೮೭, ಮದ್ರಾಸು.**

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಜಮಾಪ ಹೋಟಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104


## ನಸ್ಟೀಕ ನೋಟಗಳ ಬಾಣ!

ಮೈದಾನಿನ ಬಳಿ ಸೈಂಟ್ ಆಗ್ನೆಸ್ ಕೊನ್ವೆಂಟ್ ಎಂಬುದು ಹೆಸರುವಾಸಿಯಾದುದು. ಅಲ್ಲಿಯ ನನ್ಸ್ ಮತ್ತು ಗರ್ಲ್ಸ್ ಎಲ್ಲ ಧರ್ಮಾತ್ಮರು!

o o o o o o

ಈಗ ನೋಡಿ! ನನಗೊಂದು ವಿಷಯವು ತಿಳಿದುಬಂದಿದೆ. ಶಾಲಾ ಪ್ರಾರ್ಥನೆಯ ಸಮಯದಲ್ಲಿ ಕ್ರೈಸ್ತ ಬಾಲಿಕೆಯರಂತೆ ಹಿಂದೂ ಬಾಲಿಕೆಯರೂ ಮೊಣಕಾಲೂರಿ ಅವರ ಮತಗ್ರಂಥ ಶ್ಲೋಕಗಳನ್ನು ಹೇಳಬೇಕಂತೆ!

o o o o o o

ಅಲ್ಲಿಯ ಕೆಲ ಮಾದ್ರಿಯವರು, ಮೊಣಕಾಲೂರಿ ಗ್ರಂಥ ಶ್ಲೋಕಗಳನ್ನುಚ್ಚರಿಸದ ಕೆಲ ಬಾಲಿಕೆಯರಿಗೆ 'ಪೆನೆನ್ಸ್' ಕೊಡುತ್ತಾರಂತೆ. ಇಲ್ಲದಿದ್ದರೆ "Excuse me, Excuse me" ಎಂದು ಐವತ್ತು ನೂರು ಸಲ ಬರೆದು ತರಲು ಹೇಳುತ್ತಾರಂತೆ—ಮೊಣಕಾಲೂರದ್ದಕ್ಕೆ ಶಿಕ್ಷೆ!

o o o o o o

ಮೊನ್ನೆ ನಮ್ಮ ಬಾಲಿಕೆಯೊಬ್ಬಳು ಮನೆಗೆ ಬಂದಳು. ಸಣ್ಣ ಹುಡುಗಿ—ಮೊಣಕಾಲ ವರೆಗೆ ಉಪ್ಪಸ! ಬೇ...ನ ವೈವರ್ಣ!

o o o o o o

ಅವಳ ಮೊಣಕಾಲೆರಡೂ ಕೆಂಪೇರಿದ್ದುದನ್ನು ಕಂಡೆ! "ಏನು ಬಿದ್ದಿಯೇ!" ಎಂದು ಪ್ರಶ್ನಿಸಿದೆ. "ಇಲ್ಲ, ಇಲ್ಲ—ಅದು, ಅದು......" ಹುಡುಗಿ ಹೇಳಲಾರದಾದಳು. ಕೊನೆಗೆ ಬಾಯ್ಬಿಟ್ಟಳು. "ಪ್ರಾರ್ಥನೆಯಾಗುವಾಗ ಮೊಣಕಾಲೂರದಿದ್ದ—ಇಲ್ಲದಿದ್ದರೆ 'ಸಿಸ್ಟರ್' ಹೊಡೆಯುತ್ತಾರೆ" ಅಂದಳು!

o o o o o o

ಕೇಳಿ ಆಶ್ಚರ್ಯವಾಯಿತು! ಅವಳ ಕ್ಲಾಸಿನ ಇಬ್ಬರು ಬಾಲಕಿಯರಲ್ಲಿ ಹೋಗಿ ವಿಚಾರಿಸಿದೆ. "ಹೌದೌದು! ಮೊಣಕಾಲೂರಿಸುತ್ತಾರೆ. ಪ್ರಾರ್ಥನೆಯ ಸಮಯ ನಿಂತರೆ ಆಗದು" ಎಂದುವು ಮಕ್ಕಳು!

o o o o o o

ಮತಸಂಬಂಧ ಸಮಸ್ಯೆಗಳ ಸಿಕ್ಕನ್ನು ಬಿಡಿಸಲು ಸರಕಾರಗಳೂ ಕೂಡಾ ಕೈ ಮುಂದೆ ಚಾಚಲು ಹೆದರುತ್ತವೆ. ಹಾಗಿರುವಾಗ ಕ್ರೈಸ್ತ ಶಾಲೆಯಲ್ಲಿನ ಮಾದ್ರಿಗಳು ಈ ರೀತಿಯ ಮಾದರಿಯನ್ನು ಹಾಕಿದರೆ ಹೇಗಯ್ಯಾ?

o o o o o o

ಪ್ರಾರ್ಥನೆ ಬೇಕು ನಿಜ! 'ಪ್ರಾರ್ಥನೆಯು ಅನ್ನ' ಅನ್ನಬಹುದು! ಆದರೆ ತಮ್ಮ ಮುಷ್ಟಿಯೊಳಗಿರುವರೆಂದು ಹಿಂದೂ ಬಾಲಿಕೆಯರನ್ನು ಮತ ವಿರುದ್ಧಾಚರಣೆಗೆ ತೊಡಗಬೇಕೆನ್ನುವುದು ನ್ಯಾಯವೋ?

o o o o o o

ಇಂತಹ ಪದ್ಧತಿಯು ಹಲಕೆಲವು ಕೊನ್ವೆಂಟುಗಳಲ್ಲಿ ನಡೆಯುತ್ತಿರಬಹುದು. ಘಟ್ಟ ಹತ್ತಿದರೂ ಹೋಗದ ಗುಣ! ಇದನ್ನು ನಿಲ್ಲಿಸ...ಷವಶ್ಯಾಗಿ ಬಾಲಿಕೆಯರ ಹೆತ್ತವರು ಯತ್ನಿಸುವರಾಗಿ ನನ್ನ ಕೋರಿಕೆ.

o o o o o o

ಅದಿರಲಿ! ಕುದ್ರೋಳಿ ಸಂಕದ ನೀರನ್ನು ಪರ್ಸಂತ್ರ...ಅಲ್ಲಿಯವರು ಕಟ್ಟಿ ಅದರ ನೀರನ್ನು ಗದ್ದೆ ತೋಟಗಳಿಗುಪಯೋಗಿಸುತ್ತಿರುವುದು ವಾಡಿಕೆ!

o o o o o o

ಈ ವಾಡಿಕೆಯ ಹಾನಿಯನ್ನು ಕೇಳಿ! ಮೊನ್ನೆ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಸಹಸ್ರಾರು ಜನರು ಉಂಡ ಎಂಜಲೆಗಳನ್ನು ಆ ನೀರಿಗೆಸೆದಿರುವರು. ರಾಶಿ ರಾಶಿ ಎಲೆಗಳು ಕೊಳೆತು, ನೀರಲ್ಲಿ ದೊಡ್ಡ ದೊಡ್ಡ ಹುಳುಗಳಾಗಿ, ಮಾರ್ಗದಲ್ಲಿ ಮೂಗನ್ನು ಮುಚ್ಚಿ ನಡೆಯಬೇಕಾಗಿದೆ!

o o o o o o

ಕಟ್ಟಿದ ನೀರನ್ನು ಹೊಳೆಗೆ ಬಿಟ್ಟರೆ ಮಾಲಿನ್ಯವೆಲ್ಲ ಹೊರಟುಹೋಗುತ್ತಿತ್ತು! ಈ ವಿಚಾರವನ್ನು ನಮ್ಮ ಕೌನ್ಸಿಲರರು ಮನಸ್ಸಿಗೆ ತರುವರೇ?

o o o o o o

ಎಲ್ಲೆಲ್ಲಿಯೂ ಜ್ವರ, ಸಿಡುಬು ರೋಗ. ಹಾಗಿರುವಾಗ ನಮ್ಮ ಮ್ಯುನಿಸಿಪಾಲಿಟಿಯವರು ಈ ಸಂಕದ ನೀರನ್ನು ಬಿಟ್ಟು ಹೊಳೆಗೆ ಬಿಡುವಂತೆ ಈ ವಾರದಲ್ಲೇ ಆಜ್ಞಾಪಿಸಿ ಆರೋಗ್ಯ ರಕ್ಷಣೆಯನ್ನು ಮಾಡುವರೆ?

o o o o o o

ಕೊಳೆಯುತ್ತಿರುವ ಈ ಕೆಸರುನೀರನ್ನು ಬಳಿಯ ಮನೆಗಳವರು ಪಾತ್ರೆ ತೊಳೆಯಲಿಕ್ಕೂ ಸ್ನಾನಮಾಡಲಿಕ್ಕೂ ಉಪಯೋಗಿಸುತ್ತಿರುವುದು ಮಾರ್ಗದ ಮೇಲೆ ನಿಂತರೆ ತೋರುತ್ತಿದೆ! ಸಂಬಂಧಪಟ್ಟವರು ತ್ವರೆಗೈವರೇ?

ದಿವ್ಯ ದೃಷ್ಟಿ.

# DUO-TREAD TIRES.

## Seiberling's Novel Features.

1. Air Cooled.
2. Duo Tread.
3. Twice the Mileage.

FOR

4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ಫುಟ ವಿಚಾರಗಳು

### ಮದ್ರಾಸು ಬಜೇಟು

ಓದಿದಷ್ಟು ಅಸಂತುಷ್ಟಿಯೇ ವಿನಾ ಕಿಂಚಿತ್ತೂ ತೃಪ್ತಿ ಯುಲ್ಲದಂತಿದೆ. ಸರಕಾರದ ಆಯವೇನೋ ಕೋಟಿ ಹೆಚ್ಚಾಗಿದೆ ನಿಜ, ಆದರೆ, ಇದರಿಂದ ಪ್ರಜೆಗಳಿಗೆ ಯಾವ ಬಗೆಯ ಉಪಕಾರವೂ ಸಾಮಾನ್ಯವಾಗಿ ಉಂಟಾಗುವ ಹಾಗಿಲ್ಲ. ಅದರಲ್ಲೂ ಅನಿರೀಕ್ಷಿತವಾದ ಹೆಚ್ಚಿನ ಕಂದಾಯವು ಶೇಂದಿ ಶರಾಬುಗಳಿಂದಲೇ ಹೆಚ್ಚಾಗಿ ಕೂಡಿಬಂದಿರುವ ಪ್ರಯುಕ್ತ, ಜನರ ಮನೋ ಮಾಲಿನ್ಯತೆಯೂ ಅನೈತಿಕ ವ್ಯವಹಾರಗಳೂ ಹೆಚ್ಚುತ್ತ ಬರುತ್ತಲಿವೆಯೆಂಬುದೂ ಸರಕಾರಕ್ಕಾಗಲಿ ಪ್ರಜೆಗಳಿಗಾಗಲೀ ಸಂತೋಷಕ್ಕಿಂತ, ಆಸ್ಪದವೇ ಇಲ್ಲ. ಆದರೂ, ಆಯವ್ಯಯಗಳು ಸರಿಹೋಗುವ ಹಾಗೆ ಈ ಮಧ್ಯಸಾಗರದಲ್ಲಿ ಎದ್ದ ಭರತಿಯ ತೆರೆಯೋ, ನಮ್ಮ ಆರ್ಥಿಕ ದುರವಸ್ಥೆಯನ್ನು ಹೇಗೂ ಎತ್ತಿ ಒಯ್ದು ದಡಸೇರಿಸಿದುವು ಎಂದೂ ವ್ಯಕ್ತವಾಗುತ್ತದೆ. ಆಹಾರ ದವಸಗಳ ಧಾರಣೆಯು ಇನ್ನೂ ಇಳಿಯುತ್ತಲೇ ಇರುವುದೆಂಬುದು ಸರಕಾರಕ್ಕೆ ಸಂತಾಪವನ್ನೋ ವ್ಯಥೆಯನ್ನೋ ಉಂಟುಮಾಡಿದೆ ಎನ್ನುವರಾದರೂ, ಖಜಾನಾ ಮಂತ್ರಿಗಳು ಪ್ರತಿಯೊಂದು ಇನಮಿನಲ್ಲೂ ಆಯವು ಇನ್ನೂ ಇನ್ನೂ ಹೆಚ್ಚಾಗಿ ಕೂಡುವುದೆಂದೇ ಅಂಕೆ ಹಾಕಿರುವರು. ನೈತಿಕ ಬಲವಿಲ್ಲೆಂದು ಮದ್ಯಪಾನ ಪ್ರಚಾರವೂ, ಅನ್ನ ಬಲವಿಲ್ಲೆಂದು ಧಾರಣೋಪಾಸಿಗಳ ದುಸ್ಥಿತಿಯೂ, ತಿಳಿಸಿದರೂ; ಖರ್ಚಿಗೆ ಹಣವು ಸಂಕ್ಷಣಾಗಲೆಂದು ಆಯದ ಅಂಕೆಗಳನ್ನು ರಾಶಿ ಹಾಕಿರುವ ಈ ಬಜೇಟನ್ನು ವಿಮರ್ಶಿಸಿದರೂ ಮನಸ್ಸಿಗೆ ಏನೋ ಏನೋ ಎನ್ನಿಸುತ್ತಿದೆ. ಪರಂತು, ಪಾಸಾಗುವುದಲ್ಲವೆ?

### ರೈತರಿಗೆ ರಿಯಾಯತಿ

ಸ್ಟೇಂಡಾ ಆರ್ಡಿಯಂತೆ, ರೂಪಾಯಿಯಲ್ಲಿ ಎರಡಾಣೆಯನ್ನು ತೀರ್ವೆ ಮಾಫಿ ಮಾಡಬೇಕಾಗಿ ಕೌನ್ಸಿಲು ಮಂಜೂರ್ಮಾಡಿದ ಶಿಫಾರಸನ್ನು ಸಚಿವರು ಮನಸ್ಸಿಗೆ ತಂದುಕೊಂಡು ನಿಷ್ಕರ್ಷಿಸಿದುದೇನು? 'ಆಯದ ಪೂರಯಿಕೆಯಾದೊಡನೆಯೆ ಮೊದಲಾಗಿ ಕಡಿದ ಸಂಬಳವನ್ನು ಕೊಟ್ಟೇ ಬಿಡುವೆವೆಂಬ ನಮ್ಮ ಪ್ರಮಾಣವಾಕ್ಯವನ್ನು ಪಾಲಿಸಲೇ ಬೇಕಲ್ಲವೆ? ಇಲ್ಲದಿದ್ದರೆ ಯೋಗ್ಯತರಗತಿಯ ಜನಗಳು ಹುದ್ದೆಗಳಿಗೆ ದೊರೆವರೆ?' ಆದಕ್ಕಾಗಿ, ಕಡಿದ ಸಂಬಳವನ್ನು ಈಗ ಭರ್ತಿಮಾಡಿ ನಾಕತ್ತು ಮೊದಲಾಗಿ ಕೊಡಲಾಗುವುದು. 'ಆದರೆ, ತೀರ್ವೆ ಕಡಿಮೆ ಮಾಡಿದರೆ, ಅದರಿಂದಾಗಿ ಪ್ರಜೆಗಳಿಗೆ ದೊರೆಯ ಬಹುದಾದ ನಾನಾ ಸಲಕರಣೆಗಳನ್ನು ನಿಷೇಧಿಸಬೇಕಾಗಿ ಬಂದೀತಲ್ಲಾ! ಪ್ರಜಾಹಿತ ವಾತ್ಸಲ್ಯದಿಂದ ತಾನೆ ಈಗ ಈ ಎರಡಾಣೆ ಪಾಲನ್ನು ಬಿಡಲಾಗುವುದಿಲ್ಲ ಎಂದರವರು. ಪ್ರಜಾಹಿತಕ್ಕಾಗಿ ಸಲಕರಣೆ ಒದಗಿಸಬಾರದೆಂದು ಹೇಳುವವರು ಯಾರು? ಆದರೆ ಆ ಸಲಕರಣೆಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಜೆಗಳಲ್ಲಿ ಕಿಂಚಿತ್ತಾದರೂ ಶಕ್ತಿಯಿರ ಬೇಡವೆ? ತೆರಿಗೆಯ ದೆಸ್ಸೆಯಿಂದ ಹಿಂಸೆ ಹೊಂದುತ್ತಿರುವ ಯಾವ ಪ್ರಜೆಗಳು ಈ ಸಲಕರಣೆಯ ಸವಿಯನ್ನು ಅಂಗೀಕರಿಸಿಕೊಳ್ಳಲಾಪರು? ಪ್ರಾಣವಿದ್ದರೆ ಮಾತ್ರ ಜೀವನದ ಧ್ಯೇಯದಲ್ಲಿ ಅನುರಕ್ತಿ ಇರಬಹುದು. ಕಳೆಗುಂದುತ್ತ ಬರುವವನಿಗೆ, ಅಮೃತಸಂಜೀವನಿಯೆ ಬೇಕಲ್ಲದೆ, ವಾಯುವಿಮಾನವಲ್ಲ; ಅದನ್ನು ಒದಗಿಸಿದರೆ, ಅದನ್ನೇರುವ ಮೊದಲೇ ಅವರು ಸ್ವರ್ಗಕ್ಕೇ ಏರಬಹುದಲ್ಲ? ೩೦ ಲಕ್ಷ ರೂಪಾಯಿಗಳನ್ನು ಮೇಲು ಹುದ್ದೆದಾರರಿಗೆ ಕೊಡುವ ಆತುರದಿಂದ, ಅಷ್ಟು ಮಟ್ಟಿಗಾದರೂ ರೈತರ ಬೆನ್ನೆಲುಬಿಗೆ ಬಲಕೊಡಬಹುದಾಗಿದ್ದಿತು. ಇದನ್ನರಿತೇ ಪ್ರಜಾಜನಗಳ ಪ್ರತಿನಿಧಿಗಳು ಖಜಾನೆಯವರ ಭಾಷಣಕಾಲದಲ್ಲಿ ಕೈಚಪ್ಪಾಳೆ ಹೊಡೆಯದೆ ಮೌನವಾಗಿದ್ದಿರಬಹುದು.

### ಪಾರ್ಲಿಮೆಂಟಿನಲ್ಲಿ

ಸೈಮನ್ ರಿಪೋರ್ಟಿನಲ್ಲಿ ಶಿಫಾರಸು ಮಾಡಿದುದಕ್ಕಿಂತ ಒಂದಂಗುಲ ಹೆಚ್ಚಿನ ರಿಯಾಯತಿಯನ್ನು ತೋರಿಸದೆ, ಕೊಡಬೇಕೆನ್ನುವ ಸುಧಾರಣೆಗಳನ್ನು ಕೊಡುವುದಾದರೆ ಕೊಡಬಹುದು ಎಂದೊಂದು ನಿರ್ಣಯವು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂತು. ಸೈಮನ್ ಸಪ್ತಕರ ಮೇಲೆ ಮತ್ತೊಬ್ಬರ ಶಿಫಾರಸಾದೀತೆ! ಕಾನೂನು ಕ್ರಮಗಳನ್ನು ಪರಾಧೀನ ಮಾಡದೆ, ಕೇಂದ್ರದಲ್ಲಿ ಜವಾಬುದಾರಿ ಕೊಡದೆ, ಹಿಂದೀ ಸ್ಥಳೀಯ ರಾಜ್ಯಗಳೊಡನೆ ಕೃತ್ರಿಮವಾಗಿ ಅದಾವುದೋ ಒಂದು ಬಗೆಯ 'ಫೆಡರೇಶನ್' ಸರಕಾರವನ್ನು ಕೂಡಿ ತರಬೇಕೆಂದೇ ಈ ದಳದ ಇಚ್ಛೆ.

[illegible]
ಪ್ರಜಾ ಸಾಮ್ರಾಜ್ಯ [illegible] ಪ್ರಜೆಗಳ ಭಯಂಕರ ಗಂಡಾಂತರ [illegible], ಬ್ರಿಟಿಷರು ಇಲ್ಲಿ ಬ್ರಿಟಿಷ ಆಹಾರ ದ್ರವ್ಯಕ್ಕೆ ಕಾಯಿದೆ, ಅದನ್ನು ಹೊಂದಿಯೂ ಮಲ್ಲ ಯುಗ್ಗಲಿಯು ಬ್ರಿಟಿಷ ಕೆಲಸಗಾರರಿಗೆ ಪ್ರಾಣಸಂಕಟವುಂಟಾಗುವುದು! ಎಂದು ದಿವ್ಯ ಭಯಸೂಚನೆಯೂ ಆಯಿತು. ಇತರರು ಈ ಅಭಿಪ್ರಾಯವನ್ನು, ಹೊರಬರಲಿರುವ ಸರಕಾರದ ಸೂಚನೆಗಳನ್ನು ಓದಿನೋಡಿದ ಬಳಿಕ, ಟೀಕಿಸಿ, ವಿಮರ್ಶಿಸಿ ಒಂದು ಠರಾವು ಮಾಡೋಣ ಎಂದರು. ಹೋರರು ಅವರೆಲ್ಲರಿಗೆ ಸಮಾಧಾನವಾಗುವ ಹಾಗೆ, ದೇವರ ದಯೆಯಿಂದ 'ನಾವೇನು ಹೆಚ್ಚಿನ ಬದಲಾವಣೆ ಮಾಡುತ್ತಿಲ್ಲ. ಇಂಡಿಯವು ಸಾಮ್ರಾಜ್ಯದಿಂದ ಹೊರಬೀಳುವಂತೆ ಅನುಕೂಲಿಸುತ್ತಿಲ್ಲ. ಕೊಟ್ಟ ಮಾತನ್ನು ಸಲ್ಲಿಸಲೇ ಬೇಕಾಗಿದೆ. ಮುಖ್ಯ ಪೋಲೀಸರ ವಿಚಾರವನ್ನು ಆಗ್ರಹದಿಂದ ನೋಡಿ ಜತನಮಾಡುತ್ತೇವೆ, ಕೆಲವು ಚೂರು (ರೊಟ್ಟಿ)ಯನ್ನು ಇಂಡಿಯಕ್ಕೆ ಕೊಡಲಿದ್ದೇವೆ. ಅವನ್ನು ಕೊಡದಿರಲಾಗುವುದಿಲ್ಲ. ಕೌನ್ಸಿಲುಗಳು ಎಷ್ಟು ಅಂದವಾಗಿ ಶಾಂತವಾಗಿ ನಮಗೆ ಬೇಕಾದುದನ್ನೆಲ್ಲ ಕೆಲತಿಂಗಳಿಂದಲೂ ಮಾಡಿಕೊಟ್ಟಿವೆ. ಅದುಕಾರಣ, ನಾವು ಕಾರ್ಯ ಮುಂದರಿಸುವಾಗ ತಡೆಗಟ್ಟಬಾರದು'' ಎಂದರು. ಪಾರ್ಲಿಮೆಂಟು ಈ ಮಿಥ್ಯಾ ವಾದಕ್ಕೆ ಮರುಳಾಯಿತು. ಶ್ವೇತಪತ್ರವು ಅವರಿಗೆ ಮರುಳು; ಸೆಕ್ರೆಟರಿಯವರ ಮಾತು ನಮಗೆ ಮರುಳು; ನಾವೆಲ್ಲರು ಈ ಸುಧಾರಣೆಗೆ ಮರುಳು.

### ತಪ್ಪು ಅಭಿಪ್ರಾಯಗಳು

ಜನಗಳಲ್ಲಿದ್ದ ಅಶಾಂತಿಯು ಕಿಂಚಿತ್ತೂ ಕಡಿಮೆಯಾದುದರ ಲಕ್ಷಣಗಳು ಎಲ್ಲಿವೆ? ಸ್ಪೆಶಲ್ ಆರ್ಡಿನೆನ್ಸುಗಳನ್ನು ಮಂಜೂರ್ಮಾಡಿದ ಕೌನ್ಸಿಲು ಪ್ರತಿನಿಧಿಗಳು ಯಾರ ಪ್ರತಿನಿಧಿಗಳು ಎಂದು ಪ್ರಜೆಗಳು ತಿಳಿಸಿಲ್ಲವೇ? ಒಟ್ಟಾವಾ ಕರಾರನ್ನು ಎಸೆಂಬ್ಲಿಯು ಮಂಜೂರ್ಮಾಡಿದುದೆಂದರೆ ಯಾವ ಯಾವ ವಿಧಗಳಿಂದ ಎಂದು ಎಸೆಂಬ್ಲಿ ವರದಿಯಲ್ಲಿ ಬರೆದಿಲ್ಲವೆ? ಶ್ವೇತ ಪತ್ರವು ಪ್ರಕಟವಾದ ಕೂಡಲೆ ಜಯ ಜಯಕಾರವನ್ನು ಹಾಕಿ ಹೋರರ ವಿವೇಕವನ್ನು ಹೊಗಳಬೇಕೆನ್ನುವ ಅಸಂಖ್ಯಾತರು ಹೋರರ ತಲೆಯಲ್ಲೇ ಇರಬಹುದಲ್ಲದೆ, ಅವರ ಸಂಖ್ಯೆಯೇ ಪ್ರಸ್ತುತವಾಗಿಲ್ಲವೆಂದು ಪತ್ರಿಕೆಗಳು ಅಭಿಪ್ರಾಯ ಕೊಟ್ಟಿಲ್ಲವೇ? ಶ್ವೇತ ಪತ್ರ ಹೊರಟ ಕೂಡಲೆ ಗಂಗಾನದಿಯೇನು ಸುಟ್ಟು ಹೋಗಲಿರುವುದೆ? ಅಂತೂ ಪಾರ್ಲಿಮೆಂಟಿನಲ್ಲಾದ ತರ್ಕದಿಂದ ಪಾರ್ಲಿಮೆಂಟಿಗೆ ತಿಳಿದಿದು ಏನೂ ಇಲ್ಲ; ಹಿಂದೀ ಪ್ರಜೆಗಳಿಗಂತೂ ತಿಳಿವರೆ ಉಳಿದುದೇನೂ ಇಲ್ಲ.

### ಜಪಾನು

ಮಹಾಯುದ್ಧವಾದ ತರುವಾಯ ಪ್ರತಿಯೊಂದೂ ದೇಶವು ಬಲವಾದ ಸುಂಕದ ಕೋಟೆಗಳನ್ನು ಎತ್ತರೆತ್ತರವಾಗಿ ಕಟ್ಟಿ ತಮ್ಮ ತಮ್ಮ ಮನೆಯ ಎಚ್ಚರ ನೋಡ ಕಲಿತಿದೆ. ಇದರಿಂದಾಗಿ, ಜಪಾನು ತನ್ನ ಕೈಗಾರಿಕೆಗಳಿಗೆ ಅಗತ್ಯವಿರುವ ಸಾಮಾನುಗಳನ್ನು ತರಿಸಿಕೊಳ್ಳಲೂ ತನ್ನ ಕೈಗಾರಿಕೆಗಳ ಸಾಮಾನುಗಳನ್ನು ಮಾರಲೂ ಬಲು ಕಷ್ಟಕ್ಕೀಡಾಗಿದೆ. ಇನ್ನು ಜಪಾನು ಚೀನವನ್ನೇ ನೋಡಬೇಕಾಗಿ ಬಂದಿದೆ. ಚೀನದ ಉತ್ತರ ಭಾಗದಲ್ಲಿನ ಮಂಚೂರಿಯ ಮಂಗೋಲಿಯ ರಾಜ್ಯಗಳನ್ನು ಜಪಾನು ತನ್ನ ಸಮೀಪದವೆಂದೇ ಅವುಗಳನ್ನು ವಶಪಡಿಸಿಕೊಂಡರೆ, ಕಚ್ಚಾ ಸಾಮಾನು ತರಲಿಕ್ಕೂ ಕೈಗಾರಿಕೆ ಸಾಮಾನು ಮಾರಲಿಕ್ಕೂ ಅತ್ಯನುಕೂಲ—ಎಂದು ಜಪಾನಿನ ಮಂತ್ರಿಮಂಡಲದ ಪ್ರಕಟಣೆಯು ಕೆಲ ದಿನಗಳ ಹಿಂದೆ ಹೊರಬಿದ್ದೇ ಇದೆ. ಜಪಾನಿನ ಮುಂದಣ ಭವಿತವ್ಯತೆಗೆ ಮುಖ್ಯಾಧಾರವು ಯಾವುದೆಂದು ಇದರಿಂದ ವ್ಯಕ್ತವಾಗುತ್ತಿದೆ. ಇದನ್ನು ಸ್ಪಷ್ಟವಾಗಿ ಆಡಿದುದು ಜಪಾನಿನ ಸದ್ಗುಣವು. ಹಾಗೆಂದು ಇತರರ ರಾಜ್ಯವನ್ನು ಹೀಗೆ ನುಗ್ಗುವುದೆ? ನುಗ್ಗುವುದನ್ನು ವಿಮರ್ಶಿಸುವವರು ಯಾರು? ಲೀಗ್ ಒಫ್ ನೆಶನ್ಸ್ ಎಂಬ ಜನಾಂಗ ಸಭಾ ಸದಸ್ಯರು. ಇವರು ತಾವೇ ಒಂದು ದಿನ ಮಾಡಿರುವ ವ್ಯವಸ್ಥೆಯನ್ನು ಈಗ ಜಪಾನು ಕೈಗೊಂಡಿದೆ ಎಂದು ಟೀಕಿಸಲು ಸಮರ್ಥರೇ? ಜಪಾನು ಕೇಳುತ್ತಿದೆ— ''ಯೆಹೂದಿಗಳು ಪತಿತೆಯೊಬ್ಬಳನ್ನು ಕಲ್ಲೆಸೆದು ಕೊಲ್ಲಬೇಕೆಂದಾಗ ಕ್ರೈಸ್ತಸ್ವಾಮಿ ಏನೆಂದನು? ''ನಿಮ್ಮಲ್ಲಿ ಪಾಪಾಚರಣೆ ಮಾಡಿಲ್ಲದವನು ಮೊದಲನೆ ಕಲ್ಲನ್ನೆಸೆಯಲಿ ಎಂದನಲ್ಲವೆ?'' ಹಾಗೆಯೆ, ನನ್ನನ್ನು ದಂಡಿಸಬೇಕೆನ್ನುವವರಲ್ಲಿ, ಅಂತಹ ಕೃತ್ಯವನ್ನು ಮಾಡಿಲ್ಲದವನಾರೂ ಮೊದಲಾಗಿ ದಂಡಿಸ ಬರಲಿ!'' ಯಾರುಉಂದಾರು? ಬರಲಿರುವರು.

+ + + +

## NOTE...S
## ನೋಟಗಳು

ಇದುವರೆಗೆ ಸಿನೇಮಾ ನೋಡದಿದ್ದ ಮಹನೀಯರು ಟಪ್ಪರ್ಯ—ಮಹಾಶ್ಯಾಜೀಯವರು. ಅವರೊಬ್ಬರ ಬದಲಾಗಿ, ಅವರ ಅಸಂಖ್ಯಾತ ಲಕ್ಷಗಟ್ಟಲೆ ಅನುಯಾಯಿಗಳು ಅನುನಿತ್ಯವೂ ಸಿನೆಮಾಸುಖ ಅನುಭವಿಸಿರುವರು. ಅವರೊಬ್ಬರಿಂದೇನು?

* * * *

ಪರೀಕ್ಷೆ ಪಾಸಾಗಿ ಮಾಡುವುದೇನೂ ಇಲ್ಲವೆನ್ನುವವರಲ್ಲಿ ಬಂಗಾಳಿಗಳೇ ಮುಖ್ಯ. ಆದಕ್ಕಾಗಿ ಈ ವರ್ಷ ನಾನಾ ಪರೀಕ್ಷೆಗಳ ಫೀಸಿಗೆಂದು ಬರೇ ಆರು ಲಕ್ಷ ರೂಪಾಯಿ ಮಾತ್ರ. ವಿದ್ಯಾರ್ಥಿಗಳು ತೆತ್ತರು.

* * * *

ಲೇಬರ್ ಪಕ್ಷವಾಗಿ ಎರಡು ಸಲ ರೌಂಡ್‌ಟೇಬಲ್ ಕೊನ್ಫರೆನ್ಸಿಗೆ ಪ್ರತಿನಿಧಿಗಳಾಗಿ ತೆರಳಿದ ದಿವಾನ ಚಮನ್‌ಲಾಲರಿಗೆ ದಾಂಪತ್ಯವಿಚ್ಛೇದವುಂಟಾಯಿತು. ತಿಂಗಳಿಗೆ ೪೦೦ ರೂಪಾಯಿಯಂತೆ ತಮ್ಮ ಯುರೋಪಿಯನ್ ಹೆಂಡತಿಗೆ ಖರ್ಚಿಗೆ ಕೊಟ್ಟರೆ ಸರಿ. ಇದೂ ಒಂದು ಒಗೆಯ ಲೇಬರ್.

* * * *

'ಬಾಯ್ ಬ್ರಿಟಿಶ್' ಚಳವಳವು ಇಂಗ್ಲೆಂಡಿನಲ್ಲಿ ತುಂಬಾ ಇದೆ. ಅಮೇರಿಕದ ಮತ್ತು ಜರ್ಮನಿಯ ಸಾಮಾನುಗಳನ್ನು ತರಿಸಿಕೊಂಡು, ಅವುಗಳ ಹೊರಗಣ ಪೆಟ್ಟಿಗೆಗಳನ್ನು ಮಾತ್ರ ಇಂಗ್ಲೆಂಡಿನಲ್ಲಿ ಮಾಡಿ, ಅವೆಲ್ಲ ಬ್ರಿಟಿಷ ಸರಕೆಂದು ಮಾರುವವರು ತುಂಬಾ ಇದ್ದಾರೆಂದು ಪಾರ್ಲಿಮೆಂಟಿಗೆ ದೂರು. ನಮ್ಮ 'ಬ್ಯಾ ಇಂಡಿಯನ್' ಫಲವಾಗಿ ಹೀಗೆ ಯಾರೂ ಮಾಡುತ್ತಿಲ್ಲವಷ್ಟೆ; ಮಾಡಿದರೂ, ನಾವು ಯಾವ ಪಾರ್ಲಿಮೆಂಟಿಗೆ ದೂರುವುದು?

* * * *

'ಕೊಚ್ಚಿ ಬಂದರು ದುರುಸ್ತಿಯೆಂದು ತಯಾರಿಸಿದ ಅಂದಾಜೆಲ್ಲ ಬಂದಕೋಟಿ. ಆದರೂ ಅದಕ್ಕೆ ಹಣವೇಕೆ ವ್ಯಯವಾಗುವುದು, ಹಿಂದು ಮುಂದು ನೋಡದೆ?' ಎಂಬುದೂ ಲಂಗ್ಲೇ ಸಾಹೇಬರ ಪ್ರಶ್ನೆಯೇ.

* * * *

ನಮ್ಮ ಪ್ರತಿನಿಧಿಗಳಾದ ಶ್ರೀಯುತ ಭಟ್ಟರೂ ಶ್ರೀಯುತ ಶೆಟ್ಟರೂ ರೈತರಿಗೆ ಬಚಾವು ಮಾಡಿರೆಂದು ಬಂಡ ತುಂಡ ಹೇಳಿಯೇ ಇದ್ದರು. ಆಫೀಸರರಿಗೆ ಕೊಟ್ಟ ವಾಗ್ದಾನವನ್ನು ಪೂರೈಸುವ ಸತ್ಯಪ್ರತಿಜ್ಞೆ ಮಾಡಿರುವ ಸರಕಾರವು, ರೈತರಿಗೂ ಕೊಟ್ಟು ಮಾತನ್ನು ಮನ್ನಿಸದಿದ್ದೀತೆ? ಇದ್ದರೆ ಅರ್ಥವೇನಾದೀತು?

* * * *

ನಮ್ಮ ಬಜೇಟು ಹೊರಬಿದ್ದಿತು, ಮಳೆಗಾಲದ ಮೊದಲ ವಾರದ ಮಳೆಯಂತೆ; ಜಡಿಮಳೆ, ಸಿಡಿಲ್ಮಿಂಚು. ಅದರಂತೆ ಇದೊಂದು 'ಜಡಿಬಜೇಟು.'

* * * *

ಪ್ರಜೆಗಳು ಸಂಪನ್ನರು; ವ್ಯಾಪಾರ ಸೊಬಗಾಗಿದೆ; ಆಳರಸರಿಗೆ ಕ್ಷೇಮ; ಸಿಲ್ಕು ತುಂಬಾ, ಆದರೆ,—ಆಫೀಸರುಗಳಿಗೆ ಸಂಬಳ, ಅರ್ಧ ಕಡಿತ ಕೂಡಿಸಿದ್ದಲ್ಲ,—ಪೂರ್ತಿಯಾಗಿ. ರೈತರಿಗೆ ಮಾಫಿ, ರೂಪಾಯಿಯಲ್ಲಿ ಎರಡಾಣೆಯೂ ಇಲ್ಲ; ಕೌನ್ಸಿಲು ನಿರ್ಣಯ ವ್ಯರ್ಥ.

* * * *

ಥಿಲ್ಲಿ ಸ್ವರ್ಗವಾಸಿಗಳಾದರೂ ಅರ್ಧಕಡಿತ ಸಿಕ್ಕಿದರೆ ಪೂರ್ತಿ ದೊರೆತಂತಾಯಿತು ಎಂದು ತೃಪ್ತರಾದರು; ಇಲ್ಲಿ ರೈತರಿಗೆ ಸೊನ್ನೆಯಷ್ಟಾಗಿ ಆಫೀಸರರಿಗೆಲ್ಲ ಪೂರ್ಣಾಹುತಿ.

* * * *

ಮುಂದೆ ಬರಲಿರುವ ನವಯುಗದ ಯುಗಾದಿಗೆ ಒಂ ಹೋಗುವ ಹಾಗೆ, ಬ್ರಿಟಿಷನ್ಯಾಯದ ಉದಾಹರಣೆಯಾಗಿ, ರೈತರಿಗೆ ರಿಯಾಯತಿಯಾಗಲಿ!' ಎಂದು ಮಿ| ಲಂಗ್ಲೇ ಸಾಹೇಬರೇ. (ಪ್ಲಾಂಟರರ ಪ್ರತಿನಿಧಿ) ಕೇಳಿದರು. ಮಂತ್ರಿಗಳು ಕೇಳಿದರೇ?

* * * *

'ಇಡೀ ಜಗತ್ತಿನಲ್ಲಿ ರಬ್ಬರುತೋಟಗಳಿಗೆ ಸಹಾಯ ಮಾಡದ ಸರಕಾರವೆಂದರೆ ಮದ್ರಾಸು ಸರಕಾರ' ಎಂದು ಅವರೇ ಮಹನೀಯ ಸಾಹೇಬರ ದೂರು.

* * * *

ಜಪಾನಿನಲ್ಲಿ ಕಳೆದ ವರ್ಷ ಮಿನಿಟಿಗೆ ನಾಲ್ಕು ಮಕ್ಕಳಂತೆ ಹುಟ್ಟಿವೆ. ಒಟ್ಟು ಜನಗಳು ೩೧ ಲಕ್ಷ. ಹೀಗಾದ ಮೇಲೂ ಮಂಚೂರಿಯಾ ಪ್ರಾಂತ್ಯದಲ್ಲಿ ನಿವಾಸ ಮಾಡಲು ಜಪಾನು ಸ್ವಲ್ಪ ಧೈರ್ಯ ತಳೆದುದರ ತಪ್ಪೇ!

+ + + +

## ದಕ್ಷಿಣ ಕನ್ನಡ

**ಮೂಡಬಿದ್ರೆ**— ಈ ಸೆಂಟರಿನ ಉಪಾಧ್ಯಾಯರ ಸಂಘದ ೨ನೇ ಸಭೆಯು ಇದೇ ತಿಂಗಳ ೧೮ನೇ ಶನಿವಾರ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ೨ ಘಂಟೆಗೆ ದಿಗಂಬರರ ಜೈನ ಪಾಠಶಾಲೆಯ ಅಧ್ಯಾಪಕರಾದ ಮ. ರಾ. ರಾ. ಟಿ. ಕುಮಾರಯ್ಯ ಜೈನಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ೧೨ ಶಾಲೆಗಳ ೩೨ ಮಂದಿ ಉಪಾಧ್ಯಾಯರು ಹಾಜರಿದ್ದರು. ಶಾಲಾ ಮಕ್ಕಳ ಶ್ರೀಯುತ ಪ್ರಾರ್ಥನೆ ಮತ್ತು ಗತ ಸಭೆಯ ವರದಿಯನ್ನು ಅಂಗೀಕಾರ ಮಾಡಿದ ಮೇಲೆ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರಾದ [illegible] ರಾಜಾರಾಮನವರು ೨ನೇ ಕ್ಲಾಸಿಗೆ ಗುಣಾಕಾರದಲ್ಲಿ ಪ್ರಥಮ ಪಾಠವನ್ನು ಕಡ್ಡಿಗಳ ಮೂಲಕ ಬಹು ಸೊಗಸಾಗಿ ಪಾಠವನ್ನು ಕೊಟ್ಟರು.

**ಕಾಸರಗೋಡು**— ಇದೇ ಫೆಬ್ರುವರಿ ತಿಂಗಳ ತಾ. ೨ನೇ ಮಂಗಳವಾರ ದಿವಸ ಕಾಸರಗೋಡು ತಾಲೂಕು ಕುಂಬಳೆ ಫೀಬರ್ ಶಾಲೆಯಲ್ಲಿ ರಾತ್ರಿ ಘಂಟೆ ೪ಕ್ಕೆ ಹರಿಜನರ ಮಹಾ ಸಭೆಯೊಂದು ಸೇರಿತು.

ಇಲ್ಲಿಯ ಕೊರ್ಕೋಡು ಆರ್ಯ ಕಾತ್ಯಾಯನಿ ಅಮ್ಮನವರ ದೇವಸ್ಥಾನದಲ್ಲಿ ತಾ. ೨೨ರಿಂದ ಮಹಾ ಮಾರಿಪೂಜೆಯು ಪ್ರಾರಂಭವಾಗಿರುತ್ತದೆ. ಇದೇ ತಿಂಗಳ ೨೮ಕ್ಕೆ ಮುಗಿಯುವುದು. ಮಂಗಳೂರು ಆರ್ಯ ಸಮಾಜದ ಪಂಡಿತ ಲಕ್ಷ್ಮಣದೇವ ವಿದ್ಯಾವಾಚಸ್ಪತಿಯವರು ಇಲ್ಲಿಗೆ ದಯಮಾಡಿರುವರು. ಇವರು ಆರ್ಯ ಕಾತ್ಯಾಯನಿ ಅಮ್ಮನವರ ದೇವಸ್ಥಾನದಲ್ಲಿ "ಪ್ರಾಣಿ ಹಿಂಸಾ ದಯಾ ಸಂಘ"ದ ಪರವಾಗಿ ಭಾಷಣವನ್ನು ಕೊಟ್ಟಿರುವರು.

**ಫರಂಗಿಪೇಟೆ**— ತಾ. ೧೨ ಆದಿತ್ಯವಾರ ಶ್ರೀ. ಎಚ್. ಎಚ್. ಪಡೆಯರವರ ಪರಿಶ್ರಮದಿಂದ ಫರಂಗಿಪೇಟೆಯ ಶ್ರೀರಾಮಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ಯಾಮ ಘಂಟೆ ೫ಕ್ಕೆ ಸರಿಯಾಗಿ ಅನೇಕ ಮಂದಿ ಯಕ್ಷಗಾನಾಭಿಮಾನಿಗಳು ಸೇರಿದ ಸಭೆಯು ಬಹಳ ವಿಜೃಂಭಣೆಯಿಂದ ಜರಗಿತು.

**ಅಜೆಕಾರು**— ಈ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡಿನ ಖಾಲಿ ಬಿದ್ದ ಒಂದು ಸ್ಥಾನಕ್ಕೆ ಹೆಬ್ರಿಯ ಪ್ರಮುಖ ವರ್ತಕರೂ ಸಹಕಾರ ಸಂಘದ ಅಧ್ಯಕ್ಷರೂ, ಪಂಚಾಯ್ತ ಕೋರ್ಟಿನ ಪ್ರೆಸಿಡೆಂಟರೂ ತಾಲೂಕು ಬೋರ್ಡು ಮೆಂಬರರೂ ಆದ ಶ್ರೀ. ಎಚ್. ಭುಜಂಗ ಬಲ್ಲಾಳರು ತಾ. ೨೫—೩—೩೩ಕ್ಕೆ ಜರಗಲಿರುವ ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಲಿರುವರು.

ಕಾರ್ಕಳ ರೇಂಜ್ ಡಿಪ್ಯೂಟಿ ಇನ್ಸ್‌ಪೆಕ್ಟರರು ಈ ಪ್ರಾಂತ್ಯದ ಶಾಲೆಗಳ ವರ್ಷಾವಧಿ ಪರೀಕ್ಷೆಯನ್ನು ಜರಗಿಸಿರುವರು.

ಕಾರ್ಕಳ ಸೋಮೇಶ್ವರ ಲ್ಯಾನಿನ ಮಧ್ಯಪ್ರಾಂತ್ಯದಲ್ಲಿ ಒಂದು ಅಂಚೆಕಟ್ಟೆಯ ಅಭಾವವು ತುಂಬಾ ಇರುವುದು. ಆದರೂ ಈ ಬಾರಿ ಅದು ನಿವಾರಣೆಯಾಗುವುದೆಂಬ ಭರವಸೆ.

**ಸುರತಕಲ್**— ಇಲ್ಲಿಯ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಿಂಗಳ ತಾ. ೨೫ನೇ ಶನಿವಾರ ದಿನ ಅಪರಾಹ್ನ ಘಂಟೆ ೪ಕ್ಕೆ ಇದ್ಯ ವಿದ್ಯಾದಾಯಿನೀ ಶಾಲಾ ಮಂದಿರದಲ್ಲಿ ಜರಗಿತು. ಪ್ರಥಮತಃ ಅಧ್ಯಕ್ಷರ ಆಯ್ಕೆ, ಕಳೆದ ಸಭೆಯ ವರದಿ ವಾಚನ ಇತ್ಯಾದಿ ಕಾರ್ಯಕ್ರಮಗಳಾದ ನಂತರ ಸಸಿಹಿತ್ಲು ಬೋರ್ಡು ಶಾಲೋಪಶಿಕ್ಷಕರಾದ ಶ್ರೀ. ಪಿ. ಯಲ್. ರಾಘವೇಂದ್ರರಾಯರು ವ್ಯಾಯಾಮದ ಕುರಿತು ಭಾಷಣ ಕೊಟ್ಟರು. ವ್ಯಾಯಾಮದ ಆವಶ್ಯಕತೆ ಮತ್ತು ಉಪಯುಕ್ತತೆಗಳನ್ನು ವಿವರಿಸಿ, ಪ್ರಾಚೀನ ಋಷಿವರ್ಯರುಗಳಿಂದ ಬಂದಿದ್ದು ನಮ್ಮ ಭಾರತ ವರ್ಷದಲ್ಲಿ ಆಚರಣೆಯಲ್ಲಿರುವ ಯೋಗಾಸನಗಳ ಅದ್ವಿತೀಯವಾದ ಪ್ರಯೋಜನಗಳನ್ನು ವಿಸ್ತಾರವಾಗಿ ಹೇಳಿದುದಲ್ಲದೆ ತಾವು ಅಭ್ಯಾಸಿಸಿರುವ ಆ ಯೋಗಾಸನಗಳನ್ನು ಉತ್ತಮ ರೀತಿಯಿಂದ ಪ್ರದರ್ಶಿಸಿ ಸಭಿಕರನ್ನು ಆಶ್ಚರ್ಯಚಕಿತರನ್ನಾಗಿಯೂ, ಆನಂದಭರಿತರನ್ನಾಗಿಯೂ ಮಾಡಿದರು. ಸಭಿಕ, ಹಾಗು ಸಭಾಧ್ಯಕ್ಷ ಮಹಾಶಯರ ಭಾಷಣಾನಂತರ ಸಭಾ ವಿಸರ್ಜನವಾಯಿತು. ನಮ್ಮ ಊರಿನ ಅಧ್ಯಾಪಕ ವರ್ಗದ ಪರಲ್ಲೊಬ್ಬರು, ಉತ್ಕೃಷ್ಟ ಅಂಗಸಾಧನೆಯೆಂದೆನಿಸಿರುವ ಈ ಯೋಗಾಸನಗಳಲ್ಲಿ ಪರಿಣತರಿರುವುದು ಶಿಕ್ಷಕ ಮಂಡಳಿಗೇನೇ ಭೂಷಣಪ್ರಾಯವಾಗಿದೆ. ಶ್ರೀಯುತರು ದೇಶಬಾಂಧವರಿಂದ ಪ್ರೋತ್ಸಾಹಿತರಾಗಿ ಆಸನರೀತ್ಯಾ ವ್ಯಾಯಮ ಕ್ರಮಗಳನ್ನು ಪ್ರಚಾರ ಪಡಿಸಲೆಂದೇ ಹಾರೈಕೆ—

ಕಳೆದ ತಾ. ೨೭ನೆಯ ಸೋಮವಾರ ಇಲ್ಲಿಯ ಕೃಷ್ಣಾಪುರ 'ಶ್ರೀ ಕೃಷ್ಣ' ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಬಾಲಕರ 'ಗ್ರಾಮಸಂಚಾರ ಭಜನೆಯ' ಮಂಡಲೋತ್ಸವವು, ಕೃಷ್ಣಾಪುರ ಮಠದ ಮನೇಜರ ಬ್ರಹ್ಮಶ್ರೀ ದಾಸಾಚಾರ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

**ಶಿರ್ವ**— ಕೆ. ಜೆ. ಬಲ್ಲಾಳ್, ಬಿ. ಎ ಎಲ್. ಎಲ್. ಬಿ. ಆವರ್ಗಳ್ ಇವರ ಮೆನೇಜುಮೆಂಟಿನಲ್ಲಿ ನಡೆಸಲ್ಪಡುವ ಶಿರ್ವ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ಕಳೆದ ಜನವರಿ ತಿಂಗಳ ತಾ. ೯ಕ್ಕೆ ಪ್ರಾರಂಭಿಸಿದ ಶಾಲಾ ವಿದ್ಯಾರ್ಥಿಗಳ ಭಜನೆಯು ೪೮ ದಿವಸಗಳಲ್ಲಿ ಜರಗಿ ಇದೇ ತಿಂಗಳ ತಾರೀಕು ೨೫—೨—೩೩ನೇ ಶನಿವಾರ ರಾತ್ರಿ ಸಮಾಪ್ತಿಯಾಯಿತು.

ಈ ದಿವಸ ಕೂಡಿದ ಸಭೆಗೆ ಪುತ್ತೂರು ತಾಲೂಕಿನ ಬೆಳ್ಳಿಪಾಡಿ ಮ. ರಾ. ರಾ. ಮುತ್ತಣ್ಣ ಶೈಗೆಳವರು ಅಧ್ಯಕ್ಷರಾಗಿ ಅಂದಿನ ಕಾರ್ಯಗಳನ್ನು ನೆರವೇರಿಸಿ ಕೊಟ್ಟದ್ದಕ್ಕೆ, ಶಾಲಾ ಪರವಾಗಿ ತುಂಬ ಕೃತಜ್ಞತೆಯನ್ನು ವಿದ್ಯಾರ್ಥಿಗಳು [illegible] ಈ ದಿವಸ ಸಭೆಗೆ ಸೇರಿದ ಅನೇಕ ಸಹೃದಯರು ಹಾಗೂ [illegible] ಸರಸ ಭಾಷಣವನ್ನು ಕೊಟ್ಟರು. (೯ನೇ ಪುಟವನ್ನು ನೋಡುವುದು)

## ನಾನು ನಿಮ್ಮ ಬೆಂಬಲವಿದ್ದೇನೆ.

ಮಹಾತ್ಮಾ ಗಾಂಧಿಯವರು ಹರಿಜನ ದೇವಸ್ಥಾನ ಪ್ರವೇಶದ ಬಗ್ಗೆ ಶ್ರೀ. ರಂಗ ಅಯ್ಯರರ ಮಸೂದೆಯನ್ನು ನ್ಯಾಯವಿಧಾಯಕ ಸಭೆಯಲ್ಲಿ ಕಾನೂನಾಗಿ ಮಾಡುವ ಪ್ರಯತ್ನದಲ್ಲಿದ್ದಾರಷ್ಟೆ! ಈ ವಿಷಯದ ಕುರಿತು ಪಂಡಿತ ಮಾಲವೀಯರು ಗಾಂಧಿಜೀಯವರಿಗೊಂದು ತಂತಿ ಬಿಡುತ್ತಾ, 'ದೇವಸ್ಥಾನ ಪ್ರವೇಶ ಸಮಸ್ಯೆಯು ಮತ ಸಂಬಂಧವಾದುದು. ಅದಕ್ಕೆ ಹಿಂದೂಗಳ ಮನಃಪೂರ್ವಕ ಒಪ್ಪಿಗೆ ಸಿಗಬೇಕು—ವಿನಹಾ ನಿಮ್ಮ ಬಲತ್ಕಾರದ ಪ್ರವೇಶಮಸೂದೆಯಿಂದಾಗಿ ಬಹಳ ತೊಂದರೆಗಳುಂಟಾಗಬಹುದು' ಎಂದು ಬರೆದರೆಂದು ಕಳೆದ ಸಲ ತಿಳಿಸಲಾಗಿತ್ತು. ಗಾಂಧಿಜೀಯವರು ಮಾಲವೀಯರ ಮತಕ್ಕೆ ಸಮ್ಮತಿಸದೆ "ನೂರು ಸಲ ಹೇಳುತ್ತೇನೆ. ನಮ್ಮ ಯತ್ನದಲ್ಲಿ ಬಲಾತ್ಕಾರವಿಲ್ಲ, ಈ ಸಮಸ್ಯೆಯ ಪರಿಹಾರವಾಗಬೇಕಾದರೆ ನ್ಯಾಯವಿಧಾಯಕ ಸಭೆಯ ಕಾನೂನೇ ತಕ್ಕ ಸಾಧನ"ವೆಂದು ಉತ್ತರ ಕೊಟ್ಟರು. ಈ ವಿಚಾರವಾಗಿ ಭಿನ್ನಮತಗಳು ತಲೆದೋರಿದುವು. ೬ಗ ಗಾಂಧಿಜೀಯವರು ರಂಗ ಅಯ್ಯರರ ಬಿಲ್ಲಿನಲ್ಲಿ ಬಲಾತ್ಕಾರವಿದೆಯೋ ಎಂದು ದೇಶದ ಅನೇಕ ಪ್ರಭೃತಿಗಳೊಡನೆ ಕೇಳಿ ವಿಚಾರಿಸಿಕೊಂಡರು. ಗಾಂಧಿಜೀಯವರು ಸರ್ ತೇಜ ಬಹದ್ದೂರ್ ಸಪ್ರೂರವರಿಗೆ ಪತ್ರ ಬರೆದು "ಬೆರಿಸ್ಟರರಾದ ನಿಮ್ಮ ಮತವೇನು? ನಮ್ಮ ಯತ್ನದಲ್ಲಿ ಬಲಾತ್ಕಾರದ ಚಿಹ್ನೆಯು ಕಾಣುತ್ತದೋ?" ಎಂದು ಪ್ರಶ್ನಿಸಿದರು. ಅವರ ಪ್ರಶ್ನೆಗೆ ಸಪ್ರೂರವರು ಕೊಟ್ಟ ಉತ್ತರವು ಹೀಗಿದೆ:—

"ರಂಗ ಅಯ್ಯರರ ಅಸ್ಪೃಶ್ಯತಾ ನಿವಾರಣಾ ಮಸೂದೆಯು, ಪ್ರಕೃತದಲ್ಲಿ ಕೆಲ ಕಾನೂನುಗಳಿಂದ ಹರಿಜನರು ಪಡುವ ಕಷ್ಟ ಪರಂಪರೆಗಳನ್ನು ಹೋಗಲಾಡಿಸಲಿದೆ. ಆದರಿಂದ ಜಾತಿಹಿಂದೂಗಳಿಗೆ ಯಾವ ಬಾಧೆಯನ್ನೂ ತಂದೊಡ್ಡುವ ಯೋಜನೆಯಾಗಿಲ್ಲ. ಈ ಮಸೂದೆಯಲ್ಲಿ ಒತ್ತಾಯದ ನೆರಳು ಕಾಣುವುದಿಲ್ಲ. ಅಸ್ಪೃಶ್ಯರೊಡನೆ ತಾವು ಸಮ್ಮಿಳಿತರಾಗಲಿಚ್ಛಿಸುವುದಿಲ್ಲವಾದರೆ ಜಾತಿಹಿಂದೂಗಳು ತಮ್ಮ ಇಚ್ಛೆಗೆ ವಿರುದ್ಧವಾಗಿ ನಡೆಯಬೇಕೆಂಬ ಯಾವ ಬಲಾತ್ಕಾರವೂ ಈ ಮಸೂದೆಯಲ್ಲಿಲ್ಲ. ಅದರಲ್ಲಿ ಮುಖ್ಯತಃ ಇರುವುದೇನೆಂದರೆ—ಜಾತಿ ಹಿಂದೂಗಳು ಅಸ್ಪೃಶ್ಯರಿಗೆ ವಿಘ್ನಕಾರಿಗಳಾಗಿ ನಿಲ್ಲಬಾರದೆಂಬುದೊಂದು. ಈ ಬಿಲ್ಲಿನಿಂದಾಗಿ ನ್ಯಾಯಸ್ಥಾನಗಳಲ್ಲಿ ಅಸ್ಪೃಶ್ಯತೆಯ ಕಾನೂನುಗಳನ್ನು ಮನ್ನಿಸಬಾರದೆಂದಿದೆ. ಆದುದರಿಂದ ಈ ಬಿಲ್ಲಿನಲ್ಲಿ ಬಲಾತ್ಕಾರದ ಯಾವ ಚಿಹ್ನೆಯೂ ಇದರಲ್ಲಿ ನನಗೆ ಕಂಡು ಬರುವುದಿಲ್ಲ. ಮಾಲವೀಯರು ನಿಮಗೆ ಕೊಟ್ಟ ತಂತಿಯನ್ನು ನಾನು ಓದಿರುವೆನು ಒಬ್ಬ ದೇಶೀಯನೂ ವಕೀಲನೂ ಎಂಬ ದೃಷ್ಟಿಯಿಂದ ನಾನು ನಿಮ್ಮ ಅಭಿಮತವನ್ನು ಪುಷ್ಟೀಕರಿಸುತ್ತೇನೆ. ನಿಮ್ಮ ಆಶಯದಿಂದ ಹೊರಡುವ ಈ ಬಿಲ್ಲುಗಳು ನಿಜವಾಗಿಯೂ ಸರ್ವಸಮತಾವಾದದ್ದಾಗಿರುತ್ತದೆ. ಕೆಲವರಿಗೆ ಈ ಬಿಲ್ಲಿನಲ್ಲಿ ಬಲಾತ್ಕಾರದ ನಿರ್ಬಂಧವಿದೆಯೆಂದು ತೋರುವಂತೆ ನನಗೇನೂ ಇದರಲ್ಲಿ ಕಾಣಲಾರದು. ಯಾರಿಗೂ ಬಾಧಕವುಂಟಾಗದಂತೆ ನೀವು ಮಾರ್ಗಾನುಸರಣೆಯನ್ನು ಮಾಡುತ್ತಿರುವಿರಾದುದರಿಂದ ನಾನು ನಿಮ್ಮೀ ಯತ್ನದಲ್ಲಿ ಸಂಪೂರ್ಣ ಬೆಂಬಲನಾಗಿದ್ದೇನೆ. ಶಾಂತಪರ ಬೋಧನಾ ಕ್ರಮದಿಂದಲೇ ಆಗಬೇಕೆಂದೂ, ಅದನ್ನು ಮಸೂದೆಗಳ ಮುಖಾಂತರ ಮುಂದೊತ್ತಬಾರದೆಂದೂ ನಮ್ಮಲ್ಲಿನ ಕೆಲವು ಪಂಗಡಗಳು ಮೊದಲಿನಿಂದಲೂ ಟೀಕಿಸುತ್ತಿರುವುದು ನನ್ನ ಸ್ಮರಣೆಯಲ್ಲಿದೆ. ಒಂದು ಸೂತ್ರದ ದೃಷ್ಟ್ಯಾ ಈ ವಾದವು ಅಸಂಗತವಲ್ಲ; ಆದರೆ ಮುಂದಕ್ಕೆ ನ್ಯಾಯ ವಿಧಾಯಕ ಸಭೆಯ ವ್ಯವಹಾರಗಳು ನಮ್ಮ ಹಸ್ತಗತವಾಗಲಿರುವಾಗ (ಇದು ಆಗುವುದು ಖರೆ) ನಮ್ಮದೇ ಆದ ಮಸೂದೆಗಳನ್ನು ನಾವು ನಮ್ಮ ದೇಶೀಯ ಸುಧಾರಣೆಗಳಿಗಾಗಿ ಈಗಿನಂತೆ (ಒಂದು) ಸಾಧನವನ್ನಾಗಿ ಏಕೆ ಉಪಯೋಗಿಸಿಕೊಳ್ಳಕೂಡದು? ಅದಕ್ಕೆ ಅಂಜುವುದೇಕೆ? ಈ ಬಿಲ್ಲಿನ ಸುಧಾರಣೆಗಾಗಿ ಅಧಿಕಾರಿ ವರ್ಗವೂ, ಮುಸಲ್ಮಾನರೂ ವೋಟು ಕೊಡಲು ಸಿದ್ಧವಿಲ್ಲವೆಂದು ಪತ್ರಿಕೆಗಳ ಮೂಲಕ ನನಗೆ ತಿಳಿದುಬಂದಿದೆ. ಆದುದರಿಂದ ಈ ಬಿಲ್ಲನ್ನು ಮಂಜೂರು ಮಾಡಬೇಕೋ ಬೇಡವೋ ಎಂಬ ಸಮಸ್ಯೆಯ ಭಾರವು ಹಿಂದೂಗಳ ಹೆಗಲ ಮೇಲೆಯೇ ಉಳಿಯಿತು. ಹೀಗಿರುವಲ್ಲಿ ಈ ಕುರಿತು ನ್ಯಾಯವಿಧಾಯಕ ಸಭೆಯನ್ನು ಮರೆ ಹೊಕ್ಕುವುದರಲ್ಲಿ ನಮಗೆ ಅಂಜಿಕೆಯೇಕೆಂದು ತಿಳಿಯಲಾರೆ. ಈ ಬಿಲ್ಲಿನ ಉಪಕತೆಯ ಕುರಿತಾಗಿ ನೀವು ಮಾಡಿರುವ ತರ್ಕರಾಶಿಯು ನನ್ನ ಚಿತ್ತವನ್ನು ಸಂಪೂರ್ಣ ಸಂತೃಪ್ತಿಗೊಳಿಸಿರುತ್ತದೆ. ನಿಮ್ಮ ಕಾರ್ಯಕ್ರಮವು ಸಾಮ್ಯ ರೂಪದ್ದಾಗಿರುತ್ತದೆ. ಹೀಗಿದ್ದರೂ ನಿಮ್ಮ ಮತವನ್ನೊಪ್ಪಲಾರದವರು ನಿಮಗೆ ವಿಘ್ನರೂಪಿಗಳಾಗುವರಾದರೆ, ನೀವು ಇದರ ನಿಮಿತ್ತವಾಗಿ ತೀವ್ರ ಪ್ರತಿಭಟನೆಯ ಕಾರ್ಯಕ್ಕೆ ಹಚ್ಚಬೇಕಾಗಿದೆ. ಅತ್ಯಂತ ಸಹಾಯಕಾರಿಗಳಾದ ಸಾಮಾಜಿಕ ಮಸೂದೆಗಳನ್ನು ಕಾರ್ಯಕ್ಕೆ ಹಾಕುವುದಕ್ಕೆ ಹಿಂಜರಿಯುವುದಾದರೆ ನಮಗೆ ಅಂತಹ ಕೌನ್ಸಿಲುಗಳೂ ನ್ಯಾಯವಿಧಾಯಕ ಸಭೆಗಳೂ ಇದ್ದೇನು ಫಲ? ನಾನು ಸಮಾಜದವರನ್ನು ಆಧಾರವಾಗಿಟ್ಟುಕೊಂಡು ಬರೆಯುವುದಲ್ಲ; —ಮಾನುಷಿಕ ಸುಧಾರಣೆಗಳಾಗಬೇಕೆಂಬ ಆಧಾರದಿಂದ. ೨೦೦೦ ವರ್ಷಗಳ ಪೂರ್ವದಲ್ಲಿ ನಮ್ಮ ಪಂಡಿತ ಮತ್ತು ಶಾಸ್ತ್ರಿಗಳ ಹಿರಿಯರು ಪೂರೈಸಲಾರದಾದ ಈ ಸಾಧನೆಯನ್ನು ೨೦ನೇ ಶತಮಾನದ ಅವರ ಕಿರಿಯರು ಸಾಧಿಸುವರೋ ನೋಡಬೇಕಾಗಿದೆ!!

\+ ++ +


## Seventy Five Years!

Two generations of approved service enables us to pick and choose what is cheap, lasting and good to suit the pockets and the tastes of our longstanding wide circle of

**CUSTOMERS**

who know our

Premier House for Swadeshi Mill Yarns — Handloom Cloths Dhoties—Saries—Cintzesh etc.

**Shrinivas Rang Pai,**
*Sawkar Mahal,*
Car Street, MANGALORE


## ನೋಟೀಸು.

**ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

ಕ್ರಮ ಸಂಖ್ಯೆ 745/1932.

ಮಾನು ಶೆಟ್ಟಿ, ಶೇಷು ಶೆಟ್ರ ಸೊಸೆ, ಉಡುಪಿ ತಾಲೂಕು ನಂದಿಕೂರು ಗ್ರಾಮ—ವಾದಿಳು.

ಮತ್ತು

೧. ಪಿ. ಶಿವರಾವ್, ಜನಾರ್ಧನಯ್ಯನವರ ಮಗ, ೨. ಪದ್ಮನಾಭಯ್ಯ, ಶ್ರೀನಿವಾಸಯ್ಯನವರ ಮಗ—ಉಡುಪಿ ತಾಲೂಕು ಪಾದೆಬೆಟ್ಟು ಗ್ರಾಮ. ೩. ಗೋಪಾಲಕೃಷ್ಣಯ್ಯ, ರಾಮಪ್ಪಯ್ಯನವರ ಮಗ, ಮಂಗಳೂರು ತಾಲೂಕು ಹೆಜಮಾಡಿ ಗ್ರಾಮ—ಪ್ರತಿವಾದಿರು.

ಇವರೊಳಗೆ

ಸದರಿ ವ್ಯಾಜ್ಯದ 2—3ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯ ಪಡಿಸುವುದೇನಂದರೆ:—

ಮೇಲಿನ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 21-3-1933ಕ್ಕೆ ತನಿಕೆ ಬಗ್ಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪ ಇರುವ ಸಂಗ್ತಿಯಲ್ಲಿ ಸದರಿ ತಾರೀಕಿನ ದಿವಸ ಹಗಲು 10 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಯಕ್ಸಪಾರ್ಟೆ ಮಾಡೋಣಾದೀತೆಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ.

ಉಡುಪಿ, ೨೮—೨—೧೯೩೩ | ಕೆ. ಜೆ. ಬಲ್ಲಾಳ್. ವಾದಿಳ ಕಡೆ ವಕೀಲ್.

\+ ++ +

## ಅನುಕ್ರಮಣಿಕೆ.

ಸ್ವದೇಶ


ಹಿಂದೀ ಸರಕಾರದ ಆಯವ್ಯಯ — ಬಜೇಟು ೪

ಸ್ಫುಟಿಪಾರಗಳು ೬

ಸೋಟಿಗಳು "

ವರ್ತಮಾನ ಸಂಗ್ರಹಗಳು

ಸ್ವದೇಶೀಯ ವರ್ತಮಾನ ವಿದೇಶ ವರ್ತಮಾನ, ೪

ವಿವಿಧ ಸಮಾಚಾರಗಳು ೧೧

ಬರೀ ಭ್ರಾಂತಿ! ೨

ಸಾಧು ಕೃಷ್ಣ ಚೈತನ್ಯರು. ೧೩

ಸ್ವದೇಶ ಸೋಟಿಗಳ ಭಾಜಿ! ೪

ದಕ್ಷಿಣ ಕನ್ನಡ — ಮಂಗಳೂರು, ಕಾಸರಗೋಡು ಸುರತ್ಕಲ್

ಮೂಡಬಿದ್ರೆ, ಹರಂಗಿಪೇಟೆ ಅಜೆಕಾರು, ಶಿರ್ವ ೬೯

ನಾವು ಯಾರು? ಭಾರತವರ್ಷದ ಮಹಿಳಾ ಸಭಾ ೧೫

ನಾನು ನಿಮ್ಮ ಬೆಂಬಲವಿದ್ದೇನೆ ೭

ಈ ಮಾಸದೊಳಗೆ ಗಾಂಧಿಜೀಯವರ ಬಿಡುಗಡೆ! ೯೦



# ಸ್ವದೇಶಾಭಿಮಾನಿ.

ತಾ. ೩ನೇ ಶುಕ್ರವಾರ ಮಾರ್ಚಿ ೧೯೩೩.


## ಹಿಂದೀ ಸರಕಾರದ ಆಯವ್ಯಯ.

### ಬಜ್ಜೇಟು.

ಹಿಂದೂಸ್ಥಾನದ ಅರ್ಥಸಚಿವರಾದ ಸರ್ ಜೋರ್ಜ ಶುಸ್ಟರರು ತಮ್ಮ ಆಯವ್ಯಯದ ಅಂದಾಜು ಪಟ್ಟಿಯನ್ನು ಕಳೆದ ಫೆಬ್ರವರಿ ತಾ ೨೮ರಲ್ಲು ಲೆಜಿಸ್ಲೆಟಿವ ಎಸೆಂಬ್ಲಿಯ ಮುಂದಿಟ್ಟಿರುವರು ಅದರ ಮುಖ್ಯ ತಾತ್ಪರ್ಯವೆಂದರೆ, ಹಾಗೂ ಹೀಗೂ ನಮ್ಮ ಅರ್ಥಸಚಿವರು ಉಳಿತಾಯದ ಬಜ್ಜೇಟನ್ನು ತೋರಿಸಲಿಕ್ಕಾದುದು. ಮುಖ್ಯವಾಗಿ, ಸನ್ ೧೯೩೧—೩೨ರಲ್ಲು ರೂಪಾಯಿ ೧೧೭೫ ಲಕ್ಷ ವ್ಯಯಾಧಿಕ್ಯ (ಅಂದರೆ ನಷ್ಟ)ವಿರುವಾಗ, ೧೯೩೨—೩೩ರ ಬಗ್ಗೆ ಕಳೆದ ೧೯೩೧ನೇ ಇಸವಿಯ ಸಪ್ಟಂಬರ ತಿಂಗಳ ಹೊಸ ಕರ ನಿರ್ಮಾಣಗಳ ಮತ್ತು ನೌಕರರ ಸಂಬಳದ ಕಡಿತದಿಂದ ೧೯೩೨-೩೩ರಲ್ಲಿ ೨೧೫ ಲಕ್ಷ ಉಳಿತಾಯ (ಲಾಭ)ವಿದ್ದು ೧೯೩೩—೩೪ಕ್ಕೆ ೪೫ ಲಕ್ಷ ಲಾಭ ಉಳಿಯ ಬಹುದಾಗಿ ಅಂದಾಜು ಮಾಡಲ್ಪಟ್ಟಿದೆ ಆದರೆ ೧೯೩೨—೩೩ರ ೨೧೫ರ ಲಾಭವೂ ೧೯೩೩-೩೪ರ ೪೫ ಲಕ್ಷ ಲಾಭವೂ ಯಾವ ರೂಪದಿಂದ ಮಾಡಲ್ಪಟ್ಟಿದೆ ಮತ್ತು ಯಾವ ಬಗ್ಗೆ ಮಾಡಲ್ಪಟ್ಟಿದೆ ಎಂದು ವಿಚಾರಿಸುವುದು ಆವಶ್ಯಕ

ಬರುವ ವರ್ಷದಿಂದ ಸರಕಾರೀ ನೌಕರರ ಸಂಬಳದಲ್ಲಿ ಈ ವರೆಗಿದ್ದ ಶೇಕಡಃ ೧೦ರ ಕಡಿತ (cut)ವು ಶೇಕಡಾ ೫ಕ್ಕೆ ತಗ್ಗಿಸಲ್ಪಡುವುದು. ಈ ಬಗ್ಗೆ ೩೦೮ ಲಕ್ಷ ರೂಪಾಯಿ ಸರಕಾರಕ್ಕೆ ಅಧಿಕವಾಗಿ ಖರ್ಚಾಗುವುದು ಇದಕ್ಕೆ ೧೯೩೩-೩೪ರ ೪೫ ಲಕ್ಷ ಉಳಿತಾಯವನ್ನು ಕೂಡಿಸಿ ೧೯೩೨—೩೩ರ ೨೧೫ ಲಕ್ಷ ಉಳಿತಾಯದೊಡನೆ ಸರಿತೂಗಿಸಿದ್ದಲ್ಲಿ, ಬರುವ ವರ್ಷ ನೌಕರರ ಸಂಬಳದ ಕಡಿತವನ್ನು ತಗ್ಗಿಸದೆ ಇದ್ದಲ್ಲಿ ೧೯೩೨—೩೩ರ ಮತ್ತು ೧೯೩೩—೩೪ರ ಉಳಿತಾಯಗಳಿಗೆ ಬರಿ ೬೨ ಲಕ್ಷದ ಅಂತರವು ಉಳಿಯುತ್ತಿತ್ತು ಅಂದರೆ ಸರಕಾರವು ತನ್ನ ಬಜ್ಜೇಟಿನಲ್ಲಿ ೧೯೩೨—೩೩ ಮತ್ತು ೧೯೩೩—೩೪ ವರ್ಷಗಳಲ್ಲಿ ಒಂದೇ ಪ್ರಮಾಣದ ಉಳಿತಾಯವನ್ನು ಉಂಟುಮಾಡಲು ಯತ್ನಿಸಿದೆಯೆಂದೂ, ಆ ಮೂಲಕ ನೌಕರರ ಸಂಬಳದ ಕಡಿತಕ್ಕೆ ಒಂದು ಆಧಾರವನ್ನು ಕಲ್ಪಿಸಿಯದೆಂದೂ ಸ್ಪಷ್ಟವಾಗಿ ಕಂಡು ಬರುವುದು.

ಇದರೊಡನೆ ಅರ್ಥಸಚಿವರು ಈ ಸಂಬಳ ಕಡಿತವನ್ನು ನಿವಾರಿಸುವ ಬಗ್ಗೆ ತೋರಿಸಿರುವ ಅತಿಶಯವಾದ ಯೋಚನೆಯನ್ನು ಕಂಡರೆ ನಮ್ಮ ಭಾವಾರ್ಥವು ಪುಷ್ಟೀಕರಿಸಲ್ಪಡುವುದು "ಈ ಕಡಿತಗಳನ್ನು ನಿವಾರಿಸುವುದನ್ನು ನಮ್ಮ ಪ್ರಥಮ ಧ್ಯೇಯವಾಗಿಟ್ಟುಕೊಂಡಿರುವೆವು" "ನೌಕರರ ನಿರ್ದಿಷ್ಟ ಸಂಬಳಗಳನ್ನು ಕೊಡದಿದ್ದರೆ ಸರಕಾರವು ತನ್ನ ಜವಾಬ್ದಾರಿಯನ್ನಿಟ್ಟುಕೊಂಡಂತಾಗುವುದಿಲ್ಲ" ಎಂಬ ಮಾತುಗಳು ಸರಕಾರದ ಮಾನಸಿಕತೆಯನ್ನು ಹೊರಗೆಡಹುತ್ತಿವೆ. ಇಂಗ್ಲೆಂಡಿನಲ್ಲಿ ಕೂಡ ಸರಕಾರೀ ನೌಕರರ [illegible] ಸರಕಾರದ [illegible] ಜವಾಬ್ದಾರಿಯೊಂದಾಗಲಿ ತೀರಿಲ್ಲ. ಪ್ರಜೆಗಳ ಹಿತವು ಅದರೊಡನೆಯೇ ಮತ್ತು ಅಧಿಕ್ಯಂತಲೂ ಮೇಲು ಎಂದು ಅಲ್ಲಿ ತಿಳಿದಿರುವರು. ಆದರೆ ಇಲ್ಲಿ, ಪ್ರಜೆಗಳ ಕರಗಳನ್ನು ಹೆಚ್ಚಿಸುವುದೂ, ನೌಕರರ ಸಂಬಳವನ್ನು ಇಳಿಸುವುದೂ ಸಾರ್ವಜನಿಕ ಆಪತ್ತಿಯಲ್ಲಿದ ರೂಪವೆಂದು ೧೯೩೧ರಲ್ಲಿ ಸಮಾನತೆಯ ಭಾವದಿಂದ ಸರ್ ಜೋರ್ಜ ಶುಸ್ಟರರು ಎರಡನ್ನೂ ಜ್ಯಾರಿಗೆ ತಂದಿರುವಾಗ ಈಗ ಮಾತ್ರ ನೌಕರರ ಸಂಬಳವನ್ನೇರಿಸುವುದನ್ನು ಪ್ರಥಮ ಧ್ಯೇಯವೆಂದು, ಹೆಚ್ಚಿದ ಕರಗಳನ್ನು ಹಿಂದೆ ದೂಡಿದುದು ಹಿಂದೀ ಸರಕಾರದ ನಿತ್ಯದ ಮಾನಸಿಕತೆಯನ್ನೇ ತೋರಿಸುತ್ತಿದೆ

"ಈ ಕಡಿತವನ್ನು ನಿವಾರಿಸಬಾರದೆಂಬುದಕ್ಕೆ ಒಂದು ಕಾರಣವನ್ನಾದರೆ ನಾನು ಒಪ್ಪುವೆನು—ಈಗಿನ ಆರ್ಥಿಕ ಪರಿಸ್ಥಿತಿಯು ಇದನ್ನು ಸಹಿಸಬಲ್ಲುದೇ? ಎಂಬುದು. ಎಂದು ಸರ್ ಶುಸ್ಟರರು ಮೇಲಾಗಿ ಹೇಳಿದರು ಈ ತರ್ಕವನ್ನು ಎದುರಾಡಲಿಕ್ಕಾಗಿಯೇ ೧೯೩೨—೩೩ರಲ್ಲಿ ೨೧೫ ಲಕ್ಷದ ಉಳಿತಾಯವನ್ನೂ, ೧೯೩೩—೩೪ರಲ್ಲಿ ೪೫ ಲಕ್ಷದ ಉಳಿತಾಯವನ್ನೂ ಸರ್ ಶುಸ್ಟರರು ಲೆಕ್ಕಮಾಡಿ ತೋರಿಸಿದುದು? ಎಂದು ಪರೀಕ್ಷಿಸುವುದು ಅರ್ಥಶಾಸ್ತ್ರಜ್ಞರ ಕರ್ತವ್ಯವಿದೆ

ಬಜ್ಜೇಟು ಭಾಷಣವು ಬಹಳ ವಿಲಂಬಿತವಿದೆ ತರ್ಕಸರಣಿಯೂ ಹೃದಯಂಗಮವಿದೆ ಆದರೆ ಈ ತರ್ಕಸರಣಿಯಲ್ಲಿ ಮನಃಪೂರ್ವಕತೆ ಅಥವಾ ಅಂತಃಕರಣಪೂರ್ವಕವಾದ ಸಹಾನುಭೂತಿ ಇದ್ದಂತೆ ಕಂಡುಬರುವುದಿಲ್ಲ ಭಾಷಣದಲ್ಲಿ ಹಲವು ಉಪಯುಕ್ತ ವಿಚಾರಗಳೂ, ವಿಷಯಗಳೂ ಇವೆ ಆದರೆ ಅವರು ತಮ್ಮ ತರ್ಕಸರಣಿಯನ್ನು ಮೇಲೆ ತೋರಿಸಿದ ನೌಕರರ ಸಂಬಳ ಕಡಿತದ ನಿವಾರಣೆಯ ಸಮರ್ಥನೆಯಲ್ಲಿಯೂ ಹಿಂದೀಯ ಭಂಗಾರದ ರಫ್ತಿನ ಸಮರ್ಥನೆಯಲ್ಲಿಯೂ ಅವರು ಬಹಳ ಉಜ್ವಲವಾಗಿ ಉಪಯೋಗಿಸಿದ್ದಾರೆ ಸಂಬಳ ಕಡಿತದ ಅವರ ತರ್ಕವು ಎಷ್ಟೇ ಉಜ್ವಲವಾದರೂ ಜನಾಂಗಕ್ಕೆ ನ್ಯಾಯವಾದುದಲ್ಲವೆಂಬುದನ್ನು ನಾವು ಈ ಮೊದಲೂ, ಮೇಲಿನ ಭಾಗದಲ್ಲಿಯೂ ತೋರಿಸಿದ್ದೇವೆ

ಆದರೆ ಅವರ ಭಂಗಾರದ ರಫ್ತಿನ ಸಮರ್ಥನೆಯ ತರ್ಕವು ಅತ್ಯಂತ ಆಶ್ಚರ್ಯಕರವಾಗಿರುತ್ತದೆ ಹಿಂದೂಸ್ಥಾನದ ಎಲ್ಲಾ ಹಿತಚಿಂತಕರೂ ಭಂಗಾರದ ರಫ್ತಿನಿಂದ ದೇಶಕ್ಕೆ ಬಹಳ ಹಾನಿಯಾಯಿತೆನ್ನುವಾಗ ಇವರು ಭಂಗಾರದ ರಫ್ತಿನಿಂದ ದೇಶಕ್ಕುಂಟಾದ ಲಾಭವನ್ನು ಬಹಳ ಚೆನ್ನಾಗಿ ತೋರಿಸಿದ್ದಾರೆ ಅವರ ತರ್ಕವು ಒಂದು ಬಾರಿಗೆ ಹೌದೆಂದು ತೋರಬಹುದಾದರೂ "ಈ ರಫ್ತಿನಿಂದ ದೇಶಕ್ಕೆ ಹಾನಿಯಾಗದೆ ಎಷ್ಟು ಸಮಯದ ವರೆಗೆ ಸಾಗಬಹುದೆಂಬದು—ಅದು ಬೇರೆ ಮಾತ" ಎಂಬ ಆ ಚಿಕ್ಕ ವ್ಯಂಗ ಭಾವಪೂರ್ಣವಾದ ಮಾತು ಅವರ ತರ್ಕಸರಣಿಯನ್ನು ಇಡಿಯಾಗಿ ನಿರ್ಬಲಪಡಿಸಿ ಬಿಡುತ್ತದೆ

ಅವರ ತರ್ಕವನ್ನು ಇಲ್ಲಿ ಬಿಡಿಸಿ ಹೇಳಬೇಕಾಗುವುದು— ಹಿಂದೂಸ್ಥಾನವು ಭಂಗಾರವನ್ನು ಹೊರ ಕಳುಹಿಸಿದುದರಿಂದ ನಮ್ಮ ದೇಶಕ್ಕೆ ಬೇಕಾಗುವ ಸಾಮಾನುಗಳನ್ನು ಆಮದು ಮಾಡಲು ಸುಲಭವಾಯಿತು, ಭಂಗಾರವಿಲ್ಲದ ದೇಶಗಳಿಗೆ ಅದನ್ನು ಕಳುಹಿಸಿ ಆ ಮೂಲಕ ಆ ದೇಶಗಳ ಜನರ ಕ್ರಯಕ್ಕೆಕೊಳ್ಳುವ (purchasing) ಶಕ್ತಿಯನ್ನು ಹೆಚ್ಚಿಸಿತು, ಇದರಿಂದ ಹಿಂದೂಸ್ಥಾನವು ಭಾವೀ ಗಿರಾಕಿಗಳನ್ನು ಸಂಪಾದಿಸಿ ಇಟ್ಟಿತು! ಆದರೆ ಹಿಂದೂಸ್ಥಾನಕ್ಕೆ ಅನವಶ್ಯಕವಾದ ಆಮದು ಈ ಮೂಲಕ ಹೆಚ್ಚಿದುದರಿಂದ ಹಿಂದೂಸ್ಥಾನಕ್ಕೆ ನಷ್ಟವೇ ಆಗಿದೆಯೆಂದೂ ಭಂಗಾರವು ಇಲ್ಲದ ಕಡೆಗಳಿಗೆ ಹೋಗುವ ಬದಲಿಗೆ ಇದ್ದ ಅಮೇರಿಕಕ್ಕನೇ ಹೋಗಿದೆಯೆಂದೂ, ಭಂಗಾರವನ್ನು ಕೊಂಡವರ ಕ್ರಯಕ್ಕೆ ಕೊಳ್ಳುವ ಶಕ್ತಿ ಹೆಚ್ಚಿದ ಮಾತ್ರದಿಂದ ಹಿಂದೂಸ್ಥಾನದ ಗಿರಾಕಿಗಳು ಅವರಾಗುವರೆಂಬದಕ್ಕೆ ಯಾವ ಆಧಾರವೂ ಇಲ್ಲವೆಂಬುದನ್ನೂ ಅರ್ಥಸಚಿವರಿಗೆ ತಿಳಿಯದ ಆರ್ಥಿಕ ಸೂತ್ರಗಳಲ್ಲವೆಂದು ನಾವು ನೆನಸುವೆವು

ಭಂಗಾರದ ರಫ್ತಿನಿಂದ ಇನ್ನೊಂದು ಪ್ರಯೋಜನವನ್ನು ಅವರು ಸೂಚಿಸುವರು ಜನರು ಉತ್ಪತ್ತಿಯಿಲ್ಲದ ಭಂಗಾರವನ್ನು ವಿಕ್ರಯಿಸಿ ಪೋಷ್ಟಾಫೀಸು ಕೇಶ್ ಸರ್ಟಿಫಿಕೇಟು ಮೊದಲಾದ ಬಡ್ಡಿಯಿಯುವ ರೂಪದಲ್ಲಿ ಧನಸಂಚಯ ಮಾಡಿರುವರೆಂದೂ ಇದರಿಂದ ಜನತೆಯ ಸಾಂಪತ್ತಿಕ ಸ್ಥಿತಿಯು ಅಭಿವೃದ್ಧಿ ಹೊಂದುವುದೆಂದೂ ಹೇಳುವರು ಆದರೆ ಈ ಸುಂದರ ಚಿತ್ರವನ್ನು ಕೂಡ ಅರ್ಥಸಚಿವರು ಒಂದು "ಆದರೆ"ಯ ಅಪವಾದದ ಕಲಂಕವನ್ನು ಹಾಗಿಸದೆ ಹೊರಗಿಡಲಾರರಾಗಿದ್ದಾರೆ—"ಈ ಕ್ರಮವು ಇದೇ ರೀತಿಯಲ್ಲಿ ಸರಿಯಾದ ಮಾರ್ಗದಲ್ಲಿ ಮುನ್ನಡೆದರೆ, ಜನತೆಯು ಅಪಾಯಯುವಾದ (speculative) ಧಂದ [illegible] ಸ್ಥಿರವಾದ ಧನವಾನಗಳಲ್ಲಿ ಹಾಕಿದರೆ ಕಷ್ಟಕಾಗಿ ಇದರಿಂದ ಉತ್ತಮ ಪ್ರಯೋಜನ ಲಭಿಸಲೇ ಬೇಕು." ಹೀಗೆ ಸರ್ ಶುಸ್ಟರರ ತರ್ಕವು ಈ ಒಂದು ಅಪವಾದದಲ್ಲಿ ಬಿದ್ದುಹೋಗುತ್ತದೆ. ಏಕೆಂದರೆ ಇಂದಿನ ದಿನಗಳಲ್ಲಿ ಅಪಾಯಯುವಾದ ಧಂದವಾಳ speculative investments) ಬಿಟ್ಟು ನ್ಯಾಯವಾದ ಬಡ್ಡಿ ಕೊಡಬಲ್ಲ ದ್ರವ್ಯ ವಿನಿಯೋಗವೇ ಕಡಿಮೆಯಾಗಿದೆ. ದವಸಗಳ ಬೆಲೆ ಇಳಿದುದರಿಂದಲೂ, ಜನಾಂಗಗಳು ವ್ಯಾಪಾರಕ್ಕೆ ಸುಂಕಗಳ ಮೂಲಕ ಅಡ್ಡಿಯಿಯುವುದರಿಂದಲೂ ದ್ರವ್ಯಸಂಚಯನೆಗೆ ಉಪಾಯವೇ ಇಲ್ಲ ಇದರಿಂದ ಸಹಜವಾಗಿಯೇ ಹೆಚ್ಚಿನ ದ್ರವ್ಯವನ್ನು ಸರಕಾರಕ್ಕೆ ಸಾಲವಾಗಿ ಕೊಡುವುದೆ ಹೆಚ್ಚು ಲಾಭಕರವಾಗಿ ಕಂಡುಬರುವುದು ಭಂಗಾರ ವಿಕ್ರಯವಾಗದಿದ್ದರೂ ಇಂತಹ ಪರಿಸ್ಥಿತಿಯು ಬರುತ್ತಿತ್ತು ಭಂಗಾರ ವಿಕ್ರಯವಾದ ಮೇಲಂತೂ ಅದು ಬರಲೇಬೇಕು. ಆದರೆ ವಿಕ್ರಯಿಸಿದವರೇ ಪೋಸ್ಟಲ್ ಕೇಶ್ ಸರ್ಟಿಫಿಕೇಟ್ ಪಡೆದಿದ್ದಾರೆಂದು ಹೇಳಲಾಗುವುದಿಲ್ಲ. ಬದಲಿಗೆ ದೇಶದ ಕಠಿಣ ಸ್ಥಿತಿಯು ಇನ್ನಷ್ಟು ವಿದಿತವಾಗುವುದು ಸರ್ ಶುಸ್ಟರರ ತರ್ಕವನ್ನು ಮುಂದರಿಸುವುದಾದರೆ ಈಗಿನ ಮಟ್ಟಿಗೆ ಭಂಗಾರವನ್ನು ಕ್ರಯಕ್ಕೆ ಪಡಕೊಂಡು ಇಡುವಷ್ಟು ಸುರಕ್ಷಿತ ದ್ರವ್ಯವಿನಿಯೋಗವು ಬೇರಿಲ್ಲವೆನ್ನಲೂ ಬಹುದು ಆ ಕಾರಣದಿಂದಲೂ ಭಂಗಾರ ವಿಕ್ರಯದಿಂದ ದೇಶಕ್ಕೆ ಹಾನಿಯೇ ಉಂಟಾಗಿಯದೆ

ಸರ್ ಶುಸ್ಟರರ ಸಂಖ್ಯಾಗಣನೆಯ ಡೊಂಬರಾಟದ ಪರಿಶೋಧದಲ್ಲಿ ನಾವೀಗ ಇಳಿಯುವುದಿಲ್ಲ ಆದರೆ ಸರ್ ಶುಸ್ಟರರ ಅತ್ಯಂತ ನಯವಾದ ನುಡಿಗಳಲ್ಲಿ ಹಿಂದೂಸ್ಥಾನಕ್ಕೆ ಅತ್ಯಂತ ಹಾನಿಕರವಾಗಿ ಪರಿಣಮಿಸಬಲ್ಲ ತತ್ವಗಳನ್ನೂ ಗಣನೆಗಳನ್ನೂ ಈ ಬಾರಿಯ ಭಾಷಣದಲ್ಲಿ ಮುಂದೊತ್ತಿರುವರೆಂದು ಸೂಚಿಸುವುದೇ ನಮ್ಮ ಉದ್ದೇಶವಿದೆ

---

## ವಿದೇಶ ವರ್ತಮಾನ.

—ಅಮೇರಿಕದ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ರೂಸ್‌ವೆಲ್ಟರಿಗೆ ಜಂಗೇರ ಎಂಬ ಇಟೆಲಿಯವನು ಗುಂಡುಹಾಕಿದನು! ಏನೂ ಅಗಲಿಲ್ಲ! ಇವನಿಗೆ ೮೦ ವರ್ಷಗಳ ಕಾರಾವಾಸ ಶಿಕ್ಷೆ ವಿಧಿಸಲ್ಪಟ್ಟಿದೆ.

—ಅಮೇರಿಕಾ ದೇಶವನ್ನೆಲ್ಲ ಸುತ್ತಾಡಿದ ರ್‍ಯಾಲೆ [illegible] ಪಟೇಲರು ವಿಯೆನ್ನಕ್ಕೆ ತೆರಳಿದರು.

—ಜ್ಯಾಂರಿಸನಲ್ಲಿ ಹೊಸ ತೆರಿಗೆಗಳು ಉದ್ಭವಿಸಿದುವು. ಅಂಗಡಿಗಾರರೆಲ್ಲ ಒಂದಾಗಿ ಒಂದೆರಡು ದಿನಗಳ ಹರ್ತಾಳ ಪಾಲಿಸಿದರು.

—ಮಹಾತ್ಮರ ಜೀವನ ಪರಿವರ್ತನೆಯನ್ನು ರಸ್ಕಿನನ ಅಂಟು ದಿ ಲಾಸ್ಟ್ ಎಂಬ ಗ್ರಂಥವು ಮಾಡಿತೆಂದು ಬರ್ಮಿಂಗ್‌ಹೇಮಿನಲ್ಲಿ ಡಾ. ಬಾನ್‌ರ್ ಎಂಬವರು ಹೇಳಿದರು

—ಪರ್ಶಿಯನ್ ಎಣ್ಣೆ ಚರ್ಚೆಯನ್ನು ತೀರ್ಮಾನಿಸಲು ಸರ್ ಜೋನ್ ಸೈಮನ್ನರು ಕೆಲವರೊಡನೆ ಪರ್ಶಿಯಕ್ಕೆ ಹೋಗಲಿರುವರು.

—ಸ್ವೀಡನ್ ಬೆಂಕಿಪೆಟ್ಟಿಗೆ ಕಾರ್ಖಾನೆಯ ಕ್ರ್ಯೂಗರ್ ಪಿತೂರಿಯಲ್ಲಿದ್ದು ತಪ್ಪು ಲೆಕ್ಕ ಪತ್ರವನ್ನು ಬರೆದಿಟ್ಟ ಹೋಮ್ ಎಂಬ ಧನ ವ್ಯಕ್ತಿಗೆ ೩೬೮೦೦೦ ಕ್ರೋನರ್ ಜುಲುಮಾನೆ ಮತ್ತು ೬ ತಿಂಗಳ ಶಿಕ್ಷೆ

—ಸ್ವಾತಂತ್ರ್ಯ ಮತ್ತು ಸಂಯುಕ್ತ ಆಯರ್ಲಂಡನ್ನು ನಿರ್ಮಿಸಬೇಕೆಂಬ ಇಚ್ಛೆಯಿಂದ ಐರಿಷ್ ರಿಪಬ್ಲಿಕನ್ ಆರ್ಮಿಯ ಮುಖಂಡರಾದ ಫ್ರೇಂಕ್ ಟೊಲ್‌ಸ್ಟರರೆಂಬವರು ತನ್ನ ಒಡನಾಡಿಗಳ ಸಮೇತ ರಿವಾಲ್ವರುಗಳನ್ನು ಆರ್ಮಿಯ ಕ್ವಾರ್ಟರ್ಸ್‌ನಲ್ಲಿ ಇಟ್ಟು 'ಶಾಂತ ರೀತಿಯಿಂದ ಸ್ವಾತಂತ್ರ್ಯವನ್ನು ಸಾಧಿಸುವೆವು' ಎಂದರು.

—ಇಟೆಲಿಯಿಂದ ಆಸ್ಟ್ರೀಯಕ್ಕೆ ರಹಸ್ಯವಾಗಿ ಶಸ್ತ್ರಗಳನ್ನು ಕಳುಹಿಸಲಾಗಿದೆ ಎಂದು ತಿಳಿದ ಬ್ರಿಟನ್ ಫ್ರಾನ್ಸ್ ದೇಶಗಳು ಉದ್ವಿಗ್ನಗೊಂಡಿವೆ. ಆ ಸಾಮಗ್ರಿಗಳನ್ನು ಹಿಂದೆ ಕೊಡಬೇಕೆಂದು [illegible]!

—ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರಿಗೆ ಒಂದು ಪಿಡುಗು ರವಾನಿಸಲ್ಪಟ್ಟಿದ್ದು, ಆದರ ಅಪಾಯ ಸೂಚನೆಯು ಅಂಚೆ ಆಫೀಸಿನಲ್ಲಿ ಆಗಿ ಅವರು ಸಂರಕ್ಷಿಸಲ್ಪಟ್ಟರು.

—ಮೋರಸ್ ಕ್ಲಬಿನ ಜನುಗಡಗಾಗಿ ಲಂಡನಿನಲ್ಲಿ ಬ್ರಿಟಿಷ ಸ್ತ್ರೀಗಳನೇಕರು ಒಂದು ಫಂಡನ್ನು ಸ್ಥಾಪಿಸಿದ್ದಾರೆ. ಮೋರಸ್ ಕ್ಲಬಿನಾದ ಹಚ್ಚಿಸನ್ ಎಂಬವರ ಅತೀಕಾರಾಗಿ [illegible] ಸಾವಿರ ಪೌಂಡುಗಳನ್ನು [illegible].

—೧೬೧೦೦೦ [illegible] ಸಂಖ್ಯೆಯ [illegible]

## ಒಳದೇಶ ವರ್ತಮಾನ

ಸುಭಾಷಬೋಸರು ಬೆನಿಸ್ ಮಾರ್ಗವಾಗಿ ವಿಯನ್ನಕ್ಕೆ ಹೋದರು.

—ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಮೊನ್ನೆ ಜೈಲಿನಿಂದ ಸೆರೆಮನೆಯಿಂದ ಬಿಡುಗಡೆ ಮಾಡಲ್ಪಟ್ಟು ಪೂನೆಗೆ ಹೋಗಿ ಮಹಾತ್ಮಾ ಗಾಂಧಿಯವರನ್ನು ಸಂದರ್ಶಿಸಿದರು.

—ಅಲ್ಲಹಾಬಾದಿನಲ್ಲಿ ಮೋತಿಲಾಲ ದಿನಾಚರಣೆಗಾಗಿ ಸಪ್ರೂರವರ ಅಧ್ಯಕ್ಷತೆಯಲ್ಲಿ ಜರಗಲಿದ್ದ ಸಭೆಯನ್ನು ಮೇಜಿಸ್ಟ್ರೇಟರು ಪ್ರತಿಬಂಧಿಸಿದ್ದರಂತೆ! ಈಗ ಹೋಮ್ ಮೆಂಬರರಿಗೂ ಸಪ್ರೂರವರಿಗೂ ಆ ಕುರಿತು ಚರ್ಚೆ ನಡೆದಿದೆ

—ಕಲ್ಕತ್ತದ ಹೌರಾ ಕೋರ್ಟಿನಲ್ಲಿ ಒಬ್ಬ ತರುಣನಿಗಾಗಿ ಕಂದೆ ಮತ್ತು ಹೊರಗಿನ ಕೆಲವರೊಳಗೆ ಕಚ್ಚಾಟವಾಗಿ ಎಲ್ಲರೂ ದಸ್ತಗಿರಿ ಮಾಡಲ್ಪಟ್ಟರು.

—ಕಂದಾಯದಲ್ಲಿ ರಿಯಾಯಿತಿಯನ್ನು ತೋರಿಸಲು ಸಾಧ್ಯವಿಲ್ಲ ವೆಂದು ಇಂಡಿಯಾ ಸರಕಾರದ ಫಿನಾನ್ಸ್ ಮೆಂಬರರಾದ ಸರ್ ಜೋರ್ಜ್ ಶುಸ್ಟರರೆಂದರು

—ಮುಂಬಾಯಿಯ ಕ್ರಿಸೆಂಟ್ ಮತ್ತು ಕರಿಂಬೊಯ ಮಿಲ್ಸ್‌ಗಳ ೧೦ ಸಾವಿರ ಕೆಲಸಗಾರರಿಗೆ ಕೆಲಸವಿಲ್ಲೆಂದೂ ತಾವು ಈ ಮಿಲ್ಲುಗಳನ್ನು ಮುಚ್ಚುವೆವೆಂದೂ ಮ್ಯಾನೇಜರ ನೋಟೀಸು!

—ಮದ್ರಾಸು ಶಾಸನ ಸಭೆಯಲ್ಲಿ ಶ್ರೀ ಎ. ಬಿ. ಶೆಟ್ಟರು ರೈತರ ಪರವಾಗಿ ಮಾತನಾಡಿ ಸರಕಾರವು ಶೇಕಡಾ ೧೨½ ರಿಯಾಯಿತಿಯನ್ನು ಈ ಫಸಲಿಯಲ್ಲಿ ತೋರದಿದ್ದರೆ ವಿಷಮತೆಯುಂಟಾಗದಿರದೆಂದರು

—ಅಖಿಲ ಭಾರತ ಮಹಾಸಭೆಯು ಕಲ್ಕತ್ತದಲ್ಲಿ ತಾ ೩೧ ಮತ್ತು ಏಪ್ರಿಲ್ ೧ರ ತನಕ ಜರಗುವುದೆಂದು ಎಂ ಎಸ್ ಅಣಿಯವರ ಪ್ರಕಟನೆ. ಇದು ಜರಗುವುದು ಅಸಂಭವನೀಯವೆಂದು ಸುದ್ದಿಯಿದೆ.

—ಕಲ್ಕತ್ತದಲ್ಲಿ ಸಿಡುಬುರೋಗದಿಂದಾಗಿ ಕಳೆದ ವಾರ ೨೩೩ ಜನರು ಮಡಿದರು. ಈ ವಾರದಲ್ಲಿ ೨೧೩ ಮರಣ.

—ಲಾಹೋರಿನಲ್ಲಿ ೬ ಮಂದಿ ದರೋಡೆಗಾರರು ಸ್ತ್ರೀಯರ ವೇಷ ಧರಿಸಿ ಮುಸುಕು ಹಾಕಿ, ಹಗಲಲ್ಲಿ ಒಂದು ಲೋರಿಯನ್ನು ನಿಲ್ಲಿಸಿ ಅದರಲ್ಲಿದ್ದ ಜನರಿಂದ ಸಿಕ್ಕಿದುದನ್ನು ದೋಚಿ, ಲೋರಿಯ ಟಾಯರುಗಳನ್ನೊಡ್ಡಿಸಿ ಡ್ರೈವರನನ್ನು ಗುಂಡಿನಿಂದ ಕೊಂದು ಕಾಲಿಗೆ ಬುದ್ಧಿ ಹೇಳಿರುವರು

—ಉತ್ತರ ಕಾಬೂಲಿನಲ್ಲಿ ವಿಪರೀತ ಹಿಮ ಬಿದ್ದು ಅನೇಕ ಮನೆ ಮಠಗಳು ಹಾಳೆಯಾದುವು.

—ಲಾಹೋರಿನಲ್ಲಿ ಪ್ರಾಂತಿಕ ನವಜೀವನ ಭಾರತ ಸಭೆಯ ಸೆಕ್ರೆಟರಿಯವರಾದ ಶ್ರೀ ಮಂಗಲದಾಸರವರ ಮನೆ ಜಪ್ತಿಯಾಗಿ ಕೆಲವು ಕಾಗದಪತ್ರಗಳನ್ನು ಪೋಲೀಸರು ಹೊತ್ತುಕೊಂಡು ನಡೆದರು.

—ಕಡಲೂರಿನಲ್ಲಿ ಬೆಂಕಿಯ ಅನಾಹುತದಿಂದಾಗಿ ೬೦ ಮನೆಗಳು ಅಗ್ನಿನಾರಾಯಣನಿಗಾಹುತಿಯಾದುವು.

ಮೆಕ್‌ಫೆಲೀನ್ ಎಂಬವನು ಮಹಾಯುದ್ಧದಲ್ಲಿ ಜೀರಿಕೊಂಡನೆಂಬ ವಾರ್ತೆಯಿತ್ತು. ಮೊನ್ನೆ ಅವನು ಸ್ವನಾಡಾದ ಲಂಡನಿಗೆ ಹೋಗಿ ಮೇಜಿಸ್ಟ್ರೇಟರಿಗೆ ಸಲಾಂ ಕೊಟ್ಟು ತಾನು ಬದುಕಿರುವೆನೆಂದೂ, ತನಗೆ ಪೆನ್ಶನ್ ಕೊಡಬೇಕೆಂದೂ ಕೇಳಿದನು

—ಮುಂಬಾಯಿಯ ದಿ ವಿದ್ಯಾದಾಯಿನೀ ಹೈಸ್ಕೂಲ್ ಕ್ಲಬ್ಬಿನ ಫುಟ್‌ಬೋಲ್ ಕಪ್ ಪಂದ್ಯಾಟವು ಕಳೆದ ತಿಂಗಳ ತಾ ೨೬ನೇ ಆದಿತ್ಯವಾರ ಪ್ರಾರಂಭವಾಯಿತು ಪಂದ್ಯಾಟಕ್ಕೆ ಒಟ್ಟಿಗೆ ೧೨ ಟೀಮುಗಳು ಸೇರಿದ್ದುವು.

### ಸಕಲೇಶಪುರದ ವಾರ್ತೆ,

ಕೆಂಪು ಹೊಳೆಯಲ್ಲಿ ಕಳೆದ ತಾ ೨೦ರಲ್ಲಿ ದಕ್ಷಿಣ ಕನ್ನಡದ ಮಲೆನಾಡಿನ ಮದ್ದಾನೆಯೊಂದನ್ನು ಮೈಸೂರು ಪೋಲೀಸ್ ಗೇಮ್ ಆಫೀಸರರಾದ ಶ್ರೀ ನೀಲಕಂಠ ಎಂಬವರು ಬಹಳ ಚಮತ್ಕಾರದಿಂದ ಬಂದೂಕಿನಿಂದ ಹೊಡೆದು ಕೊಂದಿರುವರು. ಅದರ ಎರಡು ದಾಡೆಗಳು ೨ ಮಣ ಭಾರವಿದ್ದುವು. ಹಿಂದಿನ ಕಾಲಿನ ಸುತ್ತಳತೆಯು ೪½ ಫೀಟು ಇತ್ತು. ಸದ್ರಿ ಆನೆಯು ಕೆಂಪುಹೊಳೆಯ ಆಸುಪಾಸಿನಲ್ಲಿ ತುಂಬಾ ತೊಂದರೆ ಕೊಡುತ್ತಿತ್ತು.

ಇಲ್ಲಿಯ ಸ್ಪೆಶಲ್ ಮೆಜಿಸ್ಟ್ರೇಟ್ ಶ್ರೀ ಸಂಜಪ್ಪ ಎಂಬವರನ್ನು ಶಿವಮೊಗ್ಗಕ್ಕೆ ವರ್ಗಾಯಿಸುವರಾಗಿ ಕೇಳುತ್ತೇವೆ. ಸದ್ರಿಯವರು ಜನಸಾಮಾನ್ಯಕ್ಕೂ, ಗವರ್ನಮೆಂಟಿನವರಿಗೂ ಸಹ್ಯರಾಗಿದ್ದು ಒಳ್ಳೇ ಗುಣವಂತರಾಗಿದ್ದರು

ತಾ ೨೭ರಲ್ಲಿ ಇಲ್ಲಿಯ ಚಂದ್ರಕಲಾ ನಾಟಕ ಮಂಡಳಿಯವರು ಆಡಿ ತೋರಿಸಿದ 'ಗುಲೇಬಕಾವಲಿ' ನಾಟಕದಲ್ಲಿ ಜಮೆಯಾದ ಹಣದಲ್ಲಿ ರೂಪಾಯಿ ೧೦೦/ನ್ನು ಸ್ಥಳೀಯ ಮಸೀದಿಗೂ ರೂ ೫೦ನ್ನು ಶ್ರೀರಾಮ ಮಂದಿರಕ್ಕೂ ದಾನವಾಗಿ ಕೊಟ್ಟಿರುವರು ಸದ್ರಿ ನಾಟಕ ಕಂಪೆನಿಯವರು ಮುಂದಕ್ಕೆ ಮಡಿಕೇರಿಗೆ ಹೋಗುವರಾಗಿ ತಿಳಿದು ಬರುತ್ತದೆ

---

**ಮಂಗಳೂರು.** ಈ ಮೊದಲು ನಿಶ್ಚಯಿಸಿದ್ದಂತೆ ಬಂದರದಲ್ಲಿರುವ ಕೆನರಾ ಬ್ಯಾಂಕಿನ ಕಟ್ಟೋಣದಲ್ಲಿ ಕಳೆದ ಆದಿತ್ಯವಾರ ತಾ ೨೬—೨—೩೩ನೇ ಸಾಯಂಕಾಲ ಗೌಡ ಸಾರಸ್ವತ ಸಮಾಜದವರ ಒಂದು ಸಭೆಯು ಸಾಹುಕಾರ ಪಾಂಡುರಂಗ ಲಕ್ಷ್ಮಣ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ಉದ್ದಿಶ್ಯ ಮೊದಲಾದವುಗಳನ್ನು ವಿವರಿಸಲಾಗಿ, ದಿವಂಗತ ಅನಂತ ಕೃಷ್ಣಶೈಗಳವರು ಭಂಡಾರಪುರದಲ್ಲಿ ಛತ್ರವನ್ನು ಕಟ್ಟಿಸಬೇಕಾಗಿ ಜಮೆಮಾಡಿದ ಹಣವನ್ನು ಹೇಗೆ ವಿನಿಯೋಗಿಸಬೇಕಾಗಿ ಇತರ ಊರುಗಳಿಂದಲೂ, ಪತ್ರಿಕೆಗಳಿಂದಲೂ ಬಂದ ಅಭಿಪ್ರಾಯಗಳನ್ನು ಸಭೆಯ ಮುಂದೆ ಓದಲಾಗಿ ಸದ್ರಿ ಹಣದಿಂದ ಪ್ರಕೃತ ರಾಮೇಶ್ವರದಲ್ಲಿರುವ ಕೋದಂಡರಾಮ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಬೇಕಾಗಿ ಸರ್ವಾನುಮತದಿಂದ ನಿರ್ಧರಿಸಲಾಯಿತು. ಈ ಫಂಡಿನ ಮುಂದಿನ ವಿನಿಯೋಗಗಳ ಕುರಿತು ಒಂದು ಕಾರ್ಯಕಾರಿ ಮಂಡಳಿಯು ಸ್ಥಾಪಿತವಾಗಿ ಸಭೆಯು ಮುಕ್ತಾಯವಾಯಿತು

ವಿಕ್ಟೋರಿಯಾ ಸಾಲೆಕ್ಷ್ವ(?)ರುಗಳ ಮಾರ್ಗಗಳ ದುರಸ್ತಿಯಾಗುತ್ತಿರುವುದರಿಂದ ವಾಹನಗಳ ಬಗ್ಗೆ ಈ ಮಾರ್ಗಗಳು ತಾ. ೧೦—೩—೩೩ರಿಂದ ಒಂದು ತಿಂಗಳ ತನಕ ಮುಚ್ಚಿಕೊಂಡಿರುತ್ತದೆಂದು ಸಮ್ಮಂಧಪಟ್ಟವರಿಂದ ತಿಳಿಸಲಾಗಿದೆ

ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಕದ್ರಿ ಜೋಗಿ ಅರಸರ ಪಟ್ಟಾಭಿಷೇಕ ಉತ್ಸವವು ಕಳೆದ ಆದಿತ್ಯವಾರ ಮಧ್ಯಾಹ್ನ ಸಂಭ್ರಮದಿಂದ ನಡೆಯಿತು ನೂರಾರು ಮಂದಿ ಸ್ತ್ರೀಪುರುಷರು ನೆರೆದಿದ್ದರು ಪಟ್ಟವು ಈಬಾರಿ ನಾಸಿಕದಲ್ಲಿ ಚುನಾಯಿಸಲ್ಪಟ್ಟ ಅಮನ್‌ನಾಥ್ ಸ್ವಾಮಿಜಿಯವರಿಗೆ ಸೇರಿತು.

ಡಾ। ಎಸ್ ಬೇರಣ್ಣ ಸುವರ್ಣರವರಿಂದ ಸರ್ವಜನೋಪಕಾರಾರ್ಥವಾಗಿ ನಡೆಸಲ್ಪಡುವ ಅರ್ಕಚಿಕಿತ್ಸಾಭವನದ ೧೫ನೇ ವಾರ್ಷಿಕೋತ್ಸವವು ಇದೇ ಮಾರ್ಚ ತಾ. ೪ನೇ ಶನಿವಾರ ಸಾಯಂಕಾಲ ೫-೩೦ಕ್ಕೆ ಡಾ। ಬೋಳೂರು ಪ್ರೆಸಿಡೆಂಟರಾಗಿರುವ ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್ ಸಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಇಲ್ಲಿಯ ಭರಂತಿಕೇರಿಯಲ್ಲಿರುವ ಕರ್ಣಾಟಕ ಗ್ರಂಥಾಲಯದ ೭ನೇಯ ವರ್ಷೋತ್ಸವವು ಶ್ರೀ ಮುಂಡೂರು ಲಕ್ಷ್ಮೀನಾರಾಯಣ ಪುರೋಹಿತ್ತಾಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶ್ರೀಯುತ ಮೂಡಬೆಟ್ಟು ರಂಗರಾಯರು ಗ್ರಂಥಾಲಯದ ಏಳಿಗೆಯ ವಿಷಯದಲ್ಲಿ ತಾವೇ ವಿರಚಿಸಿದ ಕವಿತೆಯನ್ನು ಹಾಡಿದ ಬಳಿಕ ಶ್ರೀಗಳಾದ ನಾರಾಯಣಶೆಣೈ ಮತ್ತು ಬಿ. ನರಸಪ್ಪನವರ ಭಾಷಣಗಳಾಗಿ ಅಂತ್ಯದಲ್ಲಿ ಅಧ್ಯಕ್ಷರ ಭಾಷಣ, ಇನ್ನಿತರರ ಗಾಯನ — ಫಲಾಹಾರಾದಿಗಳೊಡನೆ ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ಈ ವರ್ಷದ ಟೆನ್ನಿಸ್ ಟೂರ್ನಮೆಂಟು ಇದೇ ತಾ. ೧೩ರಲ್ಲಿ ಆರಂಭವಾಗುವುದು. ಸ್ಪರ್ಧಿಸ ಲಿಚ್ಛಿಸುವವರು ತಮ್ಮ ಹೆಸರುಗಳನ್ನು 'ಸಿಂಗಲ್ಸ್' ರೂ ೩, 'ಡಬ್ಬಲ್' ರೂ ೫ರಂತೆ ಪ್ರವೇಶಧನದೊಂದಿಗೆ ಮಾರ್ಚ ತಾ ೬ರೊಳಗೆ ಕಲಪ್ಪು ವಂತೆ ಕ್ಲಬ್ಬಿನ ಗೌರವ ಕಾರ್ಯದರ್ಶಿಗಳಿಗೆ ಕಳುಹಬೇಕಾಗಿದೆ. ಸ್ಪರ್ಧೆಗಾರರ ಹೆಸರುಗಳನ್ನು ಕಾರ್ಯಕ್ರಮದೊಂದಿಗೆ ಮಾರ್ಚ ತಾ. ೮ರಲ್ಲಿ ಗೊತ್ತುಪಡಿಸಿ, ಆ ಮೇಲೆ ಸಂಬಂಧಪಟ್ಟವರಿಗೆ ತಿಳಿಸಲಾಗುವುದು

ಕಳೆದ ಬುಧವಾರ ಸಾಯಂಕಾಲ ಘಂಟೆ ೬ಕ್ಕೆ ಇಲ್ಲಿಯ ಸಾರ್ವಜನಿಕ ಮೈದಾನಿನಲ್ಲಿ ಪಂಡಿತ ಸಿದ್ದೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಹರಿಜನ ಸೇವಾ ಸಮಿತಿಯ ವತಿಯಿಂದ ಸಾರ್ವಜನಿಕ ಸಭೆ ಜರಗಿಸಲ್ಪಟ್ಟು, ಶ್ರೀ ರಂಗಯ್ಯರವರು ಬಿ ಎಸೆಂಬ್ಲಿಯಲ್ಲಿ ತಂದಿರುವ ಬಿಲುಗಳ ಕುರಿತಾಗಿಯೂ, ಅಸ್ಪೃಶ್ಯತಾ ನಿವಾರಣಾ ವಿಷಯಕವಾಗಿಯೂ, ಶ್ರೀ ಕೆ ಕೆ. ಶೆಟ್ಟಿ ವಿಶಾಸಿಷ್ಟದ ಹಿಂದೂ ಮಿಶನರಿಗಳಾದ ಅಂಕರಾಜು ಸುಬ್ಬರಾಯ ಶರ್ಮ ಮೊದಲಾದವರ ಭಾಷಣಗಳಾಗಿ, ಬಿಲುಗಳನ್ನು ಸಮರ್ಥಿಸಿ ಠರಾವಾಯಿತು

ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಅಧ್ಯಾಪಕರಾದ ಎಚ್ ಸಂಜೀವರಾಯರು ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರರಾಗಿ ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟಿರುವರು

ಸ್ವೀಕಾರ—ಶ್ರೀ ಎಂ ಬಾಬುರಾಯ ಪ್ರಭು, ಬಿ ಎ. ಇವರ ಸಂಪಾದಕತ್ವದಿಂದ ಫೆಬ್ರುವರಿ ತಾ ೧೯ಕ್ಕೆ "Sunday News" ಎಂಬ ಅಪೂರ್ವವಾದ ಇಂಗ್ಲೀಷ ವಾರ ಪತ್ರಿಕೆಯು ಹೊರಟಿದ್ದು, ಅದರ ಸುಂದರ ಪ್ರಥಮ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿರುತ್ತೇವೆ. ವಾರ್ಷಿಕ ಚಂದಾ ರೂ. ೩ ಅಂಚೆ ಹಾಸಲು ಸೇರಿ ರೂಪಾಯಿ ೪.

**ಮೂಲ್ಕಿ:**—ಸ್ಥಳೀಕ ಬೋರ್ಡ ಹಾ। ಎ। ಶಾಲಾ ವಿದ್ಯಾರ್ಥಿಗಳ ತರ್ಕಸಂಘದ ನೇತೃತ್ವದಲ್ಲಿ ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜಿನ ಗಣಿತಾಚಾರ್ಯರೂ, ಮಂಗಳೂರು ತಾಲೂಕು ಹರಿಜನ ಸೇವಾಸಂಘದ ಕಾರ್ಯದರ್ಶಿಗಳೂ ಆಗಿರುವ ಶ್ರೀ ಪ್ರೊಫೆಸ್ಸರ್ ಯಸ್ ರಾಮಚಂದ್ರ ಅಯ್ಯರು ವರ್ಣಾಶ್ರಮ ಧರ್ಮದ ಕುರಿತು ನಿನ್ನೆ ತಾ ೨೫—೨—೩೩ನೇ ಶನಿವಾರ ಪೂರ್ವಾಹ್ನ ಘಂಟೆ ೯ಕ್ಕೆ ಒಂದು ಚಲೋ ಉಪನ್ಯಾಸವನ್ನು ಕೊಟ್ಟರು

ಇಲ್ಲಿಯ ಶ್ರೀ ದುರ್ಗಾದೇವಿ ಫ್ರೀ ಸ್ಕೂಲಿನಲ್ಲಿ ಕಳೆದ ಮಹಾ ಶಿವರಾತ್ರಿ ಸಮ್ಮಂಧ ರಾತ್ರಿ ಘಂಟೆ ೭ರಿಂದ ೯ರ ವರೆಗೆ ಯಥೋಚಿತವಾಗಿ ಭಜನೆಯು ನಡೆಯಿತು

—— ——


## ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ· (ದ ಕನ್ನಡ)

**ಅಖಿಲ ಕರ್ಣಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ಣಾಟಕದ ಗೌರವಕ್ಕೂ ಕರ್ಣಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ.**

ನಮ್ಮಲ್ಲಿ ಬ್ರಿಟಿಷ್ ಫಾರ್ಮ ಕೋಪಿಯಾ ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೊಡೆಕ್ಸ್, ದ, ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ವೊಲೆಟ್ ದ್ರವ್ಯಗಳೂ, ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ, ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುವುವು.

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು. ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಮುಖ್ಯ ಔಷಧಗಳು

ಚ್ಯವನಪ್ರಾಶ ಲೇಹ. ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ. ೧ ಪೌಂಡು ಬಾಟ್ಲಿ ರೂ. ೧ ೧೦ ಔನ್ಸು ಬಾಟ್ಲಿ ರೂ. ೧ ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ವ ಮೆದುಳಿಗೆ ಶಾಂತತೆಯನ್ನೀಯುವ ಔಷಧ. ೧ ಪೌಂಡು ಬಾಟ್ಲಿಗೆ ರೂ 1—8

ಅಶ್ವಗಂಧಾರಿಷ್ಟ. ಅತ್ಯುತ್ತಮವಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ. 3. ೮ ಔನ್ಸು ಬಾಟ್ಲಿಗೆ ರೂ. 1—10—0 ಪ್ರಸೂತಿ ಸಂಜೀವನ. ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ ೧೦ ಔನ್ಸು ಬಾಟ್ಲಿಗೆ ರೂ. 1 8—0 ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3—8—0, ೮ ಔನ್ಸು ಬಾಟ್ಲಿಗೆ ರೂ 1—12—0

ಬ್ರಾಹ್ಮಿ ತೈಲ. ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಬ್ರೈನ್ ಟಾನಿಕ್ಕು. ೮ ಔನ್ಸು ಬಾಟ್ಲಿಗೆ ಆಣೆ 14 ಹಿಮಸಾಗರ ತೈಲ. ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ. ೮ ಔನ್ಸು ಬಾಟ್ಲಿಗೆ ರೂ. 1—8— ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ. ೮ ಔನ್ಸು ಬಾಟ್ಲಿಗೆ ರೂ 1—6—0. ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಮುಂತಾದ ವಾತ ಶಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೬ನೇಯ ಆವರ್ತನೆ ೧ ಔನ್ಸಿಗೆ ರೂ 1 ೧೪ನೇಯ ಆವರ್ತನೆ ೧ ಔನ್ಸಿಗೆ ರೂ —12 ೨೧ನೇ ಆವರ್ತನೆ ೧ ಔನ್ಸಿಗೆ ರೂ 2—8 ೪೧ನೇಯ ಆವರ್ತನೆ ೧ ಔನ್ಸಿಗೆ ರೂ 4 ೫೧ನೇ ಆವರ್ತನೆ ರೂ 4—5—0 ೧೦೧ನೇ ಆವರ್ತನೆ ರೂ ೮ ಧನ್ವಂತರ ತೈಲ. ರಕ್ತವಾತ, ಆಮವಾತ, ಸರ್ವಾಂಗವಾತ ಮುಂತಾದ ಶಾಹಿಲೆಗಳಲ್ಲಿ, ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ವ ಮೈಗೆ ಹಚ್ಚುವ ದಿವ್ಯೌಷಧ. ೬ನೇಯ ಆವರ್ತನೆ ೧ ಔನ್ಸಿಗೆ ರೂ. 1 ೧೪ನೇ ಆವರ್ತನೆ ೧ ಔನ್ಸಿಗೆ ರೂ 1—12 ೨೧ನೇ ಆವರ್ತನೆ ೧ ಔನ್ಸಿಗೆ ರೂ 2—8—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ ಎಲ್ಲಾ ತರದ ಆಸವ, ಅರಿಷ್ಟಗಳೂ, ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ, ಸುಕುಮಾರಾಮೃತ, ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ಣಾಟಕ ಸ್ನೋ, ಬ್ರಿಲ್ಲಿಂಟೈನ್, ರೋಜ್ ಪೊಮೇಡ್, ಅರೋರಾ ಕ್ರೀಮ್, ಟ್ರಿಕ್ಸ್ ಕ್ರೀಮ್, ಕ್ರಿಮೋರ್ ಅಮೊನಿಸ್ (Limes & Glycerine) ವಗೈರೆ ಟ್ವೊಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು, ಹಚ್ಚ-ಹಸುರು, ವರ್ಣಗಳ, ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಯೋಗಿಸುವ ಸಾಬೂನುಗಳೂ ತಯಾರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳಿರಿ.

***Managing Director:—Venkatraya Annappa Baliga***

# ಈ ಮಾಸದೊಳಗೆ ಗಾಂಧೀಜೀಯವರ ಬಿಡುಗಡೆ!

## ಕಾಂಗ್ರೆಸ್ ಮಹಾಸಭೆಯ ಮೇಲೆ ಬಹಿಷ್ಕಾರ!

## ರಾಜ್ಯದಾನ! ಡ್ಯಾಹಾರ್ಡರ ದ್ವೇಷ! ಚರ್ಚಿಲ್ಲರ ರೋಷ!

ಬ್ರಿಟಿಷ್ ಮತ್ತು ಇಂಡಿಯಾ ಸರಕಾರಗಳಿಗೆ ಈ ತಿಂಗಳೆಂಬುದು ಮಹಾ ಕಷ್ಟದಾಯಕವಾಗಿ ನಿಂತಿದೆ. ಭಾರತ ದೇಶಕ್ಕೆ ದಾನ ಮಾಡಲಿರುವ ನವೀನ ರಾಜ್ಯಾಂಗದ ರೂಪ ಕತೆಯ ದಿನಗಳಿವು. ಬ್ರಿಟಿಷ ಸರಕಾರ ಮತ್ತು ಇಂಡಿಯಾ ಸರಕಾರಗಳೊಳಗೆ ದಿನಕ್ಕೆ ಹಲವು ಬಾರಿಯೆಂಬಂತೆ ವಾಯು ವಾರ್ತೆಯ ಮೂಲಕ ಮಾತುಕತೆಗಳು ನಡೆಯುತ್ತಿವೆ. ಲಂಡನಿನ ಡೌನಿಂಗ್ ಸ್ಟ್ರೀಟ್, ಸರಕಾರೀ ಆಫೀಸುಗಳು ಅವಿಶ್ರಾಂತವಾಗಿ ಕಾರ್ಯತತ್ಪರವಾಗಿವೆ. ರಿಪೋರ್ಟುಗಳು ಬರೆಯಲ್ಪಟ್ಟು ಮುದ್ರಿತವಾಗುತ್ತಿವೆ. ನ್ಯೂ ಡಿಲ್ಲಿಯ ರೋಯ್ಸ್ ವೀಕ್ಲಿಯ ಲಂಡನ್ ವಾರ್ತಾವಾಹಕನು ವಿಶೇಷ ಸುದ್ದಿಗಳನ್ನು ಹರಡಿಸಿದ್ದಾನೆ. ಅವನು ಲಂಡನಿನಿಂದ ತಿಳುಹಿಸಿರುವಂತೆ—ಸರಕಾರವು ಈಗ ಹಿಂದೀಯ ರಾಜ್ಯ ಸುಧಾರಣೆಗಳನ್ನೊಳಗೊಂಡ (White paper) ಶ್ವೇತಪತ್ರವನ್ನು ಸಿದ್ಧ ಮಾಡುವುದರಲ್ಲಿ ತಲ್ಲೀನವಾಗಿದೆ. ಬ್ರಿಟಿಷ ಸರಕಾರದ ಸದಸ್ಯರು ಮತ್ತು ಹಿಂದೀಯ ರಾಜನೀತಿಜ್ಞರು ಕೆಲವರೊಳಗೆ ನಡೆದ ಪತ್ರವ್ಯವಹಾರಗಳಿಂದಾಗಿ ವ್ಹೈಟ್ ಪೇಪರನ್ನು ಸರಕಾರವು ಈ ಮಾಸಾಂತ್ಯದೊಳಗೆ ಭಾರತೀಯರ ಮತ್ತು ಬ್ರಿಟಿಷ್ ಪಾರ್ಲಿಮೆಂಟಿನ ಪರಾಮರ್ಶೆಯ ಬಗ್ಗೆ ಪ್ರಕಟಿಸುವುದೆಂದೂ, ಅದರ ಪ್ರಕಟಣೆಯೊಡನೆ ಮಹಾತ್ಮಾ ಗಾಂಧಿ ಮತ್ತು ಇನ್ನಿತರ ರಾಜಕೀಯ ಕೈದಿಗಳ ಬಿಡುಗಡೆಯಾಗುವುದೆಂದೂ ಆಲೋಚಿಸಲಾಗಿದೆ. ಈಗೀಗ ಲಂಡನಿಗೆ ಕಾಂಗ್ರೆಸ್ಸಿನ ನಿರ್ಜೀವ ಸ್ಥಿತಿಯ ಸುದ್ದಿಗಳು ಹೋಗುತ್ತಿರುವುದರಿಂದಲೂ, ಭಾರತವರ್ಷವು ಶಾಂತವಾಗಿರುವುದೆಂಬ ವಾರ್ತೆಯು ದಿನೇ ದಿನೇ ಅಲ್ಲಿಗೆ ತಲಪುತ್ತಿರುವುದರಿಂದಲೂ, ಬ್ರಿಟಿಷ ಸರಕಾರವು ಇನ್ನು ಗಾಂಧೀ ಇತ್ಯಾದಿಗಳವರನ್ನು ಬಂಧವಿಮೋಚನೆ ಮಾಡಿದರೆ ಹಾನಿಯಿಲ್ಲವೆಂದು ಕಂಡುಗೊಂಡಿದೆ. ವ್ಹೈಟ್ ಪೇಪರಿನಲ್ಲಿ ಶಿಫಾರಸು ಮಾಡಲ್ಪಡುವ ಸುಧಾರಣೆಗಳನ್ನು ಕಾಂಗ್ರೆಸ್ಸಿನವರೂ ಪರ್ಯಾಲೋಚಿಸಿ, ವಿಮರ್ಶಿಸುವ ಸದಿಚ್ಛೆಯಿಂದ ಕಾಂಗ್ರೆಸ್‌ವಾಲರನ್ನು ಬಿಡುಗಡೆ ಮಾಡುವುದಂತೆ. ರಾಷ್ಟ್ರೀಯವಾದಿಗಳೂ ಬ್ರಿಟಿಷ ಸರಕಾರದ ಸುಧಾರಣೆಗಳನ್ನು ಸ್ವೀಕರಿಸಬೇಕೆಂದು ಬ್ರಿಟಿಷ ಸರಕಾರದ ಗೂಢ ಆಶೆಯಾಗಿರುತ್ತದೆ. ಸರಕಾರದ ಈ ಸಲದ ಸುಧಾರಣೆಯ ದಾನವನ್ನು ಕಾಂಗ್ರೆಸ್ಸಿನ ಬಹುಪಕ್ಷವು ಸ್ವೀಕರಿಸದಿರದೆಂದು ಸರ್ ತೇಜ ಬಹದ್ದೂರ್ ಸಪ್ರೂಗಳು ಹಾರೈಸಿ ತನ್ನ ಆಶಾವಾದದ ಸುದ್ದಿಯನ್ನು ಸರಕಾರದ ಕಿವಿಗಳಿಗೂದಿರುತ್ತಾರೆ.

ವ್ಹೈಟ್ ಪೇಪರಿನ ತಯಾರಿಯಲ್ಲಿ ತಲೆ ಒಡೆದಾಗುವ ಸ್ಥಿತಿಯುಂಟಾಗಿದೆ. ಯಾವುದನ್ನು ಶಿಫಾರಸು ಮಾಡುವುದೆಂದು ಮಂತ್ರಿ ಮತ್ತು ಭಾರತಮಂತ್ರಿಗಳಿಗೆ ತಿಳಿದಿಲ್ಲವಂತೆ. ಭಾರತದ ಅರ್ಥ ಸಂಚಲನೆ, ಅದು ಭದ್ರತೆಗಳ ಕುರಿತು ಯಾವ ಸೂತ್ರವನ್ನು ಹಿಡಿದರೆ ಯೋಗ್ಯವೆಂದು ನಿರ್ಧರಿಸಲು ಬಹಳ ಕಷ್ಟವಾದಂತಿದೆ. ಈ ವಿಷಯವಾಗಿ ಲಂಡನಿನ ಅಧಿಕಾರಿಶಾಹಿಯು ಯಾವ ಪಥವನ್ನನುಸರಿಸಿದೆಯೆಂದು ಇಂಡಿಯಾ ಸರಕಾರದ ಅಧಿಕಾರಿಶಾಹಿಗೆ ತಿಳಿದಿಲ್ಲ. ಭಾರತದಲ್ಲಿ ರಿಸರ್ವ್ ಬೇಂಕೊಂದನ್ನು ಸ್ಥಾಪಿಸುವ ಕುರಿತು ಅಂದು ಸರ್ ಸಾಮುವೇಲ್ ಹೋರರು ಆಲೋಚಿಸಲಾಗುವುದೆಂದು ಭಾಷೆ ಕೊಟ್ಟಿದ್ದರೂ, ಈಗ ಸ್ಥಿತಿಗತಿಗಳ ವಿಮರ್ಶೆಗಳಾದ ನಂತರ, ಈ ಬೇಂಕ್ ಸ್ಥಾಪನಾ ಕಾರ್ಯವು ಕಾರ್ಯತಃ ಎಷ್ಟರ ವರೆಗೆ ಜಯಶೀಲವಾಗುವುದು, ಸಾಧ್ಯವಾಗುವುದು ಎಂದು ಶಂಕಿಸುತ್ತಿದ್ದಾರೆ. ಇದರ ಸ್ಥಾಪನೆಯ ಸಂಬಂಧವಾಗಿ ಬಹಳ ಯೋಚನೆಗಳಾದ ನಂತರ—ಹಿಂದೂದೇಶವು ವ್ಹೈಟ್ ಪೇಪರ್ ಶಿಫಾರಸುಗಳನ್ನು ಸ್ವೀಕರಿಸುತ್ತಿದೆಯೋ ತಿರಸ್ಕರಿಸುತ್ತಿದೆಯೋ ಎಂದು ನೋಡಿದ ನಂತರವೇ ಬೇಂಕ್ ಸ್ಥಾಪನೆ ಮಾಡುವ ಕುರಿತು ಪುನರಾಲೋಚನೆಯಾಗಬಹುದೆಂದು ಯೋಚಿಸಿರುತ್ತಾರೆ. ಭಾರತ ಮಂತ್ರಿಯವರು ಈ ಸಮಸ್ಯೆಯ ಪರಿಹಾರಾರ್ಥವಾಗಿ ಅವಿಶ್ರಾಂತರಾಗಿ ಯೋಚನೆಗೆ ತೊಡಗಿದ್ದಾರೆ.

ಅಖಿಲಭಾರತ ಕಾಂಗ್ರೆಸ್ ಮಹಾಸಭೆಯ ಅಧಿವೇಶನವು ಈ ಸಲ ಕಲ್ಕತ್ತದಲ್ಲಿ ಕೂಡಬೇಕಾಗಿ ಪಂಡಿತ ಮಾಲವೀಯರೇ ಮೊದಲಾದವರು ಇತ್ತಿತ್ತಲಾಗಿ ನಿರ್ಧರಿಸಿದರು. ಈ ವಿಷಯಕವಾಗಿ ಪತ್ರವ್ಯವಹಾರ ವ್ಯವಸ್ಥೆ ಮೊದಲಾದ ಚಟುವಟಿಕೆಗಳು ಕಾಂಗ್ರೆಸ್ ಮುಂದಾಳುಗಳಿಂದಾದುವು. ಇದನ್ನು ತಿಳಿದ ಸರಕಾರಗಳು ಈಗ ಅಂತಹ ಸಭೆಯು ಜರಗಬಾರದಾಗಿ ಅದನ್ನು ನಿಷೇಧಿಸಿವೆಯಂತೆ. ಈ ನಿಷೇಧದ ಸುದ್ದಿಯು ಲಂಡನಿಗೆ ತಲಪಿರುವುದಾದರೂ ಬ್ರಿಟಿಷ ಸರಕಾರವು ಇಲ್ಲಿಯ ಸರಕಾರದ ವರ್ತನೆಯನ್ನು ಸಮ್ಮತಿಸಿಲ್ಲ. ಅಖಿಲಭಾರತ ಕಾಂಗ್ರೆಸ್ ಸಭೆಯು ಜರಗಬಾರದೆಂದೇ ಸರಕಾರಗಳ ಅಭಿಮತವಿದೆ. "ಕಾಂಗ್ರೆಸ್ಸನ್ನು ಜರಗಲು ಬಿಡದೆ, ಗಾಂಧಿಯನ್ನೂ ಅವರ ಅನುಯಾಯಿಗಳನ್ನೂ ಬಂಧವಿಮುಕ್ತ ಮಾಡದೆ, ದೇಶದಲ್ಲಿ ಅಖಂಡ ಮುಖಂಡತ್ವದಲ್ಲಿರುವ ಕಾಂಗ್ರೆಸ್ಸನ್ನು ಸಮಾಧಾನಪಡಿಸದೆ ಸರಕಾರಗಳು ನವೀನ ರಾಜ್ಯಸುಧಾರಣೆಗಳ ದಾನವನ್ನು ಮಾಡುವುದಾದರೂ ಯಾರಿಗೆ?—ಹೇಗೆ?" ಎಂಬ ಸ್ವಾಭಾವಿಕ ಪ್ರಶ್ನೆಗಳು ಈಗ ದೇಶದ ಎಲ್ಲೆಡೆಗಳಲ್ಲೂ ತಲೆಯೆತ್ತಲು ಮೊದಲಾಗಿದೆ. ಸರಕಾರದ ವಿಶ್ವಾಸಕ್ಕರ್ಹರಾದ ಮಂದಪಕ್ಷೀಯ ಸರ್ ತೇಜ ಬಹದ್ದೂರ್ ಸಪ್ರೂ, ಜಯಕರ್, ಚಿಂತಾಮಣಿ, ಸೆತಲವಾದ್, ಶ್ರೀನಿವಾಸ ಶಾಸ್ತ್ರಿಗಳವರೂ ಈ ರೀತಿಯ ಅರ್ಥದ ಪ್ರಶ್ನೆಗಳನ್ನು ಹೊರಗೆಡಹುತ್ತಲಿರುವರು. "ನಿಮ್ಮ ದಾನವು ಸರ್ವಗ್ರಾಹ್ಯವಾಗಬೇಕೋ, ನೀವು ರಾಷ್ಟ್ರೀಯವಾದಿಗಳ ಆಶಯವನ್ನು ಪ್ರಥಮದಲ್ಲಿ ನೆರವೇರಿಸಿರಿ, ಅವರನ್ನು ಬಿಡುಗಡೆ ಮಾಡಿ ಸಮಾಧಾನಗೊಳಿಸಿರಿ" ಎಂಬುದೇ ಘಂಟಾಘೋಷವಾಗಿ ಕೇಳುತ್ತಿರುವ ಪಲ್ಲವಿ.

### ಜರ್ಮನಿಯಲ್ಲಿ ಕ್ರಾಂತಿ

ಬರ್ಲಿನ್ ನ್ಯಾಯಶಾಸನ ಸಭಾ ಮಂದಿರ (ರೀಸ್ಟೇಗ್)ಕ್ಕೆ ಯಾರೋ ಆರೇಳು ಕಡೆಗಳಲ್ಲಿ ಬೆಂಕಿಕೊಟ್ಟು ಸುಟ್ಟರು. ಮಂದಿರದೊಳಗಿದ್ದ ಸರಕಾರಿ ರಿಕಾರ್ಡುಗಳು ಸುಟ್ಟು ಬೂದಿಯಾದುವು. ಬರ್ಲಿನಿನ ಎಲ್ಲಾ ಫಯರ್ ಬ್ರಿಗೇಡುಗಳು ಅಗ್ನಿಶಮನ ಕಾರ್ಯಕ್ಕೆ ತೊಡಗಿ ಅರೆಂಟು ಘಂಟೆಗಳ ನಂತರ ಬೆಂಕಿಯನ್ನು ನಂದಿಸಿದರು. ನಾಜಿಗಳಿಗೂ ಕಮ್ಯೂನಿಷ್ಟರಿಗೂ ಇರುವ ಅಂತಃಕಲಹದ ಪರಿಣಾಮವಿದೆಂದು ಊಹಿಸಲಾಗಿದೆ. ಡಚ್ ದೇಶದ ಒಬ್ಬನನ್ನು ಸೆರೆಹಿಡಿದಿರುವರು. ಸ್ಯೆಂಟ್ ಬಾರ್ತಲೋಮೋರವರ ದಿನಾಚರಣೆಯನ್ನು ಮಾಡಿ ಸರಕಾರೀ ಕಟ್ಟಡಗಳನ್ನೂ ಕಮ್ಯೂನಿಸ್ಟರನ್ನೂ ನಾಶಗೊಳಿಸಬೇಕಾಗಿ ಕೆಲವು ಕ್ರಾಂತಿಕಾರರ ಉದ್ದೇಶವಿದೆಯೆಂದು ತಿಳಿಯಲಾಗುತ್ತದೆ.

### ಗಾಂಧಿಜೀಯವರ ಮೇಲೆ ದಾವೆ

ಗಾಂಧಿಜೀಯವರು ಅಸ್ಪೃಶ್ಯತಾ ನಿವಾರಣಾ ಮಸೂದೆಯನ್ನು ನ್ಯಾಯಶಾಸನ ಸಭೆಯಲ್ಲಿ ಮಂಜೂರು ಪಡಿಸಿಕೊಳ್ಳುವ ಕೆಲಸದಲ್ಲಿ ಭಾಗವಹಿಸಬಾರದೆಂದು ಸನಾತನಿಗಳ ಮುಖಂಡರಾದ ಕರ್ಕಾರೇ ಎಂಬವರು ಪೂನಾ ಕೋರ್ಟಿನಲ್ಲಿ ಗಾಂಧಿಜೀಯವರ ಮೇಲೆ ಮೊಕದ್ದಮೆಯನ್ನು ಹೂಡಿರುವರು. ಈ ಸಂಬಂಧವಾದ 'ಸಮ್ಮನ್ಸ್' ಗಾಂಧಿಜೀಯವರಿಗೆ ಮೊನ್ನೆ ಎರವಾಡಾ ಸೆರೆಮನೆಗೆ ಹೋಯಿತು. ಆದರೆ ಜೈಲ್ ಸುಪರಿಂಟೆಂಡೆಂಟರು ಆ 'ಸಮ್ಮನ್ಸ್'ನ್ನು ಗಾಂಧಿಜೀಯವರಿಗೆ ತಲಪಿಸದೆ ಹಿಂದೆ ಕಳುಹಿಸಿದರು. ಇದರಿಂದ ಉದ್ವಿಗ್ನಗೊಂಡ ಸನಾತನಿಗಳು ಜೈಲು ಸುಪರಿಂಟೆಂಡೆಂಟರ ವರ್ತನೆಯನ್ನು ಖಂಡಿಸಿ ಅದೇ 'ಸಮ್ಮನ್ಸ್' ನೋಟೀಸು ಪುನಃ ಗಾಂಧಿಜೀಯವರಿಗೆ ತಲಪಬೇಕೆಂದೂ ಆ ವಿಷಯದಲ್ಲಿ ಸುಪರಿಂಟೆಂಡೆಂಟರು ತಡೆಮಾಡಬಾರದಾಗಿಯೂ ಆಜ್ಞಾಪಿಸಿರುವರು. ಕಾರ್ಕಾರೆಯವರೊಡನೆ ಸಂಕೇಶ್ವರ ಮಠದ ಸ್ವಾಮಿ ಶಂಕರಾಚಾರ್ಯರೂ ವಾದಿಯಾಗಿ ಸೇರಿಕೊಂಡಿರುತ್ತಾರೆ. ಸ್ವಾಮಿಗಳ ಪ್ರತಿಷ್ಠಾನುಸಾರವಾಗಿ, ಗಾಂಧಿಜೀಯವರಿಗೆ ಹೋದ 'ಸಮ್ಮನ್ಸ್'ನ್ನು ಸಿಲ್ಕ್ ಚೀಲದಲ್ಲಿ ಹಾಕಿ ರವಾನಿಸಲಾಗಿದೆ. ಈ ದಾವೆಯ ಪರಿಣಾಮವೇನೋ ತಿಳಿಯಲಾರದಾಗಿದೆ.

### ಸಾಧ್ಯವಾಗಲಿಲ್ಲ!

ನ್ಯೂ ಡಿಲ್ಲಿಯ ಶಾಸನ ಸಭೆಗೆ ಗಯಾ ಪ್ರಸಾದರು ತಂದ ಅಸ್ಪೃಶ್ಯತಾ ನಿವಾರಣಾ ಮಸೂದೆಯನ್ನು ಚರ್ಚೆಗೆ ತರಬೇಕೆಂದಾದ ಮಹಾ ಸಾಹಸವು ನಿಷ್ಫಲವಾಯಿತು. ಆದಷ್ಟು ಬೇಗನೆ ಈ ಠರಾವನ್ನು ಶಾಸನವಾಗಿ ಮಾಡಬೇಕೆಂಬ ಆಶೆಯು ಸಭೆಯ ಹೆಚ್ಚಿನ ಸದಸ್ಯರುಗಳಲ್ಲಿತ್ತು. ಆದರೆ ಕೆಲವರ ಪ್ರತಿಭಟನೆಯಿಂದಾಗಿಯೂ, ಕುಟೀಲೋಪಾಯಗಳಿಂದಾಗಿಯೂ ಈ ಯತ್ನವು ನಿರರ್ಥಕವಾಯಿತು. ಈ ಅಸ್ಪೃಶ್ಯತಾ ನಿವಾರಣಾ ಬಿಲ್ಲು ಪ್ರಥಮದಲ್ಲಿ ಚರ್ಚೆಗೆ ಬರಬೇಕೆಂಬ ಇರಾದೆಯಿಂದ ಸಭೆಯ ಇನ್ನಿತರ ಠರಾವುಗಳನ್ನು ತಡೆದು ಹಿಂದಕ್ಕಿಟ್ಟಿದ್ದರು. ಈ ಠರಾವು ಚರ್ಚೆಗೆ ಬರುವುದೋ ಏನೋ ಎಂದು ನೋಡಲು ಸಿ. ರಾಜಗೋಪಾಲಾಚಾರ್ಯ, ಶಂಕರಲಾಲ್ ಬೇಂಕರ್ ದೇವದಾಸ ಗಾಂಧಿಯವರು ಸಭೆಯಲ್ಲಿ ಆತಾತುರತೆಯಿಂದ ಕುಳಿತಿದ್ದರು. ಮೊದ ಮೊದಲು ಈ ಠರಾವನ್ನು ಅಧ್ಯಕ್ಷರು ಸ್ವೀಕರಿಸಿಕೊಳ್ಳಲು ಹೆಚ್ಚಿನ ಉತ್ಸಾಹದಿಂದಿದ್ದಂತಿತ್ತು. ಆದರೆ ಮುಸಲ್ಮಾನ ಸದಸ್ಯರು ಕೆಲವರು ತಮ್ಮ ಹಟವನ್ನು ಸಾಧಿಸ ತೊಡಗಿದುದರಿಂದ ಯಾವುದೂ ಸಾಧ್ಯವಾಗಲಿಲ್ಲ. ಇನ್ನು ಈ ಠರಾವು ತಾ. ೨೪ನೇ ದಿನ ಜರಗುವ ಶಾಸನ ಸಭೆಯಲ್ಲಿ ಚರ್ಚೆಗೆ ತರಲ್ಪಡುವುದೆಂದು ತಿಳಿಯಬಂದಿದೆ. ಆ ದಿನವೂ ಕುತಂತ್ರಗಳಿಂದಾಗಿ ಈ ಠರಾವು ಚರ್ಚೆಗೆ ಬರದಿಷ್ಟರೆ ಮತ್ತೆ ಅಸ್ಪೃಶ್ಯತಾ ನಿವಾರಣೆಯ ಕಾರ್ಯ ತಡೆಗಟ್ಟಲ್ಪಡುವುದು.

### ಸುಭಾಷ್ಚಂದ್ರರ ಪ್ರಲಾಪ

ಅತ್ಯಂತ ವೃದ್ಧರೂ ವ್ಯಾಧಿಗ್ರಸ್ತರೂ ಆದ ನನ್ನ ಮಾತಾಪಿತೃಗಳನ್ನು ಸಂದರ್ಶಿಸಲು ಪ್ರಭುತ್ವದವರು ನನಗೆ ಅನುಮತಿಯನ್ನು ಕೊಡಲಿಲ್ಲ. ದೇಶದಲ್ಲಿರುವ ನನ್ನ ಮಿತ್ರರುಗಳೂ ಹಿತೈಷಿಗಳೂ, ದೇಶೀಯ ಪ್ರತಿನಿಧಿಗಳೂ ನಿರಂತರವೂ ಆಂದೋಲನವನ್ನೆಬ್ಬಿಸುತ್ತ ಬಂದುದರಿಂದಾಗಿ ಸರಕಾರದವರು ನನಗೆ ಈ ಸೌಕರ್ಯಗಳನ್ನೇರ್ಪಡಿಸಿ ಕೊಟ್ಟರಲ್ಲದೆ ಮನಃಪೂರ್ವಕವಾಗಿ ಅವರೇನೂ ಮಾಡಲಿಲ್ಲ. ನನ್ನ ಶ್ರೇಯಾಭಿವೃದ್ಧಿಗಾಗಿ ಪ್ರಯತ್ನಿಸಿದವರಿಗೆಲ್ಲ ನಾನು ಕೃತಜ್ಞನಾಗಿರುತ್ತೇನೆ. ಹಿಂದೂ ದೇಶದಲ್ಲಿರುವ ನನ್ನ ಮಿತ್ರರು ನನ್ನ ಚಿಕಿತ್ಸೆ ನಡೆಸುತ್ತೇವೆಂದು ಅಪೇಕ್ಷಿಸಿದರಾದರೂ ದೊರತನದವರು ಅವಕಾಶ ಕೊಟ್ಟಿಲ್ಲ. ವಿದೇಶದಲ್ಲಿ ನನ್ನ ಚಿಕಿತ್ಸೆಗಾಗಿ ವೆಚ್ಚವಾಗುವ ದ್ರವ್ಯವನ್ನು ವಹಿಸಿಕೊಳ್ಳಲು ಸರಕಾರವು ನಿರಾಕರಿಸಿತು. ನನ್ನ ಅಣ್ಣನವರಾದ ಶರತ್‌ಚಂದ್ರ ಬೋಸರವರು ಕಾರಾಗೃಹದಲ್ಲಿರುವುದರಿಂದ ಒಂದು ವರ್ಷದಿಂದಲೂ ನನ್ನ ಕುಟುಂಬದವರು ದ್ರವ್ಯಾಭಾವದಿಂದ ಕಷ್ಟಪಡುತ್ತಿರುವರು. ಇಂತಹ ಸ್ಥಿತಿಯಲ್ಲಿ ನನ್ನ ವಿದೇಶ ಪ್ರವಾಸ ವೆಚ್ಚವನ್ನು ವಹಿಸಲೊಪ್ಪಿರುವರು. ಅವರ ಸಹಾಯವಿಲ್ಲದಿರುತ್ತಿದ್ದರೆ ನಾನೀದಿನ ಪರದೇಶಕ್ಕೆ ತೆರಳಲು ಸಾಧ್ಯವಾಗುತ್ತಿದ್ದಿಲ್ಲ. ನನ್ನ ಮಿತ್ರವರ್ಗವು ಮನಃಪೂರ್ವಕವಾಗಿ ಈ ವ್ಯಯವನ್ನು ಸಹಿಸಿಕೊಂಡು ಪ್ರೋತ್ಸಾಹಿಸಿದುದರಿಂದಲೇ ನಾನು ಈ ಸಂಚಾರಕ್ಕೆ ಸಮ್ಮತಿಸಿದೆನು. ನನಗೆ ಸಂಪೂರ್ಣಾರೋಗ್ಯವಾಗುದೋ ಇಲ್ಲವೋ ಈಗ ಹೇಳಲಾರೆ. ನನಗೆ ಧನ ಸಹಾಯ ಮಾಡಿದವರನ್ನೆಲ್ಲ ವಂದಿಸುತ್ತೇನೆ. ನನ್ನ ರಕ್ತ ಸಂಬಂಧಿಕರು ಮಾತ್ರ ನನ್ನ ಕುಟುಂಬದವರಲ್ಲ. ನನ್ನ ದೇಶೀಯರೆಲ್ಲರೂ ನನ್ನ ಕುಟುಂಬಿಕರು. ನಾನು ನನ್ನ ಜೀವಿತವನ್ನು ದೇಶ ಸೇವೆಗಾಗಿ ಸಮರ್ಪಿಸಿರುವುದರಿಂದ ನನ್ನ ಯೋಗಕ್ಷೇಮವನ್ನು ವಿಚಾರಿಸಲು ರಕ್ತ ಸಂಬಂಧಿಗಳಿಗೂ ದೇಶೀಯರಿಗೂ ಸರಿಸಮಾನವಾದ ಹಕ್ಕಿರುತ್ತದೆ. ಭಾರತವು ನನ್ನ ಕುರಿತು ತೋರಿಸುತ್ತಿರುವ ಅಪಾರವಾದ ಪ್ರೇಮವನ್ನು ಪಡೆಯುವುದಕ್ಕಾಗಿ ಯಾವ ವಿಧದಿಂದಲಾದರೂ ನನ್ನನ್ನು ಅರ್ಹನನ್ನಾಗಿ ಮಾಡಲು ತನ್ನ ಕೃಪಾಸಾಗರದ ಒಂದು ಬಿಂದುವನ್ನಾದರೂ ನನ್ನ ಮೇಲೆ ಸುರಿಸಲೆಂದು ನಾನು ಆ ಭಗವಂತನೊಡನೆ ಪ್ರಾರ್ಥಿಸುತ್ತೇನೆ. ಹಡಗು ಮುಂಬಾಯಿಯ ರೇವನ್ನು ಬಿಡುವ ವರೆಗೂ ನಾನು ಬಂದಿಯಾಗಿಯೇ ಇರುವೆನು. ನನ್ನ ದೇಶೀಯರ ಸದ್ಭಾವ ಪ್ರೇಮಾಶೀರ್ವಾದಗಳು ನನ್ನನ್ನು ಹಿಂಬಾಲಿಸಿಯೇ ಬರುವುವೆಂದು ನಾನು ನಂಬಿರುವೆನು. ಅವರ ಆಶೀರ್ವಾದ ಬಲದಿಂದ ನಾನು ಆರೋಗ್ಯವಂತನಾಗುವೆನೆಂದೂ ಎಲ್ಲ ಔಷಧಿಗಿಂತಲೂ ಈ ಆಶೀರ್ವಾದವೇ ಶ್ರೇಷ್ಠವೆಂದೂ ನನ್ನ ತಿಳುವಳಿಕೆ. ದುರದೃಷ್ಟವಶಾತ್ ನನ್ನ ಆರೋಗ್ಯವು ದಿನೇ ದಿನೇ ಕೆಡುತ್ತಲೇ ಇದೆ. ನನ್ನ ಶರೀರ ತೂಕವು ಈಗ ೧೨೫ ಪೌಂಡುಗಳಷ್ಟಿದೆ. ೩೪ ಪೌಂಡು ಕಡಿಮೆಯಾದಂತಾಯಿತು. ದೇಹೋಷ್ಣವು ೧೦೦ ಡಿಗ್ರಿ ವರೆಗೆ ಹೆಚ್ಚುತ್ತಿದೆ. ಭೋಜನ ನಂತರ ಉದರ ಬೇನೆಯು ಪ್ರಾರಂಭವಾಗುತ್ತದೆ. ಈ ಮಧ್ಯೆ ತಲೆನೋವು ಕಡಿಮೆಯಾಗಿದೆ. ಕಳೆದ ವಾರ ಹೊಟ್ಟೆನೋವು ವಿಶೇಷವಿತ್ತು!! ಎಂದು ಸುಭಾಷ್ಚಂದ್ರ ಬೋಸರು ಕಳೆದ ಗುರುವಾರ ೧ ಗಂಟೆಗೆ ಗೇಂಜ್ ಹಡಗದಲ್ಲಿ ಸ್ವಿಜರ್‌ಲೆಂಡಿಗೆ ಹೊರಟಾಗ ಹೇಳಿದರಾಗಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

# ವರ್ತಮಾನ ತರಂಗ:

ಅಮೇರಿಕದಲ್ಲಿ ಆರ್ಥಿಕ ಪ್ರಳಯ. ಬೋಸರ ಯೂರೋಪ್ ಪ್ರವಾಸ. ಡಿ'ವೆಲರರವರ ಜಯ. ಎಡ್ಗರ್ ವಾಲ್ಲೇಸ್. ಚೀನಾ ಜಪಾನ್ ಯುದ್ಧ. ಹೆತ್ತವರಿಗೊಂದು ಮಾತು. ಐಯರ್ಲೇಂಡಿನಲ್ಲಿ ಗಾಂಧೀಶಕ್ತಿ. ಆಶಾವಾದಿಗಳಾದ ಹೆನ್ರಿ ಫೋರ್ಡರು. ಮನುಷ್ಯನಿಗೆ ಹೊಯಿಗೆಯ ಉಪಯೋಗ.—ಇತ್ಯಾದಿ.

## ಅಮೇರಿಕದಲ್ಲಿ ಆರ್ಥಿಕ ಪ್ರಳಯ!

ಲಾಗಿನ ಸಪ್ಟೆಂಬರ ತಿಂಗಳಲ್ಲಿ ಬ್ರಿಟಿಷ ಸರಕಾರಕ್ಕೊದಗಿದ್ದ ಆರ್ಥಿಕ ಸಂಕಷ್ಟದಂತಹ ಘಟನೆಯು ಈ ವಾರ ಅಮೇರಿಕಾ ಸರಕಾರಕ್ಕೂ ಒದಗಿರುತ್ತದೆ. ಅಂದು ಹಿಂದೂದೇಶ ಬ್ರಿಟನುಗಳಲ್ಲಿನ ಬೇಂಕುಗಳು ಆಕಸ್ಮಿಕವಾಗಿ ಎರಡು ಮೂರು ದಿನಗಳ ತನಕ ಮುಚ್ಚಲ್ಪಟ್ಟು, ವ್ಯಾಪಾರವೂ ಅಸ್ತವ್ಯಸ್ತವೂ ಉಂಟಾದಂತೆ, ಇಂದು ಅಮೇರಿಕಾ ದೇಶದಲ್ಲಿ ಮಹಾ ಆಂದೋಲನವು ಉಂಟಾಗಿದೆ. ಮಿಚಿಗನ್ ಮತ್ತು ಮೇರಿಲೇಂಡ್ ಬೇಂಕುಗಳಿಗೆ ಖಾಜಾಂಚಿ ಸ್ಥಿತಿಯು ಕಾಲಿಟ್ಟಿತು. ಇದರಿಂದಾಗಿ ಠೇವಣಾತಿಯು ಮೇಲೆ ಕಂಠನ್ನೂ ಅವಧಿಯನ್ನೂ ಇದೇ ದೇಶದ ಬೇಂಕುಗಳಿಗಾಗಿ ಆ ಸಂಸ್ಥಾನದ ಗವರ್ನರರುಗಳು ಕೇಳಿರುತ್ತಾರೆ. ದೇಶೀಯ ಬೇಂಕುಗಳ ಸ್ಥಿತಿರಕ್ಷಣಾರ್ಥವಾಗಿ ನ್ಯಾಯ ವಿಧಾಯಕ ಸಭೆಗಳು ಅಧಿಕಾರವೂ ಸಭೆಸೇರಿ ಅತ್ಯಂತ ಅವಸರದ ಯೋಜನೆಗಳನ್ನು ಮಾಡುತ್ತಿವೆ. ಜನರ ಹಣಕ್ಕೆ ಬಾಧೆಯುಂಟಾಗದಂತೆ ನೋಡಿಕೊಳ್ಳಲಾಗುವುದೆಂದು ನ್ಯೂಯೋರ್ಕ, ನ್ಯೂಜೆರ್ಸಿ ಮೊದಲಾದ ಕಡೆಗಳ ಸರಕಾರಗಳು ಹೇಳಿವೆ. ಆದರೂ ಇಷ್ಟರಲ್ಲೇ, ಬೆದರಿದ ಜನರಿಂದ ಮಿಲಿಯ ಠೇವಣಾತಿ ಹಣವು ಸಣ್ಣ ಸಣ್ಣ ಬೇಂಕುಗಳಿಂದ ಹಿಂತೆಗೆಯಲ್ಪಟ್ಟಿತು. ಬೇಂಕುಗಳು ದಿವಾಳಿಯಾದಾವೆಂಬ ಸಂಶಯವು ಹರಡಿ ಹೋಗ್ಯಾಡುತ್ತಿದೆ. ಕರೆನ್ಸಿಯ ಸಂಚಾಲಕರಿಗೆ ವಿಶೇಷ ಹಕ್ಕುಗಳನ್ನು ಅಧ್ಯಕ್ಷರಾದ ಹೂವರರು ಕೊಟ್ಟಿರುತ್ತಾರೆ. ೬೦೦೦ ರಾಷ್ಟ್ರೀಯ ಬೇಂಕುಗಳಿಗೆ ಎಮರ್ಜೆನ್ಸಿ ಪಡದುಗಳನ್ನು ಕೊಡಲಾಗಿದೆ. ಜನರಿಂದ ಹಿಂತೆಗೆಯಲ್ಪಟ್ಟ ಠೇವಣಾತಿಯಿಂದೊದಗಿದ ಘಾತದಿಂದ ಪಾರಾಗುವುದಕ್ಕಾಗಿ ಸಂಸ್ಥಾನದ ಎಲ್ಲಾ ಸಣ್ಣ ದೊಡ್ಡ ಬೇಂಕುಗಳು ಮೂರು ದಿನಗಳ ರಜೆಯನ್ನನುಭವಿಸಬೇಕಾಗಿ ಮೇರಿಲೇಂಡಿನ ಗವರ್ನರರು ಕಂಠವಿಟ್ಟಿದ್ದಾರೆ.

## ಸುಭಾಷ್ಚಂದ್ರ ಬೋಸರ ಯೂರೋಪ ಪ್ರವಾಸ.

ಆರೋಗ್ಯ ನಷ್ಟಪಡಿಸಿಕೊಂಡ ಸುಭಾಷ್ಚಂದ್ರಬೋಸರು ಹೇಗೂ ಅದರ ಸಂಪಾದನೆಗಾಗಿ ಯೂರೋಪಿಗೆ ತೆರಳಿದರು. ಡಾಕ್ಟರ್ ನೀಲರತ್ನ ಸರ್ಕಾರ್, ಬಿದನ್ ಚಂದ್ರರೋಯ್‌ಗಳವರ ಶಿಫಾರಸು, ನ್ಯಾಯ ವಿಧಾಯಕ ಸಭೆಗಳ ಹಟ, ರಾಷ್ಟ್ರೀಯರ ಆಂದೋಲನದಿಂದಾಗಿ ಜಬಲು ಕಾಯಿಲೆಯಲ್ಲಿದ್ದ ಸುಭಾಸರು ಕಳೆದ ವಾರ ಗೇಂಜ್ ಸ್ಟೀಮರಿನಲ್ಲಿ ವಿದೇಶಕ್ಕೆ ಹೊರಟರು. ಅವರನ್ನು (ಸ್ಟ್ರೆಚರ್) ಡೋಲಿಯಲ್ಲಿ ಮಲಗಿಸಿ ಅಂಬ್ಯುಲೆನ್ಸ್ ಕಾರಿನಲ್ಲಿಟ್ಟು ಹಡಗಕ್ಕೆ ಸಾಗಿಸಿದರೂ ಅವರೊಡನೆ ಡಾ। ಸೇನರೆಂಬವರಿದ್ದರು. ಬೋಸರಿಗೆ ಪುರಿಯಲ್ಲಿ ವೃದ್ಧಾಪ್ಯದ ಸಂಕಷ್ಟದಲ್ಲಿರುವ ತನ್ನ ಮಾತಾಪಿತೃಗಳನ್ನು ಕಾಣಬೇಕೆಂಬ ಹಂಬಲವಿತ್ತು. ಆದರೆ ಅದಕ್ಕೆ ಒಪ್ಪಲಾಗಲಿಲ್ಲ. ಜಬ್ಬಲ್‌ಪುರದಿಂದ ಮುಂಬಾಯಿಗೆ ತಂದ ಮೇಲಾದರೂ ಬೋಸರನ್ನು ಹೊರಗಿನವರು ಕಾಣಲವಕಾಶ ದೊರೆಯಬಹುದೆಂದು ಜನತೆಯ ಆಶೆಯಾಗಿತ್ತು. ಅಂತಹ ಆಶೆಯು ನಾಶವಾಯಿತು. ಹಡಗವನ್ನೇರಿದ ಮೇಲೆಯೇ ಬೋಸರಿಗೆ ಸ್ವಾತಂತ್ರ್ಯ ಅಥವಾ ಬಿಡುಗಡೆಯ ಅಪ್ಪಣೆಪತ್ರವನ್ನರ್ಪಿಸಲಾಯಿತು. ಬೋಸರು ಸ್ವಾತಂತ್ರ್ಯವಾದಿಗಳು—ಸಂಪೂರ್ಣ ಸ್ವಾತಂತ್ರ್ಯವಾದಿಗಳು, ಐ. ಸಿ. ಎಸ್. ಕಲಿತು ಪ್ರತಿಭಾಸಂಪನ್ನರಾದರೂ ಅವರು ದೇಶವನ್ನು ಮರೆಯಲಿಲ್ಲ. ಎಳೆಯ ವಯಸ್ಸಿನಲ್ಲಿ ಬಂಗಾಳ ಶಾಸನ ಸಭೆಗೆ ಚುನಾಯಿತರಾದರು. ಬಂಗಾಳ ಪ್ರಾಂತಿಕ ಕಾಂಗ್ರೆಸ್ ಸಭೆಯ ಮುಂದಾಳಾದರು. ದಿವಂಗತ ಸಿ ಆರ್ ದಾಸರ ಆಪ್ತಬಂಧುಗಳಾದರು. ಕಲ್ಕತ್ತಾ ಕಾರ್ಪೊರೇಶನಿನ ಅಧ್ಯಕ್ಷರಾದರು. ಕೆಲವು ಸಲ ಸೆರೆಮನೆಗೆ ಹೋದರು. ಒಮ್ಮೆ ಬರ್ಮಾ ಸೆರೆಮನೆಯಲ್ಲಿ ಇಡಲ್ಪಟ್ಟಿದ್ದರು. ಆಗ ಕ್ಷಯರೋಗದ ಚಿಹ್ನೆಯು ತೋರಿದ್ದಿತು. ಕಳೆದ ಚಳವಳಿಯ ಸಮಯದಲ್ಲಿ ಸೆರೆಯನ್ನು ಸೇರಿ, ವ್ಯಾಧಿಗ್ರಸ್ತನಾಗಿ ಕಟ್ಟಕಡೆಗೆ ದೇಹಾರೋಗ್ಯ ಸಂಪಾದನೆಗಾಗಿ ಡೋಲಿಯಲ್ಲಿ ಮಲಗಿ ವೆನಿಸ್ ಮಾರ್ಗವಾಗಿ ಸ್ವಿಜರ್‌ಲೆಂಡಿಗೆ ಹೋದರು.

## ಡಿ'ವೆಲರರವರ ಜಯ!

ಐಯರ್‌ಲೇಂಡಿನ ಅಧ್ಯಕ್ಷ ಚುನಾವಣೆಯಾಗಿ ೮೩ ಅನುಕೂಲ ಪ್ರತಿಕೂಲ ಓಟುಗಳು ದೊರೆತು ಡಿ'ವೆಲರರವರು ಪುನಹ ಅಧ್ಯಕ್ಷರಾಗಿ ಚುನಾಯಿತರಾದರಷ್ಟೆ! ಅವರು ತನ್ನ ವಿಜಯೋತ್ಸವವನ್ನು ನೆರವೇರಿಸುತ್ತಾ "ನಮಗೆ ಬೇಕಾದುದು ಸಂಪೂರ್ಣ ಸ್ವಾತಂತ್ರ್ಯ, ಅರ್ಥ, ರಾಜ್ಯಗಳಲ್ಲಿ ನಾವು ಪ್ರತಿಷ್ಠಾವಂತರಾಗಿ ಸಂಪೂರ್ಣತೆಯನ್ನು ಪಡೆಯಬೇಕು. ನಾವು ರಾಷ್ಟ್ರಸೇವಾ ಕಾರ್ಯಕ್ಕೆ ಕೈಹಾಕಿರುತ್ತೇವೆ. ಹೀಗಿರುವಾಗ, ದೇಶದ ಪ್ರತಿಯೊಂದು ಪಕ್ಷವೂ ಪೂರ್ವಪಕ್ಷಿ ಮಕ್ಕಳಿಯದೆ ಎಲ್ಲರೂ ಒಂದೇ ಕಡೆಗೆ ರಾಷ್ಟ್ರರಥವನ್ನೆಳೆದು, ಸ್ವಾತಂತ್ರ್ಯ ವಿಜಯದ ಪತಾಕೆಯನ್ನು ಸ್ಥಾಪಿಸಬೇಕು!" ಎಂದರು. ಇವರ ಪುನರಾವೃತ್ತಿ ಪದವಿಗೇರಿದ್ದರಿಂದ ಬ್ರಿಟನು ಹತಾಶಳಾದ ವಿಧವೆಯಂತಾಗಿದೆ.

## ಎಡ್ಗರ್ ವಾಲ್ಲೇಸ್.

ಹಾಲಿವುಡ್‌ನಲ್ಲಿ ಈತನು ಸತ್ತು ಇನ್ನು ಒಂದು ವರ್ಷವಾಗಲಿಲ್ಲ. ಆಗಲೇ ಎಲ್ಲರೂ ಈತನನ್ನು ಮರೆಯುತ್ತಿರುವರು. ಇವನು ಜೀವದಿಂದಿದ್ದಾಗ, ಇವನು ಬರೆದ ಗ್ರಂಥಗಳು ಬಹಳ ಖರ್ಚಾಗುತ್ತಿದ್ದುವು. ಇವನ್ನು ಬಿಟ್ಟರೆ ಮತ್ತಾವ ಗ್ರಂಥಗಳಿಗೂ ಇರಲಿಲ್ಲ. ವರ್ತಮಾನಪತ್ರ ನಾಟಕ ಎರಡು ಹಿಂದಿನ ಗ್ರಂಥಗಳ ವ್ಯಾಪಾರವೆಂದರೆ ಸಾಮಾನ್ಯವಲ್ಲ. ಇದರಿಂದಲೇ ಇವನು ತನ್ನ ಜೀವಮಾನದ ಕೊನೆಯ ೬ ವರ್ಷಗಳಲ್ಲಿ ೫೦ ಲಕ್ಷ ರೂಪಾಯಿಗಳನ್ನು ಸಂಪಾದಿಸಿದನು. ಇವನ ಮರಣಾನಂತರ ಇವನು ಬರೆದ ಗ್ರಂಥಗಳನ್ನು ಕೇಳುವವರು ವಿರಳವಾಗಿ ಹೋಗಿರುವರು.

## ಚೀನಾ ಜಪಾನ್ ಯುದ್ಧ! ಜೆಹೋಲ್ ಕಾದಾಟ!

ಚೀನಾ ಜಪಾನಗಳೊಳಗೆ ಯುದ್ಧವು ನಡೆಯುತ್ತಲೇ ಇದೆ. ಮಂಚೂರಿಯಾದ ವಶೀಕರಣದ ಹಟವು ಮುಗಿದಿರುವುದಿಲ್ಲ. ಈಗ ಮಂಚುಕೋ ಎಂಬಲ್ಲಿಯೂ ಜೆಹೋಲ್ ಎಂಬಲ್ಲಿಯೂ ವಿಷಮ ಕಾದಾಟಕ್ಕಾರಂಭವಾಗಿದೆ—ಜಪಾನಿನ ೫೦೦೦೦ ಸಾವಿರದ ಸೇನೆಯು ನೂರು ಯುದ್ಧ ವಿಮಾನಗಳೊಡನೆ ಜೆಹೋಲಿನ ಬಳಿ ನಿಂತಿದೆ. ಚೀನಾದವರ ೧೫ ಲಕ್ಷ ಜನರು ಆಯುಧಪಾಣಿಗಳಾಗಿ ಹೊರಟಿದ್ದಾರೆ. ಜಪಾನಿನ ರಾಜಧಾನಿಯಲ್ಲಿ ೩೦,೦೦೦ ಸೈನ್ಯವು ಸಿದ್ಧವಾಗಿ ನಿಂತಿದೆ. ಜಪಾನಿನ ಎಲ್ಲಾ ನೌಕ ಸೈನ್ಯಗಳ ನೌಕರರು ರಜೆ ಪಡೆಯದೆ ಯುದ್ಧಕ್ಕೆ ಟೊಂಕ ಕಟ್ಟಬೇಕೆಂದು ರಾಜಾಜ್ಞೆಯಾಗಿದೆ. ಚೀನದ ೪೫೯,೦೦೫೦೦೦ ಜನಸಂಖ್ಯೆಯಲ್ಲಿ ಕಾಲಾಂಶವು ಯುದ್ಧಕ್ಕೆ ಸನ್ನದ್ಧವಾಗಿದೆ. ರಶ್ಯಾದವರು ಪೂರ್ವದೇಶಗಳಲ್ಲಿ ಪ್ರಬಲರಾಗುತ್ತಾರೆಂದು ಜಪಾನು ಭಯಗೊಂಡಿದೆ. ರಷ್ಯದವರೂ ಜಪಾನಿನ ಮೇಲೆ ಕಣ್ಣಿಟ್ಟಿದ್ದಾರೆ. ರಷ್ಯವು ಚೀನದ ಸಹಾಯಕ್ಕೆ ನಿಂತರೆ ಇಂಗ್ಲೆಂಡು ಫ್ರಾನ್ಸುಗಳು ಜಪಾನಿನ ಪಕ್ಷ ಸೇರುವುವೆಂದೂ, ಈ ಬಲಶಾಲಿಗಳ ಮುರಿದಾಟಕ್ಕಾಗಿ ಘುಮುರೂಪನಾಗಿ ಅಮೆರಿಕಾವು ಚೀನದೊಡನೆ ಕೂಡಿಕೊಂಡು ಯುದ್ಧ ಮಾಡುವುದೆಂದೂ ಊಹಿಸಲಾಗಿದೆ. ಜರ್ಮನಿಯೂ ರಷ್ಯವನ್ನು ಬಿಟ್ಟು ಹಾಕುವಂತಿಲ್ಲ. ಹೀಗಾಗಿ ಮಹಾಮಹಾ ಯುದ್ಧವು ಪ್ರಾರಂಭವಾದೀತೋ ಎಂಬ ಭಯೋತ್ಪಾದನೆಗೆ ಮೊದಲಿಟ್ಟಿದೆ. ೬೦,೦೦೦ ಜಪಾನೀಯರು ತಮ್ಮ ೩೦ ೦೦೦ ಬೆಂಬಲ ಸೈನ್ಯದೊಡನೆ ಮಂಚುಕೋದಲ್ಲಿ ಕಾಲೂರಿ ನಿಂತು ಚೀನಾ ಸೈನ್ಯವನ್ನು ನಿರೀಕ್ಷಿಸುತ್ತಿದ್ದಾರೆ. ಲಿಂಗ್ಯಾನ್ ಎಂಬಲ್ಲಿ ೩೦,೦೦೦ ಜಪಾನರಿಗೂ ಚೀನಿಯರಿಗೂ ತೀವ್ರ ಯುದ್ಧವಾಗುತ್ತಿದೆ. ೫೦೦ ಜನ ಚೀನಿಯರು ಒಂದು ವಾರದಲ್ಲಿ ಹತರಾದರು. ಲೀಗ್ ಒಫ್ ನೇಶನ್ಸಿನ ನುಡಿಗಳನ್ನು ಜಪಾನು ಕೇಳುತ್ತಿಲ್ಲ. ಚೀನೀಯ ಶಾಲಾ ಕಾಲೇಜುಗಳೂ, ಮಕ್ಕಳು ಮರಿಗಳೂ, ಸರಕಾರಿ ಖಾಸಗಿ ಸಂಸ್ಥೆಗಳೂ ವಿಮಾನ ಪಡೆಕೊಳ್ಳುವ ಬಗ್ಗೆ ಪ್ರದರ್ಶನ, ಪ್ರಾರ್ಥನೆ, ದಾನಗಳ ಮೂಲಕ ನಿಧಿಯನ್ನೆತ್ತಿ ಸರಕಾರಕ್ಕೆ ಕಳುಹಿಸುತ್ತಿವೆ.

## ಹೆತ್ತವರಿಗೊಂದು ಮಾತು

ಡೊರೊಥಿ ಡಿಕ್ಸ್ ಎಂಬವರು ಹೆತ್ತವರು ತಮ್ಮ ಮಕ್ಕಳನ್ನು ಯಾವ ವಿಧದಿಂದ ಸಾಕಿ ಸಲಹಬೇಕೆಂದು ಒಂದು ಲೇಖನವನ್ನು ಬರೆದಿರುತ್ತಾರೆ. ಮಕ್ಕಳನ್ನು ಸಲಹುವ ಜವಾಬ್ದಾರಿಕೆಯು ಮಹತ್ತಾದುದು. ನಮ್ಮಲ್ಲಿ ಹೆಚ್ಚಿನ ತಂದೆತಾಯಿಗಳು ಅಂತಹ ಜವಾಬ್ದಾರಿಕೆಯನ್ನು ಅಕ್ರಮ ರೀತಿಯಲ್ಲಿ ಮಾಡುತ್ತಾರೆ. ಪ್ರಾಯಸ್ಥ ಮಕ್ಕಳು ತಮ್ಮ ಹೇಳಿಕೆ ಕೇಳಿಕೆಯಂತೆಯೇ ನಡೆಯಬೇಕೆಂದು ಈ ಹೆತ್ತವರ ನಿರ್ಬಂಧ. ಇಂತಹ ಹೆತ್ತವರು ತಮ್ಮ ಮಕ್ಕಳನ್ನು ಎಷ್ಟು ಜತನ ಮತ್ತು ಮಮತೆಯಿಂದ ಪರಿಪೋಷಿಸುತ್ತಿರುವರೆಂದರೆ — ಆ ಮಕ್ಕಳು ಮಾನಸಿಕ ಮತ್ತು ದೈಹಿಕವಾಗಿ ಬರೇ ನಿರ್ಬಲ ಪ್ರಾಣಿಗಳಾಗಿ ಬಿಡುತ್ತವೆ. ಒಬ್ಬ ತಂದೆಯು ತನ್ನ ಪುತ್ರನ ಮೇಲಿನ ಮಮತೆಯಿಂದಾಗಿ ಆ ಪುತ್ರನನ್ನು ಸದಾಕಾಲ ತನ್ನಾಧೀನದಲ್ಲಿರಿಸಲು ಹವಣಿಸುತ್ತಾನೆ. ತಾನಿರುವ ತನಕ ಆ ಮಗನು ತನ್ನನ್ನು ಮೀರಿ ನಡೆಯಬಾರದೆಂದೇ ಆ ತಂದೆಯು ಹಂಬಲ. ಅದೇ ತೆರನಾಗಿ ಒಬ್ಬ ತಾಯಿಯೂ ತನ್ನ ಪುತ್ರಿಯು ಅನವರತವೂ ತನ್ನಾಜ್ಞಾನುಸಾರವಾಗಿ ವರ್ತಿಸಬೇಕೆಂದು ಹಂಬಲಿಸುವಳು. ಈ ಹೆತ್ತವರಿಗೆ ತಮ್ಮ ಮಕ್ಕಳ ಭವಿಷ್ಯತ್ತಿನ ಮೇಲೆ ಭರವಸೆಯಿಲ್ಲ. ತಮ್ಮ ಅನುರಾಗದಿಂದಾಗಿ ಈ ಮಕ್ಕಳನ್ನು ರೆಕ್ಕೆಯಿಲ್ಲದ ಪಕ್ಷಿಗಳಂತೆ ಮಾಡುವರು. ತಮ್ಮ ಮಕ್ಕಳು ಈ ವಿಶಾಲ ಪ್ರಪಂಚದಲ್ಲಿ ಹಾರ್‍ಯಾಡಿ ಸಾಹಸಪಟ್ಟು, ಕಷ್ಟಪಟ್ಟು ದುಡಿದು ಜೀವನದ ತಾಗು ಬಾಗುಗಳ ಅನುಭವವನ್ನರಿಯಬೇಕೆಂಬಾಶೆಯು ಈ ಹೆತ್ತವರಲ್ಲಿರುವುದಿಲ್ಲ. ಎಷ್ಟೋ ಮಕ್ಕಳು ತಮ್ಮ ಪ್ರಕೃತಿ ಸಿದ್ಧವಾದ ಜೀವನೋತ್ಸಾಹದ ಕರೆಗೆ ಕಿವಿಕೊಟ್ಟು ಮನಬಂದತ್ತ ನಡೆದರು. ಒಡನೆ ಹೆತ್ತವರು "ನಮ್ಮ ಮಕ್ಕಳು ನಮ್ಮನ್ನು ಮೀರಿ ನಡೆದರೆನ್ನುವರು" ಇದು ಅನುಚಿತ. ರೆಕ್ಕೆಗಳು ಹುಟ್ಟಿದೊಡನೆ ತಾಯಿ ಪಕ್ಷಿಯು ತನ್ನ ಮರಿಗಳನ್ನು ಗೂಡಿನಿಂದ ಹೊರದೂಡಿ, ರೆಂಬೆಯಿಂದ ರೆಂಬೆಗೆ ಹಾರ್‍ಯಾಡಿಸಿ ಹಾರ್‍ಯಾಡ ಕಲಿಸುತ್ತವೆ. ಮಾನವರಾದರೂ ಇದೇ ರೀತಿ ತಮ್ಮ ಮಕ್ಕಳನ್ನು ಕಾಲೋಚಿತವಾಗಿ ಜೀವನವನ್ನರಿಯಲು ಬಿಟ್ಟುಬಿಡಬೇಕು.

## ಐಯರ್ಲೇಂಡಿನಲ್ಲಿ ಗಾಂಧೀ ಶಕ್ತಿ.

ಪ್ರಕೃತದಲ್ಲಿ ಐಯರ್ಲೇಂಡಿನ ಪ್ರಭುವಾದ ಡಿ'ವೆಲರರು ಅಲ್ಲಿಯ ಜನರಿಗೆ ಒಬ್ಬ ಅವತಾರಿಯೆಂದೇ ಕಂಡು ಬಂದಿರುತ್ತಾರೆ. ಬ್ರಿಟಿಷ ಸಿಂಹದ ಬಾಲವನ್ನು ಹಿಂಡಿ ಹಿಸುಕಲು ಸಮರ್ಥರಾದ ಇವರು ಗಾಂಧೀ ಶಕ್ತಿಯುತರಾಗಿರುವರೆಂದು ಕೆಲವರೆಂದುಕೊಳ್ಳುತ್ತಿರುವರು. ಡಿ'ವೆಲರರು ಮೊನ್ನೆ ಚುನಾವಣೆಯಲ್ಲಿ ಪುನರಪಿ ಐಯರ್ಲೇಂಡಿನ ಪ್ರಭುಗಳಾಗಿ ಚುನಾಯಿತರಾದರು. ಇಂಗ್ಲೆಂಡಿಗೆ ಕೊಡತಕ್ಕ ಭೂಶಾಸನವನ್ನು ಐಯರ್ಲೇಂಡು ಕೊಡುವುದು ನ್ಯಾಯವಿರೋಧವೆಂದೂ, ಆತ್ಮಪ್ರತಿಷ್ಠಾಭಂಗ ದರ್ಶನೆಯೆಂದೂ ಅವರ ಮತ. ಅದರೆ ಮೊದಲು ಅಧಿಕಾರ ವರ್ಗದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದ ಕೋಸ್‌ಗ್ರೇವರು ಬ್ರಿಟಿಷರೊಡನೆ ಶಾಂತರಾಗಿ ವರ್ತಿಸಿ, ನಾವು ಕೊಡಬೇಕಾದ ದ್ರವ್ಯಕ್ಕೆ ಕಂತು ಕೇಳೋಣ, ಅವಧಿ ಕೇಳೋಣ ನಮ್ಮ ಸಾಂಪತ್ತಿಕ ಸ್ಥಿತಿಗತಿಗಳನ್ನು ಬ್ರಿಟಿಷರಿಗೆ ಅನುಕೂಲವಾಗಿ ವಿವರಿಸೋಣ ಎನ್ನುತ್ತಿರುವರು. ಈ ವಾದವು ಡಿ'ವೆಲರರಿಗೆ ಅತ್ಯ ಘಾತಕವೆಂದು ತೋರುತ್ತದೆ. "ಇದು ಕೂಡದು. ಐಯರ್ಲೇಂಡಿನ ಸ್ವಾತಂತ್ರ್ಯವನ್ನು ಅದು ಕಸಿದುಕೊಳ್ಳುವುದು. [illegible]

ಮೇಲೆದ್ದು ಒತ್ತಿ ಕುಕ್ಕುವುದು" ಎಂಬುದೇ ಅವರ ಪ್ರತಿವಾದ. ರಿಪಬ್ಲಿಕನ್ ಆರ್ಮಿ, ರಾಷ್ಟ್ರೀಯವಾದಿ ಮೊದಲಾದ ಅನೇಕ ಪಂಗಡಗಳವರು ಡಿ'ವೆಲರರ ಕಡೆ. ಸಂಕ್ಷಿಪ್ತದಲ್ಲಿ ಇಡೀ ಐಯರ್ಲೇಂಡ್ ಡಿ'ವೆಲರರ ಪಕ್ಷವಿದೆ. ಆದುದರಿಂದಲೇ ಈಗ ಡಿ'ವೆಲರರು ಎಲ್ಲ ಪ್ರಭುಗಳಂತೆ ಅಂಗರಕ್ಷರನ್ನು ಹಿಡಿದುಕೊಂಡು ಬೀದಿ ನಡೆಯುತ್ತಿಲ್ಲ—ಒಬ್ಬಂಟಿಗನಾಗಿ ದೇಶದ ಯಾವ ಮಾರ್ಗದಲ್ಲಾಗಲೀ ಭಯಭೀತಿರಹಿತರಾಗಿ ನಡೆಯುವರು. ಐಯರ್ಲೇಂಡಿನ ಈ ಪ್ರತಿಷ್ಠಾವಂತ ಗಾಂಧೀ ಶಕ್ತಿಯು ಬ್ರಿಟಿಷರನ್ನು ಎಷ್ಟರ ತನಕ ದಣಿಸಲಿದೆಯೋ!

## ಆಶಾವಾದಿಗಳಾದ ಹೆನ್ರಿ ಫೋರ್ಡರು.

ಮಿಲಿಯಾಧಿಪತಿಗಳು ಕೂಡ ಈ ದಿನಗಳಲ್ಲಿ ಆರ್ಥಿಕ ದುಸ್ಥಿತಿಯನ್ನು ದೂಷಿಸುತ್ತಿರುವರು. 'ಹಣ ಹಣ'ವೆಂದು ಬಾಯ್ಬಿಡುತ್ತಿರುವರು. ಅಮೇರಿಕದ ಹೆನ್ರಿ ಫೋರ್ಡರನ್ನು ಒಬ್ಬರು ಸಂದರ್ಶಿಸಿ "ಈಗಿನ ಆರ್ಥಿಕ ಪ್ರಳಯವು ಯಾವಾಗ ಉಪಶಮನವಾಗುವುದು?" ಎಂದು ಕೇಳಿದ್ದಕ್ಕೆ, ಹೆನ್ರಿ ಫೋರ್ಡರು ಇದು ಪ್ರಳಯಕಾಲವೇನೂ ಅಲ್ಲ. ಈಗ ಎಲ್ಲರೂ ಹಣದ ಕೊರತೆಯ ಕುರಿತು ದೇಶದ ಒಳಹೊರಗೆ ಸುತ್ತಿರುವರು. ಪ್ರಪಂಚವು ಅಂತಹ ಸಾಂಪತ್ತಿಕ ಪ್ರಳಯಕ್ಕೆ ಬಲಿಯಾಗಲಿಲ್ಲ. ಈಗಿನ ಕಾಲದ ದ್ರವ್ಯಾಭಾವವು ಅಷ್ಟು ಘನವಾದುದಲ್ಲ. ಈಗಿನ ಲೋಕದಲ್ಲಿ ಹಣವಿಲ್ಲದಿಲ್ಲ, ಜನರು ನೆನಸಿದಷ್ಟು ಸುಖವು ಮಾತ್ರ ದೊರೆಯಲಿಲ್ಲ. ಇದಕ್ಕೆ ಆರ್ಥಿಕ ಸಂಕಷ್ಟವೆಂದು ಶುದ್ಧ ನುಡಿಗಳಿಂದ ಹೇಳಲು ಸಾಧ್ಯವಿಲ್ಲ. ಒಂದು ವಸ್ತುವಿನ ನಿಜವಾದ ಮೌಲ್ಯವು ಎಷ್ಟೆಂಬುದನ್ನು ನಮಗೀಗ ತಿಳಿಯಲಾಗಲಿಲ್ಲ—ಅಷ್ಟೆ" ಎಂದರು. 'ಆಧುನಿಕ ಕಾಲದಲ್ಲಿ ಯಂತ್ರಗಳು ಮನುಷ್ಯರನ್ನು ದುಸ್ಥಿತಿಗೊಡ್ಡುವುವಲ್ಲಾ' ಎಂದು ಅವರಿಗೆ ಸಂದರ್ಶಿಸಿದವರು ಪಶ್ಚಾತ್ತಾಪವನ್ನು ಸೂಚಿಸಲು, ಫೋರ್ಡರು "ಯಂತ್ರಯುಗವನ್ನು ದೂರುತ್ತಿರುವುದು ಅಸಂಗತ. ಆಧುನಿಕ ಕಾಲದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಗೆ ನಾನಾ ಉದ್ಯೋಗಗಳನ್ನು ಒದಗಿಸಿ ಕೊಟ್ಟುದು ಯಂತ್ರ. ಪೆಟ್ರೋಲ್, ರಬ್ಬರ್ ಗೇರೇಜ್, ಮಾರ್ಗ ಮೊದಲಾದುವುಗಳ ಮೂಲಕ ಲಕ್ಷಾಂತರ ಜನರು ಹೊಟ್ಟೆ ತುಂಬಿಸುತ್ತಿರುವರು" ಎಂದರು. ಹೆನ್ರಿ ಫೋರ್ಡರ ಗೇರೇಜಿನಲ್ಲಿ ಒಂದು ಸಣ್ಣ ಮೋಟರಿನ ಸಿದ್ಧತೆಯಾಗುತ್ತಿದೆಯಂತೆ. ಅದನ್ನು ಬೇಕಾದಾಗ ಬಿಚ್ಚಿ, ಬೇಕಾದಾಗ ಕಟ್ಟಲು ಅನುಕೂಲವಾಗುವಂತೆ ಕಟ್ಟುವರಂತೆ.

## ಕೋರ್ಟು ಎಂಬುದು ಧರ್ಮಿಗಳಿಗೆ ರಕ್ಷಣಾ ಕವಚದಂತಿರಬೇಕು ಅಧರ್ಮಿಗಳಿಗೆ ಖಡ್ಗದಂತಿರಬೇಕು

ಜನವರಿ ೨೬ನೇ ದಿನ ನಡೆದ ಗಾಂಧೀದಿನಾಚರಣೆಯ ಸಮಯ ಮೀರತ್ತಿನಲ್ಲಿ ಹರ್ತಾಳವಾಚರಿಸಲ್ಪಟ್ಟಿತು. ಅಲ್ಲಿಯ ಖಾದಿ ಭಂಡಾರದ ಹರಿನಾಥ್ ಭಾರ್ಗವ ಮತ್ತು ಚಂದ್ರ ಶೇಖರ್ ಎಂಬವರು ತಮ್ಮ ಅಂಗಡಿಯ ಬಾಗಿಲನ್ನು ಆ ದಿನ ಮುಚ್ಚಿದರೆಂಬ ಅಪಾದನೆಯ ಮೇಲೆ ಸೆರೆ ಹಿಡಿಯಲ್ಪಟ್ಟು ಸಬ್ ಡಿವಿಜನಲ್ ಆಫೀಸರಿಂದ ಹರಿನಾಥರಿಗೆ ರೂಪಾಯಿ ೨೦೦ರ ಜುಲುಮಾನೆಯೂ ಚಂದ್ರಶೇಖರರಿಗೆ ಹತ್ತು ತಿಂಗಳುಗಳ ಶಿಕ್ಷೆಯೂ ರೂಪಾಯಿ ಇಪ್ಪತ್ತರ ಜುಲುಮಾನೆಯೂ ವಿಧಿಸಲ್ಪಟ್ಟಿತು. ಸೆಶ್ಶನ್ ಜಡ್ಜರಿಗೆ ಅಪೀಲು ಹೋಯಿತು. ಅವರು, ಬರೇ ಅಂಗಡಿ ಮುಚ್ಚುವುದರಿಂದಾಗಿ ನಿಷಿದ್ಧ ಸಂಸ್ಥೆಗಳಿಗೆ ಯಾರಾದರೂ ಸಹಾಯವನ್ನಿತ್ತಂತಾಗುವುದಿಲ್ಲ. ಅಪಾದಿತರು ಅಂಗಡಿ ಮುಚ್ಚಿದುದರ ಕಾರಣವನ್ನು ವಾದಿಗಳು (ಪೋಲೀಸರು) ಸರಿಯಾಗಿ ಕೊಟ್ಟಿಲ್ಲ. ಆದುದರಿಂದ ಈ ಮೊಕದ್ದಮೆಯ ಅಪಾದಿತರು ತಪ್ಪಿತಸ್ಥರಲ್ಲ. ಅಪಾದಿತರು ಪ್ರಾಣಿಗಳಂತಿದ್ದರೆ ವಾದಿಗಳು ತಮ್ಮಿಚ್ಛೆಯಂತೆ ನಡೆಯಲು ಸಾಧ್ಯವಿಲ್ಲ. ಬದಲಿಗೆ ಅವರ ಜವಾಬ್ದಾರಿಕೆಯು ಹೆಚ್ಚಾಗಿ ಅವರು ಜಾಗರೂಕತೆಯಿಂದ ವರ್ತಿಸಬೇಕು. ಅಲ್ಲಹಾಬಾದ್ ಹೈಕೋರ್ಟಿನ ಜಸ್ಟಿಸ್‌ಯಂಗ್ ಎಂಬವರು ಒಮ್ಮೆ ತೀರ್ಮಾನಿಸಿದ್ದಂತೆ ಕೋರ್ಟು ಎಂಬುದು ಧರ್ಮಿಗಳಿಗೆ ರಕ್ಷಣಾ ಕವಚದಂತಿರಬೇಕು ಅಧರ್ಮಿಗಳಿಗೆ ಖಡ್ಗದಂತಿರಬೇಕು" ಎಂದು ಅಪಾದಿತರನ್ನು ಬಿಡುಗಡೆ ಮಾಡಿದರು. ಇಂತಹ ತೀರ್ಮಾನಗಳಿಂದ ದೇಶದ ಅಧಿಕಾರವರ್ಗವೂ ಜನತೆಯೂ ಹೆಚ್ಚಿನ ಅನುಭವವನ್ನು ಪಡೆಯಲವಕಾಶವಿದೆ. ಬಂದು ಕಡೆಯಲ್ಲಿ ಧರ್ಮದ ಬುಗ್ಗೆಯು ಒಡೆದರೆ ಇನ್ನೊಂದೆಡೆ ಅದು ಮೂಡುತ್ತಿರುವುದು ಸ್ವಾಭಾವಿಕ!

## ಮನುಷ್ಯನಿಗೆ ಹೊಯಿಗೆಯ ಉಪಯೋಗ.

ಹೊಯಿಗೆಯನ್ನು ಕಟ್ಟಡ ರಚನೆಗಾಗಿಯೇ ಉಪಯೋಗಿಸುವುದೆಂದಿತ್ತು. ಈಗ ಅದನ್ನು ಬೇರೆ ರೀತಿಯ ಕೆಲಸಗಳಿಗಾಗಿಯೂ ಉಪಯೋಗಿಸಬಹುದೆಂದು ಕಂಡುಹಿಡಿದಿದ್ದಾರೆ. ಇಂಜಿನುಗಳ ದೊಡ್ಡ ದೊಡ್ಡ ಘಂಟೆ, ಬಂದೂಕು, ರೈಲುಗಾಡಿ ಮೊದಲಾದುವುಗಳನ್ನು ಶುದ್ಧೀಕರಿಸುವ ಕೆಲಸದಲ್ಲಿ ಈಗ ಹೊಯಿಗೆಯನ್ನು ಪ್ರಯೋಗಿಸುತ್ತಿದ್ದಾರೆ. ಒಂದು ನಳ್ಳಿಯ ಮೂಲಕ ಹೊಯಿಗೆಯ ಹುಡಿಯನ್ನು ಬಹಳ ಬಿರುಸಾಗಿ ಹಾರುವಂತೆ ಮಾಡುವರು, ನೀರಿನ ನಳ್ಳಿ ಹಿಡಿದು ನೀರು ಹಾರಿಸುವಂತೆ ಈ ಹೊಯಿಗೆಯ ನಳ್ಳಿಯನ್ನು ಸಾಮಾನಿನ ಮಣ್ಣು ಹಿಡಿದ ಭಾಗಗಳಿಗೆ ಹಿಡಿಯುವರು. ಬೇರೆ ಯಾವ ಸಾಧನೆಯಲ್ಲಿಯೂ ಇಂತಹ ದೊಡ್ಡ ದೊಡ್ಡ ಸಾಮಾನುಗಳು ಶೀಘ್ರವಾಗಿ ಶುದ್ಧವಾಗುವುದಿಲ್ಲ. ಈ ರೀತಿಯ ಉಪಾಯದಿಂದ ಕೆಲಸವೂ ಬಹಳ ಸುಲಭವಾಗುತ್ತದೆ.

[illegible]

(ಗ[illegible] ಕಂಡ—ಮಾಯಿ).

| | | | | | | | ಸೂರ್ಯ | |
|---|---|---|---|---|---|---|---|---|
| [illegible] | [illegible] | [illegible] | [illegible] | [illegible] | [illegible] | [illegible] | ಉ | ಅ |
| 4 | ಶನಿ | ೮ | ೫೩ | ರೋಹಿಣೀ | ೪೬ | ೨೦ | 6.47 | 6.39 |
| 5 | ರವಿ | ೯ | ೩೦ | ಮೃಗಶಿರಾ | ೪೪ | ೨೦ | 6 46 | 6.39 |
| 6 | ಸೋಮ | ೯ | ೮೧ | ಆರ್ದ್ರಾ | ೫೦ | ೨೨ | 6 46 | 6 39 |
| 7 | ಕುಜ | ೧೦ | ೫೫ | ಪುನರ್ವಸು | ೫೪ | ೨೬ | 6 46 | 6.39 |
| 8 | ಬುಧ | ೧೧ | ೫೫ | ಪುಷ್ಯ | ೫೭ | ೨೪ | 6 45 | 6.39 |
| 9 | ಗುರು | ೧೩ | ೯೫ | ಆಶ್ಲೇಷಾ | ೫೯ | ೨೫ | 6 44 | 6.39 |
| 10 | ಶು.ಕ್ರ | ೧೪ | ೯೦ | ಮಘಾ | ೫೯ | ೨೬ | 6 44 | 6.39 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ(ಕಾವು) Maximum ಹೆಚ್ಚಾದದ್ದು | Minimum ಕಡಿಮೆ | Rainfall. ಮಳೆ ದಿನದ ಮಳೆ | ಒಟ್ಟು ಮಳೆ. |
|---|---|---|---|---|
| 23 | 87 — 1 | 73 — 9 | — | — |
| 24 | 87 — 7 | 72 — 9 | — | — |
| 25 | 86 — 6 | 73 — 1 | — | — |
| 26 | 85 — 7 | 73 — 8 | — | — |
| 27 | 86 — 8 | 76 — 1 | — | — |
| 28 | 87 — 1 | 74 9 | — | — |
| 1 | 88 — 2 | 75 — 1 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ. ಆ. | ವರೆಗೆ ರೂ. ಆ. |
|---|---|---|
| ಹೊಸ ಮುಸ್ಕತಿ | 4 — 0 | 4 — 10 |
| ಹೊಸ ರಾಶಿ ಅಕ್ಕಿ | 3 — 6 | 3 — 11 |
| ಮುಸ್ಕಿ | 4 — 0 | 4 — 10 |
| ಗುಡ್ಡ | 3 12 | 4 — 2 |
| ಸುಗ | 3 — 10 | 4 — 0 |
| ಊರಿ ಅವ್ವಲ್ ಬೆಳ್ತಿಗೆ | 4 — 10 | 5 — 4 |
| ರಂಗೂನು ಬೆಳ್ತಿಗೆ ಗೋಣಿ ಗಳ್ಳೆ | 6 — 8 | 7 — 0 |
| ಎಲ್ಲೂರು ಬೆಳ್ತಿಗೆ ಮೂಡಿ ಗಳ್ಳೆ | 4 — 8 | 4 — 10 |
| ಗೋಧಿ ಗೋಣಿ ಗಳ್ಳೆ | 10 — 8 | 12 — 8 |
| ತೊಗರಿ ಗೋಣಿ ಗಳ್ಳೆ | 9 — 8 | 12 — 0 |
| ಹುರುಳಿ ಗೋಣಿ ಗಳ್ಳೆ | 6 — | 6 — 4 |
| ಕಡಲೆ ಗೋಣಿ ಗಳ್ಳೆ | 8 — 8 | 10 — |
| ತೊಗಂಬೇಳೆ ಗೋಣಿ ಗಳ್ಳೆ | 10 — 8 | 20 — 0 |
| ಉದ್ದು ಗೋಣಿ ಗಳ್ಳೆ | 9 — 8 | 10 0 |
| ಹೆಸರು ಗೋಣಿ ಗಳ್ಳೆ | 8 — 0 | 9 — 0 |
| ಊರುಬೆಲ್ಲ ಖಂಡಿ ಗಳ್ಳೆ | 31 — 4 | 32 — 8 |
| ಉಪ್ಪು ಗೋಣಿ ಗಳ್ಳೆ | 4 — 12 | 5 — 0 |
| ಕೊಪ್ರ ಖಂಡಿ ಗಳ್ಳೆ | 65 — | 72 — |
| ಕೊಪ್ರ ಹಿಂಡಿ ಖಂಡಿ ಗಳ್ಳೆ | 23 — | 24 — |
| ಎಳ್ಳಿಂಡಿ ಖಂಡಿ ಗಳ್ಳೆ | 26 — 4 | 26 — 8 |
| ಕೊಪ್ರ ಎಣ್ಣೆ ಮುಡಿ ಗಳ್ಳೆ | 4 — 6 | 5 — 5 |
| ಎಳ್ಳೆಣ್ಣೆ ಮುಡಿ ಗಳ್ಳೆ | 6 — 12 | 7 — 0 |
| ಅಮೃತಂಸ್ಟ ಸಕ್ಕರೆ ಗಳ್ಳೆ | 4 — 7 | 8 — 12 |
| ಹೊರಿಬ ಸಕ್ಕರೆ ಮುಡಿ ಗಳ್ಳೆ | 3 — 15 | 4 — 0 |
| ಹೊಸ ಮೆಣಸು | 5 — 5 | 5 — 12 |
| ಸಾಸಿವೆ ಮುಡಿ ಗಳ್ಳೆ | 4 — 12 | 5 — 0 |
| ಸೇಲಂ ಶಾಕ ಖಂಡಿ ಗಳ್ಳೆ | 275 — 0 | 300 — |
| ಶಾಲುಮೆಣಸು ಖಂಡಿ ಗಳ್ಳೆ | 170 — 0 | 180 — |
| ಮೆಂತ್ಯ ಮುಡಿ ಗಳ್ಳೆ | 27 — 0 | 28 — |
| ಗೇರುಬೀಜ ಮುಡಿ ಗಳ್ಳೆ | 2 — 4 | 2 — 6 |
| ಕಳ್ಳಿಬ ಖಂಡಿ ಗಳ್ಳೆ | 25 — 0 | 25 — 8 |
| ಹುಂಡ್ರ ಬಗೆಯ ಮುಡಿ ಗಳ್ಳೆ | 9 10 | 10 — 0 |
| ಹುಂಡ್ರ ಪಾತ್ರಗಳು ಮುಡಿ ಗಳ್ಳೆ | 15 — 0 | 16 — 0 |
| ತಂಬಿಕೆಟ್ಟ ಸೇರು ಗಳ್ಳೆ | 13 — 4 | 13 — 8 |
| ಜಿಲ್ಲಾ ಬಗೆಯ ಮುಡಿ ಗಳ್ಳೆ | 18 — 0 | 19 — 4 |
| ಕವಳ ಗಳ್ಳೆ | 19 — | 19 — 4 |
| ಮುಂಡ ಮುಳ ಖಂಡಿ ಗಳ್ಳೆ | 42 — 8 | 45 — |
| ಫ್ರಬೇರಿ ಶಾಕ ಖಂಡಿ ಗಳ್ಳೆ | 295 — | 300 — |
| ಹಳೆ ಅಡಕೆ | 180 — | 205 — |
| ಹೊಸ ಅಡಕೆ | 140 | 145 — |


# THE CANARA PUBLIC CONVEYANCE CO., LTD, MANGALORE.

(ESTABLISHED 1914.)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಬೇಕೆಂದಿರುವವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary**
*The Canara Public Conveyance Company Ltd Mangalore*



# Chikmagalur Public Conveyance Motor Service.

## CHIKMAGALUR

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

**ನಿರಾಯಾಸದ ಪ್ರಯಾಣ!** **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

## ಸಾಧು ಕೃಷ್ಣ ಚೈತನ್ಯರು.

ಇವರ ಜನ್ಮ ಭೂಮಿಯು ತ್ರಿವೆಂಡ್ರಂ ಆಗಿದ್ದು ಕೊಚ್ಚಿ ಸಂಸ್ಥಾನದ ದಿವಾನರೊಬ್ಬರು ಇವರ ಪಿತಾಮಹರಾಗಿದ್ದುದಲ್ಲದೆ ತ್ರಾವನ್ಕೂರು ಸಂಸ್ಥಾನದ ಯುವರಾಜರ ಅಧ್ಯಾಪಕರೊಬ್ಬರು ಇವರ ಜನಕನಾಗಿಯೂ ಇದ್ದರು. ದುರ್ಭಾಗ್ಯವಶಾತ್ ತನ್ನ ಹೆಂಡತಿ ಮಕ್ಕಳು ಅಕಾಲ ಮರಣ ಹೊಂದಲು ಸ್ವಾಮಿಜಿಯು ಕೇವಲ ವೈರಾಗ್ಯವನ್ನು ತಳೆದು ಹಿಮಾಲಯ, ನೇಪಾಳ, ಕಾಶ್ಮೀರವೇ ಮೊದಲಾದ ದೇಶ ವಿದೇಶಗಳಲ್ಲಿ ಸಂಚರಿಸುತ್ತಲೂ ಕುಸು ಸಮಯ ಬದ್ರಿನಾರಾಯಣ ಮುಂತಾದ ಉನ್ನತ ಪರ್ವತ ಪ್ರದೇಶಗಳಲ್ಲಿ ವಾಸಿಸುತ್ತಲೂ ಇದ್ದರು. ಅಲ್ಲದೆ, ತಾಪೋವನ ಪಟಯೋಗಿಯಾಗಿದ್ದುಕೊಂಡು ಅನೇಕಾನೇಕ ತ್ಯಾಗಿಯೋಗಿಗಳ ಸಂದರ್ಶನ ಲಾಭವನ್ನು ಪಡೆಯುತ್ತಲಿದ್ದು ಲೌಕಿಕ ಸುಖಸಂಪತ್ತುಗಳಿಂದ ಮೋಹಿಸಲ್ಪಡದೆ ಕೇವಲ ಸರಳ ಜೀವನದಿಂದಿದ್ದು ಅನೇಕ ರೋಗ ನಿವಾರಣೆಗೈಯ್ಯುವ ಸೂರ್ಯ ನಮಸ್ಕಾರದಲ್ಲಿ ಚೆನ್ನಾಗಿ ನುರಿತವರಾಗಿದ್ದು ಎಷ್ಟೋ ಮಂದಿ ರೋಗಿಗಳಲ್ಲಿ ಭಕ್ತಿಶ್ರೇಯಗಳನ್ನುತ್ಪನ್ನ ಮಾಡಿ ಸನ್ಮಾರ್ಗಗಾಮಿಗಳನ್ನಾಗಿ ಮಾಡುವ ಚೈತನ್ಯವು ಈ ಸಾಧು ಕೃಷ್ಣ ಚೈತನ್ಯರಲ್ಲಿರುವುದು.

ನಮ್ಮ ಕೇರಳ ರಾಜ್ಯವು ಎಷ್ಟೊಂದು ಸೃಷ್ಟಿಸೌಂದರ್ಯ ಸಂಪನ್ನವಾಗಿದ್ದರೂ ಸತ್ಯಶೋಧಕರಾದ ಸಾಧು ಸತ್ಪುರುಷರಿಗೆ ತಕ್ಕ ಆಶ್ರಯವನ್ನೀಯುವ ಒಂದು ಆಶ್ರಮ ಅಥವಾ ಗುರುಕುಲವಿಲ್ಲದಿದ್ದುದು ಕೊರತೆಯು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿಯೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಪ್ರಾಮುಖ್ಯ ರಾಜರಸ್ತೆಗೆ ಸಮೀಪವಾಗಿದ್ದು, ಕೊಲ್ಲೂರು ಮತ್ತು ಗೋಕರ್ಣಗಳಿಗೆ ಮಧ್ಯವಿರುವ ಜಿಲಂದಿಯೆಂಬಲ್ಲಿ ಆಶ್ರಮವೊಂದನ್ನು ನಿರ್ಮಿಸಿ ಶಾಂತ ಆಶ್ರಮ'ವೆಂದು ಅದನ್ನು ಕರೆಯಬೇಕೆಂದೂ ಸಾಧುಜಿಯ ಧ್ಯೇಯ. ಆಶ್ರಮ ನಿರ್ಮಾಣಕ್ಕೇನೂ ದ್ರವ್ಯಸಹಾಯವು ಅಗತ್ಯ. ಕಾರಣ ಈ ಒಂದು ಉತ್ಕೃಷ್ಟ ಕಾರ್ಯಕ್ಕೆ ತಮ್ಮ ಶಕ್ತ್ಯಾನುಸಾರ ದ್ರವ್ಯಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ವಾಚಕಮಹಾಶಯರಲ್ಲಿ ನಮ್ಮದೊಂದು ದೈನ್ಯವಿನಂತಿ. ಈ ಕೆಳಗೆ ನಮೂದಿಸಿರುವ ಮಹನೀಯರು ಅವರವರ ಹೆಸರ ಮುಂಗಡೆ ಸೂಚಿಸಿದ ದ್ರವ್ಯಸಹಾಯವನ್ನಿತ್ತು ಪ್ರೋತ್ಸಾಹಿಸಿದುದರಿಂದ ಅವರ ಉದಾರಬುದ್ಧಿಯು ಚಿರಸ್ಮರಣೀಯವಾಗಿದೆ. ಇಷ್ಟು ಮಂದಿ ಮಾತ್ರವಲ್ಲದೆ ಅನೇಕ ಹಿತಚಿಂತಕರು ಒಂದು ರೂಪಾಯಿ ಎಂಟಾಣೆಗಳನ್ನಿತ್ತು ಪ್ರೋತ್ಸಾಹಿಸಿರುವರು. ಸ್ಥಳದ ಅಭಾವದಿಂದ ಅವರ ಹೆಸರುಗಳನ್ನು ಇಲ್ಲಿ ಸೂಚಿಸಲಿಲ್ಲ. ಎಂತೂ ಈ ಮಹನೀಯರೆಲ್ಲರಿಗೂ ನಮ್ಮ ಅನಂತಾನಂತ ಕೃತಜ್ಞತಾ ಪೂರ್ವಕ ವಂದನೆಗಳು —

(೧) ಶ್ರೀಮತಿ ಸುಬ್ಬಮ್ಮ ರೂ ೪೯ (೨) ಶ್ರೀಯುತ ಬಟ್ಟು ಶೆಟ್ಟಿ, ವ್ಯಾಪಾರಿ, ಕಾಸರಗೋಡು ರೂ ೭೫ (೩) ಪಿ ಎನ್. ವಾಸುದೇವ ಭಟ್ ಸಂಸ್ಕೃತ ಪಂಡಿತರು ಕಾಸರಗೋಡು ರೂ ೨೫, (೪) ಶ್ರೀಂಗೇರಿ ಅಂಬಲೂರು ಕೃಷ್ಣ ರಾವ್ ರೂ ೧೦ (೫) ಟಿ ಯನ್ ಕೇಶು ಪಂಡಿತರು, ಉಡುಪಿ ರೂ ೧೦ (೬) ಕೆ ಲಕ್ಷ್ಮಣ ಹೆಗ್ಡೆ, ಕಾಸರಗೋಡು ರೂ ೫ (೭) ಪಿ ಅಚ್ಚು, ಕಾಸರಗೋಡು ರೂ ೩ (೮) ಶಂಕರಮ್ಮ ಕಾಸರಗೋಡು ರೂ ೨ (೯) ಡಾಕ್ಟರ್ ಪಿ ಸಿ ಗೋಪಾಲನ್ ನಂಬ್ಯಾರ್, ಪೇಕಲ ರೂ ೨

ಇದೇ ರೀತಿ ವಾಚಕ ವೃಂದವು ಸ್ವಾಮಿಜಿಯ ಧ್ಯೇಯದಲ್ಲಿ ಭಕ್ತಿಯುಳ್ಳವರಾಗಿ ತಮ್ಮ ಶಕ್ತ್ಯನುಸಾರ ಧನಸಹಾಯ ಮಾಡುವರೆಂದು ನಂಬುತ್ತೇವೆ. ಅಂತಹ ಮಹನೀಯರು ತಮ್ಮ ದಾನಿಸ ದ್ರವ್ಯವನ್ನು ಈ ಕೆಳಗೆ ನಮೂದಿಸಿದ ವ್ಯಕ್ತಿಗಳಲ್ಲಾರಿಗಾದರೊಬ್ಬರಿಗೆ ಕಳುಹಿಸಿಕೊಟ್ಟರೆ ಸ್ವಾಮಿಜಿಯ ಹಸ್ತಗತವಾಗುವುದು ಮತ್ತು ಅಂತಹರ ಉದಾರ ಬುದ್ಧಿಯು ಅಪ್ರತಿಮವೆಂದು ಗಣಿಸಲ್ಪಟ್ಟು ಆ ದ ... ವು ಚಿರಸ್ಥಾಯಿಯಾಗುವುದು —

ಇತಿ ಸ್ವಾಮಿಜಿಯ ಪಾದರೇಣು,

**K. Raghu,**
Asst Engineer's Office Puttur

## ಅಖಿಲ ಕರ್ನಾಟಕ ಚತುರ್ಥ ಹಿಂದೀ ಪ್ರಚಾರ ಸಮ್ಮೇಲನ ಮಂಗಳೂರು.

ಹಿಂದೀ ಪ್ರಚಾರ ಸಮ್ಮೇಲನದ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ನಿತ್ಯವೂ ಸಹಾನುಭೂತಿಪರ ಪತ್ರಗಳೂ ಸಂದೇಶಗಳೂ ಬರುತ್ತಿವೆ. ಪ್ರಮುಖ ಮುಖಂಡರೂ ಹಿಂದೀ ಪ್ರೇಮಿ ಬಂಧು ಭಗಿನಿಯರೂ ಸಮ್ಮೇಲನಕ್ಕೆ ಬರುವರಾಗಿ ಒಪ್ಪಿಗೆಯನ್ನಿತ್ತಿರುವರು. ವಾದ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವ ವಿದ್ಯಾರ್ಥಿಗಳು ಹಿಂದೀ ಪ್ರಚಾರಕರ ಶಿಫಾರಸು ಪತ್ರ ಸಮೇತ ತಮ್ಮ ಅರ್ಜಿಗಳನ್ನು ಮಾರ್ಚ ತಾ ೧೦ರೊಳಗೆ ಸ್ವಾಗತ ಸಮಿತಿಗೆ ಕಳುಹಿಸಬೇಕಾಗಿ ವಿನಂತಿ; ಸ್ವಾಗತ ಸಮಿತಿಯು ಪ್ರಬಂಧಗಳಿಗಾಗಿ ಈ ಕೆಳಗಣ ವಿಷಯಗಳನ್ನು ನಿಶ್ಚಯಿಸಿರುವುದು.

೧ ಕೊಂಕಣಿ, ಬಂಗಾಳಿ ಮುಂತಾದ ಆರ್ಯಭಾಷಾ ಪ್ರಭೇದಗಳನ್ನು ಮಾತಾಡುವವರು ಹಿಂದೀಯನ್ನು ಗ್ರಾಂಥಿಕ ಭಾಷೆಯಾಗಿ ಸ್ವೀಕರಿಸುವುದಕ್ಕೆ ಅನುಕೂಲತೆಗಳು. ೨. ದೇವನಾಗರಿ ಲಿಪಿಯನ್ನು ಅಖಿಲ ಕರ್ನಾಟಕದ ಸಾಹಿತ್ಯ ಲಿಪಿಯನ್ನಾಗಿ ಮಾಡುವುದಕ್ಕೆ ಸಾಧ್ಯತೆಗಳು. ೩. ಸ್ತ್ರೀಯರಲ್ಲಿ ಹಿಂದೀ ಪ್ರಚಾರ. ೪. ಹಿಂದೀಯನ್ನು ಕಲಿಸುವ ಸುಲಭ ಪದ್ಧತಿ ೫ ಹಿಂದೀಯನ್ನೂ ಅದರ ಸಾಹಿತ್ಯವನ್ನೂ ಕರ್ನಾಟಕದಲ್ಲಿ ಪ್ರಚಾರ ಮಾಡುವುದಕ್ಕೆ ಸಾಧನೋಪಾಯಗಳು ೬. ಶಾಲಾ ಕಾಲೇಜುಗಳ ಪಠ್ಯ ಕ್ರಮದಲ್ಲಿ ಹಿಂದೀಯನ್ನು ಅನಿವಾರ್ಯವನ್ನಾಗಿ ಮಾಡುವ ವಿಧಾನ ೭ ಕರ್ನಾಟಕದಲ್ಲೆಲ್ಲಾ ಹಿಂದೀಯನ್ನು ಪ್ರಚುರಪಡಿಸುವ ಸಲುವಾಗಿ ಪಂಚವರ್ಷೀಯ ಯೋಜನೆ (Five years' Plan). ೮. ಈ ಕೆಳಗಿನ ವಿಷಯಗಳಲ್ಲೊಂದರ ಕುರಿತು ಸವಿಸ್ತಾರ ಲೇಖನ. (ಅ) ಬಾಲಚರರೂ (Scouts) ಹಿಂದೀಯೂ. (ಆ) ಹಿಂದೀ ಪ್ರಚಾರ ಶಿಬಿರ. (ಇ) ನಾಟಕ, ಹರಿಕೀರ್ತನೆ ಹಾಗೂ ಯಕ್ಷಗಾನಗಳ ಮೂಲಕ ಹಿಂದೀ ಪ್ರಚಾರ.

ಪ್ರಬಂಧಗಳನ್ನು, ಕನ್ನಡ, ಹಿಂದೀ ಅಥವಾ ಇಂಗ್ಲೀಷಿನಲ್ಲಿ ಬರೆದು ಮಾರ್ಚ ತಾ ೨೦ರೊಳಗೆ ಈ ಕೆಳಗೆ ಸಹಿ ಮಾಡಿದವರಿಗೆ ಕಳುಹಿಸತಕ್ಕದು. ಸ್ಪರ್ಧೆಯ ಸಂಬಂಧವಾದ ನಿಯಮ ನಿಬಂಧನೆಗಳನ್ನು ಬರೆದು ತರಿಸಿಕೊಳ್ಳಬಹುದು.

ಶಿವಭಾಗ್,
ಕಂಕನಾಡಿ ಪೋಸ್ಟ ದ ಕ
ತಾ ೧೫—೨—೧೯೩೩

ಎನ್ ಲಲಿತಾಬ್ಬಾ ಸುಬ್ಬರಾವ್,
ಸ್ವಾಗತ ಅಧ್ಯಕ್ಷೆ

## ನೋಟೀಸು.

### ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 9/33.

ಸಗ್ರಿ ಮಂಜುನಾಥ ಉಪಾಧ್ಯ—ಅರ್ಜಿದಾರ

ಮತ್ತು

1 ನಾಗದೇವಿ ಅಮ್ಮ, 2 ಶ್ರೀದೇವಿ ಅಮ್ಮ—ಎದ್ರಿರು ಇವರೊಳಗೆ

ಮೇಲ್ಕಂಡ ಅರ್ಜಿ ವ್ಯವಹರಣೆಯ ಅರ್ಜಿದಾರನ ಅಣ್ಣನ ಎದ್ರಿರ ಗಂಡ ಮೃತ ಶ್ರೀನಿವಾಸಾಚಾರ್ಯನು ಶ್ರೀಮಾನ್ ಮಧ್ವಸಿದ್ಧಾಂತೋನ್ನಾಹಿನಿ ನಿದಿ ಲಿಮಿಟೆಡ್, ಟ್ರಿಪ್ಲಿಕೇನ್ ಮದ್ರಾಸ್ ಸೇವಿಂಗ್ಸ್ ಬೇಂಕಿನಲ್ಲಿ ನಂಬ್ರ 572/203, 572/136, 572/108, 572/117ನೇ ತಾ 15-4-31ರ ವರೇಗೆ ಡಿಪೋಜಿಟು ಇಟ್ಟ ಬಾಬ್ತು ಸದ್ರಿ ಮೃತಗೆ ಸಿಕ್ಕತಕ್ಕ ರೂ 256—12—4ನ್ನು ಅರ್ಜಿದಾರನು ತಾನು ವಸೂಲು ಪಡಿಯುವರೆ ಹಕ್ಕುದಾರನಾಗಿ ಆ ಬಗ್ಗೆ ತನಗ ಸಕ್ಸೆಶನ್ ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಸದ್ರಿ ಅರ್ಜಿಯು ತಾರೀಕು 20-3-33ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಆ ದಿವಸ ಸದ್ರಿ ಕೋರ್ಟು ಮುಂದೆ 10 ಘಂಟೆ ಒಳಗ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ

Udipi, 22-2-1933

**P. padmanabha Rao,**
vakil for Petitioner

### ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P 18/1933

1 ಪಮ್ಮು ಬಾಯಿ, 2 ಕುಪ್ಪಟಿ ಪುತ್ರನ್, 3 ಮುತ್ತಯ್ಯ ಟಿ ಪುತ್ರನ್, 4 ತೋಮುರ ಟಿ ಪುತ್ರನ್, 5 ಕೊರಚ ಬಾ—ಅರ್ಜಿದಾರರು

ಮತ್ತು

ಕೊರಗ ಬಾಬು—ರೆಸ್ಪೊಂಡೆಂಟ

ಮಂಗಳೂರು ತಾಲೂಕು ಸುರತ್ಕಲ್ ಗ್ರಾಮದ ಹೊಸಬೆಟ್ಟು ಎಂಬಲ್ಲಿ ತಾ. 6-12-1932ರಲ್ಲು ಮೃತಪಟ್ಟ ವೆಂಕಟ ಪಂಜ ಮರಕಾಲನ ಬಾಬ್ತು ಹೊರಗಿನಿಂದ ಬರಕಾ ಸಾಲಗಳನ್ನು ವಸೂಲು ಮಾಡುವರೆ ಅರ್ಜಿದಾರರ ಪೈಕಿ 1-2ನೇ ಅರ್ಜಿದಾರರ ಹೆಸರಿಗೆ ಸರ್ಟಿಫಿಕೇಟು ಕೊಡಬೇಕೆಂತ ವಗೈರೆ ಕಾಣಿಸಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತನ್ನ ಬಗ್ಗೆ ತಾ. 28-3-'33ಕ್ಕೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿನಲ್ಲಿ ಪೂರ್ವಾಹ್ನ 11 ಗಂಟೆಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

Mangalore, 25—2—1933

**K Sadashiva Rao,**
*Counsel for Petrs*

# WANTED.

Applications are invited for the post of the Manager of the Mangalore Sri Venkatramana Temple. Applicant should be a *member of the Gowda Saraswath Brahamin* Community and should have passed atleast the F A or in Intermediate examination of any university. The selected Candidate should be prepared to furnish security of not less than Rs 1000/ before assuming charge of the office. Pay Rs 50/ per month. Applications should be addressed to The President Council of Trustees Sri Venkatramana Temple Mangalore,' and should reach the Temple office on or before the 15th day of March 1933

Mangalore 26—2—33

(Sd) **M Ganesh Srinivasa Pai**
**Nagar Narasimha Shenoi,**
**B Venkatrao Baliga.**
*Trustees Sri Venkatramana Temple, Mangalore*

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ

ಅ.ನಂ. ನಂಬ್ರ 512/1932

ವಾದಿ - ಡಾಕ್ಟರ್ ಎಸ್ ಎಮ್ ತಿಪ್ರಸಿ, ಇವರ ಪವರ್ ಒಫ್ ಎಟರ್ನಿ ಹೋಲ್ಡರ್ ಬಿ ಪ್ರಭಾಕರ ರಾವ್

ಪ್ರತಿವಾದಿಗಳು—ಕ್ರಿಷ್ಣ ಶೆಟ್ಟಿ ವಗೈರೆ ಕೂಡಾ

5ನೇ ಪ್ರತಿವಾದಿ—ದಿ ಆರೂರು ಬೇಂಕ್ ಲಿಮಿಟೆಡ್ ಉಡ್ಪಿ, ಇದರ ಪ್ರೊಪ್ರೈಟರ್ ಆರೂರು ಕಿಂನಿ ಶೇಷಗಿರಿ ರಾವ್, ಮಂಜಯ್ಯನ ಮಗ, ಉಡುಪಿ ಕಸಬಾ ಇವರಿಗೆ—

ವಾದಿಯು ಆದವು ದಸ್ತಾವೇಜುಗಳ ಬಗ್ಗೆ ರೂಪಾಯಿ 2204-3-6ಕ್ಕೆ ಈ ಕೋರ್ಟಿನಲ್ಲಿ ದಾಖಲು ಮಾಡಿದ ದಾವೆಯು 1933ನೇ ಇಸವಿ ಮಾರ್ಚ ತಾ 10ಕ್ಕೆ ಈ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುವುದರಿಂದ ಆ ದಿವಸ ನಿಮಗೇನೂ ಆಕ್ಷೇಪಗಳಿದ್ದರೆ ಆ ದಿವಸ ಹಗಲು ಹತ್ತು ಗಂಟೆಗೆ ನೀವು ಖುದ್ದಿನಿಂದಾಗಲೀ ವಕೀಲ ದ್ವಾರವಾಗಲೀ ಉಪಸ್ಥಿತರಾಗತಕ್ಕದ್ದು ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು

ಪುತ್ತೂರು, ೨೨—೨—೧೯೩೩

**S Ananda Rao,**
*Vakil for Plaintiff.*


# WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co Ltd
64, 3rd Cross Road, Srirampur Extn
Malleswaram Post, BANGALORE

OR

*The Managing Agents,*
The S I, G. A. Co Ltd.
55 Poonamallee High Road, Kilpauk, MADRAS.

ಈ ದಿನ—
ನಿಮಗೆ ಬೇಕಾದುದು!
# ರಬ್ಬರ್ ಮೊಹರುಗಳು
ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿಶ್ಚಯವಾಗಿ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ತಮ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಳ್ಳಿಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳೆ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ

ವಿ ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು

ಹೆಡ್ ಆಫೀಸು:—

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No 2 ಬಲ್ಮಠ ರಸ್ತೆ, ಮಂಗಳೂರು,
ದ ಕನ್ನಡ



# "ಜಯಕರ್ನಾಟಕ"

ಕನ್ನಡನಾಡಿನ ಸರ್ವತೋಮುಖ ಉನ್ನತಿಯನ್ನೇ ಗುರಿಯಾಗಿಟ್ಟುಕೊಂಡ ಅಖಿಲಕರ್ನಾಟಕದ ಏಕಮಾತ್ರ ಪ್ರಮುಖ ಮಾಸಪತ್ರಿಕೆ ಪರದೇಶದಲ್ಲಿಯ ಮಾನ್ಯ ಕನ್ನಡಿಗರ ಲೇಖನಗಳೂ, ಕತೆ, ಕವಿತೆ, ಹರಟೆ, ಜನಪದಸಾಹಿತ್ಯ, ವಿನೋದ ಮೊದಲಾದುವುಗಳ ಮೇಲೆ ಕನ್ನಡ ವಿದ್ವನ್ಮಣಿಗಳ ಲೇಖನಗಳೂ, ಕನ್ನಡ ಚಿತ್ರಕಾರರ ಚಿತ್ರಗಳೂ ಬರುತ್ತಿವೆ ಪ್ರತಿ ತಿಂಗಳೂ ಕ್ರೌನ ಆಕಾರದ ೮೦ ಪುಟಗಳು ಮುದ್ದಾದ ಅಚ್ಚು ಪ್ರತಿ ತಿಂಗಳೂ ಮೊದಲನೆಯ ತಾರೀಖಿಗೆ ಹೊರಡುವ ಈ ಪತ್ರಿಕೆಗೆ ಚಂದಾದಾರರಾಗುವದು ಕನ್ನಡಿಗರ ಕರ್ತವ್ಯ ಜಾಹೀರಾತುದಾರರಿಗೆ ಉತ್ತಮ ಸ್ಥಾನ

ಹಿಂದುಸ್ಥಾನ ರೂ ೩-೮-೦ ಪರದೇಶ ೭-೦-೦

## ಜಯಕರ್ನಾಟಕ ಗ್ರಂಥಮಾಲೆ

ಕನ್ನಡಿಗರಲ್ಲಿ ಹೊಸ ಬಗೆಯ ವಾಚನಾಭಿರುಚಿಯನ್ನು ಹುಟ್ಟಿಸುವುದೇ ಇದರ ಉದ್ದೇಶ ವರ್ಷದಲ್ಲಿ ಕತೆ, ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಮತ್ತು ಲಲಿತ ಶೈಲಿಯ ಆರು ಪುಸ್ತಕಗಳಿಗೆ ಚಂದಾ ಹಣವು ಬರೇ ರೂ ೩-೪-೦

ಕ್ಯಾಟಲಾಗಿಗಾಗಿ ಬರೆಯಿರಿ ಎಲ್ಲ ಕಡೆಗೂ ಏಜಂಟರು ಬೇಕು

ಕಾರ್ಯದರ್ಶಿ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ



# S U N & CO
*Choukhamba Benares City*

**ಮೂರು ಇನಾಮುಗಳು**

ನಮ್ಮಲ್ಲಿ ಕಾಶ್ಮೀರ್ ಶಾಲುಗಳ ಗೆರತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3-8-0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8-0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು
ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)



# ಕೇಸರಿಯವರ
# ಲೋಧ್ರಾ
## ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ,ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ ೩-೦—೦
ಸಣ್ಣ ಬಾಟಲ್ ೬ ಔನ್ಸ್ ರೂ ೧—೧೦-೦

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗ ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರಂ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು
ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು



# The Zandu Pharmaceutical Works, Ltd, Bombay, 14
## ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ, ಲಿಮಿಟೆಡ್, ಬೊಂಬಾಯಿ, 14

ಅ[illegible]ಪ್ರಸಿದ್ಧವಾದ

# 'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ ಉಬ್ಬಸ ನಾನಾ ವಿಧವಾದ ದುರ್ಬಲತ್ವ ಕೆಮ್ಮು ಎದೆ ನೆಗಡಿ ಸ್ವರಭಂಗ ವ್ಯಾಪ್ತಿಯ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಶೇ ಜಾಡಿ ರೂ 10/- ಕ್ರಯ 1 ಶೇರು ಸೀಸೆ ರೂ 2/8 ½ ಶೇ ರೂ. 1/5 ¼ ಶೇ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಶಾ ಕಂಪೆನಿ ಡೈಮಂಡ್ ಬಿಲ್ಡಿಂಗು
ಸಿಸಿ ಏಜಂಟರು — ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ
ಸಬ್ ಏಜಂಟರು—ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್‌ಕೊ, ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ ಪೊಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



ದರಗಳಲ್ಲಿ —— ತರಗತಿಯಲ್ಲಿ —— ರಚನೆಯಲ್ಲಿ

ಎಲ್ಲವೂ ಎಲ್ಲರಿಗೂ ಮಹೋತ್ಸವವೆನಿಸುವಂತೆ,

**ನೂತನ ಸೃಷ್ಟಿಯಾಗಿಯೇ —— ನೂತನ ರೂಪದಲ್ಲೇ!!**

ಹೊಸವರ್ಷದಲ್ಲಿ ಶುಭವುಂಟಾಗ ಬಯಸುವವರು ಶುಭೋದಯದ ಚಿಹ್ನೆಯಾಗಿ ಹೊಸ ಖಾದಿಯನ್ನುಡಲೇ ಬೇಕು.

— ಹಾಗೆಂದೇ —

**ಎಲ್ಲರ ಎಲ್ಲ ಬಗೆಯ ಫ್ಯಾಶನುಗಳಿಗೊಪ್ಪುವಂತೆ, ತೀರ ಕಡಿಮೆ ದರಗಳಲ್ಲಿ ಹೊಸ ಹೊಸ ಮಾದರಿಗಳನ್ನು ಈಗಾಗಲೇ ತರಿಸಲಾಗಿದೆ**

ಶೀರೇ ಖಾದಿಯ ಕೆಲವು ದರಗಳು—

45"—7 ಆಣೆ, 50"—8 ಆಣೆ, 54"—9 ಆಣೆ.

**27" ಮತ್ತು 36" ಅಗಲದ ಖಾದಿಗೆ ಮತ್ತೂ ಕಡಿಮೆ ಬೆಲೆ!!!**

ವಿಶೇಷ ಸೂಚನೆಗಳು —ಹೊಸ ಖಾದಿಯನ್ನು ಮಾತ್ರ ನಾವು ವಿಕ್ರಯಿಸುತ್ತಿರುವೆವೆಂದು ನಾವು ಹೊಸದಾಗಿ ತಿಳಿಸಬೇಕಾಗಿಲ್ಲದ ಕಾರಣ ಹಳೇ ಖಾದಿಯನ್ನು ಇತರ ಕಡೆಗಳಲ್ಲಿ ಕೊಂಡುಕೊಂಡು ಮೋಸಹೋಗದಿರೆಂದು ಸೂಚನೆ.

**ಮಂಗಳೂರು ಸ್ವದೇಶೀ ಸ್ಟೋರ್ಸ್, ರಥಬೀದಿ, ಮಂಗಳೂರು.**

## ನಾವು ಯಾರು?
## ಆರ್ಯರೋ ಹಿಂದುಗಳೋ?

ಲೇಖಕ:—ಜಂಬಿಕ ಶ್ರೀ ಲಕ್ಷ್ಮೀನಾರಾಯಣ ವಿದ್ಯಾರ್ಥಿ

ಭಾರತವಾಸಿಗಳಾದ ನಾವೆಲ್ಲರೂ ಬಹುಕಾಲದಿಂದ "ಹಿಂದೂ"ಗಳೆಂಬುದಾಗಿ ಕರೆಯಲ್ಪಡುತ್ತಿದ್ದೇವೆ ಆದರೆ ಇದು ನಮ್ಮ ನಿಜವಾದ ಹೆಸರೋ? ಅಥವಾ ಯಾವುದಾದರೊಂದು ಅನ್ಯ ಕಾರಣದಿಂದ ಈ ಹೆಸರು ನಮಗೆ ಬಂತೋ ಎಂಬುದನ್ನು ತಿಳಿದುಕೊಳ್ಳಲು ನಮ್ಮವರಲ್ಲಿ ಹೆಚ್ಚಿನವರು ಇದು ವರೆಗೂ ಪ್ರಯತ್ನಮಾಡಲಿಲ್ಲವೆನ್ನಬಹುದು ಆದುದರಿಂದ ಬಹುಕಾಲದಿಂದ ನಾವು ಎಲ್ಲರಿಂದಲೂ ಹಿಂದೂಗಳೆಂಬದಾಗಿ ಕರೆಯಲ್ಪಡುತ್ತಿದ್ದೇವೆ, ಇದೇ ಹೆಸರಾದರೂ ಸ್ಥಿರ ಉಳಿಯುತ್ತಿದ್ದರೂ ಆಗಬಹುದಿತ್ತು. ಪರಂತು ಬರಬರುತ್ತ ಒಂದೊಂದೇ ಹೆಸರುಗಳು ಹುಟ್ಟುಗುತ್ತಾ ಬಂದುವು ಆ ಹೆಸರುಗಳೆಲ್ಲವೂ ಜಾತಿಗಳಾಗಿ ಪರಿಣಮಿಸಿದವು. ಇದರಿಂದಾಗಿ ಈಗ ನಾವು ಹಿಂದೂ ಎಂಬ ಹೆಸರಿಗೂ ಯೋಗ್ಯರಾಗಿದ್ದೇವೋ ಇಲ್ಲವೋ ಎಂಬ ಅನುಮಾನವು ಸಹ ಒಂದೊಂದು ವೇಳೆ ಉಂಟಾಗುತ್ತದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಆದಿ ಆರ್ಯರು ವಿದೇಶಗಳಿಂದ ಹಿಂದೂ ದೇಶಕ್ಕೆ ಬಂದರೆಂದೂ ಅದು ವರೆಗೆ ಹಿಂದೂಸ್ಥಾನದಲ್ಲಿ ಒಹು ವಿಧದ ಕಾಡುನಿವಾಸಿಗಳೂ, ಅನಾಗರಿಕರೂ ವಾಸಿಸುತ್ತಿದ್ದರೆಂದೂ, ವಿದೇಶದಿಂದ ಬಂದ ಆರ್ಯರು ಇಲ್ಲಿಯವರನ್ನು ಜಯಿಸಿದರೆಂದೂ ಅನೇಕರು ಹೇಳುತ್ತಾರೆ ಇದರ ಸಮರ್ಥನೆಗೆ ಬೇಕಾಗಿ ಹಲಕೆಲವು ಇತಿಹಾಸ ಗ್ರಂಥಗಳನ್ನೂ ಮನಬಂದಂತೆ ಬರೆದಿರುತ್ತಾರೆ ಇವುಗಳಲ್ಲಿ ಹೆಚ್ಚಿನ ಪುಸ್ತಕಗಳು ಈಗಿನ ವಿದ್ಯಾರ್ಥಿಗಳ ಗಿಳಿಪಾಠಕ್ಕಾಗಿ ಉಪಯೋಗಿಸಲ್ಪಡುತ್ತವೆ

ಪರಂತು ಈ ಅಭಿಪ್ರಾಯವು ನ್ಯಾಯವಾದುದಲ್ಲ, ಆರ್ಯರು ವಿದೇಶದಿಂದ ಬಂದವರಲ್ಲ ತಮ್ಮ ಜನಾಂಗದ ಪ್ರತಿಷ್ಠೆಯನ್ನು ಬೆಳೆಸಬೇಕೆಂಬ ಸ್ವಾರ್ಥದಿಂದ ಕೆಲವು ಆಂಗ್ಲ ವಿದ್ವಾಂಸರು ಈ ರೀತಿ ಹೇಳತೊಡಗಿದರು ಆರ್ಯರೇ ಭಾರತವರ್ಷದ ಮೂಲನಿವಾಸಿಗಳೆಂಬುದನ್ನು ಈಗಿನ ಅನೇಕ ವಿದ್ವಾಂಸರು ಸಿದ್ಧಪಡಿಸಿದ್ದಾರೆ ಇಲ್ಲಿಯ ಜನರಿಗೆ ಮೊದಲು "ಆರ್ಯ"ರೆಂಬ ಹೆಸರೇ ಇತ್ತು ಈಗ ಇರುವಂಥಾ "ಹಿಂದೂ ಹೆಸರು ಆ ಮೇಲೆ ಅನ್ಯರಿಂದ ಇಡಲ್ಪಟ್ಟದ್ದು

ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಎಲ್ಲಿಯೂ 'ಹಿಂದೂ ಶಬ್ದವು ಕಾಣುವುದಿಲ್ಲ ಫಾರಸಿ ಭಾಷೆಯ ಕೋಶಗಳಲ್ಲಿ ಈ ಶಬ್ದವಿದೆ ಅದರಲ್ಲಿ ಇದಕ್ಕೆ ಕಪ್ಪು ಬಣ್ಣ, ಕಪ್ಪು ಮನುಷ್ಯ, ಕಪ್ಪು ಗುಲಾಮ, ನೀಗ್ರೊ, ಹಬಶಿ, ಕಾವಲುಗಾರ ಇತ್ಯಾದಿ ಅರ್ಥಗಳನ್ನು ವಿವರಿಸಲಾಗಿದೆ ಹಿಂದೂ ಶಬ್ದವು ಫಾರಸಿ ಭಾಷೆಯದ್ದಲ್ಲವೆಂದು ವಿನಾಯಕ ರಾವ್ ಸಾವರ್ಕರಂತಹವರು ಅಭಿಪ್ರಾಯಪಡುತ್ತಾರೆ ಅವರು ಈ ಹೆಸರನ್ನು "ಸಪ್ತಸಿಂಧು ಎಂಬ ಸಂಸ್ಕೃತ ಶಬ್ದದಿಂದ ಧೃಷ್ಟೀಕರಿಸಲಿಕ್ಕೆ ಪ್ರಯತ್ನಿಸುತ್ತಾರೆ ಆ ಬಗ್ಗೆ ಅವರು ಕೆಳಗೆ ಬರೆದ ಸಂಸ್ಕೃತ ಶ್ಲೋಕವನ್ನು ಜನತೆಯ ಮುಂದಿಡುತ್ತಾರೆ

ಆ ಸಿಂಧು ಸಿಂಧು ಪರ್ಯಂತಾ ಯಸ್ಯ ಭಾರತ ಭೂಮಿಕಾ ।
ಪಿತೃಭೂಃ ಪುಣ್ಯಭೂಶ್ಚೈವ ಸವೈ ಹಿಂದುರಿತಿ ಸ್ಮೃತಃ ।

"ಸಿಂಧೂ ನದಿಯಿಂದ ಮೊದಲ್ಗೊಂಡು ಹಿಂದೂ ಸಾಗರದ ವರೆಗೆ ಇರುವ ಸಮಗ್ರ ಭಾರತವರ್ಷವು ಯಾರ ಪಿತೃಭೂಮಿಯಾಗಿರುವುದೋ, ಮತ್ತು ಯಾರು ಈ ಭೂಮಿಯನ್ನು ಪುಣ್ಯಭೂಮಿಯೆಂದು ಹೇಳುತ್ತಾರೋ ಅವರೆಲ್ಲರೂ ಹಿಂದುಗಳು"

ಈ ವಾಕ್ಯದ ಸಮರ್ಥನೆಗಾಗಿ ಅವರು ವೇದ, ಬ್ರಾಹ್ಮಣ, ಉಪನಿಷತ್, ರಾಮಾಯಣ, ಮಹಾ ಭಾರತ ಇತ್ಯಾದಿ ಗ್ರಂಥಗಳ ಪ್ರಮಾಣವನ್ನು ಕೊಡದೆ "ಮೇರುತಂತ್ರ"ವೆಂಬ ಒಂದು ಪೌರಾಣಿಕ ಗ್ರಂಥದ ಆಧಾರವನ್ನು ಕೊಡುತ್ತಾರೆ ಹಿಂದೂ ಶಬ್ದವು ಸಂಸ್ಕೃತ ಶಬ್ದವಲ್ಲವಾದರೂ ಸ್ಫೂರ್ತಿದಾಯಕವಾದದ್ದಲ್ಲ ಪ್ರಾಚೀನ ಆರ್ಯರು ಸಿಂಧೂ ನದಿ ತಟದಲ್ಲಿ ವಾಸವಾಗಿರುತ್ತಿದ್ದರೆಂ ಭೂಗೋಲದ ವಿಷಯವು ಮಾತ್ರ ಇದರಿಂದ ವ್ಯಕ್ತವಾಗುತ್ತದೆ ವೇದ ಮತ್ತು ಅದಕ್ಕನುಕೂಲವಾದ ಗ್ರಂಥಗಳಲ್ಲಿ ಆರ್ಯ ಶಬ್ದವೇ ಕಂಡುಬರುತ್ತದೆ ನಿರುಕ್ತ ಗ್ರಂಥದಲ್ಲಿ ಆರ್ಯ ಶಬ್ದಕ್ಕೆ "ಈಶ್ವರ ಪುತ್ರ" ಎಂಬುದಾಗಿ ಅರ್ಥವನ್ನು ವಿವರಿಸಿದೆ. ಒಬ್ಬ ತಂದೆಗೆ ಅನೇಕ ಮಂದಿ ಮಕ್ಕಳಿದ್ದರೂ ಯಾವಾತನು ತಂದೆಯ ಇಚ್ಛೆಯಂತೆ ನ್ಯಾಯಮಾರ್ಗದಲ್ಲಿ ನಡೆಯುತ್ತಾನೋ, ಅವನೇ ನಿಜವಾದ ಪುತ್ರನೆನ್ನಲ್ಪಡುವನು ಮತ್ತು ತಂದೆಗೆ ಅವನ ಮೇಲೆ ತುಂಬಾ ಪ್ರೀತಿ ಇರುವುದು ಇದೇ ಪ್ರಕಾರ ಪರಮಾತ್ಮನ ನೀತಿನಿಯಮಗಳನ್ನು ಮೀರದೆ ಸದಾ ಸಮಯ ಸತ್ಯ ಧರ್ಮಾಚರಣೆಯಲ್ಲಿರುವವರೇ ಪರಮಾತ್ಮನ ನಿಜವಾದ ಮಕ್ಕಳು, ಇವರೇ ಆರ್ಯರೆನ್ನಲ್ಪಡುವರು

[ಸಶೇಷ]

+ + + +

---

ಅವರೆಲ್ಲರನ್ನೂ ಆದರ್ಶ ಮಹಿಳೆಯರನ್ನಾಗಿ ಮಾಡಬೇಕು ಬಾಲ್ಯವಿವಾಹವೆಂಬ ಘೋರ ಪದ್ಧತಿಯನ್ನು ನಾಶಮಾಡಬೇಕು ಇನ್ನಿತರ ಸಂಪ್ರದಾಯಗಳನ್ನು ಕಟ್ಟಿಕೊಂಡು ಸ್ತ್ರೀಯರನ್ನು ಅಜ್ಞಾನದಲ್ಲಿ ದೂಡಬಾರದು ಹೀಗೆ ಮಾಡಿದರೆ ಭಾರತವರ್ಷದ ಮಹಿಳಾ ಸಮಾಜವು ಈಗ ಇದ್ದುದಕ್ಕಿಂತಲೂ ಮಿಗಿಲಾಗಿ ಜಗತ್ತಿನಲ್ಲಿ ಆದರ ಸತ್ಕಾರಕ್ಕೆ ಯೋಗ್ಯವಾಗುವುದು. ಆದರೆ ಇದೆಲ್ಲಾ ಕಾರ್ಯವು ವಿಶಾಲವಾದ ಹಿಂದೂ ಸಮಾಜದ ಕೈಯಲ್ಲಿದೆ ಇನ್ನಾದರೂ ಹಿಂದೂ ಸಮಾಜವು ಶತಮಾನಗಳಿಂದಲೂ ಬಿದ್ದಿರುವ ನಿದ್ರೆಯಿಂದೆಚ್ಚತ್ತು ಮಹಿಳೆಯರ ಉದ್ಧಾರದ ಕಡೆಗೆ ತನ್ನ ಕರ್ತವ್ಯ ಪಥವನ್ನು ಮುಂದರಿಸವುದೆ?

— ಸಂಪೂರ್ಣಂ —

+ + + +

## ಭಾರತವರ್ಷದ ಮಹಿಳಾ ಸಮಾಜ.

ಲೇಖಿಕಾ – ಶ್ರೀಮತಿ ಶಾಂತಾದೇವಿ ಗುಲ್ವಾಡಿ, ಮಂಗಳೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಇತರರು ಒಂದಿಲ್ಲೊಂದು ವಿಧದ ಗುಪ್ತ, ಯಾ ಬಹಿರಂಗವಾದ ಅಸ್ಪೃಶ್ಯದಲ್ಲಿ ಇದ್ದೇ ಇರುವರು ಮಾಸಿಕ ಧರ್ಮ (ರಜಸ್ವಲೆಯಾಗುವುದು) ಇತ್ಯಾದಿ ವ್ಯವಹಾರಗಳಲ್ಲಿ ಈಗಿನ ನವಸುಧಾರಣೆಯ ಪದ್ಧತಿಯಿಂದ ಅನೇಕ ಮಹಿಳೆಯರು ತಮ್ಮ ದೇಹಾರೋಗ್ಯವನ್ನು ಕೆಡಿಸಿಕೊಂಡು ಬಹು ವಿಧದ ಕಷ್ಟನಷ್ಟಗಳಿಗೆ ಗುರಿಯಾಗುವುದೂ ಉಂಟು ಪ್ರಾಚೀನ ಪದ್ಧತಿಯಂತೆ ರಜಸ್ವಲಾ ಸ್ತ್ರೀಯರು ಐದು ದಿವಸಗಳ ವರೆಗೆ ಪ್ರತ್ಯೇಕ ಕುಳಿತುಕೊಳ್ಳುವುದಿತ್ತು ಇವರ ಶ್ವಾಸವು ಕೂಡ ಇತರರಿಗೆ ಹಾನಿಕಾರಕವಾಗಿರುವುದೆಂದು ಸುಶ್ರುತಾದಿ ಪ್ರಸಿದ್ಧ ಗ್ರಂಥಗಳಲ್ಲಿ ಬರೆದಿರುವುದು ಆದರೆ ಈಗಿನ ಕಾಲದಲ್ಲಿ ಐದು ದಿವಸಗಳ ವರೆಗೆ ಪ್ರತ್ಯೇಕವಿರುವುದಂತಿರಲಿ, ರಜಸ್ವಲೆಯರಾಗುತ್ತಾರೋ ಇಲ್ಲವೋ ಎಂಬಂತೆ ಎಲ್ಲವರೊಂದಿಗ ಬೆರೆತು ಅಲೆದಾಡುತ್ತಾರೆ ಇದರಿಂದ ಗರ್ಭಾಶಯದ ಸ್ವಚ್ಛತೆಗ ತಡೆಯುಂಟಾಗಿ ಶರೀರದಲ್ಲಿ ತರತರದ ರೋಗಾಣುಗಳ ಉಂಟಾಗುತ್ತವೆ ಈ ಎಲ್ಲ ಕಾರಣಗಳನ್ನೂ ಪರಿಶೀಲಿಸುವಲ್ಲಿ ಆಧುನಿಕ ಕಾಲದ ಸುಧಾರಿತ ಶಿಕ್ಷಣಕ್ಕಿಂತ ಪ್ರಾಚೀನ ಕಾಲದ ಆಚಾರಗಳೇ ಬಹಳ ಉತ್ತಮವಾಗಿದ್ದುವು ಮಹಮ್ಮದೀಯ ಶಾಸನ ಕಾಲದಲ್ಲಿ ಕಲಾವತಿ, ಕರ್ಮಾಬಾಯಿ, ದುರ್ಗಾವತಿ ಮುಂತಾದ ವೀರಾಂಗನೆಯರು ರಣಕ್ಷೇತ್ರದಲ್ಲಿ ದುಮ್ಮಿಕ್ಕಿ ಮೊಗಲ ಸಾಮ್ರಾಜ್ಯದ ಅಡಿಗಲ್ಲನ್ನೇ ಕಿತ್ತೊಗೆಯಲು ಸನ್ನದ್ಧರಾದುದು ನಮಗೆ ಗೊತ್ತೇ ಇದೆ ಆದರೆ ವರ್ತಮಾನ ಕಾಲದ ಪರಿಸ್ಥಿತಿಗೂ ಅಂದಿನ ಪರಿಸ್ಥಿತಿಗೂ ಬಹು ವಿಧದ ವ್ಯತ್ಯಾಸಗಳು ಕಂಡುಬರುತ್ತವೆ ಒಂದೇ ಮಾತಿನಲ್ಲಿ ಹೇಳುವುದೆಂದರೆ ಆಧುನಿಕ ಕಾಲದ ಮಹಿಳಾ ಸಮಾಜವು ಗೂಡಿನಲ್ಲಿರುವ ಹಕ್ಕಿಗಳೋಪಾದಿಯಲ್ಲಿ ಪರಾಧೀನತೆಯಲ್ಲಿದೆ

ಭಾರತವರ್ಷದ ಸೌಭಾಗ್ಯ ದೇವತೆಯು ಇತ್ತೀಚೆಗ ಭಾರತೀಯರ ಮೇಲೆ ಸಂಪೂರ್ಣವಾಗಿ ಒಲಿದಂತಿದೆ ಆದುದರಿಂದಲೇ ಅನೇಕ ಮಹಿಳೆಯರು ಈಗೀಗ ದೇಶ, ಮತ್ತು ಜನಾಂಗದ ದುಃಖದ ಪರಿಸ್ಥಿತಿಯನ್ನು ಚೆನ್ನಾಗಿ ಅರ್ತಿಸಿ ಅದರ ಪುನರುಜ್ಜೀವನಕ್ಕೆ ಸೊಂಟ ಕಟ್ಟಿರುತ್ತಾರೆ ಇದರ ಪರಿಣಾಮವಾಗಿ ಭಾರತೀಯ ನವಯುವತಿಯರಲ್ಲಿಯೂ ಒಂದು ತರದ ವಿಶೇಷ ಉತ್ಸಾಹವು ತಲೆದೋರಿರುವುದು ಇನ್ನೂ ಕೆಲವು ಮಹಿಳೆಯರು ಪ್ರೌಢ ಶಿಕ್ಷಣವನ್ನು ಪಡೆದು ದೊಡ್ಡ ದೊಡ್ಡ ಪದವಿಗಳಲ್ಲಿ ತಮ್ಮ ಯೋಗ್ಯತೆಯನ್ನು ಜನತೆಯ ಮುಂದಿಟ್ಟಿರುವರು.

ಇದೇ ಪ್ರಕಾರ ಹಿಂದೂ ಸಮಾಜವು ತನ್ನಲ್ಲಿ ಬಹುಕಾಲದಿಂದ ಅಂಟಿಕೊಂಡಿದ್ದ ಬಹು ವಿಧದ ಅಂಧಶ್ರದ್ಧೆಗಳನ್ನು ನಿವಾರಿಸಿ ವಿಶಾಲ ಹೃದಯತೆಯಿಂದ ಎಲ್ಲಾ ಮಹಿಳೆಯರಿಗೆ ಧಾರ್ಮಿಕ, ಸಾಮಾಜಿಕ, ಮತ್ತು ನೈತಿಕ ಶಿಕ್ಷಣವನ್ನು ಕೊಟ್ಟು


# The Canara Industrial & Banking Syndicate Limited.

**Established in 1925.** Branches Mangalore, Payyanur, Brahmavar, Kumta, Karwar, Hubli & Honnavar **Head Office — UDIPI**

Authorised Capital Rs 1 00 000 Subscribed Capital Rs 1 00 000 Paid up Capital Rs 20 000

**Fixed Deposits**

Fixed deposits are received at any office of the Syndicate at the undermentioned rates of interest (interest being paid half yearly)

| | |
|---|---|
| Deposits of ~~3, 4~~ and 5 months | 4% |
| Deposits of 6, 7 and 8 months | 4½% |
| Deposits of 9, 10 & 11 months | 5% |
| Deposits of 12 months up to 23 months | 5½% |
| Deposits of 24 months | 6% |

Interest allowed on current account at 2½ percent, Savings Bank at er cent

Long and Short term Loans on attractive Schemes are grant

ALL KINDS OF BANKING BUSINESS UNDERTAKEN

Udipi,
20—1—1933.

P A Pai Bros,
*Managing Agents*

ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನ್ಯುಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷಧ ಕೊಟ್ಟು ರಕ್ಷಿಸಿರಿ!

ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮುವಿನಿಂದ ಪಾರುಮಾಡಿಯದೆ. ಮಹದುಪಾಯಕರವಾದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯೌಷಧವಾಗಿದೆ.

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೋರೆಟರಿಯವರಿಂದ ಸಿದ್ಧವಾದುದು.

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.

ಕೊ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ರಥಬೀದಿ, ಮಂಗಳೂರು.

ಡಾಕ್ಟರ ವಾಮನ ಗೋಪಾಳರವರ




ಐಹಿಡಾಯುಜ್ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ... ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,

ಠಾಕುರದ್ವಾರ, ಮುಂಬಾಯಿ ೨. ಸ್ಟೋಕಿಸ್ಟ ಪಾ ಕಂಪೆನಿ,

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು.

THE SOUTH INDIA CO-OPERATIVE INSURANCE SOCIETY, LIMITED, MADRAS.

**LOCAL BOARD:—**

THE SOUTH CANARA CENTRAL CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

*FOR TERMS APPLY TO:—*

***The Secretary,***

South Canara Central Co-operative Bank, Ltd., KODIALBAIL P. O. (Mangalore)

*SOUTH CANARA*

ವೈದ್ಯ ಮೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ. ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಮೈನೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫. ಟ. ಖ. ರೂ. ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ. ೧೧. ಮೂರ ಡಬ್ಬಿಗೆ ರೂ. ೧॥ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಬಟುಟೆ, ಎಲ್. ಎಮ್. ಎಂಡ್. ಎಸ್., ಜೆ. ಪಿ., ಮುಂಬಯಿ:— ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ:— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾ, ಗಿರಿ

ಪತ್ತೆ:— ವೈದ್ಯ ಮೋಹನಲಾಲ ಎಸ್. ಔಷಧಾಲಯ, ಮು. ಪೋ. ಮಿರಜ, S. M. C.

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಒಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲ ಪೂರ್ಣ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳವಾಮಾಹಿಮ. ಠಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦||೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಸೆರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ, ಮೊ. ರಾ. ಎ. ಎಮ್. ಇನ್ನಪಿಳ್ಳೆರ ಬೆಳಗಾಂವ:— ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಸೆರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ... ಟ. ಖ. ಆಣೆ ೪.

ವಿಳಾಸ— ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

ಮಾರಾಟಕ್ಕಿವೆ! ಮಾರಾಟಕ್ಕಿವೆ!

ಕಾಫಿ ಪ್ಲೇಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.


ಕ್ಲೈರ್ಮಹಾರ್ಹೈಸ್ತುತುರ್ಪನ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯುಲನುಪಮರತ್ನಗಳು ಸೊ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ಕೆರಳೆ ಬಲ್ಲರ್ಕೆ ತೊರೆದು ಧೀರರು ನಿಶ್ಚಿತಾರ್ಥವನು । ೧ ॥


ಪುಸ್ತಕ ೨೭. ಮಂಗಳೂರು ತಾ ೧೦ನೇ ಶುಕ್ರವಾರ ಮಾರ್ಚಿ ೧೯೩೩ (10-3-'33) ಸಂಚಿಕೆ ೧೦



## THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Goondapoor, Mangalore, Shimoga & Madras**

ಹೆಡ್ ಆಫೀಸು:—ಉಡುಪಿ ಶಾಖೆ - ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 28TH FEBRUARY 1933

| | Capital and Liabilities | | | Property and Assets | |
|---|---|---|---|---|---|
| 1 | Paid up Capital | Rs 2,25,000-0 0 | 1 | Premises, Building, Furniture etc | Rs 65 906 12 6 |
| 2 | Reserve and other funds | , 2,55 000 0-0 | 2 | Government securities | ,, 2 93 088 4 0 |
| 3 | Deposits | , 21 34 829 15 5 | 3 | Authorised Investments | , 22 21,154 1 4 |
| 4 | Due to Bankers | , 65 571 0 6 | 4 | Bills for collection | 4,194 7 0 |
| 5 | Sundries | ,, 53 129 11 7 | 5 | Sundries | ,, 32 392 10 4 |
| 6 | Bills for collection per contra | 4,194- 7 0 | 6 | Cash in hand & with bankers | , 1 00 986 15 2 |
| | Total | 27,17 725 2-4 | | Total | 27,17 725 2 4 |

UDIPI 4- '33

**N. ANANDA RAO,**
*Secretary & Manager*

( Regd )

## ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಷ್ಟಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯು ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

**ರಿಂಗ್‌ವರ್ಮ್ ಮುಲಾಮು** — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ- 3—8—0 ಅಂಚೆವೆಚ್ಚ ಪ್ರತ್ಯೇಕ

**ಅಮೃತಾಂಜನ ಡಿಪೋ.**

ಮದರಾಸು ಮತ್ತು ಬೊಂಬಾಯಿ.



ಸಣ್ಣ ಹುಡುಗರ ಸಲುವಾಗಿ,

## ಡೋಂಗರೆ

ಇವರ

## ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

**ಕೇ. ಟಿ. ಡೋಂಗರೇ ಕಂಪೆನಿ.**
ಗಿರಗಾಂವ, ಮುಂಬಯಿ.

ಏಜಂಟರು— ... ಕಂಪೆನಿ, ...



INSURE WITH
**The Popular Insurance Co. Ltd.**
Head Office -MANGALORE, S India
**First of its kind in the West Coast**

CHAIRMAN
***Dewan Bahadur N Subba Rao***

***STRIKING FEATURES***

**Policy Conditions Liberal!**
**Claims Settlement Prompt!**

MANAGEMENT PURELY INDIAN.

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS
LIBERAL TERMS TO COMPETENT MEN

*For further particulars apply to the Head Office.*

## 3500!!!

### "ಮೊದಲು ಆ ಲೋಕದಲ್ಲಿ,-ಈಗ ಈ ಲೋಕದಲ್ಲಿ!"

"ಕರ್ಮದ ಫಲವು ದೊರೆಯದಿರುವುದಿಲ್ಲ; ಮೊದಲು ಆ ಲೋಕದಲ್ಲಿ,—ಈಗ ಈ ಲೋಕದಲ್ಲಿ!" ಎಂಬುದು ಕೆಲ ಹಿರಿಯರ ಮಾತು. ಇದರಲ್ಲಿ ಸತ್ಯಾಂಶವಿದೆ.

× + × ×

ಒಂದು ಕಾಲದಲ್ಲಿ ಮುಸಲ್ಮಾನ ರಾಜರು ಹಿಂದೂದೇಶವನ್ನಾಳಿದರು. ಎಷ್ಟರ ತನಕ ಅವರಲ್ಲಿ ಧರ್ಮನಿಷ್ಠೆ, ಅಷ್ಟರ ತನಕ ಅವರು ಬಾಳಿದರು. ಕಾಲವಶಾತ್ ಅವರು ಅಧರ್ಮಿಗಳಾದರು. ಔರಂಗಜೇಬು, ಟೈಮೂರ, ಟಿಪ್ಪುಗಳೇನು ಮಾಡಲಿಲ್ಲ?

× + + ×

ಧರ್ಮಕ್ಕೆ ಗ್ಲಾನಿಯಾಗಿ ಅಧರ್ಮವು ಹೆಚ್ಚು ತೋರಿಸುವಾಗ ಶಿವಾಜಿ ಮುಂತಾದವರು ಹುಟ್ಟಿ ಅಧರ್ಮಸಾಮ್ರಾಜ್ಯವು ನಾಶವಾಯಿತು. ಹಿಂದೂ ಸಾಮ್ರಾಜ್ಯ ಸ್ಥಾಪನೆಯಾಯಿತು.

× × × ×

ಹಿಂದೂಗಳು ಕೂಡ ಶೀಘ್ರವಾಗಿ ಧರ್ಮದ ಮೆಟ್ಟಿಲನ್ನಿಳಿದು ಅಧರ್ಮದ ಕುರುಹುಗಳಾದರು. ಆಗ ಬಂದರು ಬ್ರಿಟಿಷರು—ಯುರೋಪಿಯನರು.

× × × ×

ಸ್ವಲ್ಪ ದಿವಸಗಳ ತನಕ ಇವರಲ್ಲೂ 'ಧರ್ಮ' ವಿತ್ತು. ಈಗ ಬಂದಿದೆ ಗಾಂಧೀಯುಗ! ಧರ್ಮಾಧರ್ಮಗಳ ಹೋರಾಟವಾಗುತ್ತಿದೆ ಈಗ!

× × × ×

ಇಲ್ಲಿ ನಾವು ಹುಟ್ಟು ಉದಾಹರಣೆಗಳು, ಮುಖ್ಯವೇನೆಂದರೆ, ಜಪಾನ ಚೀನಾಗಳೊಳಗೆ ನಡೆಯುತ್ತಿರುವ ಯುದ್ಧದ ಕುರಿತು ಸರ್ವರಿಗೂ ತಿಳಿದಿದೆ.

× × × ×

ಕಳೆದ ೧॥ ವರ್ಷದಿಂದ ಜಾಪಾನಿಯರು ಧರ್ಮಗೆಟ್ಟು, ಬಡವರಾದ ಚೀನಿಯರ ಮೇಲೆ ದಂಡೆತ್ತಿ ಹೋಗಿದ್ದು ಮಂಚೂರಿಯಾವನ್ನು ಸೂರೆಗೈದು, ಕಳೆದ ಶುಕ್ರವಾರ ಜೆಹೋಲ್ ನಗರವನ್ನು ಹೊಕ್ಕರಂತೆ!

× × + ×

ನೋಡಿ ಈಗ ಧರ್ಮದ ಶಕ್ತಿ! ತಾ. ೩ನೇ ದಿನ ಭೀಕರ ಭೂಕಂಪವುಂಟಾಗಿ ಜಪಾನ್ ಸರಕಾರದ ಅನೇಕಾನೇಕ ಹಳ್ಳಿಹಳ್ಳಿಗಳು ನಾಶವಾದುವು. ಇಷ್ಟರ ತನಕ ೩೫೦೦ ಜನರಿಗೆ ಪ್ರಾಣಾಪಾಯವುಂಟಾಗಿದೆಯಂತೆ.....

× × × ×

೧೫೩೫ ಜನರು ಮೃತರಾದರೆಂಬುದು ಖಂಡಿತ. ೯೪೮ ಜನರು ಕಾಣೆಯಾಗಿರುವರು. ೩೩೮ ಜನರು ಜಖಂಗೊಂಡಿರುವರು, ಸರಿಯಾದ ವಾರ್ತೆ ಇನ್ನೂ ತಿಳಿದಿಲ್ಲ.

× × + ×

ಈ ಭೂಕಂಪದ ಬಾಯಿಗೆ ಬಿದ್ದವರಾರು? ಬಡ ಚೀನಾ ದೇಶವನ್ನು ಸೂರೆಗೊಳ್ಳಲು ಹೊರಟ ಜಪಾನೀ ಸೈನಿಕರು. ರೂಟರ್ ಸಾಹೇಬ ಹೇಳುತ್ತಾನೆ "Most sufferers being humble fisher-folk, whose husbands, sons and brothers are fighting in Manchuria" ಎಂದು ಅರ್ಥ ಕೊಟ್ಟೇ ಬಿಟ್ಟಿದ್ದಾನೆ!—ದುರಾಶಾಯ.

× + × ×

ಕೆಲವು ಹಳ್ಳಿಗಳು ಭೂಪಟದಲ್ಲಿ ಇಲ್ಲದಂತಾಗಿವೆ. ಇದರೊಡನೆ ದಪ್ಪ ಹಿಮಬಿದ್ದಿದೆ. ಇವೇಟ್ ಪ್ರಿಫೆಕ್ಚರ್ (ಜಪಾನರ ಅಧರ್ಮದ ಕೇಂದ್ರ) ಇಲ್ಲಿ ೧೩೮೦ ಜನರು ಸತ್ತರಂತೆ.

× × × ×

೫೦೦೦ ಮನೆಮಂದಿರಗಳು ನೆರೆಯೊಡನೆ ಕೊಚ್ಚಿ ಹೋಗಿರುವುವು. ಅವುಗಳಲ್ಲಿ ೩೦೦೦ ಮನೆಗಳು ಅರ್ಧದ ವರೆಗೆ ನೀರಲ್ಲಿ ಮುಳುಗಿವೆ. ನೌಕೆಗಳು ರಕ್ಷಣೆಗಾಗಿ ಹೋಗಿ ತಲೆಯ ಮೇಲೆ ಕೈಯಿಟ್ಟು ಹಿಂತಿರುಗಿವೆ. ವಿಮಾನಗಳು ಸ್ವಲ್ಪ ಹಾರಿ, ಪೆಟ್ರೋಲ್ ವೆಚ್ಚ ಮಾಡಿ, ಹಿಮದಿಂದ ಕಂಗಾಲಾಗಿ ಹಿಂದೆ ಬಂದಿವೆ.

× × × ×

ಜಾಪಾನರು ಸಮಸ್ತ ಧರಣೀ ಮಂಡಲದ ರಾಷ್ಟ್ರಗಳ ಉಪದೇಶವನ್ನು ಕೇಳದೆ, ಹಟಗಟ್ಟಿ ಚೀನೀಯರ ಮೇಲೆ ಬಿದ್ದು ಮಾಡಿದ ಪಾಪಕ್ಕೆ ದೊರೆತ ಚಿಕ್ಕ ಕೊರಡೆ ಪೆಟ್ಟು ಇದು. Coming events caste their shadows before" ಎಂಬಂತಲ್ಲ ಹಾಗೆ ಇದು! 'ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿ (ಸ್ವಲ್ಪ—ಮುಂದೆ ಬರುವುದಿಲ್ಲ) ಹಾಗುಂಟು ಶ್ರೀ ಕೃಷ್ಣನ ಮಾತಿನ ಸತ್ಯ.

× × + × × × ×

ಅಂದಾಗಲೀ, ಇಂದಾಗಲೀ, ಮುಂದಾಗಲೀ ಅಧರ್ಮವು ಧರ್ಮವನ್ನು ಸೋಲಿಸಿ ಗೆಲ್ಲುತ್ತದೆಂಬ ಮಾತು ಸುಳ್ಳು. ಸುಳ್ಳಿಗಿಂತ [illegible] ಸುಳ್ಳು.

× × × × + + ×

ನ್ಯಾಯನೀತಿಗಳ ಉತ್ಕರ್ಷತೆಯು ದಬ್ಬಾಳಿಕೆಗಳ [illegible] ಸೃಷ್ಟಿಯಲ್ಲಿರಬೇಕೆಂದು ಆ ಭಗವಂತ (?) (ಯಾರೋ ಒಬ್ಬ)ನ ಇಚ್ಛೆಯಾಗಿರುತ್ತದೆ. ಅದರಿಂದ ಜಪಾನಿಗೆ ಈ ಶಿಕ್ಷೆ!

'ಸ್ವಾಮಿ'

# ಮೂರು ಲಕ್ಷ ರೂಪಾಯಿ!

ಸಂಸಾರದ ಖರ್ಚಿಗೆ ದೊರೆತರೆ, ಅಡಚಣೆಯು ಮಾತುಂಟೇ? ಅನ್ನ, ವಸ್ತ್ರ, ಅಲಂಕಾರ ಆಭರಣ, ವಿದ್ಯಾಭ್ಯಾಸ ವಿಹಾರ, ವ್ರತಾಚರಣೆ, ಯಾತ್ರಾಕಾರ್ಯಗಳು ಮೊದಲಾಗಿ ಎಲ್ಲಕ್ಕೂ ಅನುಕೂಲವಾಗಿರದೇ? ಸಂಸಾರವು ಸರ್ವಪ್ರಕಾರಗಳಲ್ಲೂ ಸುಗಮವಾಗಿ ಸಾಗುವುದು

## ಮೂರು ಲಕ್ಷ ರೂಪಾಯಿ!

ದುಡ್ಡೇ ದುರ್ಲಭವಾಗಿರುವ ಈ ಕಷ್ಟಕಾಲದಲ್ಲಿ, ವ್ಯಾಪಾರದ ಮುಗ್ಗಟ್ಟು,—ಕೈಗಾರಿಕೆಗಳಿಗೆ ಕಷ್ಟ ಕೊಡ ಬಾಧ್ಯತೆಗಳ ನಿವಾರಣೆಗೆ ಈ ಮೊಬಲಗು ಎಷ್ಟು ಅನುಕೂಲವಾಗಿ ಸಹಾಯಮಾಡುತ್ತಿತ್ತು!

## ರೂಪಾಯಿ 321,544–3–7 ರೂಪಾಯಿ

ಮೊಬಲಗನ್ನು ಕಳೆದ ವರ್ಷ ಬರೇ ಬಡ್ಡಿಯ ಬಗ್ಗೆಂದು ಹಣ ಠೇವಣಾತಿಯಾಗಿಟ್ಟ ಜನಸ್ತೋಮಕ್ಕೆ

## ಕೆನರಾ ಬೇಂಕ್ ಲಿಮಿಟೆಡ್

ಸಂಸ್ಥೆಯಿಂದ ಸಾಕಲ್ಯವಾಗಿ ಸಂದು ಸದ್ವಿನಿಯೋಗ ಹೊಂದಿದೆ

ಸಂಸಾರ ತಾಪತ್ರಯ ನಿವಾರಣೆಗೂ, ವ್ಯಾಪಾರ ಕೈಗಾರಿಕೆಗಳ ಅಭಿವೃದ್ಧಿಗೂ ಸಾವಿರಾರು ಠೇವಣಾತಿ ದಾರರಿಗೆ ಸಿಗುವಂತೆ ಅವರು ಬೇಂಕಿನಲ್ಲಿ ಸಂಪೂರ್ಣ ವಿಶ್ವಾಸವನ್ನಿಡಲು ಪ್ರೇರೇಪಿಸಿದುದು ಯಾವುದು? ಯಥಾಕಾಲದಲ್ಲಿ, ಯಥಾಯೋಗ್ಯವಾಗಿ ಬೇಂಕು ಅವರಿಗೆ ಒದಗುವುದೆಂದು, ಪ್ರತ್ಯಕ್ಷ ಅನುಭವದಿಂದ ಅವರು ತಿಳಿದುದೇ

## ಮೂರು ಲಕ್ಷ ರೂಪಾಯಿ!

ವರ್ಷಕ್ಕೆ ಬಡ್ಡಿಯಾಗಿ ಅವರಿಗೆ ದೊರೆವ ಹಾಗೆ, ಅವರ ವಿಶ್ವಾಸವು ಬೇಂಕಿನಲ್ಲಿ ಬೇರೂರಿರುವುದೂ, ಅವರ ಹಣವು ಸದ್ವಿನಿಯೋಗ ಹೊಂದಿ ಪ್ರತಿಫಲವು ದೊರವಂತೆ ವಿಚಾರದಿಂದ ಬೇಂಕು ಯಥಾಸಾಧ್ಯವಾದ ರೀತಿ ವರ್ತಿಸಿದುದೂ ಈಗಣ ಅಡಚಣೆಕಾಲದಲ್ಲಾದರೂ ಸರ್ವರಿಗೂ ತೃಪ್ತಿಕರವಾಗಿದೆಂದು ಸೂಚಿಸದೇ? ಊರವರಾಗಲಿ, ದೂರದವರಾಗಲೀ ಸರ್ವ ಠೇವಣಾತಿದಾರರಿಗೆ ಸಂತೃಪ್ತಿ

## ಕೆನರಾ ಬೇಂಕ್, ಲಿಮಿಟೆಡ್.



ನಮ್ಮ ಕಾರ್ಖಾನೆಯು ಈಚೆಗೆ ಒಂದೆ ವರ್ಷ ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ಡಿಸೆಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ

**ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ**

## ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತರಬೇತಿ ಹೊಂದಿರುವವರ ಆಡಳಿತಕ್ಕೊಳಪಟ್ಟು ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು

ಸೆಂಡಲ್‌ವೂಡ್, ಜಸ್ಮಿನ್, ಲಿಲಿರೋಸ್, ಲೀಮ್ಡಾ ಸಾಬೂನುಗಳು

(ಲೀಮ್ಡಾ=ನೀಮ, ಮಾರ್ಗೋಸಾ=ಬೇವು)

ಇವುಗಳು ಮುಖ್ಯವಾದ ಸ್ಪೆಶಾಲಿಟಿಗಳು

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು

ಈ ಜಿಲ್ಲೆಗೆ ಪ್ರವರ್ತಕರು—

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913)

**East & West Buildings Fort Bombay**

VALUATION REPORT for the Triennium ending 31st December 1931

**Reveals Certain Striking Features**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5¼ times more than that disclosed at the last valuation

Interim Bonus Rs 15/ per 1,000/ per year both on whole life and endowment with Profit Policies becoming claims before 1st January 1934 FORECAST -STILL GREATER PROSPERITY

**WANTED LADIES & GENTS in Unrepresented Areas.**

Earn Rs. 100/- to 500/- independently per month

*For particulars apply or please call at—*

**Chief Organizing Office,**

Harbour View, MANGALORE


## ನೋಟೀಸು

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.**

O P. No 24/1933.

1. ಪಾಂಡುರಂಗ, 2 ಸುಬ್ರಾಯ—ಮೈನರರು. ಇವರ ಬಗ್ಗೆ ಗಾರ್ಡಿಯಾನಳು ಯಾನ ಕ್ಷೇಮಚಿಂತಕಳು ಇವರ ತಾಯಿ 3ನೇ ಅರ್ಜಿದಾರಳು ರತ್ನಾಬಾಯಿ, 3 ರತ್ನಾಬಾಯಿ, ನಾರಾಯಣ ಕೃಷ್ಣರಾಯ ಪ್ರಭು ವಿಧವೆ, ಕಾರ್ಕಳ ಕಸಬಾ ಸಾಲ್ಮರದಲ್ಲಿರುವವರು—ಅರ್ಜಿದಾರರು

ಮತ್ತು

1 ಸುಂದರಿ ಬಾಯಿ, 2 ಮಂಜುನಾಥ ಪ್ರಭು, 3 ವಾಸುದೇವ ಪ್ರಭು ಎದ್ರಿರು.

ಇವರೊಳಗೆ

1—2ನೇ ಅರ್ಜಿದಾರರ ತಂದೆ 3ನೇ ಅರ್ಜಿದಾರಳ ಗಂಡ ನಾರಾಯಣ ಕೃಷ್ಣರಾಯ ಪ್ರಭುಗಳವರು ಇದೇ ಕಳೆದ ತಾರೀಖು 10–12–'32ರಲ್ಲಿ ಕಾರ್ಕಳ ಕಸಬೆಯಲ್ಲಿ ಮೃತಪಟ್ಟದ್ದರಿಂದ ಸದರಿಯವರ ಸಕಲ ಸ್ಥಿರಚರಸೊತ್ತುಗಳಿಗೂ ಹೊರಗಿನಿಂದ ಬರತಕ್ಕ ಐವಜುಗಳಿಗೂ, 1—3ನೇ ಅರ್ಜಿದಾರರು ಸಂಪೂರ್ಣ ಹಕ್ಕುದಾರರು ವ ವಾರೀಸುದಾರರಾಗಿದ್ದು, ಮೃತನಿಗೆ The Oriental Government Security Life Assurance Company ಇಂದ ನಂಬ್ರ 166847ನೇ ಪೋಲೀಸಿನ ಮೇಲೆ ಬರತಕ್ಕ ರೂಪಾಯಿ 1047–4–0ನ್ನು 1—2ನೇ ಅರ್ಜಿದಾರರ ಬಗ್ಗೆ 3ನೇ ಅರ್ಜಿದಾರಳು ಸದ್ರಿ ಕಂಪೆನಿಯಿಂದ ವಸೂಲು ಹೊಂದುವ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಖು 21–3–33ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ವಿಷಯದಲ್ಲಿ ಯಾರೊಬ್ಬರಾದರೂ ಏನಾದರೂ ಆಕ್ಷೇಪಣೆಗಳು ಇದ್ದರೆ ಸದ್ರಿ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಅಂಥಾ ಆಕ್ಷೇಪಣೆಗಳನ್ನು ಜಾಹೀರು ಮಾಡಿಕೊಳ್ಳಬಹುದಾಗಿ ಈ ಮೂಲಕ ಸರ್ವ ಜನರಿಗೂ ತಿಳಿಸಲಾಗುತ್ತದೆ

K Santhaya Kamath

*Pleader for Petitioners*

## WANTED.

Applications are invited for the post of the Manager of the Mangalore Sri Venkatramana Temple Applicant should be a member of the Gowda Saraswath Brahamin Community and should have passed atleast the F A or in Intermediate examination of any university The selected Candidate should be prepared to furnish security of not less than Rs 1000/ before assuming charge of the office Pay Rs 50/ per month Applicantions should be addressed to The President Council of Trustees Sri Venkattramana Temple Mangalore and should reach the Temple office on or before the 15th day of March 1933

Mangalore 26—2—33 (Sd) **M Ganesh Srinivasa Pa**
**Nagar Narasimha Shenoi**
**B Venkatrao Baliga.**

*Trustees Sri Venkatramana Temple, Mangalore*

## ನೋಟೀಸು.

**ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ**

O P No 16/1933

ಡಿ ಮಾಧವ ಪೈ ಕೂಡಾ—ಅರ್ಜಿದಾರರು

ಕುಮುಗ್ರಾಮದಲ್ಲಿ ತಾ 21—12—1932ರಲ್ಲಿ ಮೃತಪಟ್ಟ ಡಿ ರಾಮಚಂದ್ರ ಪೈಗೆ ಹೊರಗಿನಿಂದ ಬರತಕ್ಕ ಐವಜು ವಸೂಲು ಮಾಡುವ ಕುರಿತು 5ನೇ ಅರ್ಜಿದಾರಳು ಜನಿ ಯಾನೆ ಸೀತಾ ದೇವಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂತ ಅರ್ಜಿದಾರರು ಮಾಡಿದ ಸದ್ರಿ ಅರ್ಜಿಯು ತಾ 22–3–33ನೇ ದಿವಸ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ ಆದ್ದರಿಂದ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾ 22–3–33ನೇ ದಿವಸ ಸದ್ರಿ ಕೋರ್ಟಿನಲ್ಲಿ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಜಾಹೀರುಮಾಡತಕ್ಕದ್ದು

ಮಂಗಳೂರು 3—3—1933 **G Upendra Prabhu,**

*Vakil for Petitioners.*


# ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ

# ಚಂದಾದಾರರಾಗಿರಿ

# Panchmal Narasimha Kamath & Brothers,

CAR STREET, MANGALORE.

*31st Oct. 1932.*

To

The Manager,

## Zenith Life Assurance Company, Limited,

MANGALORE.

DEAR SIR,

I have great pleasure to acknowledge receipt of your cheque No. B-942296 on the National Bank of India Ltd. Bombay for Rs. 1954—12—0 in full settlement of the claim on Policy No. 3765 of my deceased brother Ganapathi Kamath.

The Policy was deliverd to you duly discharged on 21st October 1932 add your Head Office have issued the cheque on the 25th October i. e. **on the very day they received the Policy in their hands.**

I am really greatful for the prompt settlement of the claim for which your Company is so well known

YOURS FAITHFULLY,

*Sd.* **Panchamal Narasimha Kamath**

## 56 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉಬ್ಬುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ 7

**ಚಂದನಾಸವ ಮತ್ತು ವಟಿ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ದಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ. ಬಾಟ್ಲಿ 1ಕ್ಕೆ ರೂ 1—4—0 1 ಡಬ್ಬಿ ಮಾತ್ರೆಗೆ ರೂ —6— 2 ಬಾಟ್ಲಿ ಔಷಧಕ್ಕೆ ರೂ 4.12.0

**ಬಾಲಗ್ರಹ ಗುಳಿಗೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ಸಿದ್ಧಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ಸಂತಾಷಕರವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಆಣೆ 3. 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ಕ್ಕೆ ರೂ 1—8—0 2 ಬಾಟ್ಲಿಗಳಿಗೆ ರೂ 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ। ಶ್ರೀನಿವಾಸ ಪೈಯವರ ಕೋಟಿನಲ್ಲಿ ಸಿಗುತ್ತವೆ

**ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.**

## ಸ್ಥಳೀಕ ನೋಟಗಳ ಬಾಣ!

'ರಾಷ್ಟ್ರಬಂಧು'ವಿನ ಮಿ। ಕು. ವಾಚಸ್ಪತಿಯು ತಾ 30ರ ಅದರ ಸಂಚಿಕೆಯಲ್ಲಿ ದೂರಿಟ್ಟು ತನಗೆ ನಗರಸಭೆಯ ಆಯವ್ಯಯದ ಪಟ್ಟಿಯು ದೊರೆಯಲಿಲ್ಲವೆಂದು ಕೇಳಿದ್ದುದಕ್ಕೆ ಅವನಿಗೆ ಆ ಪಟ್ಟಿಯನ್ನು ಮರುದಿನವೇ ಕಳುಹಿ ಕೊಡಲಾಯಿತು! 'ದಿವ್ಯ ದೃಷ್ಟಿ'ಯು ಏಕೆ ಸುಮ್ಮನಿಂದೀತು?

o o o o o o

ದಿವ್ಯ ದೃಷ್ಟಿಯು ಕೌನ್ಸಿಲು ಸಭೆಗಳಿಗೆ ಹಾಜರಾಗುವ ಕ್ರಮ ಕಡಿಮೆ. ಹಾಗೆ ಒಮ್ಮೆ ಸಭೆಗೆ ಹೋದಾಗ ತೀರದಲ್ಲಿ ವಿಮಾನ ಬಂದ ಗಾಜಿ! ಅವನಿಗೆ ತಡೆಯಲಿಲ್ಲ—ಸಭೆಯಲ್ಲಿ "ಈಗ ಬರ್ತೇನೆ" ಎಂದು ಹೇಳಿ ನದೀ ತೀರಕ್ಕೆ ಹಾರಿ ಹೋಗಿ ಬಿಟ್ಟ!

o o o o o o

'ದಿವ್ಯ ದೃಷ್ಟಿ'ಗೆ ಏನಾದರೂ ಸರಿ, ದೂರದಿಂದಲೇ ಗೋಚರವಾಗುತ್ತದೆ. ಆಯವ್ಯಯದ ಪಟ್ಟಿಯನ್ನು ಮೊನ್ನೆ 'ರಾಷ್ಟ್ರಬಂಧು'ವಿಗೆ ಕಳುಹಿಸಿದ ಸಂಗತಿ ಅವನಿಗೆ ಒಂದು ನೋಟ ಬಂದು ಹೇಳಿತು.

o o o o o o

ಆ ಆಯವ್ಯಯದ ಪಟ್ಟಿಯನ್ನು ಕುರಿತು ಮಿ। ಹರ್ಬರ್ಟ್ "Municipal Budget for 1933-34" ಎಂಬ ಶಿರೋನಾಮದಿಂದ 'ಕಾಂಗ್ರೆಸ'ನಲ್ಲಿ ಇಂಗ್ಲೀಷಿನಲ್ಲಿ ಬರೆದಿರುವರು

o o o o o o

ಅವರು ಹೇಗೂ ಬರೆದಿರಲಿ—ಅವರು ಕೌನ್ಸಿಲರುಗಳ ಮಿತ್ರರು. ಚೆಯರ್‌ಮೇನರ ಆಪ್ತೇಷ್ಟರು ಎಂದಾಗ ಕುಂದುಕೊರತೆಗಳನ್ನು ವಿಶದೀಕರಿಸಿ, ಬಾಯ್ಬಿಟ್ಟು ನುಡಿವರೇ? ಅದಿಲ್ಲ!

o o o o o o

ಹೆತ್ತರೊಡನೆ ಹನ್ನೊಂದು! ಆಯವ್ಯಯದ ಪಟ್ಟಿಯನ್ನು ನನಗೂ ಕಳುಹಿಸಿಕೊಡಲಾದೀತೋ ಇಲ್ಲವೋ?—ಹೇಳಬಹುದೆ! ಅದೇಕೆ ದಿವ್ಯದೃಷ್ಟಿಯನ್ನು ಮರೆತಿರಿ?

o o o o o o

ಈ ಪಟ್ಟಿಯನ್ನು 'ನವಯುಗ'ಕ್ಕೆ ಕಳುಹಿಸಿರುವರೆಂದು ಅವರ ಅಗ್ರಲೇಖದಿಂದ ತಿಳಿಯುತ್ತದೆ ತುಂಬಾ ಹೇಳಿದ್ದಾರೆ! ನಾನು ನನ್ನಭಿಪ್ರಾಯವನ್ನು ಹೇಳಬಾರದೇ?

o o o o o o

ಎಪ್ರಿಲ್ ಒಂದರ ನಂತರ ಮಾರ್ಗಗಳಿಗೆ ಇಲೆಕ್ಟ್ರಿಕ್ ಲೈಟುಗಳು ಸಿಗುವುವಾಗಿ ಅವುಗಳ ಬಗ್ಗೆ ಬರುವ ವರ್ಷಕ್ಕೆ 6000 ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿರುವರಂತೆ ಸ್ತುತ್ಯ!

o o o o o o

ಫ್ರೀ ರೀಡಿಂಗ್ ರೂಮ್ ಮತ್ತು ಲೈಬ್ರರಿಗಾಗಿ ಚೆಯರ್‌ಮೇನರು 200 ರೂಪಾಯಿಗಳನ್ನು ತೆಗೆದಿಡುವರಂತೆ! ಕನ್ನಡ ಪುಸ್ತಕಗಳಿಗೆಷ್ಟು?

ದಿವ್ಯ ದೃಷ್ಟಿ.

+ + + +

# The Canara Industrial & Banking Syndicate Limited.

**Established in 1925.** Branches: Mangalore, Payyanur, Brahmavar, Kumta, Karwar, Hubli & Honnavar. **Head Office:— UDIPI.**

Authorised Capital Rs. 1,00,000. Subscribed Capital Rs. 1,00,000 Paid up Capital Rs. 20,000

## Fixed Deposits

Fixed deposits are received at any office of the Syndicate at the undermentioned rates of interest (interest being paid half yearly).

| | |
|---|---|
| Deposits of 3, 4 and 5 months | 4% |
| Deposits of 6, 7 and 8 months | 4½% |
| Deposits of 9, 10 & 11 months | 5% |
| Deposits of 12 months up to 23 months | 5½% |
| Deposits of 24 months | 6% |

Interest allowed on current account at 2½ percent, Savings Bank at er cent.

Long and Short term Loans on attractive Schemes are grant .

ALL KINDS OF BANKING BUSINESS UNDERTAKEN.

Udipi, 20—1—1933.

**P. A. Pai Bros.,**
*Managing Agents.*

# DUO-TREAD TIRES.

## Seiberling's Novel Features.

1. Air Cooled.
2. Duod Trea.
3. Twice the Mileage

FOR

4. Only 20 per cent extra Money

A TIRE UN-IMITATED & EXCLUSIVE.

***Dealers Earn Profits.*** ***Users Save Money.***

The Canara Public Conveyance Co., Ltd.

M A N G A L O R E.

## ಸ್ಫುಟವಿಚಾರಗಳು.

### ಶಿಕ್ಷಣ ಕ್ರಮದ ಹಳೆಯ ಬರಹ.

ಪ್ರೊ|| ವಾಡಿಯಾರವರು ಮೈಸೂರು ಯುನಿವರ್ಸಿಟಿಯ ತತ್ವಜ್ಞಾನ ಶಾಖೆಯ ಆಚಾರ್ಯರು. ಇವರು ಹೈದ್ರಾಬಾದಿಗೆ ತೆರಳಿ ಅಲ್ಲಿ ಆಧುನಿಕ ಶಿಕ್ಷಣ ವಿಚಾರಗಳನ್ನು ಕುರಿತಾಗಿ, ನಿಜಾಮ ಸರಕಾರದ ರಾಜಕೀಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಭಾಷಣ ಮಾಡಿರುವರು. ಮನುಷ್ಯ ಸ್ವಭಾವವನ್ನು ಚೆನ್ನಾಗಿ ಪರಿಶೋಧಿಸಿ, ಅದರ ತತ್ವಗಳನ್ನು ಆಧರಿಸಿಯೇ ವಿದ್ಯಾಪ್ರಚಾರವಾಗುವುದು ಸಂಗತವು. ಎಲ್ಲ ಮಕ್ಕಳಿಗೂ ಒಂದೇ ಬಗೆಯಾಗಿ ಶಿಕ್ಷಣ ಕೊಡುವುದು ಸಂಗತವಲ್ಲವಾದರೂ, ಕೆಲವು ವಿಷಯಗಳು ಸರ್ವರಿಗೂ ತಿಳಿದೇ ಇರಬೇಕಾಗಿವೆ. ಮೊದಲನೆ ಏಳು ವರ್ಷಗಳಲ್ಲಿ ಮಕ್ಕಳ ಮೆದುಳು ಬಹು ಮೃದುವಾದ ಕಾರಣ ಬೇಗ ಕಲಿತುದೇ ಶಾಸನಕಾಲಕ್ಕೂ ಉಳಿವುದಾಗಿದೆ. ಅದುಕಾರಣವೆ ಧಾತ್ರೀ ಶಾಲೆಗಳನ್ನು ಎಳೆಮಕ್ಕಳಿಗಾಗಿ ಸ್ಥಾಪಿಸುವುದು ಶಾಸ್ತ್ರೋಕ್ತರ ರೀತಿ. ಪ್ರಾಯ್ಮರಿ ಶಾಲೆಗಳಲ್ಲಿ ಮಾಸ್ತರರೂ ಶಾಲೆಗಳೂ ಪೂರ್ಣತೆ ಹೊಂದಿಲ್ಲದವರೇ ಹೆಚ್ಚಾಗಿರುವುದು ನಮ್ಮ ರೀತಿಯಾಗಿದೆ; ಇಂಥ ಶಾಲೆಯಲ್ಲಿ ಮಕ್ಕಳು ನಾಲ್ಕು ವರ್ಷಗಳನ್ನು ವ್ಯರ್ಥವಾಗಿ ಕಳೆವರು. ಅನಾವಶ್ಯಕವಾದ ಸಾವಿರ ಸಂಗತಿಗಳ ಹೊರೆಯನ್ನು ಮಕ್ಕಳ ಮೇಲೆ ಹೊರಿಸುತ್ತಾರೆ. ಸೆಕೆಂಡರಿ ವಿದ್ಯಾಭ್ಯಾಸವಂತೂ ತೀರ ದುರ್ಬಲ; ಯೂನಿವರ್ಸಿಟಿಗೇ ಎಲ್ಲಾ ವಿದ್ಯಾರ್ಥಿಗಳು ಸೇರುವರೆಂದು ಪ್ರತಿಯೊಬ್ಬನಿಗೂ ಅದಕ್ಕಾಗಿ ಶಿಕ್ಷಣ ಕೊಡುವರು; ಇದು ಭಯಂಕರ ಅನ್ಯಾಯವಾಗಿದೆ.

### ಈ ಹಳೆಯ ಬರಹವನ್ನು ತಿದ್ದುವುದು ಹೇಗೆ?

ಅನಾವಶ್ಯಕವಾದ ವಿಚಾರಗಳನ್ನು ಕತ್ತರಿಸಿದರೆ ಎಲ್ಲವೂ ಸರಿಯಾಗುವುದು. ಕ್ಲಾಸಿನಿಂದ ಕ್ಲಾಸಿಗೆ ದೂಡುವುದರಲ್ಲಿ ಎಚ್ಚರವಿರಿಸಿ, ಯುನಿವರ್ಸಿಟಿಗೆ ಹೋಗಲು ಅಶಕ್ತನಾದ ವಿದ್ಯಾರ್ಥಿಯ ವಿಷಯ ಅವನ ಹಿರಿಯರಿಗೆ ಉಪಾಧ್ಯಾಯರು ತಿಳಿಸಬೇಕಾಗಿದೆ. ಯೂನಿವರ್ಸಿಟಿ ಪದವಿ ಪಡೆದರೆ ಮಾತ್ರ ಕುಲೋದ್ಧಾರವಾಗುವುದೆಂಬ ಸುಳ್ಳು ನಂಬಿಕೆಯನ್ನು ಜನಗಳು ತ್ಯಜಿಸಬೇಕಾಗಿದೆ. ಮಗುವಿನ ಭವಿಷ್ಯವನ್ನು ಕುರಿತು ಜೂಜಾಟದಂತೆ ನಿರೀಕ್ಷಿಸಿ ಆಡುತ್ತಿರುವುದು ಹಿತವಾಗಿಲ್ಲ. ಮುಖ್ಯವಾಗಿ, ಜ್ಞಾನವನ್ನು ಸಂಪಾದಿಸುವುದು; ಆಲೋಚನಾ ಶಕ್ತಿಯನ್ನು ಬಲಪಡಿಸಬೇಕು; ಯೋಗ್ಯ ಕಾರ್ಯಗಳನ್ನು ಮಾಡಲು ಶಕ್ತಿಯನ್ನು ಹುಟ್ಟಿಸುವುದು ಇವು ಮೂರೇ ವಿದ್ಯಾಭ್ಯಾಸದ ಲಕ್ಷಣಗಳೂ ಕರ್ತವ್ಯಗಳೂ ಆಗಿರಬೇಕು. ಉಪಾಧ್ಯಾಯರೆಲ್ಲ ತಾವು ಮಿಶನರಿಗಳಂತೆ ನಿಸ್ವಾರ್ಥ ಪರೋಪಕಾರಕ್ಕಾಗಿ ದುಡಿಯಬೇಕು ಎಂಬಿಷ್ಟನ್ನು ವಾಡಿಯಾ ಆಚಾರ್ಯರು ಸೂಚಿಸಿದರು. ಮೈಸೂರು ವಿದ್ಯಾ ಇಲಾಖೆಯು ಈ ಭಾಗದಲ್ಲಿ ಮಾದರಿ ಹಾಕಿ ಕೊಡುವ ಹಾಗೆ ಆಚಾರ್ಯರು ಬೋಧಿಸಿದರೆ ಲೋಕೋಪಕಾರವಾದೀತು. ಹೈದ್ರಾಬಾದಿನಲ್ಲಿ ಯಾವದ್ವಿಷಯಗಳನ್ನು ಅಲ್ಲಿನ ದೇಶಭಾಷೆಯಲ್ಲೇ ಕಲಿಸುವರು; ಪ್ರತಿಯೊಬ್ಬ ಮಗುವಿಗೂ ಕೈಗಾರಿಕೆಯೂ ಹಸ್ತಕೌಶಲ ಶಿಕ್ಷಣವೂ ಸಿಗುವ ಹಾಗೆ ಪ್ರಯತ್ನಗಳನ್ನು ಹೂಡುತ್ತಿರುವರು. ಮೈಸೂರಲ್ಲಿ?

### ಭಾರತದ ಹಕ್ಕನ್ನು ಎದುರಿಸುವ ತ್ರಿಮೂರ್ತಿಗಳು

ಜನರಲ್ ವೇಜ್ ಕ್ರೊಫ್ಟ್; ಸರ್ ಮಿಕಾಯೆಲ್ ಒಡ್ವಾಯರ್; ಮತ್ತು ನಮ್ಮ ರಾಜಕುಲಮಕುಟವರ್ಧನರಾಗಿರುವ ಬರ್ದವಾನ ಮಹಾರಾಜರು. (ಬರ್ದವಾನ ಎಂದರೆ ವರ್ಧಮಾನ; ಇವರು ಆ ವೃದ್ಧಿಗೆ ತಡೆ ಹಾಕುತ್ತಿರುವರು; ಆದರೆ ಇಂಗ್ಲಿಷರು ಈ ಹೀನರನ್ನುಚ್ಚರಿಸುವಾಗ ಮಾತ್ರ ಬರ್ದನ್ ಎಂದರೆ ಭಾರ ಮಹಾರಾಜರು ಎನ್ನದಿದ್ದರೆ ಸಾಕು.) ಇವರು ಮೂವರೂ ಸೇರಿ, ಈಗ ಪಾರ್ಲಿಮೆಂಟಿನಲ್ಲಿ ಅಧಿಕ ಸಂಖ್ಯಾಕರಾಗಿರುವ ಕನ್ಸರ್ವೆಟಿವರನ್ನು ಕೂಡಿಸಿ, ಮುಂದೆ ಕೇಂದ್ರದಲ್ಲಿ ಜವಾಬ್ದಾರಿಯಿರುವ ನಮೂನೆಯ ರಾಜ್ಯಭಾರವನ್ನು ಇಂಡಿಯಕ್ಕೆ ಕೊಡಕೂಡದೆಂದು ವೋಟು ಸಂಗ್ರಹಿಸಲು ಭಾಷಣ ಮಾಡಿದರು. ಪತ್ರಿಕೆಗಳು ಇವರಿಗೆ ನೂರು ಓಟುಗಳು ಸಿಗುವವು ಎಂದುವು; ಭಾಷಣಗಳಾದುದೇ ತಡ, ನೂರೈವತ್ತು ವೋಟುಗಳು ಖಂಡಿತ ದೊರೆವುವೆಂದು ಪ್ರಕಟಿಸಲಾಯಿತು. ಆದಷ್ಟು ಕೇಂದ್ರದಲ್ಲಿ ಜವಾಬ್ದಾರಿಯನ್ನು ಕೊಡಬಾರದೆಂಬ ಸೂಚನೆಯನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸಿದ ಕೂಡಲೆ, ಎಣಿಸಿದ ಮನುಷ್ಯನ ಮುಂದಿಗೆಯೆಲ್ಲ ಮಾಯವಾಗಿ ೮೩ ವೋಟುಗಳು [illegible] ಯಿತು. ಆದ್ದರಿಂದ [illegible] ಮಾಡುವವರು [illegible] ಪತ್ರ, [illegible] ರಲ್ಲಿ ಆರಂಭಿಸಿ, ತ್ರಿಮೂರ್ತಿಗಳು [illegible] ಬಂದ ಮೂರ್ತಿಗಳು ಅವರ ಕೀರ್ತಿವರ್ಧನೆಗಾಗಿ ಜರುಗಾದೆಂದರೆ ಸಾಧ್ಯವೆ? ನಾಲ್ಕು ತಾಸು ವರೆಗೆ ಸಿಟ್ಟಾಗಿ ಮಿಂಚಿದರು, ಗರ್ಜಿಸಿ ಗುಡುಗಿದರು; ಆದರೆ ಮಳೆಯೇನೂ ಬೀಳಲಿಲ್ಲ, ಬೇರೆ ವಿಪತ್ತು ಉಂಟಾಗಲಿಲ್ಲ.

### ಸಮೂಹಾಸ್ತ್ರಯ ಪ್ರಾತಿನಿಧ್ಯ ಕ್ರಮದ ಕೊನೆ

ದಿಗಂತದಲ್ಲಿದೆ, ಎಂಬುದು ಸರ್ ಅಬ್ದುಲ್ ರಹಿಮರಿಗೆ ತೋರಿ ಅವರು ಆಶ್ವಾಸನ ಹೊಂದಿರುವರು. ಇವರ ನೋಟವು ಸರಿಯಾಗಿರುವಲ್ಲಿ ಇಂಡಿಯಕ್ಕೆ ಕ್ಷೇಮವುಂಟು. ಆದರೆ, ಬರೇ ಕೌನ್ಸಿಲು ಎಸೆಂಬ್ಲಿಗಳಲ್ಲಿ ಸಹ ಪ್ರತಿನಿಧಿಗಳು ಯಾವುದೊಂದು ತತ್ವವನ್ನೆ ಅವಲಂಬಿಸದೆ, ಜಾತಿವಾರಾದ ಮಾಮೂಲು ತತ್ವಗಳನ್ನೇ ಪ್ರೀತಿಯಿಂದ ಅಪ್ಪಿಕೊಂಡಿರುವುದು ನಾಚುಗೆಗೀಡಾಗಿದೆ ಎಂದು ರಹಿಮರೇ ಬಲ್ಲರು. ಇದಕ್ಕೆ ಕಾರಣವೂ ಇದೆ;—ರಚನಾಶೀಲವಾಗಿ ಜನಹಿತವನ್ನುಂಟುಮಾಡಬಹುದಾದ ಯಾವ ಕಾರ್ಯಕ್ರಮವೂ ಇದು ವರೆಗೆ ಯಾವುದೊಂದು ಪಕ್ಷದವರಿಂದ ಹೊರಟಿಲ್ಲ. ಇದೇತಕ್ಕೆ? ಆ ಜಾತಿಯವರಿಂದ ಈ ಜಾತಿಯವರು ಹಕ್ಕುಗಳನ್ನು ಸೆಳೆದುಕೊಳ್ಳಬೇಕೆಂಬುದೊಂದು ತತ್ವ ಮಾತ್ರವೇ ಹರಡದ ಕಾರಣ, ಸರ್ವರಿಗೂ ಹಿತವಾದ ಕಾರ್ಯಕ್ರಮ ಹೊರಟಿಲ್ಲ. ಒಂದು ವೇಳೆ ಇಂಥದೊಂದು ಕಾರ್ಯಕ್ರಮವು ಉಂಟಾದರೂ ಅದನ್ನು ಜಾರಿಗೆ ತರುವರೆ ಬೆಂಬಲ ಕೊಡುವುದಕ್ಕೆ ಜನತೆಯಲ್ಲಿ ಜಾತಿಯಂಥತೆ ಹರಡಿತ್ತು ಎಂದೂ ತೋರುತ್ತಲಿದೆ. ಮುಂದೆ ಬರಲಿರುವ ರಾಜಕೀಯ ತಿದ್ದುಪಾಟುಗಳಲ್ಲಿ ಸಾಮಾನ್ಯವಾದ ಸ್ವಾತಂತ್ರ್ಯದ ಚಿಹ್ನೆಗಳಾವುವೂ ಇರುವಲ್ಲಿ, ಪ್ರತಿಯೊಂದು ಪಕ್ಷವು ಒಂದೊಂದು ಬಗೆಯ ದೇಶ ಹಿತಕಾರೀ ಕ್ರಮಗಳನ್ನು ಪ್ರಕಟಿಸಲು ಮುರಿಕೊಳ್ಳಲು ಅನುಕೂಲತೆಯಿದೆ. ಈ ವಿಚಾರವಾಗಿ ವೋಟರುಗಳಿಗೆ ವಿವರಿಸಿ ಅವರಲ್ಲಿ ಹೆಚ್ಚಿನ ತಿಳಿವಳಿಕೆಯನ್ನುಂಟುಮಾಡುವುದು ಸದ್ಯದಲ್ಲಿ ಸರ್ವ ಪಕ್ಷಗಳವರ ಕಾರ್ಯಕ್ರಮವಾಗಿರತಕ್ಕದಲ್ಲವೆ?

### ರಸವತ್ತಾಗಿರುವ ದಾನ ಕಾರ್ಯ

ಕಾಶೀ ವಿಶ್ವವಿದ್ಯಾಲಯಕ್ಕೆ, ಸಂದರ್ಶನೆಗಾಗಿ ತೆರಳಿದ್ದ ರಾಮಪುರದ ನವಾಬರು, ತಮ್ಮ ಔದಾರ್ಯವನ್ನು ಅಲ್ಲಿ ರಸಾಯನ ಶಾಸ್ತ್ರವನ್ನು ಬೋಧಿಸುವುದಕ್ಕೆಂದು, ಒಂದು ಲಕ್ಷ ರೂಪಾಯಿಗಳನ್ನು ದಾನವಮಾಡಿ ಪ್ರಕಟಿಸಿದರು. ಇದೂ ಅಲ್ಲದೆ, ವಾರ್ಷಿಕವಾಗಿ ೬೦೦೦ ರೂಪಾಯಿಗಳನ್ನು ಕೊಡುವುದಾಗಿಯೂ ವಾಗ್ದಾನ ಮಾಡಿರುವರು. ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾಗಿರುವ ಮಾಲವೀಯಜೀಯವರು ನವಾಬರನ್ನು ಇದಕ್ಕಾಗಿ ವಂದಿಸುವಾಗ, ಅವರು—ನನ್ನ ಪ್ರಜೆಗಳಾಗಿರುವ ಹಿಂದುಗಳನ್ನೂ ಮುಸ್ಲಿಮರನ್ನೂ ಒಂದೇ ಸಮನಾಗಿ ನಾನು ನಡೆಯಿಸಿ, ಇಬ್ಬರ ಸುಖಕ್ಕಾಗಿಯೂ ಹೋರಾಡುತ್ತಿರುವೆನು, ಎಂದು ಕರುಣಾಂತಃಕರಣರಾಗಿ ನುಡಿದರು. ನಮ್ಮಲ್ಲಿ ದಾನಶೂರರು ಕಡಿಮೆ; ಇದ್ದರೂ ಯಾವುದೋ ಒಂದು ಪುಣ್ಯಕ್ಷೇತ್ರದಲ್ಲಿ ಯಾವುದೋ ಒಂದು ಸ್ಥಳದಲ್ಲಿ ಪುಣ್ಯಕಾರ್ಯವೆಂದು ಗುಡಿಗಳ ಜೀರ್ಣೋದ್ಧಾರ ಮಾಡುವ ಆಗ್ರಹ ತೋರುವರಲ್ಲದೆ, ವಿದ್ಯಾ ಪ್ರಚಾರಕ್ಕಾಗಿಯೋ ಅಲ್ಲವಾದರೂ ವಿದ್ಯಾಮಂದಿರಗಳಲ್ಲಿ ಸಮಸ್ತರಿಗೆ ದೈವಜ್ಞಾನವು ದೊರೆವಹಾಗೆ ಒಂದು ಚಿಕ್ಕ ಮಂದಿರವನ್ನಾದರೂ ಕಟ್ಟಿಸುವವೆಂದರೂ ಒಲ್ಲರು. ಮುಸ್ಲಿಮ ನವಾಬರು ಹಿಂದೂ ವಿಶ್ವವಿದ್ಯಾಲಯದಲ್ಲಿ ರಸಾಯನ ಶಾಸ್ತ್ರಕ್ಕೆ ದಾನ ವ ಉಂಬಳಿಯನ್ನು ಕೊಟ್ಟಿರುವುದನ್ನು ನೋಡಿಯಾದರೂ ಇವರು ಸ್ವಲ್ಪ ವಿವೇಕಿಗಳಾದರೆ ತಪ್ಪಾಗುವುದೆ?

+ + ++

ಬಡಿದಾಟಕ್ಕೆ ಮಾತ್ರ.

•  •  •  •

ಹೊಸ ನಮೂನೆಯ ೫ ರೂಪಾಯಿ ನೋಟುಗಳು ಹೊರಡುವುದಾಗಿ ಸರಕಾರದ ನೋಟೀಸು. ಇವು ಸ್ವಲ್ಪ ಸಣ್ಣವಾಗಿ ಬೇರೆ ಬಣ್ಣಗಳುಳ್ಳವು. ಇವು ಸಹಾ ಕಾಗದದವೇ.

+ + ++

## NOTES...
## ನೋಟಗಳು.

ಮೀರಟ್ ಮೊಕದ್ದಮೆಯ ಒಟ್ಟು ಖರ್ಚು ೧೫, ೧೩, ೩೦೧; ಅದೂ ಕಳೆದ ಜನವರಿ ವರೆಗೆ. ಇದರಲ್ಲಿ ಸಾಕ್ಷಿಗಾರರಿಗೆ ರೂ. ೬೦೩೧೫, ಸರಕಾರೀ ವಕೀಲರಿಗೆ ೧೫೭೭೬೦೧ ರೂಪಾಯಿ. ಇದೇನೂ ವಿಪರೀತವಾಗಲಿಲ್ಲ,—ಈ ದೇಶದಲ್ಲಿರುವ ಪ್ರತಿಯೊಂದು ಹೆಣ್ಣು ಗಂಡು ಮಗು ಒಂದೊಂದು ಪೈ ಕೊಟ್ಟಂತಾಯಿತು, ಜಾನೇಸು ಮಾರಿ ಪ್ರಕಾರ, ಅಷ್ಟೆ.

•  •  •  •

ವಿದ್ಯಾರ್ಥಿಗಳು ಪರೀಕ್ಷಾ ಕಾಲದಲ್ಲಿ ರಾಜಕೀಯ ರೀತಿಯಿಂದ ಉತ್ತರ ಕೊಡುವುದನ್ನು ಆಕ್ಷೇಪಿಸಿ, ಅಂಥ ವಿದ್ಯಾರ್ಥಿಗಳು ಬರುವ ಶಾಲೆಗಳನ್ನೇ ಅಂಗೀಕರಿಸಲಾಗುವುದಿಲ್ಲವೆಂದು ಡೈರೆಕ್ಟರರು ಸರ್ಕ್ಯುಲಾರು ಕೊಟ್ಟಿದ್ದಾರಷ್ಟೆ. ಕೌನ್ಸಿಲಿನಲ್ಲಿ ಈ ವಿಚಾರದಲ್ಲಿ ಪ್ರಶ್ನೋತ್ತರಗಳಾದ ವಿದ್ಯಾ ಇಲಾಖಾ ಮಂತ್ರಿಗಳು ಗೊಂದಲಗೊಂಡರು; ಅದರೂ ಸಮಾಧಾನ ಸಾರರೆನ್ನಬಹುದು.

•  •  •  •

ಅತ್ತ ಇಂಗ್ಲೆಂಡಿನಲ್ಲಿ? ಒಕ್ಸಫರ್ಡ ಯುನಿವರ್ಸಿಟಿ ಯೂನಿಯನ್ನಿನವರು "ರಾಜನಿಗಾಗಿ ನಾವೆಂದೂ ಶಸ್ತ್ರಧಾರಿಗಳಾಗುವುದಿಲ್ಲ" ಎಂದು ನಿರ್ಣಯ ಮಾಡಿದರು. ಈ ನಿರ್ಣಯಕ್ಕೆ ಅನುಕೂಲರು ೨೭೫; ಪ್ರತಿಕೂಲರು ೧೫೩.

•  •  •  •

ಈ ನಿರ್ಣಯವೇ ತಪ್ಪೆಂದು, ಇಂಥದ್ದನ್ನು ಸಂಘದ ಪುಸ್ತಕದಲ್ಲೇ ಇರಿಸಲಾಗದೆಂದು, (ಮಧ್ಯೆ ಕೆಲವರು ಆ ನಿರ್ಣಯ ಬರೆದ ಹಾಳೆಗಳನ್ನೆ ಕಿತ್ತೊಗೆದು) ಹೊಸ ಚರ್ಚೆಗಾರಂಭಿಸಿದರು. ಕೂಡಲೆ ವೋಟು ಎತ್ತಿದರು. ಹಿಂದಣ ನಿರ್ಣಯವೇ ಮಂಜೂರಾಯಿತು. ಆದರೆ ಈ ಸಲ ಮಂಜೂರಾಗಬೇಕೆಂದವರು ೭೫೦; ಬೇಡವೆಂದವರು ೧೩೮!

•  •  •  •

ಈ ವಿದ್ಯಾರ್ಥಿಗಳು ಬರೇ ಒಕ್ಸಫರ್ಡಿನಲ್ಲೇ ವಿದ್ಯಾರ್ಥಿಗಳಾಗಿ ಮೋಸ ಹೊಂದಿದರು. ಅವರು ನಮ್ಮ ಮದ್ರಾಸು ಯುನಿವರ್ಸಿಟಿಯವರಾಗಿದ್ದರೆ, ಡೈರೆಕ್ಟರರು ಮಂತ್ರಿಗಳು ಕೂಡಿ ಯುನಿವರ್ಸಿಟಿ ಮಂಜೂರ್ಮಾಡದ ಸರ್ಕ್ಯುಲಾರು ಕೊಡುತ್ತಿದ್ದರು.

•  •  •  •

ಮೂವತ್ತು ಮಿಲ್ಲಿಯ ಹಿಂದೀ ಮುಸ್ಲಿಮರ ಸಲುವಾಗಿ ಪ್ರತಿನಿಧಿಗಳೆಂಬ ನಾಲ್ಕು ಜನರು ಲಂಡನನ್ನು ಛಾಪಿಸಿ ಪ್ರಕಟಿಸಿದ ಒಂದು ಸರ್ಕ್ಯುಲಾರಿನಲ್ಲಿ ಹಿಂದುಗಳ ಬಾಯಿಯಿಂದ ಅವರನ್ನು ಹೇಗೆ ಕಾಪಾಡಲಾದೀತು ಎಂದು ಒಂದು ಪ್ರಶ್ನೆ ಇತ್ತು. ಅವನ್ನು ಹೋರರು ವಿಚಾರಿಸಿ ಏನು ಮಾಡಿದರು? ಎಂದು ಪ್ರಶ್ನೆ ಪಾರ್ಲಿಮೆಂಟಿನಲ್ಲಿ.

•  •  •  •

"ಮುಸ್ಲಿಮ ಮುಖಂಡರೆಂದು ತಿಳಿದ ನೂರಾರು ಜನರೊಡನೆ ನಾನು ಈ ವಿಷಯ ಪರ್ಯಾಲೋಚಿಸುತ್ತಾ ಇರುವ ಕಾರಣ, ಈ ನಾಲ್ವರು ಮಹಾಮುಖಂಡರ ಬೇರೆ ವಿಚಾರ ಬೇಡ" ಎಂದರು ಹೋರರು. ಈ ಮುಖಂಡರ ಮುಖಗಳು ಭಾರ.

•  •  •  •

ಮುಸ್ಲಿಮ ಲೀಗ್, ಮತ್ತು ಮುಸ್ಲಿಮ ಕೊನ್ಫರೆನ್ಸ್ ಗಳ ಎರಡೂ ಸಂಘಗಳನ್ನು ಒಂದುಕೂಡಿಸುವುದಕ್ಕಾಗಿ ಮಹಾಸಭೆಯೊಂದು ಡಿಲ್ಲಿಯಲ್ಲಿ ಸೇರಿತು. ಪೇಶಾವರದ ಬೆರಿಸ್ಟರರು ಅಜೀಜರೆಂಬವರು ಅಧ್ಯಕ್ಷರಾದರು. ಕೆಲವರು ಅದಾಗದೊದರು ಅಧ್ಯಕ್ಷರು ಗೊಂದಲ ನೋಡಿ ಸಭೆ ಬರುವ ರವಿವಾರಕ್ಕೆ ಮುಂದರಿಸಿದರು.

•  •  •  •

ಕೂಡಲೆ ಯಾಮಿನ ಖಾನ್‌ರನ್ನು ಅಧ್ಯಕ್ಷರನ್ನಾಗಿ ಮಾಡಿ ಸಭೆ ನಡೆಸಿದರು. ಅವರ ಕುರ್ಚಿಯನ್ನೆ ದೂಡಿ, ಅವರನ್ನು ಬೀಳಿಸಿ, ಮೂವರು ಮುಖಂಡರು ಅವರ ಮೈಮೇಲೆ ಹೊಡೆದಾಡಿಕೊಂಡರು. "ಇದು ಸೂರತ್ ಕೊಂಗ್ರೆಸ್ಸೋ?" ಎಂದರೊಬ್ಬರು; 'ಈ ಬಚ್ಚಾ ಸಾಹೇಬಗಳಿಂದ ಆಕಾಶವೇ?' ಎಂದರಿನ್ನೊಬ್ಬರು. ಕುರ್ಚಿ—ಚಿತ್ರಗಳು [illegible] ಮಾಡುವ, ಸಭೆ ಮುಂದರಿಸಿತು: ನಂತರ ಶಾಂತಿ! ಒಂದುಕೂಡಿದ್ದಂದ [illegible]

# ಬೆಳೆಯುತ್ತಿರುವ ಮಕ್ಕಳಿಗೆ ಸಮತೂಕದ ಆಹಾರವು ಅಗತ್ಯ!

ಮಕ್ಕಳ ಆರೋಗ್ಯದಾಯಕ ಬೆಳವಣಿಗೆಗೆ

## ಹಾರ್ಲಿಕ್ಸ್

ಅದರ ಚೈತನ್ಯದಾಯಕ ಶಕ್ತಿಯಿಂದಾಗಿ ಶ್ರೇಯಸ್ಕರವಾಗಿದೆ

ಮಕ್ಕಳು ಎಚ್ಚರಗೊಂಡು ನಿದ್ದೆಯು ಬರುವ ತನಕ ಎಡೆಬಿಡದೆ ವರೆಗೆ ಏನೆಲ್ಲ ಚಟುವಟಿಕೆಯಲ್ಲಿರುವುದಿಲ್ಲ! ಅವರು ಬೇಗನೆ ಬೆಳೆಯುತ್ತಿರುವ ಸಮಯದಲ್ಲಿ ಅವರಿಗೆ ಸಮತೂಕದ ಆಹಾರವು ಅಗತ್ಯ. ಅವರು ಕಳೆದುಕೊಳ್ಳುತ್ತಿರುವ ಚೈತನ್ಯವನ್ನು ಪುನರ್ವೃದ್ಧಿಸಿ ಅವರು ಆರೋಗ್ಯವಂತರಾಗುವ ಹಾಗೆ ಬೇಕು.

ಆದರೆ, ಈ ಮಕ್ಕಳಿಗೆ ಸಾಧಾರಣ ಆಹಾರದಲ್ಲಿ ಬೆಳವಣಿಗೆಗೆ ಸಾಕಾಗುವಷ್ಟು ಜೀವಾಂಶವು ದೊರೆಯುವುದಿಲ್ಲ. ಹಾಗಿರುವಾಗ ವಿವೇಕಿಗಳಾದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಹಾರ್ಲಿಕ್ಸನ್ನು ಆಹಾರದೊಡನೆ ಕೊಡುತ್ತಾರೆ. ದನದ ಕೆನೆಹಾಲಿನಿಂದಲೂ ಗೋದಿಯ ಸಾರ, ಮೊಳ್ಟೆಡ್ ಬಾರ್ಲಿಯಿಂದಲೂ ಇದು ತಯಾರಿಸಲ್ಪಟ್ಟಿದ್ದು ಬೆಳೆಯುವ ಮಕ್ಕಳಿಗೆ ಬೇಕಾದ ಆಹಾರ ಸಾರವನ್ನು ಇದು ಕೊಡುತ್ತದೆ.

**ಹಾರ್ಲಿಕ್ಸ್ ಬೇಗನೇ ಕರಗುತ್ತದೆ. ಎಂತಹ ನಿರ್ಬಲ ಜೀರ್ಣಶಕ್ತಿಗೂ ಇದು ಉಪಯುಕ್ತವಾಗಿದೆ.**

ಸ್ಪೆಶಲ್ ಹಾರ್ಲಿಕ್ಸ್ ಮಿಕ್ಸರನ್ನು ಉಪಯೋಗಿಸಿರಿ. ಇದರಿಂದ ಕೆಲವು ನಿಮಿಷಗಳಲ್ಲಿ ಮಧುರವಾದ ಆಹಾರ ತಯಾರಿಯಾಗುತ್ತದೆ. ಸ್ಟೋರುಗಳಲ್ಲಿ ದೊರೆಯುತ್ತದೆ. ಅಥವಾ ಟಪ್ಪಾಲು ಪೆಟ್ಟಿಗೆ 2229 ಕಲ್ಕತ್ತ ಇಲ್ಲಿಗೆ 14 ಆಣೆ ಅಂಚೆ ಚೀಟು ರವಾನಿಸಿದರೂ ದೊರೆಯುತ್ತ.

ಟ. ಪೆಟ್ಟಿಗೆ ನಂಬ್ರ 2229 ಕಲ್ಕತ್ತ ಇಲ್ಲಿಗೆ

ಹಾಲೋಸಹಿತ ಅನುಭವಗಳನ್ನು ಕೊಡುವ "ಹಾರ್ಲಿಕ್ಸ್ ಫೋರ್ ಚಿಲ್ಡ್ರನ್"

ಎಂಬ ಪತ್ರಿಕವನ್ನು ನನಗೆ ಧರ್ಮಾರ್ಥವಾಗಿ ರವಾನಿಸಿರಿ

ಹೆಸರು

ವಿಳಾಸ \o ɔ B 108

**ಹಾರ್ಲಿಕ್ಸ್ ಮಿಕ್ಸರ್ ಬೇಕಾಗಿದ್ದರೆ 14 ಆಣೆ ಸ್ಟಾಂಪು ಇಡಿರಿ**

## ಹಾರ್ಲಿಕ್ಸ್

ಮೂಲಭೂತವಾದ 'ಮೊಳ್ಟೆಡ್' ಹಾಲು.

**ಎಲ್ಲಾ ಕಡೆಗಳಲ್ಲಿ ದೊರೆಯುತ್ತೆ.**


## ಜಿಲ್ಲೆಯಲ್ಲಿ ಫೆಬ್ರುವರಿ ಆಖೈರು ವರೆಗಿನ ಹರಿಜನ ಸೇವಾ ಕಾರ್ಯದ ವರದಿ

ಮಹಾತ್ಮಾಗಾಂಧಿಯವರು ಉಪವಾಸವನ್ನು ಕೈಕೊಂಡಾಗ ಅಖಿಲ ಭಾರತವು ಒಮ್ಮೆಗೆ ಕ್ಷುಬ್ಧವಾಗಿ ಕಣ್ತೆರೆದಂತೆ ನಮ್ಮ ಜಿಲ್ಲೆಯೂ ಹರಿಜನ ಕಳವಳದ ಕಾರ್ಯಕ್ಕೆ ಕೈಹಚ್ಚಿತು. ಉಪವಾಸದ ಹಿಂದಿನ ದಿನ ಸಪ್ಟಂಬರ ತಾ ೧೯ಕ್ಕೆ ಮಂಗಳೂರಿನ ಪ್ರಮುಖ ಪಟ್ಟಣಿಗರು ಹರಿಜನ ಕೂಡಿಗೊಂಡ ಶ್ರೀ ಸುಬ್ರಹ್ಮಣ್ಯ ಭಟ್ಟ ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪ್ರಾತಿನಿಧ್ಯ ಪ್ರಶ್ನೆಯ ಕುರಿತು ಮಹಾತ್ಮಾಜೀಯವರಿಗೆ ಪೂರ್ಣ ಬೆಂಬಲವಿತ್ತರು. ಮಹಾತ್ಮಾಜೀಯವರ ಜನ್ಮದಿನ ಅಕ್ಟೋಬರ ತಾ. ೨ರ ಒಳಗೆ ಮಂಗಳೂರು ಮತ್ತು ಉಡುಪಿಗಳಲ್ಲಿ ಸ್ಥಳೀಕ ಸಂಘಗಳು ಏರ್ಪಟ್ಟವು. ಈ ಸಂಘಗಳು ಹರಿಜನರೊಡಗೂಡಿದ ಭಜನೆ ಮೆರವಣಿಗೆ ಸಭೆಗಳು, ಅವರನ್ನು ಮನೆಗಳಿಗೆ ಆಮಂತ್ರಿಸೋಣ ಅವರ ಕೇರಿಗೆ ಹೋಗಿ ಉಪದೇಶ ಕೊಡೋಣ, ಮಿಶ್ರ ಫಲಾಹಾರ ಅಸ್ಪೃಶ್ಯತಾ ನಿವಾರಣಾ ಪ್ರಚಾರ ಸಭೆಗಳು ಮೊದಲಾದ ಕಾರ್ಯಕಲಾಪಗಳನ್ನು ಉತ್ಸಾಹದಿಂದ ಮಾಡಿದುವು. ಹಲವು ಮಂದಿ ಕೆಲಸಗಾರರು ಕಾರ್ಕಳ ಮತ್ತು ಪುತ್ತೂರುಗಳಲ್ಲಿಯೂ ಇದೇ ಬಗೆಯ ಕೆಲಸಗಳನ್ನು ಕೈಕೊಂಡು ಹರಿಜನರ ಕಡೆಗೆ ಹೊಸ ಸ್ನೇಹವನ್ನು ಪ್ರದರ್ಶಿಸಿದರು.

ನವಂಬರ ತಿಂಗಳ ತಾ. ೧೨ಕ್ಕೆ ಶ್ರೀಮತಿ ಕಸ್ತೂರಿಬಾ ಗಾಂಧಿಯವರೂ ಶ್ರೀಮತಿ ಊರ್ಮಿಳಾ ದೇವಿಯವರೂ ಮಂಗಳೂರನ್ನು ಸಂದರ್ಶಿಸಿದರು. ಇವರ ಜೊತೆಯಲ್ಲಿಯೇ ಬಂದ ಅಖಿಲ ಭಾರತ ಹರಿಜನ ಸೇವಾಸಂಘದ ಕಾರ್ಯದರ್ಶಿ ಶ್ರೀ ಅಮೃತಲಾಲ ಠಕ್ಕರರು ನವಂಬ್ರ ತಾ. ೧೪ಕ್ಕೆ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಹರಿಜನ ಸೇವಾ ಸಂಘವನ್ನು ಸ್ಥಾಪಿಸಿ ಸ್ಥಳೀಕ ಸಂಘಗಳನ್ನು ಅಖಿಲ ಭಾರತ ಸಂಘದ ಆಶ್ರಯಕ್ಕೆ ಸೇರಿಸಿದರು. ಶ್ರೀ ಠಕ್ಕರರು ಉಡುಪಿಗೂ ಭೇಟಿಕೊಟ್ಟು ಸಂಘದ ಕಾರ್ಯಕ್ರಮಗಳನ್ನು ವಿವರಿಸಿದರು.

ಜನವರಿ ಆಖೈರು ಒಳಗೆ ಜಿಲ್ಲಾ ಹರಿಜನ ಸೇವಾಸಂಘದವರು ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸಂಘದ ಶಾಖೆಗಳನ್ನು ವ್ಯವಸ್ಥೆಗೊಳಿಸಿದರು. ಮಂಗಳೂರು ನಗರ ಸಂಘವು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ ಸೂರ್ಯನಾರಾಯಣ ರಾಯರ ಮೂಲಕ ಮಂಗಳೂರು ಮುನಿಸಿಪಲ್ ಚೆಯರ್‌ಮೆನ್ ಶ್ರೀ ಡಾ। ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಮೊದಲೇ ವ್ಯವಸ್ಥಿತ ಸ್ಥಿತಿಯನ್ನು ಹೊಂದಿತ್ತು. ಉಡುಪಿಯ ಅಸ್ಪೃಶ್ಯತಾ ನಿವಾರಣೇ ಸಭೆಯು ಉಡುಪಿ ತಾಲೂಕಿನ ಹರಿಜನ ಸೇವಾ ಸಂಘವಾಗಿ ಮಾರ್ಪಡಿಸಿ ಪುನರ್ವ್ಯವಸ್ಥೆಗೊಳಿಸಲ್ಪಟ್ಟಿತು. ಕುಂದಾಪುರ, ಕಾರ್ಕಳ ಪುತ್ತೂರು ಕಾಸರಗೋಡು ಮತ್ತು ಮಂಗಳೂರು ತಾಲೂಕುಗಳಿಗೆ ಪ್ರತ್ಯೇಕವಾಗಿ ತಾಲೂಕು ಸಂಘಗಳನ್ನು ಏರ್ಪಡಿಸಲಾಯಿತು. ಪ್ರತಿಯೊಂದು ಸ್ಥಳದಲ್ಲಿಯೂ ಆಯಾ ಸ್ಥಳೀಕ ಸದ್ಗೃಹಸ್ಥರು ಸಂಘದ ಪದವೀಧರರಾಗಿ ಕಾರ್ಯಭಾರವನ್ನು ವಹಿಸಿರುವರು. ಸ್ಥಳೀಕ ವಿದ್ಯಾವಂತ ವರ್ಗಗಳಿಂದ ಪ್ರಮುಖ ಪಟ್ಟಣಿಗರಲ್ಲಿ ಸಾಮಾನ್ಯ ಹೆಚ್ಚಿನವರು ತಾವು ಖಾಸಗಿ ವ ಸಾರ್ವಜನಿಕ ಜೀವನಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲವೆಂದೂ ಎಲ್ಲ ಸಾರ್ವಜನಿಕ ಸಂಸ್ಥೆಗಳಲ್ಲಿ ದೇವಸ್ಥಾನಗಳಲ್ಲಿ ಕೂಡಾ ಹರಿಜನರಿಗೆ ಪ್ರವೇಶ ದೊರೆಯುವಂತೆ ತಮ್ಮಿಂದಾಗುವ ಎಲ್ಲ ಯತ್ನಗಳನ್ನು ಮಾಡುವುದಾಗಿಯೂ ಪ್ರತಿಜ್ಞೆಗೆ ಸಹಿ ಹಾಕಿ ಆಯಾ ಸಂಘಗಳ ಸದಸ್ಯರಾಗಿ ಸೇರಿರುವರು.

ಜಿಲ್ಲಾ ಕಮಿಟಿಯು ಜನವರಿ ಆಖೈರಿಗೆ ಸಭೆ ಸೇರಿ ತನ್ನ ಕಾರ್ಯಕ್ರಮಗಳನ್ನು ನಿರ್ಣಯಿಸಿತು. ಸವರ್ಣ ಹಿಂದುಗಳೊಳಗೆ ಹಾಗೂ ಹರಿಜನರೊಳಗೆ ಮಾಡಬೇಕಾದ ಕಾರ್ಯಗಳನ್ನು ವಿವರಿಸಿ ಪ್ರಕಟನೆಯಲ್ಲಿ ಅವಶ್ಯವುಳ್ಳ ಧನಸಹಾಯಕ್ಕೆ ವಿಜ್ಞಾಪನೆಯನ್ನು ಹೊರಡಿಸಿತು. ಹರಿಜನ ಹೈಸ್ಕೂಲ್, ವಿದ್ಯಾರ್ಥಿಗಳಿಗೆ ಸಂಬಳ, ಊಟ, ವಸ್ತ್ರ, ಪುಸ್ತಕಗಳು ಎಲಿಮೆಂಟರಿ ಶಾಲಾ ಹರಿಜನ ಮಕ್ಕಳಿಗೆ ಬಟ್ಟೆ ಮತ್ತು ಪುಸ್ತಕಗಳು ಪ್ರಾಯಸ್ಥರ ಬಗ್ಗೆ ರಾತ್ರಿ ಶಾಲೆಗಳು ಕೆಲವು ಮನೆಗಳನ್ನಾದರೂ ಕಟ್ಟಿಸಲಿಕ್ಕೆ ಸಹಾಯ, ಚಿಕ್ಕ ಚಿಕ್ಕ ಕೈಗಾರಿಕೆಗಳಿಗೆ ಸಹಾಯ, ಅಗತ್ಯವಿದ್ದಲ್ಲಿ ಅನ್ನ ಬಟ್ಟೆ ಮತ್ತು ವೈದ್ಯಕೀಯ ಸಹಾಯ ಮೊದಲಾದ ಕಾರ್ಯಗಳನ್ನೊಳಗೊಂಡ ಆಯವ್ಯಯ ಪಟ್ಟಿಯನ್ನು ರಚಿಸಿ ಎಲ್ಲಾ ತಾಲೂಕು ಕಮಿಟಿಗಳಿಗೆ ಕಳುಹಿಸಲಾಯಿತು. [ಸಶೇಷ]


## ಬಿಪತ್ತೆದ್ದು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಾಲುಕತವಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೀ ಕೊಡುವುದಿಲ್ಲವೇ?

**ಸ್ವದೇಶೀ**

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್ ಬಾತ್ ಟುವಾಲುಗಳೂ, ಧೋತಿ, ಸೀರೆ—ಬೈರವಾಸು—ಚಿಕ್ಕ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

**ಶ್ರೀನಿವಾಸ ರಂಗ ಪೈ,**

[ಸಾಹುಕಾರ ದುಕಾನ್]

ರಥಬೀದಿ, ಮಂಗಳೂರು.

[illegible]
[illegible] [illegible]
[illegible] [illegible]
[illegible] [illegible]
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ವಿದೇಶ ವರ್ತಮಾನ, [illegible]
ಅಧಿಕ ಸಮಾಚಾರಗಳು ೧೧
[illegible] [illegible]
ಪತ್ರವ್ಯವಹಾರ ೧೪
ಸ್ತ್ರೀಯರ ಸೋಮಾರಿತನ [illegible] ಛಾ! [illegible]
ಪತ್ರಿಕಾ, ಕನ್ನಡ—ಮಂಗಳೂರು, ಸುರತ್ಕಲ್ ಪಡುಬಿದ್ರಿ,
ಬಂಟ್ವಾಳ, ಕಾರ್ಕಳ [illegible]
ನಾವು ಯಾರು? ೧೫
ಜಿಲ್ಲೆಯಲ್ಲಿ ಫೆಬ್ರವರಿ ಆಖೈರು ವರೆಗಿನ ಹರಿಜನ ಸೇವಾ
ಕಾರ್ಯದ ವರದಿ [illegible]
ಅಫಘಾನಿನ ಭಯಂಕರ ಭೂಕಂಪ [illegible]

# ಸ್ವದೇಶಾಭಿಮಾನಿ.

ತಾ. ೧೦ನೇ ಶುಕ್ರವಾರ ಮಾರ್ಚಿ ೧೯೩೩.

## ಸತ್ಯಾಗ್ರಹದ ಭವಿತವ್ಯ

ಶ್ರೀಯುತ ಜಮ್ನಾದಾಸ ದ್ವಾರಕದಾಸರವರು ತಾನಿನ್ನು ಸತ್ಯಾಗ್ರಹದಲ್ಲಿ ಕೈಹಾಕುವುದಿಲ್ಲವೆಂದು ಸರಕಾರಕ್ಕೆ ಮಾತು ಕೊಟ್ಟು ಜೈಲಿನಿಂದ ಬಿಡುಗಡೆ ಹೊಂದಿ ಬಂದರು. ಇದರಿಂದ ಅವರ ಮಾನಸಿಕತೆಯ ದೌರ್ಬಲ್ಯದ ವಿಷಯ ಅವರನ್ನು ಹಳಿಯಬಹುದು. ಅವರು ಸರಕಾರಕ್ಕೆ ಮಾತು ಕೊಟ್ಟುದನ್ನು ಸಮರ್ಥನ ಮಾಡುವ ಬಗ್ಗೆ ಒಂದು ದೀರ್ಘ ಹೇಳಿಕೆಯನ್ನೂ ಅವರು ಪ್ರಕಟಿಸಿರುವರು, ತಾನು ಸರಕಾರಕ್ಕೆ ಬಗ್ಗಿದುದನ್ನು ಜನತೆಯ ಮುಂದೆ ಸರಿಯೆನ್ನಿಲಿಸಕ್ಕೂ, ತನ್ನ ಮನಸ್ಸಾಕ್ಷಿಯನ್ನು ಸಮಜಾಯಿಸಲಿಕ್ಕೂ ಅವರು ಹೀಗೆ ಒರೆದರೆನ್ನಬಹುದು. ಅಲ್ಲದೆ ಆ ಹೇಳಿಕೆಯೊಳಗಿನ ಹಲವು ತರ್ಕಗಳು ನಿರಾಧಾರವೆನ್ನಲೂ ಬಹುದು. ಹಾಗೆಯೇ ಕಾಂಗ್ರೆಸ್ಸಿನ ಮೇಲೆ ಅವರು ಆ ಹೇಳಿಕೆಯಲ್ಲಿ ಹೊರಿಸಲು ಯತ್ನಿಸಿದ ಅಪವಾದಗಳೂ ಅವರ ಯೋಗ್ಯತೆಗೆ ತಕ್ಕುದಾಗಿಲ್ಲವೆನ್ನಲೂ ಬಹುದು.

ಶ್ರೀ ಜಮ್ನಾದಾಸ ದ್ವಾರಕದಾಸರವರ ಈ ನಡತೆಯಲ್ಲಿ ಇಷ್ಟು ದೋಷಗಳು ಕಂಡು ಬರುವುವಾದರೂ, ಅವರ ಹೇಳಿಕೆ (Statement)ಯಲ್ಲಿ ಹಲವು ಸ್ವಾರ್ಥಪರ ವಿಷಯಗಳು ಇರುವುವಾದರೂ, ಆ ಹೇಳಿಕೆಯನ್ನು ನಾವು ದೇಶದ ಹಿತದ ದೃಷ್ಟಿಯಿಂದಲೂ, ರಾಜಕೀಯ ವ್ಯಾವಹಾರಿಕತೆ (Practical Politics)ಯ ದೃಷ್ಟಿಯಿಂದಲೂ ಲಕ್ಷಿಸುವುದು ಅಗತ್ಯವಾಗಿದೆ. ಸತ್ಯಾಗ್ರಹವು ನೈತಿಕ ಆಯುಧವಾಗಿದೆಯೆಂದು ಒಪ್ಪಬಹುದು, ಸತ್ಯಾಗ್ರಹದಲ್ಲಿ ಆತ್ಮಶಕ್ತಿಯಿದೆಯೆನ್ನುವುದೂ ಒಪ್ಪಬಹುದು, ಸತ್ಯಾಗ್ರಹವು ಸತ್ಯವನ್ನೇ ಉದ್ದೇಶಿಸುತ್ತಿದೆಯೆಂದರೂ ಒಪ್ಪಬಹುದು. ಆದರೆ ಸತ್ಯಾಗ್ರಹವು ಸ್ವರಾಜ್ಯವನ್ನು ಉದ್ದೇಶಿಸುವುದೇ? ಅದು ರಾಜಕೀಯ ಆಯುಧವಾಗಿದೆಯೇ? ಅದರಲ್ಲಿ ರಾಜಕೀಯ ಬಲವಿದೆಯೇ? ಎಂಬುದರ ವಿಷಯ ಮಾತ್ರ ಈ ಮೊದಲೂ ಉತ್ಸಾಹಿಗಳು ಏನೇ ಹೇಳಿದ್ದರೂ, ಈಗ ಈ ಪ್ರಶ್ನೆಗಳಿಗೆ ಉತ್ತರದಲ್ಲಿ ಭಿನ್ನಾಭಿಪ್ರಾಯವಿರದಾಗಿ ನಾವು ನೆನಸುವೆವು.

ಸತ್ಯಾಗ್ರಹವು ರಾಜಕೀಯ ಆಯುಧವಾಗಿ ಪರಿಣಾಮಕಾರಿಯಾಗಿಲ್ಲವೆಂದು ಜಮ್ನಾದಾಸ ದ್ವಾರಕದಾಸರು ಹೇಳುವುದನ್ನು ನಾವು ಒಪ್ಪಬೇಕಾಗಿದೆ. ಸುಧಾರಣಾ ಸರಕಾರ, (Dominion Status) ಮೊದಲಾದುವುಗಳನ್ನು ಬ್ರಿಟಿಷರು ಕೊಡುತ್ತೇವೆಂದುದು ಸತ್ಯಾಗ್ರಹದ ಕಾರಣದಿಂದಲ್ಲವೇ? ಎಂದು ಕೆಲವರು ಆಕ್ಷೇಪಿಸಬಹುದು. ಲೋರ್ಡ್ ಇರ್ವಿನರು ಬಗ್ಗಿದರು; ಗಾಂಧಿಜಿಯವರನ್ನು ಬಿಡುಗಡೆ ಮಾಡಿದರು; ರೌಂಡ್ ಟೇಬಲ್ ಪರಿಷತ್ತಿಗಾಗಿ ಕಾಂಗ್ರೆಸ್ಸಿಗೆ ಆಮಂತ್ರಣವಿತ್ತರು; ಇತ್ಯಾದಿಗಳು ಸತ್ಯಾಗ್ರಹದ ವಿಜಯದ ಚಿಹ್ನೆಗಳು ಎಂದೂ ಕೆಲವರು ಆಕ್ಷೇಪವೆತ್ತಬಹುದು. ಆದರೆ ಆ ಆಕ್ಷೇಪಗಳು ಈಗೆಲ್ಲಿ? [illegible] ಚಿಹ್ನೆಗಳು, ಎಲ್ಲಿ? [illegible] ಅಡಗಿಹೋಗಿವೆ; ಸರಕಾರ, ಸಹಾಯ, ಮಾತು ತಿರುಗಿ ಹೋಗಿದೆ; ಸತ್ಯಾಗ್ರಹದ ಆತ್ಮಬಲವು ಪೋಲೀಸರ ದೊಣ್ಣೆಯ ಬಲದಿಂದ ಅಡಗಿ ಹೋಗಿದೆ; ಜಿಲ್ಲೆಯ ಎಲ್ಲಾ ಧುರೀಣರೂ ಜೈಲಿನೊಳಗಿದ್ದಾರೆ. ಎಲ್ಲವೂ ಶಾಂತಮಯ; ಆತ್ಮಬಲದ ಸುಳಿವೇ ಇಲ್ಲ. ಸರ್ ಹೋರರು ಈಗ ಉಬ್ಬಿ ಹೋಗಿದ್ದಾರೆ; ಲೋರ್ಡ್ ವಿಲ್ಲಿಂಗ್ಡನ್ನರು ಈಗ ಬ್ರಿಟಿಷರ Empire Builders ಸಾಮ್ರಾಜ್ಯ ರಚಯಿತರಲ್ಲಿ ಒಬ್ಬರಾಗಿ ಹೋಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಯಾವ ಆಶಾವಾದವನ್ನು ಸಾರಬಹುದೆಂದು ತೋರುವುದಿಲ್ಲ. ಜಮ್ನಾದಾಸ ದ್ವಾರಕದಾಸರ ದೋಷಗಳು ಏನೇ ಇದ್ದರೂ ಅವರ ದೀರ್ಘ ಲೇಖವನ್ನು ಈ ದೃಷ್ಟಿಯಿಂದ ಓದಿ ತಿಳಿಯುವುದು ಅವಶ್ಯಕ.

ಮಹಾತ್ಮಾಜೀಯವರು ಹಿಂದಿ ಜನಾಂಗವನ್ನು ಎಚ್ಚರಿಸಿದ ಬಗ್ಗೆ ಅಭಿನಂದನೀಯರೇನೊ ನಿಜ. ಆದರೆ ಈ ಸತ್ಯಾಗ್ರಹ ಅಹಿಂಸಾವಾದಿಗಳಿಂದ ಜನತೆಯ ಸಾಧನಶಕ್ತಿಗಳನ್ನು ಅಭಿವೃದ್ಧಿಗೊಳಿಸಿದ್ದಾರೆಂಬ ಮಾತನ್ನು ಒಪ್ಪುವುದು ಕಷ್ಟವಿದೆ. ಮುಂದಿನ ಇತಿಹಾಸವೇ ಇದರ ನಿಜತ್ವವನ್ನು ನೋಡಿಕೊಳ್ಳಬೇಕು.

ಜಮ್ನಾದಾಸರು ಸೂಚಿಸುವಂತೆ ಸರಕಾರದೊಡನೆ ಸಹಕಾರವನ್ನೊಪ್ಪಿ ಅಥವಾ ಸತ್ಯಾಗ್ರಹವನ್ನು ನಿರಾಕರಿಸಿ ಗಾಂಧಿಜಿಯವರೂ ಇತರರೂ ಜೈಲಿನಿಂದ ಬಿಡುಗಡೆಯಾಗಿ ಬರಬೇಕೆಂಬುದನ್ನು ನಾವು ಒಪ್ಪಿಕೊಳ್ಳಲಾರೆವು. ಆದರೆ ಸತ್ಯಾಗ್ರಹದ ಕಾರ್ಯಕಾರಿತೆ, ದೇಶದ ಮುಂದಿನ ರಾಜಕೀಯ ಅಭಿವೃದ್ಧಿಗಾಗಿ ಕಾಂಗ್ರೆಸ್ ತನ್ನ ಕಾರ್ಯಕ್ರಮದಲ್ಲಿ ಮಾಡಬೇಕಾದ ಮಾರ್ಪಾಟು, ಇವುಗಳನ್ನು ಕಾಂಗ್ರೆಸ್ಸಿನವರು ಈಗಲಾದರೂ ಚಿಂತಿಸುವುದು ಅಗತ್ಯ. ೧೯೨೧—೨೨ನೇ ಇಸವಿಯ ಅಸಹಕಾರ ಚಳವಳಿಯ ನಂತರ ಸ್ವರಾಜ್ಯಪಕ್ಷ ರಚನೆಯ ಮೂಲಕ ದೇಶಬಂಧು ಚಿತ್ತರಂಜನ ದಾಸರು ದೇಶದ ನಿರ್ವಾಣಗೊಂಡ ಶಕ್ತಿಯನ್ನು ಪುನಃ ಉತ್ತೇಜಿಸಿದರು. ಈಗಲಾದರೂ ಅದೇ ತರದ ಬದಲಾವಣೆಗಾರರು ಕಾಂಗ್ರೆಸ್ಸಿಗೆ ಬೇಕಾಗಿದ್ದಾರೆ. ಅಂತಹರು ಯಾರೂ ಈಗ ತೋರದಿರುವುದು ವಿಷಾದಕರವಿದೆ.

ಸತ್ಯಾಗ್ರಹಕ್ಕೆ ದೇಶವು ಸಾಕಷ್ಟು ಪರೀಕ್ಷೆಯನ್ನಿತ್ತಿತು. ನೆನಸಿದುದಕ್ಕಿಂತಲೂ ಹೆಚ್ಚಿನ ಮಂದಿಗಳು ಆತ್ಮಬಲಿಯನ್ನೂ ಸ್ವಾರ್ಥತ್ಯಾಗವನ್ನೂ ಮಾಡಿದರು. ಸತ್ಯಾಗ್ರಹದ ಪರಿಣಾಮಕಾರಿತೆಯು ವಿರೋಧಿಯ ಹೃದಯದ ಮಹತ್ವದ ಮೇಲೂ, ಕರುಣೆಯ ಮೇಲೂ ಹೊಂದಿದೆ. ಲೇಬರ್ ಸರಕಾರದಲ್ಲಿ ವಿಲಿಬಿನ್ನರು ಸೆಕ್ರೆಟರಿಗಳಾಗಿಯೂ ಲೋರ್ಡ್ ಇರ್ವಿನರು ವೈಸರಾಯರಾಗಿಯೂ ಇದ್ದಾಗ ಈ ಗುಣಗಳು ಅವರಲ್ಲಿದ್ದುದರಿಂದ ಸತ್ಯಾಗ್ರಹವು ಪೂರ್ಣವಲ್ಲದಿದ್ದರೂ ಕೆಲ ಮಟ್ಟಿಗೆ ಪರಿಣಾಮಕಾರಿಯಾಯಿತು. ಆದರೆ ವಿರೋಧಿಯ ಕರುಣೆಯ ಮೇಲೆ ಜಯಲಾಭವು ಹೊಂದಿರುವ ಯಾವ ಯುದ್ಧವೂ ಯುದ್ಧವೆನ್ನಲಾಗದು, ಅದು ದೌರ್ಬಲ್ಯ, ಅಂತಹದರಿಂದ ಮಾನಸಿಕತೆಯು ಕೆಡುವುದು. ಆದುದರಿಂದ ಕಾಂಗ್ರೆಸ್ಸು ಈ ಸತ್ಯಾಗ್ರಹವನ್ನು ನಿಲ್ಲಿಸಿ ನೂತನ ಕಾರ್ಯಕ್ರಮಕ್ಕಾಗಿ ಕೈಹಚ್ಚುವುದು ಅಗತ್ಯವಿದೆ.

## ವಿದೇಶ ವರ್ತಮಾನ.

— ಚಿಕಾಗೋವಿನಲ್ಲಿ ಅಧ್ಯಕ್ಷ ರೂಸ್‌ವೆಲ್ಟರೊಡನಿದ್ದ ಮೇಯರ ಸೆರ್‌ಮೇಕರಿಗೆ ಜಂಗಾರನೆಂಬ ಇಟೆಲಿಯನನು ಗುಂಡೆಸೆದನಷ್ಟೆ. ಸೆರ್‌ಮೇಕರು ತಾ ೬ನೇ ದಿನ ಕಾಲವಾದರು. ಜಂಗಾರನಿಗೆ ೮೦ ವರ್ಷಗಳ ಬಂಧನವನ್ನು ವಿಧಿಸಿದ್ದರೂ ಅವನನ್ನು ಫಾಶಿಗೇರಿಸಬಹುದೆಂದು ವಾರ್ತೆ.

- ಐಯರ್ಲೇಂಡ್ ಭೂಶಾಸನ ದ್ರವ್ಯವನ್ನು ಬ್ರಿಟನಿಗೆ ಕೊಡುವುದಿಲ್ಲವಾಗಿಯೂ ಅದನ್ನು ತಾನೇ ಉಪಯೋಗಿಸುವೆನೆಂದೂ ಹೇಳಿದೆ.

—ಜುಲಾಯಿ ತಿಂಗಳಲ್ಲಿ ೬೫೦,೦೦೦ ಪೌಂಡುಗಳನ್ನೂ ಫೆಬ್ರವರಿ ತಾ ೨೮ರ ತನಕ ೧೨,೯೧೦,೦೦೦ ಪೌಂಡುಗಳನ್ನೂ ಐಯರ್ಲೇಂಡು ಬ್ರಿಟನಿಗೆ ಕೊಡಬೇಕಿತ್ತು—ಕೊಡಲಿಲ್ಲ. ಆದಕ್ಕಾಗಿ ಐರಿಶ್ ಸರಕುಗಳ ಮೇಲೆ ಕರ ಹೊರಿಸಿ ಬ್ರಿಟನು ಇಷ್ಟರ ತನಕ ೨೧,೨೪,೦೦೦ ಪೌಂಡುಗಳನ್ನು ಪಡೆಯಿತು.

—ಕ್ಯಾಂಟರ್ ಬರಿಯ ಕಮಿಟಿಗೆ ಲಂಡನಿಗೆ ಭಾರತ ಯಾರನ್ನು ಕರೆಯಲಿ ಎಂದು ಈಗ ಮಂತ್ರಿ ಮಂಡಲದವರ ಆಲೋಚನೆ.

— ಲಂಡನಿನ ಓಲ್ಡ್ ಸ್ಟ್ರೀಟ್ ಪೋಲೀಸ್ ಕೋರ್ಟಿನಲ್ಲಿ ಕಳ್ಳನ ಸಾಕ್ಷಿಯಾಗಿ ನಿಂತವನೊಬ್ಬನು ಮೆಜಿಸ್ಟ್ರೇಟರಾದ ಮುಲ್‌ಕಾಫ್ ಎಂಬವರಿಗೆ ಹೊಡೆದನು! ಮೇಜಿಸ್ಟ್ರೇಟರು ಪಲುಚೇರಿ ತಪ್ಪಿಸಿಕೊಂಡರು. ಕಂಠವನ್ನು ಹಿಡಿದ ಭಂಡನು ಸೆರೆಗೊಳಗಾದನು.

## ಒಳದೇಶ ವರ್ತಮಾನ

—ಕಾಶಿಯ ಸೆರೆಯಲ್ಲಿರುವ ಶ್ರೀಮತಿ ರಾಧಾರಾಣಿ ಜೇಸ್ ಎಂಬವರಿಗೆ ಕುಂಕುಮವನ್ನಿಡಲು ಜೈಲಧಿಕಾರಿಗಳು ಬಿಡದಿದ್ದುದರಿಂದ ಮಾಲವೀಯರೇ ಮೊದಲಾದವರಿಂದ ವಿಚಾರಣೆ ನಡೆದು ಕುಂಕುಮವಿಡಬಹುದೆಂದಾಯಿತು.

—ದಿಲ್ಲಿಯಲ್ಲಿ ಒಬ್ಬ ಧನಿಕರ ಮನೆಗೆ ೪೦ ಮಂದಿ ಪೋಲೀಸರು ನುಗ್ಗಿ ೬೦,೦೦೦ ರೂಪಾಯಿಗಳನ್ನು ದೋಚಿದರು. ವಿಚಾರಿಸಲಾಗಿ ಪೋಲೀಸ ವೇಷದ ಕಳ್ಳರೆಂದು ತಿಳಿಯಲಾಯಿತು.

—ಹಿಂದೂದೇಶದ ರೈತರುಗಳಿಗೆ ಒಟ್ಟಿಗೆ ೯೦೦ ಕೋಟಿ ರೂಪಾಯಿಗಳ ಸಾಲವಿರುವುದಾಗಿ ಬೇಂಕಿಂಗ್ ವಿಚಾರಣಾ ಸಂಘದವರ ಪರಿಶೋಧನೆ.

—ಶಿವರಾತ್ರಿ ಸಮಯದಲ್ಲಿ ಕಾಶಿಯಲ್ಲಿ ಜರಗಿದ ಒಂದು ಧಾರ್ಮಿಕ ಸಭೆಯಲ್ಲಿ ಗಲಾಟೆಯಾಗಿ ಸ್ತ್ರೀಯರಿಗೆ ಮಕ್ಕಳಿಗೆ ಜಖಂ ಉಂಟಾಯಿತು. ಮಾಲವೀಯರು ಸಮಾಧಾನ ಹೇಳಿಸಿದರು.

—ಪೇಶಾವರದಲ್ಲಿ ಗುಪ್ತ ಪೋಲೀಸರು ಪತ್ತೆ ನಡೆಸಿ ಒಂದು ಮುದ್ರಣ ಯಂತ್ರವನ್ನೂ ಮೂವರು ತರುಣರನ್ನೂ ಹಿಡಿದುಕೊಂಡು ನಡೆದರು.

—ಮುಂಬಾಯಿಯ ತಂತಿ ಕಂಭಕ್ಕೆ ಒಂದು ಬಸ್ಸು ಢಕ್ಕೆ ಹೊಡೆದು ಕಂಭವು ಮುರಿದು ಹೋಗಿ ತಂತಿ ವ್ಯವಹಾರಕ್ಕೆ ಬಹಳ ವಿಘ್ನವುಂಟಾಯಿತು.

- ಪುರಿಯ ಶಂಕರಾಚಾರ್ಯರು ವೈಸರಾಯರಿಗೆ ಸನಾತನಿಗಳ ಪರವಾಗಿ ಮನವಿ ಕೊಡಲಿರುವರು.

—ಗ್ವಾಲಿಯರ್‌ನಲ್ಲಿ ಒಬ್ಬ ಧನಿಕ ಬನಿಯಾನಿಗೆ ಹೆಣ್ಣು ಹುಡುಕುತ್ತೇವೆಂದು ಹೇಳಿ ಇಬ್ಬರು ಬ್ರಾಹ್ಮಣರು ವರನನ್ನು ಒಂದು ನದೀ ತಟಾಕಕ್ಕೆ ಕರೆದೊಯ್ದು ಕೊಂದು ದೋಚಿದರು.

—ಆಗ್ರದಲ್ಲಿ ಕೊಂಗ್ರೆಸ್ ಸಭೆಯು ಜರಗಲಿದ್ದಾಗ ೩೨ ಮಂದಿಗಳನ್ನು ಪೋಲೀಸರು ಸೆರೆಹಿಡಿದರು.

—ಫೆಬ್ರುವರಿ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂದೇಶದಿಂದ ವಿದೇಶಕ್ಕೆ ರೂ. ೬೪,೩೩,೨೩೦ ಮೌಲ್ಯದ ಬಂಗಾರವು ಹೋಯಿತು. ಈ ತನಕ ಒಟ್ಟು ೧೧,೨೩,೬೬,೨೧,೫೩ ರೂಪಾಯಿ ಭಂಗಾರವು ಹೋಯಿತು.

—ವೆಚ್ಚವನ್ನುಳಿಸುವುದಕ್ಕಾಗಿ ಪೂನೆಯ ಡೆಕ್ಕನ್ ಕೊಲೇಜನ್ನು ಮುಚ್ಚುವ ಅಂದಾಜು ಇದೆ.

ಅಖಿಲ ಭಾರತ ಸನಾತನ ಧರ್ಮ ಮಹಾ ಸಮ್ಮೇಳನವು ಎಪ್ರಿಲ್ ತಿಂಗಳಲ್ಲಿ ಜರಗುವುದೆಂದೂ ಸಾತೂರಿನ ಮಹಾರಾಜರು ಮುಖಂಡತನವನ್ನು ವಹಿಸುವರೆಂದೂ ವಾರ್ತೆ.

—ಕುಂಭಕೋಣದಲ್ಲಿ ಮಹಾಮಾಘ ಉತ್ಸವವು ಜರಗುವ ವೇಳೆ ಯಾವ ಸಭೆಯೂ ಜರಗಬಾರದಾಗಿ ೧೪೪ರ ಶಸ್ತ್ರ!

ಗಾಂಧಿಜೀಯವರು ತೊರಡಿಸಿದ ಹರಿಜನ ಪತ್ರಿಕೆಯಲ್ಲಿ ವ್ಯಾಕರಣ ದೋಷವಿದ್ದುದನ್ನು ವಿ. ಶ್ರೀನಿವಾಸ ಶಾಸ್ತ್ರಿಗಳು ಹೆಕ್ಕಿ ತೋರಿಸಿದರು.

—ಬಾರ್ಡೋಲಿಯ ಜನರು ಬಹಿಷ್ಕಾರ ಮಾಡಿಕೊಂಡರೆಂದು ಮುಂಬಾಯಿ ಗವರ್ನರರು ಊರು ಸಂಚರಿಸದ ಮೇಲೆ ಹೇಳಿದರು. ಕಾರಣ ಗಾಂಧಿಪಕ್ಷವಿತ್ತು ಬಾರ್ಡೋಲಿ!

—ಸಪ್ರೂಗಳವರು ಅಲ್ಲಹಾಬಾದಿನಲ್ಲಿ ಅಸ್ಪೃಶ್ಯತಾ ನಿವಾರಣೆಗೆ ತೊಡಗಿರುವರು. ಅಲ್ಲಿ ಕೆಲವು ಮುಂದಾಳುಗಳು ಮಾರ್ಗ ಗುಡಿಸಲು ತೊಡಗಿದ್ದು ಹರಿಜನರಿಗೆ ಉತ್ತಮ ವಾಸಸ್ಥಾನಗಳನ್ನೊದಗಿಸಿಕೊಡುತ್ತಿರುವರು.

ಅಸ್ಪೃಶ್ಯತಾ ನಿವಾರಣಾ ವಿಷಯದಲ್ಲಿ ಸರಕಾರವು ಮೇರ ವಿಧಾಂಕ್ಕೆ ಕೊಡಲಾರದೆಂದು ಸರಕಾರದ ಪರವಾಗಿ ಸರ್ ಬಿ ಎಲ್ ಮಿತ್ತರ್‌ರವರು ತಿಳಿಸಿರುತ್ತಾರೆ.

ಕಲ್ಕತ್ತದಲ್ಲಿ ಪೋಲೀಸರು ಪತ್ತೆ ನಡೆಸಿ "ಕೊಂಗ್ರೆಸ್ ಭವನ"ವೆಂಬ ನಾಮಾಂಕಿತವಾದ ಮಂದಿರದಿಂದ ೨೦೦ ನಿಷಿದ್ಧ ಪತ್ರಿಕೆಗಳನ್ನೂ ಒಂದು ಮುದ್ರಣ ಯಂತ್ರವನ್ನೂ ಕಸಿದುಕೊಂಡು ಹೋದರು. ೩೧ನೇ ದಿನ ಜರಗಲಿರುವ ಕಲ್ಕತ್ತ ಕೊಂಗ್ರೆಸಿನ ಸಿದ್ಧತೆಯಾಗದಂತೆ ತಡೆಯೆಂದು ತಿಳಿಯಲಾಗಿದೆ.

—ಸಿಕಂದರಾಬಾದಿನಲ್ಲಿ ಚೆಂಡಾಟವಾಡುತ್ತಿದ್ದಾಗ ಒಬ್ಬ ಸಬ್ ಇನ್ಸ್‌ಪೆಕ್ಟರನು ಪ್ರೇಕ್ಷಕರಲ್ಲೊಬ್ಬನಿಗೆ ಹೊಡೆದುದರಿಂದಾಗಿ ಕೆಲವು ಪೋಲೀಸರಿಗೆ ಜನರಿಂದ ಸರಿಯಾಗಿ ಪೆಟ್ಟು ಬಿತ್ತು.

—ಮದ್ರಾಸಿನ ಪೋಲೀಸ್ ಕಮಿಷನರರ ಆಫೀಸಿನಿಂದ ನಾಗಯ್ಯ ಶೆಟ್ಟಿ ಎಂಬ ಅಪರಾಧಿಯು ಓಡಿಹೋಗಿರುವನಾಗಿ ಬಿಗಿಲು ಸೂಚಿತವಾಗಿದೆ.

# ದಕ್ಷಿಣ ಕನ್ನಡ.

**ಮಂಗಳೂರು.** ಶ್ರವಣ ಬೆಳ್ಗೊಳದ ಶ್ರೀ ಚಾರುಕೀರ್ತಿ ಪೀಠದ ನೇಮಿಸಾಗರ ಪಂಡಿತಾಚಾರ್ಯವರ್ಯರು ಇಲ್ಲಿಯ ಬಸ್ತಿಯ ಪಂಚಕಲ್ಯಾಣ ಮಹೋತ್ಸವಕ್ಕೆ ಚಿತ್ತೈಸಿದ್ದು, ಕಲ್ಲಿಕೋಟೆಯ ದಿ ವೆಜಿಟೆಬಲ್ ಸೋಪ್ ವರ್ಕ್ಸ್ ಇವರ ಟಾಯಿಲೆಟ್ ಸಾಬೂನುಗಳನ್ನು ಪರಿಶೋಧಿಸಿ, ಈ ಕಂಪೆನಿಯವರ ಎಲ್ಲಾ ಸಾಬೂನುಗಳು ಸಂಪೂರ್ಣ ಶಾಸ್ತ್ರೋಕ್ತಕಾರದಿಂದಲೇ ಸಿದ್ಧವಾದುವೆಂದು ಕಂಡುಹಿಡಿದು, ಈ ಸಾಬೂನುಗಳ ಪ್ರಶಸ್ತ್ಯ ಉತ್ಕೃಷ್ಟತೆಗಳಿಗಾಗಿ ಆ ವರ್ಕ್ಸಿನವರಿಗೆ ಸಿನ್ನೆ ದಿನ ಸ್ವಂತ ೮ ಘಂಟೆಗೆ ಬಸ್ತಿಯಲ್ಲಿ ನಡೆದ ಸಭಾರಂಭದ ಸಮಯದಲ್ಲಿ ಒಂದು ಸುವರ್ಣ ಪದಕವನ್ನು ಬಹುಮಾನವಾಗಿ ಕೊಟ್ಟರೆಂದು ತಿಳಿಸಲು ಸಂತೋಷಪಡುತ್ತೇವೆ.

ಚತುರ್ಥ ಅಖಿಲ ಕರ್ನಾಟಕ ಹಿಂದೀ ಪ್ರಚಾರ ಪರಿಷತ್ತಿಗೆ ಠರಾವುಗಳನ್ನು ಕಳುಹಿಸಲು ತಾ ೨೫ನೇ ಕೊನೆಯ ದಿನವಾದುದರಿಂದ ಎಲ್ಲಾ ಹಿಂದೀ ಸಂಘಗಳು ತಮ್ಮ ತಮ್ಮ ಠರಾವುಗಳನ್ನು ಎನ್ ಲಲಿತಾ ಬಾಯಿ ಸುಬ್ಬರಾವ್, ಪ್ರೆಸಿಡೆಂಟ್, ಸ್ವಾಗತ ಕಮಿಟಿ ಶಿವಭಾಗ್, ಕಂಕನಾಡಿ ಪೋಸ್ಟ್, ಮಂಗಳೂರು ಇವರಿಗೆ ರವಾನಿಸಬೇಕು.

**ನ್ಯೂ ಚಿತ್ರ ಶ್ರೀ ಕೃಷ್ಣ ಸಿನೆಮಾ ಟಾಕಿ ಮಂದಿರದಲ್ಲಿ** ತಾ ೧೮ರಿಂದ ಯುನೈಟೆಡ್ ಆರ್ಟಿಸ್ಟ್ಸ್ ಭಯಂಕರ ದೃಶ್ಯಾವಳಿಗಳುಳ್ಳ ಭಾರಿ ಚಿತ್ರವಾದ "ಸ್ಕೈ ಡೆವಿಲ್ಸ್" ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು. ಈ ಚಿತ್ರವನ್ನು ಪೂರೈಸಲು ೧೺ ವರ್ಷ ಕಾಲ ಹಿಡಿಯಿತು. ಲಕ್ಷೋಪಲಕ್ಷ ಡಾಲರು ವೆಚ್ಚವಾಯಿತು. ಪ್ರಪಂಚದ ಪ್ರಖ್ಯಾತ ವಿಮಾನಗಾರರೂ, ಇನ್ನನೇಕ ನಟರೂ ಅಭಿನಯಿಸಿರುವರು. ಸೆನ್ಸರ್ ಟ್ರೇಸಿ, ವಿಲಿಯಮ್ ಬ್ಯೋಡ್, ಎನ್ನಿ ದ್ವಾರಕ್, ಜೋರ್ಜ್ ಕೂಪರ್ ಮೊದಲಾದವರೇ ಪ್ರಮುಖ ನಟರು.

ಕಳೆದ ಬುಧವಾರ ಕೆನರಾ ಹೈಸ್ಕೂಲಿನಲ್ಲಿ ಜಯಕರ್ನಾಟಕದ ಪ್ರತಿನಿಧಿಗಳಾದ ಶ್ರೀ ಪ್ರಹ್ಲಾದರಾಯರು ಆಧುನಿಕ ಹಾಡುಗಳನ್ನು ಹುಡುಗರಿಗೆ ಹೇಳಿ ತೋರಿಸಿ, ಮರುದಿನ ಧಾರವಾಡಕ್ಕೆ ಮರಳಿ ಹೋದರು.

ಸಿಹುಮೂತ್ರರೋಗ, ಸೀತಾಳೆ, ಮೊದಲಾದ ರೋಗ ನಿವಾರಣೆಯಲ್ಲಿಯೂ, ಹೋಮಿಯೋಪತಿ ಟಿಸ್ಸ್ಯು ವೈದ್ಯದಲ್ಲೂ ಬಹು ಕೀರ್ತಿ ಹೊಂದಿ ಪ್ರಸಿದ್ಧರಾದ ಡಾ. ಎಂ. ಆರ್ ಕಾಮತ್‌ರವರು ಇದೇ ತಿಂಗಳ ಅಂತ್ಯದಲ್ಲಿ ಮುಂಬಾಯಿಯಲ್ಲಿ ಕಳೆದ ವರ್ಷದಂತೆ ಮಾಟುಂಗದಲ್ಲಿ ವಾಸಿಸುವರೆಂದು ತಿಳಿದುಬಂದಿದೆ.

**ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೆಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ** ಇದರ ಡೈರೆಕ್ಟರರ ವರದಿ ಮತ್ತು ತಾ ೩೧—೧೨—೧೯೩೨ಕ್ಕೆ ಅಂತ್ಯವಾಗುವ ವರ್ಷದ ಲೆಖ್ಖದ ಪಟ್ಟಿಯು ನಮ್ಮ ಹಸ್ತಗತವಾಗಿದ್ದು, ಪರಿಶೀಲಿಸಿದ್ದಲ್ಲಿ— ೧೯೨೫ರಿಂದ ೭ ವರ್ಷಗಳಲ್ಲಿ ಈ ಸಿಂಡಿಕೇಟು ಹೊಂದಿದ ಅಭಿವೃದ್ಧಿಯು ನಿಜವಾಗಿಯೂ ಅಭಿನಂದನೀಯವಿದೆ ಎಂದು ಕಂಡುಬರುತ್ತದೆ. ಸಂಗ್ರಹಿಸಲ್ಪಟ್ಟ ಮೂಲಧನವು ೪೮ ಳ೦೦೦ರಿಂದ ೭,೦೦,೦೦೦ಕ್ಕೆ ನಿಂತಿತು. ಠೇವಣಾತಿಗಳು ರೂ. ೫,೭೫೪ರಿಂದ ೮,೧೯,೯೩೫ಕ್ಕೆ ನಿಂತಿತು. ವ್ಯವಹಾರದಲ್ಲಿ ಮೊದಲು ೧೭೩೫೫ ರೂಪಾಯಿ ಇದ್ದು ಈಗ ರೂ ೯,೨೫,೯೫೪ ಇದೆಯೆಂದರೆ ಸಿಂಡಿಕೇಟಿನ ವ್ಯಾಪಾರ ಕಾರ್ಯೋದ್ಯಮಗಳೆಷ್ಟಿವೆಯೆಂದು ತಿಳಿಯಲಾಗುತ್ತದೆ. ಸಾರ್ವಜನಿಕರು ಇದನ್ನು ಪ್ರೋತ್ಸಾಹಿಸುವರೆಂದು ಹಾರೈಸುತ್ತೇವೆ.

ಮೀರತ್ ಕೈದಿಗಳ ಡಿಫೆನ್ಸಿಗಾಗಿ ಸುಮಾರು ೧೫೦೦೦ ರೂಪಾಯಿಗಳು ಬೇಕಾಗಿರುವುದರಿಂದ ಆ ಹಣಕ್ಕೆ ಸಾರ್ವಜನಿಕರ ಔದಾರ್ಯವನ್ನು ಕೋರಲಾಗಿದೆ. ದೇಶೀಯರ ರಕ್ಷಣೆಗಾಗಿ ಸ್ವದೇಶಾಭಿಮಾನಿಗಳು ತಮ್ಮ ಸಹಾಯಧನವನ್ನು ಜ್ವಾಯಿಂಟ್ ಹಾನರರಿ ಟ್ರೆಜರರ್ಸ್ ಮೀರತ್ ಪ್ರಿಸ್‌ನರ್ಸ್ ಡಿಫೆನ್ಸ್ ಎಪ್ಪೀಲು ಫಂಡ್ C/o ದಿ ಬೊಂಬೇ ಪ್ರಾವಿನ್ಸಿಯಲ್ ಕೋಆಪರೇಟಿವ್ ಬೆಂಕ್ ಲಿಮಿಟೆಡ್ ಎಪ್ಪೊಲೊ ಸ್ಟ್ರೀಟ್ ಫೋರ್ಟ್ ಬೊಂಬೇ ಇಲ್ಲಿಗೆ ರವಾನಿಸಬಹುದು.

ಇದೇ ತಾ ೯ರಿಂದ ಮೊದಲುಗೊಂಡು ಹಿಂದುಸ್ಥಾನ ಸಿನೆಮ ಕಂಪೆನಿ ಲಿಮಿಟೆಡ್‌ನಲ್ಲಿ ಟಾಕಿ ಚಲಚ್ಚಿತ್ರ ಪ್ರದರ್ಶನವಾರಂಭವಾಗಿ ಪ್ರಥಮ ಚಿತ್ರ ಶಾಮ ಡೇಸ್ ಎಂಬ ಪ್ರದರ್ಶನವಾಯಿತು.

ಬೊಂಬೇ ಸ್ಟೀಮ್ ನೇವಿಗೇಶನ್ ಕಂಪೆನಿ, ಲಿಮಿಟೆಡ್—"ಈ ಕಂಪೆನಿಯ ರಚನೆಯ ವಿಷಯದಲ್ಲಿ, ಜನರ ಮನಸ್ಸಿನಲ್ಲಿ ಒಂದು ರೀತಿಯ ಸಂದೇಹವಿರುವಂತೆ ತೋರಿಬರುವ ಕಾರಣ, ಕಂಪೆನಿಯ ನಿಜವಾದ ಸ್ಥಿತಿಗತಿಗಳನ್ನು ಈ ಮೂಲಕ ಜನರಿಗೆ ವೇದ್ಯಪಡಿಸಲು ಅಪೇಕ್ಷಿಸುವುದಲ್ಲದೆ ಈ ಕುರಿತಾದ ಅವರ ಸಂದೇಹ ನಿವಾರಣೆಗೆ ಇದರಿಂದ ಹೆಚ್ಚಿನ ಸಹಾಯವಾದೀತೆಂದು ನಂಬುತ್ತೇವೆ. ಈ ಕಂಪೆನಿಯ ಮೂಲಧನದಲ್ಲಿ ನೇಕಡಾ ೮೫ರಷ್ಟು ಹಿಂದೀಯರದೇ ಆಗಿದೆ. ಈ ಕಂಪೆನಿಯ ಒಟ್ಟು ೯ ಮಂದಿ ಡೈರೆಕ್ಟರರಲ್ಲಿ ೭ ಮಂದಿ ಡೈರೆಕ್ಟರರು ಪ್ರಸಿದ್ಧರಾದ ಹಿಂದೀಯರೇ. ಹಡಗಿನ ಅಧಿಕಾರಿಗಳೂ, ಹಡಗು ನಡೆಸತಕ್ಕವರೂ ಪ್ರತ್ಯೇಕವಾಗಿ ಹಿಂದೀಯರೇ. ತೀರದ ಅಧಿಕಾರಿಗಳು ಕೂಡ ಹೆಚ್ಚೂ ಕಡಿಮೆ ಹಿಂದೀಯರೇ. ಈ ಸಂದರ್ಭದಲ್ಲಿ ಇದೊಂದು ಸಂಗತಿಯನ್ನು ತಮ್ಮ ಮುಂದಿಡುವುದು ಅಪ್ರಕೃತವಾಗದು. ೧೯೩೦ನೇ ಸಪ್ಟಂಬರದಲ್ಲಿ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮೇಲ್ಕಂಡ ವಿಚಾರದ ಕುರಿತು ತಿಳಿಸಬೇಕೆಂದು ಕಂಪೆನಿಯನ್ನು ಕೇಳಿದ್ದಲ್ಲಿ ಆ ಪ್ರಕಾರ ಅವರಿಗೆ ತಿಳಿಸಲಾಯಿತು. ಆ ಮೇಲೆ ಆ ಕಮಿಟಿಯು ಈ ಕಂಪೆನಿಯನ್ನು ಹಿಂದೀಯರ ಕಂಪೆನಿಯೆಂದೇ ತಿಳಿಯಬೇಕೆಂದೂ, ಎಲ್ಲ ಹಿಂದೀಯರೂ ಹಿಂದಿನಂತೆ ಮುಂದೆಯೂ ಇದಕ್ಕೆ ಉದಾರಾಶ್ರಯವನ್ನು ಕೊಡುತ್ತ ಬರಬೇಕೆಂದೂ ತೀರ್ಮಾನಿಸಿತು. ಈ ತೀರ್ಮಾನದ ಫಲವಾಗಿ ಬೊಂಬಾಯಿಯ ಹಲವು ಸಂಘಗಳು ತಮ್ಮ ಎಲ್ಲ ಮೆಂಬರರೂ ಬಿ ಎಸ್ ಎನ್ ಸ್ಟೀಮರುಗಳಲ್ಲಿಯೇ ಪ್ರಯಾಣಮಾಡಬೇಕೆಂದೂ, ಸರಕುಗಳನ್ನಾದರೂ ಇದೇ ಸ್ಟೀಮರುಗಳ ಮೂಲಕ ಸಾಗಿಸಬೇಕೆಂದೂ ಠರಾವುಗಳನ್ನು ಮಂಜೂರು ಮಾಡಿರುವುವು" ಎಂದು ಕಿಲ್ಲಿಕ್ ನಿಕ್ಸನ್ ಎಂಡ್ ಕೊ (ಏಜಂಟರು) ತಿಳಿಸುತ್ತಾರೆ.

ಫೆಬ್ರುವರಿ ತಾರೀಖು ೧೭ರಿಂದ ಮಾರ್ಚ ೧ನೇ ತಾರೀಖಿನ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶೀ ಪ್ರಚಾರ ಸಭೆಯ ಪ್ರಚಾರಕರು ಈ ಕೆಳಗಿನ ಸ್ಥಳಗಳನ್ನು ಸಂದರ್ಶಿಸಿದರು. ಕಾಪು (ಜಾತ್ರೆ) ಕೈಪುಂಜಾಲು ಮಟ್ಟು ಪೊಲಿಪು, ಉಚ್ಚಿಲ, ಎರ್ಮಾಳ್, ಪಡುಬಿದ್ರಿ ಹೆಜಮಾಡಿ ಫಲ್ಗುಣಿ, ಮೂಲ್ಕಿ, ಹಳೆಯಂಗಡಿ ಪಡುಪಣಂಬೂರು, ಬಾವಂಜೆ (ಜಾತ್ರೆ) ಸುರತ್ಕಲ್, (ಸಂತೆ) ಇದ್ಯ ಇತ್ಯಾದಿ. ಎಂದಿನಂತೆ ಮನೆ ಅಂಗಡಿ, ಶಾಲೆ ಇತ್ಯಾದಿ ಸ್ಥಳಗಳಿಗೆ ಹೋಗಿ ಖಾದಿ ಮತ್ತು ಸ್ವದೇಶೀ ವಸ್ತು ಮಾರಾಟ ಅನುಕೂಲ ಸ್ಥಳಗಳಲ್ಲಿ ವಸ್ತುಪ್ರದರ್ಶನ, ಕರಪತ್ರ ಹಂಚೋಣ ಸಂಭಾಷಣೆ ಮುಂತಾದುವುಗಳಿಂದ ಪ್ರಚಾರಕಾರ್ಯ ಮಾಡಲಾಗಿದೆ. ಅನೇಕ ಸ್ಥಳೀಯ ಮಹನೀಯರು ಪ್ರಚಾರಕರಿಗೆ ತುಂಬಾ ಪ್ರೋತ್ಸಾಹ ಕೊಟ್ಟಿರಲ್ಲದೆ ನಮ್ಮೊಡನೆ ಹಳ್ಳಿಪೇಟೆಗಳಲ್ಲಿ ಮನೆ ಮನೆ ಖಾದಿ ಮತ್ತು ಸ್ವದೇಶೀ ವಸ್ತು ಮಾರಾಟಕ್ಕೆ ಬಂದು, ಆಹಾರ ವಸತಿ ಇತ್ಯಾದಿಗಳನ್ನು ಒದಗಿಸಿಕೊಟ್ಟುದಕ್ಕಾಗಿ ಪ್ರಚಾರ ಸಭೆ ಆಭಾರಿಯಾಗಿದೆ. ಒಟ್ಟು ರೂಪಾಯಿ ೫೦೦—೬—೩ರ ಖಾದಿ ಮತ್ತು ಇತರ ಸ್ವದೇಶೀ ವಸ್ತುಗಳು ಮಾರಲ್ಪಟ್ಟುವು. ಮಾರ್ಚ ತಾ. ೮ರಿಂದ ಪ್ರಚಾರಕರು ಪೆರ್ಡೂರು ಜಾತ್ರೆಯ ಸಂಬಂಧ ಪೆರ್ಡೂರು ಮತ್ತು ಸರಹದ್ದಿನ ಹಳ್ಳಿಪೇಟೆಗಳನ್ನೂ ಸಂದರ್ಶಿಸುವರು. ಸ್ಥಳೀಯ ಮಹನೀಯರು ಸಹಕರಿಸಬೇಕಾಗಿ ವಿನಂತಿ ಎಂದು ದಿ ಕೆ ಭಂಡಾರಿ (ಕಾರ್ಯದರ್ಶಿ) ಇವರು ತಿಳಿಸುತ್ತಾರೆ.

ಕಳೆದ ಶುಕ್ರವಾರ ಇಲ್ಲಿಯ ಹಿಂದೂಸ್ಥಾನ ಸಿನೆಮ ಮಂದಿರದಲ್ಲಿ ಸರ್ ಪಿ. ಸಿ. ರೇಯವರು ೩೦ ವರ್ಷಗಳ ಮೊದಲು ಸ್ಥಾಪಿಸಿ ಈಗ ಅನೇಕ ಅಮೂಲ್ಯ ಔಷಧಿ, ವೈದ್ಯಕೀಯ ಸಾಮಾಗ್ರಿಗಳನ್ನು ತಯಾರಿಸಿ ಪೇಟೆಯಲ್ಲೆಲ್ಲಾ ಪ್ರಸಿದ್ಧವಾದ ೨೦೦೦ ಕೆಲಸಗಾರರುಳ್ಳ ಬಂಗಾಳ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಇದರ ಹಲವು ಬಗೆ ಕಾರ್ಯಕಲಾಪಗಳ ಚಲಚ್ಚಿತ್ರವನ್ನು ೧ ಘಂಟೆಯ ವರೆಗೆ ಪ್ರದರ್ಶಿಸಲಾಯಿತು.

**ಕಾರ್ಕಳ** — ಈ ತಾಲೂಕಿನ ಬೋರ್ಡು ಮತ್ತು ಖಾಸಗಿ ಎಲ್ಲಾ ಪ್ರಾಥಮಿಕ ಶಾಲೆಗಳ ಟ್ರೈಂಡ್ ಮತ್ತು ಅನ್‌ಟ್ರೈನ್ಡ್ ಉಪಾಧ್ಯಾಯರ ಒಂದು ಸಭೆಯು ಬೋರ್ಡ್ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಿಂಗಳ ತಾ. ೧೮ರಲ್ಲಿ ಸಾಯಂಕಾಲ ಕಾರ್ಕಳ ರೇಂಜ್ ಡೆಪ್ಯುಟಿ ಇನ್ಸಪೆಕ್ಟರರವರ ಅಧ್ಯಕ್ಷತೆಯಲ್ಲಿ ಜರಗುವುದು. ಸಂಬಂಧಪಟ್ಟ ಎಲ್ಲಾ ಉಪಾಧ್ಯಾಯರು ತಪ್ಪದೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ.

**ಪಡುಬಿದ್ರೆ** — ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ಆಗುವ ಉತ್ಸವ ಸಂಬಂಧವಾದ 'ಧ್ವಜಾರೋಹಣ'ವು ಇದೇ ಅಂಗೀರಸ ಸಂವತ್ಸರದ ಫಾಲ್ಗುಣ ಬ ೧ ಮೂಲ ನಕ್ಷತ್ರವುಳ್ಳ (ತಾ. ೧೩—೩—೩೩)ನೇ ಸೋಮವಾರ ದಿವಸ ಆಯನ ಉತ್ಸವವೂ ಮತ್ತು ತೆಂಕುದಿಟ್ಟು, ಬಡಗುದಿಟ್ಟು 'ಯಕ್ಷಗಾನ ತಾಳಮದ್ದಳೆ'ಕೂಡಾ ೧೪—೩—೩೩ನೇ ಮಂಗಳವಾರ ದಿವಸ ರಾತ್ರಿಗೂ, ರಥಾರೋಹಣ ಉತ್ಸವವು ತಾ ೨೦—೩—೩೩ನೇ ಸೋಮವಾರ ದಿವಸ ರಾತ್ರಿಗೂ ಬಂಗಾಲಿ ತೆಗೆಯುವುದು ಮತ್ತು 'ಚೆಂಡಾಟ' ಉತ್ಸವವು ತಾ ೨೧—೩—೩೩ನೇ ಮಂಗಳವಾರ ದಿವಸವೂ ಜರಗುವುದು.

**ಸುರತಕಲ್** — ಇಲ್ಲಿಗೆ ಇದೇ ತಾ ೧೦ರಿಂದ ಕರ್ನಾಟಕದ ಹಾಗೂ ಪಿಫಾರ್ಮ ಪತ್ರ ಹೊಂದಿದ ಪಿ ತ ಸೈಫ್ ಮೋರಿ ಪಿರೇರ ಎಂಬವರು ನೇಮಕವಾದುದು ಗ್ರಾಮಸ್ಥರ ಭಾಗ್ಯ! ಒಗೆಯೇ ಬೋರ್ಡ್ ಪ್ರೆಸಿಡೆಂಟರು ಅವರ್ನು ಶೀಘ್ರದಲ್ಲೇ ಇಲ್ಲಿಯ ಬೋರ್ಡ್ ಹುಡುಗರ ಶಾಲೆಗೋರ್ವ ಯೋಗ್ಯ ಹಿಂದೂ ಅಧ್ಯಾಪಕನನ್ನು ನಿಯಮಿಸಿಯೂ ಇಲ್ಲೊಂದು ರೂರಲ್ ಡಿಸ್ಪೆನ್ಸರಿ ಒದಗಿಸಿಯೂ ಗ್ರಾಮೋಪಕಾರವನ್ನೆಸಗಬೇಕೆಂಬುದೇ ಗ್ರಾಮಸ್ಥರ ಪ್ರಾರ್ಥನೆ.

**ಬಂಟವಾಳ** — ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಯಥಾವಿಧಿಯಾಗಿ ನಡೆಯಿತು. ಸರಕಾರಿನ ಜನಸ್ತೋಮವು ಬಹಳ ಕಡಿಮೆ. ಬೇಸಾಯ ಇಲಾಖೆಯವರು ಗೊಬ್ಬರ, ಧಾನ್ಯಗಳ ಬೀಜ ಮುಂತಾದುವುಗಳನ್ನು ಎಕ್ಸಿಬಿಟ್ ಮಾಡಲು ತಂದಿದ್ದರು.

ಬಂಟವಾಳ ಟೆಂಪಲ್ ಹೈಸ್ಕೂಲಿನಲ್ಲಿ II ಫೋರಮ್ ವರೆಗೆ ಹುಡುಗಿಯರನ್ನು ತೆಗೆದ ಕಾರಣ ಪ್ರವಿಲ್ ಮಧ್ಯರಿಂದ ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡದೆ ಇದ್ದರೆ ಹುಡುಗಿಯರ ವಿದ್ಯಾಭ್ಯಾಸವು ಹಾಳಾಗುವುದು. ಆದುದರಿಂದ ಮಂಗಳೂರು ತಾಲೂಕು ಬೋರ್ಡಿನವರು ಬರುವ ಜೂನ್ ತಿಂಗಳಲ್ಲಿಯೇ ಆರನೇ ದರ್ಜೆಯನ್ನು ತೆರೆಯುವ ಹಾಗೆ ಸೆಂಕ್ಷನ್ ಮಾಡುವುದು ಉಚಿತವು.

---

**ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ**

Claim No 1248/1925-26 S E A 10/1933.

ಟ್ರೆಡಿ ಕೋಒಪರೇಟಿವ್ ಕ್ರೆಡಿಟ್ ಸೊಸೈಟಿ, ಸೆಕ್ರೆಟರಿ— ಅರ್ಜಿದಾರ

ದೇವಪುತ್ರ ಸೋನ್ಸ ಗಡಕ—ಎದುರು.

ಸದರೀ ಅಮಲ್‌ಜಾರಿ ಅರ್ಜಿಯ ತಾ 31-3-33ಕ್ಕೆ ಇಕ್ಕಿರ ವಿದ್ದಾಗಿಯೂ, ಆ ದಿನ ಏನಾದರೂ ಆಕ್ಷೇಪ ಇದ್ದಲ್ಲಿ ಆ ತಾರೀಕಿಗೆ ಕೋರ್ಟ ಮುಂದೆ ಹಾಜರಾಗುವಾಗಿ ಕೊಳ್ಳತಕ್ಕದೆಂತಲೂ ಶಿರ್ವ ಗ್ರಾಮದ ದಿವಂಗತ ಸೋನ್ಸರ ಮಗ ಸದ್ರಿ 1ನೇ ಎದ್ರಿ ದೇವಪುತ್ರ ಸೋನ್ಸರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

ಉಡುಪಿ, ೮—೩—೩೩ } P Panduranga Nayak, Counsel for Petitioner

---


## ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ)

**ಅಖಿಲ ಕರ್ನಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ,**
**ಕರ್ನಾಟಕದ ಗೌರವಕ್ಕೂ ಕರ್ನಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ**

ನಮ್ಮಲ್ಲಿ ಬ್ರಿಟಿಷ್ ಫಾರ್ಮಕೋಪಿಯಾ ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೊಡೆಕ್ಸ್ ವ, ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧ ಔಷಧಗಳೂ, ತರತರದ ಟಾಯ್ಲೆಟ್ ದ್ರವ್ಯಗಳೂ, ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯಾರಿಸಲ್ಪಡುವುವು.

ಶಾಸ್ತ್ರೋಕ್ತ ದ್ರವ್ಯಗಳು ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು. ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಾಮುಖ್ಯ ಔಷಧಗಳು:

ಚ್ಯವನಪ್ರಾಶ ಲೇಹ ಅನೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ. ೧ ಪೌಂಡು ಬಾಟ್ಲಿ ರೂ ೩ ೧೦ ಔನ್ಸು ಬಾಟ್ಲಿ ರೂ ೧. ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ಮ ನೆಮದುಳಿಗೆ ಶಾಂತತೆಯನ್ನೀಯುವ ಔಷಧ ೧ ಪೌಂಡು ಬಾಟ್ಲಿಗೆ ರೂ 1—8

ಅಶ್ವಗಂಧಾರಿಷ್ಟ, ಅತ್ಯುತ್ತಮವಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ 3, ೮ ಔನ್ಸು ಬಾಟ್ಲಿಗೆ ರೂ 1—10— ಪ್ರಸೂತಿ ಸಂಜೀವನ ಬಾಣಂತಿಯರಿಗೆ ೧೫ ದಿನಗಳ ತನಕ ಕೊಡುವ ಔಷಧ ೧೦ ಔನ್ಸು ಬಾಟ್ಲಿಗೆ ರೂ 1 8— ) ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3—6—0, ೮ ಔನ್ಸು ಬಾಟ್ಲಿಗೆ ರೂ 1—12—0

ಬ್ರಾಹ್ಮಿ ತೈಲ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಬ್ರೈನ್ ಟಾನಿಕ್ಕು ೪ ಔನ್ಸು ಬಾಟ್ಲಿಗೆ ಆಣೆ 14 ಹಿಮಸಾಗರ ತೈಲ ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ ೪ ಔನ್ಸು ಬಾಟ್ಲಿಗೆ ರೂ —8— ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ ೪ ಔನ್ಸು ಬಾಟ್ಲಿಗೆ ರೂ —6—) ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಮುಂತಾದ ವಾತ ಕಾಯಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೭ನೇಯ ಆವರ್ತನೆ ೧ ಔನ್ಸಿಗೆ ರೂ 1 ೧೪ನೇಯ ಆವರ್ತನೆ ೧ ಔನ್ಸಿಗೆ ರೂ — 3 ೨೧ನೇ ಆವರ್ತನೆ ೧ ಔನ್ಸಿಗೆ ರೂ 2— ೪೧ನೇಯ ಆವರ್ತನೆ ೧ ಔನ್ಸಿಗೆ ರೂ 3 ೫೧ನೇ ಆವರ್ತನೆ ರೂ 4— ೧೦೧ನೇ ಆವರ್ತನೆ ರೂ ೮ ಧನ್ವಂತರಿ ತೈಲ ರಕ್ತವಾತ, ಆಮವಾತ ಸರ್ವಾಂಗವಾತವ ಎಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ಮ ಮೈಗೆ ಹಚ್ಚುವ ದಿವ್ಯೌಷಧ ೭ನೇಯ ಆವರ್ತನೆ ೧ ಔನ್ಸಿಗೆ ರೂ , ೧೪ನೇ ಆವರ್ತನೆ ೧ ಔನ್ಸಿಗೆ ರೂ — 2 ೨೧ ನೇ ಆವರ್ತನೆ ೧ ಔನ್ಸಿಗೆ ರೂ 2 8—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಆಸವ, ಅರಿಷ್ಟಗಳೂ ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ ಸುಕುಮಾರಾಮೃತ ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ನಾಟಕ ಸ್ನೋ ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅರೋರಾ ಕ್ರೀಮ್, ಬ್ಯೂಟಿಕ್ರೀಮ್ ಕ್ರಿಮೊರಾ ಅಮೋನಿಸ್ (Limes & Glycerine) ವಗೈರೆ ಟಾಯ್ಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು ಹಚ್ಚೆ, ರಕ್ತನೀಲ, ವರ್ಣಗಳ ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಸುವ ಸಾಬೂನುಗಳೂ ತಯಾರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳಿರಿ.

***Managing Director:* — Venkatraya Annappa Baliga**

# ಜಪಾನಿನ ಭಯಂಕರ ಭೂಕಂಪ!

## ೩೫೦೦ ಜನರ ಸ್ಥಿತಿ! ಹಳ್ಳಿಪಳ್ಳಿಗಳ ನಾಶ!

## 1535 ಜನರ ಮರಣ! 948 ಮಂದಿ ಕಾಣೆ!

ಕಳೆದ ಶುಕ್ರವಾರ ದಿನ ಜಪಾನಿನಲ್ಲಿ ಭಯಂಕರ ಭೂಕಂಪ ವುಂಟಾಯಿತು! ಸರಕಾರಕ್ಕೆ ತಿಳಿದು ಬಂದಂತೆ, ೧೫೩೫ ಜನರು ಮೃತರಾದರು ೯೪೮ ಜನರು ಕಾಣೆಯಾಗಿರುವರು! ೩೫೦೦ ಮಂದಿ ಜಖಂಗೊಂಡರು! ೩೫೦೦ ಜನರಾದರೂ ಮೃತ ಹೊಂದ ಬಹುದೆಂದು ಅಂದಾಜಾಗಿದೆ! ಕೆಲವು ಕಡೆಗಳಲ್ಲಿ ಗ್ರಾಮ ಗ್ರಾಮಗಳು ಲಯವಾಗಿವೆ! ಹೆಂಡತಿ ಮಕ್ಕಳು ಮುದಿಗರನ್ನು ಮನೆಯಲ್ಲಿ ಬಿಟ್ಟು ಚೀನೀಯರೊಡನೆ ಹೋರಾಡ ಹೊರಟ ಬಡ ವರ್ಗದ ಜಪಾನರ ಮನೆಮಾರುಗಳೂ ಕುಟುಂಬಗಳೂ ನಾಶವಾದುವು! ಭೂಕಂಪವಾದೊಡನೆ ಭೀಷಣ ಸುಂಟರಗಾಳಿಯು ಹೊಡೆಯಿತು! ಅದರೊಡನೆ ನೆರೆಯೂ ಒಂದು ಸಾವಿರಾರು ಮನೆ ಮಾರುಗಳನ್ನು ಕಟ್ಟಿ ನುಂಗಿತು! ಮನೆ ಬಿಡಾರಗಳಿಲ್ಲದ ಸಾವಿರಾರು ಜನರು ಚಳಿ ಬಿಸಿಲುಗಳಲ್ಲಿ ಮುದುಡಿ ಒಣಗುತ್ತಿರುವರು! ಐವೇಕ್ ಪ್ರಿಫೆಕ್ಚರ್ ಎಂಬಲ್ಲಿ ೧೩೮೦ ಜನರು ಮೃತರಾದರು! ೬೯೬ ಜನರ ಪತ್ತೆಯಿಲ್ಲ! ೫೮೭ ಜನರು ಜಖಂಗೊಂಡರು ಎರಡು ದೊಡ್ಡ ದೊಡ್ಡ ಗ್ರಾಮಗಳಲ್ಲಿನ ೫೦೦೦ ಮನೆಗಳು ಸಂಪೂರ್ಣ ಲಯವಾಗಿವೆ ೩೦೦೦ ಮನೆಗಳು ನೀರಿನಿಂದಾವೃತವಾಗಿವೆ ತಂತಿ ಟೆಲಿಫೋನು ಮೊದಲಾದ ಯಾನ ವ್ಯವಹಾರಾನುಕೂಲತೆಯೂ ಇಲ್ಲದಂತಾಗಿದೆ ಸಾವಿರಾರು ತಂತಿ ಕಂಭಗಳು ಕೆಡವಿ ಬಿದ್ದಿವೆ ಸಮುದ್ರ ಕಿನಾರೆ ಮತ್ತು ನದಿ ತೀರಗಳಲ್ಲಿರುವ ಹಡಗು ದೋಣಿ ನಾವೆಗಳು ಪ್ರಚಂಡ ತರಂಗಗಳ ಉಲ್ಲಂಘನೆಯಿಂದಾಗಿ ಹರಿದು ಮುರಿದು ಬರಿದು ತುಮುರು ತುಮುರಾಗಿವೆ

ಸಮುದ್ರ ಮಧ್ಯೆಯಿರುವ ಸ್ಟೀಮರುಗಳಿಗೆ ಅಪಾಯವು ಸಂಭವಿಸಿದುದರಿಂದ ಯುದ್ಧನಾವೆಗಳನ್ನು ಕೂಡಲೇ ಅಟ್ಟಿದರು ಭೀಕರ ಗಾಳಿಯಿಂದಲೂ ಸಮುದ್ರದ ಅವರ್ಣನೀಯ ಆಂದೋಲನದಿಂದಲೂ ನಾವೆಗಳು ಮುಂದೆ ನಡೆಯದಾದುವು ಕಷ್ಟಗಳನ್ನು ದ್ವಿಗುಣಿತಗೊಳಿಸಲಿಕ್ಕೋ ಎಂಬಂತೆ, ಹಿಮವೂ ಬಿರುಗಾಳಿಯೂ ಇಡೀ ಪ್ರಾಂತ್ಯವನ್ನು ಹರಡಿಕೊಂಡಿವೆ ಸಂಪೂರ್ಣ ವಾರ್ತೆ ಇನ್ನೂ ಬಂದಿರುವುದಿಲ್ಲ

### ಚೀನಾ ಜಪಾನ್ ಯುದ್ಧ

ಜಪಾನರ ಸೈನ್ಯಗಳು ಚೆಹೋಲ್ ನಗರದ ಮೇಲೆ ಧಾಳಿ ನಡೆಸುತ್ತಿವೆ ಚೆಹೋಲ್ ಜಪಾನರ ಕೈವಶವಾಯಿತೆಂದು ವಾರ್ತೆಯೆದ್ದಿದೆ ಚೀನದ ೮೦,೦೦೦ ಸೈನ್ಯವು ಚಹೆಫೆಂಗಿ ಚಿನ್‌ಪಿಂಗ್‌ನ ವರೆಗೆ ರಕ್ಷಾವ್ಯೂಹವನ್ನು ಕಟ್ಟಿನಿಂತಿದೆ ಚೆಹೋಲ್‌ನಲ್ಲಿ ೪೮ ಘಂಟೆಗಳ ವರೆಗೆ ಯುದ್ಧವಾಯಿತು ಜಪಾನರು ಫಿರಂಗಿಗಳನ್ನು ಚೀನಿಯರ ಮೇಲೆ ಹಾರಿಸಿ ಅಸಂಖ್ಯಾತ ಸೈನಿಕರನ್ನು ಕೆಡವಿದರಂತೆ ಜಪಾನರ ವಿಮಾನ ಕಾದಾಟವು ವಿಷಮವಾಗಿದೆ ದ್ವಿಪಕ್ಷಗಳವರೂ ಯುದ್ಧ ಸಾಮಗ್ರಿಗಳನ್ನು ಪರರಾಷ್ಟ್ರಗಳಿಂದ ಯಾಚಿಸುತ್ತಿರುವರು ಬ್ರಿಟನು ತಾನು ಯಾರಿಗೂ ಶಸ್ತ್ರಗಳನ್ನು ಮಾರುವುದಿಲ್ಲವೆಂದು ಒಮ್ಮೆ ಹೇಳಿದರೂ, ಲಿವರ್‌ಪೂಲಿನಿಂದ ಬಂದ ವಾರ್ತೆಯಿಂದಾಗಿ—ಅದು ಹೆಂಜಡ, ಇಂಟ್ರೆಟ್, ಕೆನೇಡಿಯನ್ ಶಾಂಗರ್ಸ್ ಮೇಯರ್, ವಯತೋಮತ ಎಂಬ ಕೆಲವು ಯುದ್ಧನಾವೆಗಳನ್ನು ಜಪಾನರಿಗೆ ಮಾರಿದೆಯಾಗಿ ಸುದ್ದಿ ಹರಡಿದೆ ಈ ವರ್ತನೆಯಿಂದಾಗಿ ಚೀನವು ಬ್ರಿಟನನ್ನು ವಕ್ರ ದೃಷ್ಟಿಯಿಂದ ನೋಡಲಾರಂಭಿಸಿದೆ ಚೆಹಿಂಗ್ ಪ್ರಾಂತ್ಯವು ಬಿದ್ದು ಜಪಾನರ ವಶವಾಯಿತು ಚೀನಿಯ ಸೈನಿಕರು ಆ ಪ್ರಾಂತ್ಯದಿಂದ ಓಡಿಹೋದರು ಮಂಚುಕೋ ಪ್ರಾಂತ್ಯವೂ ಜಪಾನರ ವಶವಾಯಿತು ರಾಜ್ಯ ಸ್ಥಾಪನೆಯ ಮಹೋತ್ಸವವನ್ನೂ ಜಪಾನರು ಮಾಡಿಬಿಟ್ಟರು ಚೆಫಿಯಾಂಗ ನಗರವು ಜಪಾನಿನ ಹಸ್ತಗತವಾಗಿಲ್ಲವೆಂದು ಚೀನಾ ಸರಕಾರದ ಪ್ರಕಟಣೆಯಾಗಿದೆ ವಾಯುವ್ಯದ ಕಡೆಯಿಂದ ಜಪಾನ್ ಸೈನ್ಯಗಳು ಲಿಂಗ್‌ಯುವಾನ್ ಕಡೆ ದಾಳಿ ನಡೆಸುತ್ತಿವೆ ಸಂಸ್ಥಾನದ ದೊಡ್ಡ ಗೋಡೆಯ ವರೆಗೂ ರಣರಂಗವಾಗಿ ಬಿಟ್ಟಿದೆ ಜಪಾನರ ವಿಮಾನಗಳು ಚೀನಿಯರ ಮೇಲೆ ಬೊಂಬೆಸೆದು ಅಸಹನೀಯ ತಾಪ, ಕಷ್ಟನಷ್ಟಗಳನ್ನುಂಟು ಮಾಡಿದೆ ಚೀನಿಯರ ಕೈಯಿಂದ ಚೆಹೋಲ್ ಪಟ್ಟಣವು ತಪ್ಪಿಹೋಗಲು ಒಂದು ದುರದೃಷ್ಟವು ಕಾರಣವಾಯಿತು ಚೀನಿಯರ ಜನರಲ್ ತಂಗ್ಲಿನ್ ಎಂಬವನು, ತಾನು ಜಪಾನರಿಗೆ ಎದೆಗೊಟ್ಟು ನಿಂತು ಚೆಹೋಲ್ ನಗರವನ್ನು ರಕ್ಷಿಸುವೆನೆಂದನು. ಇವನು ನೂರುಗಟ್ಟಲೆ ಲೋರಿಗಳನ್ನು ಚೆಹೋಲ್ ನಗರದಿಂದ ತರಿಸಿ ಸೈನಿಕರ ಮತ್ತು ಜನರ ಸೊತ್ತುಗಳನ್ನು ಅವುಗಳಲ್ಲಿ ಹೇರಿ, ಕುಪೆಕೂ ಕಣಿವೆಯ ಮಾರ್ಗವಾಗಿ ಇನ್ನೊಂದು ಪ್ರದೇಶಕ್ಕೆ ಸಾಗಿಸಬೇಕೆಂದಿದ್ದನು. ಅದೇ ಪ್ರಕಾರವಾಗಿ ಈ ಲೋರಿಗಳೆಲ್ಲ ಆ ಕಣಿವೆಯ ಮಾರ್ಗವಾಗಿ ಬರುವಾಗ ಚಾಂಗೂಸೂ ಎಂಬ ಜಪಾನ್ ಸೈನ್ಯಾಧಿಕಾರಿಯು ಆ ಲೋರಿಗಳನ್ನು ನಿಲ್ಲಿಸಿ, ಡ್ರೈವರುಗಳನ್ನು ಓಡಿಸಿ, ಸೈನ್ಯವನ್ನು ಹತ ಮಾಡಿ, ಎಲ್ಲಾ ಸಾಮಾನುಗಳನ್ನು ಕೈವಶ ಪಡಿಸಿಕೊಂಡನು. ಈ ಸುದ್ದಿಯು ಚೀನಾ ಯುದ್ಧಗೃಹಕ್ಕೆ ಮುಟ್ಟಿ ಇಡೀ ರಾಷ್ಟ್ರವು ಉದ್ರೇಕಗೊಂಡು, ತಂಗ್ಲಿನನು ಏನೋ ಪಿತೂರಿ ನಡೆಸಿರಬೇಕೆಂದೂ ಅವನನ್ನು ಒಡನೆ ಸೆರೆಹಿಡಿಯಬೇಕೆಂದೂ ಆಗ್ರಹ ಪಟ್ಟಿತು ಸರಕಾರವು ತಂಗ್ಲಿನನ್ನು ಹುಡುಕುತ್ತಿದೆ ಅವನು ತಲೆಮರೆಸಿಕೊಂಡಿರುವನು. ಕೈಗೆ ದೊರೆತರೆ ಅವನನ್ನು ಒಡನೆ ಫಾಶಿಗೇರಿಸುವರೆಂದು ತಿಳಿಯಲಾಗಿದೆ ಮಾರ್ಷಲ್ ಚಾಂಗ್‌ಸೂನು ಚೆಹೋಲ್ ನಗರದಿಂದ ಚೀನಿಯರನ್ನು ಓಡಿಸಿಯೇ ಬಿಡುವೆನೆಂದು ಹಟ ತೊಟ್ಟಿರುವನು.

### ಜರ್ಮನಿಯ ದುರ್ದಶೆ

ಜರ್ಮನಿಯಲ್ಲಿ ನಾಜಿ, ಸೋಶಿಯಲಿಸ್ಟ್ಸ್ ಕಮ್ಯೂನಿಸ್ಟ್ಸ್, ನೇಶನಲಿಸ್ಟ್ಸ್ ಎಂಬ ಅನೇಕ ಪಂಗಡಗಳಿವೆಯಷ್ಟೆ! ನಾಜಿ ಪಕ್ಷದವರು ಹರ್ ಹಿಟ್ಲರ್ ಎಂಬ ಮೇಲಧಿಕಾರಿಯ ನಾಯಕತ್ವದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಸದೆಬಡೆಯುತ್ತಿದ್ದಾರೆ ಎಲ್ಲೆಲ್ಲಿಯೂ ಪ್ರಾಣಭಯ! ಬರ್ಲಿನ್ ನಗರದ ಜರ್ಮನ್ ಶಾಸನ ಸಭೆಗೆ ಮೊನ್ನೆ ಕಲವರು ಬೆಂಕಿಕೊಟ್ಟು ಅದನ್ನು ಸುಟ್ಟು ಲಕ್ಷಾಂತರ ರೂಪಾಯಿ ನಷ್ಟಪಡಿಸಿದರಷ್ಟೆ! ಒಬ್ಬ ಡಚ್ ಪುಂಡನು ಮುಂದಿರಕ್ಕೆ ತಾನು ಬೆಂಕಿಕೊಟ್ಟುದು ಹೌದೆಂದು ಒಪ್ಪಿಕೊಂಡಿರುವನು ಇಡೀ ಬರ್ಲಿನ್ ನಗರದಲ್ಲಿ ಸಂಗ್ರಾಮ ಶಾಸನ (Martial Law) ಪ್ರಚಾರವಾಗಿದೆ ಪರಕೀಯ ಸರಕಾರಗಳ ಪರವಾಗಿ ಯಾರಾದರೂ ಗೂಢಚಾರರಿದ್ದರೆ ಅಥವಾ ಜರ್ಮನರಲ್ಲಿ ಯಾರೇ ಆಗಲಿ ಅಲ್ಲಿಯ ಸರಕಾರದ ಒಳಗುಟ್ಟನ್ನು ಹೊರಗೆಡಹಿದರೆ ಅಂತಹವರನ್ನು ಸೆರೆಹಿಡಿದು ಮರಣ ದಂಡನೆಯನ್ನು ವಿಧಿಸಬಹುದೆಂದು ಒಂದು ಕಠಿಣ ರಾಜಾಜ್ಞೆ ಹೊರಟಿರುತ್ತದೆ ಶುಕ್ರವಾರ ದಿನ ಬರ್ಲಿನನಲ್ಲಿ ೨೮೦ ಮಂದಿ ಕ್ರಾಂತಿಕಾರರ ದಸ್ತಗಿರಿಯಾಗಿರುತ್ತದೆ ಕೆಲವು ರಷ್ಯನರೂ ಒಬ್ಬ ಹಿಂದೀಯನೂ ಕೈದು ಮಾಡಲ್ಪಟ್ಟವರಲ್ಲಿರುವರು ತಾ ೫ರಲ್ಲಿ ಜರ್ಮನಿಯಲ್ಲಿ ನಡೆದ ಚುನಾವಣೆಯಲ್ಲಿ ನಾಜಿಗಳು ೬೪೭ ಸ್ಥಾನಗಳಲ್ಲಿ ೨೮೮ ಸ್ಥಾನಗಳನ್ನು ಹೊಂದಿ ಜಯಶೀಲರಾದರು ಅಲ್ಲಿ ಇನ್ನು ನಾಜಿ ಪಕ್ಷವೇ ಪ್ರಬಲವಾಗಿ ಎಲ್ಲಾ ಪಂಗಡಗಳ ಮೂಲೋತ್ಪಾಟನವಾಗುವುದು

### ಪುನಃ ಪುನಃ ಅದೇ ಪಲ್ಲವಿ!

ಮಹಾತ್ಮಾ ಗಾಂಧಿಯವರ ಬಿಡುಗಡೆಗಾಗಿಯೂ, ಅವರಿಗೆ ನಿರ್ಬಂಧರಹಿತ ಪತ್ರವ್ಯವಹಾರಗಳನ್ನು ನಡೆಸುವ ಸ್ವಾತಂತ್ರ್ಯವನ್ನು ಕೊಡಬೇಕೆಂದೂ ಅರಿಕೆ ಮಾಡಿ ಲಂಡನಿನ ಕೊನ್ಸಿಲಿಯೇಶನ್ ಗ್ರೂಪ್ ಸಂಸ್ಥೆಯವರು ಒಂದು ಮನವಿಯನ್ನು ಸರ್ ಸಾಮುವೇಲ್ ಹೋರರಿಗಿತ್ತರಷ್ಟೆ, ಹೋರರು ಈಗಲಾದರೂ ಔದಾರ್ಯಚಿತ್ತರಾಗಿರಬಹುದೆಂದು ನೆನೆಸಲಾಗಿತ್ತು ಆದರೆ ಅವರ ಮನವಿಗೆ ಹೋರರಿತ್ತ ಉತ್ತರವಿತ್ತರೆಂತು? "ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಫೆಬ್ರವರಿ ತಾ ೧೩ನೇ ದಿನ ಸರಕಾರವು ಕೊಮನ್ಸ್ ಸಭೆಗೆ ಹೇಳಿದ ನಿರ್ಧಾರಪೂರ್ವಕ ಉತ್ತರವೇ ಈಗಲೂ ನಿಮಗೆ ಕೊಡಲ್ಪಡಬೇಕಾಗಿದೆ ಗಾಂಧೀ-ರಾಜಕೀಯ ಕೈದಿಗಳ ಬಿಡುಗಡೆಯಾದರೆ ಅಂತಹ ಬಿಡುಗಡೆಯಿಂದಾಗಿ ಅವರು ಪುನರಪಿ ಶಾಸನೋಲ್ಲಂಘನ ಚಳವಳವನ್ನು ಪ್ರಾರಂಭಿಸುವುದಿಲ್ಲವೆಂಬ ಬಗ್ಗೆ ಸಕಾರಣಯುಕ್ತವಾದ, ನಂಬಲರ್ಹವಾದ ವಾಗ್ದಾನವು ಸಿಗದ ಹೊರತು ಅವರನ್ನು ಬಿಡುಗಡೆ ಮಾಡುವುದು ಅಪಾಯಕರವಾಗಿದೆ ಅಂತಹ ಕಂಟಕಪ್ರಾಯ ಉದ್ಯಮವನ್ನು ಸರಕಾರವು ೧೯೩೧ರಲ್ಲಿ ಕೈಕೊಂಡಿತು. ಅಂದಿನ ಅನುಭವವು ಇಂದು ನಮ್ಮನ್ನು ಈ ಅಪಾಯ ಕೆಲಸಕ್ಕೆ ಕೈಹಾಕಲು ಬಿಡುವುದಿಲ್ಲ. ಪತ್ರವ್ಯವಹಾರದಲ್ಲಿಯೂ ಭೇಟಿಗಳಲ್ಲಿಯೂ ಗಾಂಧಿಯವರಿಗೆ ವಿಶೇಷ ಹಕ್ಕುಗಳನ್ನು ಕೊಡಬೇಕೆಂಬ ಕುರಿತು ಸರಕಾರವು ಅಭಿಪ್ರಾಯಗೊಳ್ಳುವುದೇನೆಂದರೆ—ಗಾಂಧಿಯವರು ಅಸ್ಪೃಶ್ಯತಾ ನಿವಾರಣೆಯ ಕುರಿತು ಬೇಕಾದವರ ಭೇಟಿ ಸ್ವೀಕರಿಸುವುದಕ್ಕೂ, ಆ ವಿಷಯಕವಾಗಿ ಪತ್ರವ್ಯವಹಾರವನ್ನು ಸ್ವತಂತ್ರವಾಗಿ ನಡೆಸಲೂ ಸರಕಾರವು ತಕ್ಕ ಏರ್ಪಾಡುಗಳನ್ನು ಈಗಾಗಲೇ ಮಾಡಿರುತ್ತದೆ. ಆದರೆ ಅವರು ಭದ್ರವಾದ ಸರಕಾರದ ವಿರುದ್ಧ ಚಳವಳಿಗೆ ಬೆಂಬಲರಾಗಿರುವುದರಿಂದ ಸಾಮಾನ್ಯ ತರಗತಿಯ ರಾಜಕೀಯ ವ್ಯವಹಾರಗಳನ್ನು ಮಾಡಲು ವಿಶೇಷ ಸ್ವಾತಂತ್ರ್ಯ ಕೊಡುವುದರಲ್ಲಿ ಪರಿಸ್ಫುಟ ಕ್ಲೇಶಗಳಿವೆ ಅದನ್ನು ಕೊಡುವುದರಿಂದ ಯಾವ ಸಲ್ಪವೂ ಇಲ್ಲ. ಕಾರಣ, ಗಾಂಧಿಯವರು ಈಗ ಬಂಧಿತರಾಗಿರುವ ಕಾರಣವಾದ ಆ ದೂಂದು ಉದ್ಯೋಗವನ್ನು ಅವರು ತ್ಯಜಿಸಿ ಬಿಡುವಂತೆ ತೋರುವುದಿಲ್ಲ. ಆದುದರಿಂದ ಈ ಕುರಿತಾದ ಮನವಿಗಳನ್ನಾಗಲೀ, ಆಲೋಚನೆಗಳನ್ನಾಗಲೀ ಸರಕಾರವು ಸ್ವೀಕರಿಸುವುದರಲ್ಲಿ ಕ್ರಮವಿಲ್ಲ ಕಾರಣ, ಸರಕಾರವು ತನ್ನ ಪೂರ್ವನಿರ್ಧಾರವನ್ನೇ ಅನುಸರಿಸುತ್ತದೆ"

ಲಂಡನಿನ ಓಫ್ಟ್ ಕ್ಲಬ್ಬಿನಲ್ಲಿ ಲೋರ್ಡ್ ಫಫರಿನರವರು ವಿವೇಕಪೂರ್ಣ ಮತ್ತು ವಿಚಾರಾರ್ಹವಾದ ಒಂದು ಭಾಷಣವನ್ನು ಮಾಡುತ್ತಾ—"ಹಿಂದೀಯ ರಾಷ್ಟ್ರೀಯತ್ವ ಧರ್ಮ ಬಹು ಬಿರುಸಿನಿಂದ ಹರಿಯ ತೊಡಗಿದೆ ಆ ಮಹಾ ಪ್ರವಾಹವನ್ನು ಬಂಧಿಸಿ ಅದು ಮಾಡಲಿರುವ ಹಾನಿಯನ್ನು ತಪ್ಪಿಸಲು ಸಾಧಿಸ್ಸಿ ಯಶಸ್ಸನ್ನು ಕೋರುವವರ ಆಚರಣೆಗಳನ್ನು ನಂಬಿಸಿ ಫಲವಿಲ್ಲ ಈ ಮಹಾ ಪ್ರವಾಹವನ್ನು ಎದುರಾಯಿಸುವ ಮಹತ್ಕಾರ್ಯವು ಜಯದ ಚಿಹ್ನೆಯನ್ನು ತೋರಿಸುತ್ತಿರಬಹುದು ಈ ಸೂತ್ರವು ಕೆಲವು ಕಾಲ ಬಾಳೀತು, ಆದರೆ ಕೊನೆಗೆ ಖಂಡಿತವಾಗಿಯೂ ಮುರಿದು ಮುಗಿಬೀಳುವುದು ಹೀಗಾಗಿ ಅಂತ್ಯದಲ್ಲಿ ಅಧಿಪತ್ಯದಿಂದ ಹಿಂದೂದೇಶವು ತಪ್ಪಿಹೋಗುವುದು -ವಿಧಕ್ತವಾಗುವುದು" ಎಂದರು 'ಮಹಾರಾಟಾ' ಪತ್ರಿಕೆಯು ಒಂದು ವಿಚಾರಣೀಯ ಲೇಖನವನ್ನು ಪ್ರಕಟಿಸಿದುತ್ತದೆ ಈ ಸಲ ಜರಗಲಿರುವ ಕಲ್ಕತ್ತಾದ ಅಖಿಳ ಭಾರತ ಕೊಂಗ್ರೆಸ್ ಮಹಾಸಭೆಯನ್ನು ಸರಕಾರವು ಬಹಿಷ್ಕರಿಸ ಹೊರಟ ಕುರಿತು ಅದು ವಿಶದವಾಗಿ ಬರೆಯುತ್ತಾ "ಅಖಿಳ ಭಾರತ ಕೊಂಗ್ರೆಸ್ ಮಹಾಸಭೆಯ ಅಧಿವೇಶನವು ಈ ಮಾಸಾಂತ್ಯದಲ್ಲಿ ಜರಗುವುದೆಂದು ಪ್ರಕಟವಾಗಿತ್ತು ಪ್ರಥಮದಲ್ಲಿ, ಈ ಮಹಾ ಸಮ್ಮೇಳನವು ಈ ಮಾಸದ ಮಧ್ಯದಲ್ಲಿ ಜರಗುವುದೆಂದು ಪ್ರಕಟಿಸಿದ್ದರು ಆದರೆ ಮಾರ್ಚ ೨೦ರಲ್ಲಿ ಪ್ರಕಟವಾಗಲಿರುವ ಸರಕಾರದ White Paper) ಶ್ವೇತಪತ್ರವನ್ನು ಪರಾಮರ್ಶಿಸಿದ ನಂತರವೇ ಈ ಸಮ್ಮೇಳನವು ಕೂಡುವುದು ವಿಹಿತವೆಂದು ತಿಳಿಯಲ್ಪಟ್ಟು ಸಭೆಯನ್ನು ಪುನಃ ಹಿಂದಕ್ಕಿಡಲಾಯಿತು ಅಂದು ಕೊಂಗ್ರೆಸ್ ಅಧಿವೇಶನವನ್ನು ಕಲ್ಕತ್ತದಲ್ಲಿ ಜರಗಿಸಲಾಗುವುದೆಂಬ ವಾರ್ತೆಯು ಪ್ರಕಟೀಕೃತವಾದೊಡನೆ ಸರಕಾರವು ಅಂತಹ ಜರಗೋಣವನ್ನು ನಿಷೇಧಿಸಿದೆಯಾಗಿಯೂ ಪ್ರಕಟವಾಯಿತು ಈ ಕುರಿತು ಡಿಲ್ಲಿಯ ಶಾಸನ ಸಭೆಯಲ್ಲಿ ನಡೆದ ವಾದವೂ ವಿದ್ದುಹೋಗಿ ಅದರ ನಿಷೇಧವ ಖರೆಯೆಂಬ ವಿಷಯವು ಲೋಕವಿದಿತವಾಯಿತು ಹೀಗೆ ಬಹಿಷ್ಕರಿಸಿದುದು ತೀರಾ ಅಪ್ರಸ್ತುತ"

"ರಿಟಾಯರ್ಡ್ ಡಿವಿಜನಲ್ ಕಮಿಶನರರಾದ ಶ್ರೀ ಜೆ ಎನ್ ಗುಪ್ತರೂ, ಶ್ರೀ ಟಿ ಪ್ರಕಾಶಂರವರೂ "ಸರಕಾರವು ಈ ಸಂದಿಗ್ಧ ಸಮಯದಲ್ಲಿ ಕೊಂಗ್ರೆಸ್ಸನ್ನು ಬಹಿಷ್ಕರಿಸುವುದು ತೀರ ದುರದೃಷ್ಟವೆಂದೂ ಭಾರತೀಯರು ಭವಿತವ್ಯತೆಯನ್ನು ನಿರ್ಧರಿಸುವ ವೇಳೆಯಲ್ಲಿ ಅವರಿಗೆ ಸರಕಾರದ ನಿರ್ಧಾರದ ವಿಷಯಕವಾಗಿ ಆಲೋಚಿಸಿಕೊಳ್ಳಲೂ ಎಡೆಯಿಲ್ಲದಂತಾದರೆ ಮತ್ತೇನು ಉಳಿಯಿತು? ಇದು ನ್ಯಾಯವೇ? [illegible] ಸರಕಾರವು ಕೊಂಗ್ರೆಸ್ಸನ್ನು ನಿಷೇಧಿಸುತ್ತಾ ಇರುವುದರಿಂದ ಅದು ಕೋಳಿಮರಿಯಂತಹ ನಿಷ್ಫಲ ಮಾನಸಿಕತೆಯನ್ನುಳ್ಳದ್ದೆಂದು ಲೋಕವಿಶ್ರುತವಾಗುವುದು."

"ಸಂಪೂರ್ಣ ದಮನಾಧಿಕಾರಯುಕ್ತವಾದ ಸರಕಾರಕ್ಕೆ ಕಾಯಿದೆ ಭಂಗಮಾಡುವವರ ಭಯಭೀತಿ ಏಕೆ? ಕೊಂಗ್ರೆಸ್ಸಿನಷ್ಟು ಪ್ರಬಲ ಪಕ್ಷವು ಇಡೀ ಹಿಂದುಸ್ಥಾನದಲ್ಲಿರುವುದಿಲ್ಲವೆಂದು ಅದರ ಕಡು ವೈರಿಯೂ ಒಪ್ಪಿಕೊಳ್ಳುತ್ತಿದೆ ಆದರೆ ಈಗಿನ ದುಃಸ್ಥಿತಿ ನಿವಾರಣೆಗಾಗಿ ಕೊಂಗ್ರೆಸ್ಸೂ, ಸರಕಾರವೂ ಯತ್ನಿಸುವುದು ಶ್ರೇಯಸ್ಕರವಿದೆ ಸರಕಾರವು, ಅಂದು ವೈಸರಾಯ ಗಾಂಧಿಜೀಯವರೊಳಗೆ ನಡೆದ ಪತ್ರವ್ಯವಹಾರಗಳ ಬೇಕಾದ ಅಂಶವನ್ನು ಪ್ರಕಟಿಸಿದ್ದರೂ, ಸಿ. ರಾಜ ಗೋಪಾಲಾಚಾರ್ಯರು ಸಂಪೂರ್ಣ ಪತ್ರವ್ಯವಹಾರವನ್ನು ಪ್ರಕಟಿಸಿ ನ್ಯಾಯವು ಕೊಂಗ್ರೆಸ್ಸಿನ ಪಕ್ಷದಲ್ಲಿ ನಿಂತಿದೆಯೆಂದು ತೋರಿಸಿದ್ದಾರೆ, [illegible] ಇರಲಿ, ಕೊಂಗ್ರೆಸ್ಸು ಈ ಸುಸಂದರ್ಭದಲ್ಲಿ ಸಮಾಧಾನ ಹೊಂದುವುದು ನ್ಯಾಯವಿದೆ!" ಎಂದಿದೆ.

# ವಿಜ್ಞಾನ ಲೋಕ:—

**ಸೂರ್ಯನಲ್ಲೇನುಂಟು? ಒಡೆಯಲಸದಳವಾದ ಉಕ್ಕು. ಬಂಡೆಕಲ್ಲಿನಿಂದ ಉಣ್ಣೆ ತಯಾರಿಸಬಹುದು. ವೀಲುಗಳ ಆವಶ್ಯಕತೆ ಮುಸ್ಲಿಮರೊಳಗಣ ಕಚ್ಚಾಟ? ಅಮೇರಿಕದ ಅಧ್ಯಕ್ಷರ ಸಿಂಹಾಸನಾರೂಢ. ಚೀನೀಯರ ವಿಚಿತ್ರ ಶ್ರದ್ಧೆ! ಮಾತಾಡುವ ಆಕಳ ಕರು.**

## ಸೂರ್ಯನಲ್ಲೇನುಂಟು?

ಭೌತಿಕ ಶಾಸ್ತ್ರಜ್ಞರು ಗಗನಮಂಡಲವನ್ನೂ ಗ್ರಹಗಳನ್ನೂ ನಿರೀಕ್ಷಿಸುತ್ತಿರುವವರಷ್ಟೆ! ಕಳೆದ ಸಪ್ಟಂಬರದಲ್ಲಿ ಸೂರ್ಯಬಿಂಬ ಪರಿಶೋಧನಕಾರರಿಗೆ ಒಂದು ವೈಚಿತ್ರ್ಯವು ಕಂಡು ಬಂದಿದೆ. ಆ ತಿಂಗಳಲ್ಲಿ ಉಂಟಾದ ಚಂದ್ರಗ್ರಹಣ ಸಮಯದಲ್ಲಿ ಚಂದ್ರನ ಮೇಲೆ ಕೆಂಪು ವರ್ಣವೊಂದು ಹರಡಿದ್ದು ಅಂತಹ ವೈಶಿಷ್ಟ್ಯವೆಲ್ಲಿಂದಾಯಿತು? ಎಂಬ ಕುರಿತು ಶೋಧಿಸಲಾಯಿತು. ಕೊನೆಗೆ ಆ ಕೆಂಪು ವರ್ಣವು ಸೂರ್ಯನಿಂದ ಪ್ರತಿಫಲಿಸಿತೆಂದೂ ಆ ಪ್ರತಿಫಲನದಿಂದಾಗಿ ಚಂದ್ರನು ಕೆಂಪು ವರ್ಣವನ್ನು ಹೊಂದುವನೆಂದೂ ತಿಳಿದು ಬಂತು. ಸೂರ್ಯನನ್ನು ಕುತೂಹಲದಿಂದ ಪರಿಶೋಧಿಸಲಾಗಿ—ಶಾಸ್ತ್ರಜ್ಞರ ಭಾವನೆಯಂತೆ ಸೂರ್ಯನು ಕುದಿಯುತ್ತಿರುವ ಅಗ್ನಿಕುಂಡವೆಂದೂ ಆ ಅಗ್ನಿಕುಂಡದಿಂದ ಆಗಾಗ್ಗೆ ಒಮ್ಮೆ ಮೇಲಕ್ಕೆ ಹಾರುವ ಕೆಂಪು ಬೆಂಕಿಯ ನಾಲಿಗೆಯಿದೆಯೆಂದೂ ತಿಳಿದು ಬಂತು. ಈ ಕೆಂಪು ಅಗ್ನಿನಾಲಗೆಗಳು ಒಮ್ಮೊಮ್ಮೆ ನಿಮಿಷಾರ್ಧದಲ್ಲಿ ಒಂದು ಮಿಲಿಯ ಮೈಲು ಎತ್ತರಕ್ಕೆ ಹಾರುತ್ತಿವೆಯೆಂದೂ ತಿಳಿದು ಬಂದಿದೆ. ಈ ಬೆಂಕಿ ನಾಲಗೆಗಳು ಹಾರಿಕೊಳ್ಳಲು ಕಾರಣವೇನೆಂದು ತಿಳಿದು ಬಂದಿಲ್ಲ. ಸೂರ್ಯನ ಸುತ್ತಲೂ ಗಾಳಿಯಿಲ್ಲದಿರುವುದೇ ಇದಕ್ಕೆ ಕಾರಣವೆಂಬ ಊಹೆ. ಸೂರ್ಯನ ಪ್ರಕಾಶವನ್ನು ಸಂಪೂರ್ಣ ತಡೆದು ಪರಿಶೋಧನೆ ಮಾಡಲನುಕೂಲವಾದ ಸಾಧನಗಳು ಇಷ್ಟರ ತನಕ ತೋರಿಯಿಲ್ಲವಾದುದರಿಂದ ಈಗ ಸಂಪೂರ್ಣ ಸೂರ್ಯಗ್ರಹಣವಾಗುವ ವೇಳೆ ಈ ಶೋಧನೆಯನ್ನು ನಡೆಸುತ್ತಿದ್ದಾರೆ. ಸೂರ್ಯನ ಕಿರಣಗಳನ್ನು ಧಿಕ್ಕರಿಸಿ ಶೋಧೆ ನಡೆಸಲು ಸುಲಭವಾದ ಉಪಕರಣಗಳು ದೊರಕೊಡನೆ ಸೂರ್ಯನೆಂದರೇನು? ಅವನ ನಿಜವಾದ ಗುಟ್ಟೇನು? ಎಂಬ ಕುರಿತು ಶೋಧೆಯಾಗುವುದು.

## ಒಡೆಯಲಸದಳವಾದ ಉಕ್ಕು.

ಒಡೆಯಲಸಾಧ್ಯವಾದ ಉಕ್ಕನ್ನು ಕಂಡು ಹಿಡಿದಿದ್ದಾರೆ. ಈ ಉಕ್ಕನ್ನು ಕರಗಿಸಲಾಗಲೀ ಒಡೆಯಲಾಗಲೀ, ಇದರ ಮೇಲೆ ತೂತು ತೆಗೆಯಲಾಗಲೀ ಸಾಧ್ಯವೇ ಇಲ್ಲ. ಇದನ್ನು ಎಷ್ಟು ಸಾಹಸಪೂರ್ವಕವಾಗಿ ಒಡೆಯಲು ಯತ್ನಿಸುತ್ತಾರೋ ಅಷ್ಟು ಬಲವಾಗುತ್ತದೆ. ಬ್ರಿಟಿಷ್ ಆಕ್ಸಿಜನ್ ಕಂಪೆನಿಯವರು ಈ ಉಕ್ಕನ್ನು ತಯಾರಿಸಿ ಇದನ್ನು ಪುನಃ ಒಡೆಯಲು ಸಾಹಸ ಪಟ್ಟರು. ಯಾವ ಯಾವ ಬಗೆಯ ಸಾಧನಗಳನ್ನುಪಯೋಗಿಸಿದರೂ ಇದನ್ನು ಒಡೆಯಲಾಗಲಿಲ್ಲ. ಈ ಉಕ್ಕನ್ನು ತಯಾರಿಸುವಾಗ ಇದೀ ಕಟ್ಟೋಣಕ್ಕೇನೆ ಅಪಾಯ ಸಂಭವಿಸುತ್ತದೋ ಎಂಬ ಹೆದರಿಕೆಯುಂಟಾಯಿತು. ಅಷ್ಟು ಕಠಿಣವಾದ ತಾಪವು ಇದನ್ನು ಕರಗಿಸಲು ಬೇಕಾಯಿತು. ಈ ಉಕ್ಕಿನ ದ್ರಾವಕ ಬಿಟ್ಟ ಪಾತ್ರೆಯು ಕರಗಿ ನೀರಾಯಿತು. ಪ್ರತ್ಯೇಕ ಗುಡಾಣವನ್ನು ರಚಿಸಿ ಇದರ ದ್ರಾವಕವನ್ನು ಹೊಯ್ದರು. ಈ ಉಕ್ಕಿನ ಟ್ರಿಜರಿಗಳು ಇನ್ನು ಲೋಕದಲ್ಲಿ ಬಳಕೆಗೆ ಬಂದರೆ ಮತ್ತು ಕಳ್ಳಕಾಕರಿಗೆ ಬೆಂಕಿ ಇಡುಗಳಿಗೆ, ದ್ರವ್ಯಾಪಹರಣ ಕಾರ್ಯವು ದುಃಸಾಧ್ಯವಾಗುವುದು. ಈ ಉಕ್ಕು ಇಷ್ಟರ ತನಕ ಸಿದ್ಧವಾದ ಎಲ್ಲಾ ಉಕ್ಕಿಗಿಂತ ಹೆಚ್ಚು ವರ್ಷ ಕಾಲ ಬಾಳಿಕೆ ಬರುವುದೆಂದೂ ಕಂಡು ಹಿಡಿದಿದ್ದಾರೆ.

## ಒಂಡೆ ಕಲ್ಲಿನಿಂದ ಉಣ್ಣೆ ತಯಾರಿಸಬಹುದು!

ಕೆನಡಾದಲ್ಲಿ ಉಣ್ಣೆಯ ಗುಣವೇನು? ಅದೇ ರೀತಿಯ ಉಣ್ಣೆಯನ್ನು ಬೇರೆ ವಿಧಾನದಲ್ಲಿ ತಯಾರಿಸಬಹುದೋ ಎಂದು ಶೋಧನೆಯನ್ನು ನಡೆಸಿ, ಡೊಲೊಮೈಟ್ ಎಂಬ ಒಂದು ಬಗೆಯ ಬಂಡೆಯಿಂದ ಕುರಿಯ ಉಣ್ಣೆಯಂತಹ ಉಣ್ಣೆಯನ್ನು ತಯಾರಿಸಬಹುದೆಂದು ಕಂಡು ಹಿಡಿದಿದ್ದಾರೆ. ಈ ಡೊಲೊಮೈಟ್ ಬಂಡೆಯು ಅವೆ ಮಣ್ಣಿನಂತಾಗುತ್ತದೆ. ಇದು ಬೆಂಕಿಯ ಬಲವತ್ತಾದ ತಾಪಕ್ಕೆ ಕರಗುತ್ತದೆ. ಒಂಟೇರಿಯೋ ಎಂಬಲ್ಲಿನ ನಯಾಗಾರ ಎಂಬಲ್ಲಿ ಇದು ಧಾರಾಳವಾಗಿ ಸಿಗುತ್ತದೆ. ಸಣ್ಣ ಸಣ್ಣ ರಂಧ್ರಗಳಿರುವ ತಗಡಿನ ಮೇಲೆ ಇದನ್ನು ನೀರಿನಂತೆ ಹರಿಯಬಿಡುತ್ತಾರೆ. ತೂತಿನ ಮೂಲಕ ಕೆಳ ಹರಿಯುವ ದಟ್ಟ ನೀರು ನೂಲಿನೋಪಾದಿ ಇಳಿಯುತ್ತದೆ. ಈ ಮಣ್ಣು ಒಂದು ರೀತಿಯ ಅಂಟಿನಂತಿರುವುದರಿಂದ ಇದರ ನಯವಾದ ನೂಲುಗಳು ಉಣ್ಣೆಯಂತೆಯೇ ಉಪಯೋಗಕಾರಿಯಾಗುತ್ತವೆ. ಗ್ಲಾಸನ್ನು ಕೂಡಾ ಕರಗಿಸಿ ಇದೇ ರೀತಿಯ ಉಣ್ಣೆಯ ನೂಲನ್ನು ತಯಾರಿಸುವರಂತೆ. ಈ ಶೋಧೆಯು ಜಯಶೀಲವಾದರೆ ಮುಂದಕ್ಕೆ ಕುರಿಯ ಉಣ್ಣೆಯಷ್ಟೇ ಬೆಲೆಯು ಈ ಬಂಡೆ ಉಣ್ಣೆಗೂ ಸಿಕ್ಕೀತಂತೆ. ಈ ಬಂಡೆ ಮತ್ತು ಗ್ಲಾಸ್ ಉಣ್ಣೆಗಳಿಗೆ ಬಣ್ಣವನ್ನೂ ಹಾಕಲು ಸಾಧ್ಯವಿರುವುದಾಗಿ ಪರಿಶೋಧಕರ ಮತವಿರುತ್ತದೆ. ಜಡಪದಾರ್ಥಗಳಿಂದ ಉಣ್ಣೆ ತಯಾರಾಗುತ್ತದೆಯೆಂದು ಕೇಳಿದಾಗ ಆಶ್ಚರ್ಯವಾಗಬಹುದು. ಅದರೂ ವಿಜ್ಞಾನ ರಾಕ್ಷಸನ ಬಲುಮೆ ಅಂತಹುದು.

## ವೀಲುಗಳ ಆವಶ್ಯಕತೆ

ಧನಿಕನಾದಿಗಳೆಲ್ಲರೂ ಒಬ್ಬನು ಮರಣಕಾಲವನ್ನು ಕಂಡೋ ಕಾಣದೆಯೋ ವೀಲು ಬರೆದಿಡುವ ಕ್ರಮ ಜಗತ್ತಿನಲ್ಲಿರುವಂತಹದು. ಇಂಗ್ಲೆಂಡಿನ ಸಮ್ಮರ್‌ಸೆಟ್ ಹೌಸ್ ಎಂಬ ಸರಕಾರದ ಮಂದಿರದಲ್ಲಿ ಈಗ ಅಲ್ಲಿಯವರ ವೀಲುಗಳು ತುಂಬಿಕೊಂಡಿವೆಯಂತೆ. ವೀಲುಗಳ ನ್ನಿಡುವ ಮಾಳಿಗೆಯ ನೆಲದ ಕೋಣೆಗಳು ಭಾರದಿಂದ ಕೊಂಕಾಗುತ್ತ ಬಂದುದರಿಂದ ಪ್ರತ್ಯೇಕ ಕೋಣೆಗಳನ್ನು ಹಾಕಿದರು. ಈ ವೀಲುಗಳನ್ನು ಅಲ್ಲಿಯವರು ಹೇಗೆಲ್ಲ ಮಾಡಿರುವರೆಂಬ ತಾತ್ಪರ್ಯದ ವಿಷಯಗಳು ಈಗ ಪ್ರಕಟವಾಗಿವೆ. ಒಬ್ಬ ಬುದ್ಧಿವಂತನು ತಾನು ಸಾಯುವಾಗ ತನ್ನ ವೀಲನ್ನು ಬರೆದು ಒಂದು ಬಗೆಯ ಸ್ಪಿರಿಟ್ ದ್ರಾವಕದಲ್ಲಿ ಹಾಕಿಟ್ಟಿದ್ದನು. ವೇಲ್ಸ್ ಎಂಬಲ್ಲಿನ ಒಬ್ಬ ಬೈರಾಗಿ(?)ಯು ತನ್ನ ವೀಲನ್ನು ಬಾಗಿಲ ಮೇಲೆ ಬರೆದಿಟ್ಟು, ಆ ಇಡೀ ಬಾಗಿಲು ಕೋರ್ಟಿಗೆ ಒಯ್ಯಲ್ಪಡುವಂತೆ ಮಾಡಿದನು. ಒಬ್ಬನು ತಾನು ಸಾಯುವಾಗ ಸಂಕದ ಬಳಿ ಇದ್ದ ಮೈಲು ಕಲ್ಲಿನ ಮೇಲೆ ತನ್ನ ವೀಲನ್ನು ಬರೆದಿಟ್ಟನು. ಎಲ್ಲಾ ವೀಲುಗಳಲ್ಲಿ ವಿಶೇಷವಾದುದು ಶೇಕ್ಸ್‌ಪಿಯರನದು. "ನನ್ನ ಎರಡು ಹಾಸಿಗೆಗಳಲ್ಲಿ ಒಳ್ಳೆಯದನ್ನು ನನ್ನ ಹೆಂಡತಿಗೆ ಕೊಡಬೇಕೆಂದು" ಅವನು ಬರೆದುದನ್ನು ಓದಿ ಜನರು ನಗುವರು. ಎಡ್ಮಿರಲ್ ನೆಲ್ಸನನು ಟ್ರೆಫಲ್‌ಗರ್‌ನ ಯುದ್ಧದಲ್ಲಿ ಮಡಿಯುವ ಮುಂಚೆ ಬರೆದಿಟ್ಟ ವೀಲಿನಲ್ಲಿ "ಲೇಡಿ ಹೆಮಿಲ್ಟನಳನ್ನು ನಾನು ನನ್ನ ದೇಶಕ್ಕಾಗಿ ಅರ್ಪಿಸಿದ್ದೇನೆ" ಎಂದು ಬರೆದಿದ್ದನು. ತನ್ನನ್ನು ಕೆಲವರು ಕೊಲ್ಲಲೆಳಸಿದುದರಿಂದ ಡ್ಯೂಕ್ ಒಫ್ ವೆಲ್ಲಿಂಗ್ಟನನು ೫೦೦೦೦೦ ಪೌಂಡುಗಳ ವೀಲನ್ನು ಒಂದು ದಿನದಲ್ಲಿ ತಯಾರಿಸಿದನು. ಮಿಸೆಸ್ ಕುಕ್ ಎಂಬವಳದ್ದು ಎಲ್ಲಾ ವೀಲಿಗಿಂತಲೂ ದೊಡ್ಡದು. ಇದು ೭೨ ಪುಟಗಳಷ್ಟಿವೆ. ಸಮ್ಮರ್‌ಸೆಟ್ಟಿನಲ್ಲಿರುವ ೫೦,೦೦೦ ೦೦೦ ವೀಲುಗಳಲ್ಲಿ ಬರೀ ಸಣ್ಣ ವೀಲೆಂದರೆ ೧೦೦ ಶಬ್ದಗಳದ್ದು ಒಂದು. ಮೊಫ್ಯೂ ಆರ್ನಾಲ್ಡರ ವೀಲಿನಲ್ಲಿ ೧೩ರೇ ಶಬ್ದಗಳಂತೆ. ಒಬ್ಬ ಲಂಡನ್ ಮನುಷ್ಯನು ತನ್ನ ವೀಲನ್ನು ಹಳೆ ಕಾಗದ ಚೂರಿನಲ್ಲಿ "ಎಲ್ಲಾ ನನ್ನ ತಾಯಿಗೆ" ಎಂದು ಬರೆದಿದ್ದನು.

## ಮುಸ್ಲಿಮರೊಳಗಣ ಕಚ್ಚಾಟ?

ನವ್ಯ ದಿಲ್ಲಿಯಲ್ಲಿ ತಾ ೫ನೇ ದಿನ ಅಖಿಲ ಭಾರತ ಮುಸ್ಲಿಮ್ ಕೊನ್ಫರೆನ್ಸಿನವರ ಒಂದು ಮಹಾ ಸಭೆಯು ಅಲ್ಲಿಯ ವೆಸ್ಟರ್ನ್ ಹೊಸ್ಟೆಲ ನಲ್ಲಿ ಜರಗಿತು. ಸಯ್ಯದ್ ಅಬ್ದುಲ್ ಅಜೀಜ ಪಾದ್ಶಾ ಹುಸೇನ್ ಇಮಾಮ್, ಸರ್ ಮಹಮ್ಮದ್ ಯಾಕೂಬ್ ಡಾ ಜಿಯಾ ಉದ್ದೀನ್, ಗಜನಾವಿ, ಶಫಿ ದಾವೂದ ನವಾಬ್ ಸರ್ ಮಹಮ್ಮದ್ ಯುಸೂಫ್ ಮೊದಲಾದ ಅನೇಕರು ನೆರೆದಿದ್ದರು. ಮುಸ್ಲೀಮ್ ಲೀಗನ್ನು ತಮ್ಮ ಕೊನ್ಫರೆನ್ಸಿನೊಡನೆ ಸಂಯೋಜಿಸುವ ಕುರಿತು ತರ್ಕವಾಗಿ ಸಂಯೋಜನೆಯಾಗುವುದಾದರೆ ತಾವು ಆದರ ಶ್ರೇಯಃ ದೃಷ್ಟಿಯಿಂದ ಸೆಕ್ರೆಟರಿ ಕೆಲಸಕ್ಕೆ ರಾಜಿ ಕೊಡುತ್ತೇವೆಂದು ಸರ್ ಮಹಮ್ಮದ್ ಯಾಕೂಬ್ ಮತ್ತು ಶಫೀ ದಾವೂದಿಯವರು ತಿಳಿಸಿದರು. ಅಧ್ಯಕ್ಷರಾದ ಅಬ್ದುಲ್ ಅಜೀಜ ಬೆರಿಸ್ಟರರು ಪತ್ರಿಕಾ ಪ್ರತಿನಿಧಿಗಳನ್ನು ಸಭೆಗೆ ಬರಬಿಟ್ಟರು. ಫ್ರೀ ಪ್ರೆಸ್ಸಿನ ಪ್ರತಿನಿಧಿಯು ಸಭೆಗೆ ಬಂದೊಡನೆ ಸರ್ ಯಾಕೂಬರು ಆದಾಗದೆಂದರು. ಅಧ್ಯಕ್ಷರು ಬೇಕೆಂದರು. ಕ್ಷೋಭೆಗೆ ಪ್ರಾರಂಭ! ದೊಡ್ಡ ದೊಡ್ಡ ಆಸನದ ಮಹಮಂಡರು ಸಭೆಯಿಂದ ಎದ್ದು ಹೊರ ಹೋದರು. ಒಬ್ಬರಿಗೊಬ್ಬರು ಬೈದರು. ಭಂಗಿಸಿದರು, ಸುಖದಿಂದ ಆರಂಭಿಸಿ ಗಲಾಟೆಯಿಂದ ಸಭಾಂತ್ಯವಾಯಿತು. ಕೆಲ ಮುಸ್ಲಿಮರ ಮಾನಸಿಕತೆಯ ಚಿಹ್ನೆಯು ಇದಾಯಿತು. ಇಂತಹವರು ರಾಷ್ಟ್ರದೇಳ್ಗೆಗಾಗಿ ಹಿಂದೂಗಳೊಡನೆ ಸೇರಿಯಾರೇ ಎಂಬುದೂ ವಿದಿತವಾಯಿತು.

## ಅಮೇರಿಕದ ಅಧ್ಯಕ್ಷರ ಸಿಂಹಾಸನಾರೂಢ.

ಅಮೇರಿಕದ ಅಧ್ಯಕ್ಷರಾಗಿ ಹೂವರ್ ದೊರೆಗಳವರ ಬದಲು ರೂಸ್‌ವೆಲ್ಟ್ ದೊರೆಗಳವರು ಚುನಾಯಿತರಾಗಿದ್ದಾರಷ್ಟೆ! ಅವರ ಪಟ್ಟಾಭಿಷೇಕ ಮಹೋತ್ಸವವು ತಾ ೪ರಲ್ಲಿ ಜರಗಿತು. ಅವರಿಗೆ ಮೊನ್ನೆ ಒಬ್ಬನು ಗುಂಡೆಸೆದು ಪ್ರಾಣಾಪಾಯವನ್ನೊಡ್ಡಲು ಯತ್ನಿಸಿದಂತೆ, ಇನ್ನಾಗಲು ಎಡೆಗೊಡಬಾರದೆಂದು ಇಡೀ ನಗರದಲ್ಲಿ ಪೋಲೀಸ ವ್ಯವಸ್ಥೆಯಾಗಿತ್ತು. ರೂಸ್‌ವೆಲ್ಟರೂ ಹೂವರರೂ ಕಾರಿನಲ್ಲಿ ಕುಳಿತು ಏಳು ಕಾರುಗಳಿಂದ ಸುತ್ತುವರಿಯಲ್ಪಟ್ಟು ವೈಟ್ ಹೌಸಿನಿಂದ ಕೆಪಿಟೋಲಿಗೆ ಹೋದರು. ಲಕ್ಷಗಟ್ಟಲೆ ಜನರು ಮಾರ್ಗಗಳ ಬದಿಗಳಲ್ಲಿ ಸಾಲುಗಟ್ಟಿ ನಿಂತಿದ್ದರು. ಕುದುರೆ, ವಾಹನ, ಕಾರುಗಳು ಶೃಂಗರಿಸಲ್ಪಟ್ಟು ಪಟ್ಟಣವನ್ನು ದಾಟಿ ಕೆಪಿಟೋಲ್‌ಗೆ ತಲಪಿದುವು. ರೂಸ್‌ವೆಲ್ಟರ ಸುತ್ತಲೂ ಸೈನಿಕರ ಸನ್ನಾಹ. ಪೋಲೀಸರು ಜನತೆಯ ಮೇಲೆ ಕಣ್ಣಿಟ್ಟುಕೊಂಡೇ ಇದ್ದರು. ಮಾಳಿಗೆಗಳಲ್ಲಿ ಕುಳಿತು ಮೆರವಣಿಗೆಯನ್ನು ನಿರೀಕ್ಷಿಸ ಬಾರದಾಗಿ ರಾಜಾಜ್ಞೆಯಾಗಿತ್ತು. ಕೆಪಿಟೋಲನ್ನು ತಲಪಿದೊಡನೆ ಹೂವರರು ಪಟ್ಟವನ್ನು ಬಿಟ್ಟುಕೊಟ್ಟರು. ಒಡನೆ ಸಾವಿರಾರು ಜನರು ಕರತಾಡನವನ್ನಾರಂಭಿಸಲು, ರೂಸ್‌ವೆಲ್ಟರು ಪ್ರೆಸಿಡೆಂಟ್ ಸಿಂಹಾಸನವನ್ನೇರಿ, ಕೈಯನ್ನು ಚೀಫ್ ಜಸ್ಟೀಸರೆದುರು ಎತ್ತಿ, ತಾನು ರಾಜ್ಯಾಡಳಿತೆಯನ್ನು ವಿಶ್ವಾಸಪೂರ್ವಕವಾಗಿ ಮಾಡುವೆನೆಂದು ಹೇಳಿ 'ಭಗವಂತನು ಅನುಗ್ರಹಿಸಲಿ!' ಎಂಬ ನುಡಿಯೊಡನೆ ಸಹಿ ಮಾಡಿದರು. ಈ ಮಹೋತ್ಸವದ ವಾರ್ತೆಯು ಇಡೀ ಜಗತ್ತಿಗೆ ತಂತಿರಹಿತ ವಾರ್ತೆಯ ಮೂಲಕ ಕಳುಹಿಸಲ್ಪಟ್ಟಿತು.

## ಚೀನಿಯವರ ವಿಚಿತ್ರ ಶ್ರದ್ಧೆ!

ಚೀನಿಯರಲ್ಲಿ ಯಾರಾದರೂ ಮೃತರಾದರೆ ಅವರು ಸ್ವರ್ಗಲೋಕಕ್ಕೆ ಹುಟ್ಟುವರೆಂದೇ ಭಾವನೆ. ಅಲ್ಲಿಗೆ ಕಾಲಿಡುವ ಮೊದಲು ಮೃತನು ತನ್ನ ಲೌಕಿಕ ವಸ್ತ್ರ ಒಡವೆಗಳನ್ನು ಇಲ್ಲೇ ತ್ಯಜಿಸಬೇಕಂತೆ. ಅಲ್ಲಿ ಹೊಸತಾಗಿ ಬೇರೆ ಉಡುಪುಗಳನ್ನು ಧರಿಸಿಕೊಳ್ಳಬೇಕಂತೆ. ಸ್ವರ್ಗಕ್ಕೆ ತಲಪಿದ ಆತ್ಮವು ಅಲ್ಲಿ ತನ್ನ 'ಮಾನರಕ್ಷಣೆ'ಗಾಗಿ ವುಷ್ಪನಗಳನ್ನು ಹೊಲಿದುಕೊಳ್ಳುವುದೆಂಬ ಭಾವನೆ. ಅದಕ್ಕಾಗಿ ಕಳೇಬರವನ್ನು ಹೂಳುವಾಗ ಅದರ ಎದೆಯಲ್ಲಿ ೫೦ರಿಂದ ೧೦೦ ಸೂಜಿಗಳನ್ನಿಡುವರು. ಈ ಸೂಜಿಗಳಿಂದ ಸತ್ತ ಆತ್ಮವು ವಸ್ತ್ರವನ್ನು ಹೊಲಿದು ಧರಿಸುವುದೆಂದು ಶ್ರದ್ಧೆ. ಚೀನಾದಲ್ಲಿ ವರ್ಷಕ್ಕೆ ೧೫ರಿಂದ ೧೮ ಮಿಲಿಯ ಜನರು ಮೃತಹೊಂದುತ್ತಾರೆ. ಇಷ್ಟು ಜನರಿಗೆ ಸುಮಾರು ೧೩೦೦ರಿಂದ ೧೭೦೦ ಮಿಲಿಯ ಸೂಜಿಗಳು ವರ್ಷಕ್ಕೆ ಬೇಕಾಗುತ್ತವೆ. ಕೆಲವು ಚೀನೀಯರು ಪರದೇಶಗಳಲ್ಲಿ ಸಾಯುವ ಲೆಖ್ಖವಿರುವುದರಿಂದ ಹಾಗೆ ಸಾಯುವವರಿಗಾಗಿಯೂ ಸುಮಾರು ೫೦ರಿಂದ ೭೦ ಮಿಲಿಯ ಸೂಜಿಗಳು ಬೇಕಾಗುತ್ತವೆ. ಹೀಗಾಗಿ ಈ ಸೂಜಿಯ ವ್ಯಾಪಾರವು ಚೀನಾದಲ್ಲಿ ತುಂಬಿ ಹೋಯಿತು. ವರ್ಷಕ್ಕೆ ೪೦,೦೦೦ದಿಂದ ೧೦೦,೦೦೦ ಪೌಂಡುಗಳ ವರೆಗೆ ಈ ಸೂಜಿ ವ್ಯಾಪಾರದಿಂದಲೇ ಆಯವಿದೆಯಂತೆ. ಘೋರಯುದ್ಧವಾಗುವ ಮೊದಲು ಈ ಸೂಜಿ ತಯಾರಿಸಿ ವ್ಯಾಪಾರವನ್ನು ಜರ್ಮನಿಯು ವಶೀಕರಿಸಿಕೊಂಡಿತ್ತು. ಆ ಯುದ್ಧದ ನಂತರ ಜರ್ಮನಿಯು ಸೋತು ಬಿದ್ದು ಈ ವ್ಯಾಪಾರವು ಜಪಾನಿನ ಕೈಸೇರಿತು. ಹಲವು ಕಾಲದ ವರೆಗೆ ಜಪಾನರು ಈ ವ್ಯಾಪಾರದಿಂದ ಸಂಪಾದನೆ ಮಾಡಿದರು. ಕ್ರಮೇಣ, ಈ ಸೂಜಿ ತಯಾರಿ ಕೈಗಾರಿಕೆಯಲ್ಲಿ ಅವರ ಮೋಸ ವೃತ್ತಿಯು ಪ್ರಕಟವಾಯಿತು. ಸಿದ್ಧವಾದ ಸೂಜಿಗಳನ್ನು ಪೆಟ್ಟಿಗೆಗಳಲ್ಲಿ ತುಂಬಿ ಭದ್ರಗೊಳಿಸುವ ಕಡೆ, ಈ ಜಪಾನರು ಪ್ರಾಚೀನ ಕಾಲದ ಸೂಜಿಗಳ ಬದಲಿಗೆ ಗಿಲೀಟು ಕೊಟ್ಟ ಟೊಳ್ಳು ಸೂಜಿಗಳನ್ನು ಪೆಟ್ಟಿಗೆಗಳಲ್ಲಿಟ್ಟರು. ಕೆಲವು ವರ್ಷಗಳ ತನಕ ಈ ಮೋಸಗಾರಿಕೆಯು ನಡೆದು ಸರಿ ಸೂಜಿಗಳೊಡನೆ ಎಷ್ಟೋ ಮಿಲಿಯ ಚೀನಿಯರು ಪರಲೋಕಕ್ಕೆ ಹೋಗಿ ಬತ್ತಲೆ ಕುಳಿತುಬೇಕಾಯಿತು. ಒಂದು ದಿನ ಯಾರೋ ಚೀನೀಯನ ತನ್ನ ಮನೆಗೆ ತರಲ್ಪಟ್ಟ ಸೂಜಿಗಳ ಠಕ್ಕು ಕೆಲಸವನ್ನು ಕಂಡು ಹಿಡಿದು ವಿಶ್ವಾಸಘಾತುಕತನವನ್ನು ಸರ್ವತ್ರ ಹರಡಿಬಿಟ್ಟನು. ಹೀಗಾಗಿ ಈಗ ಜಾಪಾನರ ಒಂದು ಸೂಜಿಯಾದರೂ ಚೀನಾದಲ್ಲಿ ಮಾರಾಟವಾಗುವುದಿಲ್ಲ. ಮೊದಲು ಜರ್ಮನಿನ ಕೈಯಲ್ಲಿದ್ದ ಈ ವ್ಯಾಪಾರವು ಪುನಃ ಅದರ ಕೈಗೆ ಸೇರಿಯುತ್ತದೆ. ಈ ವ್ಯಾಪಾರಭಂಗದಿಂದ ಜಾಪಾನಿಗೆ ಮಿಲಿಯಗಟ್ಟಲೆ ಪೌಂಡು ನಷ್ಟವಿದೆಯಂತೆ. ಈಗ ಜಪಾನರ ಗಡಿಯಾರ ಮೊದಲಾದ ಯಾವ ವಸ್ತುವನ್ನೂ ಚೀನೀಯರು ಪಡೆಯುವುದಿಲ್ಲ. ಎಲ್ಲಕ್ಕೂ ಬಹಿಷ್ಕಾರ! ಇದಕ್ಕಾಗಿಯೇ ಈಗ ಅವರೊಳಗೆ ಯುದ್ಧ!

## ಮಾತಾಡುವ ಆಕಳ ಕರು.

### 'ನನ್ನನ್ನು ಕಟ್ಟಬೇಡಿರಿ! ನನ್ನ ತಾಯಿಗೆ ಔಷಧ ಹಚ್ಚಿರಿ!'

ಮುಂಬಯಿ ತಾ ೧೩ – ಸಕಾಲದ ಪ್ರತಿನಿಧಿಗೆ ಫಾರ್ಮ್ ಗೃಹಸ್ಥನೊಬ್ಬನು ಒಂದು ಸಂಗತಿಯನ್ನು ಹೇಳಿದನು. ಅದನ್ನಲ್ಲಿ ಬರೆದಿದೆ. ಈ ವಿಷಯದಲ್ಲಿ ಈ ಪ್ರತಿನಿಧಿಯು ಹೆಚ್ಚಿಗೆ ವಿಚಾರಣೆ ನಡೆಸಿದ್ದಾನೆ.

ಮುಂಬಯಿಯ ಬಳಿಯಲ್ಲಿ ಮಾಲಾಡವೆಂಬಲ್ಲಿ ಒಂದು ಆಕಳು ಈಯಿತು. ಕರು ಮರಾಠಿಯಲ್ಲಿ ಮಾತಾಡುವುದು!

ಅದನ್ನು ಕಟ್ಟುವ ಪ್ರಯತ್ನವು ಎರಡು ಸಲ ನಡೆಯಿತು. ಅದರೆ ಹಗ್ಗವನ್ನು ಕೊರಳಿಗೆ ಹಚ್ಚುತ್ತಲೇ ನೆಲದ ಮೇಲೆ ಬಿದ್ದುಕೊಂಡು ಬಿಡುವುದು. ಮೊನ್ನೆ ರಾತ್ರಿ ಅದನ್ನು ಕಟ್ಟದ ಹಟ್ಟಿಯಿಂದ ಬಾಬಾ ಬಾಬಾ ಎಂಬ ನುಡಿ ಬಂತು. ಹೋಗಿ ನೋಡಲು ಆ ಹಸುಗರುವೇ ಮಾತಾಡಿತೆಂದು ಕಂಡು ಬಂತು. ಕೊಟ್ಟಿಗೆಯ ಬಾಗಿಲನ್ನು ತೆರೆಯುತ್ತಲೇ ಅ ಕರು "ನನ್ನನ್ನು ೪೦ ದಿನಗಳ ತನಕ ಕಟ್ಟಬೇಡಿರಿ. ನನ್ನ ಅಪ್ಪನನ್ನು ಗುರುವಾರ, ಶನಿವಾರ ಮತ್ತು ಏಕಾದಶಿಯ ದಿವಸ ಕಟ್ಟಬೇಡಿರಿ" ಎಂದು ಮರಾಠಿಯಲ್ಲಿ ಸ್ಪಷ್ಟವಾಗಿ ಮಾತಾಡಿತು. ಆ ಕರುವಿನ ತಾಯಿಯ ಒಂದು ಕಾಲಿಗೆ ನೋವಾಗಿದ್ದು ಮೈಯಲ್ಲಿ ಹುಳಬಿದ್ದಿವೆ. ಆ ಮಾತಾಡುವ ಕರು ತನ್ನ ತಾಯಿಯ ಬೇನೆಗೆ ಮದ್ದನ್ನು ಹೇಳಿತು. ಅದು "ಬೇವಿನ ಕೊಪ್ಪಲನ್ನೂ ನೆಲದ ಕಡಲೆ ಬೇಳೆಯನ್ನೂ ಅರೆದು ಹಚ್ಚಿದರೆ ನನ್ನ ತಾಯಿಯ ಬೇನೆ ಹೋಗುವುದೆಂದು" ಹೇಳಿತು.

'ಬಸವರಾಜ'ದಿಂದ

---

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S C No 34/1933

ಮ್ಯಾನುವೆಲ್ ಮ್ಯಾಕ್ಷಿ ಕೂಡಾ— ವಾದಿರು

ಶೀತಾರಾಮ ಒಕ್ಕಲಿತ್ತಾಯ,— ಪುತ್ತೂರು ತಾಲೂಕು ಕೆಮ್ಮಿಂಜೆ ಗ್ರಾಮದಲ್ಲಿರುವವ—ಪ್ರತಿವಾದಿ

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಯ ಸ್ಟೇಟ್‌ಮೆಂಟು ವ ಹಾಜರಾತಿಯ ಬಗ್ಗೆ ಕೂಡಾ 1933ನೇ ಇಸವಿ ಮಾರ್ಚಿ ತಾ 30ನೇ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ವ್ಯಾದೆ ಆಗಿರುವುದರಿಂದ, ಆ ವ್ಯಾದೆಗೆ ಪ್ರತಿವಾದಿಯು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಲು ತಪ್ಪಿದರೆ ಆತನನ್ನು ಶಿವಾಯ ಮಾಡಿ ದಾವೆಯನ್ನು ಏಕಪಕ್ಷ ತೀರ್ಮಾನಿಸಲಾದೀತು ಎಂಬ ಸಂಗತಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿಯದೆ

ಪುತ್ತೂರು, 6—3—33.

**K. K. Shenai,**
Pleader for Plffs.

++ ++

[illegible]
(... ಸಂಪುಟ—ಮೂಯು).

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ: ಉ. | ಅಸ್ತ |
|---|---|---|---|---|---|---|---|---|
| 11 | ಶನಿ | ೧೪ | ೬೫ | ಪುಬ್ಬಾ | ೫೭ | ೨೭ | 6 43 | 6 39 |
| 12 | ರವಿ | ೧೫ | ೩೩ | ಉತ್ತರಾ | ೫೪ | ೨೮ | 6 42 | 6.39 |
| 13 | ಸೋಮ | ೧ | ೫೩ | ಹಸ್ತ | ೫೦ | ೨೯ | 6 42 | 6 39 |
| 14 | ಮಂಗಳ | ೨ | ೪೭ | ಚಿತ್ತಾ | ೪೪ | ೧ | 6 4- | 6.39 |
| 15 | ಬುಧ | ೩ | ೪೧ | ಸ್ವಾತಿ | ೪೨ | ೨ | 6 40 | 6 40 |
| 16 | ಗುರು | ೪ | ೩೫ | ವಿಶಾಖಾ | ೩೭ | ೩ | 6 4 | 6.40 |
| 17 | ಶುಕ್ರ | ೫ | ೨೮ | ಅನುರಾಧ | ೩೩ | ೪ | 6 39 | 6.40 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ(ಕಾವು) Maximum ಹೆಚ್ಚಾದ | Minimum ಕಡಿಮೆ | Rainfall. ಮಳೆ ದಿನದ ಮಳೆ | ಜುಮಲಾ ಮಳೆ. |
|---|---|---|---|---|
| 2 | 87—9 | 74—6 | — | — |
| 3 | 88—7 | 76—5 | — | — |
| 4 | 88—8 | 76 0 | — | — |
| 5 | 88—7 | 73—8 | — | — |
| 6 | 87—7 | 75—8 | — | — |
| 7 | 88—2 | 75 3 | — | — |
| 8 | 88—7 | 75 6 | — | 119—95 |

## ಮಂಗಳೂರಿನ ಪೇಟೆ ಧಾರಣೆ.

| ಜಿನಸು | ಇಂದ ರೂ. ಆ. | ವರೆಗೆ ರೂ. ಆ. |
|---|---|---|
| ಹೊಸ ಮುಷ್ಕಿ | 4—0 | 4—10 |
| ಹೊಸ ರಾಶಿ ಅಕ್ಕಿ | 3—6 | 3—11 |
| ಮುಷ್ಕಿ | 4—0 | 4—10 |
| ಗುಡ್ಡೆ | 3 12 | 4—2 |
| ಸುಗ | 3 6 | 3—12 |
| ಉಂಡೆ ಅಕ್ಕಲ್ ಬೆಳ್ತಿಗೆ | 4—10 | 5—4 |
| ರಂಗೂನು ಬೆಳ್ತಿಗೆ ಗೋಣಿ ಒಕ್ಕೆ | 6—8 | 7— |
| ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ | 4—8 | 4—10 |
| ಗೋದಿ ಗೋಣಿ ಒಕ್ಕೆ | 10—8 | 12—8 |
| ತೊಗರಿ ಗೋಣಿ ಒಕ್ಕೆ | 9—8 | 12—0 |
| ಹುರುಳಿ ಗೋಣಿ ಒಕ್ಕೆ | 6— | 6—4 |
| ಕಡಲೆ ಗೋಣಿ ಒಕ್ಕೆ | 8—8 | 10 |
| ತೊಗರಿಬೇಳೆ ಗೋಣಿ ಒಕ್ಕೆ | 1?—8 | 20—0 |
| ಉದ್ದು ಗೋಣಿ ಒಕ್ಕೆ | 9—8 | 9 8 |
| ಹೆಸರು ಗೋಣಿ ಒಕ್ಕೆ | 8—0 | 9—0 |
| ಊರುಬೆಲ್ಲ ಖಂಡಿ ಒಕ್ಕೆ | 31—4 | 32 8 |
| ಉಪ್ಪು ಗೋಣಿ ಒಕ್ಕೆ | 4—12 | 5—0 |
| ಕೊಬ್ರಿ ಖಂಡಿ ಒಕ್ಕೆ | 65— | 72— |
| ಕೊಬ್ರಿ ಹಿಂಡಿ ಖಂಡಿ ಒಕ್ಕೆ | 21— | 22— |
| ಎಳ್ಳಿಂಡಿ ಖಂಡಿ ಒಕ್ಕೆ | 20—4 | 26—8 |
| ಕೊಬ್ರಿ ಎಣ್ಣೆ ಮಣ ಒಕ್ಕೆ | 4—4 | 6—1 |
| ಎಳ್ಳೆಣ್ಣೆ ಮಣ ಒಕ್ಕೆ | 6—12 | 7—0 |
| ಹರಳೆಣ್ಣೆ ಬುಡ್ಡಿಗೆ ಒಕ್ಕೆ | 4—7 | 9 14 |
| ತಿಮರಿನ ಸಕ್ಕರೆ ಮಣ ಒಕ್ಕೆ | 3—15 | 4—0 |
| [illegible] ಮುಂಡು | 5—8 | 5—12 |
| ಸಾಸಿವೆ ಮುಡಿ ಒಕ್ಕೆ | 4—12 | 5—0 |
| [illegible] ಖಂಡಿ ಒಕ್ಕೆ | 270—0 | 300— |
| ಕಾಳುಮೆಣಸು ಖಂಡಿ ಒಕ್ಕೆ | 170—0 | 180— |
| ಮೆಂತ್ಯೆ ಮಣ ಒಕ್ಕೆ | 27—1 | 28— |
| ಜೀರಿಗೆ ಮುಡಿ ಒಕ್ಕೆ | 2—4 | 2 6 |
| [illegible] ಖಂಡಿ ಒಕ್ಕೆ | 20—0 | 25—8 |
| [illegible] ಮಣ ಒಕ್ಕೆ | 9 10 | 10—0 |
| [illegible] ಮಣ ಒಕ್ಕೆ | 15—0 | 16—0 |
| [illegible] ಒಕ್ಕೆ | 13—4 | 13—8 |
| [illegible] ಮಣ ಒಕ್ಕೆ | 19—0 | 19—4 |
| [illegible] ಒಕ್ಕೆ | 19— | 19—4 |
| [illegible] ಖಂಡಿ ಒಕ್ಕೆ | 42—8 | 45— |
| [illegible] ಖಂಡಿ ಒಕ್ಕೆ | 295— | 300— |
| [illegible] | 150— | 205— |
| [illegible] | 140 | 145— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

## ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕಂಬಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನ** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary,**
*The Canara Public Conveyance Company Ltd Mangalore*

# Chikmagalur Public Conveyance Motor Service.

## CHIKMAGALUR

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

## ಪತ್ರವ್ಯವಹಾರ.

(ಪತ್ರಿಕೆದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದು. ಸಂ. ಸ್ವ)

### "ಕೊಪ್ಪ ತಾಲೂಕು ಯುಲ್ ಎಫ್ ಆಸ್ಪತ್ರೆ" (ಕಡೂರು ಡಿಸ್ಟ್ರಿಕ್ಟ್)

ಕೊಪ್ಪದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಶಂಕರ ಮೋಟರ್ ಕಂಪೆನಿಯ ಪ್ರೊಪ್ರೈಟರ್ ಆಗಿರುವ ಶ್ರೀಯುತ ಯಂ ಯನ್ ದ್ಯಾವೇಗೌಡರವರು ಹಿಂದೆ ಇದ್ದ ಲೋಕಲ್ ಫಂಡ್ ಆಸ್ಪತ್ರೆಯನ್ನು ಬದಲಾಯಿಸಿ ಅವರ, ಗತಿಸಿದ ಮಾತುಶ್ರೀಯರ ಹೆಸರಿನಲ್ಲಿ ಹೆಂಗಸರಿಗೆ ಒಂದು ಆಸ್ಪತ್ರೆಯನ್ನೂ ಮತ್ತು ರೋಗಿಗಳನ್ನು ಮಲಗಿಸಲು ಒಂದು ವಾರ್ಡನ್ನೂ ಸಹ ಧರ್ಮಾರ್ಥವಾಗಿ ಕಟ್ಟಿ ಕೊಟ್ಟಿರುವರು ನಮ್ಮ ಶ್ರೀಮನ್ ಮೈಸೂರ್ ಮಹಾರಾಜಾ ಸರಕಾರದವರು ಈ ಆಸ್ಪತ್ರೆಯಲ್ಲಿ ಕೆಲಸವನ್ನು ಮಾಡಲು ವರ್ಗಾಯಿಸಿದ ಲೇಡೀ ಡಾಕ್ಟರವರು ತುಂಬಾ ಅನುಭವವುಳ್ಳವರಾಗಿರುವರಲ್ಲದೆ ಆಸ್ಪತ್ರೆಗೆ ಬಂದ ರೋಗಿಗಳನ್ನು ತುಂಬಾ ಮುತುವರ್ಜಿಯನ್ನು ವಹಿಸಿ ಅವರ ಕಾಹಿಲೆಯನ್ನು ಗುಣಪಡಿಸಿ ಈ ತಾಲೂಕಿನಲ್ಲಿ ಒಳ್ಳೆ ಹೆಸರನ್ನು ಸಂಪಾದಿಸಿರುವರು ನಮ್ಮ ಶ್ರೀಮಾನ್ ಮಹಾರಾಜಾ ಸರಕಾರದವರು ಈ ಲೇಡೀ ಡಾಕ್ಟರನ್ನು ಇನ್ನು ಕೆಲವು ಸಂವತ್ಸರಗಳ ವರೆಗೆ ಬೇರೆ ಕಡೆ ವರ್ಗಾಯಿಸದಿದ್ದ ಭಾಗದಲ್ಲಿ ಬಹಳ ತರವಾದ ಕಾಯಿಲೆಗಳಿಂದ ನರಳುವ ಈ ಮಲೆನಾಡಿನ ರೈತಾಪಿ ಜನರಿಗೆ ತುಂಬಾ ಅನುಕೂಲಪಡಿಸಿ ಕೊಟ್ಟಂತಾಗುವುದರಲ್ಲಿ ಯಾವ ಸಂದೇಹವೂ ಇಲ್ಲ

ಜಗದ್ರಕ್ಷಕನಾದ ಪರಮಾತ್ಮನು ಈ ಲೇಡೀ ಡಾಕ್ಟರವರಿಗೆ ದೀರ್ಘಾಯುಷ್ಯವನ್ನು ಮತ್ತು ಐಶ್ವರ್ಯವನ್ನು ದಯಪಾಲಿಸಲಿ

ಒಬ್ಬ ರೈತ

### ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ.

ಅಯ್ಯಾ ಸ್ವದೇಶಾಭಿಮಾನಿಯೇ

ಕಾರ್ಕಳ ತಾಲೂಕು ಬೋರ್ಡಿನವರು ಈಗ ಕೆಲವು ವರ್ಷಗಳಿಂದ ನಡಿಸಿಕೊಂಡು ಬರುವ ನಿಡ್ಡೋಡಿ ಕಡಂದಲೆ ಮತ್ತು ಸಿಟ್ಟಿ ಹಾಯರ್ ಎಲಿಮೆಂಟರಿ ಶಾಲೆಗಳನ್ನು ಬರುವ ಎಪ್ರಿಲ್ ೧ರ ಆರಂಭಕ್ಕೆ ಮುಚ್ಚಿಬಿಡುತ್ತಾರೆಂಬ ಸುದ್ದಿ ಬೇರೆ ಎಲ್ಲಾ ತಾಲೂಕು ಬೋರ್ಡಿನವರು ಹಾಯರ್ ಎಲಿಮೆಂಟರಿ ಶಾಲೆಗಳನ್ನು ಹೆಚ್ಚಿಸುತ್ತಿರುವಾಗ ಇಲ್ಲಿ ಮಾತ್ರ ಹಣದ ಅಭಾವ ಇದೆ

ಮಾನ್ಯ ತಾಲೂಕು ಬೋರ್ಡಿನವರು ಈ ಸಲ ಹಲವು ತರಬೇತಾಗದ (untrained) ಉಪಾಧ್ಯಾಯರನ್ನು ತೆಗೆಯುತ್ತಾರಾಗಿ ಕೇಳುತ್ತೇನೆ ಮತ್ತು ಉಳಿದ ಉಪಾಧ್ಯಾಯರಿಗೆ ಮುಂಬರುವ ಸಂಬಳದ ಸ್ಕೇಲು ಮಾಡುತ್ತಾರಾಗಿ ತಿಳಿಯುತ್ತೇನೆ ಇದರಿಂದ ಹಲವರಿಗೆ ಸುಖ ನೊಂದು ಕಂಡು ಬಂದರೂ (ಪಾಪದ) ಕೆಲವರಿಗೆ ಮಾತ್ರ ಪ್ರಾಣ ಸಂಕಟಕ್ಕೆ ಬಂದಂತಾಗಿದೆ! ಕಾರಣ ಇಷ್ಟೆ ಇನ್ನು ಮೇಲೆ ಲೋವರ್ ಟ್ರೈಂಡ್ ಹಾಯರ್ ಟ್ರೈಂಡ್ ಮತ್ತು ಸೆಕೆಂಡರಿ ಟ್ರೈಂಡ್ ಎಂಬ ಉಪಾಧ್ಯಾಯರಿಗೆ ಭೇದವೇ ಇಲ್ಲ ಏಕೆಂದರೆ ಈ ಮೂರು ಗ್ರೇಡಿನವರಿಗೂ ಒಂದೇ ಸಂಬಳ ಇದು ನ್ಯಾಯವೇ? ಸೆಕೆಂಡರಿ ಟ್ರೈಂಡ್ ಆದ ಎಲ್ಲಾ ಉಪಾಧ್ಯಾಯರಿಗೆ ಸಂಬಳ ಹೆಚ್ಚಿಸಿ ಮುಂಬರುವ ಸ್ಕೇಲು ಮಾಡುತ್ತಿದ್ದರೆ ಒಂದು ರೀತಿ ಇತ್ತು ಹಾಗೆ ಮಾಡದೆ ಹಾಯರ್ ಮತ್ತು ಲೋವರ್ ಗ್ರೇಡ ಉಪಾಧ್ಯಾಯರಿಗೆ ಮಾತ್ರ ಮೊದಲಿದ್ದ ಸಂಬಳವೇ ಸೆಕೆಂಡರಿ ಗ್ರೇಡಿನ (ಅದರಲ್ಲಿಯೂ ೩ ೪ ವರ್ಷ ಸರ್ವೀಸು ಇದ್ದ) ಉಪಾಧ್ಯಾಯರಿಗೆ ಈಗ ಇರುವ ಸಂಬಳಕ್ಕಿಂತ ಇನ್ನೂ ಸಹಾ ಕಡಿಮೆ ಮಾಡಿದರೆ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕಿದಂತಾಗಲಿಲ್ಲವೇ?

ತಾಲೂಕು ಬೋರ್ಡ್ ಉಪಾಧ್ಯಾಯ

### ಭಜನಾ ಮಂಗಲೋತ್ಸವ

ಕಳೆದ ಫೆಬ್ರವರಿ ತಾ ೨೭ನೆಯ ಸೋಮವಾರ ಸುರತ್ಕಲ್ಲ ಕೃಷ್ಣಾಪುರ ಶ್ರೀ ಕೃಷ್ಣ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಬಾಲಕರ 'ಗ್ರಾಮಸಂಚಾರ ಭಜನೆ'ಯ ಮಂಗಲೋತ್ಸವ ಸಮಾರಂಭವು ಕೃಷ್ಣಾಪುರ ಮಠದ ಮೇನೇಜರರಾದ ಬ್ರಹ್ಮಶ್ರೀ ದಾಸಾಚಾರ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ಕಾರ್ಯಾರಂಭದಲ್ಲಿ ವರದಿ ವಾಚನವೂ, ವಿದ್ಯಾರ್ಥಿಗಳಿಗೆ ಇನಾಮು ಹಂಚೋಣವೂ ಆದ ಮೇಲೆ ಮಂಗಳೂರ ಬ್ರಹ್ಮಶ್ರೀ ಚಿಂತಾಮಣಿ ಭಟ್ಟರಿಂದ ಸಂಕೀರ್ತನೋಪಾಖ್ಯಾನ ವೆಂಬ ಹೃದಯಂಗಮವಾದ ಹರಿಕಥೆಯು ನಡೆಯಿತು ತರುವಾಯ ಶ್ರೀ ಎಸ್ ಆರ್ ಹೆಬ್ಬಾರರು, ಶಾಲಾಧ್ಯಾಯರು ಕೈಕೊಂಡಿರುವ ಕಾರ್ಯವನ್ನು ಶ್ಲಾಘಿಸಿ, ಭಜನೆಯು ಪ್ರಾಶಸ್ತ್ಯ ಉಪಾಧ್ಯಾಯರ ಮತ್ತು ಹೆತ್ತವರ ಕರ್ತವ್ಯವೇ ಮೊದಲಾದುವುಗಳನ್ನು ವಿವರಿಸಿ, ಕೊನೆಗೆ ಗ್ರಾಮಸ್ಥರಾದ ಹೆತ್ತವರ ಚಿತ್ತವನ್ನು ಶಾಲೆಯ ಕಡೆಗೆ ಸೆಳೆದು ಕೊಳ್ಳುವುದಕ್ಕೂ, ಜನಸಾಮಾನ್ಯರಲ್ಲೂ ಕೂಡ ಭಕ್ತಿ, ಶ್ರದ್ಧಾ, ನಿಯಮ ಇತ್ಯಾದಿಗಳನ್ನು ಬೆಳೆಗೊಳಿಸುವುದಕ್ಕೂ ಸುಲಭ ಸಾಧ್ಯವಾಗಿರುವ ಇವರ ಕಾರ್ಯಗಳು ಇತರ ಹಳ್ಳಿಯ ಪ್ರಾಥಮಿಕ ಶಾಲೆಗಳಲ್ಲಿ ಅನುಸರಿಸಲು ಅರ್ಹವಾಗಿವೆ – ಎಂಬಿತ್ಯಾದಿ ಬೋಧಪ್ರದ ಭಾಷಣದಿಂದ ಸಭೆಯನ್ನು ಸಂತೋಷಗೊಳಿಸಿದರು. ಬಳಿಕ ಇ. ವಿ. ಶಾಲಾಧ್ಯಾಪಕರಾದ ರಾ|| ಶ್ರೀ|| ಎ. ನಾರಾಯಣ ರಾಯರು ಚಲೋದಾಗಿ ಪ್ರಶಂಸಾದಿ ಪ್ರೋತ್ಸಾಹಿಸಿದರು ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲಾಧ್ಯಾಪಕರನ್ನೂ, ಬಾಲಕರ 'ಭಜನಾ ಸಂಘ'ದ ಕಾರ್ಯಗಳನ್ನೂ ಕೊಂಡಾಡಿ, ಇವರುಗಳ ಉದ್ದೇಶವು ಸಿದ್ಧಿಸಿ, ಶಾಲೋನ್ನತಿ–ಗ್ರಾಮೋನ್ನತಿಯಾಗುವಂತೆ ಭಗವಾನ್ ಶ್ರೀ ಕೃಷ್ಣನು ಅನುಗ್ರಹಿಸಲೆಂದೂ, ಭಜನಾ ಸಂಘಕ್ಕಾಗಿ ೫ ರೂಪಾಯಿಗಳನ್ನಿತ್ತೂ ಹರಸಿದರು ಕೊನೆಗೆ ಪದ್ಧತಿಯಂತೆ ಶಾಲಾಧ್ಯಾಪಕ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಸಭಾಧ್ಯಕ್ಷರಿಗಳೂ ಸಭಿಕರಿಗೂ ಧನ್ಯವಾದಗಳನ್ನರ್ಪಿಸಲು, ಭಜನೆಯೊಂದಿಗೆ ಪೂಜೆಯಾಗಿ ಸಭಿಕರಿಗೆ ಪುಷ್ಪ, ತಾಂಬೂಲ, ಫಲಾಹಾರಾದಿಗಳ ಸತ್ಕಾರಗಳಿಂದ ಮಂಗಲೋತ್ಸವವಾಗಿ ಮಂಗಲವಾಯಿತು

ಪ್ರತ್ಯಕ್ಷದರ್ಶಿ

---

## Canara Bank, Ltd , Mangalore
## ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.
## ನೋಟೀಸು.

ಇದೇ ಫೆಬ್ರವರಿ ತಿಂಗಳ ತಾರೀಕು 24ನೇ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಕೆಳಗೆ ಹೆಸರು ಕಾಣಿಸಿದವರು ಅಡವಿಟ್ಟ ನಗಗಳನ್ನು ತಾರೀಕ 3ನೇ ಮಾರ್ಚ 1933ರಲ್ಲು, ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹೆಚ್ಚು ಬಂದ ಐವೇಜ ಗಳನ್ನು ಬ್ಯಾಂಕಿಗೆ ಬರಬೇಕಾದ ಅಸಲು ಬಡ್ಡಿ ವಗೈರೆ ವಜಾ ಮಾಡಿ, ಉಳಿದ ಐವೇಜನ್ನು ಸದ್ರಿಯವರು ಈ ರಕ್ಕೆ ಅವಮಾನತ್ತು ಇಟ್ಟದ್ದು ತ್ವರ್ಯದಲ್ಲಿಯೇ ಕೊಂಡು ಹೋಗಬೇಕಾಗಿಯೂ ಅದಕ್ಕೆ ಎಷ್ಟು ಟ್ಯಾಕ್ಸ್ ಕಟ್ಟಲ್ಲವಾಗಿದ ಈ ಮೂಲಕ ತಿಳಿಸಲಾಗುತ್ತದೆ

ಲೋನ್ ನಂಬ್ರ ಮತ್ತು ಅಸಾಮಿಯ ಹೆಸರು ಮತ್ತು ವಿಳಾಸ–2741/31 ಮೂಸ್ನೂರು ಶಿವರಾಮಯ್ಯ ವಾಸುದೇವಯ್ಯನವರ ಮಗ ಶ್ರೀ ಕುಳೇಶ್ವರ ದೇವಸ್ಥಾನದ ಬಳಿ ಮಂಗಳೂರು ಏಲಂ ಮಾಡಿ ಹುಟ್ಟಿಬಂದ ಹಣ–ರೂ 34 ಬ್ಯಾಂಕಿಗೆ ಬರಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ 36–5–8 ಅಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ 3–10–4

ಲೋನ್ ನಂಬ್ರ ಮತ್ತು ಅಸಾಮಿಯ ಹೆಸರು ಮತ್ತು ವಿಳಾಸ–992/31 ಕೊಸೆಸ್ ಕಂಚಾರಾ ಬಾಯಿ ಡಿ'ಸಿಲ್ವರ ವಿಧವೆ C/o ಎಲ್ ಪಿ. ಪೆರಿಸ್ ಕುಡುಬುಗೆರೆ ಸಂಗಮೇಶ್ವರ ಪೋಸ್ಟ್ ಕಡೂರು ಡಿಸ್ಟ್ರಿಕ್ಟ್ ಏಲಂ ಮಾಡಿ ಹುಟ್ಟಿ ಬಂದ ಹಣ–ರೂ 161 ಬ್ಯಾಂಕಿಗೆ ಬರಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂಪಾಯಿ 80–14–0 ಅಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂಪಾಯಿ 80–2–0

ಲೋನ್ ನಂಬ್ರ ಮತ್ತು ಅಸಾಮಿಯ ಹೆಸರು ಮತ್ತು ವಿಳಾಸ 993/31 ಕೊಸೆಸ್ ಕಂಚಾರಾ ಬಾಯಿ, ಡಿ'ಸಿಲ್ವರ ವಿಧವೆ C/o ಎಲ್ ಪಿ ಪೆರಿಸ್ ಕುಡುಬುಗೆರೆ ಸಂಗಮೇಶ್ವರ ಪೋಸ್ಟ್ ಕಡೂರು ಡಿಸ್ಟ್ರಿಕ್ಟ್ ಏಲಂ ಮಾಡಿ ಹುಟ್ಟಿ ಬಂದ ಹಣ–ರೂ 381 ಬ್ಯಾಂಕಿಗೆ ಬರಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ 268–8–6 ಅಮಾನತ್ತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ 112–7–6

ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಹಾಜರು ಕೊಡತಕ್ಕದ್ದು ತಿಳಿದಿರುವುದು.

Office of the Bank Mangalore 3–3–1933 — **M Mukund Kini,** *Asst Secretary*

---

## ನೋಟೀಸು.

### ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ-

O. S No. 367/1931 R. E. A. No 1019/1932

ಪಾಂಗಾಳ ಅಣ್ಣಪ್ಪ ನಾಯಕ–ಅರ್ಜಿದಾರ

ಅತೀಜಮ್ಮ ಬೀಬಿ ಕೂಡಾ–ಎದ್ರಿರು

ಸದ್ರಿ ಅಮಲ್ದಾರಿ ಅರ್ಜಿಯು ತನ್ನ ಬಗ್ಗೆ ತಾ 28–3–33ಕ್ಕೆ ಇಡುವದಾಗಿದೆಯೆಂತಲೂ, ಸದ್ರಿ ಅರ್ಜಿ ಕುರಿತು ಏನಾದರೂ ಆಕ್ಷೇಪ ಇದ್ದರೆ ಆ ದಿವಸ ಕೋರ್ಟು ಮುಂದೆ ಹಾಜರಾಗಿ ಉಪಹರಿಸತಕ್ಕದ್ದೆಂತಲೂ ಸದರೀ ಅರ್ಜಿಯ 4ನೇ ಎದ್ರಿಯಾದ ಮೂಡಬೆಟ್ಟು ಗ್ರಾಮದ ಉಸ್ಮಾಂಸಾ ಮೈಲಾರ ಬ್ಯಾರಿ ವಿಧವೆ ಖತೀಜಮ್ಮ ಬೀಬಿ ಇವರಿಗೆ ಈ ಮೂಲಕ ತಿಳಿಸಲಾಗುತ್ತದೆ

ಉಡುಪಿ ೨–೩–೩೩ — **P Panduranga Nayak,** Counsel for Petitioner

---

### ಕುಂದಾಪುರ ಡಿ ಮು- ಕೋರ್ಟನಲ್ಲಿ

S C No 40/'33

ಎಚ್ ಲಕ್ಷ್ಮೀನಾರಾಯಣ ಕಾಮತ್–ವಾದಿ

ಮತ್ತು

ಅಹಮ್ಮದ್ ಬ್ಯಾರಿ–ಪ್ರತಿವಾದಿ

ಪ್ರತಿವಾದಿಯು ವಾದಿಗೆ ತಾ 17–1–30ರಲ್ಲಿ ರೂ 128–8–0ಕ್ಕೆ ಬರಕೊಟ್ಟ ಡಿಮಾಂಡ ನೋಟಿನ ಪ್ರಕಾರ ಬರತಕ್ಕ ಅಸಲು ಬಡ್ಡಿ ಹಣಗಳ ಬಗ್ಗೆ ದಾಖಲು ಮಾಡಿದ ಮೇಲೆ ಕಾಣಿಸಿ ದಾವೆಯು ತಾ 28–3–33ಕ್ಕೆ ತನಿಖೆಗೆ ಇಡೋಣ ಗಿಯದೆ ಎಂತ ಈ ಮೂಲಕ ತಿಳಿಯಪಡಿಸಿಯದೆ.

ಕುಂದಾಪುರ ೨–3–33 — **G Sanjiva Rao,** B A L L B, *Vakil for Plaintiff*

---

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ

S C No 600/1932

ಅನಂತಭಟ್ಟ, ತೆಪ್ಪದಂಗಡಿ ವೀರೇಶ್ವರ ಭಟ್ಟ ಮಗ–ಹತ್ಯಡ್ಕ ಗ್ರಾಮಸ್ಥ–ವಾದಿ

ಅಚ್ಯುತ ಭಟ್ಟ, ಮೂಲೆ ಗಣಪತಿ ಭಟ್ಟ ಮಗ ಮುಂಡಾಜೆ ಗ್ರಾಮದಲ್ಲಿರುವವ–ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಯ ಹಾಜರಾತಿಯ ಬಗ್ಗೆ ಪೋಸ್ಟ್ ಪೆಂಡು ಆಗ್ಯ ಕೂಡಾ 1933ನೇ ಇಸವಿ ಮಾರ್ಚ ತಿಂಗಳ 20ನೇ ತಾರೀಕಿನ ಹಗಲು ಹತ್ತು ಗಂಟೆಗೆ ಸದ್ರಿ ಕೋರ್ಟನಲ್ಲಿ ವಿಚಾರ ಆಗಲಿರುವದರಿಂದ, ಆ ವಾಯಿದೆಗೆ ಸದ್ರಿ ಪ್ರತಿವಾದಿಯು ಸದ್ರಿ ಕೋರ್ಟು ಮುಂದೆ ಹಾಜರಾಗಿ ಉಪಹರಿಸಲಿಕ್ಕೆ ತಪ್ಪಿದರೆ ದಾವೆಯನ್ನು ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾಗುವದೆಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಿದೆ

ಪುತ್ತೂರು, 4–3–1933 — **K K. Shenai,** Pleader for Plff

---


# WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur. (4) Mangalore, Kolar

For terms and other particulars please apply to—

*The Divisional Manager,*
The South Indian General Assurance Co. Ltd
64, 3rd Cross Road, Srirampur Extn.
Malleswaram Post, BANGALORE

OR

*The Managing Agents,*
The S I. G. A. Co. Ltd.
55 Poonamallee High Road, Kilpauk, MADRAS

ನಾಳೆ— ಈ ದಿನ—
ನಿಮಗೆ ಬೇಕಾದುದು!

## ರಬ್ಬರ್ ಮೊಹರುಗಳು

ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು, ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳಿ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲಾಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ

ವಿ. ಸೂ: —ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು

**ಹೆಡ್ ಆಫೀಸು:—**

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No 2 ಬಲ್ಮಠ ರಸ್ತೆ, ಮಂಗಳೂರು,
ದ ಕನ್ನಡ



## "ಜಯಕರ್ನಾಟಕ"

ಕನ್ನಡನಾಡಿನ ಸರ್ವತೋಮುಖ ಉನ್ನತಿಯನ್ನೇ ಗುರಿಯಾಗಿಟ್ಟುಕೊಂಡ ಅಖಿಲಕರ್ನಾಟಕದ ಏಕಮಾತ್ರ ಪ್ರಮುಖ ಮಾಸಪತ್ರಿಕೆ ಪರದೇಶದಲ್ಲಿಯ ಮಾನ್ಯ ಕನ್ನಡಿಗರ ಲೇಖನಗಳೂ, ಕತೆ, ಕವಿತೆ, ಹರಟೆ, ಜನಪದಸಾಹಿತ್ಯ, ವಿನೋದ ಮೊದಲಾದುವುಗಳ ಮೇಲೆ ಕನ್ನಡ ವಿದ್ವನ್ಮಣಿಗಳ ಲೇಖನಗಳೂ, ಕನ್ನಡ ಚಿತ್ರಕಾರರ ಚಿತ್ರಗಳೂ ಬರುತ್ತಿವೆ ಪ್ರತಿ ತಿಂಗಳೂ ಕ್ರೌನ ಆಕಾರದ ೮೦ ಪುಟಗಳು ಮುದ್ರಿತವಾದ ಅಚ್ಚು ಪ್ರತಿ ತಿಂಗಳೂ ಮೊದಲನೆಯ ತಾರೀಖಿಗೆ ಹೊರಡುವ ಈ ಪತ್ರಿಕೆಗೆ ಚಂದಾದಾರರಾಗುವದು ಕನ್ನಡಿಗರ ಕರ್ತವ್ಯ ಜಾಹೀರಾತುದಾರರಿಗೆ ಉತ್ತಮ ಸ್ಥಾನ

**ಹಿಂದುಸ್ಥಾನ ರೂ ೩–೮–೦ ಪರದೇಶ ೬–೦–೦**

### ಜಯಕರ್ನಾಟಕ ಗ್ರಂಥಮಾಲೆ

ಕನ್ನಡಿಗರಲ್ಲಿ ಹೊಸ ಬಗೆಯ ವಾಚನಾಭಿರುಚಿಯನ್ನು ಹುಟ್ಟಿಸುವುದೇ ಇದರ ಉದ್ದೇಶ ವರ್ಷದಲ್ಲಿ ಕತೆ, ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಮತ್ತು ಲಲಿತ ಶೈಲಿಯ ಆರು ಪುಸ್ತಕಗಳಿಗೆ ಚಂದಾ ಹಣವು ಬರೀ ರೂ ೩–೪–೦

ಕ್ಯಾಟಲಾಗಿಗಾಗಿ ಬರೆಯಿರಿ ಎಲ್ಲ ಕಡೆಗೂ ಏಜಂಟರು ಬೇಕು

ಕಾರ್ಯದರ್ಶಿ

**ಜಯಕರ್ನಾಟಕ ಕಾರ್ಯಾಲಯ, ಧಾರವಾಡ**



## S U N & CO

*Choukhamba Benares City*

**ಮೂರು ಇನಾಮುಗಳು**

ನಮ್ಮಲ್ಲಿ ಕಾಶ್ಮೀರ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2–8–0 ಯಿಂದ 3–12–0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3–8–0, 4–8–0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4–8–0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಸೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಸೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಕ್ಯಾಮೆರ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ—

**ತಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಸ್ (ಕಾಶಿ)**



## ಕೇಸರಿಯವರ

# ಲೋಧ್ರ

### ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ,ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ ೩–೦–೦
ಸಣ್ಣ ಬಾಟಲ್ ೬ ಔನ್ಸ್ ರೂ ೧–೧೦–೦

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

ಕೇಸರಿ ಕುಟೀರಂ.
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟಾಕಿಸ್ಟ್ಸ್— **ಪೊಪ್ಯುಲರ್ ಸ್ಟೋರ್ಸ್,** ರಥಬೀದಿ ಮಂಗಳೂರು **ಷಾ ಕಂಪೆನಿ,** ಹಂಪನಕಟ್ಟೆ, ಮಂಗಳೂರು



**The Zandu Pharmaceutical Works, Ltd , Bombay,14**

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

## 'ಝಂಡು ಚ್ಯವನಪ್ರಾಶ ಲೇಹವು.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!**

ಋಷಿ ಆಮಲಕ ಇನ್ನು ಇತರ ವನೌಷಧಿಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ ಉಬ್ಬಸ ನಾನಾ ವಿಧವಾದ ದುರ್ಬಲತ್ವ ಕೆಮ್ಮು ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ವೃದ್ಧರನ್ನು ತರುಣರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/– ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು —ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು.—ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು —ಷಾ ಕಂಪೆನಿ ಡೈಮಂಡ್ ಬಿಲ್ಡಿಂಗು
ಸಿರಸಿ ಏಜಂಟರು —ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು —ಟಿ ಸಿ ನಟರಾಜ್ ಅಂಡ್‌ಕೊ, ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು —ಬಿ ಪ್ರೊಷಟ್‌ಲಾಲ್ ಕಂಪೆನಿ ಚಿಕ್ಕಪೇಟೆ
ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



## ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವಮಾನದ ಅಮೃತಾ ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನೀ ಔಷಧಗಳ ರಾಜ" "ಸರ್ವ ಸಿದ್ಧೌಷಧ"
"ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗ ಹಿತಕಾರಿಯೂ ಜೀವನಾಧಾರವೂ ಆದ

# ಜೀವಾಮೃತವೇ.

ಇದು ಪಂಡಿತ ಡಿ ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ ೧೯೦೮ನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ ನರಗಳ ದೌರ್ಬಲ್ಯವು ದುಷ್ಕೃತ್ಯದ ಹೀನತೆ ಪಡೆದು, ಆಯಾಸ ರಕ್ತ ಹೀನತೆ ನರಗಳ ಅಶಕ್ತತೆ ಮಿದುಳು ಚೈತನ್ಯಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವುದು. ಇತ್ಯಾದಿಗಳಿಂದ ನರಳುತ್ತಿದ್ದಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ಮೊದಲನೇ ಸಾರಿ ಸೇವಿಸಲು ಪ್ರಾರಂಭಿಸುವಾಗಲೇ ಅದರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡು ಸೈಜುಗಳಲ್ಲಿ ರೂ ೩–೪–೦ ಮತ್ತು ರೂ ೧–೧೦–೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಆಯುರ್ವೇದಾಶ್ರಮಂ, ಪೋ ಬಾಕ್ಸು ನಂ. ೩೮೭, ಮದ್ರಾಸು.

ಸೋಲ್ ಏಜಂಟರು— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೦ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು P. No. 104

# ನಾವು ಯಾರು?
## ಆರ್ಯರೋ ಹಿಂದುಗಳೋ?

ಲೇಖಕ — ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

'ರಾಜಾ ರಾಧಾಕಾಂತ ದೇವ ಬಹದ್ದೂರ್" ಎಂಬವರು ಆರ್ಯ ಸಮಾಜಿಕರಲ್ಲದಿದ್ದರೂ ಈ ಕುರಿತು ("ಆರ್ಯ ಶಬ್ದದ ಕುರಿತು) ಅವರು ತನ್ನ "ಶಬ್ದ ಕಲ್ಪದ್ರುಮ"ವೆಂಬ ಕೋಶದಲ್ಲಿ ಉತ್ತಮವಾದ ಈ ಅರ್ಥವನ್ನು ವಿವರಿಸಿದ್ದಾರೆ ಅದನ್ನೇ ವಾಚಕರ ಮುಂದಿಡುವುದು ಯೋಗ್ಯವಾಗಿರುತ್ತದೆ

"ಆರ್ಯ — ಅರ್ತುಂ ಪ್ರಕೃತಮಾ ಚರಿತುಂ ಯೋಗ್ಯಃ ಶಾಸ್ತ್ರೋಕ್ತವಾದ ಉತ್ತಮ ಮಾರ್ಗದಲ್ಲಿ ನಡೆಯುವವನು, "ಪೂಜ್ಯಃ ಶ್ರೇಷ್ಠ ಇತಿ ಶಬ್ದ ರತ್ನಾವಲಿ" ಶಬ್ದ ರತ್ನಾವಲಿ ಎಂಬ ಸಂಸ್ಕೃತ ಕೋಶದಲ್ಲಿ ಪೂಜ್ಯ ಮತ್ತು ಶ್ರೇಷ್ಠವೆಂಬ ಅರ್ಥವಿದೆ "ಸಜ್ಜನ ಇತ್ಯಜಯ" "ಅಜಯ"ವೆಂಬ ಕೋಶಕಾರರು ಆರ್ಯ ಶಬ್ದಕ್ಕೆ "ಯಾರ ಸಿದ್ಧಾಂತವು ವ್ಯವಹಾರ ಮತ್ತು ಬುದ್ಧಿ ಸಂಗತವಾಗಿರುವುದೋ, ಯಾರ ವಿಶ್ವಾಸ ಮತ್ತು ಆಚರಣೆಯಲ್ಲಿ ಪರಸ್ಪರ ಭೇದವಿಲ್ಲವೋ ಅವರೇ ಆರ್ಯರು" ಎಂಬುದಾಗಿ ವಿವರಿಸಿದ್ದಾರೆ

ಮಾನ್ಯ — ಉದಾರ ಚರಿತಃ, ಶಾಂತ ಚಿತ್ತಃ, ನ್ಯಾಯ ಪಥಾವಲಂಬೀ, ಪ್ರಕೃತಾಚಾರ ಶೀಲ, ಸತತ ಕರ್ತವ್ಯ ಕರ್ಮಾನುಷ್ಠಾತಾ, ಯದುಕ್ತಮ್ "ಕರ್ತವ್ಯಮಾಚರನ್ ಕಾರ್ಯಮ್ ಅಕರ್ತವ್ಯಮನಾಚರನ್। ತಿಷ್ಠತಿ ಪ್ರಕೃತಾಚಾರೇ ಸಂತು ಆರ್ಯ ಇತಿ ಸ್ಮೃತಃ॥" ಧಾರ್ಮಿಕ — ಧರ್ಮ ಶೀಲಃ। ಯಥಾಹ ಮನುಃ ಆರ್ಯ ರೂಪಮಿವಾ ನಾರ್ಯ ಕರ್ಮಭಿ ಸ್ವೈರ್ವಿ ಭಾವ ಯೇತ॥ ಮನು ೧೦। ೧೭.

ತಾತ್ಪರ್ಯ — ೧ ಮಾನ್ಯ — ತನ್ನಲ್ಲಿರುವ ಉತ್ತಮ ಗುಣಗಳಿಂದಾಗಿ ಸನ್ಮಾನಕ್ಕೆ ಯೋಗ್ಯನಾದವನು ೨ ಉದಾರ ಚರಿತ — ಯಾರ ಚರಿತ್ರೆಯು ಉದಾರವಾಗಿರುತ್ತದೋ ಯಾರು ಅತ್ಯಂತ ಉದಾರಪೂರ್ವಕವಾದ ವ್ಯವಹಾರವನ್ನು ಮಾಡುತ್ತಾನೋ, ಯಾರ ಮನಸ್ಸು ಸಂಕುಚಿತವಾಗಿರದೆ ದೀನರೂ ದುಃಖಿಗಳೂ ಆದ ಜನರಿಗೆ ಸಹಾಯವೀಯುವ ರೀತಿಯಲ್ಲಿ ವಿಶಾಲವಾಗಿರುವುದೋ ಅಂಥವನು ಉದಾರ ಚರಿತ್ರನು ೩ ಯಾರ ಚಿತ್ತವು ಶಾಂತಿಮಯವಾಗಿರುತ್ತದೋ ಆತನು ಶಾಂತ ಚಿತ್ತನು ೪ ಸದಾ ಸಮಯ ನ್ಯಾಯಪಥದಲ್ಲಿ ನಡೆಯುವವನೂ ಅನ್ಯಾಯವನ್ನು ನಾಶಮಾಡುವವನೂ ನ್ಯಾಯ ಪಥಾವಲಂಬಿಯಾಗಿರುತ್ತಾನೆ ೫ ಯಾರ ಆಚಾರ ವಿಚಾರವು ಪ್ರಾಚೀನ ಶಾಸ್ತ್ರಗಳಿಗೂ ಪ್ರಕೃತಿ ನಿಯಮಗಳಿಗೂ ವಿರೋಧವಾಗಿರುವುದಿಲ್ಲವೋ ಅವನು ಪ್ರಕೃತಾಚಾರ ಶೀಲನು ೬ ಯಾವಾತನು ಯೋಗ್ಯವಾದ ಮತ್ತು ಕರ್ತವ್ಯ ಕರ್ಮವನ್ನು ಎಡೆಬಿಡದೆ ಮಾಡುತ್ತಾನೋ ಆತನು "ಸತತ ಕರ್ತವ್ಯ ಕರ್ಮಾನುಷ್ಠಾತನೆನ್ನಲ್ಪಡುತ್ತಾನೆ ಈ ಎಲ್ಲಾ ವಿಧಗಳಲ್ಲಿ ಇರುವವರನ್ನೇ ಪ್ರಾಚೀನ ಕಾಲದ ಋಷಿ ಮುನಿಗಳು ಆರ್ಯರೆಂದು ಕರೆಯುತ್ತಿದ್ದರು ಆರ್ಯ ಶಬ್ದವು ಎಷ್ಟು ಮಹತ್ವಪೂರ್ಣವಾಗಿದೆ ಎಂಬುದು ನಮಗೆ ಮೇಲಿನ ವಿವರಣೆಗಳಿಂದ ಗೊತ್ತಾಗುತ್ತದೆ ಈ ಶಬ್ದದ ಸರಿಯಾದ ಅರ್ಥವನ್ನು ನಾವು ಚೆನ್ನಾಗಿ ತಿಳಿದುಕೊಂಡರೆ ನಮ್ಮ ಜೀವನವು ಸಹ ಅತ್ಯಂತ ಮಹತ್ವಪೂರ್ಣವಾಗುವುದು

ಭಾರತೀಯ ಜನಾಂಗವನ್ನು ಮೇಲೆ ವಿವರಿಸಿದಂಥಾ ಸದ್ಗುಣಗಳಿಂದ ತುಂಬಿದ ಆರ್ಯ ಜನಾಂಗವನ್ನಾಗಿ ಮಾಡುವ ಉದ್ದೇಶದಿಂದಲೇ "ಸ್ವಾಮಿ ದಯಾನಂದ ಸರಸ್ವತಿ"ಯವರು ಆರ್ಯ ಸಮಾಜವನ್ನು ಸ್ಥಾಪಿಸಿದರು ಆದುದರಿಂದಲೇ ಅವರು ನಮಗೆ ಹಿಂದೂ, ಹಿಂದೀ, ಹಿಂದುಸ್ಥಾನ ಇತ್ಯಾದಿ ಹೆಸರುಗಳನ್ನು ಕೊಡದೆ ಆರ್ಯ, ಆರ್ಯಾವರ್ತ, ಆರ್ಯಭಾಷೆ ಇತ್ಯಾದಿ ಸ್ಫೂರ್ತಿಯುಕ್ತ ಮತ್ತು ಉತ್ತಮವಾದ ಶಬ್ದಗಳನ್ನೇ ಉಪಯೋಗಿಸಿರುವರು ಏಕೆಂದರೆ ಹೆಸರಿನಿಂದಲೂ ಮನುಷ್ಯನ ಮೇಲೆ ಪರಿಣಾಮವುಂಟಾಗುತ್ತದೆ ಆದುದರಿಂದಲೇ ಹುಟ್ಟಿದ ಶಿಶುವಿಗೆ ಯುಕ್ತರೀತಿಯಲ್ಲಿ ನಾಮಕರಣ ಸಂಸ್ಕಾರ ಮಾಡಬೇಕೆಂಬ ವೈದಿಕ ವಿಧಿಯನ್ನು ದಯಾನಂದರು ಪುನಃ ಜನರಿಗೆ ತೋರಿಸಿ ಕೊಟ್ಟರು ಹೆಸರಿನ ಕುರಿತು ಪ್ರಸಿದ್ಧ ಕವಿಯಾದ "ಶೇಕ್ಸ್‌ಪಿಯರ್" ಎಂಬವನು "There is much in a Name" ಎಂದು ಬರೆದಿದ್ದಾನೆ. ಇಂಗ್ಲಿಷ್ ಭಾಷೆಯ "Pear's Cyclopedea" ಎಂಬ ಪುಸ್ತಕದ "General information" ಎಂಬ ಪ್ರಕರಣದಲ್ಲಿ ಆರ್ಯ ಶಬ್ದದ ಅರ್ಥವನ್ನು ಈ ರೀತಿ ವಿವರಿಸಿದೆ.—

"The word "Arya" derived from the Sanskrit means an honourable lord of the soil."

ಅರ್ಥಾತ್, ಸಂಸ್ಕೃತದ ಆರ್ಯ ಶಬ್ದಕ್ಕೆ ಭೂಮಿಯ ಮಾನ್ಯವಂತನಾದ ಯಜಮಾನನೆಂಬ ಅರ್ಥವಾಗುತ್ತದೆ

ಈ ಕುರಿತು ವರ್ತಮಾನಕಾಲದ ದಾರ್ಶನಿಕ ವಿದ್ವಾಂಸರೂ ವಿಚಾರ ಕರ್ತರೂ ಆಗಿರುವ ಶ್ರೀಯುತ ಅರವಿಂದ ಘೋಷರು "What is the significance of the name Arya" ಎಂಬ ಒಂದು ಲೇಖನವನ್ನು ಬರೆದಿರುವರು ಅದರಿಂದ ಕೆಲವು ವಾಕ್ಯಗಳನ್ನು ವಾಚಕರ ಮುಂದಿಡುವೆವು

ಆರ್ಯ ಶಬ್ದದಿಂದ ಒಂದು ಸಾಮಾಜಿಕ ಹಾಗೂ ನೈತಿಕ ಆದರ್ಶತೆ, ಮರ್ಯಾದಿತ ಜೀವನ ಉದಾರತೆ, ಸಾಹಸ, ಧರ್ಮಾಧರ್ಮದ ವಿವೇಚನಾಶಕ್ತಿ, ನಿರ್ಬಲರ ಮೇಲೆ ಕನಿಕರ ಬುದ್ಧಿ ಇತ್ಯಾದಿ ಸದ್ಬುದ್ಧಿಗಳ ಬೋಧವುಂಟಾಗುತ್ತದೆ ಇಷ್ಟು ವಿಶಾಲವಾದ ಮತ್ತು ಬೋಧಪ್ರದವಾದ ಶಬ್ದವು ಜಗತ್ತಿನ ಯಾವ ಇತಿಹಾಸ ಗ್ರಂಥಗಳಲ್ಲಿಯೂ ದೊರೆಯದು ಸಮಾಜದಲ್ಲಿ ಆಗುತ್ತಿರುವ ದುಷ್ಕರ್ಮಗಳನ್ನು ನಾಶಮಾಡಿ ಸತ್ಕರ್ಮಾದಿ ಒಳ್ಳೆಯ ಕಾರ್ಯವನ್ನು ಮಾಡುವವರೇ ಆರ್ಯರು ಇಂಥವರ ಸಮುದಾಯದಿಂದುಂಟಾದ ಸಮಾಜವೇ ಆರ್ಯಸಮಾಜವು

### ಪುರಾಣಗಳಲ್ಲಿ ಆರ್ಯ ಶಬ್ದವಿದೆಯೋ?

ಯನ್ನೈಮಿಶಾರಣ್ಯಮುನೀಶ್ವರಾಣಾಂ ಪ್ರೋಕ್ತಂ ಪುರಾ ವ್ಯಾಸ ಮುಖೀತ್ತತಸ್ಸ್ವಾದ ಸಾವಾ ದಿ ಗುರುರ್ಭವಾಂಸ್ತು ದ್ವಿತೀಯ ಆರ್ಯೋ ಭುವನೇರಣ। ಪ್ರಸಿದ್ಧಃ।

ಶಿವಪುರಾಣ. ಕೈಲಾಸ ಸಂಹಿತೆ ೬ ಅ. ೨೪ ಶ್ಲೋ. ೨೫

"ಸ್ಕಂದರು ತಮ್ಮ ಶಿಷ್ಯರೊಡನೆ ಹೇಳಿದುದೇನೆಂದರೆ, ಯತಃ ನೈಮಿಶಾರಣ್ಯದ ವಾಸಿಗಳಾದ ಮುನೀಶ್ವರರುಗಳೊಡನೆ ಪ್ರಥಮತಃ ವ್ಯಾಸರು ಹೇಳಿದರು

ಅತಃ ಆ ವ್ಯಾಸರು ಆದಿ ಗುರುಗಳಾಗಿರುತ್ತಾರೆ ಮತ್ತು ಜಗತ್ತಿನಲ್ಲಿ ಇವರು ಪ್ರಸಿದ್ಧರಾದ ದ್ವಿತೀಯ ಆರ್ಯರಾಗಿರುತ್ತಾರೆ"

ವ್ಯಾಸಂ ಷಡಂಗ ದಿಗ್ಬಂಧಂ ವಿನಿಯೋಗಮಶೇಷತಃ। ಪ್ರೋಕ್ತವಾನಹ ಮಾರ್ಯಾಣಾಂ ಜಗತ್ಸೃಷ್ಟಿ ವಿವೃದ್ಧಯೇ।

ಶಿ. ಪು. ವಾಯು ಸಂಹಿತೆ ೬ ಖಂಡ ೨ ಅ ೧೬ ಶ್ಲೋ ೩೬.

"ಶಿವನು ಹೇಳಿದನು, ನ್ಯಾಸ, ಷಡಂಗ, ದಿಗ್ಬಂಧ ಇವುಗಳ ಸಂಪೂರ್ಣ ವಿನಿಯೋಗವನ್ನು ನಾನು ಜಗತ್ಸೃಷ್ಟಿಯ ವೃದ್ಧಿಗಾಗಿ ಆ ಆರ್ಯರಿಗೋಸ್ಕರವಾಗಿ ವರ್ಣನೆ ಮಾಡಿದೆನು. ಈ ಎರಡು ಪ್ರಮಾಣಗಳನ್ನು ನಾವು ಸರಿಯಾಗಿ ನೋಡಿದಲ್ಲಿ ಸಂಪ್ರದಾಯವಾದದ ಆಡಿಗಲ್ಲಾದ ಪುರಾಣಗಳಲ್ಲಿಯೂ ನಮ್ಮ ಪೂರ್ವಜರನ್ನು ಆರ್ಯರೆಂದು ಕರೆಯುತಿದ್ದರಲ್ಲದೆ ಹಿಂದೂ ಶಬ್ದವು ಎಲ್ಲಿಯೂ ಕಾಣುವುದಿಲ್ಲ

ಈ ಎಲ್ಲಾ ವಿಷಯಗಳನ್ನು ನಾವು ಸರಿಯಾಗಿ ವಿಚಾರ ಮಾಡಿದರೆ ನಾವು ಆರ್ಯರಲ್ಲದೆ ಹಿಂದೂಗಳಲ್ಲವೆಂಬುದು ಸಿದ್ಧವಾಗುತ್ತದೆ ಬೇರೆ ದೇಶದವರು ಬಂದು ನಮ್ಮನ್ನು ಹಿಂದೂಗಳೆಂದು ಕರೆಯತೊಡಗಿ ಎಲ್ಲರನ್ನು ಅಜ್ಞಾನದಲ್ಲಿಟ್ಟಿರುವರು. ಇನ್ನು ಮುಂದಕ್ಕಾದರೂ ನಾವು ನಮ್ಮ ಪೂರ್ವದ ಪವಿತ್ರವಾದ ಭಾವಗರ್ಭಿತವಾದ ಮತ್ತು ಜಗತ್ತನ್ನು ಶಾಂತಿಯಲ್ಲಿರಗೊಡಿಸುವಂಥಾ ಉತ್ತಮವಾದ ಆರ್ಯರೆಂಬ ಹೆಸರನ್ನೇ ಉಪಯೋಗಿಸಬೇಕು ಇದಕ್ಕಾಗಿಯೇ ಆದರ್ಶ ಬ್ರಹ್ಮಚಾರಿಗಳಾದ ಋಷಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಸ್ಥಾಪಿಸಿದರು, ಮತ್ತು ಅದಕ್ಕಾಗಿ ತನ್ನ ದೇಹವನ್ನೂ ಅರ್ಪಿಸಿದರು ಆ ಮಹಾಪುರುಷರ ಪವಿತ್ರ ಧ್ಯೇಯವನ್ನು ಅನುಸರಿಸಿ ಎಲ್ಲರೂ ಆರ್ಯ ಸಾಮಾಜಿಕರಾಗಿ ನಿಜವಾದ ಆರ್ಯ ಜೀವನವನ್ನು ಪಡೆದು "ನಾವು ಆರ್ಯರು ಹಿಂದುಗಳಲ್ಲ" ಎಂಬುವನ್ನು ಜನಾಂಗಕ್ಕೆ ತೋರಿಸೋಣ ಇಂಥಾ ಆರ್ಯ ಜೀವನವೇ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದು

— ಸಂಪೂರ್ಣಂ

---

# ವೀರಾಗ್ರಣಿ ಅಬ್ರಹಾಂ ಲಿಂಕನ್.

'ತಾವು ಅಮೇರಿಕದ ಅಧ್ಯಕ್ಷರಾಗಬೇಕೆಂ'ದು ಅರಿಕೆ ಮಾಡಿ ಅಮೇರಿಕಾದ ಜನಾಂಗ ಪ್ರತಿನಿಧಿಗಳು ಅಬ್ರಹಾಂ ಲಿಂಕನನ ಬಂಗಲೆಯಲ್ಲಿ ನಿಂತಿದ್ದರು ಅವನೆಂದನು "ನನ್ನಲ್ಲಿ ಅನೇಕಾನೇಕ ನ್ಯೂನ್ಯತೆಗಳಿವೆ ನೀವು ನನ್ನನ್ನು ಆರಿಸುವಿರೇಕೆ?" "ಇಲ್ಲ ತಾವೇ ಈ ಸಲ ಚುನಾವಣೆಗೆ ನಿಲ್ಲಬೇಕು" ಎಂಬ ಮರುತ್ತರವು ಸಿಕ್ಕಿತು ಪುನಃ ಲಿಂಕನನೆಂದನು "ನಿಲ್ಲಲಡ್ಡಿಯಿಲ್ಲ ನಾನು ಹೇಳಿದಂತೆ ಇಡೀ ರಾಷ್ಟ್ರವು ಕೇಳಬೇಕಾದೀತು. ನಿಗ್ರೋಗಳ ಜೀತಗಾರಿಕೆಯನ್ನು ಹೇಗೂ ಮಾಡಿ ನಿರ್ಮೂಲಿಸುವೆನು ಅದನ್ನು ನಮ್ಮ ದೇಶದಿಂದಟ್ಟಬೇಕೆಂಬ ಆಗ್ರಹವು ನನ್ನ ರಕ್ತದಲ್ಲಿ ಸಮ್ಮಿಳಿತವಾಗಿದೆ ಪುನಃ ಯೋಚಿಸಿರಿ ನಾನು ಜನಾಂಗಕ್ಕೆ ಬೇಕಿರುವುದಾದರೆ ಇದು ಮುಖ್ಯ"

ಅಮೇರಿಕಾದ ಅಧ್ಯಕ್ಷಸ್ಥಾನವನ್ನು ಅಬ್ರಹಾಮನಿಗ ರಾಷ್ಟ್ರವು ತೋರಿಸಿದ ಸಮಯದಲ್ಲಿ ಅವನು ೫೦ ವರ್ಷದ ಧೀರಾಳು ಅವನ ಆತ್ಮನಿಶ್ಚಲತೆ, ಅವನ ದೃಢತೆ, ಅವನ ಖಂಡಿತವಾದ, ಅವನ ಧ್ಯೇಯಸಾಧಕತೆಯು ಪ್ರಪಂಚಖ್ಯಾತವಾಗಿದ್ದು ಸಮಸ್ತ ಅಮೇರಿಕ ರಾಷ್ಟ್ರವು ಅಂತಹವನೊಬ್ಬನನ್ನು ಆಕಾಂಕ್ಷಿಸುತ್ತಿತ್ತು ಬಡವರಾದ ನಿಗ್ರೋಗಳ ಉದ್ಧರಣೆಗಾಗಿ ಜನಿಸಿದ ಆ ವೀರಾಗ್ರೇಸರನಾದ ಲಿಂಕನನ ಉದ್ದಿಷ್ಟಸಾಧನೆಯಾಗದೆ ಹೇಗಿದ್ದೀತು? ಅವನು ಅಧ್ಯಕ್ಷನಾದನು

ಪಟ್ಟಾಭಿಷಿಕ್ತನಾದೊಡನೆ ಕೌನ್ಸಿಲು ಸಭೆಯನ್ನು ಜರುಗಿಸಿ ನಿಗ್ರೋಗಳನ್ನು ಜೀತಗಾರಿಕೆಯಿಂದ ತಪ್ಪಿಸಬೇಕೆಂಬ ನಿರ್ಧರಿಸಿ, ಕಠಿಣ ಕಾಯಿದೆಗಳ ಶರಗಳನ್ನು ಪೂರ್ವ ಪಶ್ಚಿಮ ದಕ್ಷಿಣೋತ್ತರಗಳಿಗೆ ಸಾರಿದನು ಕೌನ್ಸಿಲರಲ್ಲನೇಕರು ಉದ್ರೇಕಗೊಂಡರು "ಇದಾಗದೆಂದು—"ಘ' ಸಾಧ್ಯವಿಲ್ಲ ಇದಾಗಲೇಬೇಕು, ನನ್ನ ಪ್ರಾಣ, ಈ ಧ್ಯೇಯವೇ ನನ್ನ ಸರ್ವಸ್ವವೆಂದನು ಲಿಂಕನನು ಒಡನೆ ಮೊದಲಾಯಿತು—ಸಿವಿಲ್ ಯುದ್ಧ! ದಕ್ಷಿಣವೇ ದವರು ನಿಗ್ರೋಗಳನ್ನು ಪಾದಾಘಾತದಿಂದ ತುಳಿದಿಡಲೇಬೇಕೆಂದರು ಇಲ್ಲ, ಲಿಂಕನನು ಈಗ ಕೇಳಲೊಲ್ಲ, ಬಡವರುದ್ಧಾರಕ್ಕಾಗಿ ಹುಟ್ಟಿದ ಬಂಧುವವನು. "ಸಿವಿಲ್ ಯುದ್ಧವಾಗಿ ನನ್ನ ಜನರು ಮಡಿದು ನನ್ನ ನಾಶವಾದರೂ ವ್ಯಸನವಿಲ್ಲ ನಿಗ್ರೋಗಳು ಪವಿತ್ರರಾಗಬೇಕು ಅಮೇರಿಕನರು ಅವರು ಹೆಂಡತಿ ಮಕ್ಕಳು ಮನೆಗಳನ್ನು ಪಶುಸಮಾನರಂತೆ ಭಾವಿಸುವ ದುಷ್ಟ ಚಟದ ಮೂಲೋತ್ಪಾಟನವಾಗಬೇಕು ಎಂದನು ಆ ಮಹಾತ್ಮ ಸ್ವಾತಂತ್ರ್ಯ ಪ್ರಿಯನವನು.

ದಗೆ, ದಂಗೆ, ಪಿತೂರಿ, ಕೊಲೆಗಳ ಪ್ರತಿಧ್ವನಿಯು ಅಮೇರಿಕಾದ ದಕ್ಷಿಣ ಭಾಗದಿಂದ ದಿನೇ ದಿನೇ ಕೇಳಿ ಬಂತು ಕಠಿಣ ಶಾಸನಗಳ ಅತ್ಯಗತ್ಯ ದಿನವು ಸನ್ನಿಹಿತವಾಯಿತು. ಅವನ ಮಂತ್ರಾಲೋಚಕರೆಂದರು "ತೀಕ್ಷ್ಣ ಕಾಯಿದೆಗಳನ್ನು ಹೊರಡಿಸಿ ಕ್ರಾಂತಿಕಾರರನ್ನು ಸದೆಬಡಿಯೋಣ ಎಂದು ಆದರೆ ಅಬ್ರಹಾಂ ಲಿಂಕನನು ಎಷ್ಟು ಧೀರನೋ ಅಷ್ಟೇ ಶಾಂತನು ಎಷ್ಟು ನಿಶ್ಚಲ ಹೃದಯಿಯೋ ಅಷ್ಟೇ ದಯಾಳು—ನಿಸ್ಪೃಹನು ನಿಗ್ರೋಗಳ ಉನ್ನತಿಯ ವೃಷ್ಟಿಯು ಅವನಲ್ಲಿತ್ತೆಂದರೆ ಅವನಿಗೆ ತನ್ನ ಧ್ಯೇಯಸಾಧನೆಯಲ್ಲಿ ಕಾಠಿಣ್ಯವನ್ನುಪಯೋಗಿಸಬೇಕೆಂಬ ಆಶೆಯಿದ್ದಿಲ್ಲ ಕಾರ್ಯಚತುರನವನು ಕಾರ್ಯಜಾಣನವನು

ಸಿವಿಲ್ ಯುದ್ಧದ ಮೂಲೋತ್ಪಾಟನಕ್ಕಾಗಿ ಅವನು ಸೈನ್ಯವನ್ನು ಕಳುಹಿಸಿದನು ಎರಡು ವರ್ಷಗಳ ತನಕ ಅವನು ಕಾದಾಡಿ ನೂರಾರು ಯೋದ್ಧರನ್ನಾಹುತಿಯಾಗಿ ಅರ್ಪಿಸಬೇಕಾಯಿತು, ಕೊನೆಗೆ ಜಯಶೀಲನಾದನು ಕ್ರಾಂತಿಕಾರರನೇಕರನ್ನು ಬಂಧಿಸಿ ತಂದಿದ್ದರು.

"ದಂಗೆಗಾರರನ್ನೂ ಪಿತೂರಿಗಾರರನ್ನೂ ಗುಂಡಿಕ್ಕಿ ಕೊಲ್ಲೋಣ ನೇಣುಗೇರಿಸೋಣ" ಎಂದು ಕಿಡಿಕಿಡಿಸಿದರು ಅವನ ಮಂತ್ರಿವರ್ಗದವರು ಲಿಂಕನನು ಇದಕ್ಕೆ ಸಮ್ಮತಿಸಲಿಲ್ಲ ಒಬ್ಬ ಯುವಕ ಪಿತೂರಿಗಾರನನ್ನು ಈಹೆಗೆ ಕರೆದು 'ಪ್ರೋಕ್ರಿ! ನೀನು ಪಿತೂರಿಗಾರನಾದ ಕುರಿತು ನಿನ್ನ ತಾಯಿ ತಂದೆಯವರಿಗೆ ತಿಳಿದಿದೆಯೋ?" ಎಂದು ಪ್ರಶ್ನಿಸಿದನು "ಇಲ್ಲವೆಂದನು ಆ ಪ್ರೋಕ್ರಿ! ಇದನ್ನು ಕೇಳಿದ ಲಿಂಕನನು "ವತ್ಸ! ಪಿತೂರಿಗಾರರಿಗೆ ಏನು ಶಿಕ್ಷೆ? ಗುಂಡಿನ ಬಾಯಿ! ಆದರೆ ನಿನಗೆ ನಾನು ವಿಮೋಚನೆಯ ವರವನ್ನೀಯುತ್ತಿದ್ದೇನೆ ಸೈನಿಕರನ್ನು ಕರೆದು("ಬಿಡಿರೋ ಇವನನ್ನು ಎಂದನು)ಹೋಗು' ಎಂದನು

ದುಷ್ಟದಮನ ಕಾರ್ಯದಲ್ಲೂ ಶಿಷ್ಟಾಚಾರವನ್ನು ಪ್ರದರ್ಶಿಸಿದವನು ಆ ಅಬ್ರಹಾಂಲಿಂಕನ್ ಪುಣ್ಯಾತ್ಮ! ನಿಗ್ರೋಗಳಿಗೆ ಅವನು ಒಬ್ಬ 'ತಂದೆ'ಯಾದನು 'ನಮ್ಮ ದೇವ ಆಗಮ್ಮದಣ್ಣ' ಎಂದರು ಎಲ್ಲಾ ನಿಗ್ರೋಗಳು. ಜಗತ್ತಿಗೆ ಅವನು ಬಡ ಜನೋದ್ಧಾರಕನಾದ, 'ಅವತಾರಿ'ಯಾದ ಆಹಾ!

---

ಅವನ ನ್ಯಾಯನೀತಿಯೇ! ಅದೆಷ್ಟು ಅನುಕರಣೀಯವಾದುದು! ಎಷ್ಟು ಅಮೋಘ! ಅಪ್ರತಿಮ! ಮತ್ತು ಅಪ್ರತಿಹತವಾದುದು! ಬ್ರಿಟಿಷ ಸರಕಾರವು ಈ ನೀತಿಯನ್ನವಲಂಬಿಸಿದ್ದರೆ? ಇಂಡಿಯಾ ಸರಕಾರವು ಈ ಸೂತ್ರಕ್ಕೆ ಶಿರ ಬಾಗುತ್ತಿದ್ದರೆ?.. ಸರ್ವ ಶಾಂತಿಯುಂಟಾಗುತ್ತಿತ್ತು! ಬದಲು ?

ಕೆಲವು ಕಾಲದಲ್ಲೇ ಆ ವಿಭೂತಿಪುರುಷನಾದ ಅಬ್ರಹಾಮನು ಪಿತೂರಿಗಾರನೊಬ್ಬನ ಪಿಸ್ತೂಲಿನ ಹೊಡೆತಕ್ಕೆ ಸಿಕ್ಕಿ ಅಮರನಾದನು—ಚಿರಂಜೀವಿಯಾದನು ಅವನ ಕಳೇಬರವು ಕಳೆದು ಹೋಗಿ ಬಿಟ್ಟರೂ, ಅವನ ಜೀವಿತತತ್ವವು ಧರಣೀ ಮಂಡಲದಲ್ಲಿ ಸೂರ್ಯ ಪ್ರಭೆಯಂತೆ ನಿಂತಿತು ಮ. ಜಾ.

+ ++ +

# ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!




ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮುವಿನಿಂದ ಪಾರುಮಾಡಿಯದೆ ಮಹದುಪಾಯಕರವಾದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ ಕೂಮಿನ್' ಇದು ದಿವ್ಯಔಷಧವಾಗಿದೆ

**ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು**

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು**

---

ವೈದ್ಯ ಮೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

## ಮದನಮಸ್ತಪಾಕು — ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸ್ಸುವೆವು ಹಸ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ ಗರ್ಮಿಯ ಪರಿಣಾಮ ಎಂಥದಾದರೂ ಪರಮ ಮೈನೂಸೋಣ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ ೩೦ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಎಚುಬು, ಎಲ್ ಎಮ್ ಎಂಡ್ ಎಸ್ ಜ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ೧ ಮಿ ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ತೆ — ವೈದ್ಯ ಮೋಹನಲಾಲ ಎಸ ಔಷಧಾಲಯ, ಮು ಪೋ ಮಿರಜ, S M C

---

**ಗುಣಬಾರದಿದ್ದರೆ]** ಸುಪ್ರಸಿದ್ಧ ವೈದ್ಯರಾದ ಎಮ್. ಕೆ ರಜಪೂತ ಇವರ **[ಹಣವಾಪಾಸು**

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)**

ಮಕ್ಕಳು ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಮಕ್ಕಳ ಸಂತತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಹುಟ್ಟಾಗುವಿಕೆಯು ನೋವುದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸ್ಕಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲ ಪೂರಾ ವಿಚಾರ ಮಾಡಿ ಔಷಧಬೇಡಿರಿ ನಮ್ಮ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಳವಾಮಾಹಿಮ ಠಾಣೇ.— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿಕೆ ೪ ರೂ ವಿ ಪಿ ಖರ್ಚು ೦||೦

**ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)**

ಈ ಚೂರ್ಣವು ಕೆಂಪು ಬಿಳಿ ಸರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ ಕ್ಲೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ ಮುಖ್ಯ ಸರ್ಟಿಫಿಕೇಟ್, ಮಿ॥ ರಾ ಎ ಎಮ್ ಇನ್ನಪೆಳ್ಳರ ಬೆಳಗಾಂವ — ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೪ ಟ ಖ ಆಣೆ ೮

**ವಿಳಾಸ — ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S M. C.**

---

## ಕೋ-ಒಪರೇಟಿವ್ ಸೊಸೈಟಿಗಳಿಗೆ

**ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.**

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್**

ರಥಬೀದಿ, ಮಂಗಳೂರು

---

## ಡಾಕ್ಟರ ವಾಮನ ಗೋಪಾಳರವರ

**ಐಓಡಾಯಿಡ್ಡ ಸಾರ್ಸಪರಿಲಾ**

ಕೆಟ್ಟ ರಕ್ತಕ್ಕೆ ಮಹೌಷಧ ೬೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ




ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,

ಠಾಕುರದ್ವಾರ ಮುಂಬಾಯಿ — ಸೊಲ ಏಜಂಟ ಪೈ ಕಂಪನಿ

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

---

**ಕ್ಷಯಕ್ಷೀಣಾದಿಗಳಿಗೆ**

## ಚ್ಯವನಪ್ರಾಶಾನ ಲೇಹ

**ಪ್ರಸೂತಿ ರೋಗಾದಿಗೆ**

## ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

**ಸಮಸ್ತ ವಾತರೋಗಗಳಿಗೆ**

## ಮಹಾನಾರಾಯಣ ತೈಲ.

**ಶ್ರೀ ರಾಮಕೃಷ್ಣ ಧರ್ಮನ್ಯಧ್ಯಾಶ್ರಮ ಸಂಘ,**

ಡೊಂಗರಕೇರಿ ರಸ್ತೆ, ಮಂಗಳೂರು

---

THE SOUTH INDIA CO-OPERATIVE INSURANCE SOCIETY LIMITED MADRAS

**LOCAL BOARD.—**

THE SOUTH CANARA CENTRAL CO OPERATIVE BANK LTD MANGALORE

Applications are invited for Sub Agents from capable and energetic persons and Co operative Institutions to canvass business on behalf of the Local Board of the Society at Mangalore

*FOR TERMS APPLY TO —*

*The Secretary,*

South Canara Central Co-operative Bank Ltd KODIALBAIL P O (Mangalore)

*SOUTH CANARA*

---

ಮಾರಾಟಕ್ಕಿವೆ ಮಾರಾಟಕ್ಕಿವೆ!!

**ಕಾಫಿ ಪ್ಲಾಂಟರರಿಗೂ, ತೋಟದವರಿಗೂ**

**ಬೇಕಾಗುವಂತಹ**

## ಚರ್ ರೋಲ್ ಗಳು

**ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.**

**ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ**

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಮೆನೇಜರ್,**

**ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು.

EDITED, PRINTED & PUBLISHED BY V S. KUDVA AT THE SHARADA PRESS, MANGALORE.

ಮುಂಗಡ ಕ್ರಯ:- ವರ್ಷ ಒಂದಕ್ಕೆ ರೂಪಾಯಿ 2-0-0 | Registered No. M. 498. | ಟಪಾಲು ಹಾಸಲು ಸೇರಿ ರೂಪಾಯಿ 2-13-0.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೨ ॥

ಪುಸ್ತಕ ೨೭. | ಮಂಗಳೂರು ತಾ ೧೭ನೇ ಶುಕ್ರವಾರ ಮಾರ್ಚಿ ೧೯೩೩ | (17-3-33) | ಸಂಚಿಕೆ ೧೧

## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Subscribed & Called up Rs. 2,25,000.

ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 28TH FEBRUARY, 1933.

| CAPITAL AND LIABILITIES. | | | PROPERTY AND ASSETS | | |
|---|---|---|---|---|---|
| 1 | Paid up Capital | Rs. 2,25,000-0-0 | 1 | Premises, Building, Furniture etc. | Rs 65,906 13- 6 |
| 2 | Reserve and other funds | " 2,35,000 0-0 | 2 | Government securities | " 2,93,088- 4- 0 |
| 3 | Deposits | " 21,34,829-15 3 | 3 | Authorised Investments | " 22,21,154 1- 4 |
| 4 | Due to Bankers | " 65,571- 0-6 | 4 | Bills for collection | 4,194- 7- 0 |
| 5 | Sundries | " 53,129 11 7 | 5 | Sundries | " 32,392 10 4 |
| 6 | Bills for collection per contra | 4,194- 7-0 | 9 | Cash in hand & with bankers | " 1,00,985 15 2 |
| | Total | 27,17,725- 2-4 | | Total | 27,17,725- 2-4 |

UDIPI 4-3-'33.

**N. ANANDA RAO,**
*Secretary & Manager*

Regd.)

## ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಮ್ಮಕೊಡುವ ವಾತ, ಥಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಶೀತ, ಬಹು ಶೀತ, ಸಹಿಸಲಸದಳವಾದ ಚೇಳು ಕೈಕಾಲು ಮರಗಟ್ಟುವುದು, ಉಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

**ರಿಂಗ್‌ವರ್ಮ್ ಮುಲಾಮು** — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲವುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

**ಅಮೃತಾಂಜನ ಡಿಪೋ,**

**ಮದರಾಸು** ಮತ್ತು **ಬೊಂಬಾಯಿ.**

ಸಣ್ಣ ಹುಡುಗರ ಸಲುವಾಗಿ,

# ಡೋಂಗರೆ

ಇವರ

## ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

**ಕೇ. ಟಿ. ಡೋಂಗರೇ ಕಂಪೆನಿ,**

INSURE WITH

**The Popular Insurance Co. Ltd.**

Head Office:-MANGALORE, S. India.

**First of its kind in the West Coast**

CHAIRMAN:

*Dewan Bahadur N. Subba Rao.*

*STRIKING FEATURES*

**Policy Conditions Liberal:**

**Claims Settlement Prompt:**

MANAGEMENT PURELY INDIAN.

**Ensure the Absolute Safety, Comfort and Happiness of your Dear Ones.**

WANTED INFLUENTIAL AGENTS.
LIBERAL TERMS TO COMPETENT MEN

*For further particulars apply to the Head Office.*

## 'ಓವಲ್ಟಿನ್'ನಿಂದ ಮಕ್ಕಳು ದೃಢಕಾಯರಾಗಿಯೂ ಆರೋಗ್ಯರಾಗಿಯೂ ಬೆಳೆಯುತ್ತಾರೆ

ಮಕ್ಕಳಿಗೆ ಸಾಕಷ್ಟು ಪೋಷಣೆಯನ್ನೊದಗಿಸಿಯೇ ನೀವು ಅವುಗಳನ್ನು ಆರೋಗ್ಯ ಬಲವುಳ್ಳವುಗಳನ್ನಾಗಿ ಮಾಡಬೇಕು. ಅಂತಹ ಪೋಷಣೆಯು ಅನುನಿತ್ಯದ ಆಹಾರ ಪದಾರ್ಥಗಳಲ್ಲಿರುವುದಿಲ್ಲ. ಅದಕ್ಕಾಗಿಯೇ 'ಓವಲ್ಟಿನ್' ಅಗತ್ಯ.

ಬೆಳೆಯುತ್ತಿರುವ ಮಕ್ಕಳಿಗೆ ಬೇಕಾದ ಆರೋಗ್ಯ, ಬಲ, ಶಕ್ತಿಗಳ ವರ್ಧನೆಗಾಗಿ ಸದಾ ಸಾರವಾದ ಮತ್ತು ಸಂಪೂರ್ತಿಯಾದ 'ಓವಲ್ಟಿನ್' ಬೇಕು. ಅದು ರುಚಿಕರವಾಗಿದ್ದು, ಎಲ್ಲಾ ಮಕ್ಕಳೂ ಸೇವಿಸಲು ಸಂತೋಷಗೊಳ್ಳುತ್ತವೆ.

'ಓವಲ್ಟಿನ್'ನ್ನು ಪ್ರಕೃತಿಯ ಆಹಾರವಾದ ಬೆಳೆದ ಬಾರ್ಲಿ, ಮೋಲ್ಟ್, ದನದ ಕೆನೆ ಹಾಲು, ಮತ್ತು ಕೋಳಿಮೊಟ್ಟೆಗಳಿಂದ ತಯಾರಿಸಲಾಗುತ್ತದೆ. ತಯಾರಿಯಲ್ಲಿ ಅದಕ್ಕೆ ಹಸ್ತ ಸ್ಪರ್ಶವಾಗುವುದಿಲ್ಲ.

# OVALTINE
TONIC FOOD BEVERAGE

**ಮೆದುಳು, ನರ ಮತ್ತು ದೇಹಗಳನ್ನು, ವೃದ್ಧಿಸುತ್ತದೆ**

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಏಜಂಟ್ಸ್ — ಜೇಮ್ಸ್ ರೈಟ್ ೩೨/ಎ ರಿಪನ್ ಸ್ಟ್ರೀಟ್ ಕಲ್ಕತ್ತಾ; ಮತ್ತು ಬೊಂಬಾಯಿ ಮದ್ರಾಸ್ ರಂಗೂನುಗಳಲ್ಲಿ

OV/182


## ಶೌಕತಾಲಿಯವರು ಶೋಕ ತಾಳಿದರು

ಕುದುರೆಗಳಲ್ಲಿ ಮಹಾ ಕುದುರೆ ಮನುಷ್ಯನ ನಾಲಿಗೆ! ಇದರ ನಾಗಾಲೋಟಕ್ಕೆ ಮಿತಿಯಿಲ್ಲ! ಬುದ್ಧಿಯ ಕಡಿವಾಣವನ್ನು ತಪ್ಪಿಸಿ ಬಿಟ್ಟರೆ ಈ ನಾಲಿಗೆಯು ಮಿನಿಟಿಗೆ ೧೦೦೦ ಮೈಲು ಸ್ಪೀಡಿನಿಂದ ಓಡುತ್ತದೆ!

× + × ×

ಯಾವ ಕುದುರೆಯು ಓಡಿದರೂ ವ್ಯಸನವಿಲ್ಲ. ಆದರೆ ಈ ನಾಲಿಗೆ ಕುದುರೆಯು ಹದತಪ್ಪಿ ಓಡದಂತೆ ಜೀನು ಹಿಡಿದು ನಡೆಸುವುದೇ ಮನುಷ್ಯನ ಮುಖ್ಯ ಕರ್ತವ್ಯ!

× + + ×

ಒಂದು ವಸ್ತುವು ಎಷ್ಟು ಭಾರವಿದೆಯೆಂದು ನೋಡಲು ನಾವೇನು ಮಾಡುತ್ತೇವೆ? ಅದನ್ನು ತಕ್ಕಡಿಯಲ್ಲಿಟ್ಟು ಭಾರ ನೋಡುತ್ತೇವೆ

× × × ×

ಹಾಗೆ ಒಬ್ಬನ ತೂಕವೆಷ್ಟಿದೆಯೆಂದು ಜ್ಞಾನಿಯಾದವನು ಯಾವುದನ್ನು ತೂಕ ಕಂಡು ಹಿಡಿಯುತ್ತಾನೆ? ನಾಲಿಗೆಯನ್ನು! ಒಬ್ಬನ ನಾಲಿಗೆ ಎಷ್ಟು ಭಾರವಿದೆಯೋ ಅಷ್ಟೇ ಅವನ ಜೀವಿತದ ಭಾರವಿದೆ

× × × ×

"ನೋಡಿ ಮಾತನ್ನಾಡಬೇಕಣ್ಣ! ಅಪ್ಪಯ್ಯ ಕೇಳು, ಆಡಿ ತೂಕನೋಡಬೇಕಣ್ಣ" ಹಾಗೆ ನೋಡಿ, ಎಷ್ಟು ಬೇಕೋ ಅಷ್ಟನ್ನು ಎಲ್ಲಿ ಬೇಕೋ ಅಲ್ಲಿ, ಜಾಗ್ರತೆಯಿಂದ ನುಡಿಯಬೇಕು. ಉಳಿದ ಸಮಯದಲ್ಲಿ ನಾಲಿಗೆಯ ಜೀನನ್ನು ಬಲವಾಗಿ ಹಿಡಿಯಬೇಕು!

× × × ×

ಈಗ ಅಮೇರಿಕಾದಲ್ಲಿರುವ ಶೌಕತಾಲಿಯವರು ಗಾಂಧಿಯವರ ನ್ಯೂನ್ಯತೆಗಳನ್ನು ಸ್ಮರಿಸುತ್ತಾ ಶೋಕ ತಾಳಿದ್ದಾರೆ! ಪಾಪ ಪಾಪ! ಅವರು ಮೊನ್ನೆ ಅಮೇರಿಕಾದಲ್ಲಿ ಹೇಳಿದುದೇನು ಗೊತ್ತೆ?

× × × ×

"ಗಾಂಧಿಗೆ ಸ್ತ್ರೀಯರನ್ನೊಲಿಸಿಕೊಳ್ಳುವ ಇಂದ್ರಜಾಲ ಶಕ್ತಿಯಿದೆ. ಆ ಶಕ್ತಿ ಬಹಳ ನಾಜೂಕಾಗಿದೆ. ಅವರಿಗೆ ಹಿಂದೂ ಮತಕ್ಕಿಂತ ದೊಡ್ಡದಿಲ್ಲ. ಅದರಲ್ಲೇ ಸಂತುಷ್ಟರು. ಅವರು ಸುಲಭ ಕಾರ್ಯಗಳನ್ನು ಕಷ್ಟದಾಯಕವನ್ನಾಗಿ ಮಾಡುತ್ತಾರೆ. ನೆಟ್ಟಗಿನ ರಾಜಮಾರ್ಗವನ್ನು ಬಿಟ್ಟು ಅಂಕುಡೊಂಕಿನ ಕಾಲ್ದಾರಿಯನ್ನು ಹಿಡಿಯುವ ವ್ಯಕ್ತಿ ಅವರು. ಅವರಿಗೆ ನಿರ್ಧಾರ ಶಕ್ತಿಯಿಲ್ಲ. ಒಂದು ವಿಷಯವನ್ನು ನಿರ್ಧರಿಸುವ ಪ್ರಸಂಗದಲ್ಲಿ ಅವರು ದಿಗ್ಭ್ರಾಂತರಾಗುತ್ತಾರೆ." ಇವು ಅವರ ನ್ಯೂನ್ಯತೆ!

× × + ×

ಗಾಂಧಿಯವರಿಗೆ ಸ್ತ್ರೀಯರನ್ನೊಲಿಸಿಕೊಳ್ಳುವ ಅದ್ಭುತ ಶಕ್ತಿಯಿದೆಯೆಂಬ ಶೌಕತಾಲಿಯವರ ಸರ್ಟಿಫಿಕೇಟಿಗೆ ಬೆಲೆಯಿಲ್ಲ. ಗಾಂಧೀಜಿಯವರಿಗೆ ಸ್ತ್ರೀಯರನ್ನೊಲಿಸಿಕೊಳ್ಳುವ ಶಕ್ತಿಯಿಲ್ಲ. ಅರಸರ ಅರಸನನ್ನೂ, ಸಮಸ್ತ ಜಗತ್ತನ್ನೂ ಒಲಿಸಿಕೊಳ್ಳುವ ಇಂದ್ರಜಾಲ ಶಕ್ತಿಯಿದೆ.

× × × ×

೧೮ ವರ್ಷಗಳ ಉಪವಾಸ ಮಾಡಿ ಶೌಕತಾಲಿಯವರು ಮೊನ್ನೆ ತನ್ನ ಹಿರೇ ಮಗನ ಇಚ್ಛೆಯನ್ನು ಮುಟ್ಟಿ ಮುಖವನ್ನು ಧಿಕ್ಕರಿಸಿ ಇಂಗ್ಲಿಷ್ ಲೇಡಿಯನ್ನು ಕಾಮಿಸಿ, ಲವ್ ಮೇರಿಯೇಜ್ ಆದುದನ್ನು ನೋಡುವಾಗ ಸ್ತ್ರೀಯರ ಮೇಲೆ ಶೌಕತಾಲಿಯವರಿಗೆ ಹೆಚ್ಚಿನ ಇಂದ್ರಜಾಲ ಶಕ್ತಿಯಿದೆ ಎಂದು ಗೊತ್ತಾಗುತ್ತೆ.

× × + ×

ಗಾಂಧಿಯವರು ಪರಮಹಂಸಹುಸ್ಸುಗಳಲ್ಲವೆಂದು ಶೌಕತಾಲಿಯವರ ತೀರ್ಪೇ! ಗಾಂಧಿಯವರೊಡನೆ ಹನ್ನೆರಡು ವರ್ಷಗಳ ವರೆಗೆ ಹಾಲು ನೀರು ಕುಡಿದ ಶೌಕತಾಲಿಯವರೇ ಹೀಗೆ ಹೇಳಿದೆಂದು ಹೇಳಿದರೆ ಬೇರೇನು ಉಳಿಯಿತು?

× × + ×

ಗಾಂಧಿಯು ಸುಲಭ ದಾರಿಯನ್ನು ಹಿಡಿಯ ತಿಳಿಯದ ದೊಡ್ಡ ಜನ ಎಂದು ಶೌಕತಾಲಿಯವರು ಹೇಳುತ್ತಿರುವರು. ಬ್ರಿಟಿಷರೊಡನೆ ಕೂಡಿಕೊಳ್ಳದಿರುವುದು ಒಂದು ನೆಟ್ಟಗಿನ ದಾರಿಯೆಂದೇ ಶೌಕತಾಲಿಯವರೆನ್ನುವುದು! ಹಾಗೆ ಕೂಡಿಕೊಳ್ಳಲಿಕ್ಕೆ ಅರ್ಧಾಂಗಿ ಇಂಗ್ಲೀಷ್ ಮಾಡಿಕೊಂಡ ಶೌಕತಾಲಿಯವರು ಫಿಟ್!

× × × ×

ಗಾಂಧಿಯವರ ಮೇಲೆ ಶೌಕತಾಲಿಯವರು ಹಾಕಿದ ಆಕ್ಷೇಪ, ಸರ್ಟಿಫಿಕೇಟುಗಳೆಲ್ಲ — ಅವರ ತೂಕವೆಲ್ಲ ಜೀನು ಇಲ್ಲದ ಕುದುರೆಯ ಪ್ರತಾಪವನ್ನು ತೋರಿಸುತ್ತೆ!

× × × ×

ಶೌಕತಾಲಿಯವರು ಅಮೇರಿಕಕ್ಕೆ ಹೋದುದು ಮುಸ್ಲಿಮ್ ಮತ ಪ್ರಚಾರಕ್ಕಾಗಿ! ಭರತದೇಶದ ಸ್ಥಿತಿಗತಿಗಳನ್ನು ಹರಡುವುದಕ್ಕಾಗಿ! ಆದರೆ ಇವರು ಗಾಂಧಿಯ ನ್ಯೂನ್ಯತೆಗಳನ್ನು ಹೇಳುವುದನ್ನು ಬಿಡಲಿಲ್ಲ!

× × + × × × ×

ಬೇಗನೆ ಅಮೇರಿಕಾದಿಂದ ಹಿಂದೆ ಬರಲಿರುವರಂತೆ. ಮಹಿಳಾ ಮನವೊಲಿಸುವುದರಿಂದಾಗಿ ಅಮೇರಿಕಾದಿಂದ ಇನ್ನೊಬ್ಬಳು ಮಡದಿ ಹಿಂದೆ ಬರದಿರಲಿ!

ಸ್ವಾಟಿ

# ಮೂರು ಲಕ್ಷ ರೂಪಾಯಿ!

ಸಂಸಾರದ ಖರ್ಚಿಗೆ ದೊರೆತರೆ, ಅಡಚಣೆಯು ಮಾತುಂಟೇ? ಅನ್ನ, ವಸ್ತ್ರ, ಅಲಂಕಾರ ಆಭರಣ, ವಿದ್ಯಾಭ್ಯಾಸ ವಿಹಾರ, ವ್ರತಾಚರಣೆ, ಯಾತ್ರಾಕಾರ್ಯಗಳು ಮೊದಲಾಗಿ ಎಲ್ಲಕ್ಕೂ ಅತ್ಯನುಕೂಲವಾಗಿರದೆ? ಸಂಸಾರವು ಸರ್ವಪ್ರಕಾರಗಳಲ್ಲೂ ಸುಗಮವಾಗಿ ಸಾಗುವುದು.

## ಮೂರು ಲಕ್ಷ ರೂಪಾಯಿ!

ದುರ್ದೈವ ದುರ್ಲಭವಾಗಿರುವ ಈ ಕಷ್ಟಕಾಲದಲ್ಲಿ, ವ್ಯಾಪಾರದ ಮುಗ್ಗಟ್ಟು—ಕೈಗಾರಿಕೆಗಳಿಗೆ ಕಷ್ಟ ಮೊದಲಾದುವುಗಳ ನಿವಾರಣೆಗೆ ಈ ಮೊಬಲಗು ಎಷ್ಟು ಅನುಕೂಲವಾಗಿ ಸಹಾಯಮಾಡುವಂತಾಯಿತು!

## ರೂಪಾಯಿ 321,544–3–7 ರೂಪಾಯಿ

ಈ ಮೊಬಲಗನ್ನು ಕಳೆದ ವರ್ಷ ಬರೇ ಬಡ್ಡಿಯ ಬಗ್ಗೆಂದು ಹಣ ಠೇವಣಾತಿಯಾಗಿಟ್ಟ ಜನಸ್ತೋಮಕ್ಕೆ

## ಕೆನರಾ ಬೇಂಕ್ ಲಿಮಿಟೆಡ್

ಸಂಸ್ಥೆಯಿಂದ ಸಾಕಲ್ಯವಾಗಿ ಸಂದು ಸದ್ವಿನಿಯೋಗ ಹೊಂದಿದೆ

ಸಂಸಾರ ತಾಪತ್ರಯ ನಿವಾರಣೆಗೂ, ವ್ಯಾಪಾರ ಕೈಗಾರಿಕೆಗಳ ಅಭಿವೃದ್ಧಿಗೂ ಸಾವಿರಾರು ಠೇವಣಾತಿದಾರರಿಗೆ ಸಿಗುವಂತೆ ಅವರು ಬೇಂಕಿನಲ್ಲಿ ಸಂಪೂರ್ಣ ವಿಶ್ವಾಸವನ್ನಿಡಲು ಪ್ರೇರೇಪಿಸಿದುದು ಯಾವುದು? ಯಥಾಕಾಲದಲ್ಲಿ, ಯಥಾಯೋಗ್ಯವಾಗಿ ಬೇಂಕು ಅವರಿಗೆ ಒದಗುವುದೆಂದು, ಪ್ರತ್ಯಕ್ಷ ಅನುಭವದಿಂದ ಅವರು ತಿಳಿದುದೇ

## ಮೂರು ಲಕ್ಷ ರೂಪಾಯಿ!

ವರ್ಷಕ್ಕೆ ಬಡ್ಡಿಯಾಗಿ ಜನಗಳಿಗೆ ದೊರೆವ ಹಾಗೆ, ಅವರ ವಿಶ್ವಾಸವು ಬೇಂಕಿನಲ್ಲಿ ಬೇರೂರಿರುವುದೂ, ಅವರ ಹಣವು ದ್ವಿನಿಯೋಗ ಹೊಂದಿ ಪ್ರತಿಫಲವು ದೊರೆವಂತೆ ವಿಚಾರದಿಂದ ಬೇಂಕು ಯಥಾಸಾಧ್ಯವಾದ ರೀತಿ ವರ್ತಿಸಿದುದೂ, ಈಗಣ ಅಡಚಣೆಕಾಲದಲ್ಲಾದರೂ ಸರ್ವರಿಗೂ ತೃಪ್ತಿಕರವಾಗಿದೆಂದು ಸೂಚಿಸದೇ? ಊರವರಾಗಲಿ, ಪರಊರವರಾಗಲೀ ಸರ್ವ ಠೇವಣಾತಿದಾರರಿಗೆ ಸಂತೃಪ್ತಿ.

## ಕೆನರಾ ಬೇಂಕ್, ಲಿಮಿಟೆಡ್.



ನಮ್ಮ ಕಾರ್ಖಾನೆಯು ಈಚೆಗೆ ಒಂದೆರಡು ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ

ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

## ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು, ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು

ಸೆಂಡಲ್‌ಉಡ್, ಜಸ್ಮಿನ್, ಲಿಲಿರೋಸ್, ಲೀಮ್ಡಾ ಸಾಬೂನುಗಳು

(ಲೀಮ್ಡಾ=ನೀಮ, ಮಾರ್ಗೋಸಾ=ಬೇವ್)

ಇವುಗಳು ಮುಖ್ಯವಾದ ಟ್ಯಾಲೆಟುಗಳು

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ್ ಕಂಪೆನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು.

ಈ ಜಿಲ್ಲೆಗೆ ಪ್ರವರ್ತಕರು:—

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.



# East & West Insurance Company Ltd.,

(Established 1913)

**East & West Buildings, Fort Bombay**

VALUATION REPORT for the Triennium ending 31st December 1931

**Reveals Certain Striking Features**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation.

Interim Bonus Rs 15/- per 1,000/ per year both on whole life and endowment with Profit Policies becoming claims before 1st January 1934. FORECAST -STILL GREATER PROSPERITY

**WANTED LADIES & GENTS in Unrepresented Areas**

Earn Rs. 100/- to 500/- independently per month.

*For particulars apply or please call at:—*

**Chief Organising Office,**

Harbour View, MANGALORE


## ನೋಟೀಸು

**ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ**

O. P. No. 28/1933

ಮ್ಯಾನರರು—1. ಅಹಲ್ಯಾಬಾಯಿ, 2. ವಸಂತಬಾಯಿ, 3. ವತ್ಸಲಾಬಾಯಿ—ಇವರ ದೇಹದ ಮತ್ತು ಆಸ್ತಿಯ ಕುರಿತು

1 ಕೆ ಗೋಪಾಲರಾವ್, 2. ಜಿ. ಮುಕುಂದರಾವ್—ಅರ್ಜಿದಾರರು

ಮತ್ತು

1 ಜಿ ಗಣೇಶರಾವ್ 2. ಕೆ ರಘುರಾಮರಾವ್, 3 ಜಿ ರಘುರಾಮರಾವ್—ರೆಸ್ಪೊಂಡೆಂಟರು

ಮಂಗಳೂರು ಶಹರು ಪೈಕಿ ಉಮಾಮಹೇಶ್ವರಿ ದೇವಸ್ಥಾನದ ಬಳಿಯಲ್ಲಿ ತಾ 5–2–33ರಲ್ಲು ಮೃತಪಟ್ಟ ಕೊಡಿಯಾಲ ವಾಸುದೇವರಾಯರ ಸದ್ರಿ ಮ್ಯಾನರ ಮಕ್ಕಳ ದೇಹದ ಗಾರ್ಡಿಯನನಾಗಿ ಅರ್ಜಿದಾರರ ಪೈಕಿ 1ನೇಯವರನ್ನು ನೇಮಿಸಬೇಕಾಗಿಯೂ ಸದ್ರಿ ಮ್ಯಾನರರ ಆಸ್ತಿಯ ಗಾರ್ಡಿಯನನಾಗಿ ಕೋರ್ಟಿನವರಿಗೆ ಯುಕ್ತ ಕಂಡವರನ್ನು ನೇಮಿಸಬೇಕಾಗಿ ಸಹಾ ಅಪೇಕ್ಷಿಸಿ ಅರ್ಜಿದಾರರು ಸದ್ರಿ ಅರ್ಜಿ ದಾಖಲು ಮಾಡಿರುತ್ತಾರೆ ಸದ್ರಿ ಅರ್ಜಿಯು ತಾ 3—4—33ಕ್ಕೆ ತನ್ಖಿಗ ಇಟ್ಟಿರುತ್ತದೆ ಆದ್ದರಿಂದ ಆ ಕುರಿತು ಆಕ್ಷೇಪಿಸುವವರು ತಮ್ಮ ಆಕ್ಷೇಪಗಳನ್ನು ಆ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು

Mangalore, 7–3–1933

**G. Somashekar Rao,**
Vakil for Petitioners

++ ++

## ನೋಟೀಸು.

**ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ,**

O P No 64/1932

ತೇರೇಜ ಮೆಂಡೋನ್ಸ ಬ್ಯಾ—ಕೂಡಾ ಅರ್ಜಿದಾರರು

ಮತ್ತು

ರುಜಾರಿಯೋ ಲುದ್ರಿಕ್ ಕೂಡಾ—ಎದ್ರಿಯು

ಇವರೊಳಗೆ

1ನೇ ಅರ್ಜಿದಾರಳ ಗಂಡ 2ರಿಂದ 6ರ ವರೆಗಿನ ಅರ್ಜಿದಾರರ ತಂದೆ ಜುವಾಂ ಲುದ್ರಿಕನು ಮೃತಪಟ್ಟು ಆತನಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ O P No 64/1932ನೇ ಅರ್ಜಿಯು ತಾರೀಖು 30—3—1933ಕ್ಕು ತನ್ಖಿಗೆ ಇಟ್ಟಿರುವುದರಿಂದ ಆ ಕುರಿತು 1ನೇ ಎದ್ರಿಯ ಆಕ್ಷೇಪ ಇದ್ದಲ್ಲಿ ಸದ್ರಿ ದಿವಸ ಬೆಳಗ್ಗೆ ಹತ್ತು ಘಂಟೆಗ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಪಡಿಸಿಕೊಳ್ಳತಕ್ಕದ್ದು

Udipi, 14–3 1933

**G. C. Rego,**
Vakil for Petitioners

## NOTICE.

**The Bombay Life Assurance Company Ltd., BOMBAY**

Mr P K Krishna Nambissan holder of our Policy No 30173 having notified that he has either lost or misplaced his policy and having requested us to issue a duplicate thereof in his favour, notice is hereby given that a duplicate Policy will be issued to him by the Company should there be no objection recorded in our Office, to our doing so within a month of the issue of this notice.

**Jyotendra L. Mehta,**
*Manager,*
The Bombay Life Assurance Co., Ltd.,


# ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ

# ಚಂದಾದಾರರಾಗಿರಿ

**Panchmal Narasimha Kamath & Brothers,**

**CAR STREET, MANGALORE.**

*31st Oct. 1932.*

To

**The Manager,**

## Zenith Life Assurance Company, Limited,

**MANGALORE.**

DEAR SIR,

I have great pleasure to acknowledge receipt of your cheque No. B. 942296 on the National Bank of India Ltd. Bombay for Rs. 1954—12—0 in full settlement of the claim on Policy No 3765 of my deceased brother Ganapathi Kamath.

The Policy was deliverd to you duly discharged on 21st October 1932 add your Head Office have issued the cheque on the 25th October **on the very day they received the Policy in their hands.**

I am really greatful for the prompt settlement of the claim for which your Company is so well known

YOURS FAITHFULLY,

*Sd* **Panchmal Narasimha Kamath**

## 56 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ ಪಿತ್ತದ ಬಾಧೆ, ರಕ್ತಪಿತ್ತ, ಜೀರ್ಣಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಹ ತುಂಬಿಕೊಳ್ಳುವುದು ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ 7

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಅಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ ಬಾಟ್ಲಿ 1ಕ್ಕೆ ರೂ 1—2—0 1 ಡಬ್ಬಿ ಮಾತ್ರೆಗೆ ರೂ 1—6—0, 2 ಬಾಟ್ಲಿ ಔಷಧಕ್ಕೂ ರೂ 4—12—0

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ ಬಾಟ್ಲಿ 1ಕ್ಕೆ 0—10—0 3ಕ್ಕೆ 1—12—0

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ದೊರೆಯುವರು ಮಗುವಿನ ಆರೋಗ್ಯವು ನಿರಾತಂಕವಾಗುವುದು ಪ್ರಸವಿಸಿದ ತರುವಾಯ 7 ದಿನಗಳ ಮಾತ್ರೆಗೆ ಆಣೆ 3 4ನೇ ದಿವಸದಿಂದ ದಶಮೂಲ ಬೆಲೆ ಬಾಟ್ಲಿ 1ಕ್ಕೆ ರೂ 1—8—0 2 ಬಾಟ್ಲಿಗಳಿಗೆ ರೂ 3

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ। ಶ್ರೀನಿವಾಸ ಪೈಯವರ ಷೋಪಿನಲ್ಲಿ ಸಿಗುತ್ತವೆ

**ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು**

## ಸ್ಥಳೀಕ ನೋಟಗಳ ಬಾಣ!

ದಿವಾನ್ ಬಹದ್ದೂರ್ ಬಿ. ಮಹಾಬಲ ಹೆಗ್ಡೆಯವರ ಪಬ್ಲಿಕ್ ಪ್ರೋಸೆಕ್ಯೂಟರ್‌ಶಿಪ್—ಗವರ್ನಮೆಂಟ್ ಪ್ಲೀಡರ್‌ಶಿಪ್ ಖಾಲಿ ಬೀಳಲಿದೆಯೆಂಬ ವಾರ್ತೆ ನಮ್ಮ ಅಧಿಕಾರಾಕಾಂಕ್ಷಿತ ವರ್ಗದವರೊಳಗೆ ಮಿಂಚಿನಂತೆ ಹರಡಿದೆ! ನಾನು ಮುಂದೆ ತಾನು ಮುಂದೆಂಬ ಜಂಘಗಳಿಗೆ ಈಗಾಗಲೇ ಪ್ರಾರಂಭವಾಗಿದೆ!—ದೇಶ ಸೇವೆಯಲ್ಲವೇ?

o o o o o o

ದೊಡ್ಡ ದೊಡ್ಡ ಪದವಿಗಳನ್ನು ಹೊಂದಲು ಈಗಿನ ದಿನಗಳಲ್ಲಿ ಕಷ್ಟವಿಲ್ಲ. ಟೀಪಾರ್ಟಿಯನ್ನೋ ಗಾರ್ಡನ್ ಪಾರ್ಟಿಯನ್ನೋ ಕೊಟ್ಟು ಸರಕಾರಿ ಮುಖಂಡರುಗಳನ್ನು ಮೆಚ್ಚಿಸಿ ಕೃತಕೃತ್ಯರಾದರೆ ಮುಗಿಯಿತು! ಹಾಗಿರುವಾಗ ನಮ್ಮ ಕೆಲವು ಪಟ್ಟಣಿಗರು ಸುಮ್ಮಗೆ ಹಾತೊರೆಯುವುದೇಕೆ?

o o o o o o

ತಾನು ಬಹಳ ಬುದ್ಧಿವಂತ! ತಾನು ಅಂತಹ ಪದವೀಧರ! ಇಂತಹ ಸಾಹಸಕೃತ್ಯ ಮಾಡಿದವನೆಂದು, ಕೆಲವರು ಆತ್ಮಸ್ತೋತ್ರವನ್ನು ಮಾಡಿ ಜನರ ಮತ್ತು ಸರಕಾರದ ಮನವೊಲಿಸಿ ಇಂತಹ ಸ್ಥಾನಗಳ ಚುನಾವಣೆಗೆ ನಿಲ್ಲುತ್ತಾರೆ ಚುನಾಯಿತರಾದೊಡನೆ ಅವರು ತುಂಡರಿಸದಂತೆಯೇ ಆಗಿಬಿಡುತ್ತಾರೆ! ಇದು ವಿಶೇಷ!

o o o o o o

ಅಂತೂ ಈ ಸಲದ ಚುನಾವಣೆಯಲ್ಲಿ ದಿವಾನ ಬಹದ್ದೂರ್ ರಾವ್ ಬಹದ್ದೂರ್ ಅಥವಾ ರಾವ್ ಸಾಹೇಬ್‌ಗಳೇ ಜಯಿಸುವಂತಿದೆ ಯಾರೇ ಇರಲಿ!—ನಾಡಿಗೆ ಪ್ರಯೋಜನವಿದ್ದವರಾದರೆ ಸಾಕು!

o o o o o o

ಜನರಲ್ ಡಿಪ್ರೆಶನ್‌ನಿಂದಾಗಿ ನಮ್ಮ ಬಾರ್‌ಗಳ ವಕೀಲರನೇಕರು 'ಜಿಮ್ನೇಸಿಯಮ್'ನ ಬಾರ್ ಮೇಲೆ ಆಡುವ ದಿನ ಬಂದಿದೆ ಹಣಕ್ಕೆ ಬರಗಾಲ ಬಂದಿದೆ. ಕಿಸೆ ಬರಿದಾಗಿದೆ ಈ ಪಬ್ಲಿಕ್ ಪ್ರೋಸೆಕ್ಯೂಟರ್‌ಶಿಪ್ ಗ—ಪ್ಲೀಡರ್‌ಶಿಪ್ ಪದವಿಯಾದರೂ ದೊರೆತರಾದೀತಲ್ಲವೇ ಎಂಬ ಆಶೆ!

o o o o o o

ಜೂನಿಯರ್ ಸೀನಿಯರ್ ಎಡ್ವೋಕೇಟರುಗಳೊಳಗೆ ಪಂಥವಿದ್ದರೆ ಯಾರು ಗೆಲ್ಲುವರೋ ತಿಳಿಯುವುದಿಲ್ಲ! ಬಹದ್ದೂರ್‌ಗಳೊಳ್ಳೊಂದು ಗೆಲ್ಲುವುದಂತೆ! ಇವರು ಜನರಿಗೆ ಬಹು ದೂರವಾಗದಿದ್ದರೆ ಸೈ!

ದಿವ್ಯ ದೃಷ್ಟಿ

+ + + +

## The Canara Industrial & Banking Syndicate Limited.

**Established in 1925.** Branches Mangalore, Payyanur, Brakmavar, Kumta, Karwar, Hubli & Honnavar **Head Office:— UDIPI.**

Authorised Capital Rs 1,00,000, Subscribed Capital Rs 1,00,000 Paid up Capital Rs 20,000

STATEMENT OF AFFAIRS OF THE SYNDICATE AS ON 28TH FEBRUARY 1933

| LIABILITIES. | | | ASSETS. | | |
|---|---|---|---|---|---|
| Paid up Capital | Rs | 20,000 - 0 - 0. | Loans on Land mortgage | Rs. | 1,56,229— 2— 1. |
| Reserve & other funds | ,, | 20,250— 0— 0 | Loans on Valuable Securities | ,, | 2,08,334— 0—10. |
| Deposits | ,, | 8,37,461— 6—11 | Bills of Exchange, Hundis and Promissory Notes | | 4,27,591— 9— 0. |
| Due to Bankers | ,, | 71,566— 2— 3 | Investment on Shares of other Companies | ,, | 48,565— 0— 0. |
| Sundries | ,, | 49,927— 6— 4. | On Deposits with other Banks | ,, | 90,000— 0— 0. |
| | | | Sundries | ,, | 45,430— 1—11. |
| | | | Cash in hand & with Bankers | ,, | 28,055— 1— 8. |
| Total Rs. | | 9,99,204 - 15 - 6 | Total Rs. | | 9,99,204 - 15 - 6 |

Long and Short term Loans on attractive Schemes are grant

ALL KINDS OF BANKING BUSINESS UNDERTAKEN.

Udipi,
6—3—1933.

**P. A. Pai Bros.,**
*Managing Agents.*

# DUO-TREAD TIRES.

## Seiberling's Novel Features.

1. Air Cooled.
2. Duod Trea.
3. Twice the Mileage.
FOR
4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

# ಸ್ಫುಟ ವಿಚಾರಗಳು.

### ಯುರೋಪೀಯ ಮೆಂಬರರ ಪ್ರತಿನಿಧಿಯರು

ಸರ್ ಲೆಸ್ಲಿ ಹಡ್ಸನ್‌ರು, ಇವರು ಎಸೆಂಬ್ಲಿಯಲ್ಲಿ ಒಜೆಟು ಚರ್ಚಾ ಕಾಲದಲ್ಲಿ ಮಾಡಿದ ಭಾಷಣವನ್ನು ಓದಿದರೆ, ಯಾವ ಹಿಂದೀಯನು ಅದನ್ನೇ ಹೇಳಿದ್ದಲ್ಲಿ ಸರಕಾರೀ ಮೆಂಬರರ ನಿಂದೆಗೆ ಪಾತ್ರನಾಗುತ್ತಿದ್ದನೋ ಆದರಂತೆಯೆ ಇದೆ ಎಂದು ತೋರುತ್ತದೆ. ಪಿ ಎಂಡ್ ಓ ಕಂಪೆನಿಯ ಅಧ್ಯಕ್ಷರಾಗಿರುವ ಈ ದೊರೆಗಳು "ತೆರಿಗೆಗಳಿಂದ ಜನತೆಯು ಜರ್ಝರಿತವಾಗಿದೆ ದುಃಖದಿಂದ ಸಹಿಸಲಾರದೆ ಇದ್ದ ಚಿನ್ನವನ್ನು ಹಿಂದೀಯರು ಮಾರಿದರು ಚಿನ್ನದ ರಫ್ತನ್ನು ತಡೆಯಿರಿ, ಅಥವಾ ಅದರ ಮೇಲೊಂದು ಸುಂಕವನ್ನಾದರೂ ವಿಧಿಸಿರಿ ಸೈನ್ಯದ ಖರ್ಚನ್ನು ಕಡಿಮೆಮಾಡಿರಿ ಸಂಬಳಗಳನ್ನು ಒಮ್ಮೆಲೇ ಹಿಂದಿನಷ್ಟಕ್ಕೆ ಏರಿಸಬೇಡಿರಿ" ಎಂದು ಮೊದಲಾಗಿ ತಾವರು ಬಹು ಚನ್ನಾಗಿ ವಾದಿಸಿದರು ಇಲ್ಲಿಂದ ಚಿನ್ನವು ಪರದೇಶಗಳಿಗೆ ರಫ್ತಾಗುತ್ತಿದೆಯೆಂದು ಮಾತ್ರ ಇನ್ನೂ ನಮಗೆ ದಿವಾಳಿತನ ಬಂದಿಲ್ಲ ಎಂದು ಒಬ್ಬ ಸರಕಾರೀ ಮೆಂಬರರು ಗೋಷನದಲ್ಲಿ ನುಡಿದಿದ್ದರಂತೆ ಅಷ್ಟು ತಿಳಿದೂ ಇನ್ನೂ ಇನ್ನೂ ಒಜೆಟನ್ನು ಮನಸ್ಸಿಗೆ ಬಂದಂತೆ, ಜನತೆಗೆ ಏನೂ ಉಪಕಾರ ಮಾಡದೆಯೆ, ಮಂಜೂರು ಮಾಡಿಸುವರಲ್ಲ, ಯುರೋಪೀಯರ ಅಭಿಪ್ರಾಯವನ್ನಾದರೂ ಸರಕಾರವು ಮನ್ನಿಸುವುದೆ? ಈ ಸಾಹೇಬರು ಅಷ್ಟು ಧೈರ್ಯವಾಗಿ ಹೇಳಿದುದನ್ನು ನೋಡಿಯೆ ಓದಿಯೆ ಚಕಿತರಾದ ಇತರ ಯುರೋಪೀಯರೂ ಇದ್ದಾರೆ ಆದರೆ ಸತ್ಯವನ್ನು ಯಾರು ಹೇಗೆ ನುಡಿದರೂ ಒಂದೇ ಧ್ವನಿಯಲ್ಲವೆ?

### ಪೋಸ್ಟಾಫೀಸಿನಲ್ಲಿ ಠೇವಣಾತಿ

ಹೆಚ್ಚಿತು! ೧೧೦ ಕೋಟಿ ರೂಪಾಯಿ ಬೆಲೆಯ ಚಿನ್ನವು ಹೋಯಿತು ಎಂದು ದುಃಖಿಸಬಾರದು, ಈ ಠೇವಣಾತಿಯು ಹಿಂದೆ ಎಂದೂ ಇದ್ದಿಲ್ಲ! ಎಂದು ಸಮಾಧಾನ ಹೇಳುವವರಿದ್ದಾರೆ ಆದರೆ, ಇದರ ವಿಚಾರವೇ ಬೇರೆ ಇದ್ದುದನ್ನೆಲ್ಲ ಮಾರಿಯೇ ಅಂದೂ ಜೀವಿಸಬೇಕಾಗಿ ಬಂದ ಬಳಿಕ, ಒಂಟಿ—ಮೂಗುತಿಗಳನ್ನು ಸಹ ಮಾರಿದುದರಿಂದ, ಜನತೆಯಲ್ಲಿದ್ದ ದಾರಿದ್ರ್ಯವು ಇನ್ನಷ್ಟು ಅಧಿಕವೇ ಆಗಿದೆ ಬಂದಿಷ್ಟು ಕಷ್ಟಕಾಲ ಬಂದೊದಗಿದರೆ ಇನ್ನು ಇತರ ಯಾವ ರಕ್ಷಣೋಪಾಯವೂ ಸೇರಡಾರಂ ಮುಂದಿಗೆ ಇರಲಾರದು ಭಾಂಡವಲವಾಗಿ ದೊರೆಯಬಹುದಾಗಿದ್ದುದು, ಈ ರೀತಿಯಾಗಿ ನಿಷ್ಫಲವಾಗಿ ಅನ್ನವಸ್ತ್ರಕ್ಕೇ ಹೋಯಿತು ಇದ್ದುದನ್ನು ಈ ರೀತಿ ವ್ಯಯಿಸಿ ದುರ್ದಶೆ ಹೋಗಲಾಡಿಸಿಕೊಂಡುದನ್ನು ಅದೊಂದು ಬಗೆಯ ಸಂಪನ್ನತೆಯೆಂದು ಕೂಗಿ, ಸರಕಾರವು ತಾನು ಅಗತ್ಯವೆಂದು ಕಾಣುವ ವ್ಯಯವನ್ನು ನಿರ್ವಿವಾದವಾಗಿ ಮಾಡಬೇಕೆಂ ಆತುರವೇತಕ್ಕೆ? ನಿಜಸ್ಥಿತಿ ಎಂದರೆ, ಅಪಾರವಾದ ಚಿನ್ನವು ರಫ್ತಾದ ಕಾರಣವೇ, ಸರಕಾರದ ಆಫೀಸರುಗಳಿಗೆ ತ್ವರಿಸಿದ ಸಂಬಳವನ್ನು ಕೂಡ ಒದರುತ್ತಿದೆ ಮಾತ್ರವಲ್ಲದೆ ಸೈನ್ಯದ ಖರ್ಚನ್ನು ಇಳಿಸಲಾಗದೆ ಅಚ್ಚಳಿಯದೆ ಇಡಲಾಗುತ್ತಿದೆ— ಹೀಗಾಗಿ, ಒಡವನ ಕಿವಿಯೊಂಟಿ, ಬಡತಿಯ ಮೂಗುತಿ ಎರಡನ್ನು ಮಾರಿ, ಸಂಬಳದಾರೀ ಜನರಿಗೆ ಕೈಬೆಚ್ಚಗಾಗುವಂತಾಗಿದೆ, ಎಂಬುದೇ ಕೆಲಪತ್ರಿಕಗಳ ಟೀಕೆ

### ಹಿಂದೀ ನೌಕಾಸೈನ್ಯ

ವನ್ನು ಸ್ಥಾಪಿಸುವುದಕ್ಕೆ ಒಂದು ಕಾನೂನು ಉಂಟಾಗಬಹುದಾಗಿ ಈಗ ಲಕ್ಷಣಗಳು ತೋರುತ್ತಿವೆ ಹಿಂದೆ ಒಂದು ಸಲ ಎಸೆಂಬ್ಲಿಯಲ್ಲೇ, ಇಂತಹದೊಂದು ಕಾನೂನು ಮುಂದೆ ಬರಲು, ಸ್ವರಾಜ್ಯವಾದಿ ಪಕ್ಷದವರು ಅದನ್ನು ಕಾಡಲ ಹೊಂಕ್ಕ ತಳ್ಳಿದ್ದರು ಎಂದರೆ, ನಮ್ಮ 'ಹಿಂದೀ ಭೂಸೈನ್ಯ'ವಿರುವ ಹಾಗೆ ಇದೂ ಒಂದು ನೌಕಾ ಸೈನ್ಯ, ಅದರ ಅಪಾರ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ಹಿಂದೀಯರೇ ತೆರಿಗೆ ಕೊಡುವವರಾದ ಕಾರಣ ಮಾತ್ರ ಅದು 'ಹಿಂದೀ', ಅದರ ಉಪಯೋಗವು ಮಾತ್ರ ಇಡೀ ಬ್ರಿಟಿಷ ಸಾಮ್ರಾಜ್ಯಕ್ಕೆ ಈ ಪ್ರಸ್ತಾಪದಲ್ಲಿ ಈಗ ಮುಖ್ಯಮಂತ್ರಿಗಳಾಗಿರುವ ಮಿ| ಮೆಕ್ ಡೊನಾಲ್ಡರವರು ಹಿಂದೆಯೊಮ್ಮೆ— ಇದು ತೀರ ಸಾಮ್ರಾಜ್ಯಪಾಲನೆಗಾಗಿ ಹಿಂದೀಯರು ತೆರುವ ದಂಡ" ಎಂದು ಬರೆದಿದ್ದರಾದರೂ, ಈಗ ಅವರ ಅಭಿಪ್ರಾಯವು ಹೇಗಾಗಿ ಮಾರ್ಪಡಬಹುದೋ ತಿಳಿದಿಲ್ಲ

### ಇಂದಿನ ಪರಿಸ್ಥಿತಿ

ಇಂಗ್ಲೇಂಡ ಪಾರ್ಲಿಮೆಂಟಿನಲ್ಲೂ ಇಲ್ಲಿಯೂ ಒಂದೇ ಮುಹೂರ್ತದಲ್ಲಿ ಮುಂದಣ ರಾಜ್ಯಭಾರ ಕ್ರಮವನ್ನು ವಿವರಿಸುವ ಶ್ವೇತಪತ್ರವೂ ಬೇಳಕಿಗೆಯು ಪ್ರಕಟಗೊಳ್ಳುವುದು ಒಂದು ಘೋಷಣೆಯನ್ನು ಆಧರಿಸಿ ಹಲವರ ಆಕಾಂಕ್ಷೆಗಳು ಹಿಗ್ಗಲೂ ಕುಗ್ಗಲೂ ಅವಕಾಶವಿದೆ. ಕಾಂಗ್ರೆಸ್ಸಿನ ಒಂದು ಅಧಿವೇಶನವನ್ನು ಜರಗಿಸಲು ಆತಂಕಗಳಿಲ್ಲ. ಇತ್ತ ಕಾಂಗ್ರೆಸ್ಸಿನ ಧೋರಣೆಯಲ್ಲಿ ಬದಲಾವಣೆಗಳು ಎಂತೆಂತಹವು ಆಗಲಿವೆ ಎಂಬುದನ್ನು ಬರೆಯ ಒಹುದಾದಲ್ಲಿ ಬರೆಯಲು ಮಹಾತ್ಮರು ಸಿದ್ಧರಾಗಿದ್ದಾರೆ ಸರಕಾರವು ಒಂದು ಬಗೆಯ ಹಗೆತನದಿಂದ ಕಾಂಗ್ರೆಸ್ಸಿನ ಪ್ರಾಬಲ್ಯವನ್ನು ಕುಗ್ಗಿಸಲೆಳಸುವುದೆಂದೂ ನೊಂದು ಹೇಳುವವರಿದ್ದಾರೆ ಕಾಂಗ್ರೆಸ್ಸಿನ ಧೋರಣೆಯನ್ನೇ ಮೂಲ ಸೂತ್ರವಾಗಿ ಹಿಡಿದು ಘಟನೆ ಹೊಂದುವ ಬೇರೆ ಸಂಸ್ಥೆಗಳು ತಲೆಯೆತ್ತಲಾರಂಭಿಸಿವೆ. ಈ ಮಧ್ಯೆ, ಒಬ್ಬೊಬ್ಬರಾಗಿ ಕಾಂಗ್ರೆಸ್ಸಿನ ಸತ್ಯಾಗ್ರಹದಿಂದೇನು ಲಾಭವೆಂದು ಜೈಲಿನಿಂದ ರಾಜಿಕೊಟ್ಟು ಹೊರಬರುವವರೂ ಇದ್ದಾರೆ ಶ್ವೇತಪತ್ರವನ್ನು ಆಲೋಚಿಸುವುದೂ ಬೇಡವೆನ್ನುವುದೂ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ನಿಶ್ಚಿತವಾಗತಕ್ಕುದೆಂದೂ ಹೇಳುವವರೂ ಇದ್ದಾರೆ ಸೊನ್ನೆಯನ್ನು ಶೋಧಿಸಿ ಲಾಭವಿಲ್ಲೆಂದು ಶ್ವೇತಪತ್ರದ ಮೇಲೆ ಅಂಡಾಜಿನಿಂದಲೇ ಟೀಕಿಸಿದವರಿದ್ದಾರೆ ಅದರ ಕಡೆಗೇ ನೋಡುವವರಲ್ಲೆಂದರೂ, ಕಾಂಗ್ರೆಸು ಏನೆನ್ನುತ್ತಿದೆ ಎಂದು ನೋಡುವವರಿದ್ದಾರೆ, ಕೇಂದ್ರದಲ್ಲಿ ಜವಾಬ್ದಾರಿಯನ್ನು ಕೊಡಬೇಕೆಂದೂ ಎನ್ನುವ ಗವರ್ನರರಿದ್ದಾಗ, ಪೋಲೀಸು ಇಲಾಖೆಯನ್ನು ಪ್ರತಿನಿಧಿ ಮಂತ್ರಿಗಳಿಗೇ ಒಪ್ಪಿಸಬೇಕನ್ನುವ ಕರಣೀಕರೂ, ಎಲ್ಲಕ್ಕೂ ಮೊದಲು ರಕ್ಷಣೋಪಾಯವೆನ್ನುವ ಡಾಯರ್‌ಹಾರ್ಡರೂ, ಪ್ರತಿದಿನವೂ ಚರ್ಚಿಸಿ ಗೆಲ್ಲುವೆವೆಂಬ ಸ್ವರಾಜ್ಯವಿರೋಧಿ ಚರ್ಚಹಿಲ್ಲರೂ ಇದ್ದಾರೆ ಸಮುದ್ರ ಮಥನವಾಗುವಾಗ ಅಮೃತವೂ ವಿಷವೂ ಹುಟ್ಟುವುವು! ತಿಳಿದೇ ಇದೆ

### ಮದ್ರಾಸು ಗವರ್ನರರ ಭಾಷಣದಲ್ಲಿ

"ಕಾನೂನು ಕ್ರಮಗಳ ಇಲಾಖೆಯನ್ನು ಪ್ರಜಾಪ್ರತಿನಿಧಿಯಾದ ಮಂತ್ರಿಗ ವರ್ಗಾಯಿಸಿ ಕೊಡುವುದರಲ್ಲಿ, ಮದ್ರಾಸು ಸರಕಾರವು ಎದುರು ನುಡಿಯದು ಈಗಣ ಹೋಮ್ ಮೆಂಬರರಂಥವರು, ಎಂದರೆ, ನಿಂದೆ ಬಾಧೆಗಳನ್ನು ಗಣನೆಗೆ ತಾರದೆ, ತಮ್ಮ ಕರ್ತವ್ಯವನ್ನು ಮಾತ್ರ ನೋಡುವಂಥವರು, ದೊರೆವಷ್ಟು ದಿನ ಪೋಲೀಸ್ ಇಲಾಖೆಯನ್ನು ಜನ ಪ್ರತಿನಿಧಿಗಳಿಗೊಪ್ಪಿಸಲು ಆತಂಕವಿಲ್ಲ ಎಂದಿದೆ ಸರ್ ಮಹಮ್ಮದ್ ಉಸ್ಮಾನರಂಥಹ ಮೆಂಬರರು, ತೀವ್ರ ಸರಕಾರೀ ದಂಡು ಇಲಾಖಾ ಆಫೀಸರರಿಗಿಂತ ಕಠಿನವಾಗಿ ಪೋಲೀಸ ಕ್ರಮಗಳನ್ನು ಜ್ಯಾರಿಗೆ ತಂದು, ಯಥಾಯೋಗ್ಯವಾದ ಆಕ್ಷೇಪಣೆಗಳನ್ನು ಉದಾರಿಗ ಕೌನ್ಸಿಲಲ್ಲಿ ತಂದರೂ ಪರಿಗಣಿಸದೆ ಇದ್ದವರಂದು ಅವರಿಗ ಈ ಶಿಫಾರಸು ಬಹಿರಂಗವಾಗಿ ಕೊಟ್ಟುದಾಗಿದೆ ಇದುವರೆಗೆ ಯಾವ ಹೋಮ್ ಮೆಂಬರರಿಗೂ ದೊರೆಯದ ಸತ್ಕೀರ್ತಿಯು ಇವರಿಗೆ ದೊರೆತುದು ಒಂದು ಮಹಾಭಾಗ್ಯವೇ ಸರಿ ಆದರೆ, ಪ್ರಾಂತಿಕ ಸ್ವರಾಜ್ಯ ಪ್ರಾಪ್ತವಾದೊಡನೆ, ಈ ಮಹಾಶಯರೇ ಮೊದಲಾದವರ ಕೈಕೆಳಗೆ ಇದ್ದ ರೀತಿಯ ಪೋಲೀಸ ಆಡಳಿತವು ಅಗತ್ಯವೇ ಆಗದೆಂದು ಸ್ವರಾಜ್ಯ ಕಾಂಕ್ಷಿಯರ ನಂಬಿಗೆಯಿದೆ ಮತ್ತು ಇದೇ ರೀತಿಯ ವ್ಯವಸ್ಥೆಯಿಂದ ತಾನೆ ಪೋಲೀಸ್ ಇಲಾಖೆಯ ಕಾರ್ಯಭಾರವನ್ನು ನಿರ್ವಹಿಸಿ ಮಾತ್ರ ಸ್ವರಾಜ್ಯ ಕೊಡುವಂತಾದರೆ, ಅಂತಹ ಸ್ವರಾಜ್ಯವೇ ಬೇಡವೆನ್ನುವವರೂ ಇದ್ದಾರ ಸರ್ ಉಸ್ಮಾನರ ನಮೂನೆಯ ರಾಜ್ಯಭಾರವು ಬೇಕಾದಷ್ಟಕ್ಕಿಂತ ಹೆಚ್ಚಿನದಾಗಿ ಕೌನ್ಸಿಲಿಗೆ ಪದೇ ಪದೇ ಕಂಡು ಬಂದು ಟೀಕೆಗಳಾಗಿವೆ ಗವರ್ನರರು ಈ ವ್ಯಾಮೋಹವನ್ನು ಅನುಸರಿಸುವಂತೆ ಹೇಗಾಯಿತೋ ತಿಳಿಯದು

### ಜಮೀನ್ದಾರರ ಬೆದರಿಕೆ

ಎಸೆಂಬ್ಲಿಯಲ್ಲಿ ಈ ಕುರಿತು ಸರಕಾರೀ ಮೆಂಬರರು ಟೀಕಿಸಿ, "ಜಮೀನ್ದಾರರು ತಮ್ಮ ಹಕ್ಕು ಕಾಪಾಡಿಕೊಳ್ಳುವುದಕ್ಕೆಂದು ಬೇರೆ ಕಾನೂನುಗಳನ್ನು ಮಾಡಿಸಿಕೊಳ್ಳುವ ಅಗತ್ಯ ಕಾಣಬಾರದು ಒಕ್ಕಲುಗಳನ್ನು ತಮ್ಮಂತೆಯೆ ನಡೆಸಿ, ಅವರ ಮೇಲ್ಮೆಯೆ ತಮ್ಮ ಮೇಲ್ಮೆಯೆಂದು ಸಾಧಿಸುತಿದ್ದು ಮುಖಂಡತನ ವಹಿಸಿದರೆ, ಅದರಲ್ಲಿ ಶ್ರೇಯಸ್ಸಿದೆ ಯಾವ ರೀತಿಯಿಂದಲಾದರೂ ಒಕ್ಕಲುಗಳ ಹಿತ ಬೇರೆ, ತಮ್ಮದು ಬೇರೆ ಎಂದು ಅವರು ಎಣಿಸುವುದು ತಪ್ಪಾಗಿದೆ" ಎಂದರು ಒಹು ಮಟ್ಟಿಗೆ ಜಮೀನ್ದಾರರು ಎನ್ನೆಂದರೂ ಜಮೀನ್ದಾರರೇ, ಒಕ್ಕಲುಗಳನ್ನು ಹೀರಿಕೊಂಡು ಬದುಕುವುದೇ ಧ್ಯೇಯವೆನ್ನುವರು ಒಕ್ಕಲುಗಳಲ್ಲಿ ಹೆಚ್ಚಿನವರು ಜಮೀನ್ದಾರರ ರಕ್ಷಕರಾಗಿಯೆ ಬಾಳಿರುವರು ಜಮೀನ್ದಾರರು ಚುನಾಯಿಸಿ ಬರುವಂತೆ ಮಾಡುವವರೇ ಒಕ್ಕಲುಗಳು; ಅಂತಹ ಬೋರ್ಡು ಯಾ ಕೌನ್ಸಿಲುಗಳಲ್ಲಿ ಒಕ್ಕಲುಗಳ ಮರ್ದನಕ್ಕಾಗಿ ಸಾಧಿಸುವವರೇ ಜಮೀನ್ದಾರರು, ಎಂದಿತ್ಯಾದಿ ಅಭಿಪ್ರಾಯಗಳು ಸರಕಾರಕ್ಕೂ ತಿಳಿಯದೆ ಇಲ್ಲ.

# NOTES
# ನೋಟಗಳು.

ಭೂಕಂಪಗಳ ಗುಂಪು! ಜಾಪಾನಿನಲ್ಲಾಯಿತು. ೩೦೦೦ ಜನ ಮಡಿದರು ಚೀನದಲ್ಲಾಗುತ್ತಿದೆ, ಸೇನೆಯಷ್ಟೇ ಹಿಂಜರಿಯಿತು. ಯುನೈಟೆಡ್ ಸ್ಟೇಟ್ಸಿನಲ್ಲಾಯಿತು, ೮೦೦೦ ಬೇಂಕುಗಳು ಬಾಗಿಲು ಮುಚ್ಚಿದುವು ಕೆಲಿಫೋರ್ನಿಯದಲ್ಲಾಯಿತು, ೪೦೦೦ಕ್ಕೆ ಪೆಟ್ಟು ಇಂಗ್ಲೇಂಡಿನಲ್ಲಾಯಿತು, ವ್ಹಾಯಿಟ್ ಪೇಪರ್ ಹೊರಡಿತು. ಚರ್ಚಹಿಲ್ಲರ ಡಾಯ್‌ಹಾರ್ಡರ ಕೂಟದಲ್ಲಾಯಿತು, ಮೂರು ದಿನ ಚರ್ಚೆಗೆ ಸನ್ನಾಹ ಎಸೆಂಬ್ಲಿಯಲ್ಲಾಯಿತು, ಎಸೆಂಬ್ಲಿಯ ಮತ್ತು ಸರಕಾರೀ ಮೆಂಬರರ ಹುದ್ದೆಯ ಅವಧಿ ಹೆಚ್ಚಿತು ಮದ್ರಾಸು ಕೌನ್ಸಿಲಿನಲ್ಲಾಯಿತು, ಹೆಸರಿಗೆ ಮಾತ್ರ ತೀರ್ವೆ ರಿಯಾಯಿತಿ ಕುಸುರಿಗೆ ಸಂಬಳ ಕಡಿತದ ಅರ್ಧಕ್ಕರ್ಧ ಹಿಂದಕ್ಕೆ ಕೂಡಿಸಲಾಯಿತು ಮಂಗಳೂರಲ್ಲೂ ಆಯಿತು, ಸಿಡಿಮದ್ದು ಲೈಸಿನ್ಸಲ್ಲಿ ಹೊಗೆಯಾಗಿ ಹಾರಿತು!

* * * *

ಸಿಡಿತವು ಇನ್ನೊಂದು ಬಗೆಯಾಗಿ ಬ್ರಿಟಿಷ ಮಂತ್ರಿಮಂಡಲದ ಅಭಿಧಾವಕರಾದ -ನ್ಸರ್ವೇಟಿವರೊಳಗೆ ಚರ್ಚಹಿಲ್ಲ ಪಕ್ಷವೊಂದು ಬೇರೆ! ಇಂಡಿಯಕ್ಕೆ ದುರ್ಬಲತೆಯಿಂದ ಶರಣಾಗತರಾಗಬಾರದು ಎಂದೊಂದು ಭಯಂಕರ ಕೂಗು ಈ ಸಿಡಿತದ ಫಲ ಯುದ್ಧ ಸನ್ನಾಹದ ಹೊಸ ಹೊಸ ಪರಿಗಳುಂಟಾಗಿ ಶಾಂತಿಯು ದೂರ ದೂರ ಹೋಗುವಂತೆ ಪ್ರಯತ್ನಿಸಲಾಗುವುದೂ, ಲಂಕೆಶಯರೂ ಜಾಪಾನೂ ವ್ಯಾಪಾರದ ಬಗೆಗೆ ಒಂದಾಗಿ ಚೀನ-ಇಂಡಿಯಗಳಲ್ಲಿ ಕಾರ್ಯನಿರ್ವಾಹಕ ಮಾಡಲು ಒಪ್ಪಂದಗಳಾಗಲು ಅನುಕೂಲತೆಯುಂಟಾಗುವುದೂ, ಇದೇ! ಕಾರಣವೆನ್ನಬಹುದೆ?

* * * *

ಸುಳ್ಳು ದಸ್ತಾವೇಜು ಮೊದಲಾದುವನ್ನು ಶೋಧಿಸುವ ಎಕ್ಸ್‌ಪರ್ಟರೊಬ್ಬರು ಇದ್ದಾರೆ ಇವರು ಮಸಲಿಪಟ್ಟಣದಲ್ಲಿ ಒಂದು ವ್ಯಾಜ್ಯದಲ್ಲಿ ರುಜುವಾತು ಕೊಡುತ್ತ, ತಮ್ಮ ವಿಷಯವಾಗಿ ಕೆಂಬ್ರಿಜ್‌ನಲ್ಲಿ ಬಿ ಎಸ್ ಸಿ ಪರೀಕ್ಷೆ ಪಾಸಾದುದಾಗಿ ರುಜುವಾತು ಕೊಟ್ಟರು ಅಂತರಂಗದಲ್ಲಿ ಕೋರ್ಟಿನವರು ಕೆಂಬ್ರಿಜ್ ಬರೆದ್ದಲ್ಲಿ, ಶ್ರೀ ಮಹಾತ್ಮರ ಹೆಸರೇ ಅಲ್ಲಿನ ಕೊಲೆಜಿನಲ್ಲಿದ್ದಿಲ್ಲವೆಂದಾಯಿತು ಈಗ ಈ ಸುಳ್ಳು ಡಿಗ್ರಿ ಹೇಳಿದುದಕ್ಕೆ ಮೊಕದ್ದಮೆಯಾಗುವುದಂತೆ

* * * *

ಮಹಾ ಮಘಾಸ್ನಾನವಾಯಿತು ಕುಂಭಕೋಣದಲ್ಲಿ ಬಹಳ ಶಿಸ್ತಿನಿಂದ ನಡೆಯಿತು ೧೫ ಲಕ್ಷ ಜನರಿದ್ದರಂತೆ ಇಪ್ಪರು ಸತ್ತರು ಎಲ್ಲಿ ಮಾಡಿದ ಪಾಪವನ್ನೂ ಕಾಶಿಯಲ್ಲಿ ಕಳೆದುಕೊಳ್ಳಬಹುದು, ಕಾಶಿಯಲ್ಲಿ ಮಾಡಿದ ಪಾಪವನ್ನು ಕುಂಭಕೋಣದಲ್ಲಿ ಹೋಗಲಾಡಿಸಬಹುದು ಆದರೆ ಕುಂಭಕೋಣದಲ್ಲಿ ಪಾಪ ಮಾಡಿದರೆ, ಕುಂಭಕೋಣದಲ್ಲೇ ಪ್ರಾಯಶ್ಚಿತ್ತವೆಂದು ಭಟ್ಟರ ಹೇಳಿಕ

* * * *

ಇದುವರೆಗೆ ಇಲ್ಲಿಂದ ಪರವೂರುಗಳಿಗೆ ಹೋದ ಚಿನ್ನವು ಜನಸಂಖ್ಯೆಯ ತಲಾ ಒಂದಕ್ಕೆ ೨೪ ರೂಪಾಯಿಯಂತಾಗಿದೆ. ಒಟ್ಟು ಜನಸಂಖ್ಯೆಯ ದುಡಿತವು ತಲಾ ಒಂದಕ್ಕೆ ೭೨ ರೂಪಾಯಿ ಈಗಲೇ ಇದರ ಮೂರರಲ್ಲೊಂದು ಅಂಶವು ಚಿನ್ನದ ರೂಪ ಹೊಂದಿದಂತಾಗಿ, ಮೂವರಲ್ಲೊಬ್ಬನ ವಾರ್ಷಿಕ ದುಡಿತ ಸೊನ್ನೆಯಾಯಿತು ಎಂದರೆ, ನೂರು ಮಿಲ್ಲಿಯದಷ್ಟು ಜನರು ನಿರ್ಗತಿಕರೆಂದರ್ಥ

* * * *

ಕಲ್ಕತ್ತಾ ಯುನಿವರ್ಸಿಟಿಯ ಕಾನೂನು ಕಲಿಯುವ ವಿದ್ಯಾರ್ಥಿಗಳ ಸಂಘದಲ್ಲಿ ಸದರಿ ಕೊಲಜಿನ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯು,—ದೇಶಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ತೃತೀಯ ರೌಂ. ಟೇ. ಪರಿಷತ್ತಿನ ನಿರ್ಣಯಗಳಿಗನುಸಾರವಾಗಿ ಹಿಂದೀಯರು ಕಾರ್ಯ ನಿರ್ವಹಿಸಬಾರದೆಂದು ಒಂದು ಠರಾವು ಮಂಜೂರಾಗಿದೆ ಯುದ್ಧ ಮಾಡಲು ತೆರಳಬಾರದೆಂದು ನಿರ್ಧರಿಸಿದ ಒಕ್ಸಫರ್ಡಿನವರಿಗಿಂತ ಈ ವಿದ್ಯಾರ್ಥಿಗಳು ಕಡಿಮೆಯವರೇ?

---

ಇನ್ನೂ ಇನ್ನೂ ಸ್ವರಕ್ಷಣೆಗೆಂದು ಇವರು ಕಾನೂನು ಮಾಡಿಸಿಕೊಳ್ಳುವುದು ಸರಕಾರಕ್ಕೂ ವಿಹಿತವಾಗಿ ತೋರುವುದಿಲ್ಲ. ಒಕ್ಕಲುಗಳ ಮುಖಂಡರುಗಳಾಗಿ ಜನತೆಯ ನಾಯಕರಾಗಿ ಜಮೀನ್ದಾರರು ಸಾಧಿಸಿ ತಮ್ಮ ಮತ್ತು ಒಕ್ಕಲುಗಳ ಅಭಿವೃದ್ಧಿಯನ್ನೇಕೆ ಪ್ರಯತ್ನಿಸಬಾರದು?

## ಸುಭಾಷ್ ಬೋಸರ ದೇಶಭಕ್ತಿ.

ಶ್ರೀಯುತ ಸುಭಾಷ್ಚಂದ್ರ ಬೋಸರು ಮೊನ್ನೆ 'ಗೇಂಜ್' ಸ್ಟೀಮರಿನ ಮೂಲಕ ಯುರೋಪಕ್ಕೆ ತೆರಳಿದರಷ್ಟೆ! ಅವರು ಸ್ಟೀಮರಿನಲ್ಲಿರುವಾಗ ಒಬ್ಬ ಪತ್ರಿಕಾ ಪ್ರತಿನಿಧಿಗೆ ಹೀಗೆಂದರು — ನನ್ನನ್ನು ನನ್ನ ನಾಡಿನಿಂದ ಒಂದು ವರ್ಷಕ್ಕಿಂತಲೂ ಹೆಚ್ಚಿನ ಅವಧಿ ಮೇಲೆ ಗಡಿಪಾರುಮಾಡಿರುವರು. ಈ ಸಲ ನನ್ನ ಒಂಥ ತೆಯ ಅನಾರೋಗ್ಯ ಸ್ಥಿತಿಯಿಂದಾಗಿ ನನ್ನ ಆರೋಗ್ಯವು ಸಂಪೂರ್ಣ ಕೆಟ್ಟುಹೋಯಿತು. ನನ್ನ ಸ್ಥಿತಿಯು ದಿನೇ ದಿನೇ ಕೆಟ್ಟುಹೋದುದರಿಂದ ನನ್ನನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಒಯ್ಯಬೇಕಾಯಿತು. ನನ್ನ ದೇಶಬಾಂಧವರಾದ ಸಾವಿರಾರು ಮಂದಿಗಳಿಗೆ ಸುಸ್ವಾಗತವನ್ನೀಯುತ್ತಿದ್ದ ಬಂಗಾಳದ ನೆರೆಮನೆಗಳು ಕೂಡಾ ನನ್ನನ್ನು ಸ್ವಾಗತೀಕರಿಸಲಾರದೆ, ನನ್ನನ್ನು ಕಂಡು ಬಾಗಿಲು ಮುಚ್ಚಿಕೊಂಡುವು. ನನ್ನ ಬಂಧನ ಸಮಯದಲ್ಲಿ ದೇಶವು ಮಹಾ ವಿಪತ್ತಿಗೆ ಸಿಕ್ಕಿದ್ದಿತು. ಈ ವೇಳೆಯಲ್ಲಿ ನಾನು ನಿರುಪಾಯನಾಗಿ ಕಾರಾಗೃಹದ ಕತ್ತಲೆಯಲ್ಲಿ ಕುಳಿತು ನನ್ನ ದೇಶೀಯರು ಪ್ರಸ್ತುತದ ಸಾಮರ್ಥ್ಯವಂತೆಕ್ಕೆಯಲ್ಲಿ ಯುಗೊಳ್ಳಲೆಂದೂ, ಅವರ ಪೂರ್ವದ ಕ್ಲೇಶಪರಂಪರೆಗಳ ವಿಭೂತಿಯಿಂದಾಗಿ ನವೀನ ಬಂಗಾಳವು ಜನಿಸಲೆಂದೂ ಮತ್ತು ನಮ್ಮ ದೇಶಿಗರು ದೌರ್ಬಲ್ಯ, ಅನೀತಿಗಳ ದವಡೆಯೊಳಗೆ ಸಿಲುಕ ನಂತೆ ಅವರಿಗೆ ಚೈತನ್ಯವನ್ನು ಭರತಮಾತೆಯು ಕರುಣಿಸ ಲೆಂದೂ ಪ್ರಾರ್ಥಿಸುತ್ತಿದ್ದೆ. ಬಾಹ್ಯ ಪ್ರಪಂಚದ ಸುದ್ದಿಗಳಿಂದ ದೂರೀಕರಿಸಲ್ಪಟ್ಟವನಾಗಿದ್ದ ನಾನು ಕಾರಾಗೃಹದ ಕತ್ತಲೆಯಲ್ಲಿ ಕುಳಿತು ಧ್ಯಾನನಿರತನಾಗಿ ದೀರ್ಘ ದಿನಗಳನ್ನು ಕಳೆದನು. ಆ ಸಮಯದಲ್ಲಿ ನನ್ನನ್ನು ಸಮಾಧಾನ ಪಡಿಸುವುದ ಕ್ಕಾಗಿಯೂ, ನನಗೆ ಬಲವನ್ನು ಕೊಡುವುದಕ್ಕಾಗಿಯೂ ನಮ್ಮ ವಿಭೂತಿಪುರುಷರಾದ ಬಂಕಿಮ, ವಿವೇಕಾನಂದ, ದ್ವಿಜೇಂದ್ರಲಾಲ್ ಮತ್ತು ದೇಶಬಂಧುಗಳು ಪೂಜಿಸುತ್ತಿದ್ದ ಭರತಮಾತೆಯು ತನ್ನ ದಿವ್ಯ ದರ್ಶನವನ್ನು ನನಗೆ ಕೊಡುತ್ತಿದ್ದಂತೆ ನನ್ನ ಚಿತ್ತಕ್ಕೆ ಭಾಸ ವಾಗುತ್ತಿತ್ತು. ನನಗೆ ಅನಿರ್ವಚನೀಯವಾದ, ಇನ್ನಾರ ತನಕ ಆಗದ ಆನಂದ ಸುಖಾನುಭವಗಳಾದುವು. ಭರತಮಾತೆಯ ಪ್ರಜ್ವಲಿತ ಸ್ವರೂಪವು ಅನಂತವಾದುದೆಂದು ನನಗನ್ನಿಸಿತು. ಅವಳ ಅಂತಹ ದರ್ಶನಲಾಭವು ನನ್ನ ಸರ್ವಸ್ವವಾಗಿದೆ. ನನ್ನನ್ನು ಅದರಿಂದ ದೂರವಿರಿಸಲು ಜಗತ್ತಿನ ಅವಶಕ್ತಿಗೂ ಸಾಧ್ಯವಿರದು. ಅವಳ ಪಾದಾರವಿಂದವು ನನಗೊಂದು ಮಹಾ ಕ್ಷೇತ್ರವಾಯಿತು.

ಅಲ್ಲಿ ನಾನು ದಿನಂಪ್ರತಿ ನನ್ನ ಬೊಗಸೆ ಹೂವನ್ನೂ ನನ್ನ ಮುದಿಪುಗಳನ್ನೂ ಅರ್ಪಿಸುತ್ತಿದ್ದೆ. ನನ್ನ ಜೀವನಾಶಯಗಳಲ್ಲಿ ಪ್ರಥಮದ್ದು ನವೀನ ಬಂಗಾಳ ರಚನೆ. ಭರತವರ್ಷದ ಮತ್ತು ಮಾನವ ಕುಟುಂಬದ ಸೇವೆಗಾಗಿ ಸಿದ್ಧವಾಗುವ ಉನ್ನತ ಉತ್ಕೃಷ್ಟ, ಅವಿಭಕ್ತ, ಅನಂತವಾದ, ಸರ್ವಮತೀಯರಿಗ ಮನೆ ಯಾಗುವ, ಹಿಂದೂ, ಮುಸಲ್ಮಾನ, ಕ್ರೈಸ್ತ, ಬೌದ್ಧರಿಗೆ ಅಮೋಘ ಮಂದಿರವೆನಿಸುವ ಬಂಗಾಳ ರಚನೆಯಾಗಬೇಕೆಂದೇ ನನ್ನ ಜೀವಿತದ ಹಂಬಲವಿದೆ. ಆದಕಾರಣವೇ ನನ್ನ ಜೀವನ ಇದನ್ನುತ್ತನ್ನಗೊಳಿಸಬೇಕೆಂದೇ ನನ್ನ ಅನುದಿನದ ಕನಸು. ಈ ಕನಸು ಕಾರ್ಯತಃ ಉದ್ಭವಿಸಲೆಂದೇ ನಾನು ಸೆರೆಗೊಡ್ಡಿ ಪ್ರಾರ್ಥಿಸುತ್ತಿರುವೆನು. ಈ ಸಾಧನೆಯ ಪೀಠದಲ್ಲಿ ನಮ್ಮ ಜಯಕಾರಕಯನ್ನರ್ಪಿಸಬೇಕು. ಈ ಒಂದು ಹಂಬಲ ದಲ್ಲಿ ಕೃತಕೃತ್ಯರಾಗುವೆವಾದರೆ ನಮ್ಮ ಎಂತಹ ಆತ್ಮ ಯಜ್ಞವೂ, ನಮ್ಮ ಎಂತಹ ಕ್ಲೇಶರಾಶಿಗಳೂ ಘನವಲ್ಲ.

ಬಾಂಧವರೇ, ಅಂತಹ ಅವಿಚ್ಛಿನ್ನ ಬಂಗಾಳವು ನಿರ್ಮಾಣ ವಾಗಬೇಕೆಂಬ ಮನದಾಶೆಯನ್ನಿಟ್ಟುಕೊಂಡು ಉನ್ನತೋದ್ದೇಶ ಸಾಧಕರಾಗಲಾರಿರಾ? ನಮ್ಮ ಪೂರ್ವಿಕರ ಧ್ಯೇಯದ ಔಚಿತ್ಯವನ್ನು ಸ್ಮರಿಸಿಕೊಳ್ಳಿರಿ! ಅವರ ಹಂಬಲಗಳ, ಸದಿಚ್ಛೆಗಳ ಕಿರೀಟಗಳು ನೀವೆಂಬುದನ್ನು ತಿಳಿಯಿರಿ! ಅವರ ಉದ್ದಿಷ್ಟಗಳೇ ದೇಶದ ಭವಿತವ್ಯವೆಂಬ ಸತ್ಯ ವಾಕ್ಯವನ್ನು ಮರೆಯದಿರಿ! ನೀವು ನಿಮ್ಮ ಮನಸ್ಸು ಮತ್ತು ಕ್ರಿಯೆಗಳಲ್ಲಿ ಘನವಂತರಾದರ ಮಾತ್ರ ನೀವು ನಮ್ಮ ಭರತಭೂಮಿಯನ್ನು ಘನವಂತಗೊಳಿಸಲು ಸಾಧ್ಯವಿದೆ. ಆದುದರಿಂದ ನನ್ನಂತರ್ಯದಲ್ಲಿರುವ ಸಕಲ ವಿನೀತತೆಯನ್ನು ತೆರೆದು ಹೇಳುವುದೇನೆಂದರೆ, ನಿಮ್ಮೊಳಗಿನ ಅಂತಃಕಲಹಗಳನ್ನು ಮರೆಯಿರಿ! ಭಿನ್ನಾಭಿಪ್ರಾಯವನ್ನು ಬಿಟ್ಟು ಐಕ್ಯಗೊಳ್ಳಿರಿ! ಬಂಗಾಳವನ್ನು ಏಕೀಕರಿಸಿ ಘನಗೊಳಿಸಿರಿ! ಅವಳ ಪ್ರಜ್ವಲನೆಯಿಂದಾಗಿ ನಮ್ಮ ಆನಂದೋತ್ಸವವು ದ್ವಿಗುಣಿತವಾಗಲಿ! ಬಂಗಾಳವು ಅಮೃತವಾದರೆ ಯಾರು ಮೃತರಾಗುವರು? ಬಂಗಾಳ ಮೃತವಾದರೆ ಯಾರು ಅಮೃತರಾಗುವರು?

++++

## ಜಿಲ್ಲೆಯಲ್ಲಿ ಫೆಬ್ರವರಿ ಅಖೈರು ವರೆಗಿನ ಹರಿಜನ ಸೇವಾ ಕಾರ್ಯದ ವರದಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆಯಾ ಸ್ಥಳೀಕ ಕಮಿಟಿಗಳು ತಮ್ಮ ಕಾರ್ಯವನ್ನು ಮುಂದೊತ್ತಿವೆ. ಮಂಗಳೂರು ಕಮಿಟಿಯವರು ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವದ ಸಂದರ್ಭದಲ್ಲಿ ಹರಿಜನರಿಗೆ ಎಂಜಲೆಲೆ ಕೊಡುವುದನ್ನು ನಿಲ್ಲಿಸಿ ಒಳ್ಳೇ ಆಹಾರವನ್ನು ಒದಗಿಸುವ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು. ಇದೇ ರೀತಿ ಮಂಗಳೂರು ಸಾರಸ್ವತ ದೇವಸ್ಥಾನದಲ್ಲಿಯೂ ಜಿಲ್ಲೆಯಲ್ಲಿ ಕೆಲವೆಡೆ ಮದುವೆ ಮೊದಲಾದ ಸಂದರ್ಭಗಳಲ್ಲಿಯೂ ನಡೆಯಿತು. ಮಂಗಳೂರು ಕಮಿಟಿಯವರು ಉಳ್ಳಾಲ ಶಾಲೆಗೆ ಸೇರಿದ ಹರಿಜನ ಮಕ್ಕಳಿಗೆ ಬಟ್ಟೆ ಹಂಚಿದರು. ಉಡುಪಿಯಲ್ಲಿಯೂ ಕಾರ್ಕಳದಲ್ಲಿಯೂ ಇದೇ ರೀತಿ ಶಾಲಾ ಮಕ್ಕಳಿಗೆ ಬಟ್ಟೆ ವ ಪುಸ್ತಕಗಳು ಹಂಚಲಾದವು. ಮಂಗಳೂರಲ್ಲಿ ಉದ್ಯೋಗವಿಲ್ಲದೆ ತೊಂದರೆಯಲ್ಲಿರುವ ತೋಟಿಗಳಿಗೆ ಶ್ರೀ ಕಾರ್ನಾಡು ಸದಾಶಿವರಾಯರು ಫಲಾಹಾರಗಳನ್ನು ಕೊಟ್ಟದಲ್ಲದೆ ಹರಿಜನ ಕಮಿಟಿಯವರು ಅವರಿಗೆ ಬಟ್ಟೆ ಮೊದಲಾದುವನ್ನು ಕೊಟ್ಟು ಸಹಾಯ ಮಾಡಿದರು. ನಿರುದ್ಯೋಗಿಗಳಿದ್ದ ಹಲವರಿಗೆ ಅಲ್ಲಲ್ಲಿ ಕೆಲಸಗಳನ್ನು ಕೊಡಿಸಲಾಯಿತು. ಹರಿಜನರೊಳಗಿನ ಸುಧಾರಣೆಯ ಪ್ರಚಾರಕ್ಕೆ ಅಲ್ಲಲ್ಲಿ ಅವರ ಸಭೆಗಳು ಸೇರಿಸಲ್ಪಟ್ಟವೆ.

ಹರಿಜನರೊಳಗೆ ಈ ರೀತಿ ಕೆಲಸವು ನಡೆಯುತ್ತಿರುವಾಗ ಸವರ್ಣ ಹಿಂದುಗಳ ನಡುವೆ ಅಸ್ಪೃಶ್ಯತಾ ನಿವಾರಣೆ ಮತ್ತು ದೇವಸ್ಥಾನ ಪ್ರವೇಶಗಳ ಕುರಿತು ಪ್ರಚಾರ ಕಾರ್ಯವೂ ಆರಂಭಿಸಲ್ಪಟ್ಟಿತು. ಎರವಾಡಾ ಒಪ್ಪಂದ, ಡಾ। ಸುಬ್ಬರಾಯನರ ಮತ್ತು ಶ್ರೀ ರಂಗ ಅಯ್ಯರರ ಮಸೂದೆಗಳನ್ನು ಸಮರ್ಥಿಸಿ ಅಲ್ಲಲ್ಲಿ ಸಾರ್ವಜನಿಕ ಸಭೆಗಳು ಸೇರಿಸಲ್ಪಟ್ಟವು. ವೈಸರಾಯರ ಅನುಮತಿ ಸಿಕ್ಕದೆ ಡಾ। ಸುಬ್ಬರಾಯನರ ಮಸೂದೆಯು ಬಿದ್ದುಹೋದ ಬಳಿಕ ಈಗ ಲೆಜಿಸ್ಲೇಟಿವ್ ಎಸೆಂಬ್ಲಿ ಮುಂದಿರುವ ಶ್ರೀ ರಂಗ ಅಯ್ಯರರ ಮಸೂದೆಗಳನ್ನು ಸಮರ್ಥಿಸಿ ಪುನಃ ಸಾರ್ವಜನಿಕ ಸಭೆಗಳು ಸೇರಿಸಲ್ಪಟ್ಟವು. ಮಂಗಳೂರಲ್ಲಿ ಈ ಬಗ್ಗೆ ಸೇರಿದ ಸಭೆಗೆ ಪಂಡಿತ ಶ್ರೀ ನಿಡ್ಲೋಡಿ ಅನಂತ ಉಪಾಧ್ಯರೇ ಅಗ್ರಾಸನವನ್ನು ವಹಿಸಿದ್ದರು.

ಶ್ರೀ ರಂಗ ಅಯ್ಯರರ ಮಸೂದೆಗಳಿಗೆ ಬೆಂಬಲ ಕೊಡಬೇಕೆಂದು ಜಿಲ್ಲಾ ಹರಿಜನ ಸೇವಾ ಸಂಘದವರನ್ನು ವಿನಂತಿ ಮಾಡಿಕೊಂಡಂತೆ ಡಿಸ್ಟ್ರಿಕ್ಟ್ ಬೋರ್ಡಿನವರು ಇದೇ ಫೆಬ್ರವರಿ ತಾ. ೨೮ಕ್ಕೆ ಸೇರಿದ ತಮ್ಮ ಸಭೆಯಲ್ಲಿ ಶ್ರೀ ಸದಾಶಿವ ಆಡಿಗರೊಬ್ಬರ ವಿನಾ ಎಲ್ಲಾ ಸದಸ್ಯರ ಅನುಮತಿ ಇದ್ದು ಪೂರ್ಣ ಬೆಂಬಲವನ್ನು ಕೊಟ್ಟಿರುವರು. ಇದೇ ರೀತಿ ಕಾರ್ಕಳ ತಾಲೂಕು ಬೋರ್ಡಿನವರು ಸರ್ವಾನುಮತದಿಂದ ಮಸೂದೆಗಳನ್ನು ಸಮರ್ಥಿಸುವ ಠರಾವನ್ನು ಮಂಜೂರು ಮಾಡಿರುವರು. ಉಳಿದ ತಾಲೂಕು ಬೋರ್ಡಿನವರೂ ಮಂಗಳೂರು ಮುನಿಸಿಪಾಲಿಟಿಯವರೂ ತಮ್ಮ ಬೆಂಬಲವನ್ನೂ ಕೊಡುವರೆಂದು ಹಾರೈಸಲಾಗಿದೆ. ಹರಿಜನ ಚಳವಳಿಯ ಸಾರ್ವಜನಿಕ ಸಭೆಗಳನ್ನು ಸೇರಿಸಲು ಶಾಲಾ ಕಟ್ಟಡಗಳನ್ನು ಉಪಯೋಗಿಸಲಿಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರೂ ಹಲವು ತಾಲೂಕು ಬೋರ್ಡಿನವರೂ ಅನುಮತಿಕೊಟ್ಟು ಸಹಾಯ ಮಾಡಿರುವರು.

ಜಿಲ್ಲಾ ಹರಿಜನ ಸೇವಾಸಂಘದವರು ಡಿಸ್ಟ್ರಿಕ್ಟ್ ಲೇಬರ್ ಆಫೀಸರರನ್ನು ಸಹಕರಿಸಬೇಕಾಗಿ ಕೇಳಿಕೊಂಡಂತೆ ಅವರು ಸಾಧ್ಯವಿರುವ ಎಲ್ಲಾ ಸಹಕಾರವನ್ನು ಕೊಡುವುದಾಗಿ ಆಶ್ವಾಸನವಿತ್ತಿರುವರು.

ಧನಸಹಾಯಕ್ಕಾಗಿ ಹೊರಡಿಸಿದ ವಿಜ್ಞಾಪನೆಯಲ್ಲಿ ಜಿಲ್ಲೆಯಲ್ಲಿಯ ಕೆಲಸದ ಬಗ್ಗೆ ವರ್ಷಕ್ಕೆ ೩೦೦೦ ರೂಪಾಯಿಗಳು ತಗಲುತ್ತವೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ೧೫೦೦ ರೂಪಾಯಿಗಳನ್ನು ಜಿಲ್ಲೆಯಲ್ಲಿ ಕೂಡಿಸಿದರೆ ಅಷ್ಟೇ ಹಣವನ್ನು ಅಖಿಲ ಭಾರತ ಹರಿಜನ ಸೇವಾಸಂಘದವರು ಕೊಡುವುದಾಗಿ ವಾಗ್ದಾನವಿತ್ತಿರುವರು. ಜಿಲ್ಲೆಯಲ್ಲಿಯ ಆಯಾ ಸ್ಥಳಿಕ ಶಾಖೆಯವರು ಧನಸಹಾಯವನ್ನು ಸಂಗ್ರಹಿಸುವ ಕಾರ್ಯಕ್ಕೆ ಈಗಾಗಲೇ ಕೈಹಚ್ಚಿರುವರು.

ಚಳವಳದ ಪ್ರಚಾರಕ್ಕೆ ಸಹಾಯವಾಗುವಂತೆ ಉಡುಪಿ ಕಮಿಟಿಯವರು ಹಲವು ಕರಪತ್ರಗಳನ್ನು ಪ್ರಕಟಿಸಿರುವರು. ಇವರ ಪೈಕಿ ಶ್ರೀ ಬಂಟ್ವಾಳ ಸೀತಾರಾಮರಾಯರ ಅಸ್ಪೃಶ್ಯತಾ ನಿವಾರಣೆಗೆ ಶಾಸ್ತ್ರಾಧಾರಗಳನ್ನು ಕೊಡುವ ಲೇಖನವನ್ನು ಜಿಲ್ಲಾ ಕಮಿಟಿಯವರು ಕೈಕೊಂಡು ಅಚ್ಚು ಹಾಕಿಸಿರುವರು. ಶ್ರೀ ಎಮ್ ಎನ್ ಕಾಮತರು "ಹೊಲೆಯನ ಹಂಬಲ"ವನ್ನು ಅಚ್ಚುಹಾಕಿಸಿ ಸಹಾಯಮಾಡಿರುವರು. ಜಿಲ್ಲೆಯ ಪ್ರಸಿದ್ಧ ಪಂಚಾಂಗಕರ್ತ ಶ್ರೀ ಉದ್ಯಾವರ ನಾರಾಯಣಾಚಾರ್ಯರು ತಮ್ಮ ಈ ಬಾರಿಯ ಪಂಚಾಂಗದಲ್ಲಿ ಅಸ್ಪೃಶ್ಯತಾ ನಿವಾರಣೆಯನ್ನು ಸಮರ್ಥಿಸಿ ಲೇಖನವನ್ನು ಪ್ರಕಟಿಸಿರುವರು. ಶ್ರೀ ಹಿ. ರಾ ಮಲ್ಯರು ಮಹಾತ್ಮಾಜಿಯವರು ಉಪವಾಸದ ಅನಂತರ ಎರವಾಡಾ ಜೈಲಿನಿಂದ ಹರಿಜನ ಚಳವಳದ ಕುರಿತು ಬರೆದ ಲೇಖನಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಿರುವರು. ಮಂಗಳೂರು ನಗರ ಕಮಿಟಿಯವರು ಹರಿಜನ ಚಳವಳದ ಕುರಿತು ಉತ್ತಮವಾದ ನಾಟಕ ಬರೆದವರಿಗೆ ಸುವರ್ಣದ ರಜತ ಪದಕ ಕೊಡುವುದಾಗಿ ಸ್ಪರ್ಧೆಯನ್ನು ಜಾಹೀರುಮಾಡಿರುವರು. ಶ್ರೀ ಸ್ವಾಮಿ ಈಶ್ವರಾನಂದರ ಈ ವರ್ಷದ ಸ್ಮಾರಕ ದಿನ ಸಮಾರಂಭಗಳಲ್ಲಿ ಹರಿಜನ ಸೇವಾಸಂಘದವರು ಉತ್ಸಾಹದಿಂದ ಸಹಕರಿಸಿರುವರು. ಸ್ವಾಮಿಜೀಯವರಿಂದ ಸ್ಥಾಪಿಸಲ್ಪಟ್ಟು ಈಗ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರಿಂದ ನಡೆಸಲ್ಪಡುತ್ತಿರುವ ಡಿ. ಸಿ. ಮಿಶ್ಯನಿನವರು ಹರಿಜನ ಸೇವಾಸಂಘದ ಕಾರ್ಯಗಳಲ್ಲಿ ಉತ್ಸಾಹದಿಂದ ಸಹಕರಿಸುತ್ತಿರುವರು. ಡಿ. ಸಿ. ಎಮ್. ಶಾಲೆಯಲ್ಲಿ ಮೊನ್ನೆ ಶ್ರೀ ಶ್ರೀನಿವಾಸ ಶಾಸ್ತ್ರಿಯವರು ಬಂದಾಗ ದೇವಸ್ಥಾನ ಪ್ರವೇಶದ ಕುರಿತು ಚಿಕ್ಕ ನಾಟಕವು ಅಭಿನಯಿಸಲ್ಪಟ್ಟಿತು. ಅದೇ ಶಾಲೆಯಲ್ಲಿ ಜರಗಿದ ಬೆಂದೂರು ಸೆಂಟರ್ ಉಪಾಧ್ಯಾಯ ಸಂಘದ ಸಭೆಯಲ್ಲಿ ದೇವಸ್ಥಾನ ಪ್ರವೇಶವು ಚರ್ಚಿಸಲ್ಪಟ್ಟು ಸಂಪೂರ್ಣ ಬೆಂಬಲವು ದೊರೆಯಿತು.

ಇದೇ ರೀತಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದವರೂ ಹರಿಜನ ಸೇವೆಯ ಕುರಿತು ನಾಟಕವನ್ನು ರಚಿಸಿ ಪ್ರದರ್ಶಿಸಿದರು. ಶ್ರೀ ಸ್ವಾಮಿ ವಿವೇಕಾನಂದ ಸೊಸೈಟಿಯವರು ಸ್ವಾಮಿಜೀಯವರ ಹಾಗೂ ಶ್ರೀ ರಾಮಕೃಷ್ಣ ಪರಮಹಂಸರ ಪುಣ್ಯತಿಥಿಗಳಲ್ಲಿ ರಿಟಾಯರ್ಡ್ ಜಡ್ಜ್ ಶ್ರೀ ಎಮ್ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಹರಿಜನ ಚಳವಳ ಪ್ರಶ್ನೆಗಳನ್ನು ಚರ್ಚಿಸಿ ಪ್ರಚಾರಕ್ಕೆ ಸಹಾಯಮಾಡಿದರು.

ಹೀಗೆ ಜಿಲ್ಲೆಯ ಎಲ್ಲ ಭಾಗಗಳಲ್ಲಿ ಸರ್ವತ್ರ ಸಹಾಯವನ್ನು ಪಡೆಯುತ್ತ ಚಳವಳವು ದಿನದಿಂದ ದಿನಕ್ಕೆ ಬೆಳೆಯುತ್ತದೆ. ಈ ಚಳವಳಕ್ಕೆ ಉಡುಪಿಯಿಂದಲ್ಲದೆ ಸಂಪ್ರದಾಯವಾದಿಗಳಿಂದ ಇದುವರೆಗೆ ಹೆಚ್ಚಿನ ಆಕ್ಷೇಪವು ಬಂದಿಲ್ಲ. ಪ್ರಬಲವಾಗಿ ಬೆಳೆಯುತ್ತಿರುವ ಹಾಗೂ ದೇಶದ ಅಭ್ಯುದಯದ ದೃಷ್ಟಿಯಿಂದ ಅತ್ಯಾವಶ್ಯಕವಾಗಿರುವ ಈ ಚಳವಳವನ್ನು ನಿರೋಧಿಸುವ ಹವ್ಯಾಸಕ್ಕೆ ಜಿಲ್ಲೆಯಲ್ಲಿಯ ಸನಾತನೀ ಹಿಂದುಗಳು ಬೀಳದೆ ನಮಗೆ ಸಾಧ್ಯವಿದ್ದ ರೀತಿಯಲ್ಲಿ ಹರಿಜನರ ಸ್ಥಿತಿಯ ಸುಧಾರಣಾ ಕಾರ್ಯದಲ್ಲಿ ನಮ್ಮೊಡನೆ ಮನಃಪೂರ್ವಕ ಸಹಕರಿಸಬೇಕಾಗಿ ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ. ಚಳವಳಕ್ಕೆ ಧನಸಹಾಯವು ಆಗತ್ಯವಿರುವುದರಿಂದ ಹಿಂದೂ ಧರ್ಮಾಭಿಮಾನಿಗಳು ಹಿಂದೂ ಧರ್ಮದ ಪುನರುಜ್ಜೀವನದ ಈ ಚಳವಳಕ್ಕೆ ಉದಾರ ಬುದ್ಧಿಯಿಂದ ಧನಸಹಾಯಮಾಡಿ ಧನಸಂಗ್ರಹ ಕಾರ್ಯಕ್ಕೆ ಹೆಚ್ಚಿನ ಕಾಲವನ್ನು ಕಳೆಯದಂತೆ ಸಹಾಯಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಇದುವರೆಗೆ ಸಂಘದ ಕಾರ್ಯಕ್ಕೆ ಸಹಾಯಮಾಡಿದ ಡಿಸ್ಟ್ರಿಕ್ಟ್ ಬೋರ್ಡ್ ಮೊದಲಾದ ಸಾರ್ವಜನಿಕ ಸಂಸ್ಥೆಯವರಿಗೂ ಆಗಿಂದಾಗ ನಮ್ಮ ಪ್ರಕಟನೆ ವ ಲೇಖಗಳನ್ನು ಪ್ರಕಟಿಸಿದ ಸ್ಥಳೀಕ ಪತ್ರಿಕೆಯವರಿಗೂ ಹಲವು ವಿಧದಲ್ಲಿ ಸಹಾಯ ಮಾಡಿದ ಅನೇಕ ಮಂದಿ ಸದ್ಗೃಹಸ್ಥರಿಗೂ ಈ ಮೂಲಕ ಕೃತಜ್ಞತೆಯನ್ನು ಸೂಚಿಸುವುದಲ್ಲದೆ ಮುಂದೆಯೂ ಅವರಿಂದ ಇನ್ನೂ ಹೆಚ್ಚಿನ ಸಹಾಯವನ್ನು ನಿರೀಕ್ಷಿಸುತ್ತಿರುವೆವು.

ಮಂಗಳೂರು, ೫—೩—೧೯೩೩ — ಹಿ ರಾಮರಾಯ ಮಲ್ಯ, ಜತೆಕಾರ್ಯದರ್ಶಿ, ಜಿಲ್ಲಾ ಹರಿಜನ ಸೇವಾಸಂಘ

+ ++ +

---

ಬೆಂಗಳೂರು ಚಾಮರಾಜಪೇಟೆ ನಿವಾಸಿಯಾದ ಮುನಿಯಪ್ಪನಿಗೆ ಬುದ್ಧಿಭ್ರಮಣೆಯುಂಟಾಗಿತ್ತು. ಈತನು ಕಳೆದ ಶನಿವಾರ ಗವೀಪುರದ ಸ್ಟೇಶನಲ್ಲಿ ವಿದ್ಯುಚ್ಛಕ್ತಿಯ ದೀಪದ ಕಂಬವನ್ನು ಹತ್ತಿ ಅಲ್ಲಿ ಕುಳಿತುಕೊಂಡಿದ್ದನು. ಪೋಲೀಸಿನವರು ಉಪಾಯದಿಂದ ಅಲ್ಲಿಂದ ಇಳಿಸಿದರು. ಕೂಡಲೇ ದಾರಿಯಲ್ಲಿ ಹೋಗುತ್ತಿದ್ದ ಒಂದು ಮೋಟರ್ ಕಾರಿನ ಮೇಲಕ್ಕೆ ಹಾರಿದನು. ದೈವಾಧೀನದಿಂದ ಅವನಿಗೆ ಅಪಾಯವೇನೂ ಆಗಲಿಲ್ಲ.

---


**Seventy Five Years!**

Two generations of approved service enables us to pick and choose what is cheap, lasting and good to suit the pockets and the tastes of our longstanding wide circle of

**CUSTOMERS**

who know our

**Premier House for Swadeshi**

**Mill Yarns — Handloom Cloths, Dhoties—Saries—Cintzesh etc.**

**Shrinivas Rang Pai,**
**Sawkar Mahal,**
**Car Street, MANGALORE.**

## ಅನುಕ್ರಮಣಿಕೆ.


ಅಗ್ರಲೇಖ:
ಹಿಂದೂಗಳು ಚೇತರಿಸಬೇಕು. ೪
ಸ್ಥಳೀಯ ವಾರ್ತೆಗಳು ೬
ಟಿಪ್ಪಣಿಗಳು ,,
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ವಿದೇಶ ವರ್ತಮಾನ, ೪
ವಿವಿಧ ಸಮಾಚಾರಗಳು . . . . . ೧೧
ಪೌರಕಾರ್ಮಿಕರು ಕೋರಿ ಕಾಣದರು. . . . ೩
ಪತ್ರವ್ಯವಹಾರ . . . . . ೧೪
ಸ್ಥಳೀಯ ಸೋಲಿಗಳ ಭಾವ! . . . ೪
ದಕ್ಷಿಣ ಕನ್ನಡ—ಮಂಗಳೂರು, ಸುರತ್ಕಲ್ ಬಂಟ್ವಾಳ, ಕಾರ್ಕಳ, ಅಜೆಕಾರು, ಉಪ್ಪಿನಂಗಡಿ . . . ೯
ಬ್ರಿಟಿಷ ಸಿಂಹದ ಬಾಲ ಹಿಂಡುವ ಡಿವೆಲೆರಾ . . ೧೫
ಜಿಲ್ಲೆಯಲ್ಲಿ ಛಟ್ರವರಿ ಅಷ್ಟರು ವರೆಗಿನ ಹರಿಜನ ಸೇವಾ
ಸುಭಾಷ ಬೋಸರ ದೇಶಭಕ್ತಿ... ಜಿಲ್ಲೆಯಲ್ಲಿ ಛಟ್ರವರಿ ವರೆಗಿನ ಹರಿಜನ ಸೇವಾ ಕಾರ್ಯದ ವರದಿ, . . . ೯
ಗಾಂಧೀಜೀಯವರ ಬಿಡುಗಡೆಯಾಗುವುದಿಲ್ಲವೆ? . . ೧೦



# ಸ್ವದೇಶಾಭಿಮಾನಿ.

ತಾ. ೧೭ನೇ ಶುಕ್ರವಾರ ಮಾರ್ಚ ೧೯೩೩.


## ಹಿಂದೂಗಳು ಚೇತರಿಸಬೇಕು.

**ಲೇಖಾಂಕ ೧.**

ಪಂಜಾಬದ ಮಂತ್ರಿಗಳಲ್ಲೊಬ್ಬರಾಗಿದ್ದ ಹರಿಕಿಶನ್‌ಲಾಲರ ಮಕ್ಕಳಾಗಿರುವ ಶ್ರೀ. ಕನ್ಹಯಲಾಲ ಗೌಬಾ ಎಂಬವರು ಹಿಂದೂ ಮತವನ್ನು ತ್ಯಜಿಸಿ ಮುಸಲ್ಮಾನ ಮತವನ್ನು ಸ್ವೀಕರಿಸಿದರು. ಇವರು ಹದಿನೈದು ವರ್ಷಗಳ ಹಿಂದೆ ಒಂದು ಮುಸಲ್ಮಾನ ಸ್ತ್ರೀಯನ್ನು ಗುಪ್ತವಾಗಿ ಮದುವೆಮಾಡಿಕೊಂಡಿದ್ದರು. ಹದಿನೈದು ವರ್ಷಗಳ ಗುಪ್ತ ಸಂಸಾರದ ನಂತರ ಇವರು ಮುಸಲ್ಮಾನ ಜಾತಿಯನ್ನು ಸ್ವೀಕರಿಸಿದರು. ಆ ಮೇಲೆ ಮುಸಲ್ಮಾನ ಕೂಟದಲ್ಲಿ ಅವರು ಮುಸಲ್ಮಾನ ಮತವನ್ನು ತಾನು ಸ್ವೀಕರಿಸಿದುದ್ಯಾಕೆ? ಎಂಬುದರ ವಿಷಯ ಭಾಷಣವನ್ನಿತ್ತರು. "ಹಿಂದೂ ಮತದಲ್ಲಿ ಶಕ್ತಿಯಿಲ್ಲ; ಅದರಲ್ಲಿ ಸಮಾನತೆಯಿಲ್ಲ; ಮುಸಲ್ಮಾನ ಮತವೆಂದರೆ ವಿಶ್ವಭ್ರಾತೃತ್ವ; ವಿಶ್ವಬಂಧುತ್ವ; ಅಲ್ಲಿ ಎಲ್ಲವರೂ ಒಂದೇ" ಎಂದು ಅವರು ಹೇಳಿದ್ದಲ್ಲದೆ ಹಿಂದೂಗಳ ಅಸ್ಪೃಶ್ಯರನ್ನು ಕೂಡ ಮುಸಲ್ಮಾನ ಮತಕ್ಕೆ ಸೇರಲು ಅವರು ಆಹ್ವಾನಿಸಿರುವರು.

ವಿವಾಹದ ನಿಮಿತ್ತ ಇವರು ಮತಾಂತರ ಹೊಂದಿದ ಸಂಬಂಧ ಇವರ ಮಾತುಗಳಿಗೆ ಬೆಲೆಯಿಲ್ಲದಿರಬಹುದು. ಆದರೆ ಈ ವರೆಗಿನ ಹಲ ಕೆಲವು ಘಟನೆಗಳನ್ನು ಕಂಡರೆ, ಹಿಂದೂ ಸ್ತ್ರೀಯು ಪರಮತೀಯನೊಬ್ಬನನ್ನು ಮದುವೆಯಾಗುವುದಾದರೆ ಅವಳೇ ಮತಾಂತರ ಹೊಂದುವಳು; ಹಾಗೆಯೇ ಹಿಂದೂ ಪುರುಷನೊಬ್ಬನು ಪರಮತೀಯಳೊಬ್ಬಳನ್ನು ಮದುವೆಯಾಗುವುದಾದರೆ ಅವನೇ ಮತಾಂತರ ಹೊಂದುವನು. ಆರ್ಯ ಸಮಾಜದವರು ಇತರ ಜಾತಿಯಿಂದ ಹಿಂದೂ ಮತಕ್ಕೆ ಮತಾಂತರದ ಸೌಕರ್ಯವನ್ನು ಕಲ್ಪಿಸಿರುವುದಾದರೂ, ಅಲ್ಲದೆ ಹಿಂದೂ ಸಮಾಜದಲ್ಲಿದ್ದು ಪರಮತೀಯರನ್ನು ವಿವಾಹವಾಗುವಷ್ಟು ಸಮಾಜ ನಿಬಂಧನೆಗಳು ಈಗ ಸಡಿಲಿರುವುದಾದರೂ, ಈ ವಿವಾಹ ಘಟನೆಗಳು ಹಿಂದೂವನ್ನೇ ಇತರ ಮತಕ್ಕೆ ಮತಾಂತರಪಡಿಸುತ್ತಿವೆಯಲ್ಲದೆ, ಇತರ ಮತೀಯರು ನಮ್ಮ ಮತಕ್ಕೆ ಮತಾಂತರಪಡುವುದು ಕಾಣುವುದಿಲ್ಲ.

ಹಿಂದೂಮತದಲ್ಲಿ ಚೇತನವೂ, ಶಕ್ತಿಯೂ ಕಡಿಮೆಯಾಗುತ್ತ ಬರುತ್ತದೆಂಬುದಕ್ಕೆ ಈ ಘಟನೆಗಳೇ ಸಾಕ್ಷಿಯಾಗಿವೆ. ಹಿಂದೂಮತವು ಸಾವಿರಗಟ್ಟಲೆ ವರ್ಷಗಳಿಂದ ಬಾಳಿ ಬಂದುದು; ಹಲವು ಉತ್ಕ್ರಾಂತಿಗಳಿಂದ ಅದು ಉಳಿದು ಬಂದಿದೆ ಎಂದು ಕೆಲವರು ಹೆಗ್ಗಳಿಸಿಕೊಳ್ಳಬಹುದು! ಆದರೆ ಹಾಗೆ ಉಳಿದು ಬರುವಾಗ ಕಳೆಗುಂದಿಯೂ ಬಂದಿದೆಯೆಂಬುದನ್ನು ನಾವು ಮರೆಯಬಾರದು. ಹಿಂದೂಮತವು ಬರೇ ಶಾಸ್ತ್ರೀಕವಾಗಿದೆ; ದರೊಳಗೆ ಚೈತನ್ಯವಿಲ್ಲ; ಯಾವ ಮತ ಬಂದರೂ ಅದನ್ನು ಆಧ್ಯಾತ್ಮದಿಂದ ನಿರೋಧಿಸುವ ಬದಲು ಅದನ್ನು ತನ್ನಲ್ಲಿಗೆ ಸೇರಿಸಲು ಯತ್ನಿಸುತ್ತದೆ. ಹೀಗಾಗಿ ತತ್ವದಲ್ಲಿ ಹಿಂದೂಮತವು ಮಹತ್ವದ್ದಾದರೂ ಕಾರ್ಯದಲ್ಲಿ ಅದು ಪೌರೋಹಿತ್ಯದ ಅಂಧ ವರ್ತನೆಗಳಲ್ಲಿಯೂ, ಮೂಢ ವಿಶ್ವಾಸದ ದೌರ್ಬಲ್ಯದಲ್ಲಿಯೂ ಪರ್ಯವಸಾಯಿಯಾಗಿದೆ.

ದೇವಸ್ಥಾನದೊಳಗೆ ಅಸ್ಪೃಶ್ಯರ ಪ್ರವೇಶ, ಇತರ ಜಾತಿಗಳಿಂದ ಹಿಂದೂಮತಕ್ಕೆ ಸೇರಿಸುವುದು ಇತ್ಯಾದಿ ಮತಾಭಿವೃದ್ಧಿಯ ಸೂಚನೆಗಳು ಬಂದರೆ ಅವನ್ನು ಎಲ್ಲರೂ ನಿರೋಧಿಸುವವರೆ. ಅದು ಜ್ಯಾರಿಗೆ ಬಂದರೆ ಮತ ನಾಶವಾಗುವುದೆನ್ನುವರು. ಆದರೆ, ಮತರಕ್ಷಕರಾದ ದೇವಸ್ಥಾನದ ಸಂಸ್ಥೆಗಳೂ, ಮಠಗಳೂ ದುವ್ರ್ಯಯದಲ್ಲಿ ಸೇರಿಯೂ, ಜನತೆಯನ್ನು ಮೂಢ ವರ್ತನೆಗಳಲ್ಲಿ ಪ್ರೇರಿಸಿಯೂ, ಪೌರೋಹಿತ್ಯವು ನಿಜವಾದ ಜ್ಞಾನವನ್ನು ಪ್ರಸರಿಸುವ ಬದಲು, ಅಲಸತೆಯಿಂದ ಇದ್ದು ಮೌಢ್ಯವನ್ನೂ ಅಜ್ಞಾನವನ್ನೂ ಎಲ್ಲರಲ್ಲಿಯೂ ಪ್ರಸರಿಸುವಾಗ ಅದನ್ನು ಕಂಡು ನಿರೋಧಿಸುವವರಿಲ್ಲ. ಅದರ ಬದಲು, ಅಂತಹ ನಾಶಕಾರಕ ಕೃತ್ಯಗಳನ್ನೇ ಮತಸ್ಥಾಪಕತೆಯ ಚಿಹ್ನೆಗಳೆಂದು ಹೊಗಳುವವರಿದ್ದಾರೆ.

ಮುಸಲ್ಮಾನ ಮತದಲ್ಲಿಯೂ ಅಂಧ ಆಚಾರಗಳಿವೆ. ಆದರೆ ಮತದಲ್ಲಿ ತುಂಬಾ ಚೇತನವಿದೆ. ಅದು ತೀಕ್ಷ್ಣವಿದೆ. ಹಿಂದೂಗಳು ಅದು ಶಾಸ್ತ್ರೀಕವಲ್ಲವೆನ್ನಬಹುದು. ಆದರೆ ಅದರಲ್ಲಿ ಬಾಳುವಿಕೆಯ ಲಕ್ಷಣಗಳಿವೆ. ಇದು ನನ್ನ ಮತ ಎಂಬ ಹೆಗ್ಗಳಿಕೆಯು ಅವರ ಮತ ಶಿಕ್ಷಣವಲ್ಲಿದೆ. ಮಸೀದಿಗಳು ಶಿಕ್ಷಣೆಯ ಮತ್ತು ಪ್ರೇರಣೆಯ ಸ್ಥಾನಗಳು. ಮಿ. ಗೌಬಾರವರು ಹೇಳುವಂತೆ ವಿಶ್ವಾಸ ಮಾನತೆ ಅದರಲ್ಲಿದೆ. 'ನಾವೆಲ್ಲರೂ ಒಂದೆ; ನಮ್ಮ ಮುಂದೆ ಬೇರೆ ಯಾರೂ ನಿಲ್ಲಲಾರರು; ಹಾಗೆ ನಿಂತರೆ ನಾವವರನ್ನು ಸದೆಬಡಿಯಬಲ್ಲೆವು' ಎಂಬುದೆ ಆ ಮತದ ನಿರಂತರ ಪ್ರೇರಣೆ. ಬದಲಿಗೆ, ಹಿಂದೂ ಮತವು ಏನು ಹೇಳುತ್ತಿದೆ? ದೇವಸ್ಥಾನಗಳು ವಿನೀತತೆಯ ಸ್ಥಾನಗಳು, ಅಲ್ಲಿ ಮತಕ್ಕಾಗಿ ವೀರತೆಯ ಪ್ರೇರಣೆಯಿಲ್ಲ. 'ಎಲ್ಲವರು ನಮ್ಮವರು; ನಾವು ಎಲ್ಲವರಿಗೆ ಸಮ್ಮಂಧಿಸಿದವರು; ನಾವು ಅವನತಿಗಿಳಿದರೆ ಅದು ನಮ್ಮ ಕರ್ಮ; ಇತರರು ನಮ್ಮನ್ನು ಗೆದ್ದರೆ ಅದು ನಮ್ಮ ಕರ್ಮ' ಇದೇ ನಮ್ಮ ಜೀವನದ ತತ್ವ. ಹಿಂದೂ ಮತವು ಈಗೊಂದು ಮೂಢ ವಿಶ್ವಾಸದ ಮತ್ತು ಕಾಪುರುಷತನದ ವಿಚಿತ್ರತರ ಸಂಯೋಗ ಮಾತ್ರವಾಗಿದೆ.

ಹಾಗೆಯೇ ಕ್ರಿಸ್ತೀ ಮತವನ್ನು ನೋಡಿದರೆ ತಿಳಿಯುವುದು. ಮತದ ಮಟ್ಟಿಗೆ ಅಲ್ಲಿಯೂ ಸಮಾನತೆಯಿದೆ, ಅಲ್ಲಿ ಜ್ಞಾನಕ್ಕೆ ಹೆಚ್ಚಿನ ಮೇಲ್ಮೆಯಿದೆ. ಅಲ್ಲಿ ವಿಸ್ತರಿಸಬೇಕೆಂಬ ಲವಲವಿಕೆಯಿದೆ. ಸಮಾಜ ಸೇವೆಯೇ ಮತದ ಮುಖ್ಯೋದ್ದೇಶವಾಗಿ ಪರಿಣಮಿಸಿಯದೆ. ಆಧುನಿಕ ನಾಗರಿಕತೆಯಿಂದ ಅದು ಬಿದ್ದುಹೋಗುವಂತಾಗಿತ್ತು, ಆದರೆ ನಾಗರಿಕತೆಗೆ ಸರಿಯಾಗಿಯೇ ಅದೂ ತನ್ನ ಚೇತನದ ದಿಕ್ಕನ್ನು ತಿದ್ದುಪಡಿಸಿಯದೆ. ಸಮಾಜ ಸೇವೆಯನ್ನು ಅದು ತನ್ನ ತಳಹದಿಯಾಗಿ ಮಾಡಿಯದೆ.

ಹಿಂದೂಗಳು ಇವುಗಳಿಂದಲಾದರೂ ಕೆಲವು ಪಾಠಗಳನ್ನು ಕಲಿಯಬಾರದೇ?


**WHITE PAPER SPECIAL.**

**ಶ್ವೇತ ಪತ್ರ ವಿಶೇಷ ಸಂಚಿಕೆ.**

ಪಾರ್ಲಿಮೆಂಟಿನಲ್ಲಿ ಶುಕ್ರವಾರ ಪ್ರಕಟವಾಗುವ ವ್ಹೈಟ್ ಪೇಪರ್ ಅಥವಾ ರಾ. ಟೇ. ಕೊನ್ಫರೆನ್ಸನ್ನು ಕುರಿತಾಗಿ ಶಿಫಾರಸು ಸೂಚನಾದಿಗಳನ್ನು ಕೂಡಲೆ ಈ ದೇಶದಲ್ಲಿ ಸರಕಾರವು ಶನಿವಾರ ಪ್ರಕಟಿಗೊಳಿಸುವುದಾಗಿ ಇಂಡಿಯಾ ಸರಕಾರದ ಅಭಿಪ್ರಾಯವಿದೆ. ಅದು ಢಿಲ್ಲಿಯಲ್ಲಿ ಪ್ರಕಟವಾದೊಡನೆ, ಅದರ ಸಂಪೂರ್ಣ ವಿವರವನ್ನು ತಂತೀ ಮೂಲಕ ಇಲ್ಲಿಗೆ ತರಿಸಿಕೊಂಡು ಸ್ವದೇಶಾಭಿಮಾನಿಯು ವಿಶೇಷ ಸಂಚಿಕೆಯಾಗಿ ಅದನ್ನು ಪ್ರಕಟಿಸಲಾಗುವುದು. ಇತರ ಪತ್ರಿಕೆಗಳಲ್ಲಿ ಮದ್ರಾಸಿನಿಂದಲೇ ಪ್ರಕಟವಾಗುವುದಾದರೂ ರವಿವಾರ ಸಂಜೆಯಲ್ಲಿ ಸ್ವಲ್ಪ ತಡವಾಗಿ ಪ್ರಕಟವಾದರೂ ಆಗಬಹುದು. ನಮ್ಮ ಚಂದಾದಾರರಿಗೆ ರವಿವಾರ ಬೆಳಿಗ್ಗೆಯೇ, ಮುಂದಾಗಿ ತಲಪುವರೆ ವ್ಯವಸ್ಥೆ ಮಾಡಲಾಗಿದೆ.

ಮೆನೇಜರ್.


## ಒಳದೇಶ ವರ್ತಮಾನ.

—ಚಿಟ್ಟಗೊಂಗಿನಲ್ಲಿ ತಲೆತಪ್ಪಿಸಿಕೊಂಡು ಹೋಗುತ್ತಿರುವ ಕ್ರಾಂತಿಕಾರರೆಂದು ಭಾವಿಸಿ ಮಿಲಿಟರಿಯವರು ಕದೀರ್ ಅಹಮ್ಮದ್ ಮತ್ತು ಜಯುರ್ ಮಿಯಾ ಎಂಬ ಪಾಪದ ಇಬ್ಬರನ್ನು ರಾತ್ರಿ ಗುಂಡು ಹೊಡೆದು ಕೊಂದರು. ಸರಕಾರವು ಪಶ್ಚಾತ್ತಾಪ ಸೂಚನೆಯನ್ನು ಮಾಡಿದೆ.

—ಫ್ರೆಂಚ್ ಚಂದ್ರನಗರದಲ್ಲಿ ಮಿ. ಕ್ವಿನ್ ಎಂಬ ಪೋಲೀಸ ಕಮಿಶನರನ್ನು ಗುಂಡು ಹೊಡೆದು ಕೊಂದ ಮೂವರಲ್ಲೊಬ್ಬ ಬಂಗಾಳಿ ತರುಣನು ಸಿಕ್ಕಿ ಬಿದ್ದಿರುವನು.

—ಇಬ್ಬರು ಸ್ತ್ರೀಯರನ್ನು ವಧಿಸಿದುದಕ್ಕಾಗಿ ಸುಬೇದಾರ ಹೈದ್‌ಗಲ್ ಎಂಬ ಮಾಜಿ ಮಿಲಿಟರಿ ಪೆನ್ಶನಿಯರನಿಗೆ ಫಾಶಿ ಶಿಕ್ಷೆಯಾಯಿತು.

—ಕೌನ್‌ಪುರದಲ್ಲಿ ಸೆಕ್ಷನ್ ೧೪೪ ಜಾಹೀರಾಗಿ ಶಸ್ತ್ರಸ್ತ್ರಸಾಧನಗಳನ್ನು ಜನರು ಧರಿಸಬಾರದೆಂಬ ಕಟ್ಟಪ್ಪಣೆ.

—ಕಲ್ಕತ್ತದ ಕಲಿಂಪುರದಲ್ಲಿ ರಾಜಕೀಯ ಸಭೆಯನ್ನು ಜರಗಿಸಲು ಯತ್ನವಾಗಿ ೧೬ ಮಂದಿ ಕೊಂಗ್ರೆಸ್‌ವಾಲರ ದಸ್ತಗಿರಿಯಾಯಿತು.

—ಲಾಹೋರಿನ 'ವೀರ ಭಾರತ' ದೈನಿಕದ ಪ್ರೊಪ್ರೈಟರರೂ ಮತ್ತು ಡಾ। ಪರಶುರಾಮವೆಂಬವರೂ ಕೋರ್ಟು ಸಮ್ಮನ್ಸ್‌ಗಳ ಮೇರೆಗೆ ಕೋರ್ಟಿಗೆ ಬರದಿದ್ದುದಕ್ಕಾಗಿ ೨೦೦ ರೂಪಾಯಿಯ ಜುಲುಮಾನೆಗೊಳಗಾದರು. ಎರಡನೆಯವರು ಸನಾತನ ಧರ್ಮ ಸಭೆಯ ಜನರಲ್ ಸೆಕ್ರೆಟರಿಯವರು!

—ಕಲ್ಕತ್ತದಲ್ಲಿ ಪೋಲೀಸರು ಮುಳಿಹುಲ್ಲಿನಿಂದ ರಚಿಸಿದ ಒಂದು ಗುಡಿಸಲು ಬೆಂಕಿಗಾಹುತಿಯಾಯಿತು. ಬೆಂಕಿಯ ಕಾರಣ ತಿಳಿದಿಲ್ಲ.

—ತಮ್ಮ ಸಂಬಳದ ಮೇಲೆ ಕೊಡಲಿಯನ್ನುಪಯೋಗಿಸಲಾಲೋಚಿಸಿದೊಡನೆ ಕಲ್ಕತ್ತದ ಕೊಡೆ ತಯಾರಿ ಕಂಪೆನಿಗಳ ೨೦೦೦ ಕೆಲಸಗಾರರು ಮುಷ್ಕರ ಹಿಡಿದರು.

—ಮುಂಬಾಯಿಯಲ್ಲಿ ಕೊಂಗ್ರೆಸ್ ಕೆಲಸಗಾರರಾದ ಬೆರಿಸ್ಟರ್ ಎ. ಕೆ. ಅಮೀನರನ್ನು ಸೆರೆ ಹಿಡಿದರು.

—ವಿಜಗಪಟ್ಟಣದಲ್ಲಿ ವೆಂಕಟ ಕಾಮಯ್ಯ ಎಂಬ ಸರಾಫನು ಕಳ್ಳ ನಾಣ್ಯಗಳನ್ನು ತಯಾರಿಸಿದನೆಂಬಾರೋಪದ ಮೇಲೆ ಸೆರೆಹಿಡಿಯಲ್ಪಟ್ಟಿರುವನು.

—ಮೀರತ್ತಿನ ಹಪೂರ್ ಎಂಬಲ್ಲಿ ಗೂಸೇನ್ ಎಂಬವನು ೧೧ ತಾರೀಕಿನ ದಿನ ನೆರೆಹಳ್ಳಿಗೆ ಹೋಗಿದ್ದು ಮರುದಿನ ಬೆಳಿಗ್ಗೆ ಮನೆಗೆ ಹಿಂದಿರುಗಿ ಬಂದು ನೋಡಲು, ತನ್ನ ಮನೆಯಲ್ಲಿನ ಏಳು ಮಂದಿ ಸ್ತ್ರೀ ಬಾಲಬಾಲಿಕೆಯರನ್ನು ಯಾರೋ ಕೊಂದಿದ್ದರು. ತನಿಖೆ ನಡೆಯುತ್ತಿದೆ.

—ಅಮೃತಸರದಲ್ಲಿ ಹಿಂದೂ ಹುಡುಗರು ಗಾಳಿಪಟವನ್ನು ಹಾರಿಸುವಾಗ ಮುಸ್ಲಿಮ ಹುಡುಗರು ನೂಲನ್ನು ಕಡಿದುದರಿಂದಾಗಿ ಹಿಂದೂ ಮುಸ್ಲಿಮ ಗೊಂದಲವಾಗಿ ಕೆಲವರು ಜಖಂಗೊಂಡರು.

—ಸನಾತನಿಗಳ ಪರವಾಗಿ ಒಂದು ಮನವಿಯನ್ನು ಹೊತ್ತುಕೊಂಡು ದಿವಾನ್ ಬಹದ್ದೂರ್ ಗೋವಿಂದಾಸ್ ಚತುರ್ಭುಜದಾಸ್ ಎಂಬವರು ನ್ಯೂ ಢಿಲ್ಲಿಯಲ್ಲಿ ವೈಸರಾಯರ ಬಳಿ ನಿಂತರು.

—ಎಜ್ಯುಕೇಶನ್ ಬುಕ್ ಡಿಪೋರವರು ತನ್ನ 'ಗೀತಾಂಜಲಿ' ಮತ್ತು 'ಗಾರ್ಡನರ್' ಪುಸ್ತಕಗಳ 'ಸರ್ವ ಹಕ್ಕು'ಗಳನ್ನು ಭಂಗಗೊಳಿಸಿದುದಕ್ಕಾಗಿ ಡಾ। ರವೀಂದ್ರನಾಥ ಟಾಗೂರರು ೫೦೦೦ ರೂಪಾಯಿಯ ದಾವೆ ಹೂಡಿದರು—೮೦೦ ರೂಪಾಯಿ ನಷ್ಟವು ದೊರೆಯಿತು. ೧೦೦೦ ರೂಪಾಯಿ ಸಿಗಬೇಕೆಂದು ಟಾಗೂರರ ಹಟವಾಯಿತು. ಅಪೀಲು ತಳ್ಳಿ ಹಾಕಲ್ಪಟ್ಟಿತು.

—ಕಳೆದ ಶುಕ್ರವಾರ ವೈಸರಾಯರು ಲಾಹೋರಿನ ಸ್ಟೇಶನಿನಲ್ಲಿದ್ದಾಗ "ವೈಸರಾಯ, ಹಿಂದೆ ಹೋಗು" ಎಂಬ ಕರಪತ್ರಗಳನ್ನು ಹಂಚಿ ಗಲಾಟೆಯೆಬ್ಬಿಸಿದ ಕೆಲವರನ್ನು ಸೆರೆ ಹಿಡಿದರು.

—ಮುಂಬಾಯಿಯಲ್ಲಿ ಗಿರಣಿ ಮ್ಹಾಲಿಕರಿಗೂ ಕೆಲಸಗಾರರಿಗೂ ವಾದವೆದ್ದಿದೆ. ಗಿರಣಿ ಕಾಮಗಾರ ಯೂನಿಯನಿನವರು ಪಗಾರವನ್ನು ಹೆಚ್ಚಿಸದಿದ್ದರೆ ಪ್ರಚಂಡ ಮುಷ್ಕರವನ್ನಾರಂಭಿಸುವೆವೆಂದಿರುವರು.

—ಕಲ್ಕತ್ತದಲ್ಲಿ ಜರಗಬೇಕೆಂದಿದ್ದ ಅಖಿಲ ಭಾರತ ಕೊಂಗ್ರೆಸ್ ಸಭೆಯು ಎಂದು ಜರಗುವುದೆಂದು ನಿಶ್ಚಿತವಾಗಿಲ್ಲ.

—'ಜ್ಞಾನ ದೂತ' ಪತ್ರಿಕೆಯಲ್ಲಿ ಮುಸ್ಲಿಮರಿಗೆ ವಿರೋಧವಾಗಿ ಬರೆದ ಒಂದು ಲೇಖನದ ದೆಸೆಯಿಂದ ರೆವೆರೆಂಡ್ ಫಾದರ್ ಪೆರಿಯ ನಾಯಕ್ ಎಂಬ ಸಂಪಾದಕರು ಕ್ಷಮೆ ಬೇಡಬೇಕಾಯಿತು.

—ಪೋರ್ಟು ಆರ್ಯ ಸಮಾಜ, ಮುಂಬೈ—ಕಳೆದ ರವಿವಾರ ತಾರೀಕು ಜರಲ್ಲಿ, ಸಮಾಜ ಮಂದಿರದಲ್ಲಿ ಸ್ವಾಮಿ ಶ್ರೀ ಓಂಕಾರ ಸಚ್ಚಿದಾನಂದಜಿಯವರು 'ಅದ್ವೈತವಾದ'ವೆಂಬ ವಿಷಯದಲ್ಲಿ ಬೋಧಪರವೂ ವಿಚಾರಭರಿತವೂ ಆದ ಸುರಸ ಭಾಷಣವನ್ನಿತ್ತರು.

—ಚಿಕಾಗೋ ಮೇಯರರು ಇಟಲಿಯ ಜಂಗಾರನೆಂಬವನಿಂದ ಗುಂಡಿನಿಂದ ಕೊಲ್ಲಲ್ಪಟ್ಟರಷ್ಟೆ! ಜಂಗಾರನನ್ನು ಬರುವ ವಾರ ಫಾಶಿಗೆ ಕೊಡಲಿರುವರು.

...ಪೋಲೀಸರ ಜಲ್ಲೆಯಲ್ಲಿ ಡಕಾಯಿತಿಗಳನ್ನು ನಡೆಸಿದ ೩೦ ಮಂದಿಗಳನ್ನು ಸೆರೆ ಹಿಡಿದಿರುವರು.

ಸ್ವಲ್ಪ ತಿಂಗಳಲ್ಲಿ ಹೋಳಿ ಹಬ್ಬ ನಡೆದಾಗ ಗಲಭೆಯಾಗಿ ಆರೋಪಿತರಾದ ೪೦ ಮಂದಿಗಳಿಗೆ ವಿವಿಧ ಜುಲುಮಾನೆಯಾಯಿತು.

ಅಲ್ಲಹಾಬಾದಿನಲ್ಲಿ ಜಡ್ತಿ ನಡೆದು ಕೊಂಗ್ರೆಸ್‌ವಾಲರು ಅಲ್ಲಿ ಇಷ್ಟರ ವರೆಗೆ ನಡೆಸಿದ ರಹಸ್ಯವು ಬಯಲಾಯಿತು. ರಾಶಿ ರಾಶಿ ಕರಪತ್ರಗಳನ್ನು ಪೋಲೀಸರು ಹೊತ್ತರು

—ಆದಿತ್ಯವಾರದಿಂದ ಮೊದಲ್ಗೊಂಡು "ಹರಿಜನ" ಪತ್ರಿಕೆಯ ಗುಜರಾಥಿ ಅನುವಾದ ವಾರಪತ್ರಿಕೆಯು "ಹರಿಜನ ಬಂಧು"ವೆಂಬ ನಾಮಕರಣದಿಂದ ಗಾಂಧಿಜೀಯವರ ಆಶ್ರಯದಿಂದ ಹೊರಡಿದೆ

ಶ್ರೀಮತಿ ಕಮಲಾ ನೆಹರುಗಳು ಇದೇ ತಾ. ೧೧ರಲ್ಲು ಪಾಟ್ನದಿಂದ ಅಲಹಾಬಾದಿಗೆ ಬಂದಿರುವರು. ಅವರು ಸಂಪೂರ್ಣ ಸೌಖ್ಯವಾಗಿ ಸಂತೋಷಚಿತ್ತರಾಗಿರುವರು. ಇನ್ನು ಸ್ವಲ್ಪ ದಿನಗಳಲ್ಲಿ ತನ್ನ ಪತಿಯನ್ನು ಕಾಣಲು ಡೇರಡೂನಿಗೆ ಹೋಗಲಿರುವರು

### ಸಕಲೇಶಪುರ

ವರ್ಷಂಪ್ರತಿ ಜರಗುವ ಶ್ರೀ ಸಕಲೇಶ್ವರ ಸ್ವಾಮಿಯ ಉತ್ಸವವು ಇದೇ ಕಳೆದ ಆದಿತ್ಯವಾರ ಮತ್ತು ಸೋಮವಾರ ಸಾಂಗವಾಗಿ ನೆರವೇ

ಬನಿಗನ ಹಳ್ಳಿ ಕಾಫಿ ತೋಟದಿಂದ ಕಳವಾದ ಸುಮಾರು ರೂಪಾಯಿ ೧೭೫ ಕ್ರಯಬಾಳುವ ೩೮ ಬುಶಲ್ ಕಾಫಿಯನ್ನು ಸಕಲೇಶಪುರ ಟೌನ್ ಪೋಲೀಸ್ ಸಬ್ ಇನ್ಸಪೆಕ್ಟರ ಶ್ರೀ ಎ. ಜೆ ಲಿಂಗಪ್ಪನವರು ಹಿಡಿದು ಸಂಬಂಧಪಟ್ಟ ಕಳ್ಳರ ಪೈಕಿ ಒಬ್ಬನನ್ನು ಹಿಡಿದಿರುವರಾಗಿ ತಿಳಿದುಬರುತ್ತದೆ.

ಚಂದ್ರಕಲಾ ಕರ್ನಾಟಕ ನಾಟಕ ಸಂಘದವರು ೯—೩—೩೩ರಲ್ಲು ತಮ್ಮ ಕಡೇ ನಾಟಕವನ್ನು ಆಡಿ ತೋರಿಸಿದರು. ಮಡಿಕೇರಿಯಲ್ಲಿ ಇದೇ ತಾ. ೧೭ನೇ ಶುಕ್ರವಾರ ತಮ್ಮ ಪ್ರಥಮ ನಾಟಕವನ್ನು ಆಡಿ ತೋರಿಸಲಿರುವರೆಂದು ತಿಳಿದುಬರುತ್ತದೆ.

---

## ದಕ್ಷಿಣ ಕನ್ನಡ.

**ಮಂಗಳೂರು.** ಮದ್ರಾಸಿನ ಹಿಂದೀ ಪ್ರಚಾರಕ ವಿದ್ಯಾಲಯದ ಪ್ರಧಾನಾಚಾರ್ಯರವರಾದ ಪಂಡಿತ ಶ್ರೀ ಹೃಷಿಕೇಶ ಶರ್ಮರವರು ಸೋಮವಾರ ಸಂಜೆ ಮಂಗಳೂರಿಗೆ ಬಂದಿದ್ದರು

ಮುನಿಸಿಪಾಲಿಟಿಯೊಳಗಿನ ೮೦೦ ಲಾಂದ್ರಗಳಲ್ಲಿ ೩೪೦ರ ಸ್ಥಳಗಳಲ್ಲಿ ೩೨ ಕೇಂಡ್ಲ್ ಪ್ರಕಾಶದ ೩೦೦ ವಿದ್ಯುತ್ ದೀಪಗಳೂ, ಈಗಿರುವ ೩೦ ಪೆಟ್ರೋಮೇಕ್ಸ್ ದೀಪಗಳಲ್ಲಿ ೩೪೮ ಸ್ಥಳದಲ್ಲಿ ೧೨೦ ಕೇಂಡ್ಲ್ ಪ್ರಕಾಶದ ದೀಪಗಳೂ, ಕೆಲವು ಪ್ರಾಮುಖ್ಯ ಸ್ಥಳಗಳಲ್ಲಿ ೨೦೦ ಕೇಂಡ್ ಪ್ರಕಾಶದ ನಾಲ್ಕು ದೀಪಗಳೂ ಇರಿಸಲ್ಪಡುವುವು ಈ ದೀಪಗಳು ಹೊಳೆಗ್ಗೆ ೩ ಘಂಟೆಯ ತನಕ ಉರಿಯುವುವು

ಎಂಡೋಮೆಂಟ್ ಬೋರ್ಡ ಕಮಿಶನರು ಇದೇ ತಾ ೨೦ಕ್ಕೆ ಕಾಂಞಂಗಾಡಿಗೆ ಬಂದು ೨೧ಕ್ಕೆ ಮಂಜೇಶ್ವರ, ೨೨ ಮಂಗಳೂರು, ೨೩ ಕಾರ್ಕಳ ಮತ್ತು ಅಲ್ಲಿಂದ ಉಡುಪಿಗೆ ಹೋಗಿ ೨೬ಕ್ಕೆ ಉಡುಪಿಯಿಂದ ಕುಂದಾಪುರಕ್ಕೆ ಹೋಗಿ ಅಲ್ಲಿ ೩೧ರ ವರೆಗಿದ್ದು ತಾ ೧ಕ್ಕೆ ಮಂಗಳೂರಿಗೆ ಬಂದು ತಾ ೨ಕ್ಕೆ ಮಂಗಳೂರಿಂದ ಕಲ್ಲಿಕೋಟೆಗೆ ಹೋಗಲಿರುವರು.

ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನವರ ಒಂದು ಸಭೆಯು ತಾ ೧೮ನೇ ದಿನ ೫ ೩೦ಕ್ಕೆ ವೆನ್‌ಲೊಕ್ ಆಸ್ಪತ್ರೆಯಲ್ಲಿ ಕೂಡುವುದು ಶ್ರೀ ಯು ಎನ್ ನಾಯಕ್, ಎಲ್ ಎಮ್ ಎಂಡ್ ಎಸ್ ರವರು ಮಾತನಾಡುವರು.

...ಜನರ ಬಸ್ತಿಯ ಪಂಚಕಲ್ಯಾಣ ಮಹೋತ್ಸವವು ಜರಗಿ ಕೊನೆಗೊಂಡಿತು.

ಕಳೆದ ಶನಿವಾರ ಸಂಜೆ ಘಂಟೆ ೬-೩೦ಕ್ಕೆ ಶ್ರೀ ವಕೀಲ್ ರಂಗನಾಥ ಪೂಂಜರಲ್ಲಿ ಶ್ರೀ ನಾರಾಯಣಸ್ವಾಮಿ ಪಿಳ್ಳೆಯವರು ಸುಶ್ರಾವ್ಯವಾಗಿ ಫಿಡ್ಲ್ ಬಾರಿಸಿದರು.

ನಾಟಕ ಪ್ರದರ್ಶನ ಸುಮಾರು ೫೦ಕ್ಕಿಂತಲೂ ಹೆಚ್ಚಿನ ಮಕ್ಕಳಿಗೆ ಧರ್ಮಾರ್ಥ ಸಂಗೀತ ಶಿಕ್ಷಣವೀಯುವ ಲಲಿತ ಕಲಾದರ್ಶಕ ಸಂಗೀತ ಶಾಲೆಯ ಸಹಾಯಾರ್ಥವಾಗಿ ಬರುವ ಶನಿವಾರ ರಾತ್ರಿ ಘಂಟೆ ೯ ೩೦ಕ್ಕೆ ಒಂದೇ ಗುಟುಕು ಎಂಬ ನಾಟಕವು ಗಣಪತಿ ಹ್ಯಾಸ್ಕೂಲಿನ ಸ್ಟೇಜಿನಲ್ಲಿ ಅಭಿನಯಿಸಲ್ಪಡುವುದು

**ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ** ಈಗ ಪ್ರದರ್ಶಿಸಲ್ಪಡುತ್ತಿರುವ ಶೈಲಬಾಲ ಎಂಬ ಚಿತ್ರವು ಶನಿವಾರದ ವರೆಗೆ ನಡೆದು ಭಾನುವಾರ ಲವ್ ಪೆರೇಡ್ ಎಂಬ ಅತ್ಯುಜ್ವಲ ಚಿತ್ರವನ್ನು ಪ್ರದರ್ಶಿಸಲಾಗುವುದು ಈ ಚಿತ್ರ ಎಲ್ಲೆಲ್ಲಿಯೂ ಖ್ಯಾತಿಗೊಂಡಿದೆ.

ಅಖಿಲಕರ್ನಾಟಕ ಹಿಂದೀ ಪ್ರಚಾರ ಸಮ್ಮೇಳನದ ಚತುರ್ಥ ಅಧಿವೇಶನವನ್ನು ಬರುವ ಎಪ್ರಿಲ್ ತಾ ೮ ಮತ್ತು ೯ಕ್ಕೆ ಮಂಗಳೂರಲ್ಲಿ ಜರಗಿಸಬೇಕೆಂದು ಸ್ವಾಗತ ಸಮಿತಿಯವರು ನಿಶ್ಚಯಿಸಿದವರು ಈ ಪರಿಷತ್ತಿನ ಪ್ರಥಮ ಅಧಿವೇಶನವು ೧೯೩೭ನೇ ಇಸವಿಯಲ್ಲಿ ಬೆಂಗಳೂರಲ್ಲಿ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜರಗಿರುವುದೆಂಬುದು ಉಲ್ಲೇಖನೀಯವಾಗಿದೆ ಮೈಸೂರು ವಿಶ್ವವಿದ್ಯಾಲಯದ ಪ್ರಸಿದ್ಧ ತತ್ವಶಾಸ್ತ್ರಜ್ಞರೂ ಹಿಂದಿಯ ಅನನ್ಯ ಪ್ರೇಮಿಗಳೂ ಆದ ಪ್ರೊ ಎ. ಆರ್ ವಾಡಿಯಾರವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಜರಗುವುದು ನಮ್ಮ ಭಾಗ್ಯವೆನ್ನಬೇಕು ಇದೇ ಸಮಯದಲ್ಲಿ ಜರಗುವ ಹಿಂದೀ ಪದವೀದಾನ ಸಮಾರಂಭ ಭಾಷಣವನ್ನು, ಇರಾನಿನ ನಿವಾಸಿಗಳೂ, ಭಾರತದ ಪರಮ ಭಕ್ತರೂ ಆದ ಪ್ರೊ ಆಗಾ ಮೊಹಮ್ಮದ ಅಬ್ಬಾಸ್ ಶೂಸ್ತ್ರಿ ಸಾಹೇಬರು ಮಾಡಲು ಒಪ್ಪಿರುವುದು ಅತ್ಯಂತ ಸಂತೋಷಾಸ್ಪದ ಸಂಗತಿಯಾಗಿದೆ.

**ಮುಂಡಕೂರು** ಇದೇ ತಾ ಎಪ್ರಿಲ್ ೧ರಿಂದ ದೀರ್ಘ ರಜೆಯ ಮೇಲೆ ಹೋಗಿ ಕೆಲಸದಿಂದ ನಿವೃತ್ತರಾಗಲಿರುವ ರಾ ಎಸ್ ಕೃಷ್ಣಪ್ಪ, ತಹಶೀಲ್ದಾರ್, ಮಂಗಳೂರು ತಾಲೂಕು—ಇವರನ್ನು ಬೀಳ್ಕೊಡಲಿಕ್ಕಾಗಿ ತಾ ೧೦ನೇ ದಿನ ಮುಂಡ್ಕೂರಿನ ಮತ್ತು ಮತ್ತು ಗ್ರಾಮಸ್ಥರು ಒಂದು ವಿದಾಯ ಸತ್ಕಾರವನ್ನು ಮಾಡಿದರು

**ಉಪ್ಪಿನಂಗಡಿ** ಸೇತುವೆಗೆ ಎರಡು ಲಕ್ಷ ರೂಪಾಯಿ ಸೆಂಕ್ಷನ ಆಗಿದೆ ಕೆಲಸವು ಇದೇ ಬರುವ ಇಪ್ರಿಲ್ ತಿಂಗಳಿಂದ ಪ್ರಾರಂಭವಾಗುವುದ

**ಸುರತಕಲ್**—ಇದೇ ತಾ ೧೬ನೇ ರಾತ್ರಿ ಇಲ್ಲಿ ೨ ೧೦ ೩-೧೫ ಘಂಟೆಯ ತನಕದ ಬರೇ ೧ ಘಂಟೆಯಲ್ಲೇ ೧॥ ಇಂಚಿನಷ್ಟು ಮಳೆಯು ಬಂದಿದೆ ಅಲ್ಲಲ್ಲಿ ರೋಗಗಳು ಮೊದಲೇ ಇವೆ

ಸುರತಕಲ್ಲಲ್ಲೊಂದು 'ರೂರಲ್ ಡಿಸ್ಪೆನ್ಸರಿ'ಯನ್ನು ಸ್ಥಾಪಿಸುವ ಬಗ್ಗೆ ಊರವರು ಬರೆದುಕೊಂಡ ಅರ್ಜಿಗೆ ತಾಲೂಕು ಬೋರ್ಡಿನಿಂದ ಇದುವರೆಗೂ ಏನೊಂದೂ ಅನುಜ್ಞೆ (ಹುಕುಂ) ಆಗಲಿಲ್ಲ ಈ ಪ್ರಾಂತದಲ್ಲಿ ಯೋಗ್ಯ ಡಾಕ್ಟರನೊಬ್ಬನಿಲ್ಲದೆ ಜನರು ಬಹಳ ಕಷ್ಟಕ್ಕೊಳಗಾಗಿರುತ್ತಾರೆ ನಮ್ಮ ಅಪೇಕ್ಷೆಯಂತೆ 'ರೂರಲ್ ಡಿಸ್ಪೆನ್ಸರಿ'ಯನ್ನಿಡಲು ಪ್ರಕೃತ ತಾಲೂಕು ಬೋರ್ಡಿನಲ್ಲಿ ಹಣಾಭಾವದಿಂದ ಅನುಕೂಲವಿಲ್ಲವೆಂತಾದರೆ,—ಬೇರೆ ಸೆಂಟರುಗಳಲ್ಲಿರುವ ಯಾವುದಾದರೊಂದು ರೂರಲ್ ಡಿಸ್ಪೆನ್ಸರಿಯನ್ನು ಇಲ್ಲಿಗೆ ವರ್ಗಾಯಿಸಿ (ಟ್ರಾನ್ಸ್‌ಫರ್ ಮಾಡಿ) ಯಾದರೂ ಬಡಜನರ ಗೋಳನ್ನು ನಿವಾರಿಸುವುದು ಅಗತ್ಯವೆಂದು ಕೋರಿಕೆ

**ಕಾರ್ಕಳ**—ತಾ ೯-೩-೩೩ರಲ್ಲಿ ಇಲ್ಲಿಯ ಹರಿಜನ ಸೇವಾ ಸಂಘದ ಪರವಾಗಿ ಒಂದು ಹಿಂದೂ ಮಹಾಸಭೆಯು ಶ್ರೀ ಬೆಳ್ಮಂಜೆ ಸುಬ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಸ್ಪೃಶ್ಯತಾ ನಿವಾರಣೆಯ ವಿಷಯ ಶ್ರೀಗಳಾದ ವಕೀಲ್ ರಂಗರಾವ್ ಕಲಬೇರಿಕರ್, ಎಂ ಎ ಎಲ್‌ಎಲ್ ಬಿ ಮತ್ತು ಹಿರಿಯಡ್ಕ ರಾಮರಾಯ ಮಲ್ಯರು ಇವರ ಭಾಷಣಗಳಾದ ನಂತರ ಈ ಕೆಳಗಿನ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು

"ಅಸ್ಪೃಶ್ಯತಾ ನಿವಾರಣೆಯು ಧರ್ಮದ ಉನ್ನತಿಗೆ ಅಗತ್ಯವೆಂದೂ ಹರಿಜನರಿಗೆ ಎಲ್ಲಾ ಸಾರ್ವಜನಿಕ ಸಂಸ್ಥೆಗಳಿಗೆ ಕೂಡ ಸಮಾನತೆಯಿಂದ ಪ್ರವೇಶ ಕೊಡಬೇಕೆಂದೂ ಮಾನ್ಯ ಸಿ ಎಸ್ ರಂಗ ಅಯ್ಯರರು ಎಸೆಂಬ್ಲಿಯ ಮುಂದೆ ತಂದಿರುವ ಮಸೂದೆಗಳು ಅತ್ಯಾವಶ್ಯಕವಾದುದರಿಂದ ಅವು ಕೂಡಲೇ ಮಂಜೂರು ಮಾಡಲ್ಪಡಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ"

**ಅಜೆಕಾರು**—ಜಿಲ್ಲಾ ಬೋರ್ಡಿಗೆ ಅಜೆಕಾರ ಸರ್ಕಲಿನಿಂದ ಮ. ರಾ. ಹೆಬ್ರಿ ಭುಜಂಗ ಬಲ್ಲಾಳರು ಪ್ರತಿಕಕ್ಷಿ ಇಲ್ಲದೆ ಎರಡನೇ ಬಾರಿ ಆರಿಸಲ್ಪಟ್ಟಿರುವುದು ಅತಿ ಅಭಿನಂದನೀಯವು!

ಗ್ರಾಮ ಉದ್ಯೋಗಸ್ಥರ ವರ್ಷಾವಧಿ ಜಮಾಬಂದಿಯು ಮೊನ್ನೆ ತಾನೇ ಮುಗಿದಿರುವುದು

**ಬಂಟವಾಳ**—ರಾ। ದಿವಾಕರನು ಇಲ್ಲಿಯ ಬೋರ್ಡ ಯೂನಿಯನ್ ಕ್ಲಬ್ಬಿನಲ್ಲಿ ಒಂದು ಹಿಂದೀ ಶಾಲೆಯನ್ನು ಕ್ಲಬ್ಬಿನ ಮೆಂಬರರಿಗಾಗಿ ತೆರೆದಿರುವರು

ಇಲ್ಲಿಂದ ವರ್ಗವಾದ ಅಬಕಾರಿ ಇನ್ಸಪೆಕ್ಟರ ರಾ। ಸಾಂತಪ್ಪನವರಿಗೆ ಮಾರುತಿ ಕ್ಲಬ್ಬಿನವರು ಒಂದು ಟೀಪಾರ್ಟಿಯನ್ನು ಕೊಟ್ಟು ಗ್ರೂಪ್ ಫೋಟೊ ತೆಗೆದು ಕುಂದಾಪುರಕ್ಕೆ ಕಳುಹಿಸಿಕೊಟ್ಟರು

ವಿದ್ಯಾ ಇಲಾಖೆಯಲ್ಲಿ ಮದರಾಸು ಸರಕಾರದವರು ಸರಾಸರಿ ಶೇಕಡಾ ೨೨ ೧೮ರಂತೆ ಕಡಿತವನ್ನು ಮಾಡಿರುವರು. ಸೆಕೆಂಡರಿ ಗ್ರೇಡ ಉಪಾಧ್ಯಾಯನಿಯರಿಗೆ ಶೇಕಡಾ ೪೪ ೩ರಂತೆಯೂ ಹಾಯರ್ ಎಲಿಮೆಂಟರಿ ಟ್ರೈನ್ಡ ಮಿಸ್ಟ್ರೆಸುಗಳಿಗೆ ಶೇಕಡಾ ೧೬ ಅರಂತೆಯ ೯, ಲೋವರ ಎಲಿಮೆಂಟರಿ ಟ್ರೈನ್ಡ ಮಿಸ್ಟ್ರೆಸುಗಳಿಗೆ ಶೇಕಡಾ ೩ ೪ರಂತೆಯೂ ಕಡಿಮೆ ಮಾಡಿರುವರು ಉಪಾಧ್ಯಾಯರಿಗೆ ಸೆಕೆಂಡರಿ ಗ್ರೇಡಿನವರಿಗೆ ಶೇಕಡಾ ೧೦ ೩ರಂತೆಯೂ ಹಾಯರ ಎಲಿಮೆಂಟರಿ ಗ್ರೇಡಿನವರಿಗೆ ಶೇಕಡಾ ೭ ಅರಂತೆಯೂ ಲೋವರ ಎಲಿಮೆಂಟರಿ ಗ್ರೇಡಿನವರಿಗೆ ಶೇಕಡಾ ೮೮ ಪ್ರಕಾರವೂ ಕಡಿಮೆ ಮಾಡಿರುವರು ಇನ್ನು ತಾಲೂಕು ಬೋರ್ಡ ಮುನಿಸಿಪಾಲಿಟಿಯವರು ಸಂಬಳವನ್ನು ಯಾವ ರೀತಿಯಲ್ಲಿ ಕಡಿಮೆ ಮಾಡುತ್ತಾರೋ ನೋಡಲಿಕ್ಕಿದೆ

**ಕಡಬ:**—ಕಡಬ ಪೇಟೆಯಲ್ಲಿ ಯಜಮಾನರಿಲ್ಲದ ತಿರುಗಾಡುವ ನಾಯಿಗಳ ಕಾಟ ಹೆಚ್ಚಿದೆ ಮೊನ್ನೆ ಒಬ್ಬ ಆಫೀಸರರ ಆಡೊಂದಕ್ಕೆ ಇಂಥ ಒಂದು ನಾಯಿ ಕಚ್ಚಿತು ಅಂದಿನಿಂದ ಅಲೆದಾಡುವ ನಾಯಿಗಳನ್ನು ಗುಂಡು ಹೊಡೆದು ಕೊಲ್ಲುವಂತೆ ಪೋಲೀಸರಿಗೆ ಅಪ್ಪಣೆಯಾಗಿದೆ ಕೆಲವು ನಾಯಿಗಳು ಗುಂಡಿನ ಬಾಯಿಗೆ ತುತ್ತಾದುವು. ಹೀಗೆ ಸತ್ತ ನಾಯಿಗಳ ಹೆಣಗಳು ರಸ್ತೆ ಬದಿ ಚರಂಡಿಗಳಲ್ಲಿ ಕೊಳೆಯುತ್ತಿವೆ ರಣಹದ್ದುಗಳೂ ಸಾರ್ವಜನಿಕ ಹಿತದೃಷ್ಟಿಯಿಂದ ಹೆಣ ತೆಗೆಯಲು ಮುಂದಾಗಿವೆ ಜೀವದಿಂದಿರುವಾಗಲೇ ಗತಿಯಿಲ್ಲದ ನಾಯಿಗಳ ಹೆಣಗಳು ಎಲ್ಲಿ ಬಿದ್ದು ಕೊಳೆತರೇನು? ಕೇಳುವವರಾರು? ಊರವರಿಗೆ ನಾಯಿಗಳು ಬೇಡವಾದರೂ ಆರೋಗ್ಯವೂ ಬೇಡವಾಗಿದೆಯೋ?

++ ++


## ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

**ಅಖಿಲ ಕರ್ನಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ,**
**ಕರ್ನಾಟಕದ ಗೌರವಕ್ಕೂ ಕರ್ನಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ.**

ನಮ್ಮಲ್ಲಿ ಬ್ರಿಟಿಷ್ ಫಾರ್ಮಕೋಪಿಯಾ, ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೊಡೆಕ್ಸ್ ವ, ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ವಾಲೆಟ್ ದ್ರವ್ಯಗಳೂ ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ, ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುವುವು

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಾಮುಖ್ಯ ಔಷಧಗಳು

ಚ್ಯವನಪ್ರಾಶ ಲೇಹ ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ ೧ ಪೌಂಡು ಬಾಟ್ಲಿ ರೂ. ೧ ೧೦ ಔನ್ಸು ಬಾಟ್ಲಿ ರೂ ೭ ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ವ ಮೆದುಳಿಗೆ ಶಾಂತತೆಯನ್ನೀಯುವ ಔಷಧ ೧ ಪೌಂಡು ಬಾಟ್ಲಿಗೆ ರೂ 1—8

ಅಶ್ವಗಂಧಾರಿಷ್ಟ, ಅತ್ಯುತ್ತಮವಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ. 3. ೮ ಔನ್ಸು ಬಾಟ್ಲಿಗೆ ರೂ. 1—10— ಪ್ರಸೂತಿ ಸಂಜೀವನ ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ. ೧೦ ಔನ್ಸು ಬಾಟ್ಲಿಗೆ ರೂ 1 8—0 ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3—6—0, ೮ ಔನ್ಸು ಬಾಟ್ಲಿಗೆ ರೂ 1—1—0

ಬ್ರಾಹ್ಮೀ ತೈಲ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಬ್ರೈನ್ ಟಾನಿಕ್ಕು ೪ ಔನ್ಸು ಬಾಟ್ಲಿಗೆ ಆಣೆ 14 ಹಿಮಸಾಗರ ತೈಲ ತಲೆಗೆ ಒಳೆ ತಂಪನ್ನೀಯುವ ದಿವ್ಯವಾದ ಔಷಧ ೪ ಔನ್ಸು ಬಾಟ್ಲಿಗೆ ರೂ 1—6— ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ ೪ ಔನ್ಸು ಬಾಟ್ಲಿಗೆ ರೂ —6— ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಮುಂತಾದ ವಾತ ಕಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ ೬ನೇಯ ಆವರ್ತನೆ ೧ ಔನ್ಸಿಗೆ ರೂ 1 ೧೪ನೇಯ ಆವರ್ತನೆ ೧ ಔನ್ಸಿಗೆ ರೂ 1—12 ೨೧ನೇ ಆವರ್ತನೆ ೧ ಔನ್ಸಿಗೆ ರೂ 2— ೪೧ನೇಯ ಆವರ್ತನೆ ೧ ಔನ್ಸಿಗೆ ರೂ 4 ೫೧ನೇ ಆವರ್ತನೆ ರೂ 4—1—1 ೧೦೧ನೇ ಆವರ್ತನೆ ರೂ ೮ ಧನ್ವಂತರಿ ತೈಲ ರಕ್ತವಾತ, ಆಮವಾತ, ಸರ್ವಾಂಗವಾತಮುಂತಾದ ಕಾಹಿಲೆಗಳಲ್ಲಿ, ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ವ ಮೈಗೆ ಹಚ್ಚುವ ದಿವ್ಯೌಷಧ ೭ನೇಯ ಆವರ್ತನೆ ೧ ಔನ್ಸಿಗೆ ರೂ. , ೧೪ನೇ ಆವರ್ತನೆ ೧ ಔನ್ಸಿಗೆ ರೂ 1—12 ೨೧ ನೇ ಆವರ್ತನೆ ೧ ಔನ್ಸಿಗೆ ರೂ 2—6—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಅಸವ, ಅರಿಷ್ಟಗಳೂ, ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ, ಸುಕುಮಾರಾಮೃತ, ಮಲೇರಿಯಾ ಮಿಕ್ಶ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ನಾಟಕ ಸ್ನೋ, ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅರೋರಾ ಕ್ರೀಮ್, ಬ್ಯೂಟಿಕ್ರೀಮ್, ಕ್ರಿಮೋರ್ ಆಮೋನಿಸ್ (Limes & Glycerine) ವಗೈರೆ ಟಾಯಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು, ಹಚ್ಚ, ರಕ್ತನೀಲ, ವರ್ಣಗಳ, ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಯೋಗಿಸುವ ಸಾಬೂನುಗಳೂ ತಯಾರಿಸಲ್ಪಡುವವು

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡ್ಯಾರೆಕ್ಟರರಿಗೆ ಬರೆದುಕೊಳ್ಳಿರಿ.

**Managing Director:—Venkatraya Annappa Baliga**

# ಗಾಂಧಿಜೀಯವರ ಬಿಡುಗಡೆಯಾಗುವುದಿಲ್ಲವೇ?"

## ಕಲ್ಕತ್ತದಲ್ಲಿ ಪೋಲೀಸ್ ಅಧಿಕಾರಿಯ ಕೊಲೆ!

**ಚರ್ಚಿಲ್ಲರ ಹೆಣಗಾಟ!** **ಸರ್ ಹೋರರ ಕಾಟ!**

# ಶನಿವಾರ ದಿನ ಶ್ವೇತಪತ್ರ ಪ್ರಕಟಣೆ!

ಮಹಾತ್ಮಾ ಗಾಂಧಿಯವರ ಬಿಡುಗಡೆಯ ಕುರಿತು ಒಂದೊಂದು ಪತ್ರಿಕೆಯು ಒಂದೊಂದು ವಿಧವಾಗಿ ಹೇಳುತ್ತಿದೆ. ಒಂದು ಪತ್ರಿಕೆಯು ಅವರ ಬಿಡುಗಡೆಯು ಫೆಬ್ರುವರಿ ತಿಂಗಳಲ್ಲಿ ಎಂದಿತು ಆದರೆ ಫೆಬ್ರುವರಿ ತಿಂಗಳು ದಾಟುತ್ತಲೇ ಇನ್ನೊಂದು ವಾರ್ತೆಯು ಅವರ ಬಿಡುಗಡೆಯು ಮಾರ್ಚಿ ಮೊದಲನೆ ವಾರದಲ್ಲೆಂದಿತು. ಮೊದಲನೆ ವಾರವು ದಾಟಲು ಈಗ ಒಂದು ಪತ್ರಿಕೆಯು ಗಾಂಧಿಜೀಯವರ ಬಿಡುಗಡೆಯೂ ಸರಕಾರದ ಶ್ವೇತ ಪತ್ರ (White Paper)ದ ಪ್ರಕಟಣೆಯೂ ಏಕಕಾಲದಲ್ಲಾಗುವುದು ಎಂದು ಬರೆದಿದೆ. ಅಂತೂ ಲಂಡನಿನ ಪಾರ್ಲಿಮೆಂಟ್ ಸಭೆಯಲ್ಲಿ ನಡೆಯುತ್ತಿರುವ ವಾದವಿವಾದಗಳನ್ನು ಪರಿಶೀಲಿಸುವಾಗ ಈ ಸುದ್ದಿಯ ಹರಡುವಿಕೆಯಲ್ಲಿ ಸತ್ಯಾಂಶವಿರುವುದಿಲ್ಲವೆಂದು ತಿಳಿಯಲಾಗುತ್ತದೆ ಶ್ವೇತಪತ್ರವು ಶನಿವಾರ ದಿನ ಪ್ರಕಟವಾಗುವುದೆಂದು ವಾರ್ತೆಯಿದೆ ಇಂಡಿಯದವರಿಗೆ ಸರಕಾರವು ಕೊಡುವ ದಾನದ ವಿಚಾರ ವಿಮರ್ಶೆಗಳನ್ನು ಮಾಡಲು ಸರಕಾರವು ರಾಷ್ಟ್ರೀಯ ಪಕ್ಷದವರನ್ನು ಸೆರೆಯಿಂದ ಬಿಡುಗಡೆ ಮಾಡಲೂಬಹುದೆಂದು ಹೆಚ್ಚಿನವರ ಊಹೆಯಾಗಿದೆ ಬ್ರಿಟಿಷ ಸರಕಾರವು ಕೊಡುವ ನವೀನ ರಾಜ್ಯಾಂಗವನ್ನು ತಿರಸ್ಕರಿಸುವ ಭಾರವೂ ಸ್ವೀಕರಿಸುವ ಭಾರವೂ ಕಡುರಾಷ್ಟ್ರೀಯವಾದಿಗಳಾದ ಕೊಂಗ್ರೆಸ್ಸಿನವರ ಕೈಯಲ್ಲಿರುವುದರಿಂದ, ಅಂತಹ ಕೊಂಗ್ರೆಸ್ಸಿನ ಪ್ರಮುಖ ಮುಖಂಡರಾದ ಗಾಂಧಿಜೀ ವಲ್ಲಭಭಾಯಿ ಪಟೇಲರೇ ಮೊದಲಾದವರನ್ನು ಬಂಧ ವಿಮುಕ್ತಗೊಳಿಸುವುದು ಸ್ವಾಭಾವಿಕವಿರುವುದರಿಂದ ಈ ತಿಂಗಳ ಅಂತ್ಯದಲ್ಲಾದರೂ ಬಿಡುಗಡೆಯ ಶುಭಪ್ರಸಂಗವು ಒದಗಿಬರುವುದೋ ನೋಡಲಿದೆ.

White Paper ರಾಜಾಜ್ಞೆಯು ಮುದ್ರಣವಾಗಿ ಸಿದ್ಧವಾಗುತ್ತಲಿದೆ ಇದು ಇಂಗ್ಲೆಂಡು ಇಂಡಿಯಗಳಲ್ಲಿ ಏಕಕಾಲದಲ್ಲಿ ಪ್ರಕಟವಾಗುವುದು ಕೆಲವರೆನ್ನುವಂತೆ ಅದರ ಒಂದೊಂದು ಪ್ರತಿಯನ್ನು ಪ್ರಾಮುಖ್ಯ ಕೊಂಗ್ರೆಸ್ ಧುರೀಣರಿಗೆ ಕಳುಹಿಸಲಾಗುವುದೆಂದೂ, ಆ ಮುಖಂಡರ ಅದರ ಮೇಲಿನ ಅಭಿಮತಗಳನ್ನು ಕಾರಾಗ್ರಹದೊಳಗೇನೆ ತೆಗೆದುಕೊಳ್ಳಲಾಗುವುದೆಂದೂ ತಿಳಿದುಬಂದಿದೆ ಗಾಂಧಿಜೀಯವರ ಅಭಿಪ್ರಾಯವು ಸದ್ಯದಲ್ಲಿ ಹೇಗುಂಟೆಂದು ತಿಳಿಯಬರುವುದಿಲ್ಲ ತನ್ನ ಮತವನ್ನು ತಾನು ಕೊಡುವೆನೆಂದು ಗಾಂಧಿಜೀಯವರು ಹೇಳಿರುವರಾದರೂ ಅವರನ್ನು ಸ್ವತಂತ್ರರಾಗಿ ನುಡಿಯಲು ಸರಕಾರವು ಬಿಡುವಂತಿಲ್ಲ

ಶ್ವೇತಪತ್ರದ ತಯಾರಿಯ ಮೇಲೆ ಗಾಂಧಿಜೀಯವರಿಗಾಗಲೀ ಅವರ ಒಡನಾಡಿಗಳಾಗಿರುವ ವಲ್ಲಭಭಾಯಿ ಪಟೇಲ ಮೊದಲಾದವರಿಗಾಗಿಯ ಆಗಲೀ ಹೆಚ್ಚಿನ ಉತ್ಸುಕತೆಯಿಲ್ಲ. ಎರವಾಡಾ ಜೈಲಿನೊಳಗೆ ಗಾಂಧಿಜೀಯವರು ಮಲಗುತ್ತಿರುವ ಅದೊಂದು ಮಾವಿನ ಮರವು ಇನ್ನೂ ತನಕ ಹೂಬಿಟ್ಟಿರುವುದಿಲ್ಲವಾದರೂ ಈ ವರ್ಷ ಹೂಬಿಟ್ಟು ಬಹಳ ಹಣ್ಣುಗಳನ್ನು ಕೊಡುವಂತಹ ಆಶೆಯನ್ನು ತೋರಿಸುತ್ತಿದೆ ಸರಕಾರದ ದಾನವನ್ನು ಗಾಂಧಿಜೀಯವರು ನಿರೀಕ್ಷಿಸುತ್ತಿರುವ ಬದಲು ಈ ಮಾವಿನ ಮರದ ಹಣ್ಣುಗಳನ್ನಾದರೂ ನಿರೀಕ್ಷಿಸುತ್ತಿರಬಹುದು ಎಂದು ಒಂದು ಪತ್ರಿಕೆ ಹೇಳುತ್ತದೆ ಕೊಂಗ್ರೆಸ್ಸಿನ ಏಕ್ಟಿಂಗ್ ಅಧ್ಯಕ್ಷರಾದ ಶ್ರೀ ಎಂ ಎಸ್ ಅನಿಯವರು ಮೊನ್ನೆ ಪೂನಾಕ್ಕೆ ತೆರಳಿ ಸರಕಾರವು ತನಗೆ ಗಾಂಧಿಜೀಯವರ ದರ್ಶನ ಲಾಭವನ್ನು ಕೊಡುವಂತೆ ಏರ್ಪಾಡುಮಾಡಬೇಕೆಂದು ಹೇಳಿದರು. ಒಂದೆರಡು ದಿನಗಳ ತನಕ ತಡೆದ ನಂತರ ಶ್ರೀ ಅನಿಯವರಿಗೆ ಸರಕಾರದ ಉತ್ತರವು ತಲುಪಿ, ಸದ್ಯಕ್ಕೆ ಗಾಂಧಿಯವರ ಭೇಟಿಯನ್ನು ಕೊಡಲಾಗುವುದಿಲ್ಲವೆಂದು ಹೇಳಲಾಗಿದೆ ಗಾಂಧಿಜೀಯವರೊಡನೆ ಶ್ರೀ ಅನಿಯವರು ಬರೇ ಅಸ್ಪೃಶ್ಯತಾ ನಿವಾರಣೆ ಚಳವಳದ ಕುರಿತಾಗಿಯೇ ಸಂಭಾಷಿಸುವರೆಂದಿತ್ತು. ಆದರೂ ಕೂಡಾ ಸರಕಾರವು ಅನಿಯವರ ಅರಿಕೆಯನ್ನು ತಳ್ಳಿ ಹಾಕಿಬಿಟ್ಟಿತು. ಈ ತಿರಸ್ಕಾರದ ಸಂಬಂಧವಾಗಿ ಶ್ರೀ ಎನ್. ಸಿ ಕೇಳ್ಕರರು (ಲೋ. ಟಿಳಕರ ಪ್ರತಿನಿಧಿ) ಸರಕಾರದ ವರ್ತನೆಯನ್ನು ಟೀಕಿಸಿ ಅನಿಯವರಿಗೆ ಗಾಂಧಿಯವರ ಭೇಟಿಯನ್ನೊದಗಿಸಿಕೊಡುತ್ತಿದ್ದರೆ ಸರಕಾರದ ಕೈಯಿಂದೇನು ಹೋಗುತಿತ್ತು?—ಅಭಿಪ್ರಾಯ ವಿನಿಮಯದಿಂದಾಗಿ ಏನಾದರೊಂದು ಸುಖಪ್ರದವಾದ ಇತ್ಯರ್ಥವಾಗಬಾರದೆಂದುಂಟೋ ಎಂದು ಪ್ರಶ್ನಿಸಿರುವರು. ಗಾಂಧಿಜೀಯವರು ತನ್ನ ಶಾಸನಭಂಗ ಚಳವಳದ ನಿವೃತ್ತಿಯ ಕುರಿತು ವಾಗ್ದಾನವನ್ನು ಸ್ವತಹಾ ಮಾಡದ ಹೊರತು ಅವರ ಬಿಡುಗಡೆಗಾಗಿ ಚಿಂತಿಸಬಾರದೆಂದೇ ವೈಸರಾಯರ ಉಪದೇಶವಿರುತ್ತವಂತೆ ಅತ್ತ ಇಂಗ್ಲಾಂಡಿನಲ್ಲಿ ಚರ್ಚಿಲ್ಲ ಪಕ್ಷದವರು ಸೇರಿಕೊಂಡು ಇಂಡಿಯಕ್ಕೆ ಯಾವ ಸುಧಾರಣೆಗಳನ್ನೂ ದಾನಮಾಡಬಾರದೆಂದೇ ಬ್ರಿಟಿಷ ಮುತ್ಸದ್ದಿಗಳೊಡನೆ ಹಟಗಟ್ಟಿ ತೊಡೆ ತಟ್ಟುತ್ತಿರುವರು

ಶನಿವಾರ ದಿನ ಪ್ರಕಟವಾಗಲಿರುವ ವೈಟ್ ಪೇಪರಿನಲ್ಲಿ ಬ್ರಿಟಿಷ ಸರಕಾರವು ಇಂಡಿಯದ ಕಡೆ ಮೇರೆ ಮೀರಿ ಔದಾರ್ಯವನ್ನು ತೋರಿಸಿದೆಯೆಂದೂ ಬ್ರಿಟಿಷ ರಕ್ಷಣೆಗಳನ್ನು ಹಿಂದೀಯರಿಗೆ ಕೊಡುವುದೂ, ಬ್ರಿಟಿಷ ರಾಜ್ಯವು ಇಂಡಿಯದಲ್ಲಿ ಕೊನೆಗಾಣುವುದೂ ಒಂದೇ ಎಂದು 'ಮೋರ್ನಿಂಗ್ ಪೋಸ್ಟ್' ಪತ್ರಿಕೆಯೆಂದಿದೆ ಲೋರ್ಡ್ ಅರ್ವಿನರೆನ್ನುವಂತೆ ಬ್ರಿಟಿಷ ಸರಕಾರವು ಮಿಲಿಟೆರಿಯ ಮೇಲಿನ ಅಧಿಕಾರವನ್ನು ವೈಸರಾಯರ ಕೈಯಲ್ಲಿ ಕೊಡುವುದು ಯಾವ ಬಗೆಯಲ್ಲೂ ಅದು ಮಿಲಿಟೆರಿ ಮತ್ತು ಪೋಲೀಸ ಅಧಿಕಾರವನ್ನು ಸಂಪೂರ್ಣವಾಗಿ ಹಿಂದೀಯ ಸರಕಾರದ ಕೈಯಲ್ಲಿ ಕೊಡಲಾರದು ಮಿಲಿಟೆರಿಗಳಲ್ಲಿ ಯುರೋಪಿಯನ್ನರನ್ನು ಸೇರಿಸುವುದನ್ನು ಕಡಿಮೆ ಮಾಡಬಾರದೆಂದೇ ಬ್ರಿಟಿಷ ಮುತ್ಸದ್ದಿಗಳ ಮತವಿರುತ್ತದೆ ಪಾರ್ಲಿಮೆಂಟಿನಲ್ಲಿಯ ಡೈಹಾರ್ಡ್ ಪಕ್ಷದ ಅರ್ಧಕ್ಕರ್ಧ ಸದಸ್ಯ ಸಂಖ್ಯೆಯು ಸರಕಾರದ ಶ್ವೇತಪತ್ರದಾನವನ್ನು ವಿರೋಧಿಸುವುದೆಂದು ತಿಳಿದುಬಂದಿದೆ ಈ ಸಂಬಂಧವಾಗಿ ಚರ್ಚಿಲ್ಲರು ವಿಶೇಷವಾದ ಸರ್ಕ್ಯುಲಾರುಗಳನ್ನೂ ಮನವಿಗಳನ್ನೂ ಪ್ರಕಟಿಸಿ, ಮಿತ್ರರಿಗೆ ಹಂಚಿ ತನ್ನ ಬೆಂಬಲವಾಗಿ ನಿಲ್ಲಬೇಕೆಂದು ಕೇಳಿಕೊಂಡಿರುವರು.

ಅಂತೂ, ಸರಕಾರದ ಈ ಸಲದ ದಾನವು ಹದ್ದು ಮೀರಿ ಹೋಗಿದೆಯೆಂಬ ಸುದ್ದಿಯು ಇಂಗ್ಲಾಂಡಿನಲ್ಲಿ ಹರಡಿ ಸಾಮ್ರಾಜ್ಯ ರಕ್ಷಣೆಯ ಚಿಂತನೆಯಿಂದಾಗಿ ಕನ್ಸರ್‌ವೇಟಿವರು ದಿಗಿಲುಗೊಂಡಿದ್ದಾರೆ ದಿ ಕಮಿಟಿ ಒಫ್ ಮೆಂಚೆಸ್ಟರ್ ಕನ್ಸರ್‌ವೇಟಿವ್ ಎಸೋಸಿಯೇಶನಿನವರು ಒಂದು ಸಭೆಯನ್ನು ಜರಗಿಸಿ ಬ್ರಿಟಿಷ ಸಾಮ್ರಾಜ್ಯದ ಭದ್ರತೆಗಳನ್ನು ಸುಸೂತ್ರವಾಗಿ, ಜೋಪಾನದಿಂದ ಜಾಗ್ರತೆಯಿಂದ ಸಂರಕ್ಷಿಸುವ ಏರ್ಪಾಡುಗಳನ್ನು ಮಾಡದೆ ಸರಕಾರವು ಇಂಡಿಯಕ್ಕೆ ಏನನ್ನೂ ಕೊಡಬಾರದೆಂದು ಠರಾವು ಮಾಡಿಕೊಂಡಿದೆ

ತಾ ೧೦ನೇ ದಿನ ಮಿ| ಬಾಲ್ಡ್‌ವಿನ್ ದೊರೆಗಳವರ ಅಧ್ಯಕ್ಷತೆಯಲ್ಲಿ ವೈಟ್ ಪೇಪರಿನ ಪರಾಮರ್ಶೆಯು ನಡೆಯಿತು ಮಿ| ಮೆಕ್‌ಡೊನಾಲ್ಡ್ ಮತ್ತು ಸರ್ ಜೋನ್ ಸೈಮನರು ಅದರ ನಕಲನ್ನು ಓದಿ ಅವಸರದ ಕೆಲಸಕ್ಕಾಗಿ ಜಿನೇವಾಕ್ಕೆ ತೆರಳಿದರು ಕೆಬಿನೆಟ್ ಸಭೆಗಳು ದಿನ ದಿನ ಜರಗಿ ಶ್ವೇತ ಪತ್ರದ ಕುರಿತಾದ ಎಲ್ಲಾ ಅಭಿಪ್ರಾಯಗಳನ್ನು ವಿಮರ್ಶಿಸಿಕೊಳ್ಳಲಾಗುತ್ತಿದೆ

ಮುಂಬಾಯಿಯಲ್ಲಿ ಮಂದಪಕ್ಷದವರ ಚಳವಳಿಕ್ಕಾರಂಭವಾಗಿದೆ. ಅಂದು ರೌಂಡ್‌ಟೇಬಲ್ ಪರಿಷತ್ತಿಗೆ ತೆರಳಿದ್ದ ಶ್ರೀ. ಸಿ ವೈ ಚಿಂತಾಮಣಿಯವರೂ, ಶ್ರೀ ವಿ ಎಸ್. ಶಾಸ್ತ್ರಿಯವರೂ ಇನ್ನಿತರರೂ ಸಭೆಗಳನ್ನು ಜರಗಿಸಿ ಬ್ರಿಟಿಷ ಸರಕಾರವು ತೃತೀಯ ರೌಂಡ್‌ಟೇಬಲಿನಲ್ಲಿ ಮಾಡಿದ ಸುಧಾರಣಾ ಯೋಜನೆಯು ಅಸಮಾಧಾನಕರವಾದುದೆಂದೂ, ಸುಧಾರಣೆಯ ಸ್ವೀಕಾರ ತಿರಸ್ಕಾರಗಳ ಕುರಿತು ಆ ಆಲೋಚನೆಗಳನ್ನು ನಡೆಸುವಂತೆ ಗಾಂಧಿಜೀಯವರನ್ನು ಬಿಡುಗಡೆ ಮಾಡಬೇಕೆಂದೂ ಚಳವಳಿಸುತ್ತಿರುವರು. ತಾ ೧೨ನೇ ಆದಿತ್ಯವಾರ ಇಂಡಿಯನ್ ನೇಶನಲ್ ಲಿಬರಲ್ ಫೆಡರೇಶನ್‌ನವರ ಒಂದು ಮಹಾ ಸಭೆಯು ಜರಗಿ ಬ್ರಿಟಿಷ ಸರಕಾರವು ಈ ಸಲವಾದರೂ ಸಮಾಧಾನಪೂರ್ವಕ ರಾಜ್ಯಾಂಗವನ್ನು ಕೊಡದೆ ವಿಶ್ರಾಂತಿ ಹೊಂದಬಾರದಾಗಿಯೂ, ಹಿಂದೂಸ್ಥಾನಕ್ಕೆ ಸಮರ್ಪಕವಾದ ನವೀನ ರಾಜ್ಯಾಂಗವು ದೊರೆಯಬೇಕಾದರೆ ಹಿಂದೀಯ ಪ್ರತಿನಿಧಿಗಳು ಇಂಗ್ಲಾಂಡಿಗೆ ಹೋಗಿ ಬ್ರಿಟಿಷ ಪ್ರಭುತ್ವಗಳನ್ನು ಕಂಡು ಶ್ರಮಿಸಬೇಕಾಗಿಯೂ ನಿರ್ಧರಿಸಿದ್ದಾರೆ ಹಾಗೂ ಇದೊಂದು ಪಂದ್ಯಾಟವಾಗಿ ಪರಿಣಮಿಸಿರುತ್ತದೆ ಮೇ ತಿಂಗಳಲ್ಲಿ ಲಂಡನಿನಲ್ಲಿ ಜರಗುವ ಜೋಯಿಂಟ್ ಸಿಲೆಕ್ಟ್ ಕಮಿಟಿಗೆ ಸರ್ ತೇಜ ಬಹದ್ದೂರ್ ಸಪ್ರೂ, ಎಂ ಆರ್ ಜಯಕರ್ ಮೊದಲಾದವರನ್ನೂ ನ್ಯೂಡೆಲ್ಲಿಯ ಎಸೆಂಬ್ಲಿಯಿಂದ ಸರ್ ಅಬ್ದುರ್ ರಹಿಮರನ್ನೂ ಬ್ರಿಟಿಷ ಸರಕಾರವು ಬರಮಾಡಿಕೊಂಡಿತೆಂದು ಊಹಿಸಲಾಗಿದೆ

ಇತ್ತೀಚೆಗೆ ಬಂದ ಒಂದು ವಾರ್ತೆಯಿಂದಾಗಿ ಚರ್ಚಿಲ್ಲರಿಗೂ ಸರ್ ಸಾಮುವೆಲ್ ಹೋರರಿಗೂ ಬಹಳ ದಿನಗಳ ವಾಗ್ಯುದ್ಧವು ನಡೆಯುತ್ತಿದೆಯೆಂದು ತಿಳಿದುಬರುತ್ತದೆ ಶ್ವೇತಪತ್ರ ವಿಮರ್ಶೆಯ ಬಗ್ಗೆ ಸಭೆಯು ಸೇರಿದ್ದಿತು ಅದನ್ನು ವಿರೋಧಿಸುವುದಕ್ಕಾಗಿ ಚರ್ಚಿಲ್ಲರು ತನ್ನ ಅನೇಕ ಒಡನಾಡಿಗಳೊಡನೆ ಕರತಾಡನದೊಂದಿಗೆ ಸಭೆಗೆ ಚಿತ್ತೈಸಿದರು. ಸರ್ ಸಾಮುವೆಲ್ ಹೋರರೂ ಸಭೆಗೆ ಬಂದರು ಅವರು ಒಳಹೋಗುವಾಗ ಯಾರ ಗುಲ್ಲೂ ಇರಲಿಲ್ಲ. ವಿವಾದಕ್ಕೆ ಮೊದಲಾಗಿ ಚರ್ಚಿಲ್ಲರ ಪ್ರತಿಯೊಂದು ಮಾತನ್ನೂ ಮಂಡಲದವರು ಅನುಮೋದಿಸಿ ಕೈಚಪ್ಪಾಳೆ ಹೊಡೆದರು ಸರ್ ಸಾಮುವೆಲ್ ಹೋರರು ಉತ್ತರಕ್ಕೆಂದು ಮಾತನಾಡಿದೊಡನೆ ಅವರ ಯಾವ ಅಭಿಪ್ರಾಯವೂ ವಿರುದ್ಧ ಪಕ್ಷದವರಿಂದ ಅನುಮೋದಿತವಾಗಲಿಲ್ಲ

ಈ ವಿಪರೀತ ಸ್ಥಿತಿಯಲ್ಲಿ ಸರ್ ಹೋರರು ಕಣ್ಣೀರು ಮಿಡುಕುವುದರಲ್ಲೂ ಹಿಂದಿರಲಿಲ್ಲವಂತೆ ಸಾಮುವೇಲ್ ಹೋರರ ಚಿತ್ತವೃತ್ತಿಯು ಈಗ ಬೇರಾಗಿದೆಯೆಂದು ವಾರ್ತೆಯಿದೆ. "ನಾನು ಭಾರತ ಸಚಿವನಾಗಿಯೂ ಲೋಡ್ ವಿಲ್ಲಿಂಗ್ಡನ್ನರು ವೈಸರಾಯರಾಗಿಯೂ ಸದಾ ಕಾಲವೂ ಕೊಂಗ್ರೆಸ್ಸನ್ನು ಬಗ್ಗಿಸಿ ಹಿಡಿದು ರಾಜ್ಯಭಾರ ನಡೆಸಬಹುದು, ಆದರೆ ಆ ಮೇಲಿನ ಗತಿಯೇನು? ಸ್ಥಿತಿಯೇನು? ಅಂದು ಐರ್ಲೆಂಡಿನವರು ಮಾಡಿದಂತೆ ಅವರೂ ಮಾಡಿದರೆ? ಅದರ ಬದಲಿಗೆ ನಮಗೆ ಸಾಧ್ಯವಿದ್ದುದನ್ನು ಈಗಲೇ ಕೊಟ್ಟು ಕುಳಿತರೇನು ನಷ್ಟ?" ಎಂದು ಸರ್ ಸಾಮುವೇಲ್ ಹೋರರು ಹೇಳಿದುದನ್ನು ಕೇಳುವಾಗ ಅವರು ಈಗಿನ ಸ್ಥಿತಿಯಲ್ಲಿ ತೋರಿಕೆಗೆ ಮಾತ್ರ ದಬ್ಬಾಳಿಕೆಯ ಸೂತ್ರವನ್ನು ಹಿಡಿದಿರುವರೆಂದೂ, ಮನಸ್ಸಾ ಅವರಿಗೆ ಹಿಂದೂದೇಶವನ್ನೊಮ್ಮೆ ಸಮಾಧಾನಿಸಿದರೆ ಸಾಕೆಂದಿದೆಯೆಂದೂ ತಿಳಿಯಲಾಗುತ್ತದೆ ಲಂಡನ್ ಸುದ್ದಿಗಾರನೊಬ್ಬನು ಈಗ ಹೋರರ ಮನೋಪರಿವರ್ತನೆಯಾಗಿದೆ, ಅವರು ಮುಂಚಿನ ಹೋರರಲ್ಲ, ಈಗ ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಮಾಂಡಳಿಕರೊಡನೆ ಹೋರಾಡುತ್ತಿರುವರು ಎಂದು ಹೇಳಿರುವನು ಚರ್ಚಿಲ್ ಪಂಗಡವು ತನ್ನ ದುರಾಗ್ರಹದಲ್ಲಿ ಯಶಸ್ವಿಯಾಗುವುದೆಂದೇ ಬಹು ಸಂಖ್ಯಾತರ ಅಭಿಪ್ರಾಯವಿದೆ. ಹೀಗಾದರೆ ಬೇಗನೆ ಪ್ರಕಟವಾಗಲಿರುವ ಶ್ವೇತ ಪತ್ರದ ಸತ್ಪರಿಣಾಮವು ಹಿಂದೂದೇಶದ ಮೇಲೆ ಎಷ್ಟಾಗುವುದೆಂದು ತಿಳಿಯದು.

ಕಲ್ಕತ್ತದ ಫ್ರೆಂಚ ಚಂದ್ರನಗರದಲ್ಲಿ ಪೋಲೀಸ ಕಮಿಶನರರಾದ ಮಿ| ಕ್ವಿನ್ ಎಂಬವರನ್ನು ಇಬ್ಬರು ಬಂಗಾಳಿ ತರುಣರು ಗುಂಡಿಕ್ಕಿ ಕೊಂದರಾಗಿ ವಾರ್ತೆ. ಕೊಲೆಗಡುಕರಲೊಬ್ಬನು ಸಿಕ್ಕಿರುವನು

# ಮಾನವ ಪ್ರಪಂಚ:— ಹೊಸ ಶೋಧ. ರಕ್ತವಿನಿಮಯ ಶಾಸ್ತ್ರ. ಸೀಸರನ ಉಪಾಯ. ಸುಡಲಾಗದ ಮರ. ಇನ್ನೊಂದು ಭೂಕಂಪ! ಚಿಕಾಗೋವಿನಲ್ಲಿ ಇನ್ನೊಂದು ಸೂರ್ಯಶಕ್ತಿ. ವಾತನಿವಾರಣೆಗೆ ತುಂಬಿಯ ಕಡಿತ! ವೈಟ್ ಪೇಪರ್. ಮೀನಿನ ಆಯುಷ್ಯವೆಷ್ಟು? ಗಾಜಿನ ಮಾರ್ಗ. ಹೊಲಿವುಡ್‌ನಲ್ಲಿ ಮುಷ್ಕರ!

## ಹೊಸ ಶೋಧ!

ಲಂಡನಿನ ಪಾರ್ಲಿಮೆಂಟು ಮಂದಿರವು ೧೮೪೭ರಲ್ಲಿ ಸ್ಥಾಪಿತವಾಯಿತು. ಇತ್ತೀಚೆಗೆ ನಿರ್ದಿಷ್ಟ ಕಾಲಕ್ಕಿಂತ ಮೊದಲೇ ಅದರ ಗೋಡೆಗಳು ಅಳಿಯಲಾರಂಭವಾದುದನ್ನು ಕಂಡು, ಅಂತಹ ಅಮೂಲ್ಯ ಕಟ್ಟಡಗಳು ನೂರು ವರ್ಷಗಳೂ ಬಾಳದೆ ನಶಿಸುವ ಚಿಹ್ನೆ ತೋರಲು ಕಾರಣವೇನೆಂದು ಭೂಶಾಸ್ತ್ರಜ್ಞರು ವಿವೇಚಿಸಿದರು. ಕೆಲವರು ಅದು ಹವಾ ಗುಣದ ದೋಷದಿಂದ ಹಾಗಾಯಿತು ಎಂದರು. ಅದರಲ್ಲಿ ಶೋಧಕರಿಗೆ ವಿಶ್ವಾಸವುಂಟಾಗಲಿಲ್ಲ — ಅವರು ಶೋಧ ನಡೆಸುತ್ತಾ ಇದ್ದರು. ಕೊನೆಗೆ ರಸಾಯನ ಮತ್ತು ಕಲಾಕೌಶಲ್ಯ ಶೋಧನಾಲಯದವರು ಈ ಕುರಿತು ಶೋಧಗಳನ್ನು ನಡೆಸಿದರು. ಆ ಮಂದಿರದ ಒಂದು ತುಂಡು ಗೋಡೆಯನ್ನು ಬಿಲ್ಡಿಂಗ ರಿಸರ್ಚ್ ಸ್ಟೇಶನ ಶೋಧನಾಲಯದಲ್ಲಿ ಪರೀಕ್ಷಿಸಲು, ಭೂತಕನ್ನಡಿಗೆ ಕಾಣಲಾರದಷ್ಟು ಸಣ್ಣ ಕ್ರಿಮಿಗಳು ಆ ಗೋಡೆ ತುಂಡಿನಲ್ಲಿ ಜೀವಿಸಿದ್ದುವೆಂದೂ, ಅವುಗಳು ತಮ್ಮ ಜೀವಿತಕ್ಕಾಗಿ ಮಾಡುವ ಚಟುವಟಿಕೆಗಳಿಂದಾಗಿ ಆ ಗೋಡೆಯು ಇಷ್ಟು ಬೇಗ ಅಳಿಯಲು ಕಾರಣವೆಂದೂ, ತಿಳಿದುಬಂತು. ಜಡ ಪದಾರ್ಥಗಳೆಲ್ಲವುಗಳಲ್ಲೂ ಈ ಸೂಕ್ಷ್ಮ ಜೀವಿಗಳು ವಾಸಿಸುತ್ತಿವೆಯೆಂದೂ, ನಾಶವೆಂಬುದು ಇವುಗಳಿಂದಲೇ ಉದ್ಭವವಾಗುತ್ತದೆಂದೂ ಇವರ ಅಭಿಮತವಿದೆ. ಮುಂದಕ್ಕೆ ಈ ಕ್ರಿಮಿಗಳನ್ನು ಕೊಲ್ಲುವ 'ಕೆಮಿಕಲ್'ಗಳನ್ನುಪಯೋಗಿಸಿ ಮನೆಮಂದಿರಗಳ ಗೋಡೆಗಳು ಕಟ್ಟಲ್ಪಡುವುವು.

## ರಕ್ತವಿನಿಮಯ ಶಾಸ

ಶುದ್ಧ ರಕ್ತವಿರುವ ವರೆಗೆ ಮನುಷ್ಯನು ನಿರೋಗಿ. ಎಷ್ಟರ ತನಕ ಅವನ ರಕ್ತದಲ್ಲಿ ದೋಷವು ಕಂಡುಬರುವುದಿಲ್ಲವೋ ಅಷ್ಟರ ತನಕ ಅವನು ದೃಢಕಾಯನು. ರಕ್ತವು ಹಾಳಾದರೆ ಅವನು ರೋಗಿ— ದುರ್ಬಲನು. ಅದೇ ರಕ್ತವು ಸಂಪೂರ್ಣ ವಿಷಭರಿತವಾದರೆ ಮನುಷ್ಯನ ಮರಣ. ಮನುಷ್ಯನ ಜನನ ಮರಣಗಳಿಗೆ ಅವನ ರಕ್ತವೇ ಕಾರಣ. ರಕ್ತದೊಡನೆ ಕೂಡಿಕೊಂಡಿರುವ ಜೀವಾಣುಗಳು ಬದುಕಿರುವ ತನಕ ಅವನು ಬದುಕುವನು. ಅವುಗಳು ಸತ್ತರೆ ಅವನೂ ಅಂತ್ಯವಾಗುವನು. ರಕ್ತದ ಪರಿಶೋಧಕರು ಈಗ ಕಂಡು ಹಿಡಿದಿರುವಂತೆ ಒಬ್ಬನ ರಕ್ತವನ್ನು ಇನ್ನೊಬ್ಬನ ಅಂಗಾಂಗಗಳಿಗೆ ವಿನಿಮಯ ಮಾಡಿದರೆ ಮೃತ್ಯುವು ಕೂಡಾ ದೂರವಾದ ಉದಾಹರಣೆಗಳಿವೆ. ಫ್ರಾನ್ಸಿನ ಪ್ರೆಸಿಡೆಂಟರಾದ ಡೂಮರರನ್ನು ರಷ್ಯನ್ ಕ್ರಾಂತಿಕಾರನಾದ ಗೊಗೊಲ್ಫನೆಂಬವನು ಗುಂಡಿಕ್ಕಿ ಕಳೆದ ವರ್ಷ ಕೊಂದನಷ್ಟೆ! ಸಾಯುವ ಮೊದಲು ಡೂಮರರ ಅಂಗಾಂಗಗಳಿಗೆ ಮಿಸ್ ಕ್ರಿಡೆಲ್ ಮತ್ತು ಅಲ್ಫೋಂನ್ಸ ರೊಬಟಲ್ ಎಂಬವರ ರಕ್ತವನ್ನು ಯಂತ್ರಮೂಲಕ ತೆಗೆದು ಹರಿಯಬಿಟ್ಟರು. ರಕ್ತ ಕಳೆದುಕೊಂಡು ಮರಣಶಯ್ಯೆಯಲ್ಲಿದ್ದ ಡೂಮರರು ಸ್ವಲ್ಪ ಸಮಯದಲ್ಲೇ ಚೇತರಿಸಿಕೊಂಡು ಎಲ್ಲರೂ ಅದ್ಭುತಗೊಳ್ಳುವಂತೆ "ನಾನೀಗ ಸುಖಗೊಂಡಂತಿದೆ. ನಾನು ಬದುಕುವಂತಿದೆ" ಎಂದರು. ಆದರೆ ಈ ಯತ್ನವು ಸಂಪೂರ್ಣ ಫಲಕಾರಿಯಾಗದಿದ್ದುದರಿಂದ ಡೂಮರರು ಕೆಲ ತಾಸುಗಳಲ್ಲಿ ತೀರಿಕೊಂಡರು. ರಕ್ತವಿನಿಮಯ ಶಾಸ್ತ್ರವು ಪೋಪ್ ಇನ್ನಸೆಂಟ್ VIII ಇವನ ಪ್ರಾಚೀನ ಕಾಲದಲ್ಲೇ ಇತ್ತೆಂದು ಕಂಡುಹಿಡಿದಿದ್ದಾರೆ. ಮುಂದಕ್ಕೆ ಮನುಷ್ಯನ ರೋಗ ನಿವಾರಣೆಯಲ್ಲಿ ಈ ರಕ್ತ ವಿನಿಮಯ ಶೋಧೆಯಿಂದಾಗಿ ಮರಣಗಳ ಸಂಖ್ಯೆಯು ಕಡಿಮೆಯಾಗಲಿದೆಯೆಂದು ಡಾ। ಗೇಸ್ಟನ್ ಕಟ್ಟೀರ ಎಂಬವರ ಮತ.

## ಸೀಸರನ ಉಪಾಯ.

ಗ್ಲಾಸಿನ ವಸ್ತುಗಳು ಒಡೆಯುತ್ತಿರುವುದನ್ನು ಕಾಣದವರಿಲ್ಲ. ಆದರೂ ಅವುಗಳನ್ನು ಒಡೆಯದಂತೆ ಮಾಡುವ ಸಾಹಸಿಗರು ಇಲ್ಲ. ರೋಮನ್ ಗ್ರಂಥಕಾರನಾದ ಪ್ಲಿನಿಯೆಂಬ ಮಹಾಜ್ಞಾನಿಯು ಸೀಸರನ ಕಾಲದಲ್ಲಿ ಒಬ್ಬನು ಒಡೆಯಲಸಾಧ್ಯವಾದ ಗ್ಲಾಸನ್ನು ತಯಾರಿಸಿದನೆಂದು ಬರೆದಿರುವನು. ಕುಶಲಮತಿಯಾದ ಆ ಕೆಲಸಗಾರನು ತನ್ನ ಸಾಹಸದಿಂದಾಗಿ ಒಡೆಯಲಾಗದ ಗ್ಲಾಸನ್ನು ಸಿದ್ಧಮಾಡಿ ಸಾರ್ವಭೌಮನಾದ ಸೀಸರನಿಗೆ ಅದನ್ನು ತೋರಿಸಿದನು. ತನ್ನ ಶೋಧೆಗಾಗಿ ಅರಸನು ಏನಾದರೂ ಮಹಾ ಬಹುಮಾನವನ್ನು ಮಾಡದಿರನೆಂದು ಆ ಶೋಧಕನು ಭಾವಿಸಿದನು. ಅದನ್ನು ಕೈಯಲ್ಲಿ ಹಿಡಿದು ನೋಡುತ್ತಿದ್ದ ಸೀಸರನು ಆಶ್ಚರ್ಯಗೊಂಡನು. ಗ್ಲಾಸನ್ನು ತೆಗೆದು ನೆಲಕ್ಕೆ ಬಡೆದನು. ಆದರೆ ಅದು ಒಡೆಯಲಿಲ್ಲ. ಶೋಧಕನು ಅದನ್ನು ಹೆಕ್ಕಿ ಪುನಃ ಅರಸನಿಗೆ ಕೊಟ್ಟನು. ಸೀಸರನು ಏನೋ ಯೋಚಿಸಿದವನಂತೆ ಮಾಡಿ "ಈ ತರದ ಗ್ಲಾಸನ್ನು ಬೇರಾರಾದರೂ ಮಾಡಲು ಸಾಧ್ಯವಿದೆಯೇ?" ಎಂದು ಕೇಳಿದನು. ತನ್ನ ಪ್ರಶ್ನೆಯಿಂದ ಎದೆಯುಬ್ಬಿದ ಶೋಧಕನು ಸಂತೋಷದಿಂದಲೂ ದರ್ಪದಿಂದಲೂ "ಇಲ್ಲ" ವೆಂದನು; ಒಡನೆ ಸೀಸರನು "ಹಾಗಾದರೆ ನಿನಗೆ ನಾನು ಶಿರಚ್ಛೇದನ ಶಿಕ್ಷೆಯನ್ನಿತ್ತಿದ್ದೇನೆ. ಕಾರಣ, ಗ್ಲಾಸು ಭಂಗಾರಕ್ಕಿಂತ ಭಾಳ ಬೆಲೆ ಹೊಂದುವುದಾದರೆ ಮುಂದಕ್ಕೆ ಭಂಗಾರವು ಅದರ ಗೌರವವನ್ನು ಕಳಕೊಳ್ಳುವುದು. ಭಂಗಾರವು ಅಗ್ಗವಾಗಬಾರದು" ಎಂದನು.

## ಸುಡಲಾಗದ ಮರ.

ಮನೆಮಂದಿರಗಳಿಗೆ ಉಪಯೋಗಿಸಲ್ಪಡುವ ಮರದ ತೋಳು, ಹಾಗೂ ಹಲಿಗೆಗಳು ಬೆಂಕಿಯಿಂದ ಸುಟ್ಟುಹೋಗದಂತೆಯೂ, ಎಂತಹ ಹವೆಯಲ್ಲೂ ಅದು ಕೆಟ್ಟುಹೋಗದಂತೆಯೂ ಒಂದು ಶೋಧನೆಯು ಯತ್ನವಾಗುತ್ತಲಿದೆ. ವಾರ್ನಿಶನ್ನು ಕೊಡಿಸುವಂತೆ ಒಂದು ಬಗೆಯ ದ್ರಾವಕವನ್ನು ಮರಕ್ಕೆ ತಗಲಿಸಿದರೆ ಸರಿ, ಅದು 'ಫಯರ್ ಪ್ರೂಫ್' ಆಗುತ್ತದೆ. ಇಂಟ್ರಿಜನ್ ಎಂಬ ಹುಡಿಯನ್ನು ಇನ್ನಿತರ ಮದ್ದಿನ ಹುಡಿಗಳನ್ನೂ ಬೆರಸಿದರೆ ಈ ದ್ರಾವಕವಾಗುತ್ತದೆ. ಈ ದ್ರಾವಕವನ್ನು ನಾಟಕ ಪರದೆಗಳಿಗೂ, ಬೆಂಕಿಯ ಅಪಾಯ ತೋರಿಬರುವ ಕಡೆಗಳಿಗೂ ಉಪಯುಕ್ತವಾಗಿದೆ. ಲೊಕ್ರೂನ್ ಎಂಬ ಇನ್ನೊಂದು ಅಗ್ನಿಭಕ್ಷಕ ವಸ್ತುವನ್ನೂ ಕಂಡುಹಿಡಿದಿರುವರು. ಇದನ್ನು ಹತ್ತಿ ಸಿಲ್ಕ್ ವಸ್ತ್ರಗಳ ಮೇಲೆ ತೆಳುವಾಗಿ ಚಿಮುಕಿಸಿಬಿಟ್ಟರಾಯಿತು — ಬೆಂಕಿಯ ಭಯವೇ ಇಲ್ಲ. ದೊಡ್ಡ ಗಿರಣಿಗಳಲ್ಲೂ ವ್ಯಾಪಾರ ಸಂಸ್ಥೆಗಳಿಗೂ ಈ ದ್ರಾವಕವು ಬಹಳ ಪ್ರಯೋಜನಕಾರಿಯಾದೀತೆಂದು ಏ. ಜೆ ಫಾರ್ಬೆನ್ ಎ. ಜಿ ಈ ಶೋಧನಾಲಯದವರು ಕಂಡುಹಿಡಿದಿರುತ್ತಾರೆ. ಇದರ ಸಿದ್ಧತೆಗೆ ಹೆಚ್ಚಿನ ವೆಚ್ಚವೂ ಇರುವುದಿಲ್ಲ. ಬೆಂಕಿಯ ಅನಾಹುತವು ವಿಪರೀತವಿರುವ ಈ ಯಂತ್ರಯುಗದಲ್ಲಿ ಇಂತಹ ಶೋಧೆಯು ಅಗತ್ಯವಿದೆ.

## ಮೀನಿನ ಆಯುಷ್ಯವೆಷ್ಟು?

ರಸಾಯನ ಶಾಸ್ತ್ರಜ್ಞರು ಅನೇಕಾನೇಕ ವಿಷಯಗಳನ್ನು ಕಂಡುಹಿಡಿದಿರುವರು. ಆದರೂ ಅವರಿಗೆ ಎಲ್ಲವೂ ತಿಳಿದಿಲ್ಲ. ಪ್ರಕೃತಿಯ ರಹಸ್ಯವನ್ನು ಕಂಡುಹಿಡಿಯಬೇಕೆಂದು ಅವರ ಸಾಧನೆಯಿರುತ್ತದೆ. ಆದರೆ "Nature will never reveal itself" ಎಂಬುದು ಖರೆಯಾಗುತ್ತಿದೆ. ಮನುಷ್ಯನು ಒಂದು ರೋಗಕ್ಕೆ ತಕ್ಕ ಔಷಧಿಯನ್ನು ಕಂಡುಹಿಡಿದರೆ ಮರುದಿನವೇ ಹೊಸ ರೋಗವು ಜನಿಸುತ್ತದೆ. ಮೀನುಗಳ ಪರಿಶೋಧನೆಯನ್ನು ಮಾಡಿ ಅವುಗಳಲ್ಲಿರುವ ಸುಣ್ಣ, ಫೊಸ್ಫರಸ್ ವಿದ್ಯುತ್ ಶಕ್ತಿ ಮೊದಲಾದುವುಗಳನ್ನು ಕಂಡುಹಿಡಿದಿದ್ದಾರೆ. ಆದರೆ ಅವುಗಳ ಆಯುಷ್ಯವೆಷ್ಟು ಎಂದು ಕಂಡುಹಿಡಿದವರಿಲ್ಲ. ಮೀನುಗಳು ಮುದಿತನದಿಂದ ಸಾಯುವುವೇ ಎಂದು ಈಗ ಒಂದು ಪ್ರಶ್ನೆ. ಇನ್ನಿತರ ಪ್ರಾಣಿಗಳಾದರೆ ತಮ್ಮ ಜೀವಮಾನದಲ್ಲಿ ಹುಟ್ಟಿ ಬೆಳೆದು, ಕ್ರಮೇಣ ಪ್ರಾಯದಿಂದ ಮುದಿಯಾಗಿ ಸಾಯುತ್ತವೆ. ಆದರೆ, ಜಲಚರವರ್ಗಕ್ಕೆ ಸೇರಿದ ಮೀನು ಮಾತ್ರ ಹುಟ್ಟಿ ಬೆಳೆಯುತ್ತದೆ. ತನ್ನಷ್ಟಕ್ಕೆ ತಾನು ಸಾಯುತ್ತದೊ ಗೊತ್ತಾಗದು. ಮೀನುಗಳನ್ನು ಗಾಳ ಬಲೆಗಳಿಂದ ಹಿಡಿಯದಿದ್ದರೆ ಮತ್ತು ಅವುಗಳನ್ನು ದೊಡ್ಡ ದೊಡ್ಡ ಮೀನುಗಳು ನುಂಗದೆ ಇದ್ದರೆ ಅವುಗಳು ಎಷ್ಟು ಕಾಲವೂ ಬದುಕುವುವಂತೆ. ಕಾರ್ಪ್ (carp) ಎಂಬ ಜಾತಿಯ ಮೀನುಗಳು ನೂರು ವರ್ಷ ಕಾಲವೂ ಬಾಡದೆ ಬದುಕಿರುವ ಪ್ರಸಂಗವೂ ಇದೆ ಎಂದಾಗ ಈ ಕುರಿತು ವಿಜ್ಞಾನವೇತ್ತರು ಶೋಧ ನಡಸಲೇ ಬೇಕಾಗಿದೆಯಲ್ಲವೇ?

## ಗಾಜಿನ ಮಾರ್ಗ.

ಇಷ್ಟು ಕಾಲದ ವರೆಗೆ ಮಾರ್ಗಗಳಿಗೆ ಕಲ್ಲು, ಮಣ್ಣು, ಜಲ್ಲಿ, ಡಾಮರು ಮೊದಲಾದುವುಗಳನ್ನುಪಯೋಗಿಸುತ್ತಿದ್ದರು. ಇತ್ತೀಚೆಗೆ ಬ್ರಿಟಿಷ್ ಮಿನಿಸ್ಟ್ರಿ ಒಫ್ ಟ್ರಾನ್ಸ್‌ಪೋರ್ಟ್ ಸಂಸ್ಥೆಯವರು ಮಾರ್ಗಗಳಿಗೆ ಗಾಜಿಯ ಚೂರುಗಳನ್ನುಪಯೋಗಿಸುವ ಯೋಜನೆಯೊಂದನ್ನು ಪರಾಮರ್ಶಿಸುತ್ತಿರುವರು. ಒಬ್ಬ ಯುವಕ ಶೋಧನಕಾರನು ಒಂದು ಶೋಧೆ ನಡೆಸಿ ಒಡೆದ ಗಾಜು ಚೂರುಗಳನ್ನು ಇಟ್ಟಿಗೆಗಳಂತೆ ರಚಿಸಿ ಮಾರ್ಗಗಳಿಗುಪಯೋಗಿಸಿದರೆ ಅಂತಹ ಮಾರ್ಗಗಳಿಗೆ ಅಳಿಯೇ ಇರುವುದಿಲ್ಲ ಎಂದು ಪ್ರಕಟಿಸಿರುವನು. ಇಂತಹ ಮಾರ್ಗಗಳು ಜಾರದಂತೆ ಗಾಜಿನ ಚೂರುಗಳ ಮೇಲೆ ಗೆರೆ ಎಳೆಯುವರಂತೆ. ಎಷ್ಟು ಭಾರವಾದ ಅಥವಾ ಎಷ್ಟು ಒರಟಾದ ವಾಹನಗಳೂ ಈ ಮಾರ್ಗಗಳಲ್ಲಿ ನಡೆಯಬಹುದೆಂದೂ ಕಂಡು ಹಿಡಿದಿದ್ದಾರೆ. ಈ ರಸ್ತೆಗಳ ರಚನೆಯು ಸಾರ್ವತ್ರಿಕವಾಗಿ ಹರಡಿದರೆ ಮುಂದಕ್ಕೆ ಒಡೆದ ಯಾವ ಗಾಜಿನ ಚೂರಾಗಲೀ ಅನಾವಶ್ಯಕವಾಗಿ ಹೋಗಲಾರದು. ಈಗ ಬೆಲೆಯಿಲ್ಲದ ಗಾಜು ಚೂರುಗಳಿಗೆ ಹೆಚ್ಚಿನ ಬೆಲೆಯೂ ದೊರೆಯಬಹುದು. ಗಾಜಿನ ಮಾರ್ಗಗಳಾದರೆ ಮೋಟರು ಟಯರುಗಳು ಹೆಚ್ಚು ಕಾಲ ಬಾಳಬಹುದು. ಜನರ ವಿವಾದಕರ್ಮವು ಮೆಲ್ಲಗೆ ಸವೆಯಬಹುದು. ಪಾದರಕ್ಷೆಗಳ ಉಪಯೋಗವೂ ಕಡಿಮೆಯಾಗಬಹುದು. ಮಾತ್ರ ಗಾಜಿನ ಸಪೂರ ಹುಡಿಗಳು ಎದ್ದರೆ ಏನಾಗಬಹುದೋ?

## ಹೊಲಿವುಡ್‌ನಲ್ಲಿ ಮುಷ್ಕರ.

ಜಗದ್ವ್ಯಾಪ್ತವಾದ ಸಾಂಪತ್ತಿಕ ಸಂಕಷ್ಟದಿಂದಾಗಿ ಸುಖೋಪಭೋಗಗಳಿಗೂ ಕಷ್ಟವು ಬಂದಿದೆ. ಜರ್ಮನಿಯಲ್ಲಿ ದಿನಕ್ಕೆರಡರಂತಾಗುತ್ತಿದ್ದ 'ಬೋಲ್'ಗಳು ಈಗ ತಿಂಗಳಿಗೊಂದು ಆಗುವುದು ಕಷ್ಟವಾಗಿ ನಿಂತಿದೆ. ಕೆಲವರು ಅನಿವಾರ್ಯ ಸಂದರ್ಭಗಳಲ್ಲಿ ಔತಣ ಸಮಾರಂಭಗಳನ್ನು ಮಾಡುವಾಗ ಮುಂಚಿನಂತೆ ದ್ರವ್ಯವನ್ನು ಧೂಳು ಸಮಾನವೆಂದು ತಿಳಿಯದೆ, ಕೆಲವು ಕ್ರಮನಿಯಮಗಳನ್ನು ಇಟ್ಟಿರುವರು. ಈಗ ಈ ದ್ರವ್ಯಾಭಾವದ ಬಿಸಿ ಹೊಲಿವುಡ್ ಚಲಚಿತ್ರ ಕಂಪೆನಿಯಲ್ಲೂ ಕಂಡುಬಂದಿದೆ. ಹೊಲಿವುಡ್ ಎಂದರೆ ಅಮೇರಿಕಾದ ಸಿನೆಮ ವ್ಯಾಪಾರದ ಪ್ರಾಮುಖ್ಯ ಕೇಂದ್ರ. ಸಾವಿರಾರು ಸಿನೆಮ ನಕ್ಷತ್ರಗಳ ರಂಗಭೂಮಿ. ಅಲ್ಲಿಯ ಮೂರು ದೊಡ್ಡ ದೊಡ್ಡ ಸಿನೆಮ ಕಂಪೆನಿಗಳಲ್ಲಿ ಶೇಕಡಾ ೫೦ರಿಂದ ೬೫ರ ವರೆಗಿನ ಸಂಬಳ ಕಡಿತಕ್ಕೆ ಹೆಚ್ಚಿನವರು ಒಪ್ಪಿದರು. ಇದನ್ನು ಕೇಳಿ ಕೆಲವು ಕಂಪೆನಿಗಳ ೧೫೦೦೦ ಫಿಲ್ಮ್ ಕೆಲಸಗಾರರು ಅಂತಹ ಕಡಿತದ ಕೊಡಲಿಗೆ ತಲೆಯೊಡ್ಡಲಾರೆವೆಂದು ಖಂಡಿತ ನುಡಿದಿರುವರು. ಕಂಪೆನಿಯವರ ಈ ನಿರ್ಧಾರವು ಮುಂದುವರಿದು ಹೋಗಿ ಕಡೆಗೆ ಮುಂಚಿನಂತೆ ಸಂಬಳವು ದೊರೆಯದಿದ್ದರೆ ಮುಷ್ಕರ ಹೂಡುವೆವೆಂದು ಟ್ರೇಡ್ ಯೂನಿಯನ್‌ನವರು ಹೇಳುತ್ತಿರುವರು. ಈ ವಿಷಯವಾಗಿ ವಾದವಿವಾದಗಳಾಗುತ್ತಿವೆ. ಕೆಲವು ಸಿನೆಮ ನಟರು ಒಂದು ವರ್ಷದ ಮುಷ್ಕರಕ್ಕೂ ಹಿಂಜರಿಯುವುದಿಲ್ಲವೆನ್ನುತ್ತಾರೆ. ಇಷ್ಟು ಕಾಲದಿಂದಲೂ ಸಂಚಯಿಸಿರುವ ಇವರ ಅಪಾರ ದ್ರವ್ಯವೇ ಇವರ ಇಂತಹ ಧೈರ್ಯಕ್ಕೆ ಕಾರಣವಾಗಿ ನಿಂತಿದೆ.

## ಇನ್ನೊಂದು ಭೂಕಂಪ!

ಲೊಸ್ ಏಂಜಲ್ಸ್‌ನಲ್ಲಿ ಇನ್ನೊಂದು ಭೂಕಂಪವು ಮೊನ್ನೆ ನಡೆಯಿತು. ಭೂಮಿಯು ೫ ಸಲ ನಡುಗಿತು. ಪ್ರತಿ ನಾಲ್ಕು ಮಿನಿಟುಗಳಿಗೊಮ್ಮೆ ಕಂಪನದ ಚಿಹ್ನೆಯು ಸರ್ವತ್ರ ಹರಡಿತು. ಪಟ್ಟಣದ ಎಲ್ಲಾ ಹಿತ್ತಲು ಮನೆಗಳು ಅಲುಗಾಡಿದುವು. ಸಾವಿರಗಟ್ಟಳೆ ಜನರು ಮನೆಮಠಗಳಿಂದ ಹೊರಗೆ ಭಯಭೀತಿಗೊಂಡು ಓಡಿ ಮಾರ್ಗಗಳಲ್ಲಿ ಗುಂಪು ಕೂಡಿ ದೊಡ್ಡ ದೊಡ್ಡ ಕಟ್ಟಡಗಳು ಬೀಳುತ್ತಿರುವುದನ್ನು ಕಂಡು ದಿಗಿಲಾದರು. ಅರ್ಧ ಘಂಟೆಯಲ್ಲೇ ೧೫೬ ಜನರು ಆಸ್ಪತ್ರೆಗೊಯ್ಯಲ್ಪಟ್ಟರು. ಲೋಂಗ್ ಬೀಚ್ ಎಂಬಲ್ಲಿ ೫೦೦ ಜನರು ಮೃತರಾದರು. ೬೩ ಕಟ್ಟಡಗಳು ಕುಸಿದು ಬಿದ್ದುವು. ಒಟ್ಟು ೨೫೦೦ ಜಖಂಗೊಂಡರೆಂದು ಮತ್ತೆ ಬಂದ ವಾರ್ತೆ. ಸಾನ್ ಡೈಗೊ ಎಂಬಲ್ಲಿಯೂ ಅನೇಕ ಕಟ್ಟಡಗಳು ಬಿದ್ದಿವೆ. ಸಾನ್‌ಪೆಡ್ರೊ ಎಂಬಲ್ಲಿ ಒಂದು ದೊಡ್ಡ ಲೈಬ್ರರಿಯ ಕಟ್ಟೋಣವೊಂದು ಕೆಡವಿ ಬಿದ್ದಿತು. ಅಮೂಲ್ಯ ಪುಸ್ತಕಗಳು ಕಾಣೆಯಾದವು. ಲೋಂಗ್ ಬೀಚ್ ಜಿಲ್ಲೆಯು ಬೆಂಕಿಯಿಂದಾವೃತವಾಗಿ ಅರ್ಧಕ್ಕರ್ಧ ಧ್ವಂಸವಾಯಿತು. ಪ್ರೆಸಿಡೆಂಟ್ ರೂಸ್‌ವೆಲ್ಟರು ನಿರಾಶ್ರಿತರಿಗೆ ಸಹಾಯಗಳನ್ನು ಕಳುಹಿಸುವರು.

## ಚಿಕಾಗೋವಿನಲ್ಲಿ ಇನ್ನೊಂದು ಸೂರ್ಯಶಕ್ತಿ

ಯುನೈಟೆಡ್ ಸ್ಟೇಟ್ಸ್ ಅಫ್ ಅಮೇರಿಕದ ಪಶ್ಚಿಮ ಭಾಗದ ಚಿಕಾಗೋ ನಗರದ ಮಧ್ಯೆ ೬೦೩ ಅಡಿ ಎತ್ತರದ ಒಂದು ಸ್ತಂಭವಿದೆ. ಇದನ್ನು ೪೯ ಮಾಳಿಗೆಗಳಿರುವ ಭವ್ಯವಾದ ಕಟ್ಟಡದ ಮೇಲೆ ಕಟ್ಟಿರುವರು. ಈ ಸ್ತಂಭದ ಮೇಲೆ ೨,೦೦೦ ೦೦೦,೦೦೦ ಕೇಂಡ್ಲ್ ಶಕ್ತಿಯಿರುವ ಒಂದು ದೀಪವಿದೆ. ಈ ದೀಪವು ಒಂದು ಮಿನಿಟಿಗೆ ಒಂದು ಸುತ್ತು ತಿರುಗುತ್ತದೆ. ಇದರ ಪ್ರಕಾಶವು ೧೦೦ರಿಂದ ೨೫೦ ಮೈಲುಗಳ ವಿಸ್ತೀರ್ಣಕ್ಕೆ ಬಿದ್ದು ಆಷ್ಟು ಪ್ರದೇಶದಲ್ಲಿನ ವಿಮಾನ ಸಂಚಾರಿಗಳಿಗೆ ಅತಿ ಸಹಕಾರಿಯಾಗಿದೆ. ರಾತ್ರಿ ವೇಳೆಯಲ್ಲಿ ವಿಮಾನಗಳಿಗೆ ಚಿಕಾಗೊ ನಗರವನ್ನು ಸೇರಲು ಏನೂ ಬಾಧಕವಿರುವುದಿಲ್ಲ. ಅಮೇರಿಕದ ಪ್ರಥಮ ವೈಮಾನಿಕನ ಗೌರವಾರ್ಥವಾಗಿ ಇದು ಕಟ್ಟಲ್ಪಟ್ಟುದ್ದು, ಈ ದೀಪವು ಲಿಂಡ್‌ಬರ್ಗ್ ಲೈಟ್ ಎಂದು ಕರೆಯಲ್ಪಡುತ್ತದೆ. ಈ ಕಟ್ಟಡದ ಮೇಲೆ ಈ ಸ್ತಂಭವನ್ನು ಕಟ್ಟಲು ಮಹಾ ಪ್ರಯಾಸವಾಗಿತ್ತು. ೪೭ ಟನ್ನು ಉಕ್ಕನ್ನು ಸಣ್ಣ ತುಂಡುಗಳನ್ನಾಗಿ ಮಾಡಿ ಅವುಗಳನ್ನು ಕಟ್ಟಡದ ಮೇಲಕ್ಕೊಯ್ದರು. ಈ ಲಿಂಡ್‌ಬರ್ಗ್ ದೀಪವು ಇಷ್ಟರ ತನಕ ೧೭೦,೦೦೦ ಕಾರ್ಬನುಗಳನ್ನು ಸುಟ್ಟಿತು. ಈ ದೀಪದೊಡನೆ ಇನ್ನೊಂದು ದಿಕ್ಕಿಗೆ ಮುಖಮಾಡಿ ಮತ್ತೊಂದು ತೆಳ್ಳಗಿನ ಪ್ರಕಾಶವು ಹೊರಡುತ್ತದೆ. ಇದು ೧೯ ಮಿಲ್ಲಿಯ ಕೇಂಡ್ಲ್ ಶಕ್ತಿಯುಳ್ಳದ್ದು. ಇದು ಅಲ್ಲಿಯ ಮುನಿಸಿಪಲ್ ವಿಮಾನ ಮಂದಿರವನ್ನು ರಾತ್ರಿ ಹೊತ್ತು ತೋರಿಸುತ್ತದೆ. ಸೂರ್ಯನ ನಂತರ ಈ ಲಿಂಡ್‌ಬರ್ಗ್ ಲೈಟ್ ಪ್ರಕಾಶದಲ್ಲಿ ಎರಡನೆಯದು!

## ವಾತ ನಿವಾರಣೆಗೆ ತುಂಬಿಯ ಕಡಿತ

ಕ್ರೈಸ್ಟ್ ಚರ್ಚ್‌ನಲ್ಲಿ ಒಬ್ಬ ಸ್ತ್ರೀಗೆ ವಾತ ರೋಗವಿದ್ದಿತು. ಏನೇನು ಔಷಧಿಗಳನ್ನುಪಯೋಗಿಸಿದರೂ ರೋಗ ನಿವಾರಣೆಯಾಗಲಿಲ್ಲ. ಕೊನೆಗೆ ಯಾರ ಮಾತಿನ ಮೇರೆಗೋ ಅವಳು ಕರಿ ತುಂಬಿಗಳನ್ನು ಹಿಡಿದು ಅವುಗಳಿಂದ ತನ್ನ ವಾತಾಂಗಕ್ಕೆ ಕಡಿಸಿದಳು. ಮೊದಲಿನ ೩೦—೪೦ ಕಡಿತಗಳು ಬಹಳ ವೇದನೆಯನ್ನುಂಟು ಮಾಡಿದುವು. ಆ ಮೇಲೆ ಅವಳಿಗೆ ನೋವಾಗಲಿಲ್ಲ. ಕೆಲವು ದಿನಗಳಲ್ಲೇ ವಾತರೋಗವು ಹಿಮ್ಮೆಟ್ಟಿತು. ಇತ್ತೀಚೆಗೆ ವಿಯೆನ್ನಾದ ವೈದ್ಯರೊಬ್ಬರು ತುಂಬಿಗಳ ವಿಷದಿಂದ ಅನೇಕ ರೋಗಗಳನ್ನು ಗುಣಪಡಿಸಿದರು. ಇದನ್ನು ಕೇಳಿದ ಈ ಸ್ತ್ರೀಯು "೩೦ ವರ್ಷಗಳ ಮೊದಲ ನಾನೂ ತುಂಬಿಗಳ ಶಕ್ತಿಯನ್ನು ಪರೀಕ್ಷಿಸಿದವಳಿರುತ್ತೇನೆ. ತುಂಬಿಯ ವಿಷವು ಮಾನವನ ಅನೇಕ ರೋಗ ನಿರ್ಮೂಲನೆಗೆ ಸಹಕಾರಿಯಾಗುತ್ತಿದೆ" ಎಂದಳು. ರೋಗಿಯು ತುಂಬಿಗಳ ಕಡಿತದ ಉರಿಯನ್ನು ಸಹಿಸಿಕೊಳ್ಳುವಷ್ಟು ಶಕ್ತಿವಂತನಾದರೆ ರಕ್ತಸಂಬಂಧ ರೋಗಗಳು ಅವುಗಳ ವಿಷದಿಂದ ಪಾರಾಗುತ್ತವೆಯೆಂದು ಈಗ ಹೆಚ್ಚಿನ ವೈದ್ಯರ ಅಭಿಪ್ರಾಯವಿರುತ್ತದೆ. ವಿಯೆನ್ನಾದಲ್ಲಿ ತುಂಬಿಗಳನ್ನು ಸಾಕುವುದಕ್ಕಾಗಿ ದೊಡ್ಡ ದೊಡ್ಡ ಮಂದಿರಗಳನ್ನೂ ಕಟ್ಟಿರುವರು. ಜೇನು ತುಪ್ಪವೂ ಕೂಡಾ ಅನೇಕಾನೇಕ ಆರೋಗ್ಯಕ್ಕೆ ಉಪಯೋಗಕರವಿದೆ.

## White Paper.

ಲಂಡನಿನ 'ಮೋರ್ನಿಂಗ್ ಪೋಸ್ಟ್' ಪತ್ರಿಕೆಯ ರಾಜಕೀಯ ಪ್ರತಿನಿಧಿಯು ಕಂಡುಕೊಂಡಿರುವಂತೆ ಶನಿವಾರ ದಿನ ಪ್ರಕಟವಾಗಲಿರುವ ವೈಟ್ ಪೇಪರಿನಲ್ಲಿ ಈ ಸುಧಾರಣೆಗಳಿವೆಯೆಂದು ತಿಳಿದುಬರುತ್ತದೆ. ೧ ಪಾರ್ಲಿಮೆಂಟಿನ ಅನುಮತಿ ಇಲ್ಲದೆ ಬ್ರಿಟಿಷ್ ಇಂಡಿಯಾದಲ್ಲಿ ಮೊದಲು ಪ್ರಾಂತಿಕ ಸ್ವರಾಜ್ಯ ಯೋಜನೆಯನ್ನು ಮಾಡುವುದು. ೨ ಪಾರ್ಲಿಮೆಂಟಿನ ಅನುಮತಿ ಪಡೆದು ಫೆಡರಲ್ ರಿಜರ್ವ್ ಬೇಂಕ್ ಸ್ಥಾಪನೆಯಾದ ನಂತರ ಜವಾಬ್ದಾರಿ ಕೇಂದ್ರ ಸರಕಾರವನ್ನೊಳಗೊಂಡ ಸಂಯುಕ್ತ ಹಿಂದೂಸ್ಥಾನವನ್ನು ರಚಿಸುವುದು.

[illegible]

(ಗಾಣಿಸೆಯ ಶಂಭ — ಮಾಯು).

| ತಾರೀಖು | ವಾರ | ತಿ. | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ | |
|---|---|---|---|---|---|---|---|---|
| | | | | | | | ಉ. | ಅಸ್ತ |
| 18 | ಶನಿ | ೭ | ೩೩॥ | ಪುಬ್ಬಾ | ೩೯ | ೫ | 6.39 | 6 40 |
| 19 | ರವಿ | ೮ | ೧೭॥ | ಉತ್ತರಾ | ೩೫ | ೬ | 6 5? | 6.40 |
| 20 | ಸೋಮ | ೯ | ೦೪ | ಹಸ್ತಾ | ೩೩॥ | ೭ | 6 38 | 6 40 |
| 21 | ಕುಜ | ೧೦ | ೯॥ | ಚಿತ್ತಾ | ೩೦॥ | ೮ | 6 37 | 6.40 |
| 22 | ಬುಧ | ೧೧ | ೬॥ | ಸ್ವಾತೀ | ೨೧ | ೯ | 6 37 | 6 40 |
| 23 | ಗುರು | ೧೨ | ೫॥ | ವಿಶಾಖಾ | ೨೧ | ೧೦ | 6 36 | 6.41 |
| 24 | ಶುಕ್ರ | ೧೩ | ೮। | ಅನೂರಾಧಾ | ೨೨। | ೧೧ | 6 3? | 6.41 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ(ಶಾಖ) | | Rainfall ಮಳೆ | |
|---|---|---|---|---|
| | Maximum ಹೆಚ್ಚಿನದು | Minimum ಕಡಿಮೆ | ದಿನದ ಮಳೆ | ಜುಮಲಾ ಮಳೆ |
| 2 | 87— 9 | 74 — 6 | — | — |
| 3 | 88— 7 | 76 – 5 | — | — |
| 4 | 88 – 8 | 76 0 | — | — |
| 5 | 88 – 7 | 73— 8 | — | — |
| 6 | 87— 7 | 75— 8 | — | — |
| 7 | 88— 2 | 75 3 | — | — |
| 8 | 88 – 7 | 75 6 | — | 119–95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ | ವರೆಗೆ |
|---|---|---|
| | ರೂ. ಆ. | ರೂ. ಆ |
| ಹೊಸ ಮುಸ್ಕತಿ | 4— 0 | 4—10 |
| ಹೊಸ ರಾಶಿ ಅಕ್ಕಿ | 3— 6 | 3—11 |
| ಮುಸ್ಕತಿ | 4— 0 | 4—10 |
| ಗುಡ್ಡು | 3 12 | 4— 2 |
| ಸುಗಿ | 3 6 | 3 12 |
| ಊರ ಅಪ್ಪಲ್ ಬೆಳ್ತಿಗೆ | 4—10 | 5— 4 |
| ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ | 6— 8 | 7— ) |
| ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ | 4— 8 | 4—10 |
| ಗೋಧಿ ಗೋಣಿ ೧ಕ್ಕೆ | 10— 8 | 12— 8 |
| ತೊಗರಿ ಗೋಣಿ ೧ಕ್ಕೆ | 9— 8 | 12— 0 |
| ಹುರುಳಿ ಗೋಣಿ ೧ಕ್ಕೆ | 6— | 6— 4 |
| ಕಡಲೆ ಗೋಣಿ ೧ಕ್ಕೆ | 8— 8 | 10— |
| ತೊಗರಿಬೇಳೆ ಗೋಣಿ ೧ಕ್ಕೆ | 10— 8 | 20— 0 |
| ಉದ್ದು ಗೋಣಿ ೧ಕ್ಕೆ | 9— 8 | 9— 8 |
| ಹೆಸರು ಗೋಣಿ ೧ಕ್ಕೆ | 8— 0 | 9— 0 |
| ಊರುಬೆಲ್ಲ ಖಂಡಿ ೧ಕ್ಕೆ | 31— 4 | 32— 8 |
| ಉಪ್ಪು ಗೋಣಿ ೧ಕ್ಕೆ | 4—12 | 6— 0 |
| ಕೊಬ್ರಿ ಖಂಡಿ ೧ಕ್ಕೆ | 65— | 72— |
| ಕೊಪ್ರ ಹಿಂಡಿ ಖಂಡಿ ೧ಕ್ಕೆ | 21 — | 22— |
| ಎಳ್ಳಿಂಡಿ ಖಂಡಿ ೧ಕ್ಕೆ | 25— 4 | 26— 8 |
| ಕೊಪ್ರ ಎಣ್ಣೆ ಮುಡಿ ೧ಕ್ಕೆ | 4— 4 | 6— 4 |
| ಎಳ್ಳೆಣ್ಣೆ ಮುಡಿ ೧ಕ್ಕೆ | 6—12 | 7— 0 |
| ಹರಳೆಣ್ಣೆ ಪೆಟ್ಟಿಗೆ ೧ಕ್ಕೆ | 4— 7 | 8—12 |
| [illegible] ಮುಡಿ ೧ಕ್ಕೆ | 3—15 | 4— 0 |
| ಹೊಸ ಮೆಣಸು | 6— 6 | 6—12 |
| ಸಾಸಿವೆ ಮುಡಿ ೧ಕ್ಕೆ | 4—12 | 6— 0 |
| [illegible] ಖಂಡಿ ೧ಕ್ಕೆ | 275— 0 | 300— |
| [illegible] ಖಂಡಿ ೧ಕ್ಕೆ | 170— 0 | 180— |
| [illegible] ಮುಡಿ ೧ಕ್ಕೆ | 27— 0 | 28— |
| [illegible] ಮುಡಿ ೧ಕ್ಕೆ | 2— 4 | 2 — 6 |
| [illegible] ಖಂಡಿ ೧ಕ್ಕೆ | 25— 0 | 25— 8 |
| [illegible] ಮುಡಿ ೧ಕ್ಕೆ | 9— 10 | 10— 0 |
| [illegible] ಮುಡಿ ೧ಕ್ಕೆ | 15— 0 | 16—0 |
| [illegible] ೧ಕ್ಕೆ | 13— 4 | 13— 8 |
| [illegible] ಮುಡಿ ೧ಕ್ಕೆ | 19— 0 | 19— 4 |
| ಜವಸು ೧ಕ್ಕೆ | 19— | 19— 4 |
| [illegible] ಖಂಡಿ ೧ಕ್ಕೆ | 42— 8 | 45— |
| [illegible] ಖಂಡಿ ೧ಕ್ಕೆ | 290— | 300— |
| [illegible] | 180— | 205— |
| ಹೊಸ [illegible] | 140— | 145— |


**THE CANARA PUBLIC CONVEYANCE CO., LTD, MANGALORE.**

(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

## ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವದು

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary,**
*The Canara Public Conveyance Company Ltd Mangalore*

**Chikmagalur Public Conveyance Motor Service.**

**CHIKMAGALUR.**

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ,

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡೆಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ

# ಪತ್ರವ್ಯವಹಾರ.

(ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು. ಸಂ. ಸ್ವ.)

## ದೇವಸ್ಥಾನ—ಮಠಾಧಿಕಾರಿಗಳಿಗೆ ವಿಸಂತಿ.

ಹಿಂದೂ ಧರ್ಮದಲ್ಲಿ ಪುರಾಣ ಮತವಾದಿಗಳಿದ್ದಾರೆ, ಸುಧಾರಣಾ ಪಕ್ಷಪಾತಿಗಳಿದ್ದಾರೆ. ಸಕಲರಿಗೂ ಸ್ವಧರ್ಮಾಭಿಮಾನವುಂಟು; ಸಹಾನುಭೂತಿಯುಂಟು. ಎಲ್ಲರೂ ಹೆಚ್ಚು ಕಡಿಮೆ ಹಿಂದೂ ಮತದ ಭಕ್ತರು ಮತ್ತು ವಿದ್ಯಾರ್ಥಿಗಳು. ಹೀಗಿರುವಾಗ ಸಕಲ ಹಿಂದೂ ಮತೀಯರಲ್ಲಿ, ಅದರಲ್ಲಿಯೂ ಮಠಾಧಿಪತಿಗಳಲ್ಲಿ ಮತ್ತು ದೇವಾಲಯಗಳ ಮೊಕ್ತೇಸರರಲ್ಲಿ ನನ್ನ ವಿಜ್ಞಾಪನೆಯೇನೆಂದರೆ, ಅವರು ನಮಗೆ ಬೇಕಾದ ಪುರೋಹಿತ ವರ್ಗವನ್ನು ತರಬೇತಿ ಮಾಡುವ ಬಗ್ಗೆ ವಿದ್ಯಾಲಯಗಳನ್ನು ನಿರ್ಮಿಸಬೇಕು.

ಇಂದಿನ ಪುರೋಹಿತ ವರ್ಗದವರಲ್ಲಿ ನಮಗೆ ತೃಪ್ತಿಯಿಲ್ಲ. ಪುರೋಹಿತ ವರ್ಗದಲ್ಲಿ ಅಧಿಕ ಸಂಖ್ಯಾಕರು ಕಣ್ಣು ಮುಚ್ಚಿ, ಅರ್ಥವನ್ನರಿಯದೆ ಗ್ರಾಮಫೋನುಗಳಂತೆ ಮಂತ್ರಗಳನ್ನು ಹೇಳುತ್ತಾರೆ, ಕ್ರಿಯೆಗಳನ್ನು ಮಾಡಿಸುತ್ತಾರೆ. ಇಂತಹ ಪುರೋಹಿತರು ಪ್ರಯೋಗಿಸುವ ಮಂತ್ರ ಭಾಗದ ಅರ್ಥವು ಅವರಿಗೆ ತಿಳಿದಿರಬೇಕು. ಸಂದೇಹಗ್ರಸ್ತರ ಸಂದೇಹಗಳನ್ನು ನಿವಾರಿಸುವ ಸಾಮರ್ಥ್ಯವು ಅವರಿಗಿರಬೇಕು. ಈ ವಿಷಯದಲ್ಲಿ ಕೆಲಸ ಮಾಡುವುದು ತಮ್ಮ ಆದ್ಯಕರ್ತವ್ಯವೆಂದು ತಿಳಿದು ಮಠಾಧಿಪತಿಗಳೂ ಇತರ ಧರ್ಮಾಧಿಕಾರಿಗಳೂ ಪುರೋಹಿತ ಪಾಠಶಾಲೆಗಳನ್ನು ಮುಖ್ಯ ಮುಖ್ಯ ಸ್ಥಳಗಳಲ್ಲಿ ಸ್ಥಾಪಿಸುವುದು ಆವಶ್ಯಕವಾಗಿದೆ. ಧಾರ್ಮಿಕ ಗ್ರಂಥಗಳನ್ನು ಮುದ್ರಿಸಿ ಸುಲಭ ಕ್ರಯಕ್ಕೆ ಮಾರಾಟ ಮಾಡಿಸುವುದು ಅವರ ಕರ್ತವ್ಯವಾಗಿದೆ.

ಕೆಲವು ಧಾರ್ಮಿಕ ಸಂಸ್ಥೆಗಳವರು ಕೆಲವು ಧಾರ್ಮಿಕ ಗ್ರಂಥಗಳನ್ನು ಮುದ್ರಿಸಿ ಪ್ರಚುರಪಡಿಸಿರುವರೆಂಬುದನ್ನು ನಾನು ಬಲ್ಲೆ. ಆದರೆ ಅವುಗಳ ಬೆಲೆ ಮಿತಿಮೀರಿದೆ. ಕಾಶಿಯ ಶ್ರೀ ಮಧ್ವಮುನಿ ಸೇವಾಸಂಘ—ಶ್ರೀ ವೆಂಕಟರಮಣ ದೇವಸ್ಥಾನ, ಮತ್ತು ಇತರ ಹಿಂದೂ ಧರ್ಮ ಸಂಸ್ಥೆಯವರು ಈ ವಿಷಯದಲ್ಲಿ ಕ್ರೈಸ್ತಮತ ಪ್ರಸಾರಕರ ಉದಾಹರಣೆಯನ್ನನುಸರಿಸಿ, ಅತಿ ಅಗ್ಗವಾದ ಬೆಲೆಗೆ ಧಾರ್ಮಿಕ ಗ್ರಂಥಗಳನ್ನು ಮಾರುವ ಏರ್ಪಾಡು ಮಾಡಬೇಕು. ಮಠ ಮತ್ತು ಇತರ ಸಂಸ್ಥೆಗಳು ಎಂತಹ ಕಷ್ಟ ಬಂದರೂ, ಧಾರ್ಮಿಕ ಗ್ರಂಥ ಪ್ರಕಟನೆಗೂ ಪುರೋಹಿತ ಶಿಕ್ಷಕರ ಶಾಲೆಗಳಿಗೂ ಹಣವನ್ನು ಒದಗಿಸಬೇಕು.

ನಮ್ಮ ಧರ್ಮವನ್ನು ಪ್ರಚುರಪಡಿಸುವ ಯೋಗ್ಯ ಪ್ರಚಾರಕರೂ ಪುರೋಹಿತರೂ ಉಂಟಾಗುವುದು ಆವಶ್ಯಕವಾಗಿದೆ. ನಮ್ಮ ಧರ್ಮೋದ್ಧಾರವು ಇಂಥವರಿಂದಲೇ ಆಗಬೇಕಷ್ಟೆ. ಆದುದರಿಂದ ಹಿಂದೂ ಧಾರ್ಮಿಕ ಪ್ರಪಂಚದಲ್ಲಿಯೂ, ಮಠಾಧಿಪರ ಮತ್ತು ಇತರ ಅಧಿಕಾರಿಗಳ ವಾದದಲ್ಲಿ ನಾನು ಸವಿನಯವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ಅವರು ಉಪೇಕ್ಷೆ ಮಾಡಬಾರದು. "ಆಲಸ್ಯಾದ ಮೃತಂ ವಿಷಮ್" ಎಂಬ ಉಕ್ತಿಯನ್ನು ನೆನಪಿನಲ್ಲಿಟ್ಟು, ಅವರು ಈ ಕುರಿತು ಕೂಡಲೇ ಕಾರ್ಯವನ್ನು ತೊಡಗಬೇಕು. ಮತ್ತು ಹಿಂದೂದೇಶದ ಸಕಲ ಪತ್ರಿಕೆಗಳೂ ನನ್ನ ಈ ಮನವಿಯನ್ನು ಮುದ್ರಿಸಿ ಸಹಾಯಮಾಡಬೇಕು.

ಉಡುಪಿ, —೩—೧೯೩೩ | ಎ. ಸುಬ್ಬರಾಯ ಶರ್ಮ, ಹಿಂದೂಮತ ಪ್ರಸಾರಕ

## ಶ್ರೀ ವಕೀಲ ಕಾರಂತರಲ್ಲಿ ಯಕ್ಷಗಾನ. ಮಾನ್ಯ ಜಿಲ್ಲಾ ಜಡ್ಜರ ಭಾಷಣ.

ಇದೇ ಕಳೆದ ತಾ ೧೨ನೇಯ ಆದಿತ್ಯವಾರ ಸಾಯಂಕಾಲ ಘಂಟೆ ೬—೩೦ಕ್ಕೆ ಶ್ರೀ ಕೋಟ ರಾಮಕೃಷ್ಣ ಕಾರಂತರು ಬಿ. ಎ. ಎಲ್. ಎಲ್. ಬಿ. ವಕೀಲ್—ಇವರ ಭವನದಲ್ಲಿ ಯಕ್ಷಗಾನ ಸಮಾರಂಭವೊಂದು ೧೧ ಗಂಟೆಯ ತನಕ ಅತಿ ವಿಜೃಂಭಣೆಯಿಂದ ಜರುಗಿತು. ಇದಕ್ಕೆ ಮಾನ್ಯರುಗಳಾದ ಜಿಲ್ಲಾ ಜಡ್ಜರು, ಸಬ್ ಜಡ್ಜರು, ಮುನ್ಸೀಫರು ಮಾತ್ರವಲ್ಲದೆ, ವಕೀಲ ಮಹಾಶಯರುಗಳೆಲ್ಲರೂ ಚಿತ್ತಯಿಸಿದ್ದರು. ಪ್ರಾರಂಭದಲ್ಲಿ ಬಾಲಕಿಯರಿಂದ ದೇವತಾ ಪ್ರಾರ್ಥನೆಯು ನೆರವೇರಿ ನೆರೆದಿದ್ದ ಮಹನೀಯರೆಲ್ಲರಿಗೂ ಯೋಗ್ಯವಾದ ಉಪಹಾರಪ್ರದಾನವಾಯಿತು. ಅನಂತರ ಸ್ವಲ್ಪ ಸಮಯ ಸಂಗೀತವು ಸುಶ್ರಾವ್ಯವಾಗಿ ನೆರವೇರಿತು. ಅದಾದೊಡನೆಯೇ ಶ್ರೀ ಕೆ. ರಾಮಚಂದ್ರಾಚಾರ್ಯರು ಎಮ್. ಎ., ಎಲ್ ಎಲ್. ಬಿ. ವಕೀಲ್ ಇವರು ಆಗ ತಾನೆ ಆರಂಭವಾಗಲಿದ್ದ ಕಥಾಭಾಗವನ್ನು ವಿವರಿಸಿ ಭಾಗವತರ, ಮೃದಂಗವಾದಕರ, ಮತ್ತು ಪಾತ್ರವರ್ಗದವರ ಪರಿಚಯವನ್ನು ಸಭಿಕರಿಗೆ ಭಾಷಣರೂಪದಿಂದ ಮಾಡಿದರು. ಗಂಟೆ ೬—೩೦ಕ್ಕೆ ಸರಿಯಾಗಿ ಯಕ್ಷಗಾನ ಕೃಷ್ಣಸಂಧಾನ—ಅವತಾರ—ಪ್ರಸಂಗವು ಆರಂಭವಾಯಿತು. ಭಾಗವತರು—ಯಕ್ಷಗಾನ ದಕ್ಷರಾದ ಬಲಿಪ ನಾರಾಯಣ ಭಾಗವತರು, ಮೃದಂಗವಾದಕರು, ರಾ। ಕೆಮ್ಮಣ್ಣು ನಾರಾಯಣಯ್ಯನವರು, ಶ್ರೀಗಳಾದ ಎಡ್ವೊಕೇಟ್ ಕೆ. ಬಾಲಕೃಷ್ಣರಾಯರು ಕೌರವ, ಪತ್ರ ಶ್ರೀಪತಿ ಶಾಸ್ತ್ರಿಗಳು ಶ್ರೀಕೃಷ್ಣ. ಕುಂಬಾಳ ರಾಮಕೃಷ್ಣಯ್ಯನವರು ವಿದುರ

ಈ ಮೂವರು ಈ ರೀತಿಯಾಗಿ ಪಾತ್ರಗಳನ್ನು ವಹಿಸಿಕೊಂಡು ಸಭಾರಂಜನೆಯಾಗುವಷ್ಟೆಯೂ, ಒಂದು ಪಾತ್ರವನ್ನು ಇನ್ನೊಂದು ಪಾತ್ರವು ಅನುಸರಿಸಿರುವುದೋ ಎಂಬಂತೆ ಪರಸ್ಪರ ಸ್ನೇಹಭಾವವನ್ನು ಪ್ರದರ್ಶಿಸುತ್ತಾ 'ಗಾಂಭೀರ್ಯ ವಾಕ್ಪಟುತ್ವದಿಂದ ಕೂಡಿರುವನು ಕೌರವ,-ನಯ, ಶಾಂತತೆ, ಪಾಂಡಿತ್ಯ—ಇವೇ ಕೃಷ್ಣನ ಮಾತುಗಳಿಂದ ಹೊರಸೂಸುತ್ತಿವೆ. ರಾಜನೊಡನೆ ಒಟ್ಟಿಬಿದ್ದ ವಿದುರನೂ ಕೂಡ ಧರ್ಮನೀತಿಗಳನ್ನು ಬಿಡತಕ್ಕವನಲ್ಲ' ಎಂಬೀ ಅಭಿಪ್ರಾಯಗಳನ್ನು ಸಭಿಕರೆಲ್ಲರಲ್ಲಿಯೂ ಹುಟ್ಟಿಸಿ ಸಭಿಕರ ಅಪಾರವಾದ ಪ್ರೀತಿಗೆ ಪಾತ್ರರಾದರು.

ಜಿಲ್ಲಾ ಜಡ್ಜ್ ಶ್ರೀ। ಚಂದ್ರಶೇಖರ ಅಯ್ಯರವರ ಭಾಷಣದ ಸಾರಾಂಶ:

"ಈ ಜಿಲ್ಲೆಯಲ್ಲಿ ಇಂತಹ ಸುಕಲೆಯೊಂದಿರುವುದೆಂದು ನಾನು ಈ ವರೆಗೆ ತಿಳಿದಿರಲಿಲ್ಲ. ಇಂದು ಅದನ್ನು ತಿಳಿದು ಬಹಳ ಸಂತೋಷಪಡುತ್ತೇನೆ. ಇಂದಿನ ಭಾಗವತರ ಸುಶ್ರಾವ್ಯ ಮತ್ತು ಸುಮಧುರವಾದ ಗಾನವನ್ನು ಕೇಳಿ ನನಗೆ ಇನ್ನಷ್ಟು ಸಂತೋಷವು ಉಕ್ಕಿಬರುತ್ತದೆ. ಮೃದಂಗವಾದಕರೂ ಎಲ್ಲಾ ಬಗೆಯ ಯೋಗ್ಯತೆಯುಳ್ಳವರೂ ಭಾಗವತರನ್ನು ಅನುಸರಿಸಿರುವರು. ಪಾತ್ರವರ್ಗದವರಲ್ಲಿ ವಕೀಲ ವೃತ್ತಿಯನ್ನನುಸರಿಸುವವರು ಇಷ್ಟೊಂದು ಪಾಂಡಿತ್ಯ ವಾಕ್ಪಟುತ್ವಗಳಿಂದ ಕೂಡಿರುವದು ಆಶ್ಚರ್ಯ. ಶ್ರೀಕೃಷ್ಣನ ಮತ್ತು ವಿದುರನ ಪಾತ್ರಗಳನ್ನು ವಹಿಸಿದ ಮಹನೀಯರು ಬಹಳ ವಿದ್ಯಾವಂತರೂ ವಾಗ್ಮಿಗಳೂ ಆಗಿರುವರೆಂದು ಅವರ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ. ಇಂತಹ ಸುಕಲೆಗೆ ವಕೀಲ ಮಹಾಶಯರುಗಳೆಲ್ಲರೂ ಇನ್ನಷ್ಟು ಪ್ರೋತ್ಸಾಹವನ್ನು ಕೊಡುವರೆಂದು ನನ್ನ ಭರವಸೆಯುಂಟು."

ಇದಲ್ಲವೇ ಯಕ್ಷಗಾನದ ಸೌಭಾಗ್ಯೋದಯ!

ಕಾರ್ಯದರ್ಶಿ

## ಭಾರತ ವರ್ಷದ ಮಹಿಳಾ ಸಮಾಜ ಮತ್ತು ಇಸ್ಲಾಂ ಮತ

ಫೆಬ್ರವರಿ ೨೪ನೇ ತಾರೀಕಿನ ಸ್ವದೇಶಾಭಿಮಾನಿ (೮ನೇ ಸಂಚಿಕೆ) ಯಲ್ಲಿ "ಭಾರತ ವರ್ಷದ ಮಹಿಳಾ ಸಮಾಜ" ಎಂಬ ನಾಮಕರಣದಲ್ಲಿ, ಶ್ರೀಮತಿ ಶಾಂತಾದೇವಿ ಗುಲ್ವಾಡಿಯವರು ಬರೆದಿರುವ ಲೇಖನವನ್ನು ಓದಲು ನನಗೂ ಭಾಗ್ಯವುಂಟಾಯಿತು. ಅದರಲ್ಲಿ "ಮಹಮ್ಮದೀಯ ಶಾಸನದ ಪ್ರಾಬಲ್ಯದಿಂದ ಹಿಂದೂ ಸಮಾಜದಲ್ಲಿ ಬಾಲ್ಯ ವಿವಾಹ ಪದ್ಧತಿಯು ಅತ್ಯಧಿಕವಾಯಿತು" ಎಂಬ ಒಂದು ಪ್ರಸ್ತಾವನೆಯು ಕಾಣುತ್ತದೆ. ಭಾರತ ವರ್ಷದ ಮಹಿಳಾ ಸಮಾಜದ ಅಭ್ಯುದಯಕ್ಕಾಗಿ ಪ್ರಯತ್ನಿಸುವ ಶ್ರೀಮತಿ ಶಾಂತಾದೇವಿಯವರು ಮುಸ್ಲಿಮ್ ಸಮಾಜವನ್ನು ದೂಷಣೆ ಮಾಡಿ ಭಾರತ ವರ್ಷದ ಮಹಿಳೆಯರಲ್ಲಿ ಸಾಧಾರಣ ಮೂರರಲ್ಲೊಂದಂಶವಿರುವ ಮುಸ್ಲಿಮ್ ಮಹಿಳೆಯರ ಮನೋದುಃಖಕ್ಕೆ ಕಾರಣ ಮಾಡಿದ್ದು ಆವ ನ್ಯಾಯದಿಂದಲೋ ತಿಳಿಯದು.

"ಕೆಲವು ಸಮಯದ ಹಿಂದೆ ಮುಸಲ್ಮಾನರನ್ನು ಆಕ್ಷೇಪಿಸಿ ಬರೆಯುವುದು ಒಂದು "fashion" ಮರ್ಯಾದೆಯಾಗಿತ್ತು" ಎಂಬುದಾಗಿ ಪ್ರೊಫೆಸರ್ ಟಿ. ಯಲ್. ವಾಸ್ವಾನಿಯವರು ಬರೆದಿರುವರು. ಆದರೆ ಈಗ ಯಾವ ಭಾಷೆಗಳಲ್ಲಿ ಮುಸ್ಲಿಮ್ ಲೇಖಕರು ಪ್ರತ್ಯುತ್ತರ ಬರೆಯುತ್ತಿರುವರೋ ಅಂಥ ಕಡೆಗಳಲ್ಲಿ ಮಾತ್ರ ಆಕ್ಷೇಪ ವರ್ಷಕ್ಕೆ ಶಮನ ಬಂದಿರುವುದು. ಕನ್ನಡ ಭಾಷೆಯಲ್ಲಿ ಮುಸ್ಲಿಮ್ ಲೇಖಕರು ಇಲ್ಲವೆಂತಲೇ ಹೇಳಬಹುದು. ಇಂಥಹ ಸಂದರ್ಭಗಳಲ್ಲಿ ಅನಾವಶ್ಯಕವಾಗಿ ಇಸ್ಲಾಂ ಮತವನ್ನೂ ಮುಸಲ್ಮಾನರನ್ನೂ ಆಕಾರಣವಾಗಿ ಆಕ್ಷೇಪಿಸಿ ಸಮುದಾಯಗಳೊಳಗೆ ಕಲಹಬೀಜಗಳನ್ನು ಬಿತ್ತಬಾರದಾಗಿ ಅಪೇಕ್ಷಿಸುತ್ತೇನೆ.

ಇಸ್ಲಾಂ ಮತವನ್ನು ಆಕ್ಷೇಪಿಸುವಂಥಾ ಎಷ್ಟೋ ಪುಸ್ತಕಗಳನ್ನು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ಕಾಣಬಹುದು. ಕನ್ನಡದಲ್ಲಿ ಬರೆದಿರುವ ಕಾದಂಬರಿಗಳಲ್ಲಿ ಮುಸ್ಲಿಮ್ ದುಷ್ಪಾತ್ರಗಳಿಲ್ಲದ ನೋವೆಲುಗಳು ಬಹು ಸ್ವಲ್ಪವೇ ಸರಿ. ಆದರೆ ಇಸ್ಲಾಂ ಮತವು ಬಹು ಸಹಿಷ್ಣುತೆಯಿಂದ ವರ್ತಿಸಿರುವುದು. ಇಸ್ಲಾಂ ಮತದ ಸಹಿಷ್ಣುತೆ ಮತ್ತು ನಿಷ್ಕಲಂಕತೆಗಳನ್ನು ಕೊಂಡಾಡಿ ಗಿಬ್ಬನ್, ಪಿ. ಸಿ. ರೋಯ್, ಕಾರ್ಲೈಯಿಲ್, ಪ್ರೊ।। ಟಿ. ಯಲ್. ವಾಸ್ವಾನೀ, ಮಹಾತ್ಮಾಗಾಂಧಿ, ಜಿ. ಬರ್ನಾಡ್, ಶ್ರೀಮತಿ ಸರೋಜಿನಿನಾಯ್ಡು ಮೊದಲಾದ ಅನೇಕ ಮಹನೀಯರು ಯುಕ್ತಿಯುಕ್ತವಾಗಿ ಬರೆದಿರುವರು. ಮುಸಲ್ಮಾನ ಮಹಿಳೆಯರಿಗಿರುವ ಸ್ವಾತಂತ್ರ್ಯಗಳನ್ನೂ ಗುಣಗಳನ್ನೂ ತಿಳಿಯಲು ಅಗ್ರಹಿಸುವವರು "The Spirit of Islam" (By Amir Ali), "Women in Islam" (by Khaja Kamaluddin,) "Muslim Home" (by H. H. The Ruler of Bhopal) ಮೊದಲಾದ ಗ್ರಂಥಗಳನ್ನೂ ಶ್ರೀಮತಿ ಸಿ. ಪಿ. ಸೂಮರ್ ಎಂಬವರು "ಇಸ್ಲಾಮಿಕ್ ರಿವ್ಯೂ" ಎಂಬ ಮಾಸಪತ್ರಿಕೆಯಲ್ಲಿ ಬರೆದಿರುವ "Islam's attitude towards women and orphans" ಎಂಬ ಲೇಖನವನ್ನೂ ನಿಷ್ಪಕ್ಷಪಾತ ಮನಸ್ಸಿನಿಂದ ಓದಿದರೆ ಗೊತ್ತಾಗಬಹುದು.

ಇಸ್ಲಾಂ ಮತದಲ್ಲಿ ಬಾಲ್ಯ ವಿವಾಹಮಾಡಬೇಕಾಗಿ ಯಾವ ತರದ ಶಾಸನವೂ ಇರುವುದಿಲ್ಲ. ಆದರೆ ಬಾಲ್ಯ ವಿವಾಹವು ಮಾಡಬಹುದೋ ಕೂಡದೋ ಎಂಬುದು ಇಸ್ಲಾಂ ಮತದಲ್ಲಿ ಚರ್ಚಾಸ್ಪದವಾದ ವಿಷಯವಾಗಿದೆ. ಆದರೆ ಪ್ರಾಯಭರಿತೆಯಾಗುವ ಮೊದಲು ಒಬ್ಬಳನ್ನು ವಿವಾಹ ಮಾಡಿಕೊಟ್ಟರೆ ಅವಳಿಗೆ ಪ್ರಾಯ ಪೂರ್ತಿಯಾದ ಕೂಡಲೇ ತನಗೆ ಅನುಯೋಜ್ಯನಲ್ಲದ ವರನನ್ನು ಪರಿತ್ಯಜಿಸಿ ಮುಕ್ತಳಾಗಲು ಅವಳು ಸ್ವತಂತ್ರಳಾಗಿರುವಳು.

ಹಿಂದುಮತದಲ್ಲಾದರೆ, ಬಾಲ್ಯದಲ್ಲೇ ವಿವಾಹ ಮಾಡಿಕೊಡಬೇಕೆಂಬ ಕರ್ಕಶವಾದ ಕಟ್ಟುಕಟ್ಟಳೆಗಳಿರುವುದಾಗಿ "ಶಾರದಾ ಬಿಲ್ಲಿ"ನ ಕೋಲಾಹಲ ಸಮಯದಲ್ಲಿ ಮಹಾಶಯರುಗಳ ಪ್ರವಾಹವು ಪತ್ರಿಕೆಗಳಲ್ಲಿ ಪ್ರವಹಿಸುತಿದ್ದುದರಿಂದ ಸರ್ವರಿಗೂ ತಿಳಿದ ಸಂಗತಿಯಾಗಿದೆ. ಎಂತಹ ಮಹಾಪ್ರಭುವಾದರೂ ಸರಿ. ತನ್ನ ಮಗಳನ್ನು ಪ್ರಾಯಭರಿತೆಯಾಗುವ ಮೊದಲು ವಿವಾಹ ಮಾಡಿಕೊಡದಿದ್ದರೆ ಅವನನ್ನು ಜಾತಿಯಿಂದ ಬಹಿಷ್ಕರಿಸಬೇಕಾಗಿದೆ. ಮತ್ತು ಆ ಮಗಳನ್ನು ಬಂಧುಗಳಿಂದ ಕಾಡಿಗೆ ಕಳುಹಿಸಬೇಕು. ಇಂಥಹ ಶಾಸನಗಳು ಹಿಂದೂ ಮತದಲ್ಲೇ ಇರುವಾಗ "ಮಹಮ್ಮದೀಯ ಮತದ ಶಾಸನದಿಂದ ಬಾಲ್ಯ ವಿವಾಹ ಪದ್ಧತಿಯು ಅತ್ಯಧಿಕವಾಯಿತು" ಎಂದು ಹೇಳುವುದು ಆವ ನ್ಯಾಯದಿಂದ?

ಇಸ್ಲಾಂ ಮತಾನುಯಾಯಿಗಳಾದ ಸ್ತ್ರೀಯರಿಗೆ (೧) ವಿವಾಹ ವಿಮೋಚನ ಸ್ವಾತಂತ್ರ್ಯ (೨) ತಂದೆಯ ಆಸ್ತಿಯ ಪಾಲು ಪಡೆಕೊಳ್ಳುವ ಹಕ್ಕು (ಸಹೋದರನಿರುವಾಗಲೂ ಸಹ) (೩) ಗಂಡನಿರುವಾಗಲೇ ಮಹಿಳೆಯರಿಗೆ ತನ್ನ ಆಸ್ತಿಯನ್ನು ಇಷ್ಟಾನುಸಾರ ವ್ಯಯಮಾಡುವ ಸ್ವಾತಂತ್ರ್ಯ (೪) ಪುನರ್ವಿವಾಹ ಸ್ವಾತಂತ್ರ್ಯ (೫) ಗಂಡನು ಮರಣ ಹೊಂದಿದ ನಂತರ ಮೊದಲಿನಂತೆ ಅಥವಾ ಇಷ್ಟ ತೋರಿದಂತೆ ಉಡಿಗೆ ತೊಡಿಗೆಗಳನ್ನು ತೊಟ್ಟುಕೊಳ್ಳುವ ಸ್ವಾತಂತ್ರ್ಯ—ಈ ರೀತಿಯಾಗಿ ಮಹಿಳೆಯರಿಗೆ ಸರಿಯಾದ ಸ್ವಾತಂತ್ರ್ಯಗಳನ್ನೀಯುವ ಅನೇಕ ಶಾಸನಗಳು ಇಸ್ಲಾಂ ಮತದಲ್ಲಿದ್ದಾಗ್ಯೂ ಇವುಗಳಲ್ಲಿ ಒಂದನ್ನೂ ಅನುಸರಿಸದೆ, ಇಸ್ಲಾಂ ಮತದಲ್ಲಿ ಎಂದೂ ನಿರ್ಬಂಧವಿಲ್ಲದ ಮತ್ತು ಆಗಬಹುದೋ ಕೂಡದೋ ಎಂಬ ಚರ್ಚೆಗೆ ವಿಷಯವಾಗಿರುವ ಬಾಲ್ಯ ವಿವಾಹವೊಂದನ್ನು ಮಾತ್ರ ಹಿಂದೂ ಸಮಾಜವು ಅನುಸರಿಸಿತು ಎಂದು ಯಾರಾದರೂ ಬರೆದರೆ ಅದರಲ್ಲಿ ಎಷ್ಟು ಮಾತ್ರ ಸತ್ಯಾಂಶವುಂಟೆಂಬುದನ್ನು ವಾಚಕ ಮಹಾಶಯರೇ, ನೀವೇ ತೀರ್ಮಾನಿಸಿರಿ!

ಖತೀಜಾಬೀ ಶರೂಲ್ ವಿದ್ಯಾರ್ಥಿನಿ, ಕುಂಬಳೆ



# WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog, and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co Ltd.
64, 3rd Cross Road, Srirampur Extn
Malleswaram Post, BANGALORE.

OR

*The Managing Agents,*
The S. I. G. A. Co. Ltd.
55. Poonamallee High Road, Kilpauk, MADRAS.

ನಾ— ಈ ದಿನ—
ನಿಮಗೆ ಬೇಕಾದುದು!

## ರಬ್ಬರ ಮೊಹರುಗಳು

ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ಕಾರೀಕನ್ನು ಬದಲಾಯಿಸ ಬಹುದಾದಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಖಳಿಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳಿ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು

**ಹೆಡ್ ಆಫೀಸು:—**

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No 2 ಬಲ್ಮರ ರಸ್ತೆ, ಮಂಗಳೂರು,
ದ ಕನ್ನಡ



## "ಜಯಕರ್ನಾಟಕ"

ಕನ್ನಡನಾಡಿನ ಸರ್ವತೋಮುಖ ಉನ್ನತಿಯನ್ನೇ ಗುರಿಯಾಗಿಟ್ಟುಕೊಂಡ ಅಖಿಲಕರ್ನಾಟಕದ ಏಕಮಾತ್ರ ಪ್ರಮುಖ ಮಾಸಪತ್ರಿಕೆ ಪರದೇಶದಲ್ಲಿಯ ಮಾನ್ಯ ಕನ್ನಡಿಗರ ಲೇಖನಗಳೂ, ಕತೆ, ಕವಿತೆ, ಹರಟೆ, ಜನಪದಸಾಹಿತ್ಯ, ವಿನೋದ ಮೊದಲಾದುವುಗಳ ಮೇಲೆ ಕನ್ನಡ ವಿದ್ವನ್ಮಣಿಗಳ ಲೇಖನಗಳೂ, ಕನ್ನಡ ಚಿತ್ರಕಾರರ ಚಿತ್ರಗಳೂ ಬರುತ್ತಿವೆ. ಪ್ರತಿ ತಿಂಗಳೂ ಕ್ರೌನ ಆಕಾರದ ೮೦ ಪುಟಗಳು ಮುದ್ದಾದ ಅಚ್ಚು ಪ್ರತಿ ತಿಂಗಳೂ ಮೊದಲನೆಯ ತಾರೀಖಿಗೆ ಹೊರಡುವ ಈ ಪತ್ರಿಕೆಗ ಚಂದಾದಾರರಾಗುವದು ಕನ್ನಡಿಗರ ಕರ್ತವ್ಯ ಜಾಹೀರಾತುದಾರರಿಗೆ ಉತ್ತಮ ಸ್ಥಾನ

**ಹಿಂದುಸ್ಥಾನ ರೂ ೫—೮—೦ ಪರದೇಶ ೬—೦—೦**

## ಜಯಕರ್ನಾಟಕ ಗ್ರಂಥಮಾಲೆ

ಕನ್ನಡಿಗರಲ್ಲಿ ಹೊಸ ಬಗೆಯ ವಾಚನಾಭಿರುಚಿಯನ್ನು ಹುಟ್ಟಿಸುವುದೇ ಇದರ ಉದ್ದೇಶ ವರ್ಷದಲ್ಲಿ ಕತೆ, ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಮತ್ತು ಲಲಿತ ಶೈಲಿಯ ಆರು ಪುಸ್ತಕಗಳಿಗೆ ಚಂದಾ ಹಣವು ಬರೀ ರೂ ೩—೮—೦

ಕ್ಯಾಟಲಾಗಿಗಾಗಿ ಬರೆಯಿರಿ ಎಲ್ಲ ಕಡೆಗೂ ಏಜಂಟರು ಬೇಕು

ಕಾರ್ಯದರ್ಶಿ

**ಜಯಕರ್ನಾಟಕ ಕಾರ್ಯಾಲಯ, ಧಾರವಾಡ**



## S U N & CO.

*Choukhamba Benares City*

**ಮೂರು ಇನಾಮುಗಳು.**

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0 ಯಿಂದ 3—12—0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಕ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—

**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಸ್ (ಯು.ಪಿ.)**



## ಕೇಸರಿಯವರ

## ಲೋಧ್ರ

### ಗರ್ಭಾಶಯ ರೋಗನಿವಾರಿಣಿ.

**ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣಮಾಡುವುದು.**

**ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭಿಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.**

ದೊಡ್ಡ ಬಾಟಲ್ ೧೨ ಔನ್ಸ್ ರೂ ೩—೦—೦
ಸಣ್ಣ ಬಾಟಲ್ ೬ ಔನ್ಸ್ ರೂ ೧—೧೦—೦

ಟಪ್ಪಾಲು ಖರ್ಚು ಪ್ರತ್ಯೇಕ ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

**ಕೇಸರಿ ಕುಟೀರಂ,**
**ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,**

ಸ್ಟೋಕಿಸ್ಟ್ಸ— **ಪೊಪ್ಯುಲರ್ ಸ್ಟೋರ್ಸ್,** ರಥಬೀದಿ ಮಂಗಳೂರು **ಷಾ ಕಂಪೆನಿ,** ಹಂಪನಕಟ್ಟ ಮಂಗಳೂರು



**The Zandu Pharmaceutical Works, Ltd , Bombay,14**

**ದಿ ಝೂಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14**

**ಲೋಕಪ್ರಸಿದ್ಧವಾದ**

## 'ಝೂಂಡು' ಚ್ಯವನಪ್ರಾಶ ಲೇಹ್ಯ.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!!**

ಹಸಿ ಆಮಲಕ ಮತ್ತು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋದು ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ. 10/— ಕ್ರಯ 1 ಪಾನು ಸೀಸೆ ರೂ, 2/8, ½ ಪಾ. ರೂ. 1/5 ¼ ಪಾ. ಆ 13.

ಮದರಾಸು ರಾಜಧಾನಿಗೆ ಸೋಲ್ ಏಜಂಟರು —ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು—ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು —ಷಾ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿಟಿ ಏಜಂಟರು—ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು —ಟಿ ಸಿ 'ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.'
ಬೆಂಗಳೂರು ಏಜಂಟರು —ಬಿ ಪ್ರೊಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು



## ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವಮಾನದ ಅಮೃತಾ ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿ ನಿ: ಔಷಧಗಳ ರಾಜ" "ಸರ್ವ ಸಿದ್ಧೌಷಧ"
"ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂದೇ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನೋಪಕಾರವೂ ಆದ

## ಜೀವಾಮೃತವೇ.

ಇದು ಪಂಡಿತ ಡಿ ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ ೧೮೯೮ನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ ನರಗಳ ದೌರ್ಬಲ್ಯವು ದುಷ್ಕೃತ್ಯದ ಹೀನತೆ ಪಡೆದು, ಆಯಾಸ ರಕ್ತ ಹೀನತೆ, ನರಗಳ ಅಶಕ್ತತೆ ಮೆದುಳು ಚೈತನ್ಯಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವುದು ಇತ್ಯಾದಿಗಳಿಂದ ನರಳುತ್ತಿದ್ದಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ಮೊದಲನೇ ಸಾರಿ ಸೇವಿಸಲು ಪ್ರಾರಂಭಿಸಿದಾರಭ್ಯವೇ ಅದರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡ ಸೈಜುಗಳಲ್ಲಿ ರೂ ೩—೮—೦ ಮತ್ತು ರೂ ೧—೧೦—೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

**ಆಯುರ್ವೇದಾಶ್ರಮಂ, ಪೋ ಬಾಕ್ಸು ನಂ. ೩೮೭, ಮದ್ರಾಸು.**

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಅಂಚೆ ತೋಟದ ಪತ್ರಿಕೆ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P No. 104

# ಬ್ರಿಟಿಷ ಸಿಂಹದ ಬಾಲ ಹಿಂಡುವ ಡಿ'ವೆಲರಾ.

ಭರತವರ್ಷದಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಾಡಿದ, ಹೆಣಗಾಡುತ್ತಿರುವ ದೇಶವೆಂದರೆ ಅಯರ್ಲೆಂಡು ಬ್ರಿಟಿಷ ನೊಗದಿಂದ ತಮ್ಮ ಕತ್ತನ್ನು ತಪ್ಪಿಸಲೇಬೇಕೆಂದು ಅಲ್ಲಿಯ ಬಹುಮತದ ಇಂಗಿತ ಇಂತಹ ಧ್ಯೇಯವುಳ್ಳ ಜನಾಂಗದ ನಾಯಕನಾಗಿ ಕಡು ಸ್ವಾತಂತ್ರ್ಯವಾದಿಯಾದ ಡಿ'ವೆಲರಾನು ಪ್ರಭುವಾಗಿರುವನು. ಇಂದ್ರಜಾಲ ಶಕ್ತಿಯೋ ಅಥವಾ ಮಂತ್ರ ಶಕ್ತಿಯೋ_ ಎಂಬಂತೆ, ಡಿ'ವೆಲರಾನ ಪ್ರತಿಭಾಸಂಪನ್ನತೆಯು ಅಯರ್ಲೆಂಡಿನಲ್ಲಿ ಸರ್ವತೋಮುಖವಾಗಿ ಹರಡಿ, ಹಿಂದೂಸ್ಥಾನದಲ್ಲಿ ಗಾಂಧಿಯ ಹೆಸರು ಮನೆವಾರ್ತೆ ಗಾದೆ ಯಾಗಿರುವಂತೆ ಅಲ್ಲಿ ಡಿ'ವೆಲರಾನದಾಗಿದೆ ಕೇವಲ ಬೀದಿ ಭಿಕಾರಿಯಾಗಿದ್ದ ತೆಳ್ಳಗಿನ ಡಿ'ವೆಲರಾನು ಇಂದು ಅಯರ್ಲೆಂಡಿನ ಕೋಟಿಗಟ್ಟಲೆ ಜನತೆಯ ಮುಖಂಡನು ಹೇಗಾದ? ಅವನಲ್ಲಿರುವ ಅದ್ಭುತ ಗುಣಗಳಾವವು? ಅವುಗಳ ಶಕ್ತಿಯೇನು? ಇವುಗಳನ್ನು ವಿವೇಚಿಸಬೇಕಾಗಿದೆ

೧೯೧೯ನೇ ಇಸವಿ ಫೆಬ್ರವರಿ ೩ನೇ ದಿನ ಲಿಂಕನ್‌ಗೋಲ್ (ಜೈಲು) ನಿಂದ ಕೆಲವು ದಂಗೆಖೋರರು ಪರಾರಿಯಾದರು— ದಕ್ಷಿಣ ಅಯರ್ಲೆಂಡಿನಲ್ಲಿ ಬ್ರಿಟಿಷ ಸಿಂಹದ ಬಾಲ ಹಿಂಡಿದುದಕ್ಕಾಗಿ ಇವರನ್ನು ದಂಡಿಸಲಾಗಿತ್ತು ತಲೆತಪ್ಪಿಸಿಕೊಂಡವರು ಸಿಗಲಿಲ್ಲ—ಭೂಮಿ ನುಂಗಿತೋ? ಗಗನಮಂಡಲವನ್ನು ಹಾದು ಹೋದರೋ ಎಂಬ ಊಹನಾತೀತ ಸಂಶಯಗಳಿಗೆಡೆ ದೊರಕಿತು.

ಎಲ್ಲೆಲ್ಲೂ ಅವರ ಪತ್ತೆ ನಡೆಸಿದರು ಪತ್ತೇದಾರಿಗಳ ಹಿಂಡು ಒಂದರ ಹಿಂದೆ ಒಂದರಂತೆ ಪತ್ತೆಗಾಗಿ ಹೊರಟು ನಿರಾಶೆಗೊಂಡುವು ಸದಾಸರ್ವದಾ ಕಾವಲುಗಾರರಿಂದ ಭೀತಿಗೊಳ್ಳುತ್ತಿರುವ ಬ್ರಿಟಿಷ ಸೆರೆಯಿಂದ ತಲೆಮರೆಸಿಕೊಂಡು ಓಡುವುದೆಂದರೆ ಅದೇನು ಸುಲಭವೇ? ಅಲ್ಲ,—ಡಿ'ವೆಲರಾನ ಮತ್ತು ಅವನ ಒಡನಾಡಿಗಳ ಸಾಹಸವನ್ನು ಕಂಡು ಕೇಳಿದ ಯುವಕ ಸಾಮ್ರಾಜ್ಯವು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟಿತು!

ಕೆಲವು ತಿಂಗಳುಗಳ ತನಕ ಡಿ ವೆಲರಾನ ಸುದ್ದಿಯಿರಲಿಲ್ಲ ಒಂದು ದಿನ ಅಯರ್ಲೆಂಡಿನ ಒಂದು ಮೈದಾನಿನಲ್ಲಿ ಸಭೆ ಜರಗಿತು ಪ್ರಥಮದಲ್ಲಿ ವೇದಿಕೆಯನ್ನೇರಿ ಮಾತನಾಡಿದುದಾರು? ಪುಂಡ ಡಿ ವೆಲರಾ! "ಬ್ರಿಟಿಷ ಜೈಲಿನಿಂದ ತಪ್ಪಿಸಿ, ನನ್ನ ದೇಶ ಸೇವೆಗಾಗಿ ಇಗೋ ಇಲ್ಲಿ ನಿಂತಿರುವೆನು ಎಂದು ಡಿ'ವೆಲರಾನು ಗರ್ಜಿಸಿದೊಡನೆ ಅಯರ್ಲೆಂಡಿನ ಯುವಕ ಯುವತಿಯರು ಆನಂದೋತ್ಸಾಹಗಳಿಂದ ಕುಣಿದಾಡಿದರು ತಮ್ಮ ದೇಶಮಾತೆಯನ್ನು 'ಬ್ರಿಟಿಷ ನೊಗದಿಂದ ತಪ್ಪಿಸಲು ಡಿ ವೆಲರಾನೇ ಯೋಗ್ಯ ವ್ಯಕ್ತಿಯು ಎಂದು ತಿಳಿದುಕೊಂಡರು.

೧೮೮೨ನೇ ಇಸವಿ ಅಕ್ಟೋಬರ ೧೪ನೇ ದಿನ ನ್ಯೂಯೋರ್ಕಿನ ಒಂದು ಕುಟುಂಬದಲ್ಲಿ ಡಿ'ವೆಲರಾನ ಜನನವಾಯಿತು ತಂದೆಯು ಸ್ಪೈನ್ ದೇಶದವನು. ತಾಯಿಯು ಅಯರ್ಲೆಂಡಿನವಳು ೧೮೮೪ರಲ್ಲಿ ಡಿ'ವೆಲರಾನ ತಂದೆಯು ತೀರಿಕೊಳ್ಳಲು ತಾಯಿಯು ಬಡತನವನ್ನು ಸಹಿಸಲಾರದೆ ಕೂಸನ್ನು ಪೆಟ್ರಿಕ್‌ಕೋಲ್ ಎಂಬ ಸಂಬಂಧಿಕನಲ್ಲಿಗೆ ಅಯರ್ಲೆಂಡಿಗೆ ಕಳುಹಿಸಿದಳು

ಡಿ ವೆಲರಾ ಹುಟ್ಟಿನಲ್ಲೇ ಧೈರ್ಯವಂತ ಸಾಹಸಕೃತ್ಯಗಳೆಂದರೆ ಅವನಿಗೆ ನುಂಗಿ ನೀರು ಕುಡಿದಂತೆ ಹೋರಾಟವು ಅವನ ರಕ್ತದಲ್ಲೇ ಸೇರಿಕೊಂಡಿತ್ತು ಅಂತಹ ತುಂಟನ ಆಶ್ರಯಕ್ಕೆ ಅಯರ್ಲೆಂಡಿನ ಸೀನ್‌ಫೀನ್ ಎಂಬ ಸ್ವಾತಂತ್ರ್ಯವಾದಿ ಸಂಘವೊಂದು ಸಿಕ್ಕಿತು ಈ ಸಂಘದ ಸದಸ್ಯನಾಗಿ ಅವನು ೧೯೧೩ರಲ್ಲೇ ಅಪ್ರತಿಭನಾದ, ಅಖಂಡ ಮುಖಂಡನಾದ

೧೯೧೬ನೇ ಎಪ್ರಿಲ್ ಮಾಸದಲ್ಲಿ ಅಯರ್ಲೆಂಡಿನ ಸುತ್ತಲೂ ಕ್ರಾಂತಿ ಡಿ'ವೆಲರಾನ ಸಂಗಾತಿಗಳ ಹಾವಳಿಯು ವಿಪರೀತವಾಯಿತು ಕೆಲವು ದಿನಗಳಲ್ಲಿ ಪ್ರೊಫೆಸರ್ ಮೆಕ್‌ನೀಲ್ ಮತ್ತು ಪೆಟ್ರಿಯಕ್ ಪೀಸರ್ ಎಂಬವರ ಧುರೀಣತ್ವದಲ್ಲಿ ಒಂದು ದಂಗೆಯೆದ್ದಿತು. ಕ್ರಾಂತಿಕಾರರ ಸೈನ್ಯಗಳು ಬ್ರಿಟಿಷ ರಾಜ್ಯ ರಕ್ಷಕರೊಡನೆ ಹೋರಾಡಿದುವು. ಮದ್ದು ಗುಂಡುಗಳು ಅವಿಶ್ರಾಂತವಾಗಿ ಹಾನಿಗೊಳಿಸಿದುವು ಈ ದಂಗೆಯಲ್ಲಿ ಡಿ'ವೆಲರಾನು "ಕಮಾಂಡ"ರನಾದ. ೧೦೦೦ ಸೈನಿಕರಲ್ಲಿ ೧೧೦ ಜನರು ಮಾತ್ರ ಉಳಿದರು. ಆದರೂ, ಡಿ'ವೆಲರಾನು ಹೃದಯಗುಂದಲಿಲ್ಲ. ಶತ್ರುಗಳಿಗೆ ಎದೆಯೊಡ್ಡಿ ನಿಂತ ತೀವ್ರ ಕಷ್ಟದಿಂದ ಅವನನ್ನು ಸೆರೆಹಿಡಿದರು. ದಂಗೆಖೋರನಾಗಿ ಭಾಗವಹಿಸಿದುದಕ್ಕೆ ಅವನಿಗೆ "ನಾಳೆ ಪ್ರಾತಃಕಾಲ ೭ ಘಂಟೆಗ ನಿನ್ನನ್ನು ಗುಂಡಿಕ್ಕಿ ಕೊಲ್ಲಲು ನಿರ್ಧರಿಸಿದ್ದೇವೆ" ಎಂಬ ಶಿಕ್ಷೆಯು ದೊರೆಯಿತು. ಆದರೆ ಜನತೆಯ ಏಕಕಂಠ ಕೇಳಿಕೆಯಿಂದಾಗಿ ಡಿ'ವೆಲರಾನಿಗೆ ದೊರೆತ ಆ ಶಿಕ್ಷೆಯು ಬಿದ್ದು ಹೋಗಿ, ಅವನಿಗೆ ಆಮರಣಾಂತಿಕ ಕಾರಾಗೃಹವಾಸವನ್ನು ಕೊಟ್ಟು ಅವನನ್ನು ಇಂಗ್ಲಾಂಡಿನ ಲೂಯಿಸ್ ಜೈಲಿನಲ್ಲಿ ಅಡಗಿಸಿಟ್ಟರು

ಆದರೆ ದೈವಗತಿಯು ಬೇರೆಯೇ ಆಗಿತ್ತು. ಕೆಲವು ಸಮಯದಲ್ಲೇ ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಐರಿಷ್ ಪಕ್ಷನಾಗಿದ್ದ ವಿಲಿಯಂ ರೆಡ್‌ಮೊಂಡ್ ಎಂಬ ಪ್ರತಿನಿಧಿಯು ತೀರಿಕೊಂಡು ಪಾರ್ಲಿಮೆಂಟಿನಲ್ಲಿ ಒಂದು ಸ್ಥಾನವು ಖಾಲಿ ಬಿದ್ದಿತು ಆ ಸ್ಥಾನಕ್ಕೆ ತಮ್ಮ ವೇಲರಾನೇ ಚುನಾಯಿತನಾಗಬೇಕೆಂದು ರಾಷ್ಟ್ರವು ಆಗ್ರಹಗೊಂಡಿತು ಬ್ರಿಟಿಷ ಸರಕಾರವು ಅವರ ನುಡಿಗಳಿಗೆ ತಲೆತಗ್ಗಿಸದೆ ನಿರ್ವಾಹವಿಲ್ಲದಂತಾಯಿತು ಅವನ ಚುನಾವಣೆಯಲ್ಲಿ ಭಾಗವಹಿಸಲೆಂದು ಡಿ'ವೆಲರಾನನ್ನು ಬ್ರಿಟಿಷ ರಾಜನೀತಿಜ್ಞ(?)ರು ಬಿಡುಗಡೆ ಮಾಡಿದರು

ಒಂದು ಕಡೆಯಿಂದ ಮಹಾಯುದ್ಧದ ಒತ್ತಾಟ! ಒಂದು ಕಡೆಯಿಂದ ಅಯರ್ಲೆಂಡಿನವರ ಈ ಬಗೆಯ ತಿಕ್ಕಾಟ! ಇವುಗಳಿಂದಾಗಿ ಆಗ ಪ್ರಧಾನಾಮಾತ್ಯರಾಗಿದ್ದ ಲ್ಯೊಯ್ಡ್ ಜೋರ್ಜರವರು ಅಸಹನೀಯ ಮುಕ್ಕಾಟದಲ್ಲಿ ಮುಳುಗಿದರು ಯೂನಿಯನ್ ಜೇಕ್ ಧ್ವಜದ ಬಲವೇ ಕುಂದುತ್ತಿತ್ತು

ಡಿ'ವೆಲರಾನ ಪುಂಡಾಟಿಕೆಗಳ ವಿಷಯಕವಾಗಿ ಮಂತ್ರಿಯವರು ೧೯೧೭ರ ಅಕ್ಟೋಬರ ೨೩ನೇ ದಿನ ಒಂದು ಭಾಷಣ ಕೊಡುತ್ತಾ, "ಡಿ'ವೆಲರಾನ ವೇದವೇ ಕ್ರಾಂತಿಯಾಗಿರುತ್ತದೆ. ಕತ್ತಿ ಕೈದುಗಳನ್ನುಪಯೋಗಿಸಲೇಬೇಕೆಂದು ಅವನು ಜನರಿಗ ಉಪದೇಶಿಸಿ ಉತ್ಕ್ರಾಂತಿಯುತ್ಪಾದಿತನಾಗುತ್ತಿದ್ದಾನೆ ಅವನು ಅಯರ್ಲೆಂಡಿನಲ್ಲಿ ಪ್ರಬಲನಾದರೆ ಗತಿಯೇನು?' ಎಂದರು ಮಂತ್ರಿಯವರು ಹೇಳಿದುದೇ ಬಂತು' ಡಿ'ವೆಲರಾನು ರಿಪಬ್ಲಿಕನ್ ಚಳವಳದ ಅಧ್ಯಕ್ಷನಾಗಿ ಚುನಾಯಿತನಾದನು ಇನ್ನು ಐರಿಷ್ ರಿಪಬ್ಲಿಕಿಗೆ ಅವನು ಚುನಾಯಿತನಾಗುವುದೇ ಉಳಿದಿತ್ತು!

ಈ ಪದವಿಯಲ್ಲೂ ಡಿ'ವೆಲರಾನು ಬ್ರಿಟಿಷ ಕೇಸರಿಯ ಬಾಲವನ್ನು ಹಿಂಡಿ ಹಿಸುಕಿದನು ಇದರಿಂದ ರೋಷಗೊಂಡ ಬ್ರಿಟಿಷ ಮುತ್ಸದ್ದಿಗಳು ಅವನ ಮೇಲೆ ಹಾರಿ ಅವನನ್ನು ಹಿಡಿದು, ೧೯೧೮ರ ಮೇ ತಿಂಗಳಲ್ಲಿ ಅವನನ್ನು ಪುನಃ ಲಿಂಕನ್ ಸೆರೆಯಲ್ಲಿಟ್ಟರು

ಡಿ'ವೆಲರಾನ ಸೀನ್‌ಫೀನ್ ಚಳವಳಿವು ಬಿದ್ದು ಬಾಡುವುದರಲ್ಲಿತ್ತು. ಅಯರ್ಲೆಂಡು ಬ್ರಿಟನುಗಳೊಳಗ ತೀಕ್ಷ್ಣ ಹೋರಾಟವಾರಂಭವಾಗಲಿತ್ತು ಮಹಾಯುದ್ಧದ ಬಿರುಸಾಟವು ನಿಂತಿತ್ತು ಎರಡು ತಿಂಗಳುಗಳು ದಾಟುತ್ತಲೇ ಡಿ'ವೆಲರಾನು ಎರಡನೆಯ ಸಲದ್ದಾಗಿ ಲಿಂಕನ್ ಜೈಲಿನಿಂದ ತಪ್ಪಿಸಿಕೊಂಡನೆಂಬ ವಾರ್ತೆಯು. ಇಂಗ್ಲೆಂಡಿನಲ್ಲಿ ಬೆಂಕಿಯಂತೆಯೂ, ಅಯರ್ಲೆಂಡಿನಲ್ಲಿ ತಂಗಾಳಿಯಂತೆಯೂ ಬೀಸಿತು ಪ್ರತಿಯೊಂದು ಬಂದರದಲ್ಲಿ ಬ್ರಿಟಿಷ ಕಾವಲುಗಾರರು ನಿಂತರು ಪ್ರತಿಯೊಂದು ರೈಲ್ವೇ ಸ್ಟೇಶನು ಪೋಲೀಸರ ಕೈವಶವಾಯಿತು ವಾಹನಗಳ ಜಪ್ತಿಯಾಯಿತು ಮನೆಮಠಗಳಲ್ಲಿ ಡಿ'ವೆಲರಾನನ್ನು ಹುಡುಕಿದರು ಆದರೆ ಡಿ'ವೆಲರಾನೆಲ್ಲಿ? ಅವರು ಹುಡುಕಾಡಿ ದಣಿದು ನೀರು ಕುಡಿಯುತ್ತಿದ್ದಂತೆಯೇ, ಡಿ'ವೆಲರಾನು ಪುನಃ ಅಯರ್ಲೆಂಡಿನಲ್ಲಿ ಬೆಳಗ್ಗಿನ ಸೂರ್ಯನಂತೆ, ಈಜುಗಾರನು ನದಿಯಲ್ಲಿ ಮುಳುಗಿ ಮೇಲೆ ಬಂದು ತಲೆತೋರಿಸುವಂತೆ—ಮೂಡಿದನು ಜನರ ಕೋಲಾಹಲವು ಅವರ್ಣನೀಯವಾಯಿತು

ಅವನು ಲಿಂಕನ್‌ಗೋಲ್‌ನಿಂದ ತಲೆ ತಪ್ಪಿಸಿದ ಕುರಿತು ಒಂದು ಕತೆಯಿದೆ ಕಾರಾಗೃಹದ ದೊಡ್ಡ ಬೀಗದ ಅಚ್ಚನ್ನು ತೆಗೆಯಬೇಕೆಂದು ವೆಲರಾನು ಬಗೆದ ಹೇಗೋ ಮಾಡಿ ಒಂದು ಕೇಂಡ್ಲ್ (ಬತ್ತಿ)ಯನ್ನು ಸಂಪಾದಿಸಿಕೊಂಡು ಬೀಗದ ರಂಧ್ರದ ಅಚ್ಚನ್ನು ಒದಗಿಸಿಕೊಂಡ ಎರಡು ಪೋಸ್ಟ್ ಕಾರ್ಡುಗಳನ್ನು ತರಿಸಿಕೊಂಡು ಅವುಗಳಲ್ಲೊಂದರ ಮೇಲೆ ಬೀಗದ ಅಚ್ಚನ್ನು ಒತ್ತಿದ. ಒಬ್ಬ ಕುಡುಕನ ಚಿತ್ರವನ್ನು ಬಿಡಿಸಿ ಕೆಳಗೆ "ನನಗೆ ಒಳಹೋಗಲಾಗುವುದಿಲ್ಲ" ಎಂದು ಬರೆದ ಮತ್ತೊಂದರಲ್ಲೊಬ್ಬ ಕುಡಿಕನ ಚಿತ್ರವನ್ನು ಬಿಡಿಸಿ ಅವನು ಒಂದು ಬೀಗವನ್ನು ಒಡೆಯುವಂತೆ ಚಿತ್ರಿಸಿ ತನ್ನ ಮಿತ್ರರಿಗೆ ಆ ಎರಡು ಕಾರ್ಡುಗಳನ್ನು ಕಳುಹಿದ ಜೈಲಧಿಕಾರಿಗಳು ಈ ಎರಡು ಕಾರ್ಡುಗಳನ್ನು ಕಂಡು ನಕ್ಕರು ವೆಲರಾನಿಗೆ ಹುಚ್ಚು ಹಿಡಿದಿದೆ, ಮಿತ್ರರಿಗೆ ಪತ್ರಗಳನ್ನು ಬರೆಯುವ ಬದಲು ಅರ್ಥವಿಲ್ಲದ ಚಿತ್ರಗಳನ್ನು ಗೀಚಿ ಕಳುಹಿಸುತ್ತಿರುವನು ಎಂದು ಪರಿಹಾಸ್ಯಮಾಡಿ, ಸಂಶಯಿಸದೆ ಆ ಕಾರ್ಡುಗಳನ್ನು ವಿಳಾಸದಾರರಿಗೆ ತಲಪಿಸಿದರು ಎರಡು ದಿನಗಳಲ್ಲೇ ವೆಲರಾನ ಪಕ್ಷೀಯರು ಒಂದು ಕಳ್ಳ ಬೀಗದ ಕೈಯನ್ನು ಅವನ ಕಾರ್ಡಿನಲ್ಲಿರುವ ಅಚ್ಚಿನ ಪ್ರಕಾರವಾಗಿಯೇ, ಅವನ ಗೂಢಾರ್ಥದ ಮೇಲೆಯೇ ರಚಿಸಿ, ಒಂದು 'ಕೇಕ್' (ರೊಟ್ಟಿಯ) ಮೂಲಕ ಅದನ್ನು ಡಿ'ವೆಲರಾನಿಗೆ ಕಳುಹಿಸಿದರು.

ಬೀಗದ ಕೈಯು ತಲಪಿದ ದಿನ ಲಿಂಕನ್ ಸೆರೆಮನೆಯ ಸುತ್ತಲೂ ಡಿ'ವೆಲರಾನ ಪಕ್ಷೀಯರು ಸರ್ವ ಸನ್ನಾಹಗಳನ್ನು ಮಾಡಿ ಸಿದ್ಧರಿದ್ದರು ನಡು ರಾತ್ರಿಯಲ್ಲಿ ಡಿ'ವೆಲರಾನು ಆ ಬೀಗದ ಕೈಯನ್ನುಪಯೋಗಿಸಿ ಗೂಡಿನಲ್ಲಿಯ ಗಿಳಿಯಂತೆ ಹಾರಿ ಹೋದನು

ಒಂದು ದಿನ ಬೆಳಗ್ಗೆ ಅಯರ್ಲೆಂಡಿನ ಸಿನ್‌ಫಿನ್ ಮುಖಂಡನಿಗೆ ಒಂದು ಪತ್ರವು ಬಂದಿತು ತೆರೆದೊಡನೆ 'ನಾನು ಲಿಂಕನ್ ಸೆರೆಯಿಂದ ತಲೆ ತಪ್ಪಿಸಿರುವೆ ದೇಶಮಾತೆಯ ಸೇವೆಗಾಗಿ ಬರುವೆ, ಡಿ ವೆಲರಾ' ಎಂದಿತ್ತು ಹೇಗೋ, ಡಿ'ವೆಲರಾನು ಅಯರ್ಲೆಂಡಿಗ ಪುನಃ ತಲಪಿದ ಕೆಲವು ಪತ್ರಿಕಾ ಪ್ರತಿನಿಧಿಗಳ ಕಣ್ಣಿಗೆ ವಸ್ತ್ರ ಕಟ್ಟಿ ಅವರನ್ನು ರಾತ್ರಿ ಹೊತ್ತಿನಲ್ಲಿ ತನ್ನಲ್ಲಿಗೆ ಬರಮಾಡಿಸಿ, ತನ್ನ ಉದ್ದೇಶವೇನಿರುವುದೆಂದು ಅವರಿಗ ತಿಳಿಸಿ, ಅವರದನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಬ್ರಿಟಿಷರಿಗ ತಿಳಿಸುವಂತೆ ಮಾಡಿ, ಬ್ರಿಟನಿನ ಕಿವಿ ಹಿಂಡಿದನು ಬ್ರಿಟನಿಗೆ ಅವನ ಪೌರುಷವು ತಿಳಿಯಿತು.

ಡಿ ವೆಲರಾನು ಅಮೇರಿಕಕ್ಕೆ ಕಾಲಿಡಬಾರದೆಂದು ರಾಜಾಜ್ಞೆಯಾಯಿತು ಸ್ವಾತಂತ್ರ್ಯಪ್ರಿಯನಾದ ಅವನಿಗೆ ಆ ಆಜ್ಞೆಯನ್ನು ಮುರಿಯಬೇಕಾಗಿತ್ತು ತನ್ನ ಚುನಾವಣೆಯ ಕಾರ್ಯಗಳಿಗಾಗಿ ೧೯೧೯ರ ಜೂನ್ ೨೩ನೇ ದಿನ ನ್ಯೂಯೋರ್ಕಿನಲ್ಲಿ ಇಳಿದು ತನ್ನ ಕೆಲಸಗಳನ್ನು ನಿರ್ವಹಿಸಿದನು ಇದನ್ನು ಕೇಳಿ ಅಲ್ಲಿಯ ಸರಕಾರವು ದಿಗಿಲಾಯಿತು ಅವನನ್ನು ಸೆರೆ ಹಿಡಿಯಬೇಕೆಂದು ಹಾರೈಸಿತು ಡಿ ವೆಲರಾನೆಲ್ಲಿ? ಅವನು ಎಷ್ಟು ರಹಸ್ಯ ರೀತಿಯಿಂದ ಅಮೇರಿಕಾದಲ್ಲಿಳಿದಿದ್ದನೋ ಅಷ್ಟೇ ಗುಟ್ಟಿನಿಂದ ಅಯರ್ಲೆಂಡಿನಲ್ಲಿ ಪುನಃ ಇಳಿದಿದ್ದನು!

ಇಷ್ಟಾಗುವಾಗ ಬ್ರಿಟನಿನ ಅಮಾತ್ಯರಾದ ಲ್ಯೊಯ್ಡ್ ಜೋರ್ಜರು ಡಿ'ವೆಲರಾನೊಡನೆ ಮೈತ್ರಿಭಾವದ ಪತ್ರವನ್ನು ~~ಬರೆದು "ಇಂಗ್ಲಾಂಡು ಅಯರ್ಲೆಂಡುಗಳೊಳಗೆ~~ ಮೈತ್ರಿಯುಂಟಾಗಬೇಕೆಂದು ನಮ್ಮೆಲ್ಲರ ಆಶಯ—ನಾವು ನಾವು ಒಂದಾಗೋಣ' ಎಂದು ತಿಳುಹಿಸಿದರು ವೆಲರಾನು ಅದ ಕೆಳ್ಳುಡಂಬಟ್ಟು "ಅಯರ್ಲೆಂಡು ಇಂಗ್ಲಾಂಡುಗಳೊಳಗ ಮೈತ್ರಿಯುಂಟಾಗಬೇಕೆಂದು ನಮ್ಮೆಲ್ಲರ ಆಶೆ ನಾವು ನಾವು ಒಂದಾಗೋಣ' ಎಂದು ಅವರ ನುಡಿಗಳನ್ನೇ ಹಿಂದಟ್ಟಿ ಉತ್ತರವಿತ್ತನು ಅಲ್ಲಿಗೆ ಈಮನ್ ಡಿ'ವೆಲರಾನ ಜೀವನದಲ್ಲಿ ಬೇರೆ ಮಾರ್ಪಾಟುಗಳುಂಟಾದುವು ಈಗಲವನು ಅಯರ್ಲೆಂಡಿನ ಪ್ರಭುವಾದ

ಡಿ'ವೆಲರನು ತನ್ನ ದೇಶವಾದ ಅಯರ್ಲೆಂಡನ್ನು ಸಂಪೂರ್ಣ ಸ್ವಾತಂತ್ರ್ಯಗೊಳಿಸಲೇಬೇಕೆಂದು ಟೊಂಕ ಕಟ್ಟಿರುವನು ತನ್ನ ದೇಶದಿಂದ ಬ್ರಿಟನಿಗೆ ಇಷ್ಟು ಕಾಲದಿಂದಲೂ ಸಲ್ಲುತ್ತಿದ್ದ ಭೂಶಾಸನವನ್ನು ಇನ್ನು ಕೊಡಬಾರದೆಂದೇ ಅವನು ಆಗ್ರಹಪಟ್ಟಿರುವನು ಇಟಲಿಯ ಸಿಂನಿಯರ್ ಮುಸೋಲಿನಿಯಂತೆ ಇವನು ಮಹಾ ಪರಾಕ್ರಮಶಾಲಿಯು ನಿರಂಕುಶ ಪ್ರಭುವು ಸ್ವಜನರೇಳ್ಗೆಯೇ ಇವನ ಗುರಿ ಆದುದರಿಂದಲೇ ಇವನು ಜನಾಂಗ್ರದ ಪ್ರೇಮಕ್ಕೆ ಪಾತ್ರನಾಗಿ ಅಖಂಡ ವೀರನಾದ, ಡಿ'ವೆಲರಾನು ಎರಡನೆಯ ಸಲವೂ ಅಯರ್ಲೆಂಡಿನ ಅಧ್ಯಕ್ಷನಾಗಿ ಚುನಾಯಿತನಾದುದರಿಂದ ಬ್ರಿಟನು ದಿಗಿಲುಗೊಂಡಿದೆ.

ಮು. ಶಾ

++ + +

## ...ಕ್ಕಿ ಉಕ್ಕಿ ಬರುವ ಕೆಮ್ಮಿಗೆ ಕೂ-ಕೂಮಿನ್ ಎಂಬುದು ರಾಮಬಾಣ!

ಉಕ್ಕಿ - ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!




ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿ ಯದೆ. ಮಹದುಪಕಾರಕರವಾದ ಈ ರೋಗನಿವಾರಕಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ ಕೂಮಿನ್' ಇದು ದಿವ್ಯ ಔಷಧವಾಗಿದೆ

**ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿಯುವರಿಂದ ಸಿದ್ಧವಾದುದು**

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್-

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು**

ವೈದ್ಯ ಮೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

## ಮದನಮಸ್ತಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸ್ಸುವೆವು ಹಸ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ ಎಂಥದಾದರೂ ಪರಮ, ಮೈನೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟಿ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್ ಆಯ್ ಎಟಿಖ್, ಎಲ್ ಎಮ್ ಎಂಡ್ ಎಸ್, ಜಿ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಪತ್ತೆ —ವೈದ್ಯ ಮೋಹನಲಾಲ ಎಸ ಔಷಧಾಲಯ, ಮು ಪೋ ಮಿರಜ, S M C

**ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು**

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)**

ಬಹಳ ಸಾರೆ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಓಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ಮಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮಟ್ಟಾಗ್ನಿವಿಕಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲು ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲ ಪೂರ್ಣ ವಿಚಾರ ಮಾಡಿ ಔಷಧಿಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಮಾಹಿಮ ರಾಣೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ ವಿ ಪಿ. ಖರ್ಚು ೦|||೦

**ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)**

ಈ ಚೂರ್ಣವು ಕೆಂಪು ಬಿಳಿ ಸರಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ. ಮುಖ್ಯ ಸರ್ಟಿಫಿಕೇಟ, ಮೇ ರಾ. ಎ. ಎಮ್ ಪಾನ್ಸಪಕ್ಕರ ಬೆಳಗಾಂವ-ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಪುಸೇಪವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳೆ ಸರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ ೩/ ಟಿ. ಖ ಆಣೆ ೮,

**ವಿಳಾಸ— ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S M. C.**

## ಕೋ-ಆಪರೇಟಿವ್ ಸೊಸೈಟಿಗಳಿಗೆ

**ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ**

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್**

ರಥಬೀದಿ, ಮಂಗಳೂರು

**ಡಾಕ್ಟರ ವಾಮನ ಗೋಪಾಳರವರ**

**ಐಓಡಾಯಿಜ್ಡ ಸಾರ್ಸಪರಿಲಾ**



ಕೆಟ್ಟ ರಕ್ತಕ್ಕೆ ಪರಮೌಷಧ, ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

**ಡಾಕ್ಟರ್ ಗೌತಮರಾವ್ ಕೇಶವರವರ**

ಫೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

**ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,**

ಠಾಕುರದ್ವಾರ, ಮುಂಬಾಯಿ ೭ ಸೊಕಿಸ್ಟ್ ಪಾ ಕಂಪೆನಿ [ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಕ್ಷಯಕ್ಷೀಣಾದಿಗಳಿಗೆ

## ಚ್ಯವನಪ್ರಾಶಾನ ಲೇಹ

ಪ್ರಸೂತಿ ರೋಗಾದಿಗೆ

## ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

## ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು

THE SOUTH INDIA CO-OPERATIVE INSURANCE SOCIETY, LIMITED MADRAS

**LOCAL BOARD:—**

THE SOUTH CANARA CENTRAL CO-OPERATIVE BANK LTD, MANGALORE.

Applications are invited for 'Sub Agents from capable and energetic persons and Co-operative Institutions to canvass business on behalf of the Local Board of the Society at Mangalore

*FOR TERMS APPLY TO—*

***The Secretary,***

South Canara Central Co-operative Bank Ltd, KODIALBAIL P O (Mangalore)

*SOUTH CANARA*

ಮಾರಾಟಕ್ಕಿವೆ! ಮಾರಾಟಕ್ಕಿವೆ!!

**ಶಾಲೆ ಶಿಕ್ಷಕರಿಗೂ, ಹೋಟೆಲಿನವರಿಗೂ ಬೇಕಾಗುವಂತಹ**

## ಚರ್ರೋಲ್‌ಗಳು

**ಮೂರು ಸ್ಟ್ಯಾಡಿನಲ್ಲಿ ತಯಾರಿಸಲ್ಪ ಮಾರಾಟಕ್ಕೆ ಸಿದ್ಧವಿವೆ.**

**ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ**

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಮೆನೇಜರ್,**

ಶಾರದಾ ಪ್ರಕಾಶನ,

ರಥಬೀದಿ, ಮಂಗಳೂರು.


EDITED, PRINTED & PUBLISHED BY V. S. KUDVA AT THE SHARADA PRESS, MANGALORE.

[illegible] ರೂಪಾಯಿ 2—0—0

ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುಕೆ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೭. | ಮಂಗಳೂರು ತಾ ೨೪ನೇ ಶುಕ್ರವಾರ ಮಾರ್ಚಿ ೧೯೩೩ | (24—3—33) | ಸಂಚಿಕೆ ೧೨


## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras**

ಹೆಡ್ ಆಫೀಸು: — ಉಡುಪಿ ಶಾಖೆ — ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000. ಚಂದಾ ಹಾಕಲಿಕ್ಕೆ ಅರ್ಪಿಸಿದ ನ ವಿತ್ತಿದ ಮೂಲಧನ ರೂ 2,25,000.

STATEMENT OF ASSETS & LIABILITIES AS ON 28TH FEBRUARY 1933

| | Capital and Liabilities. | | | Property and Assets | |
|---|---|---|---|---|---|
| 1 | Paid up Capital | Rs. 2,25,000 0 0 | 1 | Premises, Building, Furniture etc | Rs 65 906 12 6 |
| 2 | Reserve and other funds | " 2,35,000 0-0 | 2 | Government securities | " 2 93 088 4 0 |
| 3 | Deposits | 21 34,829 15 3 | 3 | Authorised Investments | 22 31 154 1 4 |
| 4 | Due to Bankers | " 65 571 0 6 | 4 | Bills for collection | 4 194 7 0 |
| 5 | Sundries | " 53 129 11 7 | 5 | Sundries | 32 592 10 4 |
| 6 | Bills for collection per contra | 4 194 7 0 | 9 | Cash in hand & with bankers | 1 00 983 15 2 |
| | Total | 27,17,725 2 4 | | Total | 27,17 725 2 4 |

UDIPI 4— , '33

**N. ANANDA RAO**
*Secretary & Manager*

( Regd. )

## ಅಮೃತಾಂಜನ.

ಇದು ಕಟ್ಟು, ಶಿರೋವೇದನೆ, ಕಪ್ಪುಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸಾಧ್ಯವಾದ ಚೇಳು, ಕೈಕಾಲು ಮರಗಟ್ಟುವುದು, ಉಂಬಾಗೂ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ದೊರಕುತ್ತದೆ

**ರಿಂಗ್‌ವರ್ಮ್ ಮುಲಾಮು** — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂ... ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

## ಡೋಂಗರೆ

ಇವರ

## ಬಾಲಾಮೃತ

ಇದನ್ನು ಕೊಡುವುದರಿಂದ ಮಕ್ಕಳು ಸಶಕ್ತರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ

ಏಜಂಟರು— ಹಾ ಕಂಪೆನಿ, ಮಂಗಳೂರು.

INSURE WITH

**The Popular Insurance Co. Ltd.**

Head Office - MANGALORE, S India

**First of its kind in the West Coast.**

CHAIRMAN

*Dewan Bahadur N Subba Rao*

*STRIKING FEATURES*

**Policy Conditions Liberal!**

**Claims Settlement Prompt!**

MANAGEMENT PURELY INDIAN

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS. LIBERAL TERMS TO COMPETENT MEN

*For further particulars apply to the Head Office.*

## ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!

ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿಯದೆ. ಮಾತೃದಯಾಯಕವಾದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರು ಈ ಎವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯ ಔಷಧವಾಗಿದೆ.

**ಮದ್ರಾಸಿನಲ್ಲಿ ದಿ ಒರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು.**

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್:-

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.**

---

ವೈದ್ಯ ಮೋಹನಲಾಲರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

## ಮದನಮಸ್ತಪಾಕ. ರಿಜಿಸ್ಟರ್ಡ್.

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಮೈನೋಸೋಣ, ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಬಲವಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೮ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫, ವಿ, ಪಿ. ರೂ. ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ. ೧೧. ಮೂರ ಡಬ್ಬಿಗೆ ರೂ. ೧೫॥ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಬಲಖಿ, ಎಲ್. ಎಮ್. ಎಂಡ್. ಎಸ್., ಜೆ. ಪಿ., ಮುಂಬಯಿ:— ಈ ಪಾಕ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಡಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ:— ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ.

ಪತ್ತೆ:— ವೈದ್ಯ ಮೋಹನಲಾಲ ಎಸ್. ಔಷಧಾಲಯ, ಮು. ಪೋ. ಮಿರಜ, S. M. C.

---

## ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣವಾಪಾಸು

### ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರೆ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಚಿಕ್ಕತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ಮುಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರ್ಣ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್ ಕೊಲ್ಹಾಪೂರ. ಬಾರ್ಶಿ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚ ೦||೦

### ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಸೆರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ, ಮೇ. ರಾ. ಎ. ಎಮ್. ಇನ್ಸಪೆಕ್ಟರ ಬೆಳಗಾಂವ:- ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ಗಂಟು ನಾಪತ್ತೆಯಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದುವು. ನನ್ನ ಮಕ್ಕಳ ಹೆಂಡತಿಯ ರಕ್ತ ಮತ್ತು ಬಿಳಿ ಸೆರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩. ವಿ. ಪಿ. ಆಣೆ ೮.

ವಿಳಾಸ— ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

---

## ಕೋ-ಆಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್**

ರಥಬೀದಿ, ಮಂಗಳೂರು

---

ಡಾಕ್ಟರ ವಾಮನ ಗೋಪಾಳರವರ

ಜಮೇಯಿಕ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ ಉಪಯೋಗಿಸುದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ ಫೊಸ್ಪರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್.

**ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,**

ಠಾಕುರದ್ವಾರ, ಮುಂಬಯಿ ೨. ಸ್ಟೋಕಿಸ್ಟ ಪೈ ಕಂಪೆನಿ,

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

---

ಕ್ಷಯಕ್ಷೀಣಾದಿಗಳಿಗೆ

## ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

## ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

## ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು.

---

THE SOUTH INDIA CO-OPERATIVE INSURANCE SOCIETY, LIMITED, MADRAS.

**LOCAL BOARD:—**

THE SOUTH CANARA CENTRAL CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

*FOR TERMS APPLY TO:—*

*The Secretary,*
South Canara Central Co-operative
Bank, Ltd., KODIALBAIL P. O. (Mangalore)
*SOUTH CANARA.*

---

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂತಹ

## ಚಕ್‌ರೋಲ್‌ಗಳು

ಮೂರು ಸ್ಯಾಜನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕೃಯುಕ್ತ್ಯಾ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಮೆನೇಜರ್,**
**ಶಾರದಾ ಛಾಪಖಾನೆ,**
**ರಥಬೀದಿ, ಮಂಗಳೂರು**


EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಚಂದಾಯು — ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ಕೆರದಿ ಕುಳಿತರೆ । ತೆರಳೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ।

ಪುಸ್ತಕ ೨೭. ಮಂಗಳೂರು ತಾ ೨೪ನೇ ಶುಕ್ರವಾರ ಮಾರ್ಚಿ ೧೯೩೩ (24-3-33) ಸಂಚಿಕೆ ೧೨


## THE CANARA BANKING CORPORATION, UDIPI, LTD.

## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras**

ಹೆಡ್ ಆಫೀಸು: — ಉಡುಪಿ ಶಾಖೆ — ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 28TH FEBRUARY, 1933

| | Capital and Liabilities | | | Property and Assets | |
|---|---|---|---|---|---|
| 1 | Paid up Capital | Rs. 2,25,000 0 0 | 1 | Premises, Building, Furniture etc | Rs 65 906 12 6 |
| 2 | Reserve and other funds | " 2,35,000 0-0 | 2 | Government securities | " 2 93,088 4 0 |
| 3 | Deposits | , 21,34,829 15 3 | 3 | Authorised Investments | , 22 21 154 1 4 |
| 4 | Due to Bankers | " 65,571 0 6 | 4 | Bills for collection | 4 194 7 0 |
| 5 | Sundries | " 53 129 11 7 | 5 | Sundries | , 32 592 10 4 |
| 6 | Bills for collection per contra | 4,194 7 0 | 9 | Cash in hand & with bankers | , 1 00 983 15 2 |
| | Total | 27,17,725- 2 4 | | Total | 27 17 725 2 4 |

UDIPI 4-3 '33

**N. ANANDA RAO**
*Secretary & Manager*

(Regd.)

## ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತದೆ

**ರಿಂಗ್‌ವರ್ಮ್ ಮುಲಾಮು** — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ವಾರೊಂದು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3-8-0 ಅಂಚೆವೆಚ್ಚ ಪ್ರತ್ಯೇಕ

### ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.



ಸಣ್ಣ ಹುಡುಗರ ಸಲುವಾಗಿ,

## ಡೋಂಗರೆ

ಇವರ

## ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು

**ಕೇ. ಟಿ. ಡೋಂಗರೇ ಕಂಪೆನಿ,**
ಗಿರಗಾಂವ, ಮುಂಬಾಯಿ.
ಮಂಗಳೂರು — ಶಾ ಕಂಪೆನಿ,



INSURE WITH

**The Popular Insurance Co. Ltd.**
Head Office -MANGALORE, S India
**First of its kind in the West Coast.**

CHAIRMAN
***Dewan Bahadur N. Subba Rao***

*STRIKING FEATURES*

**Policy Conditions Liberal!**
**Claims Settlement Prompt!**

MANAGEMENT PURELY INDIAN

**Ensure the Absolute Safety, Comfort and Happiness of your Dear Ones**

WANTED INFLUENTIAL AGENTS
LIBERAL TERMS TO COMPETENT MEN.

*For further particulars apply to the Head Office.*




ಕುಟುಂಬದ ಆರೋಗ್ಯ ಮತ್ತು
ಶಕ್ತಿಗಾಗಿ ದಿವ್ಯ ಪಾನೀಯ

ನಿಮ್ಮ ಮನೆಯಲ್ಲಿ ರುಚಿಕರವಾದ 'ಓವಲ್ಟಿನ್'ನನ್ನೇ ಪಾನೀಯವಾಗಿ ಉಪಯೋಗಿಸಿರಿ ನಿಮ್ಮ ಕುಟುಂಬಿಕರ ಆರೋಗ್ಯವನ್ನು ಅದು ವೃದ್ಧಿಸಿ, ನಿರೋಗಿಗಳನ್ನಾಗಿ ಮಾಡುತ್ತದೆ.

ಪ್ರಕೃತಿಯ ಟೋನಿಕ್ ಆಹಾರಗಳಿಂದಲೇ 'ಓವಲ್ಟಿನ್ನನ್ನು ತಯಾರಿಸಲಾಗಿದೆ ಶ ವ ಬೆಳೆದ ಬಾರ್ಲಿ, ಮೋಲ್ಟ್, ದನದ ದಪ್ಪ ಹಾಲು, ಕೊಕ್ಕೊಗಳನ್ನುಪಯೋಗಿಸಿದೆ ಆರೋಗ್ಯ ವರ್ಧನೆಗೂ ಅದರ ದೃಢತೆಗೂ ಇದು ಸಮತೂಕದ ಪೋಷಣೆಯನ್ನೀಯುತ್ತದೆ ವೀರ್ಯ ವೃದ್ಧಿ-ಬಲವೃದ್ಧಿಯಾಗುತ್ತದೆ ಇದನ್ನು ತಯಾರಿಸುವಾಗ ಹಸ್ತಸ್ಪರ್ಶವಾಗುವುದಿಲ್ಲ

# OVALTINE
TONIC FOOD BEVERAGE

**ಮೆದುಳು, ನರ, ದೇಹಗಳನ್ನು ಇದು ಬೆಳೆಸುತ್ತದೆ**

ಬಜಾರದ ಎಲ್ಲಾ ಕೆಮಿಸ್ಟರುಗಳಲ್ಲಿಯೂ ದೊರೆಯುತ್ತದೆ

ಏಜಂಟರು ಜೇಮ್ಸ್ ರ್‍ಯಾಟ್, 8ಎ. ರಿಪನ್‌ಸ್ಟ್ರೀಟ್, ಕಲ್ಕತ್ತಾ, ಮತ್ತು ಮುಂಬಾಯಿ ಮದರಾಸ್ ರಂಗೂನುಗಳಲ್ಲಿ

OV/131


## ದಮ್ಮಯ್ಯ – ಸಾಕಾಯ್ತು!

ಜಮ್ನಾದಾಸ ದ್ವಾರಕಾದಾಸರೆಂದರೆ ಪ್ರತಿಭಾಸಂಪನ್ನ ರಾಷ್ಟ್ರೀಯವಾದಿಗಳು ಪಾಪ! ಕುಶಲಮತಿಯರಾದ ಅವರು ಗಾಂಧೀಗಲಾಟೆಯಲ್ಲಿ ಜೈಲನ್ನು ಸೇರಿ ಹೊಟ್ಟೆಯ ಭಾರವನ್ನು ಕಳೆದುಕೊಂಡು ಕ್ಷೀಣರಾದರು

× × × ×

ಜೈಲನ್ನು ಸೇರುವಾಗ ಇವರು "ಸರಕಾರದ ಕಿವಿಗೆ ಚೆನ್ನಾಗಿ ಕಚ್ಚಿ ಘಾಯಗೊಳಿಸಬೇಕೆ"ಂಬ ನಿರ್ಧಾರದಿಂದಿದ್ದರು ಆದರೇನು?— ಸೆರೆಯ ಕತ್ತಲೆಯನ್ನು ನೋಡುತ್ತಲೇ ಇವರ ಉಸಿರು ಇಸ್ಸೋ!

× × + ×

ಹೊಕ್ಕುದುದಕ್ಕೆ ಹೊರಬಂದರೆ ಸಾಕೆನಿಸಿತು ಕೊನೆಗೆ ಹೇಗೂ ಮಾಡಿ ಆಲೋಚಿಸಿ "ಇನ್ನು ನಾನು ಕಾಂಗ್ರೆಸಿನ ಕಾಯಿದೆಭಂಗ ಚಳವಳಿಗೆ ಸೇರುವುದಿಲ್ಲ" ಎಂದು ಹೇಳಿ ಬಿಡುಗಡೆ ಹೊಂದಿ, ಸಂತೋಷದಿಂದ ಹೊರಗೆ ಬಂದು ಹಾರಿದರು.

× × × ×

ಈಗ ಇವರು "ಯಾಕಯ್ಯ ನಮಗೆ ಈ ಗಾಂಧಿಯ ಗಲಾಟೆ? ಗಾಂಧಿ ಏನು ಮಾಡಿದೆ? ಏನೂ ಫಲವಿಲ್ಲ! ಅದರಿಂದ ಯಾವ ಕಾರ್ಯವೂ ಆಗಿರುವುದಿಲ್ಲ! ಅದು ನನಗೆ ಗೊತ್ತು! ನಾನು ಸೆರೆಗೆ ಹೋಗಿ ಅನುಭವಿಸಿದೆ! ಏನಾದರೂ ಫಲವಾಯಿತೇ?" ಎಂದು ಉಪದೇಶಿಸಲು ತೊಡಗಿರುವರು.

× × × ×

ಇವರ ಈ ಮಾತನ್ನು ಅನುಮೋದಿಸಿ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ"ಯು 'ಹೌದು! ಗಾಂಧೀಗಲಾಟೆ ಬಿಟ್ಟು, ಸರಕಾರದೊಡನೆ ಈಗಲಾದರೂ ಸೇರಿ ನಡೆಯಿರಿ' ಎಂದಿತು. ಹಾಗೆ ಹೇಳುವ ನಿನ್ನ ಔದಾರ್ಯ! ಸರ್ವೆಂಟ್ ಎಂಬ ನಿನ್ನ ನಾಮವು ಅನ್ವರ್ಥವಾಯಿತು!

× × × ×

ಜಮ್ನಾದಾಸರು ದಮ್ಮಯ್ಯ ಹಾಕಿ ಕೃತಾರ್ಥರಾದರು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು "ಸಾಕಾಯ್ತು' ಎಂದು ಕೃತಕೃತ್ಯರಾದರು. ಇನ್ನೇನು?

× + + ×

ಈ ಬುದ್ಧಿವಂತರು ತಮ್ಮ ಅಭಿಪ್ರಾಯವನ್ನು ಗಾಂಧಿಗೆ ಹೇಳಿ ಕಳುಹಿಸಿದರು ಆದರೆ ಆ ಮುದುಕ ಎಂತವ? 'ದೇವರಿದ್ದಾನೆ!' ಎಂದು ಉತ್ತರ ಕೊಟ್ಟು ಚರಕದಲ್ಲಿ ನೂಲು ತೆಗೆಯಲು ಪ್ರಾರಂಭಿಸಿದ' ಇವ ಯಾರಿಗಾಗಿ ನೂಲು ತೆಗೆಯುವುದೋ ನನಗೆ ತಿಳಿಯದು

× + × ×

ಸರಕಾರದ ಶ್ವೇತಪತ್ರ ಔಟ್ ಆಗಿದೆ, ಕೆಲವರು ಅದನ್ನು ದೇಶದಿಂದಲೇ ಔಟ್ ಮಾಡಲೆಳಸುತ್ತಾರೆ ಗಾಂಧಿಯನ್ನು ಸೆರೆಯಿಂದ ಔಟ್ ಮಾಡಿ ಎನ್ನುತ್ತಾರೆ!

× × × ×

ಈ ಜಮ್ನಾದಾಸರಿಗೂ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೂ ದಮ್ಮಯ್ಯ ಹಾಕಲು ತಿಳಿದಿದೆ ಆದರೆ, ಗಾಂಧಿಯನ್ನು ಸೆರೆಯಿಂದ ಔಟ್ ಮಾಡಿ ಪೂಜ್ಯಗೊಳಿಸುವಷ್ಟು ಯೋಗ್ಯತೆಯಿಲ್ಲವೇ?

× × + ×

ಅದಕ್ಕೆ ಯೋಗ್ಯತೆ ಉಂಟೆಂದಾದರೆ ಇದಕ್ಕೇಕೆ ಯೋಗ್ಯತೆಯಿಲ್ಲ? ಇದಕ್ಕೆ ಯೋಗ್ಯತೆಯಿಲ್ಲವಾದರೆ ಉಪದೇಶವೇಷವೇಕೆ?

× × + ×

ಇವರಿಗೀಗ ಬುದ್ಧಿ ಬಂದಿದೆ—ಒಳ್ಳೇದೇ ಆಯಿತು! ಬುದ್ಧಿವಂತರು ತಮ್ಮ ಬುದ್ಧಿವಂತಿಕೆಯನ್ನು ತೋರ್ಪಡಿಸಿ ಇನ್ನು ಸೆರೆಯಲ್ಲಿರುವ ಆ ಮುದುಕನನ್ನು ಸೆರೆಯಿಂದ ಹೊರ ತರುವಂತೆ ಮಾಡುವ ಕೆಲಸ ಈ ಪುರುಷಾರ್ಥದಲ್ಲವೆ?

× × × ×

ಶಿರ್ವದಲ್ಲೊಂದು ಆಗರ್ಜೆಯಂತೆ ಅಲ್ಲಿಯ ರೈತರು ಬೇರೆ ದಾರಿ ಹಿಡಿದಿದ್ದಾರಂತೆ ಅವರ ಉಪದೇಶದ ಕ್ರಿಯೆ ಈಗ ಅಷ್ಟಿಲ್ಲವಂತೆ ಉಪದೇಶಕರು ಉತ್ತಮರಾದರೆ ಶಿಷ್ಯರೂ ಉತ್ತಮರಾಗುತ್ತಾರೆ

× × × × + + ×

ದೇಶಕ್ಕೆ ಉಪದೇಶವೀಯುವ ಈ ದಾಸರೂ, ಈ ದೇಶಸೇವಕರೂ ಗಾಂಧಿಯನ್ನು ಬಿಡುಗಡೆ ಮಾಡಿಸುವರೇ? ಅಥವಾ ಗಾಂಧಿಯನ್ನು ದೂರ ತೂಗುವರೇ?

× × × × +

ಕಾಯಿದೆಭಂಗ ಪ್ರಯೋಜನವಿಲ್ಲ ನಿಜ, ಆದರೆ ಗಾಂಧಿಯ ಪ್ರಯೋಜನವಿಲ್ಲವೋ? ಗಾಂಧಿಯನ್ನು ಹೊರ ತರುವಂತೆ ಸರಕಾರಕ್ಕೆ ದಮ್ಮಯ್ಯ ಹಾಕಿ – ಎಲ್ಲಾ ಸರಿಹೋಗುತ್ತೆ!

× × ×

ಬಾಯಿಯಲ್ಲಿ ದಮ್ಮಯ್ಯವಿಟ್ಟು ಸುಮ್ಮನಿರುವುದು ಬುದ್ಧಿವಂತರ ಲಕ್ಷಣವಲ್ಲ ಉಪದೇಶದ ಬದಲಿಗೆ ಕಾರ್ಯವಾಗಬೇಕು. ಗಾಂಧಿಯನ್ನಾಗಲೀ ಅವರ ಕಾರ್ಯಕಲಾಪಗಳನ್ನಾಗಲೀ ದೂರಿದರೆ ಸಾಗದು

× × × ×

ಸರಕಾರವು ಶ್ವೇತಪತ್ರ ಹೊರಡಿಸಿ ಒಂದು ಸೇರನ್ನು ಗಾಂಧಿಯವರಿಗೆ ಸೆರೆಯೊಳಗೆ ಕಳುಹಿಸಲಿಲ್ಲವಂತೆ! ಹೀಗೆ ದಮ್ಮಯ್ಯ ಕ್ರಿಯೆಯನ್ನದು ತೋರಿಸುವ ಬದಲು ಒಂದು ಗಾಂಧಿಗೆ ಕಳುಹಿಸುವ ಬಗೆ ವಿಚಾರವು ಮಾಡಲಾರೆವು!

"ಕ್ರಾಂತಿ"

ಕೇಂದ್ರ ಸರಕಾರ—ಹೊರ ಊರಿಗೆ ರೂ. ೩—೦—೦. Regd. M. No. 490. ಅಂಚೆ ಖರ್ಚು ಸೇರಿ ರೂ. ೩—೧೨—೦.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಶ್ವೇತಪತ್ರ. ಮಂಗಳೂರು ತಾರೀಕು ೧೯ನೇ ಆದಿತ್ಯವಾರ ೧೯೩೩. ವಿಶೇಷ ಸಂಚಿಕೆ.

## ಇಂಗ್ಲಾಂಡು ಇಂಡಿಯಾಗಳಲ್ಲಿ ಶ್ವೇತಪತ್ರ ಪ್ರಕಟಣೆ.

## ಸ್ವಾತಂತ್ರ್ಯ ಈಗಿಲ್ಲ! ಇದನ್ನು ಸ್ವೀಕರಿಸಿರಿ'

## ವೈಸರಾಯ ಗವರ್ನರುಗಳಿಗೆ ವಿಶೇಷಾಧಿಕಾರ!

## ಗಾಂಧಿಜೀಯವರ ಬಿಡುಗಡೆಯಾಗಲಿದೆಯೋ?

ಮೂರು ರೌಂಡ್‌ಟೇಬಲ್ ಪರಿಷತ್ತುಗಳ ಪರಿಣಾಮವಾಗಿ ಸರಕಾರವು ತಾ ೧೮ನೇ ದಿನ ತನ್ನ ಮುಂದಿನ ರಾಜ್ಯಭಾರ ಧೋರಣೆಗಳ ಕುರಿತಾದ ಶರ್ತಗಳನ್ನು (White Paper) ಶ್ವೇತಪತ್ರದ ರೂಪದಿಂದ ಪ್ರಕಟಿಸಿರುತ್ತದೆ ಇಂಡಿಯಕ್ಕೆ ಯಾವ ರೀತಿಯ ರಾಜ್ಯಾಂಗವನ್ನು ಬ್ರಿಟಿಷ ಸರಕಾರವು ದಾನಮಾಡಲಿರುತ್ತದೋ ಎಂದು ಸಂಶಯಿಸುತ್ತಿದ್ದ ಹಿಂದೀಯರ ಕುತೂಹಲವು ಇಂದಿಗೆ ಶಮನವಾಯಿತು ಇತಿಹಾಸ ಪ್ರಸಿದ್ಧವಾಗುವ ಶ್ವೇತಪತ್ರ ಶರ್ತಗಳನ್ನರಿತ ಸಮಗ್ರ ಭಾರತವರ್ಷವು ನಿರಾಶೆಯಿಂದ ದಂಗುಬಡೆಯಲ್ಪಟ್ಟಿತು

**ಶ್ವೇತಪತ್ರದಲ್ಲಿನ ಭಾವಾರ್ಥಗಳು**:-ಇಂಡಿಯದ ಆಶಯವನ್ನು ಬ್ರಿಟಿಷ ಸರಕಾರವು ಅರಿತಿದ್ದು, ಅದು, ಮೂರು ರೌಂಡ್‌ಟೇಬಲ್ ಪರಿಷತ್ತುಗಳನ್ನು ಜರಗಿಸಿ, ಕೊನೆಯದರಲ್ಲಿ ಹಿಂದೂಸ್ಥಾನದ ಭಾವೀ ರಾಜ್ಯಾಂಗರಚನೆಯ ಕುರಿತಾಗಿ ವಿವೇಚಿಸಿ, ಈಗ ಶ್ವೇತ ಪತ್ರವನ್ನು ಪ್ರಕಟಿಸಿರುತ್ತದೆ ಭಾರತಮಂತ್ರಿಗಳು ಕಳೆದ ಜೂನ್ ೨೭ರಲ್ಲಿ ಹೇಳಿದಂತೆ ಈ ಶ್ವೇತಪತ್ರದ ಶಿಫಾರಸುಗಳ ಪರಾಮರ್ಶೆಯ ಬಗ್ಗೆ ಬ್ರಿಟಿಷ ಸರಕಾರವು ಕೆಲವು ಸಮಯದ ನಂತರ ಜ್ವಾಯಿಂಟ್ ಸಿಲೆಕ್ಟ ಕಮಿಟಿಯೊಂದನ್ನು ಕರೆಯುವುದು ಇದು ಶ್ವೇತಪತ್ರದ ಶಿಫಾರಸುಗಳನ್ನು ಚರ್ಚಿಸಿದ ನಂತರ ಸಾರ್ವಭೌಮ ಸರಕಾರವು ಒಂದುಬಿಲ್(ಶಾಸನ)ವನ್ನು ಪ್ರಕಟಿಸುವುದು ಶ್ವೇತಪತ್ರದಲ್ಲಿರುವ ಶಿಫಾರಸು ಶರ್ತಗಳು ಸಂಪೂರ್ಣವಲ್ಲ, ಕಾಲಕ್ರಮೇಣ ಸರಕಾರವು ಅವುಗಳನ್ನು ಬೇಕಾದಂತೆ ಮಾರ್ಪಾಟುಗೊಳಿಸುವುದು ಹಿಂದೂದೇಶವನ್ನು ಸಂಯುಕ್ತ ರಾಜ್ಯವನ್ನಾಗಿ ಪರಿವರ್ತಿಸುವ ಈ ಸಾಹಸದಲ್ಲಿ ಪ್ರಕೃತದಲ್ಲಿರುವ ಹಿಂದೀಯ ರಾಜ್ಯಾಂಗ ಶಾಸನವು ಪುನರ್ಸಂಘಟಿತವಾಗುವುದು ೧೮ನೇ ಶತಮಾನದಿಂದ ಜಾರಿಯಲ್ಲಿದ್ದ ಇಂಡಿಯಾ ಏಕ್ಟ್ ಎಂಬುದರ ರದ್ದತಿಯಾಗಿ, ಅದರ ಸ್ಥಳವನ್ನು ಪಾರ್ಲಿಮೆಂಟಿನ ಅನುಮೋದನೆಯನ್ನುಳ್ಳ ರಾಜ್ಯಾಂಗರಚನಾ ಶಾಸನ (Constitution Act)ವು ಆಕ್ರಮಿಸುವುದು. ನವೀನ ರಾಜ್ಯಾಂಗ ರಚನೆಯಲ್ಲಿ ಪರಾಮರ್ಶಿಸಲ್ಪಡುವ ವಿಷಯಗಳಿವು:-

**ಫೆಡರೇಶನ್ ಎಂದರೆ ದೇಶದ ಪ್ರಾಂತ್ಯಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು ಆ ಪ್ರಾಂತ್ಯಗಳನ್ನೂ ಮತ್ತು ಇತರ ಸಂಸ್ಥಾನಗಳನ್ನೂ ಸಂಯುಕ್ತ ಮಾಡಿ, ಅವೆಲ್ಲವುಗಳಿಗೆ ಸಮಾನವಾದ ವಿಷಯಗಳ ಮೇಲೆ ಅಧಿಕಾರ ನಡೆಸಲು ಒಂದು ಕೇಂದ್ರ ಸರಕಾರವನ್ನು (Central Government) ರಚಿಸುವ ಕ್ರಮ ಈ ಕೇಂದ್ರ ಸರಕಾರವು ಸಾರ್ವಭೌಮರ ಪ್ರತಿನಿಧಿ ಎಂದೆನಿಸುವ ಗವರ್ನರ ಜನರಲರ ಕೈಕೆಳಗಿರುವುದು. ಆದರೆ ಹಿಂದೂದೇಶದಲ್ಲಿ ಈ ತೆರದ ಸಂಘಟನೆಯು ಮುಂಚೆ ಎಂದೂ ಆಗಿದ್ದಿಲ್ಲ.**

**ಸಂಸ್ಥಾನಗಳು ಈಗ ಸಾರ್ವಭೌಮರ ಅಧೀನದಲ್ಲಿರುವುವಾದರೂ, ಅವುಗಳು ಅವರ ಸಾಮಂತ ರಾಜ್ಯವಾಗಿರುವುದಿಲ್ಲ** ಸಂಸ್ಥಾನಾಧಿಪರೂ ವೈಸರಾಯರೂ ಸಂಸ್ಥಾನಗಳಾಡಳಿತೆಯನ್ನು ನೋಡುತ್ತಿದ್ದಾರೆ ಸಂಸ್ಥಾನಗಳನ್ನು ಸಂಯುಕ್ತ ರಾಜ್ಯಕ್ಕೆ ಒತ್ತಾಯದಿಂದ ಸಾರ್ವಭೌಮ ಸರಕಾರವು ಸೇರಿಸಿಕೊಳ್ಳಲಸಾಧ್ಯವಾದುದರಿಂದ ಸಂಯುಕ್ತ ರಾಜ್ಯಾಂಗದಲ್ಲಿ ಸಂಸ್ಥಾನಗಳು ಸೇರಿಕೊಳ್ಳುತ್ತವೋ ಎಂಬ ಕುರಿತು ಅವುಗಳ ಪ್ರತ್ಯಪ್ರತ್ಯೇಕ ಅಧಿಪತಿಗಳ ಅನುಮತಿಯನ್ನು ಪಡೆಯಬೇಕಾಗಿದೆ

ಆದರೆ ಪ್ರಾಂತ್ಯಗಳು ಕೇಂದ್ರಸರಕಾರಕ್ಕೆ ಎಷ್ಟು ಅಧಿಕಾರವನ್ನು ಕೊಟ್ಟಿರುವುವೋ ಅಷ್ಟನ್ನು ಸಂಸ್ಥಾನಾಧಿಪತಿಗಳು ತಮ್ಮ ರಾಜ್ಯದಿಂದ ಕೊಡಲು ಇನ್ನೂ ಒಪ್ಪಿರುವುದಿಲ್ಲ

ಅದಕ್ಕಾಗಿ ಬ್ರಿಟಿಷ ಇಂಡಿಯದ ಪ್ರತಿನಿಧಿಗಳನ್ನು ಸಂಸ್ಥಾನಾಧಿಪತಿಗಳು ನೇಮಿಸಿದ ತಮ್ಮ ಸಂಸ್ಥಾನದ ಪ್ರತಿನಿಧಿಗಳನ್ನೂ ಸೇರಿಸಿ ಒಂದು ಸಂಯುಕ್ತ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಲಿರುವೆವು ಇದಕ್ಕೆ ಜವಾಬ್ದಾರಿಯಾಗಿ ಒಂದು ಮಂತ್ರಿಮಂಡಲವಿದ್ದು ಗವರ್ನರ ಜನರಲರಿಗೆ ಸರಕಾರವನ್ನು ನಿಯಂತ್ರಿಸಲು ಸಹಾಯ ಮಾಡುವುದು. ಈ ಮಂಡಲಕ್ಕೆ ಯಾವ ವಿಷಯಗಳ ಮೇಲೆ ಅಧಿಕಾರ ಕೊಟ್ಟಿರುತ್ತದೋ ಅವುಗಳನ್ನು ಮಾತ್ರ ಅವರು ಕಾರ್ಯಕ್ಕೆ ಹಚ್ಚಬಹುದು

ಇವರೆಲ್ಲರೂ ತಂತಮ್ಮ ಮೇಲಿರುವ ಜವಾಬ್ದಾರಿಕ ಅಧಿಕಾರಗಳಿಂದ ಬ್ರಿಟಿಷ ಇಂಡಿಯದ ಆಡಳಿತೆಯನ್ನು ತಂತಮಗೆ ಸುಸೂತ್ರವಾಗಿ ಕಂಡಂತೆ ಐಕ್ಯರಾಗಿ ನಡೆಸುವರು ರಾಜ್ಯರಚನೆ ಶಾಸನಕ್ಕೊಪ್ಪದಿರುವ ಯಾವ ಸಂಸ್ಥಾನವನ್ನೂ ಸಂಯುಕ್ತ ರಾಜ್ಯಾಂಗಣಕ್ಕೆ ಸೇರಿಸಿಕೊಳ್ಳಲಿಡೆಕೊಡದ ಸರ್ವ ಹಕ್ಕುಗಳು ಸಾರ್ವಭೌಮ ಸರಕಾರಕ್ಕಿರಬೇಕು ಈಗಿನ ಇಂಡಿಯಾ ಏಕ್ಟ ರದ್ದತಿಯಾದ ಮೇಲೆ ಬ್ರಿಟಿಷ ಇಂಡಿಯದ **ರಾಜ್ಯಭಾರಕ್ಕೆ ಸಂಬಂಧ ಪಡುವ ಎಲ್ಲಾ ಅಧಿಕಾರವನ್ನು ಸಾರ್ವಭೌಮರ ಕೈಯಲ್ಲಿ ಕೊಡಲಾಗುವುದು. ಪುನರ್ಸಂಘಟನೆಯ ಈ ಅವಧಿಯಲ್ಲಿ ರಾಜ್ಯಾಡಳಿತೆಯ ಭಾರವು ರಾಜ್ಯಾಂಗರಚನಾ ಶಾಸನ ಪ್ರಕಾರ ಸಾರ್ವಭೌಮರ ಪ್ರತಿನಿಧಿಯಾಗಿರುವ ಗವರ್ನರ್ ಜನರಲ್, ಗವರ್ನರರು ಮತ್ತು ಇನ್ನಿತರ ಅಧಿಕಾರಿಶಾಹಿಯ ಕೈಯಲ್ಲಿರುವುದು. ಫೆಡರಲ್ ರಾಜ್ಯಭಾರದ ಮೇಲಧಿಕಾರವು ಗವರ್ನರಜನರಲರಲ್ಲೇ ಇರುವುದು.**

ಸಂಯುಕ್ತ ಸರಕಾರದ ಗವರ್ನರ್ ಜನರಲರನ್ನು ರಾಜಶಾಸನ ಪ್ರಕಾರ ಆರಿಸಲಾಗಿ ಅವರು ನಿರ್ವಹಿಸಬೇಕಾದ **ಕರ್ತವ್ಯಕಾರ್ಯಗಳು ಸಾರ್ವಭೌಮರ ಅಧಿಕಾರಪತ್ರ ಮೂಲಕ ಸೂಚಿತವಾಗುವುವು; ತದನಂತರ ಅವರು ಸಾರ್ವಭೌಮರ ಪ್ರತಿನಿಧಿಯಾಗಿ ರಾಜ್ಯವನ್ನಾಳುವರು. ಗವರ್ನರ ಜನರಲರಿಗೆ ಸಾರ್ವಭೌಮರೇ ರಾಜ್ಯಭಾರ ಸೂಚನೆಗಳನ್ನೀಯುವರು. ಪ್ರತಿಯೊಂದು ಪ್ರಾಂತ್ಯದ ಗವರ್ನರರಿಗೂ ಇದೇ ರೀತಿ ಸೂಚನೆಗಳನ್ನು (Instrument of Instructions) ಕೊಡಲಾಗುವುದು.**

ಬ್ರಿಟಿಷ್ ಹಿಂದೂಸ್ಥಾನದ ರಾಜ್ಯಘಟನೆಯನ್ನು ಮಾಡಬೇಕಾದರೆ ಪ್ರಥಮದಲ್ಲಿ ಪ್ರತ್ಯಪ್ರತ್ಯೇಕ **ಪ್ರಾಂತಿಕ ಸ್ವಯಂ ಪ್ರಭುತ್ವವನ್ನು** ಕಲ್ಪಿಸಬೇಕು; ಅವುಗಳಿಗೆ ತಂತಮ್ಮ ಸರಕಾರದಾಡಳಿತೆಗಳನ್ನು ಒಪ್ಪಿಸಿಕೊಡಬೇಕು ಹೀಗಿರುವುದರಿಂದ ಈ ಸ್ವಸತ್ತಾತ್ಮಕ ರಾಜ್ಯಗಳಿಗೆ ಒಬ್ಬೊಬ್ಬ ಗವರ್ನರನನ್ನು ನಿಯಮಿಸಬೇಕೆಂದೂ, ಆ ಗವರ್ನರರು ಸಾರ್ವಭೌಮರ ಅಧಿಕಾರಪತ್ರದ ಮೇರೆಗೆ ರಾಜ್ಯಭಾರ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳಬೇಕೆಂದೂ, ಈ ಗವರ್ನರರಿಗೆ ಮಂತ್ರಾಲೋಚನೆಗಳನ್ನೀಯಲು ಆಯಾಯ ಪ್ರಾಂತ್ಯದಲ್ಲಿ ಮಂತ್ರಿಗಳ ಕೌನ್ಸಿಲುಗಳನ್ನು ಸ್ಥಾಪಿಸಬೇಕೆಂದೂ, ನೇಮಿಸಲ್ಪಟ್ಟ ಮಂತ್ರಿಗಳು ಪ್ರಾಂತ್ಯದ ಜನತೆಯ ಪ್ರತಿನಿಧಿಗಳಾಗಿರಬೇಕೆಂದೂ-ಹೀಗೆ ಪ್ರಾಂತಿಕ ಸ್ವಾತಂತ್ರ್ಯ ಸರಕಾರವು ಮುಂದಡಿಯಿಡಬೇಕೆಂದೂ ಯೋಚಿಸಿಕೊಳ್ಳಲಾಗಿದೆ.

ರಾಜ್ಯ ರಚನಾ ಶಾಸನವನ್ನು ಸ್ವೀಕರಿಸುವುದರೊಡನೆ ಸಂಯುಕ್ತ ರಾಜ್ಯಭಾರ ಕ್ರಮವನ್ನು ಉಪಯೋಗಿಸಲಾಗುವುದಿಲ್ಲ ಈ ಶಾಸನವು ಮೊದಲು ಶಾಸನಗ್ರಂಥ (Statute Book)ಕ್ಕೆ ಸೇರಿಸಲ್ಪಡಬೇಕು ಕೂಡಲೆ ಕಾಲವು ಪಕ್ವವಾದೊಡನೆ ಫೆಡರೇಶನ್ ರಾಜ್ಯಭಾರ ಕ್ರಮವನ್ನು ರಾಜಾಜ್ಞೆ ಪ್ರಸಾರಣೆಯ ಮೂಲಕ ಕಾರ್ಯಕ್ಕೆ ತರಬೇಕು ಈ ಫೆಡರೇಶನನ್ನು ಕಲ್ಪಿಸಿಕೊಡಬೇಕಾಗಿ ಪಾರ್ಲಿಮೆಂಟಿನ ದ್ವಿಪಕ್ಷಗಳವರೂ ಸಮ್ರಾಟನೊಡನೆ ಅರಿಕೆಮಾಡಿಕೊಳ್ಳಬೇಕು ಕೇಂದ್ರ ಸರಕಾರದ ಯೋಜನೆಯಾಗುವ ಪ್ರಥಮದಲ್ಲೇ, ಸಂಸ್ಥಾನಗಳು ತಮ್ಮೊಡನೆ ಸಮ್ಮಿಳಿತ್ತವಾಗುವ ಮೊದಲೇ ಪ್ರಾಂತಿಕ ಸರಕಾರಗಳ ಕಲ್ಪನೆಯಾಗುವುದು ಸ್ವಾಭಾವಿಕ ಮತ್ತು ಅಗತ್ಯವಿದೆ ಭಾರತವರ್ಷಕ್ಕೆ ಮುಂದಕ್ಕೆ ಸಂಯುಕ್ತ ಸರಕಾರವು ಲಭ್ಯವಾಗುವುದೆಂಬ ದೃಷ್ಟಿಯಿಂದಲೇ ಈ ರಾಜ್ಯ ಸಂಘಟನಾ ಶಾಸನವಿದೆ **ಪ್ರಾಂತಿಕ ಸ್ವರಾಜ್ಯ ಸೂತ್ರವನ್ನು ಮುಂದಿಟ್ಟಿರುವುದು ಪ್ರಥಮ ಹೆಜ್ಜೆಯ ರೂಪದಿಂದಾಗಿಯೇ ಹೊರತು ಬೇರೆಯಲ್ಲ;** ಹಾಗೂ ಜನ ಸಮುದಾಯವು ಈ ಪ್ರಾಂತಿಕ ಸ್ವರಾಜ್ಯ ಯೋಜನೆಗೆ ಸಮ್ಮತಿಸದೆ ವಿಘ್ನಗಳುತ್ಪನ್ನವಾಗುವುವಾದರೆ, ಹಿಂದೀಯ ಅಭಿಮತದ ಮೇರೆಗೆ ರಾಜ್ಯದ ಪುನರ್ಘಟನೆಯಾಗುವುದೆಂದೂ ಸಮ್ರಾಟ ಸರಕಾರವು ಮತಪಟ್ಟಿರುತ್ತದೆ

ಸಂಯುಕ್ತ ಸರಕಾರದ ಮೇಲಿನ ಅಧಿಕಾರ ಜವಾಬ್ದಾರಿಕೆಗಳು ಸಮ್ರಾಟನ ಹಸ್ತದಲ್ಲಿರುವುವು. ಅವರ ಪ್ರತಿನಿಧಿಯಾಗಿ ಗವರ್ನರ ಜನರಲರವರು ವಿಧಾಯಕ ಕಾರ್ಯಗಳನ್ನು ನಿರ್ವಹಿಸುವರು ಈ ಗವರ್ನರ ಜನ

# THE National Steamship Co.,

**S. S. 'LAXMI'**

ದಿ ನೇಶನಲ್ ಸ್ಟೀಮ್ ಶಿಪ್ ಕಂಪನಿ,

ಎಸ್. ಎಸ್. “ಲಕ್ಷ್ಮಿ”



Regular Sailngs
Between
Bombay and Mangalore
every ten days.
Purely Indian Company
Indian Capital & Indian Management

*Agents*
Messrs. KERWAR & Co.,
Mangalore.

ಪ್ರತಿ ಹತ್ತು ದಿನಗಳಿಗೊಮ್ಮೆ
ಮುಂಬಾಯಿ ಮಂಗಳೂರುಗಳೊಳಗೆ.
ತಪ್ಪದೆ ಪ್ರಯಾಣ ಬೆಳೆಸುವುದು
ಸರಕುಗಳನ್ನು ಜಾಗ್ರತೆಯಿಂದ ಒಯ್ಯುತ್ತದೆ
ಹಿಂದೀಯ ಬಂಡವಾಳ, ಹಿಂದೀಯ ಆಡಳಿತೆ
ಹಿಂದೀಯ ಕಂಪೆನಿ

ಏಜಂಟರು
ಮೆಸರ್ಸ್ ಕರ್ವಾರ್ ಎಂಡ್ ಕೊ,
ಮಂಗಳೂರು.

# Zenith Life Assurance Co., Ltd., Mangalore.

**Z**enith reached its Zenith in Prosperity'
**E**ncourage this purely Indian Concern
**N**atural depression everywhere! But Zenith Company thrived
**I**ncrement in Assets counts 5 times more
**T**remendous progress in Deposits
**H**ome after home is insured daily in Zenith

## You pay less = but = receive more!

***Ere it is sunset you get the claim!***

**Prompt payment is our motto and asset!**

***For Agencies in unrepresented areas write at once to—***

**Head Office—Bombay, Branches—Calcutta, Madras, Lahore, Karachi, Mangalore Calicut, Delhi, Goa, Ahmedabad, Poona, Lucknow, Belgaum, Surat, Nagapur, Cochin, Baroda, Benares.**

***Branch Managers:***

## MESSRS. KERWAR & CO.,
**MANGALORE.**

ರರಿಗೆ ಮಂತ್ರಿಮಂಡಲವೊಂದು ಸಲಹೆಗಳನ್ನು ಕೊಟ್ಟು ಮಾರ್ಗದರ್ಶಕವಾಗುವುದು. ಈ ಮಂತ್ರಿಮಂಡಲವನ್ನು ಬ್ರಿಟಿಷ ಇಂಡಿಯಾ ಮತ್ತು ಸಂಸ್ಥಾನಗಳ ಪ್ರತಿನಿಧಿ ವರ್ಗದಿಂದ ಚುನಾಯಿಸಲಾಗುವುದು. ಪ್ರಾಂತ್ಯಗಳಲ್ಲಿನ ಗವರ್ನರರುಗಳಿಗೆ ಮಂತ್ರಿಮಂಡಲವೇ ಮಾರ್ಗದರ್ಶಕವಾಗುವುದು. ಭದ್ರತೆ, ಬಾಹ್ಯವ್ಯವಹಾರ ಮತ್ತು ಚರ್ಚ ಸಂಬಂಧಗಳಾದ ಆಡಳಿತಗಳು ಸಂಪೂರ್ಣವಾಗಿ ಗವರ್ನರ ಜನರಲರ ಕೈಯಲ್ಲಿರತಕ್ಕದ್ದು. ಈ ವಿಷಯಕವಾದ ಜವಾಬ್ದಾರಿಗಳು ಸಮ್ರಾಟರ ಮತ್ತು ಪಾರ್ಲಿಮೆಂಟಿನವರ ಕೈಯೊಳಗಿರತಕ್ಕದು. ರಕ್ಷಣಾ ಸಂಬಂಧ ವ್ಯವಹಾರಾಧಿಕಾರರಚನೆಯ ಹಕ್ಕುಬಾಧ್ಯತೆಗಳು ಈಗಿರುವಂತೆ ವೈಸರಾಯರಲ್ಲೇ ಇರುವುವು. **ಯಾವ ವಿಷಯಗಳ ಮೇಲೆ ಗವರ್ನರ ಜನರಲಿಗೆ ನಮೂದಿತ ಅಧಿಕಾರವು ಇರುತ್ತದೋ, ಅವುಗಳನ್ನು ಜಾರಿಗೆ ತರುವ ವಿಷಯದಲ್ಲಿ ಅವರು ಮಂತ್ರಿಗಳೊಡನೆ ವಿಚಾರಿಸಿಕೊಳ್ಳಬೇಕಾಗಿರುವುದಿಲ್ಲ; ಅಗತ್ಯವಿದ್ದಾಗ ತನ್ನ ಸ್ವಂತ ಜವಾಬ್ದಾರಿಕೆಯಲ್ಲಿ ಅವರು ಆ ವಿಷಯಗಳ ಮೇಲೆ ಅಧಿಕಾರವನ್ನು ತೋರಿಸಬಹುದು.**

ಆದರೆ ಉಳಿದ ವಿಷಯಗಳ ಮೇಲಿನ ಅಧಿಕಾರವನ್ನು ಮಂತ್ರಿಗಳು ಮಂತ್ರಾಲೋಚನೆ ಕೊಟ್ಟ ಮೇರೆಗೆ ನಡೆಸಬೇಕು. ಆದರೆ ಆ ಅನುಮೋದನೆಯು ಅವರಿಗೆ ಇದ್ದ ವಿಶೇಷ ಜವಾಬ್ದಾರಿಕೆಗೆ ವಿಘ್ನಕಾರಿಯಾದ ಸಂದರ್ಭದಲ್ಲಿ ಅದನ್ನವರು ಒತ್ತಟ್ಟಿಗಿರಿಸಿ ತನ್ನಿಚ್ಛೆ ಪ್ರಕಾರ ನಡೆಯಲು ಅಧಿಕಾರವಿದೆ.

ಗವರ್ನರ ಜನರಲರ ಬಳಿ ಕಾಯ್ದಿಟ್ಟ ಇಲಾಖೆಗಳಿಗೋಸ್ಕರ ಮೂರು ಮಂದಿ ಅಧಿಕಾರಿಗಳನ್ನು ಅವರು ತನ್ನಿಚ್ಛೆ ಪ್ರಕಾರ ಚುನಾಯಿಸಿ ಅವರಿಂದ ಕೆಲಸಗಳನ್ನು ನಡೆಸಬಹುದು. ಈ ಮೂವರೂ ನ್ಯಾಯವಿಧಾಯಕ ಸಭೆಗಳ ಸಭಾಸದರಾಗಿ ನೇಮಕ ಹೊಂದಲ್ಪಟ್ಟರೂ, ವೋಟು ಕೊಡಲು ಅಧಿಕಾರವುಳ್ಳವರಾಗುವುದಿಲ್ಲ.

ಕೇಂದ್ರ ಸರಕಾರಕ್ಕೆ ಸಹಾಯ ಮಾಡಲು ಎರಡು ನ್ಯಾಯವಿಧಾಯಕ ಸಭೆಗಳಿರುತ್ತವೆ. ಇವೆರಡಕ್ಕೂ ಸಮಾನವಾದ ಅಧಿಕಾರವಿದ್ದರೂ ದ್ರವ್ಯದ ಜವಾಬ್ದಾರಿಕೆಯು ಎರಡನೆಯ ಸಭೆಗೆ ಮಾತ್ರ ಇರುತ್ತದೆ. ಆದರೆ ಇವೆರಡು ಸಭೆಗಳೊಳಗೆ ಮನಃಕ್ಲೇಶವುಂಟಾದ್ದಲ್ಲಿ ಅವುಗಳನ್ನು ಬೇರೆ ರೀತಿಯಲ್ಲಿ ತೀರ್ಮಾನಿಸುವುದು.

ಮೊದಲಿನ ನ್ಯಾಯವಿಧಾಯಕ ಸಭೆ (Council of State)ಗೆ 260 ಸದಸ್ಯರಿರುವರು. ಇವರೊಳಗೆ 100 ಜನರನ್ನು ಸಂಸ್ಥಾನಿಕರು ನೇಮಿಸುವುದು. ಉಳಿದ 150 ಸದಸ್ಯರನ್ನು ಆಯಾಯಾ ಪ್ರಾಂತ್ಯದ ನ್ಯಾಯವಿಧಾಯಕ ಸಭೆಗಳವರು ಚುನಾಯಿಸಿ ಕಳುಹಿಸಬೇಕು. ಈ ಸಭೆಯಲ್ಲಿ ಕಡಿಮೆಯೆಂದರೆ ಮೂರನೇ ಒಂದಂಶ ಸಭಿಕರು ಮುಸ್ಲಿಮರಾಗಿರಬೇಕು. ಗವರ್ನರ ಜನರಲರು ರಾಜ್ಯ ಕಾರ್ಯದಲ್ಲಿ ಅನುಭವಸ್ಥರಾದ 10 ಜನರನ್ನು ಸಭಿಕರನ್ನಾಗಿ ನೇಮಿಸಬಹುದು. ಹೆಚ್ಚಿನ ಅಧಿಕಾರವಿರುವ ಎರಡನೆಯ ಸಭೆಗೆ (House of Assembly) 375 ಸದಸ್ಯರಿರುವರು. ಅವರೊಳಗೆ 125 ಸಭಿಕರನ್ನು ಸಂಸ್ಥಾನಿಕರು ತಮ್ಮ ತಮ್ಮ ಸಂಸ್ಥಾನಗಳಿಂದ ನೇಮಿಸಿ ಕಳುಹಿಸುವರು. ಉಳಿದ 250 ಸಭಿಕರು ಬ್ರಿಟಿಷ್ ಹಿಂದೂಸ್ಥಾನದ ಪ್ರತಿನಿಧಿಗಳಾಗಿರುವರು. ಜಾತಿವಾರು ಪ್ರಕಾರ ಅವರನ್ನು ಯಾವ ರೀತಿಯಲ್ಲಿ ಚುನಾಯಿಸತಕ್ಕದೆಂಬುದನ್ನು ಈ ಮೊದಲು ಪ್ರಕಟವಾಗಿದ್ದ ಕಮ್ಯೂನಲ್ ಎವಾರ್ಡನಿಂದ ತಿಳಿಸಲಾಗಿದೆ.

ಈಗ ಯಾರ್‍ಯಾರಿಗೆ ಪ್ರಾಂತಿಕ ಕೌನ್ಸಿಲುಗಳಿಗೆ ಓಟು ಕೊಡುವ ಹಕ್ಕಿರುತ್ತದೋ, ಅವರೆಲ್ಲರಿಗೂ ಇನ್ನು ಮುಂದೆ ಕೇಂದ್ರ ನ್ಯಾಯವಿಧಾಯಕ ಸಭೆಗೆ (House of Assembly) ಓಟು ಕೊಡಲು ಅಧಿಕಾರವಿರುತ್ತದೆ. ಸ್ತ್ರೀಯರೊಳಗೆ ಹೆಚ್ಚಿನವರಿಗೆ ಮತದಾನ, ಅಧಿಕಾರವನ್ನು ಕೊಡಲು ವ್ಯವಸ್ಥೆಮಾಡಲಾಗುವುದು. ಇದರಿಂದ ಅನೇಕ ಸ್ತ್ರೀಯರು ನ್ಯಾಯವಿಧಾಯಕ ಸಭೆಗೆ ಚುನಾಯಿತರಾಗುವರೆಂದು ಊಹಿಸುವೆವು. ಇದಲ್ಲದೆ ಸುಶಿಕ್ಷಿತರಿಗೂ ಮತದಾನ ಹಕ್ಕನ್ನು ಕೊಡಲಾಗುವುದು. ಕಾಯ್ದಿಟ್ಟ ಇಲಾಖೆಗಳನ್ನು ಗವರ್ನರ ಜನರಲರು ನೋಡಿಕೊಳ್ಳಬೇಕಾಗಿದ್ದರೂ ಅವುಗಳ ವಿಷಯವಾಗಿ ಚರ್ಚೆ ಏಳುವ ಅನೇಕ ಸಂದರ್ಭಗಳಲ್ಲಿ ಮಂತ್ರಿಗಳನ್ನು ಕರೆಕೊಂಡರೆ ಉತ್ತಮವಾಗುವುದು.

ಈ ತರದ ಮಂತ್ರಿಗಳೂ ಇಲಾಖಾಧಿಕಾರಿಗಳೂ ಗವರ್ನರ ಜನರಲರವರೂ ಒಟ್ಟಿಗೆ ಕುಳಿತು ಆಲೋಚಿಸಬೇಕೆಂಬುದನ್ನು ಗವರ್ನರ ಜನರಲರಿಗೆ ನೇಮಿಸುವಾಗ ಕೊಡುವ ಅಧಿಕಾರಪತ್ರ (Instrument of Instructions)ದಲ್ಲಿ ಸೂಚಿಸಲಾಗುವುದು. ಅದಲ್ಲದೆ ಹಿಂದೂದೇಶವನ್ನು ಸಂರಕ್ಷಿಸುವ ಭಾರವನ್ನು ಜನತೆಯೇ ಹೊರಬೇಕಲ್ಲದೆ ಸರಕಾರದವರು ನೋಡಿಕೊಳ್ಳುವುದಿಲ್ಲ. ಸರಿಯಲ್ಲವೆಂಬುದನ್ನೂ ಸೂಚಿಸಲಾಗುವುದು. ಹೀಗೆ ಕಾಯ್ದಿಟ್ಟ (ಭದ್ರತೆ, ಬಾಹ್ಯವ್ಯವಹಾರ ಮತ್ತು ಎಕ್ಲಿಸಿಯೇಸ್ಟಿಕಲ್) ಸಂಬಂಧವಾದ ಇಲಾಖೆಗಳ ಹೊರಗಿನ ವಿಷಯಗಳ ರಕ್ಷಣಾ ಮಂತ್ರಿಗಳು ಹೇಳಿದ ರೀತಿಯಲ್ಲಿ ಸರ್ವಸಾಧಾರಣವಾಗಿ ಸರಕಾರವು ನಡೆಯಬೇಕು. ಆದರೆ ಅವುಗಳಲ್ಲೂ ಗವರ್ನರ ಜನರಲರಿಗೆ ವಿಶೇಷ ಜವಾಬ್ದಾರಿಕೆ ಇರುವ ಅನೇಕ ಸಂಗತಿಗಳಿರುವುವು. ಅವುಗಳಾವುವೆಂದರೆ.–1 ಶಾಂತಿ ಭಂಗವಾದಂತೆ ನೋಡುವುದು. 2. ದೇಶವು ಆರ್ಥಿಕ ಸುಸ್ಥಿತಿಯಲ್ಲಿರುವಂತೆ ನೋಡುವುದು. 3. ಅಲ್ಪಸಂಖ್ಯಾಕರಿಗೆ ಇತರರಿಂದ ಬಾಧೆಯಾಗದಂತೆ ನೋಡುವುದು. 4 ಸರಕಾರೀ ನೌಕರರಿಗೆ ಶಾಸನ ಪ್ರಕಾರ ಸಿಕ್ಕಿದ ಹಕ್ಕುಗಳನ್ನು ಕಾಯುವುದು. 5, ಹಿಂದೀಯ ಸಂಸ್ಥಾನಗಳನ್ನು ರಕ್ಷಿಸುವುದು.

6 ವ್ಯಾಪಾರಸ್ಥರೊಳಗೆ ತಾರತಮ್ಯವಾಗದಂತೆ ನೋಡಿಕೊಳ್ಳುವುದು. 7 ಕಾಯ್ದಿಟ್ಟ ಇಲಾಖೆಗಳ ಆಡಳಿತೆಗೆ ಕುಂದು ಕೊರತೆಗಳುಂಟಾಗದಂತೆ ನೋಡಿಕೊಳ್ಳುವುದು.

ಅಂತಹ ಸಂಗತಿಗಳು ಆಗುವ ಸಂದರ್ಭಗಳು ಕಡಿಮೆಯಾದ್ದರಿಂದ ಮಂತ್ರಿಗಳ ಅಧಿಕಾರಕ್ಕೆ ಯಾವ ರೀತಿಯಲ್ಲಿಯೂ ಕುಂದು ಬರಲಾರದೆಂದು ನಿರೀಕ್ಷಿಸಲಾಗಿದೆ. ಆರ್ಥಿಕ ಸುಸ್ಥಿತಿಗೆಂದು ಗವರ್ನರ ಜನರಲರಿಗೆ ವಿಶೇಷ ಅಧಿಕಾರವಿದ್ದರೂ ಆರ್ಥಿಕ ಇಲಾಖೆಯು ಮಂತ್ರಿಯವರ ಕೈಕೆಳಗೇನೇ ಇರುವುದು–ಯಾವ ರೀತಿಯಲ್ಲಿ ಕಂದಾಯಗಳನ್ನು ಶೇಖರಿಸಿ ವೆಚ್ಚಮಾಡುವುದೆಂಬುದನ್ನು ಮಂತ್ರಿಯವರೇ ನೋಡತಕ್ಕದು. ಆದರೆ ಕಾಯ್ದಿಟ್ಟ ಇಲಾಖೆಯ ವೆಚ್ಚದ ಮೇಲೆ ಮಂತ್ರಿಯವರಿಗೆ ಯಾವ ತರದ ಅಧಿಕಾರವೂ ಇರಲಾರದು – ಮತ್ತು ಮಂತ್ರಿಯವರ ಅಭಿಮತವು ಗವರ್ನರ ಜನರಲರಿಗೆ ಇರುವ ವಿಶೇಷ ಜವಾಬ್ದಾರಿಗೆ ಬಾಧಕವೆಂದು ತೋರಿದ್ದಲ್ಲಿ ಅದನ್ನು ಅವರು ನಿರಾಕರಿಸ ಬಹುದು. ಮಂತ್ರಿಗಳು ಸರಕಾರಕ್ಕಾಗಿ ಸಾಲಗಳನ್ನು ಪಡೆಯುವಾಗಲೂ ಆಯವ್ಯಯ (Budget) ಪಟ್ಟಿ ತಯಾರಿಸುವಾಗಲೂ ಗವರ್ನರ ಜನರಲರಿಗೆ ಅವುಗಳಲ್ಲಿ ಏನಾದರೂ ಹಾನಿಕರವೆಂದು ಕಂಡುಬಂದಲ್ಲಿ ಅವರು ತನ್ನ ವಿಶೇಷ ಅಧಿಕಾರವನ್ನು ಜಾರಿ ಮಾಡಬಹುದು. ಅದಲ್ಲದೆ ಈ ಹೊಸ ಶಾಸನವು ಜಾರಿಗೆ ಬರುವ ಮೊದಲು ಒಂದು ರಿಸರ್ವ್ ಬ್ಯಾಂಕನ್ನು ಸ್ಥಾಪಿಸಲಾಗುವುದು. ಈ ಬ್ಯಾಂಕಿನ ಮೇಲ್ವಿಚಾರಕ ಮಂಡಳಿಯಲ್ಲಿ ನ್ಯಾಯವಿಧಾಯಕ ಸಭೆಯ ಯಾವ ಮೆಂಬರನೂ ಇರಲಾರನು. ನಾಣ್ಯ, ನೋಟು ಮಾಡುವ ಅಧಿಕಾರವೂ, ವಿನಿಮಯ (Exchange) ಅಧಿಕಾರವೂ ಈ ಬ್ಯಾಂಕಿಗೆ ಇರುವುದು. ಗವರ್ನರ ಜನರಲರಿಗೆ ಆರ್ಥಿಕ ವಿಷಯದಲ್ಲಿ ಆಲೋಚನೆ ಕೊಡಲು ಒಬ್ಬ ಅರ್ಥಸಚಿವನು ನಿಯಮಿಸಲ್ಪಡುವನು.

ಗವರ್ನರ ಜನರಲರಿಗೆ ರಾಜ್ಯ ಪರಿಪಾಲನಾ ಕಾರ್ಯದಲ್ಲಿ ಅಗತ್ಯವೆಂದು ತೋರಿ ಬರುವ ಕಾನೂನು ಕಾಯಿದೆಗಳನ್ನು ಮಂತ್ರಿಗಳ ಒಪ್ಪಿಗೆ ಇಲ್ಲದೇನೇ ಜಾರಿಗೆ ತರುವ ವಿಶೇಷ ಅಧಿಕಾರವು ಇರುವುದು. ಯಾವುದಾದರೂ ಇಲಾಖೆಯ ವೆಚ್ಚಕ್ಕೆ ಹಣವು ಕಡಿಮೆಯೆಂದು ತೋರಿಬಂದಲ್ಲಿ, ಬೇಕಾಗುವ ಹಣವನ್ನು ನ್ಯಾಯವಿಧಾಯಕ ಸಭೆಯಿಂದ ಕೇಳುವ ಅಧಿಕಾರವು ಇವರಿಗೆ ಇರುವುದು.

## ಪ್ರಾಂತಿಕ ಸರಕಾರ.

ಮೊದಲಿರುವ 9 ಪ್ರಾಂತ್ಯಗಳಲ್ಲದೆ ಸಿಂಧ್ ಮತ್ತು ಒರಿಸ್ಸಾ ಎಂಬ ಎರಡು ಹೊಸ ಪ್ರಾಂತ್ಯಗಳನ್ನು ರಚಿಸಿರುತ್ತದೆ. ಪ್ರಾಂತ್ಯಿಕ ಸರಕಾರವೆಂದು ಪ್ರತ್ಯೇಕಿಸಿಡಲ್ಪಟ್ಟ ಯಾವ ವಿಷಯಗಳಿರುತ್ತವೋ ಅವುಗಳ ಮೇಲೆ ಮಾತ್ರ ಪ್ರಾಂತಿಕ ಸರಕಾರಕ್ಕೆ ಅಧಿಕಾರವಿರುವುದು. ಪ್ರತಿ ಒಂದು ಪ್ರಾಂತ್ಯಕ್ಕೆ ಸಾರ್ವಭೌಮರಿಂದ ನೇಮಕ ಹೊಂದಿದ ಒಬ್ಬ ಗವರ್ನರನು ಇರುವನು.

ಗವರ್ನರ ಜನರಲರಿಗೆ ಯಾವುದರ ವಿಷಯ ವಿಶೇಷ ಜವಾಬ್ದಾರಿಯು ಇರುವುದೋ ಅವುಗಳಂತೆ ಪ್ರಾಂತ್ಯದ ಮಟ್ಟಿಗೆ ಗವರ್ನರರಿಗೂ ಇರುವುದು. ಅದನ್ನು ಬಿಟ್ಟರೆ ಉಳಿದೆಲ್ಲವುಗಳನ್ನು ನೋಡಿಕೊಳ್ಳಲು ಒಂದು ಮಂತ್ರಿಕೂಟವಿರುವುದು. ಈ ಮಂತ್ರಿಗಳು ಹೇಳಿದ ರೀತಿಯಲ್ಲಿಯೇ ಪ್ರಾಂತಿಕ ಸರಕಾರವು ವರ್ತಿಸತಕ್ಕದು. ಪ್ರಾಂತ್ಯದಲ್ಲಿ ಕಾಯ್ದಿಟ್ಟ ಇಲಾಖೆಗಳು ಇಲ್ಲ. ಎಲ್ಲಾ ಇಲಾಖೆಗಳು ಮಂತ್ರಿಗಳ ಕೈವಶದಲ್ಲಿ ಇರುವುವು. ಪ್ರಾಂತ್ಯದಲ್ಲಿ ಗಲಭೆ ಎದ್ದಾಗಲೂ, ಪೋಲೀಸ ಅಧಿಕಾರಿಗಳು ಮೇರೆ ತಪ್ಪಿ ವರ್ತಿಸುವ ಸಂದರ್ಭದಲ್ಲಿಯೂ ಅಂತಹ ಕ್ಷೋಭೆಗಳನ್ನು ನಿಲ್ಲಿಸುವಂತೆ ತಕ್ಕ ಏರ್ಪಾಡು ಮಾಡಬೇಕೆಂದು ಅವರಿಗೆ ನೇಮಕಮಾಡುವ ಅಧಿಕಾರ ಪತ್ರದಲ್ಲಿ ಬರೆಯಲಾಗುವುದು. ವಿಶೇಷ ಸಂದರ್ಭಗಳಲ್ಲಿ ಪ್ರಾಂತ್ಯದ ಮಟ್ಟಿಗೆ ಕಾನೂನು ರಚನೆಯ ಸ್ವತಂತ್ರ ಅಧಿಕಾರವು ಅವರಿಗಿರುವುದು.

## ಪ್ರಾಂತಿಕ ನ್ಯಾಯವಿಧಾಯಕ ಸಭೆ.

ಪ್ರಾಂತಿಕ ಸಭೆಗೆ ಎಲ್ಲಾ ಸದಸ್ಯರು ಜನತೆಯಿಂದಲೇ ಆರಿಸಲ್ಪಟ್ಟವರಾಗಿರತಕ್ಕದು. ಬಂಗಾಳ, ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರ ಈ ಮೂರು ಪ್ರಾಂತ್ಯಗಳಲ್ಲಿ ಎರಡೆರಡು ನ್ಯಾಯವಿಧಾಯಕ ಸಭೆಗಳಿರುವುವು. ಉಳಿದ ಪ್ರಾಂತ್ಯಗಳಲ್ಲಿ ಒಂದರ ಪ್ರಕಾರವೇ ನ್ಯಾಯವಿಧಾಯಕ ಸಭೆ ಇರುವುದು. ಈ ಸಭೆಗೆ ಚುನಾಯಿಸಲ್ಪಟ್ಟ ಸದಸ್ಯರಿಂದಲೇ ಮಂತ್ರಿ ಮಂಡಲವು ನೇಮಕವಾಗತಕ್ಕದು. ಈ ಮಂತ್ರಿಗಳು ನ್ಯಾಯವಿಧಾಯಕ ಸಭೆಗೆ ಜವಾಬ್ದಾರರಾಗಿ ಅವರ ಹೇಳಿಕೆಯ ಮೇರೆಗೆ ಪ್ರಾಂತಿಕ ಸರಕಾರವನ್ನು ನಡೆಸತಕ್ಕದು.

ಪ್ರಾಂತಿಕ ನ್ಯಾಯವಿಧಾಯಕ ಸಭೆಯ ಚುನಾವಣೆಯು ಕಳೆದ ಆಗೋಸ್ತು ತಿಂಗಳಲ್ಲಿ ಆದ ಕಮ್ಯೂನಲ್ ಎವಾರ್ಡನ್ನು ಅನುಸರಿಸಿ ನಡೆಯತಕ್ಕದು. ಹರಿಜನರ ಚುನಾವಣೆಯು ಪೂನಾ ಒಪ್ಪಂದದ ಶರ್ತಗಳಿಗನುಗುಣವಾಗಿ ಆಗತಕ್ಕದು.

ಮತದಾನ ಹಕ್ಕು ಈಗ ಇದ್ದವರಿಗೂ ಶಿಕ್ಷಿತರಿಗೂ ಸಿಗಬೇಕು. ಅದೇ ರೀತಿಯಲ್ಲಿ ಸ್ತ್ರೀಯರಿಗೂ ಕೊಡಲಾಗಿದೆ. ಹರಿಜನರೊಳಗೆ ಸರಾಸರಿ ಶೇಕಡಾ 10ರಂತೆ ಮತದಾನ ಹಕ್ಕು ಸಿಗುವಂತೆ ಏರ್ಪಾಡು ಮಾಡತಕ್ಕದು. ಮೇಲೆ ವಿವರಿಸಿದ ರೀತಿಯಲ್ಲಿ ಮತದಾನ ಕೊಟ್ಟಲ್ಲಿ ಜನಸಂಖ್ಯೆಯ ಶೇಕಡಾ 14ರಂತೆ ಓಟು ದೊರೆತಂತಾಗುವುದು.

ಸರಹದ್ದು ಪ್ರಾಂತ್ಯ, ಸಿಂಧ್ ಮತ್ತು ಒರಿಸ್ಸಾ ಈ ಮೂರು ಪ್ರಾಂತ್ಯಗಳ ಸರಕಾರಗಳಿಗೆ ಆದಾಯಕ್ಕಿಂತಲೂ ವ್ಯಯವು ಅಧಿಕವಾಗಿರುವುದರಿಂದ ಕೇಂದ್ರ ಸರಕಾರವು ಅವರಿಗೆ ವರ್ಷಂಪ್ರತಿ ಹಣ ಸಹಾಯವನ್ನು ಮಾಡತಕ್ಕದು. ಸಂಸ್ಥಾನಗಳು ಕೇಂದ್ರ ಸರಕಾರಕ್ಕೆ ನಿರ್ದಿಷ್ಟ ದ್ರವ್ಯಸಹಾಯವನ್ನು ಮಾಡತಕ್ಕದು.

## ನ್ಯಾಯಸ್ಥಾನಗಳು

ಪ್ರಾಂತಿಕ ಸರಕಾರಕ್ಕೂ, ಕೇಂದ್ರ ಸರಕಾರಕ್ಕೂ ಮತ್ತು ಸಂಸ್ಥಾನಗಳಿಗೂ ತಮ್ಮ ಹಕ್ಕು ಬಾಧ್ಯತೆಗಳ ವಿಷಯ ಆಗಾಗ ವಿವಾದಗಳು ಆಗುವ ಸಂದರ್ಭಗಳಿರುವುವು. ಅವುಗಳನ್ನು ಇತ್ಯರ್ಥಮಾಡಲು ಸಂಯುಕ್ತ ನ್ಯಾಯಸ್ಥಾನ (Federal Court)ವು ಇರಬೇಕಾಗುವುದು. ಇಂತಹ ನ್ಯಾಯಸ್ಥಾನವು ಯಾರ ಕೈಕೆಳಗೂ ಇರದೆ ಸ್ವತಂತ್ರವಾಗಿರತಕ್ಕದು. ಈ ಕೋರ್ಟಿಗೆ ಪ್ರಾಂತಿಕ ಹೈಕೋರ್ಟಿನಿಂದ ಬರುವ ಅಪೀಲುಗಳನ್ನು ವಿಮರ್ಶಿಸುವ ಅಧಿಕಾರವು ಇರುವುದು.

## ಭಾರತ ಸಚಿವರು ಮತ್ತು ಹಕ್ಕು ಬಾಧ್ಯತೆಗಳು.

ಭಾರತ ಸಚಿವರಿಗೆ ಸಹಾಯಮಾಡಲು ಈಗಿದ್ದ ಇಂಡಿಯಾ ಕೌನ್ಸಿಲನ್ನು ಈ ಹೊಸ ಯೋಜನೆಯಿಂದಾಗಿ ರದ್ದು ಮಾಡಲಾಗಿದೆ. ಆದರೆ ಅವರಿಗೆ ಸಹಾಯ ಮಾಡಲಿಕ್ಕೆ ಅನುಭವಸ್ಥರಾದ ೬ ಮಂದಿಗಳ ಬೋಧಕ ಮಂಡಳಿ ಒಂದನ್ನು ಸ್ಥಾಪಿಸಲಾಗಿದೆ. ಇವರು ಭಾರತ ಸಚಿವರಿಗೆ ಸಮಯಾನುಸಾರ ಬೋಧನೆಗಳನ್ನೀಯುವುದಲ್ಲದೆ ಸರಕಾರಿ ನೌಕರರಿಗೆ (All India Service) ಸಂಬಂಧ ಪಟ್ಟ ಶಾಸನಾದಿಗಳನ್ನು ತಯಾರಿಸುವ ಹಕ್ಕಿರುವುದು.

## ಸರಕಾರಿ ನೌಕರರು

ಭಾರತ ಸಚಿವರಿಂದ ನೇಮಕಹೊಂದಿದ ನೌಕರರ ಸಂಬಳದ ಮೇಲೆ ನ್ಯಾಯವಿಧಾಯಕ ಸಭೆಯವರಿಗೆ ಯಾವ

# The Popular Insurance Co., Ltd.

***Head Office*—MANGALORE, S INDIA**

## The Pioneer Life Office of the West Coast.

While having the most up-to-date features in modern life insurance such as Easy Revival Facilities, Non-Forfeiture Privileges, Permanent Disability Concessions, Joint Life Assurance, Female Assurance and a popular RUPEE POLICY

(*Without Medical Examination*)

**The Company has unrivalled scope for economic working.**

**WANTED AGENTS**

**All over India on most remunerative terms**

*For particulars apply to —*

**THE MANAGING DIRECTOR.**

---

# For Young Men.

**Permanent employment substantial cash incomes for Kanara men who are reputable, active & adaptable to this kind of work**

Our business is more active and more successful right now than ever since in 1913 in this country, and substantial, permanent positions are upon at once at our office for responsible men who want TO MAKE MONEY

This kind of sales-work must be studied and learned Our visual method is very unusual moreover amazingly efficient This is a business where diligent conscientious effort is decently REWARD WITH INCREASES

Men selected for these positions may soon find themselves, locally earning two, three and four times as much as they ever made in

***Banking, Clerical, Mechanical work, Selling & Engineering.***

Regardless of previous experience, we train you throughly in this 1935 method We supply all equipments supplies and training

***NO DEPOSIT NO COST***

If you are permanently qualified to merit a successful place for yourself in this running enterprise, you can get along on nominal earnings of

***Rs 100 to Rs 500 a month***

while learning as well as after Make applications immediately or interview personally at our Chief Organising Office

## East & West Insurance Company, Limited,

**HARBOUR VIEW, BUNDER,**

**MANGALORE.**

ತರದ ಅಧಿಕಾರವೂ ಇರುವುದಿಲ್ಲ. ಈ ನೌಕರರನ್ನು ಕೆಲಸದಿಂದ ತಳ್ಳಿಹಾಕುವ ಅಧಿಕಾರವು ಭಾರತ ಸಚಿವರಿಗೇನೇ ಇರುವುದು. ಈ ಶಾಸನವು ಜ್ಯಾರಿಗೆ ಬಂದ ೫ ವರ್ಷಗಳ ತನಕ ಈಗ ನಡೆಯುವ ರೀತಿಯಲ್ಲಿಯೆ ಕಲೆಕ್ಟರರ ಮೇಲ್ಪಟ್ಟ ಅಧಿಕಾರಿಗಳ ನೇಮಕವು ಆಗತಕ್ಕದು. ಈ ೫ ವರ್ಷಗಳ ನಂತರ ಅಗತ್ಯಬಿದ್ದ ಮಾರ್ಪಾಟುಗಳು ಮಾಡಲಾಗುವುವು.

### ರೈಲ್ವೇ ಬೋರ್ಡು.

ಸರಕಾರಕ್ಕೆ ಸರ್ವಸಾಧಾರಣವಾಗಿ ರೈಲ್ವೇ ಇಲಾಖೆಯ ಮೇಲೆ ಅಧಿಕಾರವಿದ್ದರೂ ಸರಕಾರಿ ರೈಲ್ವೆಗಳ ಮೇಲೆ ಆಡಳಿತೆಯನ್ನು ನಡೆಸುವ ಕೆಲಸವು ಈಗಿನಂತೆಯೇ ಒಂದು ರೈಲ್ವೆ ಬೋರ್ಡಿನ ಕೈಕೆಳಗಿರತಕ್ಕದು. ರೈಲ್ವೇ ವ್ಯವಹಾರವು ಈ ಮೊದಲಿದ್ದಂತೆಯೇ ನಡೆಯತಕ್ಕದು.

ಆಧಾರಪೂರ್ವಕ ಹಕ್ಕುಗಳು (Fundamental rights)ನ್ನು ಶಾಸನದಲ್ಲಿ ತೋರ್ಪಡಿಸುವ ಅಗತ್ಯವು ಕಂಡುಬರುವುದಿಲ್ಲ. ಅದರ ಬದಲು ಈ ಶಾಸನವು ಜ್ಯಾರಿಗೆ ಬರುವಾಗ ಸಾರ್ವಭೌಮರು ಮಾಡುವ ರಾಜಾಜ್ಞೆಯಲ್ಲಿ ಅವುಗಳನ್ನು ಸೂಚಿಸುವ ಏರ್ಪಾಡು ಮಾಡಲಾಗುವುದು.

### ಈ ಶಾಸನದ ಪ್ರತಿಫಲ

೧. ಭಾರತ ಸಚಿವರ ಕೌನ್ಸಿಲು ರದ್ದಾಗಿ ಅದರ ಬದಲು ಆರು ಜನರುಳ್ಳ ಸಭೆಯೊಂದು ಏರ್ಪಾಡಾಗುವುದು.

೨. ವೈಸರಾಯರ ಅಧಿಕಾರವೂ ಜವಾಬ್ದಾರಿಗಳೂ ಹೆಚ್ಚುವುವು.

೩. ಕೇಂದ್ರ ಸರಕಾರದಲ್ಲಿ ನ್ಯಾಯವಿಧಾಯಕ ಸಭೆಗೆ ಜವಾಬ್ದಾರಿಯುಳ್ಳ ಕೆಲವು ಮಂತ್ರಿಗಳು ನೇಮಕ ಹೊಂದುವರು. ಅಂದರೆ, ದ್ವಿದಳ ರಾಜ್ಯ ಪದ್ಧತಿಯು ಕೇಂದ್ರ ಸರಕಾರದಲ್ಲಿ ಸ್ಥಾಪಿತವಾಗುವುದು.

೪. ಅನೇಕ ಸಂಸ್ಥಾನಗಳು ಸಂಯುಕ್ತ ಸರಕಾರಕ್ಕೆ ಸೇರುವುವು.

೫. ರಿಜರ್ವ್ ಬ್ಯಾಂಕೊಂದು ಸ್ಥಾಪಿತವಾಗುವುದು.

೬. ಮೇಲಾಫೀಸರರ ಅಧಿಕಾರದಲ್ಲೂ ಸಂಬಳದಲ್ಲೂ ಯಾವ ತರದ ಬದಲಾವಣೆಯೂ ಆಗುವುದಿಲ್ಲ.

೭. ನ್ಯಾಯವಿಧಾಯಕ ಸಭೆಯ (ಪ್ರಥಮ ನ್ಯಾಯವಿಧಾಯಕಸಭೆಯ) [ಕೌನ್ಸಿಲ್ ಆಫ್ ಸ್ಟೇಟ್] ಚುನಾವಣೆಯಲ್ಲಿ ಬದಲಾವಣೆಯಾಗುವುದು. ಎರಡನೇ ಸಭೆಯ ಚುನಾವಣೆಗೆ ಓಟರರ ಸಂಖ್ಯೆಯು ಹೆಚ್ಚುವುದು.

೮. ಸಿಂಧ್ ಮತ್ತು ಓರಿಸ್ಸಾ ಪ್ರಾಂತ್ಯಗಳಾಗುವುವು.

೯. ಪ್ರಾಂತ್ಯದಲ್ಲಿ ದ್ವಿದಳ ರಾಜ್ಯಪದ್ಧತಿಯು ನಾಶವಾಗುವುದು. ಅದರ ಬದಲು ನ್ಯಾಯವಿಧಾಯಕ ಸಭೆಗೆ ಜವಾಬ್ದಾರರಾದ ಮಂತ್ರಿಗಳೇ ಪ್ರಾಂತಿಕ ಸರಕಾರವನ್ನು ನಡೆಸುವರು.

೧೦. ಗವರ್ನರರ ಅಧಿಕಾರವು ಪ್ರಾಂತ್ಯದಲ್ಲಿ ಹೆಚ್ಚುವುದು.

೧೧. ಫೆಡರಲ್ ನ್ಯಾಯಸ್ಥಾನವು ಡಿಲ್ಲಿಯಲ್ಲಿ ಸ್ಥಾಪಿತವಾಗುವುದು.

ಶಂಕ ಅಪೂರ್ಣ

## WHAT PAPER?

## ಎಂತಹ ಕಾಗದ?

ವೈಟ್ ಪೇಪರ್ ಎಂದರೆ ನನ್ನಂತಹ ಬಡವನಿಗೆ ಏನೆಂದು ತಿಳಿಯದು' ಆದರೆ ಭರತವರ್ಷಕ್ಕೆ ದೊರೆಯುವ ಭಾವೀ ರಾಜ್ಯಾಂಗರಚನೆಯ ಶಿಫಾರಸು ಪತ್ರ'' ಅದು ಎಂದು ಒಬ್ಬರು ಹೇಳಿದ್ದು ಕೇಳಿದ್ದೆ!

\+ + + + +

ಈ 'ಭಾವೀ' ಎಂಬ ಶಬ್ದದ ಅರ್ಥವೂ ನನಗಾಗದು 'ಭಾವೀ' ಎಂದೊಡನೆ ಬಾಲವಿಲ್ಲದ 'ಭಾ' ಅಂದರೆ–ಬಾವಿಯ ನೆನಪಾಗಿ ದಿಗಿಲಾಗುತ್ತದೆ

\+ + + + +

ಮುಂದಕ್ಕೆ ನಮ್ಮ ರಾಜ್ಯಭಾರ ಕ್ರಮವು ಹೇಗಾಗುತ್ತದೆಂಬ ಕುರಿತು ಈ (White Paper?) ಶ್ವೇತ ಪತ್ರ' ಕೆಲವರಿಗೆ ಇದರ ಹೆಸರೇ ಹೊಸತಾಗಿದ್ದು 'What Paper?' 'ಏನು ಕಾಗದ?' ಎಂದು ಪ್ರಶ್ನಿಸುತ್ತಿರುವರು.

\+ + + + +

ಆದರೂ ಈ ಪೇಪರ್ ಬಂತೇ ಬಂತು' ತಂಕಣ ಸೀಮೆಗೆ ಕೊಂಕಣ ಗಾಳಿಯು ಬೀಸಿದಂತೆ ಬೀಸಿತು' ಲಂಡನ್‌ಗಳಲ್ಲಿ ಮಿಂಚಿನಂತೆ ಹೊಳೆದು ಇಂಡಿಯಾದಲ್ಲಿ ಬೊಂಬಿನಂತೆ ಬಿತ್ತು'

\+ + + + +

ಇದರಿಂದ ಮುಖ್ಯವಾಗಿ ತಿಳಿವುದೇನೆಂದರೇ –ಬ್ರಿಟಿಷರು ಹಿಂದೂದೇಶಕ್ಕೆ ರಾಜ್ಯದಾನ ಮಾಡುತ್ತಾರೆ ಎಲ್ಲಾ ಅಧಿಕಾರ ನಮ್ಮ ಮುಷ್ಟಿಯೊಳಗೆ ಕೊಡುತ್ತಾರೆ! ಆದರೆ ಎಲ್ಲಾ ಬಿಟ್ಟು ಮಂಗ ಬಂಗಿ ನಟ್ಟ ಎನ್ನುತ್ತಾರಲ್ಲ'–ಹಾಗೆ ಈಗ ಬ್ರಿಟಿಷ್ ಸರಕಾರವು "ನಮ್ಮ ವೈಸರಾಯರಿಗೆ ಎಲ್ಲಾ ಅಧಿಕಾರ ಕೊಡಲ್ಪಡಬೇಕು'' ಎನ್ನುತ್ತದೆ

\+ + + + +

ಎಂತಹ ಉಪಾಯವಯ್ಯಾ ಇದು' ಎಲ್ಲಾ ಅಧಿಕಾರ ನಮಗಂತೆ ಆ ಅಂತೆಯೊಳಗೂ ಒಂದು ಕಂತೆಯಂತೆ ಎಲ್ಲಾ ನಮಗಾದರೂ 'ನಮ್ಮ ವೈಸರಾಯರಿಗೆ ಎಲ್ಲಾ ಶಾಸನಾ ಅಧಿಕಾರವಿರಬೇಕು'' ಎನ್ನುತ್ತಾರೆ ಬ್ರಿಟಿಷರು. ಇದೆಂತಹ ಸಂತೆ?

\+ + + + +

ಮಿಲಿಟರಿ ಅಧಿಕಾರ ನಮ್ಮ ದುಡ್ಡಿನ ಅಧಿಕಾರ, ನಾವು ಹೊರಗಿನ ದೇಶಗಳೊಡನ ಮೈತ್ರಿ ಬೆಳೆಸುವ ಅಧಿಕಾರ ಎಲ್ಲಾ ನಮಗಂತ ಎಲ್ಲಾ ನಮಗಾದ ಮೇಲೂ ನಮ್ಮ ಮೇಲೆ ವೈಸರಾಯರ ಅಧಿಕಾರದ ಅವರ ವರದ ಹಸ್ತವಿರಬೇಕಂತೆ'

\+ + + + + +

ಇದರ ಆಟ ನಿಮಗೆ ಗೊತ್ತೇ? ಗೊತ್ತಿಲ್ಲ, ಹಾಗಾದರೆ ಕೇಳಿ ಹೇಳುತ್ತೇನೆ—White Paper ಶಿಫಾರಸನ್ನು, ಪಾರ್ಲಿಮೆಂಟು ಅನುಮೋದಿಸಿದ ಮೇಲೆ (?) ನಮಗೆ ಕೊಡುತ್ತಾರೆ 'ಈಗಲಾದರೂ ಗಾಂಧಿ ಸಮಾಧಾನವಾಗಲಿ'' ಎನ್ನುತ್ತಾರೆ ಗಾಂಧಿ ಶಾಂತವಾಗಿ ಚಳವಳಗಳನ್ನು ಹಿಂದೆ ನಿಲ್ಲಿಸಿದ ಮೇಲೆ ನಮ್ಮ ಮೇಲೆ ವೈಸರಾಯರ ಆಶೀರ್ವಾದ, ಪ್ರತಾಪ, ಅಧಿಕಾರಶಸ್ತ್ರ ಪುನಃ ಹಾರುತ್ತದೆ

\+ + + + + +

ಹಾವು ಸಾಯಲೂಬಾರದು –ಕೋಲು ಮುರಿಯಲೂ ಬಾರದು' ಗಾಂಧಿ ಸಮಾಧಾನವಾಗಬೇಕು ಬ್ರಿಟಿಷರ ಹಕ್ಕು ಕಡಿಮೆಯಾಗಬಾರದು ಇದಕ್ಕಾಗಿಯೇ ವೈಸರಾಯರ ಕೈಯೊಳಗೆ ಎಮರ್ಜೆನ್ಸಿ ಶಸ್ತ್ರವಿರಬೇಕೆಂದು ಬ್ರಿಟಿಷ ಪ್ರಾಣಿಗಳ ಆಗ್ರಹ

\+ + + + + +

ಒಬ್ಬ ರಾಜನೀತಿಜ್ಞರು ನನಗೆ ಮೈದಾನಿನಲ್ಲಿ ಸಿಕ್ಕಿದರು. "White Paper'' ಬರುತ್ತದೆ ಇನ್ನಾದರೂ ಹಿಂದೀಯರು ಬಚಾವು: ಅಲ್ಲವೇ?'' ಎಂದೆ' ಅವರು ತಟ್ಟನೆ 'White Paper? what Paper Man? All bosh' ಎಂದರೆ 'ಶ್ವೇತ ಪತ್ರ' ಎಂತಹ ಪತ್ರವಯ್ಯಾ! ಎಲ್ಲಾ ಢೋಂಗಿ' ಢೋಂಗಿ ಮೇಲೆ ಢೋಂಗಿ'' ಎಂದರು!

\+ + + + + +

ಛೀ! ಇವೆಲ್ಲ ಢೋಂಗಿಯೇ?

ಸ್ವಾಟ.


**Sait Nagjee Purushotham & Co.,**

UMBRELLA MANUFACTURERS.

BIG BAZAAR, CALICUT (MALABAR.)

**SUN BRAND**

**UMBRELLAS**

ನೇತ್ ನಾಗಜಿ ಪುರುಷೋತ್ತಮ ಎಂಡ್ ಕೊ., ಕಲ್ಲಿಕೋಟೆ

ಇವರ

ಸನ್ ಬ್ರೇಂಡ್ ಕೊಡೆಗಳು

REGISTERED SUN BRAND UMBRELLAS TRADE MARK

ಇದು ಅಚ್ಚ ಸ್ವದೇಶೀಯ ಭಾಂಡವಲದಿಂದ ಸ್ಥಾಪಿತವಾದ ಸ್ವದೇಶೀಯ ವ್ಯಾಪಾರಿಗಳ ಸಂಸ್ಥೆಯಾಗಿದ್ದು, ಬಹುಮಂದಿ ದೇಶೀಯರಿಗೆ ಜೀವನ ವ್ಯಾಪಾರವನ್ನು ಒದಗಿಸಿ ಕೊಡುವ ಕಾರ್ಖಾನೆಯಾಗಿರುವ ಕಾರಣವೂ, ದೇಶೀಯರಿಗೆ ಅತಿ ಅಗ್ಗ ಬೆಲೆಗೆ,

ಜರ್ಮನ್ ಮತ್ತು ಸ್ವಿಸ್

ಕೊಡೆಗಳ ಜತಗ ಹೋಲಿಸಿದಲ್ಲಿ ಯೋಗ್ಯತೆಯಲ್ಲಿ ನ್ಯೂನವಿಲ್ಲದಾಗಿರುವ

ಸನ್‌ಬ್ರೆಂಡ್ ಈಗಲೇ ಕೊಡೆಗಳನ್ನು ಬೇಕಾದ ನಮೂನೆ ಸೂಚಿಸಿ ತರಿಸಿಕೊಳ್ಳಿರಿ!



**DERBY SWEEPS.**

| CONDUCTED BY | Subscriptions will be received for Ordinary Mail Till |
|---|---|
| MUTUAL CLUB LTD | 26—4—1933 at Rs 4—0—0<br>Air Mail 4 annas extra |
| IRISH HOSPITALS' TRUST LTD. | 12—4—1933 at Rs 6—0—0<br>Air Mail 4 annas extra |

*Both the above Clubs Derby Tickets can be had for cash from—*

**Shelanadi Manjunath Krishna Nayak & Sons,**

***MANGALORE,***

***Authorised Agents.***

# Canara Bank Limited.

**Head Office:- Dongerkery Street, Mangalore.** **Local Office:- Bunder, Mangalore.**

***BRANCHES***:-Karkal, Kasaragod, Cochin, Udipi, Gangolli, Coondapur,
Bombay, Puttur, Calicut, Alleppey, Ernaculam, Chikmagalur.

**Authorised Capital: Rs. 10,00,000—0—0.** **Paid up Capital: Rs. 8,00,000—0—0.**

**Reserve and other Funds: Rs. 5,26,000—0—0**

A recent issue of further 3 lacs of capital has been over subscribed within a short period.

In view of the existing monetary conditions the phenomenal downfall in the value of land and of commodities in general, and in view of the combined action of Banks, both exchange and Indigenous in lowering rates all round, we have been reluctantly compelled as and from 1st January 1933 to reduce the rates of interest on deposits. The rules of business have also been amended and copies of the same can be had on application.

| | |
|---|---|
| CURRENT ACCOUNTS:— | Interest will be paid at 2 per cent p a. from 1st January to 30th June and at 1 per cent. from 1st July to 31st December |
| SAVINGS BANK:- | 4 per cent. per annum. |
| FIXED DEPOSITS:- | 5 per cent. per annnm for 1 year or more. |

For rates on other deposits please apply to our Agents at Branches or to the undersigned at Head Office.

Depositors are requested to take notice that the interest accrued on deposits will be paid half yearly on 2nd July and 2nd January or at maturity.

**P. Sarvothum Nayak,**
*Ag. Secretary & Treasurer.*


'ಸ್ವದೇಶಾಭಿಮಾನಿ' ಪತ್ರಿಕೆಗೆ ಚಂದಾದಾರರಾಗಿರಿ.


## ಎಪ್ಪತ್ತು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು
ಅನುಕೂಲತೆಗಳನ್ನು ಇದೇ ಮುಖ್ಯಾಲುತತ
ಮಾನದಿಂದ ತಿಳಿದು, ಅವರಿಗೆ ಸುಲಭ ದರದ
ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ
ತರದ ಉಡುಪುತೊಡುಪುಗಳನ್ನು ಒದಗಿ
ಸುವ ನಮ್ಮ ಎರಡು ತಲಾಂತರಗಳ
ಅನುಭವವು ಮುಂದಕ್ಕೂ ಸಂತೃಪ್ತಿ
ಯನ್ನೀ ಕೊಡುವುದಿಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು
ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್.
ಬಾತ್ ಟುವಾಲುಗಳೂ, ಧೋತಿ, ಸೀರೆ—
ಬೈರವಾಸು—ಚಿಕ್ಕ—ಚೀಟು ಇತ್ಯಾದಿ
ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

**ಶ್ರೀನಿವಾಸ ರಂಗ ಪೈ,**
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For - A. F. Harvey,
*Managers:* Madura Mills Co, Ltd.



ನಮ್ಮ ಕಾರ್ಖಾನೆಯು ಈಚೆಗೆ ಒಂದೆರಡು ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ
ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ
ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ.

ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

## ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ,
ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು, ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು.

ಸೆಂಡಲ್‌ಉಡ್, ಜಸ್ಮಿನ್, ಲಿಲಿರೋಸ್, ಲೀಮ್ಡಾ ಸಾಬೂನುಗಳು
(ಲೀಮ್ಡಾ=ನೀಮು, ಮಾರ್ಗೋಸಾ=ಬೇವ್)
ಇವುಗಳು ಮುಖ್ಯವಾದ ಬ್ರ್ಯಾಂಡುಗಳು.

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು.

ಈ ಜಿಲ್ಲೆಗೆ ಪ್ರವರ್ತಕರು:—

**ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.**



EDITED, PRINTED & PUBLISHED BY V. S. KUDVA AT THE SHARADA PRESS, MANGALORE.

# ಮೂರು ಲಕ್ಷ ರೂಪಾಯಿ!

ಸಂಸಾರದ ಖರ್ಚಿಗೆ ದೊರೆತರೆ, ಅಡಚಣೆಯ ಮಾತುಂಟೇ? ಅನ್ನ, ವಸ್ತ್ರ, ಅಲಂಕಾರ ಆಭರಣ, ವಿದ್ಯಾಭ್ಯಾಸ ವಿಹಾರ, ವ್ಯವಹಾರ, ಯಾತ್ರಾಕಾರ್ಯಗಳು ಮೊದಲಾಗಿ ಎಲ್ಲಕ್ಕೂ ಅತ್ಯನುಕೂಲವಾಗಿರದೆ? ಸಂಸಾರವು ಸರ್ವಪ್ರಕಾರಗಳಲ್ಲೂ ಸುಗಮವಾಗಿ ಸಾಗುವುದು.

## ಮೂರು ಲಕ್ಷ ರೂಪಾಯಿ!

ದುಡ್ಡೇ ದುರ್ಲಭವಾಗಿರುವ ಈ ಕಷ್ಟಕಾಲದಲ್ಲಿ, ವ್ಯಾಪಾರದ ಮುಗ್ಗಟ್ಟು—ಕೈಗಾರಿಕೆಗಳಿಗೆ ಕಷ್ಟ ಮೊದಲಾದುವುಗಳ ನಿವಾರಣೆಗೆ ಈ ಮೊಬಲಗು ಎಷ್ಟು ಅನುಕೂಲವಾಗಿ ಸಹಾಯವಾಗುವಂತಾಯಿತು!

## ರೂಪಾಯಿ 321,544–3–7 ರೂಪಾಯಿ

ಈ ಮೊಬಲಗನ್ನು ಕಳೆದ ವರ್ಷ ಬರೇ ಒಬ್ಬಿಯ ಒಗ್ಗಿಂದು ಹಣ ಠೇವಣಾತಿಯಾಗಿಟ್ಟ ಜನಸ್ತೋಮಕ್ಕೆ

## ಕೆನರಾ ಬೇಂಕ್ ಲಿಮಿಟೆಡ್

ಸಂಸ್ಥೆಯಿಂದ ಸಾಕಲ್ಯವಾಗಿ ಸಂದು ಸದ್ವಿನಿಯೋಗ ಹೊಂದಿದೆ.

ಸಂಸಾರ ದಾರಿದ್ರ್ಯ ನಿವಾರಣೆಗೂ, ವ್ಯಾಪಾರ ಕೈಗಾರಿಕೆಗಳ ಅಭಿವೃದ್ಧಿಗೂ ಸಾವಿರಾರು ಠೇವಣಾತಿದಾರರಿಗೆ ಸಿಗುವಂತೆ ಅವರು ಬೇಂಕಿನಲ್ಲಿ ಸಂಪೂರ್ಣ ವಿಶ್ವಾಸವನ್ನಿಡಲು ಪ್ರೇರೇಪಿಸಿದುದು ಯಾವುದು? ಯಥಾಕಾಲದಲ್ಲಿ, ಯಥಾಯೋಗ್ಯವಾಗಿ ಬೇಂಕು ಅವರಿಗೆ ಒದಗುವುದೆಂದು, ಪ್ರತ್ಯಕ್ಷ ಅನುಭವದಿಂದ ಅವರು ತಿಳಿದುದೇ

## ಮೂರು ಲಕ್ಷ ರೂಪಾಯಿ!

ವರ್ಷಕ್ಕೆ ಬಡ್ಡಿಯಾಗಿ ಜನಗಳಿಗೆ ದೊರೆವ ಹಾಗೆ, ಅವರ ವಿಶ್ವಾಸವು ಬೇಂಕಿನಲ್ಲಿ ಬೇರೂರಿರುವುದೂ, ಅವರ ಹಣವು ಸದ್ವಿನಿಯೋಗ ಹೊಂದಿ ಪ್ರತಿಫಲವು ದೊರೆವಂತೆ ವಿಚಾರದಿಂದ ಬೇಂಕು ಯಥಾಸಾಧ್ಯವಾದ ರೀತಿ ವರ್ತಿಸಿದುದೂ, ಈಗಣ ಅಡಚಣೆ [illegible] ಸರ್ವರಿಗೂ ತೃಪ್ತಿಕರವಾಗಿದೆಂದು ಸೂಚಿಸದೇ? ಉದ್ದರಾಗಲಿ, ದೊಡ್ಡವರಾಗಲೀ ಸರ್ವ ಠೇವಣಾತಿದಾರರಿಗೆ ಸಂತೃಪ್ತಿ

## ಕೆನರಾ ಬೇಂಕ್, ಲಿಮಿಟೆಡ್.



# East & West Insurance Company Ltd.,

(Established 1913)

**East & West Buildings, Fort Bombay**

VALUATION REPORT for the Triennium ending 31st December 1931

**Reveals Certain Striking Features**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation

Interim Bonus Rs 15/- per 1,000/ per year

both on whole life and endowment with Profit Policies becoming claims before 1st January 1934 FORECAST -STILL GREATER PROSPERITY

**WANTED LADIES & GENTS in Unrepresented Areas**

Earn Rs. 100/- to 500/- independently per month

*For particulars apply or please call at —*

**Chief Organising Office**

Harbour View MANGALORE



ನಮ್ಮ ಕಾರ್ಖಾನೆಯು ಈಚೆಗೆ ಒಂದೆರಡು ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ

ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

# ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಒಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು, ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು.

ಸೆಂಡಲ್‌ಉಡ್, ಜಸ್ಮಿನ್, ಲಿಲಿರೋಸ್, ಲೀಮ್ಸಾ ಸಾಬೂನುಗಳು

(ಲೀಮ್ಸಾ=ನೀಮ, ಮಾರ್ಗೋಸಾ=ಬೇವು)

ಇವುಗಳು ಸುಖ್ಯವಾದ ಟ್ಯಾಲೆಟುಗಳು.

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು

ಈ ಜಿಲ್ಲೆಗೆ ಪ್ರವರ್ತಕರು:—

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.


# ನೋಟೀಸು.

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

I P. No 4/1933

ಅರ್ಜಿದಾರ—ಕೃಷ್ಣ ಭಟ್ಟ.

ಎದ್ರಿರು—ಕಂಚಿಗುಡ್ಡೆ ಗೋವಿಂದ ಭಟ್ಟ ಕೂಡಾ

ಈ ಮೂಲಕ ಎದ್ರಿರಿಗೆ ಮತ್ತು ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ.—

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಸದ್ರಿ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುತ್ತಾನೆ ಆ ಕುರಿತು ಆಕ್ಷೇಪ ಇದ್ದವರು ತಾ 5–4–1933ನೇ ಹಗಲು 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉಜರಿಸಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ

Puttur S K 15—3—1933 } **B Achyuta Baliga** *Vakil for Petitioner*

### ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O P No 37/1933

1 ಜುವಾನಪಿಂಟೊ ಬಸ್ತ್ಯಾ 2 ಒನಿಫ್ರಾಂ ಪೆನಾಂಡಿಸ್—ಅರ್ಜಿದಾರರು।

ಮೇಲ್ಕಂಡ ಅರ್ಜಿದಾರರು, ಮೃತ ಪಸ್ಕದೋರು ಪೆನಾಂಡಿಸನ ಬಾಬ್ತು ಎಲ್ಲಾ ಸ್ಥಿರಚರ ಸೊತ್ತುಗಳಿಗ ಪೂರ್ಣ ಹಕ್ಕುದಾರರಾಗಿ, ಸದ್ರಿ ಮೃತನ ಅಸ್ತಿಗೆ ಲೆಟರ್ಸ್ ಒವ್ ಎಡ್ಮಿನಿಸ್ಟ್ರೇಷನ್ 2ನೇ ಅರ್ಜಿದಾರಗೆ ಕೊಡಬೇಕಾಗಿ ಮೇಲ್ಕಂಡ ಕೋರ್ಟಿಗೆ ಮೋಕಿನ ಲೆಟರ್ಸ್ ಒವ್ ಎಡ್ಮಿನಿಸ್ಟ್ರೇಷನ್ ಅರ್ಜಿದಾರಲ್ಲಿ ಮಾಡುತ್ತಾರೆ ಸದ್ರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ 1—4—1933ಕ್ಕೆ ತಸ್ತೀಸ್ ಇಟ್ಟಿರುತ್ತದೆ ಆದುದರಿಂದ ಈ ಕುರಿತು ಯಾರಾದರೂ ಆಕ್ಷೇಪ ಇದ್ದವರು ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ತಾರೀಕಿನಲ್ಲಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು

Mangalore 17—3—1933 } **K P Gopalakrishna Rao** *Vakil for Petitioners*

### ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 31/1933

1 ಕ ಅನಂತಯ್ಯ 2 ಕೆ ನಾರಾಯಣಸ್ವಾಮಿ 3 ಕೆ. ಪದ್ಮನಾಭಯ್ಯ —ಅರ್ಜಿದಾರರು

ಕಾರ್ಕಳ ತಾಲೂಕು ನಿಟ್ಟೆ ಗ್ರಾಮದಲ್ಲಿದ್ದು ಮೃತವಾದ ಅರ್ಜಿದಾರರ ತಂದೆ ತಮ್ಮ ಕೆ ರಾಮಕೃಷ್ಣರಾಯರ ಅಡಳಿತ ಒಳಗಿದ್ದ [illegible] ಎಲಿಮೆಂಟರಿ ಶಾಲೆಯ ಬಗ್ಗೆ 1931–1932ನೇ ವರ್ಷಕ್ಕೆ ಕೊಡತಕ್ಕ ದಕ್ಷಿಣ ಕನ್ನಡಾ ಎಡ್ಯುಕೇಶನಲ್ ಕೌನ್ಸಿಲಿನವರು ಮಂಜೂರು ಮಾಡಿದ ಗ್ರಾಂಟಿನ ರೂಪಾಯಿ 263—6—0ನ್ನು ವಸೂಲು ಮಾಡುವರೆ ಸದ್ರಿ ಶಾಲೆಯ ಪ್ರಕೃತದ ಆಡಳಿತದಾರ 3ನೇ ಅರ್ಜಿದಾರ ಕ ಪದ್ಮನಾಭಯ್ಯನಿಗೆ ಒಂದು ವಾರೀಸ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಸದರಿ ಅರ್ಜಿ ಮಾಡಿರುವದರಿಂದ ಆ ವಿಷಯದಲ್ಲಿ ಆಕ್ಷೇಪವುಳ್ಳವರು 1933ನೇ ಇಸವಿ ಏಪ್ರೀಲ್ ತಾರೀಕು 4ನೇ ಹಗಲು 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಅವರ ಆಕ್ಷೇಪಗಳನ್ನು ತಿಳಿಸಿ ರುಜುಮಾಡಿಕೊಳ್ಳತಕ್ಕದ್ದು

ಕಾರ್ಕಳ ತಾ. 16—3—1933 } **D Venkatesh Bhat** ಅರ್ಜಿದಾರರ ಕಡೆ ವಕೀಲ್

### ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

Principal Court O. S 470/1932

ರಾಜಾ ಲಕ್ಷ್ಮೀನಾಥ ನಾಕ್ಷಾಪುರ ಅರಸು—ವಾದಿ

ನೆತ್ರುಕರೆ ಶಂಕರನಾರಾಯಣ ಭಟ್ಟ ಕೂಡಾ—ಪ್ರತಿವಾದಿರು

ಸದ್ರಿ ವ್ಯಾಜ್ಯದಲ್ಲಿ ಮೇಲಹೇಳಿದ ವಾದಿಯು ಸದ್ರಿ ಶಂಕರನಾರಾಯಣಭಟ್ಟ ಕೂಡಾ 13 ಜನರ ಮೇಲೆ ದಾವಾ ಆದವಿನ ಬಡ್ಡಿ ಬಾಕಿಗೆ ದಾವೆ ಮಾಡಿರುತ್ತಾ ಸದ್ರಿ ದಾವೆಯ ವ್ಯಾದೆಯು ತಾ 8–4–1933ಎಂತ ನಿಶ್ಚಯಿಸಿರುತ್ತದೆ. ಆ ವಾಯಿದೆ ಒಳಗೆ 9ನೇ ಪ್ರತಿವಾದಿ ತಿಮ್ಮಕ್ಕಯ್ಯನು ತನ್ನ ಉದಾಹರಣೆ ವಗೈರೆ ದಲೂ ಇದ್ದಲ್ಲಿ ಕೋರ್ಟಿಗೆ ಜ್ಯಾಹೀರುಮಾಡಿಕೊಳ್ಳತಪ್ಪಿದರೆ ಆತನನ್ನು ಶಿವಾಯಿ ಎಂತ ಸ್ಥಾಪಿಸಲಾದೀತು ತಿಳಿದಿರಲಿ

ಪುತ್ತೂರು 20–3–33 } **B Ramachandra Rao**, M. A. B. L. Pleader for Plaintiff.


# ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ

# ಚಂದಾದಾರರಾಗಿರಿ

## Panchmal Narasimha Kamath & Brothers,

CAR STREET, MANGALORE.

31st Oct. 1932.

The Manager,

**Zenith Life Assurance Company, Limited,**

MANGALORE.

DEAR SIR,

I have great pleasure to acknowledge receipt of your cheque No. B. 942296 on the National Bank of India Ltd. Bombay for Rs. 1954—12—0 in full settlement of the claim on Policy No. 3765 of my deceased brother Ganapathi Kamath.

The Policy was deliverd to you duly discharged on 21st October 1932 and your Head Office have issued the cheque on the 25th October *i. e.* **on the very day they received the Policy in their hands.**

I am really greatful for the prompt settlement of the claim for which your Company is so well known.

YOURS FAITHFULLY,

*Sd.* Panchmal Narasimha Kamath

# DERBY SWEEPS.

| CONDUCTED BY | Subscriptions will be received for Ordinary Mail Till. |
|---|---|
| MUTUAL CLUB LTD. | 26—4—1933 at Rs. 4—0—0. Air Mail 4 annas extra. |
| IRISH HOSPITALS' TRUST LTD. | 12—4—1933 at Rs. 6—12—0. Air Mail 4 annas extra. |

*Both the above Clubs' Derby Tickets can be had for cash from—*

**Shelanadi Manjunath Krishna Nayak & Sons,**

***MANGALORE,***

***Authorised Agents.***

ತಾ. 19-3-'33ನೇ ಸ್ವದೇಶಾಭಿಮಾನಿಯ ವಿಶೇಷ ಸಂಚಿಕೆಯಲ್ಲಿ ಐರಿಶ್ ಹೊಸ್ಪಿಟಲ್ ಟ್ರಸ್ಟಿನ ಟಿಕೇಟಿಗೆ ರೂ. 6-0-0 ಎಂದಿದ್ದನ್ನು ರೂ. 6-12-0 ಎಂದು ತಿಳಿಯತಕ್ಕದು.


## ಸ್ಥಳೀಕ ನೋಟಗಳ ಬಾಲ!

ತಾ. ೨೮ನೇ ಫೆಬ್ರವರಿ ದಿನ ಡಿ. ಬೋರ್ಡು ಮೀಟಿಂಗು ನಡೆಯಿತು. ಕಾರ್ಯಕಲಾಪಗಳ ವರದಿ ಕೈಯೋಗೆ ಸೇರಲಿಲ್ಲ. ತೊಂಡಿತು.

° ° ° ° ° °

82 ಸದಸ್ಯರು ಸೇರಿದ್ದರು. ಅನೇಕ ಠರಾವುಗಳಾದುವು. ಲೈಸ್ಸು ಕಟ್ಟದೆ ಮೋಟರ್ ಬಿಡುವವರನ್ನು ಕಂಡು ಹಿಡಿದು ಕೊಟ್ಟವರಿಗೆ ಇನಾಮು ಕೊಡುವದೆ ನಿರ್ಧಾರವಾಯಿತು. ಸ್ವಸ್ತಿ!

° ° ° ° ° °

ಕುಂದಾಪುರದ ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಶಿವರಾಮ ಉಡುಪರಿಗೆ ಕೆಲಸದಲ್ಲಿ ಎರಡನೇ ಸಲ ಎಕ್ಸ್ಟೆಂಶನ್ ದೊರೆಯಿತು; ಇನ್ನೊಬ್ಬ ಒಳ್ಳೆ ಪಂಡಿತರು ದೊರೆಯುವ ವರೆಗೆ ಮಾತ್ರ!

° ° ° ° ° °

ಬಂಟ್ವಾಳದಲ್ಲಿನ ದಾರಿಹೋಕ ನಾಯಿಗಳ ದಮನಕ್ಕಾಗಿ ೨೫ ರೂಪಾಯಿಗಳನ್ನು ಬಂಟ್ವಾಳದ ಎಲ್. ಎಫ್. ಆಸ್ಪತ್ರೆಯ ಮೆಡಿಕಲ್ ಆಫೀಸರರ ಬಳಿ ಇಡಬೇಕೆಂದಾಯಿತು.

° ° ° ° ° °

ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ ಅರಿಕೆಯಂತೆ ಕೆಲವು ಲೈಬ್ರರಿ ಪುಸ್ತಕಗಳನ್ನು ಪಡೆಯಲು ೧೦೦ ರೂಪಾಯಿ ಸೆಂಕ್ಷನ್ ಆಯಿತು! ಚೆನ್ನಾಗಿ ಓದಲಿ!

° ° ° ° ° °

ಹರಿಜನ ಸೇವಾಸಂಘದ ಸೆಕ್ರೆಟರಿಯವರು ತಾ. ೧೫-೨-೩೩ರಲ್ಲು ಬರೆದು ಕೇಳಿಕೊಂಡಂತೆ ಡಿ. ಬೋರ್ಡು ರಂಗ ಅಯ್ಯರ ಬಿಲುಗಳನ್ನು ಸಮರ್ಥಿಸಿ ಠರಾವು ಮಾಡಿ ಮನಃಪೂರ್ವಕ ಬೆಂಬಲ ಕೊಡುವುದೆಂದು ನಿರ್ಧರಿಸಿತು. ಅತಿ ಸಂತೋಷ!

° ° ° ° ° °

ಪ್ರೊವಿಡೆಂಟ್ ಫಂಡಿನ ರೂಪಾಯಿ ೫೦,೦೦೦ವನ್ನು ಮದ್ರಾಸು ಪ್ರೊವಿನ್ಸಿಯಲ್ ಕೊಪರೇಟ್ ಬೇಂಕ್ ಲಿಮಿಟೆಡ್‌ನಲ್ಲಿ ಠೇವಣಾತಿಯಾಗಿಡುವದೆ ನಿರ್ಧಾರವಾಯಿತು. ಆದರೆ ಬೇಂಕಿನವರು ೧ ವರ್ಷದ ಫಿಕ್ಸೆಡ್ ಡಿಪೊಜಿಟು ತೆಗೆದುಕೊಳ್ಳಲು ಸಮ್ಮತಿಸಲಿಲ್ಲ.

° ° ° ° ° °

ಲೋಕಲ್ ಬೋರ್ಡ್ ಕೆಲಸಗಾರರ ಪ್ರೊವಿಡೆಂಟ್ ಫಂಡ್ ಕಂಟ್ರಿಬ್ಯೂಶನ್‌ಗಳನ್ನು ಜೀವವಿಮೆ ಕಂಪೆನಿಗಳಲ್ಲಿಡಬೇಕೆಂಬ ಬಗ್ಗೆ ಪೋಪ್ಯುಲರ್ ಇನ್ಶುರೆನ್ಸ್ ಮೊದಲಾದ ಕಂಪೆನಿಗಳೊಡನೆ ವಿಚಾರಿಸಲಾಯಿತು. ಇತ್ಯಾದಿ.

° ° ° ° ° °

ಡಿಸ್ಟ್ರಿಕ್ಟ್ ಬೋರ್ಡು ಅಸ್ಪೃಶ್ಯತಾನಿವಾರಣಾ ಬಿಲುಗಳನ್ನು "whole heartedly" ಅನುಮೋದಿಸಿದ್ದು ಒಂದು ಅಭಿನಂದನೀಯ ಸಂಗತಿ. ನಮ್ಮ ಮುನಿಸಿಪಾಲಿಟಿಯೂ ಅಂತಹ ಠರಾವನ್ನು ಮಂಜೂರು ಮಾಡಿದ್ದಿರಬಹುದು.

° ° ° ° ° °

ಅದಿಂಲ! ಬೇಗನೆ ನಮ್ಮ ಸಿಟಿಗೆ ಇಲೆಕ್ಟ್ರಿಕ್ ದೀಪವು ಬರುತ್ತದೆ. ಭೂಮಿಯಡಿಯಲ್ಲೂ, ಮೇಲೂ ಅದರ ಕೆಲಸಗಳು ನಡೆಯುತ್ತಿವೆ. ಇದರ ಜೊತೆಗೆ ನಮಗೆ ಕೆಲವು ಫಯರ್ ಬ್ರಿಗೇಡುಗಳು ಬೇಕಾಗಿವೆ.

ದಿವ್ಯ ದೃಷ್ಟಿ.


## The Canara Industrial & Banking Syndicate Limited.

Estblished in 1925. Branches: Mangalore, Payyanur, Brahmavar, Kumta, Karwar, Hubli & Honnavar. Head Office:— UDIPI.

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

STATEMENT OF AFFAIRS OF THE SYNDICATE AS ON 28TH FEBRUARY 1933.

| LIABILITIES. | | | ASSETS. | | |
|---|---|---|---|---|---|
| Paid up Capital | Rs. | 20,000 — 0 — 0. | Loans on Land mortgage | Rs. | 1,56,229— 2— 1. |
| Reserve & other funds | ,, | 20,250— 0— 0. | Loans on Valuable Securities | ,, | 2,08,334— 0—10. |
| Deposits | ,, | 8,37,461— 6—11 | Bills of Exchange, Hundis and Promissory Notes | ,, | 4,27,591— 9— 0. |
| Due to Bankers | ,, | 71,566— 2— 3. | Investment on Shares of other Companies | ,, | 43,565— 0— 0. |
| Sundries | ,, | 49,927— 6— 4. | On Deposits with other Banks | ,, | 90,000— 0— 0. |
| | | | Sundries | ,, | 45,430— 1—11. |
| | | | Cash in hand & with Bankers | ,, | 28,055— 1— 8. |
| Total | Rs. | 9,99,204 – 15 – 6 | Total | Rs. | 9,99204 – 15 – 6 |

Long and Short term Loans on attractive Schemes are grant

ALL KINDS OF BANKING BUSINESS UNDERTAKEN.

Udipi, 6—3—1933.

P. A. Pai Bros., *Managing Agents.*

# DUO-TREAD TIRES.

## Seiberling's Novel Features.

1. Air Cooled.
2. Duod Trea.
3. Twice the Mileage.

FOR

4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ಫುಟ ವಿಚಾರಗಳು.

### ಮುಂದಣ ತಿದ್ದುಪಾಟುಗಳು.

ಸೂತ್ರರೂಪವಾಗಿ ಹೊರಬಿದ್ದಿವೆ. ಮನೆಯಲ್ಲ ನಮ್ಮದೇ ಕೆಂಬುಕರಿಗೆಗೆ ಮಾತ್ರ ಮುಟ್ಟಲು ಅಧಿಕಾರಗಳು ಇತರರ ಕೈಯಲ್ಲಿ, ಇಷ್ಟನ್ನು ಪ್ರಕಟಿಸಿ ತಿಳಿಸುವುದಕ್ಕಾಗಿ ಏನೆಲ್ಲ ಗಡಿಬಿಡಿ? ಎಷ್ಟು ಕಾಲದಿಂದ? ಪರ್ವತವು ಅಪ್ರಸವವಾಗುವ ನಮೂನೆಯು ಹೀಗೆ. ಮೂರನೆ ರೌಂಡ್ ಟೇಬಲ್ ಕೊನ್ಪರೆನ್ಸ್ ಮುಗಿದಾಗ ನಿರ್ಧರಿಸಿದಷ್ಟು, ಅರ್ಧಕ್ಕರ್ಧವಾಗಿದ್ದುದು ಈಗ ಸ್ವಲ್ಪ ತುಂಬಿ ಹೊರಬಿದೆ. ಛಾಪೆಗೆ ಕೊಡುವ ಮೊದಲು ಸಂಪೂರ್ಣವಾಗಿ ಕನ್ಸರ್ವೆಟಿವರ ಅಭಿಪ್ರಾಯಗಳಲ್ಲಿ ಮೊದಲೇ ಕೇಳಿ ತಿಳಿದುಕೊಂಡು ಅವನ್ನು ಅಲ್ಲಲ್ಲಿ ಕುಂಟು ಪಂಕ್ತಿಗಳನ್ನಾಗಿ ಸೇರಿಸಿ ಮುಂದೆ ಆ ಪಕ್ಷದವರು ಎದುರಾಡದಂತೆ ಹೋರರು ಮುಂಜಾಗ್ರತೆ ತೆಗೆದು ಕೊಂಡಿರುವರು. ಒಂದು ಕೈಯಲ್ಲಿ ಅಧಿಕಾರವನ್ನು ಕೊಟ್ಟು ಅದೆಲ್ಲವನ್ನು ರದ್ದುಮಾಡುವ ಅಧಿಕಾರವನ್ನು ವೈಸರಾಯರಿಗೆ ಕೊಡಲಾಗಿದೆ. ಮಂತ್ರಿಗಳು ಕೌನ್ಸಿಲುಗಳು ಮೊದಲಾದವರಿಗೆ ಯಾವ್ಯಾವ ಅಧಿಕಾರಗಳಿವೆಯೆಂದು ಓದಿದರೆ ಗೊತ್ತಾಗುವ ಹಾಗಿಲ್ಲ. ಬಹುಶಃ, ವೈಸ್ರಾಯರು ಏನನ್ನು ರದ್ದುಗೊಳಿಸುವ ಹಕ್ಕುಳ್ಳವರೋ ಅವೇ ಅಧಿಕಾರಿಗಳು ಕೌನ್ಸಿಲಿಗೂ ಮಂತ್ರಿಗಳಿಗೂ ಮೊದಲು ನಿಶ್ಚಯಿಸುವುವಲ್ಲೆಂದು ಇರಬಹುದು, ಎಂದರೆ, ಇವರು ನಿಶ್ಚಯಿಸುವುದನ್ನು, ಗವರ್ನರರು ಯಾ ವೈಸ್ರಾಯರು ಅಳಿಸಿಬಿಡಬಹುದು; ಹೀಗಿದೆ. ಸೈನ್ಯವೇ ಮೊದಲಾಗಿ ದೇಶಸಂರಕ್ಷಣೆಯ ಏರ್ಪಾಡು, ಪರದೇಶಗಳ ವಿಚಾರ, ಇಗರ್ಜಿಗಳ ಆಡಳಿತ, ಇವು ಮೂರನ್ನು ವೈಸ್ರಾಯರೇ ಸ್ವತಃ ವಹಿಸುವರು; ಈ ಬಗ್ಗೆ ಅವರಿಗೆ ಮಂತ್ರಿಗಳೂ ಬೇಡ, ಮಂತ್ರಿಗಳ ಬದಲಾಗಿ ಮೂವರು ಕೌನ್ಸಿಲರುಗಳು ಇರುವರು. ಇವರು ಕೌನ್ಸಿಲು ಮೆಂಬರರಾಗಬೇಕೆಂದೇನೂ ಇಲ್ಲದೆ, ಯಾರೇ ಆದರೂ ಆಗಿದ್ದು, ಹಾಗೆ ಕೌನ್ಸಿಲರಾದ ಕೂಡಲೆ, ಕೌನ್ಸಿಲಿನಲ್ಲಿ ಮೆಂಬರಿಕೆ ಹೊಂದುವರು. ಇದಿಷ್ಟು ರಿಜರ್ವಡ್ ಇಲಾಖೆಯ ವಿಚಾರ.

### ಎಂತೂ ಇದು ಎಂದಿಗೆ ಜ್ಯಾರಿಗೆ ಬರುವುದು?

ಈ ಇಸ್ತಿಹಾರು ಪ್ರಕಟವಾದ ಬಳಿಕ, ಪಾರ್ಲಿಮೆಂಟಿನ ಮೆಂಬರರೂ ಹಿಂದೀ ಕೆಲವು ಎಂದಿನಂತಹ ಪ್ರತಿನಿಧಿಗಳೂ ಸೇರಿ ಒಂದು ಜತೆ ಕಮ್ಮಿಟಿಯಾಗುವುದು ಇದರ ಅಭಿಪ್ರಾಯಗಳನ್ನು ತಿಳಿದು ಪಾರ್ಲಿಮೆಂಟು ಒಂದು ಕಾನೂನನ್ನು ಮುಂತಂದು ಮಂಜೂರು ಮಾಡುವುದು. ವೋಟರ ಪಟ್ಟಿಗಳು ತಯಾರಾಗುವುವು ನಂತರ ಚುನಾವಣೆಗಳಾಗುವುವು. ಇದಿಷ್ಟರಲ್ಲಿ ರಿಜರ್ವ ಬೇಂಕ್ ಸ್ಥಾಪನೆ ಹೊಂದಬೇಕು, ದೇಶೀಯ ರಾಜ್ಯಗಳಲ್ಲಿ ಪ್ರಜಾ ಸಂಖ್ಯೆಯ ಮೊತ್ತದ ಅರೆವಾಸಿಯಷ್ಟನ್ನುಳ್ಳ ರಾಜ್ಯಗಳು ಫೆಡರೇಶನಿಗೆ ಸೇರಲೊಪ್ಪಬೇಕು; ಅನಂತರ, ಎರಡೂ ಪಾರ್ಲಿಮೆಂಟು ಮಂದಿರಗಳಿಂದ ಚಕ್ರವರ್ತಿಯರಿಗೆ ಬಿನ್ನಪವಾಗಬೇಕು, ಈ ಮೂರರೊಳಗೆ ಯಾವುದೊಂದು ಕೈಗೂಡದಿರುವ ತನಕ ಫೆಡರೇಶನ್ ಆಗದು ಅಂತೂ ೧೯೩೫—೩೬ರ ತನಕ ಇದ್ದಂತಿರುವೆವು. ಪುಣ್ಯವೆಂದರೆ, ಈಗಣ ಕೌನ್ಸಿಲು ಎಸೆಂಬ್ಲಿ ಮೆಂಬರರದು, ಅವರಿಗೆ ಅಂದಿನ ತನಕವೂ ಅವಧಿ ಮುಂದರಿಸುವರು. ಈಗಲೇ ಅಗತ್ಯವಿದ್ದು ಅವಧಿ ದಾಟಿರುವ ಕೌನ್ಸಿಲು ಚುನಾವಣೆಗೆ ಪ್ರಾರಂಭಿಸಿದರೆ, ಕೊಂಗ್ರೆಸು ಪಕ್ಷದವರು ನುಗ್ಗಿ ಈ ಶ್ವೇತಪತ್ರವನ್ನು ಕರಿ ಬಳಿದು ಹಾಳು ಮಾಡುವರಾಗಿ ಭಾವಿಸಿದ್ದಾರೋ ಎಂದು ಕೆಲವರೆನ್ನುವುದಕ್ಕೂ, ಚುನಾವಣೆಗಳನ್ನೇ ಮುಂದರಿಸಿಟ್ಟಿರುವ ಪ್ರಸಂಗಕ್ಕೂ ತಾಳಿ ಬೀಳುತ್ತಿದೆ.

### ಈಗಣ ಶಿಕ್ಷಣ ಪದ್ಧತಿಯು

ವ್ಯಾವಹಾರಿಕ ಪ್ರಪಂಚದಿಂದ ಬಲು ದೂರವಾಗಿರಬಾರದು, ಸಾಧ್ಯವಾಗುವ ಮಟ್ಟಿಗೆ, ಸಿದ್ಧವಾಗಬಹುದಾದ ಒಂದು ಆದರ್ಶವು ನಮ್ಮ ಮುಂದಿರತಕ್ಕದು. ವಿದ್ಯಾರ್ಥಿಯು ಪರೀಕ್ಷೆಗಳನ್ನು ಪಾಸು ಮಾಡುವುದರಲ್ಲೇ ತನ್ನ ಜೀವನದ ಕರ್ತವ್ಯವು ಮುಗಿಯಿತೆಂಬ ಸುಳ್ಳು ನಂಬಿಕೆಯು ನಾಶವಾಗತಕ್ಕದು. ಧ್ಯೇಯವನ್ನು ಮೂಲೆ ಪಾಲಾಗಿಸಿ, ಒಂದು ಸಾಧನವನ್ನೆ ಧ್ಯೇಯವೆಂದು ನಮ್ಮ ದೇಶದಲ್ಲಿ ನಂಬಿರುವರು. ಮಾನಸಿಕ ಶಕ್ತಿಯ ಬೆಲೆ ಅಂದಾಜು ಕಟ್ಟುವುದಕ್ಕೆ ಪರೀಕ್ಷೆಗಳು ಒಂದು ಬಗೆಯಾಗಿ ಅರ್ಧಕ್ಕರ್ಧ ಸಹಾಯವಾಡುವುವಾಗಿವೆ. ಮಾನಸಿಕ ಶಕ್ತಿಗಳನ್ನು ಬೆಳಸಿ ವಿಕಾಸಗೊಳಿಸುವ ಬದಲಾಗಿ, ಮನಸ್ಸಿನಲ್ಲಿ ಏನನ್ನೆಲ್ಲ ತುಂಬುವರೋ ಅದೇ ವಿದ್ಯಾಭ್ಯಾಸವಾಗಿ ಬಂದಿದೆ! ಯಾರೇನೆಂದರೂ, ಅದೊಂದನ್ನು ಇದ್ದಂತೆಯೆ ಒಪ್ಪಿಕೊಳ್ಳಬೇಡಿರಿ; ಸ್ವತಃ ತದ್ವಿಷಯ ಆಲೋಚಿಸುವುದೇ ವಿದ್ಯಾರ್ಥಿಯರ ಕರ್ತವ್ಯವು. ಉದ್ಯಮ, ಸಹನೆ, ಧೈರ್ಯ, ಸಂಯಮಾದಿಗಳಿಂದ ಬೆಳೆಯಿರಿ. ಮನೋಧೈರ್ಯವು ಕಡಿಮೆಯಾಗಿ, ಹೃದಯ ದೌರ್ಬಲ್ಯವು ಹೆಚ್ಚಿರುವುದರಿಂದಲೇ ಪರಾಯತಿಯವರು ಇಂದಿಗೆ ನಮ್ಮ ಮೇಲೆ ಇರುವರು. ಸಭೆ ಧಾರ್ಮಿಕಗಳಾಗಲು, ಮಾತ್ರ ಸದ್ಗುಣಗಳಲ್ಲ. ಅನ್ಯಾಯ ಮಾಡಬಾರದು, ಹಿಂಸೆ ಮಾಡಬಾರದು ಎಂದರೇ ಉತ್ತಮವಲ್ಲ; ನ್ಯಾಯ ಮಾಡಬೇಕು, ಅಹಿಂಸೆಯಿಂದ ಇರಬೇಕು ಎಂಬುದೇ ಮುಖ್ಯ. ಹೀಗಾದರೆ ಮಾತ್ರ ನ್ಯಾಯವು ನೆಲೆನಿಂತು, ಪ್ರೇಮವು ಬೆಳೆವುದು ಎಂದು ಆಚಾರ್ಯ ರೇಯವರು ಕೇರಳ ವಿದ್ಯಾರ್ಥಿಗಳಿಗೆ ಬೋಧಿಸಿದರು.

### ಪುಸ್ತಕ ಜ್ಞಾನ

ಇದೇ ಮಾತ್ರ ಜೀವನೋದ್ಧಾರಕ್ಕಾಗಲಿ ಜಗದುದ್ಧಾರಕ್ಕಾಗಲಿ ಒದಗುವುದಾಗಿಲ್ಲ. ರಾಜ್ಯಭಾರದ ವಿಚಾರಗಳನ್ನು ವಿದ್ಯಾರ್ಥಿಗಳು ಅಗತ್ಯವಾಗಿಯೂ ತಿಳಿದುಕೊಳ್ಳುವ ಹಾಗೆ ಅವರಿಗೆ ವ್ಯವಹಾರಜ್ಞಾನವೂ ಇರುವುದಗತ್ಯವೆಂದು ಉಸ್ಮಾನಿಯಾ ಯುನಿವರ್ಸಿಟಿಯ ಸ್ನಾತಕರಿಗೆ ಸರ್ ಅಕ್ಬರ್ ಹೈದರೀಯವರು ಬೋಧಿಸಿರುವರು. ವಿದ್ಯಾರ್ಥಿಯಾದವನಿಗೆ ತನ್ನ ಗ್ರಾಮ, ಶಹರು, ಜಿಲ್ಲೆಗಳ ನಾಗರಿಕ ವೃತ್ತಿಯ ಸಂಪೂರ್ಣ ತಿಳುವಳಿಕೆ ಇರುವುದು ಅಗತ್ಯವೆಂದೂ ಹಾಗೆ ತಿಳುವಳಿಕೆಯುಂಟಾಗಲು ಅವನಿಗೆ ಯೋಗ್ಯ ಸಲಕರಣೆ ಸಂದರ್ಭಗಳು ಕೊಡಲಾಗುವಂತೆ ಏರ್ಪಡಿಸುವುದು ಉತ್ತಮವೆಂದೂ ಸರ್ ಹೈದರಿಯವರ ಸೂಚನೆ. ಇದೂ ಅಲ್ಲದೆ, ಹೀಗ ಮಾಹಿತಿ ಪಡೆದ ಬಳಿಕ, ಆಡಳಿತದಲ್ಲಿ ಕಂಡು ಬರುವ ನ್ಯೂನಾತಿರಿಕ್ತಗಳನ್ನು ಕುರಿತು ಚರ್ಚಿಸಿ ಟೀಕಿಸುವುದಕ್ಕೂ ವಿದ್ಯಾರ್ಥಿಗಳಿಗೆ ಸಂಪೂರ್ಣ ಅವಕಾಶ ಸಿಗಬೇಕಾಗಿಯೂ ಈ ಮೂಲಕವಾಗಿ ಜನತೆಯಲ್ಲಿ ಸರಕಾರದ ಆಡಳಿತವೆಂಬುದರ ಸದಭಿಪ್ರಾಯವು ನೆಲಸಿ, ಸರಕಾರವು ಈ ಅಭಿಪ್ರಾಯಕ್ಕೆ ಅನುಸರಿಸಿ ನಡೆವಂತೆ ಮಾಡಬೇಕಾಗಿಯೂ ಸಹ ಅವರು ಒತ್ತಿ ಹೇಳಿರುವರು. ಹೈದರಾಬಾದಿನ ಹಾಗೂ ಇಂಡಿಯಾ ಸರಕಾರದ ಅತ್ಯುಚ್ಛ ಅಧಿಕಾರಿಗಳಾದರೂ ಇವರನ್ನು ಗೌರವಿಸುವರಾದ ಕಾರಣ, ಈ ಅಭಿಪ್ರಾಯಗಳನ್ನು ಕುರಿತಾಗಿ ಅವರನ್ನು ಗದರಿಸದೆ. ಅವರ ಭಾಷಣವನ್ನುಕ್ಕೆ ಸ್ವಲ್ಪ ವಿವರಿಸಿದಂತೆ ಮಾಡಿ, ಎಷ್ಟೆಂದರೂ ವಿದ್ಯಾರ್ಥಿಗಳು ರಾಜಕೀಯ ವಿಚಾರದಲ್ಲಿ ಕೈಯಿಕ್ಕಬಾರದಯ್ಯಾ ಎಂದು ಇಂಗ್ಲಿಷ ಪತ್ರಿಕೆಗಳು ಬರೆದಿವೆ. ನಮ್ಮ ಮದ್ರಾಸು ವಿದ್ಯಾ ಇಲಾಖಾ ಡೈರೆಕ್ಟರರೂ, ಹೋಮ್ ಮೆಂಬರರೂ, ವಿದ್ಯಾ ಇಲಾಖೆಯ ಮಂತ್ರಿಗಳೂ ಈ ಭಾಷಣಾದಿಗಳನ್ನು ಈ ಸಂಸ್ಥಾನದಲ್ಲಿನ ವಿದ್ಯಾರ್ಥಿಗಳಾರೂ ಓದಿದರೆ ಮೋಸವುಂಟೆಂದು ಇನ್ನೂ ಪ್ರಕಟಿಸಲಿಲ್ಲವೇಕೆ?

### ಸುಳ್ಳು ಸುದ್ದಿ ಹರಡುವವರು

ಅಫಗಾನಿಸ್ಥಾನದಲ್ಲಿ ಇಂಥವರಿಗೆ ಯಾವ ಒಗೆಯ ಶಿಕ್ಷೆಯೂ ಕಾನೂನಿನಲ್ಲಿ ಇಲ್ಲವೆಂಬುದನ್ನು ತಿಳಿದು, ಈಗಿನ ಅಮೀರರು ಹೊಸದೊಂದು ಶಿಕ್ಷೆ ವಿಧಿಸಿರುವರು ಇದು ವಿಚಿತ್ರವಾದರೂ ಪೂರ್ಣ ತೃಪ್ತಿಕರವಾಗಿದೆ. ಕಾಬೂಲಿನಲ್ಲಿ, ದಕ್ಷಿಣ ಪ್ರಾಂತ್ಯದ ವಿಷಯವಾಗಿ ಹಲವು ಸುಳ್ಳುಸುದ್ದಿಗಳನ್ನು ಹರಡಿಸಿದ ಮೂವರನ್ನು ಕೈದು ಮಾಡಲಾಯಿತು. ಇವರು ಯಾವ್ಯಾವ ಸುದ್ದಿ ಹರಡಿಸಿದ್ದಾರೋ ಅವನ್ನು ಒಂದು ಪ್ರಕಟನೆಯಂತೆ ಬರೆದು ಇವರ ಕೊರಳಿಗೆ ಕಟ್ಟಲಾಯಿತು. ಈಗ, ಇವರನ್ನು ಸರಕಾರದ ಜವಾನರ ಆಳುಗಳ ಕಾವಲಿನೊಡನೆ, ಇಡೀ ರಾಜ್ಯದಲ್ಲಿ ಊರಿಂದೂರಿಗೆ ನಡೆಯಿಸಿ, ಅವರು ಹೇಳಿದ ಸುದ್ದಿಯು ಹೌದೋ ಅಲ್ಲವೋ ಎಂದು ಅವರೇ ವಿಚಾರಮಾಡಿ ತಿಳಿದುಕೊಳ್ಳುವ ಹಾಗೆ ಸಂಚರಿಸಬೇಕಾಗಿ ಅಪ್ಪಣೆ ಕೊಡಲಾಗಿದೆ ಇನ್ನು ಇಡೀ ರಾಜ್ಯವನ್ನೆಲ್ಲ ಸುತ್ತಾಡುವುದರೊಳಗೆ ಇವರಿಗೆ ಸತ್ಯಸ್ಥಿತಿಯು ತಿಳಿಯದೆ ಇರುವುದೆ? ಇಂತಹದೊಂದು ಕಾನೂನು ಇಂಡಿಯಾ ದೇಶದ ವಿಚಾರವಾಗಿ ಸುದ್ದಿ ಹರಡಿಸುವ ಕೆಲವು ಇಂಗ್ಲಿಷರಿಗೆ ಅಗತ್ಯವಾದೀತೆಂದು ಬ್ರಿಟಿಷ ಸರಕಾರವೂ ಅಫಗಾನ್ ಮಾದರಿಯನ್ನು ಅಂಗೀಕರಿಸೀತೇ?

++ + +

---

ಕೌನ್ಸಿಲಲ್ಲಿ ಮಾತಾಡುವಾಗ, ಈಗಣ ಜೈಲ್ ಇಲಾಖಾ ಮೆಂಬರರಿಗೆ, ಜೈಲುನಿವಾಸಿ ಧಾರವೇರುವವರ ಸುಖವರ್ಧನೆಗಾಗಿ, ಇನ್ನು ಮಜ್ಜಿಗೆ ಹಂಚೋಣವೆಂದು ಆಸೆಯಾಗಿದೆ. ಒಂದೆರಡು ವರ್ಷಗಳಿಂದ ಬೇಡಿಕೊಂಡರೂ, ಅದು ಮಲಬಾರಿನವರ ಆಹಾರವಾಗಿಲ್ಲವೆಂದು ಮಲಬಾರಿನಲ್ಲಿ ಮಜ್ಜಿಗೆ ನೀರಿಗೂ ತಕ್ಕಾರವೆನ್ನುವಂತೆ ಹೇಳುತ್ತಿದ್ದರು. ಈಗ ಮಜ್ಜಿಗೆ ಕೊಡಿಸುವರಂತೆ. ಒಬ್ಬ ಮೆಂಬರರು ಇವರೀಗ 'ಮಜ್ಜಿಗೆ ಮೆಂಬರು' ಎಂದು ಹೆಸರುಗೊಂಡಿರುವರು ಎಂದಿದ್ದಾರೆ!

++ + +

## NOTES....
## ನೋಟಗಳು.

ಕಾರ್ಖಾನೆಯಲ್ಲಿ ಮೂರು ವರ್ಷವಿದ್ದು, ಬಹು ಮಂದಿ ಪ್ರವೀಣ ಇಂಜಿನೀರುಗಳು ಸೇರಿ ತಯಾರಿಸಿದ, ಮಜಭೂತಾದ ಬಸ್ಸು ಬಂದಿದೆ. ಇದರಲ್ಲಿ ವಿಚಿತ್ರವೆಂದರೆ, ಯಂತ್ರ ತಿರುಗುವುದಿಲ್ಲ. ಎಲ್ಲಿ ನೋಡಿದರೂ ತುಂಬ ಬ್ರೇಕುಗಳೇ. ಇದರ ಹೆಸರು 'ವ್ಹೈಟ್ ಪೇಪರ' ಎಂದು. ಇದನ್ನು ಹತ್ತುವವರುಯಾರು?

*    *    *    *

ಇದ್ದ ಸ್ಥಳದಿಂದ ಹೊರಡಲು ನಿಶ್ಚಯಿಸಿ, ಹೇಗೂ ಮಾಡಿ, ಒಳ್ಳೆ ಮನಸ್ಸಿನಿಂದ ಈ ಬಸ್ಸನ್ನು ನಡಿಸಿದರೆ, ಸೀದಾ ಹಿಂದೆ ಹಿಂದೆ ಹೋಗಿ, ಮನೆಯ ಯಾವ ಕೋಣೆಯಲ್ಲಿ ಹೋಗಿ ತಂಗುವುದೋ, ಯಾರಿಗೆ ಹೇಳಲೂ ಸಾಧ್ಯವಾಗಿಲ್ಲ. 'ವ್ಹೈಟ್ ಪೇಪರ' ಬಸ್ಸಿನ ಪ್ರತಾಪ ಅಪ್ಪಿಟೆ.

*    *    *    *

ಹೆಸರಿಗೊಪ್ಪುವ ರೀತಿಯ ವರ್ಣವೇ ಇದರಲ್ಲಿಲ್ಲ, ಕಪ್ಪಾಗಿ ತೋರುತ್ತಿದೆ. ಕಪ್ಪನ್ನು ಬಿಳಿದೆಂದು ಏಕೆ ಹೆಸರಿಟ್ಟರೋ ಯಾವನೂ ತಿಳಿದಿಲ್ಲ.

*    *    *    *

ಹೊಲವನ್ನು ಉಳುವುದಕ್ಕೆ ಹೊರಟವನು, ಹೊಸದೊಂದು ನೇಗಿಲನ್ನು ತರಿಸಿರುವನು. ಜೋಡೆತ್ತುಗಳು ಬರಬೇಕು ಅವನ್ನು ಹೂಡಬೇಕು ಅದಕ್ಕೆ ಮೊದಲೇ, ಎತ್ತುಗಳ ಮೂಗುದಾರಗಳನ್ನು ನೂರಾರು ಸಂಕೋಲೆಗಳಿಗೆ ಜೋಡಿಸಿ, ಅವನ್ನು ಹಿಡಿದು, ನೇಗಿಲ ಹಿಂದೆ ನಿಲ್ಲುವುದಕ್ಕೆಂದು ಒಂದು ಶಿಲಾ ಆಸನವನ್ನೂ ಮಾಡಿ ನೇಗಿಲ ಮೇಲಿಟ್ಟು, ಅದನ್ನು ನಡೆಸಲು ಸಿದ್ಧನಾಗಿರುವನು

*    *    *    *

ಆ ಎತ್ತು ರಾಜಕೀಲದ್ದು, ಫಕ್ಕನೆ ಉಳಲೊಲ್ಲವು. ಈ ಎತ್ತು ಜೋಡಿ ಜಾತಿಯದ್ದು, ಕೂಡಲೆ ಎಳೆಯಲು ಅಶಕ್ತವಾಗಿದೆ ಇವೆರಡು ಸೇರದ, ಉಳಲಾಗದು ಉಳುವಾಗಲಾದರೂ ಮೂಗುದಾರಗಳ ಸಂಕಲೆಯ ಎಳೆದಾಟವು ಬಲವಾಗಿದೆ. ಎಲ್ಲಕ್ಕೂ ಮಿಗಿಲಾಗಿ ನೇಗಿಲ ದಾರಕ್ಕೆಂದು ಮಡಗಿದ ಆ ಶಿಲಾ ಆಸನವಿದೆಯಲ್ಲ, ಅದನ್ನು ಎಂದಾದರೂ ಇವೆರಡೂ ಎತ್ತುಗಳು ಎಳೆವಂತಿಲ್ಲ ಪರಂತು,

*    *    *    *

ಫಕ್ಕನೆ ಎಳೆದರೆ ಹೊಲವು ತುಂಬಾ ಕಾಲಿವೆಗಳಾಗುವ ಹಾಗೆ ಉಳಬಹುದು ಪೈರು ಚೆನ್ನಾಗಬಹುದೆಂದು ಅಂದಾಜು. ಆದರೆ, ಉಳುವುದು ಮುಗಿಯಬೇಡವೆ? ಅದಕ್ಕೆ ಪ್ರಾರಂಭವಾಗುವುದಕ್ಕೂ ಬಹಳ ವರ್ಷ ಬೇಕು. ಅದುವರೆಗೆ, ಎಲ್ಲ ಸಿದ್ಧತೆಯಿದ್ದೂ ಒರಗಾಲ, ಪೈರು ಇಲ್ಲ.

*    *    *    *

ಹೀಗಾಗುವುದೋ ಎನ್ನುವಂತಿದೆ.—ವ್ಹೈಟ್ ಪೇಪರಿನ ಶಿಫಾರಸುಳ್ಳ ಹೊಸ ರಾಜ್ಯಭಾರ ಕ್ರಮ.

*    *    *    *

ಕಾರಾಗೃಹ (ಜೈಲ)ದಲ್ಲಿ ಕೃಷ್ಣ ಪರಮಾತ್ಮನು ಹುಟ್ಟಿದನಲ್ಲ. ಏಕೆ? ಎಂದು ಈಗ ತಿಳಿದಿದೆ. ಮದ್ರಾಸ್ ಜೈಲ್ ಇಲಾಖಾ ಮೆಂಬರರ ಮಾತು ಕೇಳಿರಿ—ಜೈಲುಗಳಲ್ಲಿ ೧೫೦೦೦ ಕೈದಿಗಳು ಈ ಪ್ರಾಂತ್ಯದಲ್ಲಿದ್ದಾರಲ್ಲ, ಅವರ ಆಹಾರ ಹಾಳೆನ್ನಬೇಡಿರಿ. ಅವರ ಆರೋಗ್ಯ ನೋಡಿರಿ!

*    *    *    *

ನೇಕಡಾ ೭೦ ಮಂದಿಯ ಭಾರ ಹೆಚ್ಚಿದೆ, ಉಳಿದ ೩೦ರಲ್ಲಿ ಕೆಲವರು ಮೊದಲು ಇದ್ದಷ್ಟೆ ಭಾರವಾಗಿದ್ದಾರೆ; ಕೆಲವರು ಮಾತ್ರ ಭಾರ ಕಳೆದುಕೊಂಡಿದ್ದಾರೆ. ಹೊರಗಿರುವ ೧೫೦೦೦ ಮಂದಿ ಹೇಗಿದ್ದಾರೆಯೋ? ಎಂದು ಆ ಮೆಂಬರರು ಕೇಳುತ್ತಾರೆ. ಉಳಿದ ಮೆಂಬರರು ಈ ಜೈಲ್ ಇಲಾಖಾ ಮೆಂಬರರನ್ನು ನೋಡಿದರು. ಉತ್ತರಕೊಟ್ಟಿಲ್ಲವೇಕೋ?

*    *    *    *

ತಾತ್ಪರ್ಯ:—ಭಾರ ಹೆಚ್ಚ ಬೇಕೋ, ಜೈಲಿಗೆ ಹೋಗಿ ಉಳುಕೊಳ್ಳಿರಿ. ಭೂಭಾರ ಹರಿಸಲು ಅವತರಿಸಿದ ಕೃಷ್ಣನು ಜೈಲಿನಲ್ಲಿ ಹುಟ್ಟಿದನಾದರೂ ಅಲ್ಲಿ ಬೆಳೆಯಲಿಲ್ಲ. ಅಲ್ಲಿ ಬೆಳೆದಿದ್ದರೆ ಅವನ ಭಾರವೇ ಹೆಚ್ಚಾಗುತ್ತಿದ್ದಿತು. ಹೊರಗಿದ್ದವರಲ್ಲಿ ಭಾರವಾದವರನ್ನು ವಧಿಸಿದನವನು.

*    *    *    *

ಅಸ್ವಸ್ಥದಿಂದೇಳುವ ಸಮಯದಲ್ಲಿ ಹೋರ್ಲಿಕ್ಸ್ ನವ ಶಕ್ತಿಯನ್ನೊದಗಿಸಿ ಕೊಡುತ್ತದೆ.

ಹೋರ್ಲಿಕ್ಸ್ ಮಿಕ್ಚರು ಎಲ್ಲಾ ಸ್ಟೋರುಗಳಲ್ಲಿ ದೊರೆಯುತ್ತೆ. ಅಥವಾ ೧೪ ಅಣೆ ಅಂಚೆಚೀಟು ರವಾನಿಸಿದರೆ ಟಿ. ಪೆ. ೩೨೨೯ ಕಲ್ಕತ್ತಾ ಇಲ್ಲಿಸಿಕ್ಕುತ್ತೆ.

'ಹೋರ್ಲಿಕ್ಸ್ ಇನ್ ಕನ್‌ವಲಸೆನ್ಸ್' ಕುರಿತಾಗಿರುವ ಪತ್ರಿಕಕ್ಕಾಗಿ ಟಿ. ಪೆಟ್ಟಿಗೆ ೩೨೨೯ ಕಲ್ಕತ್ತಕ್ಕೆ ಬರೆಯಿರಿ.

ಅಸ್ವಸ್ಥದಿಂದ್ದೊದೊಡನೆ ನೀವು ಕಳೆದುಕೊಂಡ ಶಕ್ತಿಯನ್ನು ಪುನರ್ವರ್ಧಿಸಲು ತ್ವರೆಗೈಯ್ಯಬೇಕು; ಹೋದ ಚೈತನವನಂ ತಿರಿಗಿ ಬರಮಾಡಿಸಬೇಕು.

ಹೋರ್ಲಿಕ್ಸ್‌ನ್ನು ಸೇವಿಸಲು ಇದೇ ಸುಸಂದರ್ಭ! ಕ್ಷೀಣವಾದ ದೇಹಕ್ಕೆ ಬೇಕಾದ ಎಲ್ಲಾ ಪೋಷಣೆ ಸಾರವು ಅದರಲ್ಲಿದೆ. —ಕಾರಣ, ಅದು ದನದ ಕೆನೆ ಹಾಲಿನಿಂದಲೂ ಬೆಳೆದ ಬಾರ್ಲಿಯಿಂದಲೂ, ಗೋಧಿ ಸಾರದಿಂದಲೂ ತಯಾರಿಸಲ್ಪಟ್ಟು ಅತ್ಯವೋಘವಿದೆ.

ಹೋರ್ಲಿಕ್ಸ್

ಮೂಲಭೂತವಾದ ಮೋಲ್ಟೆಡ್ ಹಾಲು

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಉಪ್ಪತ್ರ ದು ಪಮ್ಷಣಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಾಲುತರ ಮಾಸದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್ ಬಾತ್ ಟುವಾಲುಗಳೂ, ಧೋತಿ ಸೀರೆ— ಬೈರವಾಸು—ಚೆಕ್ಸು—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಬುಹಾಲ್]

ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For — A. F. Harvey,
*Managers:* Madura Mills Co, Ltd.


## ಕನ್ನಡ ನಾಡಿನ ಸುದ್ಧಿ.

### ಮೈಸೂರು

ಶಿವರಾಮಪೇಟೆಯ ಶ್ರೀ ವಿಠಲರಾಯರು ಶ್ರೀರಾಮ ಮಂದಿರವೊಂದನ್ನು ಸ್ಥಾಪಿಸಿ, ರಾಮಪ್ರತಿಷ್ಠೆ ಮಾಡಿದರು.

ಕೃಷ್ಣರಾಜಪೇಟೆಗೆ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಶ್ರೀ ಶಾಂತಪ್ಪನವರು ಊಟೋಪಚಾರಗಳಿಗೆ ಅನುಕೂಲ ಮಾಡಿದ್ದಾರೆ.

ಶ್ರೀ ಟಿ. ನಾರಾಯಣರಾವ್ ಮತ್ತು ಜಿ. ಸಿ ಶಂಕರಪ್ಪ ಎಂಬಿಬ್ಬರು ಇಂಗ್ಲಿಷ್ ಮತ್ತು ಕನ್ನಡ ದಿನಪತ್ರಿಕೆಯೊಂದನ್ನು ಯುಗಾದಿಯಿಂದ ಆರಂಭಿಸುವರಂತೆ. 'ಮೈಸೂರು ಪತ್ರಿಕೆ' ಎಂದು ಇದಕ್ಕೆ ಹೆಸರು.

ಮೈಸೂರ ಜಿಲ್ಲಾ ಬೋರ್ಡಿಗೆ ೧೪ ತಾಲೂಕುಗಳಿಂದ ೩೮ ಸದಸ್ಯರೂ, ಪಿರಿಯಾಪಟ್ಣ, ಯಳಂದೂರು ಇವೆರಡರಿಂದ ಇಬ್ಬರು ಸದಸ್ಯರೂ ಚುನಾವಣೆಗೆ ನಿಲ್ಲಬೇಕೆಂದು ಸರಕಾರದ ಆಜ್ಞೆಯಾಗಿದೆ.

ಮೈಸೂರು ಯುವರಾಣಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಮಹಿಳೆಯರ ಮಹಾ ಸಭೆಯು ೬ನೇ ತಾ॥ ಮೈಸೂರಲ್ಲಿ ನಡೆಯಿತು. ಮೈಸೂರು ಮಹಿಳಾ ಸಂಘದ ವಿಚಾರದಲ್ಲಿ ಸತೀ ಮಿರ್ಜಾರವರು ಮಾಡಿದ ಕಾರ್ಯಗಳನ್ನು ಶ್ಲಾಘಿಸಿ ಅವರಿಗೊಂದು ಬಿನ್ನವತ್ತಳೆಯನ್ನರ್ಪಿಸಿದರು.

### ಬೆಂಗಳೂರು

ಮಂಡ್ಯದಲ್ಲಿ ೧೪, ೧೫ನೇ ತಾ॥ ಆರೋಗ್ಯ ಮತ್ತು ಶಿಶು ಪ್ರದರ್ಶನವಾಯಿತು. ಮೈಸೂರು ಜಿಲ್ಲಾಧಿಕಾರಿಗಳು ಬಹುಮಾನಗಳನ್ನು ಹಂಚಿದರು.

ತಾ॥ ೧೪ನೇ ಸಂಜೆ ತಾತಾ ಶಾಲೆಯ ಆವರಣದಲ್ಲಿ ಸರ್ ಮಿರ್ಜಾ ಇಸ್ಮಾಯಿಲ್‌ರ ಅಧ್ಯಕ್ಷತೆಯಲ್ಲಿ ತಾತಾ ವಿಜ್ಞಾನ ಶಾಲೆಯ ಅಧಿಕಾರಿಗಳಾಗಿದ್ದ ಡಾ॥ ಫಾರೆಸ್ಟರವರಿಗೆ ಸತ್ಕಾರವಾಯಿತು.

ಕಂಟ್ರೋಲರ್ ಕಚೇರಿಯ ಎನ್. ಎಸ್. ಶರ್ಮ ಎಂಬ ಗುಮಾಸ್ತನೊಬ್ಬನು ಮೋಸದ ರುಜು ಮಾಡಿ ೭,೧೦೦ ರೂಪಾಯಿಯನ್ನು ದುರುಪಯೋಗ ಪಡಿಸಿದನೆಂದು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ಸುಂಕದ ಸಮಿತಿಯವರು ಬೆಂಗಳೂರಿಗೆ ಬಂದು ರೇಷ್ಮೆ ಕೈಗಾರಿಕೆ ಸಂಘದವರ ಸಾಕ್ಷ್ಯವನ್ನು ತೆಗೆದುಕೊಳ್ಳುತ್ತಿರುವರು.

ಅಫ್ಘನ್ ಅಮೀರರಾಗಿದ್ದ ಮಹಮ್ಮದ್ ಯಾಕೂಬ್ ಖಾನರ ೪ ಮಂದಿ ರಾಜಕುಮಾರರು ಉತ್ತರ ಬಿಹಾರದಲ್ಲಿ ವಾಸಮಾಡುತಿದ್ದಾರೆ. ಈ ತಿಂಗಳ ಕೊನೆಗೆ ಅವರು ಬೆಂಗಳೂರಿಗೆ ಬರುವರೆಂದು ಸುದ್ದಿ.

ಶಿವಮೊಗ್ಗಾ ತಾಲ್ಲೂಕು ಪಟೇಲ ಶಾನುಭೋಗರುಗಳ ಸಭೆಯು ಭದ್ರಾವತಿಯ ಉತ್ತರದ ಮಾವಿನ ತೋಪಿನಲ್ಲಿ ಶ್ರೀ ವಿ. ವಿ. ಅಯ್ಯಂಗಾರ ಅಧ್ಯಕ್ಷತೆಯಲ್ಲಿ ನಡೆಯಿತು.

ನಗರ ತಾಲೂಕು ಮಣಿನಹಳ್ಳಿ ಎಂಬ ಹಳ್ಳಿಗೆ 'ಮಾರುತಿಪುರ' ವೆಂದು ಹೊಸ ಹೆಸರನ್ನು ಕೊಟ್ಟಿದ್ದಾರೆ.

### ಚಿತ್ರದುರ್ಗ

'ಜಿಲ್ಲಾ ಬೋರ್ಡು ಹೆಡ್ ಗುಮಾಸ್ತೆ ಶ್ರೀ ಪಿ. ರಾಮರಾಯರನ್ನು ಹಾಸನಕ್ಕೂ, ಹಾಸನದ ಜಿಲ್ಲಾ ಬೋರ್ಡು ಹೆಡ್ ಗುಮಾಸ್ತ ಶ್ರೀ ಪುಟ್ಟಯ್ಯನವರನ್ನು ಚಿತ್ರದುರ್ಗಕ್ಕೂ ವರ್ಗಾಯಿಸಿರುತ್ತಾರೆ.

ಚಿತ್ರದುರ್ಗ ಜಿಲ್ಲಾ ಬೋರ್ಡಿನವರು ಚಿತ್ರದುರ್ಗ ಚಿಕ್ಕಜಾಜೂರು ರೈಲ್ವೆಗಾಗಿ ಮಾಡಿದ್ದ ಶೇಕಡ ೫ರ ಡಿಬೆಂಚರ ಸಾಲವನ್ನು ಅಕ್ಟೋಬರ್ ೧ನೇ ತಾ॥ನಿಂದ ಹಿಂದಕ್ಕೆ ಕೊಡಲು ನಿರ್ಣಯ ಮಾಡಿದ್ದಾರೆ.

### ಹಾಸನ.

೬ನೇ ತಾ. ಹಾಸನದ ಕರ್ಣಾಟಕ ಸಾಹಿತ್ಯ ಸಂಘದ ಕಾರ್ಯನಿರ್ವಾಹಕ ಸಭೆಯು ನಡೆಯಿತು. ೧೪ನೇ ತಾ. ಸಂಜೆ ಪಂಡಿತ ಶ್ರೀ. ಶ್ರೀನಿವಾಸ ಶಾಸ್ತ್ರಿಗಳವರು 'ಕರ್ಣಾಟಕ ಸಾಹಿತ್ಯ'ದ ಮೇಲೆ ಉಪನ್ಯಾಸ ಮಾಡಿದರು. ಶ್ರೀ. ಸಿ. ಆರ್. ನಾರಾಯಣ ಸ್ವಾಮಯ್ಯಂಗಾರ್ಯರು (ವಕೀಲರು) ಧಾಂತವನ್ನೋದಿದರು.

### ತುಮಕೂರು.

ಮರಾಠ ಕ್ಷತ್ರಿಯರ ಮಹಾಸಭೆಯು ಗುಬ್ಬಿ ತಾಲೂಕು ಮಣಿಕುಪ್ಪೆಯ ಶ್ರೀ. ಭವಾನಿಗಿರಿ ಮಠದ ಆಶ್ರಯದಲ್ಲಿ ಎಪ್ರಿಲ್ ೯, ೧೦, ೧೧ನೇ ತಾರೀಕುಗಳಲ್ಲಿ ಸೇರುತ್ತದೆ. ಶ್ರೀ. ಲವಂಗ ಧಾಂತಿ ಸ್ವಾಮಿಗಳು ಅಧ್ಯಕ್ಷರು. ಊಟೋಪಚಾರಗಳ ಏರ್ಪಾಡು ನಡೆದಿದೆ.

ತುಮಕೂರಿನಲ್ಲಿ ಮೈಸೂರು ಅಗ್ನಿವಂಶ ಕ್ಷತ್ರಿಯ ಸಂಘದ ಸಭೆಯು ೨—೪—೩೩ನೇ ದಿನ ಅಲ್ಲಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

### ಕಡೂರು.

ಚಿಕ್ಕಮಗಳೂರಿನ ಮೊದಲನೆ ದರ್ಜೆಯ 'ಮ್ಯಾಜಿಸ್ಟ್ರೇಟ್'ರಾದ ಶ್ರೀ. ವೆಂಕಟರಂಗಂ ಅಯ್ಯಂಗಾರ್ಯರನ್ನು ಹೈಕೋರ್ಟು ರಿಜಿಸ್ಟ್ರಾರಾಗಿ ನೇಮಿಸಿರುವರೆಂದು ಸುದ್ದಿ.

### ಧಾರವಾಡ.

ಕರ್ಣಾಟಕ ಕಾಲೇಜಿನ ಹಿರೇಮಠ ಎಂಬ ವಿದ್ಯಾರ್ಥಿಯು ಪರೀಕ್ಷೆಯಲ್ಲಿ 'ಕಾಪಿ' ತೆಗೆದನಂತೆ. ಕಾಲೇಜಿನ ಅಧಿಕಾರಿಗಳು ಒಂದು ವರ್ಷ ಇವನ ವಿದ್ಯಾಭ್ಯಾಸಕ್ಕೆ ಕಲ್ಲು ಹಾಕಿದರು. ಅದಕ್ಕಾಗಿ ಆ ಹಿರೇಮಠ ಎಂಬ ವಿದ್ಯಾರ್ಥಿಯು ಸೋಮೇಶ್ವರನ ಕೆರೆಯಲ್ಲಿ ಬಿದ್ದು ಪ್ರಾಣ ಬಿಟ್ಟನು. ೬ನೇ ತಾ. ಶವ ತೇಲಿತು.

ತಾ. ೨೫ನೇ ದಿನ ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರ ಚುನಾವಣೆ ನಡೆಯುತ್ತದೆ. ಶ್ರೀನಲವಡಿ ವಕೀಲರು, ರಾವ್ ಬಹದ್ದೂರ್ ಬಿ. ಎಲ್. ಪಾಟೀಲರು ಇವರಿಬ್ಬರಿಗೂ ಯುದ್ಧ ನಡೆಯುತ್ತದೆ.

ತಾ. ೬ನೇ ರಾತ್ರಿ ಕರ್ಣಾಟಕ ಹೈಸ್ಕೂಲಿಗೆ ಬೆಂಕಿ ಹಚ್ಚಿದರು. ಅನೇಕ ಕಾಗದ ಪತ್ರಗಳು, ಕುರ್ಚಿ ಮೇಜು, ರಾವ್‌ಬಹದ್ದೂರ್ ರೊದ್ದರವರ ತೈಲಚಿತ್ರ ಇವೆಲ್ಲ ಸುಟ್ಟು ಹೋದುವು. ಪೌರಸಭೆಯವರು ಎಷ್ಟು ಪ್ರಯತ್ನಪಟ್ಟರೂ ಬೆಂಕಿ ಆರಲಿಲ್ಲ. ಕಟ್ಟಡದ ಬಹು ಭಾಗವು ಸುಟ್ಟುಹೋಯಿತು. ಈ ವರ್ಷದ ಮೆಟ್ರಿಕ್ ಪರೀಕ್ಷೆಯ ಪ್ರವೇಶ ಪರೀಕ್ಷೆಗೆ ಅನೇಕ ವಿದ್ಯಾರ್ಥಿಗಳಿಗೆ ಅವಕಾಶ ಸಿಕ್ಕದಿಲ್ಲವಾದ್ದರಿಂದ ಅವರೇ ಹೀಗೆ ಹಗೆ ತೀರಿಸಿಕೊಂಡಿರಬೇಕೆಂದು ಸಂಶಯದ ಮೇಲೆ ಇಬ್ಬರು ಬ್ರಾಹ್ಮಣ, ಒಬ್ಬ ಲಿಂಗಾಯಿತ, ಒಬ್ಬ ಮುಸಲ್ಮಾನ ಅಂತು ನಾಲ್ಕು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದ್ದಾರೆ.

### ಕಾರವಾರ್.

ಶಿರಸಿಯಲ್ಲಿ ಮಾರಮ್ಮನ ಜಾತ್ರೆ ಕಾಲದಲ್ಲಿ ಪ್ರತಿ ವರ್ಷ ಹತ್ತಾರು ಸಾವಿರ ಕುರಿ, ಕೋಳಿ, ಕೋಣಗಳ ವಧೆಯಾಗುತ್ತಿತ್ತು. ೯ ವರ್ಷಗಳಿಂದ ಆದೇಕೋ ಜಾತ್ರೆ ನಿಂತಿತು. ಫಾಲ್ಗುಣ ಶುದ್ಧ ಪಾಡ್ಯಮಿಯಿಂದ ಈ ಸಾರೆ ಒಂದು ವಾರ ಜಾತ್ರೆ ನಡೆಯಿತು. ಹುಬ್ಬಳ್ಳಿಯ ಜೀವದಯಾ ಸಂಘದವರ ಮತ್ತು ಇತರ ಸದ್ಗೃಹಸ್ಥರ ಸೇವಾ ಸಾಹಸದಿಂದಲೂ, ಜಿಲ್ಲಾಧಿಕಾರಿಗಳ ಸಹಾಯದಿಂದಲೂ ಜೀವವಧೆಯು ತಪ್ಪಿತು.

ಕೆಂಪು ಹೊಳೆಯಲ್ಲಿ ಮಲೆನಾಡಿನ ಮದ್ದಾನೆಯೊಂದನ್ನು ಮೈಸೂರು ಅರಮನೆಯ ಮೃಗವಿಹಾರ ಶಾಖೆಯ ಶ್ರೀ. ನೀಲಕಂಠರು ಬಂದೂಕಿನಿಂದ ಹೊಡೆದು ಕೊಂದರು. ಅದರ ಎರಡು ಕೋರೆದಾಡೆಯ ದಂತಗಳು ೨ ಮಣ ತೂಕವಿದ್ದುವಂತೆ! ಹಿಂಗಾಲಿನ ಸುತ್ತಳತೆ ೪॥ ಅಡಿ!

+ + + +

## ಅನುಕ್ರಮಣಿಕೆ.


ಅಗ್ರಲೇಖ:
- ಬ್ರಿಟಿಷ ಸರಕಾರದ ಶ್ವೇತಪತ್ರ . . . ೪
- ಸ್ಫುಟವಿಚಾರಗಳು . . . ೬
- ಟೀಕೆಗಳು . . . ,,

ವರ್ತಮಾನ ಸಂಗ್ರಹಗಳು
- ಒಳದೇಶ ವರ್ತಮಾನ ವಿದೇಶ ವರ್ತಮಾನ . . . ೪
- ವಿವಿಧ ಸಮಾಚಾರಗಳು . . . ೧೧
- ದಕ್ಕುಯ್ಯ—ಸಾಕಾಯಿತು! . . . ೨
- ಪತ್ರವ್ಯವಹಾರ . . . ೧೩
- ಸ್ವದೇಶೀ ಸೋಲಿಗರ ಭಾಣ! . . . ೯
- ದಕ್ಷಿಣ ಕನ್ನಡ—ಮಂಗಳೂರು, ಕಾರ್ಕಳ, ಹೆಬ್ರಿ, ಬೆಳ್ತಂಗಡಿ, ಪುತ್ತೂರು, ಕುಂದಾಪುರ . . . ೯
- ಆಧುನಿಕ ಕಾಲದ ದಾಂಪತ್ಯಜೀವನ . . . ೧೫
- ವಾರ್ತಾವಳಿ . . . ,,
- ವಿಶಾಲ ಭಾರತದಲ್ಲಿ ಶ್ವೇತಪತ್ರ ನೀತಿಯ ಖಂಡನೆ! . . . ೧೦
- ಕನ್ನಡ ನಾಡಿನ ಸುದ್ದಿ! . . . ೬


# ಸ್ವದೇಶಾಭಿಮಾನಿ.

ತಾ. ೨೪ನೇ ಶುಕ್ರವಾರ ಮಾರ್ಚಿ ೧೯೩೩.

## ಬ್ರಿಟಿಷ ಸರಕಾರದ ಶ್ವೇತಪತ್ರ.
### (White Paper.)

ಹಿಂದೂಸ್ಥಾನದಲ್ಲಿ ಪ್ರಚಲಿತವಿರುವ ಸರಕಾರ ರಚನೆಯನ್ನು ರದ್ದುಗೊಳಿಸಿ ಹೊಸ ರಚನೆಯನ್ನು ಜಾರಿಗೆ ತರುವುದಕ್ಕಾಗಿ ಬ್ರಿಟಿಷ ಸರಕಾರವು ಹಲವು ತರದಲ್ಲಿ ಸಾಧನೆಗಳನ್ನು ನಡೆಸಿತು. Montford ಸುಧಾರಣಾ ಸರಕಾರವು ಜಾರಿಗೆ ಬಂದಂದಿನಿಂದಲೂ ದೇಶವು ತನ್ನ ವಿರೋಧವನ್ನು ಸೂಚಿಸಿ ಸ್ವಾತಂತ್ರ್ಯಕ್ಕಾಗಿಯೂ ಸ್ವರಾಜ್ಯಕ್ಕಾಗಿಯೂ ಹಲುಬುತ್ತಿದ್ದಿತು. ೧೯೨೦ನೇ ಇಸವಿಯ ಅಸಹಕಾರವೂ, ಆ ಮೇಲಿನ ಸ್ವರಾಜ್ಯ ಪಕ್ಷೀಯರ ಚಳವಳವೂ ಬ್ರಿಟಿಷ ಸರಕಾರವನ್ನು ಕದಲಿಸಿ ಅವರಿಂದ ಸೈಮನ್ ಕಮಿಟಿಯನ್ನು ನೇಮಕವಾಡಿತು. ಆ ಕಮಿಟಿಯ ಬಹಿಷ್ಕಾರದ ಕಾರಣದಿಂದ ಬ್ರಿಟಿಷ ಸರಕಾರವು ರೌಂಡ್ ಟೇಬಲ್ ಪರಿಷತ್ತನ್ನು ಕರೆಯಲು ಒಪ್ಪಿತು; ಅತ್ತ ಹಿಂದೂಸ್ಥಾನಕ್ಕೆ Dominion Status ಎಂಬ ಸಾರಶಪ್ಪ ವಿಶಾಲ ಸ್ವಾತಂತ್ರ್ಯವನ್ನು ಕೊಡಲಿಕ್ಕೂ ಬ್ರಿಟಿಷ ಸರಕಾರವು ವಾಗ್ದಾನವನ್ನಿತ್ತಿತ್ತು. ಆ ಮೇಲೆ ರೌಂಡ್‌ಟೇಬಲ್ ಪರಿಷತ್ತಿನ ಮೂರು ಅಧಿವೇಶನಗಳೂ ಕೂಡಿ ಮುಗಿದುವು. ಮೊದಲನೆಯ ಅಧಿವೇಶನದಲ್ಲಿ ಹೇಳಿದುದು ಎರಡನೆಯದರಲ್ಲಿಲ್ಲ; ಎರಡನೆಯದರಲ್ಲಿ ಹೇಳಿದುದು ಮೂರನೆಯದರಲ್ಲಿಲ್ಲ; ಈಗ ಮೂರನೆಯದರಲ್ಲಿ ಕೊಟ್ಟ ವಾಗ್ದಾನಗಳು ಈಗಿನ ಈ ಶ್ವೇತಪತ್ರದಲ್ಲಿಯೇ ಇಲ್ಲ!!

ಅಂತೂ ದೀರ್ಘ ಚಳವಳದ ನಂತರವೂ, ಸರಕಾರದ ದೀರ್ಘ ಪರಿಶ್ರಮದ ನಂತರವೂ, ಹಿಂದೂಸ್ಥಾನದ ಅತಿಶಯ ದ್ರವ್ಯ ವ್ಯಯದ ನಂತರವೂ ಈ ಶ್ವೇತಪತ್ರವು ಹೊರಬಿತ್ತು. ಆ ಶ್ವೇತಪತ್ರದ ತಾತ್ಪರ್ಯವನ್ನು ಹೇಳಲಿಕ್ಕೆ ಹೆಚ್ಚಿನ ಶಬ್ದಗಳ ಅವಶ್ಯಕತೆಯಿಲ್ಲ. ಬ್ರಿಟಿಷ ಸರಕಾರದ ವಾಗ್ದಾನಗಳಿಗೆ ಬೆಲೆಯಿಲ್ಲವೆಂಬುದೇ ಮುಖ್ಯವಾಗಿ ಆ ಶ್ವೇತಪತ್ರದಿಂದ ಹೊರ ಹೊಮ್ಮುವ ತಾತ್ಪರ್ಯವಾಗಿದೆ.

ರೌಂಡ್‌ಟೇಬಲ್ ಪರಿಷತ್ತಿನ ಮಾತು (Dominion Status)ನಿಂದ ಪ್ರಾರಂಭವಾಯಿತು. ಕೆನಡಾ ಎಂಬುದು ಡೊಮಿನಿಯನ್ ಆಗಿದೆ; ಆಸ್ಟ್ರೇಲಿಯವೂ ಇನ್ನೊಂದು ಡೊಮಿನಿಯನ್ ಆಗಿರುತ್ತದೆ. ಅವುಗಳ status ಅಥವಾ ಹಕ್ಕು, ಅಧಿಕಾರ ಬಾಧ್ಯತೆಗಳೆಂತಹವು? ಬ್ರಿಟಿಷ ಸರಕಾರದ ಯಾವ ಆಕ್ಷೇಪಗಳಿಗೂ ಅಲ್ಲಿ ಎಡೆಯಿಲ್ಲ; ಕಾರ್ಯತಃ ಅವು ಸ್ವತಂತ್ರ ರಾಜ್ಯಗಳಾಗಿದ್ದು, ಇಂಗ್ಲೆಂಡಿನಿಂದ ಹೊರಬಂದು, ಆ ರಾಜ್ಯಗಳಲ್ಲಿ ನೆಲಸಿದುದರಿಂದ ಇಂಗ್ಲೆಂಡಿನ ಮೇಲೆ ಕೇವಲ ಸಹಜವಾದ ಭ್ರಾತೃಭಾವದ ಹೊರತು ಬೇರಾವ ತರದ ಅಧಿಕಾರವನ್ನೂ ಆ ರಾಜ್ಯಗಳು ಇಂಗ್ಲೆಂಡಿನಲ್ಲಿರುವುದಾಗಿ ಒಪ್ಪುವುದಿಲ್ಲ.

[illegible] Federation ಅನ್ನು [illegible] ರೂಪವಾಗಿ [illegible] ಮಾಡಲಾಯಿತು. Safe-guards ಎಂಬ [illegible] ಗವರ್ನರ ಜನರಲರಿಗೆ ರಕ್ಷಣಾತ್ಮಕ ಅಧಿಕಾರವನ್ನು ಕೊಡುವ ಸೂಚನೆಯೂ ಆಯಿತು. ಆದರೆ ಅಂತಹ ರಕ್ಷಣಾತ್ಮಕ ಅಧಿಕಾರವು ಕೇವಲ ಹಿಂದೂಸ್ಥಾನದ ಒಳ್ಳೆತನ್ನೇ ಉದ್ದೇಶಿಸುವಂತಹುದುದೆಂದೂ ತಾತ್ಕಾಲಿಕವೆಂದೂ, ಕಾಲಕ್ರಮೇಣ ಅವುಗಳು ತಾವಾಗಿ ದಾಟಿ ಹೋಗಿ ಅಧಿಕಾರವೆಲ್ಲವೂ ಹಿಂದೀಯರ ಕೈಯಲ್ಲಿ ಬರಬೇಕೆಂದೂ ಬ್ರಿಟಿಷ ಪ್ರಧಾನ ಮಂತ್ರಿಗಳೇ ಸೂಚಿಸಿ ಬ್ರಿಟಿಷ ಸರಕಾರದ ಒಪ್ಪಿಗೆಯನ್ನಿತ್ತರು.

ಎರಡನೇ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಫೆಡರೇಶನ್ನಿಗೆ ರಾಜರ ಅಸಮಾಧಾನ, ಜಾತೀಯ, ಸಮುಸ್ಯೆಗಳ ತೀರ್ಮಾನ, ರಕ್ಷಣಾತ್ಮಕ ಅಧಿಕಾರಗಳ ವಿಸ್ತರಣೆ ಇತ್ಯಾದಿ ಇನ್ನೂ ಹೊಸ ಆಕ್ಷೇಪಣೆಗಳು ಮುಂದೆ ಬಂದು ಮೂರನೆಯ ಪರಿಷತ್ತಿನಲ್ಲಿ ರಕ್ಷಣಾತ್ಮಕ ಅಧಿಕಾರಗಳು ಹಿಂದೂಸ್ಥಾನದ ಹಿತಕಲ್ಲ, ಬ್ರಿಟಿಷರ ಬಗ್ಗೆ ಎಂಬುದು ಸಾಕಷ್ಟು ಸ್ಪಷ್ಟ ಮಾಡಲಾಯಿತು.

ಈಗಿನ ಶ್ವೇತಪತ್ರವು ಬ್ರಿಟಿಷ ರಾಜನೀತಿಯಲ್ಲಿ ಉಂಟಾದ ಅನೀತಿಯ ಪರ್ಯವಸಾನ ಮಾತ್ರವಾಗಿದೆ. ಅದರಲ್ಲಿ Dominion Statusನ ಗಂಧ ಗಾಳಿ ಸಹ ಇಲ್ಲ. Federation ಎಂಬುದೂ ಕಾಣೆ. ಏನೊ ಜವಾಬ್ದಾರ ಸರಕಾರ; ಚುನಾಯಿತ ನ್ಯಾಯವಿಧಾಯಕ ಸಭೆ; ವಿಶಾಲ ಮತದಾರ ವರ್ಗ; ಹೆಚ್ಚು ಸಂಬಳ ತಿನ್ನ ಬಲ್ಲ ಮಂತ್ರಿಮಂಡಲ ರಚನೆ; ಇತ್ಯಾದಿ ಹೊರ ಡಂಭದ ವಿಷಯಗಳು. ಇವೆಲ್ಲಾ ಜವಾಬ್ದಾರ ಸರಕಾರದ ಪ್ರಾಣಹರಣ. ಪ್ರತಿ ಪ್ರಾಣಿಯೂ ಅಖಂಡ ಸಂಕಲೆಯಿಂದ ಕಟ್ಟಲ್ಪಟ್ಟಿದ್ದು.

ಈ ಶ್ವೇತಪತ್ರದ ಸೂಚನೆಗಳನ್ನು ಓದುಗರು ಇತರ ಕಡೆಯಲ್ಲಿ ಓದಿರಬಹುದು. ಅವನ್ನು ನಾವಿಲ್ಲಿ ಪುನರುಲ್ಲೇಖಿಸುವುದಿಲ್ಲ. ನಮಗೆ ಆಶ್ಚರ್ಯವೆಂದರೆ ಈ ಹೊಸ ರಚನೆಯು ಯಾವ ಬಗ್ಗೆ ನಮಗೆ ಕೊಡಲ್ಪಡುತ್ತದೆ? ಎಂಬುದು. ಈ ರಚನೆಯು ಈಗಿರುವುದಕ್ಕಿಂತ ಎಷ್ಟು ಮಾತ್ರಕ್ಕೂ ಹಿಂದೂಸ್ಥಾನಕ್ಕೆ ಹೆಚ್ಚು ಪ್ರಯೋಜನಕರವಾಗದು. ಒಂದು ಕಡೆಯಲ್ಲಿ ಒಂದಿಷ್ಟು ಜವಾಬ್ದಾರಿ ಕೊಟ್ಟರೆ ಇನ್ನೊಂದು ಕಡೆಯಲ್ಲಿ ರಕ್ಷಣಾತ್ಮಕ ಅಧಿಕಾರಗಳಿಂದ ಆ ಜವಾಬ್ದಾರಿಯನ್ನು ನಿರಾಕರಿಸಿ ಬಿಟ್ಟಿದೆ; ಒಂದು ಕಡೆಯಲ್ಲಿ ದೇಶದ ಹಿತಕ್ಕಾಗಿ ಸೂತ್ರಗಳನ್ನು ತರ್ಕಿಸುವಾಗ, ಇನ್ನೊಂದು ಕಡೆಯಲ್ಲಿ ಬ್ರಿಟಿಷ ಹಿತಕ್ಕಾಗಿ ದೇಶದ ಹಿತಗಳನ್ನು ಬಲಿಯಿಟ್ಟಿವೆ.

ನ್ಯಾಯವಿಧಾಯಕ ಸಭೆಗಳಿಗೆ ಕಾನೂನು ಮಾಡುವ ಅಧಿಕಾರವಿರುವಾಗ, ಅವುಗಳನ್ನು ಮಂಜೂರು ಮಾಡಿದ ಮೇಲೆ ನಿರಾಕರಿಸುವ ಅಧಿಕಾರ ಗವರ್ನರ ಜನರಲರಿಗೆ ಇದೆ; ಗವರ್ನರ ಜನರಲರ ಆರ್ಡಿನನ್ಸು ಅಧಿಕಾರವು ತೆಗೆಯಲ್ಪಟ್ಟಿರುವಾಗ, ಅವರಿಗೆ Governor-General's Act ಎಂಬ ಕಾನೂನು ಮಾಡುವ ಅಧಿಕಾರ ಕೊಡಲ್ಪಟ್ಟಿದೆ. ಕಾಯ್ದಿಟ್ಟ (Reserved) ಅಧಿಕಾರಗಳಂತೂ ಗವರ್ನರ ಜನರಲರದೆ. ಆದರೆ ಮಂತ್ರಿಗಳಿಗೆ ಕೊಡಲ್ಪಟ್ಟ ಅಧಿಕಾರಗಳಲ್ಲಿಯೂ ಗವರ್ನರ ಜನರಲರು ಕೈ ಹಾಕುವಂತೆ ಅವರಿಗೆ ಅಧಿಕಾರವಿರುತ್ತದೆ.

ಇನ್ನು ಈ ಶ್ವೇತಪತ್ರದ ಪ್ರತಿಯೊಂದು ವಿಷಯವನ್ನೂ ಎತ್ತಿ ಹೀಗೆಯೇ ಹೇಳಬಹುದು. ಬ್ರಿಟಿಷ ವಾಗ್ದಾನಗಳಿಗೆ ಬೆಲೆಯಿಲ್ಲವೆಂದು ಶ್ವೇತಪತ್ರವು ಈ ರೀತಿ ಖಚಿತಪಡಿಸುತ್ತಿದೆ. ಆದರೆ ಸರಕಾರದ ಶ್ವೇತಪತ್ರದ ಸೂಚನೆಗಳನ್ನು ಸಂಪೂರ್ಣವಾಗಿ ತಿರಸ್ಕರಿಸಲಿಕ್ಕೂ ನಿರಾಕರಿಸಲಿಕ್ಕೂ ಹಿಂದೀ ಉದಾರ (Liberal) ಪಕ್ಷದವರು ಇನ್ನು ನಿಶ್ಚಯ ಮಾಡದಿರುವುದು ಆಶ್ಚರ್ಯ; ಈ ಸೂಚನೆಗಳು ಪಾರ್ಲಿಮೆಂಟಿನಲ್ಲಿ ಕಾನೂನಾಗಿ ಬರುವಾಗ ಇನ್ನೂ ಬಿಗಿಯಾಗಬಹುದಾಗಿ ಕೆಲವರು ಹೇಳುವರು. ಇದಕ್ಕಿಂತ ಬಿಗಿಯೆಂದರೆ ಅದೆಂತಹುದೊ! ಹಾಗೂ ಜವಾಬ್ದಾರ ಸರಕಾರವೆಂಬ ಸುಳ್ಳು ಹೆಸರಿನಲ್ಲಿ ಕಠಿಣ ನಿರ್ಬಂಧಗಳು ಜಾರಿಗೆ ಬಂದು, ಹಿಂದೂಸ್ಥಾನವನ್ನು ಬ್ರಿಟಿಷ ಹಿಡಿತದಲ್ಲಿ ಮತ್ತೂ ಬಲಪಡಿಸುತ್ತಿದಂತೆಯೇ ಸರಕಾರ ವೆಚ್ಚವೂ ಮತ್ತೂ ಹೆಚ್ಚಾಗಿ ಪ್ರಜೆಗಳ ಗೋಳಿಗೆ ಕಾರಣವಾಗಬಹುದಾಗಿ ಅನ್ನಿಸುತ್ತಿದೆ.

## ವಿದೇಶ ವರ್ತಮಾನ.

ಟೊರೊಂಟೊ ಸಮುದ್ರದಲ್ಲಿ 'ಹಿಸ್ಕೊ' ಎಂಬ ಮೋಟರ್ ಸ್ಟೀಮರು ದಂಡೆಗಾಹುತಿಯಾಯಿತು. ೧೫ ಮಂದಿಗಳು ಮುಳುಗಿ ಮಡಿದರು ೫ ಜನರು ವಿಶೇಷ ಜಖಂಗೊಂಡಿರುವರು. ೧೩ ಜನರು ಬದುಕಿ ಬಂದು ಭಯಂಕರ ವರ್ಣನೆಗಳು ಮಾಡುತಿರುವರು.

—[illegible] ಎಂಬಲ್ಲಿ [illegible] ಹೊರಡುವ [illegible] ಮುಳುಗಿ [illegible] ಪ್ರಯಾಣಿಕರು [illegible] ಬದುಕಿದ್ದಾರೆ.

—ಲಂಡನಿನ [illegible] ಎಂಬ ಪ್ರಸಿದ್ಧ [illegible] ಒಂದು [illegible] ನಡೆಸುತ್ತಿರುವಾಗ ಕೆಳಗೆ ಬಿದ್ದು ಜಜ್ಜಲ್ಪಟ್ಟು ಮೃತರಾದರು.

—ಅಮೇರಿಕಾ ಫಿಲಿಪ್ಪೈನ್ ದ್ವೀಪಗಳಿಗೆ ಸ್ವಾತಂತ್ರ್ಯ ಕೊಡುವೆವೆಂದು ಹೇಳಿ ಆ ಕರಾರಿನಲ್ಲಿ ಕೆಲವು ಪ್ರಮುಖ ಶರ್ತಗಳನ್ನು ಸೇರಿಸಿದುದಕ್ಕಾಗಿ ಆ ಸ್ವಾತಂತ್ರ್ಯವೇ ಬೇಡವೆಂದು ದ್ವೀಪವಾಸಿಗಳು ತಿರಸ್ಕರಿಸಿದ್ದಾರೆ.

—ರುಮೇನಿಯದ ಪೆನ್ಸಿಲ್ವೇನಿಯದೊಬ್ಬರು ತನ್ನ [illegible] ಗಂಟನ್ನು ಬಿಡಿಸುವಾಗ ಅದರಲ್ಲಿ ಟೊಳ್ಳೆಲೆಯು ಮಾತ್ರ ಇದ್ದಿತು. ತನಿಖೆ ನಡೆಯುತ್ತಿದೆ.

—ಸಿಲೋನಿನ ಮುನಿಸಿಪಾಲಿಟಿಯವರು ತಮ್ಮ ಎರಡು ಸಾವಿರ ನಿರುದ್ಯೋಗಿಗಳಿಗೆ ಯಾವ ಕೆಲಸಗಳನ್ನಾದರೂ ಕೊಡುವುದೆಂದು ಆಲೋಚನೆಗೆ ತೊಡಗಿದ್ದಾರೆ. ನಿರುದ್ಯೋಗದಿಂದ ಗಲಾಟೆಗಾರಂಭವಾಗಿದೆ.

—ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರು ಮಹಾ ರೌದ್ರಾವೇಶದಿಂದ ಎದ್ದು ನಿಂತು "ಜೊಯಿಂಟ್ ಸಿಲೆಕ್ಟ್ ಕಮಿಟಿಯನ್ನು ಕರೆದು ನೀವು ಏನು ಮಾಡಲಿದ್ದೀರಿ, ಅದನ್ನು ಹೇಳಿ!" ಎಂದು ಹೋರರಿಗೆ ಪ್ರಶ್ನೆಯಿಟ್ಟರು.

—ಶ್ರೀ ಸುಭಾಷ್ಚಂದ್ರ ಭೋಸರು ವಿಯೆನ್ನಾದ ಫರ್ಥ ಎಂಬ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಬೇಗನೆ ಒಪರೇಶನ್ ಒಂದನ್ನು ಮಾಡಿಸಲಿದ್ದಾರೆ.

—ಚಿಕಾಗೋ ಮೇಯರರನ್ನು ಕೊಂದ ಜಂಗರಾನನ್ನು ವಿದ್ಯುತ್ ಪ್ರವಾಹದ ಬಾಯಿಗೆ ಕೊಟ್ಟು ಅಂತ್ಯಗೊಳಿಸಿದ್ದಾರೆ.

—ವಿದ್ಯುತ್ ಕುರ್ಚಿಯ ಬಳಿ ಒಯ್ಯಲ್ಪಡುತಿದ್ದಾಗ ಜಂಗಾರನು "ನನ್ನನ್ನು ಬಿಡಿ! ನನಗೆ ಭಯವಾಗದು" ಎಂದನು ಸಾಯುವ ಸಮಯ ಬರುತ್ತಲೇ ಕೆಲವು ಕಾಗದಗಳನ್ನು ಪೋಲೀಸರಿಗೆ ಕೊಟ್ಟು "ಇದು ನಾನು ಬರೆದ ಪುಸ್ತಕ"ವೆಂದನು. ಕುರ್ಚಿಯಲ್ಲಿ ಕುಳಿತೊಡನೆ "ಛಾಯಾ ಚಿತ್ರಗಾರರು ಯಾರು ಇಲ್ಲವೋ?" ಎಂದು ಪ್ರಶ್ನಿಸಿದನು. ಟೊಪ್ಪಿಯನ್ನು ಹಾಕುವಾಗ ಅವನು "ಎಲ್ಲಾ ಬಂಡವಾಳಿಗರು ದುಷ್ಟ ಪ್ರಾಣಿಗಳು. ಜಗತ್ತಿಗೆ ಗುಡ್ ಬೈ, ಗುಡ್ ಬೈ" ಎಂದನು.

## ಒಳದೇಶ ವರ್ತಮಾನ

—ಮುಂಬಾಯಿಯು ಒಬ್ಬ ಕೊಂಗ್ರೆಸ್‌ವಾಲನನ್ನು ಸೆರೆ ಹಿಡಿದ ಪರಿಣಾಮವಾಗಿ ೬೦೦೦೦ ಬುಲೆಟಿನುಗಳು ದೊರೆತಿವೆ.

—ಡಾರ್ಜಿಲಿಂಗಿನಲ್ಲಿ ಮುರ್ಮ ಟೀ ಎಸ್ಟೇಟಿನ ಕಾರ್ಖಾನೆಯಲ್ಲಿ ಬೆಂಕಿಯೆದ್ದು ಇಡೀ ಕಟ್ಟೋಣವು ನಾಶವಾಗಿ ೪೧ ಮಂದಿಗಳು ಮೃತರಾದರು. ಅನೇಕ ಲಕ್ಷ ರೂಪಾಯಿಗಳ ನಷ್ಟವಾಗಿದೆ.

—ರಂಗೂನಿನ ಟಿವ್ವೊ ಎಂಬಲ್ಲಿ ವಾಸಿಸಿಕೊಂಡು ಗಣಿಯ ಕೆಲಸದಲ್ಲಿದ್ದ ಎಲ್ಸರ ಎಂಬ ಯೂರೋಪಿಯನ್ ಅಧಿಕಾರಿಯೊಬ್ಬರು ಮನೆಯಿಂದ ಹೊರಗೆ ಹೋಗಿದ್ದು ೬ ದಿವಸಗಳಾದರೂ ಮನೆಗೆ ಹಿಂದಿರುಗಲಿಲ್ಲ. ಪತ್ನಿಯ ಪ್ರಲಾಪದಿಂದಾಗಿ ತನಿಖೆಯು ನಡೆಯುತ್ತಿದೆ.

—ಭಗತ್‌ಸಿಂಗನ ಮರಣದಿನಾಚರಣೆ ನಿರ್ಬಂಧಕ್ಕಾಗಿಯೂ ಜಾಹೀರು ನೋಟಿಸುಗಳ ವಶೀಕರಣಕ್ಕಾಗಿಯೂ ಡಿಲ್ಲಿಯಲ್ಲಿ ಅನೇಕ ಮನೆಗಳು ಜಡ್ತಿಗೊಳಗಾದುವು.

—ಆದಿತ್ಯವಾರ ದಿನ ಮುಂಬಾಯಿಯಲ್ಲಿ ೧೨ ಮಂದಿ ಯೂರೋಪಿಯನರು ದೋಣಿ ಮೂಲಕ ಸಮುದ್ರ ಸಂಚಾರಕ್ಕೆ ಹೊರಟು ಸಂಜೆಗೆ ಹಿಂತಿರುಗಲಿದ್ದರು. ಸಂಜೆಯಲ್ಲಿ ಭೀಷಣ ಗಾಳಿಯು ಬೀಸಿ ಅವರ ದೋಣಿಯು ಮುಳುಗುವಂತಾಗಿ ಇಡೀ ರಾತ್ರಿ ಕಡಲಿನಲ್ಲೇ ಪ್ರಯಾಸ ಪಡಬೇಕಾಯಿತು. ಬದುಕಿದುದು ದೊಡ್ಡದು!

—ಕಲ್ಕತ್ತದಲ್ಲಿ ಕೊಂಗ್ರೆಸ ಸಭೆಯು ಜರಗುವುದೆಂದೂ ಅದಕ್ಕೆ ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳು ಚಿತ್ತೈಸುವರೆಂದೂ ಸುದ್ದಿ ಹರಡಿರುತ್ತದೆ.

—ಮುಂಬಯಿಯಲ್ಲಿ ಕನ್ನಡ ನಾಟಕ—ಮೊಗವೀರ [illegible] ಕ್ಲಬ್ಬಿನ ಸಹಾಯಾರ್ಥವಾಗಿ ಕರ್ನಾಟಕ ನೂತನ ಸಂಗೀತ ಸಭೆಯವರು ಇದೇ ಬರುವ ಎಪ್ರಿಲ್ ತಿಂಗಳ ತಾ॥ ೧೪ನೇ ಶುಕ್ರವಾರ ರಾತ್ರಿ ಘಂಟೆ ೯ಕ್ಕೆ (S. T.) ಖಾಂಗವಾಡಿ ಥಿಯೇಟರ್ (ಕಲ್ಬಾದೇವಿ ರೋಡ್)ನಲ್ಲಿ "ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ" ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸಲಿಕ್ಕಿರುವುದರಿಂದ ಕನ್ನಡ ಭಾಷಾಭಿಮಾನಿಗಳು ಉದಾರಾಶ್ರಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಮಾನಾರ್ಹ ಕಾರ್ಯದರ್ಶಿಗಳ ವಿನಂತಿ.

—ಮುಂಬಾಯಿ ಮಿಲ್ಲುಗಳಲ್ಲಿ ಸಂಬಳವನ್ನು [illegible] ೪೦೦೦ ಗಿರಣಿ ಕೆಲಸಗಾರರು ಮುಷ್ಕರ ಹೂಡಿ [illegible]. ಮಿಲ್ಲು ಮಾಲಿಕರು ಸಂಬಳವನ್ನು [illegible] ಕೊಡಲು [illegible] ಗಳಾಗುತ್ತಿವೆ.

# ದಕ್ಷಿಣ ಕನ್ನಡ

**ಮಂಗಳೂರು.** ಚತುರ್ಥ ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಮ್ಮೇಲನದ ಸ್ವಾಗತ ಸಮಿತಿ ಕಛೇರಿಯು, ಕೊಡಿಯಾಲ ಬೈಲು, ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಪ್ರತಿದಿನ ಸಾಯಂಕಾಲ ಘಂಟೆ ೫ರಿಂದ ೬ರ ವರೆಗೆ ತೆರೆಯಲಾಗುವುದು ಸಮ್ಮೇಲನ ಸಂಬಂಧವಾದ ಟಿಕೇಟು ಅಥವಾ ಇತರ ಮಾಹಿತಿಯನ್ನು ಪಡೆಯಲಿಚ್ಛಿಸುವವರು ಸದ್ರಿ ಸಮಯದಲ್ಲಿ ಹೋಗಿ ಪಡೆಯಬಹುದು ಎಂದು ಕೆ ರಾಘವಾಚಾರ್ಯರು (ಜತೆಕಾರ್ಯದರ್ಶಿ) ತಿಳಿಸುತ್ತಾರೆ.

ಬರುವ ಹಿಂದೀ ಪರಿಷತ್ತಿನ ಕಾಲಕ್ಕೆ ಮಂಗಳೂರು ಗಣಪತಿ ಹ್ಯಾಸ್ಕೂಲಿನಲ್ಲಿ ತಾ ೯—೪—೩೩ನೇ ಪೂರ್ವಾಹ್ನ ಘಂಟೆ ಎಂಟಕ್ಕೆ ಹಿಂದೀ ಪದವೀದಾನ ಸಮಾರಂಭವನ್ನು ಜರಗಿಸುವರೆ ನಿಶ್ಚಯಿಸಲಾಗಿದೆ. ಇರಾನಿನ ನಿವಾಸಿಗಳೂ, ಭಾರತದ ಪರಮಭಕ್ತರೂ, ಮೈಸೂರು ವಿಶ್ವವಿದ್ಯಾಲಯದ ಉರ್ದು ಫಾರಸೀ, ಅರಬಿ ವಿಭಾಗದ ಅಧ್ಯಕ್ಷರೂ, ಹಿಂದೀ ಸಂಸ್ಕೃತ ಭಾಷಾ ವಿಶಾರದರೂ ಆದ ಪ್ರೊ ಆಗ ಮಹಮ್ಮದ್ ಅಬ್ಬಾಸ್ ಶಾಸ್ತ್ರಿ ಸಾಹೇಬರ ಕರಕಮಲಗಳಿಂದ ಪ್ರಮಾಣ ವಿತರಣೋತ್ಸವವು ನೆರವೇರುವುದು. ೧೯೩೨ನೇ ಸಪ್ಟಂಬರ ಮತ್ತು ೧೯೩೩ನೇ ಫೆಬ್ರುವರಿ ತಿಂಗಳ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮಂಗಳೂರು ಕೇಂದ್ರದ ಹಿಂದೀ ವಿದ್ಯಾರ್ಥಿಗಳೆಲ್ಲರೂ ತಮ್ಮ ತಮ್ಮ ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕಾಗಿ ೨೦ ನಿಮಿಷ ಮುಂಚಿತವಾಗಿ ತಪ್ಪದೆ ಬರಬೇಕಾಗಿ ವಿನಂತಿ ಎಂದು ಎಸ್ ಲಲಿತಾಬಾಯಿ ಸುಬ್ಬರಾವ್ (ಸ್ವಾಗತಾಧ್ಯಕ್ಷೆ) ಇವರು ತಿಳಿಸುತ್ತಾರೆ

ಇದೇ ಕಳೆದ ತಾ. ೧೮ನೇ ಶನಿವಾರ ಇಲ್ಲಿಯ ಲಲಿತ ಕಲಾ ದರ್ಶಕ ಸಂಗೀತ ಶಾಲೆಯ ಪರವಾಗಿ ಶ್ರೀ ಎಚ್ ನಾರಾಯಣರಾಯರೇ ಮೊದಲಾದವರ ಪಾತ್ರವನ್ನೊಳಗೊಂಡ ಒಂದೇ ಗುಟುಕು ಎಂಬ ನಾಟಕವು ಗಣಪತಿ ಹ್ಯಾಸ್ಕೂಲಿನ ಶಾರದಾಸದನದಲ್ಲಿ ಅಭಿನಯಿಸಲ್ಪಟ್ಟಿತು ನಾಟಕಾವಸಾನದಲ್ಲಿ ಸಂಸ್ಥೆಯವರು ಸಿದ್ಧಗೊಳಿಸಿದ್ದ ೩ ಸ್ವರ್ಣಪದಕಗಳನ್ನು ಪ್ರೋತ್ಸಾಹಕ್ಕಾಗಿ ಮಿಸ್ ಉಮಾಬಾಯಿ ವ ತ್ತು ಶ್ರೀ ಸುಂದರನವರಿಗೆ ಕೊಟ್ಟು ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಸಮಯೋಚಿತವಾಗಿ ಭಾಷಣಮಾಡಿದರು ಸಂಗೀತ ವಿದ್ಯಾನಿಲಯವನ್ನು ರಸಿಕ ಮಹಾಜನರು ಪ್ರೋತ್ಸಾಹಿಸಲಿ

## ಕೆನರಾ ಹ್ಯಾಸ್ಕೂಲಿನ "ಮಾರುತಿ ಕಬ್‌ಪೇಕ್" ಮಕ್ಕಳ ವಿಹಾರ

ಬರೇ ಕ್ಲಾಸಿನ ಮಟ್ಟಿನ ಉತ್ತಮ ಶಿಕ್ಷಣವನ್ನಲ್ಲದೆ, ಪ್ರಕೃತಿ ಜ್ಞಾನ, ವ್ಯವಹಾರ ಶ್ರಮ ವ್ಯಾಯಾಮ ಮೊದಲಾದವೂ ಎಳೆಯ ಮಕ್ಕಳಲ್ಲಿ ಬೆಳೆವಂತೆ ಸ್ಥಾಪಿಸಿದ ಈ ಮಕ್ಕಳ ಕೂಟವು ಮೊನ್ನೆ ರವಿವಾರ ಹೊರಟು ಗುರುಪುರ, ಮುಲ್ಕಿ ಪಲಿಮಾರು ಕಟೀಲ ಪ್ರಾಂತ್ಯಗಳಲ್ಲಿ ಸಂಚರಿಸಿ, ಆನಂದದಿಂದ ಮೂರು ದಿನ ಕಳೆದು ಸಂತೃಪ್ತರಾಗಿ ಹಿಂತೆರಳಿರುವರು ರವಿವಾರ ಬೆಳಗ್ಗಿನ ಬಸ್ಸಿನಲ್ಲಿ ಇವರು ಮಾರುತೀ ಕಬ್‌ಪೇಕ್ ಮಂದಿರದಿಂದ ಪ್ರಾರ್ಥಿಸಿಕೊಂಡು, ಬಸ್ಸನ್ನೇರಿ, ಮೂಲ್ಕಿಗೆ ಸೇರಿದರು ಅಲ್ಲಿ ನೆಟ್ಟಗೆ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ತೆರಳಿ, ಶ್ರೀ ದೇವರನ್ನು ಭಜಿಸಿ ಶ್ರೀಮುಡಿ ಗಂಧ ಪ್ರಸಾದವನ್ನು ಪಡೆದು, ಅಭಯವಚನವೂ ದೊರೆಯಲಾಗಿ, ಅಲ್ಲಿಯ ಶ್ರೀ ದೇವರ ನೈವೇದ್ಯವನ್ನೆ ಭುಂಜಿಸಿ ಹಗಲು ರಾತ್ರಿಯೂ ಇದ್ದರು. ಸೋಮವಾರ ಬೆಳಗ್ಗೆ ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರು ಇವರನ್ನು ಮಠದ ದೋಣಿಯನ್ನು ಕಳುಹಿಸಿ ಬರಮಾಡಿಕೊಂಡು ಮಠದ ಕಡೆಯಿಂದ ಇವರ ಯಾವತ್ತು ಸೌಕರ್ಯಗಳನ್ನು ತಾಯ್ತಂದೆಯರಿಗಿಂತಲೂ ಹೆಚ್ಚಿನ ವಾತ್ಸಲ್ಯದಿಂದ ಒದಗಿಸಿ, ಇವರು ಕಲಿತುದನ್ನೆಲ್ಲ ಕಣ್ಣಾರೆ ಪರಾಂಬರಿಸಿ, ಯೋಗ್ಯವಾದ ಸದುಪದೇಶದೊಡನೆ ಪ್ರೋತ್ಸಾಹವನ್ನು ಕೊಟ್ಟು, ಊಟ ಉಪಚಾರಾದಿಗಳನ್ನು ಸ್ವತಃ ಪರಿಶೀಲಿಸಿ ನಡೆಸಿಕೊಟ್ಟರು ಫಲಿಮಾರು ಎಂಬುದೊಂದು ಮಠವಿರುವ ಹಳ್ಳಿಯಾದರೂ ಶಾಲೆ ಟಪ್ಪಾಲುಕಚ್ಚೇರಿ ಆಸ್ಪತ್ರೆ ವಾಚನಾಲಯ ಉತ್ತಮ ದಾರಿಗಳು ಮೊದಲಾದುವುಗಳ ಮೂಲಕ ಆ ಹಳ್ಳಿಯನ್ನು ಉತ್ತಮ ಅಭಿವೃದ್ಧಿಗೆ ತರುವರೆ, ವಿಶೇಷವಾಗಿ, ಪೇಚಾಡುತ್ತಿರುವ ಶ್ರೀ ಸ್ವಾಮಿಯವರು, ಪರವೂರಿಂದ ಬಂದ ಸಾಧು ಬಾಲಕರ ಕಡೆಗೆ ಯಥೋಚಿತವಾದ ಮಧುರತೆಯಿಂದ ವರ್ತಿಸಿ ಇನ್ನೂ ಇನ್ನೂ ಇವರು ಅತ್ತ ಬರುತ್ತಿರಬೇಕೆಂದು ಕೋರಿದರು

ಮಂಗಳವಾರ ಅಲ್ಲಿಂದ ಪುನಃ ಮೂಲ್ಕಿಗೆ ಬಂದು, ಡಾ। ರಾಯಪ್ಪ ಕಾಮತರವರ ಫಲಾಹಾರ ಭೋಜನಾದಿಗಳನ್ನೂ ಶ್ರೀ ರಾಮಕೃಷ್ಣ ಪೂಂಜರ ವಿಶೇಷ ಸ್ವಾಗತವನ್ನೂ ಮಧ್ಯಾಹ್ನ ಫಲಾಹಾರವನ್ನೂ ಪಡೆದು, ಅಲ್ಲಿಂದ ಬಸ್ಸಿನಲ್ಲಿ ಕಟೀಲು ರಾ। ಶ್ರೀ ಕೋಟಿ ಶೆಟ್ಟರಲ್ಲಿಗೆ ತೆರಳಿ ಪ್ರಾಚೀನ ದೇವಾಲಯವನ್ನೂ ಕಂಡು, ಭಕ್ತಿಯನ್ನರ್ಪಿಸಿ ದಾಹಶಾಂತಿಯನ್ನು ಮುಗಿಸಿ, ಅವರಿಂದಲೂ ಮತ್ತೊಮ್ಮೆ ಸಂದರ್ಶಿಸಲು ಅನುಜ್ಞೆ ಪಡೆದು ಬಜಪೆಗೆ ಬಂದು, ಅಲ್ಲಿಂದ ಸಾಯಂ ದೀಪ ಹಚ್ಚುವ ಹೊತ್ತಿಗೆ ಸುಖವಾಗಿ ಮಂಗಳೂರು ಮನೆಗಳನ್ನು ಸೇರುವಂತಾಯಿತು. ಮೂರು ದಿನಗಳಲ್ಲೂ ಅಪರಾತಿಥ್ಯಗಳನ್ನಿತ್ತು ಪ್ರೋತ್ಸಾಹವನಿತ್ತ ಸರ್ವರನ್ನು ಕಬ್‌ಪೇಕ ಪಂಗಡವು ಅಭಿನಂದಿಸುತ್ತದೆ

ದ ಕ ಜಿಲ್ಲಾ ಸ್ವದೇಶೀ ಪ್ರಚಾರ ಸಭಾ ಇದರ ಸ್ಥಾಪಕರ ಮಹಾಸಭೆಯು ಮಾರ್ಚ ತಾ. ೨೬ನೇ ಆದಿತ್ಯವಾರ ಧಾರೇಶ್ವರ ಗಾರ್ಡನ್ನಲ್ಲಿರುವ ಶ್ರೀಮತಿ ಗಿರಿಜಾಬಾಯಿಯವರ ಮನೆಯಲ್ಲಿ ಸಂಜೆ ಘಂಟೆ ೫ಕ್ಕೆ ಕೂಡುವುದು ಕಾರ್ಯಕ್ರಮ ಪ್ರಚಾರ ಸಭೆಯು ಈ ತನಕ ಮಾಡಿದ ಕೆಲಸದ ವರದಿಯ ಮಂಜೂರಾತಿ ಪ್ರಚಾರ ಸಭೆಯ ಆಯವ್ಯಯ ಲೆಕ್ಕದ ಮಂಜೂರಾತಿ ಪ್ರಚಾರ ಸಭೆಯ ಸಂಘಟನೆಯ ಮಂಜೂರಾತಿ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ ಸಭಾಧ್ಯಕ್ಷರ ಅನುಮತಿಯಿಂದ ಸಭೆಯ ಮುಂದಿಡಬಹುದಾದ ಇತರ ವಿಷಯಗಳು. ಈ ವರೆಗೆ ಸ್ವದೇಶೀ ಪ್ರಚಾರ ಸಭೆಯ ಸ್ಥಾಪಕರಾಗಲ್ಪಟ್ಟವರೆಲ್ಲರೂ ತಪ್ಪದೆ ಹಾಜರಿ ಬೇಕಾಗಿ ಶ್ರೀ ಬಿ ಕೋಚಣ್ಣ ಭಂಡಾರಿಗಳ ವಿನಂತಿಯಿದೆ

ಶ್ರೀ ಬೈಲ್ ಗೋಪಾಲಕೃಷ್ಣಯ್ಯನವರು ಇಲ್ಲಿಯ ಸಬ್ ಜಡ್ಜರಾಗಿಯೂ, ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ ಎಸ್ ಎ ಪೈಯವರು ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫರಾಗಿಯೂ ವರ್ಗಾಯಿಸಲ್ಪಟ್ಟಿರುವರು

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಗುದ್ಯಾವರ ನಾರಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಇದೇ ತಾ ೧೮ನೇ ಶನಿವಾರ ಸಂಜೆ ಶ್ರೀ ಎ ಸುಬ್ಬರಾಯ ಶರ್ಮರು ಬ್ರಾಹ್ಮಣತ್ವದ ಪುನರುಜ್ಜೀವನ, ಹಿಂದೂಧರ್ಮ ಪ್ರಚಾರದಲ್ಲಿ ದೇವಸ್ಥಾನಗಳು ಮಾಡಬೇಕಾದ ಕಾರ್ಯಗಳ ಕುರಿತು ಭಾಷಣವಿತ್ತರು.

ಶ್ರೀಗಳಾದ ಎ ಬಿ, ಶೆಟ್ಟಿ, ಸುಬ್ರಹ್ಮಣ್ಯ ಭಟ್ ಮಿ. ಚಮ್ನಾಡ್ ಮತ್ತು ಮಿ। ಶ್ರೀಪ್ಸರೇ ಮೊದಲಾದವರು ರೆವಿನ್ಯೂ ಮೆಂಬರರ ಭೇಟಿ ಮಾಡಿ, ಪ್ರಕೃತದ ಸಾಂಪತ್ತಿಕ ದುಃಸ್ಥಿತಿಯಲ್ಲಿ ದಕ್ಷಿಣ ಕನ್ನಡದಲ್ಲಿ ರಿಸೆಂಟ್ಲ್‌ಮೆಂಟನ್ನು ಮುಂದುವರಿಸದೆ ನಿಲ್ಲಿಸಬೇಕೆಂದು ಹೇಳಿಕೊಂಡಾಗ ಆ ಕುರಿತು ವಿಚಾರಿಸುವೆನೆಂದು ರೆವಿನ್ಯೂ ಮೆಂಬರರು ಹೇಳಿರುವರು

**ಹೆಜಮಾಡಿ**—ಶ್ರೀ ಗವೀರ ಮಹಾ ಸಂಘಕ್ಕೆ ಸೇರಿದ ಸಾಹುಕಾರ ದುಗ್ಗಪ್ಪ ನಾರಾಯಣರು ಮಿತ್ರವರ್ಗದಿಂದೊಡಗೂಡಿ ಬೆಳ್ಮಣ್ಣು ಶ್ರೀ ದುರ್ಗಾಂಬಿಕಾ ದೇವಸ್ಥಾನಕ್ಕೆ ಚಿತ್ತೈಸಿ ಅಲ್ಲಿಯ ಧ್ವಜಸ್ತಂಭವನ್ನು ಭಕ್ತಿರಾಂದಲೂ ನಿಸ್ವಾರ್ಥತೆಯಿಂದಲೂ ಎರಸಿ ನೇರಾಗಿ ಸ್ಥಾಪಿಸಿ ತಾದೃಶ ಧರ್ಮಸೇವೆಯಿಂದ ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾದರೆಂಬ ವಾರ್ತೆಯನ್ನು ಕೇಳಲು ಸಂತೋಷಪಡುತ್ತೇವೆ

**ಮೂಲ್ಕಿ:**—ಮಂಗಳೂರು ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಮಹಾಶಯರು ಈ ಕಡೆ ಬಂದಿದ್ದು, ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆ ಮತ್ತು ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಗಳ ವರ್ಷಾವಧಿ ಪರೀಕ್ಷೆಗಳನ್ನು ತೀರಿಸಿ ತಾ ೭—೩—೩೩ರಲ್ಲಿ ಹಿಂತೆರಳಿದರು

ಮಂಗಳೂರು ಡಿವಿಜನಲ್ ಆಫೀಸರರು ಇದೇ ಕಳೆದ ತಾರೀಖಿನಿಂದ ೧೬ರ ವರೆಗೆ ಇಲ್ಲಿ ಮೊಕ್ಕಾಂ ಮಾಡಿದ್ದು ತಾ ೧೭ರಲ್ಲಿ ಹಿಂತೆರಳಿದರು ಇವರು ಸ್ಥಳೀಕ ಯೂನಿಯನ್ ಕ್ಲಬ್ಬನ್ನು ಸಂದರ್ಶಿಸಿ ಚಲೋ ಅಭಿಪ್ರಾಯಪಟ್ಟರು

ಸದ್ಯದಲ್ಲೇ ಕೆಲಸದಿಂದ ನಿವೃತ್ತಿ ಹೊಂದಲಿರುವ ಮಂಗಳೂರು ತಾಲೂಕು ತಹಶೀಲ್ದಾರ ಶ್ರೀ ಯಸ್ ಕೃಷ್ಣಪ್ಪನವರನ್ನು ಗೌರವಿಸುವ ಬಗ್ಗೆ ತಾ ೧೭ ೩ ೩೩ರಲ್ಲಿ ಸ್ಥಳೀಕ ರೆವಿನ್ಯೂ ಇನ್ಸ್‌ಪೆಕ್ಟರರೂ ಇನ್ನಿತರ ಮಹಾಶಯರೂ ಸೇರಿ ಒಂದು ಗ್ರೂಪ್ ಫೋಟೋ ಕೆಗೆಸಲಾಯಿತು

**ಕಾರ್ಕಳ**—ತಾ ೧೮ ೩—೩೩ರ ದಿನ ಸಾಯಂಕಾಲ ಕಾರ್ಕಳ ತಾಲೂಕಿನ ಪ್ರಾಥಮಿಕ ಶಾಲಾ ಅಧ್ಯಾಪಕರ ಮಹಾಸಭೆಯು ಈ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ನಡೆದು ಮುಂದೆಯೂ ಕಾರ್ಯವು ನಡೆಯುವಂತೆ ಹೊಸಕಾರ್ಯಕಾರಿ ಸಮಿತಿಯ ಚುನಾವಣೆ ಸೆಂಟರುಗಳ ಏರ್ಪಾಡು ಮೊದಲಾದುವುಗಳಾದುವು. ಕಾರ್ಕಳ ಸೆಂಟರಿನ ಉಪಾಧ್ಯಾಯರ ಸಭೆಯು ಬರುವ ೮—೪—೩೩ರ ದಿನ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಕೂಡುವುದು

ಉಡುಪಿಯ ಶರ್ಮ—ವಾರ ೪ ವ್ಯವಹರಣೆಯಲ್ಲಿ ಪ್ರಸಿದ್ಧರಾದ ಶ್ರೀ ಅಂಕುರಾಜು ಸುಬ್ಬರಾಯ ಶರ್ಮರವರು ಇದೇ ೧೯ನೇ ದಿನ ಮೈನ ಎಲಿಮೆಂಟರಿ ಶಾಲೆಯಲ್ಲಿ ಹರಿಜನರ ದೇವಸ್ಥಾನ ಪ್ರವೇಶ ವಿಚಾರದ ಕುರಿತು ಇಂಗ್ಲೀಷಿನಲ್ಲಿ ಭಾಷಣವಿತ್ತರು

**ಫರಂಗಿಪೇಟೆ**—ಇಲ್ಲಿಯ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ಸಭೆಯು ತಾ ೧೧ನೇ ಶನಿವಾರ ರಾ ಕೆ ರಾಮಚಂದ್ರ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು

ಈ ಸೆಂಟರಿನ ಉಪಾಧ್ಯಾಯರ ಸಂಘದ ಮಹಾಸಭೆಯು ತಾ ೧೮ರಲ್ಲಿ ಪುದು ಬೋರ್ಡು ಮಹಮ್ಮದನ್ ಶಾಲಾ ಹೆಡ್‌ಮಾಸ್ಟರ್ ಶ್ರೀ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಫರಂಗಿಪೇಟೆ ಶಾಲೆಯಲ್ಲಿ ಜರಗಿತು

**ಪೊಳಲಿ**—ಇಲ್ಲಿಯ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಇದೇ ಕಳೆದ ಮೀನ ಸಂಕ್ರಮಣಕ್ಕೆ ಧ್ವಜಾರೋಹಣವಾಗಿ ಉತ್ಸವವು ಆರಂಭವಾಗಿರುತ್ತದೆ.

ಇಲ್ಲಿಯ ರಂಗಭಟ್ಟರೆಂಬವರ ಮೋಳ—ಹುಲ್ಲಿನ ಚಾವಣಿಯ ಮನೆಗೆ ಆಕಸ್ಮಾತ್ ಬೆಂಕಿ ತಗೆಲಿ ಎಲ್ಲಾ ಸುಟ್ಟು ಹೋಗಿ ತುಂಬಾ ನಷ್ಟವಾಗಿರುತ್ತದೆ

**ಕಿನ್ನಿಗೋಳಿ**—ಇಲ್ಲಿಯ ನೇಶನಲ್ ಕ್ಲಬ್ಬಿನಲ್ಲಿ ಇದೇ ತಾ ೧೨ನೇ ಆದಿತ್ಯವಾರ ಶ್ಯಾಮ ಘಂಟೆ ೪ ೩೦ಕ್ಕೆ ಮಂಗಳೂರು ತಾಲೂಕು ತಹಶೀಲ್ದಾರ ರಾ. ಎಸ್ ಕೃಷ್ಣಪ್ಪನವರಿಗೆ ಕ್ಲಬ್ಬಿನ ಪರವಾಗಿ ಕ್ಲಬ್ಬಿನ ಮೆಂಬರ್ ರಾ ಕುಡೆಕ್ಕೂರು ಗುತ್ತು ಪಟೇಲ ಮಹಾಬಲಶೆಟ್ಟಿ ಒಂದು ಟೀಪಾರ್ಟಿಯ ನ್ನಿತ್ತರು

ಕಿನ್ನಿಗೋಳಿ ಸೆಂಟರಿಗೆ ಒಂದು ಸೂಲಗಿತ್ತಿ ಮತ್ತು ಮಾರ್ಗ ಗುಡಿಸುವ ಜನ ಅತೀ ಅಗತ್ಯವೆಂದು ಮನವಿಯು ತಾಲೂಕು ಬೋರ್ಡಿಗೆ ರವಾನಿಸಿದ್ದು ದಯಾಳು ಬೋರ್ಡಿನವರು ಈ ಕುರಿತು ಹೆಚ್ಚಿನ ನಿಗಾ ತೆಗೆದುಕೊಳ್ಳುವರೆಂದು ನಿರೀಕ್ಷಿಸಲಾಗಿದೆ


## ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

**ಅಖಿಲ ಕರ್ಣಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ಣಾಟಕದ ಗೌರವಕ್ಕೂ ಕರ್ಣಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ**

ನಮ್ಮಲ್ಲಿ ಬ್ರಿಟಿಷ್ ಫಾರ್ಮಕೋಪಿಯ ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೋಡೆಕ್ಸ್ ನ ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧ ಔಷಧಗಳೂ, ತರತರದ ಟಾಯ್ಲೆಟ್ ದ್ರವಗಳೂ ಸುವಾಸನಾ ವಸ್ತುಗಳೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ, ಎಲ್ಲಾ ತರದ ಫೌಂಟನ್ ಪೆನ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುವುವು

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಾಮುಖ್ಯ ಔಷಧಗಳು

ಚ್ಯವನಪ್ರಾಶ ಲೇಹ ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ ೧ ಪೌಂಡು ಬಾಟ್ಲಿ ರೂ. ೩ ೧೦ ಔನ್ಸು ಬಾಟ್ಲಿ ರೂ ' ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ವ ಮೆದುಳಿಗೆ ಶಾಂತತೆಯನ್ನೀಯುವ ಔಷಧ ೧ ಪೌಂಡು ಬಾಟ್ಲಿಗೆ ರೂ 1—9

ಅಶ್ವಗಂಧಾರಿಷ್ಟ, ಅತ್ಯುತ್ತಮವಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು ೧ ಪೌಂಡು ಬಾಟ್ಲಿಗೆ ರೂ ೩. ೮ ಔನ್ಸು ಬಾಟ್ಲಿಗೆ ರೂ 1—10— ಪ್ರಸೂತಿ ಸಂಜೀವನ, ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ. ೧೦ ಔನ್ಸು ಬಾಟ್ಲಿಗೆ ರೂ 1 8—0 ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3—6—0, ೮ ಔನ್ಸು ಬಾಟ್ಲಿಗೆ ರೂ 1—1—0

ಬ್ರಾಹ್ಮಿ ತೈಲ. ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಟಾನಿಕ್ಕು ೪ ಔನ್ಸು ಬಾಟ್ಲಿಗೆ ಆಣೆ 14 ಹಿಮಸಾಗರ ತೈಲ ತಲೆಗೆ ಒಳ್ಳೆ ತಂಪನ್ನೀಯುವ ನಿಶ್ಚಯವಾದ ಔಷಧ. ೪ ಔನ್ಸು ಬಾಟ್ಲಿಗೆ ರೂ. 1—8—0 ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ ೪ ಔನ್ಸು ಬಾಟ್ಲಿಗೆ ರೂ 1—6—0 ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಸಂಧಿವಾತ ವಾತ ಶಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೩ನೇಯ ಆವರ್ತನೆ ೧ ಔನ್ಸಿಗೆ ರೂ 1 ೧೪ನೇಯ ಆವರ್ತನೆ ೧ ಔನ್ಸಿಗೆ ರೂ —12 ೨೧ನೇ ಆವರ್ತನೆ ೧ ಔನ್ಸಿಗೆ ರೂ 2—5 ೮೧ನೇಯ ಆವರ್ತನೆ ೧ ಔನ್ಸಿಗೆ ರೂ 4 ೨೧ನೇ ಆವರ್ತನೆ ರೂ 4—0 ೧೦೧ನೇ ಆವರ್ತನೆ ರೂ ೮ ಧನ್ವಂತರಿ ತೈಲ ರಕ್ತವಾತ ಆಮವಾತ, ಸರ್ವಾಂಗವಾತವೆಂಬ ಶಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ವ ಮೈಗೆ ಹಚ್ಚುವ ದಿವ್ಯೌಷಧ. ೭ನೇಯ ಆವರ್ತನೆ ೧ ಔನ್ಸಿಗೆ ರೂ , ೧೪ನೇ ಆವರ್ತನೆ ೧ ಔನ್ಸಿಗೆ ರೂ —12 ೨೧ ನೇ ಆವರ್ತನೆ ೧ ಔನ್ಸಿಗೆ ರೂ 2—8—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಆಸವ ಅರಿಷ್ಟಗಳೂ ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ, ಸುಕುಮಾರಾಮೃತ, ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ಣಾಟಕ ಸ್ನೋ, ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅರೋರಾ ಕ್ರೀಮ್, ಬ್ಯೂಟಿಕ್ರೀಮ್, ಕ್ರಿಮೋರ್ ಅಮೋನಿಕ್ (Limes & Glycerine) ವಗೈರೆ ಟಾಯ್ಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು ಪಚ್ಚೆ, ರಕ್ತನೀಲ, ವರ್ಣಗಳ, ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಯೋಗಿಸುವ ಸಾಬೂನುಗಳೂ ತಯಾರಿಸಲ್ಪಡುವವು

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳಿರಿ.

***Managing Director:*—Venkatraya Annappa Baliga**

# ವಿಶಾಲ ಭಾರತದಲ್ಲಿ ಶ್ವೇತಪತ್ರ ನೀತಿಯ ಖಂಡನೆ!

## ಅಖಿಲ ಭಾರತ ಕಾಂಗ್ರೆಸ್ ಸಭೆಯ ಬಹಿಷ್ಕಾರ!

### ಬಿಡುಗಡೆ ಇಲ್ಲ!

ಕಳೆದ ಶನಿವಾರ ದಿನ ಇಂಡಿಯಾ ಇಂಗ್ಲಾಂಡುಗಳಲ್ಲಿ ಪ್ರಕಟಿಸಲ್ಪಟ್ಟ ಶ್ವೇತಪತ್ರದ ದೆಸೆಯಿಂದಾಗಿ ವಿಶಾಲ ಭಾರತದಲ್ಲಿ ಮಹಾ ಹಾಹಾಕಾರಕ್ಕೆ ಮೊದಲಿಟ್ಟಿದೆ. ಪ್ರತಿಯೊಬ್ಬ ರಾಷ್ಟ್ರಾಭಿಮಾನಿಯೂ, ಪ್ರತಿಯೊಂದು ಪತ್ರಿಕೆಯೂ ಅಸಂತೃಪ್ತಿಗೊಂಡಂತಿದೆ. ಕಳೆದ ಮೂರು ರೌಂಡ್‌ಟೇಬಲ್‌ಗಳು ನಡೆದ ಸಮಯದಲ್ಲೂ ಬ್ರಿಟಿಷ ಸರಕಾರವು ಹಿಂದೂದೇಶಕ್ಕೆ ಸಮಾಧಾನಪೂರ್ವಕ ರಾಜ್ಯರಚನೆಯನ್ನು ದಾನಮಾಡುವೆನೆಂದು ವಾಗ್ದಾನ ಮಾಡಿತ್ತು; ಅಂತಹ ವಾಗ್ದಾನದ ನಂಬಿಕೆಯಿಂದಾಗಿ ಬಹುಪಕ್ಷ ಹಿಂದೀಯರಿಂದ ಗ್ರಾಹ್ಯವಾಗುವ, ಸ್ವೀಕೃತವಾಗುವ ರಾಜ್ಯಾಂಗದಾನವು ಲಭಿಸುವುದೆಂದು ಮಂದಪಕ್ಷೀಯರಾದ ಸರ್ ತೇಜ ಬಹದ್ದೂರ್ ಸಪ್ರೂ, ಚಿಂತಾಮಣಿ, ಜಯಕರ್, ಶ್ರೀನಿವಾಸ ಶಾಸ್ತ್ರಿ ಮೊದಲಾದ ಅನೇಕಾನೇಕರ ಆಶೆಯವಾಗಿತ್ತು. ಆದರೆ White Paperನ ಪ್ರಕಟಣೆಯಾದೊಡನೆ, ಎಲ್ಲರ ಆಶೆಯೂ ನಿರಾಶೆಯ ಬಂಡೆಕಲ್ಲಿಗೆ ತಗಲಿ ಢೋರಲ್ಲನೆ ಒಡೆದು ಚೂರಾಯಿತು. ಶ್ವೇತಪತ್ರದ ಶಿಫಾರಸು ಮೇರೆಗೆ ಬ್ರಿಟಿಷ ಸರಕಾರವು ವೈಸರಾಯರಿಗೆ ನಿರಂಕುಶ ಪ್ರಭುತ್ವವನ್ನು ಕೊಟ್ಟಿದೆ. "ಸಂಯುಕ್ತ ಸರಕಾರದ ಗವರ್ನರ್ ಜನರಲರನ್ನು ರಾಜಶಾಸನ ಪ್ರಕಾರ ಆರಿಸಲಾಗಿ ಅವರು ನಿರ್ವಹಿಸಬೇಕಾದ ಕರ್ತವ್ಯ ಕಾರ್ಯಗಳು ಸಾರ್ವಭೌಮರ ಅಧಿಕಾರಪತ್ರ ಮೂಲಕ ಸೂಚಿತವಾಗುವವು; ತದನಂತರ ಅವರು ಸಾರ್ವಭೌಮರ ಪ್ರತಿನಿಧಿಯಾಗಿ ರಾಜ್ಯವನ್ನಾಳುವರು. ಗವರ್ನರ ಜನರಲರಿಗೆ ಸಾರ್ವಭೌಮರೇ ರಾಜ್ಯಭಾರ ಸೂಚನೆಗಳನ್ನೀಯುವರು. ಬ್ರಿಟಿಷ ಹಿಂದೂಸ್ಥಾನದ ರಾಜ್ಯಘಟನೆಯನ್ನು ಮಾಡಬೇಕಾದರೆ ಪ್ರಥಮದಲ್ಲಿ ಪ್ರತ್ಯ ಪ್ರತ್ಯೇಕ ಪ್ರಾಂತಿಕ ಸ್ವಯಂ ಪ್ರಭುತ್ವವನ್ನು ಕಲ್ಪಿಸಬೇಕು; ಅವುಗಳಿಗೆ ತಂತಮ್ಮ ಸರಕಾರ ದಾಡಳಿತಗಳನ್ನು ಬಿಟ್ಟುಕೊಡಬೇಕು. ಹೀಗಿರುವುದರಿಂದ ಈ ಸ್ವಸತ್ತಾತ್ಮಕ ರಾಜ್ಯಗಳಿಗೆ ಒಬೊಬ್ಬ ಗವರ್ನರರನ್ನು ನಿಯಮಿಸಬೇಕೆಂದೂ, ಆ ಗವರ್ನರರು ಸಾರ್ವಭೌಮರ ಅಧಿಕಾರ ಪತ್ರದ ಮೇರೆಗೆ ರಾಜ್ಯಭಾರ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳಬೇಕೆಂದೂ, ಆ ಗವರ್ನರರಿಗೆ ಮಂತ್ರಾಲೋಚನೆಯನ್ನೀಯಲು ಕೌನ್ಸಿಲುಗಳನ್ನು ಸ್ಥಾಪಿಸಬೇಕೆ"ಂದೂ ಬ್ರಿಟಿಷ ಸರಕಾರವು ಶಿಫಾರಸು ಮಾಡಿರುವುದರಿಂದ ಇಂಡಿಯಕ್ಕೆ ಕೇಂದ್ರ ಸರಕಾರವನ್ನು ಕೊಟ್ಟು ಅದನ್ನು ಅದರ ಗೋಜಿಗೆ ಬಿಟ್ಟುಬಿಡುವ ಆಲೋಚನೆಯು ಸರಕಾರಕ್ಕಿಲ್ಲವೆಂದೇ ತಿಳಿಯಲಾಗುತ್ತದೆ. "ಯಾವ ವಿಷಯಗಳ ಮೇಲೆ ಗವರ್ನರ ಜನರಲಿಗೆ ನಮೂದಿತ ಅಧಿಕಾರವಿರುತ್ತದೋ ಅವುಗಳನ್ನು ಜಾರಿಗೆ ತರುವ ವಿಷಯದಲ್ಲಿ ಅವರು ಮಂತ್ರಿಗಳೊಡನೆ ವಿಚಾರಿಸಿಕೊಳ್ಳುವ ಅಗತ್ಯವಿರುವುದಿಲ್ಲ; ಅಗತ್ಯವಿದ್ದಾಗ ತನ್ನ ಸ್ವಂತ ಜವಾಬ್ದಾರಿಕೆಯಲ್ಲಿ ಅವರು ಆ ವಿಷಯಗಳ ಮೇಲೆ ಅಧಿಕಾರವನ್ನು ತೋರಿಸಬಹುದು" ಎಂಬ ಇದೊಂದು ಶರ್ತವು ಇಡೀ ಶ್ವೇತಪತ್ರದ ರುಚಿಯನ್ನು ಅಡಗಿಸಿಬಿಟ್ಟಿದೆ. ಹೀಗೆಂದರೆ, ಹಿಂದೀಯ ಮಂತ್ರಿಗಳು ವೈಸರಾಯರ ನಿರಂಕುಶ ನೀತಿಯ ಎದುರು ಬಾಯಿ ಮುಚ್ಚಿ ಸುಮ್ಮನಿರಬೇಕೆಂದೂ ಅದೊಂದು ಮಟ್ಟಿಗೆ ಇಡೀ ರಾಜ್ಯಭಾರದ ಹೊರೆಯೇ ವೈಸರಾಯರದ್ದಾಗುತ್ತದೆಂದೂ ತಿಳಿಯಬಹುದು. ಈ ತರದ ಶಿಫಾರಸುಗಳಿಂದ ಈಗ ಸಮಸ್ತ ಹಿಂದೂಸ್ಥಾನಕ್ಕೆ ಸರಕಾರದ ಮೇಲಿರುವ ನಂಬಿಕೆಗೆ ಅಭಾವವುಂಟಾಗದಿರದೆಂದು ಶ್ರೀ. ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳೇ ಮೊದಲಾದವರು ಹೇಳಿರುತ್ತಾರೆ. ತಾ. ೨೦ರಲ್ಲಿ ಮದ್ರಾಸಿನ ಲಿಬರಲ್ ಲೀಗಿನವರ ಒಂದು ಸಭೆಯು ಜರಗಿ ಶ್ವೇತಪತ್ರದ ಪರ್ಯಾಮರ್ಶೆಯಾಯಿತು. ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರರು ಅಧ್ಯಕ್ಷರಾಗಿದ್ದರು. ಅವರು ಶ್ವೇತಪತ್ರದ ಕುರಿತು ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳವರ ಅಧಿಕಾರವಾಣಿಯಿಂದ ಒಂದು ಪ್ರಕಟಣೆಯನ್ನು ಮಾಡಿರುವರು. ಅದರಲ್ಲವರು ಶ್ವೇತಪತ್ರದ ದಾನದ ಮೇಲೆ ಟೀಕೆಯ ಸುರಿಮಳೆಯನ್ನು ಕರೆಯುತ್ತಾ—"ಗುಟ್ಟು ರಟ್ಟಾಯಿತು—ಅದರಲ್ಲಿ ಆಡಳಿತದ ಹೊರೆಯೇ ಏರಿಸಲ್ಪಟ್ಟಿದೆ. ನ್ಯಾಯ ವಿಧಾಯಕ ಸಭೆಯ ಸದಸ್ಯರು ಹಸುಗೂಸುಗಳೆಂದೂ ಅಥವಾ ಬ್ರಿಟನಿನ ಕರುಣೆಯಿಂದೂ ಸರಕಾರವು ಪರ್ಯಾಲೋಚಿಸಿಕೊಂಡಿದೆ. ನ್ಯಾಯವಿಧಾಯಕ ಸಭೆಯ ಸುತ್ತಲೂ ನಿರ್ಬಂಧಗಳ ಬಲವತ್ತರ

### ಚರ್ಚಿಲ್ಲರ ಜಯ!

ಬೇಲಿಯನ್ನು ಜಡಿದು ಹಾಕಿದ್ದಾರೆ. ನಮ್ಮ ರಾಷ್ಟ್ರಾಡಳಿತೆಯ ಜವಾಬ್ದಾರಿಕೆಯು ನಮ್ಮ ಕೈಗೆ ಬರಲು ಅದರಲ್ಲಿ ಯಾವ ಎಡೆಯೂ ಇರುವುದಿಲ್ಲ. ಮೊಂಟೆಗೋ ಚೆಮ್ಸ್‌ಫರ್ಡ್‌ರವರ ಸ್ಕೀಮಿನ ಶಿಫಾರಸು ಬಂದು ಆದಾಗ ಯಾವ ರೀತಿಯ ನಿರ್ಬಂಧಗಳನ್ನು ಕಲ್ಪಿಸಿ ಹಾಕಿದ್ದರೋ ಅಂತಹ ಬಂಧನಗಳಿಗಿಂತಲೂ ವಿಪರೀತ ಬಂಧನಗಳು ಈ ಶಿಫಾರಸಿನಲ್ಲಿವೆ. ಗವರ್ನರ ಜನರಲರಿಗೂ ಗವರ್ನರರಿಗೂ ಕೊಟ್ಟಿರುವ ನಿರಂಕುಶ ಅಧಿಕಾರವನ್ನು ಪರಿಶೀಲಿಸುವಾಗ ಎಲ್ಲಾ ಅಧಿಕಾರ ಸೂತ್ರವನ್ನೂ ಲಂಡನಿನ ವೈಟ್ ಹೋಲಿನಲ್ಲಿಟ್ಟು ಕುಣಿದಾಡಿಸುವ ಏರ್ಪಾಡನ್ನು ಯುಕ್ತಿಯುಕ್ತವಾಗಿ ಮಾಡಿದಂತಿದೆ. ಬ್ರಿಟಿಷ ಸರಕಾರವು ಒಂದೋ ಬ್ರಿಟಿಷ ಟೋರಿಗಳನ್ನು ಕಿತ್ತೊಗೆಯಬೇಕಾಗಿದೆ; ಒಂದೋ ಹಿಂದೀಯರ ವಿಶ್ವಾಸವನ್ನು ಹೊಂದಬೇಕಾಗಿದೆ" ಎಂದು ಸ್ಫುಟವಾಕ್ಯಗಳಿಂದ ನುಡಿದಿರುತ್ತಾರೆ. ಶ್ರೀ. ಎನ್. ಎಂ. ಜೋಶಿಯವರು "ಶ್ವೇತ ಪತ್ರದ ಶಿಫಾರಸಿನಿಂದ ಸರಕಾರವು ಹಿಂದೀಯರನ್ನು ನಂಬುವುದಿಲ್ಲವೆಂದು ವ್ಯಕ್ತವಾಗುತ್ತದೆ" ಎಂದಿರುವರು. ಶ್ರೀ ಕೇಳ್ಕರರು "ಅದು ಸಂಪೂರ್ಣ ಅಸಂತೃಪ್ತಿಕರವಾಗಿದೆ" ಎಂದರು. ಪಂಜಾಬಿನ ರಾಜಾ ನರೇಂದ್ರನಾಥರವರು "ಶ್ವೇತ ಪತ್ರವು ಯಾರನ್ನೂ ಸಮಾಧಾನಿಸದು" ಎಂದರು. ಶ್ರೀ ಜಿ. ಎನ್. ಬಾಸುರವರು "ಅಪನಂಬಿಕೆ ಅವಿಶ್ವಾಸಗಳ ಕಂತೆ" ಎಂದರು. ಇಂಡಿಯನ್ ಚೇಂಬರ್ ಒಫ್ ಕೊಮರ್ಸ್ ಇದರ ಅಧ್ಯಕ್ಷರಾದ ಶ್ರೀ ಎ. ಎಲ್. ಓಜಾರವರು "ಅದು ಗಾಡಿಯಲ್ಲಿರುವ ಡಿಲ್ಲಿ ಲಡ್ಡೂವಿನಂತಿದೆ" ಎಂದರು. ಅಮೇರಿಕದ ಶಾಕತಾಲಿಯವರು "ಭದ್ರತೆಗಳ ಗೂಡುಗಳಿರದಿದ್ದರೆ ಈ ಶಿಫಾರಸು

> "ಸರಕಾರವು ಏನು ಮಾಡಲಿರುತ್ತದೆಂದು ನಾನರಿಯೆ. ಏನೇ ಇರಲಿ!—ಸರಕಾರವು ತನ್ನ ಪ್ರಕೃತದ ಧೋರಣೆಯನ್ನು ತ್ಯಜಿಸಿ ಮೈತ್ರಿಯ ಕರವನ್ನು ಮುಂದೊಡ್ಡದಿದ್ದರೆ, ಅದರ ಸಕಲ ಆಶಯಗಳೂ ಅಪಜಯದ ಬಂಡೆಗೆ ತಗಲಿ ತುಮುರು ತುಮುರಾಗುವುವು!!"
>
> ಸರ್ ತೇಜ ಬಹದ್ದೂರ್ ಸಪ್ರೂ.

ಗಳು ಒಳ್ಳೆಯದಿರುತಿದ್ದುವು. ಹಿಂದೀಯರು ಈ ಶಿಫಾರಸುಗಳು ಇನ್ನೂ ತಿದ್ದುಪಡಿ ಹೊಂದುವಂತೆ ಯತ್ನಿಸಿ ಸ್ವೀಕರಿಸಬಹುದು" ಎಂದಿರುವರು. ದಿವಾನ ಬಹದ್ದೂರ್ ಬಿ. ಮುನಿಸ್ವಾಮಿ ನಾಯ್ಡುರವರು "ಅದು ಅಸಮರ್ಪಕ"ವೆಂದರು. ಡಾ| ಮೂಂಜೆಯವರು "ವೈಟ್ ಪೇಪರ್ ಎಂಬುದು ಗವರ್ನರ ಜನರಲರಿಗೆ ಸಿಕ್ಕಿದ ಅಧಿಕಾರದ ಪರಮಾವಧಿ" ಎಂದರು. ಶ್ರೀ. ಬಿ. ದಾಸರು "ಶ್ವೇತ ಪತ್ರ ಶರ್ತಗಳು ಅತ್ಯಂತ ಅಸಂತುಷ್ಟಿದಾಯಕವಾದುವುಗಳು" ಎಂದರು. ಡಾ| ಕೈಲಾಸನಾಥ ಕಟ್ಜೂರವರು "ಶ್ವೇತ ಪತ್ರವು ಗಾಂಧಿಯವರಿಗ ಸ್ವರಾಜ್ಯವನ್ನಾಗಲೀ ಮಂದ ಪಕ್ಷೀಯರಿಗೆ ಡೊಮಿನಿಯನ್ ಸ್ಟೇಟಸನ್ನಾಗಲೀ ಕೊಡಲಾರದು" ಎಂದರು. ಶ್ರೀ ಜಯಕರರು ಶ್ವೇತ ಪತ್ರವನ್ನು ದೀರ್ಘವಾಗಿ ವಿಮರ್ಶಿಸುತ್ತಾ—"ರೌಂಡ್‌ಟೇಬಲಿನಲ್ಲಿ ಏನೆಲ್ಲಾ ಬೇಡವೆಂದಿದ್ದೆವೋ ಅವುಗಳನ್ನು ಈ ಶ್ವೇತ ಪತ್ರದಲ್ಲಿ ಕೂಡಿಸಿದ್ದಾರೆ. ನಾವು ಮಾಡಿದ ಹೆಚ್ಚಿನ ಯಾವ ಸೂಚನೆಗಳೂ ಇದರಲ್ಲಡಕವಾಗಿರುವುದಿಲ್ಲ. ಈ ಶಿಫಾರಸುಗಳ ದೆಸೆಯಿಂದಾಗಿ ಫೆಡರೇಶನ್ ಎಂಬುದು ಆಕಾಶದ ಹೂವಾಗಲಿದೆ. ಸಮಗ್ರ ಹಿಂದೀಯರು ಒಂದಾಗಿ ಅದನ್ನು ವಿಮರ್ಶಿಸಿಕೊಳ್ಳಬೇಕಾಗಿದೆ. ಟೀಕೆಗಳನ್ನು ಮಾಡಿದರೆ ಸುಧಾರಣೆಯ ವಿರೋಧಿಗಳಿಗೆ ಬೆಂಬಲವಿತ್ತಂತಾಗುವುದರಿಂದ ಟೀಕೆಗಳು ಈಗ ಅವಶ್ಯವಿಲ್ಲ" ಎಂದಿರುವರು. ಲಿಬರಲ್ ಫೆಡರೇಶನಿನ ಅಧ್ಯಕ್ಷರಾದ ಶ್ರೀ. ಚಿಂತಾಮಣಿಯವರು "ಶ್ವೇತ ಪತ್ರವು ಹಿಂದೀಯ ರಾಷ್ಟ್ರೀಯವಾದಿಗಳನ್ನು ಸಂತೈಸದು. ಇಂಡಿಯಾದಲ್ಲಿ ಕೆಲ ಉತ್ಸಾಹಿಗಳನ್ನೂ ಇಂಗ್ಲಾಂಡಿನಲ್ಲಿ ಟೋರಿಗಳನ್ನೂ ಸಮಾಧಾನಿಸಬಹುದು" ಎಂದು ಹೇಳಿದರು. "ಮುಂಬಾಯಿ ಕ್ರಾನಿಕಲ್" ಪತ್ರಿಕೆಯು "ಶ್ವೇತ ಪತ್ರವು ಯಾವ ಸುಧಾರಣೆಯನ್ನೂ ಕೊಡುವಂತಿಲ್ಲ, ಇದು ಅಸ್ಥಿರ ತನಕದಂತೆ ಸ್ವೀಕೃತವಾಗು"

### ಕರ್ನಾಟಕ ಪ್ರಾಂತ್ಯದ ಗತಿ!

ಎಂದಿದೆ. ಕರಾಚಿಯ "ಸಿಂಧ್ ಒಬ್ಸರ್‌ವರ್" ಪತ್ರಿಕೆಯು "ಇಂಡಿಯಾ ಇಂಗ್ಲಾಂಡುಗಳು ಶ್ವೇತ ಪತ್ರದಿಂದ ಒಂದಾಗುವ ಮಾತು ತೀರ ಸುಳ್ಳು!" ಎಂದಿದೆ. ಅಲ್ಲಹಾಬಾದಿನ 'ಲೀಡರ್' ಪತ್ರಿಕೆಯು "ಶ್ವೇತಪತ್ರ ಶಿಫಾರಸಿನಿಂದ ಇಂಡಿಯಾಕ್ಕೆ ಸಾಮಂತ ರಾಜ್ಯವಾಗಲೀ ಸ್ವರಾಜ್ಯವಾಗಲೀ ಸಿಗುವಂತೆಯೇ ಇಲ್ಲ. ಸರ್ವ ಕಾಲಕ್ಕೂ ಹಿಂದೂದೇಶವು ಪರರಾಷ್ಟ್ರದ ಮೇಲೆ ಹೊಂದಿರಬೇಕಾಗಿದೆ" ಎಂದಿದೆ. ಮತ್ತೆ ಕೆಲವು ಪತ್ರಿಕೆಗಳು ಹೀಗೆಂದಿವೆ. 'ಲಿಬರ್ಟಿ' "ಗವರ್ನರ ಜನರಲರಿಗೆ ಕೊಟ್ಟ ಅಧಿಕಾರವು ಅದ್ಭುತಕರ; ಸುಧಾರಣೆಯಾದರೂ ಬೇಡ, ಈ ಅಧಿಕಾರ ಹೋಗಬೇಕು." ದಿ ಮುಸಲ್ಮಾನ್ "ಶ್ವೇತ ಪತ್ರವು ನಿಜವಾಗಿಯೂ ಬಿಳಿಯಾಗಿಲ್ಲ, ಎಲ್ಲಾ ಕಪ್ಪು" ನಾಗಪುರದ 'ಹಿತವಾದ'—"ಶ್ವೇತ ಪತ್ರದಾನವು ಯಾವನಿಂದಲೂ ಸ್ವೀಕೃತವಾಗದು" 'ಪಯನಿಯರ್'—"ಸಪ್ರೂ ಜಯಕರರು ತೋರಿಸಿದ ದೇಸಂವೇ ಈ ಶ್ವೇತ ಪತ್ರದೊಳಗಿದೆ". "ಸಿವಿಲ್ ಎಂಡ್ ಮಿಲಿಟರಿ ಗಜೆಟ್"—"ಶ್ವೇತಪತ್ರವು ಯಾವ ಕಾಲಕ್ಕೂ ಹಿಂದೀಯರನ್ನು ಸಮಾಧಾನಿಸದು". 'ಟ್ರಿಬ್ಯೂನ್'—"ಕಳೆದ ತಿಂಗಳಲ್ಲಿ ಜನತೆಯು ತೋರಿಸಿದ ಅವಿಶ್ವಾಸವು ಈ ಶ್ವೇತ ಪತ್ರದ ಪ್ರಕಟಣೆಯಿಂದ ಹೊರಬಿತ್ತು". ಲಂಡನಿನ 'ಡೈಲಿ ಹೆರಾಲ್ಡ್'—"ಶ್ವೇತ ಪತ್ರವು ಫಲದಾಯಕವಲ್ಲ. ಅದರಲ್ಲಿ ಇನ್ನೂ ಹೆಚ್ಚಿನ ತಿದ್ದುಪಡಿಗಳಾಗಬೇಕಾಗಿವೆ" 'ಡೈಲಿ ಮೈಲ್'—"ಶ್ವೇತ ಪತ್ರವು ಅಪಾಯಕರ ಪ್ರಯೋಗ." "ನ್ಯೂಸ್ ಕ್ರೊನಿಕಲ್"—"ಭದ್ರತೆಗಳ ಬಿಗಿತದಿಂದ ಸ್ವತಂತ್ರ ಸರಕಾರ ದಾನವು ಬಿದ್ದಿದೆ. ವೈಸರಾಯರ ಅಧಿಕಾರವು ಮೇರೆ ಮೀರಿದೆ". 'ದಿ ಸ್ಟಾರ್'—"ಶ್ವೇತ ಪತ್ರವು ಹಿಂದೀಯ ಲಿಬರಲರಿಗಾದೀತು". ಕರ್ನಾಟಕ ಪತ್ರಿಕೆಗಳ ಅಭಿಪ್ರಾಯಗಳು ಹೀಗಿರುತ್ತವೆ. 'ಕಂಠೀರವ'—"ಅಂತೂ ಇಂತೂ ಬಿಳೀ ಕಾಗದವೊಂದು ಕಪ್ಪಾಗಿ ಹೊರಗೆ ಬಂತು. ಪೀಠಿಕಾ ಸಂಧಿ ಎಂಬ ಪ್ರಥಮ ಭಾಗವೂ, ಸರಕಾರದ ಸೂಚನೆಗಳೆಂಬ ಎರಡನೆಯ ಭಾಗವೂ ಅಲ್ಲದೆ ಇವೆರಡರೊಡನೆ ಹಲವು ಹದಿನೆಂಟು ಅನುಬಂಧಗಳೂ ಸೇರಿ ದೊಡ್ಡದೊಂದು ಮಹಾಭಾರತವೇ ನಮಗೀಗ ಸಿಕ್ಕಿದ ಹಾಗಾಯಿತು. ನೋಡಿದರೆ ಇದರಲ್ಲಿ ತಿರುಳೇನೋ ಉಂಟು. ಆದರೆ ನಮಗಲ್ಲ, ಅವರಿಗೆ". 'ರಾಷ್ಟ್ರಬಂಧು'—"ಶ್ವೇತ ಪತ್ರದ ಹೆಸರೇನೋ 'ಬಿಳಿ' ಎಂಬ ಶುಭಕರವೆಂಬ ಅರ್ಥವನ್ನು ಕೊಡುತ್ತಿದ್ದರೂ ಅದರ ಒಳಗಿರುವುದು ಅಶುಭಾಕ್ಷರಗಳು." 'ನವಜೀವನ'—"ಈ ಬಿಳಿಯ ಕಾಗದದಿಂದ ಹಿಂದೂಸ್ಥಾನದ ರಾಜಕೀಯ ಅತೃಪ್ತಿಯು ಭೀಕರವಾಗಿ ಹೆಚ್ಚುವಂತಿದೆ" ಇನ್ನೂ ಅನೇಕಾನೇಕರು ಈ ಶ್ವೇತಪತ್ರದ ನಿಷ್ಪ್ರಯೋಜಕತೆಯ ಕುರಿತಾಗಿ ಅಭಿಪ್ರಾಯಗಳನ್ನು ಸೂಚಿಸಿರುವರು. ಲಂಡನಿನಲ್ಲಿ ಮಿ| ಜಿನ್ನಾರವರು "ಇದು ಉಕ್ಕಿನ ಕವಚದಂತಿದೆ" ಎಂದಿದ್ದಾರೆ. ರೆ| ಸಿ. ಎಫ್. ಎಂಡ್ರೂಸರು "ಮೊದಲು ರಾಜಕೀಯ ಕೈದಿಗಳ ಬಿಡುಗಡೆಯಾಗಲಿ, ಅಸಂತೃಪ್ತಿಕರವಾದ ಶ್ವೇತಪತ್ರವನ್ನು ಕಾಂಗ್ರೆಸ್ಸಿನವರು ಪರಾಮರ್ಶಿಸಿಕೊಳ್ಳಲಿ" ಎಂದಿದ್ದಾರೆ. ಫೆನ್ನರ್ ಬ್ರೋಕ್‌ವೇಯವರು "ಶ್ವೇತಪತ್ರವು ಎಲ್ಲರ ನಿರೀಕ್ಷೆಗಿಂತಲೂ ಕೆಟ್ಟದಾಗಿಬಿಟ್ಟಿದೆ" ಎಂದರು. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಈ ರೀತಿಯ ರಾಜ್ಯಾಂಗ ದಾನದಿಂದ ಯಾರೂ ಸಮಾಧಾನಗೊಂಡಿಲ್ಲವೆಂದು ಮುಗ್ಧಕಂಠದಿಂದ ಅನ್ನಬಹುದು. ಇನ್ನು ಬೇಗನೆ ಕೆಲವು ಹಿಂದೀಯ ಸದಸ್ಯರುಗಳನ್ನು ಲಂಡನಿನಲ್ಲಿ ಜರಗುವ ಜೋಯಿಂಟ್ ಸಿಲೆಕ್ಟ್ ಕಮಿಟಿಗೆ ಕರೆದು "ನೀವು ಶ್ವೇತಪತ್ರವನ್ನು ಸ್ವೀಕರಿಸುವಿರೋ ಇಲ್ಲವೋ?" ಎಂದು ಕೇಳಲಿರುವರು. ಕೆಲ ಉತ್ಸಾಹೀ ಬಂಟರು ಅದನ್ನು ಸ್ವೀಕರಿಸುವರು. ಕೆಲವರು ತಿರಸ್ಕರಿಸುವರು. ಅಂತೂ, ರಾಜ್ಯಾಂಗರಚನೆಯ ಕಾರ್ಯವು ಮತ್ತೂ ತ್ರಿಶಂಕುಸ್ವರ್ಗದಲ್ಲೇ ನಿಲ್ಲುವುದು. ಈ ಸಲದ ರಾಜ್ಯಾಂಗದಾನದಲ್ಲಿ ಚರ್ಚಿಲ್ಲರು ಗದ್ದಿರುವರೆಂದು ಪ್ರತಿಯೊಬ್ಬನ ಮತವಿರುತ್ತದೆ. ಹಿಂದೂ ದೇಶಕ್ಕೆ ಯಾವ ರೀತಿಯ ರಾಜ್ಯದಾನವನ್ನಾದರೂ ಕೊಡಬಾರದೆಂದೂ, ಹಿಂದೀಯರು ಸ್ವರಾಜ್ಯಾಡಳಿತೆಯನ್ನು ಮಾಡಲು ಎಂದಿಗೂ ಅರ್ಹರೂ ಸಮರ್ಥರೂ ಅಲ್ಲವೆಂದೇ ಚರ್ಚಿಲ್ಲರು ಮತ್ತು ಅವರ ಪಕ್ಷದ ಟೋರಿಗಳ ಮತವಿದೆ. ಶ್ವೇತಪತ್ರದ ನಿಜವಾದ ಬಣ್ಣವನ್ನು ನುಂಗಿ ನೀರು ಕುಡಿದು ಕೃತಕೃತ್ಯರಾದುದು ಚರ್ಚಿಲ್ಲ ದೊರೆಯವರೇ ಎಂದು ಪ್ರತಿಯೊಂದು ಪತ್ರಿಕೆಯು ಅಂದೋಲಿಸಿದೆ. ಮುಂದೇನೋ!

ಕಲ್ಕತ್ತದಲ್ಲಿ ಜರಗಬೇಕೆಂದಿರುವ ಅಖಿಲಭಾರತ ಕಾಂಗ್ರೆಸ್ ಮಹಾಸಭೆಯ ಸ್ವಾಗತ ಕಮಿಟಿಯನ್ನು ಸರಕಾರವು ನಿಷೇಧಿಸಿರುತ್ತದೆ. ಆದರೂ ಮಾಲವೀಯರ ಅಧ್ಯಕ್ಷತೆಯಲ್ಲಿ ಈ ಮಹಾಸಭೆಯು ಅಲ್ಲಿ ಸೇರುವುದೆಂದು ಪ್ರಕಟವಾಗಿದೆ.

# ಮದ್ರಾಸು ಕೌನ್ಸಿಲು ಸಭೆಯಲ್ಲಿ ರಿವಾಲ್ವರು!

ಮದ್ರಾಸಿನ ಕೌನ್ಸಿಲಿನಲ್ಲಿ ಗವರ್ನರರ ಸಿಂಹಾಸನದ ಹಿಂಗಡೆ, ಪರದೆಯೊಳಗೆ ಒಂದು ರಿವಾಲ್ವರು ಕಾಣ ಸಿಕ್ಕಿದೆ. ಅದರಲ್ಲಿ ೬ ಗುಂಡುಗಳಿದ್ದುವು ಮೂರು ಗುಂಡುಗಳು ಸುಟ್ಟು ಹೋದ್ದುವು ಮೂರು ಉಳಿದಿದ್ದುವು! ತನಿಖೆಯು ನಡೆಯುತ್ತಲಿದೆ. ಕೌನ್ಸಿಲ್ ಸಭೆಯು ಒಮ್ಮೆ ಸ್ತಂಭೀಭೂತವಾಯಿತು ವಿಚಾರಿಸದೆ ಹೊರಗಿನವರನ್ನು ಇನ್ನು ಒಳಗೆ ಬರಬಿಡಬಾರದೆಂದು ಆಜ್ಞೆಯಾಗಿದೆ.

## ಹುಲ್ಲಿನಿಂದ ಬೈಹುಲ್ಲು ತಯಾರಿಸಬಹುದು

ಕೃಷಿಯಾಗದಿದ್ದರೆ ಬೈಹುಲ್ಲು ಸಿಗುವುದಿಲ್ಲವೆಂಬ ಮಾತು ಸತ್ಯವಾದರೂ ಆ ಸತ್ಯತೆಯನ್ನು ನಿಷ್ಫಲವನ್ನಾಗಿ ಮಾಡುವ ಶೋಧೆಯೊಂದು ಫಿನ್‌ಲೇಂಡಿನಲ್ಲಿ ಮಾಡಲ್ಪಟ್ಟಿದೆ ಕೃಷಿಯಾಗಲೀ, ಆಗದಿರಲಿ—ಬೈಹುಲ್ಲು ಸಿಗುತ್ತದೆ. ಮೈದಾನಿನ ಹುಲ್ಲು ರಾಶಿಯನ್ನು ಹಾಕಿ ಅದರ ಮೇಲೆ ಒಂದು ಕೆಮಿಕಲ್ ದ್ರಾವಕವನ್ನು ಚಿಮುಕಿಸಿದರೆ ಸರಿ—ಅರ್ಧ ತಾಸಿನೊಳಗೆ ಹುಲ್ಲು ಹೋಗಿ ಬೈಹುಲ್ಲಾಗುತ್ತದೆ ಈ ವಿಧಾನದಿಂದ ಬೈಹುಲ್ಲು ತಯಾರಿಸಿದರೆ ದನಕರುಗಳಿಗೆ ಹಾನಿಯಿದೆಯೆಂದು ಕೆಲವರು ಅಭಿಪ್ರಾಯವನ್ನು ಕಟ್ಟನೆ ಕೊಡಬಹುದಾದರೂ, ಈ ಶೋಧಕರು ಹೇಳುವಂತೆ, ಅಂತಹ ಯಾವ ಹಾನಿಯೂ ದನಕರಗಳಿಗೆ ಆಗುವುದಿಲ್ಲವೆಂದೂ ಅದರ ಬದಲಿಗೆ ದನಕರುಗಳೂ, ಕುದುರೆ ಕತ್ತೆಗಳೂ ಆ ಬೈಹುಲ್ಲಿನಿಂದ ಪುಷ್ಟಿಯಾಗುತ್ತವೆಯೆಂದೂ ತಿಳಿದುಬಂದಿದೆ ಈ ದ್ರಾವಕವನ್ನು "Hydrochloric acid"ನಿಂದ ತಯಾರಿಸುವರು.

## ಉತ್ತರಧ್ರುವವು ಮನುಷ್ಯ ವಾಸಕ್ಕೆ ಯೋಗ್ಯವೇ?

ಉತ್ತರಧ್ರುವವೆಂದರೆ ಮಂಜು ಹಿಮ, ಚಳಿಗಳಿಂದ ತುಂಬಿದ ಶೀತಲ ಪ್ರದೇಶವೆಂದೇ ನಮ್ಮ ನಂಬಿಕೆ ಅಲ್ಲಿ ಎಸ್ಕಿಮೋ ಜನರು ಮಾತ್ರ ವಾಸಿಸುತ್ತಿರುವರೆಂದೂ ಇನ್ನಿತರರಿಗೆ ಅಂದರೆ ನವ ನಾಗರೀಕರಾದವರಿಗೆ ಅಲ್ಲಿ ವಾಸಿಸಲು ಅಸಾಧ್ಯವೆಂದೂ ಜನರ ಹೇಳಿಕೆ ಎಸ್ಕಿಮೋ ಜನರೆಂದರೆ ಶೀತವನ್ನು ಸಹಿಸಲು ಸಾಧ್ಯವಾದ ವಿಚಿತ್ರ ಪ್ರಾಣಿಗಳೆಂದೇ ತಿಳಿಯಲಾಗಿದೆ ಆದರೆ ಎಸ್ ಎ ಎಲ್ ಫ್ಲೆಮಿಂಗ್ ಎಂಬವರು ಕಂಡು ಹಿಡಿದಿರುವಂತೆ ಈಗ ಉತ್ತರ ಧ್ರುವವೂ ಕೂಡಾ ನಾಗರೀಕತೆಯಲ್ಲಿ ಮುನ್ನಡೆದ ಒಂದು ಪ್ರಪಂಚಾಂಶವೆಂದೂ, ಅಲ್ಲಿ ಇನ್ನಿತರರು ಭಾವಿಸುವಷ್ಟರ ಅನಾಗರೀಕತೆಯು ಉಳಿದಿರುವುದಿಲ್ಲವೆಂದೂ, ಅಲ್ಲಿಯ ಜನರು ಆಧುನಿಕ ಸಂಸ್ಕೃತಿಯಲ್ಲಿ ಸುಸಂಸ್ಕೃತರಾಗಿದ್ದು ನವಯುಗದ ಧರ್ಮದಲ್ಲಿ ಹೆಜ್ಜೆ ಇಡುತ್ತಿರುವರೆಂದೂ ಪ್ರಕಟಿಸಿದ್ದಾರೆ ಕೆನಡಾ ಮಾರ್ಗವಾಗಿ ಅಕ್ಲಾವಿಕ್ ಹಂತಕ್ಕೆ ವಿಮಾನ ಮೂಲಕ ಹೋದರೆ ಉತ್ತರಧ್ರುವ ಸಮುದ್ರ (Arctic Ocean)ವು ಮಬ್ಬು ಮಬ್ಬಾದ ಮುಸ್ಸಂಜೆಯಂತಹ ಸಂಧಿ ಪ್ರಕಾಶದಿಂದ ಆವರಿಸಿಕೊಂಡಿರುವುದು ಕಾಣುವುದು ಅಲ್ಲಿ ಸೂರ್ಯನು ಮಾತ್ರ ಕಾಣುವುದಿಲ್ಲ ಶೀತೋಷ್ಣಮಾಪಕವು (Thermometer) ಸೊನ್ನೆಯ ಕೆಳಗೆ ನಿಲ್ಲುವುದು ಈ ಮಾರ್ಪಾಟುಗಳು ಚಳಿಗಾಲದಲ್ಲಿ ಮಾತ್ರ ಇರುತ್ತವೆ ಜೂನ್ ಜುಲಾಯಿ ತಿಂಗಳಲ್ಲಿ ಮಾತ್ರ ಅಲ್ಲಿ ಇಳಿದರೆ ಶೀತೋಷ್ಣಮಾಪಕವು ೮೦ರಿಂದ ೯೦ ಡಿಗ್ರಿಯಲ್ಲಿ ನಿಲ್ಲುತ್ತದೆ ಅಂದರೆ ಅಷ್ಟು ಉಷ್ಣವು ಅಲ್ಲಿರುತ್ತದೆ ನಮಗೆ ಮಾತ್ರ ಈ ತಿಂಗಳುಗಳಲ್ಲಿ ವಿಪರೀತ ಮಳೆಗಾಲ ಈ ಉತ್ತರಧ್ರುವದಲ್ಲಿ ಪ್ರಾಣಿಗಳು ವಾಸಿಸುವುದಿಲ್ಲವೆಂಬುದಕ್ಕೆ ಆಧಾರವಿಲ್ಲವೆಂದು ಫ್ಲೆಮಿಂಗರವರು ಹೇಳುತ್ತಾರೆ ವಿಮಾನದಲ್ಲಿ ಸಂಚರಿಸುತ್ತಾ ಹೋದರೆ ಅನೇಕ ಕಡೆಗಳಲ್ಲಿ ಜಂತುಗಳೂ ಪಕ್ಷಿಗಳೂ ವಾಸಿಸುವ ವಿಶಾಲ ಪ್ರಾಂತ್ಯವು ಗೋಚರಿಸುತ್ತದೆ ಶೀತವಲಯದಲ್ಲಿ ಮೀನುಗಳಿಲ್ಲವೆಂಬುದೂ ಅಸಂಗತ ಕೆಲವು ಸರೋವರಗಳು ಮೀನಿನ ರಾಶಿಯಿಂದ ತುಂಬಿಕೊಂಡಿವೆ ಅಲ್ಲಿ ಬೇಸಾಯವೂ ಬಹಳ ಸೊಬಗಾಗಿ ಸೊಗಸಾಗಿ ಆಗುತ್ತದೆ ಬಟಾಟೆ, ಗೋಧಿ, ನೀರುಳ್ಳಿ ಮೊದಲಾದ ಹಲವು ಬಗೆಯ ದವಸಧಾನ್ಯಗಳೂ ಅಲ್ಲಿ ಹುಲುಸಾಗಿ ಬೆಳೆಯುತ್ತವೆ. ಅಲ್ಲಿಯ ಕೃಷಿಯು ಬಹಳ ಶೀಘ್ರವಾಗಿಯೇ ಬೆಳೆಯುತ್ತದೆ ಕಾರಣವೇನೆಂದರೆ—ಅಲ್ಲಿ ಹಗಲೂ ರಾತ್ರಿಯೂ ಸೂರ್ಯನು ಪ್ರಕಾಶಿಸುತ್ತಲೇ ಇರುವನು. ಉತ್ತರಧ್ರುವದಲ್ಲಿ ಸೂರ್ಯನು ಮುಳುಗುವುದೇ ಇಲ್ಲ. ಉತ್ತರಕ್ಕೆ ಪ್ರವಾಸ ಬೆಳೆಸಿದಷ್ಟು, ಸೂರ್ಯನ ಉಜ್ವಲ ಪ್ರಕಾಶವು ಗೋಚರಿಸುತ್ತದೆ, ನಮ್ಮ "ಮಧ್ಯ ರಾತ್ರಿ"ಯ ಸಮಯದಲ್ಲೂ ಅಲ್ಲಿ ಸೂರ್ಯನು ಕಿಟಕಿಯೊಳಗೆ ಕಿರಣಗಳನ್ನು ಹರಡಿಸುವನು. ನಮ್ಮ ರಾತ್ರೆ ೧ ಘಂಟೆಗೆ ನಾವು ಮಲಗುವುದಾದರೆ, ಸೂರ್ಯನು ಅರ್ಧಕ್ಕೆ ಮೂಡಿ ದಿಗಂತದ ಮೇಲೆ ಬರುವನು. ಮಧ್ಯ ರಾತ್ರಿಗೂ ಬೆಳಕು ಇಲ್ಲದೇನೆ, ಸೂರ್ಯಪ್ರಕಾಶದಿಂದ ಪುಸ್ತಕಗಳನ್ನು ಓದಲಾಗುತ್ತದೆ. ಉತ್ತರಧ್ರುವದ ಜನರು ಈಗ ಅಲ್ಲಿ ದೊಡ್ಡದಾದ ಆಸ್ಪತ್ರೆಯನ್ನೂ, ವಿದ್ಯುದ್ದೀಪ ಯೋಜನೆಯನ್ನೂ, ಎಕ್ಸ್‌ರೇ ವಿಜ್ಞಾನವನ್ನೂ ಸ್ಥಾಪಿಸಿಕೊಂಡು ಆಧುನಿಕರೆಂದೆನಿಸುವ ನಮ್ಮಂತೆಯೇ ಬದುಕುತ್ತಿರುವರು.

## ಮೊನ್ನಿನ ಭೂಕಂಪದ ಮುಂದಿನ ವಾರ್ತೆ.

ಕೆಲಿಫೋರ್ನಿಯಾ, ಸಂತಾಬಾರ್ಬರಾ, ಲೋಸ್‌ಏಂಜಲ್ಸ್, ಲೋಂಗ್ ಬೀಚ್ ಮೊದಲಾದ ಪಟ್ಟಣಗಳಲ್ಲಾದ ಭೂಕಂಪದ ಸವಿವರ ವಾರ್ತೆಯು ಮೆಲ್ಲನೆ ಬರುತ್ತಿದೆ. ಮೊನ್ನೆ ಬಂದ ವಾರ್ತೆಯು ಹೀಗಿದೆ ೫ ಘಂಟೆ ಸಂಜೆಯಿಂದ ರಾತ್ರಿ ೯ರ ವರೆಗೆ ನಡೆದ ೨೪ ಭೂಕಂಪನಗಳಿಂದಾಗಿ ಕೆಲಿಫೋರ್ನಿಯದಲ್ಲಿ ಒಟ್ಟು ೧೩೯ ಜನರು ಮಡಿದರು. ೪೦೦೦ಕ್ಕಿಂತಲೂ ಹೆಚ್ಚಿನವರು ಜಖಂಗೊಂಡರು. ಲೋಂಗ್ ಬೀಚ್ ಎಂಬ ಒಂದು ಪ್ರಾಂತ್ಯವೊಂದರಲ್ಲಿಯೇ ೫೫ ಮಿಲಿಯ ಡೊಲ್ಲರುಗಳ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ. ಲೋಂಗ್ ಬೀಚಿನಲ್ಲಿ ಮಾರ್ಷಲ್ ಲೋ ಜ್ಯಾರಿಯಾಗಿದೆ. ಕುಸಿದು ಬಿದ್ದ ತಮ್ಮ ಮನೆಗಳ ಮೇಲೆ ರಾತ್ರಿಯ ಚಳಿಯನ್ನೂ, ಹಗಲಿನ ಬಿಸಿಲನ್ನೂ ಜನರ ಅನುಭವಿಸುತ್ತಿರುವರು ೧೨,೦೦೦ ನಾವಿಕರು ಇಡೀ ಪಟ್ಟಣವನ್ನು ಕಾವಲು ನೋಡುತ್ತಿರುವರು ಲೋಸ್ ಏಂಜಲ್ಸ್ ಆಸ್ಪತ್ರೆಗೆ ಇಷ್ಟರ ತನಕ ೬೦೦೦ ಮಂದಿ ಜಖಂಗೊಂಡವರನ್ನು ಕೊಂಡೊಯ್ದಿರುವರು ಲೋಂಗ್ ಬೀಚ್ ಬಳಿಯಿರುವ ದ್ವೀಪಗಳಲ್ಲಿ ವಾಸಿಸುತ್ತಿದ್ದ ಜಪಾನಿಯರು ಬೇಗನೇ ಮಹಾನೆರೆಯು ಬರಲಿರುವುದೆಂಬ ಸುದ್ದಿಯನ್ನು ಕೇಳಿ, ಗಂಟುಮೂಟೆಯನ್ನು ಹಿಡಿದುಕೊಂಡು ಪರದೇಶಗಳಿಗೆ ನಡೆಯುತ್ತಿರುವರು. ಲೋಸ್ ಏಂಜಲ್ಸಿನಲ್ಲಿ ಪೆಟ್ರೋಲ್ ಕಂಪೆನಿಗಳಲ್ಲಿ ಬೆಂಕಿಯೆದ್ದು ಪಟ್ಟಣ ನಾಶವಾಯಿತೆಂದು ವಾರ್ತೆಯಿದೆ ಕನ್ಸಾಸ್ ಪಟ್ಟಣದಿಂದ ವಿಮಾನ ಮುಖೇನ ಬಂದ ವೈಮಾನಿಕನು ತಿಳುಹಿಸುವಂತೆ ಲೋಸ್ ಏಂಜಲ್ಸ್‌ನಲ್ಲಿ ಅಗ್ನಿ ಇಲ್ಲದ ಸ್ಥಳವಿಲ್ಲವಂತೆ. ಲೋಂಗ್ ಬೀಚ್‌ನಲ್ಲಿ ಹೆಣಗಳ ರಾಶಿಯು ಬಿದ್ದಿರುವುದನ್ನು ಕಂಡನಂತೆ ಪೆಟ್ರೋಲು ಕಂಪೆನಿಗಳು ಬೆಂಕಿಯಿಂದ ಪಾರಾದುದೇ ಕಡಿಮೆಯೆಂದು ಅವನ ಹೇಳಿಕೆ ಹೊಲಿವುಡ್ ಚಲಚಿತ್ರ ಕಂಪೆನಿಯ ಕೆಲಸಗಾರರಲ್ಲಿಯೂ ಕೆಲವರು ಜಖಂಗೊಂಡಿರುವರು. ಕಟ್ಟಡಕ್ಕೆ ಅಪಾಯವುಂಟಾಗಿರುವುದಿಲ್ಲ ದಕ್ಷಿಣ ಕೆಲಿಫೋರ್ನಿಯಾದಲ್ಲಿನ ೨೯ ಪಟ್ಟಣಗಳಲ್ಲಿ ೩೦ರಿಂದ ೪೦ ಮಿಲಿಯ ಡೊಲ್ಲರು ನಷ್ಟವಾದೀತೆಂದು ಅಂದಾಜು ಮಾಡಲಾಗಿದೆ ಕಂಪನವಾದ ದಿನ ಮೊದಲುಗೊಂಡು ೩,೫೦೦ರು ಜನರು ಒಂದೆರಡು ದಿನಗಳ ತನಕ ನಿದ್ರಿಸಿರುವುದಿಲ್ಲ ಕೆಲವರು ಜ್ವರಪೀಡಿತರಾಗಿಯೂ ಕೆಲವರು ಭಯದಿಂದಲೂ ಮತ್ತೆ ಕೆಲವರು ಹೃದ್ರೋಗದಿಂದಲೂ ಮೃತಪಟ್ಟರು ಮಾಜಿ ಅಧ್ಯಕ್ಷರಾದ ಹೂವರರ ಪತ್ನಿಯವರು ಲೋಸ್ ಏಂಜಲ್ಸಿನಲ್ಲಿದ್ದು ಅವರೆಲ್ಲಿರುವರೆಂದು ಕಂಡು ಹಿಡಿಯಲಾಗಲಿಲ್ಲ ಹೂವರರು ಪತ್ತೆ ನಡೆಸುತ್ತಿರುವರು ಅಮೇರಿಕಾ ಸರಕಾರವು ಬಹಳ ಸಹಾಯವನ್ನೊದಗಿಸಿ ಕೊಡುತ್ತಿದೆ.

### ಹಿಂದೀಯ ಕುರಿತು ನಮ್ಮ ನಗರ ಸಭಾಧ್ಯಕ್ಷರ ಅಭಿಪ್ರಾಯ

ಹಿಂದೀ ಭಾಷೆಯು ಸಾರ್ವದೇಶಿಕ ಭಾಷೆಗಿಂತ ಹೆಚ್ಚಿನದು ಇದು ಸ್ವರೂಪ ಭೇದದಿಂದ ಭಾರತದ ಬಹು ಸಂಖ್ಯಾತರು ಮಾತಾಡುವ ರಾಷ್ಟ್ರ ಭಾಷೆ ಇದು ಹಿಂದುಸ್ತಾನದ ಅಧಿಕ ಅಲ್ಪ ಸಂಖ್ಯಾತರ ಮಾತೃಭಾಷೆ ಇಷ್ಟೇ ಅಲ್ಲ, ಹಿಂದಿಯು ಭಾರತದ ರಾಷ್ಟ್ರೀಯ ಸೈನ್ಯದ ವಿಚಾರವಿನಿಮಯದ ಸಾಧನ ಸಾಮಗ್ರಿಯು ಹಿಂದಿಯು ಮಾನವ ಸಮಾಜದ ವಿಶಾಲ ಪ್ರದೇಶವಾದ ಪೂರ್ವ ಆಸ್ಯಾಖಂಡದ ಧಾರ್ಮಿಕ ಭಾಷೆ—ಪ್ರಾಕೃತಕ್ಕೆ ನಿಕಟ ಸಂಬಂಧಪಟ್ಟುದು ದಕ್ಷಿಣೋತ್ತರದ ಸಾಮೀಪ್ಯ, ಹಿಂದೂ ಮುಸಲ್ಮಾನರ ಐಕ್ಯಕ್ಕೆ ಹಿಂದಿಯು ಸಾಧನ ಸೂತ್ರವು ಹಿಂದೂ ಭಕ್ತನೂ ಮಹಮ್ಮದೀಯ ಫಕೀರನೂ, ಬೌದ್ಧ ಭಿಕ್ಷುವೂ, ಕೂಡಿಯಾಡುವ ಕ್ಷೇತ್ರವು ಹಿಂದಿಯಾಗಿದೆ ಇದೇ ಹಿಂದೂಸ್ಥಾನದ ವಿಭಿನ್ನ ಮತಗಳ ಸಂಪ್ರದಾಯಗಳ ಏಕಭಾಷೆಯಾಗಬಲ್ಲುದು—ಪ್ರತಿಯೊಬ್ಬ ಶಾಲಾ ವಿದ್ಯಾರ್ಥಿಯು ಹಿಂದಿಯಲ್ಲಿ ಭಾಷಣ ಮತ್ತು ಲೇಖನದ ಸಾಮಾನ್ಯ ಜ್ಞಾನವನ್ನು ಸಂಪಾದಿಸಿ ಸುಯೋಗ್ಯನಾಗಿ ಹೊರಡಲು ಪ್ರಯತ್ನಿಸುವುದು ಪ್ರತಿಯೊಂದು ಭಾರತೀಯ ಶಿಕ್ಷಣ ಸಂಸ್ಥೆಯ ಕರ್ತವ್ಯ ಕರ್ಮವು. ಹಿಂದೀ ಜ್ಞಾನವು ಉದ್ಯೋಗಾರ್ಥಿಗೆ ಸಹಾಯಕವಾಗುವುದು ಅದು ಆತನ ಬುದ್ಧಿ ವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದು ಮತ್ತು ಆತನನ್ನು ಮಾತೃಭೂಮಿಯ ಸೇವೆಗೆ ಅತ್ಯಂತ ಅರ್ಹನಾಗಿ ಮಾಡುವುದು

ಡಾಕ್ಟರ್ ವಿಠ್ಠಲ್ ಶೆಟ್ಟಿ,
ನಗರ ಸಭಾಧ್ಯಕ್ಷ, ಮಂಗಳೂರು

ಶ್ರೀಯುತರ ಅಭಿಪ್ರಾಯವು ಮನನೀಯವಿದೆ, ಅದಷ್ಟು ಶೀಘ್ರವಾಗಿ ಹಿಂದೀಯು ರಾಷ್ಟ್ರಭಾಷೆಯಾಗಲೆಂದು ಹಾರೈಸುವೆವು. (ಸಂ ಸ್ವ)

## ಪ್ರಪಂಚಕ್ಕೆ ಸತ್ವಶಾಲಿಗಳು ಅತ್ಯಗತ್ಯ

ಮಾರ್ಗರೆಟ್ ಲೇಡಿ ಒಕ್ಸ್‌ಫರ್ಡ್ ಎಂಬವರು ಜಗತ್ತಿಗೆ ಈ ಕಾಲದಲ್ಲಿ ಅತ್ಯಗತ್ಯವಾಗಿರಬೇಕಾದ ಮಾನವ ಕುಟುಂಬದ ಆವಶ್ಯಕತೆಯನ್ನು ವಿವರಿಸಿ ಒಂದು ಲೇಖನವನ್ನು ಬರೆದಿದ್ದಾರೆ ಅವರ ಅಭಿಪ್ರಾಯದಂತೆ ಜೀವನವನ್ನು ಯಶಸ್ವಿಯಾಗಿಯೂ ಜಯಪ್ರದವನ್ನಾಗಿಯೂ ಮಾಡಲಿಕ್ಕೆ ನಮ್ಮಲ್ಲಿ ಧೈರ್ಯೋತ್ಸಾಹ, ವಿಶ್ವಾಸ ಮತ್ತು ನಿರ್ಲಿಪ್ತತೆಗಳು ಅಗತ್ಯ ಈಗಿನ ಮಾನವ ಕುಟುಂಬಕ್ಕೆ ಬೇಕಾದುದು ಈ ಆರೋಗ್ಯೈಶ್ವರ್ಯಗಳು—ಧನವಲ್ಲ ಆಶೆಯೂ ನಿರ್ಲಿಪ್ತತೆಯೂ ಅನ್ಯೋನ್ಯವಾಗಿರಲಾರವೆಂದು ಕೆಲವರೆನ್ನಬಹುದು. ಆದರೆ ಅವು ಅವರವರ ಉದ್ಯೋಗತತ್ಪರತೆಯನ್ನು ಹೊಂದಿಕೊಂಡಿವೆ. ಧನಾರ್ಜನೆಯ ಜೀವನವು ಆದರ್ಶಪ್ರಾಯವಾದುದಲ್ಲ. ಸಂಪದಾರ್ಜನೆಯಲ್ಲಿ ಮನವಿಕ್ಕಿದ ವ್ಯಕ್ತಿಯು ತನ್ನ ಎಲ್ಲಾ ಪ್ರಗತಿಮಾರ್ಗವನ್ನು ಮರೆತು ಅದರಲ್ಲೇ, ಕಂಭಕ್ಕೆ ಕಟ್ಟಿದ ಹಸುವಿನಂತೆ ಮನವಿಕ್ಕಬೇಕಾಗುತ್ತದೆ. ದ್ರವ್ಯಾರ್ಜನೆಯ ಧ್ಯೇಯದಿಂದಾಗಿ ವಿರಾಮ, ರಜೆ ದಿನಗಳ ಮೇಲಿನ ನೆನಪು ಮರೆತು ಹೋಗುತ್ತದೆ. ಮನುಷ್ಯನು ಏಕದೃಷ್ಟಿಯ ಸಂಕುಚಿತ ಮನೋಭಾವದ ಪ್ರಾಣಿಯಾಗಿ ಪರಿಣಮಿಸುತ್ತಾನೆ ವಿರಾಮದ ಉಪಯೋಗವನ್ನು ಹೇಗೆ ಮಾಡಬೇಕು? ಅದನ್ನು ತನ್ನ ಆತ್ಮಿಕ, ಆಧ್ಯಾತ್ಮಿಕ ಆದರ್ಶಗಳ ಚಿಂತನೆಯ ಬಗ್ಗೆ ಪ್ರಯೋಗಿಸಬೇಕು. ಸತ್ವಶಾಲಿತ್ವವನ್ನು ಸಂಪಾದಿಸಲು ಅದನ್ನು ನಿರ್ಲಿಪ್ತ—ಮನಸ್ಸಿನಿಂದುಪಯೋಗಿಸಬೇಕು. ಪ್ರಪಂಚದ ವಾಣಿಜ್ಯ ವ್ಯವಹಾರವು ಇಷ್ಟು ಘನತೆಗೆ, ಇಷ್ಟು ಉನ್ನತಿಗೆ ಹೇಗೆ ಬಂದಿತು? ವಿವಿಧ ಪುರುಷರ ಚೇತನಾತ್ಮಕವಾದ ಕಲ್ಪನಾಶಕ್ತಿಯಿಂದ ಧ್ಯೇಯಸಾಧನೆಯ ಉತ್ಸಾಹದಿಂದ ನಮ್ಮ ಭೌತಿಕ ಜಯಕ್ಕಾಗಿ ನಾವು ಹೆಣಗಾಡಿ ಜಯಶಾಲಿಗಳಾದರೆ ಸಾಕಿಲ್ಲ ನೈತಿಕ, ಆಧ್ಯಾತ್ಮಿಕಗಳ ದೃಷ್ಟಿಯಿಂದಲೂ ನಾವು ಮುಂದರಿಯಬೇಕು, ಪ್ರಪಂಚದಲ್ಲಿ ಇನ್ನಿತರ ಗುಣಗಳ ಎಷ್ಟೋ ಮಿಲಿಯ ಜನರಿರಬಹುದು ಆದರೆ ಈಗ ಬೇಕಾದುದು ಇಲ್ಲದ ಸಾತ್ವಿಕ ಗುಣಸಂಪನ್ನರೆಂದು ಅವರ ಹೇಳಿಕೆ

---

(೧೩ನೇ ಪುಟದಿಂದ ಮುಂದುವರಿಸಿದುದು)

ಎಸ್ಸಾಯಿಂಡ್ ಗ್ರಾಂಟು ರೂಪಾಯಿ ೨,೫೮,೬೦೧ ಆಗಿತ್ತು. ಅದರೆ ಸರಕಾರವು ಸೆಂಕ್ಷನ್ ಮಾಡಿದ ರೂಪಾಯು ೨,೬೨,೦೬ ಆಗಿತ್ತು ಜನರಲ್ ರಾತ್ರಿ ಶಾಲೆಗಳ ಗ್ರಾಂಟು ರೂಪಾಯಿ ೧೩೫೮, ಸ್ಪೆಶಲ್ ರಾತ್ರಿ ಶಾಲೆಗಳ ಗ್ರಾಂಟು ೧೩೯೯ ಆಗಿದ್ದುವು ಆದರೆ ಸರಕಾರವು ಈ ಎಲ್ಲಾ ರಾತ್ರಿ ಶಾಲೆಗಳ ಬಗ್ಗೆ ಬರೇ ೫೨೫ ರೂಪಾಯಿ ಸೆಂಕ್ಷನ್ ಮಾಡಿತ್ತು ಆದಕಾರಣ ತಾ ೧೮—೬—೧೯೩೩ರಲ್ಲಿ ಜರಗಿದ ಕೌನ್ಸಿಲು ಮೀಟಿಂಗಿನಲ್ಲಿ ಪ್ರತಿಯೊಂದು ಹಗಲು ಶಾಲೆಗೆ ಸಿಕ್ಕತಕ್ಕ ಗ್ರಾಂಟಿನಲ್ಲಿ ಶೇಕಡಾ ೨೦ರಂತೆ ಮತ್ತು ಹುಡುಗಿ ಶಾಲೆ ಒಂದಕ್ಕೆ ೨ ರಂತೆ ಈ ರೀತಿ ಕಡಿತ ಮಾಡಿ ಹಂಚಲಾಯಿತು ರಾತ್ರಿ ಶಾಲೆಗಳ ಗ್ರಾಂಟನ್ನು ೫ ಜನರಲ್ ರಾತ್ರಿ ಶಾಲೆಗಳಿಗೆ ಮಾತ್ರ ಹಂಚಲಾಯಿತು. ಕಂಪೆನ್ಸೇಶನ್ ಗ್ರಾಂಟಿನ ಬಗ್ಗೆ ಸರಕಾರದಿಂದ ಸೆಂಕ್ಷನ್ ಆದ ರೂಪಾಯಿ ೮೫೦ನ್ನು ಸದರಿ ಗ್ರಾಂಟಿನ ಬಗ್ಗೆ ಅರ್ಜಿಗಳನ್ನು ಕಳುಹಿಸಿರುವ ಶಾಲೆಗಳಿಗೆ ಹಂಚಲಾಯಿತು

ಒಟ್ಟಾರೆ ಇಲಾಖಾ ಅಧೀಸರರ ಕಡಿತವೂ ಈಗ ಕೌನ್ಸಿಲಿನ ಕಡಿತವೂ ಕೂಡಿ ಅನೇಕ ಯೋಗ್ಯ ಶಾಲೆಗಳಿಗೆ ಕಳೆದ ವರುಷಕ್ಕಿಂತಲೂ ಈ ವರುಷ ಜಾಸ್ತಿಯಾಗಿ ಶೇಕಡಾ ೩೦ಕ್ಕಿಂತಲೂ ಮಿಕ್ಕಿದ ಕಡಿತವಾಗಿದೆ ಎನ್ನಬಹುದು ಸರಕಾರವು ಈ ವರುಷ ತನ್ನ ಬೊಕ್ಕಸದಲ್ಲಿ ಹೆಚ್ಚಿನ ಹಣ ಉಳಿತಾಯ ಇದೆ ಎಂಬ ಆನಂದದಿಂದ ಇತರ ಹಲವು ರಿಟ್ರೆಂಚ್‌ಮೆಂಟನ್ನೂ ಕೂಡಿಸಿ ಕೊಡುವಷ್ಟು ಉದಾರತೆಯುಳ್ಳದ್ದೂ ಬಡ ಖಾಸಗಿ ಶಾಲೆಗಳ ಗ್ರಾಂಟನ್ನು ಹಲವು ವಿಧದಲ್ಲಿ ವರುಷ ವರುಷಕ್ಕೆ ಅತ್ಯಧಿಕವಾಗಿ ಕಡಿತ ಮಾಡುತ್ತಿರುವುದರಿಂದ, ಖಾಸಗಿ ಶಾಲೆಗಳು ನೆಲಸಮವಾಗುವುದಕ್ಕೆ ಹೆಚ್ಚಿನ ಸಮಯ ಇರಲಾರದು

ಕುದುಕಾಲು ಗಣಪಯ್ಯ ಸೆಟ್ಟಿ

---


## NOTICE.

**The Bombay Life Assurance Company Ltd., BOMBAY**

Mr Ganjimat Gopala Kamath, holder of our Policy No. 12700 having notified that he has either lost or misplaced his policy and having requested us to issue a duplicate thereof in his favour, notice is hereby given that a duplicate Policy will be issued to him by the Company, should there be no objection recorded in our Office, to our doing so within a month of the issue of this notice.

(Sd) **Jyotendra L Mehta,**
*Manager*,
The Bombay Life Assurance Co., Ltd,

---

## ನೋಟೀಸು.

**ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.**

O P. No 35/1933

ಮೃತಪಟ್ಟ ಶೇದಿ ಬ್ಯಾರಿಗಳ ಸಾಲಗಳ ವಸೂಲಿಬಾಬಿನಲ್ಲಿ ಮರಿಯಂಮ್ಮ ಕೂಡಾ 5 ಜನರು—ಅರ್ಜಿದಾರರು

ಮಂಗಳೂರು ತಾಲೂಕು ಉಳ್ಳಾಲ ಗ್ರಾಮದಲ್ಲಿ ಕಾಯಂ ವಾಸ್ತವಿಸಿದ್ದು ತಾ 16—11—1932ರಲ್ಲು ಮೃತಪಟ್ಟ ಶೇದಿ ಬ್ಯಾರಿಗಳ ಸಾಲಗಳನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳಿಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅಪೇಕ್ಷಿಸಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 25-3—1933ರಲ್ಲು ತನಿಖೆಗೆ ನಿಶ್ಚೈಸಿರುವುದೆಂತ ಈ ಮೂಲಕ ತಿಳಿಸೋಣಾಗುತ್ತದೆ. ಮತ್ತು ಸದ್ರಿ ಅರ್ಜಿಗೆ ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಣೆಯನ್ನು ಸದ್ರಿ ಕೋರ್ಟಿನಲ್ಲಿ ಜ್ಯಾಹೀರು ಮಾಡತಕ್ಕದ್ದು.

ಮಂಗಳೂರು, } **P. D'Souza,** B. A B. L.
೨೧—೩—೩೩ } **L C. Pais,** B A B L.
Vakil for Petitioners

ಶಾಲಿವಾಹನಶಕ [illegible] ಗತಶಾಲಿನೆಯ, ಅಂಗೀರಸ ಸಂವತ್ಸರದ ಫಾಲ್ಗುಣ ಬ॥ ೧೪ ಶನಿವಾರದಿಂದ ಅಂಗೀರಸ ಸಂವತ್ಸರದ ಚೈತ್ರ ಶು॥ ೫ ಶುಕ್ರವಾರದ ವರೆಗಿನ ಪಂಚಾಂಗ

(ಗಣಿತ [illegible] ಕಂಥ—ಮಾಯು).

| ತಾರೀಕು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ F. ಉ | ಅಸ್ತ |
|---|---|---|---|---|---|---|---|---|
| 25 | ಶನಿ | ೧೪ | ೪೫ | ಪೂ. ಭಾ. | ೨೪ | ೧೨ | 6.39 | 6.40 |
| 26 | ರವಿ | ೩೦ | ೫೫॥ | ಉ. ಭಾ. | ೨೭॥ | ೧೩ | 6.38 | 6.40 |
| 27 | ಸೋಮ | ೧ | ೮೫ | ರೇವತೀ | ೩೦॥ | ೧೪ | 6.38 | 6.40 |
| 28 | ಮಂಗಳ | ೨ | ೧೧॥ | ಅಶ್ವಿನೀ | ೩೭॥ | ೧೫ | 6.37 | 6.40 |
| 29 | ಬುಧ | ೩ | ೧೬॥ | ಭರಣೀ | ೪೩ | ೧೬ | 6.37 | 6.40 |
| 30 | ಗುರು | ೪ | ೨೦॥ | ಕೃತ್ತಿಕಾ | ೫೦ | ೧೭ | 6.36 | 6.41 |
| 31 | ಶುಕ್ರ | ೫ | ೨೬॥ | ರೋಹಿಣೀ | ೫೭॥ | ೧೮ | 6.35 | 6.41 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಕು | Temperature. ಉಷ್ಣ (ಕಾವು) Maximum | ಏರಿಳಿತ | Minimum | ಅಲ್ಪಾಂಶ | Rainfall. ಮಳೆ ದಿನದ ಮಳೆ | ಒಟ್ಟು ಮಳೆ. |
|---|---|---|---|---|---|---|
| 16 | 90— | 6 | 78— | 1 | — | — |
| 17 | 89— | 2 | 74— | 2 | — | — |
| 18 | 89— | 5 | 74— | 3 | — | — |
| 19 | 89— | 0 | 78— | 1 | — | — |
| 20 | 89— | 4 | 71— | 2 | — | — |
| 21 | 90— | 3 | 76 | 5 | — | — |
| 22 | 89— | 5 | 76— | 9 | — | 119-95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | ಇಂದ ರೂ. ಆ. | ವರೆಗೆ ರೂ. ಆ. |
|---|---|---|
| ಹೊಸ ಮುಸ್ತಿ | 4— 0 | 4—10 |
| ಹೊಸ ರಾಶಿ ಅಕ್ಕಿ | 3— 6 | 3—14 |
| ಮುಸ್ತಿ | 4— 0 | 4—10 |
| ಗೋಧಿ | 3 12 | 4— 2 |
| ಸುಗ್ಗಿ | 3 6 | 3—12 |
| ಊರ ಅವಲಕ್ಕಿ ಬೆಳ್ತಿಗೆ | 4—10 | 5— 4 |
| ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ | 6— 8 | 7— 0 |
| ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ | 4— 8 | 4—10 |
| ಗೋಧಿ ಗೋಣಿ ೧ಕ್ಕೆ | 10— 8 | 12— 8 |
| ತೊಗರಿ ಗೋಣಿ ೧ಕ್ಕೆ | 9— 8 | 12— 0 |
| ಹುರುಳಿ ಗೋಣಿ ೧ಕ್ಕೆ | 5— 8 | 6— 4 |
| ಕಡಲೆ ಗೋಣಿ ೧ಕ್ಕೆ | 8— 8 | 9— 8 |
| ತೊಗರಿಬೇಳೆ ಗೋಣಿ ೧ಕ್ಕೆ | 10— 8 | 20— 0 |
| ಉದ್ದು ಗೋಣಿ ೧ಕ್ಕೆ | 8— 8 | 9— 8 |
| ಹೆಸರು ಗೋಣಿ ೧ಕ್ಕೆ | 8— 0 | 9— 0 |
| ಊರುಬೆಲ್ಲ ಖಂಡಿ ೧ಕ್ಕೆ | 31— 4 | 32— 8 |
| ಉಪ್ಪು ಗೋಣಿ ೧ಕ್ಕೆ | 4—12 | 5— 4 |
| ಕೊಬ್ರಿ ಖಂಡಿ ೧ಕ್ಕೆ | 65— | 72— |
| ಕೊಬ್ರಿ ಹಿಂಡಿ ಖಂಡಿ ೧ಕ್ಕೆ | 21 — | 21— 8 |
| ಎಳ್ಳಿಂಡಿ ಖಂಡಿ ೧ಕ್ಕೆ | 26— 4 | 27— 8 |
| ಕೊಬ್ರಿ ಎಣ್ಣೆ ಮುಡಿ ೧ಕ್ಕೆ | 4— 4 | 5— 4 |
| ಎಳ್ಳೆಣ್ಣೆ ಮುಡಿ ೧ಕ್ಕೆ | 6—12 | 7— 0 |
| [illegible] ಬೆಳ್ತಿಗೆ ೧ಕ್ಕೆ | 4— 7 | 8—12 |
| [illegible] ಸಕ್ಕರೆ ಮುಡಿ ೧ಕ್ಕೆ | 3—15 | 4— 0 |
| ಹೊಸ ಮೆಣಸು | 5— 8 | 5—12 |
| [illegible] ಮುಡಿ ೧ಕ್ಕೆ | 4—12 | 5— 0 |
| [illegible] ಕಾಫಿ ಖಂಡಿ ೧ಕ್ಕೆ | 270— 0 | 300— |
| [illegible] ಖಂಡಿ ೧ಕ್ಕೆ | 170— 0 | 180— |
| [illegible] ಮುಡಿ ೧ಕ್ಕೆ | 27— 0 | 28— |
| [illegible] ಮುಡಿ ೧ಕ್ಕೆ | 2— 4 | 2— 6 |
| [illegible] ಖಂಡಿ ೧ಕ್ಕೆ | 25— 0 | 26— 8 |
| [illegible] ಮುಡಿ ೧ಕ್ಕೆ | 9 10 | 10— 0 |
| [illegible] ಮುಡಿ ೧ಕ್ಕೆ | 15— 0 | 16—0 |
| [illegible] ಸೇರು ೧ಕ್ಕೆ | 14— 4 | 13— 8 |
| [illegible] ಮುಡಿ ೧ಕ್ಕೆ | 19— 0 | 19— 4 |
| [illegible] ೧ಕ್ಕೆ | 19— | 19— 4 |
| [illegible] ಖಂಡಿ ೧ಕ್ಕೆ | 42— 8 | 46— |
| [illegible] ಕಾಫಿ ಖಂಡಿ ೧ಕ್ಕೆ | 295— | 320— |
| ಹಳೆ ಅಡಿಕೆ | 180— | 205 |
| ಹೊಸ ಅಡಿಕೆ | 140— | 145— |


# THE CANARA PUBLIC CONVEYANCE CO., LTD, MANGALORE.

(ESTABLISHED 1914)

## ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

### ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಬಯಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

**Secretary.**

*The Canara Public Conveyance Company Ltd., Mangalore*

# Chikmagalur Public Conveyance Motor Service.

## CHIKMAGALUR.

## ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹದ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

## ಪತ್ರವ್ಯವಹಾರ.

(ಲೇಖಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದ್ದು. ಸಂ. ಸ್ವ.)

### ಗೌಡ ಸಾರಸ್ವತ ಮಠಗಳೂ ಪಂಡಿತರೂ.

ಕೆಲವು ಸಮಯದ ಹಿಂದೆ ನಾನು ಕುಂದಾಪುರಕ್ಕೆ ಹೋಗಿದ್ದಾಗ, ಅಲ್ಲಿ ನಾನು ಶ್ರೀ ವೆಂಕಟರಮಣ ದೇವಸ್ಥಾನದ ಮನೇಜರರಾದ ಶ್ರೀ ಕೆ. ವಾಮನ ಶೆಣೈ ಇವರನ್ನು ಸಂದರ್ಶಿಸಿದೆನು. ನಾನು ನಿಶ್ಚಿಂತ ಅವರ ಗೋತ್ರ ಮತ್ತು ಪ್ರವರವಾವುದೆಂದು ವಿಚಾರಿಸಲು, ಅವರು ತಾನು ಗೌಡ ಸಾರಸ್ವತ ಬ್ರಾಹ್ಮಣನೆಂದೂ ತನ್ನ ಗೋತ್ರವು ಕಾಂಸ ಗೋತ್ರವೆಂದೂ ತನ್ನ ಪ್ರವರವು ಅಶ್ವಲಾಯನ ಸೂತ್ರದ ಶಂಖ ಪಿಂಗಳ ಏಕ ಋಷಿ ಎಂದೂ ಹೇಳಿದರು

ಇದೇ ರೀತಿ ಹೇಳುವ ಇನ್ನಿತರ ಕೆಲ ಗೌಡ ಸಾರಸ್ವತ ಬ್ರಾಹ್ಮಣರೂ ಇರುವರು. ನಾನು ಹಿಂದೂಮತ ಚರಿತ್ರೆ ಪರಿಶೋಧನೆಯನ್ನು ಮಾಡುತ್ತಿರುವೆನಾದುದರಿಂದ ಸಂಬಂಧಪಟ್ಟ ಗ್ರಂಥ ಪರಿಶೀಲನೆಯನ್ನು ಮಾಡಿರುವೆನು. ಮೇಲೆ ಹೇಳಿದವರ ಗೋತ್ರ ಪ್ರವರ ವಿಷಯವು ಬಹಳ ವಿಚಿತ್ರದೆಂದು ನನಗೆ ಕಂಡುಬಂದಿದೆ. ಈ ಕುರಿತಾಗಿ ಗೌಡ ಸಾರಸ್ವತ ಬ್ರಾಹ್ಮಣರೂ, ಅವರ ಪಂಡಿತರುಗಳೂ, ಮಠಾಧಿಪತಿಗಳೂ ಆಲೋಚಿಸಿ, ಈ ವಿಷಯಕವಾದ ಸತ್ಯತೆಯನ್ನು ಇದೇ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ನನ್ನ ಪ್ರಾರ್ಥನೆ. ಈ ವಿಷಯವಾಗಿ ಮಂಗಳೂರಿನ ಶ್ರೀ ವೆಂಕಟರಮಣ ದೇವಸ್ಥಾನದವರೂ ಅವರ ಮಠಾಧಿಪತಿ ಪಂಡಿತ ವರ್ಗದವರೂ ವಿಚಾರಿಸಿಕೊಳ್ಳಬೇಕಾಗಿ ನನ್ನ ಅರಿಕೆ. ನನ್ನ ಶೋಧನೆಯಲ್ಲಿ ನಾನು ಈ ಕೆಳಗಿನವುಗಳನ್ನು ಕಂಡು ಹಿಡಿದಿರುವೆನು

೧ ಶಂಖ-ಪಿಂಗಳ ಎಂಬ ಹೆಸರಿನ ಒಬ್ಬ ಋಷಿಯು ಇರುವುದಿಲ್ಲ. ೨. ಪ್ರವರ ಋಷಿಗಳೂ ಗೋತ್ರ ಋಷಿಗಳೂ ಒಂದೇ ಶಾಖೆಗೆ ಸೇರಬೇಕು. ಆದರೆ ಮೇಲಿನವರ ಗೋತ್ರ ಪ್ರವರಗಳಲ್ಲಿ ಇದಕ್ಕೆ ಸಂಬಂಧ ಕಾಣುವುದಿಲ್ಲ. ೩ ಕಾಂಸ ಋಷಿಯವರು ಭೃಗು ಶಾಖೆಗೆ ಸೇರಿದವರು. ೪ ಶಂಖ ಋಷಿಯವರು ಭರದ್ವಾಜ ಶಾಖೆಗೆ ಸೇರಿದವರು. ೫. 'ಪಿಂಗ' ಋಷಿಯವರು ಭರದ್ವಾಜ ಶಾಖೆಗೆ ಸೇರಿದವರು. ಇಲ್ಲಿ ಶಂಖ ಮತ್ತು ಪಿಂಗ ಋಷಿಗಳು ಪ್ರತ್ಯೇಕಪ್ರತ್ಯೇಕ. ಇವರು ಭರದ್ವಾಜ ಶಾಖೆಗೆ ಸೇರಿದವರು. ೬ ಕಾಂಸ ಸತ್ರ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು. ೭. ಕಾಂಸಯ ಋಷಿಯವರು ಭೃಗು ಶಾಖೆಗೆ ಸೇರಿದವರು. ೮ ಕಾಂಸಲಾಯನ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು. ೯ ಕಾಂಸಲಿಯ ಅಥವಾ ಕಾಂಸಾಲಿ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು. ೧೦, ಕಾಂಸಾಯನ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು. ೧೧ ಕಾಂಸಾಯ ಋಷಿಯವರು ಜಮದಗ್ನಿ ಶಾಖೆಗೆ ಸೇರಿದವರು. ೧೨ ಶಂಖದರ್ಭ ಋಷಿಯವರು ಕೇವಲಾಂಗೀರಸ ಶಾಖೆಗೆ ಸೇರಿದವರು. ೧೩ ಪಿಂಗ ಋಷಿಯವರು ಕೇವಲಾಂಗೀರಸ ಶಾಖೆಗೆ ಸೇರಿದವರು. ೧೪ ಶಂಖ ಮೈತ್ರೇಯ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು. ೧೫ ಪಿಂಗ ಕಾಕ್ಷಿ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು. ೧೬ ಪಿಂಗಾಕ್ಷಿ ಋಷಿಯವರು ಕಶ್ಯಪ ಶಾಖೆಗೆ ಸೇರಿದವರು.

---

ಇವರೆಲ್ಲರೂ ಅಶ್ವಲಾಯನ ಸೂತ್ರಕ್ಕೆ ಸೇರಿದವರು. ಈ ಋಷಿಗಳೆಲ್ಲರೂ ಪ್ರತ್ಯೇಕಪ್ರತ್ಯೇಕ ಆಶ್ರಮಗಳಿಗೆ ಸಂಬಂಧಪಟ್ಟವರು. ಯಾವ ಗೌಡ ಸಾರಸ್ವತ ಬ್ರಾಹ್ಮಣರಾದವರೂ ತಮ್ಮ ಕುಲಗೋತ್ರಗಳ ಸಂಬಂಧ ತಿಳಿಯದೆ ಅದನ್ನು ಹೇಳಬಾರದೆಂದೇ ನನ್ನ ಆಗ್ರಹ. ಈ ಕುರಿತಾಗಿ ಎಲ್ಲಾ ಗೌಡ ಸಾರಸ್ವತ ಬ್ರಾಹ್ಮಣರೂ, ಮುಖ್ಯವಾಗಿ ಕಾಂಸ ಗೋತ್ರದ ಬ್ರಾಹ್ಮಣರೂ ತಮ್ಮ ಪುರೋಹಿತರೊಡನೆಯೂ, ಮಠಾಧಿಪತಿಗಳೊಡನೆಯೂ ವಿಚಾರಿಸಿ ಗ್ರಂಥಾಧಾರಗಳ ಮೇಲೆ ಹೊಂದಿಕೊಂಡಿರುವ ಪ್ರಮಾಣ ಪೂರ್ವಕ ಉತ್ತರಗಳನ್ನು ಚರ್ಚಿಸಿ ತಿಳಿದುಕೊಂಡು ಈ ಪತ್ರಿಕೆಯಲ್ಲಿ ತಮ್ಮ ಸಂಪೂರ್ಣ ಹೆಸರು ವಿಳಾಸಗಳೊಡನೆ ಪ್ರಕಟಿಸಬೇಕಾಗಿ ಅರಿಕೆ. ಇನ್ನಿತರ ಪತ್ರಿಕೆಗಳಲ್ಲಿ ಇದರ ಉತ್ತರವನ್ನು ಪ್ರಕಟಿಸಿದರೆ ಈಗ ಆತಾಭರಿತರಾಗಿ ನಿರೀಕ್ಷಿಸುತ್ತಿರುವ ವಾಚಕರು ಅನಾನುಕೂಲ ಹೊಂದಬಹುದು. ಆದುದರಿಂದ ಇದರ ಉತ್ತರವನ್ನು ಇದರಲ್ಲೇ ಪ್ರಕಟಿಸಬೇಕಾಗಿ ಪ್ರಾರ್ಥನೆ.

ಎಲ್ಲಾ ಗೌಡ ಸಾರಸ್ವತ ಬ್ರಾಹ್ಮಣರೂ, ಬ್ರಾಹ್ಮಣರೂ ತಮ್ಮ ಗೋತ್ರ ಋಷಿ ಪ್ರವರ ಋಷಿಗಳ ಪ್ರಮಾಣ, ಜೀವನ ಸಂಬಂಧ ಕಾರಣಗಳನ್ನು ತಮ್ಮ ಪುರೋಹಿತ ಮಠಾಧಿಪತಿ ದೇವಸ್ಥಾನಾಡಳಿತದಾರರಿಂದ ತಿಳಿದು ಚಾರಿತ್ರಿಕ ಪ್ರಮಾಣಗಳ ಸಹಿತ ಪ್ರಕಟಿಸಬೇಕಾಗಿ ಪ್ರಾರ್ಥನೆ.

**ಅಂಕುರಾಜ ಸುಬ್ರಾಯ ಶರ್ಮ,**

ಹಿಂದೂ ಮಿಶ್ಯನರಿ.

—+— —+—

### ಹೊಸ ಬಿಶೋಪರ ಕಾಲದ ಸ್ಥಿತಿ.

ಸಂಪಾದಕ ಮಹಾಶಯಾ!

ಲೋಕವೇನೋ ಭಿನ್ನ ರುಚಿಯಿಂದ ಕೂಡಿರುವುದು ನಿಶ್ಚಯವಾದರೂ ಆಯಾಯ ಪದವೀಧರರು—ಪ—ಮಠಾಧಿಪತಿಗಳು ವ ಕ್ರೈಸ್ತ ಗುರುಗಳು ತಮ್ಮ ತಮ್ಮ ಸ್ಥಾನದ ಜವಾಬ್ದಾರಿಕೆಯನ್ನೂ ಯೋಗ್ಯತೆಯನ್ನೂ ತಿಳಿದುಕೊಂಡು ಕೆಲಸ ಮಾಡುವುದು ವಿಹಿತವಾಗಿದೆ. ಆದರೆ ಸಂದರ್ಭವಶಾತ್ ಶೀತಲ ಮರೀಚಿಯಲ್ಲಿ ಉಷ್ಣವೂ, ಚಂದ್ರ ಕಿರಣದಲ್ಲಿ ಶೀತವೂ ಗಾಳಿಯಲ್ಲಿ ಬೆವರೂ ಗೋಚರವಾಗುವುದಾದರೆ ಅದನ್ನು ಕಾಲದ ಕುಟಿಲ ಸ್ಥಿತಿಯೆಂದೇ ತಿಳಿಯಬೇಕಲ್ಲದೆ ಯೋಗ್ಯತೆಯಲ್ಲಿ ಕುಂದನ್ನು ಕಂಡು ಹಿಡಿಯುವವರಿಲ್ಲ - ಅಧಿಕಾರಿಯ ಅನಾಚಾರವನ್ನು ಖಂಡಿಸಲಿಕ್ಕೆ ಕ್ರೈಸ್ತನ ವ ರಾಮನ ರಾಜ್ಯವಲ್ಲ, ಲೋಕವೆಲ್ಲವೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಜಗತೀವಲಯದ ಹಿತಚಿಂತಕರೆಂದು ನಟಿಸುವ ಹಲವರಾದರೂ ತಮ್ಮ ಸ್ವಾರ್ಥವನ್ನು ಹೇಗೆ ಬಿಡುವರು?

ನಿಜವಾಗಿಯೂ, ಕ್ರೈಸ್ತ ಮತಾನುಯಾಯಿಗಳು ಪರೋಪಕಾರ ನಿರತರಾಗಿಯೂ, ಪರಪೀಡೆ ರಹಿತರಾಗಿಯೂ, ಲೋಕನಿಂದೆಗಾಗಲಿ, ಪಾಪಕ್ಕಾಗಲಿ ಹೆದರುವವರಾಗಿಯೂ ಇರಬೇಕಾದರೂ, ಕೆಲವರ ನಡಾವಳಿಗಳು ಆ ನಿಯಮಗಳಿಗೆ ವಿರುದ್ಧವಾಗಿವೆಯೆಂಬುದನ್ನು ವರ್ಣಿಸಿ ಹೇಳುವ ಆವಶ್ಯಕತೆಯಿಲ್ಲ—ಮೇಲ್ಪಂಕ್ತಿಯೇ ಡೊಂಕಾದರೆ, ಬೇಲಿಯೇ ಹೊಲವನ್ನು ಮೇದರೆ, ರಾಜನೇ ಪ್ರಜೆಗಳನ್ನು ಶಿಕ್ಷಿಸುವುದಾದರೆ, ಗಂಡನೇ ಹೆಂಡಿರನ್ನು ಪೀಡಿಸುವುದಾದರೆ, ಹೆತ್ತ ತಾಯಿಯೇ ಹೊಟ್ಟೆಯ ಮಗುವಿಗೆ ವಿಷವನ್ನೂಡಿಸುವುದಾದರೆ, ಲೋಕದಲ್ಲಿ ದೇವರೇ ಮುನಿದನೆಂದು ಹೇಳುವರು—ಆದರೆ ವಿಚಾರಿಸಿದ್ದಲ್ಲಿ ಮನುಷ್ಯನ ಸ್ವಾರ್ಥಮಯ ಮನಸ್ಸೇ ಇದಕ್ಕೆ ಮೂಲಕಾರಣ.

ಕಾಲದ ಮಾರ್ಪಾಟವು ವಿಪರೀತವಾಗದಿರುವ ಪಕ್ಷದಲ್ಲಿ ತೊಟ್ಟಮಿನ ಇಗರ್ಜಿಯು ಈ ಹೀನಸ್ಥಿತಿಗೆ ಇಂತಹ ಅಲ್ಪಾವಧಿಯಲ್ಲಿಯೇ ಇಳಿಸಲ್ಪಡುತ್ತಿರಲಿಲ್ಲ—ಎರಡೂವರೆ ದಶಕಗಳ ಮೊದಲು ಸನ್ಮಾನಿತರಾದ "ವಾಸ್" ಕುಟುಂಬದವರಿಂದ ಸ್ಥಾಪಿಸಲ್ಪಟ್ಟು, ಅವರಿಂದಲೇ ೧೫೫ ಖಂಡಿ ಅಕ್ಕಿ ಮತ್ತು ೩೭೫/—ರೂಪಾಯಿಗಳ ಗೇಣಿಯ ಉಂಬಳಿಯು ಅಂದಿನಿಂದಲೇ ಬಿಡಲ್ಪಟ್ಟು, ನೆರೆಹೊರೆಯ ಸ್ವಜಾತಿ ಬಾಂಧವರ ಏಳಿಗೆಯ ಸಲುವಾಗಿಯೂ, ಆತ್ಮೋನ್ನತಿಯ ಸಲುವಾಗಿಯೂ ನಮ್ಮ ಕ್ರೈಸ್ತ ಸಮಾಜದ ರೀತಿ ನೀತಿಗನುಸರಿಸಿ, ಸಕಲ ಹಬ್ಬ ನಿತ್ಯ ಪೂಜೆ ಮೊದಲಾದುವುಗಳಿಗೋಸ್ಕರವಾಗಿಯೇ ನಿರ್ಮಿಸಲ್ಪಟ್ಟಿದ್ದರೂ ಇವತ್ತಿಗೆ ಅದು ನಿಸ್ತೇಜವಾಗಿದ್ದು ಸ್ವಲ್ಪ ಸಮಯದಲ್ಲೇ ನಿನ್ನೆವಿ ಮತ್ತು ಟ್ರಾಯಿ ರಾಜ್ಯಗಳಂತೆ ಸಂಪೂರ್ಣವಾಗಿ ನಾಶವಾಗಲಿಕ್ಕಿದೆ ಎಂಬುದನ್ನು ಈಗಲೇ ತಿಳಿದುಕೊಳ್ಳಬೇಕಾಗಿದೆ

ಇಷ್ಟರಲ್ಲಿ ಈ ದೇವ ಭವನವು ನಿಶ್ಚಯವಾಗಿಯೂ, ಸ್ವರ್ಗೀಯ ಮಂದಿರವೇ ಆಗಬೇಕಿತ್ತು. ಆದರೇನು? ಧನವಂತ ಆರ್ಚಕರು ಬೇರೆ ಪಥವನ್ನು ಹಿಡಿದಿದ್ದಾರೆ. ನವಶಾಖೆಗಳಿಂದ ಕೂಡಿದ್ದ ಮಹಾಸ್ವಾಧಿಕರಾದ ವಾಸರ ಕುಟುಂಬದ ಉದ್ದೇಶವು ಇವತ್ತಿಗೆ ಈ ಕ್ರೈಸ್ತ ದೇವಾಲಯವು ಮಣ್ಣುಪಾಲಾಗಬೇಕೆಂದಿರಲಿಕ್ಕಿಲ್ಲ. ಈ ದಿನದ ವಸ್ತುಸ್ಥಿತಿಯಲ್ಲಿ ಅವರ ಉದಾರತ್ವವು ತಿರಸ್ಕಾರದ ಮತ್ತು ಲೋಕನಿಂದೆಯ ಉಗಮ ಸ್ಥಾನವೆಂದರೆ ಅತ್ಯುಕ್ತಿಯಲ್ಲ. ಇಲ್ಲದಿದ್ದರೆ ಈ ಇಗರ್ಜಿಯ ಈಗಿನ ಧನವಂತ ಅರ್ಚಕರಿಗಾದರೂ ಈ ಭವ್ಯವಾದ ದೇವಮಂದಿರಕ್ಕೆ ಸುಮಾರು ಇನ್ನೂರು ಮೂರು ದೂರದಲ್ಲಿ ಒಂದು ಹಂಗಾಮಿ ಕಟ್ಟಡವನ್ನು ತೆರೆದು ಅಲ್ಲಿಗೆ ದೇವಾಲಯದ ಎಲ್ಲಾ ಸಾಮಾಗ್ರಿಗಳನ್ನೂ ಒಯ್ದು ಅಲ್ಲಿ ಸತ್ಪ್ರಸಾದವನ್ನಾಗಲೀ, ಗೀತೆಯನ್ನಾಗಲೀ, ಸತ್ಯವೇದದ ಬೋಧೆಯನ್ನಾಗಲೀ ಕೊಡಬೇಕಾದ ಆವಶ್ಯಕತೆಯೇನಿದೆ? ಈ ಇಗರ್ಜಿಯನ್ನು ಬೀಳಗೊಡಿಸುವುದರಿಂದ ಉಂಟಾಗುವ ಲಾಭವಾದರೂ ಏನಿರಬೇಕು! ತನ್ನ ಅಧಿಕಾರವನ್ನು ಪ್ರಕಟಿಸುವದರಾದರೂ ಇಲ್ಲವೆಂದಿರುವುದಾದರೆ ಅತೀ ಧನವಂತರಾದ ಎಲ್ಲಾ ಮೇಸ್ತ್ರಾಣಗಳು, ಹಳ್ಳಿಯ ಹಾನಿವೃದ್ಧಿಗಳನ್ನು ಪರೀಕ್ಷಿಸಿ ಅವುಗಳ ಉನ್ನತಿಗೆ ಬೇಕಾದ ಸಾಧನಗಳನ್ನು ಒದಗಿಸಿಕೊಡಬೇಕಾಗಿರುವುದು. ಭಾನುವಾರ ಮಾತ್ರ ಬೇಗನೆ ಅವಸರದ ಪೂಜೆಯೊಂದನ್ನು ನಡಿಸಿ ತನ್ನ ಪ್ರತಿಷ್ಠೆಯನ್ನು ಮಾಡಿಕೊಳ್ಳುವುದರಲ್ಲಿ ಅರ್ಥವೇನಿದೆ? ಈ ವರೆಗಿನ ಆಯುಷ್ಯದ ಕಟ್ಟಿಯಾದರೂ ಎಲ್ಲಿದೆ? ಅಹಾ! ರೋಮನ್ ಕೆಥೋಲಿಕ್ ಮತದಲ್ಲಿ ಇಂತಹ ಅನರ್ಥಗಳು ಈ ವರೆಗೆ ಅದೃಶ್ಯವಾಗಿದ್ದರೂ ಈಗ ತಲೆದೋರುತ್ತಿರುವುದನ್ನು ಕಂಡರೆ ಇನ್ನು ಮನೆ ಮನೆಗೊಂದು ಇಗರ್ಜಿಯೂ, ಇಗರ್ಜಿಗೊಂದೊಂದು ಧನವಂತ ಆರ್ಚಕರೂ ಈಗಿನ ಬಿಶೋಪರ ಕಾಲದಲ್ಲಿ ಬೇಕಾಗಿದೆ ಎಂಬುದು ನಿರ್ವಿವಾದದ ಮಾತು.—ಯಾವ ಮತವು ಲೋಕದ ಪಾಪ ನಿವಾರಣಾರ್ಥವಾಗಿ ಕ್ರಿಸ್ತೇಸುವಿನಿಂದ ಸ್ಥಾಪಿಸಲ್ಪಟ್ಟಿತ್ತೋ ಅಂತಹ ಮತಕ್ಕೆ ಇಂತಹ ಅರ್ಚಕರು ಒದಗುವುದೆಂದರೆ? ಸುಲಭದಲ್ಲಿ ಹೇಳುವುದಾದರೆ ಈಗಿನ ಧನವಂತ ಅರ್ಚಕರು ಅತೀ ಜಾಣರಾದರೂ ತನ್ನ ಸ್ಥಾನಕ್ಕೆ ಅರ್ಹವಾದ ಕೆಲಸವನ್ನು ಅವರು ಈ ಮೊದಲಾದರೂ ಮಾಡಿರಲಿಲ್ಲವೆಂಬ ವಿಷಯವನ್ನು ಶಿರ್ವವು ಎಚ್ಚರಿಸುತ್ತಿರುವುದು. ಹೀಗಿರುತ್ತಿರುವಾಗ ಜಿಲ್ಲಾಧಿಕಾರಿಗಳಾದ ಬಿಶೋಪರು ಇನ್ನಾದರೂ ಈ ಕಡೆಗೆ ಕೃಪಾದೃಷ್ಟಿಯನ್ನು ತಿರುಗಿಸಿ ಮಹಾಜನತೆಯ ಕಡೆಗೆ ಮನಃ ಕರಗಿದರೆ, ಇಂತಹ ಅತ್ಯಾಚಾರ ಅನಾಚಾರಗಳು ಕಡಿಮೆಯಾದಾವು ತಮ್ಮ ಗೌರವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವವರ ಕುಂದುಕುಗಳು ಕುಗ್ಗಿ ಸಾಮಾನ್ಯ ಜನತೆಯ ಸಾತ್ವಿಕ, ನೈತಿಕ ಮತ್ತು ಆತ್ಮಿಕ ಉನ್ನತಿಗೆ ತುಂಬಾ ಅನುಕೂಲವಾಗುವುದೆಂಬುದನ್ನು ವಿನಯಪೂರ್ವಕವಾಗಿ ನಿವೇದಿಸಿಕೊಳ್ಳುತ್ತೇನೆ—

ಇತಿ

ಪ್ರತ್ಯಕ್ಷದರ್ಶಿ.

### ಖಾಸಗಿ ಶಾಲೆಗಳ ಟೀಚಿಂಗ್ ಗ್ರ್ಯಾಂಟು.

ಸರಕಾರದವರು ಈ ವರುಷ ಖಾಸಗಿ ಶಾಲೆಗಳಿಗೆ ಕೊಡತಕ್ಕ ಟೀಚಿಂಗ್ ಗ್ರ್ಯಾಂಟನ್ನೂ ಕಮ್ಮಿ ಮಾಡುವ ಉದ್ದೇಶದಿಂದ, ಯೋಗ್ಯ ಶಾಲೆಗಳಿಗೆ ಕೂಡಿಸಿ ಕೊಡತಕ್ಕ ಅಭಿವೃದ್ಧಿ ಗ್ರ್ಯಾಂಟನ್ನೂ ತಗ್ಗಿಸಬೇಕಾಗಿ ಸೂಚಿಸಿ ವರುಷಾರಂಭದಲ್ಲಿ ಹುಕುಂ ಕೊಟ್ಟಿದ್ದರು. ಆ ಪ್ರಕಾರ ಇಲಾಖಾ ಆಫೀಸರರು ಬಹು ಮಟ್ಟಿಗೆ ಎಲ್ಲಾ ಶಾಲೆಗಳ ಇನ್ಕ್ರಿಮೆಂಟನ್ನೂ (ಅಭಿವೃದ್ಧಿ ಗ್ರ್ಯಾಂಟನ್ನೂ) ಈ ಮೊದಲೇ ಸುಮಾರು ಕಾಲಾಂತಕ್ಕೆ ತಗ್ಗಿಸಿದ್ದರು. ಅತ್ಯುತ್ತಮವಾಗಿದ್ದ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಗತ ವರ್ಷಗಳಲ್ಲಿ ಶೇಕಡಾ ೫ಕ್ಕೆ ಮಿಕ್ಕಿ ೧೦ರ ವರೆಗೆ ಅಭಿವೃದ್ಧಿ ಗ್ರ್ಯಾಂಟನ್ನೂ ಶಿಫಾರಸು ಮಾಡಿದ್ದಾದರೂ ಪ್ರಾಪ್ತ ವರುಷದಲ್ಲಿ ಸದ್ರಿ ಹುಕುಮಿನ ಮೇರೆಗೆ ಶೇಕಡಾ ೫ರ ಶಿಫಾರಸಿಗೂ ತತ್ವಾರವಾಗಿತ್ತು. ಒಟ್ಟಾರೆ ಇನ್ಸ್ಪೆಕ್ಟಿಂಗ್ ಆಫೀಸರರು ಈ ವರುಷ ಹೆಚ್ಚು ಕಡಿಮೆ ಎಲ್ಲಾ ಶಾಲೆಗಳ ಗ್ರ್ಯಾಂಟನ್ನು ಕಡಿಮೆ ಮಾಡಿರುವ ದೆಸೆಯಿಂದಲೂ ಮತ್ತು ಸರಕಾರದಲ್ಲಿ ಹಣದ ಉಳಿತಾಯ ಇದ್ದುದರಿಂದಲೂ ಖಾಸಗಿ ಶಾಲೆಗೆ ಈ ವರುಷ ಸಿಕ್ಕಬೇಕಾದ ಅತ್ಯಲ್ಪ ಗ್ರೇಂಟಿಗೆ ತಿರುಗಿ ಸರಕಾರದ ಕೊಡಲಿ ಏಟು ಬಿದ್ದೀತೆಂದು ಯಾರೊಬ್ಬರೂ ಭಾವಿಸಿರಲಿಲ್ಲ. ಪರಂತು ಈ ವರುಷವು ರಿಟ್ರೆಂಚುಮೆಂಟು ಭೂತವೂ ಖಾಸಗಿ ಶಾಲೆಗಳ ಬೆನ್ನೂ ಬಿಡಲಿಲ್ಲ ಎಂಬುದು ದುರ್ದೈವವೆನ್ನಬಹುದು

ನಮ್ಮ ಜಿಲ್ಲೆಯಲ್ಲಿ ಈ ವರುಷ ೫೭೯ ಹಗಲು ಶಾಲೆಗಳೂ ೫ ಜನರಲ್ ರಾತ್ರಿ ಶಾಲೆಗಳು ೧೩ ಸ್ಪೆಶ್ಯಲ್ ರಾತ್ರಿ ಶಾಲೆಗಳೂ ಇದ್ದವು. ಇನ್ಸ್ಪೆಕ್ಟಿಂಗ್ ಆಫೀಸರರ ಕಡಿತಕ್ಕೊಳಗಾದ ಬಳಿಕ ಹಗಲು ಶಾಲೆಗಳ

(೧೧ನೇ ಪುಟಕ್ಕೆ ಮುಂದುವರಿದುದು.)


# WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Oanara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co Ltd
64, 3rd Cross Road, Srirampur Extn
Malleswaram Post, BANGALORE.

OR

*The Managing Agents,*
The S I. G. A. Co. Ltd.
55, Poonamallee High Road, Kilpauk, MADRAS.

ನಾಳೆ— ಈ ದಿನ—
ನಿಮಗೆ ಬೇಕಾದುದು!

# ರಬ್ಬರ್ ಮೊಹರುಗಳು

ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ. ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳಿ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲಾಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ. ಸೂ:—ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು.

ಹೆಡ್ ಆಫೀಸು:—

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No. 2. ಬಲ್ಮಠ ರಸ್ತೆ, ಮಂಗಳೂರು,
ದ. ಕನ್ನಡ.



# "ಜಯಕರ್ನಾಟಕ"

ಕನ್ನಡನಾಡಿನ ಸರ್ವತೋಮುಖ ಉನ್ನತಿಯನ್ನೇ ಗುರಿಯಾಗಿಟ್ಟುಕೊಂಡ ಅಖಿಲಕರ್ನಾಟಕದ ಏಕಮಾತ್ರ ಪ್ರಮುಖ ಮಾಸಪತ್ರಿಕೆ. ಪರದೇಶದಲ್ಲಿಯ ಮಾನ್ಯ ಕನ್ನಡಿಗರ ಲೇಖನಗಳೂ, ಕತೆ, ಕವಿತೆ, ಹರಟೆ, ಜನಪದಸಾಹಿತ್ಯ, ವಿನೋದ ಮೊದಲಾದುವುಗಳ ಮೇಲೆ ಕನ್ನಡ ವಿದ್ವನ್ಮಣಿಗಳ ಲೇಖನಗಳೂ, ಕನ್ನಡ ಚಿತ್ರಕಾರರ ಚಿತ್ರಗಳೂ ಬರುತ್ತಿವೆ. ಪ್ರತಿ ತಿಂಗಳೂ ಕ್ರೌನ ಆಕಾರದ ೮೦ ಪುಟಗಳು. ಮುದ್ದಾದ ಅಚ್ಚು. ಪ್ರತಿ ತಿಂಗಳೂ ಮೊದಲನೆಯ ತಾರೀಖಿಗೆ ಹೊರಡುವ ಈ ಪತ್ರಿಕೆಗೆ ಚಂದಾದಾರರಾಗುವದು ಕನ್ನಡಿಗರ ಕರ್ತವ್ಯ. ಜಾಹೀರಾತುದಾರರಿಗೆ ಉತ್ತಮ ಸ್ಥಾನ.

ಹಿಂದುಸ್ಥಾನ ರೂ. ೫-೮-೦. ಪರದೇಶ ೭-೦-೦.

## ಜಯಕರ್ನಾಟಕ ಗ್ರಂಥಮಾಲೆ

ಕನ್ನಡಿಗರಲ್ಲಿ ಹೊಸ ಬಗೆಯ ವಾಚನಾಭಿರುಚಿಯನ್ನು ಹುಟ್ಟಿಸುವುದೇ ಇದರ ಉದ್ದೇಶ. ವರ್ಷದಲ್ಲಿ ಕತೆ, ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಮತ್ತು ಲಲಿತ ಶೈಲಿಯ ಆರು ಪುಸ್ತಕಗಳಿಗೆ ಚಂದಾ ಹಣವು ಬರೀ ರೂ. ೩-೪-೦.

ಕ್ಯಾಟಲಾಗಿಗಾಗಿ ಬರೆಯಿರಿ. ಎಲ್ಲ ಕಡೆಗೂ ಏಜಂಟರು ಬೇಕು.

ಕಾರ್ಯದರ್ಶಿ
ಜಯಕರ್ನಾಟಕ ಕಾರ್ಯಾಲಯ, ಧಾರವಾಡ.



# S. U. N. & CO.

*Choukhamba, Benares City*

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾರೀ ಶೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಕ್ಯಾಮಿಗೆ ಮಿಶನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಜಿಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬ, ಬೆನಾರಿಸ್ (ಕಾಶೀ)



# ಕೇಸರಿಯ ವರ

## ಲೋಧ್ರ

### ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ಮುಟ್ಟುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಮುಟ್ಟುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ. ೩-೦-೦.
ಸಣ್ಣ ಬಾಟಲ್ ೬ ಔನ್ಸ್ ರೂ. ೧-೧೦-೦.

ಟಪಾಲು ಖರ್ಚು ಪ್ರತ್ಯೇಕ. ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ಕೇಸರಿ ಕುಟೀರಂ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.
ಷಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.



**The Zandu Pharmaceutical Works, Ltd., Bombay, 14.**

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

# 'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪೌ.ಜಾಡಿ ರೂ. 10/- ಕ್ರಯ 1ಪೌನು ಸೀಸೆ ರೂ. 2/8. ½ ಪೌ. ರೂ. 1/5 ¼ ಪೌ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:—ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು:—ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು:—ಷಾ ಕಂಪೆನಿ, ಡೈಮಂಡ್ ಬಿಲ್ಡಿಂಗು.
ಸಿರ್ಸಿ ಏಜಂಟರು:—ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು:—ಟಿ. ಸಿ. ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:—ಬಿ. ಪ್ರೊಹಟ್‌ಲಾಲ್ ಕಂಪೆನಿ, ಚಿಕ್ಕಪೇಟೆ.
ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.



ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವಮಾನದ ಅಮೃತ. ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನೀ ಔಷಧಗಳ ರಾಜ" "ಸರ್ವ ಸಿದ್ಧೌಷಧ"
"ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ. ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಧಾರವೂ ಆದ

# ಜೀವಾಮೃತವೇ.

ಇದು ಪಂಡಿತ ಡಿ. ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ೧೮೯೮ನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ. ನರಗಳ ದೌರ್ಬಲ್ಯವು ದುಶ್ಚಕ್ಕದ ಹೀನತೆ ಪಚನ, ಆಯಾಸ ರಕ್ತ ಹೀನತೆ, ನರಗಳ ಅಶಕ್ತತೆ, ಮಿದುಳು ಚೈತನ್ಯಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವುದು. ಇತ್ಯಾದಿಗಳಿಂದ ನರಳುತ್ತಿದ್ದಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ಮೊದಲನೇ ಸಾರಿ ಸೇವಿಸಲು ಪ್ರಾರಂಭಿಸಿದಾಕ್ಷಣವೇ ಅದರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡು ಸೈಜುಗಳಲ್ಲಿ ರೂ. ೩-೪-೦ ಮತ್ತು ರೂ ೧-೧೨-೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೦೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೨ ಚಿಕ್ಕಪೇಟೆ ಬೆಂಗಳೂರು. (ಕಾಯಿಲ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು- ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

## ಆಧುನಿಕ ಕಾಲದ ದಾಂಪತ್ಯಜೀವನ.

ಪಂಡಿತ ಪಿ. ಲಕ್ಷ್ಮೀದೇವ ವಿದ್ಯಾರ್ಥಿ, ಮಂಗಳೂರು.

ವರ್ತಮಾನಕಾಲದ ಪರಿಸ್ಥಿತಿಯನ್ನು ನೋಡಿದ್ದಲ್ಲಿ ಮಹತ್ತಾದ ಒಂದು ಹೊಸ ಸಂಸ್ಕೃತಿಯು ಇಡೀ ಜಗತ್ತನ್ನೇ ಆವರಿಸಿಕೊಳ್ಳುವುದೆಂದು ಕಂಡುಬರುತ್ತದೆ. ಪ್ರಾಚೀನ ಸಂಸ್ಕೃತಿಯ ಎಲ್ಲಾ ಸಂಸ್ಥೆಗಳಲ್ಲಿ ಒಂದೊಂದು ವಿಧದಲ್ಲಿ ಕ್ರಾಂತಿಗಳು ಹೇಡುತ್ತಿವೆ. ಧಾರ್ಮಿಕ, ಸಾಮಾಜಿಕ ಮತ್ತು ರಾಜನೈತಿಕ ಮುಂತಾದ ಎಲ್ಲಾ ಸಂಸ್ಥೆಗಳೂ ಬಹಳ ವೇಗದೊಡನೆ ಅಡಿಮೇಲಾಗುತ್ತಿವೆ. ಮಾನವ ಸಮಾಜದ ಆದರ್ಶತೆ, ವ್ಯವಹಾರ ಸಿದ್ಧಾಂತ ಮುಂತಾದುವುಗಳು ದಿನೇ ದಿನೇ ಅದಲುಬದಲಾಗುತ್ತಾ ಇವೆ. ಪರಮ ಪುನೀತವಾದ ಪ್ರಾಚೀನ ಸಂಸ್ಕೃತಿಯ ದುರ್ಗಗಳು ಮಣ್ಣು ಪಾಲಾಗಿ ಅವುಗಳ ಸ್ಥಾನದಲ್ಲಿ ಆಧುನಿಕ ಕಾಲದ ನವೀನ ಸಂಸ್ಕೃತಿಯ ಬೆಡಗಿನ ಭವನಗಳು ಕಟ್ಟಲ್ಪಡುತ್ತಿವೆ. ಈ ಸಂಸ್ಕೃತಿಯ ಸಂಘಟನೆಯು ಯಾವ ಸಿದ್ಧಾಂತಗಳಿಂದಾಗುವುದು? ಇದರಿಂದ ಸಂಸ್ಥೆಗಳಿಗೆ ಏನು ಪ್ರಯೋಜನವುಂಟಾಗುವುದು? ಇತ್ಯಾದಿ ವಿಷಯಗಳನ್ನು ಸಾವಕಾಶವಾಗಿ ಚರ್ಚಿಸುತ್ತಾ ಈ ಲೇಖನದಲ್ಲಿ ಈಗಿನ ಸಂಸ್ಕೃತಿಯಿಂದ ದಾಂಪತ್ಯ ಜೀವನವು ಯಾವ ಸ್ವರೂಪವನ್ನು ಹೊಂದುವುದು ಎಂಬುದರ ಕುರಿತು ಸಂಕ್ಷಿಪ್ತವಾಗಿ ವಿವರಿಸುವ ಯತ್ನವನ್ನು ಮಾಡುವೆವು.

ದಾಂಪತ್ಯ ಜೀವನವು ಸಾಮಾಜಿಕ ಸಂಸ್ಥೆಯ ಒಂದು ಮುಖ್ಯಾಂಗವಾಗಿರುತ್ತದೆ. ಯಾವ ಸಂಸ್ಕೃತಿಯ ದಾಂಪತ್ಯ ಜೀವನದಲ್ಲಿ ಉಚ್ಚಾದರ್ಶತೆ, ಸರಲತೆ, ಪ್ರೇಮಾಂಬುಧಿ ಇತ್ಯಾದಿಗಳು ತುಂಬಿರುವುದಿಲ್ಲವೋ, ಮತ್ತು ಯಾವುದರಲ್ಲಿ ಕಠೋರತೆ, ಕಲಹ, ಅಧಿಕಾರ, ಪ್ರತಿಸ್ಪರ್ಧೆ ಮುಂತಾದ ಭಾವನೆಗಳು ಹೆಚ್ಚುತ್ತವೆಯೋ ಅಂಥಾ ಸಂಸ್ಕೃತಿಯ ಸಂಘಟನೆಯು ಎಂದಿಗೂ ಅಭಿನಂದನೀಯವಾಗಿರಲಾರದು. ಎರಡನೆಯದಾಗಿ ಸಂಸ್ಕೃತಿಯ ಸಫಲತೆ ಮತ್ತು ಚಿರಸ್ಥಾಯಿತ್ವವಾಗಬೇಕಾದರೆ ಆ ಸಂಸ್ಕೃತಿಯ ಭಾವೀ ಸಂತಾನವು ಸ್ವಸ್ಥಚಿತ್ತ ಮತ್ತು ಮೇಧಾವಿಯಾಗಿರಬೇಕು. ಸುಂದರವಾದ ದಾಂಪತ್ಯ ಜೀವನದಿಂದಲೇ ಹೀಗಾಗುವುದು.

ಜಗತ್ತಿನಲ್ಲಿ ಇದು ವರೆಗೆ ಲಕ್ಷಾವಿಲ್ಲದ ಸಂಸ್ಕೃತಿಗಳು ಉದಯವಾಗಿವೆ. ಎಲ್ಲವೂ ದಾಂಪತ್ಯ ಜೀವನವನ್ನು ಸುಖವಾಗಿಯೂ ಆನಂದಮಯವಾಗಿಯೂ ಇಡಲಿಕ್ಕೆ ಬಹಳ ಪ್ರಯತ್ನವನ್ನು ಗೈದಿವೆ. ಈ ಕುರಿತು ಎಲ್ಲಾ ಸಂಸ್ಕೃತಿಗಳ ಆಚಾರ್ಯರುಗಳು ತಮ್ಮ ತಮ್ಮ ಬುದ್ಧಿ ಮತ್ತು ಅನುಭವಗಳನ್ನು ಏಕತ್ರಗೊಳಿಸಿ ದೊಡ್ಡ ದೊಡ್ಡ ಗ್ರಂಥಗಳನ್ನು ಹೊರಗೆಡಹಿದ್ದಾರೆ. ಅವುಗಳಲ್ಲಿ ಬಹು ವಿಧದ ವಿಧಾನಗಳನ್ನು ತೋರಿಸಿದ್ದಲ್ಲದೆ, ಸಾಧ್ಯವಾದಷ್ಟು ಆಚರಿಸಿಯೂ ತೋರಿಸಿದ್ದಾರೆ. ಪರಂತು ಸತ್ಯ ಸಿದ್ಧಾಂತದ ರಕ್ಷಣೆಯನ್ನು ಮಾಡುವುದು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯವಾಗಿರುವುದು. ಇದನ್ನು ಸ್ವೀಕಾರ ಮಾಡುವುದಾದರೆ ಜಗತ್ತಿನಲ್ಲಿ ಇದುವರೆಗೆ ಆವಿಷ್ಕಾರವಾಗಿರುವ ಎಲ್ಲಾ ಸಂಸ್ಕೃತಿಗಳಲ್ಲಿ ಮತ್ತು ವ್ಯವಸ್ಥೆಗಳಲ್ಲಿ, ಆರ್ಯ ಸಂಸ್ಕೃತಿಯು ಸಂಶೋಧನೆಯೇ ಅತ್ಯಂತ ಮಹತ್ವಪೂರ್ಣವೂ ವೈಜ್ಞಾನಿಕವೂ ಆಗಿರುವುದು ಎಂಬುದನ್ನು ಮುಕ್ತಕಂಠದಿಂದ ಒಪ್ಪಬೇಕಾಗುತ್ತದೆ. ಈಗಿನ ವಿಕಾಸಮಯ ಯುಗದಲ್ಲಿ ಅಂದಿನ ಹಳೆಯ ಪದ್ಧತಿಗಳು ಅಷ್ಟೊಂದು ರುಚಿಕರವಾಗಿ ಕಂಡುಬರಲಿಕ್ಕಿಲ್ಲವೆಂಬುದು ನಿಜ. ಪರಂತು ಇದರಿಂದ ಅವರ ಮೌಲ್ಯವಾಗಲೀ ಅದನ್ನು ನಿರ್ಮಿಸಿದವರ ದೂರದರ್ಶಿತೆಯಾಗಲೀ ನಾಶವಾಗಲಿಕ್ಕಿಲ್ಲವೆಂಬುದು ನಿಸ್ಸಂದೇಹ. ಅಥವಾ ವಿಚಾರಪೂರ್ವಕ ಮತ್ತು ಪ್ರಯತ್ನಸಹಿತ ಅದರಂತೆ ವರ್ತಿಸಿದರೆ ನಿಜವಾಗಿಯೂ ಅದರ ಉಚ್ಚತ್ವವು ಮನಗಾಣಿಸದಿರದು.

ದಾಂಪತ್ಯ ಜೀವನದ ಕುರಿತು ಆರ್ಯ ಸಂಸ್ಕೃತಿಯ ಆಚಾರ್ಯರು ಯಾವ್ಯಾವ ಅನುಪಮ ವಿಧಾನಗಳನ್ನು ಸಿದ್ಧಗೊಳಿಸಿದ್ದರೋ ಅವೆಲ್ಲವೂ ಆ ಸಮಯದಲ್ಲಿ ಬರೇ ಹಿಂದೂಸ್ಥಾನದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ಸಾಹಿತ್ಯಗಳಲ್ಲಿ ಸರ್ವೋತ್ಕೃಷ್ಟ ಸ್ಥಾನಗಳನ್ನು ಪಡೆದವು. ಆರ್ಯ ಸಂಸ್ಕೃತಿಯೊಡನೆ ಲೋಕದಲ್ಲಿ ಇತರ ಅನೇಕ ಸಂಸ್ಕೃತಿಗಳು ಉದಯವಾದವು. ಪರಂತು ದಾಂಪತ್ಯ ಜೀವನದ ಕುರಿತು ಇಂಥಾ ಮಧುರ ವಿವೇಚನೆಯು ಅನ್ಯತ್ರವೆಲ್ಲಿಯೂ ಕಂಡುಬರುವುದಿಲ್ಲ. ಆರ್ಯಸಂಸ್ಕೃತಿಯು ದಾಂಪತ್ಯ ಜೀವನದಲ್ಲಿ ಸ್ತ್ರೀಯರನ್ನು "ಗೃಹಲಕ್ಷ್ಮಿ" ಎಂಬಭಿದಾನದಿಂದ ಚಿತ್ರಿಸಿದೆ. ನಮ್ಮ ಸಾಮಾಜಿಕ ಗೃಹಗಳ ಸುಖ, ಶಾಂತಿ, ಆನಂದ, ದುಃಖ, ಸಂಪತ್ತು ವಿಪತ್ತು ಎಲ್ಲವೂ ಈ ಗೃಹಲಕ್ಷ್ಮಿಯವರ ಯೋಗ್ಯತೆಯ ಮೇಲೆಯೇ ನಿರ್ಭರವಾಗಿರುತ್ತದೆ. ಯಾವ ಗೃಹದ ಗೃಹಿಣಿಯು ಚತುರಳೂ, ಸದ್ಗುಣಸಂಪನ್ನೆಯೂ ಲಕ್ಷಣವಂತೆಯೂ ಆಗಿರುವಳೋ ಆ ಗೃಹದಲ್ಲಿ ಯಾವಾಗಲೂ ಸರ್ವ ವಿಧದ ಆನಂದಗಳೂ ಸುಖಸಂಪತ್ತುಗಳೂ ಮೆರೆಯುವುವು. ಪುರುಷರು ಸಮಾಜದ ಬಾಹ್ಯಜೀವನದ ಸರ್ವಾಧಿಕಾರಿಗಳಾಗಿರುವಂತೆ ಮಹಿಳೆಯರು ಸಮಾಜದ ಅಂತರ್ಜೀವನದ ರಾಣಿಗಳಾಗಿರುತ್ತಾರೆ.

ಈ ವಿಧದ ಉತ್ತಮವಾದ ಆದರ್ಶಗಳು ನಮ್ಮ ಸಂಸ್ಕೃತಿಯಲ್ಲಿದ್ದರೂ ನಮ್ಮ ದಾಂಪತ್ಯ ಜೀವನದಲ್ಲಿ ಬಹಳವಾದ ನಿರ್ಬಲತೆಗಳು ತುಂಬಿಹೋಗಿವೆ. ನಮ್ಮಲ್ಲಿ ಸಾಮಾಜಿಕ ವ್ಯವಸ್ಥೆಗಳೆಲ್ಲವೂ ಪುರುಷರ ಸರ್ವಾಧಿಕಾರಗಳಿಂದಲೇ ಆಗುತ್ತಿವೆ ಹೊರತು ಅವುಗಳಲ್ಲಿ ಸ್ತ್ರೀಯರ ಯಾವಭಿಪ್ರಾಯವನ್ನೂ ಕೇಳುವವರಿಲ್ಲದೆ ಹೋದುದರಿಂದಲೇ ಇಂಥಾ ನಿರ್ಬಲತೆಗಳುಂಟಾಗಲಿಕ್ಕೆ ಕಾರಣವಾಯಿತು. ದಾಂಪತ್ಯ ಜೀವನದ ವ್ಯವಸ್ಥೆಗಳೂ ಪುರುಷರ ಇಚ್ಛಾನುಸಾರ ಮಾಡಲ್ಪಡಹತ್ತಿದುವು. ಆಗ ಮಹಿಳೆಯರ ಮನೋಭಾವನೆಗಳನ್ನು ತಿಳಿದುಕೊಳ್ಳಲು ಯಾರೂ ಪ್ರಯತ್ನಿಸಲಿಲ್ಲ. ಪುರುಷ ಸಮಾಜವು ಸ್ತ್ರೀಯರನ್ನು, ತಮ್ಮ ಆವಶ್ಯಕತೆಗಳ ಪೂರ್ತಿಯ ಸಾಧನೆಗಳೆಂಬದಾಗಿ ಭಾವಿಸಿ ಅವರ ಮೇಲೆ ತನ್ನ ಅಧಿಕಾರ ಪಿಪಾಸೆಯನ್ನು ಪಸರಿಸ ತೊಡಗಿತು. ಒಬ್ಬ ಕಳ್ಳನ ಅಧಿಕಾರದ ಮುಖಾಂತರ ಕಳ್ಳತನದ ವಿರುದ್ಧವಾಗಿ ಮಾಡಿದ ಕಾನೂನು ಅಥವಾ ವ್ಯಭಿಚಾರೀ ಮನುಷ್ಯನಿಂದ ಕೊಡಲ್ಪಟ್ಟ ಬ್ರಹ್ಮಚರ್ಯದ ಬೋಧನೆಯಲ್ಲಿ ಎಷ್ಟು ನೈತಿಕ ಬಲವಿದೆಯೋ ಅಷ್ಟೇ ಪುರುಷಸಮಾಜವು ಸ್ತ್ರೀಯರ ಮೇಲೆ ಮಾಡಿಟ್ಟ ವ್ಯವಸ್ಥೆಗಳಲ್ಲಿದೆ. ಈ ವ್ಯವಸ್ಥೆಗಳು ಪುರುಷರಿಗೆ ಬಹುವಿವಾಹ, ವಿಧುರವಿವಾಹ, ಆದಿಗಳಲ್ಲಿ ಸಂಪೂರ್ಣ ಅಧಿಕಾರ ಕೊಡುವುವಲ್ಲದೆ ಸ್ತ್ರೀಯರ ಮೇಲೆ ಅಖಂಡ ಪಾತಿವ್ರತ್ಯ, ಅನಂತವೈಧವ್ಯದ ಕೊಡಲಿಯನ್ನು ಬಲವಾಗಿ ಪ್ರಯೋಗಿಸುತ್ತದೆ. ಇಂತಹ ಅಧಿಕಾರದರ್ಪವನ್ನು ಸಹಿಸಲಾರದೆ, ಸ್ತ್ರೀಸಮುದಾಯವು ಉದ್ವಿಗ್ನತೆಯನ್ನು ತಾಳಿ ಪುರುಷ ಸಮುದಾಯಕ್ಕೆ ಪ್ರತೀಕಾರವನ್ನು ಮಾಡದಂತೆ ಮಹಿಳೆಯರನ್ನು ಮೊದಲೇ ವಿದ್ಯೆಯಿಂದ ವಂಚಿಸಿಡಲಾಯಿತು. ಈ ವಿಧದ ವ್ಯವಸ್ಥೆ ಮತ್ತು ವಿಧಾನಗಳಿಗೆ ಯಾವ ವಿಧದ ನೈತಿ-ಸಮರ್ಥನೆಯಾಗುತ್ತದೆಂಬುದು ಪ್ರತಿಯೊಬ್ಬ ವಿಚಾರಶೀಲ ಪುರುಷರಿಗೆ ಮಂದಟ್ಟಾಗದಿರದು.

ಇಲ್ಲಿ ನಾವು "ಕರ್ತವ್ಯ ನಿಷ್ಠೆ" "ಕರ್ತವ್ಯದ ದಾಸತ್ವ" ಎಂಬ ಶಬ್ದಗಳ ತಾತ್ವಿಕ ವ್ಯಾಖ್ಯಾನಗಳ ಕುರಿತು ಸ್ವಲ್ಪ ಆಲೋಚಿಸುವುದು ಅತ್ಯಗತ್ಯ. ಯಾವ ಕರ್ತವ್ಯದಿಂದ ಯಾವುದಾದರೊಂದು ವಿಧದ ನೈತಿಕ ಸಮರ್ಥನೆಯಾಗುತ್ತದೋ ಆ ಕರ್ತವ್ಯದ ಪಾಲನೆಯು "ಕರ್ತವ್ಯ ಪೂಜೆ" ಅಥವಾ "ಕರ್ತವ್ಯ ನಿಷ್ಠೆ"ಯೆನ್ನಲ್ಪಡುವುದು. ಯಾವುದರ ಹಿಂದೆ ಯಾವ ವಿಧದ ನೈತಿಕ ಸಮರ್ಥನೆಯೂ ಇಲ್ಲದೆ ಕೇವಲ ಧನ ಬಲ, ಅಧಿಕಾರ ಬಲದಿಂದ ಆ ಸಹಾಯದ ಮೇಲೆ ಸಂಪೂರ್ಣ ಅಧಿಕಾರವನ್ನು ಹೊರಿಸುವಂಥಾ ಸಿದ್ಧಾಂತವಿದೆಯೋ ಅದು ಬಾಹ್ಯರೂಪದಲ್ಲಿ ಎಷ್ಟು ಮನೋಹರವಾಗಿದ್ದರೂ "ಕರ್ತವ್ಯದ ದಾಸತ್ವ"ವೆಂದು ಕರೆಯಲ್ಪಡುವುದು. ಕರ್ತವ್ಯನಿಷ್ಠೆಯಿಂದ ಪುರುಷರ ಪುರುಷತ್ವವು ವಿಕಾಸವಾಗುವುದಲ್ಲದೆ ಮಹಿಳೆಯರ ಸ್ತ್ರೀತ್ವವೂ ಪ್ರಸ್ಫುಟಿತವಾಗುತ್ತದೆ. ಇದರಿಂದ ನಾವು ಮನುಷತ್ವವನ್ನು ತ್ಯಜಿಸಿ ದೇವತ್ವವನ್ನು ಪಡೆಯುತ್ತೇವೆ. ಕರ್ತವ್ಯ ಪೂಜೆಯಿಂದ ನಮ್ಮಲ್ಲಿ ಉತ್ಸಾಹವೂ, ಮನೋಬಲವೂ, ಆನಂದವೂ, ಸಹಿಷ್ಣುತೆಯೂ ಹೆಚ್ಚುತ್ತದೆ. ಪರಂತು ನಾವು ಕರ್ತವ್ಯದ ದಾಸರಾದರೆ (ಕರ್ತವ್ಯಕ್ಕಾಗಿ ಬಂಧಿಸಲ್ಪಟ್ಟರೆ) ಮನುಷತ್ವವು ನಷ್ಟವಾಗುತ್ತದೆ. ಈ ಸಮಯದಲ್ಲಿ ನಾವು ಬ್ರಿಟಿಷ ಸರಕಾರದ ಕಾನೂನಿನ ವಿರುದ್ಧವಾಗಿ ಸತ್ಯಾಗ್ರಹ ಮತ್ತು ಅಸಹಕಾರವನ್ನು ಏತಕ್ಕಾಗಿ ಮಾಡುವುದು? ಈ ಕಾನೂನಿನಲ್ಲಿ ಯಾವ ವಿಧದಲ್ಲಿಯೂ ನೈತಿಕ ಸಮರ್ಥನೆ ಇದೆಯೇ? ಇದರಿಂದ ಭಾರತೀಯ ಜನಾಂಗಕ್ಕೆ ಯಾವ ಸುಖವೂ ಜನ್ಮ ಜನ್ಮಾಂತರದಲ್ಲಿಯೂ ದೊರೆಯಲಾರದು. ಇಂಥಾ ಕಾನೂನನ್ನು ಪೂಜಿಸುವುದೆಂದರೆ (ಅನುಸರಣೆ ಮಾಡುವುದೆಂದರೆ) ಕರ್ತವ್ಯದ ಗುಲಾಮರಾಗುವುದು. ಪ್ರಾಚೀನಾರ್ಯ ಸಿದ್ಧಾಂತದಂತೆ "ರಾಜಾ ಪ್ರತ್ಯಕ್ಷ ದೇವತಾ" ಎಂಬುದನ್ನೇ ಬಿಗಿ ಹಿಡಿದು ಎಲ್ಲಾ ಕಾನೂನುಗಳನ್ನು ಸಹಿಸುತ್ತಾ ಬಂದರೆ, ಕ್ರಮೇಣ ನಾವೆಲ್ಲರೂ ಪಶು ಸಮಾನರಾಗುವೆವು. ಕಾರಣವೇನೆಂದರೆ, ಪ್ರಾಚೀನ ಕಾಲದಲ್ಲಿದ್ದಂಥಾ ಆದರ್ಶ ಸರಕಾರವಾಗಲೀ ರಾಜರಾಗಲೀ ಈಗಿನ ಕಾಲದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ.

(ಬರುವ ಸಂಚಿಕೆಯಲ್ಲಿ ಕೊನೆಗೊಳ್ಳುವುದು)

## ವಾರ್ತಾವಳಿ.

ಸಪ್ರೂರವರು ವೈಸರಾಯರ ಭೇಟಿ ಮಾಡಿ ಕಳೆದ ವಾರ ಹಿಂತಿರುಗಿದರು. ಗಾಂಧಿಜೀಯವರ ಬಿಡುಗಡೆಗಾಗಿ ಸಪ್ರೂರವರು ಬೇಡಿರಬಹುದೆಂದು ಊಹೆ! ಸರ್ ಸಪ್ರೂಗಳಂತಹವರ ಬೇಡಿಕೆಯು ನೀರ ಮೇಲಿನ ಹೋಮವಾದರೆ ಮತ್ತೇನಾಗಿಯಿತು?

ಸಿಲೋನಿನ ನೇಶನಲ್ ಹೆಲ್ತ್ ಎಸೋಸಿಯೇಶನಿನವರು ಆರೋಗ್ಯ ಸಂಬಂಧವಾಗಿ ಬಹಳ ಪ್ರಯತ್ನಗಳನ್ನು ಮಾಡುತ್ತಿದ್ದು ಕಳೆದ ವಾರ ದೇವಾಲಯ, ದೇವಸ್ಥಾನ, ಪೇಟೆ ಪಟ್ಟಣ, ಹಳ್ಳಿಪಳ್ಳಿ, ಶಾಲಾ ಕೋಲೇಜುಗಳಲ್ಲಿ ಆರೋಗ್ಯ ದಿನವನ್ನಾಚರಿಸಿ ಆರೋಗ್ಯದ ಮಹತ್ವವನ್ನು ಊರಲ್ಲೆಲ್ಲಾ ಸಾರಿದರು. 'Glorify God in your Body' ಎಂದೇ ಅವರ ಅರಿಕೆ. ಇಂತಹ ದಿನಾಚರಣೆಗಳಿಂದ ಆರೋಗ್ಯದ ಮಹತ್ತಿಕೆಯು ಹೆಚ್ಚದಿರದು.

ರಶ್ಯದಲ್ಲಿ ವಿದ್ಯಾ ಸಂಬಂಧ ಸತ್ಕಾರ್ಯಗಳನ್ನೆಸಗಿದುದಕ್ಕಾಗಿ ೧೫ ಮಂದಿ ಸ್ತ್ರೀಯರಿಗೂ, ಬೇಸಾಯ ಸಂಬಂಧವಾಗಿ ಶ್ಲಾಘ್ಯ ಕೆಲಸಗಳನ್ನು ಮಾಡಿದುದಕ್ಕಾಗಿ ೧೭ ಮಂದಿ ಸ್ತ್ರೀಯರಿಗೂ ಓರ್ಡರ್ ಒಫ್ ಲೆನಿನ್, ಓರ್ಡರ್ ಒಫ್ ಲೇಬರ್ ರೆಡ್ ಬೆನ್ನರ್ ಪದವಿಯೂ ದೊರೆತಿವೆ. ನಮ್ಮ ಸ್ತ್ರೀಯರು ಏನು ಮಾಡಿದರೆ ಏನು ದೊರೆಯುತ್ತದೆ?

ಮುಂಬಯಿಯಲ್ಲಿ ಕಳೆದ ೯ ವರ್ಷಗಳಿಂದ ಕರ್ನಾಟಕ ಮಾತೆಯ ಸೇವೆಯನ್ನು ಉಜ್ವಲ ರೀತಿಯಿಂದ ಮಾಡುತ್ತ ಬರುತ್ತಿದ್ದ "ಕಾನಡಾ ಧುರೀಣ Kanarese Leader" ಪತ್ರಿಕೆಯು ಆರ್ಥಿಕ ದೆಸೆಯಿಂದ ಸದ್ಯಕ್ಕೆ ನಿಂತಿದೆಯಾಗಿ ವಿಷಾದ ವಾರ್ತೆ. ಇಂತಹ ಉತ್ತಮ ಪತ್ರಿಕೆಗಳನ್ನು ಕಳೆದುಕೊಂಡುದರಿಂದ ಕನ್ನಡಿಗರು ತಲೆಯನ್ನೆತ್ತಿ ನಡೆಯಬೇಕೋ ಬಗ್ಗಿಸಿಯೋ?

ದೇಶದಲ್ಲೆಲ್ಲಾ ಪ್ರಖ್ಯಾತವಾದ ಜೆನಿಥ್ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇದರ ೧೯೩೨ರ ವರ್ಷಾವಧಿ ಲೆಖ್ಖಾಚಾರವಾಗಿದ ಕಳೆದ ವರ್ಷ ರೂ ೫೯,೧೯೦೦೦ದ ಹೊಸ ವ್ಯವಹಾರಗಳು ಈ ಕಂಪೆನಿಗೆ ದೊರೆತುವು. ಒಟ್ಟು ಆದಾಯವು ರೂ ೪,೬೬,೩೫೫ ಆಯಿತು. ಕಳೆದ ವರ್ಷ ಲೈಫ್ ಫಂಡುಗಳು ೩,೮೮,೦೯೭ರಷ್ಟು ಹೆಚ್ಚಿದುವು. ರೇವಣಾತಿಗಳು ೧,೫೧,೯೪೯ರಷ್ಟು ಹೆಚ್ಚಿದುವು. ಆಸ್ತಿಯು ೧,೫೫೫೮೮ರಷ್ಟು ಹೆಚ್ಚಿತು. ೬೩ ಲಕ್ಷಗಳಿಗಿಂತ ಹೆಚ್ಚಿನ ಹೊಸ ವ್ಯಾಪಾರವು ನಡೆದಿದೆ. ಆರ್ಥಿಕ ಸಂಕಷ್ಟದ ಈ ದಿನದಲ್ಲೂ ಇಂತಹ ಆನಂದಜನಕ ಪ್ರಗತಿಯೆಂದರೆ, ಕಂಪೆನಿಯ ಔನ್ನತ್ಯವು ಇದರಿಂದ ತಿಳಿದುಬರುತ್ತದೆ.

ವರ್ಣಾಶ್ರಮ ಸ್ವರಾಜ್ಯ ಸಂಘದವರು ಒಂದು ಆಂಗ್ಲ ದೈನಿಕ ಪತ್ರಿಕೆಯನ್ನು ಹೊರಡಿಸುವುದಕ್ಕಾಗಿ ೧೦,೦೦೦ ರೂಪಾಯಿಯನ್ನು ನ್ಯೂಡಿಲ್ಲಿಯಲ್ಲಿ ಬೇರ ಪೆಟ್ಟಿಗೆಯಲ್ಲಿ ಹಾಕಿ ಪ್ರತ್ಯೇಕಿಸಿಟ್ಟಿರುವರು. ದೇಶದಲ್ಲಿ ನಡೆಯುವ ಅಸ್ಪೃಶ್ಯತಾ ನಿವಾರಣಾ ಚಳವಳಿದ ದಮನಕಾರ್ಯಕ್ಕಾಗಿ ಈ ಯತ್ನ! ಇಷ್ಟು ಹಣವನ್ನು ಈ ದಿನದಲ್ಲಿ ಈ ರೀತಿ ವ್ಯಯಿಸುವುದಕ್ಕಿಂತ ಬೇರೆ ಸುಧಾರಣಾ ಕೆಲಸಗಳಿಗುಪಯೋಗಿಸಬಹುದಲ್ಲಾ?

ಗಾಂಧಿಜೀಯವರ ಬಿಡುಗಡೆಯ ಪ್ರಸ್ತಾಪವು ಸದ್ಯಕ್ಕಿಲ್ಲವೆಂದೂ, ಅದು ಒಂದು ವೇಳೆ ಮೇಲೆ ಬಂದರೆ ಆಗೋಸ್ತು ತಿಂಗಳಲ್ಲಿ ಬರಬಹುದೆಂದೂ ವಾರ್ತೆ. ಒಂದು ಕಡೆಯಿಂದ ದಾನ ಇನ್ನೊಂದು ಕಡೆಯಿಂದ ದಮನ!

ಶ್ವೇತಪತ್ರದ ನಕಲು ಒಂದನ್ನು ಗಾಂಧಿಜೀಯವರಿಗೆ ಕಳುಹಿಸಲಿಲ್ಲವಾಗಿ ನ್ಯೂಡಿಲ್ಲಿಯಲ್ಲಿ ಸರ್ ಹರ್ರಿ ಹೈಗರು ಹೇಳಿದರು. ಸರಕಾರದ ಶ್ವೇತಪತ್ರವು ಸ್ವೀಕೃತವಾಗಬೇಕಾದರೆ ಗಾಂಧಿಜೀಯವರು ಅತ್ಯಗತ್ಯ! ಆದರೂ ಅವರಿಗೆ ಒಂದು ನಕಲನ್ನು ಕಳುಹಿಸಲಿಲ್ಲ!

### ಸೂಚನೆ

ತಾರೀಖು ೧೯ನೇ ದಿನ ನಾವು ಪ್ರಕಟಿಸಿದ ಶ್ವೇತಪತ್ರ ವಿಶೇಷ ಸಂಚಿಕೆಯನ್ನು ನಮ್ಮ ಪಂಪೂರ ವಾಚಕರ ವಾಚನದ ಸಲುವಾಗಿ ಇದರೊಡನೆ ಇಟ್ಟಿದ್ದೇವೆ.

ಸಂ. ಸ್ವ.

+ + + +

# ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!




ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮುವಿನಿಂದ ಪಾರುಮಾಡಿಯದೆ. ಮಹದುಪಾಯಕರವಾದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ ಕೂಮಿನ್' ಇದು ದಿವ್ಯಔಷಧವಾಗಿದೆ

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು

# 56 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಹ ತುಂಬಿಕೊಳ್ಳುವುದು ಡಬ್ಬಿ ಕ್ಕೆ ರೂ 2-8-0 3ಕ್ಕೆ ರೂ 7

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲಿನ ಸಿದ್ಧೌಷಧ ಬಾಟ್ಲಿ ರೂ 1-?-0 1 ಡಬ್ಬಿ ಮಾತ್ರೆಗೆ ರೂ 1 ? ? 2 ಬಾಟ್ಲಿ ಔಷದಕ್ಕೂ ರೂ 4 ?

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ ಬಾಟ್ಲಿ ಕ್ಕೆ 0-10-0 3ಕ್ಕೆ 1-12-0

(ಸ್ತ್ರೀ ವಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ದೂರವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರಗೆ ಅಹ 3 4ನೇ ದಿವಸ ಸಂದ ದಶಮೂಲ ಬೆಲೆ ಬಾಟ್ಲಿ 1ರ ರೂ 1-8 . 3 ಬಾಟ್ಲಿಗಳಿಗೆ ರೂ 3

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ। ಶ್ರೀನಿವಾಸ ಪೈಯವರ ಶೋಪಿನಲ್ಲಿ ಸಿಗುತ್ತವೆ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

# ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು

ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸರಿಯಷ್ಟೆ ಈಗ 11—12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ವಿಕರಿಗೆ ಸಿದ್ಧವಾಗಿದೆ ಹಿಂದಣ ಗ್ರಾಹಕ ಮಹಾಶಯರು ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

| | | |
|---|---|---|
| 1ನೇಯ ಸಂಪುಟ | (1-2ನೇ ಸ್ಕಂಧಗಳು) | 3-4-0 |
| 2 ,, | ,, (3ನೆಯ ಸ್ಕಂಧ) | 3-12-0 |
| 3 ,, | ,, (4 ,, ) | 3-8-0 |
| 4 ,, | ,, (5-6ನೇಯ ಸ್ಕಂಧಗಳು) | 4-0-0 |
| 5 ,, | ,, (7 8, 9 ಸ್ಕಂಧಗಳು) | 5-8-0 |
| 6 ,, | ,, (ದಶಮ ಪೂರ್ವಭಾಗ) | 5-0-0 |
| 7ನೆಯ ಸಂಪುಟ | (ದಶಮ ಉತ್ತರಭಾಗ) | 4-8-0 |
| 8 ,, | ,, (11, 12ನೆಯ ಸ್ಕಂಧಗಳು ಪೀಠಿಕೆ ಸಹಿತ) | 4-8-0 |
| ಶ್ರೀ ಭಾಗವತ ಪುರಾಣ ವಿಮರ್ಶೆ ಮಾತ್ರ | | 0-8-0 |
| ಕರ್ನಾಟಕ ಮುದ್ರಾರಾಕ್ಷಸ ನಾಟಕ (ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟುದು) | | 1-4-0 |

ಈ ಬೆಲೆಗಳಿಗೆ ಟಪ್ಪಾಲು ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಕೋ-ಓಪರೇಟಿವ್ ಸೊಸಾೈಟಿಗಳಿಗೆ
ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ, ೮೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೊಕಿಸ್ಟ್ ಶಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಕ್ಷಯಕ್ಷೀಣಾದಿಗಳಿಗೆ
## ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ
## ದಶಮೂಲಾರಿಷ್ಟ.
(ಸ್ತ್ರೀ ವಿಶ್ರಣ)

ಸಮಸ್ತ ವಾತರೋಗಗಳಿಗೆ
## ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಹಂಪನಕಟ್ಟೆ ರಸ್ತೆ, ಮಂಗಳೂರು.

THE SOUTH INDIA
CO-OPERATIVE INSURANCE SOCIETY,
LIMITED MADRAS

**LOCAL BOARD:—**

THE SOUTH CANARA CENTRAL CO-OPERATIVE BANK, LTD, MANGALORE.

Applications are invited for Sub Agents from capable and energetic persons and Co-operative Institutions to canvass business on behalf of the Local Board of the Society at Mangalore

*FOR TERMS APPLY TO—*

***The Secretary,***

South Canara Central Co-operative Bank, Ltd , KODIALBAIL P. O. (Mangalore)
*SOUTH CANARA*

ಮಾರಾಟಕ್ಕಿವೆ ಮಾರಾಟಕ್ಕಿವೆ!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ
## ಚಕ್ ರೋಲ್ ಗಳು
ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ, ಇತರ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.


EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಮುಂಗಡ ನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 3–0–0 ಅಂಚೆ ಸಹಿತ ರೂಪಾಯಿ 2–13–0.

# ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಂಗದರಿಂ । ಹರುಷವಾಯಿತೆ! ಮತ್ತೆ ವಿಷವ ಸ್ಫುಡುತ ಬರುತಿರುವ ॥

ಗರಲಕೆಪರಂಜಿದರೆ! ಸುಧೆಯನು । ನುರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೭. ಮಂಗಳೂರು ತಾ ೩೧ನೇ ಶುಕ್ರವಾರ ಮಾರ್ಚಿ ೧೯೩೩ (31 –3 – 33) ಸಂಚಿಕೆ ೧೩


## THE CANARA BANKING CORPORATION, UDIPI, LTD.
## ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

**Head office:—UDIPI.** **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:— ಉಡುಪಿ. ಶಾಖೆ:- ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Subscribed & Called up Rs. 2,25,000.

ನಿಯಮಿತ ಮೂಲಧನ ರೂ. 3,50,000. ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 28TH FEBRUARY, 1933.

| | CAPITAL AND LIABILITIES. | | | PROPERTY AND ASSETS | |
|---|---|---|---|---|---|
| 1 | Paid up Capital | Rs. 2,25,000-0-0 | 1 | Premises, Building, Furniture etc. | Rs. 65,906 12- 6 |
| 2 | Reserve and other funds | „ 2,35,000-0-0 | 2 | Government securities | „ 2,95,088- 4- 9 |
| 3 | Deposits | „ 21,34,829-15 3 | 3 | Authorised Investments | „ 22,21,154- 9- 4 |
| 4 | Due to Bankers | „ 65,571- 0-6 | 4 | Bills for collection | 4,194- 7- 0 |
| 5 | Sundries | „ 53,129 11 7 | 5 | Sundries | „ 32,392 10 4 |
| 6 | Bills for collection per contra | 4,194- 7-0 | 9 | Cash in hand & with bankers. | „ 1,00,983-15 2 |
| | Total | 27,17,725- 2-4 | | Total | 27,17,725- 2-4 |

UDIPI, 4-3-'33.

**N. ANANDA RAO,**
*Secretary & Manager.*





(Regd.)

## ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಣ್ಣುಕೂಡುವ ವಾತ, ಭಾರಿ ನೋವು, ವಿಶೇಷ ಕುಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮುರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲಿಲ್ಲಿಯೂ ಮಾರಲ್ಪಡುತ್ತದೆ.

**ರಿಂಗ್‌ವರ್ಮ್ ಮುಲಾಮು**— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ನೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3–8–0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.



ಸಣ್ಣ ಹುಡುಗರ ಸಲುವಾಗಿ,

## ಡೋಂಗರೆ

ಇವರ

## ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪನಿ.
ಗಿರಗಾಂವ, ಮುಂಬಯಿ ನಂ. 4.

ಏಜೆಂಟರು ಶಾ ಕಂಪೆನಿ, ಮಂಗಳೂರು.



INSURE WITH
**The Popular Insurance Co. Ltd.**
Head Office:-MANGALORE, S. India.
**First of its kind in the West Coast.**

CHAIRMAN:
***Dewan Bahadur N. Subba Rao.***

*STRIKING FEATURES*

**Policy Conditions Liberal!**
**Claims Settlement Prompt!**

MANAGEMENT PURELY INDIAN.

**Ensure the Absolute Safety, Comfort and Happiness of your Dear Ones.**

WANTED INFLUENTIAL AGENTS.
LIBERAL TERMS TO COMPETENT MEN.

*For further particulars apply to the Head Office.*

ದಣುವನ್ನಾರಿಸಿ ಸ್ನಾಯುಗಳನ್ನು
ಬಲಪಡಿಸುತ್ತದೆ.

ನಿಮ್ಮ ನರಗಳು ನಿಮಗೆ ಬಾಧೆಕವನ್ನುಂಟುಮಾಡುತ್ತಿದೆಯಾದರೆ, ನಿಮಗೆ ನಿದ್ರೆಯು ಬರುವುದಿಲ್ಲವಾದರೆ, ಅಥವಾ ವಿಶ್ರಾಂತಿಯು ಸಿಗುವುದಿಲ್ಲವಾದರೆ, ನೀವು 'ಓವಲ್ಟಿನ್'ನ್ನು ಕುಡಿಯಬೇಕು.

ಓವಲ್ಟಿನ್ನು ನರಗಳಿಗೆ ಅವಶ್ಯವಿರುವ ಪೋಷಣೆಯನ್ನೀಯುತ್ತದೆ. ಈ ಪಾನೀಯವು ಅವುಗಳನ್ನು ಆರೋಗ್ಯದಾಯಕವಾಗಿ ಮಾಡಿ, ಅವುಗಳು ಮುಂದಕ್ಕೆ ಹಾನಿಯನ್ನುಂಟುಮಾಡದಂತೆ ಮಾಡುತ್ತದೆ. ರಾತ್ರಿಯಲ್ಲಿ ಒಂದು ಕಪ್ ರುಚಿಕರವಾದ ಓವಲ್ಟಿನ್ನು ವಿಶ್ರಾಂತಿಕರ ನಿದ್ರೆಯನ್ನು ಕೊಡುತ್ತದೆ.

ಪ್ರಕೃತಿಯ ಟೋನಿಕ್ ಆಹಾರಗಳಿಂದಲೇ 'ಓವಲ್ಟಿನ್'ನ್ನು ತಯಾರಿಸಲಾಗಿದೆ. ಇದಕ್ಕೆ ಬೇಳೆ ಬಾರ್ಲಿ ಮೇಲ್ಟ್, ದನದ ದಪ್ಪ ಹಾಲು, ಕೊಕ್ಕೊಗಳನ್ನುಪಯೋಗಿಸಿದೆ. ಇದು ಪ್ರಕೃತಿಸಿದ್ಧವಾದ ಒಳ್ಳೇ ಟೋನಿಕ್ ಆಹಾರ. ಇದನ್ನು ತಯಾರಿಸುವಾಗ ಹಸ್ತಸ್ಪರ್ಶವಾಗುವುದಿಲ್ಲ.

OVALTINE
TONIC FOOD BEVERAGE

ವಿಶ್ರಾಂತಿಕರ ಮತ್ತು ಸ್ವಭಾವಸಿದ್ಧ ನಿದ್ರೆಯನ್ನು ಕೊಡುತ್ತದೆ.

ಬಜಾರದ ಎಲ್ಲಾ ಕೆಮಿಸ್ಟರುಗಳಲ್ಲಿಯೂ ದೊರೆಯುತ್ತದೆ.

ಏಜಂಟರು— ಜೇಮ್ಸ್‌ರ್ಯಾಟ್, 85ಎ. ಕ್ಲಿವ್ ಸ್ಟ್ರೀಟ್, ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸ್, ರಂಗೂನುಗಳಲ್ಲಿ.

OV/139


## ಪಂಚಮಂ ಕಾರ್ಯಸಿದ್ಧಿ.

ಅಹಾ! ಅಹಾ! ಏನು ಹೇಳುವುದು? ಮೊನ್ನೆ ಹೊರಟ ಶ್ವೇತ ಪತ್ರದ ಸ್ವರೂಪವನ್ನು ಚತುರ್ದಿಕ್ಕುಗಳಲ್ಲೂ ಹೊಗಳಲಾರಂಭವಾಗಿದೆ! ಹಾ! ಏನು ಹೊಗಳಿಕೆ! ಬಿಳಿಯವರ ಸಂಪೂರ್ಣ ಗುಟ್ಟು—ಬರಹ ಈ ಬಿಳೀ ಕಾಗದದಲ್ಲಿ ಅಡಕವಾಗಿದೆಯೆಂದೇ ಎಲ್ಲರ ಟೊಪ್ಪಿ!

× × × ×

ಕೆಲವು ಆಂಗ್ಲೋ ಇಂಡಿಯನ್ ಪತ್ರಿಕೆಗಳೂ, ಬ್ರಿಟಿಷರ ಪೋಷಣೆಯಲ್ಲಿರುವ ಕೆಲ ಹಿಂದೀ ಲಂಡನ್ ಜನರೂ ಇದನ್ನು ಶ್ಲಾಘಿಸುತ್ತಿದ್ದಾರೆ ಹೊರತು, ಮತ್ತ್ಯಾರೂ ಕಾಣೆ!

× × × ×

ಪಾಪ! ಈ ಬ್ರಿಟಿಷರ ಅವಸ್ಥೆ! ಮೂರು ರೌಂಡ್ ಟೇಬಲ್ ಕಡಲಿಗೆ ಲಕ್ಷ ಗಟ್ಟಲೆ ಹಣದ ಮಂಗಳಾರತಿಯಿಂದ ಹೋಮ ಮಾಡಿದರೂ ಫಲವಾಗಲಿಲ್ಲ. ಚತುರ್ಥ ಪರಿಷತ್ತು ಮೇ ಜೂನ್ ತಿಂಗಳಲ್ಲಿ ಕೂಡಹ ಸೇರುವುದು!

× × × ×

ನಾಲ್ಕನೇಯದರಲ್ಲಿ ಜಯವಿಲ್ಲವೆಂದು ನನಗೆ ಖಂಡಿತ ತಿಳಿದಿದೆ. ಒಂದೋ ಒಂದರಲ್ಲೇ ಜಯವಾಗಬೇಕಿತ್ತು! ಅಥವಾ ಮೂರನೇ ಪರಿಷತ್ತಿನಲ್ಲಾದರೂ ಜಯ ಸಿಗಬೇಕಿತ್ತು! ಮೂರನೇಯದರಲ್ಲಿಯೂ ಅಪಜಯವೆಂದರೆ ... ನಾಲ್ಕನೇಯದರಲ್ಲಿಯೂ ಜಯವಿಲ್ಲವೆಂದೇ!

× × × ×

ಅಂತೂ ಪಂಚಮಂ ಕಾರ್ಯಸಿದ್ಧಿ! ನಾಲ್ಕನೆಯ ಪರಿಷದವು ಸೋತ ಮೇಲೆ ಕೊಂಗ್ರೆಸ್ಸಿನವರನ್ನು ಸೇರಿಸಿ ಐದನೇ ಒಂದು ಸಮ್ಮೇಳನವು ಜರಗುವುದು. ಆಗ ಮಾತ್ರ ಜಯವಾದೀತು.

× × + ×

ಐದನೇ ಸಮ್ಮೇಳನವು ಜರಗಬೇಕಾದರೆ ಕೆಲವು ವರ್ಷಗಳು ದಾಟಬಹುದು. ಅಷ್ಟರ ತನಕ ಸಾವಿರಾರು ಭಾರತೀಯರು ಕಷ್ಟದ ರುಚಿಯನ್ನರಿಯಬಹುದು!

× × + × × × ×

ಈ ಸಮ್ಮೇಳನವು, ಈ ರಾಜಿ ಪಂಚಾಯಿತಿ, ಈ ಚಳವಳಿ, ಈ ಕ್ರಾಂತಿಗಳಿಂದ ಸ್ವರಾಜ್ಯವು ದೊರೆಯುತ್ತದೆಂಬ ಮಾತು ತೀರಾ ಸುಳ್ಳು!

× × × ×

ಹಿಂದೀಯರು ತಮ್ಮ ಆಂತರಿಕ ಶುದ್ಧಿಯನ್ನು ಮಾಡಿಕೊಳ್ಳದೆ, ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸ್ಲಿಮ ಭೇದಗಳ ದಮನವಾಗದೆ ಸ್ವರಾಜ್ಯವಿಲ್ಲ!

× × × × + + ×

ಭಾರತ ಸ್ವಾತಂತ್ರ್ಯ ಹೋರಾಟವು ಇಷ್ಟರಲ್ಲೇ ಅಂತ್ಯವಾಗುವುದೆಂಬುದೂ ಸುಳ್ಳು! ಮುಂದಕ್ಕೆ ಮಹಾ ಪ್ರಳಯದಂತಹ ಸುಧಾರಣಾ ಹೋರಾಟವು ನಡೆಯಲಿದೆ! ಚರಿತ್ರೆಯು ಇಷ್ಟರ ತನಕ ಕಾಣದ ವೈಪರೀತ್ಯಗಳು ಆಗಲಿವೆ! ಅದೇ ಸ್ವರಾಜ್ಯದ ಸಂಧಿ!

× × × ×

ಈಗ ಆಗುತ್ತಿರುವುದೆಲ್ಲ ಭಾವೀ ಘಟನೆಗಳ ನೆರಳ ಸೂಚನೆ. ಭಾರತೀಯರೂ ಬ್ರಿಟಿಷರೂ ಈಗ ಮುಂದಿನ ಪರೀಕ್ಷೆಗೆ ಪಾಠ ಕಲಿಯುತ್ತಿರುವರು—ಪರೀಕ್ಷೆಗೆ ಕಾಲವಿದೆ!

× + × ×

ಆ ಹೋರಾಟದ ಸಮಯದಲ್ಲಿ ಮನುಷ್ಯನಿಗೆ ಸ್ವಾತಂತ್ರ್ಯಕ್ಕಿಂತ ಮೇಲೆ ಒಂದು ವಸ್ತುವಿರಲಿಕ್ಕಿಲ್ಲ. ಅದೇ ಅವನ ಪ್ರಾಣದ ಉಸಿರಾಗುವುದು.

ಮನುಷ್ಯನ ಇಷ್ಟು ಕಾಲದ ದಣುವಿನ ಕೆಲವು ಆ ಹೋರಾಟದ ಬೆಂಕಿಯಲ್ಲಿ ಬಿದ್ದು ಸುಟ್ಟು ಬೂದಿಯಾಗಲಿದೆ! ಸರ್ವಜನತಾ ಭಾವ ಮೈತ್ರಿಗಳು ಬೆಳೆದು ಆಗ ಪ್ರಪಂಚದಲ್ಲಿ ಶಾಂತಿಯು ತಲೆದೋರುವುದು.

× × × ×

ಆ ದಿನದಿಂದ ಮೊದಲುಗೊಂಡು ಹಿಂದೂಸ್ಥಾನವು ಸುಸಂಸ್ಕೃತವಾಗುವುದು. ಈ ದೇಶವು ಪುನಃ ನಮ್ಮ ಹಿರಿಯರ ಕಾಲದ ದೇಶವಾಗುವುದು.

× + × ×

ಬ್ರಿಟಿಷರಿಗೂ ಹಿಂದೀಯರಿಗೂ ಮಾತ್ರ ಪಂಚಮ ಪರಿಷತ್ತಿನಲ್ಲಿ ರಾಜಿಯಾದರೂ ಸುಧಾರಣೆಗೂ ಬ್ರಿಟಿಷರಿಗೂ ರಾಜಿಯಾಗದು. ಬ್ರಿಟಿಷ ಸಂಸ್ಕೃತಿ—ಆರ್ಯ ಸಂಸ್ಕೃತಿಗೆ ಕೆಳಗೆ ಕಟ್ಟಾಳಾಗಿ ಮತ್ತೆ ನದು ಗೆಲ್ಲುವುದು.

× + × +

ಗಾಂಧೀ ಕೊಂಗ್ರೆಸ್ಸುಗಳನ್ನು ಸಮಾಧಿಸಿದ ಇನಹ ಯಾವ ಸುಧಾರಣೆಯೂ ಫಲಿಸುವಂತಿಲ್ಲವೆಂಬುದು ಬ್ರಿಟಿಷರಿಗೆ ತಿಳಿದೂ ತಿಳಿಯದ ಸಂಗತಿ! ಅಯ್ಯೋ! ಹೊತ್ತು ಮೂಡಿತು! ಏಳೇಳಿ!

× × × ×

ಚತುರ್ಥ ಪರಿಷತ್ತಿಗೂ ಗಾಂಧೀ ಕೊಂಗ್ರೆಸಿನವರನ್ನು ಕರೆಯುವುದಿಲ್ಲವೆಂಬುದು ನಿಜ! ಅಂದರೆ ಈ ಸಭೆಯು ಜಯಪ್ರದವಾಗುವುದಿಲ್ಲವೆಂಬುದೂ ನಿಜ!

'ಸ್ವಾಮಿ'

# ಮೂರು ಲಕ್ಷ ರೂಪಾಯಿ!

ಶ್ರೀ

ಸಂಸಾರದ ಖರ್ಚಿಗೆ ದೊರೆತರೆ, ಅಡಚಣೆಯು ಮಾತುಂಟೇ? ಅನ್ನ, ವಸ್ತ್ರ, ಅಲಂಕಾರ ಆಭರಣ, ವಿದ್ಯಾಭ್ಯಾಸ ವಿಹಾರ, ವ್ರತಾಚರಣೆ, ಯಾತ್ರಾಕಾರ್ಯಗಳು ಮೊದಲಾಗಿ ಎಲ್ಲಕ್ಕೂ ಅತ್ಯನುಕೂಲವಾಗಿರದೆ? ಸಂಸಾರವು ಸರ್ವಪ್ರಕಾರಗಳಲ್ಲೂ ಸುಗಮವಾಗಿ ಸಾಗುವುದು.

## ಮೂರು ಲಕ್ಷ ರೂಪಾಯಿ!

ದುಡ್ಡೇ ದುರ್ಲಭವಾಗಿರುವ ಈ ಕಷ್ಟಕಾಲದಲ್ಲಿ, ವ್ಯಾಪಾರದ ಮುಗ್ಗಟ್ಟು,—ಕೈಗಾರಿಕೆಗಳಿಗೆ ಕಷ್ಟ ಮೊದಲಾದವುಗಳ ನಿವಾರಣೆಗೆ ಈ ಮೊಬಲಗು ಎಷ್ಟು ಅನುಕೂಲವಾಗಿ ಸಹಾಯಮಾಡುವಂತಾಯಿತು!

## ರೂಪಾಯಿ 321,544-3-7 ರೂಪಾಯಿ

ಈ ಮೊಬಲಗನ್ನು ಕಳೆದ ವರ್ಷ ಬರೇ ಬಡ್ಡಿಯ ಬಗ್ಗೆಂದು ಹಣ ಠೇವಣಾತಿಯಾಗಿಟ್ಟ ಜನಸ್ತೋಮಕ್ಕೆ

## ಕೆನರಾ ಬೇಂಕ್ ಲಿಮಿಟೆಡ್

ಸಂಸ್ಥೆಯಿಂದ ಸಾಕಲ್ಯವಾಗಿ ಸಂದು ಸದ್ವಿನಿಯೋಗ ಹೊಂದಿದೆ.

ಸಂಸಾರ ತಾಪತ್ರಯ ನಿವಾರಣೆಗೂ, ವ್ಯಾಪಾರ ಕೈಗಾರಿಕೆಗಳ ಅಭಿವೃದ್ಧಿಗೂ ಸಾವಿರಾರು ಠೇವಣಾತಿದಾರರಿಗೆ ಸಿಗುವಂತೆ ಅವರು ಬೇಂಕಿನಲ್ಲಿ ಸಂಪೂರ್ಣ ವಿಶ್ವಾಸವನ್ನಿಡಲು ಪ್ರೇರೇಪಿಸಿದುದು ಯಾವುದು? ಯಥಾಕಾಲದಲ್ಲಿ, ಯಥಾಯೋಗ್ಯವಾಗಿ ಬೇಂಕು ಅವರಿಗೆ ಒದಗುವುದೆಂದು, ಪ್ರತ್ಯಕ್ಷ ಅನುಭವದಿಂದ ಅವರು ತಿಳಿದುದೇ.

## ಮೂರು ಲಕ್ಷ ರೂಪಾಯಿ!

ವರ್ಷಕ್ಕೆ ಬಡ್ಡಿಯಾಗಿ ಜನಗಳಿಗೆ ದೊರೆತ ಹಾಗೆ, ಅವರ ವಿಶ್ವಾಸವು ಬೇಂಕಿನಲ್ಲಿ ಬೇರೂರಿರುವುದೂ ಅವರ ಹಣವು ಸದ್ವಿನಿಯೋಗ ಹೊಂದಿ ಪ್ರತಿಫಲವು ದೊರೆವಂತೆ ವಿಚಾರದಿಂದ ಬೇಂಕು ಯಥಾಸಾಧ್ಯವಾದ ರೀತಿ ವರ್ತಿಸಿದುದೂ, ಈಗಣ ಆಡಚಣೆಕಾಲದಲ್ಲಿ ಕೂಡಾ ಸರ್ವರಿಗೂ ತೃಪ್ತಿಕರವಾಗಿದೆಂದು ಸೂಚಿಸದೇ? ಊರವರಾಗಲಿ, ದೂರದವರಾಗಲೀ ಸರ್ವ ಠೇವಣಾತಿದಾರರಿಗೆ ಸಂತೃಪ್ತಿ.

## ಕೆನರಾ ಬೇಂಕ್, ಲಿಮಿಟೆಡ್.



# East & West Insurance Company Ltd.,

(Established 1913)

East & West Buildings, Fort Bombay.

VALUATION REPORT for the Triennium ending 31st December 1931.

**Reveals Certain Striking Features.**

The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation.

Interim Bonus Rs. 15/- per 1,000/- per year.

both on whole life and endowment with Profit Policies becoming claims before 1st January 1934. FORECAST:-STILL GREATER PROSPERITY.

**WANTED LADIES & GENTS in Unrepresented Areas.**

Earn Rs. 100/- to 500/- independently per month.

*For particulars apply or please call at:—*

**Chief Organising Office,**

Harbour View, MANGALORE



ನಮ್ಮ ಕಾರ್ಖಾನೆಯು ಈಚೆಗೆ ಒಂದೆರಡು ತಿಂಗಳಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ದಶಂಬರ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರುಗಿದ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ ಪದಕವೂ ಪಡೆದಿದೆ.

ದೇಹದ ಮತ್ತು ಉಡಿಗೆತೊಡಿಗೆಗಳ ನೈರ್ಮಲ್ಯಕ್ಕಾಗಿ

# ದಿ ವೆಜಿಟೇಬಲ್ ಸೋಪ್ ವರ್ಕ್ಸ್

ಎಂಬ ಶುದ್ಧ ಸಸ್ಯಜನ್ಯಪದಾರ್ಥಗಳಿಂದಲೇ ಸಾಬೂನು ತಯಾರಿಸುವ ಬಗ್ಗೆ, ಅತಿ ನೂತನ ಶಾಸ್ತ್ರೀಯ ಕ್ರಮದಂತೆ, ಸರಕಾರದ ವಿಚಕ್ಷಣ ತರಬೇತು ಹೊಂದಿರುವವರ ಆಡಳಿತಕ್ಕೊಳಪಟ್ಟು, ಸ್ಥಾಪಿತವಾದ

ಈ ಕಂಪೆನಿಯು ಮಾಡುವ

## ಅಚ್ಚ ಸ್ವದೇಶೀ ಸಾಬೂನುಗಳು.

ಸೆಂಡಲ್‌ಉಡ್, ಜಸ್ಮಿನ್, ಲಿಲಿರೋಸ್, ಲೀಮ್ಸಾ ಸಾಬೂನುಗಳು

(ಲೀಮ್ಸಾ=ನೀಮು, ಮಾರ್ಗೋಸಾ=ಬೇವು)

ಇವುಗಳು ನಮ್ಮ ಖ್ಯಾತವಾದ ಟ್ಯಾಲೆಟಗಳು.

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

## ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು

ಈ ಜಿಲ್ಲೆಗೆ ಪ್ರವರ್ತಕರು:—

## ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.


# ನೋಟೀಸು.

### ಕುಂದಾಪುರ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

O. P. No. 86/1932

ವಾಸುದೇವಯ್ಯ — ಕೃಷ್ಣಭಾಗ ಸುಬ್ರಾಯರ ಮಗ— ಮಣೂರು ಗ್ರಾಮ—ಅರ್ಜಿದಾರ.

ಮತ್ತು

ರಾಮಪ್ಪ ಶಾಸ್ತ್ರಿ ಕೂಡಾ—ಎದ್ರಿರು

ಇವರೊಳಗೆ

1. ರಾಮಪ್ಪ ಶಾಸ್ತ್ರಿ, ನರಸಿಂಹ ಶಾಸ್ತ್ರಿ ಮಗ, ಕೊಡ್ಲ ತಾಲೂಕು, ಬಗ್ಗುಂಜೆ ಹೋಬಳಿ, ಬೂವನಕೋಟೆ ಗ್ರಾಮ. 4, ವಾಸ್ತೇವ ಶಾಸ್ತ್ರಿ—ಕೃಷ್ಣ ಶಾಸ್ತ್ರಿ ಮಗ, ಹಾಲಿ ಮೈಸೂರು ಸಿಟಿ. ಇವರಿಬ್ಬರಿಗೆ ತಿಳಿಯಪಡಿಸುವುದೇನೆಂದರೆ—

ಮಣೂರು ಗ್ರಾಮದಲ್ಲಿರುವ ಅನಂತ ಮೈಯರ ಮಗ ಶೇಷಪ್ಪ ಮೈಯ್ಯ 1, ಇವರ ಮಗ ಅನಂತ ಮೈಯ್ಯ 1 ಕೂಡಾ 2 ಜನರು 1, 2ನೇ ಎದ್ರಿರ ತಂದೆ ನರಸಿಂಹ ಶಾಸ್ತ್ರಿ, ವ 3ನೇ ಎದ್ರಿಯ ತಂದೆ ಮಹಾಬಲ ಶಾಸ್ತ್ರಿ ಕೂಡಾ ಎರಡು ಜನರ ಹೆಸರಿಗೆ ತಾರೀಕು 20—3—1923ಲ್ಲಿ ರೂ. 1200-ಕ್ಕೆ ಬರಕೊಟ್ಟ ಗೊಂಚು ಪತ್ರದ ಅಸಲು ಬಡ್ಡಿ ವಿವೇಜು ವಗೈರೆ ತೆರುವ ಜವಾಬುದಾರಿಯನ್ನು ಸದರಿಯವರು ಅರ್ಜಿದಾರಗೆ ಬರಕೊಟ್ಟ ಕ್ರಯ ದಸ್ತಾವೇಜಿನಲ್ಲಿ ವಹಿಸಿ ಕೊಟ್ಟ ಮೇರೆಗೆ ಸದ್ರಿ ಗೊಂಚು ಪತ್ರದ ಅಸಲು ಬಡ್ಡಿ ಪೂರ್ಣ ಪಾವತಿಯ ಬಗ್ಗೆ ರೂ. 2126/-ನ್ನು ಡಿಪೋಜಿಟ್ ಮಾಡಿ ಗೊಂಚುಪತ್ರದ ಖುಲಾಸು ಡಿಕ್ರಿ ಮಾಡಿಸಬೇಕೆಂತ ಅರ್ಜಿದಾರನು ಅರ್ಜಿ ಕೊಟ್ಟಿದ್ದಾನೆ. ಈ ಕುರಿತು ನಿಮ್ಮ ಆಕ್ಷೇಪವಿರುವುದಾದರೆ ತಾ. 7—4—1933ನೇ ದಿವಸ ಹಗಲು 11 ಗಂಟೆಗೆ ಮುಜ್ಕೂರು ಕೋರ್ಟಿನಲ್ಲಿ ಹಾಜರಾಗತಕ್ಕದ್ದು. ಇಲ್ಲವಾದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು. ತಿಳಿದಿರುವುದು.

ಕುಂದಾಪುರ, 20—3—1933 — **A. V. N. Hebbar,** Pleader for Petitioner.

### ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. 40/1933

1. ಅನಂತ ರತ್ನಾಕರ, 2. ಅನಂತ ಪ್ರಭಾಕರ. 3. ದಾಮೋದರ ಯಾನೆ ದೇವರಾಯ. 4. ಗಣೇಶರಾಯ, 5. ಶಾಂತಾಬಾಯಿ—ಮೈನರರು.

ಕಲ್ಯಾಣಿ ಯಾನೆ ಶೀತಾಬಾಯಿ—ಅರ್ಜಿದಾರಳು.

ಮತ್ತು

1. ಶೇವಗೂರು ಕೃಷ್ಣ ಕಮ್ತಿ, 2. ಶೇವಗೂರು ಮುಕುಂದ ಯಾನೆ ನರಸಿಂಹ ಕಮ್ತಿ, 3- ತಿಬ್ಬುರ ರಾಮಕೃಷ್ಣ ಕಮ್ತಿ— ರೆಸ್ಪೋಂಡೆಂಟರು.

ಮೇಲ್ಕಾಣಿಸಿದ ಮೈನರರ ದೇಹದ ವ ಸ್ಥಿರಾಸ್ತಿಗಳ ವಗೈರೆ ಗಾರ್ಡಿಯನಳಾಗಿ ಅರ್ಜಿದಾರಳನ್ನು ವ ಕೋರ್ಟಿಗೆ ಯುಕ್ತ ಕಂಡ ಇತರರನ್ನು ನೇಮಕ ಮಾಡಬೇಕೆಂತ ವಗೈರೆ ಕಾಣಿಸಿ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತನಿಖೆ ಬಗ್ಗೆ ತಾ. 7-4-33ಕ್ಕೆ ಪೂರ್ವಾಹ್ನ 11 ಗಂಟೆಗೆ ತನ್ನಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿಗೆ. ಸದ್ರಿ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

Mangalore, 24—3—1933 — **K. Sadashiva Rao.** *Counsel for Petitioners.*

### ಉಡುಪಿ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

S. C. No. 851/1932.

ಎಚ್. ನಾರಾಯಣರಾವ್ — ವಾದಿ.

ಮತ್ತು

1. ಬೀಡು ರಾಮರಾವ್, 2. ಬೀಡು ಲಕ್ಷ್ಮೀನಾರಾಯಣ ರಾವ್— ಪ್ರತಿವಾದಿರು.

ಇವರೊಳಗೆ

ಸದ್ರಿ ಪ್ರತಿವಾದಿರಿಗೆ ಈ ನೋಟೀಸ್ ತಿಳಿಯಪಡಿಸುವುದೇನೆಂದರೆ ಸದ್ರಿ ವಾದಿಗೆ 2ನೇ ಪ್ರತಿವಾದಿಯು ಜನರಲ್ ಏಜಂಟರಾಗಿ ಕೂಡಾ 1ನೇ ಪ್ರತಿವಾದಿಯು ತಾ. 9—6—30ರಲ್ಲಿ ಕುಟುಂಬಾರ್ಥವಾದ ಸಾಲ ರೂ. 300ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ವ ಸೇಕಡಾ 12%ರ ಸಲೆ ಬಡ್ಡಿಯಲ್ಲಿ ವಸೂಲು ಬಂದದ್ದು ಕಳೆದು ಬಾಕಿ ಅಸಲು ಬಡ್ಡಿ ರೂ. 72—8—0ಕ್ಕೆ ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಸದ್ರಿ ವ್ಯಾಜ್ಯವು ತಾ. 21—4—33ಕ್ಕೆ ತನ್ನಿಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪವಿದ್ದರೆ ಪ್ರತಿವಾದಿರು ಸ್ವತಹ ಯಾ ಅಧಿಕಾರ ಹೊಂದಿದ ಪ್ಲೀಡರರ ಮೂಲಕ ಆ ದಿವಸ ಹಗಲು 10 ಘಂಟೆಗೆ ಕೋರ್ಟಿಗೆ ಹಾಜರಾಗಿ ಇತ್ಯರ್ಥಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಗೈರಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿಯದೆ.

ಉಡುಪಿ [illegible] — **M. Vittal Kamath, B. A., B. L.** Vakil for Plaintiff.

**Panchmal Narasimha Kamath & Brothers,**

CAR STREET, MANGALORE.

31st Oct. 1932.

ಠಿ

The Manager,

**Zenith Life Assurance Company, Limited,**

MANGALORE.

DEAR SIR,

I have great pleasure to acknowledge receipt of your cheque No B. 942296 on the National Bank of India Ltd. Bombay for Rs. 1954—12—0 in full settlement of the claim on Policy No. 3765 of my deceased brother Ganapathi Kamath.

The Policy was delivard to you duly discharged on 21st October 1932 and your Head Office have issued the cheque on the 25th October *i. e.* **on the very day they received the Policy in their hands.**

I am really greatful for the prompt settlement of the claim for which yourCompany is so well known.

YOURS FAITHFULLY,

*Sd.* **Panchmal Narasimha Kamath**



# DERBY SWEEPS.

| CONDUCTED BY | Subscriptions will be received for Ordinary Mail Till. |
|---|---|
| MUTUAL CLUB LTD. | 26—4—1933 at Rs. 4—0—0. Air Mail 4 annas extra. |
| IRISH HOSPITALS' TRUST LTD. | 12—4—1933 at Rs. 6—12—0. Air Mail 4 annas extra. |

*Both the above Clubs' Derby Tickets can be had for cash from—*

**Shelanadi Manjunath Krishna Nayak & Sons,**

***MANGALORE,***

***Authorised Agents.***

ತಾ. 19-3-'33ನೇ ಸ್ವದೇಶಾಭಿಮಾನಿಯ ವಿಶೇಷ ಸಂಚಿಕೆಯಲ್ಲಿ ಐರಿಶ್ ಹೊಸ್ಪಿಟಲ್ ಟ್ರಸ್ಟಿನ ಟಿಕೇಟಿಗೆ ರೂ. 6-0-0 ಎಂದಿದ್ದನ್ನು ರೂ.6-12-0 ಎಂದು ತಿಳಿಯತಕ್ಕದ್ದು.


## ಸ್ಥಳೀಕ ನೋಟಗಳ ಬಾಣ!

ನಮ್ಮೂರ ವಕೀಲರ ಸುಖಕ್ಕಾಗಿ ಒಂದು ಬಾರ್ ರೂಮು ಸ್ಥಾಪಿತವಾಗಿದೆ. ದೇಗ್ಗೆ ಅಲ್ಲಿ ಕೂಡುವ ವಕೀಲರೆಷ್ಟು! ಮರ್ದಯೇನು?

ಆ ಬಾರ್ ರೂಮಿಗೆ ಒಬ್ಬ ಕೆಲಸಗಾರ. ತೋಟಗಾರ ವೆಂಕ್ಟನಂತೆ, ಬಾರ್ ರೂಮಿನ ಎದುರು ಒಂದು ಹೂಬಳ್ಳಿಯನ್ನು ನೆಟ್ಟಿಗೆ ನಿಲ್ಲಿಸುವುದಕ್ಕಾಗಿ ಅವನು ಬೆಳೆಯುತ್ತಿದ್ದ ಗೋಳಿ ಮರದ ಗೆಲ್ಲು ಒಂದನ್ನು ಕಡಿದು ಬಳ್ಳಿ ಬಿಡಲು ನೆಟ್ಟನಂತೆ.

ಆ ಗೆಲ್ಲನ್ನು ಕಡಿವ ಮೊದಲು ವೆಂಕ್ಟನು ಯಾರೋ ವಕೀಲರೊಡನೆ ವಿಚಾರಿಸಿದನಂತೆ. "ಕಡಿ" ಎಂದಿದ್ದರಂತೆ. ಅದಕ್ಕಾಗಿ ವೆಂಕ್ಟನು ಕಡಿದ!

ಂ ಂ ಂ ಂ ಂ

ಕೆಲವು ದಿವಸಗಳು ಹೋಗುತ್ತಲೇ "ವೆಂಕ್ಟ ಕೋರ್ಟಿನ ಆಸ್ತಿಯಾದ ಗೋಳಿ ಮರದ ಗೆಲ್ಲನ್ನು ಕೇಳದೆ ಕಡಿದುದಕ್ಕಾಗಿ ಅವನ ಇಂಕ್ರಿಮೆಂಟನ್ನು ನಿಲ್ಲಿಸಬಾರದೇಕೆ?" ಎಂಬ ರೂಪದ ಓರ್ಡರು ನ್ಯಾಯಾಧೀಶರಿಂದ ಬಂತಂತೆ.

ಂ ಂ ಂ ಂ ಂ

ವಕೀಲರೆಲ್ಲ ಆಶ್ಚರ್ಯಗೊಂಡರು. ಒಂದು ಸಭೆ ಸೇರಿ ಆಲೋಚಿಸಿಕೊಂಡರು. ತಮ್ಮ ಬಾರ್ ರೂಮಿನ ವೆಂಕ್ಟನಿಗೆ ಬಂದ ಗತಿಯನ್ನು ವಿಮರ್ಶಿಸಿದರು. ಕಡೆಗೆ-ಕಡೆಗೆ ನ್ಯಾಯಾಧೀಶರು ಕೊಟ್ಟ ಓರ್ಡರಿಗೆ ತಲೆತಗ್ಗಿಸಿ "ವೆಂಕ್ಟನ ಇಂಕ್ರಿಮೆಂಟು ಹೋಗಲಿ!" ಎಂದರು.

ಂ ಂ ಂ ಂ ಂ

ವಕೀಲರ ಸುಖಕ್ಕಾಗಿ ಪೇಟಾರಿ ಗೋಳಿ ಮರದ ಗೆಲ್ಲನ್ನು ಕಡಿದ ವೆಂಕ್ಟನನ್ನು ಸಮರ್ಥಿಸುವ ಬದಲು ಅವನ ಸಂಬಳಕ್ಕೆ ಪೆಟ್ಟಾಯಿತು! ಇದಲ್ಲವೇ ವಕಾಲತ್ತು?

ಂ ಂ ಂ ಂ ಂ

ಇದರ ಕೂಲಂಕಷ ಕತೆಯೇನು? ನನ್ನ ಕಿವಿಗೆ ಬಿದ್ದಿರುವುದು ಇಷ್ಟು! ಇನ್ನು ಏನೆಲ್ಲ ಉಂಟೋ ನೋಡಲಿದೆ.

ಂ ಂ ಂ ಂ ಂ ಂ

ಸತ್ಯವಾವುದು? ಸುಳ್ಳಾವುದು? ನ್ಯಾಯವಾವುದು? ನೀತಿಯಾವುದು? ಕರುಣೆ ಯಾವುದು?

ದಿವ್ಯ ದೃಷ್ಟಿ.


**The Canara Industrial & Banking Syndicate Limited.**

**Established in 1925.** Branches: Mangalore, Payyanur, Brahmavar, Kumta, Karwar, Hubli & Honnavar. **Head Office:— UDIPI.**

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

STATEMENT OF AFFAIRS OF THE SYNDICATE AS ON 28TH FEBRUARY 1933.

| LIABILITIES. | | | ASSETS. | | |
|---|---|---|---|---|---|
| Paid up Capital | Rs. | 20,000— 0— 0. | Loans on Land mortgage | Rs. | 1,56,239— 2— 1. |
| Reserve & other funds | „ | 20,250— 0— 0. | Loans on Valuable Securities | „ | 2,08,334— 0—10. |
| Deposits | „ | 8,37,461— 6—11 | Bills of Exchange, Hundis and Promissory Notes | | 4,27,591— 9— 0. |
| Due to Bankers | „ | 71,566— 2— 3. | Investment on Shares of other Companies | „ | 43,565— 0— 0. |
| Sundries | „ | 49,927— 6— 4. | On Deposits with other Banks | „ | 90,000— 0— 0. |
| | | | Sundries | „ | 45,430— 1—11. |
| | | | Cash in hand & with Bankers | „ | 28,055— 1— 8. |
| Total Rs. | | 9,99,204 - 15 - 6 | | Total Rs. | 9,99204 - 15 - 6 |

Long and Short term Loans on attractive Schemes are grant

ALL KINDS OF BANKING BUSINESS UNDERTAKEN.

Udipi, 6—3—1933.

**P. A. Pai Bros.,**
*Managing Agents.*

# DUO-TREAD TIRES.

## Seiberling's Novel Features.

1 Air Cooled.

2. Duod Trea.

3. Twice the Mileage.
FOR
4. Only 20 per cent extra Money

A TIRE UN-IMITATED & EXCLUSIVE.

*Dealers Earn Profits.* *Users Save Money.*

The Canara Public Conveyance Co., Ltd.

MANGALORE.

## ಸ್ಫುಟ ವಿಚಾರಗಳು.

### ಜನೋಪಕಾರಕ್ಕಾಗಿರುವ ಬ್ಯಾಂಕುಗಳು.

ಜನರಿಗೆ ನಿಜವಾಗಿಯೂ ಉಪಕಾರ ಮಾಡುತ್ತಿವೆಯೋ ಎಂಬುದನ್ನು ಜನರೇ ಅವುಗಳಿಂದ ಪಡೆವ ಪ್ರಯೋಜನದ ಧಾಮಾಷಿಯುದಲ್ಲಿ ನಿರ್ಧರಿಸತಕ್ಕುದಾಗಿದೆ. ಹಿಂದೂ ದೇಶದಲ್ಲಿರುವ ಬ್ಯಾಂಕುಗಳಲ್ಲಿ ನಾಲ್ಕು ದೊಡ್ಡವು; ಇಂಪೀರಿಯಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ದಿ ಬ್ಯಾಂಕ್ ಆಫ್ ಇಂಡಿಯಾ, ಮತ್ತು ಅಲ್ಲಹಾಬಾದು ಬ್ಯಾಂಕು. ೧೯೩೮ರಲ್ಲಿ ಈ ನಾಲ್ಕು ಬ್ಯಾಂಕುಗಳಲ್ಲಿ ಜನರು ಠೇವಣಾತಿಯಾಗಿಟ್ಟ ನೋಟಲಗಿನ ಮೊತ್ತವು ೧೧ ಕೋಟಿ ರೂಪಾಯಿ; ೧೯೩೮ರಲ್ಲಿ ಅಂಥ ನೋಟಲಗು ೧೧೩ ಕೋಟಿ ರೂಪಾಯಿ ಆಗಿದೆ. ಇಂಗ್ಲೆಂಡಿನಲ್ಲಿ ಇದೇ ತರಗತಿಯ ಐದು ಬ್ಯಾಂಕುಗಳಿವೆ. ಇವುಗಳಲ್ಲಿ ಠೇವಣಾತಿಗಳ ಮೊತ್ತವು ಕಳೆದ ವರ್ಷ ೨೫೫೦ ಕೋಟಿ ರೂಪಾಯಿ! ಹಿಂದೀ ಬ್ಯಾಂಕುಗಳ ೨೦ ಪಾಲು ಹೆಚ್ಚಾಗಿದೆ. ಅಮೇರಿಕದ ಯುನೈಟೆಡ್ ಸ್ಟೇಟ್ಸನಲ್ಲಿ ೧೧೮ ಚದರ ಮೈಲು ವಿಸ್ತೀರ್ಣದ ಜನರಿಗೆ ಒಂದು ಬ್ಯಾಂಕು ಇದೆ; ಇದರಿಂದ ಸರಾಸರಿ ೩೦೦೦ ಜನರಿಗೆ ಧನಾಧಾರವಿದೆ; ಸರಾಸರಿ ಠೇವಣಾತಿಯು ತಲೆಗೆ ೮೭ ಪವನು. ಇಂಗ್ಲೆಂಡಿನಲ್ಲಿ ೧೧ ಚದರ ಮೈಲಿಗೆ ಒಂದು ಬ್ಯಾಂಕು ಇದ್ದು ೪೮೦೦ ಜನರಿಗೆ ಧನಸಹಾಯ ಮಾಡುತ್ತ ಅವರಿಂದ ಸರಾಸರಿ ತಲಾ ೪೮ ಪವನು ಠೇವಣಾತಿ ನಡೆಯುತ್ತಿದೆ. ಇಂಡಿಯದಲ್ಲಿ? ೨೭೩೯ ಚದರ ಮೈಲಿಗೆ ಒಂದು ಬ್ಯಾಂಕು ಇದ್ದು, ನಾಲ್ಕುವರೆ ಲಕ್ಷ ಜನರು ಇವರಿಂದ ವಹಿವಾಟು ನಡೆಸುವಂತಾಗಿ, ತಲಾ ೧೦ ಆಣೆ ಠೇವಣಾತಿಯಾಗುತ್ತಿದೆ. ಇಷ್ಟಾದರೂ ನಾವು ಲಕ್ಷ್ಮೀಪುತ್ರರೆಂದು ಹೆಸರುಗೊಂಡುದನ್ನು ಇಂಡಿಯಾ ಸರಕಾರದ ಖಜಾನೆಜಿಯವರೂ ಕೊಂಡಾಡುತ್ತಾರೆ. ಅದಕ್ಕೆ ಕಾರಣವೇನು? ನಮ್ಮ ತೆರಿಗೆ ಭಾರ ಏರುತ್ತಿದ್ದರೂ ಸರಾಗವಾಗಿ ತೆರಲಾಗುತ್ತಿದೆ; ೧೧೩॥ ಕೋಟಿ ರೂಪಾಯಿ ಮೌಲ್ಯದ ಚಿನ್ನವನ್ನು ೧॥ ವರ್ಷದಲ್ಲಿ ರಫ್ತು ಮಾಡಲಾಗಿದೆ.

### ಮಹಾ ಪುರುಷರ ಹೊರಡೋಣ

ಸರ್ ಮೇಲ್ಕಲ್ಮ್ ಹೈಲಿಯವರು ಇಂಗ್ಲೆಂಡಿಗೆ ಹೋಗುವರು. ಗವರ್ನರ ಹುದ್ದೆಗೂ ಸದ್ಯಕ್ಕೆ ರಾಜೀನಾಮೆಕೊಟ್ಟು, ಮುಂದಿನ ಸುಧಾರಣೆಗಳ ವಿಷಯ ಪಾರ್ಲಿಮೆಂಟಿನಲ್ಲಿ ಆಲೋಚನೆ ಆಗುವ ಕಾಲಕ್ಕೆ ಇಲ್ಲಿ ಇವರೇ ಬಂದು ಸಹಾಯಾನುಭವಗಳನ್ನು ಒದಗಿಸಲು ಸರಕಾರವೇ ಅವರನ್ನು ಆಮಂತ್ರಿಸಿರುವುದಂತೆ. ಸಿವಿಲ್ ಸರ್ವಿಸಿನಲ್ಲಿ ನುರಿತು ಧಾರಾಳ ಅನುಭವ ಪಡೆದ ಇವರು ಇಂಗ್ಲೆಂಡಿಗೆ ತೆರಳಿ, ಅಂಥ ಸರ್ವಿಸಿನ ಪರವಾಗಿ ಹವಾಲೆಗಳನ್ನು ಮುಂದಿಡುವರು. ಯುನೈಟೆಡ್ ಪ್ರೊವಿನ್ಸಿನ ಗವರ್ನರರಾಗುವುದು ಈಗ ಅಷ್ಟು ಕಠಿಣವಲ್ಲ; ಚತುರರಿಯ ನವಾಬರು ಇರುವರು; 'ಬದಲಿ' ಕೆಲಸವಮಾಡುವರು. ಮಿಖಾಯಿಲ್ ಒಡಪ್ಪಯರರಂಥ ಕಡು ಭಾರತ ಸ್ವಾತಂತ್ರ್ಯ ವಿರೋಧಿಗಳ ಬಾಯಿ ಕಟ್ಟಲೂ, ಅದರೆ, ಕನ್ಸರ್ವೇಟಿವರ ಮನಸಂತೋಷಪಡಿಸಲೂ ಈ ಮುತ್ಸದ್ದಿಗಳೇ ಅಗತ್ಯವೆಂದು ನಿರ್ಣಯವಾಗಿದೆ. ಅಲ್ಲಿನ ಕೆಲಸ ಮುಗಿದು ಪುನಃ ಇಲ್ಲಿಗೆ ಮರಳುವಾಗ, ಅವರ ರಾಜಿನಾಮೆಯು ನಿಷ್ಪ್ರಯೋಜಕವಾಗಿ, ಪುನಃ ಅವರು ಗವರ್ನರರೇ ಆಗುವರು. ಒಡಪ್ಪಯರರಿಗೆ ಇವರು ಕಿಂಚಿತ್ತೂ ಕಡಿಮೆಯವರಲ್ಲವೆಂದೂ, ಅದೂ ಯೋಗ್ಯರಾಜಕಾರಣ ಪುರುಷರಂತೆ ಕನ್ಸರ್ವೇಟಿವರ ಮನ ಒಲಿಸಿಕೊಳ್ಳಲು ಯೋಗ್ಯತೆಯುಳ್ಳವರೆಂದೂ ಕಿರಣೀಕರು ನಂಬಿರುವಂತೆ ತೋರುತ್ತಿದೆ. ಜಯಶೀಲರಾಗಲಿ ಹೈಲಿಯವರು!

### ಜಪಾನಿನ ಮತ್ತೊಂದು ಕೋಲಾಹಲ

ಜನಾಂಗ ಸಮಿತಿಯೊಳಗೆ ಬೇರೊಂದು ಬಗೆಯ ಕೋಲಾಹಲವನ್ನು ಜಪಾನು ಉಂಟುಮಾಡಿರುವುದು. ಲೀಗ್ ಸಮಿತಿಯು ಹೇಳಿದ ವ್ಯವಸ್ಥೆಯನ್ನು ಮನ್ನಿಸದೆ, ಚೀನದ ಮೇಲೆ ಕ್ರಮಮಾಡುವುದನ್ನು ತಡೆಯದೆ, ಸಮಿತಿಯಲ್ಲಿ ತನಗಿದ್ದ ಸ್ಥಾನವನ್ನೇ ಜಪಾನು ತ್ಯಜಿಸಿತು. ಆದರೆ, ಯುದ್ಧಾಂತ್ಯದಲ್ಲಿ ಲೀಗಿನವರು ಜಪಾನಿನ ಆಶ್ರಯದಲ್ಲಿರುವಂತೆ ಸದ್ಯಕ್ಕೆ ಒಪ್ಪಿಸಿಕೊಟ್ಟ ಪ್ರಾಂತ್ಯಗಳನ್ನು ಮಾತ್ರ ಹಿಂದಿರುಗಿ ಲೀಗಿಗೆ ಒಪ್ಪಿಸಿಕೊಡಲು ಜಪಾನು ಒಪ್ಪಿಲ್ಲ. ಹಿಂದೆ ಜರ್ಮನಿಗೆ ಸೇರಿದುವಾಗಿ ಪೆಸಿಫಿಕ್ ಸಾಗರದಲ್ಲಿದ್ದ ಹಲವು ದ್ವೀಪಗಳು ಜಪಾನಿನ ಕೈಕೆಳಗೆ ಇರಿಸಲಾಗಿದ್ದುವು. ಅವು ಯುದ್ಧದ ಫಲವಾಗಿ ದೊರೆತುವಲ್ಲದೆ, ಗೌರವಕ್ಕಾಗಿ ಮಾತ್ರ 'ರಕ್ಷಿತ ಪ್ರಾಂತ್ಯಗಳೆಂದು ಬರೆಯಲಾಗಿತ್ತೆಂದೇ ಜಪಾನು ಎನ್ನುತ್ತಿದೆ. [illegible] ಬೇಕೆಂದು ಜರ್ಮನಿ ಕೇಳುತ್ತಿದೆ; ಜಪಾನು ಹಾಗೆ ಕೊಡದಿರುವುದು ತಪ್ಪೆಂದು ಅಮೇರಿಕವೆನ್ನುತ್ತಿದೆ. ಈ ದ್ವೀಪಗಳ ಅಧಿಕಾರವು ನಿಜವಾಗಿ ಆಗ ಗೆದ್ದ ಮಿತ್ರ ರಾಷ್ಟ್ರಗಳಿಗೋ ಅಥವಾ ಜನಾಂಗ ಸಮಿತಿಗೋ ಸಂಬಂಧಿಸಿದೆಯಾದರೂ, ಇವರಿಬ್ಬರ ಮಾತುಗಳನ್ನು ಸ್ವೀಕರಿಸುವುದಕ್ಕೆ ಜಪಾನು ಸಿದ್ಧವಾಗಿಯೇ ಇಲ್ಲವೆನ್ನುವಂತಿದೆ.

### ಮತ್ತೊಂದು ಕೋಲಾಹಲ ಜರ್ಮನಿಯಲ್ಲಿ

ಹೊಸ ಸರಕಾರ ಸ್ಥಾಪನೆ ಹೊಂದಿತು, ಹಿಟ್ಲರ್ ಮಹಾಶಯನು ಬಹುಮತವನ್ನು ದೊರಕಿಸಿಕೊಂಡನು. ಎಲ್ಲ ಪಕ್ಷಗಳ ಪ್ರತಿನಿಧಿಗಳಿಂದೊಡಗೂಡಿರುವ ಮಂತ್ರಿ ಮಂಡಲವೂ ರಚನೆ ಹೊಂದಿತು. ಈಗ ಅಧಿಕಾರವುಳ್ಳ ರಾಷ್ಟ್ರೀಯ ಪಕ್ಷವು ಹಿಟ್ಲರನನ್ನೇ ಸರ್ವಾಧಿಕಾರಿಯೆಂದು ನಿರ್ಧರಿಸಿಯದೆ. ಈ ಪಕ್ಷದವರ ಅಭಿಪ್ರಾಯದಲ್ಲಿ, ಹಿಂದೆ ಇದ್ದಂತೆ ಇಡೀ ಜರ್ಮನಿಯು ಒಂದಾಗಬೇಕೆಂದಿದೆ. ಈ ಅಭಿಪ್ರಾಯವು ಪ್ರಕಟವಾಗುತ್ತಲೆ. ಹಿಂದಣ ಕೈಸರರೊಡನೆ ಇದ್ದ ಸಂಬಂಧವನ್ನೂ ಕಡಿದಿಕ್ಕದೆ, ಅವರ ಕುಟುಂಬದವರೇ ಜರ್ಮನಿಯನ್ನು ಆಳಬೇಕೆಂದೂ ಒಂದು ಅಭಿಪ್ರಾಯವಿದೆ. ಲೀಗಿನ ಅಪ್ಪಣೆಯಿಲ್ಲದೆ ಆಸ್ಟ್ರೀಯವು ತನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಡಬಾರದೆಂದು ವರ್ಸೆಲ್ಲದಲ್ಲಾದ ಒಡಂಬಡಿಕೆಯ ಶರ್ತವಿದೆಯಾದ್ದರಿಂದ ಇದೆಲ್ಲವೂ ಆಗಲಾರದ ಕೆಲಸವೆನ್ನಬಹುದು. ಆದರೆ, ಈ ವರ್ಸೆಲ್ಸ್ ಒಪ್ಪಂದವೇ ಮಹಾನ್ಯಾಯದ್ದು ಎಂದು ಜರ್ಮನಿಯು ಸರ್ವತ್ರವೂ ಸಾರುತ್ತಿದೆ. ಅದೇ ಒಪ್ಪಂದದ ಪ್ರಕಾರ ಒಂದು ಲಕ್ಷ ಸೈನಿಕರನ್ನು ಮಾತ್ರ ಜರ್ಮನಿಯು ಇಟ್ಟುಕೊಳ್ಳಬಹುದೆಂದಿದೆಯಾದರೂ, ನಾಲ್ಕು ಮಿಲ್ಲಿಯ ಪೂರ್ಣ ತರಬೇತಾದ ಯುದ್ಧ ಕುಶಲರು ಜರ್ಮನಿಯಲ್ಲಿ ಸಿದ್ಧರಿರುವರೆಂದೂ ತಿಳಿದು ಬಂದಿದೆ. ಇವರು ಸನ್ನದ್ಧರಾಗಿ ಹೊರಟರೆ ವರ್ಸೆಲ್ಸ ಒಪ್ಪಂದವನ್ನು ಕ್ಷಣದಲ್ಲಿ ತಿದ್ದಿ, ಪುನಃ ಇಡೀ ಯೂರೋಪನ್ನು ಅಲ್ಲೋಲ ಕಲ್ಲೋಲ ಮಾಡಿ ಕುಲುಕಿಸಿಬಿಡರೇ? ಎಂದು ಹಿಂದಣ ಮಿತ್ರರಾಷ್ಟ್ರಗಳಿಗೆ ಬಾಯಲ್ಲಿಲ್ಲದಿದ್ದರೂ ಮನಸ್ಸಿನಲ್ಲಿ ಅಂಜಿಕೆ ಇದೆ.

### ಆಚಾರ್ಯರೇಯವರ ಪ್ರಾಂತ್ಯ

ಬಂಗಾಳ. ಶುದ್ಧ ಸ್ವದೇಶೀ ವಿಚಾರವು ಇಲ್ಲಿಂದ ಉಗಮವಾಗಿದ್ದಿತು. ಈಗ ಉಪ್ಪಿನ ಕರವನ್ನು ಕಡಿಮೆ ಮಾಡುವ ವಿಷಯ ಕೌನ್ಸಿಲಲ್ಲಿ ಭಾಷಣವಾಗುವಾಗ, ಬಂಗಾಳಿಗಳಲ್ಲಿ ನೇಕಡಾ ೬೦ರಂತೆ ಅವರ ಪಾಲಿನಿಂದ ಬರುವ ಬ್ರಿಟಿಷ ಉಪ್ಪನ್ನೇ ಉಪಯೋಗಿಸುತ್ತಿರುವರಾಗಿ ಅಂಕಸಂಖ್ಯೆಗಳು ಹೊಂಟುವು. ಮೂರು ವರ್ಷಗಳಿಂದೀಚೆ ಈ ವಿದೇಶೀ ಉಪ್ಪಿನ ಪ್ರೀತಿಯು ಇನ್ನಷ್ಟು ಹೆಚ್ಚುತ್ತಲೇ ಇದೆಯೆಂದೂ ವ್ಯಕ್ತವಾಯಿತು' ಆ ಉಪ್ಪಿನ ಸುಂಕ ಮುರಿವ ನೆವದಿಂದಲೇ ಮಹಾತ್ಮಾಜೀಯವರು ಅಖಂಡ ಸತ್ಯಾಗ್ರಹವನ್ನು ಹೂಡಲು ಪ್ರಾರಂಭ ಮಾಡಿದರು. ಬಂಗಾಳದಲ್ಲಿ ಉಪ್ಪನ್ನು ತಯಾರಿಸಿ ಇಂಗ್ಲೆಂಡಿಗೂ ಕಳುಹಬಹುದಾಗಿರುವಷ್ಟು ಸ್ಥಳಾನುಕೂಲತೆಯಿದೆ, ಪ್ರಯತ್ನಗಳಿಗೂ ಕಡಿಮೆ ಇಂದು. ಅವರ ಪೂಲ ಉಪ್ಪನ್ನು ಮುಟ್ಟಲಾರೆವು ಎಂದು ಆಣೆ ಹಾಕಿಕೊಂಡ ಬಂಗಾಳಿಗಳು, ಇಡೀ ದೇಶದಲ್ಲಿ ವಿದೇಶೀ ಉಪ್ಪನ್ನು ಉಪಯೋಗಿಸುವವಲ್ಲಿ ಮೊದಲನೆಯವರೆಂದಾದರೆ, ಸ್ವದೇಶೀ ವಿಚಾರಕ್ಕೆ, ಪ್ರತಿಜ್ಞಾದಿಗಳಿಗೆ ಏನು ಬೆಲೆ ಬಂದೀತು?

### ನಾಯಿಟ್ ಪೇಪರು

ಯಾನ 'ಶ್ವೇತಪತ್ರ'ವನ್ನು ಇಡೀ ದೇಶದಲ್ಲಿ ಅಧಿಕಾರದಿಂದ ಅಭಿಪ್ರಾಯ ಕೊಡಬಲ್ಲ ಯಾವುದೊಂದು ಸಂಸ್ಥೆಯು ಅದು ತೃಪ್ತಿಕರವಾಗಿದೆ ಎಂದು ಹೇಳಿಲ್ಲ; ಲೆಜಿಸ್ಲೇಟಿವ್ ಕೌನ್ಸಿಲುಗಳು, ಬೊಂಬಾಯಿಯಲ್ಲಿ ಇದೆ, ಅದು ಅಸಮಾಧಾನಕರವೆಂದೇ ತೀರ್ಮಾನಿಸಿವೆ. ಬೊಂಬಾಯಿಗೆ ಈ ಬಗೆಯ ವಿಚಿತ್ರ ಮನೋವೃತ್ತಿಯು ಹೇಗೆ ಒಪ್ಪಿತು? ಕೌನ್ಸಿಲಲ್ಲಿ ತುಂಬಾ ಜೋಹುಕುಂಮವಾಲರೂ, ಸ್ವಾರ್ಥಾಂಧರೂ ಇದ್ದಾರೆಂದು ಅವರು ಬೇರೆಬೇರೆಯಾಗಿ ಅಂತರಂಗದಲ್ಲಿ ಪೇಪರನ್ನು ದೂರಿದರೂ, ಒಂದಾಗಿ ದೂರುವುದಕ್ಕೆ ಕೌನ್ಸಿಲಿನಲ್ಲಿ ಒಪ್ಪಲಾರದಾದರು. ಈ ವಿಷಯವಾಗಿ ಕೌನ್ಸಿಲಲ್ಲಾದ ಚರ್ಚೆಯನ್ನು ಇಂಡಿಯಾ ಆಫೀಸಿಗೆ ಕಳುಹಿಸಲಾಗುವುದು. ಹೋರರು ಇವರ ಚರಿತೆಯನ್ನೋದಿ ತಮ್ಮ ಬೆನ್ನನ್ನು ತಾನೇ ಮತ್ತೊಮ್ಮೆ ತಟ್ಟಿಕೊಳ್ಳುವರು. 'ಇದು ಡೊಮಿನಿಯನ್ ತರಗತಿಯದೂ ಅಲ್ಲ; ಜವಾಬ್ದಾರಿಯುಳ್ಳದೂ ಅಲ್ಲ' ಎಂದು ಸರಕಾರ ನಿಯುಕ್ತ ಮುಸ್ಲಿಮ ಮೆಂಬರರೇ ಪ್ರಕಾಶವಾಗಿ ಕೌನ್ಸಿಲಲ್ಲಿ ತಿಳಿಸಿದರೂ ಪಟೇಲರಂಥವರು 'ಸರಕಾರವು ಜನರಲ್ಲಿ ನಿರಾಶೆಯನ್ನು ಹುಟ್ಟಿಸಿ ಆಶಾಭಂಗವಾಡಿದುದರ ಪರಿಣಾಮಗಳು ಶೋಚನೀಯವಾದವು' ಎಂದು ಸ್ಪಷ್ಟವಾಗಿ ನುಡಿದರೂ ಇಂಡಿಯಾದಲ್ಲಿ ಬೇರೊಂದು ಅಯಲೆಂದನ್ನೇ ಸೃಜಿಸುವಂಥ ಪುಣ್ಯವು ಈ ಪೇಪರಿಗೆ ಇರಬಹುದೆಂದರೂ, ಉಳಿದ ಮೆಂಬರ್ರುಗಳು ಪೇಪರನ್ನು ಸರಿಯಾಗಿ ಓದಿಕೊಂಡಿದ್ದರೋ ಎಂದಾದರೂ ಹೇಳುವುದು ಕಠಿಣವಿದೆ. ಕ್ರಾನಿಕಲ್ ಪತ್ರಿಕೆಗೆ 'ಈ ಕೌನ್ಸಿಲು ಇನ್ನೂ ಮುಗಿಯದೆ ತನ್ನ ವ್ಯರ್ಥ ಜೀವನ ಸಾಗಿಸುತ್ತಿದೆ' ಎಂದೇ ತೋರುತ್ತಲಿದೆ. ಜಾತಿಸ್ವಾರ್ಥಗಳ ಭೂತವು ಈ ಕೌನ್ಸಿಲಲ್ಲಿ ದವಲತ್ತು ನಡೆಸುತ್ತಲಿದ್ದಂತೆ, ಮತ್ತೆಲ್ಲಿಯೂ ಇಲ್ಲ.' ಏಳು ತಾಸು ಚರ್ಚಿಸಿಯೂ ನಿದ್ರೆಯಲ್ಲಿ ಧ್ಯಂತಿಯೇ ತೋರುವ ಇಂಥ ಕೌನ್ಸಿಲು ಮೆಂಬರರಿಂದ ಮುಂದೇನು ನಿರೀಕ್ಷಿಸುವುದಕ್ಕಿದೆ?

## NOTES... ನೋಟಗಳು.

ಇಡೀ ಜನಾಂಗದ ಮುಂದೆ ನಿಂತಿದೆ ಎಂದರೆ [illegible] ಭಯಂಕರ ದಾರಿದ್ರ್ಯ, ಕಪ್ಪು ಭೂತ; ಮತ್ತು ಅದಕ್ಕೆ [illegible] ನಾಗಿ ಅಂತರಿಂದ್ರಿಯಗಳನ್ನು ತಲ್ಲಣಗೊಳಿಸುವ ರಾಜಕೀಯ [illegible] ದಿಳೇ ಕಾಗದ. ಸ್ವರಾಜ್ಯದ ಶ್ವೇತಪತ್ರದ ನೆರಳಲ್ಲಿ ದಾಸರ [illegible] ನೆಂದು ಆಶಿಸಿದ್ದವರಿಗೆ, ಶ್ವೇತಪತ್ರದ ಕರೀನೆರಳೇ ದೊರೆತುದಲ್ಲ [illegible] ಕಾಗದದ ಕೊಡೆಯು ನೆರಳು ಎಷ್ಟು ಆಶ್ರಯ ಕೊಡಬಲ್ಲುದು?

* * * *

ಇಂಗ್ಲಿಷು ಭಾಷೆ ಕಲಿಯುತ್ತಲೇ ಇಂಗ್ಲಿಷರನ್ನು ಹೊ[illegible] ಮಾಡಲೂ ಕಲಿತವರೇ ಇಂಡಿಯದ ರಾಜಕಾರಣ ಪುರುಷರು ಎಂದು ಚರ್ಚಿಹಿಲ್ಲರು ಸಾರುವಾಗ, ಇಂಡಿಯದ ಸಂಬಳ ಅಥವಾ ವ್ಯಾಪಾರ ದೊರೆತೊಡನೆಯೇ ಇಂಡಿಯವನ್ನು ಕಿಸೆ ಗಡಿಯಾರದಂತೆ ಇಟ್ಟುಕೊಳ್ಳಬೇಕೆನ್ನುವ ಇಂಗ್ಲಿಷ ರಾಜಕಾರಣ ಪುರುಷರೂ ಇರುವರೆಂದು ಹೇಳಲು ಅವರು ಮರೆತರು.

* * *

ಎರಡೂ ಅಭಿಪ್ರಾಯಗಳು ಸುಳ್ಳು, ಎಂದು ನಂಬುವ ಇಂಗ್ಲಿಷರಾದರೂ ಇರುವರೆ? ಇಂಡಿಯದ ಹಿತಕ್ಕಾಗಿ ರಕ್ಷಣೋಪಾಯಗಳನ್ನು 'ಮಾಡಲಾದೀತು' ಎಂದು ಇದುವರೆಗೆ ಹೇಳಿ, ಈಗ "ಇಂಡಿಯದ ಮತ್ತು ಇಂಗ್ಲೆಂಡಿನ ಹಿತಕ್ಕಾಗಿ ರಕ್ಷಣೋಪಾಯಗಳು' ಎಂದು ಕುಂಟುಪಂಕ್ತಿ ಸೇರಿಸಿದ ಮಹನೀಯರಾದರೂ ಇದನ್ನು ವಿವರಿಸುವರೆ?

* * * *

ಇಂಗ್ಲಿಷ ವ್ಯಾಪಾರಿಯರ ಕೆಲ ನವುಕರರನ್ನು ರಷ್ಯದ ಸರಕಾರವು ಜಮೀನಿನ ಮೇಲೆ ಬಿಡಲೂ ಸಮ್ಮತಿಸದೆ ಕೈದಿನಲ್ಲೇ ಇಟ್ಟಿದೆ. ಸಾಮ್ರಾಜ್ಯವುಳ್ಳವರನ್ನು ಹೀಗೆ ಪೀಡಿಸುವುದರಿಂದ ಫಲವೇನು? ರಷ್ಯದೊಡನೆ ಇರುವ ವ್ಯಾಪಾರ ಸಂಬಂಧದ ಕರಾರನ್ನು ಮುರಿದಿಕ್ಕುವರೆ ಈಗ ಇಂಗ್ಲಿಷರ ಪ್ರಯತ್ನಗಳಾಗಿವೆ. ಈ ಮುಯ್ಯಿಗೆ ಆ ಮುಯ್ಯಿ?

* * * *

ಶ್ರೀ ವಿಟ್ಠಲಭಾಯಿ ಪಟೇಲರು ಅಮೇರಿಕದಲ್ಲಿ [illegible] ಮಹಾ ಸಭೆಗಳಲ್ಲಿ ವ್ಯಾಖ್ಯಾನ ಮಾಡಿ ಭಾರತೀಯರ ಆಕಾಂಕ್ಷೆಗಳು ಲೋಕ ಸಮ್ಮತವಾದುವೆಂಬುದನ್ನು ವಿವರಿಸಿದರು. ಗವರ್ನರರು, ನ್ಯಾಯವಿಧಾಯಕ ಸಭೆಗಳು ಮೊದಲಾದುವು ಅವರಿಗೆ ಅಲ್ಲಿ ಕೊಟ್ಟಿರುವ ಬಹುಮಾನ ಗೌರವಾದಿಗಳನ್ನು ಇದುವರೆಗೆ ಯಾವ ಹಿಂದೀಯನೂ ಪಡೆದುದಿಲ್ಲ. ರ್ಯೂಟರನು ಮಾತ್ರ ಇದೊಂದನ್ನು ಯಾರಿಗೂ ತಿಳಿಸಲೇ ಇಲ್ಲ; ತಿಳಿಸಿದರೆ ತಂತೀ ಕಡಿದು ಹೋದೀತೆಂದು ಬೆದರಿಕೆ.

* * * *

ಮದ್ಯಪಾನ ನಿವಾರಣೆಗೆ ಸುಲಭೋಪಾಯವೆಂದರೆ ಬಲ್ಲವರು ಮುಂಬಾಯಿಯ ಅಬಕಾರಿ ಇಲಾಖಾ ಮಂತ್ರಿಗಳು. ಅಂಗಡಿ (ಗಡಂಗು)ಗಳನ್ನು ಸರಾಗ ಹೆಚ್ಚಿಸಿರಿ; ಕ್ರಯವನ್ನು ಸುಲಭವಾಗಿ ಇಳಿಸಿರಿ. ಕುಡಿಮು ಬೇಸರ ಹಿಡಿದು, ಬೇಡವೆನ್ನುವರು. ತೆರಿಗೆ ತೆತ್ತು ಸಾಕೆನ್ನುವರು. ಇದೇ ಅವರ ಶಿಫಾರಸು.

* * * *

ಜನರು ಕುಡಿಯುತ್ತಾ ಹೋಗುವಾಗ, ಹುಟ್ಟುವ ಸುಂಕದಿಂದ ಶಾಲೆಗಳಿಗೆ ಗ್ರೇಂಟು, ವಿದ್ಯಾ ಇಲಾಖೆಗೆ ಬಡ್ತಿ, ಮಾಸ್ತರರಿಗೆ ಸಂಬಳ, ಎಂದೇ ಆ ಸುಂಕಕ್ಕೂ ಈ ಖರ್ಚಿಗೂ ಗಂಟು ಹಾಕಲಾಗಿದೆ. ಕಾಲಾ ವಕಾರದಲ್ಲೆಲ್ಲ ಗಡಂಗುಗಳನ್ನು ಇರಿಸಲು, ಅಥವಾ ಗಡಂಗುಗಳ ಸಂಖ್ಯೆ ಹೆಚ್ಚಿಸಲು ಅವರು ಆತುರಗೊಂಡಿರುವುದೂ ಇದಕ್ಕಾಗಿಯೆ.

## ಪ್ರತ್ಯುತ್ತರಿದ ಪ್ರಶ್ನೆಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಬೇಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಾಲೋಚನ ರೂಪದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿ ಯನ್ನೀಯದುವಲ್ಲವೇ?

**ಸ್ವದೇಶೀ**

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಟವಲ್ ರುಮಾಲುಗಳೂ, ಧೋತಿ, ಸೀರೆ—ಪೈರವಾಸು—ಚೌಕ್ಕ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

**ಶ್ರೀನಿವಾಸ ರಂಗ ಪೈ,**

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— A. & F. Harvey,
*Managers:* Madura Mills Co, Ltd.



# The Kanara Enterprise, Ltd., Puttur.

## ದಿ ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್, ಪುತ್ತೂರು.

**Established 1920]** [1920ರಲ್ಲಿ ಸ್ಥಾಪಿತವಾದದ್ದು.

| | | | | |
|---|---|---|---|---|
| Authorised Capital | Rs. 2,00,000—0—0 | ಅಧಿಕೃತ ಮೂಲಧನ | ರೂ. | 2,00,000—0—0 |
| Issued Capital | Rs. 44,100—0—0 | ಚಂದಾ ಹಾಕಿದ ಮೂಲಧನ | ರೂ. | 44,100—0—0 |
| Paid up Capital | Rs. 30,182—8—0 | ಪಾವತಿ ,, | ರೂ. | 30,182—8—0 |
| Reserve and other Funds | 15,650—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು | | 15,650—0—0 |

All kinds of Banking business undertaken.

Current, Savings and fixed Deposits are received at favourable rates.

Advances are made on bills, pledges of gold and other securities.

***Shares are now available***

For Further particulars apply to the Secretary.

Puttur,
16—2—1933.

**G. N. LAKSHMAN PAI,**
*Ag. Secretary.*


## ಕರ್ನಾಟಕದ ಸುದ್ದಿಗಳು.

ಮೈಸೂರು ಸಹಕಾರ ಪ್ರಚಾರಕ ಸಂಘದವರು ಮೈಸೂರು ನಗರದಲ್ಲಿ ೬೦೦೦೦ ರೂಪಾಯಿಗಳ ಅಂದಾಜಿನ ಒಂದು ಸಹಕಾರ ಗೃಹವನ್ನು ಕಟ್ಟಲು ಆರಂಭಿಸಿದರು. ತಾ. ೨೨ನೇ ದಿನ ಆ ಗೃಹದ ಅಸ್ತಿಭಾರ ಶಿಲೆಯನ್ನು ಶ್ರೀ ಮಮ್ಮವ ರಾಜರವರು ಹಾಕಿದರು. ಈ ಕಟ್ಟಡಕ್ಕಾಗಿ ಎಪೆಕ್ಸ್ ಬೇಂಕಿನವರು ೫೦೦೦ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸಂಸ್ಥಾನದ ನಾನಾ ಪರಸ್ಪರ ಸಹಾಯ ಸಂಘಗಳವರು ಯಥಾಶಕ್ತಿ ಸಹಾಯ ಮಾಡಲು ಒಪ್ಪಿದ್ದಾರೆ. ಹೊಸಕೋಟೆ ತಾಲೂಕು ಕೋ—ಆಪರೇಟಿವ್ ಸೊಸೈಟಿಯವರು ೫೫೦ ರೂಪಾಯಿಗಳನ್ನು ಆಗಲೆ ಪಾವತಿ ಮಾಡಿಬಿಟ್ಟು ಇತರರಿಗೆ ಉದಾಹರಣೆ ಹಾಕಿ ಕೊಟ್ಟರು.

ಬೆಂಗಳೂರು, ಮೈಸೂರು, ನಂಜನಗೂಡು ಮಾರ್ಗಗಳಲ್ಲಿ ವಿದ್ಯುಚ್ಛಕ್ತಿ ರೈಲುಗಳನ್ನು ಓಡಿಸಬೇಕೆಂದು ಸರಕಾರದವರು ಯೋಚನೆ ಮಾಡುತ್ತಿರುವ ಹಾಗಿದೆ. ಇದಕ್ಕೆ ೨೦ ಲಕ್ಷ ರೂಪಾಯಿಗಳು ಬೇಕಂತೆ.

ತಾ. ೨೫ನೇ ದಿನ ಚಿತ್ರದುರ್ಗದ ಜಿಲ್ಲಾ ಬೋರ್ಡಿನ ಕಟ್ಟಡದ ಅಸ್ತಿಭಾರ ಶಿಲೆಯನ್ನು ದಿವಾನರು ಪ್ರತಿಷ್ಠಿಸಿದರು. ಆಗ 'ಸ್ವಂತ ಪ್ರಯೋಜನಕ್ಕಿಂತಲೂ ಸಾರ್ವಜನಿಕ ಶ್ರೇಯಸ್ಸೇ ಮುಖ್ಯ' ಎಂದರು. ಪೌರ ಸಭೆಯವರು ಭಿನ್ನವತ್ತಳೆಯನ್ನು ಅರ್ಪಿಸಿದರು.

ಸಕಲೇಶಪುರದಲ್ಲಿ ಅಸಿಸ್ಟೆಂಟ್ ಕಮೀಷನರಾಗಿರುವ ಶ್ರೀ ತಿಮ್ಮಣ್ಣನವರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಗಳ ಸ್ಥಾನಕ್ಕೆ ನಿಯಮಿಸಿದ್ದಾರೆ.

ಮೈಸೂರು ಹೈಕೋರ್ಟಿನ ವಕೀಲರಾದ ಶ್ರೀ. ಟಿ. ರಂಗರಾಯರು ತಮ್ಮ ವೃತ್ತಿಗೆ ಅಗೌರವ ತರುವಂತಹ ದುರ್ವರ್ತನಗಳನ್ನು ತೋರಿಸಿ ಕಕ್ಷಿಗಾರರನ್ನೂ ಮತ್ತು ಪ್ರತಿಪಕ್ಷದ ವಕೀಲರನ್ನೂ ಸಹ ಮೋಸಪಡಿಸುವುದಕ್ಕೆ ಹೇಸುವುದಿಲ್ಲ. ಮುಂತಾಗಿ ಟೀಕಮಾಡಿ ಹೈಕೋರ್ಟಿನ ಜಡ್ಜಿಗಳು ಒಂದು ವರ್ಷಕಾಲ ಇವರು ವಕಾಲತ್ತು ನಡೆಸಕೂಡದೆಂದು ಆಜ್ಞೆ ಮಾಡಿದ್ದಾರೆ.

ತಾ. ೨೭—೩—೩೩ನೇ ಸೋಮವಾರ ಬೆಂಗಳೂರು ಚಿಕ್ಕಪೇಟೆ ಇಂಡಿಯನ್ ರೆಸ್ಟೋರೆಂಟ್ ಮಹಡಿಯ ಮೇಲೆ ಕರ್ನಾಟಕ ಕಲಾ ಸೇವಾ ಸಂಘದ ಪ್ರಾರಂಭೋತ್ಸವವು ಸಾಯಂಕಾಲ ಘಂಟೆ ೫—೩೦ಕ್ಕೆ ಶ್ರೀ. ದೇವುಡು ಶಾಸ್ತ್ರಿ ಎಂ. ಎ., ಇವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು.

ತುಮಕೂರಿನಲ್ಲಿ ಶ್ರೀಯುತರುಗಳಾದ ಕೆಂಪಹೊನ್ನಯ್ಯ ಬಸಪ್ಪನವರು ಕಟ್ಟಿಸುತ್ತಿರುವ ಹೆಂಗಸರ ಮತ್ತು ಮಕ್ಕಳ ಚಿಕಿತ್ಸಾ ಕೊಠಡಿಗಳ ಅಂಕಿತ ಶಿಲೆ ಫಲಕವನ್ನು ಹಾಕುತ್ತಾ ದಿವಾನರು ಧರ್ಮ ಮಾಡಿದವರನ್ನು ಶ್ಲಾಘಿಸಿದರು.

ದಿವಂಗತ ಶ್ರೀ ಪಾಪಣ್ಣನವರು ೨೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಛತ್ರ ಕಟ್ಟಿಸಿದರು. ಆ ಛತ್ರದಲ್ಲಿ ತಾ. ೨೨ನೇ ದಿನ ಪಾಪಣ್ಣನವರ ಛಾಯಾಚಿತ್ರದ ಅನಾವರಣ ಮಾಡಿದರು.

ಸಕಲೇಶಪುರದ ಸ್ಪೋರ್ಟ್ಸ್ ಯೂನಿಯನ್ನಿನವರು ಬರುವ ಎಪ್ರಿಲ್ ತಿಂಗಳ ೩ನೇ ವಾರದಲ್ಲಿ ಫುಟ್‌ಬೋಲ್ ಕೇರಮ್ ಬೆಡ್ ಮಿಂಟನ್ ಟೂರ್ನಮೆಂಟ್ ಪ್ರಾರಂಭಿಸುವರಾಗಿಯೂ ಆ ಸಮಯ ಹಲವು ಕಡೆಗಳಿಂದ ಟೀಮುಗಳು ಬರುತ್ತವೆಂದೂ ತಿಳಿದು ಬರುತ್ತದೆ.


# Attur Vaikunta Prabhu Bank, Mangalore.

## ಅತ್ತೂರು ವೈಕುಂಠ ಪ್ರಭು ಬೇಂಕ್, ಮಂಗಳೂರು.

### ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದಲೂ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ ಸಂ| 1933ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 8ನೇ ಶನಿವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಇದೇ ಎಪ್ರಿಲ್ ತಾರೀಕು 15ನೇ ಶನಿವಾರ ದಿವಸ ಮಧ್ಯಾಹ್ನ 2 ಗಂಟೆ ತರುವಾಯ ಯಾ ಬೇಂಕಿನವರಿಗೆ ಯುಕ್ತ ತೋರುವ ಮುಂದಣ ತಾರೀಕು ಯಾ ತಾರೀಕುಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

| | ಸಾಲದ ನಂಬ್ರ ಮತ್ತು ಅಡವಿಟ್ಟ ತಾ. | ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ. | ಬೇಂಕಿಗೆ ಬರತಕ್ಕ ಅಸಲು. ರೂಪಾಯಿ. |
|---|---|---|---|
| 1 | 1787 / 22—7—32 | ಗುಲಾಂಬ್ಯಾರಿ. ಮಸೇನಬ್ಯಾರಿಗಳ ಮಗ, ಕುದ್ರೋಳಿ ನಡುಪಳ್ಳಿ ಹತ್ತಿರ, ಮಂಗಳೂರು. | 50—0—0 |
| 2 | 1303 / 24—5—32 | ಜಾದು ಸಾಲಿಯಾನ. ಕೊರಗ ಸಾಲಿಯಾನನ ಮಗ. ಕುದ್ರೋಳಿ, ಕರ್ನೆಲ್ ಹಿತ್ಲು—ಮಂಗಳೂರು | 30—0—0 |
| 3 | 1921 / 11—8—32 | ಡಿ. ಕೆ. ಶೆಟ್ಟಿ. ಕೊರಗ ಶೆಟ್ಟಿಯವರ ಮಗ, ತೋಲಾರ್ ಗ್ರಾಮ—ಮಾವಿನ ಅಡಿಮನೆ ಜಪ್ಪಿನಮೊಗರು ಪೋಸ್ಟು. | 20—0—0 |
| 4 | 1668 / 6—7—32 | ಬಾಬು ಪೂಜಾರಿ. ಕೊದ್ದರ ಪೂಜಾರಿ ಅಳಿಯ. ದೇರೆಬೈಲು. ಉರುವ ಪೋಸ್ಟು ಮಂಗಳೂರು. | 20—0—0 |
| 5 | 423 / 22—2—32 | ಸೀನ ರೈ—ನೇಮು ಶೆಟ್ರ ಅಳಿಯ—ಕೆಂಜಾರು ಗ್ರಾಮ—ಸುರತ್ಕಲ್ ಪೋಸ್ಟು ಮಂಗಳೂರು. | 11—0—0 |
| 6 | 1737 / 16—7—32 | ಶೇಖ ಬ್ಯಾರಿ. ಮೊಯಿದಿನ ಬ್ಯಾರಿಗಳ ಮಗ. D. P. W. ಕಂಟ್ರಾಕ್ಟರ್ ಬಜಪ್ಪೆ ಪೋಸ್ಟು ಮಂಗಳೂರು. | 10—0—0 |
| 7 | 101 / 13—1—32 | ಡಿ. ಆರ್. ಕುಪ್ಪುಸ್ವಾಮಿ ರೆಡ್ಡಿ. ಡಿ. ಆರ್. ರಾಮಯ್ಯ ರೆಡ್ಡಿಯವರ ಮಗ ಸ್ಟೋರ್ಕೀಪರ್ ಪಂಪ್‌ವೆಲ್ ಕಟ್ಟೆ ಮಂಗಳೂರು. | 9—0—0 |
| 8 | A66 / 18—7—32 | ಮೊಯಿದಿನ್‌ಕುಂಞ ಬ್ಯಾರಿ. ಎರ್ಮಲ್ಲಿ ಬ್ಯಾರಿಗಳ ಮಗ, ಮಂಜಿಯ ಕೆಲಸ ಕುದ್ರೋಳಿ ಮಂಗಳೂರು. | 15—0—0 |
| 9 | A205 / 16—8—32 | ಅಯ್ಯಪ್ಪ ಕೊರಗನವರ ಅಳಿಯ—ಬೇಸಾಯ ಮತ್ತು ಮಗ್ಗದ ಕೆಲಸ. ಜಪ್ಪು ಮೊಗರು ಗ್ರಾಮ ಮಹಾಕಾಳ ಪಡ್ಪು ಕಂಕನಾಡಿ ಪೋಸ್ಟು, ಮಂಗಳೂರು. | 12—0—0 |
| 10 | A307 / 5—9—32 | ತುಕ್ರ, ಬಚ್ಚುವಿನ ಮಗ. ಬಿಜಯಿ ಗೇಟಿನ ಹತ್ತಿರ ಬಿಜಯಿ ಪೋಸ್ಟು ಮಂಗಳೂರು. | 9—0—0 |
| 11 | A78 / 22—7—32 | ಅಬ್ದುಲ್ ಖಾದ್ರಿ ಬ್ಯಾರಿ—ಮರಕ್ಕಡ ಹುಸೇನ ಬ್ಯಾರಿಗಳ ಮಗ ಕಟ್ಟಿಗೆ ವ್ಯಾಪಾರಿ ಗೋಳಿಕಟ್ಟೆ ಬಜಾರ್ ಮಂಗಳೂರು. | 7—0—0 |
| 12 | A217 / 18—8—32 | ಗುರುವ ಐತನ ಮಗ. ಅತ್ತಾವರ ಬಾಬುಗುಡ್ಡೆ—ಮಂಗಳೂರು. | 5—0—0 |

ಮಂಗಳೂರು,
27—3—33.

**A. Vaikunta Prabhu,**
Proprietor.

## ಅನುಕ್ರಮಣಿಕೆ.


ಅಗ್ರಲೇಖ
- ಹಿಂದೂಗಳು ಚೇತರಿಸಬೇಕು . . . ೪
- ಸ್ಫುಟವಿಚಾರಗಳು . . . ೬
- ನೋಟಗಳು . . . ೧೧

ವರ್ತಮಾನ ಸಂಗ್ರಹಗಳು
- ಒಳದೇಶ ವರ್ತಮಾನ ವಿದೇಶ ವರ್ತಮಾನ . . . ೮
- ವಿವಿಧ ಸಮಾಚಾರಗಳು . . . ೧೧
- ಸಂಕಲ್ಪ ಕಾರ್ಯಸಿದ್ಧಿ . . . ೨
- ಪತ್ರವ್ಯವಹಾರ . . . ೧೪
- ಸ್ಥಳೀಕ ನೋಟಗಳ ಭಾಗ! . . . ೪
- ದಕ್ಷಿಣ ಕನ್ನಡ — ಮಂಗಳೂರು, ಕಾರ್ಕಳ, ಸುರತ್ಕಲ್ ಮುಲ್ಕಿ, ಫರಂಗಿಪೇಟೆ, ಕೋಟೆಕಾಡಿ, ಬಂಟ್ವಾಳ . . . ೯
- ಆಧುನಿಕ ಕಾಲದ ದಾಂಪತ್ಯಜೀವನ . . . ೧೫
- ವಾರ್ತಾವಳಿ . . . ೨
- ಕಲ್ಕತ್ತದಲ್ಲಿ ನಿಷೇಧಾಜ್ಞೆ! ಗುಂಡು! ದಸ್ತಗಿರಿ! . . . ೧೦
- ಕನ್ನಡ ನಾಡಿನ ಸುದ್ದಿ! . . . ೭


# ಸ್ವದೇಶಾಭಿಮಾನಿ.

ತಾ. ೩೧ನೇ ಶುಕ್ರವಾರ ಮಾರ್ಚ ೧೯೩೩.

## ಹಿಂದೂಗಳು ಚೇತರಿಸಬೇಕು

### ಲೇಖಾಂಕ ೨.

ಮತಸ್ಥಾಪನೆಯ ಮುಖ್ಯ ಉದ್ದೇಶವು ಸಮಾಜ ರಚನೆ. ಕೆಲವರು ಇದನ್ನು ನಿರಾಕರಿಸಬಹುದು. ಆಸ್ತಿಕ್ಯವನ್ನು ಸೂತ್ರಬದ್ಧವಾಗಿ ಮಾಡುವುದೇ ಪ್ರತಿಯೊಂದು ಮತದ ಉದ್ದೇಶವಾಗಿರುತ್ತದೆ ಎಂದು ಕೆಲವರು ಹೇಳಬಹುದು. ಆದರೆ ಆ ಆಸ್ತಿಕ್ಯದ ಆಚರಣೆಯು ಅಡಿಗಲ್ಲು ಸಮಾಜದ ಸುವ್ಯವಸ್ಥೆಯಾಗಿರುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದುದರಿಂದ ಆಸ್ತಿಕ್ಯದ ಸೂತ್ರಬದ್ಧತೆಯ ಬಗ್ಗೆ ಯಾದರೂ ಸಮಾಜ ವ್ಯವಸ್ಥೆಯು ಚೆನ್ನಾಗಿ ಸಾಗಬೇಕು.

ಈ ಬಗ್ಗೆ ಹಿಂದೂಗಳಿಗೆ ಮಠ ದೇವಸ್ಥಾನಗಳಿವೆ; ಮುಸಲ್ಮಾನರಿಗೆ ಮಸೀದಿಗಳಿವೆ; ಕ್ರಿಸ್ತೀಯರಿಗೆ ಇಗರ್ಜಿಗಳಿವೆ. ಹಾಗೆಯೇ ಇತರ ಮತಸ್ಥರಿಗೆ ಇಂತಹುದೇ ಸಂಸ್ಥೆಗಳಿವೆ. ಆದರೆ ನಾವು ಈ ಮೊದಲೇ ಸೂಚಿಸಿದಂತೆ ಮಸೀದಿ, ಇಗರ್ಜಿಗಳು ಸ್ವಮತೀಯರ ಮತದ ಅಖಂಡತೆಯ ಬಗ್ಗೂ, ಸಮಾಜದ ಸುವ್ಯವಸ್ಥೆಯ ಬಗ್ಗೂ ಶ್ರಮಿಸಿ ದಣಿಯುವಾಗ ಮಠ ದೇವಸ್ಥಾನಗಳ ಆಡಳಿತೆಗಳ ಉದ್ದೇಶದ ಕಲ್ಪನೆಯೇ ವಿಪರೀತವಾಗಿದೆ. ದುಡ್ಡಿನ ಸಂಚಯವು, ಮುಖ್ಯವಾಗಿದೆ. ಅದೃಶ್ಯ ದೇವರ ಬಗ್ಗೆ ಮಾನವೀ ಕಲ್ಪನೆಯು ಐಹಿಕ ಸಂಭೋಗಗಳನ್ನು ರಚಿಸುವುದೇ ಈ ಮಠದೇವಾಲಯಗಳ— ಏಕೆ ಸಂಬಂಧಪಟ್ಟ ಭಕ್ತಾನುಯಾಯಿಗಳ ಕೂಡ—ಯೋಚನೆ ಮತ್ತು ಆಕಾಂಕ್ಷೆಯಿದೆ. ದೇವಸ್ಥಾನಗಳು, ಮಠಗಳು ನಡಿಸುವ ಶಾಲೆಗಳು, ಸೇವೆಗಳು ಮುಚ್ಚಲ್ಪಡುತ್ತಿವೆ-ಆದರೆ ದೇವಸ್ಥಾನಕ್ಕೆ ಇಲೆಕ್ಟ್ರಿಕ್ ಲ್ಯಾಟು, ದೇವರಿಗೆ ಭಂಗಾರ, ಪಲ್ಲಕ್ಕಿ, ಇತ್ಯಾದಿಗಳ ಕಡೆಗೆ ಜನತೆಯ ಗಮನ ಹೆಚ್ಚುತ್ತಲಿದೆ. ಅದೇ, ಇತರ ಮತೀಯರನ್ನು ಕಂಡರೆ ಇದರ ಸರಿ ವಿರೋಧ ನಡೆವಳಿಕೆಯು ಕಾಣುವುದು.

ಹಾಗೆಂದು ಹಿಂದೂವು, ಸಾಮಾನ್ಯ ಹಿಂದೂವು, ನಿಜವಾಗಿ ದೇವಭಕ್ತನೇ? ಹಿಂದೂ ಮತದ ಪರಮಾರ್ಥದ ತತ್ವಗಳಿಂದಲೇ ಭಕ್ತಿಯನ್ನು ಅಳೆಯುವುದಾದರೂ, ಸಾಮಾನ್ಯನಲ್ಲಿ ನಿಜವಾದ ಭಕ್ತಿಯು ಕಾಣುವುದಿಲ್ಲ. ಕ್ರಿಸ್ತೀಯರಲ್ಲಿ, ಮಹಮ್ಮದೀಯರಲ್ಲಿ 'ಭಕ್ತಿ—ವಿಶ್ವಾಸಗಳ' ವಿಶ್ವಾಸವಿದೆ. ಆದರೆ ಆ ಭಕ್ತಿ—ವಿಶ್ವಾಸಗಳಿಗೆ ಸ್ಪಷ್ಟವಾದ ರೂಪವಿದೆ; ಅವುಗಳಿಗೆ ಸರಿಯಾದ ಮೇರೆಯಿದೆ. ವ್ಯಕ್ತಿಗೆ ಅದು ಸರಿಯಾಗಿ ದೃಷ್ಟಿಗತವೂ ಮನೋಗತವೂ ಆಗುತ್ತಿದೆ. ಅವರ ಮತ ಪುಸ್ತಕಗಳೂ ಮತೋಪದೇಶಕರೂ ಆಗಾಗ ಭಕ್ತಿಯ ಎಲ್ಲೆಯನ್ನೂ ನಿರ್ದೇಶಿಸುತ್ತಾರೆ. ಆದರೆ ಹಿಂದೂಮತದಲ್ಲಿ ಅದಕ್ಕೆ ಎಲ್ಲೆ ಇಲ್ಲ; ಅದಕ್ಕೆ ರೂಪವಿಲ್ಲ; ಅದರ ತಿಳಿವಿನ ಸ್ಪಷ್ಟತೆಯೂ ಇಲ್ಲ. ವಿಶಾಲ—ಈ ವಿಶಾಲತೆಯ ಮಹಾನ್ ಮತಾಚಾರ್ಯರು ಕೂಡ ಮಹತ್ವವನ್ನುಸುರಿದ್ದಾರೆ. ಆದರೆ ಸಾಮಾನ್ಯನಿಗೆ ಅದರ ಅಮಿತ್ವ ಭಕ್ತಿಯು ಹಿಂದೂಮತದಲ್ಲಿ ಬಾಲಿಷ್ಯ ಮತ (a Religion of weakness)ವಾಗಿ ಪರಿಣಮಿಸಿದೆ. ಈಗ ಭಕ್ತಿಯು ಸ್ಥೈರ್ಯದ ಮತ್ತು ವೀರತೆಯ ಮತವಾಗಿಲ್ಲ; ದೇಹದ ನಿರ್ಬಲ ನರಗಳನ್ನು ಉತ್ತೇಜಿಸಲು ಈ ಮತವು ಹವಣಿಸುತ್ತಿದೆ. ಪರಿಣಾಮದಲ್ಲಿಯೂ ಅದು ಹಾಗೆಯೇ ನಿಂತಿದೆ.

ಬುದ್ಧನ ಅಹಿಂಸಾತತ್ವವು ಹಿಂದೂಮತದೊಳಗಿನ ವೀರತೆಯ ಮತ್ತು ಶಕ್ತಿಯ ರಸಗಳನ್ನು ಹಿಂಡಿತು. ಪೂರ್ವದ ಹಿಂದೂಗಳ ದೇವರಾರು? ಶಂಖ ಚಕ್ರ ಧಾರಿಯಾದ ವಿಷ್ಣುವೊಬ್ಬನು; ಕಪಾಲಮಾಲಾಧಾರಿಯಾದ ಶಿವನೊಬ್ಬನು ರಣಕಹಳೆಯನ್ನು ಮೊಳಗಿಸುವ ಶಸ್ತ್ರಸಜ್ಜಿತನಾದ ಯೋಧ್ಧನೊಬ್ಬನು ಮೃತ್ಯುವನ್ನೇ ವಿತರಿಸುವ ನಾಶಕಾರಿ ಶಿವನೆರಡನೆಯವನು— ಅಹಿಂಸಾತ್ಮಕ, ರಚನಾ ಕಾರಣನಾದ ಬ್ರಹ್ಮನು ದೇವರ ಸಂಗಡದಲ್ಲಿದ್ದರೂ, ಅವನ ಪೂಜೆಯಿಲ್ಲ. ಈಗಲೂ ಕೂಡ ದೇವಸ್ಥಾನಗಳೊಳಗಿನ ರಥೋತ್ಸವ, ಧ್ವಜಾರೋಹಣಗಳ, ಆ ವೀರಯೋಧ್ಧತೆಯ ವಿಸ್ಮೃತಭಾವಗಳ ಶೇಷಾಂಶಗಳು. ಆದರೆ ಆ ಕರ್ಮಮಯ, ಶಕ್ತಿಮಯ, ಚೇತನಮಯವಾದ ದೇವರ ವಿಷಯದಲ್ಲಿ ಈಗಿನ ಕಲ್ಪನೆಯೇನು? ಆ ಆರತಿಗಳೆತ್ತುವುದರ ಈಗಿನ ಅರ್ಥವೇನು? ಅಂದಿನ ಹಿಂದೂ ವೀರ ಕುಲಉದ್ಧಾರಕನು ಇಂದಿನ ಬಾಳೆಗೊನೆಗಳ ಭಕ್ಷಕನಾಗಿ ಪರಿಣಮಿಸಿದ್ದಾನೆ.

ಮಹಾತ್ಮಾಜೀಯವರ ಅಸಹಕಾರ—ಸತ್ಯಾಗ್ರಹ ಚಳವಳಿಗಳು ಹಿಂದೂಮತಕ್ಕೆ ಇನ್ನೊಂದು ಪ್ರಚಂಡ ಆಘಾತವಾಗಿರುತ್ತವೆ. ಅವರ ತತ್ವಗಳಿಗೆ ಪ್ರಬಲ ಆತ್ಮಶಕ್ತಿಯ ಆಧಾರವಿದೆಯೇನೋ ನಿಜ. ಆದರೆ ವ್ಯಕ್ತಿಗಳಲ್ಲಿ ತಾರತಮ್ಯವಿದೆ. ಗುಜರಾಥಿ ಎತ್ತು ಗಾಡಿಯನ್ನೆಳೆಯಲಾರದೆ ಕೆಳಗೆ ಮಲಗಿ ಸತ್ಯಾಗ್ರಹ ಮಾಡಲಿಕ್ಕೂ, ಕಾಡಿನ ಹುಲಿಯು ಮೈತುಂಬಾ ಬಲವಿದ್ದೂ, ಬಾಯಿ ತುಂಬಾ ಹಲ್ಲಿದ್ದೂ ಹಳ್ಳಿಗನೊಬ್ಬನನ್ನು ಎದುರಿಸದೆ ಪೆಟ್ಟು ತಿಂದು ಸತ್ಯಾಗ್ರಹ ಮಾಡಲಿಕ್ಕೂ ತಾರತಮ್ಯವಿದೆ. ಆದರಿಂದ ವೀರತೆಯು ಹೆಚ್ಚುವುದಿಲ್ಲ; ನಿಸ್ಸತ್ವ ಮನುಷ್ಯನಿಗೆ ಸತ್ಯಾಗ್ರಹವು ತನ್ನ ಹೇಡಿತನಕ್ಕೆ ಮುಚ್ಚಿಗೆ ಮಾತ್ರವಾಗುತ್ತದೆ; ನಿರ್ಬಲನಿಗೆ ಅದೊಂದು ಆತ್ಮ ಸಮಾಧಾನವಾಗುತ್ತಿದೆ. ಫಲಿತಾಂಶವಾಗಿ, ಜನತೆಯಲ್ಲಿ inferiority complex ಅಂದರೆ ತಾವು ನಿಸ್ಸತ್ವಿಗಳೆಂಬ ಭಾವನೆಯು ಮನಸ್ಸಿನಲ್ಲಿ ನೆಲೆಗೊಳ್ಳುವುದು.

++ ++

## LATEST NEWS.

**ಪಂಡಿತ ಮಾಲವೀಯರು ಬೆನಾರಿಸ್ ನಿಂದ ಕಲ್ಕತ್ತಕ್ಕೆ ಕಾಂಗ್ರೆಸ್ ಮಹಾ ಸಭೆಯ ಅಧ್ಯಕ್ಷತೆಯನ್ನು ವಹಿಸ ಹೋಗುವರಾದರೆ, ಅದಕ್ಕೆ ಸರಕಾರವು ಸರ್ವಥಾ ಒಪ್ಪಲಾರದೆಂದು ಬೆನಾರಿಸ್ ಮೆಜಿಸ್ಟ್ರೇಟರು ಪಂಡಿತ ಮಾಲವೀಯರಿಗೆ ಪತ್ರ ಬರೆದಿದ್ದಾರೆ. ಮಾಲವೀಯರ ಉತ್ತರವೇನೆಂದು ತಿಳಿದು ಬಂದಿಲ್ಲ.**

—ಫೆಬ್ರವರಿಯಿಂದ ಈ ತನಕ ಮುಷ್ಕರ ಹಿಡಿದಿದ್ದ ಕಲ್ಕತ್ತಾ ಸೌತ್ ಯೂನಿಯನ್ ಜೂಟ್ ಮಿಲ್ಲಿನ ೮೦೦೦ ಮಂದಿ ಕೆಲಸಗಾರರು ತಮ್ಮ ಮುಷ್ಕರವನ್ನು ಮುಕ್ತಾಯಗೊಳಿಸಿದರು.

—ಪೋಲೀಸರ ಭೇಟಿಗೆ ಬರದಿದ್ದುದಕ್ಕೆ ಅಹ್ಮದಾಬಾದಿನಲ್ಲಿ ಮಾಯಾಬಾಯಿ ಎಂಬ ಯುವಕನಿಗೆ ೧ ವರ್ಷ ಕಠಿಣ ಸಜೆ ಮತ್ತು ೨೦೦ ರೂಪಾಯಿ ದಂಡನೆ.

—ನಾಗಪುರದಲ್ಲಿನ ರೈಲ್ವೆ ಸ್ಟೇಶನಿನಲ್ಲಿ ಒಬ್ಬ ಹುಡುಗನು ತಾನು ರೈಲ್ವೇ ಕ್ಲಾರ್ಕನೆಂದು ನಟಿಸಿ ಟಿಕೇಟಿಲ್ಲದೆ ಪ್ರಯಾಣ ಮಾಡುವ ಕೆಲವರಿಂದ ಒಂದೊಂದು ರೂಪಾಯಿಯನ್ನು ಪಡೆದು ಸಿಕ್ಕಿಬಿದ್ದಿರುವನು.

—ಗಾಂಧಿಜೀಯವರ ಸತ್ಯಾಗ್ರಹ ಆಶ್ರಮದ ಭೂಕಂದಾಯವನ್ನು ಕೊಡಬೇಕೆಂದು ಶ್ರೀ। ಮಹದೇವ ದೇಸಾಯಿಯವರಿಗೆ ಭೂಮಿಯ ಮಾಮ್ಲತದಾರನ ನೋಟೀಸು ಎರವಾಡಾ ಸೆರೆಯೊಳಗೆ ಹೋಗಿರುತ್ತದೆ.

—ಕಲ್ಕತ್ತದಲ್ಲಿ ಡಾ। ಸನ್ಯಾಲರಿಗೆ ಆರು ತಿಂಗಳ ಕಠಿಣ ಸಜೆಯಾಯಿತು

—ದೇವಸ್ಥಾನ ಪ್ರವೇಶ ಸಾಹಸಕ್ಕೆ ಸರಕಾರದ ಬಿಲ್ ಒಂದು ಅಗತ್ಯವೆಂದು ಗಾಂಧಿಜೀಯವರು ಶ್ರೀ। ಲಕ್ಷ್ಮೀಬಾಯಿ ವಾಗೇಲಿ ಎಂಬ ಅಸ್ಪೃಶ್ಯರ ಮುಖಂಡರಿಗೆ ಪತ್ರ ಬರೆದಿರುವರು.

ತಾ. ೨೮ನೇ ದಿನ ಕಲ್ಕತ್ತದಲ್ಲಿ ೫೬ ಮಂದಿ ಕಾಂಗ್ರೆಸ್ ಪ್ರತಿನಿಧಿಗಳನ್ನು ಕೈದುಮಾಡಿ ೧೫ ಮಂದಿಗಳಿಗೆ ವಿವಿಧಾವಧಿಯ ಶಿಕ್ಷೆಯನ್ನಿತ್ತಿರುತ್ತಾರೆ.

## ಒಳದೇಶ ವರ್ತಮಾನ

—ರಂಗೂನಿನಲ್ಲಿ 'ಹೊಂಗ್ ಕೊಂಗ್' ಸ್ಪೀಕುಂತ್ರ್ ಸೆಕೆಂಡ್ ಆಫೀಸರನಾದ ಮನ್ರೋ ಎಂಬವನ ವಶ ೧೪೦೦೦ ರೂಪಾಯಿ ಬೆಲೆಬಾಳುವ ೩೨ ಟಿನ್ನ ಕೋಕೈನ್ ಇದ್ದುದಕ್ಕಾಗಿ ೧೮ ತಿಂಗಳ ಕಠಿಣ ಸಜೆ ವಿಧಿಸಲಾಯಿತು.

—ಬೆನಾರಿಸ್ ನಲ್ಲಿರುವ ಮಾಲವೀಯರು ಪೂನೆಗೆ ಹೋಗಿ ಗಾಂಧಿಜೀಯವರನ್ನು ನೋಡಬೇಕೆಂದು ಆಶಿಗೊಂಡಿದ್ದರೂ ಶೀತ ಮತ್ತು ಜ್ವರದ ಕಾರಣದಿಂದ ಮನೆಯಲ್ಲೇ ಉಳಿಯಬೇಕಾಯಿತು.

—ಕಲ್ಕತ್ತದಲ್ಲಿ ಲೈಸನ್ಸ್ ಇಲ್ಲದ ರಿವಾಲ್ವರನ್ನು ಹಿಡಿದುಕೊಂಡಿದ್ದುದಕ್ಕಾಗಿ ಶೇಕ್ ಇಬ್ರಾಹಿಮನೆಂಬವನಿಗೆ ೨ ವರ್ಷಗಳ ಕೈಲುವಾಸ.

—ಮದ್ರಾಸು ಸಂಸ್ಥಾನದ ಒಟ್ಟು ೧೩೪೮ ಮಂದಿ ರಾಜಕೀಯ ಕೈದಿಗಳು ಅಲ್ಲಲ್ಲಿಯ ಸೆರೆಯಲ್ಲಿರುವರೆಂದು ಸರಕಾರದ ಪಟ್ಟಿ.

—ಮುಂಬಾಯಿಯ ಗವರ್ನರರಾದ ಸರ್. ಫ್ರೆಡರಿಕ್ ಸೈಕ್ಸರವರ ಅವಧಿಯಾಗಿ ಅವರ ಬದಲಿಗೆ ಜೆ. ಸಿ. ಡಿ. ಡೇವಿಡ್ಸನ್ ಎಂಬವರು ಬರಲಿರುತ್ತಾರೆಂದು ವಾರ್ತೆಯಿದೆ ಇವರು ಪಾರ್ಲಿಮೆಂಟ್ ಸದಸ್ಯರು.

—ದಿಲ್ಲಿ ಕೇಂದ್ರ ಶಾಸನ ಸಭೆಗೆ ಅಧ್ಯಕ್ಷರಾಗಿ ಓನರೆಬಲ್ ಆರ್. ಕೆ. ಷಣ್ಮುಗಂ ಚೆಟ್ಟಿಯವರು ಚುನಾಯಿತರಾಗಿದ್ದಾರೆ. ಬಹಳ ಎಳೆ ವಯಸ್ಸಿನರು.

—ಯಾರೂ ತಮ್ಮ ರೀತಿ ರಿವಾಜಗಳಿಗೆ ವಿರೋಧವಾಗಿ ಉಡುಪುಗಳನ್ನು ಧರಿಸಿಕೊಳ್ಳಬಾರದೆಂದು ಬಂಗಾಳದಲ್ಲಿ ಹೊಸ ಶಾಸನವು ಪ್ರಕಟವಾಗಿದೆ. ತಲೆ ತಪ್ಪಿಸಿಕೊಂಡಿರುವ ಕ್ರಾಂತಿಕಾರರೊಡನೆ ರಹಸ್ಯ ವ್ಯವಹಾರಗಳನ್ನಿಟ್ಟುಕೊಳ್ಳಬಾರದಾಗಿಯೂ ಆಜ್ಞೆ.

—ಪೊಂಡಿಚೇರಿಯಲ್ಲಿ ಅತಿವೃಷ್ಟಿಯಾಗಿ ೨೦೦ ಮನೆಗಳು ನಾಶವಾದುವು.

—ಮುಂಬಾಯಿಯ ಬಲ್ಲಾರ್ಡ್ ಪಿಯರ್‌ನ ಸಮೀಪ ವಿಲಾಯತಿ ಟಪ್ಪಾಲನ್ನು ಹೊತ್ತು ನಿಂತ ಲಾರಿಯು ಸಮುದ್ರಕ್ಕೆ ಬಿದ್ದುಬಿಟ್ಟಿತು. ಕೆಲವು ಚೀಲಗಳೂ ಒಬ್ಬ ಮನುಷ್ಯನೂ ನೀರಿಗಾಯಿತು.

—ಕಲ್ಕತ್ತಾದಲ್ಲಿ ಒಬ್ಬಳು ಹುಡುಗಿಯು ಸೆರೆಯಂತಾಗಿ ಇರಿದ್ದ ಮನೆಯಲ್ಲಿದ್ದ ಸಿಡಿಮದ್ದಿನ ರಾಶಿಯು ಪತ್ತೆಯು ಪೋಲೀಸರಿಗೆ ದೊರೆತಿದೆ. ಸರಕಾರೀ ಕಟ್ಟಡಗಳನ್ನೂ ನೌಕರರನ್ನೂ ನೆಲಸಮ ಮಾಡಲು ಸಿದ್ಧತೆಯಾಗುತ್ತಲಿತ್ತೆಂದು ಆ ಹುಡುಗಿಯು ಬಾಯ್ಬಿಟ್ಟಳು. ಅನೇಕರನ್ನು ಸೆರೆ ಹಿಡಿದಿದ್ದಾರೆ.

—ಕೈಲಾಸ ಪರ್ವತವನ್ನು ಹತ್ತಲು ಯತ್ನವಾಗುತ್ತಲಿದೆಯಷ್ಟೆ! ಹವಾಗುಣವು ಅನುಕೂಲಿಸಿದರೆ ಒಂದೆರಡು ದಿನಗಳಲ್ಲಿ ವಿಮಾನಗಳು ಮೇಲೇ ನಡೆಯುವವು.

—ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ೨೬ನೇ ತಾರೀಕಿನ ದಿನ ದೇಶದ ಹಲವೆಡೆಗಳಲ್ಲಿ ದಸ್ತಗಿರಿಗಳಾಗಿವೆ.

—ಸುಪ್ರಸಿದ್ಧರಾದ ದಿವಾನ್ ಬಹದ್ದೂರು ಪಿ. ಕೇಶವ ಪಿಳ್ಳೆಯವರು ಗುಂಟೂರಿನಲ್ಲಿ ಹೃದಯ ರೋಗದಿಂದ ತೀರಿಕೊಂಡರೆಂದು ತಿಳಿದು ಬರುತ್ತದೆ.

—ಅಲ್ಲಹಾಬಾದಿನ ಟೆಲಿಫೋನುಗಳಲ್ಲಿ ಯಾರೋ ಒಬ್ಬನು ಅಲ್ಲಲ್ಲಿ ಮಾತನಾಡುತ್ತ ಪ್ರತಿಯೊಂದು ಆಫೀಸಿನಲ್ಲಿಯ ಮೆನೆಜರರನ್ನು ಕರೆದು ತಾನು ಪೋಲೀಸು ಸುಪರಿಂಟೆಂಡೆಂಟನಿರುತ್ತೇನೆ. ಕೂಡಲೇ ನನ್ನ ಬಂಗಲೆಗೆ ಬರಬೇಕು ಎಂದು ಕರೆದು ಗಲಾಟೆಯನ್ನುಂಟು ಮಾಡುತ್ತಿರುವನು. ಪತ್ತೆ ನಡೆಯುತ್ತಿದೆ.

—ದಿಲ್ಲಿಯಲ್ಲಿ ಸರ್ ಫಸಲಿ ಹುಸೇನರು ವೈಸರಾಯರಿಗೂ ಅವರ ಪತ್ನಿಗೂ ಒಂದು ಟೀ ಪಾರ್ಟಿಯನ್ನು ಬಹಳ ಸಂತೋಷದಿಂದ ಕೊಟ್ಟರು.

—ಲಾಹೋರಿನಲ್ಲಿ ಭಾವನ್ ಎಂಬವನು ವಿಮಾನದಲ್ಲಿ ತನ್ನ ಸಂಗಾತಿಯನ್ನು ಕುಳ್ಳಿರಿಸಿ ೧೨೦೦.ಅಡಿ ಹಾರಿದನು. ಕೂಡಲೇ ವಿಮಾನ ಬಿದ್ದು ಸಂಗಾತಿಯ ಪ್ರಾಣ ಹಾರಿತು. ಈಗ ಈ ವೈಮಾನಿಕನ ಮೇಲೆ ೩೦೪—ಎ ಐ. ಪಿ ಸಿ. ಯ ಮೇಲೆ ತಕ್ಷೀರು ನಡೆದಿದೆ.

—ಫೋರ್ಟ್ ಆರ್ಯ ಸಮಾಜ, ಮುಂಬೈ:-ತಾ. ೧೯ನೇ ರವಿವಾರ ಸಾಪ್ತಾಹಿಕ ಅಧಿವೇಶನದಲ್ಲಿ, ಶ್ರೀ ಸ್ವಾಮಿ ಓಂಕಾರ ಸಚ್ಚಿದಾನಂದಜೀಯವರು "ವೈದಿಕ ಧರ್ಮದ ಶ್ರೇಷ್ಠತೆ" ಎಂಬ ಕುರಿತು, ಭಾವಗರ್ಭಿತ, ಸುರಸ ವ್ಯಾಖ್ಯಾನವಿತ್ತ ತರುವಾಯ, ಸಿಮ್ಲಾದಿಂದ ದಯೆಮಾಡಿದ ಕವಿವರ್ಯ ಪಂಡಿತ ಧರ್ಮವೀರ ಸಿಂಗಜೀಯವರು ತಮ್ಮ ಮನೋರಂಜಕ ಭಜನೋಪದೇಶದಿಂದ ಸಭಿಕರನ್ನು ಸಂತೋಷಪಡಿಸಿದರು.

—ಮದ್ರಾಸಿನಲ್ಲಿ ತನ್ನ ಮೂವರು ಮಕ್ಕಳು ತೀರಿಕೊಂಡ ಸಂತಾಪವನ್ನು ತಡೆಯಲಾರದೆ ಮದ್ರಾಸಿನಲ್ಲಿ ಜಗದಂಬಲ್ ಎಂಬವಳು ಕೊನೆಗೆ ಮೃತಳಾದ ತನ್ನ ಮಗಳ ಭಾವಚಿತ್ರಕ್ಕೆ ಪೂಜೆಯನ್ನರ್ಪಿಸಿ ಅದರೆದುರು ಬಿದ್ದು ಪ್ರಾಣಹತ್ಯೆ ಮಾಡಿಕೊಂಡಳು. ಪೋಲೀಸರು ಬಾಗಿಲೊಡೆದು ನೋಡಲು ಈ ದೃಶ್ಯವು ಮೊದಲು ಕಣ್ಣಿಗೆ ಬಿತ್ತು!

# ದಕ್ಷಿಣ ಕನ್ನಡ

**ಮಂಗಳೂರು.** ದಕ್ಷಿಣ ಕನ್ನಡ ಸ್ವದೇಶಿ ಸಂಘದ ವರ್ಷಾವಧಿ ಮಹಾಸಭೆಯು ಇದೇ ಬರುವ ತಾ. ೨೩ನೇ ಶನಿವಾರ ಪೂರ್ವಾಹ್ನ ಗಂಟೆ ೧೦ಕ್ಕೆ ಸರಿಯಾಗಿ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಜರಗುವುದು. ಅನೇಕ ಮಹತ್ವದ ವಿಷಯಗಳನ್ನು ಚರ್ಚಿಸುವುದಕ್ಕೆ ಇರುವುದರಿಂದ ಸದಸ್ಯರೆಲ್ಲರು ದಯಮಾಡಿ ತಪ್ಪದೆ ಬರಬೇಕಾಗಿ ಜತೆಕಾರ್ಯದರ್ಶಿಯವರ ವಿನಂತಿಯಿದೆ.

ಬರುವ ಎಪ್ರಿಲ್ ತಾ. ೮ ಮತ್ತು ೯ಕ್ಕೆ ಜರಗುವ ಹಿಂದೀ ಪರಿಷತ್ತಿನ ಪ್ರತಿನಿಧಿ ಹಾಗೂ ಹೊರಗಿನಿಂದ ಬರುವ ಪ್ರೇಕ್ಷಕರ ಸಲುವಾಗಿ ಭೋಜನ ವಸತಿಗಳ ವ್ಯವಸ್ಥೆಯನ್ನು ಮಂಗಳೂರು ಗಣಪತಿ ಹೈಸ್ಕೂಲು ವಸತಿಗೃಹದಲ್ಲಿ ಮಾಡಲಾಗಿದೆ. ಪ್ರತಿಯೊಬ್ಬರೂ ದಿನವೊಂದಕ್ಕೆ ರೂ. ೧ರಂತೆ ತೆರಬೇಕಾಗುವುದು. ಪ್ರತಿನಿಧಿ ಹಾಗೂ ಪ್ರೇಕ್ಷಕರು ತಮ್ಮ ಆಗಮನವನ್ನು ಕೂಡಲೇ ಕಾರ್ಯದರ್ಶಿಯವರಿಗೆ ತಿಳಿಸಬೇಕಾಗಿ ಪ್ರಾರ್ಥನೆ ಇದೆ.

ಹಿಂದೀ ಸಮ್ಮೇಳನಕ್ಕೆ ಕಲಕತ್ತೆಯ ಹಿಂದೀ ವಾರಪತ್ರಿಕೆ 'ವಿಶಾಲ ಭಾರತ'ದ ಸುಪ್ರಸಿದ್ಧ ಸಂಪಾದಕರೂ, ಹಿಂದಿಯ ಅಗ್ರಗಣ್ಯ ಲೇಖಕರೂ ಆದ ಶ್ರೀ ಬನಾರಸೀದಾಸ್ ಚತುರ್ವೇದಿಯವರೂ, ಹಿಂದೀ ಪ್ರಚಾರ ಸಭೆಯ ಜನರಲ್ ಸೆಕ್ರೆಟರಿಯವರೂ ಇನ್ನು ಇತರ ಅನೇಕ ಹಿಂದೀ ಮುಖಂಡರೂ ಚಿತ್ತೈಸುವರು. ದಕ್ಷಿಣ ಕನ್ನಡದ ಬಂಧುಭಗಿನಿಯರೆಲ್ಲರೂ ಈ ಅಪೂರ್ವ ಸಂದರ್ಭವನ್ನು ಕಳಕೊಳ್ಳದೆ ಸಮ್ಮೇಳನಕ್ಕೆ ಚಿತ್ತೈಸಿ ಹಿಂದೀ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಜತೆಕಾರ್ಯದರ್ಶಿಯವರ ವಿನಂತಿ ಇದೆ.

ಕಲ್ಲಿಕೋಟೆಯ ಕೆನೆಟ್ ಸಾಗಾಪೆ ಪುರುಷೋತ್ತಮ ದಾಸ್ ಮತ್ತು ಕಂಪೆನಿಯವರಿಗೆ ಇತ್ತಲಾಗಿ ಜರಗಿದ "ಕುಂಭಕೋಣದ ಮಹಾಮಾಘಮ ಸ್ವದೇಶಿ ವಸ್ತು ಪ್ರದರ್ಶನ"ದಲ್ಲಿ ನಾಲ್ಕು ಸ್ವರ್ಣ ಪದಕಗಳು ದೊರೆತಿವೆ. ಒಂದು ಪದಕವು ಛತ್ರಿಯ ಸಲವಾಗಿಯೂ, ಒಂದು ಸ್ಟೀಲು ಶೃಂಗಾರದ ಉತ್ಕೃಷ್ಟತೆಯ ಬಗ್ಗೆ, ಎರಡು ವೆಜಿಟೇಬಲ್ ಸೋಪ್ ವರ್ಕ್ಸಿನ ಸಾಬೂನಿನ ಉತ್ಕೃಷ್ಟತೆಗಾಗಿಯೂ ಕೊಡಲ್ಪಟ್ಟಿದೆ. ಸಾಬೂನುಗಳಿಗಾಗಿ ಕೊಟ್ಟ ಪದಕಗಳಲ್ಲಿ ಒಂದು 'ಟ್ರಾ ಇಂಡಿಯನ್ ಲೀಗ್'ನವರು ಕೊಟ್ಟದ್ದೆಂದು ತಿಳಿದುಬಂದಿದೆ.

**ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ** ಈಗ ಪ್ರದರ್ಶಿಸಲ್ಪಡುತ್ತಿರುವ 'ಶ್ರವಣ ಕುಮಾರ' ಎಂಬ ಚಿತ್ರವು ಬಹು ಉತ್ತಮವಾದ ಚಿತ್ರವಾಗಿರುತ್ತದೆ. ಮುಖ್ತಾರ್ ಬೇಗಂ ಎಂಬವಳೇ ಮುಖ್ಯ ರಾಣಿ ಪಾತ್ರವನ್ನು ವಹಿಸಿ ಬಹು ಮಧುರವಾಗಿ ಹಾಡಿ ಜನರ ಮನಸ್ಸನ್ನು ಸೂರೆ ಮಾಡಿರುವಳು. ಸಂಗೀತದ ಅಭಿಮಾನವಿದ್ದವರು ಈ ಚಿತ್ರವನ್ನು ನೋಡಿಯೇ ತೀರಬೇಕು, ಅಬ್ದುಲ್ ರಹಿಮಾನ್ ಕಾಬೂಳಿ ಎಂಬವರ ಅಭಿನಯವೂ ಭಾಷಾಶೈಲಿಯೂ ಎಲ್ಲಾ ನಟವೀರರಿಗಿಂತ ಮಿತಿಮೀರಿರುವುದು. ಅತಿ ಬೇಗನೇ ಸರಸ್ವತಿ ಮೂವಿಟೋನ್ ಕಂಪೆನಿಯವರ 'ಶ್ಯಾಮ ಸುಂದರ' ಎಂಬ ಮಾತಾಡುವ ಚಿತ್ರವು ಮೊದಲಾಗಿ ಈ ಮಂದಿರಕ್ಕೇನೆ ಬರುವುದು. ಈ ಚಿತ್ರವು ಹಿಂದೂಸ್ಥಾನವನ್ನೇ ಮೋಹ ಸಾಗರದಲ್ಲಿ ಮುಳುಗಿಸಿ ಬಿಟ್ಟಿರುವುದು. ಅಭಿನಯ ಕೇಸರಿಯಾದ ಮಾಸ್ಟರ್ ಮೊಡಕ್ ಎಂಬವನೇ ಶ್ರೀ ಕೃಷ್ಣನ ಪಾತ್ರವನ್ನು ವಹಿಸಿ ಬೊಂಬಾಯಿ ನಗರವನ್ನೇ ಲೀಲೆ ಮಂತ್ರದಿಂದ ಬಿಗಿದು ಕಟ್ಟಿ ಮನಸ್ಸೂರ್ತಿ ಮಾಡಿಸಿ ತನ್ನ ಲೀಲೆಯನ್ನು ಪ್ರಕಟಿಸಿದವನು. ಬೊಂಬಾಯಿ ನಗರದಲ್ಲಿ ಬಿಡದೆ ೨೭ ವಾರಗಳ ತನಕ ನಡೆದಿರುತ್ತದೆ (advt).

ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರಾಗಿದ್ದ ರಾ|| ಕೆ. ಸದಾಶಿವ ಅಡಿಗರವರ ಒಂದ ತೈಲ ಚಿತ್ರವನ್ನು ತಯಾರಿಸಿ ತಾಲೂಕು ಬೋರ್ಡು ಆಫೀಸಿನಲ್ಲಿ ಇಡುವುದಕ್ಕಾಗಿ ಎಲ್ಲಾ ಬೋರ್ಡ ನೌಕರರಿಂದ ಹಣವು ವಂತಿಗೆಯಾಗುತ್ತದೆ. ಉಪಾಧ್ಯಾಯರು ಬಹಳ ಉಮೇದಿನಿಂದ ಹಣವನ್ನು ಕೂಡಿಸುತ್ತಿರುವರಾಗಿ ತಿಳಿದುಬರುತ್ತದೆ.

ಇದೇ ತಾ. ೨೦ನೇ ಸೋಮವಾರ ನಡೆದ ಮುನಿಸಿಪಾಲಿಟಿ ಸಭೆಯಲ್ಲಿ ಜಿಲ್ಲಾ ಹರಿಜನ ಸೇವಾ ಸಮಿತಿಯ ಕಾರ್ಯದರ್ಶಿಗಳು ಕೇಳಿಕೊಂಡಂತೆ ಎಸೆಂಬ್ಲಿಯಲ್ಲಿ ತರಲ್ಪಟ್ಟಿರುವ ದೇವಸ್ಥಾನ ಪ್ರವೇಶ ಮಸೂದೆಗಳೆರಡನ್ನೂ ಸಮರ್ಥಿಸಿ ಠರಾವಾಯಿತು. ಉರ್ವ ಮೈದಾನಿನಲ್ಲಿ ಆಗಾಗ್ಗೆ ಕೆಲ ಮಂದಿ ಯುರೋಪಿಯನರು ಕೋವಿ ಬಿಡುಹೋಗುವುದೂ, ಆಗ ಪೋಲೀಸರು, ಜನರು ಸದ್ರಿ ಮೈದಾನ್ ರಸ್ತೆಯಲ್ಲಿ ಹೋಗದಂತೆ ತಡೆಮಾಡುವುದೂ ಉಪದ್ರಕರವೆಂದು ಶ್ರೀ. ಶಾಂತರು ತಂದ ನಿಷೇಧಸೂಚನೆಯ ಕುರಿತು ಕಲೆಕ್ಟರರಿಗೆ ತಿಳಿಸಬೇಕೆಂದಾಯಿತು. ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ ಹಿಂದಿನ ವರ್ಷದಂತೆಯೇ ಮುಂದೆಯೂ ಒಂದು ವರ್ಷ ತಿಂಗಳೊಂದರ ರೂ. ೨೫ ಗ್ರೇಂಟ್ ಕೊಡಬೇಕೆಂದಾಯಿತು. ಕೋಸ್ಮೊಪೋಲಿಟನ್ ಕ್ಲಬ್ಬಿನವರು ನಡೆಸುವ ಟೆನ್ನಿಸ್ ಟೂರ್ನಮೆಂಟಿನ ಸಿಂಗಲ್ಸಿನಲ್ಲಿ ಗೆದ್ದವರಿಗೆ ಮುನಿಸಿಪಾಲಿಟಿಯ ಹೆಸರಲ್ಲಿ ರೂ. ೧೦೦ ಬೆಲೆಯ ಬೆಳ್ಳಿಯ ಕಪ್ಪೊಂದನ್ನಿಡಬೇಕೆಂದಾಯಿತು. ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಮ್ಮೇಳನಕ್ಕೆ ಸಹಾಯವಾಗಿ ರೂ. ೨೫ನ್ನು ಮಂಜೂರು ಮಾಡಲಾಯಿತು.

**ಟೆನ್ನಿಸ್ ಟೂರ್ನಮೆಂಟ್:** – ಕೋಸ್ಮೊಪೋಲಿಟನ್ ಕ್ಲಬ್ಬಿನ ಟೂರ್ನಮೆಂಟು ನಡೆಯುತ್ತಿದೆ. ಮಹಿಳಾ ಸಭೆಯಲ್ಲಿ ನಡೆದ ಟೂರ್ನಮೆಂಟಿನಲ್ಲಿ ಜಯಶೀಲರಾದವರಿಗೆ ಬಹುಮಾನವನ್ನೀಯುವ ಸಮಾರಂಭವು ಇದೇ ತಾ. ೨೪ರಲ್ಲು ಮಿಸ್ ಮೇಯರ್ಸ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಟೂರ್ನಮೆಂಟಿನಲ್ಲಿ ಮಿಸಸ್. ಕೋಲಿಯವರಿಗೆ ಸಿಂಗಲ್ಸ್ ಕಪ್ ದೊರೆತಿರುವುದು. ಮಿಸ್. ಮಾರಿಸೊರೋನರು ರನ್ನರ್ ಅಪ್ ಆಗಿರುವರು. ಡಬಲ್ಸಿನಲ್ಲಿ ಮಿಸೆಸ್ ರಾಮರಾವ್ ಮತ್ತು ಮಿಸಸ್ ಚಿಟ್ಟೂರರು ಜಯಶೀಲರಾಗಿರುವರು. ಮಿಸಸ್ ಕೋಲಿ ಮತ್ತು ಶ್ರೀಮತಿ ಸಾರ್ಭವಿ ಆರ್ ಪೂಂಜರು ರನ್ನರ್ಸ್ ಅಪ್ ಆಗಿರುವರು.

## ಹಿಂದೀ ಸಮ್ಮೇಳನ.

ಸ್ಥಳ:—ಗಣಪತಿ ಹೈಸ್ಕೂಲು; ಮಂಗಳೂರು. ಎಪ್ರಿಲ್ ತಾ. ೮ ಮತ್ತು ೯ಕ್ಕೆ. ಅಧ್ಯಕ್ಷ:—ಪ್ರೊ. ಎ. ಆರ್. ವಾಡಿಯಾ ಬಿ. ಎ. ಬಾರ್. ಅಟ್. ಲಾ. ಹಿಂದೀ ಕಾನ್ವಕೇಷನ್ ತಾ. ೯ನೇ ಪೂರ್ವಾಹ್ನ ಘಂಟೆ ೮ಕ್ಕೆ. ಅಧ್ಯಕ್ಷರು: ಪ್ರೊ. ಆಗಾ ಮಹಮ್ಮದ್ ಅಬ್ಬಾಸ್ ಶೂಸ್ತ್ರೀಸಾಹೇಬ್. ಮಹಾಜನರೆಲ್ಲರೂ ಬಂದು ಹಿಂದೀ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

**ಕೊಲೆಕಾಡಿ** – ಇಲ್ಲಿಯ ವಿದ್ಯಾಪ್ರಚಾರಿಣೀ ಶಾಲಾ ಕಂಪೌಂಡಿನಲ್ಲಿ ಮೊನ್ನೆ ತಾ. ೧೮ನೇ ಶನಿವಾರ ರಾತ್ರಿ ಸ್ಕೌಟ್ ದಳದವರ ಕ್ಯಾಂಪ್ ಫಯರ್ (ಶಿಬಿರಾಗ್ನಿ) ಮಹೋತ್ಸವವು ಪಡುಪಣಂಬೂರು ಬೋರ್ಡು ಶಾಲಾ ಸ್ಕೌಟು ಮಾಸ್ತರರ ಅಧ್ಯಕ್ಷತೆಯಲ್ಲಿ ಜರಗಿತು.

**ಬಂಟವಾಳ** — ಈ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾ. ೧೮ನೇ ಶನಿವಾರ ಬಂಟ್ವಾಳ ಬೋರ್ಡು ಶಾಲೆಯಲ್ಲಿ ಜರಗಿತು. ಬರುವ ಎಪ್ರಿಲ್ ತಿಂಗಳಲ್ಲಿ, ಈ ಸಂಘವು ಸ್ಥಾಪನೆಯಾಗಿ ೨೫ ವರುಷಗಳಾದುದರಿಂದ ಇದರ ರಜತೋತ್ಸವವನ್ನು ಜರಗಿಸಬೇಕೆಂದು ನಿರ್ಣಯಿಸಲಾಯಿತು.

ಬಂಟ್ವಾಳ ಡಿಪ್ಯುಟಿ ತಹಶೀಲ್ದಾರರ ಆಫೀಸಿಗಾಗಿ ಜೋಡುಮಾರ್ಗದ ಹತ್ತಿರ ಕಟ್ಟಿಸಿದ ಹೊಸ ಕಟ್ಟೋಣವನ್ನು ಇದೇ ಬರುವ ಎಪ್ರಿಲ್ ೧ನೇ ತಾರೀಖಿನ ದಿವಸ ಬಿಟ್ಟುಕೊಡುವರು. ಕಚೇರಿಯು ಬಂಟವಾಳದಿಂದ ಅಲ್ಲಿಗೆ ಬೇಗನೇ ಎಯ್ಯಲ್ಪಡುವುದು.

ಮಿಷನ್ ಶಾಲೆಯ ಕಟ್ಟಡವನ್ನು ಮಾರುತ್ತಾರೆಂದು ಇಲ್ಲಿ ವಾರ್ತೆ. ಸರಕಾರೀ ಗ್ರೇಂಟು ಪಡೆದ ಕಟ್ಟಡ ಈ ಶಾಲಾ ಕಟ್ಟಡವನ್ನು ಮಾರಬಹುದೇ ಎಂಬ ಪ್ರಶ್ನೆ ಹುಟ್ಟುತ್ತದೆ. ಒಂದು ಭಾಗ ಕಟ್ಟಲಿಕ್ಕೆ ಸರಕಾರಿ ಗ್ರೇಂಟು. ಸಾರಸ್ವತರು ವಂತಿಗೆ ಮಾಡಿಕೊಟ್ಟ ರೂ. ೩೦೦ ಚಿಲ್ಲರೆ ಸಿಕ್ಕಿಯದೆ.

**ಕಾರ್ಕಳ** – ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯದ ಆರ್ಯ ಧರ್ಮ ಪ್ರಚಾರಕ ವಿದ್ಯಾರ್ಥಿ ಸಂಘದ ಹಸ್ತನೇ ವಾರ್ಷಿಕ ಸಭೆಯು ಎಂದಿನಂತೆ ಕಳೆದ ಏಕಾದಶಿ ತಾ. ೨೭—೨—೩೪ರ ದಿನ ಸಾಯಂಕಾಲ ಭುವನೇಂದ್ರ ಸಭಾಸದನದಲ್ಲಿ ಶ್ರೀಯುತ ಕಟಪಾಡಿ ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳಾದ ರಾಮದಾಸಾಚಾರ್ಯ, ಕೃಷ್ಣ ಭಟ್ಟ, ರಮಾನಾಥಭಟ್ಟ, ಮತ್ತು ತ್ರಿವಿಕ್ರಮಾಚಾರ್ಯರು 'ವಿದ್ಯಾರ್ಥಿಗಳು ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯುವ ಅವಶ್ಯಕತೆ'ಯದ ಕುರಿತು ಮಾತನಾಡಿದ ಬಳಿಕ ಅಧ್ಯಕ್ಷರು ಹಿಂದಿಯಲ್ಲಿಯೂ ಕನ್ನಡದಲ್ಲಿಯೂ ಭಾಷಣ ಕೊಟ್ಟ ಬಳಿಕ ಧನ್ಯವಾದಗಳ ಸಮರ್ಪಣೆಯಾಗಿ ಸಭಾವಿಸರ್ಜನೆಯಾಯಿತು.

ತಾ. ೨—೪—೩೪ರ ದಿನ ಸಾಯಂಕಾಲ ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯದಲ್ಲಿ ಕಳೆದ ಆಕ್ಟೋಬರ ತಿಂಗಳ ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಪದವಿ ದಾನ ಸಮಾರಂಭವು ಜರಗುವುದು. ಹಿಂದೀ ಪ್ರೇಮಿಗಳೆಲ್ಲರೂ ಅವಶ್ಯವಾಗಿ ಬಂದು ಹಿಂದೀ ಪ್ರಚಾರ ಕಾರ್ಯವನ್ನು ಪ್ರೋತ್ಸಾಹಿಸಬೇಕೆಂದು ಪ್ರಚಾರಕರಾದ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ವಿನಂತಿ ಮಾಡಿಕೊಳ್ಳುತ್ತಾರೆ.

**ಮೂಲ್ಕಿ:** – (ತಾ. ೨೬—೩—೩೪) ಇಲ್ಲಿ ಸುಮಾರು ೨-೩ ವರ್ಷಗಳಿಂದ ಸಬ್ ರಿಜಿಸ್ಟ್ರಾರರಾಗಿದ್ದ ಶ್ರೀ ಎಂ. ಪದ್ಮನಾಭ ಪ್ರಭು, ಬಿ. ಎ. ರವರು ಜೋಯಿಂಟ್ ಸಬ್ ರಿಜಿಸ್ಟ್ರಾರರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿರುವರು.

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಈ ತಿಂಗಳ ಸಭೆಯು ತಾ. ೨೫—೩—೩೪ನೇ ಶನಿವಾರ ಅಪರಾಹ್ನ ಘಂಟೆ ೨.೩೦ಕ್ಕೆ ಕಾರ್ನಾಡು ಬಿ. ಎಂ. ಎಲಿಮೆಂಟರಿ ಶಾಲೆಯಲ್ಲಿ ಪಡುಬಿದ್ರಿ ಬೋ. ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯ ಎಂ. ಟಿ. ಎಸ್. ಟೌರವರ ಅಧ್ಯಕ್ಷತೆಯಲ್ಲಿ ಜರಗಿತು.

**ಸುರತ್ಕಲ್** — ಇಲ್ಲಿಯ ಚಿತ್ರಾಪುರ ಮಠಾಧೀಶ್ವರರಾದ ವಿದ್ಯಾಪೂರ್ಣ ತೀರ್ಥ ಶ್ರೀ ಪಾದಂಗಳವರ ಪಟ್ಟದ, ಶಿಷ್ಯ (ಚಿಕ್ಕ ಪಟ್ಟದ) ಸಂ|| ೧೯೨೮ನೇ ಇಸವಿಯಲ್ಲಿ ಪಟ್ಟ ಕಟ್ಟಲ್ಪಟ್ಟವರೂ ಆದ ಶ್ರೀ ವಿಬುಧ ಪ್ರಿಯ ಶ್ರೀ ಪಾದಂಗಳವರು ಇದೇ ಮಾರ್ಚ ತಾರೀಖು ೧೬ಕ್ಕೆ ವಿಷ್ಣುಪದವನ್ನು ಸೇರಿದರೆಂದು ತಿಳುಹಿಸಲು ವಿಶಾದವಾಗುತ್ತದೆ ಇವರ ಪ್ರಾಯವು ಬರೇ ೧೪ ವರ್ಷ.

ಇದೇ ತಾ. ೨೮ನೇ ದಿನ ಗಂಟೆ ೪ಕ್ಕೆ ಮಂಗಳೂರಿನಿಂದ ಮುಲ್ಕಿಗೆ ಹೋಗುವ 'ದಿ ಹನುಮಾನ್ ಟ್ರಾನ್ಸ್ಪೋರ್ಟ ಕಂಪೆನಿ'ಯ ಬಸ್ಸಿಗೆದುರಾಗಿ ಇಲ್ಲಿಯ ಧರ್ಮಶಾಲಾ ಬಳಿ ೪ ವರ್ಷ ಪ್ರಾಯದ ಹುಡುಗಿಯು ಅಡ್ಡ ಹಾಯ್ದು ಬಂದು, ಅಡಿಗೆ ಬಿದ್ದೇಬಿಟ್ಟಿತು. ಒಡನೆಯೇ ಬಸ್ಸನ್ನು ನಿಲ್ಲಿಸಿ ನೋಡಲಾಗಿ ದೈವಾನುಗ್ರಹದಿಂದ ಹುಡುಗಿಗೇನೊಂದೂ ತರದ ಅಪಾಯವೊದಗಲಿಲ್ಲವೆಂಬುದು ತುಂಬಾ ಸಂತೋಷವೇ. ಈ ಸಂದರ್ಭದಲ್ಲಿ ಬಸ್ ಡ್ರೈವರರಾದ ಕಿಣಿಯವರ ಚಾತುರ್ಯವು ಬಹು ಶ್ಲಾಘ್ಯನೀಯವಾಗಿದೆ.

**ಫರಂಗಿಪೇಟೆ** — ಇಲ್ಲಿಯ ಶ್ರೀರಾಮಾ ಹಾಯರ್ ಎಲಿಮೆಂಟರಿ ಶಾಲೆಯ ೧೬ನೇ ವಾರ್ಷಿಕೋತ್ಸವವು ತಾ. ೪—೪—೩೪ನೇ ಶ್ರೀ ರಾಮ ನವಮಿಯ ದಿವಸ ಶ್ರೀ ಧರ್ಮಸ್ಥಳದ ಶ್ರೀಮಾನ್ ಡಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗುವುದು. ಮರುದಿನ ಶ್ರೀ ವೇದಾವತಿ ಮೆಮೋರಿಯಲ್ ಮತ್ತು ಸುಜೀರ್ ವೈಕುಂಠ ನಾಯಕ್ ಮೆಮೋರಿಯಲ್ ಕಟ್ಟೋಣದ ಪ್ರವೇಶೋತ್ಸವವು ಸಹಾ ನಡೆಯುವುದೆಂತಲೂ ಸರ್ವರಿಗೂ ಈ ಸಂಬಂಧ ಆಮಂತ್ರಣವೆಂತಲೂ ಸದ್ರಿ ಶಾಲಾ ಹೆಡ್ ಮಾಸ್ಟರರು ತಿಳಿಸುತ್ತಾರೆ.


## ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ)

**ಅಖಿಲ ಕರ್ಣಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ಣಾಟಕದ ಗೌರವಕ್ಕೂ ಕರ್ಣಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ.**

ನಮ್ಮಲ್ಲಿ ಬ್ರಿಟಿಷ್ ಫಾರ್ಮಕೋಪಿಯಾ, ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೋಡೆಕ್ಸ್, ನ, ಪ್ರೊಪ್ರೈಟರಿ ವಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ಯೊಲೆಟ್ ದ್ರವ್ಯಗಳೂ, ಸ್ನಾನಕ್ಕೂ ವಸ್ತ್ರಗಳಿಗೂ ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ, ಎಲ್ಲಾ ತರದ ಫೌಂಟನ್ ಪೆನ್ ಶಾಯಿಗಳೂ, ಆಯುರ್ವೇದೀಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯಾರಿಸಲ್ಪಡುವುವು.

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ದುರ್ಲಭ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ, ಶಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಿಗಳನ್ನು ತಯಾರಿಸುವೆವು. ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಮುಖ ಔಷಧಗಳು.

ಚ್ಯವನಪ್ರಾಶ ಲೇಹ. ಅನೋಘವಾದ ಟಾನಿಕ್ಕು ಮತ್ತು ಶ್ವಾಸಕೋಶದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ. ೧ ಪೌಂಡು ಬಾಟ್ಲಿ ರೂ. 3, ೧೦ ಔನ್ಸು ಬಾಟ್ಲಿ ರೂ. 2. ದ್ರಾಕ್ಷಾಸವ ಉತ್ತಮವಾದ ಟಾನಿಕ್ಕು, ವ ಮೆದುಳಿಗೆ ಶಾಂತತೆಯನ್ನೀಯುವ ಔಷಧ. ೧ ಪೌಂಡು ಬಾಟ್ಲಿಗೆ ರೂ 1—9

ಅಶ್ವಗಂಧಾರಿಷ್ಟ. ಅಶಕ್ತಮವಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು. ೧ ಪೌಂಡು ಬಾಟ್ಲಿಗೆ ರೂ. 3. ೮ ಔನ್ಸು ಬಾಟ್ಲಿಗೆ ರೂ. 1—10—. ಪ್ರಸೂತಿ ಸಂಜೀವನ ಬಾಣಂತಿಯರಿಗೆ ೧೦ ದಿನಗಳ ತನಕ ಕೊಡುವ ಔಷಧ. ೧೦ ಔನ್ಸು ಬಾಟ್ಲಿಗೆ ರೂ. 1-8-0. ದಶಮೂಲಾರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ. ೧ ಪೌಂಡು ಬಾಟ್ಲಿಗೆ 3—6—0, ೮ ಔನ್ಸು ಬಾಟ್ಲಿಗೆ ರೂ. 1—12—0.

ಬ್ರಾಹ್ಮಿ ತೈಲ. ವಿದ್ಯಾರ್ಥಿಗಳಿಗೂ, ವಕೀಲರಿಗೂ, ಹಾಗೂ, ಗುಮಾಸ್ತರಿಗೂ, ಉಪಯುಕ್ತವಾದ ಬ್ರೈನ್ ಟಾನಿಕ್ಕು. ೪ ಔನ್ಸು ಬಾಟ್ಲಿಗೆ ಆಣೆ 14. ಹಿಮಸಾಗರ ತೈಲ. ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ. ೪ ಔನ್ಸು ಬಾಟ್ಲಿಗೆ ರೂ. 1—8—. ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ. ೪ ಔನ್ಸು ಬಾಟ್ಲಿಗೆ ರೂ. 1—6—0. ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಮುಂತಾದ ವಾತ ಕಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ. ೩ನೇಯ ಆವರ್ತನೆ ೧ ಔನ್ಸಿಗೆ ರೂ. 1. ೧೪ನೇಯ ಆವರ್ತನೆ ೧ ಔನ್ಸಿಗೆ ರೂ. —12. ೨೦ನೇ ಆವರ್ತನೆ ೧ ಔನ್ಸಿಗೆ ರೂ. 2—8. ೫೧ನೇಯ ಆವರ್ತನೆ ೧ ಔನ್ಸಿಗೆ ರೂ. 4. ೫೧ನೇ ಆವರ್ತನೆ ರೂ. 1—1 0. ೧೦೧ನೇ ಆವರ್ತನೆ ರೂ. ೮. ಧನ್ವಂತರಿ ತೈಲ. ರಕ್ತವಾತ, ಆಮವಾತ, ಸರ್ವಾಂಗವಾತ ಮುಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವರೇ ಮಸ್ಕಿಗೆ ಹಚ್ಚುವ ದಿವ್ಯೌಷಧ. ೩ನೇಯ ಆವರ್ತನೆ ೧ ಔನ್ಸಿಗೆ ರೂ. 1; ೧೪ನೇ ಆವರ್ತನೆ ೧ ಔನ್ಸಿಗೆ ರೂ. —12. ೨೧ನೇ ಆವರ್ತನೆ ೧ ಔನ್ಸಿಗೆ ರೂ. 2—8—.

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ, ಎಲ್ಲಾ ತರದ ಆಸವ, ಅರಿಷ್ಟಗಳೂ, ಲೇಹಗಳೂ, ತೈಲಗಳೂ, ರಸಾಯನಗಳೂ, ಇನ್ನಿತರ ಆಯುರ್ವೇದ ಔಷಧಗಳೂ, ಮಹಾಮದನಕಾಮೇಶ್ವರ ಲೇಹ, ಸುಕುಮಾರಾಮೃತ, ಮಲೇರಿಯಾ ಮಿಕ್ಸ್ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ನಾಟಕ ಸ್ನೋ, ಬ್ರಿಲ್ಲಿಂಟೈನ್, ರೋಸ್ ಪೊಮೇಡ್, ಅರೋರಾ ಕ್ರೀಮ್, ಬ್ರಹ್ಮಿ ಕ್ರೀಮ್, ಕ್ರೀಮೊ ಅಮೊನಿಸ್ (Limes & Glycerine) ವಗೈರೆ ಟ್ಯೊಲೆಟ್ ಉಪಕರಣಗಳೂ ನೀಲಿ ಕಪ್ಪು (Blue Black) ಕೆಂಪು, ಹಚ್ಚೆ, ರಕ್ತನೀಲ, ವರ್ಣಗಳ, ಫೌಂಟನ್ ಪೆನ್ ಶಾಯಿಗಳೂ, ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಯಾಗಿಸುವ ಸಾಬೂನುಗಳೂ ತಯಾರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳಿರಿ.

**Managing Director:—Venkatraya Annappa Baliga**

# ಕಲ್ಕತ್ತದಲ್ಲಿ ನಿಷೇಧಾಸ್ತ್ರ! ಗುಂಡು! ದಸ್ತಗಿರಿ!

## ಸಬ್ ಇನ್ಸ್‌ಪೆಕ್ಟರರ ಕೊಲೆ!

## ಹೋರರ ಶ್ಲಾಘನ!

## ಶ್ವೇತಪತ್ರದ ಖಂಡನೆ!

ಕಲ್ಕತ್ತದಲ್ಲಿ ಜರಗಲಿದ್ದ ೪೭ನೇ ಅಖಿಳಭಾರತ ಕಾಂಗ್ರೆಸ್ ಮಹಾಸಭೆ (47th Indian National Congress) ಯನ್ನು ಸರಕಾರವು ನಿಷೇಧಿಸಿದ್ದು ಸ್ವಾಗತ ಕಮಿಟಿಯ ಚೆಯರ್‌ಮೆನರಾದ ಡಾ| ಪ್ರಫುಲ್ಲ ಘೋಷ್, ಜನರಲ್ ಸೆಕ್ರೆಟರಿಯವರಾದ ಘೋಷರನ್ನೂ ದಸ್ತಗಿರಿ ಮಾಡಲಾಯಿತಷ್ಟೆ! ತಾ. ೨೯ನೇ ದಿನ ಕಲ್ಕತ್ತಕ್ಕೆ ಹಲವೆಡೆಗಳಿಂದ ಪ್ರತಿನಿಧಿಗಳು ಹೊರಟರು. ಅದೇ ದಿನ ಕಲ್ಕತ್ತದಲ್ಲಿ ಬಲವಾದ ಪಹ್ರೆ ನಡೆಸಿ ಅನೇಕ ಮನೆ, ಬೋರ್ಡಿಂಗ್ ಮೊದಲಾದ ಮಂದಿರಗಳು ಪೋಲೀಸರ ಕಾವಲಿಗೊಳಗಾದುವು. ಆರು ಮಂದಿಗಳನ್ನು ಸೆರೆಹಿಡಿದರು. ಬಿಹಾರಿನಿಂದಲೂ ಸಂಯುಕ್ತ ಪ್ರಾಂತ್ಯದಿಂದಲೂ ಪ್ರತಿನಿಧಿಗಳಾಗಿ ಬಂದ ಎಂಟು ಮಂದಿಗಳನ್ನು ಕಲ್ಕತ್ತದಲ್ಲಿ ದಸ್ತಗಿರಿ ಮಾಡಿದರು. ಹೌರಾ ಸ್ಟೇಷನು ಪೋಲೀಸರ ವಶವಾಯಿತು. ಪುರಿಯಿಂದ ಹೊರಟ ಶ್ರೀ ಕೃಪಾ ಸಿಂಧು, ಶ್ರೀಮತಿ ಸುಣಮಾನಿ ಹೋತಾ ಎಂಬ ಮುಂದಾಳುಗಳನ್ನು ದಾರಿಯಲ್ಲೇ ಹಿಡಿದರು. ಕರಾಚಿ ಮುನಿಸಿಪಾಲಿಟಿ ಗಡಿಯನ್ನು ಒಂದು ತಿಂಗಳ ತನಕ ದಾಟಿ ಹೋಗಬಾರದೆಂದು ಎಂಟು ಮಂದಿಗಳ ಮೇಲೆ ಹೂಡಿದ ಕಟ್ಟಪ್ಪಣೆಯನ್ನುಲ್ಲಂಘಿಸಿದುದಕ್ಕಾಗಿ ಎಂಟು ಮಂದಿ ಕಾಂಗ್ರೆಸ್‌ವಾಲರನ್ನು ದಸ್ತಗಿರಿಮಾಡಲಾಯಿತು. ಅವರು ರೈಲು ಹತ್ತಿದರೂ ರೈಲನ್ನು ನಿಲ್ಲಿಸಿ ಹಿಡಿದರು. ಕಲ್ಕತ್ತದ ಬಸಬಸ್ತಿಕಟಿ ಎಂಬಲ್ಲಿ ಕಾನೂನುಲ್ಲಂಘಿಸಿ ಸಭೆಗೂಡಿದುದುದಕ್ಕೆ ಪೋಲೀಸರ ಪ್ರತಿಭಟನೆ ನಡೆದು, ಪೋಲೀಸರಿಗೆ ಪೆಟ್ಟು ಬಿದ್ದು ಗುಂಡು ಹಾರಿಸಲಾಗಿ ಒಬ್ಬನು ಮೃತನಾಗಿರುವನು. ಅನೇಕರು ಜಖಂಗೊಂಡಿರುವರು. ಚಿತ್ತಗೊಂಗಿನ ಪಾಟಿಯಾ ಎಂಬಲ್ಲಿ ಸಬ್ ಇನ್ಸ್‌ಪೆಕ್ಟರ್ ದಿಕ್ಷಿತ್ ಎಂಬವರನ್ನು ಕ್ರಾಂತಿಕಾರರು ಗುಂಡಿಕ್ಕಿ ಕೊಂದರೆಂಬ ಭೀಕರ ವಾರ್ತೆಯು ತಲಪಿದೆ. ಮನೆಮಠಗಳು ಜಪ್ತಿಗೊಳಗಾದರೂ ಕೊಲೆ ಪಾತಕಿಗಳು ದೊರೆತಿರುವುದಿಲ್ಲ. ಡೆಕ್ಕಾದಲ್ಲಿ ಸಂತೋಷ ಕುಮಾರ ಘೋಷನೆಂಬ ಕ್ರಾಂತಿಕಾರ ಯುವಕನಿಗೆ ಆಶ್ರಯ ಕೊಟ್ಟುದಕ್ಕೆ ಅವನ ತಾಯಿಯಾದ ಶ್ರೀಮತಿ ಹೇಮಾಂಗಿನಿ ಘೋಷಳನ್ನೂ ಅವನ ಸಹೋದರಿ ಶ್ರೀಮತಿ ಸುಚಾರು ಮಿತ್ರ ಎಂಬವಳನ್ನೂ ದಸ್ತಗಿರಿ ಮಾಡಿ ರಿಮಾಂಡಿನಲ್ಲಿಟ್ಟಿರುವರು. ಕಾಂಗ್ರೆಸ್ ಜರಗುವ ವಿಷಯದಲ್ಲಿ ಕಳೆದ ವರ್ಷದಂತೆಯೇ ಗಲಭೆಯೆದ್ದಿದೆ. ಪಂಡಿತ ಮಾಲವೀಯರು ತನ್ನ ಒಡನಾಡಿಗಳೊಡನೆ ಮಂತ್ರಾಲೋಚನೆ ಮಾಡುತ್ತಿರುವರು.

ತಾ. ೨೮ಕ್ಕೆ ಬಂದ ವಾರ್ತೆಯಿಂದಾಗಿ ಡಾ| ಪ್ರಫುಲ್ಲ ಘೋಷರನ್ನು ಹಿಂಬಾಲಿಸಿ ಸ್ವಾಗತ ಕಮಿಟಿಯ ಚೆಯರ್‌ಮೆನರಾದ ಡಾ| ನೀಳಾಕ್ಷ ಸನ್ಯಾಲರನ್ನು ಅವರ ಮನೆಯಲ್ಲಿ ಕೈದು ಮಾಡಿರುವರಾಗಿ ತಿಳಿದುಬಂದಿದೆ. ಡಾಕ್ಟರ್ ಸನ್ಯಾಲರು ಕೆಲವು ವರ್ಷಗಳ ಹಿಂದೆ ಲಂಡನಿನಲ್ಲಿರುವಾಗ ಹಿಂದೂದೇಶದಿಂದ ಹಿಂತೆರಳಿದ ಸೈಮನ್ ಕಮಿಷನಿನ ವಿರುದ್ಧ ಪ್ರದರ್ಶನವನ್ನು ಮಾಡಿ ಹೆಸರುವಾಸಿಯಾದವರು. ಕಾಂಗ್ರೆಸ್ ಕೇಂಪ್ ಎಂಬ ಸಂಶಯದಿಂದ ಕಲ್ಕತ್ತದಲ್ಲಿ ಒಂದು ಮನೆಯಲ್ಲಿ ಜಪ್ತಿ ನಡೆಸಲಾಗಿ ಸ್ಥಾವಿರಗಟ್ಟಳೆ ನಿಷಿದ್ಧ ಪತ್ರಿಕೆಗಳು ದೊರೆತಿವೆ. ಸ್ವಾಗತ ಕಮಿಟಿಯ ಜನರಲ್ ಸೆಕ್ರೆಟರಿಯವರಾದ ಶ್ರೀ ಹರಸುಂದರ ಚಕ್ರವರ್ತಿ ಎಂಬವರನ್ನು ಸೆರೆ ಹಿಡಿದಿದ್ದಾರೆ. ಅವರ ಮನೆಯಲ್ಲಿ ಜಪ್ತಿ ನಡೆದು ಕೆಲವು ಕಾಗದಪತ್ರಗಳನ್ನು ಕೊಂಡೊಯ್ದಿರುತ್ತಾರೆ. ಅಲ್ಲಿಯ ಅಖಿಳ ಭಾರತ ಚರಕ ಸಂಘದಲ್ಲಿ ದೀರ್ಘ ಹುಡುಕಾಟವಾಗಿ ಮೂರು ಮಂದಿಗಳನ್ನು ಕೈದುಮಾಡಿರುವರು. ಬೆನಾರಿಸ್‌ನಿಂದ ಹೊರಟ ಆರು ಮಂದಿ ಧುರೀಣ ಪ್ರತಿನಿಧಿಗಳನ್ನು ತಡೆದು ದಸ್ತಗಿರಿ ಮಾಡಿರುವರು. ಇನ್ನೂ ಅನೇಕ ಕಡೆಗಳಲ್ಲಿ ಹೀಗೆಯೇ ಅನೇಕಾನೇಕ ಬಂಧನಗಳಾಗಿವೆ. ರಾಜಶಾಹಿಯಿಂದ ಕಲ್ಕತ್ತಕ್ಕೆ ಹೊರಟ ಆರು ಮಂದಿಗಳನ್ನು ಸೆರೆ ಹಿಡಿದಿರುವರು. ಮುಂಬಾಯಿಯಿಂದ ಶ್ರೀ ಹರಿಮುರೇಶ್ವರ ಜೋಶಿ ಎಂಬವರು ಕಲ್ಕತ್ತಕ್ಕೆ ಹೊರಡುತಿದ್ದಾಗ ಅವರು ಕಲ್ಕತ್ತಕ್ಕೆ ಹೋಗದೆ ಪೂನಾಕ್ಕೆ ತೆರಳಬೇಕೆಂದು ಆಜ್ಞಾಪಿಸಲಾಗಿದೆ. ಲಾಹೋರಿನಲ್ಲಿ ೧೪ ಮಂದಿ ಕಾಂಗ್ರೆಸ್‌ವಾಲರು ರಾಷ್ಟ್ರಗೀತೆಯೊಡನೆ ರೈಲ್ವೇ ಸ್ಟೇಷನಿಗೆ ಹೋಗಿ ಅಲ್ಲಿಂದ ಕಲ್ಕತ್ತಕ್ಕೆ ಪ್ರತಿನಿಧಿಗಳಾಗಿ ಹೊರಡಲಿದ್ದರು. ಅವರೆಲ್ಲರನ್ನೂ ಹಿಡಿದು ಸ್ಟೇಷನಿಗೆ ಕೊಂಡೊಯ್ದಿರುವರು.

### ಲಂಡನಿನಲ್ಲಿ ಹಾಹಾಕಾರ!

ಶ್ವೇತಪತ್ರ ಶಿಫಾರಸು ಹಿಂದೀಯರಿಗೆ ಸಮಾಧಾನಕರವಾಗಿಲ್ಲವಾದರೂ ಅದರಲ್ಲಿರುವ ದಾನಗಳು ವಿಪರೀತವಾದ್ದುವುಗಳೆಂದೂ ಅವುಗಳಲ್ಲಿ ತೋರಿಸುವ ಉದಾರ ರೆಯಾಯಿತಿಯನ್ನು ಇನ್ನೂ ಕಡಿಮೆ ಮಾಡಬೇಕೆಂದೂ ಡ್ಯಾಹಾರ್ಡರ ಹಣಗಾಟ. ತಾ. ೨೮ನೇ ದಿನ ಪಾರ್ಲಿಮೆಂಟಿನ ಸಭೆ ಜರಗಿತು. ಲೋರ್ಡ್ ಪೆಂಕೆ, ಲೋರ್ಡ್ ಲ್ಲೊಯ್ಡ್, ಶ್ರೀ. ಎ. ಜೆ. ಪಟೇಲ ಮೊದಲಾದವರು ಸಭೆಯಲ್ಲಿದ್ದರು. ಪಟೇಲರಿಗೆ ಒಂದು ಪ್ರತ್ಯೇಕ ಆಸ್ಥಾನವನ್ನು ಕೊಟ್ಟಿದ್ದರು. ಸರ್ ಸಾಮುವೇಲರ ಭಾಷಣವಾಯಿತು. ಶ್ವೇತಪತ್ರವನ್ನು ದೂಷಿಸುವವರ ಮಾತುಗಳನ್ನು ಅವರು ಧಿಕ್ಕರಿಸಿ ಬಿಟ್ಟು ಅದರಲ್ಲಿರುವ ಎಲ್ಲಾ ಭದ್ರತೆಗಳು ಅತ್ಯಗತ್ಯವಿರುವುವೆಂದೂ, ಅವುಗಳು ವಿಪರೀತವಾದಿಗಳ (ಕಾಂಗ್ರೆಸ್ಸಿನವರ)ನ್ನು ನಿರ್ಬಲಗೊಳಿಸಲಿಕ್ಕೆ ಹೂಡಿದ ಯೋಜನೆಗಳೆಂದೂ ಹೇಳಿದರು. ಕಾಲಕ್ರಮೇಣ ಹಿಂದೂದೇಶದ ಕೇಂದ್ರ ಸರಕಾರವು ಕಾಂಗ್ರೆಸ್ಸಿನ ವಿಪರೀತವಾದಿಗಳ ಹಸ್ತಗತವಾಗಬಾರದೆಂದೇ ಈ ಉಪಾಯವೆಂದು ಅವರು ಮತ್ತೊಮ್ಮೆ ಬಾಯ್ಬಿಟ್ಟು ಹೇಳಿದರು. ಭಾರತ ವಿರೋಧಿಗಳಾದ ಚರ್ಚಿಲ್ಲರೂ ಇನ್ನಿತರರೂ ಭಾಷಣ ಮಾಡಿ ಸರ್ ಸಾಮುವೇಲರ ಔದಾರ್ಯವು ಅನಾವಶ್ಯಕವೆಂದು ಟೀಕಿಸಿದರು. ಅದಕ್ಕುತ್ತರವಾಗಿ ಸರ್ ಸಾಮುವೇಲ್ ಹೋರರು ಹಿಂದೂಸ್ಥಾನದ ಸರಕಾರಗಳು ನಿರ್ಬಲವಾಗಬಾರದೆಂಬ ಇರಾದೆಯಿಂದಲೇ ಭದ್ರತೆಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಭದ್ರತೆಗಳೆಂದರೆ ನಾವು ಮಾಡಿಕೊಂಡಂತಹವುಗಳಲ್ಲ, ರೌಂಡ್‌ಟೇಬಲಿಗೆ ಬಂದ ಹಿಂದೀಯ ಪ್ರತಿನಿಧಿಗಳು ಕೇಳಿಕೊಂಡ ಭದ್ರತೆಗಳು ಎಂದರು. ಹೋರರು ಬ್ರಿಟಿಷ ಸರಕಾರದ ಔದಾರ್ಯವನ್ನು ವಿವರಿಸುತ್ತಾ “ನಾವು ಹಿಂದೂಸ್ಥಾನಕ್ಕೆ ವಾಗ್ದಾನಗಳನ್ನು ಎಷ್ಟೋ ಕಾಲದಿಂದಲೂ ಮಾಡುತ್ತಿರುವೆವು. ಅವುಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯವಿರುತ್ತದೆ. ಹಿಂದೀಯ ಜನತೆಯು ಈಗ ಅಸಾಧಾರಣವಾದ ಪ್ರಗತಿಯನ್ನೈದಿದ್ದು ಅದೀಗ ಹಣಗಾಟಕ್ಕೀಡಿರುವುದು ವಿಚಿತ್ರ ಸಂಗತಿಯಲ್ಲ” ಎಂದರು. ಶ್ವೇತಪತ್ರದ ದಾನವು ಉದಾರವಾಗಿರುವುದೆಂದೂ ಹಿಂದೀಯರು ಕೇಳಿದುದಕ್ಕಿಂತಲೂ ಅಧಿಕ ಸುಧಾರಣೆಗಳನ್ನು ಕೊಡಲಾಗಿದೆಯೆಂದೂ ಹೋರರ ಮಾತು! ಸರಕಾರವೆಂಬ ಯಂತ್ರವು ಅನಾಯಾಸವಾಗಿ ನಡೆಯುತ್ತಿರಬೇಕಾದರೆ ಭದ್ರತೆಗಳೆಂಬ ಕೀಲುಗಳು ಅತ್ಯಗತ್ಯವೆಂದು ಹೋರರು ಬಹಳ ಉಬ್ಬಿ ಹೇಳಿರುತ್ತಾರೆ. ವೈಟ್ ಪೇಪರಿನ ವೈಶಿಷ್ಟ್ಯವನ್ನು ಭಾರತ ಸಚಿವರು ಶ್ಲಾಘಿಸುತ್ತಾ “ಶ್ವೇತಪತ್ರದಾನದಿಂದ ದಿನ ದಿನವೆಂಬಂತೆ ಹಿಂದೂದೇಶದ ೩೩೦ ಮಿಲ್ಲಿಯ ಕೃಷೀವಲರು ಸುಬಜೀವಿಗಳಾಗುವಂತೆ ಏರ್ಪಾಡುಗಳನ್ನು ಮಾಡಲಾಗಿದೆ. ಅವರ ಏಳ್ಗೆಗಳ ಮೇಲ್ವಿಚಾರಣೆಗಾಗಿ ಹಿಂದೀಯ ಮಂತ್ರಿಗಳನ್ನು ನೇಮಿಸುವ ಶಿಫಾರಸಾಗಿದೆ. ಬಡವರ ಧ್ವನಿಯು ಸರಕಾರಕ್ಕೆ ಕೇಳಬೇಕೆಂಬ ಅಭಿಲಾಷೆಯಿಂದ ಹೀಗೆ ಮಾಡಲಾಗಿದೆ. ಶ್ವೇತಪತ್ರವನ್ನು ದೂರಿ ಫಲವಿಲ್ಲ. ಹಿಂದೀಯ ರೈತನಿಗೆ ಬೇಕಾದುದು ಮಾರ್ಗ, ನೀರು, ವಿದ್ಯೆ, ಸಾಲ ಇತ್ಯಾದಿಗಳು; ಅವುಗಳ ಸಂಪೂರ್ಣಾಧಿಕಾರವನ್ನು ಈಗ ಹಿಂದೀಯ ಮಿನಿಸ್ಟರರಿಗೇನೆ ಬಿಟ್ಟು ಬಿಡಲಾಗಿದೆ. ಇಂತಹ ಆಕರ್ಷಕವಾದ ಸುಧಾರಣೆಯನ್ನು ಇಷ್ಟು ಶೀಘ್ರವಾಗಿ, ಇಷ್ಟು ವಿಶಾಲಭಾರತಕ್ಕೆ ಕೊಡಲು ಯಾವ ಸರಕಾರಕ್ಕೂ ಧೈರ್ಯ ಸಾಲದು” ಎಂದರು. ಬ್ರಿಟಿಷ ಆಡಳಿತೆಯು ಹಿಂದೂಸ್ಥಾನದಲ್ಲಿ ಪ್ರಾರಂಭವಾದ ಮೊದಲುಗೊಂಡು ಅಲ್ಲಿ ನವತೇಜಸ್ಸೇ ಉಂಟಾಗಿದೆಯೆಂದೂ, ಬ್ರಿಟಿಷ ಕ್ರಮನಿಯಮಗಳು ಹಿಂದೂಸ್ಥಾನಕ್ಕೆ ಅನುಗುಣವಾದುವುಗಳೆಂದೂ ಸರ್ ಹೋರರು ಅಭಿಪ್ರಾಯಪಟ್ಟರು. ಹಿಂದೂಸ್ಥಾನಕ್ಕೆ ಹೆಚ್ಚಿನ ಸ್ವಾತಂತ್ರ್ಯದಾನವನ್ನು ಸರಕಾರವು ಮಾಡದಿರಲು ಕೆಲವು ಕಾರಣಗಳನ್ನು ಹೋರರು ಕೊಟ್ಟರು. ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿ ಎಷ್ಟನ್ನೋ ರಾಷ್ಟ್ರಗಳು ಪರಸ್ಪರ ಹೊಡೆದಾಡಿ ತಮ್ಮ ನಿರ್ಬಲತೆಯಿಂದ ನಾಶವಾದುದರಿಂದ ಅಂತಹ ಹಣಗಾಟವು ಹಿಂದೂಸ್ಥಾನದಲ್ಲೂ ಪ್ರಾರಂಭವಾಗಿ ಅದರ ನಾಶವಾಗುವುದು ಬೇಡವೆಂಬ ಆಶೆಯಿಂದಲೇ ಬ್ರಿಟಿಷ ಸರಕಾರವು ತನ್ನ ಅಧಿಕಾರದ ಕೈಯನ್ನು ತೆಗೆದು ಬಿಡಲು ಒಪ್ಪುತ್ತಿಲ್ಲವೆಂದು ಹೋರರ ಯುಕ್ತಿಯ ಮಾತು; ಅಲ್ಲದೆ ಹಿಂದೂದೇಶದಲ್ಲಿ ಹಿಂದೂ ಮುಸ್ಲಿಮ, ಸ್ಪೃಶ್ಯಾಸ್ಪೃಶ್ಯ ಬಹು ಸಂಖ್ಯಾತ ಅಲ್ಪ ಸಂಖ್ಯಾತ, ಸಿಂಧ್, ಬಂಗಾಳ ಎಂಬ ಭೇದಾಭೇದಗಳಿದ್ದು ಪ್ರತಿಯೊಂದು ಪಕ್ಷವೂ ತನ್ನ ಏಳ್ಗೆಯನ್ನು ಇಚ್ಛಿಸಿ ಕೆಲಸ ಮಾಡುತ್ತಿರುವುದರಿಂದ ಎಲ್ಲರನ್ನೂ ಸಮಾಧಾನಗೊಳಿಸುವುದು ಸರಕಾರದ ಕರ್ತವ್ಯವಿರುವುದರಿಂದ ಹಿಂದೂಸ್ಥಾನಕ್ಕೆ ಕೇಂದ್ರ ಸರಕಾರದಾನವನ್ನು ಕೊಡಲು ಧೈರ್ಯವಿಲ್ಲವೆಂದೂ ಹೋರರ ಪಲ್ಲವಿ. ವೈಟ್ ಪೇಪರ್ ದಾನಗಳನ್ನು ಟೀಕಿಸಿ ಯಾರು ಏನೂ ಮಾಡಲೂ ಸಾಧ್ಯವಿಲ್ಲವೆಂದು ಸಚಿವರ ನಿಶ್ಚಿತ ಮಾತು. ಗವರ್ನರ ಜನರಲರಿಗೆ ಕೊಟ್ಟಿರುವ ನಿರಂಕುಶ ಪ್ರಭುಶಕ್ತ್ಯಧಿಕಾರವನ್ನೂ, ಪ್ರಾಂತಿಕ ಗವರ್ನರುಗಳಿಗೆ ಕೊಟ್ಟಿರುವ ಸಂಪೂರ್ಣ ಅಧಿಕಾರವನ್ನೂ ಅಲುಗಾಡಿಸಲು ಸಾಧ್ಯವಿಲ್ಲವೆಂದೇ ಅವರ ಹೇಳಿಕೆ. ಹಿಂದೀಯ ಸರಕಾರದ ಮೇಲೆ ಚಕ್ರವರ್ತಿಯವರ ಮತ್ತು ಪಾರ್ಲಿಮೆಂಟಿನ ಅಧಿಕಾರದ ಕೈಯು ಇರಬೇಕೆಂದೇ ಅವರು ಹೇಳಿರುತ್ತಾರೆ. ಬ್ರಿಟಿಷ ನಾಯಕರ ಈ ರೀತಿಯ ಮಾತುಗಳಿಂದ ತಿಳಿಯಬರುವುದೇನೆಂದರೆ– ಹಿಂದೂದೇಶವನ್ನು ಬ್ರಿಟಿಷರ ಕೈಯಿಂದ ತಪ್ಪಿಸಿಬಿಡಲು ಸಾಧ್ಯವಿಲ್ಲ. ಬ್ರಿಟಿಷರು ತಮ್ಮ ಭದ್ರತೆಗಳನ್ನು ಮೀರಿ ಸ್ವಾತಂತ್ರ್ಯವನ್ನು ಕೊಡುವಂತಿಲ್ಲ; ಯಾವ ಚಳವಳವನ್ನು ಹೂಡಿದರೂ ಬ್ರಿಟಿಷರು ಹಿಂದೂದೇಶದ ಆಡಳಿತೆಯನ್ನು ಮರೆಯಲು ಸಾಧ್ಯವೇ ಇಲ್ಲ ಎಂಬುದು ಹಿಂದೀಯರ ಶ್ರೇಯಸ್ಸಿಗಾಗಿಯೇ ಬ್ರಿಟಿಷ ಸರಕಾರವು ಇಲ್ಲಿರುವುದೆಂಬ ಹೋರರ ಮಾತಿನ ತಿರುಳು ಬೇರೆಯೇ ಆಗಿದೆ. ಭದ್ರತೆಗಳೆಲ್ಲಾ ಆಂಗ್ಲೊ ಇಂಡಿಯನ್ (ಅಂದರೆ ಬ್ರಿಟನು ಮತ್ತು ಹಿಂದೀಯರ) ಹಿತಕ್ಕಾಗಿಯೇ ಇರುವುವೆಂಬ ಹೋರರ ನುಡಿಗಳಲ್ಲಿ ಬೇರೆಯೇ ಅರ್ಥವಿದೆ. ಹಿಂದೂದೇಶವು ಅಂತಃಕಲಹ ಭೇದಾಭೇದಗಳ ತವರ್ಮನೆ ಎಂಬ ಹೋರರ ಮಾತಿನ ಬೆಲೆಯೂ ಸ್ವಾರ್ಥಪರದ್ದೇ ಆಗಿದೆ. ಅಂತೂ ಇಂತೂ ಶ್ವೇತಪತ್ರದ ದಾನದ ಸ್ವೀಕಾರಕ್ಕಾಗಿ ಬ್ರಿಟಿಷರು ಕಚ್ಚಾಡುವುದರಲ್ಲೂ ಅದರ ತಿರಸ್ಕಾರದ ಬಗ್ಗೆ ಹಿಂದೀಯರು ಪೇಚಾಡುವುದರಲ್ಲೂ ಭಾರತ ವರ್ಷದ ಅದೃಷ್ಟಪರೀಕ್ಷೆಯಾಗಲಿದೆ. ಒಂದು ಕಡೆಯಿಂದ ಹಿಂದೀಯರು ಅದನ್ನು ಹೊರ ದೂಡುವುದು ನಿರ್ವಿವಾದ. ಇನ್ನೊಂದು ಕಡೆಯಿಂದ ಅಧಿಕಾರಿ ಕಾರ್ಯವು ಅದನ್ನು ಹಿಂದೂಸ್ಥಾನದ ತಲೆಯ ಮೇಲೇರಿಸುವುದೂ ನಿಜ—ಹಾಗೂ ಹೀಗೂ ಎನೆಲ್ಲಾ ಸಂಘಟನೆಗಳು ಸಮ್ಮತವಾಗಲಿರುವುವೆಂದು ಹೇಳತೀರದು!

-+-+- +

---


### ನೋಟೀಸು.

**ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ**

O. P. No. 42/1933

1. ಮಾರ್ಗರೆಟ ರೆಬೆಕಾ ವೆಲ್ತ, 2. ಮೇರಿ ಕ್ರಿಸ್ಟಿಬಾಯಿ ವೆಲ್ತ, 3. ರೊಸಲಿನ ವೆಲ್ತ—ಮೈನರರು; ಇವರ ಹಿತಚಿಂತಕ ರೆವೆರೆಂಡ್ ಯೆ. ಸುಮಿತ್ರಾ—ಅರ್ಜಿದಾರರು.

ಮತ್ತು

ಯಮುನಾಬಾಯಿ—ರೆಸ್ಪೊಂಡೆಂಟು.

ಮಂಗಳೂರಿನಲ್ಲಿ ತಾ. 20—6—1933ರಲ್ಲಿ ಮೃತಪಟ್ಟ ಜೇಮ್ಸ್ ವೆಲ್ತಯೆಂಬವರಿಗೆ ಹೊರಗಿನಿಂದ ಬರಾ ಹಣಗಳ ವಸೂಲಾಯಿತಿ ಕುರಿತು ಆತನ ವಾರಿಸ್ದಾರ ಮಕ್ಕಳಾದ ಸದರಿ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖಲಾದ ಅರ್ಜಿಯು ತಾ. 12—4—1933ಕ್ಕೆ ಹಗಲು 11 ಗಂಟೆಗೆ ತನ್ಖಿಗೆ ಇಟ್ಟಿರುತ್ತದೆ. ಆಕ್ಷೇಪಿಸುವವರು ಸದರಿ ತಾರೀಕಿನ ಒಳಗೆ ಸದ್ರಿ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

Mangalore, 30—3—1933

**M. Keshava Pai,**
*Counsel for Petitioners.*

# "ವಿದೇಶ ಸಂಚಾರದ ನಂತರ ದೇಶೀಯ ಸೆರೆಯನ್ನು ಹೊಗುವೆನು"

## "ಸುಳ್ಳು ಪ್ರಕಟಣೆಗಾಗಿ ನಗಲಾರೆ"

ದಂತಪುಡಿ ತಯಾರಿಸುವ ಒಂದು ಕಂಪೆನಿಗೆ ಸುಂದರಿಯೊಬ್ಬಳ ಮುಗುಳು ನಗೆಯ ಭಾವಚಿತ್ರವು ಜಾಹೀರಾತಿಗಾಗಿ ಬೇಕಿತ್ತು. ಅಂದ ವಾದ ಹಲ್ಲುಗಳಲ್ಲಿ ಪ್ರಸಿದ್ಧಳಾದ ಫ್ರಾನ್ಸಿನ ರೋಲ್ಲ ಫ್ರಾನ್ಸ್ ಎಂಬವಳನ್ನು "ನಮ್ಮ ದಂತಪುಡಿ ಜಾಹೀರಾತಿಗಾಗಿ ನಿನ್ನ ನಗುವಿನ ಚಿತ್ರವೊಂದು ಬೇಕಾಗಿದೆ. ಅದನ್ನು ಕೊಡಬಹುದೇ?" ಎಂದು ಬರೆದು ಹೇರಳ ದ್ರವ್ಯವನ್ನು ಅವಳ ಒಂದು ಮುಗುಳ್ನಗೆಗಾಗಿ ಒಂದು ಕಂಪೆನಿಯವರು ರವಾನಿಸಿದರು. ಆದರೆ ರೋಲ್ಲಳು ಆ ಕಂಪೆನಿಯವರಿಗೆ ಮರುತ್ತರವನ್ನು ಬರೆಯುತ್ತಾ 'ನಾನು ಹಲ್ಲು ಪುಡಿಯನ್ನು ಉಪಯೋಗಿಸುವುದಿಲ್ಲ. ಬೂದಿಯಿಂದಲೇ ನನ್ನ ಹಲ್ಲುಗಳನ್ನು ಶುದ್ಧೀಕರಿಸುತ್ತೇನೆ. ಸುಳ್ಳು ಪ್ರಕಟಣೆಗಾಗಿ ನಾನು ನಗಲಾರೆ. ನಿಮ್ಮ ಹಣವೂ ಬೇಡ'ವೆಂದು ಆಷ್ಟು ಹಣವನ್ನೂ ಹಿಂದಕ್ಕೆ ರವಾನಿಸಿದಳು. ಆ ಕಂಪೆನಿಯವರಿಗೆ ಆಶ್ಚರ್ಯವಾಗಿ, ಜಾಹೀರಾತಿಗಾಗಿ ನಗಲಾರೆನೆಂದು ಸತ್ಯಪ್ರಿಯಳಾದ ಸಿನೆಮ ನಟಿಯರಲ್ಲಿ ಇವಳೇ ಪ್ರಥಮದವಳೆಂದರು.

## ಶ್ರೀಯುತ ವಿ. ಜೆ. ಪಟೇಲರು

ಶ್ರೀಯುತರು ಅಮೇರಿಕಾ ಐರ್ಲೇಂಡ್ ಮೊದಲಾದ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಚರಿಸಿ ಕಳೆದ ವಾರ ಲಂಡನಿಗೆ ತಲಪಿದರು. ಅವರು ಸಂಪೂರ್ಣ ಆರೋಗ್ಯದಲ್ಲಿಯೇ ಇರುವರು. ಅಮೇರಿಕಾ ಐರ್ಲೇಂಡುಗಳೇ ಮೊದಲಾದ ದೇಶಗಳಲ್ಲಿ ಯಾವ ಹಿಂದೀಯನಿಗೂ ಇಷ್ಟರ ತನಕ ದೊರೆಯದ ಮರ್ಯಾದೆಯೂ ಗೌರವವೂ ವಿ. ಜೆ. ಪಟೇಲರಿಗೆ ದೊರೆತಿದೆಯೆಂದು ಜೆ. ಟಿ. ಸಂದರ್‌ಲೇಂಡ್ ಎಂಬವರ ಅಭಿಪ್ರಾಯ. ಪಟೇಲರಿಗೆ ಘನ ವಿಶ್ವವಿದ್ಯಾಲಯಗಳು, ಘನ ಉದ್ಯೋಗಿಗಳು, ಪಟ್ಟಣವಾಸಿಗಳು, ನಾನಾ ಕಾಲೇಜುಗಳವರು ಹೀಗೆ ನೂರಾರು ಸಂಸ್ಥೆಗಳು ಶ್ರೀಯುತರನ್ನು ಸ್ವಾಗತೀಕರಿಸಿ ಹಿಂದೂಸ್ಥಾನಕ್ಕೆ ಗೌರವವನ್ನಿತ್ತುವು. ಅಮೇರಿಕಾದಲ್ಲಿ ಅವರು ಒಟ್ಟು ೮೫ ಭಾಷಣಗಳನ್ನಿತ್ತರು. ಇನ್ನು ತಾನು ಅಮೇರಿಕಾವನ್ನು ಬಿಟ್ಟು ಡಬ್ಲಿನ್, ಲಂಡನ್, ಜಿನೇವಾ, ವಿಯೆನ್ನಾಗಳಿಗೆ ತೆರಳಿ ಆ ಮೇಲೆ ಹಿಂದೂದೇಶದಲ್ಲಿ ಸೆರೆಯನ್ನು ಹೊಗುವೆನು ಎಂಬುದೇ ಪಟೇಲರ ವಾರ್ತೆಯಾಗಿರುತ್ತದೆ. ಶ್ರೀ ವಿ. ಜೆ. ಪಟೇಲರು ವ್ಯೈಟ್ ಪೇಪರನ್ನು ಖಂಡಿಸುತ್ತಾ "ಅದರಿಂದ ಹಿಂದೀಯರಿಗೆ ಹೋಂ ರೂಲ್ ದೊರೆಯುದಲ್ಲ — ವೈಸರಾಯರಿಗೆ" ಎಂದರು.

## ರೋಗ ರುಜಿನೆಗಳಿಗೆ ಕಾರಣವೇನು?

ಅಜೀರ್ಣ, ತಲೆ ಸಿಡಿತ, ಮೊದಲಾದ ಕೆಲವು ರೋಗಗಳಿಗೆ ಹಾಳು ಹಲ್ಲುಗಳೇ ಕಾರಣವೆಂದು ಈಗೀಗ ಕಂಡುಹಿಡಿಯಲಾಗಿದೆ. ಹಾಳು ಹಲ್ಲುಗಳು ಒಂದು ವಿಧದ ಜೊಲ್ಲನ್ನು ಸದಾ ಹೊರಗೆಡಹುತ್ತಿರುವುದರಿಂದಲೂ, ಅಂತಹ ವಿಷಭರಿತ ಜೊಲ್ಲು ಹೊಟ್ಟೆಯೊಳಗೆ ಸೇರಿಕೊಳ್ಳುತ್ತಿರುವುದರಿಂದ ಅಜೀರ್ಣವೂ, ಅದರ ದೆಸೆಯಿಂದ ತಲೆಸಿಡಿತವೂ, ಇವುಗಳ ಕಾರಣವಾಗಿ ಇನ್ನಿತರ ರೋಗರುಜಿನೆಗಳೂ ಮನುಷ್ಯನ ದೇಹದಲ್ಲಿ ಉಂಟಾಗುತ್ತವೆಯೆಂದೂ ಬರ್ಮಿಂಗ್‌ಹೇಮಿನ ಮೆಡಿಕಲ್ ರಿಸರ್ಚ್‌ನವರು ಶೋಧನೆ ನಡೆಸಿರುವರು. ಜೊಲ್ಲಿನಲ್ಲಿ ವಿಟಮಿನ್, ಡಿ ಎಂಬ ಸಾರವಿಲ್ಲದಿದ್ದರೆ ರೋಗವು ತಗಲುವುದು ಸಹಜವೆಂದೇ ಅವರು ಹೇಳಿರುತ್ತಾರೆ.

## ಸಿನೆಮ ನಟರ ಐಶ್ವರ್ಯ!

ಸಿನೆಮಾ ವ್ಯಾಪಾರವು ಮುಂದುವರಿಯುತ್ತಿರುವ ಈ ದಿನದಲ್ಲಿ ನಟರಲ್ಲನೇಕರು ಲಕ್ಷಾಧಿಪರಾಗಿರುವರು. ಪ್ರಖ್ಯಾತ ನಟರು ಕೆಲವರು ದೊಡ್ಡ ದೊಡ್ಡ ರಾಜಕುಮಾರರ ಡೌಲಿನಿಂದಲೂ ಘನತೆಯಿಂದಲೂ ಜೀವನ ನಡೆಸುತ್ತಿರುವರು. ಹೋಲಿವುಡ್ ಎಂಬುದು ಸಿನೆಮ ನಟರ ನಗರ. ಬ್ರಿಟನು ಅಮೇರಿಕಾ ಮೊದಲಾದ ದೇಶಗಳ ಸಾವಿರಾರು ನಿರುದ್ಯೋಗಿ ಸ್ತ್ರೀಪುರುಷರು ಹೋಲಿವುಡನ್ನು ಸೇರಿ ಕೆಲವು ಸಮಯದಲ್ಲೇ ಪ್ರಪಂಚ ಖ್ಯಾತಿಯನ್ನೂ ಕುಬೇರ ಸಂಪತ್ತನ್ನೂ ಪಡೆದಿರುವ ಉದಾಹರಣೆಗಳಿವೆ. ಈಗೀಗ ಸಿನೆಮ ನಟರು ತಮ್ಮ ಅಂಗಾಂಗಗಳನ್ನು ಇನ್ಸೂರು ಮಾಡುವುದರಲ್ಲಿ ನಿರತರಾಗಿ ಹಣ ಸಂಪಾದನೆಗೆ ತೊಡಗಿರುವರು. ಇನ್ಸೂರು ಏಜಂಟರು ಕೆಲವರು ಈಗೀಗ ನಟನಟಿಯರ ಆಶ್ರಯದಲ್ಲೇ ಇದ್ದು ಬಹಳ ಪೋಲಿಸಿಗಳನ್ನು ಪಡೆಯುತ್ತಿರುವರು. ಆಸ್ಟ್ರೇಲಿಯದ ಗಾಯನ ನಕ್ಷತ್ರಳಾದ ಫೇ ಮಾರ್ಬ್ ಎಂಬವಳು ತನ್ನ ಕಂಠದ ಮೇಲೊಂದು ಇನ್ಸೂರನ್ನು ತೆಗೆದುಕೊಂಡಳು. ಇದನ್ನರಿತ ಹೋಲಿವುಡ್‌ನ ತಲ್ಮಟಿಡ್ ಎಂಬ ಪ್ರಸಿದ್ಧ ಸೌಂದರ್ಯವತಿಯು ತನ್ನ ಹಲ್ಲುಗಳನ್ನು ೧೧,೦೦೦ ಪೌಂಡುಗಳಿಗೆ ಇನ್ಸೂರ್ ಮಾಡಿದಳು. ಬೆನ್ ಟರ್ಪಿನ್ ಎಂಬವನು ತನ್ನ ವಾರೆ ಕಣ್ಣನ್ನು ಬೆಟ್ಟದ ಹಣಕ್ಕೆ ಇನ್ಸೂರ್ ಮಾಡಿರುವನು. ಕ್ರೂರಿನ್ ಗ್ರಿಫಿತ್ ಎಂಬ ಪ್ರಪಂಚ ಪ್ರಖ್ಯಾತಳಾದ ಗಾಯನಗಾರ್ತಿಯು ತನ್ನ ಮಧುರ ಸ್ವರದ ಮೇಲೆ ಒಂದು ಮಿಲಿಯ ಡೊಲ್ಲರಿನ ಇನ್ಸೂರ್ ತೆಗೆದಿರುವಳು. ಪರ್ಲ್ ವ್ಹೈಟ್ ಎಂಬವಳು ತನ್ನ ಕೆನ್ನೆಯ ಮೇಲಿರುವ ಸಣ್ಣ ರಮಣೀಯವಾದ ಕುಳಿಯೊಂದಕ್ಕಾಗಿ ೧೪೦೦೦ ಪೌಂಡಿನ ಇನ್ಸೂರ್ ಕಟ್ಟಿರುವಳು. ಲಿಲಿಯನ್ ಗಿಶ್ ಎಂಬವಳು ತನ್ನ ಕಣ್ಣಿನ ರೆಪ್ಪೆಗಳನ್ನು ಹೇರಳ ದ್ರವ್ಯದ ಮೇಲೆ ಇನ್ಸೂರೆನ್ಸಿಗೆ ಕೊಟ್ಟಳು. ಕೆಲವು ಸಮಯದ ಹಿಂದೆ ಚಾರ್ಲಿ ಚಾಪ್ಲಿನನು ತನ್ನ ಹರಕು ಬಟ್ಟೆಗಳನ್ನೂ ತನ್ನ ಪ್ರಖ್ಯಾತ ಬೂಟುಗಳನ್ನೂ ಇನ್ಸೂರ್ ಮಾಡಿದ್ದನು. ಈ ಇನ್ಸೂರೆನ್ಸ್ ಈಗಲೂ ನಡೆಯುತ್ತಿದೆ. ಅನ್ ಪೆನ್ನಿಂಗ್ಟನ್ ಎಂಬವಳ ಮೊಣಕಾಲು ಅತ್ಯಂತ ಸೌಂದರ್ಯಯುತವಾಗಿರುವುದು ಪ್ರಸಿದ್ಧ. ಅದು ವಿರೂಪಗೊಳ್ಳದಂತೆ ಅವಳು ಕೊಟ್ಟಿರುವಳು. ರಿನ್‌ಟಿನ್‌ಟಿನ್ ಎಂಬ ನಾಯಿಯನ್ನೂ ಇನ್ಸೂರ್ ಮಾಡಿದ್ದು ಅದರ ಸಪ್ತಮಾಸಿಕ ಕಂತು ಹೇರಳವಿರುತ್ತದೆ. ಹಾಸ್ಯಾಂತ ಚಲಚಿತ್ರಗಳಲ್ಲಿ ಭಾಗ ವಹಿಸುವ ಪೆಟಿ ಎಂಬ ಆದೊಂದು ನಾಯಿಯನ್ನು ೫೦,೦೦೦ ಪೌಂಡುಗಳಿಗೆ ಇನ್ಸೂರ್ ಮಾಡಿರುವರು. ಇದು ನಾಯಿಗಳ ಪೋಲಿಸಿಯಲ್ಲಿ ಅತಿಶಯವಾದುದು. ಸಿನೆಮ ನಟರ ಇನ್ನಿತರ ವಿಧದ ಜೀವನ ಕ್ರಮಗಳ ವಿಚಿತ್ರ ಪಟ್ಟಿಯೂ ಪ್ರಕಟವಾಗುತ್ತಲಿದೆ.

## ಆದ್ಯ ಕರ್ತವ್ಯ!

"ಭಯದ ಮೂಲೋತ್ಪಾಟನ ಮಾಡಿ ಧೈರ್ಯದ ಧ್ವಜವನ್ನು ಸ್ಥಾಪಿಸಲು ನಾವು ಹೆಣಗಾಡುತ್ತಿದ್ದೇವೆ, ಸ್ವಾರ್ಥವನ್ನಟ್ಟಿ ನ್ಯಾಯ ಪ್ರವೃತ್ತಿಯನ್ನು ಬೆಳೆಸಲು ಹವಣಿಸುತ್ತೇವೆ. ದೇಶದಲ್ಲಿರುವ ಸಾಮಾಜಿಕ ನ್ಯೂನ್ಯತೆಗಳನ್ನು ತೆಗೆದು ಬಿಡಲು ನಾವು ಆಶಿಸುತ್ತಿದ್ದೇವೆ. ಕೆಲವು ಪ್ರಾಚೀನ ಕಾಲದ ಕುಂದು ಕೊರತೆಗಳು. ಕೆಲವು ಆಧುನಿಕವಾದುವುಗಳು. ನಾವು ನಮ್ಮ ಗೃಹ ಕೈಗಾರಿಕೆಗಳನ್ನು ತ್ಯಜಿಸಿ ಯಂತ್ರ ನಿರ್ಮಿತ ಸಾಮಾಗ್ರಿಗಳನ್ನು ಪಡೆದುದರ ಪರಿಣಾಮವಾಗಿ, ನಿರುದ್ಯೋಗ, ಬಡತನಗಳನ್ನು ಹಚ್ಚಿದೆವು. ಪ್ರಥಮದಲ್ಲಿ ಕುಶಲಮತಿಯರಾದ ವಿದೇಶಿಯರಿಂದ ಯಂತ್ರ ಮೂಲಕ ಸಿದ್ಧವಾದ ಅಗ್ಗ ಸಾಮಗ್ರಿಗಳು ಬಂದುವು, ಆ ಮೇಲೆ ಅಂತಹ ನಮೂನೆಯ 'ಸ್ವದೇಶಿ' ಸಾಮಗ್ರಿಗಳು ಬಂದುವು. ಇವುಗಳು ಹಿಂದೂದೇಶದ ಕಿನಾರೆಗಳಲ್ಲಿ ಯಂತ್ರದಿಂದ ಉತ್ಪನ್ನಿಸಿ ಗೃಹ ಕೈಗಾರಿಕೆಗಳನ್ನು ನಾಶಗೊಳಿಸಿದುವು. ಇವೆಲ್ಲ ಬಂದು ಬಡ ಹಳ್ಳಿಗನ ಉದರದ ಮೇಲೆ ಕಾಲಿಟ್ಟುವು. ಯಂತ್ರದಿಂದ ತಯಾರಾದ ವಸ್ತುಗಳು ಸೊಬಗಾಗಿವೆ ಅಥವಾ ಅಗ್ಗವಾಗಿವೆಯೆಂದು ನಾವವುಗಳನ್ನು ಪಡೆದೆವು — ನಮ್ಮ ಬಡ ಬಗ್ಗರ ಮುಂದಿನ ಸ್ಥಿತಿಗತಿಗಳೇನಾಗುವುವು ಎಂದು ವಿವೇಚಿಸಿಕೊಳ್ಳದೆ ಅವುಗಳನ್ನು ಕೊಂಡುಕೊಂಡೆವು. ಈ ಅರಿವು ನಮ್ಮ ದೇಶದಲ್ಲಿ 'ಇತ್ತೀಚೆಗೆ ಸ್ಫುರಿಸಿತು.' ಈ ಅರಿವು ಅಸ್ಪೃಶ್ಯತೆಯಂತೆ ನೂರಾರು ವರ್ಷಗಳಿಂದಿರುವಂತಹುದಲ್ಲ. — ಆದುದರಿಂದ ಇದನ್ನು ನಾವು ಆದಷ್ಟು ಶೀಘ್ರವಾಗಿ ಹೋಗಲಾಡಿಸಬಹುದು. ಶಿಕ್ಷಿತರಾದ ಮಧ್ಯಮ ತರಗತಿಯವರು ಜನಸಮುದಾಯದ ಸುಖದುಃಖಗಳೂ ಹಸಿವೆ ತೃಷೆಗಳೂ ತಮ್ಮವೆಂದು ಭಾವಿಸಿಕೊಳ್ಳದೆ, ಹಿಂದೂದೇಶದ ಹಳ್ಳಿಗರ ಅವಶ್ಯಕತೆಗಳು ಕೈಗೊಟ್ಟಂತಾಗುವುದಿಲ್ಲ. ಯಾರೇ ಧಾರ್ಮಿಕರೋ ದೇಶಭಕ್ತರೋ, ದೀನರ ಮೇಲಿನ ವಾತ್ಸಲ್ಯದ ಪವಿತ್ರ ಚಿಹ್ನೆ ದೇಶದಲ್ಲಿ ಸಿದ್ಧವಾದ ಮಿಲ್ ವಸ್ತ್ರವು ನಮ್ಮ ದೇಶದ ಸಂಪತ್ತಾಗಿರಬಹುದು. ಆದರೆ ತಮ್ಮ ಸಂಪತ್ತನ್ನು ತಾವು ಕಳಕೊಂಡಿರುವ ಹಿಂದೂದೇಶದ ಶೇಕಡಾ ೮೦ ಮಂದಿಗಳ ಗತಿಯೇನು? ಹಳ್ಳಿಹಳ್ಳಿಗಳನ್ನು ನಿರ್ಮೂಲಿಸಿ, ಭಾರತ ದೇಶವನ್ನು ಮುಂಬಯಿ ಅಹಮ್ಮದಾಬಾದುಗಳಂತೆ ಮಾಡಬೇಕೆಂದಿರುವಿರಾ? ಅಂತಹ ಯೋಜನೆಯಿದ್ದರೆ ಅದು ಫಲಕಾರಿಯಾಗಲಾರದು. ಭರತವರ್ಷದ ೩೫ ಕೋಟಿ ಜನಸಂಖ್ಯೆಯನ್ನು ೧ ಕೋಟಿಯಲ್ಲಿಳಿಸಿ ಬಿಡಲು ನಿಮ್ಮಲ್ಲಿ ಜನನ ನಿರ್ಬಂಧದ ಹುಚ್ಚು ಯೋಜನೆಯಿದೆಯೇ? ಹಾಗೆ ಉಂಟಾದ ಅಲ್ಪ ಜನಸಂಖ್ಯೆಯನ್ನು ೨೦೦೦ ಕಾರ್ಖಾನೆಗಳಲ್ಲಿ ನಿಯಮಿಸಿ ಸರಕುಗಳನ್ನು ವಿದೇಶಗಳಿಗೆ ಕಳುಹಿಸಿ ಮಾರುವ ಉಪಾಯ ನಿಮ್ಮಲ್ಲಿದೆಯೋ? ಕೈಗಾರಿಕೆಯಿಲ್ಲದ ವಿದೇಶೀಯರ ಕೈಯ ಕೈಗಾರಿಕೆಯರುವ ದೇಶವನ್ನು ಸುಲಿಗೆ ಮಾಡದಿರುವ ಯಾವ ಉದಾಹರಣೆಯೂ ಇಲ್ಲ. ಗ್ರಾಮಗಳ ಬಡತನವನ್ನು, ಉಪವಾಸವನ್ನು ನಾವು ಖಾದಿಯ ಮೂಲಕವೇ ಪಾರುಗೊಳಿಸಬೇಕಲ್ಲದೆ ಅನ್ಯಥಾ ಶಕ್ಯವಿಲ್ಲ. ಖಾದಿಯು ಮಿಲ್ ಬಟ್ಟೆಗಿಂತ ಹೆಚ್ಚು ಬೆಲೆಯುಳ್ಳದು — ಜಪಾನೀ ಬಟ್ಟೆಗಿಂತ ಬೆಲೆಯುಳ್ಳದು. ಆದರೆ ನೀವು ಕೊಡುವ ಅಧಿಕ ಕ್ರಯದ ಒಂದಂಶವು ನಿರುದ್ಯೋಗಿಗಳ ಪಂಪಾಲನಾರ್ಥವಾಗಿದೆ ಎಂದು ತಿಳಿದುಕೊಳ್ಳಬೇಕು. ಜಪಾನು, ಹಿಂದೂದೇಶದಲ್ಲಿ ತನ್ನ ವಸ್ತುವನ್ನು ತುಂಬುವ ಹಂಚಿಕೆಗಾಗಿ ಅದರ ಸರಕಾರಕ್ಕೆ ಸುಂಕ ಕೊಡುತ್ತದೆ. ಜಪಾನಿನ ಜನರಿಗೆ ನಿರುದ್ಯೋಗ ನಿವಾರಣೆಯೇ ಜೀವನೋದ್ಯಮವಾಗಿದೆ. ಜಪಾನ ವಸ್ತ್ರವು ಸ್ವರ್ಗಲೋಕದಿಂದ ಬಿದ್ದ ಅಗ್ಗ ವಸ್ತ್ರವಲ್ಲ. ಬೆಲೆಗಿಂತ ಕಡಿಮೆ ದರದಲ್ಲಿ ವಸ್ತ್ರ ತಯಾರಿಸಲು ಅವರಲ್ಲಿ ಮಂತ್ರವಿಲ್ಲ. ಜಪಾನರು ಹೆಚ್ಚಿನ ತೆರಿಗೆಗಳನ್ನು ಕೊಟ್ಟು ರಾಷ್ಟ್ರ ಪ್ರೇಮದಿಂದ ಉದ್ಯೋಗವನ್ನು ಒಡಿಸುತ್ತಿರುವರು. ಅದೇ ರೀತಿ ನಾವೂ ಕೂಡಾ ದೇಶಭಕ್ತಿಯಿಂದ ನಮ್ಮ ಬಡವರಿಗಾಗಿ ಕಂದಾಯ ಕೊಡಬೇಕು. ಖಾದಿ ತಯಾರಿಸುವವರಿಗೆ ನಾವು ಆದಷ್ಟು ಕಡಿಮೆ ಮಜೂರಿಯನ್ನು ಕೊಡುತ್ತೇವೆ. ನೀವು ಖಾದಿಗೆ ಕೊಡುವ ಬೆಲೆಯು ಈ ಬಡವರ ದಕ್ಷಿಣೆಗಾಗಿ ಹೋಗುತ್ತದೆ. ಈ ಜನರಿಗೆ ನಾವು ಬೇಕಾದ ಉದ್ಯೋಗವನ್ನು ಕೊಡಲಾರೆವು. ಕಾರಣ, ಬೇಕಾದ ಕೆಲಸವು ಇರುವುದಿಲ್ಲ. ಆದುದರಿಂದ **ಖಾದಿಯನ್ನು ಪಡೆಯುವುದು ನಿಮ್ಮ ಆದ್ಯ ಕರ್ತವ್ಯವಿದೆ.** ಖಾದಿ ಭಂಡಾರಗಳಲ್ಲಿ ಖಾದಿಯು ತುಂಬಿಕೊಂಡಿದೆಯೆಂದೂ, ಅದನ್ನು ಪಡೆಯಬೇಕೆಂದು ಅರಿಕೆ ಮಾಡಬೇಕೆಂದೂ ಆದ ಈ ಸಂಭವವು ನಮಗೆ ನಾಚಿಕೆಯದಿದೆ. ನಮ್ಮ ಇತರ ವೆಚ್ಚಗಳನ್ನು ಕಡಿಮೆ ಮಾಡಿ ನಾವು ಖಾದಿಯನ್ನು ಪಡೆಯೋಣ."

**ಸಿ. ರಾಜಗೋಪಾಲಾಚಾರಿ.**
ಗಾಂಧೀ ಆಶ್ರಮ, ತಿರುಚೆಂಗೋಡು
೧೭–೩–೩೭

---

(೧೩ನೇ ಪುಟದಿಂದ ಮುಂದುವರಿದುದು.)

ಕಾಣಬಂತು, ಹೊರತಾಗಿ ಶಾಸ್ತ್ರೀಯವಲ್ಲ. ಇದಕ್ಕಾಗಿ ಶ್ರೀ ಶಾಂತಾದೇವಿಯವರು ಸಮಾಜ ಸ್ವಾಸ್ಥ್ಯದ ತಿರುಳನ್ನೇ ಕೊರೆಯುತ್ತಿರುವ ಕರಾಳ ರಾಕ್ಷಸ ತಾಡನ ಅಂಧಕಾರದ ರೂಢಿಯಿಂದ ಹಿಂದೂ ಸಮಾಜದ ಸ್ತ್ರೀಯರನ್ನು, ಹಾಗೂ ಹಿಂದೂ ಸಮಾಜ ಜನತೆಯನ್ನು ಗಾಢ ನಿದ್ರೆಯಿಂದ, ಎಚ್ಚರಿಸಲು ಯುಕ್ತಿಯಿಂದ ಬರೆದ ಲೇಖನದಲ್ಲಿ "ಇಸ್ಲಾಮ್ ಮತ ಹಾಗೂ ಮುಸಲ್ಮಾನರ ದೂಷಣೆ" ಎಂದಿಗೂ ಆಗಲಾರದು.

ಶ್ರೀಮತಿ ಖಿತಾಬಾದೇವಿಯವರು ಮುಸಲ್ಮಾನ ಸ್ತ್ರೀಯರಿಗಿರುವ ಸ್ವಾತಂತ್ರ್ಯಗಳನ್ನು ಹಿಂದೂ ಸಮಾಜಕ್ಕೆ ತೋರಿಸಿ ಕೊಟ್ಟುದಕ್ಕಾಗಿ ಅವರು ಶ್ಲಾಘನೀಯರು. ಆದರೆ ಅನಾರೋಗ್ಯಕಾರಕ (Purdha system) ಘೋಷಾ ಪದ್ಧತಿಯನ್ನು ತೆಗೆಯುವ ಸ್ವಾತಂತ್ರ್ಯಕ್ಕೆ ಹಣಗಾರರಿಲ್ಲವೆನ್ನಬೇಕಾಗುತ್ತದೆ! ಯಾವ ರೀತಿ ಸ್ವಾತಂತ್ರ್ಯಕ್ಕೂ "ಮುಸುಕು" ಕೇವಲ ಪ್ರತಿಬಂಧಕವಲ್ಲವೇ? ಮತಾಂತರದ ಪರಿಣಾಮಕ್ಕೆ ಸಂಬಂಧವಾದ "ಭಾರತ ಮಹಿಳಾ ಸಮಾಜ"ವೆಂಬ ಲೇಖನವನ್ನು ಶ್ರೀ ಖಿತಾಬಾದೇವಿಯವರು ಕೇವಲ ತಮ್ಮ ವಿಷಯಕ್ಕೇ ಹೊಂದಿಸಿರುವುದು ಯುಕ್ತವಲ್ಲ. "ಇಸ್ಲಾಮ್ ಮತದ ಸ್ವಷ್ಟತೆ ಮತ್ತು ಸ್ಪಷ್ಟಲಂಕಾರ"ವನ್ನು ತಿಳಿಯಬೇಕಾದರೆ The Fountain Head of the Religion (By The Arya Samaj, Madras) ಎಂಬ ಗ್ರಂಥವನ್ನು ಓದಬೇಕಾಗಿ ವಿನಂತಿ. ಸೃಷ್ಟಿಕರ್ತನಾದ "ಅಲ್ಲಾ" ಇಲ್ಲವೆ ಪರಮೇಶ್ವರನ ಪ್ರಕಾರ ಹಿಂದೂ ಮುಸಲ್ಮಾನರ ಹಾಗೂ ಮನುಷ್ಯ ಮಾತ್ರರ ವೃತ್ತಿಗಳು (Comparative Study of Religions) ತಾರತಮ್ಯ ವಿವರಿಸುವ ತುಲನಾತ್ಮಕ ಮತ ಧರ್ಮ ಸ್ವಾಧ್ಯಾಯನದ ಆವಶ್ಯಕತೆಯು ಇದೆ.

ಯುವ ಸರಸ್ವತೀದೇವಿ ಸತ್ಯಾರ್ಥ ಮಂಗಳೂರು.

## ಪೆರ್ಡೂರು ಜಾತ್ರೆ

ಪೆರ್ಡೂರು ವಾರ್ಷಿಕ ರಥೋತ್ಸವವು ಇದೇ ೧೩ನೇ ಮಂಗಳವಾರದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಅಂದು ಸದ್ರಿ ದೇವಸ್ಥಾನದ ಎದುರುಗಡೆಯಲ್ಲಿರುವ ದೊಡ್ಡ ಗದ್ದೆಯಲ್ಲಿ ನೆರೆದ ಸಂತೆಯಂಗಡಿಗಳಿಗೆ ಲೆಕ್ಕವೇ ಇಲ್ಲ. ಒಂದೆಡೆಯಲ್ಲಿ ಬೀಡಿ ಬೀಡ ಸೋಡ ಲಿಮನೆಡ್‌ಗಳ ಅಂಗಡಿ. ಇನ್ನೊಂದೆಡೆಯಲ್ಲಿ ಜನರ ಕೂಟ, ಮತ್ತೊಂದೆಡೆಯಲ್ಲಿ ಬೀಡಿ ಮಾರುವ ಗುಂಪು, ಇನ್ನೊಂದೆಡೆಯಲ್ಲಿ ಜನರ ನೂಕುನುಗ್ಗಾಟ ಹೀಗೆ ಎಲ್ಲಾ ಆಟಗಳನ್ನೆಲ್ಲಾ ನೋಡುತ್ತಾ ಮುಂದರಿಸುವಾಗ ಅಲ್ಲೇ ಒಂದು ಚಪ್ಪರದೊಳಗೆ ಮಿಷನರಿ ಬೋಧಕರು ಬೋಧಿಸುತ್ತಿದ್ದರು. ಅವರು ಹಿಂದೂ ಮತವನ್ನು ದೂಷಿಸುವುದನ್ನು ಕೇಳಿ ಶ್ರೀಯುತ ರಂಗರಾವ ಪರಿಗಾಸ ವಕೀಲರು ಪ್ರಶ್ನೆಗಳನ್ನು ಕೇಳಿ ಅವರ ದೂಷಣೆಗಳನ್ನೆಲ್ಲಾ ಖಂಡಿಸುವ ವಾದದಲ್ಲಿ ಅಷ್ಟರಲ್ಲಿ ನಾವು ನಂಬುವ ಮತದಿಂದಲ್ಲದೆ ದೇವರನ್ನು ಹೊಂದುವರನ್ಯತ್ರ ದಾರಿಯಿಲ್ಲವೆಂದೂ ಸಾಧಿಸುವ ಆ ಬೋಧಕರಲ್ಲಿ ಒಬ್ಬರು ಶ್ರೀಯುತ ಶಾಸ್ತ್ರಿಗಳನ್ನು ಕರೆದು ಆ ಚಪ್ಪರವು ತಮ್ಮ ವಾದಿಗೆ ಕೊಡಲ್ಪಟ್ಟಿದೆಯೆಂದೂ ಅಲ್ಲಿ ನಿಂತು ಮಾತಾಡಲು ಅವಕಾಶವಿಲ್ಲವೆಂದೂ ಸೂಚಿಸಿದರು. ನಂತರ ಸದ್ರಿ ಬೋಧಕರು ಶಾಸ್ತ್ರಿಗಳ ಹೋಗ ಬಂದರು. ಅಲ್ಲಿ ಸುಮಾರು ೨ ತಾಸು ಸದ್ರಿಯವರಿಗೆ ಮತ ಸಂಬಂಧವಾಗಿ ವಾದಗಳು ನಡೆದುವು. ಕಡೆಗೆ ಶಾಸ್ತ್ರಿಗಳು ದೇವರ ಯಥಾರ್ಥವಾದ ಆರಾಧನೆಯೆಂದರೆ ಅತನು ಸಕಲ ಮತಗಳಲ್ಲಿಯೂ ಏಕರೀತಿಯಲ್ಲಿರುವನೆಂದು ಭಾವಿಸುವುದೇ? ದೇವರು ನಿಮ್ಮ ಮತದಲ್ಲಿ ಮಾತ್ರ ಇರುವನಲ್ಲದೆ ಇತರ ಮತಗಳಲ್ಲಿಲ್ಲವೆಂದೂ ಇತರ ಮತಗಳ ಆಚರಣೆಯು ದುರಾಚರಣೆಯೆಂದೂ ಇತರ ಮತಸ್ಥರಿಗೆ ಸ್ವರ್ಗ ಮೋಕ್ಷ ಸಿಗಲಾರದೆಂದೂ ನೀವು ಭಾವಿಸಿದ ಬಳಿಕ ನೀವು ನಿಮ್ಮ ಮತದಿಂದ ದೇವರನ್ನು ಹೊರಕ್ಕೆ ತಳ್ಳಿದಿರಿ ಎಂದು ಸಾಧ್ಯವಾದ್ಯಂತವಾಗಿ ಹೇಳಲು, ಆ ಮಿಶನರಿ ಉಪದೇಶಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡರು. ಬಳಿಕ ನಾನು ಮತ್ತು ಶ್ರೀಯುತ ಶಾಸ್ತ್ರಿಗಳು ಅದೇ ದೇವಸ್ಥಾನದ ಆಡಳಿತೇ ಮೊಕ್ತೇಸರರ ಭೇಟಿ ಮಾಡಿ "ಸ್ವಾಮಿ ತಾವು ಅಂತರಂಗದಲ್ಲಿ ಕ್ರೈಸ್ತ ಮತಾವಲಂಬಿಗಳೋ? ಇಲ್ಲವಾದರೆ ಆ ಕ್ರೈಸ್ತ ಬೋಧಕರಿಗೆ ಇಷ್ಟು ಪ್ರೋತ್ಸಾಹವನ್ನು ಕೊಡುತಿದ್ದಿಲ್ಲ" ಎಂದೆನಲು ಆ ಆಡಳಿತೇದಾರರು "ಪೂರ್ವ ಆಗಾಯ್ತು ನಡೆದ ಕ್ರಮ"ವೆಂದುತ್ತರ ಕೊಟ್ಟರು.

ಅಹಾ! ಬಾಡಿಗೆಯ ಆಶೆಗೋಸುಗ ಸದ್ರಿ ಮೊಕ್ತೇಸರರು ನಮಗೀತರದ ಉತ್ತರ ಕೊಟ್ಟರಲ್ಲವೇ? "ಪೂರ್ವ ಆಗಾಯ್ತು" ಅಂದರೆ ದೇವಸ್ಥಾನವು ನಿರ್ಮಾಣವಾಗುವುದರ ಪೂರ್ವ ಆಗಾಯ್ತೋ? ಅಥವಾ ಮಿಶನರಿ ಬೋಧಕರ ಮತಸ್ಥಾಪನೆಯಾಗುವುದರ ಪೂರ್ವ ಆಗಾಯ್ತೋ? ಅಹಾ! ಭಾರತೀಯರೇ, ಹಿಂದೂ ದೇವಾಲಯದ ಎದುರುಗದ್ದೆಯಲ್ಲಿ ಅನ್ಯಮತ ಬೋಧಕರಿಗೆ ಬೋಧನೆ ಅವಕಾಶವಿದೆಯೇ?

**ಪೆರ್ಡೂರಿನವ.**

[illegible] ಶ್ರೀಮುಖ ಸಂವತ್ಸರದ [illegible]
[illegible] ೧೦ ಶುಕ್ರವಾರದ ವರೆಗಿನ ಪಂಚಾಂಗ
([illegible] ಮಾನ—ಸುಗ್ಗಿ)

| ತಾರೀಖು | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] | ಸೂರ್ಯ ಉದಯ | ಸೂರ್ಯ ಅಸ್ತ |
|---|---|---|---|---|---|---|---|---|
| 1 | ಶನಿ | ೩ | ೩೯ | ಮೃಗಶಿರಾ | ೩೦ | ೧೯ | 6.30 | 6.42 |
| 2 | ರವಿ | ೭ | ೩೯॥ | ಮೃಗಶಿರಾ | ೫ | ೨೦ | 6.29 | 6.42 |
| 3 | ಸೋಮ | ೮ | ೪೪॥ | ಆರ್ದ್ರಾ | ೧೦॥ | ೨೧ | 6.29 | 6.42 |
| 4 | ಮಂಗಳ | ೯ | ೪೬॥ | ಪುನರ್ವಸು | ೧೬॥ | ೨೨ | 6.28 | 6.42 |
| 5 | ಬುಧ | ೧೦ | ೫೦। | ಪುಷ್ಯ | ೨೧ | ೨೩ | 6.28 | 6.42 |
| 6 | ಗುರು | ೧೧ | ೫೦। | ಆಶ್ಲೇಷಾ | ೨೪ | ೨೪ | 6.27 | 6.42 |
| 7 | ಶುಕ್ರ | ೧೨ | ೪೦ | ಮಘಾ | ೨೪॥ | ೨೫ | 6.26 | 6.42 |

## ಮಂಗಳೂರಿನ ವಾಯುಸ್ಥಿತಿ.

| Date ತಾರೀಖು | Temperature. ಉಷ್ಣ (ಕಾವು) Maximum ಹೆಚ್ಚಿನದು | Minimum ಕಡಿಮೆ | Rainfall. ಮಳೆ ದಿನದ ಮಳೆ | ಜಮಲಾ ಮಳೆ. |
|---|---|---|---|---|
| 23 | 89— 1 | 78— 1 | — | — |
| 24 | 89— 6 | 79— 1 | — | — |
| 25 | 89— 6 | 77— 1 | — | — |
| 26 | 89— 7 | 79— 5 | — | — |
| 27 | 89— 4 | 78— 6 | — | — |
| 28 | 88— 7 | 77— 1 | — | — |
| 29 | 88— 1 | 76— 5 | — | 119—95 |

## ಮಂಗಳೂರಿನ ಪೇಟೆ ಧಾರಣೆ.

| ಜೀನಸು | | ಇಂದ ರೂ. ಅ. | ವರೆಗೆ ರೂ. ಅ. |
|---|---|---|---|
| ಹೊಸ ಮಸ್ಕತಿ | | 4— 0 | 4—10 |
| ಹೊಸ ರಾಶಿ ಅಕ್ಕಿ | ... | 3— 6 | 3—14 |
| ಮಸ್ಕತಿ | ... | 4— 0 | 4—10 |
| ಗುಜ್ಜು | ... | 3—12 | 4— 2 |
| ಸುಗ | ... | 3— 6 | 3—12 |
| ಊರ ಅಪ್ಪಲ್ ಬೆಳ್ತಿಗೆ | ... | 4—16 | 5— 4 |
| ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ | ... | 6— 8 | 7— 0 |
| ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ | ... | 4— 8 | 4—10 |
| ಗೋಧಿ ಗೋಣಿ ೧ಕ್ಕೆ | ... | 10— 8 | 12— 8 |
| ತೊಗರಿ ಗೋಣಿ ೧ಕ್ಕೆ | ... | 9— 8 | 12— 0 |
| ಹುರುಳಿ ಗೋಣಿ ೧ಕ್ಕೆ | ... | 5— 8 | 6— 4 |
| ಕಡಲೆ ಗೋಣಿ ೧ಕ್ಕೆ | ... | 8— 8 | 9— 8 |
| ತೊಗರಿಬೇಳೆ ಗೋಣಿ ೧ಕ್ಕೆ | ... | 10— 8 | 20— 0 |
| ಉದ್ದು ಗೋಣಿ ೧ಕ್ಕೆ | ... | 8— 8 | 9— 8 |
| ಹೆಸರು ಗೋಣಿ ೧ಕ್ಕೆ | ... | 8— 0 | 9— 0 |
| ಊರುಬೆಲ್ಲ ಖಂಡಿ ೧ಕ್ಕೆ | ... | 31— 4 | 32— 8 |
| ಉಪ್ಪು ಗೋಣಿ ೧ಕ್ಕೆ | ... | 4—12 | 5— 4 |
| ಕೊಬ್ರಿ ಖಂಡಿ ೧ಕ್ಕೆ | ... | 65— | 72— |
| ಕೊಬ್ರಿ ಹಿಂಡಿ ಖಂಡಿ ೧ಕ್ಕೆ | ... | 21 — | 21— 8 |
| ಎಳ್ಳಿಂಡಿ ಖಂಡಿ ೧ಕ್ಕೆ | ... | 26— 4 | 27— 8 |
| ಕೊಬ್ರಿ ಎಣ್ಣೆ ಮಣ ೧ಕ್ಕೆ | ... | 4— 2 | 5— 4 |
| ಎಳ್ಳೆಣ್ಣೆ ಮಣ ೧ಕ್ಕೆ | ... | 6—12 | 7— 0 |
| ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ | ... | 4— 7 | 8—12 |
| [illegible] ಸಕ್ಕರೆ ಮಣ ೧ಕ್ಕೆ | ... | 3—12 | 4— 0 |
| ಹೊಸ ಮೆಣಸು | ... | 5— 8 | 5—12 |
| ಸಾಸಿವೆ ಮುಡಿ ೧ಕ್ಕೆ | ... | 4—12 | 5— 0 |
| [illegible] ಕಾಫಿ ಖಂಡಿ ೧ಕ್ಕೆ | .. | 275— 0 | 300— |
| ಕಾಳುಮೆಣಸು ಖಂಡಿ ೧ಕ್ಕೆ | . | 170— 0 | 180— |
| ಮೆಂತ್ಯ ಮಣ ೧ಕ್ಕೆ | ... | 27— 0 | 28— |
| ಜೀರಿಗೆ [illegible] ಮುಡಿ ೧ಕ್ಕೆ | ... | 2— 4 | 2— 6 |
| [illegible] ಖಂಡಿ ೧ಕ್ಕೆ | ... | 25— 0 | 25— 8 |
| [illegible] ಮಣ ೧ಕ್ಕೆ | ... | 9— 10 | 10— 0 |
| [illegible] ಮಣ ೧ಕ್ಕೆ | ... | 15— 0 | 16—0 |
| [illegible] ೧ಕ್ಕೆ | ... | 14— 4 | 13— 8 |
| [illegible] ಮಣ ೧ಕ್ಕೆ | ... | 19— 0 | 19— 4 |
| [illegible] ೧ಕ್ಕೆ | ... | 19— | 19— 4 |
| [illegible] ಖಂಡಿ ೧ಕ್ಕೆ | ... | 42— 8 | 45— |
| [illegible] ಕಾಫಿ ಖಂಡಿ ೧ಕ್ಕೆ | ... | 295— | 320— |
| [illegible] | ... | 180— | 205— |
| ಹೊಸ [illegible] | ... | 140— | 145— |


**THE CANARA PUBLIC CONVEYANCE CO., LTD, MANGALORE.**
(ESTABLISHED 1914)

# ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
# ಮಂಗಳೂರು.

## ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

**ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ**

ನೋಡಲಿಚ್ಛಿಸುವಂತವರು ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಲ್ಲಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

**ಕೊಲ್ಲೂರು ಮೂಕಾಂಬಿಕಾ ದೇವಾಲಯ**

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ. ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.
ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

**Secretary**,
*The Canara Public Conveyance Company Ltd., Mangalore*



**Chikmagalur Public Conveyance Motor Service.**
**CHIKMAGALUR.**

# ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು.

## ಮುಂಬಾಯಿಯಿಂದ – ಮಂಗಳೂರಿಗೆ.
## ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ
ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

**ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.**

**ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ**

**ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ**

**ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.**

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

**ನಿರಾಯಾಸದ ಪ್ರಯಾಣ!** **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಕೊಳ್ಳಿರಿ.

## ಪತ್ರವ್ಯವಹಾರ.

(ವಾತ್ತಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆಕೊಡಲಾಗುವುದಿಲ್ಲ. ಲೇಖನಗಳು ಸುಲಭ ಶೈಲಿಯಲ್ಲಿರತಕ್ಕದು. ಸಂ. ಸ್ವ.)

### ಗೌಡ ಸಾರಸ್ವತ ಮಠಗಳೂ ಪಂಡಿತರೂ.

ತಾ. ೨೪—೨—'೩೩ನೇ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಅಂಕುರಾಜ ಸುಬ್ಬರಾಯ ಶರ್ಮ ಎಂಬವರು ಕುಂದಾಪುರದ ಶ್ರೀ ಕೆ. ವಾಮನ ಶೆಣೈಯವರ ಗೋತ್ರ ಪ್ರವರಗಳನ್ನು ವಿವರಿಸುತ್ತಾ ಗೌಡ ಸಾರಸ್ವತ ಬ್ರಾಹ್ಮಣ ಸಮಾಜಕ್ಕೂ ಮತ್ತು ಇವರಿಗೆ ಸಂಬಂಧ ಪಟ್ಟ ಮಠಗಳಿಗೂ, ಅಂಕುರಾಜರು ತನ್ನ ಡೊಂಕಾದ ಬುದ್ಧಿವಾದ ವನ್ನು ಹೇಳಲುಪಕ್ರಮಿಸಿದ್ದನ್ನು ನೋಡಿ ತುಂಬಾ ವಿಷಾದಪಡಬೇಕಾ ಗಿದೆ—ಅರರೆ. "ನಾಯಿ ಬೊಗಳಿದರೆ ಸ್ವರ್ಗಲೋಕ ಹಾಳಾದೀತೇ' ಎಂಬಂತೆ ಈ ಶರ್ಮರು ಒಂದಲ್ಲ, ಎರಡಲ್ಲ, ನೂರಾರು ತರದ ಉಪದ್ವ್ಯಾಪಗಳನ್ನು ಮಾಡುವ ವ್ಯಕ್ತಿಗಳಾಗಿರುವರಾಗಿ ಇಷ್ಟರ ವರೆಗಿನ ಅನುಭವದಿಂದ ತಿಳಿದುಬರುತ್ತದೆ. ಇವರು ಅಷ್ಟಮಠಗಳ ದುಸ್ಥಿತಿಯನ್ನು ಸುಧಾರಿಸಿ ಪಂಚಮೋದ್ಧಾರ ಕೈಕೊಂಡರು. ಅದು ಮೊದಲೇ ಕೊನೆಗೊಂಡಿದೆ! ಮಹಮ್ಮದೀಯ ಬಂಧುಗಳಿಗೆ ಬುದ್ಧಿ ಹೇಳಲುಪಕ್ರಮಿಸಿ ತಾವು ಸ್ವತಃ ಬುದ್ಧಿ ಕಲಿತದ್ದಾಯಿತು. ಈಗ ಗೌಡ ಸಾರಸ್ವತ ಬ್ರಾಹ್ಮಣರ ಕುಲಗೋತ್ರಗಳನ್ನು ದುರುಪ್ಯೋಗಪಡಿಸಲು ಹೊರಟಂತೆ ಕಾಣುತ್ತದೆ. ಶರ್ಮರೇ! ನಿಮ್ಮ ಕರ್ಮಾಚರಣೆಯನ್ನು ತಿದ್ದಿಕೊಳ್ಳಿ. ನಮ್ಮ ಕುಲಗೋತ್ರಗಳ ಗೊಡವೆ ನಿಮಗೆ ಅಗತ್ಯವಿಲ್ಲ. ಅದನ್ನು ನಾವೇ ನಮ್ಮಷ್ಟಕ್ಕೆನೇ ನೋಡಿಕೊಳ್ಳುವೆವು. ನಿಮಗೆ ಅಂತಹ ಅನುಭವವು ಅಗತ್ಯವಿರುವುದಾದರೆ ನಿಮ್ಮ ಪಾಂಡಿತ್ಯವನ್ನು ಪತ್ರಿಕೆಯಲ್ಲಿ ಮೆರೆಸಿ ಯಾರಾದರೂ ಬರೆಯಬಹುದಾದ ಲೇಖನಗಳಿಂದ ನಿಮಗೆ ಅಗತ್ಯವಿರುವ ಸಂಗತಿಗಳನ್ನು ಅರಿಸಿ ನಿಮ್ಮ ಪಾಂಡಿತ್ಯವನ್ನು ವೃದ್ಧಿಗೊಳಿಸಲು ಅಪೇಕ್ಷಿಸುವ ಬದಲಾಗಿ ಶಿಷ್ಯಭಾವದಿಂದ ವಿದ್ವಜ್ಜನರನ್ನು ಆಶ್ರಯಿಸಲು ಅದು ಸಾಧ್ಯವಾದೀತು. ಪ್ರಕೃತಕ್ಕೆ ಇಷ್ಟೇ ಸಾಕು. ನಮ್ಮ ಗೊಡವೆ ನಿಮಗೆ ಬೇಡಾ. ನಿಮ್ಮದನ್ನು ನೀವು ಸುಧಾರಿಸಿಕೊಂಡು ಆ ನಿಮ್ಮ ಸಮಾಜ ಸಮಾಜದೊಳಗೆ ವೈಷಮ್ಯವನ್ನು ಬೀರುವ ಆ ನಾರದೀಯ ಭೂಮಿಕೆಯನ್ನು ಇನ್ನಾದರೂ ಬಿಟ್ಟುಬಿಡುವಿರಾಗಿ ನಂಬಬಹುದೇ? ನಿಮ್ಮ ಹಿತೈಷಿ,

**ಕೆ. ಜಿ. ಕುಡ್ವ, ಉಡುಪಿ.**

### "ಖತೀಜಾಬಿ ಕಿರೂಲ್ ವಿದ್ಯಾರ್ಥಿನಿ"ಯವರಿಗೆ ಪ್ರತ್ಯುತ್ತರ.

ಇದೇ ಕಳೆದ ಫೆಬ್ರವರಿ ತಿಂಗಳ ಸ್ವದೇಶಾಭಿಮಾನಿಯ ಐದನೇ ಸಂಚಿಕೆಯಿಂದ ಪ್ರಾರಂಭಿಸಿದ "ಭಾರತ ವರ್ಷದ ಮಹಿಳಾ ಸಮಾಜ" ಎಂಬ ನನ್ನ ಲೇಖನದ ಒಂದು ವಾಕ್ಯವನ್ನು ತೆಗೆದು ಶ್ರೀಮತಿ ಖತೀಜಾಬಿ ಕಿರೂಲ್ ಎಂಬವರು ಒಂದು ಉತ್ತರವನ್ನು ಬರೆದಿರುವರು. ಇವರ ಉತ್ತರವನ್ನು ನೋಡುವಲ್ಲಿ ಇವರು ನನ್ನ ಲೇಖನದ ಆಮೊಂದು ವಾಕ್ಯದ ನಿಜವಾದ ತಾತ್ಪರ್ಯವನ್ನು ತಿಳಿದುಕೊಂಡಿಲ್ಲವೆಂಬುದಾಗಲೀ ಕನ್ನಡ ಭಾಷೆಯಲ್ಲಿ ಮುಸ್ಲೀಮ್ ಲೇಖಕರು ಇಲ್ಲದಿದ್ದುದರಿಂದ ಈ ರೀತಿಯಿಂದಲಾದರೂ ಒಂದು ಲೇಖನವನ್ನು ಬರೆದರೆಂದಾಗಲೀ ನಾನು ಭಾವಿಸುತ್ತೇನೆ. ಯಾಕೆಂದರೆ, ನನ್ನ ಲೇಖನದಲ್ಲಿನ ವಾಕ್ಯವಲ್ಲಿ "ಮಹಮ್ಮದೀಯ ಶಾಸನದ ಪ್ರಾಬಲ್ಯದಿಂದ ಹಿಂದೂ ಸಮಾಜದಲ್ಲಿ ಬಾಲ್ಯ ವಿವಾಹ ಪದ್ಧತಿಯು ಅತ್ಯಧಿಕವಾಯಿತು" ಎಂದೇ ಬರೆದಿರುವೆನಲ್ಲದೆ, ಮಹಮ್ಮದೀಯ ಮತದಿಂದ ಉಂಟಾಯಿತೆಂದು ನಾನು ಬರೆಯಲಿಲ್ಲ. ಆ ಕಾಲದಲ್ಲಿ ಹಿಂದೂ ಸ್ತ್ರೀಯರ ಮೇಲೆ ಅನೇಕ ಮಹಮ್ಮದೀಯ ಅರಸರು ಅನ್ಯಾಯಗಳನ್ನೆಸಗುತ್ತಿದ್ದುದರಿಂದ ಅಶಕ್ತರಾಗಿದ್ದ ಹಿಂದುಗಳು ತಮ್ಮ ಹೆಮ್ಮಕ್ಕಳನ್ನು ಬೇಗ ಬೇಗನೇ ಮದುವೆ ಮಾಡಿಕೊಟ್ಟು ಗಂಡನ ಮನೆಯಲ್ಲಾದರೂ ಅವರು ಸುಖವಾಗಿರಲಿ ಎಂಬ ಭಾವನೆಯಿಂದ ಬಾಲ್ಯ ವಿವಾಹವನ್ನು ಪ್ರಾರಂಭಿಸಿದರು ಹೊರತು ಹಿಂದೂ ಶಾಸ್ತ್ರದಲ್ಲಿ ಬಾಲ್ಯ ವಿವಾಹದ ಪದ್ಧತಿಯೇ ಇಲ್ಲವು. ಇಷ್ಟೊಂದು ವಿಷಯಕ್ಕಾಗಿ ಶ್ರೀಮತಿಯವರು ಸಿಟ್ಟಾಗಿದ್ದುದು ಯಾವ ನ್ಯಾಯವೆಂದು ನನಗೆ ಕಂಡು ಬರುವುದಿಲ್ಲ. ಮತ ಮತ್ತು ಶಾಸನವೆಂದರೆ ಒಂದೇ ಎಂದು ಇವರು ತಿಳಿದುಕೊಂಡಿರಬೇಕು. ಇಲ್ಲವಾದರೆ ಈ ರೀತಿ ಬರೆಯುತ್ತಿದ್ದಿಲ್ಲ. ಪರಂತು ಹಾಗಲ್ಲ; ಮತವೆಂದರೆ ಧಾರ್ಮಿಕವೂ ಶಾಸನವೆಂದರೆ ರಾಜಕೀಯವೂ ಆಗಿರುತ್ತದೆ. ನಾನು ಶಾಸನದ ಕುರಿತೇ ಬರೆದುದಲ್ಲದೆ ಮತದ ಕುರಿತು ಬರೆದುದಲ್ಲ. ಇನ್ನುಳಿದುದು ಮಹಮ್ಮದೀಯ ಮತದ ಸಹಿಷ್ಣುತೆ. ಇದು ನನ್ನ ಲೇಖನಕ್ಕೆ ಸಂಬಂಧಿಸದ ವಿಷಯವಾಗಿರುವುದರಿಂದ ಹೆಚ್ಚು ಬರೆಯುವ ಅಗತ್ಯವಿಲ್ಲ. ಆದರೂ ಸ್ವಲ್ಪದರಲ್ಲೇ ವಿವರಿಸುತ್ತೇನೆ. ಮಹಮ್ಮದೀಯ ಮತವು ಹಿಂದುಸ್ಥಾನದಲ್ಲಿ ಅವರ "ಖುರಾನು" ಎಂಬ ಶಾಸ್ತ್ರಾಧಾರದಿಂದಲೇ ಪ್ರಚಾರವಾಯಿತೋ ಅಥವಾ ಹಲಕೆಲವು ಮಹಮ್ಮದೀಯ ಅರಸರ ಮೂಲಕ ಶಸ್ತ್ರಾಧಾರದಿಂದಲೇ ಆಯಿತೋ ಎಂಬುದನ್ನು ನಾವು ಇತಿಹಾಸದಿಂದಲೇ ತಿಳಿದುಕೊಳ್ಳಬಹುದು. ಸಹಿಷ್ಣುತೆ ಎಂದರೆ ಏನೆಂಬುದನ್ನು ಶ್ರೀಮತಿಯವರು ತನ್ನ ಉತ್ತರದಲ್ಲಿ ವಿವರಿಸಲಿಲ್ಲ. ಹಿಂದೂಗಳು ತಮ್ಮ ಧರ್ಮತತ್ವಗಳನ್ನು ಅನೇಕ ಶಾಸ್ತ್ರಾಧಾರದಿಂದ ಪ್ರಚಾರ ಮಾಡುತ್ತಿರಲು ಹಿಂದೂ ಧರ್ಮದ ಉತ್ತಮ ತತ್ವಗಳನ್ನು ತಿಳಿಕೊಂಡು ಅನೇಕ ಮಂದಿ ಕ್ರೈಸ್ತರೂ ಮಹಮ್ಮದೀಯರೂ ಹಿಂದೂ ಮತವನ್ನು ಸೇರಲು, ಮಹಮ್ಮದೀಯರಲ್ಲಿ ಅನೇಕರು ರೇಗಿ ಬಿದ್ದು ಅನುದಿನವೂ ಹೊಂಚು ಹಾಕುತ್ತಾ ಪಂಡಿತ ಲೇಖರಾಮು, ಸ್ವಾಮಿ ಶ್ರದ್ಧಾನಂದ ಮುಂತಾದ ದೊಡ್ಡ ದೊಡ್ಡ ಮುಖಂಡರನ್ನು ಕೊಂದೇ ಹಾಕಿದ ದೃಷ್ಟಾಂತಗಳು ಈಗಲೂ ನಮ್ಮ ಮುಂದಿವೆ. ಈ ಕೃತ್ಯಗಳನ್ನು ನೋಡುವಲ್ಲಿ ಮಹಮ್ಮದೀಯ ಮತದವರಲ್ಲಿ ಎಷ್ಟು ಸಹಿಷ್ಣುತೆ ಇದೆ ಎಂಬುದು ಗೊತ್ತಾಗುತ್ತದೆ. ಕ್ರೈಸ್ತರಾದರೂ ಈ ರೀತಿಯ ಪ್ರತೀಕಾರವನ್ನು ಮಾಡಲಿಲ್ಲ. ಕಳೆದು ಹೋದ ಇತಿಹಾಸವನ್ನು ನೋಡುವುದಾದರೆ ಮಹಮ್ಮದ ಘಜನಿ, ಮಹಮ್ಮದ ಗೋರಿ, ಅವರಂಗಜೇಬ ಮುಂತಾದ ಶಾಸನ ಕಾಲವನ್ನು ನಾವು ಒಮ್ಮೆ ನೆನಪಿಗೆ ತಂದುಕೊಂಡರೆ ಮಹಮ್ಮದೀಯರಲ್ಲಿದ್ದ ಸಹಿಷ್ಣುತೆಯು ಮತ್ತೂ ಹೊಳೆಯುವುದು. ನೀವು ಹೇಳುವಂತೆ ಮಹಮ್ಮದೀಯ ಮತದಲ್ಲಿ ವಿಶೇಷವಾದ ಸಹಿಷ್ಣುತೆ ಇರುವುದಾದರೆ ಡಿಲ್ಲಿ ಆತ್ತಕಡೆ ಇರುವ ಖ್ವಾಜಾ ಹಸನ್ ನಿಝಾಮಿ ಎಂಬವರು ಏನೂ ತಿಳಿಯದ ಹಿಂದುಗಳಿಗೆ ತರತರದ ಪ್ರಲೋಭನಗಳನ್ನು ತೋರಿಸಿ ಹಿಂದುಗಳನ್ನು ಮತಾಂತರಗೊಳಿಸಲು ಏತಕ್ಕೆ ಪ್ರಯತ್ನ ಪಡುತ್ತಾರೆ? ಮಹಮ್ಮದೀಯ ಮತವು ಹಿಂದೂ ಮತಕ್ಕಿಂತ ಪ್ರಾಚೀನವೂ ಸತ್ಯಸಿದ್ಧಾಂತದ ಮತವೂ ಆಗಿರುವುದಾದರೆ ಅದರ ಬೋಧನೆಯಿಂದಲೇ ಜನರನ್ನು ಮತಾಂತರಗೊಳಿಸಬಹುದಲ್ಲವೇ? ಹಿಂದುಗಳು ತಮ್ಮ ಧರ್ಮವನ್ನು ಪ್ರಚಾರ ಮಾಡುವುದನ್ನು ಮಹಮ್ಮದೀಯರಿಗೆ ಯಾವಾಗ ನೋಡಲಿಕ್ಕಾಗುವುದಿಲ್ಲವೋ, ಹಾಗಾದರೆ ಅದರಲ್ಲಿ ಸಹಿಷ್ಣುತೆ ಇದೆ ಎಂದು ನಾವು ಹೇಗೆ ಒಪ್ಪೋಣ? ಆದುದರಿಂದ ಈಗಿನ ಕಾಲದಲ್ಲಿ ನಾವು ನಮ್ಮ ನಮ್ಮಲ್ಲಿರುವ ನ್ಯೂನ್ಯತೆಗಳನ್ನು ನಿವಾರಿಸಲಿಕ್ಕೆ ಪ್ರಯತ್ನ ಮಾಡಬೇಕೇ ಹೊರತು ಇದ್ದುದನ್ನು ಇದ್ದ ಹಾಗೆ ಬರೆದುದಕ್ಕೆ ವ್ಯರ್ಥವಾಗಿ ಬೇಸರಪಡುವುದು ಯೋಗ್ಯವಲ್ಲ. ಇಸ್ಲಾಮ್ ಮತವು ಸಂಪೂರ್ಣ ದೋಷಯುಕ್ತವಾಗಿದೆ ಎಂದು ನಾನೆಂದಿಗೂ ಹೇಳಲಾರೆ. ಎಲ್ಲಾ ಮತಗಳಲ್ಲಿಯೂ ಒಳ್ಳೇ ಒಳ್ಳೇ ತತ್ವಗಳು ಇದ್ದೇ ಇವೆ. ಪರಂತು ವರ್ತಮಾನ ಕಾಲದಲ್ಲಿ ಎಲ್ಲಾ ಮತಗಳ ಜನರು ಬಹು ವಿಧದ ಅಂಧ ರೂಢಿಗಳಿಗೆ ಬಿದ್ದು ತಮ್ಮ ತಮ್ಮ ಮತದ ನಿಜವಾದ ಸಿದ್ಧಾಂತವನ್ನು ಕೆಡಿಸುತ್ತಿದ್ದಾರೆ. ದೃಷ್ಟಾಂತವಾಗಿ ಹಿಂದುಗಳು ಭಕ್ತಿಯ ನೆವನದಿಂದ ವಿಗ್ರಹಗಳನ್ನು ಸ್ಥಾಪಿಸಿ ಪೂಜಿಸುವುದಲ್ಲದೆ ಅವುಗಳ ಹೆಸರಲ್ಲಿ ಹಂದಿ, ಕೋಳಿ, ಆಡು ಇತ್ಯಾದಿ ಪ್ರಾಣಿಗಳನ್ನು ಕೊಲ್ಲುತ್ತಾರೆ. ಆದರೆ ಇದು ಹಿಂದೂ ಧರ್ಮದ ಮೂಲತತ್ವದ ವಿರುದ್ಧವಾದ ಆಚಾರವಾಗಿರುತ್ತದೆ. ಅದೇ ಪ್ರಕಾರ ಮಹಮ್ಮದೀಯರು ತಮ್ಮ ಪವಿತ್ರ ದಿವಸಗಳಲ್ಲಿ ದನಗಳನ್ನು ಕೊಲ್ಲುತ್ತಾರೆ. ಶ್ರೀಮತಿಯವರು ಹೇಳುವಂತೆ ಮಹಮ್ಮದೀಯ ಮತವು ನಿಷ್ಕಳಂಕವೂ ಅತ್ಯಂತ ಪವಿತ್ರವೂ ಆಗಿರುವುದಾದರೆ ಅಂಥಾ ಮತದಲ್ಲಿ ಈ ರೀತಿಯ ಪಶುವಧೆಯು ಇರಲಿಕ್ಕಿಲ್ಲವೆಂದೂ ಇದು ಕೇವಲ ಅವಿಚಾರದಿಂದ ಉಂಟಾದ ಪದ್ಧತಿ ಎಂದೂ ನಾನು ಭಾವಿಸುವೆನು.

ಮಹಮ್ಮದೀಯ ಮತದಲ್ಲಿ ಸ್ತ್ರೀಯರಿಗೆ ಬಹಳ ಸ್ವಾತಂತ್ರ್ಯ ಉಂಟೆಂದು ನೀವು ಬರೆಯುತ್ತೀರಿ. ಆದರೆ ವ್ಯವಹಾರದಲ್ಲಿ ಹಾಗಿಲ್ಲವೆಂದೇ ನಾನು ಭಾವಿಸುತ್ತೇನೆ. ನಿಮ್ಮಲ್ಲಿನ ಘೋಷಾ ಪದ್ಧತಿಯನ್ನು ಪರಿಗಣಿಸುವಾಗ ಮಹಮ್ಮದೀಯ ಸ್ತ್ರೀಯರಿಗೆ ಎಷ್ಟು ಸ್ವಾತಂತ್ರ್ಯವಿದೆ ಎಂದು ಕಂಡುಬರುತ್ತದೆ. ಯಾವುದಾದರೊಂದು ಕಡೆಗೆ ಹೋಗಬೇಕಾದರೆ ದಾರಿ ಕಾಣುವಷ್ಟು ಮಾತ್ರ ಕಣ್ಣುಗಳನ್ನು ಹೊರಬಿಟ್ಟು ಮೈಗೆಲ್ಲಾ ಮುಸುಕು ಹಾಕಿಕೊಂಡು ಹೋಗಬೇಕೆಂಬ ಕಟ್ಟಾಜ್ಞೆಯು ನಿಮ್ಮಲ್ಲಿ ಅಲ್ಲದೆ ಹಿಂದೂ ಸ್ತ್ರೀಯರ ಮೇಲಿಲ್ಲ. ಈಗಿನ ಕಾಲದಲ್ಲಿ ಅಫಗಾನಿಸ್ಥಾನದಂಥಾ ಹಲಕೆಲವು ರಾಷ್ಟ್ರಗಳಲ್ಲಿ ಸ್ತ್ರೀಯರಿಗೆ ಶಿಕ್ಷಣ ದೊರೆಯುತ್ತಿರುವುದಾದರೂ ಕೆಲವು ಕಾಲದ ಮೊದಲು ಸ್ತ್ರೀಯರಿಗೆ ವಿದ್ಯೆ ಕೊಡಬಾರದೆಂಬ ಆದೊಂದು ಅಂಧ ರೂಢಿಯು ಹಿಂದೂಗಳಲ್ಲಿದ್ದಂತೆಯೇ ಮಹಮ್ಮದೀಯರಲ್ಲಿಯೂ ಇತ್ತು. ಇದನ್ನೆಲ್ಲಾ ನಾವು ಆಲೋಚನೆ ಮಾಡಿ ತಿಳಿದು ನಮ್ಮ ನಮ್ಮ ಸಮಾಜಗಳಲ್ಲಿರುವ ನ್ಯೂನ್ಯತೆಗಳನ್ನು ಇದ್ದಕ್ಕಿದ್ದ ಹಾಗೆ ಭಾಷಣಗಳಿಂದಾಗಲೀ ಲೇಖನಗಳಿಂದಾಗಲೀ ಪ್ರಕಟಗೊಳಿಸಿ ನಮ್ಮ ನಮ್ಮ ಸಮಾಜವನ್ನು ನಾವು ಸುಧಾರಿಸಿಕೊಳ್ಳುವುದೇ—ನಮ್ಮ ಕರ್ತವ್ಯವಾಗಿರುತ್ತದೆ. ಆದುದರಿಂದ ನನ್ನ ಲೇಖನದಲ್ಲಿ ಮಹಮ್ಮದೀಯರ ಮನಸ್ಸು ನೋಯುವಂತಹ ಅಭಿಪ್ರಾಯವು ಇಲ್ಲವೆಂಬುದನ್ನು ನಾನು ಶ್ರೀಮತಿ ಖತೀಜಾಬಿಯವರಿಗೆ ತಿಳಿಸುವುದಲ್ಲದೆ ಆ ಕುರಿತು ಯಾವ ತಪ್ಪು ಅಭಿಪ್ರಾಯವನ್ನೂ ಗ್ರಹಿಸಬಾರದಾಗಿ ನನ್ನ ವಿನಂತಿ.

**ಶಾಂತಾದೇವಿ, ಗುಲ್ವಾಡಿ.**

### "ಭಾರತ ವರ್ಷದ ಮಹಿಳಾ ಸಮಾಜ"

ಈ ಮೇಲಿನ ಶಿರೋನಾಮ ಲೇಖನದಿಂದ ಶ್ರೀಮತಿ ಶಾಂತಾದೇವಿ ಗುಲ್ವಾಡಿಯವರು ಬರೆದಿರುವ ಲೇಖನವು ಇಸ್ಲಾಂ ಮತ ಹಾಗೂ "ಮುಸ್ಲಿಮ್ ಮಹಿಳೆಯರ ಮನೋದುಃಖಕ್ಕೆ" ಹೇಗೆ ಕಾರಣವಾಯಿತೋ ತಿಳಿಯಲಾಗದು! "ಮಹಮ್ಮದೀಯ ಶಾಸನದ ಪ್ರಾಬಲ್ಯದಿಂದ ಹಿಂದೂ ಸಮಾಜದಲ್ಲಿ ಬಾಲ್ಯ ವಿವಾಹ ಪದ್ಧತಿಯು ಅತ್ಯಧಿಕವಾಯಿತು" ಎನ್ನುವ ಸಾರಾಂಶವನ್ನು ಶ್ರೀಮತಿ "ಖತೀಜಾಬೀ ಕಿರೂಲ್ ವಿದ್ಯಾರ್ಥಿನಿ"ಯವರು ತಿಳಿಯಲಿಲ್ಲವೆಂದು ತೋರುತ್ತದೆ. ಮಹಮ್ಮದೀಯ ಶಾಸನ ಸಮಯದಲ್ಲಿ ಹಿಂದೂ ಸ್ತ್ರೀಯರ ಮೇಲೆ ಬಿದ್ದ ಘೋರ ಅತ್ಯಾಚಾರವು "ಬಾಲ್ಯ ವಿವಾಹ" ಪದ್ಧತಿಗೆ ಮೂಲ ಕಾರಣವೇ ಆಗಿರುವುದೆಂಬ ವಿಷಯವು ನಿರ್ವಿವಾದವಾಗಿದೆ. ಇತಿಹಾಸವು ಇದಕ್ಕೆ ಸಾಕ್ಷೀಭೂತವಾಗಿದೆ. ಅಂದಿನ ಮಹಮ್ಮದೀಯ ಶಾಸಕರ ಕ್ರೂರ ಅತ್ಯಾಚಾರಕ್ಕೆ ವಿಮುಖರಾಗಿ ಎಷ್ಟೋ ಭಾರತ ವೀರನಾರೀಮಣಿಯರು ಚಿತೆಯನ್ನೇರಿದರು; ಇನ್ನಿತರರು ಮಹಮ್ಮದೀಯರ ಬಲತ್ಕಾರಕ್ಕೊಳಗಾದರು!

ಅವಿವಾಹಿತರಾದ ಸ್ತ್ರೀಯ ಮಾನ ಕಾಯುವ ಭಾರವು ಕಷ್ಟತರವಾಗಿ ತೋರಿ, ಪ್ರಾಯಬಾರದನೇ ವಿವಾಹ ಮಾಡಿ ಪತಿಗೃಹವನ್ನು ಸೇರಿಸುವ ಪದ್ಧತಿಯು ತ್ವರೆಯಲ್ಲಿ ಅಂದಿಗೆ ಜಾರಿಗೆ ಬಂದಿರುವ ವಿಷಯವು ಸರ್ವರಿಗೂ ವಿದಿತವಾಗಿದೆ. ಅಲ್ಲದೆ ಅತ್ಯಾಚಾರದ ವಕ್ರದೃಷ್ಟಿಯ ಪಥಕ್ಕೆ ಬೀಳದಂತೆ, ಮಹಮ್ಮದೀಯರಲ್ಲಿ ಬಳಕೆಗೆ ಬಂದಿರುವ "ಘೋಷಾ" (ಇಲ್ಲವೇ ಮುಸುಕು) ಪದ್ಧತಿಯನ್ನೂ ಸಹ ಹಿಂದುಗಳು ಅನುಕರಣೆಗೆ ತಂದರು! ಇದರ ಕುರುಹುಗಳನ್ನು ಉತ್ತರ ಹಿಂದುಸ್ಥಾನದಲ್ಲಿ ಈಗಲೂ ಕಾಣಬಹುದು. ಐತಿಹಾಸಿಕ ಮಹಮ್ಮದೀಯ ಶಾಸನದ ಅತ್ಯಾಚಾರದ ಘಟನೆಗಳನ್ನು ಉದಾಹರಣೆಯಾಗಿ ಕೊಡುವುದರಿಂದ ಇಸ್ಲಾಮ್ ಮತದ ದೂಷಣೆ ಎಂದಿಗೂ ಆಗಲಾರದು. ಸತ್ಯವು ಎಲ್ಲಿ, ಯಾವ ಮತ, ಧರ್ಮದಲ್ಲಿರಲಿ, ಗ್ರಹಣಯೋಗ್ಯವೇ ಸರಿ. ಬೇಕಾದರೆ ಹಿಂದುಗಳಲ್ಲಿರಲಿ ಯಾ ಮಹಮ್ಮದೀಯರಲ್ಲಿರಲಿ.

ಅವರಂಗಜೇಬ, ಹೈದರ, ಟೀಪು, ಘಜನಿ ಮಹಮ್ಮದ ಮುಂತಾದವರ ಶಾಸನ ಅತ್ಯಾಚಾರ ಘಟನೆಗಳನ್ನು ವರ್ಣಿಸಿದರೆ ಸ್ಥಳ ಸಾಲದು. ಅವರ ಅತ್ಯಾಚಾರವನ್ನು ಹೇಳಿದುದರಿಂದ, ಇಂದಿನ "ಇಸ್ಲಾಮ್ ಮತವನ್ನೂ ಮುಸಲ್ಮಾನರನ್ನೂ ಅಕಾರಣವಾಗಿ" ಆಕ್ಷೇಪಿಸಿ ದೂಷಿಸಿದಂತಾಗದು. ಅಂದಿನ ಶಾಸಕರು ಖಡ್ಗದಿಂದ ಇಸ್ಲಾಮ್ ಮತ ಸ್ಥಾಪಿಸಿದರೆ ಇಂದಿನವರೂ ಮಾಡಬೇಕೆಂಬರ್ಥವಲ್ಲ. ಹೇಗೂ ಅನರ್ಥ, ಕ್ರೂರ, ಅಮಾನುಷಿಕ ದರ್ಪವು ಎಲ್ಲಿದ್ದರೂ ಖಂಡನೀಯವು. ಅದರೆ ನಿಜತ್ವವು ಮಂಡನೀಯವು. ಹಿಂದುಗಳು ಕೇವಲ ರೂಢಿಯನ್ನೇ ಶಾಸ್ತ್ರವಾಗಿ ಮಾಡಿದ್ದರಿಂದ, ಬಾಲ್ಯ ವಿವಾಹವು ಶಾಸ್ತ್ರೀಯವೆಂದು

(೧೧ನೇ ಪುಟಕ್ಕೆ ಮುಂದುವರಿದುದು.)


# WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

*The Divisional Manager,*
The South Indian General Assurance Co. Ltd.
64, 3rd. Cross Road, Srirampur Extn.
Malleswaram Post, BANGALORE.

OR

*The Managing Agents,*
The S. I. G. A. Co. Ltd.
55, Poonamallee High Road, Kilpauk, MADRAS.

ನಾಳೆ — ಈ ದಿನ —
ನಿಮಗೆ ಬೇಕಾದುದು!

# ರಬ್ಬರ್ ಮೊಹರುಗಳು

ಬಹು ಕಡಿಮೆ ದರ.

**ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ**

ನಿತ್ಯವೂ ತಾರೀಕನ್ನು ಬದಲಾಯಿಸ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಳ್ಳಿಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ. ಅದಲ್ಲದೆ ನಿಮ್ಮ ದಸ್ಕತಿನ ಮೊಹರು, ಹಿತ್ತಾಳೆ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಪುಸ್ತಕದ ಛಾಪೆಗೆ ಬೇಕಾಗುವ ಬ್ಲಾಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ. ಸೂ: — ನಿಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು.

**ಹೆಡ್ ಆಫೀಸು: —**

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
No. 2. ಬಲ್ಮಠ ರಸ್ತೆ, ಮಂಗಳೂರು,
ದ. ಕನ್ನಡ.



# "ಜಯಕರ್ನಾಟಕ"

ಕನ್ನಡನಾಡಿನ ಸರ್ವತೋಮುಖ ಉನ್ನತಿಯನ್ನೇ ಗುರಿಯಾಗಿಟ್ಟುಕೊಂಡ ಅಖಿಲಕರ್ನಾಟಕದ ಏಕಮಾತ್ರ ಪ್ರಮುಖ ಮಾಸಪತ್ರಿಕೆ. ಪರದೇಶದಲ್ಲಿಯ ಮಾನ್ಯ ಕನ್ನಡಿಗರ ಲೇಖನಗಳೂ, ಕತೆ, ಕವಿತೆ, ಹರಟೆ, ಜನಪದಸಾಹಿತ್ಯ, ವಿನೋದ ಮೊದಲಾದುವುಗಳ ಮೇಲೆ ಕನ್ನಡ ವಿದ್ವನ್ಮಣಿಗಳ ಲೇಖನಗಳೂ, ಕನ್ನಡ ಚಿತ್ರಕಾರರ ಚಿತ್ರಗಳೂ ಬರುತ್ತಿವೆ. ಪ್ರತಿ ತಿಂಗಳೂ ಕ್ರೌನ ಆಕಾರದ ೮೦ ಪುಟಗಳು. ಮುದ್ದಾದ ಅಚ್ಚು. ಪ್ರತಿ ತಿಂಗಳೂ ಮೊದಲನೆಯ ತಾರೀಖಿಗೆ ಹೊರಡುವ ಈ ಪತ್ರಿಕೆಗೆ ಚಂದಾದಾರರಾಗುವದು ಕನ್ನಡಿಗರ ಕರ್ತವ್ಯ. ಜಾಹೀರಾತುದಾರರಿಗೆ ಉತ್ತಮ ಸ್ಥಾನ.

**ಹಿಂದುಸ್ಥಾನ ರೂ. ೫-೮-೦. ಪರದೇಶ ೭-೦-೦.**

## ಜಯಕರ್ನಾಟಕ ಗ್ರಂಥಮಾಲೆ

ಕನ್ನಡಿಗರಲ್ಲಿ ಹೊಸ ಬಗೆಯ ವಾಚನಾಭಿರುಚಿಯನ್ನು ಹುಟ್ಟಿಸುವುದೇ ಇದರ ಉದ್ದೇಶ. ವರ್ಷದಲ್ಲಿ ಕತೆ, ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಮತ್ತು ಲಲಿತ ಶೈಲಿಯ ಆರು ಪುಸ್ತಕಗಳಿಗೆ ಚಂದಾ ಹಣವು ಬರೀ ರೂ. ೩-೪-೦.

ಕ್ಯಾಟಲಾಗಿಗಾಗಿ ಬರೆಯಿರಿ. ಎಲ್ಲ ಕಡೆಗೂ ಏಜಂಟರು ಬೇಕು.

ಕಾರ್ಯದರ್ಶಿ
ಜಯಕರ್ನಾಟಕ ಕಾರ್ಯಾಲಯ, ಧಾರವಾಡ.



# S. U. N. & CO.

*Choukhamba, Benares City*

**ಮೂರು ಇನಾಮುಗಳು.**

ನಮ್ಮಲ್ಲಿ ಕಾಶ್ಮೀರೀ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಯಾಗಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2-8-0 ಯಿಂದ 3-12-0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3-8-0, 4-8-0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4-8-0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಶ್ಯಾಮಿಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ: —
**ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಿಸ್ (ಯೂ.ಪಿ.)**



# ಕೇಸರಿಯವರ

# ಲೋಧ್ರ

## ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಋತುಶೂಲೆ, ಬಹಿಷ್ಟೆಯಾಗದಿರುವುದು, ಅಕಾಲ ಬಹಿಷ್ಟೆ ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧತೆ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ, ಸೆರಗುಭಂಗಾರವೆಂದೂ, ರತ್ನಖಚಿತ ಆಭರಣವೆಂದೂ, ಸರ್ವಾಭೀಷ್ಟಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ೧೨ ಔನ್ಸ್ ರೂ. ೩-೦-೦.
ಸಣ್ಣ ಬಾಟಲ್ ೭ ಔನ್ಸ್ ರೂ. ೧-೧೦-೦.

ಟಪ್ಪಾಲು ಖರ್ಚು ಪ್ರತ್ಯೇಕ. ಕೆಟಲಾಗು ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ಕೇಸರಿ ಕುಟೀರಂ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್, ಮದರಾಸು.

ಸ್ಟೋಕಿಸ್ಟ್ಸ್— ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು. ಷಾ ಕಂಪೆನಿ, ಕಂಪನಕಟ್ಟೆ, ಮಂಗಳೂರು.



**The Zandu Pharmaceutical Works, Ltd., Bombay, 14.**

**ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.**

ಲೋಕಪ್ರಸಿದ್ಧವಾದ

# 'ಝಂಡು' ಚ್ಯವನಪ್ರಾಶ ಲೇಹವು.

**ಅಮೋಘ ಟಾನಿಕ್ಕು!** **ಅಮೋಘ ಟಾನಿಕ್ಕು!!**

ಹಸಿ ಅಮಲಕ ಅನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಬುದ್ಧಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಡಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಜಗತ್ಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು **ಸ್ವಲ್ಪ ಕಾಲದಲ್ಲಿಯೇ** ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪೌ. ಜಾಡಿ ರೂ. 10/- ಕ್ರಯ 1 ಪೌನು ಟೀನ್ ರೂ. 2/8. ½ ಪೌ. ರೂ. 1/5 ¼ ಪೌ. ಆ. 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು: — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು: — ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು: — ಷಾ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು: — ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.
ಸಬ್ ಏಜಂಟರು—ಮೈಸೂರು ಏಜಂಟರು: — ಟಿ. ಸಿ. ನಟರಾಜ್ ಅಂಡ್ ಕೊ., ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು: — ಬಿ. ಪ್ರೂಪಟ್‌ಲಾಲ್ ಕಂಪೆನಿ, ಚಿಕ್ಕಪೇಟೆ.
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ೭ ಮುಕ್ತಿಸಬೇಕು.



## ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವಮಾನದ ಅಮೃತ. ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿ ಸಿದ್ಧೌಷಧ" "ಶಕ್ತಿದಾಯಿನಿ ಔಷಧಗಳ ರಾಜ" "ಸರ್ವ ಸಿದ್ಧೌಷಧ"
"ವ್ಯಾಧಿಗಳಿಂದ ಸಂಕಟಪಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೆ ನಿಮಗೆ ಹಿತಕಾರಿಯೂ ಜೀವನಾಧಾರವೂ ಆದ

# ಜೀವಾಮೃತವೇ.

ಇದು ಪಂಡಿತ ಡಿ. ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ೧೯೨೫ನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ. ನರಗಳ ದೌರ್ಬಲ್ಯವು ಮಸ್ತಿಷ್ಕದ ಹೀನತೆ ... ಆಯಾಸ ರಕ್ತ ಹೀನತೆ, ನರಗಳ ಅಶಕ್ತತೆ, ಮೆದುಳು ಚೈತನ್ಯಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವುದು ... ಸ್ಥಿತಿಯಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ... ಸಾರಿ ಸೇವಿಸಲು ಪ್ರಾರಂಭಿಸಿದಾಕ್ಷಣವೇ ಅದರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡು ... ರೂ. ೩-೪-೦ ಮತ್ತು ರೂ. ೧-೧೨-೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

**ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೮೭, ಮದ್ರಾಸು.**

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸೀಸ್ ೪೨ ಚಿಕ್ಕಪೇಟೆ ಬೆಂಗಳೂರು. (...)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 104

# ವಿಮರ್ಶೆ.

ಎಮ್. ಮಾಧವಾಚಾರ್ಯರು ರಚಿಸಿದ ಸರಸ್ವತಿ (Crownoct. 99 pp) ಬೆಲೆ ೮ ಆಣೆ—ಎಂಬ ಸಾಮಾಜಿಕ ನಾಟಕವು ಮನಸ್ಸನ್ನು ಆಕರ್ಷಿಸುತ್ತದೆ. ನಾಟಕವನ್ನು ಎರಡು ಭಾಗ ಮಾಡಿ ಒಂದೊಂದರಲ್ಲಿ ೧೩ ಪ್ರವೇಶಗಳು ಇರುವುವು. ಅಭಿನಯ ಮಾಡಲು ಸ್ವಲ್ಪ ದೊಡ್ಡದಾದರೂ, ಓದಲು ಬಹಳ ರಸಿಕವಾಗಿದೆ. ಶ್ರೀಮಂತಿಕೆಯಿಂದ ಕೊಬ್ಬಿ ತಮ್ಮ ವಿಷಯಸುಖಕ್ಕಾಗಿ ಎಂತಹ ಹೇಯಕೃತ್ಯಗಳನ್ನು ಅವರು ಮಾಡಲು ಹೇಸುವುದಿಲ್ಲವೆಂಬುದನ್ನು ತೋರಿಸಬೇಕೆಂಬುದೆ ಅವರ ಉದ್ದೇಶವೆಂದು ತೋರುತ್ತದೆ. ಮುನ್ನುಡಿಯಲ್ಲಿ ಹೇಳುವಷ್ಟು ಭಾಷೆ ಅಕೃತ್ರಿಮವಾಗಿಲ್ಲ; ಪುಸ್ತಕವನ್ನು ಶ್ರೀ। ವಿಭುದತೀರ್ಥರ ಅಡಿದಾವರೆಗಳಲ್ಲಿ ಅರ್ಪಣೆ ಮಾಡಿದುದರ ಅಭಿಪ್ರಾಯ ಸ್ಪಷ್ಟವಾಗುವುದಿಲ್ಲ.

ಬೆಳಗಾವಿನ ತುಂಟರ ತಂಡದ ಒಂದಾಣೆ ಮಾಲೆಯ ಎರಡು ಚಿಕ್ಕ ಪುಸ್ತಕಗಳಲ್ಲಿ ಪೋಸ್ಟ ಮಾಸ್ತರ (೧೭) ಎಂಬುದು ಟಾಗೂರರ 'Postmaster' ಎಂಬ ಕತೆಯ ಭಾಷಾಂತರವಾಗಿದೆ. ಸಮಾಜಸೇವೆ ಎಂಬುದು ಟೆಂಗ್ಸೆ ಗೋವಿಂದರಾಯರು ಬರೆದ ಚಿಕ್ಕ ನಾಟಕ. ಶಹಜಹಾನನ ಕಾಲದಲ್ಲಿದ್ದ ಜಗನ್ನಾಥ ಪಂಡಿತರು ಮುಸಲ್ಮಾನ ಸ್ತ್ರೀಯನ್ನು ಮದುವೆಯಾಗಿ ಬಹಿಷ್ಕೃತರಾದ ವಿಷಯ ಇದರಲ್ಲಿ ತೋರಿಸಿರುತ್ತದೆ.

ನಮ್ಮ ಜಿಲ್ಲೆಯಲ್ಲಿ ಕನ್ನಡ ಭಾಷಾ ಸೇವೆಮಾಡಬೇಕೆಂಬ ಲವಲವಿಕೆಯು ಚಿಕ್ಕ ಹುಡುಗರಲ್ಲಿಯೂ ಮೊಳೆದಿದೆ ಎಂಬುದನ್ನು ತೋರಿಸಲು "ನವಜೀವನ"ಮಾಲೆ ಎಂಬ ಗ್ರಂಥಗಳನ್ನು ಪ್ರಸಿದ್ಧಿಸುವ ಸಂಘ ಸ್ಥಾಪನೆಯೇ ಸಾಕ್ಷಿ. ಇದರ ಮೊದಲನೆಯ ಪುಷ್ಪವಾದ 'ಸಮರ್ಪಣೆ (ಬೆಲೆ ೦-೧-೬) p. ೨೦ ಎಂಬುದನ್ನು ಗಣಪತಿ ಹೈಸ್ಕೂಲಿನ ವಿದ್ಯಾರ್ಥಿಯಾದ ಕೆ. ಗಣಪತಿಶರ್ಮಾ ಎಂಬವರು ಬರೆದಿರುವರು. ಈ ಪುಸ್ತಕವು ಶ್ರೀ ಪ್ರೇಮಚಂದಜೀ ಎಂಬವರು ಬರೆದ ಹಿಂದೀ ಕಥೆಯ ಭಾವಾನುವಾದವಾಗಿರುತ್ತದೆ. ಸುಶೀಲೆ ಎಂಬ ರಜಪೂತ ಸ್ತ್ರೀಯು ಶೌರ್ಯವನ್ನು ತೋರಿಸಿ ಕಾದಾಡಿ ಕೊನೆಗೆ ಓಡಿಹೋದ ವಿಜಯಸಿಂಹನೆಂಬ ತನ್ನ ಮೋಹದ ಗೆಳೆಯನನ್ನು ಪತಿಯಾಗಿ ವರಿಸದೆ ಅಗ್ನಿಯಲ್ಲಿ ಬಿದ್ದು ಪ್ರಾಣ ತ್ಯಾಗ ಮಾಡಿದ ವೀರಳ ಕಥೆಯಾಗಿರುತ್ತದೆ. ಚಿಕ್ಕ ಚಿಕ್ಕ ಕಥೆಗಳನ್ನು ಬರೆಯುವಾಗ ನಮ್ಮ ಜಿಲ್ಲೆಯಲ್ಲಿ ತೋರಿ ಬರುವ ದೃಶ್ಯಗಳನ್ನಾಗಲೀ, ವಿಷಯಗಳನ್ನಾಗಲಿ ಆರಿಸಿಕೊಂಡು ಅವುಗಳ ಮೇಲೆ ಕಥೆಗಳನ್ನು ರಚಿಸಿ ಗ್ರಂಥಮಾಲೆಯವರು ನಮಗೆ ಒದಗಿಸಿಕೊಡುವರೆಂದು ಭಾವಿಸುತ್ತೇವೆ. ಜಿಲ್ಲೆಯ ಜನರು ತರುಣರ ಈ ಕಳಕಳಿಯ ಸೇವೆಯನ್ನು ಪ್ರೋತ್ಸಾಹಿಸುವರೆಂದು ಕೋರುತ್ತೇವೆ.

ಶ್ರೀ। ಜಿ. ಎಸ್. ಲಕ್ಷ್ಮಣ ಪೈಯವರು ಬರೆದ ಅಭಿನಯ ಗೀತಾವಳಿ ಬೆಲೆ ೩ ಆಣೆ) p. ೪೨ ಎಂಬ ಕವನಗಳ ಪುಸ್ತಕವು ಕೈಸೇರಿರುತ್ತದೆ. ಇದರಲ್ಲಿ ಎಲಿಮೆಂಟರಿ ಶಾಲಾ ಹುಡುಗರಿಗೆ ಉಪಯುಕ್ತವಾದ ಚಿಕ್ಕ ಚಿಕ್ಕ ಹಾಡಲಾಗುವ ಪದ್ಯಗಳಿವೆ. ಇವುಗಳಿಂದ ಬಾಲಕರಿಗೆ ಕನ್ನಡ ಕಲಿಸುವುದು ಸುಲಭವಾಗುವುದು. ಪ್ರತಿಯೊಂದು ಪದ್ಯಕ್ಕೆ ಒಂದೊಂದು ಚಿತ್ರವಿದ್ದರೆ ಪುಸ್ತಕವು ಇನ್ನಷ್ಟು ಒಪ್ಪುವಂತಹದಾಗುತಿತ್ತು.

ಕೆನರಾ ಹೈಸ್ಕೂಲಿನ 'ಸ್ಕೂಲ್ ಜೀವ'ರದಿಯು ನಮ್ಮ ಕೈಸೇರುತ್ತದೆ. ಕಳೆದ ಅನೇಕ ವರ್ಷಗಳಿಂದ ವಿದ್ಯಾದಾನ ಮಾಡಿ ಎಷ್ಟು ಸೇವೆಮಾಡುತ್ತಲಿರುವುದೆಂದು ಆ ಶಾಲೆಯ ವರದಿಯಿಂದ ತಿಳಿಯುವುದು. ಎಲ್ಲಾ ವಿಷಯಗಳಲ್ಲಿಯೂ ಪ್ರಗತಿಯನ್ನು ತೋರಿಸುತಿದ್ದ ಈ ಶಾಲೆಯ ದ್ರವ್ಯಾನುಕೂಲವು ಚೆನ್ನಾಗಿಲ್ಲವೆಂದು ವರದಿಯಿಂದ ತೋರಿಬರುತ್ತದೆ. ವಿದ್ಯಾಖಾತೆಯ ಜಿಲ್ಲಾ ಆಫೀಸರರು ಹೇಳಿದ ಪ್ರಕಾರ ಸಮಾಜದ ದೇವಸ್ಥಾನಗಳು ಶಾಲೆಗೆ ದ್ರವ್ಯಸಹಾಯ ಮಾಡಿ ಅದರಿಂದ ಸಮಾಜದಲ್ಲಿಯೂ ಜಿಲ್ಲೆಯಲ್ಲಿಯೂ ಇನ್ನಷ್ಟು ವಿದ್ಯೆಯು ಪ್ರಸರಿಸುವಂತೆ ನೋಡಿಕೊಳ್ಳುವರೆಂದು ನಾವು ಕೋರುತ್ತೇವೆ. ಈ ಶಾಲೆಯಲ್ಲಿ ಹಳೆ ವಿದ್ಯಾರ್ಥಿಗಳಿರುವ ಮನುತೆಯು ಶ್ಲಾಘನೀಯವಾಗಿದೆ.

## ಬಿರುಗಾಳಿ ಬೀಸು!

ಬೀಸು ಬೀಸು ಬಿರುಗಾಳಿ ಬೀಸು!
ಹತ್ತು ದಿಕ್ಕು ತಿರುಗುವೋಲ್ ಬೀಸು!
ಕೆಳಗು ಮೇಲು ಆಹುತಿಯ ಹಾಸು
ಭಯವಿಲ್ಲ ಭಯವಿಲ್ಲ ಓ ಬೀಸು!
ತೆಂಗಾಳಿ ಬೀಸು!

ಹಣ್ಣೆಲೆ ಹಸುರೆಲೆ ಉದುರಲಿ
ಲತೆ ಹೂ ಗಿಡ ಕೊಂಬೆ ಅದುರಲಿ
ಮುಗಿಲಲ್ಲಿ ಭರ್ರೆಂದು ಬೀಸು!
ಹತ್ತು ದಿಕ್ಕು ಚಕ್ರಸ್ಲೆ ಬೀಸು
ಒದಾಳಿ ಬೀಸು!

ಗಿಡ ಲತೆಗಳಿಗೆಂಟಿದ ಧೂಳ
ಕಡೆದಿಹುದು ಸುಗ್ಗಿಯ ಬಾಳ
ಹೊಡೆದೋಡಿಸಲೀ ಹೆಮ್ಮಾರಿ
ಬಂದ ನೀನೆನಗುಪಕಾರಿ!
ಓ ಬೀಸು!

ನನ್ನ ಬೆನ್ನಿನೊಳಿ ಇಹುದು ನುಳಿಯು
ಅದರೊಡನೆ ಬಹುದಿನಗೆ ಸಿರಿ ಬೆಳೆಯು
ಅದನು ನೋಡುವದೆ ನಮ್ಮ ಭಯಕೆ
ಆಹುತಿ ಕೊಡುವನು ನಿನ್ನಗದಕೆ
ಓ ಬೀಸು!

ಬೀಸು ಬೀಸು ಬಿರುಗಾಳಿ ಬೀಸು
ರಾಶಿ ರಾಶಿ ಹೆಣಗಳನು ಹಾಸು
ಉದುರಿದವು ಬರುವವಕೆ ಬದುಕು!
ಮುಂದೆಂದಿಗೂ ಬೆಳಕಿಗವು ಸರಕು!
ಓ ಬೀಸು!

ಲ. ಟಿ. ಚನ್ನಪ್ಪ, ಪ್ರೇಮಾಯತನ.

ಕನ್ನಡ ಕಂದ.

ಶಾರದಾ ಛಾಪಖಾನೆ, ಮಂಗಳೂರು.

# ಸಾಹಿತ್ಯ ಸ್ವದೇಶಾಭಿಮಾನಿ ಸಂಚಿಕೆ

ಸಂಪುಟ ೧ ಮಾರ್ಚ ೩೧—೩—೧೯೩೩. ಸಂಚಿಕೆ ೧

— ಅನುಕ್ರಮಣಿಕೆ —


| | ಪುಟ |
|---|---|
| ಸಾಹಿತ್ಯ ವಿಚಾರ | ೧ |
| ಮಗುವಿನ ಕುಣಿಗು | ೧೦ |
| ಕೊಡಗಿನ ಕನ್ನಡಿಗರು | ೧೪ |
| ಆಶಯ | ,, |
| ಶ್ರೀ ಎಮ್. ಗೋವಿಂದ ಪೈಗಳು | ೧೬ |
| ಬಲಿದಾನ (ಸುಬೋಧದಿಂದ) | ೧೭ |
| ಪತ್ರಿಕಾ ಪ್ರಪಂಚ | ೧೮ |
| ಕಣ್ಣು-ಬಗೆ | ,, |
| ವಿಮರ್ಶೆ | ೧೯ |
| ಬಿರುಗಾಳಿ ಬೀಸು | ,, |


ಮಾರ್ಚ ತಾರೀಕು ೩೧ನೇ ಶುಕ್ರವಾರ ೧೯೩೩.

## ಸಾಹಿತ್ಯ ವಿಚಾರ.

**ಕರ್ನಾಟಕ ಸಂಘಗಳು.**

ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯು ಜನರೊಳಗೆ ಹೆಚ್ಚಾಗುತ್ತಿದೆ ಎಂಬ ಸಂಗತಿಯು ಅಭಿನಂದನೀಯವಾಗಿದೆ. ಕರ್ನಾಟಕದಲ್ಲಿಯೂ, ಕನ್ನಡಿಗರಿದ್ದ ಇತರ ಭಾಗಗಳಲ್ಲಿಯೂ ಕರ್ನಾಟಕ ಸಂಘಗಳು ಸ್ಥಾಪಿತವಾಗಿ ಒಂದಲ್ಲ ಇನ್ನೊಂದು ರೀತಿಯಲ್ಲಿ ಸಾಹಿತ್ಯ ಸೇವೆ ಮಾಡುತ್ತಲಿರುವದೆಂಬುದೆ ಅದಕ್ಕೆ ಸಾಕ್ಷಿಯಾಗಿದೆ. ೧೯೧೫ರಲ್ಲಿ ಬೆಂಗಳೂರು ಕೋಲೆಜಿನಲ್ಲಿ ಕರ್ನಾಟಕ ಸಂಘವೆಂಬ ಸಂಸ್ಥೆಯೊಂದು ಸ್ಥಾಪಿತವಾಯಿತು. ಅಂದಿನಿಂದ ಮೈಸೂರು ಸಂಸ್ಥಾನದ ಇತರ ಊರುಗಳಲ್ಲಿಯೂ ಅಂತಹ ಸಂಘಗಳು ಉಂಟಾದುವು. ಕೆಲವು ಸಂಘಗಳಿಂದ ಪತ್ರಿಕೆಗಳೂ, ಗ್ರಂಥಗಳೂ ಹೊರದುತ್ತಲಿವೆ. ಧಾರವಾಡದಲ್ಲಿ ಗೆಳೆಯರ ಗುಂಪು ಎಂಬ ಸಾಹಿತಿಗಳ ಗುಂಪೊಂದು ಸ್ವಾರ್ಥತ್ಯಾಗ ಮಾಡಿಯಾದರೂ ಕೆಲಸ ಮಾಡಿ ಕನ್ನಡ ನುಡಿಯ ಸೌಂದರ್ಯವನ್ನು ಜನರಿಗೆ ತೋರಿಸುತ್ತಲಿದೆ. ಅವರ ಪತ್ರಿಕೆಯಾದ ಜಯ ಕರ್ನಾಟಕವು ಪ್ರಾಚೀನ ಕಾಲದ ಜನಪದ ಸಾಹಿತ್ಯದ ಗೀತೆಗಳನ್ನು ಶೇಖರಿಸಿ ಕೊಡುತ್ತಲಿದ್ದು ಆಗಿನ ಮತ್ತು ಈಗಿನ ಸಾಹಿತ್ಯಗಳನ್ನು ಸೇರಿಸುತ್ತಲಿರುವುದು ದೊಡ್ಡದಾದ ಕೆಲಸವೆಂದು ನಿಸ್ಸಂದೇಹವಾಗಿ ಹೇಳಬಹುದು. ಬೆಳಗಾವಿಯಲ್ಲಿ ತುಂಟರ ತಂಡವೆಂಬುದೂ ತನ್ನ ಕ್ಷೇತ್ರದಲ್ಲಿ ಕೆಲಸಮಾಡುತ್ತಿದೆ.

ದಕ್ಷಿಣ ಕನ್ನಡದಲ್ಲಿ ಮಾತ್ರ ಇಂತಹ ಕೆಲಸಕ್ಕೆ ಬಹಳ ಕೊರತೆಗಳಿವೆ. ನಮ್ಮ ಜಿಲ್ಲೆಯು ಭಾಷೆಗಳ ಗಣಿಯಾಗಿರುತ್ತದೆ. ಹಾಗಿದ್ದರೂ ಈ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯದ ಸೇವೆಯು ನಡೆಯುತ್ತಲಿದ್ದಿತು. ೧೯೩೧ರಲ್ಲಿ ಕರ್ನಾಟಕ ಸಂಘವೊಂದು ಇಲ್ಲಿ ಸ್ಥಾಪಿತವಾಗಿತ್ತು. ಆ ತರುವಾಯ ಕೆಲವು ಉತ್ಸಾಹ ತರುಣರು ಮಿತ್ರಮಂಡಲಿಯೆಂಬ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಈ ಸಂಘವು ತನ್ನ ಕ್ಷೇತ್ರಬಲವನ್ನು ಹೆಚ್ಚಿಸುತ್ತಾ ಬಂದು, ಸಾಧಾರಣವಾಗಿ ನಮ್ಮ ಜಿಲ್ಲೆಯ ಸಾಹಿತಿಗಳಿಗೆ ಒಟ್ಟುಕೂಡುವ ಸಂದರ್ಭವನ್ನು ಒದಗಿಸಿಕೊಡುತ್ತದೆ. ಅವರು ಪುಸ್ತಕಗಳನ್ನು ಪ್ರಕಟಿಸುತ್ತಿರುವುದಲ್ಲದೆ, ಆಗಾಗ್ಗೆ ಸಾಹಿತ್ಯ ಚರ್ಚೆಯ ಉಪನ್ಯಾಸಾದಿಗಳನ್ನು ಏರ್ಪಡಿಸುತ್ತಲಿದೆ. ಹಾಗೆಯೇ ಉಡುಪಿ ಕಾರ್ಕಳಗಳಲ್ಲಿಯೂ ಅಂತಹ ಸಂಘಗಳಿವೆ ಎಂದು ತಿಳಿದುಬರುತ್ತದೆ. ಕೆಲವು ಶಾಲಾ ಕೋಲೇಜುಗಳಲ್ಲಿಯೂ ಕನ್ನಡ ಸಂಘಗಳು ಇವೆ.

ಈ ರೀತಿಯಲ್ಲಿ ನೋಡುತ್ತಾ ಹೋದರೆ ಅನಂತಪುರ, ರ್‍ಯಾಚೂರು, ಮಡಿಕೇರಿಗಳ ಸಾಹಿತ್ಯ ಸಂಘಗಳೂ ನಮ್ಮ ಮುನ್ನಿಗೆ ಹೊಳೆಯುತ್ತವೆ. ಸಂಘಗಳು ಹೆಚ್ಚಾದಷ್ಟಕ್ಕೆ ಕನ್ನಡದ ಅಭಿವೃದ್ಧಿಯು ಆಗುವುದು. ಇವೆಲ್ಲ ಮುಂದಿನ ಕಾರ್ಯಕ್ಕೆ ಶುಭಲಕ್ಷಣಗಳೆಂದು ತೋರುವುದು.

**ಕನ್ನಡ ಗ್ರಂಥಾಲಯ.**

ಮಂಗಳೂರಿನಲ್ಲಿ ಈಗೀನ ಕನ್ನಡ ಗ್ರಂಥಗಳ ಪರಿಚಯವಾಗಿ ಕೊಳ್ಳಬೇಕಾದ ಸಂದರ್ಭವು ಸಿಗುವುದಿಲ್ಲ. ಪ್ರಾಚೀನ ಗ್ರಂಥಗಳು, ಕೆಲವು ಶಾಲಾ ಕೋಲೇಜು ಲೈಬ್ರರಿಗಳಲ್ಲಿ ಕಂಡುಬರುತ್ತವೆ. ಹೆಚ್ಚೆಂದರೆ ವೆಂಕಟಾಚಾರ್ಯರ ನೊವೆಲುಗಳೂ ಇರಬಹುದು. ಆದರೆ ಆಧುನಿಕ ಪುಸ್ತಕಗಳಾಗಲೀ, ಪತ್ರಿಕೆಗಳಾಗಲೀ ಕಾಣಬರುವುದಿಲ್ಲ. ಇದರಿಂದ ಕನ್ನಡದಲ್ಲಿನ ಈಗಿನ ಪರಿವರ್ತನವನ್ನು ಅರಿತುಕೊಳ್ಳಬೇಕೆಂಬವರಿಗೆ ಎಷ್ಟು ಕಷ್ಟವೆಂದು ಆ ದಾರಿಯಲ್ಲಿದ್ದವರಿಗೆ ಗೊತ್ತಿರುವುದು.

ಈ ಕಷ್ಟವನ್ನು ಹೋಗಲಾಡಿಸುವುದಕ್ಕೆ ಮಂಗಳೂರಿನಲ್ಲಿ ಸಾರ್ವಜನಿಕ ಕನ್ನಡ ಗ್ರಂಥಾಲಯವು, ಅದರೊಡನೆ ಕನ್ನಡ ಪತ್ರಿಕೆಗಳ ಸಂಗ್ರಹವೂ ಬೇಕಾಗಿರುವುದು. ಇವುಗಳ ಸಹಾಯವನ್ನು ಒದಗಿಸಿ ಕೊಟ್ಟರೆ ಅನೇಕರಿಗೆ ಸಾಹಿತ್ಯ ಸೇವೆಯನ್ನು ಮಾಡಲು ಸಂದರ್ಭ ಒದಗಿದಂತಾಗುವುದು. ಮತ್ತು ಎಂತಹ ಗ್ರಂಥಗಳು ಕನ್ನಡದಲ್ಲಿ ಬರುತ್ತಿವೆ ಎಂದು

ತಿಳಿಯುವುದು. ಈ ವಿಷಯಕ್ಕೆ ಮುನಿಸಿಪಾಲಿಟಿಯವರು ಏಕೆ ಗಮನ ಕೊಡಬಾರದು? ಈ ವರ್ಷ ಕೆಲವು ಪುಸ್ತಕಗಳನ್ನು ಕೊಂಡುಕೊಳ್ಳಲು ಹಣವನ್ನು ಪ್ರತ್ಯೇಕಿಸಿ ಇಟ್ಟಿರುತ್ತಾರೆಂದು ತಿಳಿದುಬರುತ್ತದೆ. ಅದರ ಲ್ಲಿ ಹೆಚ್ಚಿನ ಭಾಗವನ್ನು ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳಲಿಕ್ಕೂ ಕನ್ನಡ ಪತ್ರಿಕೆಗಳಿಗೆ ಚಂದಾದಾರರಾಗಲಿಕ್ಕೂ ವೆಚ್ಚ ಮಾಡಿದರೆ ಅನೇಕ ಜನರಿಗೆ ಅದರಿಂದ ಸಹಾಯವಾಗಬಹುದು.

ಈ ಕಾರ್ಯದಲ್ಲಿ ಸಾಹಿತಿಗಳೂ ಪ್ರಯತ್ನ ಪಡಬೇಕು ಮತ್ತು ಮಿತ್ರಮಂಡಳಿಯಂತಹ ಸಂಘದವರೂ ತಕ್ಕ ಏರ್ಪಾಡು ಮಾಡಿದರೆ ಉಚಿತವಾಗುವುದು.

+ + + +

# ಮಗುವಿನ ಕೂಗು.

ಬೆಳಗ್ಗೆ ಕಣ್ತೆರೆದ ಕೂಡಲೆ ರಾಮಪ್ಪನಿಗೆ ತನ್ನ ಮಗುವು ಕೂಗು ವುದು ಕೇಳಿಸಿತು. ಅವನು ಬಿದ್ದುಕೊಂಡಲ್ಲಿಂದಲೆ "ದುಗ್ಗಿ, ದುಗ್ಗಿ, ಮಗು ಕೂಗುವುದು ಕೇಳಿಸುವುದಿಲ್ಲವೆ?" ಎಂದು ಹೆಂಡತಿ ಯನ್ನು ಕರೆದನು.

ದುಗ್ಗಿಯಿಂದ ಉತ್ತರವನ್ನೇ ಕೊಡಲಿಲ್ಲ. ಅವನು ನಾಲ್ಕು ಕಡೆ ತಿರುಗಿ ನೋಡಿದನು; ಅವಳು ಮನೆಯಲ್ಲಿರಲಿಲ್ಲ. ತುಂಬಾ ಆಶ್ಚ ರ್ಯವಾದರೂ ಅವನು, "ಮೊಸರು ಕಡೆಯಲಿಕ್ಕೊ, ಬಟ್ಟೆ ಒಗೆಯಲಿಕ್ಕೊ ಹೋಗಿದ್ದಿರಬೇಕು" ಎಂದು ಯೋಚಿಸಿದನು. ಮಗುವಿನ ಕೂಗಾಟ ಕ್ಕಾಗಿಯೂ ಅವನು ಅದರ ಬಾಯಿಗೆ ಒಂದು ಬಟ್ಟೆಯ ತುಂಡನ್ನು ತುರುಕಿಸಿದನು. ನಂತರ ಅವನು ವಸ್ತ್ರ ಉಟ್ಟುಕೊಳ್ಳ ತೊಡಗಿದನು

ಬಟ್ಟೆ ಉಟ್ಟುಕೊಳ್ಳುತ್ತಿರುವಾಗ, ತಾನು ಮೊನ್ನೆ 'ಆರ್ಯಭವನ' ದಿಂದ ತಂದ ಬೆಳ್ಳಿಯ ಹರಿವಾಣಕ್ಕೆ ಎಷ್ಟು ಬೆಲೆ ಬಂದೀತೆಂಬ ಯೋಚನೆಯು ಅವನನ್ನು ಹಿಡಿಯಿತು. ಅದನ್ನು ತಿರುಗಿ ನೋಡ ಬೇಕೆಂಬ ಉತ್ಸುಕತೆಯಿಂದ ಅವನು ಅಟ್ಟವನ್ನೇರಿದನು. ಆದರೆ ಅಲ್ಲಿ ಏನಿದೆ? ಎಲ್ಲಾ ಖಾಲಿಯಾಗಿತ್ತು

ಬೇಗನೆ ಕೆಳಗಿಳಿದು ತನ್ನ ಹೆಂಡತಿಯ ಸಾಮಾನುಗಳಿರುವ ಕೋಣೆಗೆ ಹೋದನು. ಅವೆಲ್ಲವೂ ಮಾಯವಾಗಿದ್ದವು ಇದರಿಂದ ಅವಳು ಎಲ್ಲಿಯೊ ಪಲಾಯನ ಮಾಡಿರಬೇಕೆಂದು ಅವನಿಗೆ ಖಚಿತ ವಾಯಿತು.

ಆದರೆ ಯಾರೊಡನೆ?

ಯಾರೊಡನೆ ಎಂದೇನು? ಲೂಯಿಸನಿದ್ದಾನೆ, ಇಸ್ಮಾಲಿ ಇದ್ದಾನೆ

"ಒಳ್ಳೆಯದು! ಓಡಿ ಹೋಗಲಿ! ಹೊಳೆಗೆ ಬೀಳಲಿ! ಯಾರು ಅತ್ತಾರೆಂದಿಲ್ಲವೆ ಇವಳಿಗೋಸ್ಕರ!" ಎಂದು ಗೋಡೆಯ ಮೇಲೆ ಉಗುಳುತ್ತ "ಚೆನ್ನಾಯಿತು, ನಾನು ಸೌಖ್ಯದಿಂದಿದ್ದೇನಲ್ಲವೆ? ಹ ಹ-" ಎಂದು ತಿರಸ್ಕಾರದಿಂದ ನಗಾಡಿದನು.

ಕ್ಷಣದಲ್ಲಿಯೆ ಅವನ ದೃಷ್ಟಿಯು ಮಗುವಿನ ಕಡೆಗೆ ಹೋಯಿತು. "ಇದಕ್ಕೆ ಈ ಒಳ್ಳೆಯ ಗತಿಯೇನು?" ಕುಸು ಹೊತ್ತು ಆಲೋಚಿಸಿ, "ಹೋಗಿ ಮಾತ್ರ ತಿಳಿಯಲಿ ಅವಳೆಲ್ಲಿರುವಳೆಂದು! ಮತ್ತೆ, ಮತ್ತೆಯೊ ಇದು ಈ ಮಗುವನ್ನು ಎಂದು ಹೇಳಿ ಅವಳ ಬಾಗಿಲ ಬಳಿ ಬಿಸಾಡಿ ದರೆ" ಎಂದು ಒದರಿದನು.

ಈ ದುರ್ಭಾವನೆಯಿಂದ ಅವನ ಮನಸ್ಸು ಗಲಿಬಿಲಿಯಾಯಿತು, ಮುಖವು ಬಿಳುಪೇರಿತು, ತುಟಿಗಳನ್ನು ಹಲ್ಲುಗಳಿಂದ ಕಚ್ಚಿ ಹಿಡಿದನು, ಕೈಗಳು ನಡುಗತೊಡಗಿದವು ಅವನು ಮಗುವಿನ ಬಳಿಗೆ ಹೋದನು ಅದರ ಮೈಮೇಲೆ ಒಂದು ಬಟ್ಟೆಯ ಚೂರು ಸಹ ಇಲ್ಲ ಅದು ಕೈ ಮುಷ್ಟಿಯನ್ನು ಬಾಯಿಯಲ್ಲಿ ತುರುಕಿಸಿ ಎಲ್ಲೊ ನೋಡುತ್ತ ನಸುನಗೆ ಯನ್ನು ಬೀರುತ್ತಿತ್ತು ರಾಮಪ್ಪನು ಸ್ವಲ್ಪ ಸಮಯದ ತನಕ ಅದನ್ನೇ ದಿಟ್ಟಿಸಿ ನೋಡುತ್ತಿರಲು ಅವನಿಗೆ ಯಾರದೊ ನೆನಪಾದಂತಾಯಿತು. ಆದರೆ ಯಾರದು? ಸರಿಯಾಗಿ ಗೊತ್ತಾಗಲಾರದು

ಅಲ್ಲಿಂದ ತಟ್ಟನೆದ್ದು ಟೊಪಿಯನ್ನು ತೊಟ್ಟುಕೊಂಡು ಮನೆಗೆ ಬೀಗವನ್ನಿಕ್ಕಿ ಹೊರಟನು ಎಲ್ಲಿಗೆ ಹೋಗಬೇಕು? ಉದ್ದೇಶವೇನು? ಒಂದೂ ತಿಳಿಯದು ಅವನ ಮನಸ್ಸಿಗ ಎಳ್ಳಷ್ಟಾದರೂ ನೆಮ್ಮದಿಯಿಲ್ಲ ಶಿಶುವಿನ ರೋದನ ಅವನ ಕಿವಿಗಳಲ್ಲಿ ಪ್ರತಿಧ್ವನಿಗೊಳ್ಳುತ್ತಿತ್ತು ತನ್ನ ಪುಟ್ಟ ಕೈಕಾಲುಗಳನ್ನು ಅಲ್ಲಾಡಿಸುತ್ತ ಒಕ್ಕಿ ಬಿಕ್ಕಿ ಅಳುತ್ತಿರುವ ಬಾಲಕನ ದೃಶ್ಯವು ಅವನ ಕಣ್ಣಮುಂದೆ ನಲಿದಾಡುತ್ತಿತ್ತು ಛೆ! ಇಂಥ ಪರಿಸ್ಥಿತಿಯಲ್ಲಿ ಮುಂದೆ ಹೋಗಲು ಕಾಲು ಹೇಗೆ ತಾನೇ ಒಂದೀತು? "ಒಂದು ಬಾರಿ ಆ ಸೂಳೆಯು ನನಗೆ ಸಿಕ್ಕಿದರೆ" ಎಂದು ಹಲ್ಲು ಕಡಿಯುತ್ತ ಹೇಳತೊಡಗಿದನು "ಅವಳ ಕೊರಳನ್ನು ಇಲ್ಲೇ ಹಿಸುಕುತ್ತಿದ್ದೆನು ಉಸಿರಾಟ ನಿಲ್ಲುತ್ತಿತ್ತು' ನಾಲಗೆ ಹೊರಬರುತ್ತಿತ್ತು! ಹಾಳಾಗಲಿ ಆ ಮುಂ "

ಅಂಗಡಿಯಿಂದ ಸ್ವಲ್ಪ ಬಿಸ್ಕುಟನ್ನೂ ಸಕ್ಕರೆಯನ್ನೂ ಕೊಂಡು ಕೊಂಡು ಮನೆಗೆ ಹಿಂತಿರುಗಿದನು ಮಗುವು ಮುಂಚಿನಂತೆ ಬತ್ತಲೆ ಯಾಗಿ ಬಿದ್ದುಕೊಂಡಿತ್ತು ಅದರ ಮುಖಕಮಲದಲ್ಲಿ ನಸುನಗೆಯು ತೆರೆಗಳೇಳುತ್ತಿದ್ದುವು

"ಆ ರಕ್ಕಸಿಯು ನಿನ್ನನ್ನು ಕೂಡ ಏಕೆ ತೆಗೆದುಕೊಂಡು ಹೋಗ ಲಿಲ್ಲ? ಭಾರಿ ಸುಖದಲ್ಲಿರುವಂತೆ ಕಾಣುತ್ತಿ'" ಅವನು ತಿರುಗಿ ಮನೆ ಬಿಟ್ಟು ಹೊರಟನು ಮಗು ಕೂಗುತ್ತಿದೆ ಎಂಬ ಒಂದು ವಿಷಯ ಅವನನ್ನು ಬಹಳ ಬಾಧಿಸುತ್ತಿತ್ತು ಇದನ್ನು ಎಣಿಸಿದೊಡನೆ ಹೃದಯದಲ್ಲಿ ಒಂದು ತರದ ಪೀಡೆಯುಂಟಾಗುತ್ತಿತ್ತು

ಮನೆಗೆ ಪುನಃ ಬಂದನು ಈ ಸಮಯದಲ್ಲಿ ಮಗುವು ಗಟ್ಟಿ ಯಾಗಿ "ಅಮ್ಮಾ ಮ್ಮಾ ಮ್ಮಾ ಮ್ಮಾ" ಎಂದು ಕೂಗುತ್ತಿತ್ತು

"ಅಮ್ಮ' ಹೋಗು, ಅವಳನ್ನು ಹುಡುಕಿಕೊಂಡು ಬಾ ಅವ ಳಿಗೆ ಮಹಾ ಮಾರಿ ರೋಗ ಬರಲಿಲ್ಲವೆ?"

ಅವನು ಆ ಬಾಲಕನನ್ನು ತೊಡೆಯಲ್ಲಿಟ್ಟುಕೊಂಡನು ಅದು ತನ್ನ ಪುಟ್ಟ ಕೈಗಳಿಂದ ಯಾವುದೋ ಒಂದು ವಸ್ತುವನ್ನು ಹುಡುಕ ತೊಡ ಗಿತು "ಶಿವಾ! ಈಗ ಸುಮ್ಮನಿರು, ಕೂಗಾಡಬೇಡ ಇನ್ನು'

ತನ್ನ ಎಳೆದುಟಿಗಳಿಂದ ಅದು ಯಾವುದನ್ನೊ ಹುಡುಕುತ್ತಿತ್ತು ಕೋಮಲವಾದ ಕೈಗಳನ್ನೂ, ಕೊರಳನ್ನೂ ಅತ್ತಿತ್ತ ಅಲ್ಲಾಡಿಸುವುದನ್ನು ನೋಡಿದರೆ ಅದು ಏನೊ ಹೇಳಲಿಚ್ಛಿಸುತ್ತದೆಂದು ಭಾಸವಾಗುತ್ತಿತ್ತು ಅದನ್ನು ಎದೆಗೆ ಅಪ್ಪಿಕೊಳ್ಳುತ್ತ ಅವನು ಹಾಲಿನ ಚೊಂಬಿಯಲ್ಲಿ ಬಿದ್ದನು ಒಲೆಯ ಮೇಲೆ ಸ್ವಲ್ಪ ಹಾಲು ಸಿಕ್ಕಿತು ಅದರಲ್ಲಿ ಬಿಸ್ಕುಟನ್ನು ಪುಡಿ ಮಾಡಿ ಅವನು ಚಮಚೆಯಿಂದ ಮಗುವಿಗೆ ತಿನ್ನಿಸತೊಡಗಿದನು "ಮಗೂ, ತಿನ್ನು. ಹಾಲು ಬಹಳ ಸವಿಯಾಗಿದೆ. ನಿನ್ನ ತಾಯಿ— ಅವಳು ಸಾಯಲಿ. ನನ್ನನ್ನು ಬಿಟ್ಟು ಹೋದಳು. ಒಂದು ನಾಯಿ



ಎನ್ನೊಲುಮೆಯು ಥಾರತಾಂಬೆ, ಕಡೆಯ ಯತ್ನ ಗೈವೆನೂ,
ನಿನ್ನ ಬಳಿಗೆ ಬರುವೆ ಕರುಣ ದೋರಿ ನೀಡು ಕರವನೂ,
ಅಳಲಸೇವೆ ಕಾಣ್ಕೆಯೆಂದು
ಚರಣಯುಗಲದೆಡೆಯೊಳು
ಭಕ್ತಿಯಿಂದೆ 'ಆತ್ಮಪುಷ್ಪ'ವನ್ನೆ ವಿಜಸಲಿಡುವೆನು ೪

—ರಘುಪತಿ ಶೇಣವಿ ಚೆಂಡಿಯೆ.

+ + + +

# ಪತ್ರಿಕಾ ಪ್ರಪಂಚ.

ಮಡಿಕೇರಿಯಲ್ಲಿ ಸಾಹಿತ್ಯಪರಿಷತ್ತಿನ ಸಮಯದಲ್ಲಿ ನಡೆದ ಪ್ರದರ್ಶನವನ್ನು ತೆರೆಯುವಾಗ ಶ್ರೀಮತಿ ಪೂವಮ್ಮನವರು ಪ್ರದರ್ಶನದ ಉಪಯೋಗವನ್ನು ಕುರಿತು ಈರೀತಿಯಲ್ಲಿ ಹೇಳಿರುವರು

"ಇಂತಹ ಪ್ರದರ್ಶನಗಳು ಒಂದು ದೇಶದ ಏಳಿಗೆಗೆ ಬಹಳ ಸಹಾಯ ಮಾಡುತ್ತವೆ - ಇಲ್ಲಿರುವ ಪ್ರತಿಯೊಂದು ವಸ್ತುವು ನಮ್ಮ ದೇಶಸ್ಥರ ಅಭಿಮಾನವನ್ನೂ ಗೌರವವನ್ನೂ ಹೆಚ್ಚಿಸತಕ್ಕವು ವಾಲೆ ಗರಿಯ ಪುಸ್ತಕಗಳು ದೇಶಸ್ಥರ ಸಾಹಿತ್ಯಜ್ಞಾನವನ್ನು ತೋರುವುವು ಕತ್ತಿ ಕೋವಿ ಪದಕಗಳು ನಮ್ಮ ಹಿರಿಯರ ಶೌರ್ಯವನ್ನು ತೋರುವುವು, ಇದನ್ನು ನೋಡುವ ನಮಗೆ ನಮ್ಮ ದೇಶದ ಹಿರಿಯರಲ್ಲಿ ಭಕ್ತಿಯುಂಟಾ ಗುವುದಲ್ಲದೆ ಅವರ ಹಾಗೆಯೇ ನಾವು ನಮ್ಮ ದೇಶಕ್ಕೆ ಕೀರ್ತಿ ತರು ವಂಥ ಕಾರ್ಯಗಳನ್ನು ಮಾಡಬೇಕಾಗಿ ಮನನವಾಗುವುದು

ನಮ್ಮ ದೇಶದ ಕುಣಿತವನ್ನು ಪಾಶ್ಚಾತ್ಯ ಕುಣಿತಕ್ಕೆ ಹೋಲಿಸಿ ಬಿ ಎಸ್ ಕುಶಾಲಪ್ಪ, ಬಿ ಎ ಎಲ್ ಟಿ ಯವರು ಈ ತರ ದಲ್ಲಿ ಶಾಲಾ ಮಾಸಪತ್ರಿಕೆಯಲ್ಲಿ (ಸಂ ೪ ಸಂ ೬) ಬರೆದಿರುತ್ತಾರೆ

"ನಮ್ಮ ದೇಶದ ಕುಣಿತವು ನೇತ್ರಾನಂದಕರವಾಗಿದ್ದರೂ ಅದ ರಲ್ಲಿ ಒಂದು ಕುಂದು ಕಂಡುಬರುತ್ತದೆ ಅದೇನೆಂದರೆ ಕುಣಿಯು ವವರು ಢೋಲಿನ ಅಥವಾ ವಾಲಗದ ಸಂಗೀತಕ್ಕೆ ಸರಿಯಾಗಿ ಹೆಜ್ಜೆ ಗಳನ್ನಿಡದೆಯೂ ಕೈಗಳನ್ನೆತ್ತದೆಯೂ ಪ್ರತಿಯೊಬ್ಬರೂ ತಮ್ಮ ತಮ್ಮ ಮನಸ್ವೇಚ್ಛೆಯಾಗಿ ಕುಣಿಯುವುದರಿಂದ ನರ್ತನವು ಅಸಹ್ಯವಾಗಿ ಕಾಣುತ್ತದೆ ಪಾಶ್ಚಾತ್ಯರು ಒಬ್ಬರೆ ಆಗಲೀ ಗುಂಪಿನಲ್ಲೇ ಆಗಲಿ ನರ್ತನ ಮಾಡಿದರೆ ಸಂಗೀತಕ್ಕೆ ಸರಿಯಾಗಿ ನಡೆಯುವರೆ ಹೊರತು ನರ್ತನವನ್ನು ಪ್ರತ್ಯೇಕವಾಗಿ ಮಾಡುವುದಿಲ್ಲ ಪ್ರತಿಯೊಂದಕ್ಕೂ ತಕ್ಕ ನಿಯಮಗಳು ಇದ್ದೇ ಇವೆ ಇಂಥಾ ನಿಯಮಗಳು ನಮ್ಮಲ್ಲಿದ್ದರೂ ಅವುಗಳನ್ನು ಕ್ರಮವಾಗಿ ಅನುಸರಿಸದೆ ನರ್ತನದ ಚಂದವು ನಾಶವಾಗಿದೆ"

ರಾಜಹಂಸದ ಪ್ರಕೀರ್ಣ ಸಂಚಿಕೆಯಲ್ಲಿ ಓದತಕ್ಕ ಅನೇಕ ಲೇಖ ಗಳಿರುತವೆ ಘಟ್ಟರ ಭವಿಷ್ಯವೆಂಬ ಕತೆಯೂ ಇಂದಿನ ಕನ್ನಡಿಗ ಎಂಬ ಲೇಖವೂ ಚೆನ್ನಾಗಿವೆ ಸಾಲಿ ರಾಮಚಂದರಾಯರು ಕೊಳಲ ಹಾಡಿನಲಿ ಕೃಷ್ಣನನ್ನು ಹೊಗಳುತ್ತಾ—

"ಕೊಳಲನು ವಾಜಿಸಿ ವಿಶ್ವದ ಹೃದಯವ
ಸೆಳೆದನು ರಭಸದೆ ಗೋವಳನು,
ಹೊಳೆಯೊಳು ಬಾಲನು ಹೆದರದೆ ಧುಮುಕಿ
ತುಳಿದನು ಹಾವಿನ ಹೆಡೆಗಳನು ॥

ಜಯ ಮುನಿಹೃದಯವಿಹಾರಿ! ಮುರಾರಿ
ಜಯಗೋವರ್ಧನಗಿರಿಧಾರಿ ॥
ಬನ್ನಿರಿ ಬನ್ನಿರಿ ಕೊಳಲೂದುತಲಿ ।
ಚೆನ್ನೆಯರೇ ಆನಂದದಲಿ ॥"

ಅದೇ ಸಂಚಿಕೆಯಲ್ಲಿ ಧಾರವಾಡದ ಗತಾವಲೋಕನೆಯೆಂಬ ಲೇಖವು ಧಾರವಾಡದವರಿಗೆ ಬಹಳ ಸಹಾಯಮಾಡುತ್ತದೆ. ಮತ್ತು ಅದರಿಂದ ಅವರ ಊರು ಹೇಗೆ ಬೆಳೆಯಿತು ಎಂಬುದು ಚೆನ್ನಾಗಿ ಗೊತ್ತಾಗುವುದು

+ + + +

# 'ಕಣ್ಣು-ಬಗೆ'

ಎನಿತೊ ದಿನದೊಳೆನ್ನೆದೆಯೊಳು
ಪನಿತು ಪಸಿತು ಜಸೆಯಿರಲು,
ದಿನವದುರುಳಿ ದಿನವು ಬರಲು,
ಮುಂದುವರಿವುದು.
ದೇವನನ್ನು ಕಂಡು ಚಿರಂ.
ಜೀವಿಯೆಂಬ ಹೆಸರ ಗಳಿಸಿ,
ಸಾವನೀಗಿ ಬಾಳ ಬೆಳಗ
ಭಾಸೆಯಿಲ್ಲವು.

ದೇವರಾಯನಿರುವ ಕುರುಹು,
ಭೂವಳಯದೊಳೆಲ್ಲವಿಹುದು,
ಸಾವು ದಿಟವದಾಗಿರಲ್ಕೆ
ಜೀವವುಳಿಯದು
'ಧನ್ಯ ಜೀವಿ'ಯಾಗಬೇಕು,
ಎನ್ನುತಿಹುದು ಎದೆಯ ಬದಿಯು,
ಕಣ್ಣು ಬಗೆಗಳಿನ್ನಿರಲ್ಕೆ
ಪುಣ್ಯವೆಲ್ಲಿದೆ?

ಹುಚ್ಚುತನದ ಮಾತಿದಲ್ಲ,
ನಚ್ಚಿನೆದೆಯ ಕೆಚ್ಚಿದೆಲ್ಲ,
ನಯನ ಮನಗಳಿತ್ತನಲ್ಲ,
ದೇವ ಹುಚ್ಚನ
ಕಣ್ಣು ಮುಂದೆ ಸಾಗಲಾಗಿ,
ಸ್ವಾರ್ಥವದರ ಹಿಂದೆ ಸಾಗಿ
ತನ್ನ ರಾಜ್ಯಭಾರವನ್ನು
ಪೂರ್ತಿಗೈವುದು.

ಹೇಳಿ ಕೇಳಿ ತಿಳಿಯದಿರ್ಪ
ಪಾಳುಗತೆಗಳೆಲ್ಲವನ್ನು,
ಪೇಳಲೇನು ಬಗೆಯು ಬಗೆದು,
ಕೋಳುಗೈವುದು
ಕಣ್ಣು ಕಟ್ಟು ಧಿಟ್ಟಿಯಾಟ,
ಶೂನ್ಯವಷ್ಟು ಬಗೆಯ ಬೇಟ,
ಕಣ್ಣು ಬಗೆಗಳಿನ್ನಿರಲ್ಕೆ
ಪುಣ್ಯವೆಲ್ಲಿದೆ?

ಅದರಸಿತ್ತು ಸದಯ ದೇವ
ಹುಚ್ಚನಾದನು.

"ದುರ್ಗಾದಾಸ"

+ + + + +

ವರೆ ಸಾಕು, ಅವರು ಅವನ ಹೆಸರನ್ನು ಸೀಳಿ ಒಡೆದು, ಅದಕ್ಕೂ ೧೦೦೦ ವರ್ಷದ ಹಿಂದಿನ ಅಷ್ಟೇ ವರುಷ ಮುಂದಿನ ನೆಂಟಸ್ತಿಕೆಯನ್ನು ಗಂಟು ಹಾಕಿ ಬಿಡುತ್ತಾರೆ. ಮಂಗರಸನು ಇಂಥಾ ಇಸವಿಯಲ್ಲಿ ಹುಟ್ಟಿದ; ಇಲ್ಲವೆ ಸತ್ತನು ಎಂದರೆ—ಅಲ್ಲವೇ ಅಲ್ಲ, ಅವನು ಹುಟ್ಟಿದುದು ನಂತರ. ಸತ್ತುದು ಮೊದಲು ಎಂದು ಭಾಷಾಶಾಸ್ತ್ರ, ಲಿಪಿಶಾಸ್ತ್ರ, ಜ್ಯೋತಿಷ್ಯಗಳನ್ನು ಕೂಡಿಸಿ ಸಿದ್ಧಾಂತ ಮಾಡಿ ತೋರಿಸುವ ಶಕ್ತಿಯು ಅವರಲ್ಲಿದೆ. ಮಂಗರಸ—ಎಂಬುದು ಕನ್ನಡ ಪದವೆಂದರೆ ಅಲ್ಲ ಅದು ಗ್ರೀಕ್ ಶಬ್ದವೆಂದು ತೋರಿಸಬಲ್ಲರು. ಮಂಗ+ರಸ...Mango-ras .. ರಾಸ್ ಬರಹ dars ಆಗಬೇಕು ಎಂದು ಮಾಡಿ ಮಹೇಂಜೋಧಾರೋ ಎಂದು ಮಾಡಿ ಅಲ್ಲಿಂದ ಗ್ರೀಕ್ ಸಂಸ್ಕೃತಿಗೆ ಹಾರಿ ಅಲ್ಲಿನ ಒಂದು ಹೆಸರಿನೊಂದಿಗೆ ಮೇಳೈಸಬಹುದು. ಅಲ್ಲವೆನ್ನುವ ಎದೆ ಸಾಮಾನ್ಯನಿಗೆ ಬಾರದು. ಅಲ್ಲವಾದರೂ ಹೌದೆನ್ನುವವು ನಾವು,ರಗಳೆ ತಪ್ಪಿಸಿಕೊಳ್ಳಲಿಕ್ಕೆ. ಕಾರಣ ವಿಷಯುವೂ ನಮಗೆ ಅಂಟುವುದಿಲ್ಲ; ಅಲ್ಲದೆ ಅವರಂತೆ ತಲೆಕೆಡಹು ಮಾಡಿಕೊಳ್ಳುವ ತಾಳ್ಮೆಯೂ ನಮಗಿರುವುದಿಲ್ಲ.

ಅವರ ಲೇಖನಗಳೇ! ಅವೇ ವಿಷಯ. ಉಲೂಪರ ಶಾಸನ—ಲಕ್ಷ್ಮಣನ ಸಾವು—ತಿಮ್ಮರಸನ ಮದುವೆ, ಇವುಗಳ ತಾರೀಕನ್ನು ಶಿಲೆಯ ಮೇಲೆ ಕೆತ್ತಿದ ಶಿಲ್ಪಿಯ ಮೊಮ್ಮಗನ ಸಾವು ಯಾವ ಊರಿನಲ್ಲಿ ಆಯಿತು—ಎಂಬ ಮಾದರಿಯ ವಿಷಯಗಳು. ಅವರ ಲೇಖನಗಳೆಂದರೆ, ಗುರುತಿಸಲು ಬೇರೆ ದಾರಿ ಬೇಡ. ಯಾವ ಪತ್ರಿಕೆಯನ್ನೇ ಹಿಡಿಯಿರಿ. ಎಲ್ಲಿ ಮೇಲಿನ ಲೇಖನಕ್ಕಿಂತ ಕೆಳಗಿನ Foot-notesಗಳು ಅಧಿಕವಾಗಿರುವುವೋ ಅವು ಅವರದು. ಮುಖ್ಯವಾಗಿ, ತಮ್ಮ ಲೇಖನದ ಪ್ರತಿ ಶಬ್ದಕ್ಕೆ ಕನಿಷ್ಠ ಆರು ಟಿಪ್ಪಣಿಗಳನ್ನಾದರೂ ಕೊಡುತ್ತಾರೆ. ಮೇಲೆ 'ತಲೆ'ಯೆಂಬ ಸಾಮಾನ್ಯ ಶಬ್ದ ಬಂದರೂ ಸಹ—ತಲೆ(1)—ಶಿರ—ಶಿರಸ್ಸು . . . ಶಿರಸ . . . ಸರನೆ . . . ಎಂದು ಗುಣಿಗುಣಿಸಾಗಿ ಟಿಪ್ಪಣಿಯ ಸರಪಣಿಯನ್ನು ಬಿಗಿಯುತ್ತಾರೆ. ಅದನ್ನು ಜೋಡಿಸುವ ಕಂಪೋಜಿಟರನ ಕುಲ ಉದ್ಧಾರವೇ ಸರಿ. ಅವರ ಕೈ ಬರಹದ ಪ್ರತಿಗಳಲ್ಲಿ ಹತ್ತು ಬಣ್ಣದ ಶಾಯಿಗಳಿಂದ ೧೮ ಗುರುತ ಸಂಕೇತಗಳನ್ನು ಕಾಣಬಹುದು. ಅವರ ಲೇಖನಗಳನ್ನು ಮುದ್ರಿಸುವುದು ಕಷ್ಟ. ಎಷ್ಟೋ ಲೇಖನಗಳು, ಇಂಥ ಯೋಗ್ಯ ಮೊಳೆಗಳ (Types) ಅಭಾವದಿಂದ—ಇನ್ನು ಮುದ್ರಣವಾಗದಿರಲೂ ಬಹುದು.

ಅವರ ಕವಿತೆಗಳ ವಿಷಯ ಹೇಳುವೆ. ಪೈಗಳ ಮಾತುಗಳು ಸರಳವೆಂದೆ; ಕವಿತೆಗಳಲ್ಲಿ ಹಾಗಿಲ್ಲ. ಕೇವಲ ಪಂಡಿತೋತ್ತಮರಿಗೋಸ್ಕರವಾಗಿಯೇ ಬರೆದುವು ಅವು. ಅವುಗಳಿಗೂ ಟಿಪ್ಪಣಿಯು ಬಾಲ ತಪ್ಪಿದ್ದಲ್ಲ. ಅವರ ಟಿಪ್ಪಣಿಗೆ ಟಿಪ್ಪಣಿಯನ್ನು ಯಾವನಾದರೊಬ್ಬನು ಬರೆದರೆ, ಅವರ ಕವಿತೆಗಳನ್ನು ಓದುವ ಯತ್ನ ನಾವು ಮಾಡಬಹುದು. ಆಗಲೂ ಅರ್ಥವಾದೀತು ಎನ್ನಲಾರೆವು. ಕಷ್ಟ ಶಬ್ದಗಳ ಬದಲು ಕ್ಲಿಷ್ಟ ಪದಗಳನ್ನು ಹೆಕ್ಕಿ ತಂದು ತೂರುವವರು ಅವರು. ಅವರಂತೆ ಅವರ ಕವಿತೆಗಳು ಬಲು ಒರಟೆನ್ನಲೇ! ಪಂಡಿತರಿಗಲ್ಲ, ಪಂಡಿತೋತ್ತಮರಿಗೆ ಸಹ ಅವರ ಕವಿತೆಯ ಆಳವು ತಿಳಿಯುವುದು ಕಷ್ಟ. ಕಾರಣ, ತಳವಿಲ್ಲದಷ್ಟು ಅಗಾಧವಾದ ಕವಿತೆಗಳು ಅವರದು. ಕೆಲವು ಭಾಷಾಂತರ ಗೀತೆಗಳವೆ. ಮೂಲವನ್ನೆ ಓದಿ ತಿಳಿದರೂ, ಪ್ರೌಢವಾದ ಅನುವಾದವನ್ನು ತಿಳಿಯುವುದು ಕಷ್ಟವಾಗಿದೆ. ಅವರ ಕವಿತಾ ಸಾಹಸವಾದರೂ ತುದಿ ಮೊದಲಿಲ್ಲದುದು. ಅವರದೊಂದು "ಸಂಪಾದೀಸ" ವಿದೆ, ಎಂದೆಂದೂ ಉರಿಯುತ್ತಿದೆ.

ಅವರ ಕವಿತೆಯ ವಿಷಯದಲ್ಲಿ ಇನ್ನೊಂದು ಮಾತು. ಹೊಸ ಹಾದಿ ಅವರದು. ಎಷ್ಟೇ, ಎಷ್ಟೋ ಹೊಸ ಕಟ್ಟಡವನ್ನು ಪದ್ಯದ ಬರವಣಿಗೆಯಲ್ಲಿ ಅವರು ಮಾಡಿದ್ದಾರೆ. ಸರಳ ಕವಿತೆಗಳು (Blank Verse) ಇವೇ ಮೊದಲಾದ ಹಲವು ನವೀನ ಹಾದಿಯ ಕಟ್ಟಡಗಳಿಗೆ ಮೊದಲನೆಯ ಮಾರ್ಗದರ್ಶಕರವರು. ಆದರೆ ಅವರ ಶೈಲಿಯ ರೀತಿಯಿಂದಾಗಿ, ಈ ಸಂಗತಿಯೇ ಹಲವರಿಗೆ ತಿಳಿಯದೆ ಹೋಗಿದೆ.

ಶ್ರೀಯುತರ ವಿಚಾರತರಂಗಗಳು ಕ್ರಾಂತಿಕಾರಕವಾಗಿವೆ. ರಾಜಕೀಯ ಸಾಮಾಜಿಕ ಪ್ರಶ್ನೆಗಳಲ್ಲಿ ಅವರು ಹೊಸ ಪಂಗಡದವರು. ಆದರೆ ಅವರ ಸಮಯವೆಲ್ಲಾ, ಸತ್ತವರ ಕಲ್ಲುಗಳೊಡನೆಯೇ ಮಾತನಾಡಿ ಸವೆಯುತ್ತಿದೆ ಹಾಗಾಗಿ ಉಳಿದ ವಿಷಯಗಳಲ್ಲಿ ಅವರ ಗಮನ ಹರಿಯುವುದಿಲ್ಲ.

ಗೋವಿಂದ ಪೈಗಳೂ, ತಮ್ಮ ಲಿಪಿಗಳನ್ನು ಕವಿತೆಗಳನ್ನೂ ಬಿಟ್ಟು, ಯಾವದಾದರೊಂದು ನಿರ್ಜನ ಪ್ರದೇಶದಲ್ಲಿರಲು ಇಚ್ಛಯಿಸಿದರೆ, ಅವರ ಜತೆಯಲ್ಲಿ ಹಗಲಿರುಳುಗಳೆಲ್ಲಾ ಅವರೊಂದಿಗೆ ಕಳೆಯುವ ಲವಲವಿಕೆ ನನಗೆ. ಆದರೆ, ಅಲ್ಲೂ ಸತ್ತ ಕಲ್ಲೊಂದು ಎದ್ದು ನಿಂತು ಅವರನ್ನು ಮಾತನಾಡಿಸೀತೆಂಬ ಅಂಜಿಕೆ ಬಿಡದು.

ಶ್ರೀಯುತ ಪೈಯವರ ಲೇಖ ಮತ್ತು ಶೋಧಗಳ ವಿಷಯದಲ್ಲಿ ನನ್ನಂತಹ ಸಾಮಾನ್ಯರಿಗೆ (ಮತ್ತು ಕರ್ನಾಟಕದಲ್ಲಿ ನನ್ನಂತಹ ಸಾಮಾನ್ಯರೇ ಹೆಚ್ಚಿನವರಾಗಿದ್ದಾರೆ) ಇದಕ್ಕಿಂತ ಹೆಚ್ಚಿನ ಅಭಿಪ್ರಾಯವಾಗಲು ಕಾರಣವಿಲ್ಲ. ಆದರೆ ಅವರ ಪಾಂಡಿತ್ಯ—ಭಾಷಾಜ್ಞಾನ, ಬಹು ಭಾಷಾವಿಶಾರದತೆ—ಇವುಗಳನ್ನು ಯಾರೂ ತರ್ಕಿಸಲಾರರು. ಅವರು ಸಮಗ್ರ ಕರ್ಣಾಟಕದ ವ್ಯಕ್ತಿ ಮಾತ್ರವಲ್ಲ—ಇಡೀ ಹಿಂದೂಸ್ಥಾನಕ್ಕೆ ಸಂಬಂಧಿಸಿದವರು—ಅವರು. ಪ್ರಾಯಶಃ ಅವರ ಐತಿಹಾಸಿಕ ಶೋಧಗಳು ಇಡೀ ಲೋಕದ ಚರಿತ್ರಕಾರರಿಗೂ ಮಾರ್ಗದರ್ಶಕವಿರುವಂತಹವು. ಅಂತೂ ಅವರ ಪ್ರತಿಭೆಯು ಪ್ರತ್ಯೇಕ ಜಾತಿಯದು—ನಾವು ಆ ಜಾತಿಯ ಹೊರಗಿನವರು.

## ಬಲಿದಾನ

ಮಾತೆ ಮನದಿ ಬಹಳ ದಿನದ, ಆಸೆಯೊಂದು ಕುದಿವುದು,
ಪಡೆದು ಸಲಹಿದಾತಗೇನು? ಕಾಣ್ಕೆಯೀವೆನೆಂಬುದು;
ಬಯಕೆ ಮನದೊಳಾಯಿತು, ತತ್
ಕೃತಿಯು ವಿಫಲವಾಯಿತು.
ನಿನ್ನನೊಲಿಸಲೇನು? ನಾಡಲೆಂಬುದರಿಯದಾಯಿತ.
ನಿನ್ನೊಲುಮೆಯ ಸಸ್ಯವೊಂದೆ, ಇಹುದು ಜಗದಿ ಬಲ್ಲೆನು:
ಅದನ ಹಿಂಸೆಯಿಂದ ಪಡೆವ ಯತ್ನ ಬೇರೆ ಕಾಣೆನು:
ಹಿಂಸೆ ಸಹಿಸಲಾರೆನು-ಮೇ
ಲಾಸೆ ತೊರೆಯಲಾರೆನು.
ಪಾರತಂತ್ರ್ಯ ಪಾಶವಳಿವ ಯತ್ನ ಮಾಡುತ್ತಿರುವೆನು;
ಗೆಳೆಯನಾಗಿ ನೆರವನಿತ್ತು; ದಾಸನಾಗಿ ದುಡಿದೆನು;
ತಿರುಕನಾಗಿ ತಿರಿದು ತಿರಿದು ಫಲವ ಕಾಣದಾದೆನು;
ಕಾಲು ಶತಕಗಳೆಯಿತು-ತನ
ದುಗುಡ ಮೇರೆ ದಪ್ಪಿತು
ಸಹಿಸೆನೀಗ ದೇವಿ; ದುಃಖವೇರಿ ಹೃದಯ ಬೆಂದಿತು



ಕೂಡ ತನ್ನ ಮರಿಗಳನ್ನು ಈ ರೀತಿಯಲ್ಲಿ ಬಿಟ್ಟು ಹೋಗಲಿಕ್ಕಿಲ್ಲ. ಆದಕ್ಕಿಂತಲೂ ಕಡೆ ಅವಳು. ತಿಮ್ಮಾ, ಕೂಗಬೇಡಪ್ಪಾ, ಕೂಗಬೇಡ. ನಾನು ನಿನ್ನನ್ನು ಬಿಟ್ಟು ಹೋಗುತ್ತೇನೊ? ನಾನು ಹೇಳಿದ ಹಾಗೆ ಕೇಳು" ಎಂದು ಸಂತೋಷದಿಂದ ಅವನು ಮಾತಾಡುತ್ತಿದ್ದನು. ಮಗುವು ಸುಮ್ಮನಾಯಿತು; ಅವನು ಅದನ್ನು ಎತ್ತಿ ಹೊರಹೊರಟನು.

ಅವನು ಪೇಟೆಯನ್ನು ಮುಟ್ಟಿದುದೇ ತಡ; ದೊಡ್ಡ ಗಲಾಟೆ ಎದ್ದಿತು. 'ರಾಮು ಒಂದು ಮಗು ತೆಗೆದುಕೊಂಡು ಬಂದಿದ್ದಾನೆ! ರಾಮು ಒಂದು ಮಗು ತೆಗೆದುಕೊಂಡು ಬಂದಿದ್ದಾನೆ!' ಸಮೀಪದ ಮನೆಯಲ್ಲಿದ್ದ ಬೊಗ್ಗನು "ಹೌದೊ ರಾಮು, ಈ ಹಸುಗೂಸನ್ನು ಎಲ್ಲಿಂದ ತಂದೆಯೊ?" ಎಂದು ಕೇಳಿದನು.

ಬೊಗ್ಗನಿನ ಹೆಂಡತಿಯು ಮನೆಯ ಮೆಟ್ಟಿಲುಗಳನ್ನು ಬೇಗ ಬೇಗನೆ ಇಳಿದು ಕೂಸನ್ನು ಎತ್ತಿಕೊಳ್ಳಲು ಕೈಗಳನ್ನು ಚಾಚಿದಳು. ನಗುತ್ತಾ ನಗುತ್ತಾ ಅದನ್ನು ಬಹಳ ಮುದ್ದಾಡಿದಳು.

"ರಾಮು ಇದು ನಿನ್ನದೊ? ನನಗೆ ಗೊತ್ತೇ ಇಲ್ಲ. ಇದರ ಕಣ್ಣನ್ನು ನೋಡಪ್ಪಾ. ಮೂಗನ್ನು ನೋಡು. ನಮ್ಮ ಸುಬ್ಬಕ್ಕೆಯ ಹಾಗೆಯೆ ಉಂಟಲ್ಲವೆ? ಬಾ ಮುದ್ದು, ಬಾ!" ಎನ್ನುತ್ತ ಅದನ್ನು ಬಹಳ ಅಕ್ಕರೆಯಿಂದ ಕೈಗಳಿಂದ ಮೇಲಕ್ಕೆ ಹಾರಿಸಿ ಹಿಡಿಯುತ್ತಿದ್ದಳು.

ಕಳ್ಳರ ತಂಡದ ಧುರೀಣನಾದ ಮುದಿ ಬೊಗ್ಗನು ಮೆಲ್ಲ ಮೆಲ್ಲನೆ ಮೆಟ್ಟಲಿಳಿದು ಬಂದನು. ಮಗುವನ್ನು ಚೆನ್ನಾಗಿ ನೋಡುತ್ತ ರಾಮುವಿನ ಬೆನ್ನು ತಟ್ಟಿದನು.

"ಇವನು ಸಾಮಾನ್ಯ ಮಗುವಂತೆ ತೋರುವುದಿಲ್ಲ. ದೇವರು ಆಯುಷ್ಯ ಕೊಟ್ಟರೆ ಬಹಳ ಹುಶಾರಿಯಾದಾನು. ದೊಡ್ಡ ದೊಡ್ಡ ಮಹಡಿಗಳನ್ನು ಹತ್ತುವುದು; ಎಷ್ಟು ಗಟ್ಟಿ ಗೋಡೆಗಳಿಗಾದರು ಕನ್ನ ವಿಕ್ಕುವುದು ಇವನಿಗೊಂದು ಕೆಲಸವೇ ಆಗಲಿಕ್ಕಿಲ್ಲ. ವಾಹವಾ! ಇವನ ತಾಯಿ ಯಾರೊ?"

"ಹಾಳಾಗಲಿ ಅವಳು! ನನ್ನ ಬೆಳ್ಳಿ ಹರಿವಾಣ ತೆಗೆದುಕೊಂಡು ಎಲ್ಲಿ ಓಡಿದ್ದಾಳೆಂದು ಗೊತ್ತಿಲ್ಲ."

"ಮತ್ತೆ ಈ ಕೂಸನ್ನು ನಿನಗೋಸ್ಕರ ಬಿಟ್ಟು ಹೋದಳೆ?

"ಹೌದು"

"ಬಹಳ ಕೆಟ್ಟದಾಯಿತು, ಬಹಳ ಕೆಟ್ಟ—"

ಮುದಿ ಬೊಗ್ಗನು ತನ್ನ ತಲೆ ತುರಿಸ ತೊಡಗಿದನು. ಆಗ ಚಿಕ್ಕ ಬೊಗ್ಗನು ರಾಮುವಿನ ಹತ್ತಿರ ಬಂದು, "ಒಳ್ಳೆಯದಾಯಿತು! ಇನ್ನು ನಿನ್ನ ಉದ್ಯೋಗಕ್ಕೆ ಸಲಾಮು ಕೊಡು ಮತ್ತು ಮಗುವನ್ನು ಸಾಕುವ ಕೆಲಸ ಕೈಕೊಳ್ಳು. ನಿನ್ನ ಹತ್ತಿರ ಒಳ್ಳೆಯ ಯುಕ್ತಿ ನಡೆಸಿದಳಯ್ಯಾ, ಆ ಹೆಂಗಸು" ಎಂದು ಗಹಗಹಿಸಿ ನಕ್ಕನು.

"ನನ್ನ ಸಂಗತಿಯಲ್ಲಿ ಇಷ್ಟೆಲ್ಲಾ ಚರ್ಚೆ ನಿನಗೆ ಏಕಪ್ಪಾ? ಎಲ್ಲರನ್ನು ರಕ್ಷಿಸುವ ದೇವರಿದ್ದಾನೆ. ರಾಮುವು ರಾಮುವೇ ಆಗಿ ಇರುವನು.

ಬಾಲಕನನ್ನು ತೋಳಲ್ಲೆತ್ತಿಕೊಂಡು ಜನಸಂದಣಿಯ ನಡುವಿನಿಂದ ಒಂದು ಕಡೆಗೆ ಹೋದನು. ದಾರಿಯಲ್ಲಿ ಜನರೆಲ್ಲಾ ತನಗೆ ಕೇಕೇ ಹಾಕಿ ನಗುತ್ತಾರೊ ಎಂಬಂತೆ ಅವನಿಗೆ ಭಾಸವಾಯಿತು.

ಪೇಟೆಯ ಹೊರಗಿರುವ ಒಂದು ಕಾಡನ್ನು ಪ್ರವೇಶಿಸಿ ಅಲ್ಲಿ ಒಂದು ಬಂಡೆ ಕಲ್ಲ ಮೇಲೆ ಕುಳಿತುಕೊಂಡನು.

ಮಗುವನ್ನು ತನ್ನ ಹತ್ತಿರ ಮಲಗಿಸಿ ಅದರ ಕಡೆಗೆ ತೀಕ್ಷ್ಣವೂ ಈರ್ಷ್ಯಾಯುಕ್ತವೂ ಆದ ದೃಷ್ಟಿಯಿಂದ ನೋಡ ತೊಡಗಿದನು. ಅದಾದರೊ ತನ್ನ ಹೆಬ್ಬೆಟ್ಟನ್ನು ಚೀಪುತ್ತಾ ಯಾವುದೊ ಗಾಢ ಚಿಂತೆಯಲ್ಲಿ ಮಗ್ನವಾಗಿದೆಯೊ ಎಂಬಂತೆ ಸುಮ್ಮಗೆ ಅವನ ಕಡೆಗೆ ನೋಡುತ್ತಿತ್ತು. ಈ ಬಾಲಕನನ್ನು ಏನು ಮಾಡಲೆಂದು ಸ್ವಲ್ಪವೂ ಅವನ ಮನಸ್ಸಿಗೆ ಹೊಳೆಯದು. ಇವನನ್ನು ಇಲ್ಲೇ ಬಿಟ್ಟು ಹೋಗಬೇಕೆಂದು ಒಮ್ಮೆ ಆಲೋಚಿಸಿದನು. ಮರುಕ್ಷಣದಲ್ಲಿ ತನ್ನ ರಕ್ತದಿಂದುತ್ಪನ್ನವಾದ ನಿರಪರಾಧಿಯಾದ ಶಿಶುವಿನ ಮೇಲಿನ ದಯಾಭಾವವು ಮೊದಲಿನ ಭಾವನೆಯನ್ನು ಹೊರಗೆಡವಿತು. ಮಗುವನ್ನು ಪುನಃ ಎತ್ತಿಕೊಂಡು ಅದರ ಕೋಮಲ ಶರೀರವನ್ನು ಅಪ್ಪಿಕೊಳ್ಳುತ್ತ ಅದರ ರೂಪಲಾವಣ್ಯವನ್ನು ಚೆನ್ನಾಗಿ ನೋಡ ತೊಡಗಿದನು. ಎಲ್ಲಾ ವಿಧದಲ್ಲಿಯೂ ಆ ಕೂಸಿನಲ್ಲಿ ತನ್ನ ಪ್ರತಿಬಿಂಬವೇ ಅವನಿಗೆ ಕಂಡು ಬಂತು. ವಾತ್ಸಲ್ಯಾಧಿಕ್ಯದಿಂದ ಮೈಯಲ್ಲೆಲ್ಲಾ ಪುಳಕ ಉಂಟಾಯಿತು.

ಅವನು ಮಗುವಿನ ತಲೆಯನ್ನು ತಡವರಿಸುತ್ತ ಮಾತಾಡತೊಡಗಿದನು. "ಚಿಕ್ಕ ರಾಮು! ನೀನು ಖಂಡಿತವಾಗಿ ಬಹಳ ಹುಶ್ಯಾರಾಗುವೆ ಮಗು. ಎತ್ತರವಾದ* ಗೋಡೆಗಳು, ಮಹಡಿ ಮನೆಗಳ ಕಿಟಕಿಗಳು, ಇವುಗಳನ್ನೆಲ್ಲಾ ಹತ್ತುವುದು ನಿನಗೆ ಬಹಳ ಸುಲಭವಾದ ಕೆಲಸ. ಬೀಗಗಳನ್ನು ಮುರಿಯುವುದು, ಕನ್ನವಿಕ್ಕುವುದು, ದನಕರುಗಳನ್ನು ಕದಿಯುವುದು—ನಿನಗೆ ಸಹ ಮಕ್ಕಳು ಹುಟ್ಟುವರು—ಆದರೆ ಅವರ ತಾಯಿ ಕೂಡ ಅವರನ್ನು ಬಿಟ್ಟು ಓಡಿ ಹೋಗ್ತಾಳೆ?—ಮತ್ತೆ ನೀನೂ ಅವರನ್ನು ತೋಳಲ್ಲಿ ತೂಗಾಡಿಸುತ್ತ ಒಂದು ತುತ್ತು ಅನ್ನಕ್ಕೋಸ್ಕರ ಮನೆ ಮನೆ ತಿರುಗಿ ಬೇಡುವೆಯಾ? ನನ್ನ ಹಾಗೆಯೇ?—ನೀನು?"

ನದಿ ತೀರದಲ್ಲಿ ಎಳೆಹುಲ್ಲ ಹಾಸಿಗೆಯ ಮೇಲೆ ಬಾಲಕನನ್ನು ಬಿಟ್ಟು ಅವನು ಒಂದು ಮರದ ಅಡ್ಡ ನಿಂತು ಮಗುವು ಏನು ಮಾಡುತ್ತಿದೆಯೆಂದು ಅತಿ ಉತ್ಸುಕತೆಯಿಂದ ನೋಡುತ್ತಿದ್ದನು. ಅದು ಕೈಕಾಲುಗಳನ್ನು ಅಲ್ಲಾಡಿಸುತ್ತಲೂ, ಹೆಬ್ಬೆಟ್ಟನ್ನು ಚೀಪುತ್ತಲೂ, ಅಮ್ಮಾ-ಮ್ಮಾ-ಮ್ಮಾ-ಮ್ಮಾ" ಎಂದು ಗಟ್ಟಿಯಾಗಿ ಒದರುತ್ತಿತ್ತು.

ರಾಮುವು ಆ ಮರ ಬಿಟ್ಟು ಮತ್ತೊಂದು ಮರದ ಅಡ್ಡ ಹೋದನು. ಅಲ್ಲೂ ಮಗುವಿನ ಕೂಗು ಕೇಳಿಸುತ್ತಿತ್ತು. ಇದೇ ರೀತಿಯಲ್ಲಿ ಒಂದು ಮರದ ಮರೆಯಿಂದ ಇನ್ನೊಂದು ಮರದ ಅಡ್ಡ ಸರಿಯುತ್ತಾ ಅವನು ಬಹಳ ದೂರ ನಡೆದು ಬಿಟ್ಟನು. ಅಲ್ಲಿ ಅವನಿಗೆ ಏನೂ ಕೇಳಿಸುತ್ತಿದ್ದಿಲ್ಲ, ಏನೂ ಕಾಣಿಸುತ್ತಿದ್ದಿಲ್ಲ. ಈಗ ಓಡತೊಡಗಿದನು. ಈ ಸಮಯದಲ್ಲೂ ಆ ಅನಾಥ ಬಾಲಕನ ರೋದನವು ಕಿವಿಯಲ್ಲಿ ಪ್ರತಿಧ್ವನಿಸುತ್ತಿತ್ತು. ಆಕಸ್ಮಾತ್ತಾಗಿ ಅವನು ಬೆಚ್ಚಿಬಿದ್ದನು. 'ಮಗುವು ನದಿಯ ಭಯಾನಕ ಪ್ರವಾಹದಲ್ಲಿ ಮುಳುಗುತ್ತಿದೆಯೊ ಏನೊ?' ತಲೆ ತಿರುಗಿತು; ಹೃದಯವು ನಡುಗಿತು; ಮೈ ಬೆವರಿತು. ಆದರೆ ಅವನು ಓಡುವುದನ್ನು ನಿಲ್ಲಿಸಲಿಲ್ಲ.

ಥಕ್ಕನೆ ಒಂದು ಕಡೆಯಲ್ಲಿ ನಿಂತು ಬಿಟ್ಟನು. ಬಂದ ದಾರಿಯಲ್ಲೇ ಹಿಂದೆ ಹೋದನು.

ಆ ಪರಿತ್ಯಕ್ತ ಶಿಶುವು ಬಿಕ್ಕಿ ಬಿಕ್ಕಿ ಅಳುತ್ತಿತ್ತು. ರಾಮುವು ತನ್ನ ಎರಡೂ ಕೈಗಳನ್ನು ಚಾಚಿ ಅದನ್ನೆತ್ತಿಕೊಂಡನು. ಅವನು ಕಾಡಿನ

[illegible]ಯಲ್ಲಿರುವ ಗುಡಿಸಲುಗಳ ಬಾಗಿಲಿಂದ ಬಾಗಿಲಿಗೆ ಹೋಗುತ್ತಾ ಅಸ್ಫುಟವಾದ ಧ್ವನಿಯಿಂದ ಕೂಗ ತೊಡಗಿದನು. "ಅಮ್ಮಾ, ಯಾರಾದರೂ ಈ ಅನಾಥನಿಗೆ ಒಂದು ಗುಟುಕು ಹಾಲು ಕುಡಿಸಿರಿ— ಈ ಅನಾಥನಿಗೆ ಒಂದು ಗುಟುಕು ಹಾಲು ಕುಡಿಸಿರಿ"

ಬಿ ಮಾಧವ ಬಾಳಿಗಾ, ಬಿ. ಎ.,
ಮಂಗಳೂರು

+++++

# ಕೊಡಗಿನ ಕನ್ನಡಿಗರು.

[illegible]ನ್ನು ಕೊಡಗಿನ ವಿಷಯವಾಗಿ ಸದ್ಯಕ್ಕೆ ನೆನಪಾದ ನಾಲ್ಕು [illegible]ಗಳನ್ನು ಬರೆವೆ. ಸಾಹಿತ್ಯ ಸಮ್ಮೇಲನವಾದ ಮೇಲೆ ಜನವರಿ [illegible] ಉತ್ತರ ಕೊಡಗಿನ ಮಡಿಕೇರಿ—ನಾಪೊಕ್ಲು—ಭಾಗಮಂಡಲ—[illegible]ವೇರಿಗಳನ್ನು ಸಂದರ್ಶಿಸಿ ದಕ್ಷಿಣ ಕೊಡಗಿನ ವಿರಾಜಪೇಟೆ—[illegible]—ಗೋಣಿಕೊಪ್ಪಲು—ಪೊನ್ನಂಪೇಟೆ—ಹುದುಕೇರಿ ಗ್ರಾಮ[illegible] ಅಲೆದು ಕರ್ನಾಟಕ ಏಕೀಕರಣದ ವಿಷಯವಾಗಿ ಹೋದ [illegible] ಸಭೆಯಲ್ಲಿಯೂ ವೈಯಕ್ತಿಕವಾಗಿ ಮಾತನಾಡಿದ್ದಾಯ್ತು [illegible]ಯ ಏಕೀಕರಣದ ಹಾದಿಯನ್ನು ನೋಡದೆ ಸಾಂಸ್ಕೃತಿಕ ಏಕೀ[illegible]ದರೂ ಸಕಲರೂ ಶೀಘ್ರವಾಗಿ ಕೈಕೊಳ್ಳುವಂತಾಗುವದು [illegible]ವಾಗಿದೆಯೆಂಬುದನ್ನು ಹೇಳಿ ಕನ್ನಡ ಸಾಹಿತ್ಯದ ಸಂದೇಶ[illegible]ಲ್ಲಿ ಊರೂರಿಗೂ ಮನೆ ಮನೆಗೂ ವ್ಯಕ್ತಿ ವ್ಯಕ್ತಿಗೂ ಮುಟ್ಟಿ[illegible] ಯಥಾ ಶಕ್ತಿ ಯತ್ನಿಸಿದ್ದಾಯ್ತು. ಇದು ಮೊದಲು ನಾನು ತಿಳಿ[illegible] ಯಾರು ಅಂಥ ಪ್ರದೇಶದಲ್ಲಿ ಸಾಹಿತ್ಯದ ಸಂದೇಶವನ್ನು [illegible]ಲ್ಲಿ ಕೊಂಡೊಯ್ದವರು ಇಲ್ಲಿಗೆ ಬರಲಿಲ್ಲವಾದ್ದರಿಂದ ಜನಗಳ [illegible] ಉತ್ಸಾಹ ಸಂತೋಷಗಳನ್ನು ಕಂಡು ಅವರ ದಾಕ್ಷಿಣ್ಯಕ್ಕೊಳ[illegible]ಗಿ ಅವರು ಕೇಳಿದಂತೆ ಕೇಳಿದಾಗ ಕೇಳಿದಷ್ಟು ಕಾಲ ಒಬ್ಬನಿರಲಿ [illegible]ರಲಿ ಮೂರು ಜನರಿರಲಿ ನೂರು ಜನರಿರಲಿ ಎಲ್ಲರಿಗೂ ಹಾಡಿ [illegible] ಅಖಿಲ ಕರ್ನಾಟಕದ ಕಲ್ಪನೆಯನ್ನು ಭೆಟ್ಟಿಯಾದವರಲ್ಲೆಲ್ಲ [illegible]ಯೂ ಬಿತ್ತಲು ಕೈಲಾದ ಮಟ್ಟಿಗೆ ಮಾಡಿದ್ದಾಯ್ತು. ನಾನು [illegible]ಕೊಂಡಲ್ಲೆಲ್ಲ ಆ ಮನೆಯ ಹೆಣ್ಣು ಮಕ್ಕಳಂತೂ ವಿಶೇಷವಾದ [illegible]ರದ ಆಸ್ಥೆಯಿಂದ ಕನ್ನಡ ಕವಿತೆಗಳನ್ನು ಕೇಳಿದ ದು ಸೋಜಿಗ[illegible]ದು. ನಾಪೊಕ್ಲು ಭಾಗಮಂಡಲಗಳ ಕ್ಲಬ್ಬುಗಳಲ್ಲಿಯೂ ವಿರಾಜ[illegible]ಯ ಹೈಸ್ಕೂಲಿನಲ್ಲಿಯೂ ಪೊನ್ನಂಪೇಟೆಯ ಕನ್ನಡ ಶಾಲೆ [illegible]ಶ್ರಮಗಳಲ್ಲಿಯೂ ಗೋಣಿಕೊಪ್ಪಲು ಹುದುಕೇರಿಗಳಲ್ಲಿ [illegible] ಭಜನ ಮಂದಿರಗಳಲ್ಲಿಯೂ ಈ ಬಗ್ಗೆ ಸಭೆಗಳಾದವು

[illegible]ಡಗಿನ ಶಿಕ್ಷಕ ಸಂಘದ ಪರವಾಗಿ ವಿರಾಜಪೇಟೆಯಲ್ಲಿ [illegible]ಬ್ರವರಿಯಿಂದ ಶಾರದೆ ಎಂಬ ಮೊದಲಿನ ೨ ತಿಂಗಳ ಪತ್ರಿಕೆ [illegible] ತಿಂಗಳ ಪತ್ರಿಕೆಯಾಗಿ ಶ್ರೀ ಟಿ. ಎಂ. ಕಾರ್ಯಪ್ಪನವರ [illegible]ದಲ್ಲಿ ಹೊರಡುವದಿದೆಯೆಂದು ಕೇಳಿದೆನು. ಉಳಿದ [illegible]ಡಿಗರೂ ಲೇಖನಾದಿಗಳಿಂದ ಕೊಡಗಿನ ಬಂಧುಗಳಿಗೆ ನೆರ[illegible]ದು ಹಾರೈಸಲಾಗಿದೆ

ಗೋಣಿಕೊಪ್ಪಲು ಹುದುಕೇರಿಗಳಲ್ಲಿಯ ರಾಮಭಜನ ಮಂದಿರ[illegible] ಸಮಾಜ ಸೇವೆಯನ್ನು ರಾಷ್ಟ್ರೀಯ ದೃಷ್ಟಿಯಿಂದ ಮಾಡುತ್ತಿದ್ದುದು [illegible]ದಾಯಕವಾಗಿದೆ. ಗೋಣಿಕೊಪ್ಪಲಿನ ಭಜನ ಮಂದಿರಕ್ಕೆ [illegible]ಯಿಂದ ಬರುತ್ತಿದ್ದುದು ಕಾಲೋಚಿತವಾಗಿ ಆನಂದದಾಯಕವಾಗಿತ್ತು. ಅದರಂತೆಯೇ ಪೊನ್ನಂಪೇಟೆಯ ರಾಮಕೃಷ್ಣ ಸಂಘಕ್ಕೆ ಸೇರಿದ ಶಾರದಾಶ್ರಮದಲ್ಲಿ ಕೂಡ ನಡೆಯುವದು. ಅಲ್ಲಿ ಕೊಡಗಿನವರೇ ಆದ ಶ್ರೀ ಶಾಂಭವಾನಂದಜಿಯವರು ನಾಲ್ಕೈದು ವರ್ಷಗಳಿಂದ ಸಮಾಜ ಸೇವೆಯನ್ನು ಏಕಾಂತವಾಗಿ ಮಾಡುತ್ತಿದ್ದಾರೆ. ಸ್ವಾಮಿಜಿಯವರು ಕರ್ನಾಟಕಾಭಿಮಾನಿಗಳು. ಕೋಮಲಾಂತಃಕರಣಿಗಳು. ತಮ್ಮ ವಾರ್ಷಿಕೋತ್ಸವದ ಕಾಲಕ್ಕೆ ಕನ್ನಡ ನಾಡಿನ ಎಲ್ಲ ಭಾಗಗಳಿಂದ ಮಾನ್ಯರನ್ನು ಕರೆಸುತ್ತಿರುವರು. ಹರಿಜನರಲ್ಲಿ ಬೆರೆಯುತ್ತಲೂ ಮಲೇರಿಯದ ಕಾಲಕ್ಕೆ ಅದರ ನಿವಾರಣೆಯ ಉಪಾಯಗಳನ್ನು ಜನರಿಗೆಲ್ಲಾ ಬೋಧಿಸುತ್ತಲೂ ಕೊಡಗಿನ ಮುಖ್ಯ ಉದ್ಯೋಗಗಳಲ್ಲೊಂದಾಗಬಹುದಾದ ಜೇನುತುಪ್ಪದ ಸಂಗ್ರಹೋದ್ಯಮವನ್ನು ನವೀನ ಸಾಧನೆಗಳ ಮೂಲಕ ಹಿಂಸೆಯಿಲ್ಲದೆ ಅಧಿಕವಾಗಿ ಹೇಗೆ ಮಾಡಬಹುದೆಂಬುದನ್ನು ಸ್ವಾನುಭವದಿಂದ ತೋರಿಸುತ್ತಲೂ ಅನೇಕ ವಿಧವಾಗಿ ಶ್ರೀ ರಾಮಕೃಷ್ಣರ ಶಿಷ್ಯರಿಗೆ ತಕ್ಕಂತೆ ಸಮಾಜ ಸೇವಾತತ್ಪರರಾಗಿದ್ದಾರೆ. ಅವರ ಕಾರ್ಯದಲ್ಲಿ ಪೊನ್ನಂಪೇಟೆಯ ಶ್ರೀ ಮುದ್ದಯ್ಯ ಮೊದಲಾದವರು ಸಕಲ ರೀತಿಯಿಂದಲೂ ಸಹಕರಿಸುತ್ತಿರುವದು ಸಂತೋಷದ ಮಾತಾಗಿದೆ. ಆಶ್ರಮಕ್ಕೆ ಒಂದು ಒಳ್ಳೇ ಕಟ್ಟಡವೂ ಬಾವಿಯೂ ಸುಂದರವಾದ ತೋಟದಲ್ಲಿ ಕಟ್ಟಲ್ಪಟ್ಟಿದ್ದು ಅಲ್ಲಿ ಪೂಜೆ ಆರತಿಗಳು ದಿನಂಪ್ರತಿ ನಡೆಯುವವು.

ಒಟ್ಟಿನಲ್ಲಿ ಕರ್ನಾಟಕ ಸಾಹಿತ್ಯ ಏಕೀಕರಣಗಳ ವಿಷಯದಲ್ಲಿ ನಾನು ಹೋದಲ್ಲೆಲ್ಲ ಜನಸಮುದಾಯವು ಆಸ್ಥೆ ಆತುರತೆಗಳನ್ನು ತೋರಿದುದನ್ನು ಕಂಡು ನನ್ನ ಚಿತ್ತವು ಸಂತೋಷದಿಂದ ಕುಣಿದಾಡಿತು.

ಪ್ರಹ್ಲಾದ ನರೆಗಲ.

+++++

# ಆಶಯ

ತಾಯಿನುಡಿ ಸೇವೆಯಲಿ ಕಳೆಯಲೆಮ್ಮಯ ಕಾಲ
ತಾಯಿನಾಡಿನ ಶ್ರೇಯಕಿರಲೆಮ್ಮ ಧ್ಯೇಯ ॥

ನಾಡಿನುನ್ನತಿಯನಾ ನಾಡನುಡಿಯೇಳ್ಗೆಯಿಂ
ನೆನೆಯಲಾರ್ಪುದರಿಂದಲೆಮ್ಮ ತಾಯಾ—
ನಾಡನುಡಿಯುನ್ನತಿಯ ಬಯಕೆಯಿಂದೆನ್ನ ತನು
ಮನಧನಗಳೆಲ್ಲಮಂ ಸವೆಯುತಿರಲಿ ॥

ಜಸದೆಸಕ ಜಾಲದಿಂ ದೂರವಿರಲೆಮ್ಮ ಮನ
ಮುಸುಕದಿರಲೆಮ್ಮ ಬಗೆ ಸ್ವಾರ್ಥತಮದಿಂ
ಕುಸುಮ ವಾಸನೆ ಎಸರದಂತೆಮ್ಮ ಜೀವನದ
ಪ್ರಂಕೃತಿಗಳೆಸೆದಿರಲಿ ದಿಶಿದಿಶೆಯಲಿ ॥

ಸುಜಲದಿಂ ಕವಿಪ ಸುಫಲಂಗಳಿಂ ಪೋಷಿಸುವ
ಸಸ್ಯಶ್ಯಾಮಲೆ ಪ್ರೀತೆ ಭೂಮಾತೆಯ
ನಿಜಪಾದಕಮಲದರ್ಚನೆ ಸದಾ ಸುರುನದಿಂ
ದೊಗೆದ ಹೃತ್ಕುಸುಮದಿಂ ನಡೆಯುತಿರಲಿ ॥

ಜಯತು ಕರ್ನಾಟಕಂ ಜಯತು ಭಾರತ ಭೂಮಿ
ಜಯತು ಸಾರಸ್ವತೋದ್ಯೋಗದೆಸಕಂ
ಜಯತು ಮಾತೆಯ ಬಂಧ ಮುಕುತಿಯೋಧರ ಚಾಗ
ಜಯ ಸದಾ ಜಯತು ಜಯ ಕರ್ನಾಟಕಂ ॥

+++++



ವೃದ್ಧ ಪುರುಷರು. ೨.

# ಶ್ರೀ ಎಮ್. ಗೋವಿಂದ ಪೈಗಳು.

(ಲೇಖಕ ಶ್ರೀ ಕೊ. ಶಿ. ಕಾರಂತರು)

ದಕ್ಷಿಣ ಕನ್ನಡ ಜಿಲ್ಲೆಯವರಲ್ಲಿ ಮುಂದಕ್ಕೆ ಬಂದ ಹೆಸರು ಶ್ರೀಯುತ ಗೋವಿಂದ ಪೈಗಳದು. ಅವರ ಕೀರ್ತಿ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಇದೆಯೆನ್ನಬಹುದು. ಮುಖ್ಯವಾಗಿ ಪ್ರಾಚೀನ ಶಾಸನ, ಲಿಂಗಗಳ ವಿಮರ್ಶೆಯನ್ನು ಮಾಡುವವರ ಸಾಲಿನಲಿ ಅವರೊಬ್ಬರು ಪ್ರಸಿದ್ಧ ವ್ಯಕ್ತಿಗಳು. ಅವರ ಕವಿತಗಳ ಆಗಾಗ, ಹಲವು ವರುಷಗಳಿಂದ ಹಲವು ಪತ್ರಿಕೆಗಳಲ್ಲಿ ಬರುತ್ತಲೇ ಇವೆ. ಮುಖ್ಯವಾಗಿ ಶ್ರೀಯುತರು ಸಾಹಿತ್ಯ ವ್ಯವಸಾಯಿಗಳು. ಇವರ ಪರಿಚಯವನ್ನು ನನ್ನ ಪುಟ್ಟ ಲೇಖನದಲ್ಲಿ ಮಾಡಿಕೊಡುತ್ತೇನೆ.

ಶ್ರೀಯುತರಿಗೆ, ಜನತೆಯು ಒಂದು ಹಿಂಡಿನಲ್ಲಿ ಗುರುತಿಸುವ ಥರೂಪ ವಿಶೇಷಗಳಿಲ್ಲ. ಉಡುಗೆ ತೊಡುಗೆಗಳ ಡಾಂಭಿಕತೆಯೂ ಅವರಲ್ಲಿ ಕಾಣಸದು. ಅವರ ಬಾಹ್ಯ ಸೌಂದರ್ಯವನ್ನು ಅವರು, ನಾಟಕನ ಬಳಿಗೆ ಹೋಗದಿರುವಾಗ ಮುಖದ ಮೇಲೆ, ಮುಳ್ಳು ಹಂದಿಯ ಕಣೆಗಳಂತೆ, ಎದ್ದು ನಿಲ್ಲುವ ಕಂಬಳಿ ಕೂದಲುಗಳಿಂದ ತಿಳಿಯಬೇಕು. ಆಗ ಅವಳದೊಂದು ವಿಚಿತ್ರ ಸೌಂದರ್ಯವೆನ್ನಬಹುದು. ಕ್ಷೌರ ಮಾಡಿಸಿಕೊಂಡಿರುವುದಕ್ಕಿಂತಲೂ, ಕೊಂಡಿರದಾಗ ಅವರ ಮುಖವು ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವುದು ಬಹಳ. ನೋಡುವಿಕೆಗೆ ಅವರ ಮುಖ, ರೂಪಗಳೆಲ್ಲ ಒರಟೆನ್ನಬಹುದು, ಮಾತೂ ನಯವಾಗಿಲ್ಲ. ಆದರೆ ಮನಸ್ಸು ನಡತೆಗಳು ತದ್ವಿರುದ್ಧವಾಗಿವೆ. ಶ್ರೀಯುತರ ಗೆಳೆತನದಿಂದ ನಮಗೆ ಸಿಗುವ ಲಾಭಗಳು ಅವರ ಕೃತಿಗಳಿಗಿಂತ ಎಷ್ಟೋ ಪಾಲು ಮಿಗಿಲಾದುವು.

ಮಂಜೇಶ್ವರದಲ್ಲಿ ಅವರ ಮನೆ. ಮಂಜೇಶ್ವರವು ಸುಂದರವಾದ ಪ್ರದೇಶ. ಅಲ್ಲಿ ಅಚ್ಚುಕಟ್ಟಿನ ಅವರ ಮನೆಯು ಸಾಹಿತ್ಯ ವ್ಯವಸಾಯಿಗಳಿಗೆ ಸದಾ ತರೆದಿರುವ ಛತ್ರ. ಛತ್ರವೆಂದೊಡನೆಯೇ ಸಾವಿರಾರು ಜನರು ಬಂದು ಹೋಗುತ್ತಿದ್ದಾರೆಂದು ಅದರ ಅರ್ಥವಲ್ಲ. ಮಂಗಳೂರಿನಂಥ ಮುಖ್ಯ ಪ್ರದೇಶದಲ್ಲಿದ್ದರೆ ಅದು ಅಂಥದೇ ಸ್ಥಳವಾಗುತ್ತಿತ್ತು. ಮನೆಗೆ ಬಂದ ಅತಿಥಿಗಳೊಡನೆ ತೀರ ಸಲಿಗೆ ಸರಳತೆಗಳಿಂದ ಪೈಗಳು ವರ್ತಿಸುತ್ತಾರೆ. ಒಮ್ಮೆ ಅವರಲ್ಲಿಗೆ ಹೋದವನು ತಿರುಗಿ ಅವರಲ್ಲಿಗೆ ಅವಶ್ಯವಾಗಿ ಹೋಗಲು ಬಯಸುತ್ತಾನೆ.

ಶ್ರೀಯುತರ ಮನೆಯಲ್ಲಿ ಅವರ ಕಾರ್ಯಕ್ಕೆ ಅನುಕೂಲವಾಗುವಂಥ ಪುಸ್ತಕ ಸಂಗ್ರಹವಿದೆ. ಅವರಿಗೆ ಸಂಸಾರದ ಬಾಧೆ ಕಡಿಮೆ, ವಿರಾಮ ತುಂಬ, ದ್ರವ್ಯಾನುಕೂಲತೆ ಇದೆ. ಇದಕ್ಕೆ ಮೇಳೈಸುವ ರೀತಿಯಲ್ಲಿ ಅಧ್ಯಯನದ ಚಟವೂ ಇದೆ. ಇವರು ತಮ್ಮ ಬಿ. ಎ. ಪರೀಕ್ಷೆಯಲ್ಲಿ ವಿಶೇಷ ಪ್ರಶಸ್ತಿಯಿಂದ ತೇರ್ಗಡೆಯಾದವರು. ಹೀಗೂ, ಅನುಕೂಲತೆ ವಿದ್ಯೆ ಬುದ್ಧಿಗಳೆಲ್ಲ ಒಂದು ವ್ಯಕ್ತಿಯಲ್ಲಿ ಸೇರಿದುದು ಸಂತೋಷದ ವಿಷಯ. ಅವರ ಗೆಳೆತನದಿಂದ ನಾವು ಕಲಿಯತಕ್ಕ ಪಾಠಗಳು ಬಹಳ. ನಿಯಮಿತತೆಯು ಅವರ ಪ್ರಿಯ ಹವ್ಯಾಸ. "ಬರುವ ವರುಷ, ಮಾರ್ಚ ೨೭ಕ್ಕೆ ನಮ್ಮ ಊರಿಗೆ ಬನ್ನಿ"—ಎಂದು ನೀವು ಆಮಂತ್ರಣ ಒಂದನ್ನು ಕೊಟ್ಟು ಮರೆತರೆ, ಆ ದಿನ ಎಷ್ಟೇ ದಿನ ತಿಂಗಳುಗಳ ತರುವಾಯವಿರಲಿ, ಅವರು ಬಂದು ನಿಮ್ಮನ್ನು ಹಿಡಿದು ನಿಲ್ಲಿಸುವರು. ಹೀಗೆ ಪ್ರತಿ ಕಾರ್ಯಕ್ರಮವನ್ನೂ ಪಾಲಿಸುವವರು. ಅಂತೆಯೇ ಇತರರೂ ಮಾಡಬೇಕೆಂದು ಬಯಸುವವರು. ಅವರಲ್ಲಿಗೆ, ಒಂದು ದಿನ ಬರುವೆನೆಂದು, ಬಾರದೆ ಹೋದರೆ ಬಲು ನೊಂದುಕೊಂಡಾರು. ಆ ದಿನವೆಲ್ಲ, ನಿಮಗಾಗಿ ಇತರ ಕೆಲಸಗಳನ್ನು ಮೂಲೆಗೊತ್ತಿ, ಕಾದಿರುವ ಸ್ವಭಾವ ಅವರದು. ಅವರ ಹಾರೈಕೆಯನ್ನು ವ್ಯರ್ಥಗೊಳಿಸಿದರೆ ಅವರಾದರೂ ನೊಂದುಕೊಳ್ಳುವುದರಲ್ಲಿ ತಪ್ಪಿಲ್ಲ.

ಇನ್ನೊಂದು ಮಾತು. ಅವರೊಡನೆ ಸಂಭಾಷಿಸುವ ಸಾಹಿತ್ಯ ವ್ಯವಸಾಯಿಗಳಿಗೆ ಇದೊಂದು ಎಚ್ಚರ—"ಸ್ವಾಮಿ, ನಾನು ಬರೆದ ಪುಸ್ತಕ ಹೇಗಿದೆ?" ಎಂದು ಕೇಳುವ ಅಭ್ಯಾಸವುಳ್ಳವರು, ದಯವಿಟ್ಟು ಅವರ ಬಳಿ ಹೋಗಬಾರದು. ಕೇಳುವ ಸಾಮಾನ್ಯರ ಮನಸ್ಸಿನಲ್ಲಿ ಪ್ರಶಂಸೆಯ ಬಾಯಾರಿಕೆಯಿರುತ್ತದೆ. ಆದರೆ ಪೈಗಳ ಒರಟುಬಾಯಿಯಿಂದ ನಿರಾಶಾಜನಕವಾದ ನುಡಿ ಬಂದೀತು. ನನ್ನೊಂದು ನಾಟಕದ ವಿಚಾರವಾಗಿ ಅವರಾಗಿ ನುಡಿದ ನುಡಿ ಇನ್ನೂ ನನಗೆ ನೆನಪಿದೆ. ನಾನದನ್ನು ಟೆಕ್ಸ್ಟ್ ಬುಕ್ ಕಮಿಟಿಗೆ ಕಳುಹಿಸಿದ್ದೆ. ಅವರು ಅದರ ಸದಸ್ಯರು. ನಾನು ಸಿಕ್ಕಿದಾಗ ತಾವಾಗಿ ಅಂದರು—"ನಿಮ್ಮ ಪುಸ್ತಕ ಬಂದಿತ್ತು. ಏನಿದೆ ಅದರಲ್ಲಿ? ಭಾಷೆ ಚೆನ್ನಾಗಿಲ್ಲ, ರಚನೆಯಿಲ್ಲ ....." ಅಂದರು. ನಾನು ಮನಸ್ಸಿನಲ್ಲೇ ನಕ್ಕೆ. ಆ ರೀತಿ ನಿರ್ದಾಕ್ಷಿಣ್ಯ ವಿಮರ್ಶೆ ಮಾಡುವವರು ಕಡಿಮೆ. ಬೇರೆಯವರ ವಿಷಯ ಮಾತ್ರ ಅವರು ನಿಷ್ಠುರಿಗಳೆಂದು ತಿಳಿಯಬೇಡಿ. ತಮ್ಮ ವಿಷಯದಲ್ಲೂ ಅವರು ಹಾಗೆಯೇ ಹೇಳುವವರು.

ನಾವೆಷ್ಟೋ ಬಾರಿ ಅವರನ್ನು ಉಪನ್ಯಾಸಕ್ಕೆ ಕರೆದುದುಂಟು. ಅವರೇ ತಿಳಿಸಿದರು "ನನ್ನ ಉಪನ್ಯಾಸ ನಿಮಗೆ ರುಚಿಸಲಿಕ್ಕಿಲ್ಲ" ಎಂದು. ದೊಡ್ಡವರೆಂದು ಕರೆಯಿಸಿದೆವು. ಉಪನ್ಯಾಸ ಕೊಡುವ ಮುಂಚೆಯೇ ಹೇಳಿದರು—"ನಿಮಗ ತಲೆನೋವು ಶುರುವಾದೀತು"—ಎಂದು. ನಡುವೆ ಅಂದರು—"ಪ್ರಾಯಶಃ ಬೇಸರವಾಗಲಿಕ್ಕೂ ಸಾಕು ನಿಮಗೆ" ಎಂದು. ಅಂತ್ಯದಲ್ಲೂ ಅಂದರು. ಹಾಗಾದುದಕ್ಕೆ ಇಡೀ ಸಭೆಯೇ ಸಾಕ್ಷಿ. ಅದರಲ್ಲಿ ಅವರ ಮೇಲಿನ ಅಪರಾಧವಿಲ್ಲ, ಅದು ಅವರನ್ನು ಕರೆಯುವವರ ಅಪರಾಧವೇ ಸರಿ. ಅವರಿಗೆ ರುಚಿಸುವ ವಿಷಯಗಳು—ಉಕ್ಕಿನ ಕಡಲೆಗಳು. ನಮಗೆ ಬೇಕಾದುದು ಬರಿ ಹುರಿ ಕಡಲೆ.

ಶ್ರೀಯುತರ ಅಧಿಕ ವಿರಾಮವನ್ನು, ಪುಸ್ತಕ ಸಂಗ್ರಹವನ್ನು ಕಂಡು, 'ಇವರ ತಲೆಯನ್ನು ಕಾಡುವ ವಿಷಯವೇನು?' ಎಂದು ನನಗೆ ಯೋಚನೆಯಾಗುತ್ತಿತ್ತು. ಇನ್ನೂ ಆ ಬೇನೆಗೆ ನಾನು ಹೆಸರಿಟ್ಟಿಲ್ಲ. ನಾನು ಶ್ರೀ ರಾಜಪುರೋಹಿತರ ಉಪನ್ಯಾಸ ಲೇಖನಗಳನ್ನಾದರೂ ಕೇಳಬಲ್ಲೆ, ಇವರ ತಂಟೆಯೇ ಸಾಕು. ಮೊದಲಿನವರೊಡನೆ ಮಾತನಾಡಲು, ಒಂದು ಸೀಸೆ ಅಮೃತಾಂಜನ ಬೇಕಾದರೆ, ಇವರ ವಿಷಯ ಮಥನಕ್ಕೆ ಎಸ್ಪಿರಿನ್—ಇದ್ದರೂ ವ್ಯರ್ಥ. ಯಾವನಾದರೂ ಒಬ್ಬ ಕವಿ—ಇರಲಿ (ಅವನನ್ನು ಮಂಗರಸ ಎಂದು ಕರೆಯುವ) ಅವನ ಹೆಸರೆತ್ತಿ

## ಆಧುನಿಕಕಾಲದ ದಾಂಪತ್ಯಜೀವನ.

ಲೇಖಿಕೆ.—ಬಿ. ಲಕ್ಷ್ಮೀದೇವಿ, ವಿದ್ಯಾರ್ಥಿ ಮಂಗಳೂರು.
(ಕಳೆದ ಸಂಚಿಕೆಯಿಂದ ಮುಂದುವರಿದುದು)

ಇದೇ ಪ್ರಕಾರ ಭಾರತೀಯ ಮಹಿಳೆಯರ ಪರಿಸ್ಥಿತಿಯೂ ಬಂದು ನಿಂತಿದೆ. ಇವರೆಲ್ಲರೂ ಕರ್ತವ್ಯದ ದಾಸತ್ವದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಇದರಿಂದ ಅವರ ಮನೋವೃತ್ತಿಯು ಕಲುಷಿತವಾಗಿ ಹೋಗಿದೆ. ಅವರು ಕರ್ತವ್ಯದ ಭಾರವನ್ನು ಹೊರುವ ಒಂದು ಯಂತ್ರದಂತೆ ಪರಿಗಣಿಸಲ್ಪಟ್ಟಿದ್ದಾರೆ. ಇದರಿಂದಾಗಿ ಅವರು ತಮ್ಮ ಅಸ್ತಿತ್ವವನ್ನು ಸ್ವಾತಂತ್ರ್ಯವನ್ನೂ, ಅಧಿಕಾರವನ್ನೂ ಮರೆತೇ ಬಿಟ್ಟಿರುವರು. ಇದರಿಂದಾಗಿ ಸ್ತ್ರೀಯರ ಬಾಹ್ಯ ಪ್ರಪಂಚದಲ್ಲಿ ಪಾತಿವ್ರತ್ಯ ಮತ್ತು ವೈಧವ್ಯ ದೀಕ್ಷೆಯ ಚಿಹ್ನೆಗಳು ತೋರಿ ಬಂದವು. ಪರಂತು ಅಂತರ್ಯದಲ್ಲಿ ಅನೇಕಾನೇಕ ಕ್ರೂರ ವ್ಯವಹಾರಗಳು ಬೆಳೆಯುತ್ತಾ ನಾರೀ ಹೃದಯವನ್ನು ಜರ್ಝರಿತಗೊಳಿಸಿದವು. ಇಂದಿಗೆ ನಮ್ಮ ದೇಶದ ಮಹಿಳೆಯರ ಜೀವನವು ಹೇಗಿದೆ ಎಂಬುದನ್ನು ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೋ? ಶಿಕ್ಷಣದಲ್ಲಿಯೂ, ಅವರು ಜಗತ್ತಿನ ಸ್ತ್ರೀ ಸಮುದಾಯದಲ್ಲಿ ಶತಕೋಟಿ ಗಜ ಹಿಂದೆ ಇದ್ದಾರೆ. ಆರೋಗ್ಯದ ವಿಷಯದಲ್ಲಿಯೋ! ಉಪ್ಪಿನಲ್ಲಿಟ್ಟ ಮಾವಿನ ಕಾಯಿಯಂತೆ ಅತಿ ನಿರ್ಬಲರಾಗಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಈಗಿನ ಕಾಲದ ಮಹಿಳೆಯರನ್ನು ಪುರುಷರ ದಾಸಿಯರೆಂಬುದಾಗಿ ಹಿಂದೂ ಸಮಾಜವು ಪ್ರತ್ಯೇಕಿಸಿಟ್ಟಿದೆ. ಇಂಥವರ ದಾಂಪತ್ಯ ಜೀವನವು ಹೇಗೆ ಸುಖಕರವಾಗಿ ನಡೆಯುವುದು? ಪ್ರೇಮಪೂರಿತವಾದ ಸಹಯೋಗದಿಂದಲೂ, ಆನಂದಮಯವಾದ ಜೀವನ ಚರ್ಯೆಯಿಂದಲೂ, ಉತ್ತಮವಾದ ಸಾತ್ವಿಕ ಗುಣಗಳಿಂದಲೂ, ತುಂಬಿದಂಥಾ ಪತ್ನಿಯರು ಈಗಿನ ಗೃಹಸ್ಥರಲ್ಲಿ ಬಹಳ ಕಡಿಮೆ. ಇದರ ಕಾರಣವೇನೆಂದರೆ ಈ ದಿನಗಳಲ್ಲಿ ಒಂದಷ್ಟು ಮಕ್ಕಳನ್ನು ಹುಟ್ಟಿಸಿದ ತಂದೆತಾಯಿಗಳು ತಮ್ಮ ಮಕ್ಕಳನ್ನು ವಿವಾಹ ಮಾಡಿ ಕೊಡುವಾಗ ವಧೂವರರ ಶಾರೀರಿಕ ಪರಿಸ್ಥಿತಿ, ಉದ್ಯೋಗ ರೂಪಲಾವಣ್ಯ ಇತ್ಯಾದಿಗಳನ್ನು ನೋಡದೆ ವರನ ಮನೆಯಲ್ಲಿರುವ ಹಣದ ಪೆಟ್ಟಿಗೆಗೋ ಅಥವಾ ಅವನಲ್ಲಿರುವ ಹಿತ್ತಲು, ಮನೆ, ಗದ್ದೆ ಮುಂತಾದ ಆಸ್ತಿ ಪಾಸ್ತಿಗಳಿಗೋ ತಮ್ಮ ಕನ್ಯೆಯನ್ನು ದಾನ ಮಾಡಿ, ತಮ್ಮ ಮೇಲಿನ ಭಾರವನ್ನು ಕಳೆದುಕೊಳ್ಳುತ್ತಾರೆ. ಗಂಡನ ಮನೆಗೆ ಹೋದ ಆ ಕನ್ಯೆಯು ತದನಂತರ ಅಲ್ಲಿ ನರಕ ಯಾತನೆಯನ್ನನುಭವಿಸಿದರೆ ಮಾತಾಪಿತೃಗಳು ಹೇಳುವುದೇನೆಂದರೆ—"ಏನು ಮಾಡಲಿ ಮಗಳೇ! ಎಲ್ಲವೂ ನಿನ್ನ ಅದೃಷ್ಟದಂತಾಗುತ್ತದೆ" ಎಂದು ಹೇಳುತ್ತಾರೆ. ಇವರು ತಮ್ಮ ಇಡೀ ಜೀವಮಾನದಲ್ಲಿ ಅದೃಷ್ಟದ ಗುಲಾಮರಾಗಿರುತ್ತಾರೆ ಹೊರತು ವಿವಾಹಗಳಲ್ಲಿ ವಧೂವರರ ಮನಸ್ಸಿನ ಅಂತಃ ಇಚ್ಛೆಯನ್ನೂ ಪರಸ್ಪರ ಯೋಗ್ಯತೆಯನ್ನೂ ತಿಳಿದುಕೊಳ್ಳಲು ಮನಃಪೂರ್ವಕವಾಗಿ ಯತ್ನಿಸುವುದಿಲ್ಲ. ಈ ಪ್ರಕಾರದ ಅದೃಷ್ಟದ ದಾಸರಾದ ಜನರಿರುವ ವರೆಗೆ ಅವರು ಸಂತಾನ ಹೀನರಾಗಿರುವುದೇ ಒಂದು ವಿಧದಲ್ಲಿ ಶ್ರೇಯಸ್ಕರ. ಯಾಕೆಂದರೆ ಇಂಥಾ ನಿರಂಕುಶ ವರ್ತನೆಯ ಜನರಿಂದಲೇ ವರ್ತಮಾನ ಕಾಲದ ದಾಂಪತ್ಯ ಜೀವನದಲ್ಲಿ ಬಹು ವಿಧದ ಅಶ್ಲೀಲತೆಗಳು ತುಂಬಿ ಹೋಗಿವೆ. ಎಲ್ಲಿ ನೋಡಿದರಲ್ಲಿ ಪತಿಪತ್ನಿಯರಲ್ಲಿ ಕಲಹ, ವಿವಾಹ ವಿಚ್ಛೇದ, ಪ್ರೇಮ ವಿಮುಖತೆ, ಬಹು ಕಾಲ ಪತಿಪತ್ನಿಯರು ಪರಸ್ಪರ ಅಗಲಿರೋಣ, ಮತ್ತೆ ಮುಂದರಿಸಿದ್ದಲ್ಲಿ ಇಬ್ಬರೂ ಗುಪ್ತವಾಗಿ ಅನೇಕಾನೇಕ ದುಷ್ಕರ್ಮಗಳನ್ನು ಮಾಡುತ್ತಿರುವುದು ಮುಂತಾದ ದೋಷಗಳು ಅಲ್ಲಲ್ಲಿ ಇದ್ದೇ ಇರುತ್ತವೆ. ಅದಕ್ಕೆ ಹಿಂದೂ ಸಮಾಜವೇ ಉತ್ತರದಾಯಿಯಾಗಿರುತ್ತದೆ. ಇಂದಿಗೆ ಸಮಾಜವು ತನ್ನ ಪ್ರಾಚೀನ ಆದರ್ಶತೆಯನ್ನು ಮಹಿಳೆಯರ ಮುಂದಿಟ್ಟರೆ ಅವರ ಜೀವನವು ಅತ್ಯಂತ ಪವಿತ್ರವೂ ಸ್ವಾತಂತ್ರ್ಯಮಯವೂ ಆಗುವುದಲ್ಲದೆ "ಪುರುಷ ಸಮಾಜಕ್ಕೆ ಅದರಿಂದ ಹೆಚ್ಚಿನ ಪ್ರಯೋಜನವಿದೆ.

ಪ್ರಚಲಿತ ಕಾಲದ ಯುವಕರು, ಮದುವೆಯಾಗುವುದೆಂದರೆ ತನ್ನ ಎಲ್ಲಾ ಕೆಲಸಗಳಿಗೆ ಅನುಕೂಲವಾಗುವಂತೆ ಒಬ್ಬ ಸೇವಕಳು ಅಥವಾ ತನ್ನ ಮಾನಸಿಕವಾದ ಕಾಮೇಚ್ಛೆಯನ್ನು ಪೂರ್ತಿಗೊಳಿಸಲಿಕ್ಕೋ, ಹಿರಿಯರು ಮಾಡಿಟ್ಟ ಆಸ್ತಿ ಮನೆ ಮಾರುಗಳಲ್ಲಿ ತನ್ನ ದುಂದುವೆಚ್ಚದಿಂದ ಅಳಿದುಳಿದಂಶಗಳ ಉತ್ತರಾಧಿಕಾರಕ್ಕೆ ಬೇಕಾಗಿ ಹತ್ತೆಂಟು ಮಕ್ಕಳನ್ನು ಹುಟ್ಟಿಸಲಿಕ್ಕೆ ಒಂದು ಯಂತ್ರವು ಸಿಗುತ್ತದೆಂಬ ಭಾವನೆಯುಳ್ಳವರು. ದಾಂಪತ್ಯಜೀವನದಲ್ಲಿ ಪಾರಮಾರ್ಥಿಕ ತತ್ತ್ವವೇನಿದೆ? ಎಂಬುದನ್ನು ತಿಳಿದುಕೊಳ್ಳುವ ಶಕ್ತಿಯು ನಮ್ಮಲ್ಲಿಲ್ಲ. ಇದಕ್ಕೆ ಕಾರಣವೇನೆಂದರೆ ನಾವು ಬಿ. ಎ ಪಾಸು ಮಾಡುವುದರೊಳಗಾಗಿ ವಿವಾಹದ ನೊಗವು ನಮ್ಮ ಹೆಗಲಲ್ಲಿ ಬಿದ್ದು ಒಂದೆರಡು ಪುತ್ರರತ್ನಗಳು ಹೊರಡುವುದೂ ಉಂಟು. ಅಷ್ಟರಲ್ಲಿ ಸಿಕ್ಕಿದ ಸಾವಿರಗಟ್ಟಲೆ ವರದಕ್ಷಿಣೆಯು ವೆಚ್ಚವಾಗಿ, ಯಾವುದಾದರೊಂದು ನೌಕರಿಯ ಬಾಲದ ತುದಿಯು ದೊರೆಯುವವರೆಗೆ ಆಕೆಗೆ ತೌರುಮನೆ ಗಂಜಿಯೇ ಗತಿ. ಆ ಮೇಲೆ ಅದೃಷ್ಟವನ್ನು ಹಳಿಯುವುದು. ಇಂಥಾ ಯುವಕರು ದಾಂಪತ್ಯ ಜೀವನದ ವಾಸ್ತವಿಕ ಸುಖವನ್ನು ಹೇಗೆ ಅನುಭವಿಸಬಲ್ಲರು? ಇಂಥಾ ದುಃಖದಾಯಕವಾದ ಕಷ್ಟ ವಿಪತ್ತುಗಳಲ್ಲಿ ಸತ್ತು ಬದುಕಿದವರ ಗತಿಯನ್ನೇನು ವರ್ಣಿಸಲಿ? ಇವರು ಪ್ರತಿ ವರ್ಷ ಸಂಖ್ಯಾವೃದ್ಧಿಯಲ್ಲಿ ಸಂತಾನವನ್ನು ಪಡೆಯುತ್ತಾರೆಯೇ ಹೊರತು ಇತರ ಯಾವ ನೈತಿಕ ಬಲವೂ ಇವರಲ್ಲಿಲ್ಲ. ಗೃಹಸ್ಥ ಧರ್ಮದ ವಿಧಿಯುಕ್ತ ಕಾರ್ಯಗಳನ್ನರಿಯದೆ ಇವರು ಇಂದ್ರಿಯ ನಿಗ್ರಹ ಕಾರ್ಯದಲ್ಲಿ ಸರ್ವಥಾ ಅಸಮರ್ಥರಾಗಿರುತ್ತಾರೆ. ಇವೆಲ್ಲಾ ವ್ಯವಹಾರಗಳು ನಾವು ಕರ್ತವ್ಯದ ದಾಸರಾಗಿರುವುದರಿಂದಲೇ ಆಗುತ್ತವೆ. ಇದರಿಂದ ಮಾನವ ಜೀವನದ ಜ್ಯೋತಿಯು ಮಾಯವಾಗುವುದರಲ್ಲಿ ಅನುಮಾನವಿಲ್ಲ.

ನಮ್ಮ ಸಮಾಜದ ವ್ಯವಸ್ಥಾಪಕರು ಅಥವಾ ಮಕ್ಕಳನ್ನು ಹೆತ್ತವರು ವಧೂವರರಿಗೆ ದಾಂಪತ್ಯ ಜೀವನದ ವ್ಯವಸ್ಥೆಯನ್ನು ಕೊಡುವ ಸಮಯದಲ್ಲಿ ಅವರ ಸಮಾನತೆಯ ಕಡೆಗೆ ಚೆನ್ನಾಗಿ ಗಮನ ಕೊಡಬೇಕು. ಕನ್ಯೆಯರಿಗೆ ಪತಿವ್ರತಾ ಧರ್ಮವನ್ನು ಬೋಧಿಸುವಾಗ ಪುರುಷರಿಗೆ ಪತ್ನೀವ್ರತದ ತತ್ವವನ್ನು ಹೇಳಿಕೊಡಬೇಕು. ಸ್ತ್ರೀಯರನ್ನು ವೈಧವ್ಯದಲ್ಲಿಡುವುದಾದರೆ ಪುರುಷರನ್ನೂ ವಿಧುರತ್ವದಲ್ಲಿಟ್ಟು ಇಬ್ಬರ ಜೀವನದ ಪಾವಿತ್ರತೆಯನ್ನು ಸರಿಯಾಗಿ ನೋಡಿಕೊಂಡಿರಬೇಕು. ವಿವಾಹ ಕಾಲದಲ್ಲಿ ವಧೂವರರಿಗೆ ಅದರ ಪವಿತ್ರ ಉದ್ದೇಶಗಳನ್ನು ಸರಿಯಾಗಿ ಉಪದೇಶಿಸಬೇಕು. ಕನ್ಯೆಯರನ್ನು ವರನ ಹಣದ ಪೆಟ್ಟಿಗೆಗೆ ದಾನವಾಗಿ ಕೊಟ್ಟು ಪುರೋಹಿತರ ಹೊಟ್ಟೆ ತುಂಬಾ ದಕ್ಷಿಣೆ ಸುರಿದರೆ ಅಂಥಾ ಮಾತಾಪಿತೃಗಳು ಮಕ್ಕಳ ಋಣದಿಂದ ಮುಕ್ತರಾಗಲಿಕ್ಕಿಲ್ಲ. ಇದುವರೆಗೆ ನಾವು ದಾಂಪತ್ಯ ಜೀವನದಲ್ಲಿ ಹಿಂದೂಸಮಾಜದ ಕುರಿತಾಗಿಯೇ ಚರ್ಚಿಸಿದೆವು. ಇನ್ನು ಪಾಶ್ಚಾತ್ಯರ ದಾಂಪತ್ಯ ಜೀವನದ ಕುರಿತು ಕೆಲವು ವಿಚಾರಗಳನ್ನು ಸಾವಕಾಶವಾಗಿ ವಾಚಕರ ಮುಂದಿಡುತ್ತೇವೆ.

—ಸಂಪೂರ್ಣಂ—

## ವಾರ್ತಾವಳಿ.

ಲಾಹೋರು ಲೋ ಕೊಲಜಿನ ಪ್ರಭು ದತ್ತ ಎಂಬ ಇಪ್ಪತ್ತು ವರ್ಷ ಪ್ರಾಯದ ಯುವಕನೊಬ್ಬನು ವಿಷ ತಿಂದು ಮೃತನಾದನು. ತಾನು ಸುಖಿಯಾಗಿರುವುದಿಲ್ಲ ಆದುದರಿಂದ ತನಗೀ ಪ್ರಾಣ ಬೇಡವೆಂದು ಅವನು ಬರೆದಿದ್ದ ಆದೊಂದು ಪತ್ರದ ತಾತ್ಪರ್ಯ. ಅಸುಖವನ್ನು ತಾಳಲಾರದ ವಕೀಲನು ಎಷ್ಟು ಸಂಪಾದಿಸಲ್ಕಾನು?

ಕಲ್ಕತ್ತದಲ್ಲಿ ಜರಗಲಿರುವ ಕಾಂಗ್ರೆಸ್ ಮಹಾ ಸಭೆಯ ಸ್ವಾಗತ ಕಮಿಟಿಯ ಚೆಯರ್‌ಮೇನರಾದ ಡಾ| ಪ್ರಫುಲ್ಲ ಘೋಷರನ್ನೂ ಜನರಲ್ ಸೆಕ್ರಿಟೆರಿಯವರಾದ ಶ್ರೀ ಪಂಚಾನನ ಘೋಷರನ್ನೂ ಸೆರೆಹಿಡಿದು ವಿವಿಧ ಶಿಕ್ಷೆ ಕೊಟ್ಟು ದಂಡಿಸಿದರು. ಕಾಂಗ್ರೆಸ್ ಮಹಾಸಭೆಯು ನಿಷಿದ್ಧವಲ್ಲದಿದ್ದರೂ ಅದರ ಚಟುವಟಿಕೆಗಳೆಲ್ಲ ನಿಷಿದ್ಧವೆಂದೇ ಸರಕಾರದಭಿಮತ! ವೈಟ್ ಪೇಪರಿನ ಗತಿಯೇನೋ?

ಇಷ್ಟು ಕಾಲದಿಂದಲೂ ಗಡಿಬಿಡಿಯನ್ನುಂಟುಮಾಡುತ್ತಿದ್ದ ಮರಿಮಕ್ಕತ್ತಾಯ ಬಿಲ್ಲೂ ನಂಬೂದಿರಿ ಬಿಲ್ಲೂ ಗವರ್ನರರಿಂದ ಅನುಮೋದಿಸಲ್ಪಟ್ಟು ವೈಸರಾಯರ ಕೈಯೊಳಗಿವೆ. ವೈಸರಾಯರು ಸಂತೋಷದಿಂದ ದಸ್ಕತು ಹಾಕಿದೊಡನೆ ಅವುಗಳು ಶಾಸನವಾಗುವುವು—ಅರ್ಧಟಿಸಿದವರು ಅರ್ಧಟಿಸಿದಂತೆಯೇ! ಕೂಗಿದವರು ಕೂಗಿದಂತೆಯೇ! ಆಗುವುದಾಯಿತು! ಇನ್ನೇನು?

ವೈಟ್ ಪೇಪರ್ ಶಿಫಾರಸುಗಳನ್ನು ಖಂಡಿಸದ ವ್ಯಕ್ತಿಯಿಲ್ಲ. ಇದಕ್ಕೆ ಸಾಮುದಾಯಿಕ ಪ್ರತಿಭಟನೆಯು ಮಹಾ ಗ್ರಹಣವಾದಂತಿದೆ. ಹಾಗೂ ಇದರ ಪ್ರಕಾಶವು ನಂದಿಹೋಗಲಿದೆ. ಬ್ರಿಟಿಷ ಮುತ್ಸದ್ದಿಗಳ ದೀಪದ ಎಣ್ಣೆ ಮಾತ್ರ ವೆಚ್ಚ!

ಸರ್ ತೇಜ ಬಹದ್ದೂರ್ ಸಪ್ರೂಗಳವರು ಬೆನಾರೆಸ್‌ಗೆ ಹೋಗಿ ಅಲ್ಲಿ ಮಾಲವೀಯರನ್ನು ಕಂಡು, ಶ್ರೀ ಅನಿ, ಅಬ್ದುಲ್ ಕಲಂ ಅಜಾದ್, ರಾಜಗೋಪಾಲಾಚಾರಿ, ಅಸಾಫ್ ಅಲಿ, ದೇವದಾಸ ಗಾಂಧಿ ಮೊದಲಾದ ಪ್ರಮುಖ ಕಾಂಗ್ರೆಸ್‌ವಾಲರನ್ನು ತನ್ನಲ್ಲಿಗೆ ಅವಸರದಿಂದ ಬರಮಾಡಿ ಒಂದು ಲೆಕ್ಚರ್ ಕೊಟ್ಟರು.

ರೌಂಡ್‌ಟೇಬಲಿನ ಕಾರ್ಯಕಲಾಪ, ವೈಸರಾಯರ ಧೋರಣೆ, ವೈಟ್‌ಪೇಪರ್ ಶಿಫಾರಸು ಇವುಗಳ ಕುರಿತು ಮಾತನಾಡಿದರಂತೆ. ಕಾಂಗ್ರೆಸ್‌ವಾಲರು ವೈಟ್ ಪೇಪರನ್ನು ಸ್ವೀಕರಿಸುವಂತೆ ಉಪಾಯಗಳನ್ನು ಇವರು ಮಾಡಿ ಹೊಡುತ್ತಿರಬಹುದಲ್ಲವೇ?

ಅಲ್ಲಹಾಬಾದಿನ ಒಂದು ಮಹಾಸಭೆಯಲ್ಲಿ ಸಪ್ರೂಗಳು ಮಹಾ ಭಾಷಣವಿತ್ತರು. ಶ್ವೇತಪತ್ರದಲ್ಲಿ ವೈಸರಾಯ ಗವರ್ನರುಗಳಿಗಿತ್ತ ಪ್ರಭುತ್ವವನ್ನು ಅವರು ಟೀಕಿಸಿ "ಈ ಅಧಿಕಾರಗಳು ಇರುವುದಕ್ಕಿಂತ ಎಲ್ಲಾ ಶಿಫಾರಸುಗಳು ಹೋಗುವುದು ವಿಹಿತ" ಎಂದಿರುವರು. ಸಪ್ರೂಗಳಿಗೆ ಜ್ಞಾನ ಬಂದಿರಬೇಕು!

ಗನಿಗಳಲ್ಲಾಗುವ ಬೆಂಕಿ ಪ್ರಾಣ ನಾಶ ಮೊದಲಾದ ಅನಾಹುತಗಳನ್ನು ಕಡಿಮೆ ಮಾಡುವುದಕ್ಕಾಗಿ ಒಂದು ಕವಚವು ಕಂಡು ಹಿಡಿಯಲ್ಪಟ್ಟಿದೆ. ಸಮುದ್ರಕ್ಕೆ ಮುಳುಗುವವರು ತೊಡುವ ರಕ್ಷಾಕವಚದಂತೆಯೇ ಈ ಕವಚವಿದ್ದು ಒಂದು ನಳಿಗೆಯ ಮೂಲಕ ಗಾಳಿ ಸೇವನೆಗೆ ಅವಕಾಶವಿರುತ್ತದೆ. ಗನಿಗಳಲ್ಲಿನ ಕೆಲಸವು ಸುಲಭವಾದೀತೆಂದು ಊಹೆ.

ಡ್ಯೂ ಪಟ್ಟಣದಲ್ಲಿನ ಒಂದು ಸರೋವರದಲ್ಲಿ ೧೫ ಅಡಿ ಉದ್ದವಿರುವ ಒಂದು ದೊಡ್ಡ ಮೊಸಳೆಯಿದೆ. ಊರಿನವರಿಗೆ ರೋಗ ರುಜಿನಗಳು ಒದಗಿದರೆ ಈ ಸರೋವರದ ಒಳ ವ್ಯಂಜನ್ನವನ್ನು ತಯಾರಿಸಿ ಇಡುವ ಕ್ರಮ. ಮೊಸಳೆಯು ಮೇಲೆ ಬಂದು ಭೋಜನ ಮಾಡಿದರೆ ಸಂಕಷ್ಟಗಳು ಪಾರಾಗುತ್ತವೆ ಎಂಬ ನಂಬಿಕೆ ಅಲ್ಲಿಯವರಿಗಿದೆ.

ಟ್ರನ್ ಚಲಾಯಿಸುವವರಲ್ಲಿ ಭೂಲೋಕದಲ್ಲಿ ಪ್ರಥಮನಾದ ಒಬ್ಬ ಮುದುಕನು ಈಗ ಈಜಿಪ್ಟಿನಲ್ಲಿರುವನು. ೧೧೧ ವರ್ಷ ಪ್ರಾಯದವನು! ಮೊನ್ನೆ ಕೆಲಸದಿಂದ ನಿವೃತ್ತಿ ಹೊಂದಿದ್ದಾನೆ.

ಬರ್ಲಿನ್‌ನಲ್ಲಿ ಡಾ| ಎಸ್ ಫಿಂಕ್ಲೆಸ್ಟೈನ್ ಎಂಬವರು ಎಂತಹ ಕಷ್ಟ ಲೆಖ್ಖವನ್ನಾದರೂ ಕಾಗದ ಪೆನ್ಸಿಲುಗಳಿಲ್ಲದೆ ಮಾಡುವರು. ಅವರ ಜಾಣ್ಮೆಯಿಂದ ಇಡೀ ಯೂರೋಪು ಬೆರಗಾಗಿದೆ.

ಶ್ರೀಯುತ ವಿ ಜೆ ಪಟೇಲರು ಲಂಡನ್ನಿಗೆ ತಲಪಿದರು. "ಅಲ್ಲಿಂದ ಜಿನೆವಾ, ವಿಯೆನ್ನಾಗಳಿಗೆ ತೆರಳಿ ಅಲ್ಲಿಂದ ಹಿಂದೂದೇಶಕ್ಕೆ ಹೋಗಿ ಸೆರೆಯಲ್ಲಿ ಉಳಿದುಕೊಳ್ಳುವೆನು" ಎಂದು ಅವರೆಂದಿರುತ್ತಾರೆ.

ಬೊಂಬ್ ಪಿತೂರಿಗೋಸ್ಕರ ಬೋರ್‌ಸ್ಟಲ್ ಸೆರೆಯಲ್ಲಿರುವ ೭ ಮಂದಿಗಳು ನಿರಶನ ವ್ರತವನ್ನು ತೊಟ್ಟು ತಮ್ಮ ಆಹಾರವು ಒಳ್ಳೆಯದಲ್ಲವೆಂಬುದನ್ನು ವ್ಯಕ್ತಗೊಳಿಸಿರುವರು.

ಗಾಂಧೀಜಿಯವರ ಭೇಟಿಯು ಸುಪ್ರಸಿದ್ಧರಾದ ಶ್ರೀ ಎಚ್ ಎಸ್ ಎಲ್ ಪೋಲಕರವರಿಗೆ ಮೊನ್ನೆ ದೊರೆತು ಸುಪರಿಂಟೆಂಡರ ಎದುರು ಅವರು ಗಾಂಧೀಜಿಯವರೊಡನೆ ಮಾತನಾಡಿ ಹಿಂದಿರುಗಿದರು. ಭೇಟಿಗೆ ಒಪ್ಪಿದುದು ಹೇಗೋ!

ಮುಂಬಾಯಿಯ ಎಂಪಾಯರ್ ಸಿನೆಮಾದಲ್ಲಿ ೨ನೇ ರಾತ್ರಿ ಒಂದು ಬೊಂಬು ಎಸೆಯಿತು. ಯಾರು ಬಾಂಬ ಎಸೆದರೆಂದು ತಿಳಿಯಲಾಗಲಿಲ್ಲ. ತನಿಖೆಯಾಗುತ್ತಲಿದೆ.

---

### ಸಕಲೇಶಪುರ

ಸ್ಥಳೀಯ ಖಾದಿಭಂಡಾರವು ಸಾಕಷ್ಟು ಪ್ರೋತ್ಸಾಹ ಇಲ್ಲದೆ ಮುಚ್ಚುವ ಸ್ಥಿತಿಗೆ ಬಂದಿರುತ್ತದೆ. ದೇಶಾಭಿಮಾನವುಳ್ಳ ಅನೇಕ ಪ್ರಮುಖ ವರ್ತಕರೂ, ಜಮೀನ್ದಾರರೂ ಇದ್ದು ಸರಿಯಾದ ದೊಡ್ಡದೊಂದು ಖಾದಿ ಭಂಡಾರವನ್ನು ತೆರದು ಖಾದಿ ಬಟ್ಟೆಗಳನ್ನು ಕೊಂಡುಕೊಳ್ಳುವವರಿಗೆ ಪ್ರೋತ್ಸಾಹ ಕೊಟ್ಟು ಭಾರತ ಮಾತೆಯ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ತೋರುತ್ತೇವೆ.

ಹಾಲಿ ಖಾದಿ ಭಂಡಾರವಿರುವ ಮಳಿಗೆಯು ಸ್ಥಳೀಯ ಕೊಪರೇಟಿವ್ ಸೊಸೈಟಿಯದ್ದಾಗಿದೆ. ಸದ್ರಿ ಮಳಿಗೆಯನ್ನು ಬಾಡಿಗೆ ಇಲ್ಲದೆ ಮುಫತ್ತಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. 'ದೇವರು ಕೊಟ್ಟರೂ ಪೂಜಾರಿ ಬಿಡ' ಎಂಬ ಗಾದೆಯಂತೆ ಮೆಂಬರರಲ್ಲಿ ಕೆಲವರು ಕೊಡಬಹುದೆಂದೂ, ಕೆಲವರು ವಿರೋಧವಾಗಿಯೂ ಇರುವುದರಿಂದ ಮುಂಚೆಯೇ ನಷ್ಟಹೊಂದಿ ಕಷ್ಟ ಪಡುತ್ತಿರುವ ಖಾದಿ ಭಂಡಾರದ ಸೆಕ್ರಿಟರಿಯವರು ಬಾಡಿಗೆ ಕೊಟ್ಟು ನಡಿಸುವುದು ಅಸಾಧ್ಯವೆಂದು ಹೇಳುತ್ತಿರುವರು. ಈ ಸಂಬಂಧ ಸೊಸೈಟಿ ಮೆಂಬರರು ದೇಶಾಭಿಮಾನದಿಂದ ಖಾದಿ ಭಂಡಾರವಿರುವ ಕೋಣೆಯನ್ನು ಮುಫತ್ತಾಗಿ ಕೊಟ್ಟು, ಖಾದಿ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ತೋರುತ್ತೇವೆ.

ಇಲ್ಲಿಯ ಸಬ್ ಡಿವಿಜನಲ್ ಆಫೀಸರರಾದ ಯಂ. ಕೃಷ್ಣಮಣ್ಣ ಎಂ. ಎ ಇವರನ್ನೂ ಫೋರೆಸ್ಟ್ ರೇಂಜರರಾದ ರಾ. ಶಾಂಬ ಶಿವರಾವ್ ಇವರನ್ನೂ ಬೇರೆ ಕಡೆ ವರ್ಗಾಯಿಸುವರಾಗಿ ತಿಳಿದು ಬರುತದೆ!

## ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!

ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿಯದೆ. ಮಹದುಪಾಯಕರವಾದ ಈ ರೋಗನಿವಾರಕಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯಔಷಧವಾಗಿದೆ.

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು.

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.

## 56 ವರುಷಗಳ ಅನುಭವಸಿದ್ಧ ಔಷಧಗಳು.

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಿಸ್ಸುವುದು ಮೊದಲಾದುವುಗಳು ಸರ್ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

**ಚಂದನಾಸವ ಮತ್ತು ಮಾತ್ರೆ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಸ್ಖಲನ ಇವುಗಳ ಮೇಲಿನ ಸಿದ್ಧೌಷಧ. ಬಾಟ್ಲಿ 1ರ ರೂ. 1—2—0. 1 ಡಬ್ಬಿ ಮಾತ್ರೆಗೆ ರೂ. 1-6-0. 2 ಬಾಟ್ಲಿ ಔಷದಕ್ಕೂ ರೂ. 4-12-0.

**ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯೌಷಧ. ಬಾಟ್ಲಿ 1ಕ್ಕೆ 0—10—0. 3ಕ್ಕೆ 1—12—0.

(ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಕಟುಂಟಿಸಿ, ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಟ್ಟ ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 3 ದಿನಗಳ ಮಾತ್ರೆಗೆ ಆಣೆ 3. 4ನೇ ದಿವಸ ಸಂದ ದಶಮೂಲ ಟೆಲ ಬಾಟ್ಲಿ 1ರ ರೂ. 1—8—0. 2 ಬಾಟ್ಲಿಗಳಿಗೆ ರೂ. 3.

ನಮ್ಮ ಎಲ್ಲಾ ಔಷಧಗಳು ಪುತ್ತೂರಿನಲ್ಲಿ ಡಾ। ಶ್ರೀನಿವಾಸ ಪೈಯವರ ಶೋಪಿನಲ್ಲಿ ಸಿಗುತ್ತವೆ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು.

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

## ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟಿದು.

ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ. ಈಗ 11—12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬಿಕರಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರು ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

| | | | |
|---|---|---|---|
| 1ನೇಯ ಸಂಪುಟ (1—2ನೇ ಸ್ಕಂಧಗಳು) | 3—4—0 | 7ನೆಯ ಸಂಪುಟ (ದಶಮ ಉತ್ತರಭಾಗ) | 4—8—0 |
| 2 ,, ,, (3ನೆಯ ಸ್ಕಂಧ) | 3—12—0 | 8 ,, ,, (11, 12ನೆಯ ಸ್ಕಂಧಗಳು ಪೀಠಿಕೆ ಸಹಿತ) | 4—8—0 |
| 3 ,, ,, (4 ,, ) | 3—8—0 | ಶ್ರೀ ಭಾಗವತ ಪುರಾಣ ವಿಮರ್ಶೆ ಮಾತ್ರ. | 0—8—0 |
| 4 ,, ,, (5-6ನೇಯ ಸ್ಕಂಧಗಳು) | 4—0—0 | ಕರ್ನಾಟಕ ಮುದ್ರಾರಾಕ್ಷಸ ನಾಟಕ | 1—4—0 |
| 5 ,, ,, (7, 8, 9 ಸ್ಕಂಧಗಳು) | 5—8—0 | (ಅದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದು). | |
| 6 ,, ,, (ದಶಮ ಪೂರ್ವಭಾಗ) | 5—0—0 | | |

ಈ ಬೆಲೆಗಳಿಗೆ ಟಪ್ಪಾಲು ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಭಾರತೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ.

## ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಇಂಡಿಡಾಯಿಡ್ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ವರ್ಷದ ಅನುಭವ ಉಪಯೋಗಿಸುದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಪರಸ್ ಗುಳಿಗೆಗಳು

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,

ಠಾಕುರದ್ವಾರ, ಮುಂಬಾಯಿ ೨. ಸ್ಟೋಕಿಸ್ಟ್ ಹಾ ಕಂಪನಿ,

[ಪತ್ರಪೃಪರಾರ ಇಂಗ್ಲಿಷ್ ಅಪಟಾ ಮರಾಠಿಯಲ್ಲಿ] ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

## ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

## ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

## ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು.

## The South India Co-operative Insurance Society, Limited, Madras.

**LOCAL BOARD:—**

The South Canara Central Co-operative Bank, Ltd., Mangalore.

Applications are invited for 'Sub-Agents' from capable and energetic persons and Co-operative Institutions to canvass business on behalf of the Local Board of the Society at Mangalore.

*FOR TERMS APPLY TO:—*

***The Secretary,***

South Canara Central Co-operative Bank, Ltd., Kodialbail P. O. (Mangalore)

*SOUTH CANARA.*

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲಂಟೆರರಿಗೂ, ತೋಟದವರಿಗೂ

ಬೇಕಾಗುವಂತಹ

## ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಮ್ಯನೇಜರ್,

ಶಾರದಾ ಛಾಪಖಾನೆ,


Edited, Printed & Published by V. S. Kudva at the Sharada Press, Mangalore.